ವಿಜಯದ ನಿತ್ಯ ಪತ್ರಿಕೆ 1930 ಜುಲೈ

ಮಂಗಳವಾರ	1.7.1930
ಗುರುವಾರ	3.7.1930
ಶುಕ್ರವಾರ	4.7.1930
ಶನಿವಾರ	5.7.1930
ಮಂಗಳವಾರ	8.7.1930
ಬುಧವಾರ	9.7.1930
ಗುರುವಾರ	10.7.1930
ಶುಕ್ರವಾರ	11.7.1930
ಶನಿವಾರ	12.7.1930
ರವಿವಾರ	13.7.1930
ಸೋಮವಾರ	14.7.1930
ಮಂಗಳವಾರ	15.7.1930
ಬುಧವಾರ	16.7.1930
ಗುರುವಾರ	17.7.1930
ಶುಕ್ರವಾರ	18.7.1930

రవివార	20.7.1930
సోమవార	21.7.1930
మంగళవార	22.7.1930
గురువార	24.7.1930
శుక్రవార	25.7.1930
శనివార	26.7.1930
రవివార	27.7.1930
సోమవార	28.7.1930
మంగళవార	29.7.1930
బుధవార	30.7.1930

R· N. B 1443

ವಿಜಯ

ಸಾಪ್ತಾಹಿಕ

ಬೆಲೆ ೧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧) ಧಾರವಾಡ ಮಂಗಳವಾರ ತಾರೀಖು ೧ ನೇ ಜುಲೈ ೧೯೩೦ (ಸಂಚಿಕೆ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಆಷಾಡ ಶುದ್ಧ ೫

ಪಂಡಿತ ಮೋತಿಲಾಲ ಮತ್ತು ಮಹಾತ್ಮರ ಭೆಟ್ಟಿಯ ಯೋಗ ಹೇಗೆ ಮುರಿಯಿತು

ಮಹಾತ್ಮರ ಕೂಡ ಎರಡು ದಿವಸಗಳ ತನಕ ಮಾತಾಡಿ, ಮಾತಾಡಿದ್ದನ್ನು ಟಾಯಿಪ ಮಾಡಿಸಿ, ಅದರ ಮೇಲೆ ಮಹಾತ್ಮರ ಸಹೀ ತಕ್ಕೊಂಡಂಥ ಮಿ. ಸ್ಲೋಕೊಂಬಿಸಾಹೇಬರು ಮುಂಬಯಿಯಲ್ಲಿ ಪಂಡಿತ ಮೋತಿಲಾಲರನ್ನು ಕಂಡು, ಅವರಿಂದಲೂ ಒಪ್ಪಂಬಡಿಕೆಯ ವಿಷಯವಾಗಿ ವಿಚಾರಗಳನ್ನು ಕೇಳಿಕೊಂಡರು. ಈ ವಿಚಾರಗಳು ಲಿಬರಲರೆಂಬ ಮವಾಳರಿಗೂ, ಸಮ್ಮತವಾದವು. ಆದ್ದರಿಂದ ಇವರಲ್ಲಿ ಪ್ರತಿಷ್ಠಿತರೆಂಬವರು ಮಹಾತ್ಮರಿಗೂ, ಪಂಡಿತರಿಗೂ ಭೆಟ್ಟಿಯನ್ನು ಮಾಡಿಸಿದರೆ ಈಗಿನ ಚಳವಳಿಯು ಶಾಂತವಾಗಿ, ರಾಜ್ಯಘಟನೆಯ ಹಾದಿಯು ಸುಗಮವಾಗುವದೆಂದು ಭಾವಿಸಿ ಆ ಪ್ರಕಾರ ಮುಂಬಯಿ ಸರಕಾರವನ್ನು ಕೇಳಿದರು. ಈ ಮಧ್ಯೆ ಒಂದು ಸಂಗತಿಯು ಸಂಭವಿಸಿತು. ಮುಂಬಯಿ ಮತ್ತು ಅಹಮದಾಬಾದ ಗಿರಣಿಗಳ ಒಡೆಯರಿಗೂ ಪಂಡಿತರಿಗೂ ಗಿರಣಿಯ ಅರಿವೆಯ ಬೆಲೆಯನ್ನು ಚಳವಳಿಯ ಸಮಯ ಸಾಧಿಸಿ ಏರಿಸಬಾರದೆಂಬ ಪ್ರಸ್ತಾಪ ನಡೆಯಿತು. ಗಾಳಿ ಬಿಟ್ಟಾಗ ತೂರಿಕೊಳ್ಳಬೇಡಿರಿ. ಚಳವಳಿಯ ಪೂರ್ವದಲ್ಲಿ ಅಂದರೆ ಮಾರ್ಚ ತಿಂಗಳಲ್ಲಿದ್ದಂಥ ಧಾರಣೆಯನ್ನೇ ಹಾಕುತ್ತಾ ಹೋಗಿರೆಂದು ಪಂಡಿತರು ಗಿರಣಿಯವರಿಗೆ ಸೂಚಿಸಿದರು. ಅಹಮದಾಬಾದಿನವರು ಖಾದಿಯಂಥ ಉಟು ಅರಿವೆಯನ್ನು ತೆಗೆದು, ಖಾದೀ ಹೆಸರಿನಿಂದ ಮಾರುವರು. ಈ ಕೃತ್ರಿಮ ಅರಿವೆ ಮತ್ತು ಮೋಸಗಾರಿಕೆ ಬಿಡಬೇಕೆಂದು ಪಂಡಿತರು ಹೇಳಿದ್ದನ್ನು ಅವರು ಮನ್ನಿಸಿದರು. ಮುಂಬಯಿಯವರು ಮೊದಲಿನ ಬೆಲೆ ಅಂದರೆ ಮೂಲ ವೆಚ್ಚದ ಮೇಲೆ ನೂರಕ್ಕೆ ಐದು ರೂಪಾಯಿ ಲಾಭ ಹೆಚ್ಚಿಗೆ ಹಾಕುವದಕ್ಕೆ ಒಡಂಬಟ್ಟರು. ಇದರಲ್ಲಿ ಕಚೇರಿಯ ವ್ಯವಸ್ಥೆ, ದಲಾಲರ ದಲಾಲಿ ಯಂತ್ರಗಳ ಸವಕಳಿ ಮಾಲೀಕರ ಪ್ರಾಪ್ತಿ ಇವೆಲ್ಲ ಸೇರುತ್ತವೆ. ಗಿರಣಿಯವರು ಈ ಎರಡು ಶರ್ತುಗಳಿಗೆ ಒಪ್ಪುವಾಗ ಪಂಡಿತರಿಗೆ ತಪ್ಪದೆಂದು ಕರಾರು ಹಾಕಿದರು. ನಾವು ಹೇಳಿದಂತೆ ದರ ಹಾಕುವೆವು. ಆದರೆ ಪರದೇಶಿಯರ ಮೇಲಾಟದ ಭಯ ತಪ್ಪುವಂತೆ ಕಾಂಗ್ರೆಸ್ಸಿನವರು ನಮ್ಮ ಸಂರಕ್ಷಣೆಯ ಜವಾಬುದಾರಿ ಹೊರಬೇಕೆಂದರು. ಪಂಡಿತರು ತಾವೊಬ್ಬರೇ ಇದಕ್ಕೆ ಒಪ್ಪಿಗೆ ಕೊಡಲಿಚ್ಛಿಸಲಿಲ್ಲ. ಮಹಾತ್ಮರನ್ನು ಕಂಡು ಅವರ ವಿಚಾರ ಕೇಳಿಕೊಂಡು ವಚನ ಕೊಡುವೆವೆಂದರು. ಇದು ಸಾಮಾನ್ಯ ಸಂಗತಿಯಾಗಲಿಲ್ಲ. ತುರಂಗದಲ್ಲಿರುವ ಕೈದಿಯು ರಾಜಕೀಯ ವಿಚಾರವಾಗಿ ಚರ್ಚೆ ಮತ್ತು ಅಪ್ಪಣೆ ಕೊಡುವಂತಹದಾಯಿತು. ಮುಂಬಯಿ ಸರಕಾರದವರು ಈ ಜವಾಬುದಾರಿ ಹೊರಲಿಕ್ಕೆ ಸಿದ್ಧರಾಗಲಿಲ್ಲ. ಹಿಂದುಸ್ಥಾನ ಸರಕಾರದ ಮತ ತಿಳಿದುಕೊಳ್ಳಬೇಕೆಂದು ಆ ಪ್ರಕಾರ ತಾರಿನಿಂದ ಕೇಳಿದರು. ತಾರಿಗೆ ತಾರಿನಿಂದ ಉತ್ತರ ಕೊಡತಕ್ಕದ್ದೇ ಧರ್ಮ! ತಾರಿಲ್ಲದಿದ್ದರೂ, ಎದುರಾ ಎದುರಾ ಕೂತು ಬೇಕಾದಷ್ಟು ಮಾತಾಡುವದಕ್ಕೆ ಟೆಲಿಫೋನವೊಂದು ಹಿಂದುಸ್ಥಾನ ಸರಕಾರದವರು ಇವೆರಡರಲ್ಲಿ ಯಾವದೊಂದು ಮಾಡದೆ, ಸುಮ್ಮನೆ ಕೂತರು. ಇದು ಕಾಲಾಪವ್ಯಯವೆಂದು ತಿಳಿದು ಪಂಡಿತರು ಅಲ್ಲಾಬಾದಕ್ಕೆ ಪ್ರಯಾಣ ಬೆಳೆಸಿದರು. ಹೀಗಾಗಿ ಮಹಾತ್ಮರಿಗೂ, ಪಂಡಿತರಿಗೂ ಸಂಧಿಪ್ರಸ್ತಾಪವಾಗುವದು ನಿಂತು ಹೋಯಿತು.

ಗಾಂಧಿ ಟೊಪ್ಪಿಗೆಯ ವಿರುದ್ಧ ಝೂಟ ಶಾಹಿಯ ಹುಕುಮು.

ಸೊಲಾಪೂರದಲ್ಲಿ ಸೋಲ್ಜರರು ಉದ್ದುದ್ದ ಗಳಗಳಿಗೆ ಗಿಸದ ಟೋಗೆ ಕೊಬ್ಬಿವಂಥ ಕುಡುಗೋಲು 'ಮಾಟದ ಕಬ್ಬಿಣದ ಸಳೀ ಹಾಕಿ ಮೋಟಾರದಲ್ಲಿ ಕೂತು ಊರ ಬಂದೋಬಸ್ತಿಗಾಗಿ ಹೋಗುವರು. ದಾರಿಯಲ್ಲಿ ಯಾರಾದರೂ ಗಾಂಧೀ ಟೊಪ್ಪಿಗೆ ಹಾಕಿಕೊಂಡು ಬಂದರೆ– ಈ ಬಂಕೆಯಿಂದ ಅದನ್ನು ಹಾರಿಸುವರು. ಸೋಲ್ಜರರಿಗೆ ಇದೊಂದು ಆಟವಾಗುವದು. ಸ್ಟೇಶನದಲ್ಲಿ ಗಾಂಧಿ ಟೊಪ್ಪಿಗೆಯವರು ಬಂದರೆ– ಬೆಕ್ಕು ಇಲಿಯ ಕೂಡ ಚಲ್ಲಾಟವಾಡುವಂತೆ ಟೊಪ್ಪಿಗೆಯ ಕೂಡ ಚಲ್ಲಾಟವಾಡಿ, ಅದನ್ನು ಫೂಟಬಾಲ ಮಾಡುವರು. ಇಷ್ಟೇ ಅಲ್ಲ, ಸೊಲ್ಲಾಪೂರ ದಾಟಿ ಮುಂದೆ ಉಗಿಬಂಡಿಯಲ್ಲಿ ಕೂತು ಹೋಗತಕ್ಕವರ ಟೊಪ್ಪಿಗೆಯನ್ನು ಈಡಾಡುವರು. ಈ ಪ್ರಕಾರದ ತಾರಿನ ವರ್ತಮಾನವು ಹೆಚ್ಚು ಕಡಿಮೆ ತಹದಿಂದ ವಿಲಾಯತಿಯ ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾದರೂ ಭಾರತ ಮಂತ್ರಿಯಾದ ಮಿ. ಬೆನ್ನಸಾಹೇಬರು ಇದು ದಿಟವಲ್ಲೆಂದು ಪಾರ್ಲಮೆಂಟ ಸಭೆಯಲ್ಲಿ ಹೇಳಿದರು ಇದು ದಿಟವೋ ಸಟಿಯೋ ಅನ್ನುವಂತೆ ಗುಂಟೂರಿನ ಮ್ಯಾಜಿಸ್ಟ್ರೇಟರು ಪ್ರತ್ಯಕ್ಷ ಕೃತಿಯಿಂದ ಸಿದ್ಧ ಮಾಡಿ ತೋರಿಸಿದರು ಗಾಂಧಿ ಟೊಪ್ಪಿಗೆಯಿಂದ ಕಾಯದಭಂಗಕ್ಕೆ ಉತ್ತೇಜನ ದೊರೆಯುತ್ತಿರುವ ಕಾರಣ, ಗುಂಟೂರು ಮತ್ತು ಅದರ ಸುತ್ತುಮುತ್ತಲಿನ ಐದು ಮೈಲಿನ ಕ್ಷೇತ್ರದಲ್ಲಿ ಯಾರೂ ಈ ಟೊಪ್ಪಿಗೆ ಹಾಕಕೂಡದೆಂದ. ಅವರು ಜಾಹೀರನಾಮೆ ತೆಗೆದರು. ಲಾರ್ಡ ಆಯರ್ವಿನಸಾಹೇಬರ ಆರ್ಡಿನನ್ಸವನ್ನೇ ಕಸ ಮಾಡಿದವರು ಕಲೆಕ್ಟರರ ಹುಕುಮನ್ನು ಮನ್ನಿಸುವರೇ? ಜಾಹೀರನಾಮೆ ಹೊರಟ ಕೂಡಲೆ, ಸ್ವಯಂಸೇವಕರು ಟೊಪ್ಪಿಗೆ ಹಾಕಿ, ಕಾಯದೆಭಂಗವನ್ನು ಪ್ರಾರಂಭಿಸಿ ತಮ್ಮ ಕರ್ತವ್ಯ ಮಾಡುತ್ತಿರುವಾಗ ಪೋಲಿಸರು ಇವರನ್ನು ಹಿಡಿಯುವದನ್ನು ದೊಡ್ಡ ಸಂಭ್ರಮ ಮಾಡಿಕೊಂಡಿದ್ದಾರೆ ಅಲ್ಲಿಯ ವಕೀಲ ಸಭೆಯವರು ಇದು ಅನ್ಯಾಯದ ಹುಕುಮೆಂದೂ ಇದನ್ನು ರದ್ದು ಮಾಡಬೇಕೆಂದೂ ಸಾಹೇಬರಿಗೆ ಪತ್ರ ಬರೆದಿರುತ್ತಾರೆ. ಸಾಹೇಬರು ಹುಕುಮನ್ನು ರದ್ದು ಮಾಡದಿದ್ದರೆ– ತಾವೂ ಗಾಂಧೀ ಟೊಪ್ಪಿಗೆ ಹಾಕಿ, ಸತ್ಯಾಗ್ರಹ ಮಾಡಿ, ಕಾಯದೆಭಂಗ ಮಾಡುವರೇನು ?

೧೧ನೇ ತಾರೀಖಿನೊಳಗಾಗಿ ಇಂಗ್ಲಿಷರ ಬ್ಯಾಂಕಿನೊಳಗಿನ ರೂಪಾಯಿ ತಕ್ಕೊಳ್ಳಿರಿ.

ಮುಂಬಯಿಯ ವರ್ತಕರು ಇಂಗ್ರೇಜಿ ಜನರ ಬ್ಯಾಂಕುಗಳೊಳಗಿಂದ ರೊಕ್ಕ ತಕ್ಕೊಳ್ಳಬೇಕೆಂದು ವಿಚಾರ ಪಡೆಸಿದ್ದರಷ್ಟೇ, ಆ ಪ್ರಕಾರ ಒಂದು ಸಭೆ ಮಾಡಿ, ಜುಲೈ ತಿಂಗಳ ೧೧ನೇ ತಾರೀಖಿನೊಳಗಾಗಿ ಹಿಂದೀ ವರ್ತಕರು ತಮ್ಮ ಠೇವಿನ ಮತ್ತು ನಿತ್ಯ ವ್ಯವಹಾರದ ದುಡ್ಡನ್ನು ತಗೆದುಕೊಳ್ಳಬೇಕೆಂದು ಠರಾವು ಮಾಡಿದ್ದಾರೆ. ಇದರಿಂದ ಬ್ಯಾಂಕುಗಳು ದಿವಾಳಿಗೆ ಬರದಿದ್ದರೂ, ನೊಣಜಾಡಿಸುತ್ತಾ ಕಾಲ ಹರಣ ಮಾಡುವವೆಂಬದು ನಿಜ.

ಇಂಗ್ರೇಜಿ ವ್ಯಾಪಾರಕ್ಕೆ ಬಂದ ಅಧೋಗತಿಯ ಕಾರಣಗಳು.

ವಿಲಾಯತಿಯ ವರ್ತಕರು ಹಿಂದುಸ್ಥಾನದ ವ್ಯಾಪಾರವು ತಮ್ಮ ಮಗ್ಗಲು ಮುರಿಯುವಷ್ಟು ಅಧೋಗತಿಗೆ ಬಂದಿರುತ್ತದೆಂದು ದುಃಖಪಡುತ್ತಾ ಈ ಬಗ್ಗೆ ನೀವೇನು ಮಾಡುವಿರೆಂದು ಮಿ. ಬೆನ್ನಸಾಹೇಬರಿಗೆ ದುಂಬಾಲ ಬಿದ್ದಿದ್ದಾರೆ. ಮುಂಬಯಿಯಲ್ಲಿ ಅರಿವೆಯ ಧಾರಣೆಯು ಮಹಾಯುದ್ಧದ ವೇಳೆಯಲ್ಲಿ ಒಂದಿದ್ದಷ್ಟು ಇಳಿತಕ್ಕೆ ಬಂದಿದೆ. ಅದರ ಕಾರಣಗಳು.

೧ ಜಗತ್ತಿನಲ್ಲುಂಟಾದ ಮಂದಿಯು.

೨ ವ್ಯಾಪಾರವಿಲ್ಲದೆ ಬಹಳವಾಗಿ ಸರಕು ಉಳಿದ ಕಾರಣ.

೩ ಹಿಂದುಸ್ಥಾನದ ಸಾಂಪ್ರತದ ರಾಜಕೀಯ ಪರಿಸ್ಥಿತಿಯು.

೪ ಪರದೇಶಿ ಬಟ್ಟೆಯ ಬಹಿಷ್ಕಾರ.

ತುರಂಗದ ಹೊರಗಿರುವದು ಹೇಡಿತನ ಪುಕ್ಕತನವೇ ಸರಿ

ಹೊರಗೆ ತಿನ್ನುವ ಅನ್ನವು ಕಸ;
ಮಲಗುವ ಮೆತ್ತಗಿನ ಗಾದಿಯು ಹೆಣದ ಚಿತೆ!!!

ಸರದಾರ ವಲ್ಲಭಭಾಯಿ ಪಟೇಲರನ್ನು ಸರಕಾರದವರು ಒಂದೊಪ್ಪತ್ತು ಮುಂದಾಗಿ ಬಂಧಮುಕ್ತ ಮಾಡಿ, ಅಂದು ಸಾಯಂಕಾಲದಲ್ಲಿ ಅವರಿಗೆ ಕೊಡುವ ಎರಡು ರೊಟ್ಟಿ ಮತ್ತು ಮೂರು ಕಾಸಿನ ಗಂಜಿಯ ವೆಚ್ಚವನ್ನುಳಿಸಿಕೊಂಡರು. ಗುರುವಾರ ಹತ್ತು ಗಂಟೆಯ ಸಮಯದಲ್ಲಿ ಜೇಲರರು ಇವರನ್ನು ಮೋಟಾರಿನಲ್ಲಿ ಕೂಡಿಸಿಕೊಂಡು, ಸಾಬರಮತಿಯ ಆಶ್ರಮಕ್ಕೆ ತಂದು ಬಿಟ್ಟರು. ಅಲ್ಲಿ ಇವರು ಕುಮಾರಿ ಸ್ಲೇಡ (ಮೀರಾಬಾಯಿ) ಮತ್ತು ಬೇರೆ ಆಶ್ರಮವಾಸಿಗಳ ಭೆಟ್ಟಿ ತಕ್ಕೊಂಡು ತಮ್ಮ ಮಿತ್ರರಾದ ಡಾಕ್ಟರ ಕಾನೂಗಾಂವರ ಬಂಗ್ಲೆಕ್ಕೆ ಬಂದರು. ಇವರ ಬಿಡುಗಡೆಯ ವರ್ತಮಾನ ಕೇಳಿದ ಕೂಡಲೆ– ಸಾವಿರಾರು ಜನರು ದರ್ಶನೋತ್ಸುಕರಾಗಿ ಬಂದರು. ಪ್ರತಿಷ್ಠಿತ ಗೃಹಸ್ಥರೆಲ್ಲರೂ ಬಂದಿದ್ದರು. ಸಾಯಂಕಾಲದಲ್ಲಿ ಸಾಬರಮತಿನದಿಯ ದಂಡೆಯ ಮೇಲೆ ಸಭೆಯಾಯಿತು. ಲಕ್ಷ ಜನ ಕೂಡಿತ್ತು. ಅಲ್ಲಿ ಇವರು ಮಾಡಿದ ಭಾಷಣವು:—

ನಾನು ನಿಮಗೆ ಉಪದೇಶ ಮಾಡುತ್ತೇನೆ, ಅಥವಾ ಸೂಚನೆ ಮಾಡುತ್ತೇನೆಂಬದನ್ನು ನಿರೀಕ್ಷಿಸಬೇಡಿರಿ. ಕಾಯದೆಭಂಗದ ಕೋಲಾಹಲವಾಗುವ ಮುಂಚೆ ನನಗೆ ತುರಂಗವಾಸ ಬಂತು. ಪ್ರಮುಖರೆಂಬ ಎಲ್ಲ ರಾಷ್ಟ್ರೀಯರು ತುರಂಗದಲ್ಲಿರುವದನ್ನು ಕಂಡು ನನಗೆ ಸಂತೋಷವಾಗುತ್ತದೆ. ಅಹಿಂಸೆ, ಸಿಸ್ತು, ಧೈರ್ಯ ಮತ್ತು ಸ್ವಾರ್ಥತ್ಯಾಗಕ್ಕಾಗಿ ನಾನು ಗುಜರಾಥದ ಪ್ರಶಂಸೆ ಮಾಡುತ್ತೇನೆ.

ನಮ್ಮ ತುರಂಗವಾಸದ ಬಗ್ಗೆ ಏನಾದರೂ ತಿಳಕೊಳ್ಳಬೇಕೆಂದು ನಿಮ್ಮ ಇಚ್ಛೆ ಇರಬಹುದು ತುರಂಗದಲ್ಲಿ ಜನರ ತಲೆಬೇನೆಯಿಲ್ಲ. ಕಷ್ಟತಾಪವೂ ಇಲ್ಲ. ನಾಲ್ಕು ದುಡ್ಡಿನ ವೆಚ್ಚದಲ್ಲಿ ಸಂಪೂರ್ಣ ಸೌಖ್ಯವನ್ನನುಭವಿಸಬಹುದು. ಕಾಂಗ್ರೆಸದ ಅಧ್ಯಕ್ಷರು ಮತ್ತು ಜಗತ್ತಿನಲ್ಲಿ ಅತಿ ಶ್ರೇಷ್ಠರಾದ ಗೃಹಸ್ಥರು ತುರಂಗದಲ್ಲಿರುವಾಗ ತುರಂಗದ ಹೊರಗೆ ಇದ್ದು, ತಿನ್ನುವ ಅನ್ನವು ಕಸವಾಗಿಯೂ, ಮಲಗುವ ಮೆತ್ತಗಿನ ಹಾಸಿಗೆಯು ದಹನದ ಕಟ್ಟಿಗೆಯ ಚಿತೆಯೂ ಆಗುತ್ತದೆಂಬದನ್ನು ತಿಳಿಯಿರಿ.

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಹುಕುಮನ್ನು ಮುರಿದೆನೆಂದು ನನ್ನನ್ನು ತುರಂಗಕ್ಕೆ ಕಳಿಸಿದರು ಸರಕಾರದವರು ನನಗೆ ಇಂದಿನ ಸಾಯಂಕಾಲದ ಊಟ ಮತ್ತು ನಾಳೆ ಬೆಳಗಿನ ಗಂಜಿಯನ್ನು ಕೊಡುವ ಋಣದಲ್ಲಿರುವರು. ತುರಂಗ ಬಿಟ್ಟುಬರುವಾಗ ನನಗೆ ಕೆಡಕೆನಿಸಿತು. ತುರಂಗದಲ್ಲಿಯ ಕಷ್ಟನ್ನು ಲಕ್ಷಿಸತಕ್ಕದ್ದೇ ಅಲ್ಲ ಅಲ್ಲಿ ಸೌಖ್ಯವನ್ನುಪೇಕ್ಷಿಸುವದು ಮೂರ್ಖತನವೇ ಸರಿ

ಇಂದು ಮೇಲ ಆಕಾಶದಲ್ಲಿ ಭೀಕರವಾದ ಶಂಖಧ್ವನಿಯಾಗುತ್ತಿರುವದು. ಬಿರುಗಾಳಿ ಬೀಸಹತ್ತಿರುವದು. ಗುಡುಗು ಗಾಳಿಯ ರಭಸ ತೀರಿದ ನಂತರ ನಾಲ್ಕೂ ಕಡೆಗೆ ಶಾಂತವಾಗುವಂತೆ ಗದ್ದಲ ತೀರಿದ ಬಳಿಕ ದೇಶದ ತುಂಬ ಶಾಂತಿಯುಂಟಾಗುವದು. ಸರಕಾರವು ಬೇಕಾದರೆ ಗುಂಡು ಹಾಕಬಹುದು. ದೊಣ್ಣೆಗಳಿಂದ ತಲೆಯೊಡೆಯಕೂಡದು. ಈಗಿನ್ನೂ ಯುದ್ಧದ ಪ್ರಾರಂಭ ದೊಡ್ಡ ರಣ ಖತ್ತರವು ಮುಂದೆಯಾಗತಕ್ಕದ್ದುಂಟು.

ಸಭೆಯಲ್ಲಿ ಮಾತಾಡಬೇಡಿರಿ. ಯಾಕಂದರೆ– ಸರಕಾರದವರು ಇಂದೇ ನಿಮ್ಮನ್ನು ಮತ್ತೆ ತುರಂಗಕ್ಕೆ ಕಳಿಸುವರೆಂದು ಕೆಲವರು ನನಗೆ ಹೇಳಿದ್ದಾರೆ. ಕೆಲವರು ಸಭೆಗೆ ಕೂಡ ಹೋಗಬೇಡಿರೆಂದರು. ಆದರೆ ನನ್ನ ಕೈಯಲ್ಲಿ ತುರಂಗಕ್ಕೆ ಹೋಗುವ ಗೆರೆಯಿಲ್ಲ. ನನಗೆ ತುರಂಗವೆಂಬದು ಗೊತ್ತೇ ಇಲ್ಲ. ಆದರೆ ತುರಂಗಕ್ಕೆ ಹೋಗುವಂಥವರ ದೆಸೆಯಿಂದ ದುಃಖ ಪಡಬೇಡಿರಿ. ತುರಂಗದಿಂದ ಹೊರಬಿದ್ದು ಬರುವಾಗ ನಾನು ಜೇಲರನಿಗೆ ನನ್ನ ಕೋಣೆಯನ್ನು ಕಾದಿಡು; ಏಕಂದರೆ– ನಾನಾದರೂ ಬರುವೆ; ಅಥವಾ ಎಲ್ಲ ರಾಜಕೀಯ ಕೈದಿಗಳು ತುರಂಗ ಮುಕ್ತರಾಗುವರೆಂದು ಹೇಳಿದ್ದೇನೆ.

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಮೂರ್ಖ ಹುಕುಮು.

ಗಾಂಧೀ ಟೊಪ್ಪಿಗೆ ಹಾಕಬೇಡಿರೆಂದು ಗುಂಟೂರಿನ ಮ್ಯಾಜಿಸ್ಟ್ರೇಟರು ತೆಗೆದ ಹುಕುಮು ನ್ಯಾಯರೀತಿಗೆ ಒಪ್ಪುವಂತಹದಲ್ಲ. ಇಂಥ ಹುಕುಮುಗಳೇ ಕಾಯದೆಯ ಭ್ರಷ್ಟಾಕಾರ ಮಾಡುತ್ತವೆ. ಸರಕಾರದವರು ಇಂದು ಟೊಪ್ಪಿಗೆಗೆ ಪ್ರತಿಬಂಧ ಮಾಡಗೊಟ್ಟರೆ– ಈ ಮ್ಯಾಜಿಸ್ಟ್ರೇಟರು ನಾಳೆ ಖಾದಿಯನ್ನೇ ಹಾಕಬಾರದೆಂದು ಮತ್ತೊಂದು ಮೂರ್ಖತನದ ಹುಕುಮು ಮಾಡುವರೆಂದು ಮುಂಬಯಿಯ ಇಂಗ್ರೇಜಿ ಪತ್ರಗಳು ಟೀಕೆ ಮಾಡಿರುತ್ತವೆ.

ಇನ್ನೊಬ್ಬ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಮೂರ್ಖತನವು.

ಗುಂಟೂರಿನಂತೆ ಮಚ್ಛಲಿಪಟ್ಟಣದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ೧೪೪ನೆಯ ಕಲಮು ಮುರಿದ ಆರೋಪಿಗಳ ವಿಚಾರಣೆ ನಡೆಸಿದಾಗ, ಆರೋಪಿಗಳಿಗೆ ವಕೀಲರನ್ನು ಕಾಣಗೊಡಲಿಲ್ಲ. ಮತ್ತು ವಕೀಲರು ಬಂದರೆ– ವಿಚಾರಣೆ ನಡೆದಿದ್ದರೂ ವಕೀಲರಿಗೆ ಒಳಗೆ ಬರಗೊಡಲಿಲ್ಲ. ಇದು ಅಕ್ರಮವಾದದ್ದೆಂದು ಹಾಯಕೋರ್ಟಿಗೆ ಅಪೀಲು ಮಾಡಲು, ಜಡ್ಜರಾದ ಮಿ. ರೇಲಿಸಾಹೇಬರು ಮ್ಯಾಜಿಸ್ಟ್ರೇಟರ ಮೊಗಲಾಯಿ ವರ್ತನವನ್ನು ನಿಷೇಧಿಸಿ, ಅವರಿಗೆ ಬುದ್ಧಿ ಬರುವಂಥ ಉಪದೇಶ ಮಾಡಿದ್ದಾರೆ.

ರಾ. ಬ. ಕಂಬಳಿಯವರು ಸಂಶಯ ಕಳಕೊಳ್ಳಬೇಕು.

ಅಲ್ಲಾಬಾದ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ.

ಅಲ್ಲಾಬಾದ ಮ್ಯುನಿಸಿಪಾಲಿಟಿಯಲ್ಲಿ ಬಹುವಾಗಿ ಚರ್ಚೆಯಾಗಿ, ಮ್ಯುನಿಸಿಪಾಲಿಟಿಯ ಗಡಿಯಾರವಿರುವ ಗೋಪುರದ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚುವದಕ್ಕಾಗಿ ಅದರ ಬಾಗಿಲದ ಬೀಗದ ಕೈಯನ್ನು ಕಾಂಗ್ರೆಸ ಕಮೀಟಿಯ ವಶ ಮಾಡಬೇಕೆಂಬ ಠರಾವು ಪಾಸಾಯಿತು. ರಾ. ಬ. ಕಂಬಳಿಯವರು ಈ ಚರ್ಚೆಯನ್ನು ಲೀಡರ ಪತ್ರದಲ್ಲಿ ಓದಿಕೊಂಡು ತಮ್ಮ ಮನಸ್ಸಿನ ಸಂಶಯವನ್ನು ಕಳಕೊಳ್ಳಬೇಕೆಂದು ಸೂಚಿಸುತ್ತೇವೆ.

ಹಿಂದುಸ್ಥಾನದ ತುಂಬ ಸಾಯಮನ್ನ ರಿಪೋರ್ಟಿನ ತಿರಸ್ಕಾರ.

ಸಾಯಮನ್ನ ರಿಪೋರ್ಟು

ಎರಡನೇ ಭಾಗದ ಪ್ರಕಟನೆ.

ವಿಜಯಕ್ಕೆ ಬಾರದ ಸ್ಪೆಶಲ ಕಾರು.

೧ ಸಾಯಮನ್ನ ಸಾಹೇಬರ ರಿಪೋರ್ಟಿನಿಂದ ರಾಜ್ಯಕಾರಭಾರದಲ್ಲಿ ಹೇಳುವಂಥ ಬದಲಾವಣೆಗಳಾಗುವದಿಲ್ಲ.

೨ ಅಸೆಂಬ್ಲಿಯ ಮೆಂಬರರ ಸಂಖ್ಯೆಯು ಹೆಚ್ಚಾಗುವದು. ಇವರನ್ನು ಇಲಾಖೆಯ ಕೌನ್ಸಿಲಗಳ ಮೆಂಬರರೇ ಆರಿಸತಕ್ಕದ್ದು ಮತ್ತು ಕೌನ್ಸಿಲ ಆಫ ಸ್ಟೇಟಿನ ಮೆಂಬರರನ್ನು ಪರೋಕ್ಷ ಆರಿಸತಕ್ಕದ್ದು.

೩ ಇಬ್ಬರು ಸಿವ್ಹಿಲಿಯನ್ನರು ಯಾವಾಗಲು ವ್ಹಾಯಿಸರಾಯರ ಕೌನ್ಸಿಲದ ಮೆಂಬರರಾಗಿರತಕ್ಕದ್ದು. ವ್ಹಾಯಿಸರಾಯರ ಅಧಿಕಾರವು ಈಗಿದ್ದಂತೆಯೇ ಇರತಕ್ಕದ್ದು.

೪ ಇಲಾಖೆಗಳಲ್ಲಿಯ ದ್ವಿದಳ ದೊರತನವನ್ನು ರದ್ದುಮಾಡಿ, ಪ್ರಾಂತಿಕ ಸ್ವಾತಂತ್ರ್ಯ ಕೊಡತಕ್ಕದ್ದು. ಆದರೆ ಶಾಂತತೆ ಮತ್ತು ಶಿಸ್ತಿನ ಅಮಲ ನಡಿಸುವ ವಿಷಯದಲ್ಲಿ ಸರಕಾರಕ್ಕೆ ಮಂತ್ರಿಗಳ ಅಥವಾ ಕೌನ್ಸಿಲದ ಠರಾವನ್ನು ರದ್ದು ಮಾಡುವಂಥ ಸರ್ಟಿಫಿಕೇಟಿನ ಅಧಿಕಾರವಿರತಕ್ಕದ್ದು.

೫ ಪ್ರಾಂತಿಕ ಸರಕಾರಗಳಲ್ಲಿ ಅಲ್ಪಸಂಖ್ಯಾಕರಿಗೆ ಸ್ವತಂತ್ರ ಚುನಾವಣೆ ಇರಬೇಕು. ಮುಸಲಮಾನರು ಸ್ವತಂತ್ರ ಚುನಾವಣೆ [illegible] ಹಾಗೆ ಮಾಡಬೇಕು.

೬ ಅಸ್ಪೃಶ್ಯರಿಗಾಗಿ ಸ್ಥಳಗಳನ್ನು ಕಾದಿಡಬೇಕು.

೭ ಸರಹದ್ದಿನ ಇಲಾಖೆಯ ಕೌನ್ಸಿಲದಲ್ಲಿ ಸರಿಯರ್ಧ ಜನರು ಇಲೆಕ್ಟೆಡ ಮತ್ತು ನಾಮಿನೆಟ ಆದಂಥವರಿರಬೇಕು. ಮುಲಕಿ, ನ್ಯಾಯ ಮತ್ತು ಪೋಲಿಸ ಖಾತೆಗಳು ಕಾದಿಟ್ಟ ಖಾತೆಗಳಾಗಬೇಕು.

೮ ಕೊಡಗು, ದಿಲ್ಲಿ, ಮತ್ತು ಬಲೂಚಿಸ್ಥಾನದಲ್ಲಿ ಯಾವ ಬದಲಾವಣೆಗಳನ್ನೂ ಮಾಡತಕ್ಕದ್ದಿಲ್ಲ.

೯ ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ಅಗಲಿಸತಕ್ಕದ್ದು.

೧೦ ವ್ಹಾಯಿಸರಾಯರ ಸರ್ಟಿಫಿಕೇಟಿನ ಅಧಿಕಾರಗಳು ಈಗಿದ್ದಂತೆಯೇ ಇರಬೇಕು.

ಸಾಯಮನ್ನ ರಿಪೋರ್ಟಿನ ಬಗ್ಗೆ ಹಿಂದೀ ಜನರ ನಿರಾಶೆಯು.

ದೊಡ್ಡ ದೊಡ್ಡವರ ಅಭಿಪ್ರಾಯಗಳು

[illegible]

ಲೀಡರ ಪತ್ರ—

[illegible] ಶಿಫಾರಸ್ಸುಗಳು ಅತ್ಯಂತ [illegible] ಹಿಂದೀ ಜನರಿಗೆ ಧಿಕ್ಕಾರ [illegible]

ಸರ ಚಿಮನಲಾಲ—

ಈ ರಿಪೋರ್ಟಿನಿಂದ ಹಿಂದಿ ರಾಷ್ಟ್ರದ ಪರಿಸ್ಥಿತಿಯು ಅತ್ಯಂತವಾಗಿ [illegible] ಹಿಂದುಸ್ಥಾನ ಮತ್ತು ಇಂಗ್ಲಂಡದ ಅಧಿಕಾರ ಸಂಬಂಧವು ಮತ್ತಿಷ್ಟು ಸಂಕಟವನ್ನುಂಟುಮಾಡುವದು. ಏಕೆಂದರೆ ಇದರ ನಿರ್ಣಯವನ್ನು ಅಸೆಂಬ್ಲಿಯ ಕಯ್ಯಲ್ಲಿ ಕೊಡದೆ ಭಾರತ ಮಂತ್ರಿ ಮತ್ತು ಬ್ರಿಟಿಶ ಸರಕಾರದ ಕಯ್ಯಲ್ಲಿ ಕೊಟ್ಟಿರುವರು. ಹಿಂದುಸ್ಥಾನ [illegible] ಪ್ರಜರಿಗೆ [illegible] ಬದಲಾಗಿದೆ, ಮನೇಚ್ಛೆಯನ್ನು ಸ್ವತಂತ್ರವಾಗಿ [illegible] ಸೂಚಿಸಲ್ಪಟ್ಟಿದೆ.

ಬ್ಯಾರಿಸ್ಟರ ಜಿನ್ನಾ—

ರಿಪೋರ್ಟಿನೊಳಗಿನ ಶಿಫಾರಸ್ಸುಗಳು ಅತ್ಯಂತ ನಿರಾಶಾಜನಕವಾಗಿವೆ. ಈ ಶಿಫಾರಸ್ಸುಗಳಿಂದ ಹಿಂದೂ ಮತ್ತು ಮುಸಲ್ಮಾನ ಇವರಿಬ್ಬರ ಸಮಾಧಾನವೂ ಆಗಲಾರದು.

ಪಂಡಿತ ಮೋತಿಲಾಲ—

ಕಾಂಗ್ರೆಸದವರು ಇದನ್ನು ಕಣ್ಣೆತ್ತಿ ಸಹ ನೋಡುವದಿಲ್ಲ.

ಸರ ಪುರುಷೋತ್ತಮದಾಸ—

ಹಿಂದೀ ರಾಷ್ಟ್ರವು ಸಾಯಮನ್ನ ಕಮೀಶನದ ಮೇಲೆ ಬಹಿಷ್ಕಾರ ಹಾಕಿದ್ದು ಯೋಗ್ಯ[illegible]ವೆಂಬುದನ್ನು ಈ ಕಮೀಶನವು ತನ್ನ ಕೃತಿಯಿಂದ ಸಿದ್ಧಮಾಡಿ ತೋರಿಸಿತು.

ಸರ ಫಿರೋಜ ಸೆಟನಾ—

ಈ ರಿಪೋರ್ಟನ್ನು ಎಷ್ಟು ನಿಷೇಧಿಸಿದರೂ ಕಡಿಮೆಯೇ ಇರುತ್ತದೆ.

ಮಂತ್ರಿಗಳ ಪಕ್ಷದ ಮುಖ ಪತ್ರವಾದ ಡೇಲಿ ಹೆರಾಲ್ಡ—

ಈ ರಿಪೋರ್ಟು ನಮಗೆ ಸಮ್ಮತವಿಲ್ಲ. ಹಿಂದುಸ್ಥಾನಕ್ಕೆ ಸ್ವರಾಜ್ಯದ ಹಕ್ಕು ಕೊಡಬೇಕೆಂಬ ವಿಚಾರ ಇದರಲ್ಲಿರುವದಿಲ್ಲ. ಆದ್ದರಿಂದ ಮಂತ್ರಿಗಳು ಈ ವಿಷಯದ ವಿಚಾರ ಮಾಡತಕ್ಕದ್ದು.

ಸಾಯಮನ್ನ ರಿಪೋರ್ಟು ನೀರಿನೊಳಗೆ ಹರಿದಾಡುವ ಮೀನವಲ್ಲ. ಭೂಮಿಯಲ್ಲಿ ವಾಸವಾಗಿರುವ ಮೃಗವಲ್ಲ. ಮನಷ್ಯ ಕೋಟಿಗೆ ಸೇರಿದ್ದಲ್ಲ. ಅನಾದಿಯಿಂದದಂಥ ವಿಚಿತ್ರ ಪ್ರಾಣಿಯಾಗಿದೆ. ಹಿಂದೀ ಜನರ ವಿಚಾರದಿಂದ [illegible] ವ್ಯರ್ಥ ಶ್ರಮ ಮಾಡಿದ್ದಾಯಿತೆಂದು ಮದ್ರಾಸದ ಹಿಂದೂ ಪತ್ರ ಹೇಳುತ್ತದೆ.

ಬ್ಯಾರಿಸ್ಟರ ಜಯಕರ—

ರಿಪೋರ್ಟು ನಿರಾಶಜನಕವಾಯಿತು. ಇದನ್ನು ಶುದ್ಧ ಮಾಡಿ ಬಳ್ಳಲಿಕ್ಕೆ ಎಲ್ಲ ಪಕ್ಷದವರೂ ಒಂದಾಗಬೇಕು.

ಸೆಂಟ ನಿಹಾಲಸಿಂಗ—

ರಿಪೋರ್ಟು ಕುರಿತ ಕೋರಿಕೆ ಶಕ್ತಿಯುಂಟು. ಕೆಲ ಮುಸಲಮಾನರು ಶಕ್ತಿಯು ಒಳ್ಳೇ ರುಚಿಯಾಗಿದೆಂದು ಹೇಳಬಹುದು. ಹಿಂದೂ ಜನರು ಇದು ಕೊಳೆತು ದುರ್ಗಂಧಬಿಟ್ಟದ್ದೆಂದೇ ಅಭಿಪ್ರಾಯ ಪಡುವರು.

ಅಧ್ಯಕ್ಷ ಪಟೇಲ—

ನಾವು ಕಮೀಶನಕ್ಕೆ ಬಹಿಷ್ಕಾರ ಹಾಕಿದವು ಅತ್ತರಿಂದ ಅದರ ವಿಚಾರ ಕರ್ತವ್ಯವು ನಮಗಿರುವದೇ ಇಲ್ಲ. ಯಾವ ಸೂಜ್ಞ ಮನುಷ್ಯನೂ ಇದಕ್ಕೆ ಸಮ್ಮತಿ ಕೊಡನು.

ಸರ ಸಿ. ಪಿ. ರಾಮಸ್ವಾಮಿ ಅಯ್ಯರ—

ರಿಪೋರ್ಟು ದೇಶದಲ್ಲಿ ಹಬ್ಬಿದ ಅಸಂತೋಷದ ಉರಿಯಲ್ಲಿ ಎಣ್ಣೆ ಸುರಿದಂತಾಗಿ, ಗಾಂಧೀ ಪಕ್ಷದವರ ಬಲವನ್ನು ಹೆಚ್ಚು ಮಾಡುವದು. ಒಟ್ಟಿಗೆ ರಿಪೋರ್ಟ ಕಸದ ಬುಟ್ಟಿ[illegible]ವಂತಿರುತ್ತದೆ.

ಸರ ಜಹಾಂಗೀರ—

ಸಾಯಮನ್ನನ ಸಪ್ತರಲ್ಲಿ ಹಿಂದೀ ಮೆಂಬರ ಇದ್ದರೆ ಸಾಹೇಬರು ಇಂಥ ರಿಪೋರ್ಟು ಬರೆಯುತ್ತಿದ್ದಿಲ್ಲ. ಆದಾಗ್ಯೂ ಎಲ್ಲ ಸ್ವಾತಂತ್ರ್ಯವನ್ನು ಸರಕಾರದವರು ತಮ್ಮ ಕಯ್ಯಲ್ಲಿಯೇ ಇಟ್ಟುಕೊಳ್ಳಬೇಕೆಂಬ ಗುಪ್ತ ಹೇತು [illegible] ವಾಗುತ್ತದೆ.

ಮುಂಬಯಿ ಸರಕಾರದ ದಿವಾನರಾದ ಶ್ರೀ ಹರಿಲಾಲ ದೇಸಾಯಿಯವರ ಮತವು

ರಿಪೋರ್ಟು ರಾಷ್ಟ್ರದ ಬೇಡಿಕೆಯ [illegible] ಕ್ಕಿಂತ [illegible] ಕಡೆಗೆ ಹೋಗುತ್ತದೆ. ಇದರಲ್ಲಿ ವಸಾಹತಿಕ ಸ್ವರಾಜ್ಯದ ಹೆಸರು ಸಹ ಇರುವದಿಲ್ಲ. ಈ ರಿಪೋರ್ಟು ಹಿಂದೀ ಜನರ ಸಮಾಧಾನವನ್ನು ಸ್ವಲ್ಪ ಮಾಡಲಾರದು.

ದಿವಾನ ಚಮನಲಾಲ—

ಇವರು ಈಗ ಇಂಗ್ಲಂಡದಲ್ಲಿದ್ದಾರೆ. ಕಮೀಶನದ ಬಗ್ಗೆ ಅನ್ನುವದೇನೆಂದರೆ-

ಊರು ಸುಟ್ಟ [illegible] ಹೊಂಗಿನ್ನು [illegible] ಕಮೀಶನದ ಕೃತಿಯಾಗಿದೆ. ಜಗತ್ತಿನಲ್ಲಿ [illegible] ಒಂದು ಭಾಗವನ್ನು ಜನರ ಸ್ವಮತದ [illegible] ವೆಂದು ಇಂಗ್ಲಿಷ ಜನರು [illegible] ಹಿಂದುಸ್ಥಾನವು ನಿಜವಾಗಿ ಇಂಗ್ಲಿಷ [illegible] ಅಂಗಸ್ವರೂಪವಾಗಿರುವದಿಲ್ಲ. ಈಗ [illegible] ಇಂಗ್ಲಿಷ ಜನರನ್ನ ಬರೇ? ಹಿಂದುಸ್ಥಾನದ [illegible] ಗುವದೇ ಒಂದು ವ್ಯವಹಾರವಾಗಿ [illegible] ಪರಿಣಮಿಸಿದೆ.

ವಿಷದ ಹೊಳೆಯಲ್ಲಿ ಹುಟ್ಟಿದ ಹಣ್ಣು

ಪಾಲೆಸ್ಟಾಯಿನದಲ್ಲಿ [illegible] ಗೆ ಡೆಡ ಸೀ ಎಂಬ ಹೆಸರುಂಟು. ಅದರ [illegible] ದರೆ ಜನರು ಸಾಯುವರು. ಅದರ ದಂಡೆಯ ಮೇಲೆ ಪಶು ಪಕ್ಷಿಗಳು ಬದುಕುವದಿಲ್ಲ. ಮತ್ತು ಅದರ ದಂಡೆಯಲ್ಲಿ ಬೆಳೆದ ಗಿಡಗಳ ಹಣ್ಣುಗಳೆಲ್ಲ ವಿಷಯುಕ್ತವಾಗಿ ಅವನ್ನು ತಿಂದವರು ಬದುಕುವದಿಲ್ಲ. ಆ ಮೃತ ಸಮುದ್ರದ ಹಣ್ಣಿನಂತೆ ಸರ ಸಾಯಮನ್ನ ಸಾಹೇಬರ ರಿಪೋರ್ಟಿನ ಫಲವಾಗಿರುತ್ತದೆ. ಇದು ಹಿಂದುಸ್ಥಾನದಲ್ಲಿ ಯಾರ ಪ್ರಿಯವಾಗಿಲ್ಲ. ಇದು ಮನುಷ್ಯತ್ವವನ್ನು ಕೊಲ್ಲುವಂತಹದೇ ಆಗಿರುತ್ತದೆಂದು ಶೋಕಮಯವಾಗಿದೆ. ಸರ ಸಾಯಮನ್ನರು ರಾಷ್ಟ್ರೀಯ ಬ್ರಾಹ್ಮಣೇತರ ಮುಸಲ್ಮಾನ, ಶೀಖ, ಅಸ್ಪೃಶ್ಯ ಮೊದಲಾದವರು ತಮಗೆ [illegible] ಬೇಕೆಂದು ಬೇಡಿಕೊಂಡಿದ್ದರು ಆ ನಿಶ್ಚಯವು ಪರಿಸ್ಥಿತಿ [illegible] ಲ್ಲಿ ಸ್ಥಾಪಿಸಿ [illegible] ಟಿನ [illegible]

ಅಭಿಪ್ರಾಯಗಳನ್ನು ಪ್ರಸಿದ್ಧ ಮಾಡಲಾಗಿದೆ. ಅವನ್ನು ಓದಿ ಪ್ರತಿಯೊಂದು ಕಾಲದವರು ಮತ್ತು ಪ್ರತಿಯೊಂದು ರಾಜಕೀಯ ಮತದವರು ಅದನ್ನು ಅತ್ಯಂತ ತೀವ್ರ ಶಬ್ದಗಳಿಂದ ನಿಷೇಧಿಸುತ್ತಿದ್ದಾರೆ. ಆಗಾಗ್ಗೆ ಸಿಮಲಾದ ಯಾತ್ರೆ ಮಾಡುತ್ತ, ರಾಜ್ಯಾಂಗ [illegible] ಪ್ರತಿನಿಧಿಯಾಗಿ [illegible] ಹೊಂದಿರುವ [illegible] ಮಂತ್ರಿಗಳು ಸಹ ಇದನ್ನು ಧಿಕ್ಕರಿಸಿದ್ದಾರೆ. ಅಂದ ಬಳಿಕ ಉಳಿದವರ ಮಾತೇನು? ಈ ರಿಪೋರ್ಟು ಅಗ್ನಿ ನಾರಾಯಣನಿಗೆ ಆಹುತಿ ಕೊಡಲು ಪ್ರಯೋಜಕವಾದುದಾಗಿ, ಈ ಬಗ್ಗೆ ಸರಕಾರದವರು ಮಾಡಿದ ಶ್ರಮ ಮತ್ತು ವೆಚ್ಚವು ವ್ಯರ್ಥವೆ ಆಯಿತು. ರಾಜ್ಯದ ಟೇಬಲಕ್ಕೆ ಹಿಂದುಸ್ಥಾನದ ಪ್ರತಿನಿಧಿಗಳು ಬರಬೇಕೆಂಬ ಅಪ್ಪಣೆ ಕೊಟ್ಟಿದ್ದರೆ ಅವರಿಂದ ಇದನ್ನು ಒಂದು ಮೂಲೆಗೆ [illegible] ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿ, ಸ್ವರಾಜ್ಯದ ಅರ್ಧ ದಾರಿಯನ್ನು [illegible] ಬೇಕೆಂದು ಬಹಳ ಜನರಿಗೆ ಅನಿಸುತ್ತದೆ. ಆ ಪ್ರಕಾರ ಸಂಧಿಯಿಂದ ಜಾಹೀರನಾಮೆಯನ್ನು, ಮತ್ತು ಆ ದುಂಡು ಮೇಜಿನ ಪ್ರತಿನಿಧಿಗಳ ಹೆಸರುಗಳನ್ನು ಬೇಗನೆ ಪ್ರಸಿದ್ಧ ಮಾಡುವರೆಂದು [illegible] ರಿಪೋರ್ಟಿನಂತೆ [illegible] ದಿಂದ ಈ ರಿಪೋರ್ಟು [illegible] ಗುಡ್ಡಕ್ಕೆ ಕಲ್ಲು [illegible] ವೆಂಬುದನ್ನು [illegible] ತಿಳಿಯುತ್ತದೆ.

ನುಡಿಯ ಪ್ರಕಾರ ನಾಡಿನ ರಚನೆ.

ಕನ್ನಡನಾಡಿನ ಸ್ಥಿತಿ

ಸಾಯಮನ್ನ ಕಮೀಶನದವರು ನುಡಿಯ ಪ್ರಕಾರ ನಾಡಿನ ರಚನೆಯಾಗಬೇಕೆಂಬ ಪ್ರಶ್ನೆಗಳ [illegible] ನ್ನು ಗೊತ್ತು ಮಾಡಬೇಕೆಂದರೆ ಒಂದು ಸೂಚನೆ ಮಾಡಿದ್ದಾರೆ. ಇದರಲ್ಲಿ ಎರಡು ಭಾಗಗಳುಂಟು. ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ಪೂರಾ ಅಗಲಿಸಬೇಕು, ಸಿಂಧ ಮತ್ತು ಓರಿಸ್ಸಾ ಪ್ರಾಂತಗಳ ಬಗ್ಗೆ ಬರೆದಿದ್ದಾರೆ. ಇವನ್ನು ಸ್ವತಂತ್ರ ಮಾಡಬೇಕೆಂದಿಷ್ಟೇ ಅಂದಿದ್ದಾರೆ. ಮುಸಲಮಾನರನ್ನು ಸಂತೋಷಪಡಿಸುವದಕ್ಕಾಗಿ ಸಿಂಧವಾಯಿತು. ಆಂಧ್ರ [illegible] ಯನ್ನು ಅವರ [illegible] ನ್ನು [illegible] ಉಳಿದ ದೇಶಗಳ ಬಗ್ಗೆ ಒಂದೇ ಶಬ್ದವಾದರೂ ಮಾತ್ರ ಹೇಳಿದ್ದಾರೆ. ಈ ಮಾತ್ರದಲ್ಲಿ ಕರ್ನಾಟಕದ ವಿಶೇಷ [illegible] ವು ಬರುತ್ತದೆ. ಕೊಡಗಿನ ದೊರೆತನವು ಈಗಿದ್ದಂತೆಯೇ ಇರಬೇಕೆಂದು ಸ್ಪಷ್ಟವಾಗಿ ಹೇಳಿದ್ದರಿಂದ, ಕರ್ನಾಟಕವೆಂಬುದೊಂದು ನಾಡಾಗುವದು ಅಸಂಭವವೇ ಸರಿ.

ಸಂಸ್ಥಾನಿಕರ ವತಿಯಿಂದ ವಿಲಾಯತಿಗೆ ಹೋಗುವವರ ವೆಚ್ಚಕ್ಕಾಗಿ ಕೊಲ್ಹಾಪೂರದ ಮಹಾರಾಜರು ಮೂವತ್ತು ಸಾವಿರ ರೂಪಾಯಿ ಕೊಡುವರು.

ಹಂಗಿನರಮನೆಗಿಂತ ಇಂಗಡದ ಗುಡಿ ಲೇಸು.

ದಿವಾನರು ಆದವರು ದಿವಾಳರಾಗಬೇಕು

ಸಾಯಮನ್ನ ಕಮೀಶನದವರು ಇಲಾಖೆಗಳಿಗೆ ಕೊಟ್ಟಂಥ ಪ್ರಾಂತಿಕ ಸ್ವಾತಂತ್ರ್ಯವು ಹೆಸರು ಹಾಲಪ್ಪ, ಆದರೆ ಮನೆಯಲ್ಲಿ ಮಜ್ಜಿಗೆ ಕೂಡ ಇಲ್ಲ ಎಂಬವೆನ್ನುವಂತಿರುತ್ತದೆ. ಸ್ವರಾಜ್ಯವೆಂಬ ಶಬ್ದ ಮತ್ತು ಅದರ ಅರ್ಥವೆನಿಸುವಂಥ ಒಂದು ಖಂಡಿತವಾದ ಮಾತು ಈ ಇಡೀ ರಿಪೋರ್ಟಿನಲ್ಲಿಲ್ಲವೆಂದು ಮಂತ್ರಿಗಳ ಪತ್ರವಾದ ಡೇಲಿ ಹೆರಾಲ್ಡವೇ ಅನ್ನುತ್ತದೆ. ಹಿಂದುಸ್ಥಾನಕ್ಕೆ ಸ್ವರಾಜ್ಯ ಸ್ವಾತಂತ್ರ್ಯ ಕೊಟ್ಟು, ತಾವು ಗುಡಾರ ಕಟ್ಟಿಕೊಂಡು ತಿರುಗಿ ಹೋಗಲಿಕ್ಕೆ ಇಂಗ್ಲಿಷರು ಈ ದೇಶಕ್ಕೆ ಬಂದಿರುವದೇ ಇಲ್ಲ. ತಮ್ಮ ರೊಟ್ಟಿಯ ಮೇಲೆ ಸಂಪೂರ್ಣವಾಗಿ ತುಪ್ಪ ಬಿದ್ದು, ಹೆಚ್ಚಾಗಿ ಉಳಿದು, ಹಿಂದೀ ಜನರಿಗೆ ದೊರೆತರೆ ದೊರೆಯಲಿ. ಅದಕ್ಕಾಗಿ ಬ್ರಾಹ್ಮಣ, ಬ್ರಾಹ್ಮಣೇತರ, ಮುಸಲಮಾನ, ಕ್ರಿಶ್ಚನ ಮೆಂಬ ಧರ್ಮಭೇದ, ಜನಾಂಗ ಭೇದದಿಂದ ಕೂಡಿದಾದಲೆಂದೇ ರಿಪೋರ್ಟಿನ ಮುಖ್ಯಾಂಶವಾಗಿರುತ್ತದೆ. ಇಲಾಖೆಯ ಕಾರಭಾರದಲ್ಲಿ ಬರಿಕೆ ಪ್ರಾಂತಿಕ ಸ್ವಾತಂತ್ರ್ಯದಲ್ಲಿ ಎಲ್ಲ ಅಧಿಕಾರವು ಮಂತ್ರಿಗಳ ಕಡೆಗುಂಟೆಂದು ತೋರಿಸಿದ್ದಾರೆ. ಮಂತ್ರಿಗಳೇ ಅಧಿಕಾರ ನೋಡುವಂಥವರಾದ ಬಳಿಕ, ಗವ್ಹರ್ನರರು ಏತಕ್ಕೆ ಬೇಕು? ಬರೇ ಗವ್ಹರ್ನರರಲ್ಲ, ಗವ್ಹರ್ನರರು ಮಂತ್ರಿಗಳನ್ನು ಸೂತ್ರಗೊಂಬೆಗಳಂತೆ ಆಡಿಸುವಂತೆ ಏರ್ಪಾಡು ಮಾಡಿದ್ದಾರೆ. ಕೌನ್ಸಿಲದ ಮೆಂಬರರು ದಿವಾನರನ್ನು ಆರಿಸಿದರೆ, ಅವರು ಕೌನ್ಸಿಲಕ್ಕೆ ಲೆಕ್ಕ ಜವಾಬದಾರರಾಗುವರು. ಆದರೆ ಈ ಭಾಗವೇ ಇರುವದಿಲ್ಲ. ಗವ್ಹರ್ನರಸಾಹೇಬರೇ ತಮಗೆ ಬೇಕಾದವರನ್ನು ದಿವಾನ ಮಾಡುವರು. ಬೇಡಾದವರನ್ನು ಎಸೆಯುವರು. ಗವ್ಹರ್ನರರು ಇಟ್ಟರು [illegible] ನನ್ನನ್ನು ದಿವಾನರಾಗಿ ನೇಮಿಸಿಕೊಳ್ಳುವರು. ಮಂತ್ರಿಗಳ ರಾಜೀನಾಮೆ ಕೊಟ್ಟರೂ ಇವರು ಬಿಲ್ಲ ಬಿಡದ ಗುಂಡಿನಂತೆ ಹೆಚ್ಚು ಹಿಡಿದು ಕೂಡುವರು!!! ದಿವಾನಗಿರಿಯನ್ನು ಕೊಡಿರೆಂದು [illegible] ಬಾಗಿಲ ಕಾಯುವದಕ್ಕೆ ಆಗಿ [illegible] ಮುಂದೂ ಉಳಿಯಿತು. ಈಗಿನ ಎಗ್ಸಿಕ್ಯುಟಿವ್ಹ ಕೌನ್ಸಿಲರು ಹೋಗಿ, ಅವರ ಬದಲು ದಿವಾನರಾಗುವರು. ಗವ್ಹರ್ನರರು ಕೌನ್ಸಿಲದ ಮೆಂಬರರೊಳಗಿಂದವರನ್ನು ಸಹ ಕೌನ್ಸಿಲರಾಗಿ ನೇಮಿಸಿಕೊಳ್ಳುವರು. ಹೊಸ ವ್ಯವಸ್ಥೆಯಿಂದ ಕೌನ್ಸಿಲರರೆಂಬ ಹೆಸರು ಹೋಗಿ ದಿವಾನರಾಗುವಂಥವರು [illegible] ದಿವಾನರೂ [illegible] ಖಾತೆಗಳ ಎಲ್ಲ ಹಕ್ಕುಗಳಿದ್ದರೂ, ಅವುಗಳಲ್ಲಿ ಮುಖ್ಯವಾದ ಪೋಲಿಸ ಮತ್ತು ನ್ಯಾಯ ಖಾತೆಯ [illegible] ಅಧಿಕಾರಗಳು ಗವ್ಹರ್ನರರಿಗೇ ಇರುವವು. ಮಂತ್ರಿಗಳು ಇವುಗಳಲ್ಲಿ ಏನಾದರೂ ಬದಲಾವಣೆ ಮಾಡಿದರೆ ಇಂಗ್ರೇಜಿ ಸರಕಾರಕ್ಕೆ ಅಪ್ರಿಯವೆನಿಸುವಂಥ ಸುಧಾರಣೆಗಳನ್ನು ಮಾಡಿದರೆ ಅವನ್ನು [illegible] ಅಧಿಕಾರವನ್ನು ಗವ್ಹರ್ನರರಿಗೆ ಕೊಟ್ಟಿರುತ್ತಾರೆ. ಸತ್ಯಾಗ್ರಹದ ಚಳವಳಿಯ ಕಾಲಕ್ಕೆ [illegible] ಮ್ಯಾಜಿಸ್ಟ್ರೇಟರು ತಾವು ಸ್ವದೇಶಿಯರೇ [illegible] ಅಭಿಮಾನ ಪಡದೆ, ಸರಕಾರದ ಸೇವಕರೆಂದು [illegible] ರಾಷ್ಟ್ರಭಕ್ತರಿಗೆ ಶಿಕ್ಷೆ ಕೊಡುವ [illegible] ಪೋಲೀಸರ ಅತಿ ಪ್ರಯೋಗ [illegible] ಜಗತ್ತಿಗೆ ತಿಳಿದು ಹೋಯಿತು. ಇವರ [illegible] ಅಧಿಕಾರಗಳು ಗವ್ಹರ್ನರಸಾಹೇಬರಿಗೇ ಉಳಿದವು. ಗವ್ಹರ್ನರರು ಸ್ವದೇಶಿಯರಾಗಬೇಕೆಂಬ ನಿಯಮವಿಲ್ಲ. ಸಿವ್ಹಿಲ ಸರ್ವಂಟ, ಪೋಲಿಸ ಸರ್ವಂಟ ಇವರು ಇನ್ನು ೨೦-೨೫ ವರ್ಷ ಲೀ ಕಮೀಶನದ ಶಿಫಾರಸಿನ ಮೇರೆಗೆ ಸರಿಯರ್ಧ ಯುರೋಪಿಯನ್ನರೇ ಆಗುವರು. ಗವ್ಹರ್ನರ ಮತ್ತು ಈ ಸಿವ್ಹಿಲ ಸರ್ವಂಟರು ಸೇರಿ, [illegible] ಸಂಪೂರ್ಣ ಸಮಾಚಾರ ತಕ್ಕೊಳ್ಳಲು ಪೂರಾ ಸಮರ್ಥರಾಗುವರು. ಅಂದರೆ ದಿವಾನರ ಅವಸ್ಥೆಯು [illegible] ಮರದ [illegible] ಕಾಗುವದು. [illegible] ಸಂಬಳದ ಹೇಳನ್ನು ಯಾರು ಕೇಳುವರು? ತಮ್ಮ ಕಯ್ಯಲ್ಲಿ ನಿಜವಾದ ಅಧಿಕಾರವಿಲ್ಲದೆ, ದಿವಾನಗಿರಿಯ ಆಶೆ ಮಾಡುವದು ನಿಜವಾಗಿ ಹುಚ್ಚುತನವೇ ಆಗುತ್ತದೆ. ಅದ್ದರಿಂದ ದಿವಾನರಾಗಬೇಕೆಂದು ಹಂಬಲಿಸುವಂಥವರು ಮೊದಲು ಮುಸಲಮಾನರಿಯಲ್ಲಿ [illegible] ದಂತೆ ದಿವಾಳರಾಗಿ, ಅನಂತರ ದಿವಾನ ಪದದ ಆಶೆ ಮಾಡತಕ್ಕದ್ದು.

ಮುಂಬಯಿಯಲ್ಲಿ
ವ್ಹಾಲಂಟಿಯರ ಮತ್ತು ಪೋಲೀಸರ
ಹಿಂದಿನ ಕುಸ್ತಿಯು

ವಡಾಲಾ, ಧಾರಾಸಣ, ಶಿರೋಡ ಮುಂತಾದ ಉಪ್ಪಿನ ಸತ್ಯಾಗ್ರಹದ ಶಿಬಿರಗಳಲ್ಲಿ ಸ್ವಯಂಸೇವಕರನ್ನು ದನ ಬಡಿದಂತೆ ಹೊಡೆದು, ಕೊಬ್ಬಿನಿಂದ ಪೋಲೀಸರು ಮುಂಬಯಿಯಲ್ಲಿಯೂ ಉದ್ಧಾಮತನ ತೋರಲು ಉದ್ಯುಕ್ತರಾಗಿದ್ದಾರೆ. ಸರಕಾರದವರು ಪೋಲಿಸ ಹೊಡತ ಬಡಿತಗಳ ಸಮರ್ಥನ ಮಾಡುವಾಗ ಅವಶ್ಯಕತೆಗಿಂತ ಹೆಚ್ಚಾಗಿ ಲಾಠೀ ಪ್ರಯೋಗ ಮಾಡುವದೇ ಇಲ್ಲೆಂದು ಹೇಳುತ್ತ ಬಂದಿದ್ದಾರೆ. ಅವಶ್ಯಕತೆಯ ಬಂಧದ ಮಾತು ಎಷ್ಟು ಜೂಟಾ ಪೊಳ್ಳು ಇರುತ್ತದೆಂಬುದು ಮುಂಬಯಿಯ ಸುತ್ತ ಹಾಗು ಪರದೇಶಗಳ ವರ್ತಮಾನಪತ್ರಗಳ ವಾರ್ತಾದಾರರ ನಿದರ್ಶನಕ್ಕೆ ಬಂತು. ವಿಲಾಯತಿ ವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಿರುವಾಗ, ವ್ಹಾಲಂಟಿಯರರ ಧೈರ್ಯಸ್ಥೈರ್ಯವನ್ನು ನೋಡಲಿಕ್ಕೆ ನಿಂತ ಜನರನ್ನು ಹೆಣಬೀಳ ಹೊಡೆದದ್ದಲ್ಲದೆ, ಅಂಗಡಿಗಳ ಕಟ್ಟೆಯ ಮೇಲೆ ನಿಂತ ಶ್ರೀಮಂತ ಅಂಗಡಿಕಾರರನ್ನೂ, ಅಂಗಡಿಯಲ್ಲಿ ಕುಳಿತವರ ಆಳುಗಳನ್ನೂ ಹೊಡೆದರು. ದಾರಿಗುಂಟ ಹೋಗುತ್ತಿರುವ ಪಾರ್ಸಿ ಜನರನ್ನೂ ಹೊಡೆದದ್ದರಿಂದ, ಪಾರ್ಸಿ ಸಮಾಜವೇ ಪೋಲೀಸರ ವಿರುದ್ಧ ಸಂತಾಪಗೊಂಡಿರುತ್ತದೆ.

ಪೋಲೀಸರು ಬೇಕಾದಷ್ಟು ಹೊಡೆಯಲಿ; ಇಲ್ಲಲ್ಲ; ಸತ್ಯಾಗ್ರಹದ ಪ್ರತ್ಯಕ್ಷ ಸ್ವರೂಪರಾಗಿರುವ ಸ್ವಯಂಸೇವಕರೂ, ಕಾಂಗ್ರೆಸ ಕಮಿಟಿಯವರೂ ದೃಢಸಂಕಲ್ಪ ಮಾಡಿರುವದರಿಂದ, ಇವರನ್ನು ಹೇಗಾದರೂ ಮಾಡಿ, ಹಣ್ಣಿಗೆ ತರಬೇಕೆಂದು ಪೋಲೀಸರು ಮ್ಯಾಜಿಸ್ಟ್ರೇಟರಿಗೆ ಕಿವಿ ಮಾತು ಹೇಳಿ, ನಿರ್ಬಂಧದಿಂದ ಮುಂದಿರುವ ವಿಸ್ತಾರವಾದ ಬೈಲಿನಲ್ಲಿ ಯಾರೂ ಇರಬಾರದೆಂದು ನೋಟೀಸು ಹಚ್ಚಿಸಿದರು. ಲಾರ್ಡ ಆಯರ್ವಿನನ ಲೇಖನಿಯ ಆರ್ಡಿನನ್ಸಗಳನ್ನು ಉಲ್ಲಂಘಿಸುತ್ತಿರುವವರು ಈ ನೋಟೀಸನ್ನು ಮನ್ನಿಸುವರೇ? ಮ್ಯಾಜಿಸ್ಟ್ರೇಟರು ಕೈ ತೋರಿಸಿ ಅವಲಕ್ಷಣ ಮಾಡಿಕೊಳ್ಳಬಾರದಾಗಿತ್ತು. ಈ ವಿಚಾರ ಹೇಗಿದ್ದರೂ, ಕಾಂಗ್ರೆಸ ಕಮಿಟಿಯವರು ಕವಾಯತು ಮಾಡಲಿಕ್ಕೆಂಬ ವಿಶೇಷ ಚಿಟ್ಟಿ ಮಾಡಿದರು. ಇದಕ್ಕೆಂದು ಬಲವತ್ತರ ಕಾರಣವೂ ಉಂಟಾಯಿತು. ಸಿಂಧ ದೇಶದಿಂದ ಬರುವವರು ಮುಂಬಯಿಗೆ ಬಂದರು. ಅವರು ಬಂದು ಇಲ್ಲಿಯ ಸ್ವಯಂಸೇವಕರ ಸೇನಾಧಿಪತಿಯಾಗಿದ್ದಾರೆ. ಅವರಿಗೆ ಲಷ್ಕರೀ ಸಲಾಮು ಕೊಡುವದು ಅಗತ್ಯವಾಯಿತು. ನಾಲ್ಕಾರು ಸಾವಿರ ವ್ಹಾಲಂಟಿಯರರು, ಲಕ್ಷಾವಧಿ ಪ್ರೇಕ್ಷಕರು ನೆರೆಯುತ್ತಿರುವಾಗ, ಕವಾಯತು [illegible] ಪಂಡಿತರ ಮುಂದೆ ಹಾಡು, ಸೆಲ್ಯೂಟ ಮಾಡುವ ಆದರದ ವಿಶೇಷವಾಗಿ ಪೋಲೀಸರ ಹೊಟ್ಟೆಯಲ್ಲಿ ಸಾಸಿವೆ ಅರಿದು ಹಾಕುವಂತಾದದ್ದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದಲೇ ಇವರು ಕವಾಯತಕ್ಕೆ ವಿಘ್ನ ತಂದರು. ಇವರ ವಿಘ್ನವನ್ನು ಮನ್ನಿಸುವರಾರು?

ವ್ಹಾಲಂಟಿಯರರು ಸಾವಿರ ಸಂಖ್ಯೆಯಿಂದ ಕವಾಯತಕ್ಕೆ ಸಿದ್ಧರಾದರು. ಅವರೊಳಗೆ ನಾಲ್ನೂರು ಸ್ತ್ರೀಯರೂ ಸೇರಿದರು. ದೇಶಸೇವಿಕೆಯರ ದಂಡವೇ ಬಂತು. ಒಳಗೆ ಸ್ವಯಂಸೇವಕರು ಹೊರಗೆ ಇವರ ಸುತ್ತಲು ದೇಶಸೇವಿಕೆಯರ ಬಳ್ಳಿಯು. ಈ ಬಳ್ಳಿಯನ್ನು ಮುರಿದು, ಒಳಗೆ ಹೊಕ್ಕು ಪುರುಷ ಸ್ವಯಂಸೇವಕರ ಕಡಾತ ಮೆಕ್ಕಿಗೆ ಮಾಡತಕ್ಕದ್ದಲ್ಲವೇ? ಪೋಲಿಸ ಕಮಿಶನರಸಾಹೇಬರು ಶ್ರೀ. ಸಾ॥ ಗೋಪಾಲಿ ಅವಂತಿಕಾಬಾಯಿಯವರ ಹತ್ತರ ಬಂದು ನೀವು ಸ್ತ್ರೀಯರು ಬಳ್ಳೀ ಮುರಿದು ದೂರ ಸರಿಯಿರಿ. ಪುರುಷರ ಪೌರುಷವನ್ನು ಪರೀಕ್ಷೆಯುಕ್ಕೆ ಹಚ್ಚುತ್ತೇವೆಂದರು. ಬಾಯಿಯವರು ಇವರಿಗೆ ಅಂಜಿ ನಡೆಯುವಂಥವರಲ್ಲ, ಸಾಹೇಬರ ಹೇಳಿದರೆಂದು ಬಾಯಿಬಿಡದೆ ಜೀಯಾ ಇಷ್ಟು ಎನ್ನುವಂಥವರೂ ಅಲ್ಲ. ಅವರು ಸಾಹೇಬರಿಗೆ ಕೊಟ್ಟ ಉತ್ತರವು ವೀರಸ್ತ್ರೀಯರಿಗೆ ಭೂಷಣವಾಗುವಂತಹದಾಯಿತು. ಸಾಹೇಬರೇ ನೀವು ಹೊಡೆಯಿರಿ, ಬಡಿಯಿರಿ, ಮೈಮೇಲೆ ಕುದುರೆಗಳನ್ನು ಹಾಕಿ, ಸರ್ವಸ್ವ ಕಳೆಸಿರಿ ಕೊಲ್ಲಿರಿ ನಾವೆಂದೂ ಸ್ಥಾನಚ್ಯುತಿ ಮಾಡತಕ್ಕವರಲ್ಲೆಂದು ನಿರ್ಭಿಡೆಯಿಂದ ಉತ್ತರ ಕೊಟ್ಟರು. ಈ ಉತ್ತರದಿಂದ ಸಾಹೇಬರು ಕಕ್ಕಾವಿಕ್ಕಿಯಾದರೂ, ನೊತವೆಂದು ಸಾವಿರಾರು ಜನರ ಮುಂದೆ ಕೇಳಿಕೊಳ್ಳುವದು ಬೇಕಾಗಿಲ್ಲ.

ಸಾಹೇಬರು ವರ್ತನರು ಸರಿಯಾ ಪೋಲಿಸರನ್ನು ತಮ್ಮಂತೆ ಕರದು ಕೂಡಲೆ ಏರುವಂತೆ ಸ್ವಾರರನ್ನು ಸಿದ್ಧಮಾಡಿದ್ದರು. ಸ್ತ್ರೀಯರನ್ನು ಹಾಗೆ ಹೀಗೂ ಸರಿಸಿ, ವ್ಹಾಲಂಟಿಯರರನ್ನು ಮಾತ್ರ ಹೊಡಿಸಬೇಕು ಎಂದಿದ್ದರೆ-ಹೊಡೆಯಬೇಕೆಂದ ಅಪ್ಪಣೆ ಮಾಡಿದರು. ಆದರೂ ಸ್ತ್ರೀಯರು ಬಹಳ ತಿಂದರು. ಪೋಲಿಸರು ಬಾಯಿಗೆ ಸಿಕ್ಕ ತವರು ಕೇಳು ಸ್ವಯಂಸೇವಕರು. ಅವರು ದೇಶಭಕ್ತಿಯ ಬಾಯಿಗೆ ನಿಂತಂತಾಗಿತ್ತು. ಪೋಲಿಸರು ಜೋರಾದಷ್ಟು [illegible] ಬಲಕ್ತವಾಯಿತು. ಆದರೂ ಅವರು ಆಗಸ್ತ ದಿನ ಪೋರ್ಗಳ್ಳಿನಂತೆ ನಿಂತಿದ್ದರು. ಪೋಲಿಸರು ಹೊಡೆಯುವವರು. ಜನರು ಹೊಡಿಸಿಕೊಳ್ಳುವಂಥವರಾದ್ದರಿಂದ ಈ ಗೊಂದಲದಲ್ಲಿ [illegible] ಪೆಟ್ಟು ತಿಂದರು. ಇವರಲ್ಲಿ ೧೫೦ ಜನರು ಬಲವಾಗಿ ಪೆಟ್ಟು ತಿಂದಿದ್ದಾರೆ. ಇವರ ಆಸ್ಪತ್ರೆಯು ಕಾಂಗ್ರೆಸದ ಆಸ್ಪತ್ರೆಯಲ್ಲಾಗುತ್ತಿರುವದು.

ಎರಡು ತಾಸಿನ ಕದನ ಹೋದಾಟವಾದ ನಂತರ ಪೋಲಿಸರು ಹೊರಟು ಹೋದರು. ಸ್ವಯಂಸೇವಕರು ಅತ್ತಿಂದ ಇತ್ತ, ಇತ್ತಿಂದ ಅತ್ತ ಹೋಗುತ್ತಾ ಪೋಲಿಸರಿಗೆ ಮಾರ್ಗ [illegible] ನಿಲ್ಲುತ್ತಿದ್ದರು. ಪೋಲಿಸರು ಹೋದ ಬಳಿಕ, ಸ್ವಯಂಸೇವಕರು ಕವಾಯತು ಮಾಡುವಂತೆ ಸಜ್ಜಾಗಿ ನಿಂತರು. ಆಗ ಪಂಡಿತರು ಬಂದು ಸೆಲ್ಯೂಟ ತಕ್ಕೊಳ್ಳುವ ಸಮಯವಾಗಿತ್ತು. ಪಂಡಿತರು ಬೇರೆ ಬೈಠಕದಲ್ಲಿ ಒಂದು ತಾಸು ಕವಾಯತು ಮತ್ತು ಸೆಲ್ಯೂಟಾಗಿ, ಎಲ್ಲರೂ ಜಯ ಘೋಷ ಮಾಡುತ್ತ ಸ್ವಸ್ಥಾನಕ್ಕೆ ಹೋದರು. [illegible] ಪೋಲಿಸರೂ, ಸಾವಿರಾರು ಜನ [illegible] ಸತ್ಯಾಗ್ರಹಕ್ಕೆ [illegible] ದಲ್ಲಿ ಅಹಿಂಸೆಯ ಅನುಭವದ ದಿವ್ಯ ಜಯವೇ [illegible]

ಲಾಠೀಯಿಂದ ಪೆಟ್ಟು ತಿಂದ
ಸ್ತ್ರೀಯರ ಹೇಳಿಕೆ

ಶ್ರೀ. ಸರದೇಸಾಯಿ—

ನಾಡಗ ದಿಯನ್ನು ಒಪ್ಪಿಕೊಂಡು ಬೈಲಿಗೆ ಹೋದೆನು. ಒಬ್ಬ ಸಾರ್ಜಂಟನು ಬಂದ ನನ್ನ ಕೈ ಗಟ್ಟಿಯಾಗಿ ಹಿಡಿದು, ಬೆನ್ನಿಗೆ ಅಪ್ಪಳಿಸಿದನು. ನಾನು ಸಿಟ್ಟಿನಿಂದ [illegible] ಮತ್ತೆ ನಿಲ್ಲುಯಿಸಿದನು. ಹೀಗೆ ಮೂರು ಸಾರೆ ಮಾಡಿದನು. ಕೊನೆಯ ಸಾರೆ ನಾನು ಎಚ್ಚರ ತಪ್ಪಿ ಬಿದ್ದೆನು.

ಶ್ರೀ ಮನೋರಮಾದೇವಿ—

ಒಬ್ಬ ಸಾರ್ಜಂಟನು ನನ್ನ ಕೂದಲು ಹಿಡಿದು ಜಗ್ಗಿ ನೆಲಕ್ಕೆ ಕೆಡವಿದ. ಸ್ವಯಂಸೇವಕರು ನನ್ನನ್ನು [illegible] ಆಸ್ಪತ್ರೆಗೆ ಒಯ್ದರು. ಡಾಕ್ಟರನು ಪ್ರಾಥಮಿಕ ಕೂದಲು ಹಿಡಿದ ಜಗ್ಗಿದಂತೆ!!

ಮುಂಬಯಿ ಕೌನ್ಸಿಲದಲ್ಲಿ ಬರುವ
ಠರಾವುಗಳು.
ಸರಕಾರೀ ಕಾಮಗಾರರು ಖಾದಿಯನ್ನೇ
ಧರಿಸಬೇಕು.

ಮಿ. ಜಾಧವ ಪುಣೆ ಮರಾಠಾ ಸಾಹೇಬರು ಕೌನ್ಸಿಲದಲ್ಲಿ ಮುಂದಿನ ಠರಾವು ತರತಕ್ಕವರಿದ್ದಾರೆ.

೧ ಸರಕಾರವು ತಕ್ಕೊಳ್ಳುತ್ತಿರುವ ಸರಕಾರದ ಎಲ್ಲ ಕೆಲಸಗಾರರಿಗೆ ಖಾದಿಯ ಸಮವಸ್ತ್ರಗಳನ್ನೇ ಕೊಡಬೇಕು.

೨ ಎಲ್ಲ ಕಾಮದಾರರು ಕಚೇರಿಗೆ ಬರುವಾಗ ಖಾದಿಯ ಉಡುಗೆಯನ್ನೇ ಧರಿಸಬೇಕು.

೩ ಉಪ್ಪಿನ ಕರ ಮತ್ತು ಉಪ್ಪಿನ ಕಾಯದೆಯನ್ನು ಈ ಕ್ಷಣವೇ ತೆಗೆದು ಹಾಕಬೇಕು.

ಸೋಲಾಪೂರವು ದಂಡಿನ ವಶವಾಗುವದು

ಅಲ್ಲಿಯ ವಿಶೇಷ ಪ್ರತಿನಿಧಿಯ ಕಡೆಯಿಂದ ಸೋಲಾಪೂರದಲ್ಲಿ [illegible] ಅಮಲನ್ನು ತೆಗೆಯುವದು ಸರಕಾರದಲ್ಲಿ ನಿಂತಿದ್ದ ಮತ್ತು ಸೋಲಾಪೂರದಲ್ಲಿ ದಂಡಿನ ಅಧಿಕಾರ ನಡೆಯಿಂದ, ಈ ಬಗ್ಗೆ ಹಿಂದುಸ್ಥಾನ ಸರಕಾರಕ್ಕೆ ಬರೆದು, ಒಪ್ಪಿಗೆ ದೊರೆತದೆಂದೂ ವರ್ತಮಾನವಾಗಿದೆ.

ಹೊಡಿಸಿಕೊಂಡಂತೆ ಪೆಟ್ಟು
ದಸ್ತು ಬೀಳುವದು
ಮುಂಬಯಿ ವರ್ತಕರ ನಿರ್ಧಾರ.
ವಿಲಾಯತಿಯ ವ್ಯಾಪಾರಕ್ಕೆ ಕಡಿತ

ಮುಂಬಯಿಯಲ್ಲಿ ಪೋಲಿಸರು ಸ್ತ್ರೀ ಪುರುಷ ವ್ಹಾಲಂಟಿಯರರನ್ನು ಹೊಡೆದಂತೆ, ವರ್ತಕರ ತ್ವೇಷವು ಹೆಚ್ಚಾಗಿ, ಇಂಗ್ರೇಜಿ ವ್ಯಾಪಾರಕ್ಕೇ ವಿರಾಮ ಬೀಳಬೇಕೆಂಬ ನಿರ್ಧಾರ ಮಾಡಿದ್ದಾರೆ. ಬ್ಯಾಂಕುಗಳು ಯುರೋಪಿಯನ್ನರವಾದರೂ, ಅವುಗಳಲ್ಲಿ ಹಿಂದೀ ಜನರ ಠೇವಣಿಯಿಂದ ಲಕ್ಷಾವಧಿ ಕೋಟಿ ಸಂಪತ್ತು ಇರುತ್ತದೆ. ಬಿಸಿಯಾದ ಹೊಡೆತ ತಟ್ಟದೆ ತಂಗುವದಲ್ಲವಷ್ಟೇ; ಯುರೋಪಿಯನ್ನ ಸಾಹುಕಾರರಿಗೆ ಬಿಸಿ ಹತ್ತಿದರೆ ಸರಕಾರಕ್ಕೆ ಬಿಸಿ ಹತ್ತುವದೆಂದು ಬಗೆದ, ಇವರು ಬ್ಯಾಂಕುಗಳಲ್ಲಿಯ ತಮ್ಮ ಹಣವನ್ನೇ ತೆಗೆದುಕೊಳ್ಳಬೇಕೆಂದು ಗೊತ್ತುಮಾಡಿದ್ದಾರೆ. ಇದರಿಂದ ಇಂಗ್ಲಿಷ ಬ್ಯಾಂಕುಗಳು ಮಾತ್ರವಲ್ಲ, ಪರದೇಶದ ಎಲ್ಲ ಬ್ಯಾಂಕುಗಳಿಗೆ [illegible] ಬೀಳುವವು. [illegible] ಹಿಂದೀ ಸರಾಫ ಸಾಹುಕಾರರೂ ಬೆಳ್ಳಿಯ ವ್ಯಾಪಾರ ಕಡಿಮೆ ಮಾಡಿ ಬಂಗಾರವನ್ನು ಕೊಂಡು [illegible] ನಿಯಮದಿಂದ ಪರದೇಶಕ್ಕೆ ದೊರೆಯತಕ್ಕ ಲಾಭದ ಮೇಲೆ ಸಂಕ್ರಾಂತಿ ತರಬೇಕೆಂದು ಎರಡನೇ ಠರಾವು ಮಾಡಿರುವರು. ಬೆಳ್ಳಿಯ ಧಾರಣಿಯು ಅರ್ಧದಷ್ಟು ಬಿದ್ದರು ಬೆಳ್ಳಿಯ ಮೋಹಕ್ಕೆ ಬೀಳದೆ ಗುಂಜಿ ಮಾಸಿಯಿಂದ ಸಹ ಚಿನ್ನದ ಸಂಗ್ರಹ ಮಾಡಬೇಕೆಂದು ಸೂಚಿಸುತ್ತೇವೆ. ಇದೇ ವೇಳೆಯಲ್ಲಿ ಸರಕಾರದವರು ಒಂದು ಹಸ್ತಪತ್ರಿಕೆಯನ್ನು ಮುದ್ರಿಸಿ, ತಾವು ಪರದೇಶಿಯರ ಹಿತೈಷಿಗಳಾಗಿರುತ್ತೇವೆಂತ ವ್ಯಕ್ತಮಾಡಿದ್ದಾರೆ. ಹಿಂದೀ ಜನರು [illegible] ಈ ವಿಷಯವನ್ನು ಸ್ವದೇಶೀ ವಿಮೆ [illegible] ಇಳಿಸಬೇಕೆಂದೂ ವಿಚಾರ ನಡೆದಿದೆ. ಸರಕಾರದ ಹುಂಡಿಯ ಪತ್ರ ನೋಡಿ, ವಿಲಾಯತಿಯ ಬಟ್ಟೆಯ ಬಹಿಷ್ಕಾರವನ್ನು ಹೆಚ್ಚಿನದಾಗಿ ಮಾಡಬೇಕೆಂದೂ, ಅಹಮದಾಬಾದದಲ್ಲಿ ತಯಾರಾದ [illegible] ಗಳನ್ನು [illegible] ಬೇಕೆಂದೂ ಪಂಡಿತ ಮೋತಿಲಾಲರು ಸೂಚನೆ ಮಾಡಿದ್ದಾರೆ.

ವಿಲಾಯತಿಯ ವ್ಯಾಪಾರವು
ದಿವಾಳಿಗೆ ಬಂತು.

ಶ್ರೀ. [illegible] ಲಂಡನದಲ್ಲಿದ್ದ ಅಲ್ಲಿಯ ಹಿಂದೀವರ್ತಕ ಸಂಘದಲ್ಲಿ ಇವರ ಸದ್ಯಸ್ಥಿತಿಯನ್ನು ಕುರಿತು ವ್ಯಾಖ್ಯಾನವಾಯಿತು. ಪ್ರಸ್ತುತದ ರಾಜಕೀಯ ಚಳವಳಿಯಿಂದ ಇಂಗ್ಲಂಡ ಮತ್ತು ಹಿಂದುಸ್ಥಾನದ ವ್ಯಾಪಾರವು ಅಧೋಗತಿಯ ಅವಸ್ಥೆಗೆ ಬಂದಿದ್ದು, ಇದರಿಂದ ಇಂಗ್ಲಂಡವು ಹಿಂದುಸ್ಥಾನದಂಥ ಉತ್ತಮವಾದ ಗಿರಾಕಿ ಕಳಕೊಳ್ಳುವದು. ಆದ್ದರಿಂದ ಹಿಂದೀ ಜನಾಂಗಕ್ಕೆ ಸಮಾಧಾನವಾಗುವಂಥ ಯೋಜನವನ್ನು ಹಿಂದುಸ್ಥಾನದಲ್ಲಿ ಸ್ಥಾಪಿಸಬೇಕೆಂದು ಅವರು ಅಂದಿರುತ್ತಾರೆ.

ಗಲ್ಲಿಗೆ ಹಾಕುವ ಫಾರ್ಮ ಶೋಧಿಸಿ
ಲಕ್ಷಕ್ಕೆ ಸಂಪಾದಿಸುವ ಯುಕ್ತಿಯು

ಇಂಗ್ಲಂಡದಲ್ಲಿರುವ [illegible] ಕುರಂಗವನ್ನು ಸಂಪಾದಕರು ಕಡಿದು ಮಾಡಿ, [illegible] ಲಕ್ಷ ಕೊಟ್ಟರು. ಕೊಂಡವನು ಕುರಂಗ ಹೇಗಿರುತ್ತದೋ ಬದನ ಜನರು ನೋಡಬೇಕೆಂದು, ಟಿಕೇಟು ಇಟ್ಟನು. ಇದರಿಂದ ಮಸದಡೆ ರೊಕ್ಕ ಬರಹತ್ತಲು, ಕೊಲೆಗಾರರನ್ನು ಹೇಗೆ ಗಲ್ಲಿಗೆ ಹಾಕುತ್ತಾರೆಂಬುದನ್ನು ತೋರಿಸುವ ಫಾರ್ಮ ಮಾಡಿ, [illegible] ಗಳನ್ನಿಟ್ಟಿದ್ದಾನೆ. ಮನುಷ್ಯಾಕಾರದ ಗೊಂಬೆ ಮಾಡಿ, ಅದನ್ನು ಗಲ್ಲಿಗೆ ಹಾಕುವ ಎಲ್ಲ ವಿಧಾನಗಳನ್ನು ಮೊದಲಿನಿಂದ ಕಡೆಯವರೆಗೆ ಮಾಡಿ ತೋರಿಸುವನು.

ಮದ್ರಾಸಿನ ಇಲಾಖೆಯ ಒಂದು ಸಾವಿರ ಮತ್ತು ಅಲ್ಲಾಬಾದ ಇಲಾಖೆಯ ಏಳುನೂರು ಜನ ಸ್ವಯಂಸೇವಕರೂ ಮುಂದೆ ಸಿದ್ಧರಾಗಿದ್ದಾರೆ. ಮದ್ರಾಸ ಇಲಾಖೆಯಲ್ಲಿ ಮುನ್ನೂರು ಜನರು ಎಲ್ಲಾ ಸಿನವರಿರುವರು.

ಶಿಂದೀ ಲಿಲಾವು ಮುಂದೆ ಬಿದ್ದವು!
ಗಿಡಗಳನ್ನು ಕಡಿದು
ಮಕ್ತೇ ಹಿಡಿಯುವಂತೆ ಮಾಡಿರಿ!!

ಧಾರವಾಡ ಜಿಲ್ಹೆಯ ಶಿಂದೀ ಮಕ್ತೆಗಳ ಲಿಲಾವು ಇದೇ ತಿಂಗಳ ೨೦ನೇ ತಾರೀಖಿಗೆ ನಡೆಯುವದಿದ್ದವು. ಆದರೆ ಜಿಲ್ಹೆಯ ಜನರು ಅದರವರೆಗೆ ನಡೆಸಿದ ಶಿಂದೀ ಗಿಡಗಳನ್ನು ಕಡಿಯುವ ಚಳವಳಿಯಿಂದ ಮಕ್ತೇದಾರರ ಕಣ್ಣಲ್ಲಿ ಅಂಜಿಕೆಯನ್ನು ಹಾಕಿದಂತಾಗಿ ೨೦ನೇ ತಾ॥ ದಿನ ಇದ್ದ ಲಿಲಾವು ಮುಂದೆ ಬಿದ್ದವು. ಜನರು ಗಿಡಗಳನ್ನು ಕಡಿಯುವರು, ಗಡಿಗೆಗಳನ್ನು ಒಡೆಯುವರು, ಇದರಿಂದ ತಮ್ಮ ಸಂರಕ್ಷಣೆಯು ಹೇಗೆ ಎಂದು ಪ್ರತಿಯೊಬ್ಬ ಮಕ್ತೆದಾರನಿಗೂ ದಿಗಿಲು ಬಿದ್ದಿದೆ. ಜನರು ಗಿಡಗಳನ್ನು ಕಡಿಯುವದನ್ನು ಬಿಡುವದಿಲ್ಲ. ಗಡಿಗೆ ಒಡೆಯುವದನ್ನು ನಿಲ್ಲಿಸುವದಿಲ್ಲ. ಇದರಿಂದ ಯಾವ ಮಕ್ತೇದಾರನಿಗಾದರೂ ಮಕ್ತೆ ಹಿಡಿಯುವದು ಬಹು ದುಸ್ತರವಾಗಿದೆ. ಜನರ ಈ ಜಾಗೃತಿಯ ವಿರುದ್ಧ ಸರಕಾರದವರಿಗಾದರೂ ಏನು ಮಾಡುವದೂ ಸಾಧ್ಯವಿಲ್ಲ. ಅದ್ದರಿಂದ ಅವರಿಗೂ ದಿಗಿಲು ಬಿದ್ದಿದೆ. ಇದು ಜನರ ಚಳವಳಿಯ ವಿಜಯವೇ ಎಂದು ಹೇಳಬಹುದು.

ಆದರೆ ಇಷ್ಟರಿಂದ ಕಾರ್ಯವಾಗಲಿಲ್ಲ. ಈ ವರ್ಷ ಪುನಃ ಲಿಲಾವು ಇಡುವ ಧೈರ್ಯವು ಸರಕಾರದವರಿಗೆ ಆಗದೆ, ಆಷಾಢ ಬ. ಜುಲೈ ೫ನೇ ತಾ॥ ನೊಳಗಾಗಿ ಮಕ್ತೇದಾರರ ಕಡೆಯಿಂದ ಟೆಂಡರುಗಳನ್ನು ಬೇಡಿರುವರು. ಈ ರೀತಿಯಿಂದ ಲಿಲಾವಿನ ಕಾರ್ಯವನ್ನು ಮಾಡಬೇಕೆಂದು ಕಲೆಕ್ಟರರ ಹಂಚಿಕೆಯಿದೆ. ಅಷ್ಟರಲ್ಲಿ ಶಿಂದೀ ಗಿಡಗಳನ್ನು ಕಡಿಯುವ ಚಳವಳಿಯನ್ನು ರಭಸದಿಂದ ನಡೆಸಿ, ಮಕ್ತೇದಾರರ ಹಾಗೂ ಶಿಂದೀ ಉತ್ಪನ್ನದ ಮೇಲೆ ಪುಷ್ಟವಾಗುವ ಸರಕಾರದ ಹೃದಯದಲ್ಲಿ ಹಾಹಾಕಾರವನ್ನುಂಟು ಮಾಡುವದು ಜನರ ಕರ್ತವ್ಯವಾಗಿದೆ. ಅಂದರೇ ಜುಲೈ ೫ನೇ ತಾ॥ ನೊಳಗಾಗಿ ಕಳಿಸಬೇಕಾದ ಟೆಂಡರುಗಳಿಗೆ ಮಕ್ತೆದಾರರೇ ಇಲ್ಲದೆ, ಲಿಲಾವು ಪೂರಾ ನಿಂತುಹೋಗುವವು. ಹಾಗಾದಲ್ಲಿ ಬರುವ ಒಂದು ವರ್ಷದ ಮಟ್ಟಿಗಾದರೂ ಶಿಂದೀ ಕುಡಿಯುವ ದುರ್ವ್ಯಸನವು ತಪ್ಪುವದು. ಇದನ್ನು ಲಕ್ಷ್ಯದಲ್ಲಿಟ್ಟು ಹಳ್ಳಿಯ ಜನರೂ ವಿದ್ಯಾರ್ಥಿಗಳೂ [illegible] ಗಿಡ ಕಡಿಯುವ ಕಾರ್ಯ ಚಳುವಳಿಯನ್ನು ಇಮ್ಮಡಿ ಹುರುಪಿನಿಂದ ಮುಂದೆ ನಡೆಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಧಾರವಾಡ ಧಾರವಾಡ ಸತ್ಯಾಗ್ರಹ ಮಂಡಲ
೨೮-೬-೩೦

ಶಿಂದೀ ಮಕ್ತೇದಾರರಿಗೆ ಮಾಮಲೇದಾರರ
ತಾಕೀತು.

ವಿಜಾಪೂರ ಜಿಲ್ಹೆಗೆ ಸೇರಿದ ಬಾಗೇವಾಡಿಯ ಮಾಮಲೇದಾರರು ಶಿಂದಿ ಮಕ್ತೆದಾರರಿಗೆ ಮುಂದೆ ಬರೆದಂತೆ ತಾಕೀತ ಕೊಟ್ಟಿದ್ದಾರೆ.-

ಮಕ್ತೆದ ಪಟ್ಟೆಯ ರಕಮು ಕಡಿಮೆಯಾಗಬಹುದೆಂದು ಮಕ್ತೆದಾರರಾದರೂ ಅಂಗಡಿಗಳನ್ನು ಬಂದು ಮಾಡುವ ಚಳವಳಿ ನಡೆಸಿರುವರು. ಆದರೆ ಮಕ್ತೆದಾರರು ಮಕ್ತೆ ಹಿಡಿಯುವ ಮುಂಚೆ ಪಿಕೆಟಿಂಗ ಮುಂತಾದ ಗಂಡಾಂತರಗಳನ್ನು ಮೊದಲೇ ವಿಚಾರಿಸಿ, ಮಕ್ತೆ ಹಿಡಿಯುತ್ತಾರೆಂದು ನಾವು ತಿಳಿದಿದ್ದೇವೆ. ಪಿಕೆಟಿಂಗವನ್ನು ಬಹಿಷ್ಕಾರದಿಂದ ಅಥವಾ ಕಳಕಳಿಯಿಂದ ಮಾಡಲಿ. ಪಟ್ಟೆ ರಕಮುಗಳಲ್ಲಿ ಸೂಟ ಕೊಡಲಾರೆವು.

ಅನೇಕ ಪ್ರಸಂಗಗಳಲ್ಲಿ ಪಿಕೆಟಿಂಗದ ಅಂಜಿಕೆಗಾಗಿ ಮಕ್ತೆದಾರರು ವಾಡಿಕೆಗಿಂತ ಕಡಿಮೆ ಸವಾಲಿಗೆ ಮಕ್ತೆ ಹಿಡಿದಿರುತ್ತಾರೆ. ಹೀಗಿರುವದರಿಂದ ಮಕ್ತೆದಾರರು ಪಿಕೆಟಿಂಗದ ಪರಿಣಾಮವನ್ನು ಮೊದಲೇ ವಿಚಾರಿಸಿದ್ದರೆಂದು ಸ್ಪಷ್ಟವಾಗುತ್ತದೆ. ಅದ್ದರಿಂದ ಮಕ್ತೆದಾರರು ಪೋಲಿಸ ಮತ್ತು ಮ್ಯಾಜಿಸ್ಟ್ರೇಟರ ಬಂದೋಬಸ್ತುಗಳ ಮೂಲಕ ಪೂರ್ಣ ಧೈರ್ಯದಿಂದ ತಮ್ಮ ದಂಧೆ (ಅಂಗಡಿ) ಯನ್ನು ನಡೆಸಬೇಕು.

ಮೈಸೂರಿನ ದಿವಾನ ಸರ ಮಿರ್ಜಾಸಾಹೇಬರು ತಮ್ಮ ಖಾಸ ಪ್ರೈವೇಟ ಸೆಕ್ರೆಟರಿ ಮಿ. ಸುಬ್ಬರಾವ ಮತ್ತಿತರರನ್ನು ಸಂಗಡ ಕೊಂಡು ರೌಂಡ ಟೇಬಲಕ್ಕೆ ಹೋಗುವ

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಗಳ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾನುಭಾವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾತ್ಮಾ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರೆಡ್ಡಿ ಕಂಪನಿ ಲಿಮಿಟೆಡ್

ಬ ನಾಮದ **ದಲಾಲಿ ಅಂಗಡಿಯನ್ನು ಗದಗ** ಶಹರದಲ್ಲಿ ಇದೇ ವರ್ಷ ಕಂಪನಿಯು ಆಕ್ಟ ಪ್ರಕಾರ ಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯು [illegible] ಹ್ಟ ದೊಡ್ಡ ಜವಾಬದಾರ ಮತ್ತು ವ್ಯವಹಾರಜ್ಞರಾದ ಸುಶಿಕ್ಷಿತ ಜನರಿಂದಲೇ ನಡೆಸಲ್ಪಡುವದು. ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಹುಟ್ಟಿಸಿ ಮತ್ತು ನೈತಿಕ ಉನ್ನತಿಯನು [illegible] ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಬಾರದಾನ, ಶಾಲೀ ಕೌಲ, ಹತ್ತೀಕಾಳು, ಚಿಮಣಿಎಣ್ಣಿ [illegible] ಕಾಳ ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ [illegible]ದರದಿಂದ ಕೊಂಡುಕೊಳ್ಳಬೇಕಾಗಿ ವಿ[illegible] ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತೀಕಾಳು, ಹುರುಳಿ ವಗೈರೆ ಮಾಲನ್ನ ಸಂಗ್ರಹ[illegible] ಮಾಡುವದು ಶ್ರೇಷ್ಠ ಲಾಭ[illegible]ದೆ. ಕಾರಣ ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು ನಮಗೆ [illegible] ಲೇಖಿಯಿಂದ ಖರೀದಿ ಮಾಡಲಿಕ್ಕೆ ತಿಳಿಸಿದಲ್ಲಿ ಯೋಗ್ಯದರದಿಂದ ಖರೀದಿಸಾ[illegible] ಈ ಸುಸಂಧಿಯನ್ನು ವ್ಯರ್ಥಗಳೆಯಕೊಳ್ಳಬಾರದಾಗಿ ವಿನಂತಿ. ಮತ್ತು ತಾವೆ[illegible] ಹತ್ತಿ, ಅರಳೆ, ಜೋಳ, ಶೇಂಗಾ ವಗೈರೆ [illegible] ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳೆ, ಜೋಳ, ಶೇಂಗಾ ವಗೈರೆ [illegible] ತರಹದ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದ್ಯ[illegible] ಕೊಡಬೇಕೆಂದೂ ಮತ್ತು ತಾವೂ ಲಾಭಹೊಂದಬೇಕೆಂದೂ ಇಚ್ಛಿಸುತ್ತೇವೆ.

ತಮ್ಮ,
ರಾ. ಸಾ. ಲಿಂಗನಗೌಡಾ ಪಾಟೀಲ, ಚೇರಮನ್.
ಲಕ್ಷ್ಮಪ್ಪ ಗೋಳೆಪ್ಪ, ಸಾಹುಕಾರ ಮೈದೂರ [illegible]
ದ್ಯಾವನಗೌಡಾ ಪಾಟೀಲ, ಹಾಯಕೋರ್ಟ ವಕೀಲ
ಧಾರವಾಡ

ಗದಗ.
ಅಂಗಡಿ ನಂ ೧೬೨೨
ಕಾಟನ್ ಮಾರ್ಕೇಟ ರೋಡ
ವೆಂಕರೆಡ್ಡಿ ಕೃಷ್ಣರೆಡ್ಡಿ ಇನಾಮತಿ ಅಸುಂಡಿ, ಗದಗ
[illegible] ಕಾಲವಾದ ಮ್ಯಾನೇಜರ, ರೆಡ್ಡಿ ಬ್ಯಾಂಕ ಧಾರವಾಡ

ಸೂಚನೆ— ಮಾಲು ಕಳಿಸಿದಲ್ಲಿ ಮಾಲಿನ ಮೇಲೆ ೭೫ ಪ್ರತಿಶತ ಹೆಚ್ಚಿಲ್ಲದಷ್ಟು ರಕಮು ಅಗ[illegible] ಕೊಡುವದರಲ್ಲಿ ಬರುವದು. ಹೀಗೆ ಒಯ್ದ ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ ೧ ರೂಪಾಯಿಗಿಂತ [illegible] ಬಡ್ಡೀ ಕೊಡಬೇಕಾಗುವದು. ಕಂಪನಿಯವರು ಆಸಾಮಿಗಳ ಇಚ್ಛೆಯ ಪ್ರಕಾರ, ಪೇಟೆಯಲ್ಲಿ ಖಾಸಗಿ [illegible] ಲಿಲಾವು ಇಲ್ಲವೆ ಗದಗ ಕಾಟನ್ ಮಾರ್ಕೇಟ ಅಸೋಸಿಯೇಶನ್ನದ ಮುಖಾಂತರವಾಗಿ ಲಿಲಾವಿ[illegible]ದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫೀಸಿನಲ್ಲಿ ತಿಳಿದುಕೊ[illegible]ಬಹುದು.

THE UNITED KARNATAK INSURANCE COMPANY
LTD. DHARWAR

ಶ. ೧೯ [illegible]
ಸ್ಥಾಪನಾ [illegible]

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ಏಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು

೧ ಜೋಶಿ? ಶ್ರೀನಿವಾಸರಾವ ವ ಸಾವನೂರ ಬಿ ಎ ಎಲ್ ಎಲ್ ಬಿ ಸರಕಾರಿ ವಕೀಲ ವ [illegible] ಪ್ರಾಸಿಕ್ಯೂಟರ ಧಾರವಾಡ ಚೇರಮನ
೨ ಡಾ|| ವಾಸುದೇವರಾವ ಶ್ರೀನಿವಾಸರಾವ ಉಮಚಗಿ ಎಲ್ ಎಮ್ ಆ್ಯಂಡ ಎಸ್ ಗದಗ
೩ ವಿ|| ಶ್ರೀನಿವಾಸರಾವ [illegible] ಬಿ ಎ ಅಣ್ಣಿಗೇರಿ
೪ ಮಿ|| ರಾಮಚಂದ್ರ ರಂಗ[illegible] ಸಾಹುಕಾರ ವತನದಾರ ಹಳೆ ಹುಬ್ಬಳ್ಳಿ
೫ ಮಿ|| ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ ಎಲ್ ಬಿ ವಕೀಲ ಗದಗ
೬ ಮಿ|| ರಘುನಾಥ [illegible] ಹುಬ್ಬಳ್ಳಿ ವಕೀಲ [illegible]
೭ ವಿ|| ಅನಂತ ವ[illegible] ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ
೮ ಮಿ|| ರಾಮರಾವ ವೆ [illegible] ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ
೯ ವಿ|| ಅಬ್ದುಲ ಕರೀಮ ಅಮೀನ ಸಾ|| [illegible] ವ್ಯಾಪಾರಿ ಗದಗ

ಕರ್ನಾಟಕದಲ್ಲಿ [illegible] ಇನ್‌ಶ್ಯೂರನ್ಸ ಕಂಪನಿಯೆಂದರೆ ಇದೇ ಮೊದಲನೇದು. ಈ ಕಂಪನಿಯ ಡಾಯರೆಕ್ಟರರು [illegible] ಕನ್ನಡಿಗರೇ ಆಗಿರುತ್ತಾರೆ. ಪರದೇಶಿ ಕಂಪನಿಗಳಿಗೆ [illegible] ಹಣವನ್ನು ಹೊರಗೆ ಕಳಿಸ[illegible] ಈ ಕಂಪನಿಗೆ ಸಹಾನುಭೂತಿಯನು [illegible]

[illegible] ವಿಮೆ ಇಳಿಸುವ ಕೆಲಸವು ಎಲ್ಲ[illegible] ಮಾಡುವದಕ್ಕೂ ಮತ್ತು ವಿಮೆ [illegible] ದೊಡ್ಡದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು [illegible] ಕಮಿಶನ ದರಗಳು ಲಾಭಕಾರವಾಗಿ [illegible] ಕೆಳಗಿನ ಸಕ್ರೇಟರಿಯವರಿಗೆ ಪತ್ರವ್ಯವಹಾರ ಮಾಡಬೇಕು.

K. L. Hulgolkar.
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ನಾಮದೇವ[illegible], ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಅಗಸರ?, ಒಡ್ಡರ, ಗೊಲ್ಲರ, [illegible], ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ, ಶಿಲ್ಪಿಗಾರ ಲಮಾಣಿ ಮೊದಲಾದ ಸ್ಪೃಶ್ಯ ವರ್ಗಗಳ [illegible] ಸರ್ವತೋಮುಖ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, [illegible] ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, ಹಿಂ[illegible] ಎಲ್ಲಿಯು ಈ ಸಂಘದ ಉದ್ದೇಶವು ಸರ್ವ ಸುಧಾರಣೆಗೆ [illegible] ಸಂಘದ ಧ್ಯೇಯವು ಸರಕಾರದ ಮತ್ತು ಮುಂದೆ ಹೋದ [illegible] ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು ಸರಕಾರದ ಮತ್ತು [illegible] ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ಮಾರ್ಗದಲ್ಲಿ? ಅಡಚಣಿ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು ಮೊದಲಾದವು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳ[illegible] ಕಾರವಾರ [illegible] ಮೊದಲಾದ ಬ್ರಿಟಿಶ ಜಿಲ್ಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ [illegible] ವರ್ಷಗಳ ವಯಸ್ಸಿನ ಸ್ತ್ರೀಪುರುಷರು [illegible] ವರ್ಗಣಿಯನ್ನು ಕೊಟ್ಟು ಈ ಸಂಘದ ಸಭಾಸದರಾಗಬಹುದು [illegible]

ಆಶ್ರಯದಾತರು.— ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ದೇಣಿಗೆಯನ್ನು ಕೊಡುವವರು.

ಆಶ್ರಯದಾತರು.— ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಆಜೀವ ಸಭಾಸದರು.— ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಸಾಧಾರಣ ಸಭಾಸದರು.— ೧ ನೇ ತರಗತಿ— ಕನಿಷ್ಠ ೫ ರೂ. ವಾರ್ಷಿಕ ವರ್ಗಣಿ
೨ ನೇ ತರಗತಿ— ಕನಿಷ್ಠ ೨ ರೂ. ವಾರ್ಷಿಕ ವರ್ಗಣಿ ಕೊಡುವವರು.
೩ ನೇ ತರಗತಿ— ಕನಿಷ್ಠ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.
೪ ನೇ ತರಗತಿ— ಕನಿಷ್ಠ ೪ ಆಣೆ ವಾರ್ಷಿಕ ವರ್ಗಣಿ ಕೊಡುವವರು.

ಹಾವೇರಿ? ಬಂಧುಭಗಿನಿಯರು ಆದಷ್ಟು ತೀವ್ರ ಸಂಘದ ಮೆಂಬರರಾಗಬೇಕೆಂದು ಒಳ್ಳೇ ಆಗ್ರಹದ ವಿನಂತಿಯು[illegible]

ದೇವನಗೌಡ ಲಿಂಗನಗೌಡ ಪಾಟೀಲ,
ಬಿ. ಎ. ಎಲ್‌ಎಲ್. ಬಿ ಹಾಯಕೋರ್ಟ ವಕೀಲ, ಧಾರವಾಡ
ಸೆಕ್ರೆಟರಿ.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ — ಮುಂಜಾನೆ ೧೦ ರಿಂದ ಮಧ್ಯಾಹ್ನ ೨-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ

ಚಾಲೂ ಖಾತೆಗಳು — ಚಕ[illegible] ತೆರೆಯಲ್ಪಡುವವು

ಸೇವ್ಹಿಂಗ್ಸ ಬ್ಯಾಂಕು — ಒಮ್ಮೇ ದರದಿಂದ ತೆಗೆದುಕೊಳ್ಳಲ್ಪಡುವದು ಬಡ್ಡೀ ದರ ೩ ರೂ.

ಮುದತಿ ಠೇವುಗಳು — [illegible] ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩|| ರೂ

ಬೇಕೆ.— ಬಂಗಾರ ದಾಗಿನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ [illegible] ಧಾನ್ಯಗಳ ಆಧಾರದ ಮೇಲೂ ಸರಕಾರೀ ನೋಟ ಗಳ [illegible] ಕೊಡಲ್ಪಡುವದು. [illegible] ನೋಟು ಗಳ [illegible] ಕಂಪನಿಯ ಶೇರುಗಳ ನಫೆ [illegible] ಮಾಡಿ ಆಯಾ [illegible] ಕಳಿಸಿಕೊಡುವದರಲ್ಲಿಯೂ [illegible] ಗಿರಾಕಿಗಳಿಗೆ [illegible] ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊ[illegible] ವ್ಯಾಪಾರದ ಕೆಲಸಗಳನ್ನ ಮಾಡುವದು ಇಲ್ಲಿಯೂ ಬರುವದು.

ಬ್ಯಾಂಕಿಗೆ ಮೇಳಿನ [illegible] ಎಲ್ಲ ತರದ ಅಧಿಕಾರವಿರುವದು ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಟೆ.
ಏಜಂಟರು.

ತಿಳಿಯದೆ ಧಾತುಕ್ಷಯವಾಗಿ [illegible] ವಯಸ್ಸಿಗೆ ತಾರುಣ್ಯದಲ್ಲಿಯೇ ನಿಜ [illegible] ಸಂಸಾರ ಸುಖವು, ಮೂರಿಯವೇ ಸಿರ ತ್ರಾಸ ಸಿರೋರೋಗಗಳು ಹುಟ್ಟುತ್ತಾ ಇಂಥ ಮನುಷ್ಯರ ಧಾತು ಕ್ಷಯರೋಗವು ಹೋಗಿ, ಪೂರ್ಣ ಪುರುಷತ್ವವನ್ನು ತಂದು ಕೊಡುವಂತಹುದನ್ನು ವೈದ್ಯರಿಂದ ಶ್ರೀ ಕೇಶವ ಶಾಸ್ತ್ರೀ ವಿರಚಿತರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂದು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸಿದ್ಧ ಹಾಗು ತೀವ್ರ ಗುಣಕೊಡುವ ಔಷಧವು ತಯಾರಿಸಲಾಗಿದೆ. ಇದರ ಉಪಯೋಗದಿಂದ ನಿಸ್ತೇಜ ಶರೀರ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು ಶ್ರಮವಾಗಿ, [illegible] ಅಂಜುಬುರುಕತನ, ಅಕಾಲಮು ಪುರುಷತ್ವಹೀನ ದೇಹ, ಅನಿಷ್ಟ ಸ್ವಭಾವ, ಸ್ತ್ರೀಸುಖ[illegible], ಉರಿಮೂತ್ರ, ಇಂದ್ರಿಯದ ಉರಿ, ಸ್ವಪ್ನಾವಸ್ಥೆ, ವೀರ್ಯದ ನೀರು, ಆಲಸ್ಯ, ಕೈಕಾಲುಗಳು ಜೋಮು[illegible], ತಲೆ ನೋವು, ಸೊಂಟನೋವು, ಟೊಂಕಶೂಲಿ, ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಬದ್ಧತೆ, ಕಣ್ಣು ನೋವು, ಮೊದಲಾದ ಎಲ್ಲ ರೋಗಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾ ವೀರ್ಯ ಮೊದಲಾದ ಧಾತುಗಳು ವೃದ್ಧಿಯಾಗಿ ಇಂದ್ರಿಯ [illegible] ಶಕ್ತಿಯು ನವವಾಗಿ ದೇಹದಲ್ಲಿ ಶಕ್ತಿಯೂ [illegible] ಹೆಂಗಸರ ಮುಟ್ಟಿನಶೂಲೆ, ಬಂಜೆ, ಹಾಗೆ [illegible] ಇದರಿಂದ [illegible] ಎಲ್ಲ ವಿಕಾರಗಳು ಹೋಗಿ ಪುತ್ರಸಂತಾನ [illegible] ಬಳಿಕ [illegible] ಈ ಅಮೃತಸಿಂಧುವನ್ನು [illegible] ಸಂಜೆಗೆ ಅರ್ಧ ತೊಲಿ [illegible] ತಿಂಗಳಿನ [illegible] ೧೦ ರಿಂದ ೩೦ ದಿವಸಗಳವರೆಗೆ ತೆಗೆದುಕೊಳ್ಳಬೇಕು. ಹತ್ತು ದಿವಸ ಮೇಲೆ ಹಾಲು ಅಥವಾ [illegible] ೧ ಬಾಟಲಿಗೆ ೧-೮-೦ ರೂ. ೪ ಬಾಟಲಿಗಳಿಗೆ ೪ ರೂ. [illegible] ಬಾಟಲಿಗಳಿಗೆ ೧೧ ರೂ. [illegible] ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಪ್ಯಾಕಿಂಗ ವೆಚ್ಚಗಳು ಬೇರೆ.

ಅಮೃತಸಿಂಧು ಆಫೀಸ
[illegible]

ಫಕ್ತ ೩ ತಿಂಗಳು ಈ ಪತ್ರದ ವರ್ಗಣಿದಾರರಿಗೆ

ಅರ್ಧ ಕಿಮ್ಮತ್ತು

ಕತ್ತಲಲ್ಲಿ ಕಾಣುವ ರೇಡಿಯಂ ಲಿವ್ಹರ ವಾಚ



ಮೊದಲಿನ ಕಿಮ್ಮತ್ತು. ರೂ. ೧೫

ಈಗ ಕೊಡುವ ಕಿಮ್ಮತ್ತು. ರೂ. ೭||

ಇವುಗಳ ಕಿಮ್ಮತ್ತಿನ ರಿವಾಯಿತಿ ೯ ಜುಲೈ ವರೆಗೆ

ಒಮ್ಮೆಲೇ ೩ ವಾಚ ತರಿಸಿದರೆ. ಟ. ಖ. ಮಾಫ ಮತ್ತು ೬ ವಾಚ ತರಿಸಿದರೆ ೧ ವಾಚ [illegible] ಇವುಗಳಿಗೆ ಗ್ಯಾರಂಟಿ ೫ ವರ್ಷ ಕೊಡುವೆವು. ಈ ವಾಚುಗಳು ಕತ್ತಲೆಯಲ್ಲಿ ಲಿವ್ಹರ [illegible] ವವು.

ವಿಳಾಸ— ಸುಪೀರಿಯರ್ ವಾಚ ಕಂಪನಿ
ಪೋಸ್ಟ್ ಬನವಾಸಿ (ಉ. ಕಾ

ವಿವಿಧ ವಿಷಯಗಳು.-

ದಿಲ್ಲಿ ಪ್ರಾಂತದ ಅನಸೂಯಾಬಾಯಿ [illegible] ಭೆಯವರು. ಕಾಂಗ್ರೆಸದ ಸತ್ಯಾಗ್ರಹ [illegible] ದೀಕ್ಷೆ ತೆಕ್ಕೊಂಡಿತ್ತು. ಕಾಂಗ್ರೆಸ ಕಾರ್ಯದಲ್ಲಿ [illegible] ಪದವಿ ಪಡೆದಂಥ ವಿದ್ವಾಂಸರೇ ಆದಂಥ ಅನೇಕ ಜನರು ಶಿಕ್ಷೆಗೆ ಗುರಿಯಾಗಿದ್ದಾರೆ. ಕಾಲೇಜು ಸಭೆಯವರು ಶಿಕ್ಷೆಯಾದ [illegible] ಜನರ ಹೆಸರುಗಳನ್ನು ಪ್ರಸಿದ್ಧಿಸಿ ಅವರಿಗೆ ೧೫೦ [illegible] ಕೂಡಿಸಿದಂತೆಯೂ ಪ್ರಕಟ ಮಾಡಿದ್ದಾರೆ.

ಸಂಸ್ಥಾನಿಕರು ರಾಷ್ಟ್ರಮಂಡಳಿಯಲ್ಲಿ ತಮ್ಮ ಹಕ್ಕು ಬಾಧ್ಯತೆಗಳನ್ನು ಸ್ಥಿರಪಡಿಸಿಕೊಳ್ಳಲು ಬಹಳವಾಗಿ ತವಕಗೊಂಡಿದ್ದಾರೆ. ಇವರ ದಿವಾನರು ಜುಲೈ ತಿಂಗಳ ೫ನೇ ತಾರೀಖಿನ ದಿವಸ ದಿಲ್ಲಿಯಲ್ಲಿ ಕವಿಟ ಕೂಡಿ, ತಮ್ಮನ್ನು ಯಜಮಾನರ ಹಿತದೃಷ್ಟಿಯಿಂದ ವಿಚಾರ ಮಾಡುವರು. ಅನಂತರ ಸ್ವತಃ ಸಂಸ್ಥಾನಿಕರು ೯ನೆಯ ತಾರೀಖಿನ ದಿವಸ ಕವಿಟ ಕೂಡಿ, ದಿವಾನರ ರಿಪೋರ್ಟಿನ ವಿಚಾರ ಮಾಡಿ, ತಮ್ಮ ಮತವನ್ನು ನಿಶ್ಚಯ ಮಾಡಿಕೊಂಡು, ೧೪ನೆಯ ತಾರೀಖಿನ ದಿವಸ ಲಾರ್ಡ ಆಯರ್ವಿನಸಾಹೇಬರನ್ನು ಕಾಣಲಿಕ್ಕೆ ಹೋಗುವರು.

ಮೈಸೂರಲ್ಲಿ ಅರಮನೆಯ ಹತ್ತರವೇ ಇರುವ ದೇವಸ್ಥಾನದಲ್ಲಿ ಒಬ್ಬ ಕಳ್ಳನು ಮಧ್ಯರಾತ್ರಿಯಲ್ಲಿ ಹಗ್ಗದಿಂದ ಸೂರಿಗಿನ ಗೋಡೆ ಹತ್ತಿ, ಅದೇ ಹಗ್ಗದಿಂದ ಒಳಗೆ ಇಳಿದು ನೇರಾಗಿ ದೇವರ ಆಭರಣಗಳನ್ನಿಡುವ ಪೆಟ್ಟಿಗೆಗೇ ಹೋದನು. ಅಲ್ಲಿದ್ದ ಬೆಳ್ಳಿಯ ಮತ್ತು ಮುತ್ತುರತ್ನದ ಆಭರಣಗಳನ್ನು ಹಾಗೇ ಬಿಟ್ಟು, ಬರೇ ಬಂಗಾರದ ಒಡವೆಗಳನ್ನೇ ಒಗಲಿಗೆ ಹಾಕಿ, ಬಂದ ದಾರಿಯಿಂದ ಪಲಾಯನ ಹೇಳಿಸಿದನು. ದೇವಾಲಯದಲ್ಲಿ ಕಾವಲಿಯು, ಹೊರಗೆ ಕಟ್ಟೆಯಲ್ಲಿ ಸಶಸ್ತ್ರ ಪೋಲಿಸರ ಕಾವಲುಂಟು. ಇವರೆಲ್ಲರ ಕಣ್ಣಿಗೆ ಮಂಗು ಹಚ್ಚಿ ಈತನು ಹೇಗೆ ಚೋರಕರ್ಮ ಮಾಡಿದನೆಂದು ಜನರಿಗೆ ದಿಗಿಲು ಬಿದ್ದಿದೆ.

ರಾಣೇಬೆನ್ನೂರಲ್ಲಿ ಕಾಂಗ್ರೆಸ ಕಮೀಟಿಯು ಸ್ಥಾಪನೆಯಾಗಿದ್ದು ಅದರ ಅಧಿಕಾರಿಗಳು ಮುಂದೆ ಕೊಟ್ಟಂತಿರುವರು

ಅಧ್ಯಕ್ಷ- ಶ್ರೀ ಹನುಮಂತಾಚಾರ್ಯ ಪಾಂಡುರಂಗಿ
ಉಪಾಧ್ಯಕ್ಷ- ಶ್ರೀ ಶಾಂತವೀರಯ್ಯನವರು
ಕೋಶಾಧ್ಯಕ್ಷ- ಶ್ರೀ ಕೊಟ್ರಪ್ಪ ಕುರುವತ್ತಿ ಶೆಟ್ರು
ಕಾರ್ಯದರ್ಶಿ- ಶ್ರೀ ಗಣೇಶರಾವ ನಾಡಗೇರ

ಮೆಂಬರ ಜನರ ಸಂಖ್ಯೆಯು ನೂರರ ಮೇಲೆ ಹೋಗಿರುತ್ತದೆ.

ಲಂಕೆಯಲ್ಲಿ ರೇಲ್ವೆಯ ಒಂದು ಮಣ್ಣು ಒಬ್ಬಿನ ಬಂಡಿಯು ಹೋಗುತ್ತಿದ್ದಾಗ, ಒಂದು ಇಂಜನ್ನು ಹಿಂದೆ ಗಾರ್ಡನ ಡಬ್ಬಿಗೆ ಹಸಬಿನಿಂದ [illegible] ಕೂಲಿಕಾರರು ಕೂತು ಎದುರು ತೆರೆದ ವ್ಯಾಗನಗಳು ಬಿದ್ದು ಎಂಟು ಜನರು ಸತ್ತರು.

ಬಳ್ಳಾರಿಯಲ್ಲಿ ವಿಲಾಯತಿಯ ಬಟ್ಟೆಯ ವ್ಯಾಪಾರ ಮಾಡುವವರು ತಮ್ಮದೊಂದು ಸಂಘ ಮಾಡಿಕೊಂಡು, ಸದ್ಯ ೩ ತಿಂಗಳ ತನಕ ವಿಲಾಯತಿಯ ಬಟ್ಟೆ ತರಿಸಬಾರದೆಂದು ನಿರ್ಣಯ ಮಾಡಿದ್ದಾರೆ. ಜಿಲ್ಲೆಯ ಅಂಗಡಿಕಾರರೂ ಇದೇ ಪ್ರಕಾರ ನಿಶ್ಚಯಿಸುವಂತೆ ಇವರು ಅಲ್ಲಲ್ಲಿಗೆ ಹೋಗಿ, ಅಲ್ಲಿಯವರನ್ನು ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

ಪಂಜಾಬದಲ್ಲಿರುವ ಗ್ರಾಮದಲ್ಲಿ ಸರಕಾರದವರು ಶಿಕ್ಷಾ ಪೋಲೀಸರನ್ನು ನೇಮಿಸಿದರು. ಇದರ ಮುಖ್ಯವೆಂದು ಊರವರು ಸರಕಾರ [illegible] ದಾರರಿಗೆ ಏನೂ ದೊರೆಯದಂತೆ ಮಾಡಿದರು. ಈ [illegible]ದಲ್ಲಿ ನೀರು ಸಿಗುವದೂ ದುರ್ಲಭವಾಯಿತು. ಪೋಲೀಸರೂ [illegible] ಸೇರಿ ಅಂಗಡಿಗಳಲ್ಲಿ ಸುಲಿಗೆ ಮಾಡಿದರು. ಊರಲ್ಲಿಯೇ ಇರಬಾರದೆಂದು ಜನರು ಊರು ಬಿಡಲಾರಂಭಿಸಿದರು. ಪೋಲೀಸರು ಇವರನ್ನು ತಡೆದರು. ಆ ಗೊಂದಲದಲ್ಲಿ ನೂರಾರು ಜನರು ಘಾಯವಾಗಿದಾರೆ

ಮದ್ರಾಸ ಸರಕಾರದವರು. ಆಂಧ್ರದೇಶದಲ್ಲಿ [illegible] ಕಟ್ಟೆಗಳನ್ನು [illegible] ವಿಶಾಖಪಟ್ಟಣ, ಗುಂಟೂರ, ರಾಜಮಹೇಂದ್ರಿ, ಮಚ್ಲೀಪಟ್ಟಣ, ಎಲ್ಲೂರ ಗಂಜಾಮ ಮುದಲ್ಲೀವ ಯುದ್ಧ ಮಂಡಲಗಳನ್ನು [illegible] ದೇಶದ್ರೋಹ ಮಾಡಿದ ಜಾಹೀರನಾಮೆ ಹಚ್ಚಿದ್ದಾರೆ. ಈ ಜಾಹೀರನಾಮೆ ಪ್ರಸಿದ್ಧವಾದ [illegible] ಪೋಲೀಸರು ಬೆಜವಾಡದ ಸತ್ಯಾಗ್ರಹ ಆಶ್ರಮವನ್ನು ಕೈವಶ ಮಾಡಿಕೊಂಡರು

ಮುಂಬಯಿಯಲ್ಲಿ ಪಂಡಿತ ಮೋತಿಲಾಲರ ಅಧ್ಯಕ್ಷತೆಯಲ್ಲಿ ಪ್ರಮುಖ ನಾಗರಿಕರ ಸಭೆ [illegible] ಕೂಡಿ, [illegible] ಹಾಕತಕ್ಕದ್ದೆಂದು ಪೋಲೀಸರ ಅತ್ಯಾಚಾರದ ಸಂಶೋಧನೆಯೂ ಮಾಡಿ ಆ ದಿವಸ ಹರತಾಳ ಮಾಡಬೇಕೆಂದೂ [illegible]

ಅಹಮದನಗರ ಜಿಲ್ಲೆಯಲ್ಲಿ ವನಗಾವಲದ ಕಾಯದೆ ಮುರಿಯುವ ಚಳವಳಿಯು ಅತ್ಯಂತ ಪ್ರಮಾಣದಿಂದ ಪ್ರಾರಂಭವಾಗಿದ್ದು ಇದು ಪಿಕೆಟಿಂಗದ ವಿರುದ್ಧ ಮುಂದೆಯೂ ಸರಕಾರದವರು [illegible] ಶ್ರೀ ನರಿಮಾನ, ಮತ್ತು [illegible] ಶ್ರೀ [illegible] ಇವರಿಗೆ ನಾಲ್ಕು ತಿಂಗಳ [illegible] ಶಿಕ್ಷೆ ಮತ್ತು [illegible] ವಿಧಿಸಿದೆ.

ಮೀರಜೆಯಲ್ಲಿ ಶ್ರೀ ಶಿಖರೆಯವರು ದರಬಾರದ ಹುಕುಮು ಮುರಿದ ಬಗ್ಗೆ ಆರೋಪಿಯಾಗಿ ವಿಚಾರಣೆಗೆ ಗುರಿಯಾಗಿದ್ದರು [illegible] ಶ್ರೀ ಶಿಖರೆಯವರಲ್ಲಿ ಸಂಪೂರ್ಣ ಸಹಾನುಭೂತಿಯುಳ್ಳ [illegible] ಶಿಖರೆಯವರನ್ನು [illegible] ಅಭಿನಂದಿಸಿ, ಮಾಲೆ [illegible]

ಸಿಂಧ ಮತ್ತು ಗುಜರಾಥದಲ್ಲಿ ತೆರವಾದ ಕೌನ್ಸಿಲ ಜಾಗೆಗಳಿಗೆ ಉಮೇದವಾರರು [illegible] ಬಂದಿಲ್ಲ. [illegible] ಪದವಿ ಪಡೆದವರ [illegible] ಕರ್ನಾಟಕದೊಳಗಿನ [illegible] ಸ್ವರ್ಗವು ಮುಟ್ಟಿದಂತೆ [illegible] ಸಿಂಧ ಗುಜರಾಥದಲ್ಲಿ ಉಮೇದವಾರರಿಗಾಗಿ ಕಾಯುವದೆಂದು ಸರಕಾರದವರು ಜಾಹೀರಪಡಿಸಿದ್ದು, [illegible] ಮತದಾರರಿಗೆ ತಿಂಗಳೊಪ್ಪತ್ತಿನ ಅವಧಿ ದೊರೆಯುತ್ತಿತ್ತು.

ಪೋಲೀಸರು ಜಾಲಿಯನವಾಲಾಬಾಗದಲ್ಲಿ ಕಮಿಟಿಗೆ ಬೇಕಾದ ಕಾಗದಪತ್ರಗಳ ಶೋಧನೆಗಾಗಿ ಹೋದರು. ಹೋಗುವಾಗ [illegible] ಕಾಗದಪತ್ರಗಳನ್ನು ತೆಗೆದುಕೊಂಡು, ಒಂದು ಪೆಟ್ಟಿಗೆಯಲ್ಲಿ ಹಾಕಿಕೊಂಡು ಹೋದರು. [illegible] ಆಗಮನದ [illegible] ಸ್ವಯಂಸೇವಕರು ಪ್ರಭಾತ ಕಾಲದಲ್ಲಿ ೧೦೧ [illegible] ಹಾರಿಸಿದರು.

ಸರದಾರ ವಲ್ಲಭಭಾಯಿ ಪಟೇಲರು ಮೂರು ತಿಂಗಳು ಕಾರಾಗೃಹವಾಸದ ಶಿಕ್ಷೆ ತೀರಿಸಿಕೊಂಡು, ಮೊನ್ನಿನ ದಿವಸ ಅಹಮದಾಬಾದಿನ [illegible] ಬಿಡುಗಡೆ ಹೊಂದಿ, ಪುನಃ ರಾಷ್ಟ್ರಕಾರ್ಯದಲ್ಲಿ ಧುಮುಕಲು ಸಿದ್ಧರಾಗಿರುವರೆಂದು ಬರೆಯುವದಕ್ಕೆ ಆನಂದವಾಗುತ್ತದೆ.

ಸರಕಾರದವರು ಮಂಗಳೂರಲ್ಲಿ ೧೪೪ನೇ ಕಲಮನ್ನು ಅಮಲಿನಲ್ಲಿ ತಂದಿದ್ದು ಇದನ್ನು ಮುರಿಯಲು [illegible] ಅನೇಕ ಸ್ವಯಂಸೇವಕರು ಹೋಗತಕ್ಕವರಿದ್ದಾರೆ. ವೆಂಕಟರಾವ ಇವರನ್ನು ಕರೆದೊಯ್ದರು. [illegible] ಮ್ಯಾಜಿಸ್ಟ್ರೇಟರು ಧಮಕಿ ಹಾಕಿದ್ದಾರೆ ಮೋಟಾರಿನಿಂದಲ್ಲದೆ, ರೇಲ್ವೆಯಿಂದ ಬರುವವರಿಗೇನು ಮಾಡುವರು? ಕಂಪನಿಯ ಏಜಂಟರನ್ನು ಹಿಡಿದು, ಅವರನ್ನು ಜೇಲಿಗೆ ಕಳಿಸುವರೋ? ಅಥವಾ ಅವರ ಕಂಪನಿಯ ಕಾಂಟ್ರಾಕ್ಟನ್ನು ರದ್ದು ಪಡಿಸುವರೋ? ಮ್ಯಾಜಿಸ್ಟ್ರೇಟರಿಗೆ ಇದು ಸೀಗದ ಕಲಹ [illegible] ಪೌರುಷದ ಪಾತ್ರ ಆಗುವಂಥವರು.

ಈ ಸಾರೆ ವಿಶೇಷವಾಗಿ ಪಂಜಾಬ, ಬಂಗಾಲ, ಸಂಯುಕ್ತಪ್ರಾಂತ, ಮುಂಬೈನಗರಗಳಲ್ಲಿ ಹೆಚ್ಚು ಜನರು ಈ ಯಾತ್ರೆ ಮಾಡಿದ್ದಾರೆ. ಪಂಜಾಬದಲ್ಲಿ ೧೦೦೦೦ಕ್ಕಿಂತ ಹೆಚ್ಚು ಜನರು ಸಂಯುಕ್ತಪ್ರಾಂತದಲ್ಲಿ [illegible], ಮುಂಬೈನಗರದಲ್ಲಿ ಸುಮಾರು ೩೦೦೦ ಜನರು, ಈ ಬಗೆಯ ಯಾತ್ರೆ ಕೈಕೊಂಡಿದ್ದಾರೆ. ನಗರಗಳಲ್ಲಿ, ಮದ್ರಾಸವು ೧೦೦೦೦ ಜನರನ್ನು. ಅಮೃತಸರವು [illegible] ಲಾಹೋರ ನಗರವು ೧೫೦೦ ಜನರನ್ನು ಕಳುಹಿಸಿದೆ

ಪಂಜಾಬದಲ್ಲಿ ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ಬಾಂಬು ಹಾರಿದಂತೆ ಹೊಸ ದಿಲ್ಲಿಯಲ್ಲಿಯೂ ಹಾರಿತು. ಸರಕಾರದ ಒಂದು [illegible] ಒಂದು ಕಟ್ಟಡದಲ್ಲಿ ಬಾಂಬು ಇಟ್ಟಿದ್ದರು. ಅಲ್ಲಿ ಜನರಾರೂ ಇದ್ದಿಲ್ಲ. ಬಾಂಬು ಹಾರಿ, ಕಿಡಕಿ ಬಾಗಿಲುಗಳ ಎಲ್ಲ ಕನ್ನಡಿಗಳನ್ನು ಪುಡಿ ಪುಡಿ ಮಾಡಿತು

ಲಾರ್ಡ ಆಯರ್ವಿನಸಾಹೇಬರು ಜಸ್ತಿ ಕೆಲ [illegible] ಹೇಳುವುದೇನಂದರೆ [illegible] ಬಂಗಾರ ಸಂಗ್ರಹಿಸಿದ್ದಾರೆ, ಗುಜರಾಥದಲ್ಲಿ ಸಂಕಲ್ಪ [illegible] ಮುಂತಾದವರು ಜಪ್ತಿ [illegible] ಊರಿಗೆ ಒಂದು ಕೂಲಿ [illegible] ಹೆಂಡರು ಮಕ್ಕಳು ಮತ್ತು ದನಕರುಗಳನ್ನು ಕಟ್ಟಿಕೊಂಡು, ಊರಿಗೇ ಕೀಲಿ ಹಾಕಿ [illegible] ಹೋಗುವರು. ಈ ವರ್ಷ ಹೊಲಗಳನ್ನೇ ಬಿತ್ತಬಾರದೆಂದು ಕೆಲ ಗ್ರಾಮಗಳ ಜನರು ನಿಶ್ಚಯ ಮಾಡಿದ್ದಾರೆ

ಧಾರವಾಡದಲ್ಲಿರುವ [illegible] ಫಾರ್ಮಿಗೆ ಹತ್ತಿರವಿರುವ [illegible] ಒಂದೊಂದು ಕೊಡ [illegible] ಕೊಡುವಂಥ ದೊಡ್ಡ ದೊಡ್ಡ ಗಿಡಗಳುಂಟು. ಈ ಊರ ಕೆಲ ತರುಣರು ಆದಿತ್ಯವಾರ ಮತ್ತು ಸೋಮವಾರ ದಿವಸ ಅಲ್ಲಿಗೆ ಹೋಗಿ, ಏನೂ ಗಿಡಗಳನ್ನು ಕಡಿದು, [illegible] ಬಿಟ್ಟರು.

ಪರದೇಶದ ಸಿಗರೇಟ ಮುಂತಾದ ಪದಾರ್ಥ [illegible] ಕರ ಕೊಡಬೇಕಾದ [illegible] ವರ್ಷಗಳಲ್ಲಿ ಹಿಂದುಸ್ಥಾನದ ಉತ್ಪನ್ನವು ೪೮ ಕೋಟಿಯಷ್ಟು ಹೆಚ್ಚಾಗುವದೆಂದು [illegible] ಲೆಕ್ಕಿಸಿದ್ದಾರೆ. ಈಗ [illegible] ಮೊದಲಿನಂತೆ [illegible] ಅಥವಾ [illegible] ಮೇಲೆ ಕರ ಕೊಡಬೇಕು [illegible] ಈಗಿನ [illegible] ಸೇವಿಸುತ್ತಾರೆ. ಅವರಿಗೆ ಯೋಗ್ಯ ಪ್ರಾಯಶ್ಚಿತ್ತವಾಗಲೆಂದು [illegible] ಈ ಬುದ್ಧಿ ಹುಟ್ಟಿರಬಹುದು.

ಗಾಂಧೀ ಟೊಪ್ಪಿಗೆ ಹಾಕಿದವರು ಕಾಯದೆ ಭಂಗಕ್ಕೆ ಉತ್ತೇಜನ ಕೊಡುತ್ತಾರಾದ ಕಾರಣ, ಗುಂಟೂರ ಮ್ಯುನಿಸಿಪಾಲಿಟಿಯ ಅಷ್ಟ ದಿಕ್ಕುಗಳಲ್ಲಿಯೂ, ಗುಂಟೂರಿನ ಸುತ್ತಲು ಐದು ಮೈಲುಗಳಲ್ಲಿಯೂ ಯಾರೂ ಗಾಂಧೀ ಟೊಪ್ಪಿಗೆ ಹಾಕಬಾರದೆಂದು ಮ್ಯಾಜಿಸ್ಟ್ರೇಟರು ಹುಕುಮು ಮಾಡಿದ್ದಾರೆ. ಜನರು ಬೇರೆ ರೀತಿಯಿಂದ ಕಾಯದೆಭಂಗ ಮಾಡದೆ, ಗಾಂಧೀ ಟೊಪ್ಪಿಗೆ ಹಾಕಿಕೊಂಡೇ ಕಾಯದೆಭಂಗ ಮಾಡುವರು. ಸರಕಾರದ ಅನ್ಯಾಯದ ಕಾಯದೆ ಮುರಿಯಲಿಕ್ಕೆ ದಿನಕ್ಕೊಂದರಂತೆ ಹೊಸ ಹೊಸ ದಾರಿ ಹುಟ್ಟುತ್ತಿರುವದೊಂದು [illegible] ಲೀಲೆಯೇ ಸರಿ.

ಬೆಳಗಾವಿಯ ಹಿಂಡಲಗೆಯಲ್ಲಿರುವ [illegible] ಶ್ರೀ. ದಿವಾಕರ, ದಾಂಡೇಕರ, [illegible] ಇವರಿಗೆ [illegible] ದೊರೆತಿಲ್ಲ. ಜೇಲಿನ ಅಧಿಕಾರಿಗಳು ಇವರನ್ನು [illegible] ಕೊಟ್ಟಿದ್ದಾರೆ. ಅಧಿಕಾರಿಗಳ ಉದ್ಧಾಮಕತನವು [illegible] ನಂತಾಗುವದಿಲ್ಲವೇ ?

ಕಲಕತ್ತೆಯಲ್ಲಿ [illegible] ಪೋಲಿಸರಲ್ಲಿ ಹಸ್ತಪತ್ರಿಕೆಯನ್ನು ಹಂಚಿದ ವಿಚಾರವಾಗಿ ಕುಮಾರಿ ಇಂದುಮತಿಗೆ ಮ್ಯಾಜಿಸ್ಟ್ರೇಟರು ಒಂಭತ್ತು ತಿಂಗಳ ಕೈದಿನ ಶಿಕ್ಷೆ ವಿಧಿಸಿದರು. ಬಂಗಾಲದಲ್ಲಿ ಸತ್ಯಾಗ್ರಹಕ್ಕಾಗಿ ಜೇಲಿಗೆ ಬಿದ್ದವಳು ಇವಳೇ ಮೊದಲನೆಯವಳು. ಸ್ತ್ರೀಯರು ದೊಡ್ಡ ಮೆರವಣಿಗೆ ತೆಗೆದು, ಇವಳನ್ನು [illegible] ಸಾಗಕಳಿಸಿದರು

ಸ್ವರ್ಗವಾಸಿ ದೇಶಬಂಧು ದಾಸರ ಶ್ರಾದ್ಧ ತಿಥಿಯ ದಿವಸ ಮೆರವಣಿಗೆ ತೆಗೆಯಬಾರದೆಂದು ಕಲಕತ್ತೆಯ ಪೋಲೀಸರು ಜಾಹೀರನಾಮೆ ತೆಗೆದಿದ್ದಾರೆ. ಈ ಹುಕುಮನ್ನು ಮುರಿದು, ಸ್ತ್ರೀಯರೇ ಮೆರವಣಿಗೆ ತೆಗೆದು ಜಾಹೀರ ಸಭೆ ಮಾಡಿದರು. ಈ ಅಪರಾಧಕ್ಕಾಗಿ [illegible] ಸ್ತ್ರೀಯರನ್ನು ಹಿಡಿದಿದ್ದಾರೆ.

ಆಚಾರ್ಯ ಗಿದವಾನಿಯವರು ಸುಪ್ರಸಿದ್ಧ ಗೃಹಸ್ಥರು. ಇವರು ಕರಾಚಿ ಮ್ಯುನಿಸಿಪಾಲಿಟಿಯಲ್ಲಿ ಸ್ಕೂಲ-ಬೋರ್ಡಿನ ಅಡ್ಮಿನಿಸ್ಟ್ರೇಟರರಾಗಿದ್ದಾರೆ. ಹೊಟ್ಟೆಯ ಪಡೆಯಿಂದ ಬೇರೆಯವರಂತೆ ಇವರು ಅಡ್ಮಿನಿಸ್ಟ್ರೇಟರರಾಗಲಿಲ್ಲ. ವಿದ್ಯಾರ್ಥಿಗಳು ರಾಜಕಾರಣದಲ್ಲಿ ಸೇರಬಾರದೆಂಬ [illegible] ಪಿಕೆಟಿಂಗದ [illegible]ಯಲ್ಲಿ ಭಾಗ ತಕ್ಕೊಂಡು ಉಪ್ಪಿನ ಕಾಯದೆ ಮುರಿಯುವಂಥ ಮಹಾಪುರುಷರು. ಸರಕಾರದವರು ಈ ಅಪರಾಧದಲ್ಲಿ ಇವರನ್ನು ಹಿಡಿದು, ಒಂದು ವರ್ಷದ ಸಕ್ರಮಶಿಕ್ಷೆಗೆ ಗುರಿ ಮಾಡಿ, ಬಿ. ಕ್ಲಾಸಿನಲ್ಲಿ ಹಾಕಿದರು.

ದೇಶಬಂಧುವಿನ ಶ್ರಾದ್ಧ ತಿಥಿಯ ದಿವಸದ ಮೆರವಣಿಗೆ ತೆಗೆದ ದೇಶಬಂಧುವಿನ ಭಗಿನಿ ಊರ್ಮಿಳಾದೇವಿ, ಮತ್ತು ಇನ್ನಿಬ್ಬರು ಸ್ತ್ರೀಯರಿಗೂ ಕಾಂಗ್ರೆಸ ಕಮೀಟಿಯ ಮೂವರಿಗೂ ಆರಾರು ತಿಂಗಳ ಶಿಕ್ಷೆ ವಿಧಿಸಿದರು. ಶಿಕ್ಷೆ ಹೇಳುವಾಗ ಗುರ್ಖಾ ಪೋಲಿಸರ ಮತ್ತು ರಾಹುತರ ಅತ್ಯಂತ ಬಂದೋಬಸ್ತು ಇಟ್ಟಿದ್ದರು. ಶಿಕ್ಷೆಯು [illegible] ಕೇಳಿದ ಕೂಡಲೆ ನೆರೆದ [illegible] ಸಾವಿರ ಜನರು ಭಗಿನಿಯರ ಜಯಜಯಕಾರ ಮಾಡಿದ ಪ್ರಚಂಡ ಧ್ವನಿಯನ್ನೆಬ್ಬಿಸಿದರು.

ಗವ್ಹರ್ನರರ ಕಮಿಟಿಯಲ್ಲಿ ಕೊಡುವ [illegible]ದ ದಿವಾನರು ನಿರುಪಯೋಗಿಯಾಗುವರು. ಅಥವಾ ಮೇಲಿಂದ ಮೇಲೆ [illegible] ಮಂತ್ರಿಮಂಡಲವನ್ನು ಬದಲಿಸಬೇಕಾಗುವದು. ರಿಪೋರ್ಟಿನಲ್ಲಿ [illegible] ಸ್ವರಾಜ್ಯ ಕೊಡುವದೆಂತಿದ್ದು; ಅದರ [illegible] ಸ್ವಾತಂತ್ರ್ಯ ಕೂಡ ಇದು ಇದಿಲ್ಲ. [illegible] ಪಕ್ಷದ ಪೂರ್ಣ ನಿರಾಶೆಯಾಗಿರುತ್ತದೆಂದು ದಿವಾನ ಬಹದ್ದೂರರಾಯರು ಹೇಳುತ್ತಾರೆ.

ಯುರೋಪಕ್ಕೆ ಸೇರಿದ ಇಸ್ತೋನಿಯಾ ಪ್ರಾಂತದಲ್ಲಿ ಕೊಲೆಪಾತಕಿಯನ್ನು ಗಲ್ಲಿಗೆ ಹಾಕುವರು. ಅಥವಾ ವಿಷ ಕುಡಿಸಿ [illegible]. ಒಬ್ಬ ಪಾತಕಿಗೆ ವಿಷ ಕೊಟ್ಟರು. ಇಂತಿಷ್ಟೇ ವಿಷ ಕುಡಿಸಬೇಕೆಂಬ ಪ್ರಮಾಣವುಂಟು; ಆ ಪ್ರಮಾಣದ ವಿಷವು ಆತನನ್ನು ಕೊಲ್ಲಲಿಲ್ಲ. ಕೆಲ ದಿವಸ ಹೊಟ್ಟೆಯಲ್ಲಿ ಉರಿ ಎದ್ದು ಬಾಳಿದನು. ಈಗ ಇವನನ್ನು ಗಲ್ಲಿಗೆ ಹಾಕುವಂತಿಲ್ಲ. ಪುನಃ ವಿಷ ಕೊಟ್ಟರೂ ಸಾಯನು. ಮುಂದೇನುಗತಿ ಎಂದು ಸರಕಾರದವರು ಚಿಂತಿಸುತ್ತಿದ್ದಾರೆ.

ಸಿಮಲಾದಲ್ಲಿ ಒಂದು ಕತ್ತೆಗೆ ಯುರೋಪಿಯನ್ನರ ಅರಿವೆ ತೊಡಿಸಿ, ಅದರ ಮೇಲೆ ಸಾಯಮನ್ನ ಸಾಹೇಬರ ರಿಪೋರ್ಟು ಇಟ್ಟು [illegible] ಊರ ತುಂಬ ಮೆರವಣಿಗೆ ತೆಗೆ

ಕುರಂಗವಲ್ಲಿ ಭಯಂಕರ ಯುದ್ಧ

೪೫ ಜನರ ಸತ್ತರು; ೬೧ ಜನರು ಘಾಯವಾದರು.

ಶಾಂಘಾಯಿದ ಕುರುಂಗವಲ್ಲಿಯ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡುವ ಕೈದಿಗಳು ಒಮ್ಮಿಂದೊಮ್ಮೆ ದಂಗೆಗೆ ಪ್ರಾರಂಭಿಸಿದರು. ಇವರು ಕುರಂಗದ ಸಿಪಾಯರ ಬಂದೂಕು, ಕತ್ತಿಗಳನ್ನು ಕಸಿದುಕೊಂಡು ಪೋಲೀಸ ಮತ್ತು ವಾರ್ಡರ ಮೇಲೆ ಹಲ್ಲೆ ಮಾಡಿದರು. ಕೆಲವರು ಹೆಬ್ಬಾಗಿಲು ತೆರೆಯುವ ಉದ್ಯೋಗ ನಡೆಸಿದರು. ಆಗ ಶಸ್ತ್ರಧಾರಿ ಪೋಲೀಸರು ಬಂದರು. ಕೈದಿಗಳು ಗೋಡೆ ಹತ್ತಿ ಇವರ ಮೇಲೆ ಗುಂಡು ಹಾಕಿದರು. ನಿಜವಾದ ಯುದ್ಧವೇ ಪ್ರಾರಂಭವಾಗಿ, ಎರಡು ತಾಸಿನ ವರೆಗೆ ತುಮುಲವಾಗಿ ನಡೆಯಿತು. ಈ ರಣಯುದ್ಧದಿಂದ ೪೦ ಕೈದಿಗಳು, ಇಬ್ಬರು ಸಿಪಾಯರು, ಒಬ್ಬ ಮೋಟಾರು ಡ್ರೈವ್ಹರ ಮತ್ತು ಇಬ್ಬರು ಸಂತ್ರಿಗಳು ಸತ್ತರು. ೧೧ ವಾರ್ಡರರು ೫೦ ಕೈದಿಗಳು ಘಾಯವಾಗಿದ್ದಾರೆ.

ಇಜಿಪ್ತದ ಪಾರ್ಲಮೆಂಟಿನ ದಾಗಿಲ ಮುರಿದು ೧ ಸಭೆ ಮಾಡಿದರು.

ಇಜಿಪ್ತದ ಸ್ವಾತಂತ್ರ್ಯಕ್ಕಾಗಿ ಇಂಗ್ಲಂಡಕ್ಕೆ ಹೋಗಿ, ನಿರಾಶರಾಗಿ ತಿರುಗಿ ಸ್ವದೇಶಕ್ಕೆ ಬಂದ ಝಾಘಲ ಪಾಶಾ ಅವರು ಮಂತ್ರಿಮಂಡಲ ಸಹಿತವಾಗಿ ರಾಜೀನಾಮೆ ಕೊಟ್ಟರು. ಸಿದ್ಕಿ ಪಾಶಾನು ಮಂತ್ರಿಯಾದನು. ಪಾರ್ಲಮೆಂಟ ಸಭೆಯನ್ನು ಬರಖಾಸ್ತ ಮಾಡಿದ್ದರೂ ಕೂಡ ಪಾರ್ಲಮೆಂಟದಲ್ಲಿ ಬೇರೊಂದು ನಿಶ್ಚಯ ನಡೆಯತಕ್ಕದ್ದಲ್ಲೆಂದು ಅಧ್ಯಕ್ಷರ ಹುಕುಮು ಮಾಡಿದರು. ಝಾಘಲ ಪಾಶಾ ಮತ್ತು ಅನೇಕ ಮೆಂಬರರು ಪಾರ್ಲಮೆಂಟಕ್ಕೆ ಹೋಗಿ, ಪೋಲೀಸರ ಕಾವಲಿದ್ದರೂ, ಬಂದಾಗಿದ್ದ ಸಭೆಯ ದಾಗಿಲ ಮುರಿದು, ೩೫ ಮಿನಿಟುಗಳ ತನಕ ಈಗಿನ ರಾಜ್ಯಸೂತ್ರವನ್ನು ಸ್ಥಾಪಿಸಬೇಕೆಂದು ಭಾಷಣ ಮಾಡಿ, ಆ ಪ್ರಕಾರ ಪ್ರತಿಜ್ಞೆ ಮಾಡಿ, ತಂತಮ್ಮ ಮನೆಗೆ ಹೊರಟು ಹೋದರು.

ದಂಡು ಪೋಲೀಸರ ಪಾರುಪತ್ಯ ಮಾಡಿತು.

ಮಂತ್ರಿಗಳಿಗೆ ಕಚೇರಿಗೆ ಹೋಗಗೊಡಲಿಲ್ಲ.

ದಕ್ಷಿಣ ಅಮೇರಿಕೆಗೆ ಸೇರಿದ ಬೊಲಿವ್ಹಿಯಾ ಪ್ರಾಂತದಲ್ಲಿ ಪೋಲೀಸರು ಭಯಂಕರ ಅತ್ಯಾಚಾರ ಮಾಡಿ, ನಿರಪರಾಧಿಯಾದಂಥ ನಾಗರಿಕರ ಕೊಲೆ ಮಾಡಿದರು. ದಂಡಿನವರು ಪೋಲೀಸ ಕ್ವಾರ್ಟರನ ಸೇರಿಕೊಂಡು, ಇವರ ಮೇಲೆ ಹಲ್ಲೆ ಮಾಡಿ, ಸಂಪೂರ್ಣವಾಗಿ ಇವರ ಪಾರುಪತ್ಯ ಮಾಡಿ, ಪಟ್ಟಣವನ್ನು ತಮ್ಮ ವಶದಲ್ಲಿಟ್ಟುಕೊಂಡು, ಮಂತ್ರಿಗಳಿಗೆ ಕಚೇರಿಯಲ್ಲಿ ಹೋಗದಂತೆ ಬಂದೋಬಸ್ತ ಮಾಡಿದ್ದಾರೆ. ಪೋಲೀಸರು ಬುದ್ಧಿಗಲಿಯುವಂಥ ಮಾತು.

ರಾವ್ಂಡ ಟೇಬಲಿನ ಬಗ್ಗೆ ಮಂತ್ರಿಗಳ ವಿಚಾರ.

ಸಾಯಮನ್ನ ರಿಪೋರ್ಟ ಮತ್ತು ರಾವ್ಂಡ ಟೇಬಲದ ಬಗ್ಗೆ ವಿಚಾರ ಮಾಡಲು ಇಂಗ್ಲಂಡದಲ್ಲಿ ಮುಖ್ಯ ಮಂತ್ರಿಯಾದ ಮಿ|| ಮ್ಯಾಕಡೋನಾಲ್ಡ ಸಾಹೇಬರು ಮೂರೂ ಪಕ್ಷಗಳ ಪ್ರಮುಖರ ಕೂಡ ಒಂದು ಆಲೋಚಕ ಕಮಿಟಿ ಕೂಡಿಸಿದ್ದರು. ಈ ಕಮಿಟಿಯ ವಿಚಾರವಾಗಿ ಜುಲೈ ತಿಂಗಳ ಕಡೆಯೊಳಗಾಗಿ ಒಂದು ಸಂದೇಶವನ್ನು ಪ್ರಸಿದ್ಧ ಮಾಡುವರು. ಕಮಿಟಿಗೆ ಬಂದವರು –

ಮಿಸರ್ಸ ಬಾಲ್ಡವಿನ, ಲಾಯಿಡ ಜಾರ್ಜ, ಸರ ಆಸ್ಟಿನ ಚೇಂಬರಲೇನ, ಲಾರ್ಡ ರೀಡಿಂಗ ಮತ್ತು ಮಿ. ವೆಜವುಡ್ಡ ಬೆನ್ನ.

ಸರ ಸಾಯಮನ್ನರ ಕೂಡ ಸಹಕಾರ ಮಾಡಿದ್ದು ತಪ್ಪಾಯಿತು

ಲಖನೌದ ರಾಜಾ ನವಾಬ ಅಲ್ಲಿಖಾನ ಒಬ್ಬ ದೊಡ್ಡವರು ಮತ್ತು ತಾಲೂಕದಾರರಿದ್ದು, ಕೌನ್ಸಿಲ ಆಫ ಸ್ಟೇಟಿನ ಮೆಂಬರರಿದ್ದಾರೆ. ಇವರು ಸರ ಸಾಯಮನ ಕಮಿಟಿಯ ಒಬ್ಬ ಮೆಂಬರರಾಗಿ ಸಾಯಮನ್ನಸಾಹೇಬರ ಕೂಡ ಸಹಕಾರ ಮಾಡಿದ್ದಾರೆ. ಈ ಸಹಕಾರವು ಬಹಳ ದೊಡ್ಡ ತಪ್ಪಾಯಿತು. ಈ ಬಗ್ಗೆ ಪಶ್ಚಾತ್ತಾಪಪಡುತ್ತೇನೆಂದು ಇವರು ಸಾಯಮನ್ನ ರಿಪೋರ್ಟ ಓದಿದ ನಂತರ ದುಃಖ ದರ್ಶನ ಮಾಡಿದ್ದಾರೆ.

ಗುಜರಾಥ ಮತ್ತು ಸೊಲ್ಲಾಪೂರಕ್ಕೆ ೧೫೦೦ ಹೊಸ ಪೋಲೀಸ ಭರ್ತಿ

ಸೊಲ್ಲಾಪೂರದಲ್ಲಿ ಕಟ್ಟೆಗೆ ಸಾಲ್ಡುರು ಪೋಲೀಸರನ್ನು ಇಡುವದು ಗೊತ್ತಾಗಿದ್ದು, ಸೊಲ್ಲಾಪೂರದಲ್ಲಿ ಈ ಮೊದಲು ಕೆಲಸ ಮಾಡದಂಥ ಹಳೇ ಪೋಲೀಸರನ್ನು ಕೆಲಸದಲ್ಲಿ ತೆಗೆದುಕೊಳ್ಳುವರು ಮತ್ತು ಗುಜರಾಥಕ್ಕಾಗಿ ಒಂದು ಸಾವಿರ ಸಶಸ್ತ್ರ ಪೋಲೀಸರಿಗೆ ಕವಾಯತು ಕಲಿಸಿ, ಅವರನ್ನು ಸಜ್ಜು ಮಾಡುವ ಕೃತ್ಯವು ಪುಣೆಯಲ್ಲಿ ನಡೆದಿದೆ.

ಬೆಳಗಾವಿಯ ತುರಂಗದಲ್ಲಿ ದಟ್ಟಣೆ ಮತ್ತು ಕೆಟ್ಟ ಅನ್ನ.

ಬೆಳಗಾವಿಯ ತುರಂಗದಲ್ಲಿ ರಾಜಕೀಯ ಕೈದಿಗಳ ದಟ್ಟಣೆ ಬಹಳವಾದ್ದರಿಂದ, ಒಬ್ಬರ ಸ್ಥಳದಲ್ಲಿ ಮೂವರನ್ನು ಹಾಕುತ್ತಿದ್ದಾರೆ. ಹೊಲಸು ಅನ್ನ ಕೊಡುವ ರೀತಿಯು ಅಸಹ್ಯವಾಗಿದೆ. ಬರೇ ಹೊಲಸಲ್ಲ, ಸಾಲದು. ಎಷ್ಟು ಹೇಳಿದರೂ ಅಧಿಕಾರಿಗಳು ಲಕ್ಷಿಸುವದಿಲ್ಲ. ಅದರಿಂದ ಅನೇಕರು ಆ ಹೊಲಸು ಪಕ್ಕ ತಿನ್ನುವದನ್ನು ಬಿಟ್ಟಿದ್ದಾರೆ. ಬ ವರ್ಗದವರ ಪಾಲಿಗೆ ಕ ವರ್ಗದವರ ಅನ್ನವನ್ನೇ ಕೊಡುತ್ತ ಬಂದಿದೆ. ಒಟ್ಟಿನಿಂದ ರಾಜಕೀಯ ಕೈದಿಗಳ ಸ್ಥಿತಿಯು ನೆಟ್ಟಗೆ ಇರುವದಿಲ್ಲ. ಸಂಕೇಶ್ವರದ ಶ್ರೀ. ಪಟ್ಟಣಶೆಟ್ಟಿಯವರು ಅ ವರ್ಗದಲ್ಲಿ ಹಾಕಬೇಕೆಂದು ಮ್ಯಾಜಿಸ್ಟ್ರೇಟರು ಹುಕುಮು ಮಾಡಿದರೂ, ಜೇಲಿನವರು ಇವರನ್ನು ಬ ವರ್ಗದಲ್ಲಿ ಹಾಕಿದರು. ಇಷ್ಟಕ್ಕೆ ಸಮಾಧಾನ ಪಡದೆ, ಕ ವರ್ಗಕ್ಕೆ ಹಾಕಿ, ಜೋಳ ಬೀಸಲಿಕ್ಕೆ ಹಚ್ಚಿದ್ದಾರೆ.

ರೈತರು ಹುಲಬನ್ನಿಯ ಸವಾಲು ಮಾಡಲಿಲ್ಲ.

ಸತ್ಯಾಗ್ರಹವೆಂದು ಹಾವೇರಿ ತಾಲೂಕಿನಲ್ಲಿರುವ ಆಲದಕಟ್ಟಿ, ಕಬ್ಬೂರ ಗ್ರಾಮದಲ್ಲಿದ್ದ ಹುಲಬನ್ನಿಯ ಸವಾಲನ್ನು ಯಾರೂ ಮಾಡಲಿಲ್ಲ. ಹೋದ ವರ್ಷ ಈ ಸವಾಲು ೧೨೫೦ ರೂಪಾಯಿಗಾಗಿತ್ತು.

ಹಾವೇರಿ ತಾಲೂಕಿನಲ್ಲಿ ಹಾವೇರಿ ೨೦೧೮ ಕೊರಡೂರು ೨೧೦೦, ಗುತ್ತಲ ೨೦೦, ಹೊಸರಿ ೮೦ ವೆಂಕಟಾಪೂರ ೮೦ ಈ ಪ್ರಕಾರ ೪೪೭೮ ಈಚಲಗಿಡಗಳ ಸಂಹಾರವಾಗಿರುತ್ತದೆ.

ಬಂಕಾಪೂರ ೧೫೦, ಶಿಗ್ಗಾಂವಿ ೨೫೦, ಹೊಸಪೇಟೆ ೫೦ ಈ ಪ್ರಕಾರ ಈ ವಾರದಲ್ಲಿ ಬಂಕಾಪೂರದಲ್ಲಿ ಈಚಲಗಿಡಗಳ ನಾಶವಾಗಿರುತ್ತದೆ

ಶ್ರೀ ಸೌ|| ಕೃಷ್ಣಾಬಾಯಿ ಪಣಜೀಕರ ಮತ್ತು ಶ್ರೀ ಕರಮರಕರರು ಸವದತ್ತಿಗೆ ಹೋಗಿ, ಸಂತೆಯ ವೇಳೆ ವ್ಯಾಖ್ಯಾನ ಕೊಟ್ಟರು. ಮೂರು ಸಾವಿರ ಜನರು ಬಂದು ಕೂಡಿತ್ತು. ಶ್ರೀ ಸೌ|| ಪಣಜೀಕರರ ವ್ಯಾಖ್ಯಾನದಿಂದ ಸ್ತ್ರೀಯರಲ್ಲಿ ಜಾಗ್ರತೆಯುಂಟಾಯಿತು.

ಈ ತಾಲೂಕಿನಲ್ಲಿ ಒಟ್ಟು ೫೬೦೦ ಗಿಡಗಳ ಧ್ವಂಸವಾಗಿದೆ. ದಿನಾಲು ಸುವ್ಯವಸ್ಥೆಯಿಂದ ಗಿಡ ಕಡಿಯುವ ಕೆಲಸ ನಡೆದಿದೆ. ಕಬ್ಬೂರ, ಗುತ್ತಲ, ಕೊರಡೂರ, ಹೊಸರಿತ್ತಿ, ದೇವಗಿರಿ ಮುಂತಾದ ಊರುಗಳಲ್ಲಿ ಕೆಲಸವು ಕಸುವಿನಿಂದ ನಡೆದಿದೆ.

ವಿಜಾಪೂರ ಜಿಲ್ಹೆಯಲ್ಲಿ ಹೋದ ವರುಷ ಶೇಂದಿ ಮಕ್ತೆಯ ಲಿಲಾವು ೧ ಲಕ್ಷ ೪೦ ಸಾವಿರ ರೂಪಾಯಿಗೆ ಆಗಿತ್ತು. ಈ ವರುಷ ೨೦ ಸಾವಿರ ರೂಪಾಯಿಗೆ ಆಗಿದೆ.

ಹಿರೇಕೆರೂರ ತಾಲೂಕಿನಲ್ಲಿ ಶೇಂದಿ ಗಿಡಗಳನ್ನು ಕಡಿಯುವ ಕೆಲಸವು ಜೋರಿನಿಂದ ನಡೆದಿದೆ. ಈ ತಾಲೂಕಿನಲ್ಲಿ ಶೇಂದೀ ಗಿಡಗಳು ವಿಶೇಷ ಸಂಖ್ಯೆಯಿಂದ ಇರುವದರಿಂದ ಈ ಕಾರ್ಯವನ್ನು ಈ ತಾಲೂಕಿನ ಎಲ್ಲ ಗ್ರಾಮದವರು ಹೆಚ್ಚು ಜೋರಿನಿಂದ ಸಾಗಿಸಬೇಕೆಂದು ಸೂಚಿಸುತ್ತೇವೆ.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ಸರ್ಜಸ್ಸಿನ ಪ್ರಕಾರ ತಿಂಗಳಾ ಕನಿಷ್ಟ ೪೦ ನಲವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಪಾ ಧೋಳೇಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ಮಾರ್ಗೇಜಿನ ಮೇಲೆ

ರಕಮು (೪೦೦೦) ಮಟ್ಟ ದಿ ಬ್ಯಾಂಕ ಆಫ್ ಬಾರಸಿ ಲಿಮಿಟೆಡ್ (ಶೇರರ್ಸು) ಸಿಗುವವು. ಪ್ರತಿ ತ್ಯದ ಸಲವಾಗಿ ಒಂದು [illegible] ಪ್ರೀ ಪೈಡ [illegible] ಕೊಡ್ರಿ. ದೊಡ್ಡ ದೊಡ್ಡ ಶಹರುಗಳಲ್ಲಿ ನಗಾರ ಸಂಪಾದ [illegible] ಮೇಲೆ ಕೆಲಸ ಮಾಡ ಬೇಕು.

ಪತೆ [illegible]

ಟೆಲಿಫೋನ,
ಪೋನ ನಂಬರ

ಶಿ. ದಿ. ಘಾಟಪಾಂಡೇ (ದೇಶಕ
ಕೇಸರಬಾಗ ಗೋಲ್ಫ ಮೈದಾನದ ಮುಂದೆ
ಪೋಸ್ಟ ಬೊಕ್ಸ ನಂಬರ ೫೫೧,
ದಾದರ ಬೊಂಬೈ

(೧) ರಾಣೇಬೆನ್ನೂರ (೨) ಹಿರೇಕೇರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿನ ಬಗ್ಗೆ ಗಣೇಶ ಶಂಕರ ಜೋಶಿ ಇವರನ್ನು ನಾವು ಏಜಂಟರಾಗಿ ನೇಮಿಸಿದ್ದೇವೆ. ಈ ನಾಲ್ಕು ತಾಲೂಕಿನ ನಮ್ಮ ವ್ಯವಹಾರವನ್ನು ಇವರ ಹತ್ತಿರ ಮಾಡುವದಕ್ಕೆ ಹರಕತ್ತು ಇಲ್ಲ.

THE ANKLAGI BANK LTD

Head Office
Kamanlatta Dharwar
Branches
Kanebennur & Hirekerur

5%
Interest allowed on
ANNA SAVINGS BANK
DEPOSIT.

Dharwar 3-1-1927 | K. B. ANKALGI Managing Director

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಸೋಡಲಿಕ್ಕಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮುದ್ದತ ಮತ್ತು ಬೇರೆ ತರದ ಠೇವುಗಳಿಗೆ ಯೋಗ್ಯವಾದ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಾಶಾತಿ.
ಮ್ಯಾನೇಜಿಂಗ ಡಾಯರೆಕ್ಟರ

ಸೀರೆ! ಪತ್ತಲ!! ಕಣಗಿ!!

ಶ್ರೀದತ್ತ ವ್ಹೀವಿಂಗ್ ಮಿಲ್ ಹುಬ್ಬಳ್ಳಿ

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಪರೀಕ್ಷೆ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ ಮಾಲು ತಿರುಗಿ ತಕ್ಕೊಳ್ಳುವೆವು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಡಿಪಾಜಿಟ ಇಡಲು ಕೂಡಬಹುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ ಇದೇ ಒಂದೇ ಶಿಕ್ಷಣ ಸಂಸ್ಥೆ

ಮೋಟಾರ ಡ್ರಾಯ್ವ್ಹರ ವಿದ್ಯಾ ಕಲಿಯಲು ಜನರು ಅವರಿಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ವ್ಹಿಂಗ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆರೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಿಯೂ ಮಿತ ಜನರನ್ನೇ ತೆಗೆದುಕೊಳ್ಳುವದರಿಂದ ಕೆಲವರಿಗೆ ನಿರಾಶೆಯಾಗಬಾರದೆಂದು ಮುಂದಾಗಿಯೇ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರಿ ದೊಳಗಾಗಿ ತಕ್ಕಷ್ಟು ಜನರನ್ನು ತಕೊಳ್ಳುವೆವು. ಆದ ಕಾರಣ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ್. ಇಟಗಿ.
ಮುನಸಿಪಾಲಿಟಿ ಹತ್ತರ, ಧಾರವಾಡ

ಮೈಸೂರ ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಿಗೆಯೂ ಮತ್ತು ಪ್ರತಿದಿವಸ ಮನೆಯಲ್ಲಿ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—೦
ಕೃಷ್ಣಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೯-೧೧-೨೯
ಮೈಸೂರಸ್ಟೋರ,
ಬೆಳಗಾಂವಿಯವರಗಲ್ಲಿ
ಹುಬ್ಬಳ್ಳಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಸುರಂಗದಲ್ಲಿ ಭಯಂಕರ ಯುದ್ಧ

೪೫ ಜನರು ಸತ್ತರು, ೨೧ ಜನರು ಘಾಯವಾದರು.

ದಂಗೋಲಿಯ ತುರುಂಗದಲ್ಲಿಯ ವರ್ಕಶಾಪಿನಲ್ಲಿ ಕೆಲಸ ಮಾಡುವ ಕೈದಿಗಳು ಒಮ್ಮಿಂದೊಮ್ಮೆ ದಂಗೆಗೆ ಪ್ರಾರಂಭಿಸಿದರು. ಇವರು ತುರುಂಗದ ಸಿಪಾಯರ ಬಂದೂಕು, ಕತ್ತಿಗಳನ್ನು ಕಸಿದುಕೊಂಡು ಪೋಲೀಸ ಮತ್ತು ವಾರ್ಡರ ಮೇಲೆ ಹಲ್ಲೆ ಮಾಡಿದರು. ಕೆಲವರು ಹೆಬ್ಬಾಗಿಲ ತೆರೆಯುವ ಉದ್ಯೋಗ ನಡೆದಿತ್ತು. ಆಗ ಶಸ್ತ್ರಧಾರಿ ಪೋಲೀಸರು ಬಂದರು. ಕೈದಿಗಳು ಗೋಲಿ ಹಚ್ಚಿ ಇವರ ಮೇಲೆ ಗುಂಡು ಹಾಕಿದರು. ನಿಜವಾದ ಯುದ್ಧವೇ ಪ್ರಾರಂಭವಾಗಿ, ಎರಡು ತಾಸಿನ ತನಕ ಕದನವು ನಡೆಯಿತು. ಈ ರಣಯುದ್ಧದಿಂದ ೪೦ ಕೈದಿಗಳು, ಇಬ್ಬರು ಸಿಪಾಯರು ಒಬ್ಬ ಮೋಟಾರ ಡ್ರೈವರ ಮತ್ತು ಇಬ್ಬರು ಸಂತ್ರಿಗಳು ಸತ್ತರು. ೧೧ ಜನ ವಾರ್ಡರು ೧೦ ಕೈದಿಗಳು ಘಾಯವಾಗಿದ್ದಾರೆ.

[illegible] ದಿನ ಹ[illegible] ದಿಂದಲ್ಲಾ ಬಿಸಾದಾಗಿ ಅಂಗಡಿ ಪ್ರಾರಂಭಿಸು[illegible] ಗಳಲ್ಲಿ [illegible] ಗುತ್ತೆದಾರರು ಪೂಜೆ ಮಾಡಿ, ವ್ಯಾಪಾರ ಪ್ರಾರಂಭಿಸುವರು ಈ ವರ್ಷ [illegible] ಲಾಭದಾ[illegible] ಹಾಕ ಹೊರ[illegible] [illegible] ದ ಎಲ್ಲ [illegible] ಶಿಂದಿ [illegible] ನಡೆಯ [illegible] ವ್ಯಸನ [illegible] ಆಗಿ [illegible] ಸಪ್ತ ಸಮುದ್ರ ದಾಟಿ ಹೋಗಿರುವದು.

ಈ ಸಾರೆ ನಡೆದ ಲಿಲಾವು ಎಲ್ಲೆಲ್ಲಾದರೂ ರೋದನ ಮಾಡಿಸುತ್ತದೆ ಪುಣೆ ನಾಶಿಕ, ಬೆಳಗಾವಿ [illegible] ಸ್ಥಿತಿಯನ್ನು ಈ ಮೊದಲು [illegible] ಬ್ರಿಟಿಶ ಸಾಮ್ರಾಜ್ಯದಲ್ಲಿ ಎರಡನೆಯ ದೊಡ್ಡ ಪಟ್ಟಣವಾದ ಮುಂಬಯಿಯ ವರ್ತಮಾನವೂ ಕಲಾಲರ ಎದೆಯೊಡೆಸುವಂತಿದ್ದಾಯಿತು ಅಲ್ಲಿ ಟಾವುನಹಾಲಿನಲ್ಲಿ ಶಿಂದಿಯ ಸವಾಲಾಗುವದು. ಸವಾಲು ಪೂರಾ ದಿನಗಳು ಹೂಡಲು[illegible] ಕಲೆಕ್ಟರರು ಟೆಂಡರ ಬೇಡಿದ್ದಾರೆ ಟೆಂಡರದಿಂದ ರೊಕ್ಕ ಬರುವದೆ? ಸವಾಲಿನಲ್ಲಿಯ [illegible] ಮೇಲಾಟವೂ ಟೆಂಡರದಲ್ಲೆಲ್ಲಿ ಬರುವದು? ಟೆಂಡರ ಸ್ವರೂಪವಾದರೂ ಎಂಥದು? ಹೋದ ವರ್ಷ ಆದಷ್ಟು ರಕಮಿಗೆ ಈ ವರ್ಷ ಯಾವನೂ ಟೆಂಡರ ಹಾಕಲಾರನು. ಅದೇ ರಕಮು ಹಾಕಿದರೆ ಈ ವರೆಗೆ ತಿಂದ ಬಡವರ ಮನೆ ಮಣ್ಣಾಗಿದಂತೆ, ಮುಂದಿನ ವರ್ಷವನ್ನು ಮನೆಯನ್ನು [illegible] ಗಿಸಿ [illegible]? ಭ[illegible] ತಾನೇ ಕಯ್ಯಿ ಬ[illegible]!!! ಆದ್ದರಿಂದ ಟೆಂಡರ ಕೂಡ ಅಷ್ಟು ಕಷ್ಟೇ ಆಗಿ ಸರಕಾರದ ದೊಡ್ಡ ಉತ್ಪನ್ನ ಮಣ್ಣಾಗಿ ಹೋಗುವದು. ಈ ಚಳವಳಿಯು ನಿಶ್ಚಯದ ಸಾವಾದ್ದರಿಂದ, ಟೆಂಡರಿನಷ್ಟು ಸಹ ರಕಮು ಬರದೆ. ಗುತ್ತೇದಾರರು ಸರ್ವಸ್ವೀ ಮುಣುಗಿ ಹೋಗುವದೇ ಖಂಡಿತ ಕಲಾಲರೂ, ಫಾರ್ಮಗಳೂ ಎಲ್ಲ ಒಗೆಯೊಂದಲೂ ವಿಚಾರ ಮಾಡಿ, ಟೆಂಡರ ಹಾಕುವಾಗ ಇಡೀ ವರ್ಷ ತಮ್ಮ ಪ್ರಪಂಚ ನೀಗುವದೇ ಎಂಬುದನ್ನು ನೋಡಬೇಕಾಗಿ ಮುಂದಾಗಿ ಸೂಚಿಸುತ್ತೇವೆ.

ಕಾರವಾರ ಜಿಲ್ಲೆಯಲ್ಲಿ ಶಿಂದೀ ಸವಾಲಿನ ಕೊಕ್ಕು ಒಡೆಯಿತು

ಹೋದ ವಾರದಲ್ಲಿ ಕಾರವಾರದಲ್ಲಿ ಆ ಜಿಲ್ಲೆಯ ಶಿಂದಿಯ ಸವಾಲಿತ್ತು ಸವಾಲು ಮಾದರಿ [illegible] ಯಂತಾಯಿತು. ಸವಾಲಿನ ಮೊದಲೇ ಆ ಜಿಲ್ಲೆಯಲ್ಲಿ ವಿಶೇಷವಾಗಿ ನಾಡಾಯ ಕುಡಿಯುವಂದವರು ಕುಡುಕರ ಮೇಲೆ [illegible] ಬಹಿಷ್ಕಾರ ಹಾಕಿದ್ದರು. ಈ ಬಹಿಷ್ಕಾರವೂ ಒಳ್ಳೆ ಉಗ್ರವಾಗಿದೆ. ಬಹಿಷ್ಕಾರದಿಂದ ವ್ಯಾಪಾರವೆಲ್ಲ ಸಂಪೂರ್ಣ ಒಂದಿದೆ ಅದರ [illegible] ಹಿಡಿಯಬೇಕೆಂದು ಕಾಂಗ್ರೆಸ ಪಕ್ಷದವರು [illegible] ಮಾಡಿದ್ದರಿಂದ, ಗುತ್ತೇದ[illegible] ದೇಶಹಿತ ಸ್ವಜನ [illegible] ಯಾರಾದರೂ ಗುಪ್ತ ರೀತಿಯಿಂದ [illegible] ಹೊಟರೆ ದಾರಿಯಲ್ಲಿಯೇ ಅವರಿಗೆ [illegible] ಮಾಡುವರು. ಹೀಗಾಗಿ ಯಾರೂ ಸವಾಲಿಗ[illegible] ಒಂದವರ ಸಂಖ್ಯೆಯು ಹತ್ತಿಪ್ಪತ್ತರೊಳಗೆ ಇತ್ತು.

ಸವಾಲಿನ ವೇಳೆಯಲ್ಲಿ ಸ್ವಯಂಸೇವ[illegible] ಪ್ರ[illegible] ಕೆಲಸ ಮಾಡಿದರು. [illegible] ಬಾಗಿಲಲ್ಲಿ ಸವ[illegible] ಆದರ [illegible] ದಲ್ಲಿ ಪೋಲೀಸ [illegible] ಒಳ್ಳೆ [illegible] ಬಂದಿದ್ದರು ಈ ಒಳ್ಳೆಯಲ್ಲಿ ಅಲ್ಲಿ ಬಂದ ಪೋಲೀಸರಿಗಿಂದ ತಿಳಿಯು ಅದರಲ್ಲಿ [illegible] ಹೀಗೆ [illegible] ಅಂಕೋಲೆಯ [illegible] ದೇಶಪಾಂಡೆ [illegible] ಹ[illegible] ಇವರನ್ನು ಹಿಡಿದ [illegible] ಆದರ ಕೂಡಲೇಗೆ ಧಕ್ಕೆ [illegible] ಗಿದ್ದರು ಪೋಲೀಸ [illegible] ಶಾಪನೀಯ ಮಾಡಿದ್ದಾಯಿತು.

[illegible] ಅಂಗಡಿಗಳಿಗಿಂತ ಹೆಚ್ಚಿಗೆ ಸವಾಲು ಆಗಲಿಲ್ಲ. ಕಾರವಾರದಲ್ಲಿ [illegible] ಅಂಗಡಿಯು [illegible] ಎರಡು [illegible] ಅಂಗಡಿಯ [illegible] ಹೋಯಿತು [illegible] ಅಂಗಡಿಯ [illegible] ಹೊನ್ನಾವರ ಹಿಡಿದನು. ಆತನ ಹೆಸರು ಇನ್ನೂ ಪ್ರಕಟವಾಗಿಲ್ಲ. ಕಾರವಾರ ಜಿಲ್ಲೆಯ ಜಾತಿಯ ಬಹಿಷ್ಕಾರ, ಪಿಕೆಟಿಂಗ ಮತ್ತು ಕಲಾಲರ ಸವಾಲಿನ [illegible] ಶಿಂದಿಯ ಸವಾಲಿನಲ್ಲಿ ಅದ್ಭುತವಾದ ಜಯ ಸಂಪಾದಿಸಿದ ಬಗ್ಗೆ ಎಷ್ಟು ಸ್ತುತಿ ಮಾಡಿದರೂ ಸ್ವಲ್ಪೇ ಆಗುತ್ತದೆ.

ವಿಜಾಪೂರ ಜಿಲ್ಲೆಯಲ್ಲಿ ಶಿಂದಿ ಸವಾಲು ಹಿಡಿದವರಿಗೆ ಬಹಿಷ್ಕಾರ

ಶಿಂದೀಗಿಡ ಕಡಿಯುವದಕ್ಕೆ ವ್ಯಾಪಾರಸ್ಥರ ಸಹಾಯ ಮತ್ತು ಸಜಾತಿ ಭೂತಿಯ

ಹೋದ ವಾರದಲ್ಲಿ ವಿಜಾಪೂರದಲ್ಲಿ ಶಿಂದಿಯ ಸವಾಲಾಯಿತು ಸವಾಲಿಗೆ ಹೋಗಬೇಡಿ, ಸವಾಲಿನಲ್ಲಿ ಹಿಡಿಯಬೇಡಿರೆಂದು ಕಾಂಗ್ರೆಸದವರು ಘಂಟೆ ಘೋಷವಾಗಿ ಹೇಳಿಕೊಂಡರೂ ಬ್ರಾಹ್ಮಣ, ಲಿಂಗಾಯತ ಮೊದಲಾದ ಸಕುಲಕ್ಕೆ ಸೇರಿದವರು ಧರ್ಮಶಾಸ್ತ್ರ ಹೇಳುವಂಥವರು ಸವಾಲಿಗೆ ಹೊಂಗಟ್ಟಿ ಹೋಗಿದ್ದರು. ಲೋಕಮತವು ಭಯೋತ್ಪಾದಕವಾಗಿ ಪ್ರಾಬಲ್ಯವಾಗಿರುವದರಿಂದ ಸರಕಾರಕ್ಕೆ ಪಾತ್ರ ಪ್ರಾಪ್ತಿಯಾಗಲಿಲ್ಲ. ಹೋದ ವರ್ಷ ಬಂದಂಥ ರೀ ಲಕ್ಷಕ್ಕಾಗಿದ್ದ ಲಿಲಾವು ಈ ಸಾರೆ [illegible] ಸಾವಿರಕ್ಕಾಯಿತು.

ಸವಾಲಿನಲ್ಲಿ ಬೇಡಿದವರ ಬಹಿಷ್ಕಾರ ಮಾಡಬೇಕೆಂದು ಕಾಂಗ್ರೆಸ ಕಮಿಟಿಯವರು ಕರ್ತವ್ಯ ತತ್ಪರರಾಗಿದ್ದಾರೆ ಊರ ಜನರು ಅನುಕೂಲರಾಗಿ ಗುತ್ತೇದಾರರಿಗೆ ಬಹಿಷ್ಕಾರ ಹಾಕುವ ಚಳವಳಿ ನಡೆಸಿದ್ದಾರೆ. [illegible] ಸ್ವಯಂಸೇವಕರು ಇಚಲಗಿಡ ಸಂಹಾರದ ಉಪಕ್ರಮ ನಡೆಸಿದ್ದಾರೆ ಇದಕ್ಕೆ ವ್ಯಾಪಾರಸ್ಥರು ಸಂಪೂರ್ಣ ಸಹಾಯಕರಾಗಿದ್ದು, ಅಡತಿಯ ಅಂಗಡಿಯವರು ಸತ್ಯಾಗ್ರಹದ ಶಿಬಿರಕ್ಕೆ ಕೊಳು ಕಡಿಯುವನ್ನೂ, ಪಾತ್ರೆಗಳ ವ್ಯಾಪಾರಸ್ಥರು ಅಡಿಗೆ ಬಳಕೆಗೆ ಬೇಕಾಗುವ ಪಾತ್ರೆಗಳನ್ನೂ ಪೂರೈಸುವರು ಶ್ರೀ ಶೆಟ್ಟಿ ಲಲ್ಲುಭಾಯಿಯವರು ಮೂವತ್ತು ಕೊಡ್ಲಿಗಳನ್ನು ಮಾಡಿಸಿಕೊಟ್ಟದ್ದಾರೆ ಸ್ವಯಂಸೇವಕರ ಮತ್ತು ಊರ ಜನರ ಉಪದೇಶದಿಂದ ಮಚ್ಚಿಗಾರರು ಶಿಂದಿ ಕುಡಿಯಬಾರದೆಂದು ಗೊತ್ತುಮಾಡಿ, ಕುಡಿದವರಿಗೆ ಎರಡು ರೂಪಾಯಿ ದಂಡ ಮಾಡಬೇಕೆಂದೂ ಜಾತಿಯ ಬಹಿಷ್ಕಾರ ಹಾಕಬೇಕೆಂದೂ ಠರಾವು ಮಾಡಿದ್ದಾರೆ.

ರಾಷ್ಟ್ರೀಯ ನಿಶಾನೆಯ ಭಯಸೂಚಕ ಭೇರಿಯಂತೆ !!

ಸೊಲ್ಲಾಪೂರದ ಕಲೆಕ್ಟರರ ವಿಲಕ್ಷಣ ಹುಕುಮು

ಸೊಲ್ಲಾಪೂರಲ್ಲಿಯ ಲಷ್ಕರೀ ಹುಕುಮನ್ನು ಒಡೆಯಲು ಕಾಯಿದೆಯಿಂದ ಬಂದು ಮಾಡಿಸಲು ಕಲೆಕ್ಟರ ಮತ್ತು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಮೊದಲಿನಂತೆ ಜಿಲ್ಲೆಯ ಚಾರ್ಜ ವಹಿಸಿದರು. ಮಳೆ ನಿಂತ ಮೇಲೆ ಹನಿ ನಿಲ್ಲುವದಿಲ್ಲೆನ್ನುವಂತೆ ಇವರು ದಂಡಿನ ಕಾಯಿದೆಯ ಹುಕುಮಿನ ಶೇಷ ಉಳಿಸಿದ್ದಾರೆ ಲಷ್ಕರೀ ಹುಕುಮಿನಂಥ ಊರಿಯಲ್ಲಿ ನಂದಾದ ಜನ ಸ್ವಯಂಸೇವಕರು ರಾಷ್ಟ್ರೀಯ ನಿಶಾನೆಯನ್ನು ತಕ್ಕೊಂಡು ಹೋಗಿ, ಲಷ್ಕರೀ ಹುಕುಮನ್ನು ಮುರಿದು, ಹಿಂದೀ ಜನರಲ್ಲಿ ಸತ್ವವುಂಟೆಂಬುದನ್ನು ಸಿದ್ಧ ಮಾಡಿ ತೋರಿಸಿದರು. ಆದರೇನು? ಕಲೆಕ್ಟರ ಸಾಹೇಬರು ಮುಂಗೈ ಹೋದರೂ ಹೂವಿನ ಹುಳ್ಳಿ ಎಲ್ಲಿ ಹೋಗಿದೆಂದು ಹೇಳುವಂಥ ಒಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿ,

ದಂಗೆಯಾಗಲಿಕ್ಕೆ ರಾಷ್ಟ್ರೀಯ ನಿಶಾನೆಯು ಭಯಸೂಚಕ ಭೇರಿಯಾಯಿತು ಕೊಲ್ಲಿಸಿಕೊಂಡಂಥ ಪೋಲೀಸರ ಆಪ್ತರು, ಸಂಬಂಧಿಕರು ಮತ್ತು ಶಾಂತತೆಯನ್ನಪೇಕ್ಷಿಸುವ ಪಟ್ಟಣಿಗರು ಇವರಿಗೆಲ್ಲ ರಾಷ್ಟ್ರೀಯ ನಿಶಾನೆಯು ಹೆದರಿಸುವ ಬೆದರಿಸುವ ಕುರುಹು ಆಗಿರುವದರಿಂದ, ಇದನ್ನು ಎರಡು ತಿಂಗಳತನಕ ಊರಲ್ಲಿ ಹಚ್ಚಬಾರದು ಹೊರಗಿನಿಂದ ತಬಾರದೆಂದು ಹುಕುಮು ಮಾಡಿದ್ದಾರೆ. ಈ ಹುಕುಮು ಲೋಕ ವಿಲಕ್ಷಣವಾದದ್ದೇ ಸರಿ. ರಾಷ್ಟ್ರೀಯ ನಿಶಾನೆಯು ಅಹಿಂಸೆಯ ಪ್ರತ್ಯಕ್ಷ ಸ್ವರೂಪವೆನಿಸುವಂಥ ಕುರುಹುವಾಗಿರುತ್ತಿರುವಾಗು ಸಾಹೇಬರಿಗೆ ಇದು ಹಿಂಸೆಯದಾಗಿ ತೋರುವದು, ಸೋಜಿಗವು! ಎರಡು ತಿಂಗಳ ನಂತರ, ಇದೇ ನಿಶಾನೆಯು ಭಯಸೂಚಕವಾಗದೆ ಶಾಂತತೆಯ ಮೂರ್ತಿಯಾಗುವದೆಂದು ಸಾಹೇಬರೇ ಒಪ್ಪುವಂತಾಗುವದಿಲ್ಲವೇ?

ಸಂದಾರ ಪಟೇಲರು ಮುಂಬಯಿಗೆ ಬಂದರು. ಪಟ್ಟಣವ ತುಂಬ ಹರತಾಳ ಬಿದ್ದದರಿಂದ ಒಂದು ಲಕ್ಷ ಜನರು ಇವರ ಸ್ವಾಗತಕ್ಕಾಗಿ ಸ್ಟೇಶನಕ್ಕೆ ಬಂದಿದ್ದರು. ಸರಕಾರದ ದೆಸೆಯಿಂದ ಗಿರಣಿಗಳೂ ಬಂದಾಗಿರುತ್ತವೆ.

ಚಂದಾದಾರರಿಗೆ ಸೂಚನೆ.

ಮಾರಪತ್ರವನ್ನು ಮುದ್ರಿಸುವ ಯಂತ್ರವು ಆಕಸ್ಮಾತ್ತಾಗಿ ನಾದುರಸ್ತವಾದ್ದರಿಂದ, ಈ ವಾರದ ಪತ್ರವನ್ನು ಬಿಡಿಯಾಗಿ ನಾಲ್ಕೇ ಪುಟ ತೆಗೆಯಬೇಕಾಯಿತು. ಮುಂದಿನ ವಾರದ ಪತ್ರವು ಯಥಾಪ್ರಕಾರ ಹೊರಡುವಂತೆ ಏರ್ಪಡಿಗೆಯುಂಟು.

ಮ್ಯಾನೇಜರ ವಿಜಯ ಧಾರವಾಡ

ವಿವಿಧ ವಿಷಯಗಳು

—(೦)—

ಸುರೇಬಾನದ ರೈತರ ಸತ್ಯಾಗ್ರಹದ ಜಯ.

ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಸುರೇಬಾನವು ನರಗುಂದದ ಬಂಡಾಯದಲ್ಲಿ ಪ್ರಸಿದ್ಧಿ ಪಡೆದ ಊರು. ಸಂಸ್ಥಾನದ ಚೀಫರು ರಾ. ಬ. ಜಾಳೀ [illegible]ಯವರಿಂದ ಪ್ರೇರಿತರಾಗಿ ಧಾರವಾಡದಿಂದ ಮಿ. ನವಲಿಯವರನ್ನು ಕರಸಿಕೊಂಡು, ಅಲ್ಲಿ ಪ್ರಾಪ್ತಿಯ ಮೇಲೆ ಕರ ಕಟ್ಟಿಸಿದರು. ಬ್ರಿಟಿಶ ಹದ್ದಿನಲ್ಲಿ ಎರಡು ಸಾವಿರಕ್ಕೆ ಕರವಿದ್ದರೆ ಅಲ್ಲಿ [illegible] ಕೂಡಿಸಿದರು. ತಲೆಭಾರ ಮತ್ತು ತಾಪದಾಯಕವಾಗುವಂಥ ಕರದ ವಿರುದ್ಧ ಸುರೇಬಾನದ ಸಾವಿರಾರು ಜನರು ರಾಮದುರ್ಗಕ್ಕೆ ಹೋಗಿ, ಶ್ರೀ [illegible]ರು ಕಚೇರಿಗೆ ಬರುವ ವೇಳೆಯಲ್ಲಿ ಅವರ ಮೋಟಾರಿನ ಮುಂದೆ ಸತ್ಯಾಗ್ರಹ ಮಾಡಿ, ಕೆಲವರು ನಿಂತರು; ಕೆಲವರು ಅಡ್ಡ ಬಿದ್ದರು. ಪೋಲೀಸರೂ ಸ್ವಾರರೂ ಇವರಿಗೆ ಮುಂಬಯಿಯಂತೆ ಕೈತೋರಿಸ ತೊಡಗಿದರು. ನ್ಯಾಯಾಧೀಶರಾದ ಶ್ರೀ. [illegible] ಅಡ್ಡ ಬಂದು, ಯಾವ ಪ್ರಕಾರದ ಅನಾಹುತ ಮಾಡಗೊಡಲಿಲ್ಲ. ಕೊನೆಯಲ್ಲಿ ಶ್ರೀಮಂತರು ದಿವಾನ ಶ್ರೀ. ಗುಂಜೇ ಕೃಷ್ಣರಾಯರ ಆಲೋಚನೆಯಿಂದ ಏನೂರು ಸಾವಾಯಿ ಪ್ರಾಪ್ತಿಯ ಮೇಲೆ ಕರ ತಕ್ಕೊಳ್ಳುವದಿಲ್ಲೆಂದು ಆಶ್ವಾಸನ ಕೊಟ್ಟು, ಅವರನ್ನು ಸಮಾಧಾನ ಪಡಿಸಿದರು. ಸುರೇಬಾನದವರು ಇಡೀ ಸಂಸ್ಥಾನಕ್ಕೆ ಉಪಕಾರ ಮಾಡಿದರು. ಕೆಲವರು ಗಟ್ಟಿಗರಾದರೆ ಸಾವಿರಾರು ಜನರಿಗೆ ಹೇಗೆ ಹಿತವಾಗುತ್ತದೆಂಬುದು ಈ ಸಂಗತಿಯಿಂದ ತಿಳಿದು ಬರುವದು.

ನಾಮದಾರ ಶಾಸ್ತ್ರಿಯವರು
ಸರಕಾರಕ್ಕೆ ಮುಂಜಾಗ್ರತೆಯ ಮಾತು ಹೇಳಿದರು

ನಾಮದಾರ ಶಾಸ್ತ್ರಿಯವರು ಲಂಡನದಲ್ಲಿ ಪಾರ್ಲಮೆಂಟಿನ ಮೆಂಬರರ ಮುಂದೆ ಒಂದು ಮಹತ್ವದ ಭಾಷಣ ಮಾಡಿದರು. ಸಾಯಮನ್ನ ರಿಪೋರ್ಟನ್ನು ಆಧಾರವಾಗಿಟ್ಟುಕೊಂಡು, ರಾಉಂಡಟೇಬಲದ ಚರ್ಚೆ ನಡೆಸಿ ಹಿಂದುಸ್ಥಾನದ ರಾಜ್ಯಘಟನೆಯನ್ನು ಸಿದ್ಧಮಾಡುವದೇ ಸರಕಾರದ ಉದ್ದೇಶವಾಗಿದ್ದರೆ ಅದೆಂದಿಗೂ ಯಶಸ್ವಿಯಾಗಲಾರದು. ಮತ್ತು ಇದರಿಂದ ಹಿಂದೀ ಜನರ ತಕರಾರುಗಳು ಹೆಚ್ಚಿಹೆಚ್ಚಾಗಿ, ಅಸಂತುಷ್ಟತೆಯು ಮಾತ್ರ [illegible] ವದೆಂದು ಇವರು ಮುಂದಾಗಿ ಸರಕಾರಕ್ಕೆ ಎಚ್ಚರಿಕೆಯ ಮಾತು ಹೇಳಿದ್ದಾರೆ.

ಮುಂಬಯಿಯಲ್ಲಿ ಹರತಾಳದ ಸಪ್ತಾಹ.

ಹೋದ ಸೋಮವಾರದಿಂದ ಮುಂಬಯಿಯಲ್ಲಿ ಹರತಾಳದ ಸಪ್ತಾಹ ಪ್ರಾರಂಭವಾಗಿದೆ. ಮಳೆಯು ಕಲ್ಲುಕಟ್ಟಿ ಸುರಿಯುತ್ತಿದ್ದರೂ ಜನರ ಉತ್ಸಾಹ ಕುಂದಿಲ್ಲ; ಊರತುಂಬ ಹರತಾಳದ ಸುದ್ದಿಯೇ ಸದ್ದಿಯು. ಹ್ವಾಲಂಟಿಯರರು ತಂಡತಂಡಾಗಿ ಮೆರವಣಿಗೆ ತೆಗೆದು, ಯಾವ ಕಯ್ಯು ನಮ್ಮನ್ನು ಹೊಡೆಯುತ್ತಲಿದೆ, ಆ ಕೈಗೆ ಅನ್ನ ಹುಟ್ಟಿದೆ. ಅದು ಉಪವಾಸದಿಂದ ಬಳಲುವಂತೆ ವಿಲಾಯತಿಯ ಬಟ್ಟೆಗೆ ಬಹಿಷ್ಕಾರ ಹಾಕಿರೆಂದು ಪಟ್ಟಣದ ತುಂಬ ಸಾರಿಬಿಟ್ಟದ್ದಲ್ಲದೆ, ಮನೆಮನೆಗೆ ಹೋಗಿ ಈ ನಂತರ ವಿಲಾಯತಿಯ ಬಟ್ಟೆಯನ್ನು ಕೊಳ್ಳುವದಿಲ್ಲೆಂದು [illegible] ವಚನ ತೆಗೆದುಕೊಳ್ಳುತ್ತಿದ್ದಾರೆ. ಇದುವರೆಗೆ ಸಹಸ್ರಾವಧಿ ಶ್ರೀಮಂತ ಜನರು ಬೇಕಾದಷ್ಟು [illegible]ಗಳನ್ನು ಪೂರೈಸಿದ್ದಾರೆ.

ಸ್ವಯಂಸೇವಕರ ಜೀವರಕ್ಷಣೆಗಾಗಿ
[illegible]
ರಕ್ತ ಕೊಟ್ಟ ಬಹಾದ್ದೂರರು.

ಮುಂಬಯಿಯಲ್ಲಿ ಧಾರಾಸಣಾ ಎಂಬ [illegible] ಸ್ವಯಂಸೇವಕರು ಲಾಠಿಯ ಹೊಡತದಿಂದ [illegible]ದ್ದರಿಂದ ರಕ್ತಸ್ರಾವವಾಗುತ್ತಿತ್ತು. ಅವರಿಗೆ ಮನುಷ್ಯರ ರಕ್ತ ಹಾಕಿದರೆ ರಕ್ತ ಬಂದಾಗುವದಲ್ಲದೆ, ಅವರಿಗೆ ಶಕ್ತಿ ಕೊಡಲಿಕ್ಕೆ [illegible] ಬಂದರು. ಅವರಲ್ಲಿ ಒಬ್ಬ ಹೆಣ್ಣುಮಗಳು [illegible] ಸ್ವಯಂಸೇವಕರ ರಕ್ತ [illegible] ಹಾಕಿದರು.

ವಿಧಿ ಕಟ್ಟಿಕೊಂಡು ಭಾವೀ ಬೀಳುವಿಕೆ!
ಮದ್ರಾಸ ಸರಕಾರವು ಕೈ ತೋರಿಸಿ
ಅವಲಕ್ಷಣ ಮಾಡಿಕೊಂಡಿತು.

ಗಾಂಧೀ ಟೊಪ್ಪಿಗೆಯು ರಾಜದ್ರೋಹದ ಒಂದು ಚಿನ್ಹವಾಗಿರುವದರಿಂದ, ಯಾರೂ ಗಾಂಧೀ ಟೊಪ್ಪಿಗೆ ಹಾಕಬಾರದೆಂದು ಗುಂಟೂರಿನ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಜಾಹೀರನಾಮೆ ತೆಗೆದರು. ಈ ಪ್ರಕಾರ ತೆಗೆದ ಜಾಹೀರನಾಮೆಯು [illegible] ಬಂದದ್ದರಿಂದ, ಸಾಹೇಬರನ್ನು ಉಳಿಸಿಕೊಳ್ಳುವದಕ್ಕಾಗಿ ಮದ್ರಾಸ ಸರಕಾರದವರು ಹಾತೊರೆದು ಮುಂದೆ ಬಂದಿದ್ದಾರೆ. ಗಾಂಧೀ ಟೊಪ್ಪಿಗೆ ಹಾಕುವಂಥವರ ಅಪಮಾನ ಮಾಡುತ್ತಾರೆಂದು ತಕರಾರು ಬಂದದ್ದರಿಂದ ಸಾಹೇಬರು ಗಾಂಧೀ ಟೊಪ್ಪಿಗೆ ಹಾಕಬಾರದೆಂದು ಅವರ ಹಿತಕ್ಕಾಗಿ ಜಾಹೀರನಾಮೆ ತೆಗೆದಿದ್ದಾರೆಂದು ಹೇಳುತ್ತಾರೆ. ಇದು ಜಗತ್ತಿನಲ್ಲಿ ಉಪಹಾಸ ಮಾಡಿಕೊಳ್ಳುವಂಥ ಹೇಳಿಕೆ! ದೊಡ್ಡವರಾದವರು ಬರುವ ಸುಳ್ಳು ದಸ್ಕತ್ತದೆಂದು ಯಾವ ಧರ್ಮಶಾಸ್ತ್ರದಲ್ಲಿಯೂ ಹೇಳಿಲ್ಲ.

ಮುಂಬಯಿಯ
ವ್ಯಾಪಾರೋದ್ಯೋಗವು ಹಾಳಾಗಿ
ಹೋಗುವದು

ನಾಮದಾರ ಗವ್ಹರ್ನರಸಾಹೇಬರು ಪುಣೆಯಿಂದ ಮುಂಬಯಿಗೆ ಹೋಗಿ, ವರ್ತಮಾನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಪ್ರಮುಖ ವರ್ತಕರ ಕೂಡ ಸಂಭಾಷಣೆ ಮಾಡಿದರು. ಇವರು ಸದ್ಯದ ಅವಸ್ಥೆಯನ್ನು ದೂರ ಮಾಡದಿದ್ದರೆ ವ್ಯಾಪಾರೋದ್ಯೋಗದ ಹನ್ನೆರಡು ಹೊಡೆವದೆಂದು ಸಾಹೇಬರಿಗೆ ಸ್ಪಷ್ಟವಾಗಿ ಹೇಳಿದರು. ಸಾಹೇಬರನ್ನು ಕಾಣಲಿಕ್ಕೆ ಹೋದವರು

೧ ಶ್ರೀ ಶ್ರಾಫ, ೨ ಸರ ಕಾವಸಜಿ ಜಹಾಂಗಿರ, ೩ ಮಿ. ಫಜಲ ಇಬ್ರಾಹಿಂ ರಹಿಮತುಲ್ಲಾ ೪ ಮಿ. ಮರ್ಚಂಟ "ಎಡಿಟರ [illegible]" ೫ ಶ್ರೀ ಕಿಶೋರಭಾಯಿ ಪ್ರೇಮಜಿ ೬ ಶ್ರೀ ಠಾಕೂರದಾಸ ಮತ್ತು ಇಬ್ಬರು ಯುರೋಪಿಯನ್ನರು.

ಹಿಂದುಸ್ಥಾನದ ವಿಷಯವಾಗಿ ಸ್ವತಂತ್ರ
ಕೂಲಿಕಾರರ ಸಹಾನುಭೂತಿ

ಸ್ವತಂತ್ರ ಪಕ್ಷದ ಕೂಲಿಕಾರರು ಹಿಂದುಸ್ಥಾನದಲ್ಲಿ ನಡೆದ ದಬ್ಬಾಳಿಕೆಯ ಬಗ್ಗೆ ಪಾರ್ಲಮೆಂಟಿನಲ್ಲಿ [illegible] ಪ್ರಶ್ನೆಗಳ [illegible] ಪ್ರತಿಕೂಲವಾಗಿ ಮತ್ತು [illegible] ಅನುಕೂಲವಾಗಿ [illegible] ಹಿಂದುಸ್ಥಾನದಲ್ಲಿಯ ಬ್ರಿಟಿಶ ಸತ್ತೆಯು ಬುಡಮೇಲಾಗುವ ಮುಂಚಿತವಾಗಿ ಇವರೇ ಬುಡಮೇಲಾಗುವದಲ್ಲ!!

ಮೂರು ದಿವಸ ಕರ್ನಾಟಕ ಕಾಲೇಜದಲ್ಲಿ
ಹರತಾಳ

ಪೋಲೀಸ ಅತ್ಯಾಚಾರ ಗುಂಡು ಸರಕಾರದ ದಬ್ಬಾಳಿಕೆಯ ದೆಸೆಯಿಂದ ನಿನ್ನೆ ಇಂದು ಮತ್ತು ನಾಳಿನ ದಿವಸ ಹಿಂದುಸ್ಥಾನದಲ್ಲಿರುವ ಎಲ್ಲ ಇಂಗ್ರೇಜಿ ಕಾಲೇಜಗಳಲ್ಲಿ ಹರತಾಳವಾಗಿ, ವಿದ್ಯಾರ್ಥಿಗಳು ಕಾಲೇಜಕ್ಕೆ ಹೋಗಬಾರದೆಂದು ಗೊತ್ತಾದ ಮೇರೆಗೆ ಇಲ್ಲಿಯ ಕರ್ನಾಟಕ ಕಾಲೇಜದಲ್ಲಿಯೂ ಹರತಾಳವಾಗಿದೆ. ವಿದ್ಯಾರ್ಥಿಗಳು ಇಂದು ನಿಷೇಧದ ಮೆರವಣಿಗೆ ತೆಗೆದರು. ಇದರಲ್ಲಿ ಹಾಯ ಸ್ಕೂಲು ಮತ್ತು ಬೇರೆ ಶಾಲೆಗಳ ವಿದ್ಯಾರ್ಥಿಗಳೂ ಸೇರಿದ್ದರು.

ಸಾಯಮನ್ನ ರಿಪೋರ್ಟ ಸುಟ್ಟರು.

ದಿಲ್ಲಿಯಲ್ಲಿ ಸಾಯಮನ್ನರ ಎರಡು ರಿಪೋರ್ಟುಗಳ ಎರಡು ಗೊಂಬೆಗಳನ್ನು ಮಾಡಿ, ಯಮುನಾ ತಟಾಕದಲ್ಲಿ ಸಭೆ ಮಾಡಿ, ಅಲ್ಲಿ ಅವನ್ನು ಸುಟ್ಟು, ಸಾಯಮನ್ನ ಸಾಹೇಬ ಮತ್ತವರ ರಿಪೋರ್ಟುಗಳು ಗಯಾ ಎಂದು ಸಾರಂಗಕ್ಕೆ ಮಾಡಿದರು

ಸರದಾರ ಪಟೇಲರ ವೀರವೃತ್ತಿಯ ಭಾಷಣ

ಸರದಾರ ಪಟೇಲರು ಅಹಮದಾಬಾದಿನಲ್ಲಿ ಪಂಡಿತ ಮೋತಿಲಾಲರನ್ನು ಹಿಡಿದ ದಿವಸ ಆದ ಸಭೆಯಲ್ಲಿ ಭಾಷಣ ಮಾಡುವಾಗ- ರಾಉಂಡಟೇಬಲಕ್ಕೆ ಹೋಗುವದು ಕೇವಲ ಹುಚ್ಚತನವು. ಸರಕಾರವು ಬೇಕಾದಷ್ಟು ದಬ್ಬಾಳಿಕೆ ನಡೆಸಲಿ; ಕಾಂಗ್ರೆಸದ ಕಾರ್ಯಕ್ರಮವನ್ನೇ ಒಲಿಸಬೇಕು, ತಾಲೂಕ ಮತ್ತು ಜಿಲ್ಲೆಯ ರಾಜ್ಯಕಾರಭಾರವನ್ನು ಬಂದು ಮಾಡಬೇಕು. ಅಂದರೇ ಸರಕಾರಕ್ಕೆ ಯೋಗ್ಯವಾದ ಪ್ರತ್ಯುತ್ತರವಾಗುತ್ತದೆ. ಎಂದು ನುಡಿದಿದ್ದಾರೆ.

ಫಾಸಿಗಕ್ಕೇರಿದಾತನ ಮುಂಜಾನೆ ಇದ್ದ
ಮನಸ್ಸು ಮಧ್ಯಾನ್ಹದಲ್ಲಿರಲಿಲ್ಲ.

ವಿಜಾಪೂರದಲ್ಲಿ ಕೆಂದಿಯ ಸವಾರಿಗೆ [illegible] ದಿವಸ ಕುಮಾರಿ [illegible]ಯು ಸವಾರಿಗೆ ಬಂದಿದ್ದ ಒಬ್ಬ ಫಾಸಿಗೆ ದಾರಿಯಲ್ಲಿಯೇ ಕರುಣ ಮಾಡಿ, ಅಯ್ಯಾ ಸದ್ಗೃಹಸ್ಥನೇ ಗುಸ್ತೇ ಹಿಡಿಯಬೇಡೆಂದು ಬೇಡಿಕೊಳ್ಳಲು ಆತನು ಕುಮಾರಿಯ ವಿನಂತಿಯನ್ನು ಮನ್ನಿಸಿ, ಸವಾರಿಗೆ ಹೋಗುವದನ್ನು ರಹಿತಪಡಿಸಿದ್ದಲ್ಲದೆ, ಕಾಂಗ್ರೆಸ ಕಾರ್ಯಕ್ಕೆಂದು ೧೧೧ ರೂಪಾಯಿ ಕೊಟ್ಟ. ಭಾಪು! ಫಾಸಿಯೇ ಭಾಪು!! ಎಂದೆನಿಸಿಕೊಂಡು ಹೋದನು. ಆತನ ದುರ್ದೈವ! ಮುಂಜಾನೆ ಇದ್ದ ಮನಸು ಸಾಯಂಕಾಲದಲ್ಲಿರಲಿಲ್ಲ. ಆಗ ಹೋಗಿ ಸವಾರಿ ಮಾಡಿ, ಕೊಂಗಡಿ ಹಿಡಿದನು!!!

ಪೋಲೀಸರು ವಕೀಲನನ್ನು ಒಕ್ಕಲೆ
ಮಾಡಿ ಬಿಟ್ಟರು.

ಬೆಜವಾಡದಲ್ಲಿ ಒಬ್ಬ ವಕೀಲನು ಖಾದಿ ಅರಿವೆ ಹಾಕಿಕೊಂಡು, ಕೋರ್ಟಿಗೆ ಹೋಗುವಾಗ ದಾರಿಯಲ್ಲಿ [illegible] ಆತನ ಕೂಡ [illegible] ದ್ವೇಷದಿಂದ ಹಿಡಿದು, ಹೊಡೆದು, ಒಕ್ಕಲೆ ಮಾಡಿದರು. ವಕೀಲರು ಈ ಬಗ್ಗೆ ಮ್ಯಾಜಿಸ್ಟ್ರೇಟರ ಮುಂದೆ ದೂರಿ ಕೊಟ್ಟಿದ್ದಾರೆ.

ಒಂದೇ ದಿವಸದಲ್ಲಿ ೭೦೩ ಸಿಂದೀ ಗಿಡ
[illegible]
೧೦೦೦ ಗಡಬ್ಬಿಗಳ ಸಂಹಾರವು

[illegible] ತಾ ೩೦-೬-೩೦ನೇ ದಿವಸ [illegible] ಒಂದು [illegible] ಗಡಬ್ಬಿಗಳ [illegible] ೭೦೩ ಸಿಂದೀ ಗಿಡಗಳ ಸಂಹಾರವಾಗಿರುತ್ತದೆ

ವಕೀಲರ ಗಂಟು ಕಳವು
ಮಾಡುವದು ಒಳ್ಳೇದಲ್ಲ.

ಇಂಗ್ಲಂಡದಲ್ಲಿ ಕಳ್ಳರ ತಂಡದವನೊಬ್ಬನು ಒಬ್ಬ ವಕೀಲನ ನೋಟುಗಳನ್ನು ಕಳವು ಮಾಡಿದನು. ತಂಡದ ಮುಖ್ಯಸ್ಥನು ಆ ನೋಟುಗಳನ್ನು ಆ ವಕೀಲನಿಗೆ ಟಪಾಲ ಮಾರ್ಗವಾಗಿ ಹಿಂದಕ್ಕೆ ಕಳಿಸಿ, ವಕೀಲರ ಗಂಟು ಕಳವು ಮಾಡುವದು ನನಗೆ ಒಮ್ಮೆ ಬರುವದಿಲ್ಲವಾದ ಕಾರಣ, ನಿಮ್ಮ ಹಣವನ್ನು ನಿಮಗೆ ತಿರುಗಿ ಕಳಿಸಿದ್ದೇನೆಂದು ನೋಟಿನ ಕೂಡ ಬರೆದ ಪತ್ರದಲ್ಲಿ ಬರೆದಿದ್ದಾನೆ

ಮುಂಬಯಿಯ ದೇಶೀ ವರ್ತಕರ
ಸತ್ಯಾಗ್ರಹ.
ಪಿಕೆಟಿಂಗ ಮಾಡುವಂಥವರನ್ನು
ಹಿಡಿಯಬೇಡಿರಿ.

ಮುಂಬಯಿಯಲ್ಲಿ ಯುರೋಪಿಯನ್ನ ಹಾಗೂ ದೇಶೀ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವಂಥ ಸ್ವಯಂಸೇವಕರನ್ನು ಹಿಡಿಯುವದಿಲ್ಲ; ಯುರೋಪಿಯನ್ನರ ಅಂಗಡಿಗಳ ಸಾಲಿನಲ್ಲಿಯೇ ವ್ಯಾಪಾರ ಮಾಡುತ್ತಿರುವಂಥ ದೇಶೀಯ ವ್ಯಾಪಾರಿಯಾದ ಶ್ರೀ. ಮಾಧವದಾಸ ರಘುನಾಥದಾಸ ಇವರು ನಮ್ಮ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದರೂ ಅದರಿಂದ ತಮಗೆ ಹಾನಿ [illegible] ಅಡ್ಡಿಯಿಲ್ಲ. ನಮ್ಮ ಅಂಗಡಿಯ ಮುಂದೆ ಪಿಕೆಟಿಂಗ ಮಾಡುವಂಥವರನ್ನು ಹಿಡಿಯಬೇಡಿರೆಂದು ಪೋಲೀಸರಿಗೆ ತಿಳಿಸಿದ್ದಾರೆ.

ಪಂಡಿತ ಮಾಲವೀಯರ [illegible].

“ಆಲ ಇಂಡಿಯಾ ಕಾಂಗ್ರೆಸ ಕಮಿಟಿಯು ಬೇಕಾಯದೇಶೀರವೆಂದು ಹೇಳುವದೆಂದರೆ ಸರಕಾರವು ಈ ವರೆಗೆ ನಡೆಯಿಸಿದ ದಬ್ಬಾಳಿಕೆಯ ಪರಮಾವಧಿಯು. ಇದನ್ನು ಎಲ್ಲರೂ ತಡೆಯಬೇಕು, ನನಗೆ ನೀವು ಅಪ್ಪಣೆ ಕೊಡಿರಿ ಬೇಕಾದಾಗ್ಗೆ ನಿಮ್ಮ ವರ್ಕಿಂಗ ಕಮಿಟಿಯ ಸದಸ್ಯನಾಗುವೆನು.” ಎಂದು ಪಂಡಿತ ಮಾಲವೀಯರು ವಲ್ಲಭಭಾಯಿಯವರಿಗೆ ತಾರು ಮಾಡಿದ್ದಾರೆ.

ಶ್ರೀ ವಲ್ಲಭಭಾಯಿ ಪಟೇಲರು ಕಾಂಗ್ರೆಸದ
ಅಧ್ಯಕ್ಷರಾದರು.

ಪಂಡಿತ ಮೋತಿಲಾಲ ನೆಹರುರವರು ತಮ್ಮ ತರುವಾಯ ಶ್ರೀ ವಲ್ಲಭಭಾಯಿಯವರು ಕಾಂಗ್ರೆಸದ ಅಧ್ಯಕ್ಷರಾಗಬೇಕೆಂದು ನಿಯಮಿಸಿದ್ದಾರೆ.

ವಲ್ಲಭಭಾಯಿಯ ತರುವಾಯ ರಾಜೇಂದ್ರ
ಪ್ರಸಾದ

ಪಂಡಿತ ಮೋತಿಲಾಲರ ತರುವಾಯ, ಸರದಾರ ವಲ್ಲಭಭಾಯಿಯವರು ಕಾಂಗ್ರೆಸದ ಅಧ್ಯಕ್ಷರಾಗುವರಷ್ಟೇ; ತಮ್ಮನ್ನು ಹಿಡಿದರೆ ತಮ್ಮ ತರುವಾಯ, ಬಾಬೂ ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಬೇಕೆಂದು ಸರದಾರರು ಈಗಾಗಲೇ ಗೊತ್ತು ಮಾಡಿದ್ದಾರೆ.

ಮೋಟೆಬೆನ್ನೂರು
ಮೋಟಿ ರಾಟಿಗಳ ಆಗರವು.

ಮೋಟೆಬೆನ್ನೂರು ಮೋಟಿಯ ವಿದ್ಯೆಯಲ್ಲಿ ಮಿಗಿಲಾಗಿದೆಯೆಂದು ಎಂದಿನಿಂದಲೋ ಹೆಸರುವಾಸಿಯಾಗಿದೆಯಷ್ಟೇ; ಸದ್ಯಕ್ಕೆ ಅದು ರಾಟಿಯ ವಿದ್ಯೆಯಲ್ಲಿಯೂ ಮುಂದಡಿಯಿಡುತ್ತಿರುವದು. [illegible]ದ ರಾಷ್ಟ್ರಕಾರ್ಯ ಕೈಕೊಂಡಿರುವ ಎಳೆಯರ ದೀರ್ಘ ಪ್ರಯತ್ನದಿಂದ ಈಗಾಗಲೇ ೧೨೩ ರಾಟಿಗಳು ಸತತ ತಿರುಗುತ್ತಿರುವವು. ಉತ್ತಮವಾದ ಖಾದಿಯು ತಯಾರಾಗುತ್ತಿದೆ. ತರುಣರು ಕಾಂಗ್ರೆಸ ಕಮಿಟಿಯವರ ನಿಯಮಗಳಿಗನುಸಾರವಾಗಿ ಅದನ್ನು ಸೆಂಟರ ಮಾಡಬೇಕೆಂದು ಹವಣಿಸುತ್ತಿರುವರು.

ಜೂನ ೨೯ನೆಯ ದಿನ ಹೆಣ್ಣುಮಕ್ಕಳ ಸಭೆಯನ್ನು ಕರೆದು ಉತ್ತಮವಾಗಿ ನೂಲು ತೆಗೆದವರಿಗೆ ತರುಣರು ದೊಡ್ಡ ದೊಡ್ಡ ಇನಾಮುಗಳನ್ನು ಹಂಚಿದರು. ಕೂಳಿಲ್ಲದೆ ಬಳಲುತ್ತಿರುವ ಕೋಟ್ಯನುಕೋಟಿ ಬಡವರಿಗೆ ರಾಟಿಯು ಪ್ರಾಣವು ಹೆಚ್ಚಾದಂತೆ ವಿಲಾಯತಿಯಲ್ಲಿ ಗಿರಣಿಗಳು ಹೇಗೆ ದಿವಾಳಿಯಾಗುವವೆಂಬುದನ್ನು, ಹಾಗಾಗುವದರಿಂದ ಆ [illegible] ಗಿರಣಿಯ ಒಡೆಯರೆಲ್ಲ ಒಂದಾಗಿ ಕೂಡಲೇ ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಟ್ಟೇ ತೀರಬೇಕೆಂದು ಪಾರ್ಲಮೆಂಟಿಗೆ ಒತ್ತಾಯ ಮಾಡುವರೆಂಬುದನ್ನೂ ಅಂದಿನ ಸಭೆಯ ಅಧ್ಯಕ್ಷರು ತಮ್ಮ ಅಸ್ಖಲಿತವಾಣಿಯಿಂದ ವಿಶದ ಪಡಿಸಿದರು. [illegible] ಒಬ್ಬೊಬ್ಬರಲ್ಲಿ ವಿಲಕ್ಷಣವಾದ ನವ ಚೈತನ್ಯವು ಉಕ್ಕುತ್ತಿದ್ದಿತು.

ಲಿಂಗರಾಜ ಮಲ್ಲಿನಾಥ ಉಕ್ಕುಂದ
ಗೋವಿಂದ [illegible]
ಮೋಟೆಬೆನ್ನೂರ

WANTED

A graduate (B. S. C.) is wanted to teach Science in the Majid High School Savanur. Applications with testimonials are invited.

Savanur **K. G. Kalghatgi,**
29-6-1930 *Divan of Savanur.*

ಚಂದಾದಾರರಿಗೆ ಸೂಚನೆ

—(೦)—

ಜುಲೈ ತಿಂಗಳಲ್ಲಿ, ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಿಜಯದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ನಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಕಾರವಾರ ಜಿಲ್ಲೆಯಲ್ಲಿ
ಶೇಂದಿ ಸವಾಲಿನ ಬೆಲೆ ಇಳಿಯಿತು.

ಹೋದ ವಾರದಲ್ಲಿ ಕಾರವಾರದಲ್ಲಿ ಆ ಜಿಲ್ಲೆಯ ಶೇಂದಿಯ ಸವಾಲಾಯಿತು. ಸವಾಲು ನಾಲ್ಕು ತಾಸುಗಳ ಪರ್ಯಂತವಾಯಿತು. ಸವಾಲಿನ ಮೊದಲೇ ಆ ಜಿಲ್ಲೆಯಲ್ಲಿ ವಿಶೇಷವಾಗಿ 'ಸಾರಾಯಿ' ಕುಡಿಯುವಂಥವರು ಕುಡುಕರ ಮೇಲೆ ಜ್ಞಾತಿಯ ಬಹಿಷ್ಕಾರ ಹಾಕಿದ್ದರು. ಈ ಬಹಿಷ್ಕಾರವು ಒಳ್ಳೆ ಉಗ್ರವಾಗಿರುವದು. ಬಹಿಷ್ಕಾರದಿಂದ ವ್ಯಾಪಾರವೆಲ್ಲ ಸಂಕಷ್ಟಕ್ಕೆ ಬಂದಿದೆ. ಅದರ ಪರಿಣಾಮವಾಗಿ ಯಾರೂ ಗುತ್ತೇ ಹಿಡಿಯಬಾರದೆಂದು ಕಾಂಗ್ರೆಸ ಪಕ್ಷದವರು ಲೋಕಜಾಗೃತಿಯನ್ನುಂಟುಮಾಡಿದ್ದರಿಂದ, ಗುತ್ತೇದಾರರಲ್ಲಿಯೂ ದೇಶಹಿತ ಸ್ವಜನ ಹಿತದ ಜ್ಞಾನವಾಯಿತು. ಯಾರಾದರೂ ಗುಪ್ತ ರೀತಿಯಿಂದ ಸವಾಲಿಗೆ ಹೋದರೆ- ದಾರಿಯಲ್ಲಿಯೇ ಅವರಿಗೆ ಉಪದೇಶ ಮಾಡುವರು. ಹೀಗಾಗಿ ಯಾರೂ ಸವಾಲಿಗೆ ಬರಲಿಲ್ಲ. ಬಂದವರ ಸಂಖ್ಯೆಯು ಹತ್ತಿಪ್ಪತ್ತರೊಳಗೆ ಇತ್ತು.

ಸವಾಲಿನ ವೇಳೆಯಲ್ಲಿ ಸ್ವಯಂಸೇವಕರು ಪ್ರಶಂಸನೀಯ ಕೆಲಸ ಮಾಡಿದರು. ತಾಲೂಕ ಕಚೇರಿಯಲ್ಲಿ ಸವಾಲಾಯಿತು. ಅದರ ಮುಂಭಾಗದಲ್ಲಿ ಪೋಲೀಸರು ಒಳ್ಳೇ ಕಟ್ಟಿಕೊಂಡು ನಿಂತಿದ್ದರು. ಈ ಒಳ್ಳಿಯಲ್ಲಿ ಅಲ್ಲಲ್ಲಿ ಬಿದ್ದ ಪೋಲೀಸರ [illegible] ಪ್ರತಿಕ್ಷಣವು ಹೋಗುವಂತೆ ಸ್ವಯಂಸೇವಕರು ಒಳಗೆ ಹೋಗುವರು. ಅಂಕೋಲೆಯಿಂದ ದ್ವಾರಕಿಸಿಂಹರೂ ಸ್ತ್ರೀ ವ್ಹಾಲಂಟೀಯರರು ಬಂದಿದ್ದರು. ಪೋಲೀಸರು ಇವರನ್ನು ಹಿಡಿದು ಕೂಡಿಸಿದಲ್ಲದೆ, ಅವರ ಕೂದಲೆಳೆಗೆ ಧಕ್ಕೆ ಹತ್ತದಂತೆ ಜಾಗರೂಕರಾಗಿದ್ದರು. ಪೋಲೀಸರ ವರ್ತನವು ಶ್ಲಾಘನೀಯವಾಗಿದ್ದಿತು.

ನಾಲ್ಕಾರು ಅಂಗಡಿಗಳಿಗಿಂತ ಹೆಚ್ಚಿಗೆ ಸವಾಲು ಆಗಲಿಲ್ಲ. ಕಾರವಾರದಲ್ಲಿ ಐನೂರಕ್ಕಾಗುವ ದೊಂದು ಅಂಗಡಿಯು ನೂರು ರೂಪಾಯಿಗಾಯಿತು. ಎರಡು ಸಾವಿರಕ್ಕಾಗುವ ಅಂಗಡಿಯು ನಾನೂರರೊಳಗಾಯಿತು. ಹಳಿಯಾಳದ ಅಂಗಡಿಯನ್ನು ಧಾರವಾಡದ [illegible] ಸಾಹುಕಾರನು ಹಿಡಿದನು. ಆತನ ಹೆಸರು ಇನ್ನೂ ಪ್ರಕಟವಾಗಿಲ್ಲ. ಕಾರವಾರ ಜಿಲ್ಲೆಯ ಜನರು ಬಹಿಷ್ಕಾರ, ಪಿಕೆಟಿಂಗ ಮತ್ತು ಕುಡುಕರ ಮನವೊಲಿಸುವದರಿಂದ ಶೇಂದಿಯ ಸವಾಲಿನಲ್ಲಿ ಅದ್ಭುತವಾದ ಜಯ ಸಂಪಾದಿಸಿದ ಬಗ್ಗೆ ಎಷ್ಟು ಸ್ತುತಿ ಮಾಡಿದರೂ ಸ್ವಲ್ಪೇ ಆಗುತ್ತದೆ.

ವಿಜಾಪೂರ ಜಿಲ್ಲೆಯಲ್ಲಿ
ಶೇಂದಿ ಸವಾಲು ಹಿಡಿದವರಿಗೆ ಬಹಿಷ್ಕಾರ
ಶೇಂದೀ ಗಿಡ ಕಡಿಯುವದಕ್ಕೆ ವ್ಯಾಪಾರಸ್ಥರ
ಸಹಾಯ ಮತ್ತು ಸಹಾನುಭೂತಿಯು

ಹೋದ ವಾರದಲ್ಲಿ ವಿಜಾಪೂರದಲ್ಲಿ ಶೇಂದಿಯ ಸವಾಲಾಯಿತು. ಸವಾಲಿಗೆ ಹೋಗಬೇಡಿರಿ; ಸವಾಲಿನಲ್ಲಿ ಹಿಡಿಯಬೇಡಿರೆಂದು ಕಾಂಗ್ರೆಸದವರು ಘಂಟಾಘೋಷವಾಗಿ ಹೇಳಿಕೊಂಡರೂ, ಬ್ರಾಹ್ಮಣ, ಲಿಂಗಾಯತ ಮೊದಲಾದ ಸುರೆಯು ನಿಷಿದ್ಧವೆಂದು ಧರ್ಮಶಾಸ್ತ್ರ ಹೇಳುವಂಥವರು ಸವಾಲಿಗೆ ಮುರಿಗಟ್ಟಿ ಹೋಗಿದ್ದರು. ಲೋಕಮತವು ಭಯಂಕರವಾಗಿ ಪ್ರಕ್ಷುಬ್ಧವಾಗಿರುವದರಿಂದ ಸರಕಾರಕ್ಕೆ ಮಾತ್ರ ತೃಪ್ತಿಯಾಗಲಿಲ್ಲ. ಹೋದ ವರ್ಷ ಒಂದೂವರೆ ಲಕ್ಷಕ್ಕೆ ಹೋಗಿದ್ದ ಲಿಲಾವು ಈ ಸಾರೆ ೭೪ ಸಾವಿರಕ್ಕಾಯಿತು.

ಸವಾಲಿನಲ್ಲಿ ಹಿಡಿದವರ ಪಾರಪತ್ಯ ಮಾಡಬೇಕೆಂದು ಕಾಂಗ್ರೆಸ ಕಮಿಟಿಯವರು ಕರ್ತವ್ಯ ತತ್ಪರರಾಗಿದ್ದಾರೆ. ಊರ ಜನರು ಅನುಕೂಲರಾಗಿ ಗುತ್ತೇದಾರರಿಗೆ ಬಹಿಷ್ಕಾರ ಹಾಕುವ ಚಳವಳಿ ನಡೆಸಿದ್ದಾರೆ. ಸ್ವಯಂಸೇವಕರು ಈಚಲಗಿಡದ ಸಂಹಾರದ ಉಪಕ್ರಮ ನಡೆಸಿದ್ದಾರೆ. ಇದಕ್ಕೆ ವ್ಯಾಪಾರಸ್ಥರು ಸಂಪೂರ್ಣ ಸಹಾಯಕರಾಗಿದ್ದು, ಅಡತಿಯ ಅಂಗಡಿಯವರು ಸತ್ಯಾಗ್ರಹದ ಶಿಬಿರಕ್ಕೆ ಕಾಳು ಕಡಿಯನ್ನೂ, ಪಾತ್ರೆಗಳ ವ್ಯಾಪಾರಸ್ಥರು ಅವರಿಗೆ ಬಳಕೆಗೆ ಬೇಕಾಗುವ ಪಾತ್ರೆಗಳನ್ನೂ ಪೂರೈಸುವರು. ಶ್ರೀ ಶೇಟ ಅಲ್ಲುಭಾಯಿಯವರು ಮೂವತ್ತು ಕೊಡ್ಲಿಗಳನ್ನು ತರಿಸಿಕೊಟ್ಟಿದ್ದಾರೆ. ಸ್ವಯಂಸೇವಕರ ಮತ್ತು ಊರ ಜನರ ಉಪದೇಶದಿಂದ ಮಚ್ಚಿಗಾರರು [illegible] ನಿಶ್ಚಯಮಾಡಿ, ಶೇಂದಿ ಗೀಸುವವರಿಗೆ ಎರಡು ರೂಪಾಯಿ ದಂಡ ಹಾಕಬೇಕೆಂದೂ ಜಾತಿ ಬಹಿಷ್ಕಾರ ಹಾಕಬೇಕೆಂದೂ ಠರಾವು ಮಾಡಿದ್ದಾರೆ.

ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ
ವಿಚಿತ್ರ ಮತ್ತು ವಿಶಿಷ್ಟ ಪ್ರಕಾರ
ಉಮೇದವಾರರ ಕೂಡ [illegible]
ಬಂದವರ ಪರೀಕ್ಷೆ

ಇಲ್ಲಿಯ ಮ್ಯುನಿಸಿಪಾಲಿಟಿಯ ಚೀಫ ಆಫೀಸರರು ಜಕಾತಿ ಕಚೇರಿಯ ಕಾರಕೂನರ ಪರೀಕ್ಷೆ ತಕ್ಕೊಳ್ಳುವ ಒಂದು ವಿಚಿತ್ರ ಮತ್ತು ವಿಶಿಷ್ಟ [illegible] ತೆಗೆದಿದ್ದಾರೆ. ಪರೀಕ್ಷೆಯು ಬೇಗನೆ ಆಗತಕ್ಕದ್ದಂತೆ. ಒಟ್ಟು ೩೦ ಜನ ಕಾರಕೂನರಿದ್ದಾರೆ. ೧೫ ಜನರ ಪರೀಕ್ಷೆಯನ್ನು ಒಂದು ದಿವಸ, ಮತ್ತು ಉಳಿದ ೧೫ ಜನರ ಪರೀಕ್ಷೆಯನ್ನು ಅದರ ಮರು ದಿವಸ ತಕ್ಕೊಳ್ಳುವರು. ಇವರಲ್ಲಿ ಹೊಸದಾಗಿ ಕೆಲಸದಲ್ಲಿ ಸೇರಿದವರಿಂದ, ೨೦-೨೫ ವರ್ಷ ಸರ್ವೀಸಿನವರು, ಕೂದಲು ಬೆಳ್ಳಗಾದವರು, ತಿಂಗಳಿಗೆ [illegible] ಬಂದವರು ಸಹ ಪರೀಕ್ಷೆಗೆ ಕೂಡ್ರಬೇಕಾಗಿರುತ್ತದೆ. ಎಲ್ಲರೂ ಹೊಸದಾಗಿ ಕೆಲಸದಲ್ಲಿ ಸೇರುವಂಥವರ ಹಾಗೆ ಉಮೇದವಾರಿ ಮಾಡಿ, [illegible] ಆಗುವಂಥವರ ಪರೀಕ್ಷೆ ತಕ್ಕೊಳ್ಳುವ ಪದ್ಧತಿಯುಂಟು. ಇದೀ ವರ್ಷದಲ್ಲಿ ಜಕಾತಿ ಕಟ್ಟೆಯಲ್ಲಿ ಕೆಲವು ಐದಾರು ರೂಪಾಯಿಯಿಂದ ೩೦-೩೫ ರೂಪಾಯಿ ತನಕ ಸಿಫಾರಸ್ಸಿನಿಂದ ಕೂಲಿಯ ಸಂಬಳ ಕೊಂಡಂಥ ಮುದುಕರ ಪರೀಕ್ಷೆ ತಕ್ಕೊಳ್ಳುವದು ಲೋಕದಲ್ಲಿ [illegible] ಸರಿ. ಯಾವ ಮ್ಯುನಿಸಿಪಾಲಿಟಿಯ ಚೀಫ ಆಫೀಸರರೂ ಹುಡುಗಾಟಿಕೆ ಎನಿಸುವಂಥ ಇಂಥ ಕೃತ್ಯ ಮಾಡಲಾರರು. ಇದಕ್ಕೆ ಸ್ಟ್ಯಾಂಡಿಂಗ ಕಮಿಟಿ, ಜನರಲ ಕಮಿಟಿಯ ಮಂಜೂರಿ ಇದ್ದಂತೆ ತಿಳಿದು ಬರುವದಿಲ್ಲ. ಜವಾಬದಾರ ಅಧಿಕಾರಸ್ಥರು ಜಗತ್ತಿನಲ್ಲಿ ಅಪಹಾಸ್ಯವೆನಿಸುವಂಥ ಈ ಪ್ರಕಾರವನ್ನು ಬಂದು ಮಾಡಿಸುವರೆಂದು ನೆರೆ ನಂಬಿದ್ದೇವೆ.

ಲಖನೌದ ಮುಸಲಮಾನರು
ರಾವುಂಡ ಟೇಬಲವನ್ನು ಧಿಕ್ಕರಿಸಿದರು.

ಲಖನೌದ ಮುಸಲಮಾನರು ಸಾಯಮನ್ನ ಸಾಹೇಬರ ರಿಪೋರ್ಟನ್ನು ಮಾತ್ರ ತಿರಸ್ಕರಿಸದೆ, ಯಾವ ಸ್ವಾಭಿಮಾನಿ ಮುಸಲಮಾನನೂ ರಾವುಂಡ ಟೇಬಲಕ್ಕೆ ಹೋಗಬಾರದೆಂದೂ, ಹೋಗಲು [illegible] ಪ್ರಚಂಡ ಜಾಹೀರ ಸಭೆ ಮಾಡಿ, ಠರಾವು ಪಾಸು ಮಾಡಿದ್ದಾರೆ. ಹಿಂದೂ, ಮುಸಲಮಾನರು ರಾವುಂಡ ಟೇಬಲಕ್ಕೆ ಬರಬೇಕೆಂಬ ಅಪೇಕ್ಷೆ ಇದ್ದರೆ- ವಿಲಾಯತಿ ಮತ್ತು ಹಿಂದುಸ್ಥಾನ ಸರಕಾರದವರು

> " ನಾವು ಈ ಕ್ಷಣವೇ ವಸಾಹತಿನ ಸ್ವರಾಜ್ಯ ಕೊಡುತ್ತೇವೆ. ಸ್ವರಾಜ್ಯ ಕೊಡುವಾಗ ಅವಶ್ಯವಾದ ಕೆಲವು ಸಂಗತಿಗಳ ಬಗ್ಗೆ ತಾತ್ಪುರ್ತಿಕವಾಗಿ ಸುರಕ್ಷತೆಯ ಅಧಿಕಾರಗಳನ್ನು ನಮ್ಮಲ್ಲಿಟ್ಟುಕೊಳ್ಳುವೆವು."

ಎಂದು ಅಭಿವಚನ ಕೊಟ್ಟರೇ ರಾವುಂಡ ಟೇಬಲಕ್ಕೆ ಹೋಗಬಹುದೆಂದು ಈ ಧಿಕ್ಕಾರದ ಠರಾವಿನಲ್ಲಿ ಶರ್ತ ಹಾಕಿದ್ದಾರೆ. ಉತ್ತರ ಹಿಂದುಸ್ಥಾನದ ಮುಸಲಮಾನರು ರಿಪೋರ್ಟಿನ ಬಗ್ಗೆ ಬಹುವಾಗಿ ಸಂತಪ್ತರಾಗಿದ್ದು, ಸರ ಸಾಯಮನ್ನರ ಕೂಡ ಸಹಕಾರ ಮಾಡಿದ್ದು ಬಹಳ ದೊಡ್ಡ ತಪ್ಪಾಯಿತೆಂದು ಅವರ ಕೂಡ ಕೆಲಸ ಮಾಡಿದಂಥ ಅದೇ ಲಖನೌ ನಿವಾಸಿಯಾದ ರಾಜಾ ನವಾಬ ಅಲ್ಲಿಖಾನಸಾಹೇಬರು ಜಾಹೀರ ರೀತಿಯಿಂದ ಪ್ರಸಿದ್ಧ ಮಾಡಿದ್ದಾರೆ. ಅಸೆಂಬ್ಲಿಯ [illegible] ಮುಸಲಮಾನರೂ ಇದೇ ಪ್ರಕಾರ ತಮ್ಮ ಮತ ಹೇಳಿದ್ದಾರೆ. ಲಖನೌದ ಮುಸಲಮಾನರು ಇದೇ ಸಭೆಯಲ್ಲಿ ಸರಕಾರವು ಪೋಲೀಸರಿಂದ ಸ್ವಯಂಸೇವಕರ ತಲೆಯೊಡೆಸುವದನ್ನು ನಿಷೇಧ ಮಾಡಿದ್ದಾರೆ. ಅಲ್ಲಿಯಂತೆ ಪುಣೆಯ ಮುಸಲಮಾನರೂ ಸಾಯಮನ್ನ ಸಾಹೇಬರ ಸಮಾಚಾರ ತಕ್ಕೊಂಡಿದ್ದಾರೆ. ಇಂಥ ಸುಬುದ್ಧಿಯು ಕರ್ನಾಟಕದ ಮುಸಲಮಾನರಿಗೆಂದು ಹುಟ್ಟುವದು ?

ರಾವುಂಡ ಟೇಬಲದ ವಿಚಾರ ಎಂಥ
ರೀತಿಯಿಂದಾಗಬೇಕು?

ಯರವಡೆಯಲ್ಲಿ [illegible] ಮಹಾತ್ಮರ ಭೆಟ್ಟಿಯಾಗುವ ವೇಳೆಗೆ [illegible] ಕಾರಣವಾಯಿತು. ಆ ಕಾರಣವು ಸರಕಾರದ ಪಾಲಿಸಿಯಲ್ಲಿ ಕದಲದೆ ಉಳಿಯುತ್ತಿತ್ತು. ಪಂಡಿತರನ್ನು ಹಿಡಿದು ಕಾರಾಗೃಹದಲ್ಲಿ ಇಡಲಾಗಿದೆ. ಅಂದ ಬಳಿಕ, ಅವರ ಕೂಡ [illegible] ಮಾಡಿಕೊಳ್ಳುವದೆಂದು ಅರಸರು [illegible] ಮಾಡಿದ್ದರಿಂದಲೇ [illegible] ಕಾರಣಕ್ಕೆ ಉತ್ತರ ಕೊಡಲಿಲ್ಲ. ಪಂಡಿತರು ಮುಂಬಯಿಯಿಂದ ಅಲ್ಲಾಹಾಬಾದಿಗೆ ಹೋಗಿ ಬಳಿಕ ಹಿಡಿಯುವ ಮುನ್ನಿನ ದಿವಸ ವ್ಯಾಖ್ಯಾನ ಕೊಟ್ಟರು. ಹಿಂದುಸ್ಥಾನ ಸರಕಾರದವರು ಒಡಂಬಡಿಕೆ ಮಾಡಿಕೊಳ್ಳಲಿಕ್ಕೆ ಅಪೇಕ್ಷಿಸಿದರೆ- ವಿಲಾಯತಿಯಲ್ಲಿ ಇಂಗ್ಲಂಡ, ಫ್ರಾನ್ಸ್, ಅಮೇರಿಕಾ, ಇಟಲಿ ಮತ್ತು ಜಪಾನದವರು ಲಂಡನದಲ್ಲಿ ಕೂಡಿ, ಸರ್ವಸ್ವತಂತ್ರ ವಿಚಾರದಿಂದ ಯುದ್ಧದ ಹಡಗುಗಳನ್ನು ಕಡಿಮೆ ಮಾಡುವ ಕುರಿತು ಚರ್ಚೆ ಮಾಡಿದಂತೆ ನಮ್ಮ ಕೂಡ ಮಾತಾಡಬೇಕೆಂದು ಹೇಳಿದ್ದಾರೆ. ಪಂಡಿತರಂತೆ ನೆಹರೂ-ದ್ವಯರು ಅವರ ಹಿಂದೆ ಉಳಿದಂಥ ಮತ್ತು [illegible] ಸ್ವಸ್ತಿ, [illegible] ಸ್ವಸ್ತಿ ಎಂದೆನಿಸಬೇಕೆಂದು ಹೇಳುತ್ತಿದ್ದರು. ಪಂಡಿತರ ಹಿತೋಕ್ತಿಯನ್ನು ಮೂಲ ಪ್ರವೃತ್ತಿಯನ್ನು ಮಾಡಿಕೊಳ್ಳುವರೆಂದು ಆಶಿಸುತ್ತೇವೆ.

ವಿಲಾಯತಿಯ ವ್ಯಾಪಾರಕ್ಕೆ ಬರುತ್ತಿರುವ
ಅಧೋಗತಿಯು.

ಹಿಂದುಸ್ಥಾನದೊಳಗಿನ ರೂಟಿಯನ್ನು ಮುರಿಯುತ್ತ ಹೋದಂತೆ, ವಿಲಾಯತಿಯ ಜನರ ವ್ಯಾಪಾರವು ಬೀಳುತ್ತ ಹೋಯಿತು. ಆ ಚಕ್ರವು ಈಗ ಹೊಸ ಮಾರ್ಗ ತಿರುಗಲಾರಂಭಿಸಿದೆ. ಅವರ ವ್ಯಾಪಾರ ಮಾರ್ಗಗಳು ಬಂಕೆಗಳು ಅಭ್ಯಂತರದಲ್ಲಿರುವ [illegible] ಕಂಪಮಾನವಾಗಿ ನಡೆದಿದ್ದು, ಆ ವ್ಯಾಪಾರವು ಮರಳಿ ಬೆಳೆಯಗೊಡಲಿಕ್ಕೆ ಯಾವ ಉಪಾಯ ಯೋಜಿಸಬೇಕೆಂದು, ವಿಲಾಯತಿಯ ಮಂತ್ರಿಗಳು ತರ್ಕಮಾಡುತ್ತಿದ್ದಾರೆ. ಮ್ಯಾಂಚೆಸ್ಟರದ ಎಲ್ಲ ಮಿಲ್ಲುಗಳೂ, ಉದ್ಯೋಗಗಳೂ ಕಾರ್ಖಾನೆಗಳೂ ಅವರ ಚಿಂತೆಯಲ್ಲಿ ಪ್ರಮುಖ ಸ್ಥಾನ ವಹಿಸುತ್ತಿರುವವು. ದಬ್ಬಾಳಿಕೆ ಸಂಕಟ, ಹಿಂದುಸ್ಥಾನಕ್ಕೆ ಬೇಕಾದಂಥ ಸ್ವರಾಜ್ಯ ಕೊಟ್ಟ ವಿನಹ ಅದು ಸ್ಥಿತಿಗೆ ಬಂದಂತಿಲ್ಲವೆಂದು ಮನಗಂಡವರಾಗಿ ತಿಳಿದುಕೊಂಡಿದ್ದಾರೆ. ಎಷ್ಟು ಎಷ್ಟು [illegible]ಗೆ ಎಂದರೂ, ರೂಟಿ ಮತ್ತು ಸ್ವದೇಶೀ ಗಿರಣಿಗಳ ಮುಂದೆ ವಿಲಾಯತಿಯವರ ಆಟ ನಡೆಯಲಾರದು. ರೂಟಿ ಮತ್ತು ಗಿರಣಿಯ ಉತ್ತರೋತ್ತರ ಪ್ರಗತಿಯಾಗುವದು ನಿಶ್ಚಿತ.

ಸದ್ಯ ವಿಲಾಯತಿಯ ವ್ಯಾಪಾರವು ಮೇ ತಿಂಗಳಲ್ಲಿಯೇ ನೂರಕ್ಕೆ ೫೦ ರಷ್ಟು ಕಡಿಮೆಯಾಯಿತು. ಜೂನ ಜುಲೈದಲ್ಲಿ ಅದು ಇನ್ನು ಹೆಚ್ಚಾಗಿ ನೂರಕ್ಕೆ ೭೫ ರಷ್ಟು ಕಡಿಮೆಯಾಯಿತೆಂದು ಸಹಜವಾಗಿ ತರ್ಕ ಮಾಡಬಹುದು. ಮುಂಬಯಿಗೆ ಬಂದ ಹಡಗುಗಳು ಹೇಳಿದ ಪ್ರಕಾರ ದಿವಸ ಹಿಂದುಸ್ಥಾನದಿಂದ ಸಾಲು ತುಂಬಿಕೊಂಡು ಹೋಗುತ್ತಿದ್ದವು. ಅವುಗಳ ಇಂಗ್ಲಿಷ [illegible] ಬಂದಿದೆ ಮತ್ತು ಎಷ್ಟೋ ಹಡಗುಗಳು ಸಾಕಷ್ಟು ಮಾಲಿಲ್ಲದೆ, [illegible] ಬಿಡುವವು. ಆಳರಸರು ಹಣ್ಣಿಗೆ ಬರಬೇಕಾದವೆ. ಹಿಂದೀ ಜನರು ಬಹಿಷ್ಕಾರವನ್ನು ಬಳಸಿಸುವ ಬಗೆಯು ಮಹತ್ವದ ಉಪಾಯವಾಗಿರುವದೆಂದು ಈ ಸಂಗತಿಯಿಂದ ಸ್ಪಷ್ಟವಾಗುತ್ತದೆ.

ಕರಾಚಿಯಲ್ಲಿ ಪ್ರಚಂಡ ಮಳೆ ಗಾಳಿ.

ಕೆಳಗೆ ಲಂಕೆಯಿಂದ ಮೇಲೆ ಕರಾಚಿಯ ತನಕ [illegible] ಮಳೆಯು ಬಹಳವಾಗಿ ಸುರಿಯುತ್ತಿರುವದು. ಕರಾಚಿಯಲ್ಲಿ ಒಂದು ದಿವಸ ಭಯಂಕರವಾಗಿ ಬಿರುಗಾಳಿ ಬೀಸಿತು. ದೊಡ್ಡ ದೊಡ್ಡ ಗಿಡಗಳು ಬೇರು ಸಹಿತ ಕಿತ್ತಿ ಬಿದ್ದವು. ವಿದ್ಯುತ್ತಿನ ತಂತಿಗಳು ಕತ್ತರಿಸಿ, ಊರೆಲ್ಲ ಕಗ್ಗತ್ತಲೆಯಾಯಿತು. ಅನಂತರ ಅದ್ಭುತವಾಗಿ ಮಳೆ ಸುರಿದು, ಊರತುಂಬ ನೀರೇ ನೀರಾಯಿತು.

ಏಶಿಯನ್ ಅಶ್ಯುರನ್ಸ ಕಂ.
ಮುಂಬಯಿ.

೧೯೩೦ನೆಯ ಇಸವಿಯ ಜೂನ ೩ನೇ ತಾರೀಖು ದಿವಸ ಜರುಗಿದ ಶೇರಹೋಲ್ಡರರ ಮೀಟಿಂಗಿನಲ್ಲಿ ಆದ ಕಂಪನಿಯ ಚೇರಮನ್ನರ ಭಾಷಣವು.

ತಾವು ಕಂಪನಿಯ ವಾರ್ಷಿಕ ಅಹವಾಲವನ್ನೂ ಪತ್ರಿಕೆಯನ್ನೂ ಮಂಜೂರ ಮಾಡುವ ಮೊದಲು ನಾನು ತಮಗೆ ಕೆಲವು ಸಂಗತಿಗಳನ್ನು ತಿಳಿಸಲಿಚ್ಛಿಸುತ್ತೇನೆ. ನಮ್ಮ ವ್ಯವಸ್ಥಾಪಕ ಮಂಡಳಿಯ [illegible] ಶ್ರೀ. ಜಮುನಾದಾಸ ಮೆಹತಾ ಮತ್ತು ಜಮುನಾದಾಸರ ಶ್ರೀ. ಗೋವಿಂದದಾಸ ಕಿಶನದಾಸ ದೇಸಾಯಿ ಮೆಂಬರಾಗಿ ಕಾರ್ಯ ನಡೆಸುತ್ತಿದ್ದಾರೆ. ಈ [illegible] ಅವರು. ಇಲ್ಲಿ [illegible] ನನಗೆ ಬಹುವಾಗಿ ವಿಷಾದವಾಗುತ್ತದೆ. ಶ್ರೀ. ಜಮುನಾದಾಸರು [illegible] ಬಹಳ ದಿವಸದಿಂದ ಈ ಕಂಪನಿಯ ಸಲುವಾಗಿ ಬಹಳ ಕೆಲಸ ಮಾಡಿದ್ದಾರೆ. ಅವರು ದೇಶಹಿತಕ್ಕಾಗಿ ಮಾಡಿದ ಸ್ವಾರ್ಥತ್ಯಾಗಕ್ಕಾಗಿ ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. [illegible]ದಲ್ಲಿ ರಾಜಕೀಯ ವಾತಾವರಣವು ಶಾಂತವಾಗಿ, ಅವರು ಬೇಗನೆ ಬಂಧನಮುಕ್ತರಾಗಲೆಂದು ಬಯಸುತ್ತೇನೆ.

ಗತ ವರ್ಷದಲ್ಲಿ (೧೯೨೯) ೨೭೪೮ ವಿಮೆಗಳು ಕಳಿಸಲ್ಪಟ್ಟವು. ಇವುಗಳ ವಿಮೆಯ ರಕ್ಕಮು ೩೧,೭೨,೫೦೦ ರೂಪಾಯಿಯಾಗಿರುತ್ತದೆ. ಈ ಸಂಗತಿಯು ಕಂಪನಿಯ ಹೆಸರಿನಲ್ಲಿ ಕಂಡಿರುವ ಈ ಪ್ರಗತಿಯು ಸಮಾಧಾನಕರವಾಗಿರುತ್ತದೆಂದು ನಾನು ತಿಳಿಯುತ್ತೇನೆ. ಇದು ವರೆಗೆ ೧೭೧೩೦೦ ರೂಪಾಯಿಗಳ ವಿಮೆ ಪೂರ್ಣವಾಗಿ, ಹೋದ ವರ್ಷಕ್ಕಿಂತ ಹೆಚ್ಚಾಗಿ ಕೆಲಸವಾಗಿದೆಯೆಂದು ಹೇಳುತ್ತೇನೆ.

ಪೂರ್ವ- ಆಫ್ರಿಕಾ ಹೊಸಶಾಖೆಗಳನ್ನೂ ಏಜನ್ಸಿಗಳನ್ನೂ ಸ್ಥಾಪಿಸುವ ಬಗ್ಗೆ ಹೊಸ ಮಿಶನ ಕಳಿಸಿದ್ದರೂ, ಈ ಮಿಶನ ನಮಗೆ [illegible] ಹಾಗು ಮುಂದೆ ಇದರಲ್ಲಿ ಕಡಿಮೆಯಾಗುವ ಸಂಭವವಿದೆ.

ಹೋದ ವರ್ಷಕ್ಕಿಂತ ಈ ವರ್ಷದ ಲಾಭವು ಸುಮಾರು ೨೩,೦೦೦ ರೂಪಾಯಿ ಹೆಚ್ಚಾಗಿರುತ್ತದೆಂದು ಹೇಳಲು ಸಂತೋಷಪಡುತ್ತೇನೆ.

ಕ್ಲೇಮು- ಮರಣ ಹೊಂದಿದ ವಿಮೆದಾರರಿಗೆ ಬೇರೆ ಒಟ್ಟು ೧,೪೬,೩೫೦ ರೂಪಾಯಿ ಕೊಟ್ಟಿರುತ್ತೇವೆ. ಇದು ಸಮಾಧಾನಕರವಾದದ್ದು. [illegible] ತಾತ್ಕಾಲಿಕ ಜನರ ಕ್ಲೇಮುಗಳನ್ನು ಕೊಟ್ಟದ್ದಕ್ಕಾಗಿ ನಾನು ಕಂಪನಿಯ ಅಭಿನಂದನ ಮಾಡುತ್ತೇನೆ.

ಬಿಲ್ಡಿಂಗ ಸಿಂಕಿಂಗ ಫಂಡು- ಸದ್ಯಕ್ಕೆ ೯೭೭೭೭-೧೨-೨ ಆಗುತ್ತದೆ. ಇದು ಚಕ್ರಬಡ್ಡಿಯಂತೆ ಶೀಘ್ರವಾಗಿ ನಮ್ಮ ಭವ್ಯ ಕಟ್ಟಡದ ಕ್ರಮವನ್ನು ಪೂರೈಸಿಕೊಡುವದು.

ಸಭ್ಯ ಗೃಹಸ್ಥರೇ- ಇನ್ಶೂರನ್ಸ ಕಂಪನಿಗಳು ಒಟ್ಟಿನಲ್ಲಿ- ದಾಯರೆಕ್ಟರರ ಮುಖ್ಯ ಕರ್ತವ್ಯವೇನೆಂದರೆ- ಕಂಪನಿಯ ಬಂಡವಲವನ್ನು ಲಾಭದಾಯಕವಾದ ಹಾಗು ಸುರಕ್ಷಿತವಾದ ರೀತಿಯಿಂದ ವಿನಿಯೋಗಿಸುವದಾಗುತ್ತದೆ. ಬ್ಯಾಲನ್ಸಶೀಟನ್ನು ಅವಲೋಕನ ಮಾಡುವದರಿಂದ, ದಾಯರೆಕ್ಟರರು ಎಷ್ಟು ದಕ್ಷತೆಯಿಂದ ಕೆಲಸ ಮಾಡಿರುತ್ತಾರೆಂಬುದು ನಿಮಗೆ ಕಂಡುಬರುವದು.

ಸತ್ಯಾಗ್ರಹದಲ್ಲಿ ಶಿಕ್ಷೆ ಹೊಂದಿದಂಥ ವೀರ ವಿಮೆದಾರರಿಗೆ ಒಂದು ವರುಷದವರೆಗೆ ಅವರ ಪಾಲಿಸಿಗಳು ರದ್ದಾಗದಂತೆ ಸ್ಪೆಶಲ ಸವಲತ್ತುಗಳನ್ನು ಕೊಟ್ಟಿರುತ್ತೇವೆ. ಇದಕ್ಕೆ ನೀವು ಅನುಮೋದಿಸುವಿರೆಂದು ನಾನು ಆಶಿಸುತ್ತೇನೆ.

ಸ್ವಲ್ಪದಲ್ಲಿ ಹೇಳಬೇಕೆಂದರೆ- ತಮ್ಮ ವಿಮೆದಾರರ, ಏಜಂಟರ ಮತ್ತು ಕಂಪನಿಯ ನೌಕರರ ಸಹಕಾರದಿಂದ ದಿನೇ ದಿನೇ ಕಂಪನಿಯು ಹೆಚ್ಚು ಹೆಚ್ಚು ಅಭಿವೃದ್ಧಿ ಹೊಂದಲೆಂದು ಆಶಿಸುತ್ತೇನೆ.

ಸಿಮ್ಲಾದಲ್ಲಿ ಲಾರ್ಡ ಆಯರ್ವಿನ ಮತ್ತು ಬ್ಯಾರಿಸ್ಟರ ಜಯಕರರು ಸದ್ಯ ಸ್ಥಿತಿ ಮತ್ತು ರಾವುಂಡ ಟೇಬಲದ ಬಗ್ಗೆ ಬಹಳ ಹೊತ್ತಿನ ತನಕ ಸಂಭಾಷಣ ಮಾಡಿದರು.

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಮ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಔದ್ಯೋಗಿಕ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾ ಶ್ರೀ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರೆಡ್ಡಿ ಕಂಪನಿ ಲಿಮಿಟೆಡ್.

ನಾಮದ ದಲಾಲಿ ಅಂಗಡಿಯನ್ನು ಗದಗ ಶಹರದಲ್ಲಿ ಈ ವರ್ಷ ಕಂಪನಿಯು ಆಕ್ಟ ಪ್ರಕಾರ ಸ್ಟರ ಮಾಡಿಸಿ ಸ್ಥಾಪಿಸುವದು ತಮಗೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯು ವ್ಯವಸ್ಥೆಯು ದ್ದ ದೊಡ್ಡ ಜಮೀನದಾರ ಮತ್ತು ವ್ಯವಹಾರಜ್ಞರಾದ ಸುಶಿಕ್ಷಿತ ಜನರಿಂದಲೇ ನಡೆಯುತ್ತಿರುವದು. ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಹುಟ್ಟಿಸಿ ಮತ್ತು ನೈತಿಕ ಉನ್ನತಿಯನ್ನುಂ ಟುಮಾಡಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ಎಲ್ಲರೂ ತಮಗೆ ಬೇಕಾಗುವ ಬಾರದಾನ, ಸಿಮೀಂಟ, ಹತ್ತೀಕಾಳು, ಜೀವ ಜಿನಸಿ ವಸ್ತುಗಳನ್ನು ನಮ್ಮ ಮಧ್ಯಸ್ತರವಾಗಿ ನಿಗರದಿಂದ ಕೊಂಡುಕೊಳ್ಳಬೇಕಾಗಿ ವಿ ಹಾಗೂ ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತೀಕಾಳು ಹುರುಳಿ ವಗೈರೆ ಮಾಲನ್ನ ಸಂಗ್ರಹ ಮಾಡುವದು ಹೆಚ್ಚು ಲಾಭಕರವಿದೆ. ಕಾರಣ ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು ನಮಗೆ ಕೊಡುವದು ಹೆಚ್ಚು ಲಾಭಕರವಿದೆ. ಕಾರಣ ತಮಗೆ ಬೇಕಾದ ಮಾಲನ್ನು ಯೋಗ್ಯದರದಿಂದ ಖರೀದಿಮಾಡಿ ಸಂಗಡವಾಗಿ ಕಳುಹಿಸಿ ಕೊಟ್ಟು ಲೇವಿಯಿಂದ ಖರೀದಿ ಮಾಡಲಿಕ್ಕೆ ತಿಳಿಸುವಲ್ಲಿ ಯೋಗ್ಯದರದಿಂದ ಖರೀದಿಸಿ ಇರುವವರಲ್ಲಿ ಬರುವನು ಈ ಸುಸಂಧಿಯನ್ನು ಸ್ವಾರ್ಥಕ ಮಾಡಿಕೊಳ್ಳಬೇಕೆಂದು ವಿನಂತಿ ಮತ್ತು ತಮ್ಮ ರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯು ಹತ್ತಿ, ಅರಳೆ, ಗೋದಿ, ಜೋಳ, ಶೇಂಗಾ ವಗೈರೆ ಯಾ ವತ್ತು ತರಹದ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾ ಸ್ರಯ ಕೊಡಬೇಕೆಂದೂ ಮತ್ತು ತಾವೂ ಲಾಭಹೊಂದಬೇಕೆಂದೂ ಇಚ್ಛಿಸುತ್ತೇವೆ

ತಮ್ಮ

ಗದಗ
ಅಂಗಡಿ ನಂ ೧೭೩೩
ಕಾಟನ್ ಮಾರ್ಕೆಟ ರೋಡ

ರಾ ಸಾ ಲಿಂಗನಗೌಡಾ ಪಾಟೀಲ, ಚೇರಮನ್ನ
ಲಕ್ಷ್ಮಪ್ಪಾ ಗೋಕಿಸಪ್ಪ ಸಾಹುಕಾರ ಮೈದೂರ ಅಂತರವಳ್ಳಿ
ವೆಂಕರಡ್ಡಿ ಕೃಷ್ಣರಡ್ಡಿ ಇನಾಮತಿ ಅಸುಂಡಿ, ಗದಗ
ಭ್ಯಮನಗೌಡಾ ಪಾಟೀಲ, ಹಾಯಕೋರ್ಟ ವಕೀಲ ಧಾರವಾಡ
ಸ ರಡ್ಡಿ ತಿಮ್ಮರಡ್ಡಿ ಕಾಲವಾಡ ಮ್ಯಾನೇಜರ, ರಡ್ಡಿ ಬ್ಯಾಂಕ ಧಾರವಾಡ

ಸೂಚನೆ:— ವಿಮೆ ಇಳಿಸುವಲ್ಲಿ ಮಾಲಿನ ಮೇಲೆ ಒಪ್ಪಿಕ್ಕಿಂತ ಹೆಚ್ಚಿಲ್ಲದಷ್ಟು ರಕಮು ಆಗ ರು ಕೊಡುವದರಲ್ಲಿ ಬರುವದು. ಹೀಗೆ ಬಡ್ಡಿ ಶಕಡೆ ೧೦೦ಕ್ಕೆ ೧ ತಿಂಗಳಿಗೆ ೧ ರಕಮಕ್ಕಿಂತ ಮೀರದಷ್ಟು ಬಡ್ಡಿ ಕೊಡಬೇಕಾಗುವದು. ಕೊಡಿಸುವದು ಆಸಾಮಿಗಳ ಇಚ್ಛೆಯ ಪ್ರಕಾರ, ಮಾರ್ಗದಲ್ಲಿ ಖಾಸಗಿ ರಿ ಲ್ಲದ ಗೋದಾಮು ಇಲ್ಲದೆ ಗದಗ ಕಾಟನ್ ಮಾರ್ಕೆಟ್ಟ ಅಸೋಸಿಯೇಶನ್ನದ ಮುಖಾಂತರವಾಗಿ ಲಿಲಾವು ಯಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ಸಹಿತ ಮಾಹಿತಿಯನ್ನು ಕಂಪನಿ ಆಫೀಸಿನಲ್ಲಿ ತಿಳಿದುಕೊ ಳ್ಳಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ಹಿಂ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ ಭಾವಸಾರ ಕ್ಷತ್ರಿಯ, ನಾಮದೇವ ಶಿಂಪಿ, ನೈಕಿ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಕಬ್ಬೇರ, ಒಡ್ಡರ, ಗೊಲ್ಲರ, ಈಳಿಗೇರ, ತೊಡೆವಾದ ಸಮಾಜಗಳ ಮತ್ತು ಅಸ್ಪೃಶ್ಯ ಕ್ರಿಶ್ಚನರ ಲಮಾಣಿ ಮೊದಲಾದ ನಿಕೃಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, ರಾಜ ಕೀಯ ವಿಷಯ ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲ ಸಾಧನವಾದ ಶಿಕ್ಷಣ ಪ್ರಸಾರ ಮಾಡಿ, ಹಿಂ ದುಳಿದ ಸಮಾಜಗಳನ್ನು ಮುಂದಕ್ಕೆ ತಳ್ಳುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ಭಾಗ ಬಹುಸಂಖ್ಯಾಕ ಸಮಾಜಗಳ ಸರ್ವ ಅಡಚಣಿ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧ್ಯೇಯವು.

ಮೊಂಬರರು

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾ ವಿ, ಕಾರವಾರ ಹಾಗೂ ನೈಜಾಮ ಪ್ರಾಂತ ಮೊದಲಾದ ಬ್ರಿಟಿಶ ಜಿಲ್ಹೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಿಲ್ಲದ ವಯಸ್ಸಿನ ಸ್ತ್ರೀಪುರುಷರು ಅಳಗೆ ಕಾಣಿ ಸಿದಂತೆ ಆಯಾ ತರಗತಿಯ ಪ್ರತಿಗೆ ಅವರಿಗೆ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರಾಗಬಹುದು.

ಆಶ್ರಯದಾತರು:— ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆ ಇಲ್ಲದಷ್ಟು ದೇಣಿಗೆಯನ್ನು ಕೊಡ ತಕ್ಕ ವರು.

ದಾತೃಗಳು. ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡ ತಕ್ಕವರು.

ಆಜೀವ ಸಭಾಸದರು:— ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಸಾಧಾರಣ ಸಭಾಸದರು:— ದುವವರು. ಕೊ ೧ ನೇ ತರಗತಿ:— ಕನಿಷ್ಟ ೫ ರೂ ವಾರ್ಷಿಕ ವರ್ಗಣಿ
- ೨ ನೇ ತರಗತಿ:— ಕನಿಷ್ಟ ೨ ರೂ ವಾರ್ಷಿಕ ವರ್ಗಣಿ ಕೊಡುವವರು
- ೩ ನೇ ತರಗತಿ:— ಕನಿಷ್ಟ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.
- ೪ ನೇ ತರಗತಿ:— ಕನಿಷ್ಟ ೪ ಆಣೆ ವಾರ್ಷಿಕ ವರ್ಗಣಿ ಕೊಡುವವರು

ಹಿಂದುಳಿದ, ಬಂಧುಭಗಿನಿಯರು. ಅವಶ್ಯತೀವ್ರ ಸಂಘದ ಮೆಂಬರರಾಗಬೇಕೆಂದು ಒಕ್ಕೇ ಆಗ್ರಹದ ವಿನಂತಿಯುಟ

ದೇವನಗೌಡ ಲಿಂಗನಗೌಡ ಪಾಟೀಲ,
ಬಿ ಎ ಎಲ್ ಎಲ್. ಬಿ ಹಾಯಕೋರ್ಟ ವಕೀಲ, ಧಾರವಾಡ
ಸೆಕ್ರೆಟರಿ.

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ಮಾರ್ಗೇಜಿನ ಮೇಲೆ

ಗಿರಣಿಯ (ಶೇರ್ಸ) ಮತ್ತು ದಿ ಬ್ಯಾಂಕ ಆಫ್ ಬರೋಡಾ ಲಿಮಿಟೆಡ್ (ಶೇರ್ಸ) ಸಿಗುವಷ್ಟು ಪ್ರತ್ಯು ತ್ತರದ ಸಲುವಾಗಿ ಬಂದು ಅಥವಾ ಪೋಸ್ಟ ಸ್ಟಾಂಪು ಕಳಿಸಿ ಕೊಡ್ರಿ. ದೊಡ್ಡ ದೊಡ್ಡ ಶಹರಗಳಲ್ಲಿ ಹಗಾ ಕಮೀಶನ್ನದ ಮೇಲೆ ಕೆಲಸ ಮಾಡುವರು ಬೇಕು.

ಪತೆ ಮಿನಿಲೆಂಡ

ಟೆಲಿಫೋನ,
ಫೋನ ನಂಬರ

ಶ್ರೀ ಡಿ ಘಾಟಿಪಾಂಡೇ (ಬೆಂಕರ
ಕೇದಾರ ಬಾಗ ಗೋಲ್ಡ ಮೊಹಲ್ಲ ಮುಂದೆ
ಪೋಸ್ಟ ಬಾಕ್ಸ ನಂಬರ ೫೫೨೧,
ದಾದರ, ಬೊಂಬೈ

(೧) ರಾಣೆಬೆನ್ನೂರ (೨) ಹಿರೇಕೇರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿನ ಶ್ರೀಶ ಶಂಕರ ಜೋಶಿ ಇವರನ್ನು ನಾವು ಏಜಂಟರನ್ನಾಗಿ ನೇಮಿಸಿದ್ದೇವೆ. ಈ ನಾಲ್ಕು ತಾಲೂಕಿನ ವಹಿವಾಟವನ್ನು ಇವರ ಹತ್ತಿರ ಮಾಡುವದಕ್ಕೆ ಅಡ್ಡಿಯಿಲ್ಲ.

THE UNITED KARNATAK INSURANCE COMPANY
LTD. DHARWAR

ಸುಸಂಧಿ ಸ್ವರಿನಾಡಿ ಕಳೆದುಕೊಳ್ಳಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಇಂಡಿಯನ್ ಕಂಪನಿ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು

೧ ಜೋಶಿರಾವ ಶ್ರೀನಿವಾಸರಾವ ಪ ಸುನಕಾರ ಬಿ ಎ ಎಲ್ ಎಲ್ ಬಿ ಸರಕಾರಿ ವಕೀಲ ಪ ತ್ತು ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಚೇರಮನ
೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಉರುಟಗಿ ಎಲ್ ಎಮ್ ಎಂಡ ಎಸ್ ಗದಗ
೩ ವಿ॥ ಶ್ರೀನಿವಾಸ ರಾ ಶಿ ಸಗರೂರ ಮುನಸಿಪಾಲಿಟಿಯ ಬಿ ಎ ಅಕ್ಕಿಗೇರಿ
೪ ಮಿ॥ ರಾಮಚಂದ್ರ ರಂಗ ಕ ಸಾ ಶ್ಯಾನ ವಕನವಾರ ಹಳೆ ಹುಬ್ಬಳ್ಳಿ
೫ ರಾ॥ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ ಎಲ್ ಬಿ ವಕೀಲ ಗದಗ
೬ ಮಿ॥ ರ ಘವ [illegible] ಹುಬ್ಬಳ್ಳಿ ವಕೀಲಬೈಲಹೊಂಗಲ
೭ ವಿ॥ [illegible] ಬಿ ಎ ಎಲ್ ಎಲ್ ಬಿ ವಕೀಲ ಹುಬ್ಬಳ್ಳಿ
೮ ರಾ॥ ರಾಮರಾವ ಪ ಒಂಟಿರಾವ ಬಿ ಎ ಎಲ್ ಎಲ್ ಬಿ ವಕೀಲ ಧಾರವಾಡ
೯ ವಿ॥ ಅಬ್ದುಲ ಕರಿಮ ಅಮೀನ ಸಾ ಹಣಗಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹಿಂದೆ ಇನ್‌ಶ್ಯೂರನ್ಸ ಕಂಪನಿಯು ಇದೇ ಮೊದಲನೇದು. ಈ ಕಂ ಪನಿಯ ಡಾಯರೆಕ್ಟರರು ಮತ್ತು ಕೆಲಸ ನಡೆಸುವವರೂ ಕನ್ನಡಿಗರೇ ಆಗಿರುತ್ತಾರೆ. ಪರದೇಶಿ ಕಂಪ ನಿಗಳಿಗೆ ವಿಮೆ ಇಳಿಸಿ ಕರ್ನಾಟಕದ ಹಣವನ್ನು ಹೊರಗೆ ಕಳಿಸ [illegible] ಈ ಕಂಪನಿಗೆ ಸಹಾನುಭೂತಿಯನ್ನು [illegible]

ಕಂಪನಿಯ ಕೆಲಸಗಳು ಕರ್ನಾಟಕದ ತುಂಬಾ ಇವೆ ಮತ್ತು ವಿಮೆ ಇಳಿಸುವ ಕೆಲಸವು ಎಲ್ಲ ತಿಂಗಳ ೧ನೇ ತಾರೀಖಿನಿಂದ ಪ್ರಾರಂಭವಾಗುವದು. ಕರ್ನಾಟಕದ ಎಲ್ಲ ದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು ಏ ಜೆಂಸಿಯನ್ನು ಕಂಪನಿ [illegible] ಕಮಿಶನ ದರಗಳು ಲಾಭಕಾರವಾಗಿ [illegible] ಏಜಂಟರಾಗಲಿಚ್ಛಿಸುವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬೇಕು

K. L. Hulgolkar.
ಸೆಕ್ರೆಟರಿ
ಯು. ಕ ಇ ಕ ಲಿ. ಧಾರವಾಡ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ — ಮುಂಜಾನೆ ೧೧ ರಿಂದ ಮಧ್ಯಾಹ್ನ ೩ ೩೦ ರ ವರೆಗೆ ಶನಿವಾರ ಮುಂಜಾನೆ ೧೧ ರಿಂದ ೧ ರ ವರೆಗೆ

ಚಾಲೂ ಖಾತೆಗಳ — ಪಗಾರ ಸಲುವಾಗಿ ತೆಗೆಯಲ್ಪಡುವವು

ಸೇವಿಂಗ್ಸ ಬ್ಯಾಂಕು — ಒಂದು ರೂಪಾಯಿಂದ ತೆಗೆಯಲ್ಪಡುವದು ಬಡ್ಡೀ ದರ ೩ ರೂ.

ಮುದತಿ ಠೇವುಗಳ. — ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು ಬಡ್ಡೀ ದರ [illegible]

ಬೇರೆ — ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ [illegible] ಮತ್ತು ಧಾನ್ಯಗಳ ಆಡವಿನ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟು ಗಳ ಪ ನಿಯಮಿತ ಕಂಪನಿಯ ಶೇರುಗಳ ನಫೆ ಸೂಲು ಮಾಡಿ ಆಯಾ ಗಿರಾಕಿ ಖಾತೆಯಲ್ಲಿ ಇಡುವದು ಅಥವಾ ಕಳಿಸಿಕೊಡುವದಲ್ಲಿಯೂ ಮತ್ತು ಯೋಗ್ಯ ಆಪಿಶನ್ ತಕ್ಕಂತೆ ಗಿರಾಕಿಗಳಿಗೆ ಅವುಗಳ ಖರೀದಿ ಮತ್ತು ವಿಕ್ರಿ ಮಾಡುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೆ ಳ್ಳುವ ಮತ್ತು ಚೆಕ್ಕುಗಳನ್ನು ಮಾರುವದ ಲ್ಲಿಯೂ ಬರುವದು

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಒದಗುವ ಸಾಹಲಿಕ್ಕೆ ಎಲ್ಲ ತರದ ಅಧಿಕಾರವಿರುವದು ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್ ರಿಕಾರ್ಟ
ಏಜಂಟರು.

ಶರೀರವೇ ಬಾಕುಕ್ಷಯವಾಗಿ ಪ್ರಾಣ ಶಕ್ತಿಗುಂದಿ ಆತ ಮನುಷ್ಯನಿಗೆ ಮನ್ಮತಾರುಣ್ಯದಲ್ಲಿಯೇ ನಿ ರಾಗ ಸಂಸಾರ ಸುಖತ್ತ, ದೊರೆಯದೇ ಸದುತ್ಸಾಹ ನಿರಾಶೆಗಳು ಹುಟ್ಟುತ್ತವೆ. ಇಂಥ ಮನುಷ್ಯರ ಧಾ ತುಕ್ಷಯರೋಗವು ಹೋಗಿಸಿ, ಪೂರ್ಣ ಪುರುಷತ್ವವನ್ನು ತಂದು ಕೊಡುವಂಥದನ್ನು ವೈದ್ಯರಾಜ ಶ್ರೀ. ಕೇಶವ ಶಾಸ್ತ್ರೀ ವಿಜಾಪುರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂದು.

ಆಯುರ್ವೇದದಲ್ಲಿ ಹೇಳಿದ ವಸ್ತುಗಳಿಂದಲೇ ಈ ಸಸ್ತಿ ಹಾಗು ತೀವ್ರ ಗುಣಕೊಡುವ ಔಷಧವು ತಯಾರಾಗಿದೆ. ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು ಶಾ ಪರ ಸತ್ವಹೀನ ದೇಹ, ಅಶಕ್ತತ್ವಬಾನ, ನಿಸ್ತೇಜತನವನ್ನೂ ಹೇಡಿತನವನ್ನೂ ಅಂಜುಬುರುಕತನ, ಅಕಾಲಮು ಪ್ಪರ ಸತ್ವಹೀನ ದೇಹ, ಸ್ವಪ್ನಾವಸ್ಥೆ, ಶೀಘ್ರಪತನ ಕ್ಷೀಣ, ಆಲಸ್ಯ, ಕಣ್ಣು ಕೈಕಾಲು ಉರಿಯೋಣ, ಉರಿಮೂತ್ರ, ಇಂದ್ರಿಯದ ಉರಿ ಪಿತ್ತವಿಕಾರ, ಅಗ್ನಿಮಾಂದ್ಯ ನಿದ್ರಾನಾಶ, ಮಲಾವರೋಧ, ಗೆಣ್ಣು ನೋಯಿಸೋಣ, ಟೊಂಕಸೂಲಿ, ಎಲು ದರದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾ ವೀರ್ಯ ಮೊ ದಲಾದ ಸಪ್ತ ಧಾತುಗಳು ವೃದ್ಧಿಯಾಗಿ ಇಂದ್ರಿಯ [illegible] ನವವಾಗಿ ದೇಹದಲ್ಲಿ ಶಕ್ತಿಯೂ ಸ್ಫೂರ್ತಿ ಬಲವೂ ನಿಜವಾದ ಸಂಸಾರ ಸುಖವು ಸಿಗುತ್ತದೆ. ಹೆಂಗಸರ ಮುಟ್ಟಿನಕೂಟ, ಬಿಳುಪು, ಹುಣ್ಣು ಹುಟ್ಟುತ್ತದೆ. [illegible] ಭಾರತದ ಎಲ್ಲ ವಿಕಾರಗಳು ಬೇಗನೆ ಪ್ರಕೃತಿಯು ಸ ಳಕಿಪ್ರದರ ಮೊದಲಾದ ಸಂತತಿಗೆ ಬಾಧಕವಾದ ಭಾರತದ ಎಲ್ಲ ವಿಕಾರಗಳು ಬೇಗನೆ ಪ್ರಕೃತಿಯು ಸು ಧಾರಿಸುತ್ತದೆ. ಈ ಅಮೃತಸಿಂಧುವನ್ನು ಮುಂಜಾನೆ ಅರ್ಧತೊಲೆ ಮತ್ತು ಸಂಜೆಗೆ ಅರ್ಧ ತೊಲೆ ಕೊಡಬೇಕು. ಹತ್ತುದಿನಗ ಳ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ತೊಗೋಬೇಕು. ಹತ್ತುದಿನಗ ಳವರಿಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ. ಹಾಗು ಒಂದು ದಂಟಿಲಿ ಸ್ರಕ್ಶುಟಿ. ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ
ವಿಜಾಪೂರ

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಸಳ್ಳೇರಿ.

ವರ್ಷ ೨೧) ಧಾರವಾಡ ಬುಧವಾರ ತಾರೀಖು ೯ ನೇ ಜುಲೈ ೧೯೩೦ (ಸಂಚಿಕೆ ೧೫೦

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲಿಯುವ ಸಂಪೂರ್ಣ ಶಿಕ್ಷಣ ಕೊಡುತ್ತೇವೆ. ಕಟ್ಟೆ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಫೀ ೪೫ ಹಾಗೂ [illegible] ಟೇಲರಿಂಗ ಫೀ ೧೫ [illegible] ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಜೀವಂತ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕಡಿಮೆ ಪಕ್ಷ ಐವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಅರೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟ ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮನ್ಮಥಕಾರ್ಯದಲ್ಲಿಯೂ ನಿಜ [illegible] ವಾಗಿ ಸಂಸಾರಸುಖವು, ದೊರೆಯದೇ ನಿರುತ್ಸಾಹ ನಿಂದಕಗಳು ಹುಟ್ಟುತ್ತವೆ. ಇಂಥ ಮನುಷ್ಯರ ಧಾತುಕ್ಷಯದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ತಂದು ಕೊಡುವಂತಹುದ್ದು. ವೈದ್ಯರಾಜ ಶಿ. ಕೇಶವ ಶಾಸ್ತ್ರೀ ಮಿರಜಕರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿಯಾಗಿಯೂ ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ. ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು, ಪೌರುಷತ್ವಹೀನ ದೇಹ, ಅನಿಶ್ಚಿತಸ್ವಭಾವ, ನಿಸ್ತೇಜತನವನ್ನೂ, ಹೇಡಿತನವನ್ನೂ, ಅಂಜುಬುರುಕತನ, ಅಕಾಲವೃದ್ಧಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕೈಕಾಲುಗಳುರಿಯೋಣ, ಉರಿಮೂತ್ರ, ಇಂದ್ರಿಯದ ಉರಿ ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, ಬೆನ್ನು ಸೊಂಟ ಸೋಲಿಕೆ, ಗೊಂಕಳೂರಿ, ಎಲದಂದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾ, ವೀರ್ಯ ಮೊದಲಾದ ಏಳು ವೀರ್ಯಗಳು ವೃದ್ಧಿಯಾಗಿ ಇಂದ್ರಿಯ [illegible] ಅಶಕ್ತತೆಯು ನಾಶವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ಸಹಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟಿನಶೂಲೆ, ಕೆಂಪು, ಬಿಳಿಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧತೊಲೆ ತೆಗೆದುಕೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ತೆಗೆದುಕೊಳ್ಳಬೇಕು. ಹತ್ತುದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಫುಕಟ. ಅಂಚೆ ಹಾಗು ಪ್ಯಾಕಿಂಗ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ
ನಿಪ್ಪಾಣಿ ಜಿ.

ದಿ ಧಾರವಾಡ ಅರ್ಬನ ಕೋ-ಆಪರೆಟಿವ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಠಾರ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನು [illegible] ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ವಿ. ಕೆ. ಚಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಜಾಹೀರ ನೋಟೀಸು

ಇಮಾರತಿ ಇಟ್ಟಿಗೆಗಳ [illegible]ರ

—೦○*()○—

ಸರ್ವತ್ರ ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲೆಗಳೂ ಮತ್ತು ವ ಹೊನ್ನಿ ಹಿಡ್ಡ್ಯಾ ಪಟ್ಟಿಸಂ ನಾಟುಗಳು

ಸಾಗವಾನಿ ರ್ಯಾ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ಕೈಯಾರ ಸಿಗುತ್ತವೆ

ಇದರ ಮೇರೆಗಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಬೇಸಗ್ಯ ದರದಿಂದಾ ಕೊಡತಿ ಕೊಡುತ್ತೇನೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವವರಿಗೆ ತಯಾರಿ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಶೆಟ್ಟಿ.
ಟಿಂಬರ ಮರ್ಚಂಟ.
ಮಾರ್ಕೆಟ ಧಾರವಾಡ

ನೋಟೀಸು

ಗಂ| ಭಾಂ| ಕಮಲಾಬಾಯಿ ಭ್ರತಾರ ಬಿಂದಾಚಾರ್ಯ ಕವಲಗಿ ಸಾ|| ಮದಿಹಾಳ, ಶಹರ ಧಾರವಾಡ ಇವರಿಗೆ-

ಜಾನಕಿಬಾಯಿ ಭ್ರತಾರ ರಾಮಾಚಾರ್ಯ ಕವಲಗಿ ಭ್ರಾಂತಿನ್ನ ಗಾರ್ಡಿಯನ್ ಶ್ರೀನಿವಾಸಾಚಾರ್ಯ ಬಾಳಾಚಾರ್ಯ ಕೂಸನೂರ ಸಾ|| ಧಾರವಾಡ ಬರದು ಕೊಡುವ ನೋಟೀಸು ಯೇನಂದರೆ-

ಕೆಳಗೆ ಬರೆದ ಆಸ್ತಿಗಳು ರಾಮಾಚಾರ್ಯರ ಶ್ರೀನಿವಾಸಾಚಾರ್ಯರ ಕವಲಗಿ ಇವರು ನಿನ್ನಸಂಬರ ನೋಟೀಸಿಂದಾ ಗಾರ್ಡಿಯನ್ ನೇಮಣೂಕ ಆದ ಲಾಗಾಯತ ನಾನು ಪ್ರತ್ಯಕ್ಷ ಕಬಜಾ ನಾತೇದಿಂದಾ ಪೂರಾ ಆಸ್ತಿ ವಹಿವಾಟ ಮಾಡುತ್ತೇನೆ ಅದರ ವಿವರ

೧ ಧಾರವಾಡ ಶಹರ ಮದಿಹಾಳದಲ್ಲಿ ಇರುವ ಮನಿ ಸಿಟಿಸರ್ವೆ ನಂಬರ ೩೪೭/M. D. ನೇದ್ದು ಪೂರಾ ಮನಿಯನ್ನು ಬಿಟ್ಟು ಕೇಶವೋ ಶ್ರಾ ಮಹೇಂದ್ರ ಸೂರಣಗಿ ಎಂಬುವವನಿಗೆ ಭಾಡೇ ಕೊಟ್ಟಿದ್ದು ಭಾಡೆಪತ್ರ ಸಹಾ ಬರೆಕೊಟ್ಟಿರುತ್ತಾನೆ ಈವರೆಗೂ ಭಾಡೇದಾರನ ತಾಬಾನೇ ಅದೆ.

೨ ಧಾರವಾಡ ಶಹರ ಮದಿಹಾಳದಲ್ಲಿ ಧಾರವಾಡ ಮು. ಸರ್ವೆ ನಂಬರ ೫೭/೩ ಇದರ ಸಿಟಿ ಸರ್ವೆ ನಂಬರ ೩೪೮/M. D. ನೇ ಪೂರಾ ಜಮೀನಿನನ್ನು ಬಿಟ್ಟು ಮಲ್ಲಪ್ಪಾ ಲಕ್ಷ್ಮಣ ಸೂರ್ಯವಂಶಿ ಎಂಬುವವನಿಗೆ ಲಾವಣಿ ಕೊಟ್ಟು ಲಾವಣಿ ಪತ್ರ ಸಹಾ ಬರೆಕೊಟ್ಟಿರುತ್ತಾರೆ ಲಾವಣಿದಾರ ನಾತೇದಿಂದ ಅವನ ತಾಬಾದಲ್ಲಿಯೇ ಅದೆ

ಈ ಪ್ರಕಾರ ಹಕೀಕತು ಇದ್ದು ಸದರ ಮನಿಯ ಭಾಡೇದಾರನನ್ನು ಫಿತೂರಿ ಮಾಡಿಕೊಂಡು ಈಗ ಸದರ ಮನಿಯಲ್ಲಿ ಇದ್ದು ನಮ್ಮ ಕಬಜಾ ತಪ್ಪಿಸುವ ದುಷ್ಟ ಹೇತುದಿಂದಾ ಇದ್ದಂತೆ ತೋರುತ್ತದೆ ಮತ್ತು ಈ ಮನಿಯಲ್ಲಿಯ ನಡುವ ನೆಯ ಪಶ್ಚಿಮ ಕಡಿಯ ಕೋಣೆಯೊಳಗೆ ಮೃತ ರಾಮಾಚಾರ್ಯರ ಮಹತ್ವ ಸಾಮಾನುಗಳನ್ನು ಇಟ್ಟು ಕೀಲಿ ಹಾಕಿರುತ್ತೇನೆ ಈ ಮಜಕೂರು ಭಾಡೇದಾರಗೆ ಗೊತ್ತು ಅದೆ ಭಾಡೇದಾರನ ಮಿತ್ರಾಫಿಯಿಂದ ನೀವು ಅವುಗಳನ್ನು ವಿಲೇವಾಟ ಮಾಡುವ ಸಂಭವವದೆ ಹಾಂಗು ಸದರಿ ಲಾವಣಿದಾರಗೆ ಜಮೀನು ಸಾಗ ಮಾಡಲಿಕ್ಕೆ ಹರಕತ ಮಾಡುತ್ತೀರಿ ಅಂತ ತಿಳಿದದೆ ನೀವು ಗೈರ ಹಕ್ಕಿನಿಂದಾ ಸದರ ಭಾಡೇದಾರನ ಮಿತ್ರಾಸಿಯಿಂದ ಸದರ ಮನಿಯಲ್ಲಿ ಗೈರ ಕಾಯದೇಶೀರ ರೀತಿಯಿಂದಾ ಇದ್ದ ಬಗ್ಗೆ ಹಾಂಗು ಸದರ ಕೋಣೆಯೊಳಗಿನ ಮಾಲು ವಿಲಾಲ ಮಾಡಿದರೆ ಮತ್ತು ಗೈರ ಹಕ್ಕಿನಿಂದಾ ಸದರ ಲಾವಣಿದಾರನ ವಹಿವಾಟಿಗೆ ಹರಕತ ಮಾಡಿದರೆ ನಿಮ್ಮ ಮೇಲೆ ದಿವಾಣಿ ವ ಫೌಜದಾರಿಯಲ್ಲಿ ಕೆಲಸ ನಡಿಸುವದಾಗ್ಯೆ ಇರುವದು ನೀವು ನಮ್ಮ ಆಪ್ತರೊಳಗಿನವರು ಇರುವದರಿಂದ ನಿಮಗೆ ಯಾವ ನುಕಸಾನ ವ ಅಪಮಾನ ಆಗಬಾರದೆಂತಾ ಈ ನೋಟೀಸಿನಿಂದಾ ತಿಳಿಸುತ್ತೇನೆ ಈ ನೋಟೀಸು ಮುಟ್ಟಿದ ಎಳು (೭) ದಿವಸದೊಳಗೆ ಸದರ ಮನಿ ಬಿಟ್ಟು ಹೋಗಬೇಕು ಹಾಂಗು ಲಾವಣಿದಾರನ ವಹಿವಾಟಿಗೆ ಹರಕತ ಮಾಡಬಾರದು ಈ ರೀತಿ ನೀವು ಮಾಡದೆ ಇದ್ದರೆ ಮುಂದೆ ಕೆಲಸ ನಡಿಸುವದರಲ್ಲಿ ಒದಗುವದು ಅದರ ಬಗ್ಗೆ ನಮಗೆ ಹತ್ತುವ ಖರ್ಚು ನಿಮ್ಮ ಮ್ಯಾಲೆ ಹಾಕಿಸಿ ತೆಗೆದುಕೊಳ್ಳುವದರಲ್ಲಿ ಬಂದೀತು ತಿಳಿದಿರಬೇಕು ತಾರೀಖು ೩-೭-೧೯೩೦ ಇಸ್ವಿ

ಸಹಿ- ಜಾನಕಿಬಾಯಿ ಭ್ರತಾರ ರಾಮಾಚಾರ್ಯ ಕವಲಗಿ, ಭ್ರಾಂತಿನ್ನ ಗಾರ್ಡಿಯನ್ ಶ್ರೀನಿವಾಸಾಚಾರ್ಯ ಬಾಳಾಚಾರ್ಯ ಕೂಸನೂರ

ಚಂದಾದಾರರಿಗೆ ಸೂಚನೆ

—(೦)—

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗಿದ್ದು ನಿಮ್ಮ ಮತ್ತು ಪತ್ರದ ಚಂದಾದಾರರು ವಹಿಸಿದ ಕೃಪೆ ಇದ್ದಂತೆ ಈ ವರುಷವೂ ಚಂದಾದಾರರು [illegible] ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ದುರಸ್ತ ವಿದ್ಯೆಗಳಿಯಲು ಜನರು ಈವರೆಗೆ ಪುಣೆ, ಮುಂಬಯಿಗೆ ಹೋಗಿ, ಒಂದಕ್ಕೆ ನೂರು ರೂಪಾಯಿ ಖರ್ಚು ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ ಪ್ರಯೂ ನಿಯಮಿತ ಜನರನು ತೆಗೆದುಕೊಳ್ಳಬೇಕಾಗಿದ್ದರಿಂದ ಕಲಿಯುವವರ ಅನುಕೂಲವಾಗಬೇಕೆಂದು ಮುಂದಾಗಿ ಈ ಜಾಹೀರಾತು ಹಚ್ಚಿದ್ದೇವೆ. ಜುಲೈ ಆಗಸ್ಟದೊಳಗಾಗಿ ತಮ್ಮ ಹೆಸರನು ತಿಳಿಸತಕ್ಕದ್ದು. ಅದರಿಂದ ಕೂಡಲೇ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಿಕೊಳ್ಳಬೇಕು.

ಪ್ರೊ. ಪ್ರಿ. ಎಸ. ಇಟಿಗಿ.
ಮುನಸಪೋರ್ಡನಹತ್ತರ, ಧಾರವಾಡ

ನೋಟೀಸಿನ ದರಗಳು

ಸಿಂಗಲ್ ಕಾಲಮಿನ ಪ್ರತಿ ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದಾಣೆ [illegible] ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡಾಣೆ : [illegible], ಮ್ಯುನಿಸಿಪಾಲಿಟಿ, ಲೋಕಲಬೋರ್ಡ, ಕೆ[illegible] ಕ್ಲಬ್ಸ ಮುಂತಾದ ಸಾರ್ವಜನಿಕ ನೋಟೀ[illegible] ವ್ಯಕ್ತಿಗಳಿಗೆ ಮೂರಾಣೆ ಇಂಗ್ಲಿಷಿನಿಂ[illegible] ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ದ[illegible] ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ [illegible] ಜಾಹಿರಾತುಗಳನ್ನು ಕೊಡುವವರು ಕೆಳಗಿನ [illegible] ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ರ್ಯ ಕ[illegible] ಲಕ್ಷ್ಮಣಾಚಾರ್ಯ ಬಾಳಾಚಾ[illegible]
ಜಯ [illegible] ಧಾರವಾಡದಲ್ಲಿ ತಮ್ಮ ವಿ[illegible]
ಮಾಡಿ [illegible] ಮುದ್ರಿಸಿ ಪ್ರಸಿದ್ಧ[illegible]

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಆಷಾಢ ಶುದ್ಧ ೧೪

ಸತ್ಯಾಗ್ರಹದ ಕಿಚ್ಚು ಹೆಚ್ಚಿತು!!

ಪ್ರೆಸಿಡೆಂಟರು ಕಾಯದೆಭಂಗದ ದೀಕ್ಷೆ ತಕ್ಕೊಂಡರು.

ನಾಮದಾರ ಬೆಳವಿಯವರು ಮೆರವಣಿಗೆಯಲ್ಲಿ ಸೇರಿದರು.

ಇಂಗ್ರೇಜಿ ಸರಕಾರದ ದಬ್ಬಾಳಿಕೆಯು ದಿನಾಲು ಹೆಚ್ಚುತ್ತಲಿರುವಂತೆ, ಸತ್ಯಾಗ್ರಹದ ಕಿಚ್ಚು ಹೆಚ್ಚುತ್ತಲಿರುವದು. ಸರಕಾರದವರು ಎಣ್ಣೆಯಲ್ಲಿ ನೀರುಹಾಕಿ, ಆರಿಸುವದರ ಬದಲು ಎಣ್ಣೆಯನ್ನೇ ಹಾಕುತ್ತಿರುವದರಿಂದ, ಉರಿಯು ಮತ್ತಷ್ಟು ಉಗ್ರವಾಗಿ ಉರಿಯದೆ ಇನ್ನೇನು ಮಾಡೀತು? ಸಾಯಮನ್ನ ರಿಪೋರ್ಟನ್ನು ಬದಿಗೆ ಸರಿಸಿ, ರಾವುಂಡಟೇಬಲಿನ ಬಗ್ಗೆ ಸರಕಾರವು ತನ್ನ ಧೋರಣವನ್ನು ಜಾಹೀರ ಮಾಡುವಂಥ ಸಂಧಿಕಾಲದಲ್ಲಿ ಪಂಡಿತ ಮೋತಿಲಾಲರನ್ನು ಕೇವಲ ಝುಂಡಾ ಮೆರೆಸುವ ದರ್ಪದಿಂದ ಹಿಡಿದರು. ಮೊದಲು ದಸ್ತಗಿರಿ ಮತ್ತು ಶಿಕ್ಷೆ! ಅನಂತರ ಆರ್ಡಿನನ್ಸದಂಥ ಹುಕುಮೊಂಬದು ಲೋಕಚಮತ್ಕಾರವೇ! ಈ ಬೇಬಂದಶಾಹಿಯ ಬಗ್ಗೆ ಅಲಹಾಬಾದ ಹಾಯಕೋರ್ಟಿನಲ್ಲಿ ಅರ್ಜಿ ಮಾಡಿದ್ದು, ಅದರ ವಿಚಾರಣೆಯು ಬೇಗನೆ ಆಗತಕ್ಕದ್ದುಂಟು. ಸರಕಾರದ ಈ ಅನ್ಯಾಯದ ವರ್ತನದ ನಿಷೇಧವೆಂದು ಮತ್ತು ಸ್ವದೇಶದ ಹಿತವೊಂದು ಉಚ್ಚ ಭಾವನೆಯಿಂದ, ಪಂಡಿತ ಮಾಲವೀಯರವರು ಸರಕಾರದವರು ಬೇಕಾಯದೇಶೀರವೆಂದು ಜಾಹೀರ ಮಾಡಿದ ಕಾಂಗ್ರೆಸ ಕಮೀಟಿಯ ಮೆಂಬರರಾದಂತೆ ಜಾಹೀರ ಮಾಡಿದ್ದಾರೆ. ಇವರ ತರುವಾಯ ಈಗ ಲಂಡನದಲ್ಲಿದ್ದ ಪ್ರೆಸಿಡೆಂಟ ಪಟೇಲರಂಥ ೬೦ ವರ್ಷದ ವೃದ್ಧರಿಗೂ, ತರುಣರಂತೆ ಹುರುಪು ಹುಟ್ಟಿ, ಅವರು ತಮ್ಮನ್ನು ಕಾಂಗ್ರೆಸದ ವರ್ಕಿಂಗ ಕಮೀಟಿಯ ಮೆಂಬರರಾಗಿ ನೇಮಿಸಿಕೊಳ್ಳಬೇಕೆಂದು ಲಂಡನದಿಂದಲೇ ಶ್ರೀ ಪಟೇಲರಿಗೆ ತಾರಿನಿಂದ ತಿಳಿಸಿದ್ದಾರೆ. ಪ್ರೆಸಿಡೆಂಟ ಪಟೇಲರು ಹಿಂದಕ್ಕೆ [illegible] ಸ್ವರಾಜ್ಯ ದೇಶದಿಂದ ಸ್ವತಃ ಕಾಯದೆಭಂಗ ಮಾಡಿ, ಪದ್ದವಾರಿನ ಶಿಕ್ಷೆ ಅನುಭವಿಸಿದ್ದರು. ಆದರೆ ಅವರಿಗೆ ಈ ಮಧ್ಯದಲ್ಲಿ ಅಸಹಕಾರವು ಅನಿಷ್ಟವೆನಿಸಿತು. ಸಧ್ಯದ ಚಳವಳಿಯು ಸಂಪೂರ್ಣವಾಗಿ ಯೋಗ್ಯವಾಗಿದ್ದು, ಹಿಂಸೆಯಿಂದ ಕೂಡಿದ ದಬ್ಬಾಳಿಕೆಯು ತಮಗೆ ಒಪ್ಪಿಗೆಯಿಲ್ಲದ್ದಾಗಿರುತ್ತದೆಂದು ಪ್ರತ್ಯಕ್ಷ ಕೃತಿಯಿಂದ ತೋರಿಸಲು ವರ್ಕಿಂಗ ಕಮೀಟಿಯ ಮೆಂಬರರಾಗಿದ್ದಾರೆ. ಇವರ ತರುವಾಯ ಬರ್ಫದಂತೆ ತಣ್ಣಗಾಗಿರುವ ಬೆಳಗಾವಿಯ ನಾಮದಾರ ಬೆಳವಿಯವರೂ, ಬೇರೆ ವಕೀಲರೂ ಪಂಡಿತ ಮೋತಿಲಾಲರನ್ನು ಹಿಡಿದದ್ದರ ನಿಷೇಧವೆಂದು ಹೊರಟ ಮೆರವಣಿಗೆಯಲ್ಲಿ ಮುಂದಾಳುತ್ವವನ್ನು ವಹಿಸಿದ್ದರು. ಇವರಂತೆ ಹೊಸ ಹೊಸ ಜನರು ಕುಂಭಕರ್ಣನ ನಿದ್ರೆ ಮಾಡುತ್ತಿದ್ದವರು-ಸಹ-ಚಳವಳಿಯಲ್ಲಿ ಸೇರುತ್ತಿದ್ದು, ಸರಕಾರದವರು ಕಿಚ್ಚು ಬಡೆವಂತೆ ಅದರ ಕಿಡಿಗಳು ಹೆಚ್ಚೆಚ್ಚು ಹಾರಿ, ಹತ್ತರದ ಹುಲ್ಲನ್ನು ಹೊತ್ತಿಸುತ್ತಿರುವವು.

ಸತ್ಯಾಗ್ರಹಕ್ಕೆ ಜಯ.

ಹುಬ್ಬಳ್ಳಿಯವರು ಮಾಡದ್ದನ್ನು ಸವದತ್ತಿಯವರು ಮಾಡಿದರು.

ಸವದತ್ತಿಯಲ್ಲಿಯೂ ರಾಷ್ಟ್ರೀಯ ನಿಶಾನ ಹಚ್ಚುವ ದೊಡ್ಡ ಚಳವಳಿಯು ಕಳೆದೊಂದು ತಿಂಗಳಿಂದ ನಡೆದಿತ್ತಷ್ಟೇ; ಅಧ್ಯಕ್ಷ ಮಹಾಶಯರು ಅದನ್ನು ದಿನಕನ ವದಿನೆಯಂತೆ ಮುಂದೆ ಮುಂದೆ ಹಾಕುತ್ತ ಇದ್ದರು. ಊರವರು ಇದನ್ನು ಕೊನೆಗೆ ಖಟ್ಟಿಗೆ ಹಚ್ಚಿದರು. ದೊಡ್ಡ ಮೆರವಣಿಗೆ ತೆಗೆದರು. ಅದರಲ್ಲಿ ಐನೂರು ಸ್ತ್ರೀಯರೇ ಇದ್ದರು. ಅಧ್ಯಕ್ಷರು ನಾಡಗುಡಿಯನ್ನೇರಿಸದಿದ್ದರೆ- ತಾವೇ ನಿಶಾನೆ ಕಟ್ಟಬೇಕೆಂಬ ವೀರ ಪ್ರತಿಜ್ಞೆ ಮಾಡಿ ಮ್ಯುನಿಸಿಪಾಲಿಟಿಗೆ ಹೋದರು. ಈ ಸಂಕಟ ಕಂಡು ಅಧ್ಯಕ್ಷರು ಮೆಲ್ಲಗೆ ಜಾರಿಕೊಂಡು ಹತ್ತರವೇ ಇದ್ದ ಮನೆಯಲ್ಲಿ ಅಡಗಿಕೊಂಡರು. ಜನರು ಅಲ್ಲಿಗೇ ಹೋದರು. ತಾವೇ ಹಚ್ಚುವಂತೆ ಅಧ್ಯಕ್ಷರು ಒಣ ಮಾತಿನ ಸಂಬಿಗೆ ಹೇಳಿದರು. ಮಾತು ಸಾಕು ಕೃತಿಬೇಕೆಂದು ಜನರು ಸತ್ಯಾಗ್ರಹ ನಡೆಸಿದರು. ಅಧ್ಯಕ್ಷರ ಆಟ ನಿಂತಿತು. ಆಗ ಉಪಾಯಗಾಣದೆ, ಅಧ್ಯಕ್ಷರು ಬೇರೆ ಮೆಂಬರರನ್ನು ತಾವಿದ್ದಲ್ಲಿಗೆ ಕರಸಿಕೊಂಡು, ನಾಳೆ ಹತ್ತನೆಯ ತಾರೀಖಿನ ದಿವಸ ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂಬ ಠರಾವು ಮಾಡಿದರು.

ಸವದತ್ತಿಯಲ್ಲಿ ಶೇಂದೀ ಗಿಡದ ಖಟ್ಲೆ.

ಸರಕಾರಕ್ಕೆ ಸಾಕ್ಷೀದಾರರೇ ಸಿಗಲಿಲ್ಲ.

ಸವದತ್ತಿಯಲ್ಲಿ ಸರಕಾರೀ ಶೇಂದೀಗಿಡಗಳನ್ನು ಕಡಿದರೆಂದು ಪೋಲೀಸರು ವ್ಹಾಲಂಟಿಯರರ ಮೇಲೆ ಖಟ್ಲೆ ಹಾಕಿದ್ದರಷ್ಟೇ; ಇದರ ವಿಚಾರಣೆಯು ಹೋದ ಶುಕ್ರವಾರ ನಡೆಯುವದಿತ್ತು. ಸರಕಾರದ ದೃಷ್ಟಿಯಿಂದ ಆರೋಪಿಯಾದಂಥವರು ವಿಚಾರಣೆಗಾಗಿ ಕಚೇರಿಗೆ ಹೋಗುವಾಗ ಊರ ಜನರು ದೊಡ್ಡ ಮೆರವಣಿಗೆ ತೆಗೆದರು. ಸ್ತ್ರೀಯರು ಆರುತಿ ಬೆಳಗಿದರು. ಯಾವನೇ ಸಾಕ್ಷಿ ಹೇಳಲಿ, ಅವನ ಸಮಾಚಾರ ತಕ್ಕೊಳ್ಳಬೇಕೆಂದು ದಾರೀ ಹಿಡಿದು ಕಾಯ್ದರು. ಬಹಿಷ್ಕಾರ ಹಾಕಿ, ಸಾಕ್ಷಿದಾರರಿಗೆ ಬೆಂಕಿ ಸಹ ಸಿಗದಂತೆ ಮಾಡಬೇಕೆಂದು ಊರೇ ಪಂಥಮಾಡಿತು. ಈ ಭಾವೀ ಸಂಕಟ ನೋಡಿ, ಸಾಕ್ಷೀದಾರರೇ ಹುಟ್ಟಲಿಲ್ಲ. ಸಾಕ್ಷೀದಾರರು ಪೋಲೀಸರು ಮಳೆಗಾಲದ ಚೇಳಿನಂತೆ ಸತ್ವಹೀನರಾಗಿ, ಪರಿಷ್ಕಾರ ಅಷ್ಟಗೆ ಪತಕಂಡು, ಫಿರ್ಯಾದಿ ತಕ್ಕೊಳ್ಳುವೆವೆಂದು ಮ್ಯಾಜಿಸ್ಟ್ರೇಟರಿಗೆ ಅರಿಕೆ ಮಾಡಿಕೊಂಡು ತಮ್ಮ ದಾರೀ ಹಿಡಿದರು.

ಪಾರ್ಶೀ ಸ್ತ್ರೀಯರು ಚಳವಳಿಯಲ್ಲಿ ಸೇರಿದರು.

ಮುಂಬಯಿ ಸರಕಾರದವರು ಸ್ವರಾಜ್ಯ ಸ್ಥಾಪನೆಯ ಆದ್ಯಪ್ರವರ್ತಕರಾದ ಶ್ರೀ ದಾದಾಭಾಯಿ ನವರೋಜಿಯವರ ಮೊಮ್ಮಗಳಾದ ಶ್ರೀ ಪೆರಿನ ಕ್ಯಾಪ್ಟನರವರಿಗೆ ಶಿಕ್ಷೆ ವಿಧಿಸಿದ್ದು, ಸೌಖ್ಯದ ಸೊಗಸುಗಾರಿಕೆಯಲ್ಲಿ ಕಾಲ ಕಳೆಯುತ್ತಿದ್ದಂಥವರನ್ನು ಬಡಿದು ಎಬ್ಬಿಸಿತು. ಶ್ರೀ ಪೆರಿನರವರ ಶಿಕ್ಷೆಯನ್ನು ನಿಷೇಧಿಸಲು ಸ್ತ್ರೀಯರೇ ಪ್ರಚಂಡ ಸಭೆ ಕೂಡಿಸಿದ್ದರು, ಸಾವಿರಾರು ರೂಪಾಯಿ ಬೆಲೆಬಾಳುವಂಥ ರೇಶಿಮೆಯ ವಸ್ತ್ರ ಉಟ್ಟಂಥವರು ಖಾದಿಯ ಸುರುಬುರಕ ಸೀರೆ ಉಟ್ಟಿದ್ದರು. ಸಭೆಯು ಉತ್ಸಾಹಪೂರ್ಣವಾಗಿದ್ದು ಸರಕಾರದ ಕೃತ್ಯದ ನಿಷೇಧ ಮಾಡುವಾಗ ಕೇವುತಬ್ಬದ ಸುರಿಮಳೆಯಾಯಿತು. ಶ್ರೀ ಪಟೇಲರು ಸಭೆಗೆ ಹೋಗಿ, ಇವರ ಸ್ವನೀತಿ ಮತ್ತು ರಾಜಕೀಯ ಜಾಗೃತಿಯನ್ನು ಅಭಿನಂದಿಸಿ, ಕೋಟ್ಯಾಧೀಶರಾದಂಥ ಪಾರ್ಸಿಗಳು ಅಬ್ಕಾರೀದಾರರಾಗಬಾರದೆಂದು ಹಾರೈಸಿದರು. ಸಭೆಯು ಮುಗಿದ ಬಳಿಕ ಇವರು ಮೆರವಣಿಗೆಯಿಂದ ದಾದಾಭಾಯಿಯವರ ಪ್ರತಿಮೆಯ ಸ್ಥಳಕ್ಕೆ ಹೋಗಿ, ಅಲ್ಲಿ ಸ್ವರಾಜ್ಯ ಶೀಘ್ರವಾಗಲೆಂದು ಹಾರೈಸಿ [illegible] ವಂದಿಸಿ ತೆರಳಿದರು.

ಇಂಗ್ಲಂಡದ ಬಟ್ಟೆ ವ್ಯಾಪಾರಕ್ಕೆ ಬಂದ ಗ್ರಹ.

—(

ಲ್ಯಾಂಕೆಷೈರದ ವ್ಯಾಪಾರಕ್ಕೆ ಬಂದಂಥ ಬಿಕ್ಕಟ್ಟಿಯ ವ್ಯಾಪಾರದ ಗೊತ್ತು ತಪ್ಪಿಸಿ, ಅದನ್ನು ಮತ್ತೆ ಒಳ್ಳೇ ಸ್ಥಿತಿಗೆ ತರತಕ್ಕವುದೆಂಬುದಾಗಿ ವಿಚಾರಿಸುವ ಕುರಿತು ಒಂದು ಕಮಿಟಿ ಕೂಡಿಸಿದ್ದರು. ಇಂಗ್ಲಂಡದ ಗಿರಣಿಗಳು ಬಹುವಾಗಿ ಅಮೇರಿಕೆಯ ಉದ್ದ ಎಳೆ ಹೊಂದಿದ ಹತ್ತಿಯನ್ನು ಕೊಳ್ಳುವವು. ಜಪಾನರು ಹಿಂದುಸ್ಥಾನದ ಗಿಡ್ಡ ಎಳೆಯ ಹತ್ತಿ ಕೊಂಡು ಹಿಂದುಸ್ಥಾನ, ಚೀನ ಮಾತ್ರವಲ್ಲದೆ, ದಕ್ಷಿಣ ಆಫ್ರಿಕಾ ತನಕ ವ್ಯಾಪಾರವನ್ನು ಹಬ್ಬಿಸುತ್ತಲಿದ್ದಾರೆ. ಹಿಂದುಸ್ಥಾನ ಮತ್ತು ಪೂರ್ವ ಏಶಿಯಾಖಂಡದಲ್ಲಿಯ ಇಂಗ್ರೇಜಿ ವ್ಯಾಪಾರವು ಈ ರೀತಿಯಾಗಿ ಸಂಕಷ್ಟಕ್ಕೆ ಬರುತ್ತಲಿದೆ. ಆದ್ದರಿಂದ ಇಂಗ್ಲಿಷ ಗಿರಣಿವಾಲರು ಹಿಂದುಸ್ಥಾನದಲ್ಲಿ ಹುಟ್ಟುವಂಥ ಹತ್ತಿ ಮತ್ತು ಈ ದೇಶೀಯರಿಗೆ ಬೇಕಾಗುವಂಥ ಧಡೋತಿಯ ಬಟ್ಟೆಯನ್ನು ನೇಯು, ಜಪಾನವನ್ನು ಹಿಂದೆ ಹಾಕಬೇಕೆಂದು ಕಮಿಟಿಯವರು ಸೂಚನೆ ಮಾಡಿದ್ದಾರೆ. ಹಿಂದುಸ್ಥಾನದಲ್ಲಿ ರಾಟಿ, ಮಗ್ಗ ಮತ್ತು ಗಿರಣಿಗಳ ಪ್ರಸಾರವಾಗಿ, ಹಿಂದುಸ್ಥಾನವು ತನ್ನ ವಸ್ತ್ರವನ್ನು ತಾನೇ ಒದಗಿಸಿಕೊಳ್ಳುವಂತೆ ಒಳವಿಲ್ಲದ ಸಹಾಯ ಮಾಡಬೇಕೆಂಬ ಸುಬುದ್ಧಿಯು ಹಿಂದುಸ್ಥಾನ ಸಂಕಟದಿಂದ ಹುಟ್ಟುವದು? ಒಂದು ಮೇಲೊಂದರಂತೆ ದಬ್ಬಾಳಿಕೆಯ ವಿಚಾರ ಹುಟ್ಟುವಾಗ, ಇಂಗ್ರೇಜಿ ಜನರ ಹೊಟ್ಟೆಯ ಮೇಲೆ ಕಾಲು ಬರುವಂಥ ವಿಚಾರವನ್ನೇಕೆ ತಳೆದೋರಬೇಕು?

ಧಾರವಾಡದಲ್ಲಿ ಪಿಕೆಟಿಂಗ ಪ್ರಾರಂಭ

—— (o) ——

ಧಾರವಾಡದಲ್ಲಿ ವಿಲಾಯತಿಯ [illegible] ಅಂ
ಗಡಿಗಳ ಮುಂದೆ ನಿನ್ನೆಯಿಂದ ಪಿಕೆ[illegible] ಪ್ರಾ
ರಂಭವಾಯಿತು. ಕೆಲವು ಅಂಗಡಿ[illegible] ಯಂದ ಸ್ತ್ರೀ
ಸ್ವಯಂಸೇವಿಕೆಯರು ಕೂತು, ಬಂದ [illegible]ಗೆ ವಿಲಾ
ಯತಿ ಬಟ್ಟೆ ಕೊಳ್ಳಬೇಡಿರೆಂದು [illegible] ಮಾಡು
ತ್ತಿದ್ದಾರೆ ಪರದೇಶಿ ಅರಿವೆ ತಾ[illegible] ಅಂಗಡಿ
ಕಾರರಿಗೆ ಪಶ್ಚಾತ್ತಾಪವಾದಂತೆ [illegible] ಪಿ
ಕೆಟಿಂಗ ನಿಲ್ಲಿಸಬೇಕಿರೆಂದು [illegible] ಸರ
ಗೆ ಹೇಳಿಕೊಳ್ಳಲಿಲ್ಲ, [illegible] ಯು
ರಸ ಬಿದ್ದದ್ದರಿಂದ, ಹಿಂದಿಲ್ಲ [illegible] ಬಾಗಿಲ
ಹಾಕಿತ್ತು.

ವನಗಾವಲದ ಕಾಯದೆಭಂಗ.

—(o)—

ಎಂಟು ಸಾವಿರ ಸ್ವಯಂಸೇವಕರೊಂದಿಗೆ ಅಸೆಂಬ್ಲಿಯ ಮೆಂಬರರ ದಂಡಯಾತ್ರೆ.

—(o)—

ವರ್‍ಹಾಡದಲ್ಲಿ ವನಗಾವಲದ ಕಾಯದೆಭಂಗ ಮಾಡಲು ಅಸೆಂಬ್ಲಿಯ ಮೆಂಬರರಾಗಿದ್ದ ಶ್ರೀ. ಅಣೆ ಮಾಧವರಾಯರು ಎಂಟು ಸಾವಿರ ಸ್ವಯಂಸೇವಕರೊಂದಿಗೆ ಯವತಮಾಳದಿಂದ ಎಂಟು ಮೈಲಿನ ಮೇಲಿರುವ ಪುಸಾದ ಗ್ರಾಮಕ್ಕೆ ಪ್ರಯಾಣ ಮಾಡಿದ್ದಾರೆ. ಸ್ವಯಂಸೇವಕರು ಸಂಗಡ ಕೊಡ್ಲಿ, ಕುಂದ್ಲಿ ಮುಂತಾದ ಆಯುಧಗಳನ್ನೂ, ಪೋಲೀಸರಿಂದ ಏಟ ಬಿದ್ದು ಘಾಯವಾದರೆ ಉಪಚಾರಕ್ಕಾಗಿ, ಡಾಕ್ಟರ, ಹೊರಸು, ಔಷಧ, ಮೋಟಾರ ಮುಂತಾದ ಸಾಹಿತ್ಯಗಳಿಂದಲೂ ಹೊರಟಿರುತ್ತಾರೆ. ಊಟವಂತೂ ಭೀಮಸೇನನು ಬಕಾಸುರನ ವಧಕ್ಕಾಗಿ ಒಯ್ದದ್ದು ಒಂದೇ ಬಂಡಿ - ಇವರವು ಹತ್ತೆಂಟು ಬಂಡಿ!! ಸಶಸ್ತ್ರಧಾರಿಗಳ ಕೂಡ ಅಶಸ್ತ್ರಧಾರಿಗಳ ಯುದ್ಧವೇ ಯುದ್ಧ.

ಧಾರವಾಡದಲ್ಲಿ ಸರಾಫರ ಕಮೀಟಿ

—— (o) ——

ಇಲ್ಲಿಯ ಸರಾಫರು ಶ್ರೀ ಬಾಪೂರಾವ ಜೋಶಿಯವರ ಅಧ್ಯಕ್ಷತೆಯಲ್ಲಿ ತಮ್ಮದೊಂದು ಸಂಘ ಮಾಡಿ, ಮೆಂಬರ ಮೊದಲಾದವರ ನೇಮಣೂಕು ಮಾಡಿದ್ದಾರೆ ಸಂಘದ ಉದ್ದೇಶ ಮತ್ತು ಕೆಲಸಗಳ ನಿಯಮಗಳನ್ನು ಬೇಗನೆ ಮಾಡುವರು. ಇಂಗ್ಲಂಡದ ಬೆಳ್ಳಿ ಮತ್ತು ಬಂಗಾರ (ಲಗಡಿ) ಕೊಳ್ಳಬಾರದೆಂದು ಮುಂಬಯಿಯ ಸರಾಫರು ಗೊತ್ತು ಮಾಡಿದ್ದಾರೆ ಅದೇ ಪ್ರಕಾರ ಇವರೂ ಠರಾವು ಮಾಡುವರೆಂದು ಆಶಿಸುತ್ತೇವೆ.

ಸತ್ಯಾಗ್ರಹದ ಬೀಜ ಹುರಿಯುವ ಉಲಕೋಚಿ ಪ್ರಯತ್ನ

——(o) ——

ಪಂಡಿತ ಮೋತಿಲಾಲರು ಸರದಾರ ಪಟೇಲರನ್ನು ಕಾಂಗ್ರೆಸದ ಅಧ್ಯಕ್ಷ ಮಾಡಿದರು. ಸರಕಾರದವರು ಪುನಃ ತಮ್ಮನ್ನು ಹಿಡಿದರೆ ಬಹಾರದ ಬಾಬೂ ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಬೇಕೆಂದು ಗೊತ್ತು ಮಾಡಿದರು. ಈ ವರ್ತಮಾನ ಪ್ರಸಿದ್ಧವಾದ ಕೂಡಲೆ ಬಹಾರ ಸರಕಾರದವರು ಇವರನ್ನು ಹಿಡಿದು ಹಾಕಿದರು.

ಮಹಾತ್ಮರು ಮರಾಠಿಯ ಅಭ್ಯಾಸ ಮಾಡುತ್ತಲಿದ್ದಾರೆ.

೮೦ ಫೂಟು ಉದ್ದಿದ್ದ ಶಿಂದಿ ಗಿಡದ ಸಂಹಾರ:

—:(o):—

ಹಾನಗಲ್ಲ ತಾಲೂಕ ಬೊಮ್ಮನಹಳ್ಳಿಯಲ್ಲಿ ಪಂಡಿತ ಮೋತಿಲಾಲರನ್ನು ಹಿಡಿದದ್ದರಿಂದಾದ ಹರ್ತಾಳದಲ್ಲಿ ೨೫ ಸ್ವಯಂಸೇವಕರು ಶಿಂದಿಗಿಡ ಕಡಿಯಲಿಕ್ಕೆ ಹೋಗಿದ್ದರು. ೮೦ ಫೂಟು ಎತ್ತರವಾದ ಒಂದು ಗಿಡವಿತ್ತು. ಅದೊಂದೇ ಊರಲ್ಲಿ ೧೧೮ ಗಿಡಗಳ ಸಂಹಾರವಾಗಿರುತ್ತದೆ.

ಇಂಗ್ರೇಜಿ ಹಡಗಗಳಿಗೆ ಬಹಿಷ್ಕಾರ.

ಬ್ರಹ್ಮದೇಶದಿಂದ ಮುಂಬಯಿಗೆ ಅಕ್ಕಿ ತರಿಸುವ ವರ್ತಕರು ಇಂಗ್ರೇಜಿ ಹಡಗಗಳಿಂದ ತರಿಸಬಾರದೆಂದೂ, ಮುಂಬಯಿಯಿಂದ ರಂಗೂನಕ್ಕೆ ಕಳಿಸುವ ಬೇರೆ ಸರಕುಗಳನ್ನು ಇಂಗ್ರೇಜಿ ಹಡಗಗಳಿಂದ ಕಳಿಸಬಾರದೆಂದೂ ಠರಾವು ಮಾಡಿದ್ದಾರೆ.

ಪ್ರಕಟನೆ.

ಲೋಕಮಾನ್ಯರ ಸ್ಮೃತಿ ಸ್ಪರ್ಧೆಯು.

—(o)—

ಶ್ರೀ ಶಾಂತೇಶ ವಾಚನಾಲಯದ ಪರವಾಗಿ ಲೋ. ಮ. ಸ್ಪರ್ಧೆಯು ಬರುವ ಅಗಸ್ಟ ೧ನೇ ತಾರೀಖು ಗುರುವಾರ ಸಾಯಂಕಾಲ ಸರಿಯಾಗಿ ೫॥ ಗಂಟೆಗೆ ವ್ಹಿಕ್ಟೋರಿಯಾ ಹಾಯಸ್ಕೂಲಿನ ಹಾಲಿನಲ್ಲಿ ಜರುಗುವದು.

ಧಾರವಾಡ ಜಿಲ್ಲೆಯೊಳಗಿನ ಹಾಯಸ್ಕೂಲಗಳಲ್ಲಿಯ ೫ ೬-೭ನೆಯ ಇಯತ್ತೆಯ ವಿದ್ಯಾರ್ಥಿಗಳಷ್ಟೇ ಇದರಲ್ಲಿ ಭಾಗತೆಗೆದುಕೊಳ್ಳಲು ಅರ್ಹರು.

ವಿಷಯಗಳು.

(೧) ಲೋಕಮಾನ್ಯರ ವಿದ್ಯಾರ್ಥಿ ದೆಶೆಯಲ್ಲಿಯ ಚಟುವಟಿಕೆಗಳು ಹಾಗು ಅದರಿಂದ ವಿದ್ಯಾರ್ಥಿಗಳು ಕಲಿಯಬಹುದಾದ ಪಾಠಗಳು.

(೨) ಕರ್ನಾಟಕ ಕಟ್ಟಡಗಳು.

(೩) ಆರ್ಥಿಕ ದೃಷ್ಟಿಯಿಂದ ಖಾದಿಯ ಮಹತ್ವ

ಈ ಸ್ಪರ್ಧೆಯು ಭಾಗ ತೆಗೆದುಕೊಳ್ಳಬಯಸುವ ವಿದ್ಯಾರ್ಥಿಗಳು ಆಯಾ ಶಾಲೆಗಳ ವಿದ್ಯಾರ್ಥಿಗಳಿದ್ದ ಬಗ್ಗೆ ಮುಖ್ಯಾಧ್ಯಾಪಕರ ಅಧಿಕಾರಪತ್ರ certificate ಮತ್ತು ನಾಲ್ಕಾಣೆ ಪ್ರವೇಶ ಹಣ ಸಹಿತ ಅರ್ಜಿಗಳನ್ನು ಜುಲೈ ೧೫ ನೇ ತಾರೀಖಿನೊಳಗಾಗಿ ಕಾರ್ಯದರ್ಶಿ ಶಾಂತೇಶ ವಾಚನಾಲಯ ಇವರ ಕಡೆಗೆ ಕಳುಹಿಸಬೇಕು.

ಈ ಸಭೆಯಲ್ಲಿ ೧ನೆಯ ಹಾಗು ೨ನೆಯ ನಂಬರು ಬಂದವರಿಗೆ ಕ್ರಮವಾಗಿ ೧೦ ಹಾಗು ೫ ರೂಪಾಯಿ ಬೆಲೆ ಬಾಳುವ ಕನ್ನಡ ಪುಸ್ತಕಗಳನ್ನು ಕಾಣಿಕೆಯನ್ನು ಕೊಡುವದರಲ್ಲಿ ಬರುವದು.

ಶಾಂತೇಶ ವಾಚನಾಲಯ ಶಾಂತೇಶ [illegible]
೭-೭-೩೦ ಧಾರವಾಡ

**THE DHARWAR BANK LIMITED
DHARWAR**

The Bank will accept fixed deposits for 3 4. 6. months. For rates of interest apply to the manager.

A. K. Katti.
Managing Director

LOKHANDE


Last A life time
Strongest Watches

ಖೊಟ್ಟೀಸು ಮತ್ತು ಅರ್ಧ ಬೆಲೆಗೆ ಮೋಹಪಟ್ಟು
ಮೋಸ ಹೋಗಬೇಡಿರಿ

ಲೇಸಸು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರೆ ಲೂಬಾ, ವೆಸ್ಟ ಎಂಡ, ಮೆರಿಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಒಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿ ಉಪವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ ಐದು ರೂಪಾಯಿಯಿಂದ ಮೇಲ್ಪಟ್ಟ ಬೆಲೆಯ ಗಡಿಯಾರಗಳು ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ತರಿಸಿ ನೋಡುವಿರಷ್ಟೇ!

ಪ್ರೊಪ್ರಾಯಟರ ದತ್ತುರಾವ ಲೋಖಂಡೆ ವಾಚ ಅಂಡ ಕ್ಲಾಕ ಮರ್ಚಂಟ ಧಾರವಾಡ.

ಜಾಹೀರಾತು

—o—

ಕರ್ನಾಟಕ ಕರ್ಮವೀರನ ಕೃತಿಗಳು

—o—

ಲೇಖಕ ವ್ಹಿ. ಎಸ್. ಗುಡಗುಂಟಿ

—o—

ಕರ್ನಾಟಕದ ಅಭಿಮಾನಿಗಳ ಹೇಳಿಕೆಯ ಮೇರೆಗೆ ಕರ್ನಾಟಕದ ಕರ್ಣರೂ ಕುಬೇರರೂ ಎಂದು ಹೆಸರುವಾಸಿಯಾಗಿರುವ ರಾ. ಸಾ. ಮಲ್ಲಪ್ಪ ವಾರದ ಇವರ ಸಂಕ್ಷೇಪ ಚರಿತ್ರೆಯನ್ನು ಮುದ್ರಿಸಹತ್ತಿರುವೆವು. ಪ್ರತಿಗಳು ಹೊರಟ ಕೂಡಲೇ ಅವು ಶೀಘ್ರವೇ ವ್ಯಾಪಾರವಾಗಿ ಹೋಗುವ ಸಂಭವವಿದ್ದಪರಿಂದ ಗ್ರಾಹಕರು ಈಗಿನಿಂದಲೇ ತಮ್ಮ ಹೆಸರನ್ನು ಕಡಿಗೆ ನೋಂದಾಯಿಸಬೇಕು. ಅಂದರೆ ಮಾ[illegible]ರೆಯುವೆವು. ಕ್ರಯ ೨ ಆಣೆ ಸಹಿತ್ಯ [illegible] [illegible] ಕಾಯುವನ್ನು ಅಧೀಶ [illegible] ಕಜಾಡ

ಪ್ರತಿಯೊಬ್ಬನು ತಾನು ಸಂಪಾದಿಸಿದ
ಹಣದಲ್ಲಿ ಕೆಲವನ್ನು ವಿಶ್ವಸನೀಯವಾದ
ಈ ಕಿರ್ಲೋಸ್ಕರ ಬಂಧು ಲಿಮಿಟೆಡ್.
ಕಂಪನಿಯ ಶೇರುಗಳನ್ನು ತೊಡಗಿಸಬೇಕು.
ಇದಕ್ಕೆ ಸರಿಯಾಗಿ ಡಿವ್ಹಿಡೆಂಡ (ಲಾಭವು) ದೊರೆಯುವದು.
ಹಳೇ ಭಾಗೀದಾರರಿಗೆ ಸೌಕರ್ಯವುಂಟು.
ದಲಾಲರಿಗೆ ಬ್ರೋಕರೇಜು ದೊರೆಯುತ್ತದೆ.
ಪ್ರೊಸ್ಪೆಕ್ಟಸ ತರಿಸಿಕೊಳ್ಳಿರಿ.
ಕಿರ್ಲೋಸ್ಕರ ಬಂಧು ಲಿಮಿಟೆಡ್ { ಪೋ. ಕಿರ್ಲೋಸ್ಕರವಾಡಿ
ಜಿಲ್ಲಾ, ಸಾತಾರಾ

ಪೂರಾ ೧೬ ಆಣೆ ಗುಣ ಯಾವಾಗ ಬರುತ್ತದೆ?

ಡಾಕ್ಟರರ ಪ್ರಿಸ್ಕ್ರಿಪ್ಶನದಂತೆ ತಥಾಪಿ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿಕೊಟ್ಟಾಗ ಮಾತ್ರ! ಡಾಕ್ಟರರೂ ಜನರೂ ಈ ಕೆಲಸದಲ್ಲಿ ಮೆಸರ್ಸ ಕನಕಾದಿತ್ಯ ಮೆಡಿಕಲ ಸ್ಟೋರ್ಸವನ್ನು ಬಹಳವಾಗಿ ಹೊಗಳುವ ಕಾರಣದ ಮುಖ್ಯ ಇಂಗಿತವಾದರೂ ಇದೇ ಇರುತ್ತದೆ.

ಮೊಮೆಂಟ ಕ್ಯೂರ ಅಂದರೆ- ಒಂದೇ ಕ್ಷಣದಲ್ಲಿ ಗುಣ.

ತಲೆ ಶೂಲಿಯ ಮೇಲೆ ನಮ್ಮ ಔಷಧವನ್ನು ಒಮ್ಮೆ ಪರೀಕ್ಷೆ ಮಾಡಿ ನೋಡಿರಿ. ಬೆಲೆ ಎರಡೇ ಆಣೆ

ವಿಳಾಸ— ದಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ, ಹುಬ್ಬಳ್ಳಿ.

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್
ಧಾರವಾಡ.

—o—

೧೯೧೩ ಇಸ್ವಿಯಲ್ಲಿ
ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

—o—

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೆವ್ಹಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K. B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ೪ [illegible] ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ. ಖಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಕಾಶಿಸಿದರು.

[illegible]

ನಿತ್ಯ ಪತ್ರ

ವಿಜಯ

ಬೆಲೆ ೬ ಪೈ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

(ವರ್ಷ ೫) ಧಾರವಾಡ ಗುರುವಾರ ತಾರೀಖು ೧೦ ನೇ ಜುಲೈ ೧೯೨೪ (ಸಂಚಿಕೆ ೧೬

ನೋಟೀಸು

ಬಸಪ್ಪಾ ಬಿನ್ನ ಮುರಡೆಪ್ಪಾ ಬೂದಿಹಾಳ ಸಾಕೀನ ಬಂಸಿಹಟ್ಟಿ ತಾಲೂಕ ರಾಣಿಬೆನ್ನೂರ ಇವರಿಗೆ-

ಕೆಳಗೆ ಸಹಿ ಮಾಡಿದವರ ಕಡಿಂದ ಈ ನೋಟಿನ ಮೂಲಕ್ಕಾ ತಿಳಿಸುವದೇನಂದರೆ ನೀನು ತಾ-೧೯೨೪ ಇಸ್ವಿಯ ದಿವಸ ವಿಜಯ ಪತ್ರದಲ್ಲಿ ಕೊಟ್ಟ ನೋಟಿಸು ಮುಟ್ಟಿತು. ಅದರಲ್ಲಿ ನೀನು ಬರೆದ ಮ ಕೂರು ಎಲ್ಲ ಸುಳ್ಳು ಇರುತ್ತದೆ. ನೀನು ಯರಡ ಕಡಿಂದ ಬಂದವನು ಇದ್ದೂ ನನ್ನ ನೋಡಿದರಕ್ಕೆ ಬ ಪ್ಪಾ ಬಂಸಿಹಟ್ಟಿ ಈತ ನಿನ್ನನ್ನು ಜೋಪಾನ ಮಾಡಿ ರಿಂದ ನನ್ನನ್ನು ಅಂತಃಕರಣದಲ್ಲಿ ಧರ್ಮಧಾರೆ ಮಾಡಿ ನಿನಗೆ ಲಗ್ನ ಮಾಡಿದರು. ನಾನು ದೊಡ್ಡವ ಳು ಆದನಂತರ ನಿನ್ನಿಂದಾ ನನಗೆ ಸಬ್ಬು ಚನಬಸವ್ವಾ ಎಂಬ ಹೆಣ್ಣು ಮಗಳು ವ ನಾಗಪ್ಪಾ ಎಂಬ ಗಂಡು ಹುಡುಗನು ಅಂತಾ ಜನನ ಆದವರು ಇರತಾರೆ. ನೀನು ಯರಡನೇ ಗಿರಿಯವ್ವಾ ಅಂಬುವಳನ್ನು ಲಗ್ನ ಆ ಯಾಕಡು ತಿಂಗಳಲ್ಲಿ ನಾನು ಗಂಡು ಕೂಸು ಜನನ ದೆ. ಹೆಣ್ಣು ಮಗಳ ಲಗ್ನ ಆಗಿ ಗಂಡನ ಮನಿಯಲ್ಲಿಯೇ ಇರತಾಳೆ. ಯರಡನೇ ಹುಡುಗಾ ಫೋತಿಯಾಗಿರತದೆ. ನಿನ್ನನ್ನು ಲಗ್ನ ಆದನಂತರ ನನ್ನ ಮೇಲೆ ಬೇಸರ ಮಾಡಿ ನನಗೆ ಹೊಡೆದು ಬಡಿದು ಮಾಡಲಿಕ್ಕೆ ಹತ್ತಿದೆ. ಇದರಿಂದ ನಾನು ಆ ತ್ತೂರಲ್ಲಿ ನಾನು ಮನಿ ಬಿಟ್ಟು ಹೊರಗೆ ಹಾಕಿದ ನಂತರ ಆ ದಿವಸ ಅಕ್ಕೀ ವೂರಲ್ಲಿ ಅಂದರೆ ಬಂಸಿಹಟ್ಟಿಯಲ್ಲಿ ಈರಬಸಪ್ಪಗವಡರ ಚಿನಪ್ಪನ ಮಗಳು ಚನ್ನವ್ವನಲ್ಲಿ ಇದ್ದು ನಿನಗೆ ಬುದ್ಧಿ ಹೇಳಿದೆ ನೀನು ಸದರ ಈರಬಸಪ್ಪಗವಡರ ಮಾತು ಕೇಳಲಿಲ್ಲಾ. ಮುಂದೆ ತಿನೇಯವರಲ್ಲಿ ವಂದು ಕೀರಿ ಇಸಕೊಂಡು ಬುದ್ಧಿವಂತರ ಹೇಳ್ಕೆ ಪ್ರಕಾರಾ ನಾನು ತವರ ಮನಿಗೆ ಹೋಗೆ ಈ ಮಾತಿಗೆ ೬ ವರ್ಷ ಆಯ್ತು ನಿನ್ನ ಅಗಲಿದ ಮೇಲೆ ನಾನು ತಿನೇ ಜನನ ಆಗಿಲ್ಲಾ ಅದರಿಂದ ನನ್ನ ನಡತೆ ಇದೇ ಸಾಕ್ಷಿ ಆನೆ ಹಿಂಗಿ ಈಗ ನೀನು ನೋಟೀಸು ಕೊಟ್ಟಿದ್ದು ಅಗರ ಮಕಲಬೀದು ವ ಲಬಾಡಿಗು ಅದೆ ಈ ೬ ವರ್ಷದ ಲಾಗಾಯ್ತು ನನ್ನ ತವರ ಮನಿಯವರು ಬಿಡದಿದ್ದು ನನಗೆ ಉಪಜೀವನಕ್ಕೆ ಹಾಕದಿದ್ದರಿಂದ ತಿನೇ ಯವರಲ್ಲಿ(೪೦೦) ರೂ. ದೇಣೆ ಮಾಡಿರತೇನೆ ಆಜರಿ ಮಲ್ಲನಗವಡಾ ಪಾಟೀಲ ಅಣಾವಾರ ಇವರಲ್ಲಿ (೨೦೦) ಕರದಿ ಬಸಪ್ಪ ಉಕ್ಕುಂದ ಇವರಲ್ಲಿ (೧೦೦) ಹುಲ್ಲಿಮನಿ ಗಂಗಪ್ಪನಲ್ಲಿ (೧೦೦) ಈ ಪ್ರಕಾರ ದೇಣೆ ಮಾಡಿರತೇನೆ ಕಾರಣ ಈ ನೋಟೀಸು ಮುಟ್ಟಿದ ೮ ದಿವಸದಲ್ಲಿ ನೀನು ನಮ್ಮೂರಿಗೆ ನನ್ನ ಹತ್ತರ ಬಂದು ನನ್ನ ದೇಣಿ ತೀರಿಸಿ, ಧರೋ ರೀತಿ ಪ್ರಪಂಚ ಮಾಡೋ ಬಗ್ಗೆ ಯೋಗ್ಯ ಜಾಮೀನಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಹಾಗೆ ನೀನು ಮಾಡದಿದ್ದರೆ ನಿನ್ನ ಮೇಲೆ ನಾನು ಈ ದೇಣಿದ ಬಗ್ಗೆ ವ ನನ್ನ ಉಪಜೀವನದ ಬಗ್ಗೆ ಕೋರ್ಟನಲ್ಲಿ ಕಾಯದೇಶೀರ ಇಲಾಜ ಮಾಡತೇನೆ ನೀನು ದಾಗಿನ ವಯ್ದದ ಬಗ್ಗೆ ಬರದ ಮಜಕೂರ ಆಗದಿ ಸುಳ್ಳು ಅದೆ ಉಟ್ಟ ಸೀರಿ ಸಹ ಕಸಕೊಂಡು ಕಳಿಸಿರತೀದಿ ತಿಳಿಯುವದು ನೋಟೀಸಿನ ಖರ್ಚು ನಿನ್ನ ತಲೆಮೇಲೆ ಅದೆ. ತಾ ೪.೭.೨೪

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ತೇರಬಸವ್ವ ಕೋಂ ಬಸಪ್ಪ ಬೂದಿಹಾಳ ಸಾ. ಬನ್ನಿಹಟ್ಟಿ ಈಕಿ ಮಾಡಿದ್ದು ಅದೆ.

ನೋಟೀಸು.

ಹುಚ್ಚಪ್ಪಾ ಕಳವಾರ ಸಾಕೀನ ಅಡೂರ ಹಾಲಿವಸ್ತಿ ಗುಂಡೂರ ಈತನಿಗೆ-

ನೀನು ಮೊದಲು ಲಗ್ನದ ಗಂಡನಿದ್ದು ನಂನನು ಚನ್ನಾಗಿ ನಡಿಸಿಕೊಳ್ಳದೆ ಇದ್ದ ಕಾರಣ ಅನೇಕ ವರ್ಷ ಆಗಾಯಿತು ನಾನು ನನ್ನ ತಂದಿ ಮನಿಯಲ್ಲಿ ಉಪಜೀವಿಸುತ್ತ ಇದ್ದಾಗಿ ಕೆಲವು ದಿವಸಗಳ ಹಿಂದೆ ನಾಲ್ಕು ಮಂದಿ ಸಮಕ್ಷಮವಾ ನೀನ ಕೊಟ್ಟ ಸಲುವಾಗಿ ಇಷ್ಟು ದಿವಸಗಳವರೆಗೆ ಆದ ಖರ್ಚಿನ ಬಾ|| ರೂ|| ೩೦೦ ಗಳನ್ನು ನಂನ ತಂದಿಗೆ ಮುಟ್ಟಿಸಿ ಕರಕೊಂಡು ಹೋಗುತ್ತೇನೆ ಅಂತಾ ರಾಜಿ ಮಾಡಿಕೊಂಡು ಈಗ್ಗೆ ನಂನ ಮೇಲೆ ಧೋಕ್ತದಿಂದ ಎರಡನೆ ಲಗ್ನಮಾಡಿಕೊಂಡಿತ್ತೀ ಅದರೂ ನಂನನು ಕರಕೊಂಡು ಹೋಗಿ ಚಲೋ ರೀತಿಯಲ್ಲಿ ಇಟ್ಟುಕೊಳ್ಳಬೇಕು ಅಂಬುವದಿದ್ದರೆ ಈ ನೋಟೀಸ ಮುಟ್ಟಿದ ಎಂಟು ದಿವಸಗಳಲ್ಲಿ ಮೇಲೆ ನಮೂದ ಅದ ರೂ|| ಗಳನು ಕೊಟ್ಟು ಮತ್ತು ಈಗ ಲಗ್ನಮಾಡಿಕೊಂಡ ಹೆಂಡತಿಗೆ ಸೋಡಚೀಟಿ ಕೊಟ್ಟಂತೆ ಪತಿಕಾ ತಂದು ಕರಕೊಂಡು ಹೋದರೆ ಠೀಕ ಅದೆ ಇಲ್ಲದಿದ್ದರೆ ಇದೇ ನೋಟೀಸಿನ ಆಧಾರದಿಂದ ನಂನ ಮರ್ಜಿ ಪ್ರಕಾರ ಮತ್ತು ಕುಲರಿವಾಜ ಪ್ರಕಾರ ಎರಡನೆ ಕಡಿಗೆ ಲಗ್ನ ಮಾಡಿಕೊಂಡು ಹೋಗುವೆನಲ್ಲದೆ ಸದರಿ ರೂ|| ಗಳ ಬಗ್ಗೆ ನಿಂನ ಮೇಲೆ ಕೋರ್ಟಿನಲ್ಲಿ ಜಾಪ್ತಾಕಾರವಾಯಿ ಮಾಡುತ್ತೇನೆ ಅದರ ಖರ್ಚು ನಿಂನದೆ ಅದೆ

ಈ ಎಡಗೈ ಹೆಬ್ಬಟ್ಟಿನ ಗುರ್ತ ಅಡಿವೆವ್ವಾ ಮಾಡಿದ್ದು ಅದೆ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೇ, ಅಥವಾ ಯಾವುದೇ ಬಣ್ಣದ ಹಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೈದ್ಯರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

☞ ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಬೇಡಿಕೆಯನ್ನು ಮಾಡಿರುವಿರಿಯೆಂಬದನ್ನು ಬರೆಯಬೇಕು.

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ತಿಸಂ ನಾಟುಗಳು

ಸಾಗವಾನಿ ಯಾಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಕಿರಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊಡಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವವರಿಗೆ ತಯಾರಿ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಸಟ್ಟಿ
ಟಿಂಬರ ಮರ್ಚಂಟ,
ಮಾರ್ಕೇಟ ಧಾರವಾಡ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯಿವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯಿವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟದ್ದೇವೆ. ಜುಲೈ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಅದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ರವಿವಾರ ತಾರೀಖು ೧೩ ನೇ ಜುಲೈ ೧೯೩೦ (ಸಂಚಿಕೆ ೧

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ಪೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಕಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಐವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಪಾಂಢೋಳಕರ
ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯತಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು, ದೊರೆಯದೇ ನಿರುತ್ಸಾಹ ನಿರಾಶಗಳು ಹುಟ್ಟುತ್ತವೆ. ಇಂಥ ಮನುಷ್ಯರ ಧಾತುಕ್ಷಯದೋಷವು ಹೋಗಿಸಿ, ಪೂರ್ಣ ಪುರುಷತ್ವವನ್ನು ತಂದು ಕೊಡುವಂತಹದ್ದು. ವೈದ್ಯರಾಜ ಶ್ರೀ. ಕೇಶವ ಶಾಸ್ತ್ರೀ ವಿರಚಕರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂದು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗೂ ಶೀಘ್ರ ಗುಣಕೊಡುವ ಔಷಧವು ಮಾಡಲಾಗಿದೆ. ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು ಪೌರುಷತ್ವಹೀನ ದೇಹ, ಅನಿಶ್ಚಿತಸ್ವಭಾವ, ನಿಸ್ತೇಜತನವನ್ನೂ, ಹೇಡಿತನವನ್ನೂ ಅಂಜುಬುರುಕತನ, ಅಕಾಲಮು ಸ್ವಪ್ನಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕೈಕಾಲುಗಳುರಿಯೋಣ, ಉರಿಮೂತ್ರ, ಇಂದ್ರಿಯದ ಉರಿ ಪಿತ್ತವಿಕಾರ, ಅಗ್ನಿಮಾಂದ್ಯ ನಿದ್ರಾನಾಶ, ಮಲಾವರೋಧ, ಬೆನ್ನು ನೋಯಿಸೋಣ, ಜೋಂಕಸೂಲಿ, ಎಲದರದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾವೀರ್ಯ ಮೊದಲಾದ ಏಳು ವೀರ್ಯಗಳು ವೃದ್ಧಿಯಾಗಿ ಇಂದ್ರಿಯ ಶೈತ್ಯ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟುಶೂಲಿ, ಕೆಂಪು, ಹಳದಿ ಬಿಳಿಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸಿಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧ ತೊಲಿ ತೊಗೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲಿಯವರೆಗೆ ತೊಗೋಬೇಕು. ಹತ್ತು ದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಮುಕ್ಕಟೆ. ಅಂಚೆ ಹಾಗು ಪಟ್ಟಿಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ.
ನಿಪ್ಪಾಣಿ-ಬಿ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ. ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

[illegible] ವಿಕ್ರಮ ವರ್ಷ ೧೮೫೨ ಆಷಾಢ ವದ್ಯ ೩

ರಾವುಂಡ ಟೇಬಲಿಗಾಗಿ ಬಾಯಿಗೆ ನೀರು ಬಿಟ್ಟ ಮವಾಳರು.

ರಾವುಂಡ ಟೇಬಲದಲ್ಲಿ ನಡೆಯುವ ವಾದವಿವಾದ ಮತ್ತು ಅದರಿಂದ ಆಗುವ ಅದ್ಭುತದಂಥ ನಿರ್ಣಯವು, ಹಿಂದುಸ್ಥಾನಕ್ಕೆ ಬಹು ಭಾಗ್ಯ ತರುವದೆಂದು [illegible] ಸಾಹೇಬರು ಭಾಷಣ ಮಾಡಿದ ಕೂಡಲೆ, ಮವಾಳರಂಥ ಹಿಂದೂ ಮುಸಲ್ಮಾನರ ಬಾಯಿಗೆ ನೀರು ಬಿಟ್ಟು, [illegible] ರಾಮಸ್ವಾಮ್ಯಯ್ಯನವರ ಮನೆಯ ಗಂಟೆಗೆ [illegible] ಸಾಹೇಬರ ಭಾಷಣವಾಯಿತು. ಸಾಯಂಕಾಲದಲ್ಲಿಯೇ ಇವರೊಂದು ಜಾಹೀರ ಸಂದೇಶ ಪ್ರಸಿದ್ಧ ಮಾಡಿ, ಈ ಹೊತ್ತು ಕಳೆಯದೆ, ಕಾಂಗ್ರೆಸ್ಸದವರು ಸಹ ರಾವುಂಡ ಟೇಬಲಕ್ಕೆ ಹೋಗಬೇಕೆಂದು [illegible] ಹೇಳುತ್ತಲಿದ್ದಾರೆ. ಇದರಲ್ಲಿ ಮುಂದಿನವರು ಸಹಿ ಮಾಡಿದಂಥವರು:-

೧ ಬ್ಯಾರಿಸ್ಟರ ಜಯಕರ, ೨ ಬ್ಯಾರಿಸ್ಟರ ಜಿನ್ನಾ, ೩ ಸರ ಚಿಮನಲಾಲ ಸೆಟಲವಾಡ, ೪ ಸರ ಸಿ. ಪಿ. ರಾಮಸ್ವಾಮಿ ಅಯ್ಯರ ೫ ಸರ [illegible] ಜಹಾಂಗೀರ ೬ ನಾರಾಯಣರಾವ ರಾಮಸ್ವಾಮಿ ಮೊದಲಿಯಾರ, ೭ [illegible] ನಟೇಶನ ೮ ಪಿ. ಷಣ್ಮುಖಂ ಚೆಟ್ಟಿ ೯ ಎಂ. [illegible] ೧೦ [illegible] ೧೧ [illegible] ೧೨ [illegible] ೧೩ [illegible] ೧೪ ಡಿ. ಬಿ. [illegible] ೧೫ [illegible] ಅಹಮದ.

ಇವರು ತಮ್ಮ ಪ್ರಕಟನೆಯಲ್ಲಿ ಅನ್ನುವದೇನಂದರೆ:-

೧ ವಿಲಾಯತಿ ಸರಕಾರದವರು ಹಿಂದೀ ಪ್ರತಿನಿಧಿಗಳ ಮತ್ತು ಹಿಂದೀ ಸಂಸ್ಥಾನಿಕರ ಪ್ರತಿನಿಧಿಗಳ ಸಲ್ಲಾಮಸಲತ್ತು ಹಿಂದುಸ್ಥಾನಕ್ಕೆ ಆದಷ್ಟು ಹೆಚ್ಚಿನ ಪ್ರಮಾಣದಿಂದ ಹಕ್ಕು ಕೊಡುವರೆಂದು [illegible] ದಿವಸ [illegible] ದಿವಸ ಭಾಷಣ ಮಾಡಿದರು.

೨ ಅನಂತರ ಸಾಯಮನ್ನ ಕಮೀಶನದ ರಿಪೋರ್ಟ ಪ್ರಸಿದ್ಧವಾಯಿತು. ಇದು ಹಿಂದುಸ್ಥಾನದ [illegible] ಮಹಾತ್ಮಾ [illegible] ಪ್ರಗತಿಗೆ [illegible] ಕರವಾದದ್ದಾಗಿಲ್ಲವಲ್ಲದೆ, ಸರಕಾರ ಮತ್ತು ಪ್ರಜಾಪಕ್ಷದವರು ಅಪೇಕ್ಷಿಸಿದಂಥ ವಸಾಹತ ರಾಜ್ಯವನ್ನು ಕೊಡುವದಕ್ಕೆ [illegible] ದಂತಿದೆ.

೩ ಇಂಗ್ಲಂಡದ ಜನರು ಮತ್ತು ಇಂಗ್ಲಿಷ ವರ್ತಮಾನಪತ್ರಕಾರರು ಸಾಯಮನ್ನ ರಿಪೋರ್ಟಿನ ಪ್ರಶಂಸೆ ಮಾಡಿ, ಅದು ಶ್ರೇಷ್ಠ ಎಂದು ಹೇಳುತ್ತಿದ್ದಾರೆ. ಇದರ ವಿರುದ್ಧವಾಗಿ ಈ ದೇಶದ ಲೋಕಮತವಾಗಿದೆ. ಆರ್ಡಿನನ್ಸ ಸಾಹೇಬರು ಆಡಿದ ಮಾತುಗಳೂ ಹಿಂದೂ ಜನರ ಧ್ಯೇಯಕ್ಕೆ ಇದು ವಿರೋಧವಾಗಿದೆ.

೪ ನಾವು ರಾವುಂಡಟೇಬಲಕ್ಕೆ ಹೋಗಿ, ಅಲ್ಲಿ ನಿಷ್ಕಪಟ ಮತ್ತು ಉದಾತ್ತವಾದ ಹೇತುವಿನಿಂದ ನಮ್ಮ ಬೇಡಿಕೆಗಳನ್ನು ಸಾಧಿಸಿ ಮುಂದಿಟ್ಟು ಇಷ್ಟಾರ್ಥವನ್ನು ಸಾಧಿಸಿಕೊಳ್ಳಬಹುದು. ಅಲ್ಲಿಗೆ ಹೋದ ಮಾತ್ರದಿಂದ ರಾಜ್ಯಕರ್ತರು ಹೇಳುವಂತೆ ನಡೆಯುತ್ತೇವೆಂದು ನಾವು ಕಾಯಾವಾಚಾ ಬದ್ಧರಾಗಲಾರೆವು. ಅದರಲ್ಲಿ ಭಾಗ ತೆಗೆದುಕೊಳ್ಳುವದರಿಂದ ನಮ್ಮ ದೇಶಕ್ಕೆ ಹಾನಿಯಾಗಲಾರದು. ಸನ್ಮಾನನೀಯವೆನಿಸುವಂಥ ಒಪ್ಪಂದವಾದರೇ ಅದಕ್ಕೆ ಒಪ್ಪುತ್ತೇವೆ.

೫ ಇದರಿಂದ ಹಿಂದುಸ್ಥಾನವು ಈ ಸುಸಂಧಿಯನ್ನು ಕಳಕೊಳ್ಳಲಾಗದು. ಈಗ ನಡೆದಿರುವ ಚಳವಳಿಯನ್ನು ಬೇಗನೆ ಮುಗಿಸುವದಕ್ಕೆ ಇದೊಂದು ಕಾಲವಾಗಿದೆ. ಹಿಂದುಸ್ಥಾನದ ಮಹತ್ವಾಕಾಂಕ್ಷೆಯು ಪೂರ್ಣವಾಗುವ ತನಕ ಇಂಥ ಚಳವಳಿಯು ನಡೆಯುತ್ತದೆ ಎಂದು ನಾವು ಒಪ್ಪುತ್ತೇವೆ. ಸರಕಾರ ಮತ್ತು ಜನರು ಸೇರಿ, ಶಾಂತಿ ಸಮಾಧಾನಕರವಾದ ವಾತಾವರಣವನ್ನುಂಟು ಮಾಡುವದೇ ಇಂದು ಕರ್ತವ್ಯವಾಗಿರುತ್ತದೆಂದು ನಾವು ತಿಳಿಯುತ್ತೇವೆ.

೬ ರಾವುಂಡಟೇಬಲಕ್ಕೆ ಕಾಂಗ್ರೆಸವು ವಿರುದ್ಧವಿರುತ್ತದೆ. ಕಾಂಗ್ರೆಸದಂಥ ಪ್ರಬಲ ಪಕ್ಷವು ಇದರಲ್ಲಿ ಸೇರಿ, ಭಾಗವಹಿಸಿದರೆ ಟೇಬಲಕ್ಕೆ ಹೆಚ್ಚು ಮಹತ್ವ ಬರುವದು. ಮತ್ತು ನಿಜವಾಗಿ ಪ್ರಜಾಪ್ರತಿನಿಧಿತ್ವದ್ದಾಗುವದು.

೭ ಸರಕಾರದವರು ಆರ್ಡಿನನ್ಸಗಳನ್ನು ಮಾಡಿ, ದಬ್ಬಾಳಿಕೆ ನಡೆಸುವದೂ, ಪ್ರಜೆಗಳು ಕಾಯದೆ ಭಂಗ ಮಾಡಿ, ದೇಶದಲ್ಲಿ ಚಳವಳಿ ನಡೆಸುವದೂ, ದೇಶದಲ್ಲಿ ಅಶಾಂತಿ ಹೆಚ್ಚಿದ [illegible] ಬಲಪಡಿಸುವದು. ಒಂದಕ್ಕೊಂದು ವಿರುದ್ಧವಾಗಿ ನಡೆದ ಕೃತ್ಯದಿಂದ ಯಾವದೊಂದು ಪರ್ಯವಸಾನವಾಗದೆ, ಅವರವರ ಬಲಾಬಲದ ಪರೀಕ್ಷೆ ನಡೆಸಿದಂತಾಗುತ್ತದೆ. [illegible] ಉಪಯೋಗಿಸುವದೇ ಮೇಲು.

೮ ಸರಕಾರದವರು ಈ ದೃಷ್ಟಿಯಿಂದ ಸಮಯೋಚಿತ ರೀತಿಯಿಂದ ದಬ್ಬಾಳಿಕೆಯ ಎಲ್ಲ ಕಾಯದೆಗಳನ್ನು ರದ್ದು ಮಾಡಿ, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಸರಕಾರಕ್ಕೆ ಆಗ್ರಹಪೂರ್ವಕವಾಗಿ ಹೇಳುತ್ತೇವೆ. ಇದೇ ವೇಳೆಯಲ್ಲಿ ಕಾಂಗ್ರೆಸ ಮತ್ತು ಅದಕ್ಕೆ ಸಂಬಂಧಿಸಿದ ಬೇರೆ ಸಂಸ್ಥೆಗಳು ಅಸಹಕಾರ-ಕಾಯದೆಭಂಗವನ್ನು ನಿಲ್ಲಿಸಿ, ರಾವುಂಡಟೇಬಲಿನಂಥ ಸಂಧಿಯನ್ನು ಕಳಕೊಳ್ಳಬಾರದೆಂದು ಸೂಚಿಸುತ್ತೇವೆ. ಹಿಂದುಸ್ಥಾನದಲ್ಲಿ ಮಿಥ ಎಲ್ಲ ಪಕ್ಷ ಮತ ಪಂಥಗಳ ತತ್ವ ಮತ್ತು ಧ್ಯೇಯವು ಒಂದೇ ಆಗಿದ್ದು, ಅದರ ಕ್ರಮದ ಬಗ್ಗೆ ವಿಚಾರ ಮಾಡತಕ್ಕದ್ದಾಗಿದೆ. ಆದ್ದರಿಂದ ಲಂಡನಕ್ಕೆ ಹೋಗಿ, ಸಂಯುಕ್ತ ಸಂಘಟನೆಯಿಂದ ಈ ಉದ್ದೇಶವನ್ನು ನೆರವೇರಿಸಿಕೊಳ್ಳತಕ್ಕದ್ದಾಗಿರುತ್ತದೆ.

ಇಜಿಪ್ತ ಮತ್ತು ಹಿಂದುಸ್ಥಾನ.

ಮವಾಳ ಮುಖಂಡರು ಜಾಹೀರ ಪತ್ರಿಕೆಯನ್ನು ತೆಗೆಯುವಾಗ, ಅವರಿಗೆ ಇಜಿಪ್ತದ ಇತಿಹಾಸವು ನೆನಪಾದಂತೆ ತೋರಲಿಲ್ಲ. ಒಂದು ವೇಳೆ ಗೊತ್ತಿದ್ದರೂ, ಅವರು ಅದನ್ನು ಕಣ್ಣಾಡದಂತೆ ಮಾಡಿಕೊಂಡಿರಬಹುದು. ಇಜಿಪ್ತವು ಸ್ವಾತಂತ್ರ್ಯಾಪೇಕ್ಷೆಯಿಂದ ಧಗಧಗಿಸುತ್ತಿದ್ದಾಗ, ಮವಾಳರು ಮುಂತ್ರಿಯರಾಗಿದ್ದರು. ಮವಾಳರ ತಾತ್ಕಾಲಿಕ ಸಂಧಿಯನ್ನು ಮಾಡಿಕೊಂಡರೆ- ಅದು ಪ್ರಜಾಪಕ್ಷಕ್ಕೆ ಒಪ್ಪಿಗೆಯಾಗಲಾರದು. ಮವಾಳರು ಲಂಡನಕ್ಕೆ ಹೋಗುವದು ನಿರರ್ಥಕವಾಗುವದು. ಆದುದರಿಂದ ಮೊದಲು ಅಲ್ಲಿ ಪಾರ್ಲಮೆಂಟಿನ ಚುನಾವಣೆಯಾಗಲಿ, ಲೋಕಮತದ ಅಳವು ತಿಳಿಯಲಿ; ಪ್ರಧಾನಪಕ್ಷದವರಂಥವರು ಒಪ್ಪಂದಿಕೆಗೆ ಬರಲೆಂದು ಸೂಚಿಸಲು ಚುನಾವಣೆಯಾಗಿ, ನಾಹಸ ಪಾಶಾನ ಬಣವೇ ಬಹುಮತವುಳ್ಳದ್ದಾಗಿ, ವಿಲಾಯತಿಗೆ ಹೋಯಿತು. ಅಲ್ಲಿ ಸುದಾನಪ್ರಾಂತದ ಆಡಳಿತದ ಬಗ್ಗೆ ಮತಭೇದವಾಗಿ ಆ ಮಂಡಲವು ತಿರುಗಿ ಬಂತು. ಇದೇ ಪ್ರಕಾರ ಹಿಂದುಸ್ಥಾನದಿಂದ ರಾವುಂಡ ಟೇಬಲಕ್ಕೆ ಹೋಗುವ ಮಂಡಲವೂ ಹಿಂದಿರುಗಿ ಬರಬಹುದು. ಅಥವಾ ಬರಲಿಕ್ಕಿಲ್ಲ. ಏಕಂದರೆ- ಅದರಲ್ಲಿ ನಾಹಸ ಪಾಶಾನಂತೆ ಒಂದೇ ಪಂಗಡದ ಪ್ರತಿನಿಧಿಗಳು ಹೋಗಲಾರರು. ಹನ್ನೆರಡು ಧರ್ಮಗಳ ಕೋಟಲೆಯಿಂದ ಆ ಮಂಡಲವಾಗುತ್ತದೆ. ಕಾಂಗ್ರೆಸ ಪಕ್ಷದವರು ಎಷ್ಟು ಜನರಾದರೆ ಬೇಡಿಕೆಯನ್ನು ಮಂಡಿಸ ಜನರಿಗೇನೂ ಕೊರತೆಯಾಗಲಾರದು. ಅದ್ದರಿಂದ ಕೆಲವು ತತ್ವಗಳನ್ನು ಮೊದಲು ಒಪ್ಪಿ; ಆ ನಂತರ [illegible] ಎಲಿ ಬೇಕಾದಲ್ಲಿಗೆ ಕರೆಯಿರಿ

ವು ಮಹಾತ್ಮರು ಹೇಳುತ್ತಲಿದ್ದಾರೆ. ಲಾರ್ಡ ಆಯರ್ವಿನಸಾಹೇಬರಿಗೆ ಮಹಾತ್ಮರ ಹೇಳಿಕೆಯು ಅಪಥ್ಯವೆನಿಸಿದ್ದರಿಂದಲೇ, ಈಗಿನ ಪ್ರಕ್ಷೋಭೆಯು ಹುಟ್ಟಿತು. ಈ [illegible] ಮುಂದುಗಡೆಗಾಗಿ ಕಟ್ಟಿ ಮಾತಾಡುವ ವಹಕ್ಕೆ ಪ್ರಜೆಗಳು ತಮ್ಮ ಹಿತದ ಬೆಸಲಾರರೆಂಬುದು ಇದೆಷ್ಟು ಸ್ಪಷ್ಟವೃತ್ತಾಂತವಾಗಿರುತ್ತದೆ.

ವಿಲಾಯತಿಯ ಲೋಕಮತವು.

—(೦)—

ಇಂಗ್ಲಂಡದಲ್ಲಿ, ಲಾರ್ಡ ಆಯರ್ವಿನಸಾಹೇಬರು ಮಾಡಿದ ಭಾಷಣದ ಪ್ರತಿಗಳನ್ನು ಮುದ್ರಿಸಿ ಪಾರ್ಲಮೆಂಟ ಸಭೆಯಲ್ಲಿ ಆಗಿಂದಾಗ ಹಂಚಿದರು. ಕಾನ್ಸರ್ವೇಟಿವ್ಹ ಮತ್ತು ಲಿಬರಲರ ಮುಖಂಡರಾದ ಮಿ. ಬಾಲ್ಡ್ವಿನ್ನ ಮತ್ತು ಲಾಯಿಡ ಜಾರ್ಜಸಾಹೇಬರು ಈಗಾಗಲೇ ಅಭಿಪ್ರಾಯ ಕೊಡುವದಿಲ್ಲೆಂದರು. ಸಾಮಾನ್ಯವಾಗಿ ಇವೆರಡೂ ಪಕ್ಷಗಳ ಜನರು ಸಾಯಮನ್ನ ರಿಪೋರ್ಟಿಗೇ ಮಹತ್ವ ಕೊಡುತ್ತಿದ್ದು, ಅದರ ಮುಂದೆ ಒಂದು ಹೆಜ್ಜೆ ಕೂಡ ಮುಂದೆ ಹೋಗಲಾಗದೆಂಬ ಮತದವರಾಗಿದ್ದಾರೆ. ಮಾಜೀ ಭಾರತ ಮಂತ್ರಿಯಾದ ಲಾರ್ಡ ಬರ್ಕನಹೆಡ್ಡ, ಸರ್ವಾಧಿಪತಿ ಚಾರ್ಲ್ಸ ರೀಥಿಂಗಸಾಹೇಬ ಬಹಾದ್ದೂರರವರು ಹಿಂದುಸ್ಥಾನದ ಜನ್ಮಜನ್ಮಾಂತರದ ವೈರಿಗಳಂತೆ ಗೊಂದಲವೆಬ್ಬಿಸಿದ್ದಾರೆ. ಕೂಲಿಕಾರರ ಗುಂಪು ಬಣದವರು ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂತಲೂ ರಾವುಂಡಟೇಬಲಿನಲ್ಲಿ ಮಹಾತ್ಮರೂ, ಪಂಡಿತ ಮೋತಿಲಾಲರೂ ಇರಲೇಬೇಕೆಂದೂ ಆಗ್ರಹಪೂರ್ವಕವಾದ ಸೂಚನೆಮಾಡಿದ್ದಾರೆ. ಆದರೆ ಇವರಿಗೆ ಲಾರ್ಡಸಾಹೇಬರ ಭಾಷಣವು ತೃಪ್ತಿಯನ್ನುಂಟು ಮಾಡಿಲ್ಲ. ಹಿಂದುಸ್ಥಾನಕ್ಕೆ ವಸಾಹತಿನ ಸಂಪೂರ್ಣ ಸ್ವರಾಜ್ಯ ಕೊಡುತ್ತೇವೆಂದು ವಚನ ಕೊಟ್ಟರೇ- ಹಿಂದುಸ್ಥಾನದ ಸಮಾಧಾನವಾಗುವದೆಂದು ಮಿ. ಬ್ರಾಕವೇಸಾಹೇಬರು ಅಂದಿರುತ್ತಾರೆ. ಆರು ಸಾವಿರ ಮೈಲುಗಳ ಮೇಲಿರುವಂಥ ಯುರೋಪಿಯನ್ನರಿಗೆ ಹೊಳೆಯುವಂಥ ಮಾತು. ಹಿಂದುಸ್ಥಾನದಲ್ಲಿರುವ ಮವಾಳರಿಗೆ ಹೊಳೆಯುವದಿಲ್ಲ! ಜಾಹೀರನಾಮೆ ತೆಗೆದ ಮೇಲೆ ಹೇಳಿದ ಮವಾಳರಿಗೆಲ್ಲ ರಾವುಂಡಟೇಬಲ್ಲದ ಆಮಂತ್ರಣವೇಬೇಕು! ಅಂತೇ ಅವರು ಅದಕ್ಕಾಗಿ ಹಪಾಪಿಸಿದ್ದಾರೆ.

ಒಬ್ಬ ವಕೀಲನು ಕ್ಷಮಾ ಬೇಡಿಕೊಂಡನು.

ನಾಸಿಕದ ಸಾವಳೆ ನಾಮದ ವಕೀಲರು ವನಗಾವಲಿನ ಕಾಯದೆಭಂಗ ಮಾಡಿದ್ದರಿಂದ ಪೋಲೀಸರು ಇವರನ್ನು ಹಿಡಿದರು. ಆದರೆ ವಕೀಲಸಾಹೇಬರು ಸರಕಾರದ ಕ್ಷಮಾ ಬೇಡಿಕೊಂಡದ್ದರಿಂದ, ಇವರ ಮೇಲಿನ ಪ್ರಕರಣ ತೆಗೆದು ಹಾಕಲ್ಪಟ್ಟಿತು.

ಹೊಂಬಳ ಬಳಗಾನೂರ ರೇಲ್ವೆಯ ಘಾತ.

—(೦)—

೫೦೦೦ ರೂಪಾಯಿಯ ಇನಾಮು.

—(೦)—

ಜುಲೈ ತಿಂಗಳ ೩ನೆಯ ತಾರೀಖಿನ ದಿವಸ ಹೊಂಬಳ ಮತ್ತು ಬಳಗಾನೂರ ಸ್ಟೇಶನಗಳ ನಡುವೆ ಆದಂಥ ರೇಲ್ವೆ ಅಪಘಾತವಾಗಲು ಕಾರಣರಂಥವರನ್ನು ಹಿಡಕೊಟ್ಟು, ಅವರು ಶಿಕ್ಷೆ ಹೊಂದುವಷ್ಟು ಪುರಾವೆ ದೊರಕಿಸಿ ಕೊಟ್ಟವರಿಗೆ ಮದ್ರಾಸ ಮತ್ತು ಸದರ್ನಮರಾಠಾ ರೇಲ್ವೆಯ ಏಜಂಟರು ಐದು ಸಾವಿರ ರೂಪಾಯಿಗಳ ಇನಾಮು ಕೊಡುವಂತೆ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಮನೆಯವರೇ ಹಿಂದೂ ಮುಸಲಮಾನ ಮ್ಯಾಜಿಸ್ಟ್ರೇಟರಿಂದ ಕೆಲಸಕ್ಕೆ ರಾಜೀನಾಮೆ ಕೊಡಿಸಿದರು.

—(೦)—

ಬಂಗಾಲಕ್ಕೆ ಸೇರಿದ ಬೇಲೂರಘಾಟದಲ್ಲಿರುವ ಶ್ರೀ. ಗೋಪಾಳಚಂದ್ರ ಚಟರಜಿ ಮತ್ತು ಮೌಲ್ವಿ ಅಬ್ದುಲ ಚವಧರಿಯವರು ಆನರರಿ ಮ್ಯಾಜಿಸ್ಟ್ರೇಟರಾಗಿದ್ದರು. ಇವರ ಕುಟುಂಬದವರು ಇವರನ್ನು ಒತ್ತಾಯಪಡಿಸಿ, ಇವರಿಂದ ರಾಜೀನಾಮೆ ಕೊಡಿಸಿದರು. ಆನರರಿ ಮ್ಯಾಜಿಸ್ಟ್ರೇಟ ಕೆಲಸವೆಂದರೆ- ಊರು ಉಪಕಾರ ಅರಿಯದು, ಹೆಣ ಶೃಂಗಾರ ಅರಿಯದೆಂಬಂತಿದ್ದು, ಅವರವರ ಕುಟುಂಬದವರು ಇಂಥವರಿಂದ ರಾಜೀನಾಮೆ ಕೊಡಿಸಿ, ಬೇರೊಂದು ದೇಹಸಾರ್ಥಕವಾಗುವಂಥ ಪರೋಪಕಾರ ಕೃತ್ಯಕ್ಕೆ ಹಚ್ಚುವದು ಯುಕ್ತವು.

ಗುಂಟೂರಲ್ಲಿ
ಗಾಂಧೀ ಟೊಪ್ಪಿಗೆ ಹಾಕುವವರಿಗೆ ದೊಣ್ಣೆಯ ಹೊಡತ,

—(೦)—

ಗುಂಟೂರಿನ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ. ಸ್ಟೂವರ್ಟಸಾಹೇಬರು ಇಟಲಿಯ ಮುಸೋಲಿನಿಯ ಚಿಕ್ಕ ಮೂರ್ತಿಯಾಗಿದ್ದಾರೆ. ಇವರು ಝಾರಶಾಹಿಯಂತೆ ಅಧಿಕಾರ ನಡೆಸಿದ್ದಾರೆ. ಗಾಂಧೀ ಟೊಪ್ಪಿಗೆ ಹಾಕಿಕೊಂಡ ಆರು ನೂರು ಜನರನ್ನು ಹಿಡಿದಿದ್ದಾರಲ್ಲದೆ, ಈ ದಸ್ತಗಿರಿಯು ಸಾಲದಾಗಿ, ಟೊಪ್ಪಿಗೆ ಹಾಕಿದವರನ್ನು ಪೋಲೀಸರಿಂದ ಹೊಡಿಸಲು ಹಚ್ಚಿಸಿದ್ದಾರೆ. ದೊಣ್ಣೆಯ ಪ್ರಸಾದ ದೊರೆತರೂ, ಕಾಂಗ್ರೆಸದವರು ಟೊಪ್ಪಿಗೆ ಹಾಕಿ, ಊರೊಳಗೆ ಹೋಗುವರು. ಇದಕ್ಕೇ ಸತ್ಯಾಗ್ರಹವೆನ್ನುತ್ತಾರೆ.

ಇಂಗ್ರೇಜಿ ಮ್ಯಾಂಟಲದ ಬದಲು ಜರ್ಮನ ಮ್ಯಾಂಟಲ್.

—(೦)—

ಬಹಿಷ್ಕಾರದ ಚಳವಳಿಯ ದೆಸೆಯಿಂದ ಕಲಕತ್ತೆಯ ಮ್ಯುನಿಸಿಪಾಲಿಟಿಯ ಜನರಲ ಕಮೀಟಿಯವರು ಕಿಟಸನ ಬತ್ತಿಗಳಿಗೆ ಬೇಕಾಗುವ ೨೫೦೦೦ ರೂಪಾಯಿಗಳ ಮ್ಯಾಂಟಲಗಳನ್ನು ಜರ್ಮನಿಯಿಂದ ತರಿಸಬೇಕೆಂದು ಠರಾವು ಮಾಡಿದರು.

ಪ್ರಬಲ ವಕೀಲನ ದಸ್ತಗಿರಿ.

—(೦)—

ಖುಲ್ನಾದಲ್ಲಿರುವ ಪ್ರಸಿದ್ಧ ವಕೀಲರಾದ ಶ್ರೀ. ಬಾಬೂ ಜ್ಯೋತಿಷಚಂದ್ರ ಬೋಸರವರನ್ನು ತುರಂಗದಲ್ಲಿರುವ ಕೈದಿಗಳ ಕೂಡ ವ್ಯವಹಾರವಿಟ್ಟಿದ್ದರೆಂಬ ಆರೋಪದಿಂದ ಹಿಡಿದಿದ್ದಾರೆ.

ಹಪ್ತೆ ಕೊಡಬೇಡಿರೆಂದು ಹೇಳಿದ್ದಕ್ಕೆ ಕೌನ್ಸಿಲ ಮೆಂಬರರಿಗೆ ಶಿಕ್ಷೆ.

—(೦)—

ಮುಂಬಯಿ ಕೌನ್ಸಿಲ ಮೆಂಬರ ಮತ್ತು ಅಹಮದಬಾದ ಮ್ಯುನಿಸಿಪಾಲಿಟಿಯ ವ್ಹಾಯಿಸ ಪ್ರೆಸಿಡೆಂಟರಾಗಿದ್ದ ಪ್ರೊಫೆಸರ ಸ್ವಾಮಿ ನಾರಾಯಣರು ರೈತರಿಗೆ ಹಪ್ತೆ ಕೊಡಬೇಡಿರೆಂದು ಉತ್ತೇಜನ ಕೊಟ್ಟರೆಂಬ ಆರೋಪ ಹೊರಿಸಿ, ಆರು ತಿಂಗಳ ಶಿಕ್ಷೆ ವಿಧಿಸಿದರು.

ವನಗಾವಲದ ಕಾಯದೆ ಮುರಿದುದಕ್ಕೆ ಅಸೆಂಬ್ಲಿಯ ಮೆಂಬರರಿಗೆ ಶಿಕ್ಷೆ.

—(೦)—

ವರ್‍ಹಾಡದಲ್ಲಿ ವನಗಾವಲದ ಕಾಯದೆ ಮುರಿಯಲು ದೊಡ್ಡ ದಂಡನ್ನು ಕಟ್ಕೊಂಡು ಹೋಗಿದ್ದ ಶ್ರೀ. ಅಣೆ ಮಾಧವರಾಯರಿಗೆ ಆರು ತಿಂಗಳ ಸಾದಾ ಮತ್ತು ಅವರ ಸಂಗಡ ಮೊದಲನೆಯ ತುಕ್ಡಿಗೆ ಬಿದ್ದ [illegible] ಜನ ಸ್ವಯಂಸೇವಕರಿಗೆ ಆರು ತಿಂಗಳ ಸಾದಾ ಕೈದಿನ ಶಿಕ್ಷೆಯಾಯಿತು.

ಗುಳೇದಗುಡ್ಡದಲ್ಲಿ ಗಡಂಗದ ಮುಂದಿನ ಪಿಕೆಟಿಂಗು ಯಶಸ್ವಿಯಾಗಿದೆ. ದುಡ್ಡು ಕೊಡದೆ ಹಾಗೇ ಕುಡಿದು ಹೋಗಿರೆಂದು ಕಲಾಲನು ಕುಡುಕರನ್ನು ಕರೆಯುವನು. ಆದರೆ ಒಬ್ಬ ಕುಡುಕನೂ ಅತ್ತ ಹಾಯದಾಗಿದ್ದಾನೆ.

ಡಾಕ್ಟರ ಮುಂಜೆಯವರಿಗೆ ಕೋರ್ಟು ಏಳುವ ತನಕ ಶೀಕ್ಷೆ.

—:(*):—

ವನಗಾವಲದ ಕಾಯದೆ ಮುರಿದದ್ದಕ್ಕಾಗಿ ಡಾಕ್ಟರ ಮುಂಜೆಯವರಿಗೆ ಕೋರ್ಟು ಏಳುವ ತನಕ ಕೈದು ಅಥವಾ ಐದು ರೂಪಾಯಿ ದಂಡದ ಶೀಕ್ಷೆಯಾಯಿತು. ಇವರ ಮೇಲೆ ಇಷ್ಟೇಕೆ ಉಪಕಾರ! ರಾವುಂಡ ಟೇಬಲಕ್ಕೆ ಆಮಂತ್ರಣವಿರಬಹುದು.

ಸಬ್ಬ ಇನ್ಸಪೇಕ್ಟರನಿಗೆ ಸತ್ಯಾಗ್ರಹಕ್ಕಾಗಿ ತುರಂಗವಾಸ.

—(೦)—

ಸಂಗಮನೇರದಲ್ಲಿ ಸಬ್ಬ ಇನ್ಸಪೇಕ್ಟರ ಕೆಲಸದಿಂದ ನಿವೃತ್ತರಾಗಿ ಸತ್ಯಾಗ್ರಹದಲ್ಲಿ ಸೇರಿದವರಾದ ಶ್ರೀ. ವಿನಾಯಕರಾವ ತಾವಡೆಯವರನ್ನು ಕಾಯದೆಭಂಗದ ದೆಸೆಯಿಂದ ಹಿಡಿದಿದ್ದಾರೆ ಒಂದೆರಡು ದಿವಸಗಳಲ್ಲಿ ತುರಂಗ ಕಂಡ ವರ್ತಮಾನ ಬರುವದು.

ಹಾಯಕೋರ್ಟಿನಲ್ಲಿ ಸೊಲ್ಲಾಪೂರದ ಖೂನಿಯ ವಿಚಾರಣೆ.

—(೦)—

ಕಳೆದ ಮೂರು ದಿವಸಗಳಿಂದ ಮುಂಬಯಿಯ ಹಾಯಕೋರ್ಟಿನಲ್ಲಿ ಸೊಲ್ಲಾಪೂರದ ಕೊಲೆಯ ಪ್ರಕರಣದ ಆರೋಪಿಗಳ ಅಪೀಲಿಯ ಡಿಫೆನ್ಸ ನಡೆಯಿತು. ಶ್ರೀ. ಬಾಲೂಭಾಯಿ ದೇಸಾಯಿಯವರು ಆರೋಪಿಗಳ ವತಿಯಿಂದ ಕೆಲಸ ನಡೆಸಿದರು. ಇಂದು ತೀರ್ಪುಂಟು.

ಮುಂಬಯಿಯಲ್ಲಿ ಮುಸಲಮಾನ ಸ್ತ್ರೀಯರ ಮೆರವಣಿಗೆ.

—○*○—

ಸ್ವರ್ಗವಾಸಿ ಬದ್ರುದ್ದೀನ ತಯಬಜಿಯವರ ೭೧ ವರ್ಷದ ಮಗಳಿಗೆ ಶೀಕ್ಷೆಯಾದ್ದರ ನಿಷೇಧವೆಂದು ಮುಸಲಮಾನ ಸ್ತ್ರೀಯರು ಬುರಿಕೆ ಹಾಕಿಕೊಂಡೇ ಮೆರವಣಿಗೆ ತೆಗೆದಿದ್ದರು. ಶೀಕ್ಷೆ ಹೊಂದಿದವಳ ಮಗಳೇ ಇದರ ಮುಖಂಡಳಾಗಿದ್ದಳು.

ಸತ್ಯಾಗ್ರಹಕ್ಕಾಗಿ ವಕೀಲಿ ಪರೀಕ್ಷೆ ಮುಂದೆ ಬಿತ್ತು.

—(●)—

ಕಲಕತ್ತೆಯಲ್ಲಿ ಎಲ್. ಎಲ್. ಬಿ ಪರೀಕ್ಷೆಯು ಬುಧವಾರ ದಿವಸ ಪ್ರಾರಂಭವಾಗತಕ್ಕದ್ದಿತ್ತು. ಲೇಡಿ ವಾಲಂಟಿಯರರು ಪಿಕೆಟಿಂಗ ಮಾಡಿ, ಒಬ್ಬರೂ ಪರೀಕ್ಷೆಗೆ [illegible]ದಂತೆ ಮಾಡಿದ್ದಾರೆ. ೯೦೦ ಜನ ಉಮೇ[illegible]ದ್ದರು.

ಬ್ಯಾರಿಸ್ಟರ ಜಯಕರರು ಲಾರ್ಡ ಆಯರ್ವಿನಸಾಹೇಬರನ್ನು ಕಂಡು, ಈಗಿನ ಚಳವಳಿಯನ್ನು ಶಾಂತ ಮಾಡಿಸಲು, ಎಲ್ಲ ರಾಜಕೀಯ ಕೈದಿಗಳನ್ನು ಬಿಡಿಸಲು ಪ್ರಯತ್ನಿಸಬೇಕೆಂದು ಸಿಮಲಾದಲ್ಲಿ ಸೇರಿದ ಹಿಂದೂ ಮೆಂಬರರು ಏರ್ಪಾಡು ಮಾಡುತ್ತಲಿದ್ದಾರೆ.

ಸಂಸ್ಥಾನಿಕರ ವತಿಯಿಂದ ರಾವುಂಡ ಟೇಬಲದ ಬಗ್ಗೆ ಮುಂದಾಗಿ ವಿಚಾರ ಮಾಡಲು ತ್ರಾವಣಕೋರ ಮತ್ತು ಕೋಚಿನದ ದಿವಾಣರು ಬೆಂಗಳೂರಿಗೆ ಬರುವರು.

ಹುಬ್ಬಳ್ಳಿಯ ಸುದ್ದಿಗಳು.

—(೦)—

ಗಾಂಧೀ ದ್ವೇಷಮಾಡುವ ಒಬ್ಬ ಪಂತರು !!

——(೦)——

ಇಲ್ಲಿಗೆ ಶ್ರೀ. ಅ. ರಂಗಾಚಾರ್ಯರು ಬಂದು ವ್ಯಾಖ್ಯಾನವನ್ನು ಕೊಟ್ಟು ಊರಲ್ಲಿ ಜಾಗೃತೆಯನ್ನುಂಟುಮಾಡಿರುವರು. ಊರಲ್ಲಿ ಉತ್ಸಾಹವು ಚನ್ನಾಗಿದೆ. ಲಾಠೀ ಕ್ಲಾಸು ಪ್ರಾರಂಭವಾಗಿದೆ. ೩೦ ಹುಡುಗರು ಲಾಠೀ ಕ್ಲಾಸಿಗೆ ಬರುತ್ತಿರುವರು. ಮೊನ್ನಿನ ಗುರುವಾರ ಶ್ರೀ. ಬಸವೇಶ್ವರನ ಗುಡಿಯಲ್ಲಿ ಸಭೆಯಾಯಿತು

ಊರಲ್ಲಿ ಖಾದೀಕಾರ್ಯವು ಬಹು ಜೋರಿನಿಂದ ಸಾಗಿದೆ. ಈಗಾಗಲೇ ೪೦-೫೦ ರಾಟಿಗಳು ತಿರುಗುತ್ತಲಿವೆ. ೨ ಮಗ್ಗಗಳ ಮೇಲೆಯೂ ಖಾದಿಯು ನಡೆದದೆ.

ಈ ಊರಲ್ಲಿ ಶ್ರೀ. ಸಂಕಲ್ಪಾಚಾರ್ಯರನೆಂಬ ಒಬ್ಬ ಉಪದ್ವ್ಯಾಪೀ ಶಾಲಾಮಾಸ್ತರನಿರುವನು ಸರ್ವದಾ ಶಾಲೆಯಲ್ಲಿ ಹೊರಗೆ ಒಳಗೆ ಮಹಾತ್ಮರನ್ನು ಬೈಯುವದೇ ಇವನ ಉದ್ಯೋಗವಾಗಿದೆ. ಮಹಾತ್ಮರನ್ನೂ ಚಳವಳಿಯನ್ನೂ ಬೈಯ್ಯುವಂಥ ಪದ್ಯಗಳನ್ನು ರಚಿಸಿ ಹುಡುಗರಿಗೆ ಕಲಿಸುವ ಉಪದ್ವ್ಯಾಪವನ್ನು ಮಾಡಲು ಪ್ರಾರಂಭಿಸಿದ್ದರಿಂದ ಹುಡುಗರು ಶಾಲೆಗೆ ಬಹಿಷ್ಕಾರ ಹಾಕುವ ವಿಚಾರವನ್ನು ನಡಿಸಿರುವರು. ಇಂಥ ಶಾಲಾಮಾಸ್ತರರಿಗೆ ಮೇಲಧಿಕಾರಿಗಳ ಪ್ರೋತ್ಸಾಹವಿದೆಯೆಂದೂ ಹಲವರನ್ನುತ್ತಾರೆ. ಇದರಿಂದ ಶಾಲೆಗೆ ತೊಂದರೆಯಾಗುವ ಸಂಭವವದೆ.

ಊರಲ್ಲಿ ಕುಡಿಯಲು ನೀರಿಲ್ಲ. ಮಳೆಯಿಲ್ಲ!

ನೋಟೀಸು

ಈರಾ ತಂದಿ ಮಡಿವಾಳಪ್ಪಾ ಕುಂಬಾರ ಸಾಕೀನ ನರೇಂದ್ರ, ಈತನಿಗೆ–

ಕೆಳಗೆ ಹೆಬ್ಬಟ್ಟಿನ ಗುರ್ತು ಮಾಡುವ ಶಿದ್ದವ್ವಾ ಕೋಮ ಈರಾ ಕುಂಬಾರ ಹಾಲಿವಸ್ತಿ ಮು|| ತಾಲೂಕ ಸಂಪಗಾಂವ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಮದಿವೆಯ ಗಂಡನಾಗಬೇಕು ನಾನು ಪ್ರಬುದ್ಧಳಾದ ಬಳಿಕ ನಿನ್ನಲ್ಲಿ ಪುರುಷತ್ವವಿಲ್ಲೆಂದು ಕಂಡು ಬಂತು. ಆಗ ನೀನು ನನ್ನನ್ನು ಕೆಟ್ಟ ರೀತಿಯಿಂದ ನಡಿಸಿಕೊಂಡು, ಕಡೆಗೆ ಮನೆ ಬಿಟ್ಟು ಹೊರಗೆ ಹಾಕಿದಿ ಹೊರಗೆ ಹಾಕುವಾಗ ನನ್ನ ಮೈಮೇಲಿನ ಡಾಗೀನೆ ಕಸಕೊಂಡಿ, ಅವುಗಳ ತಪಶೀಲು–

೧ ಒಂದು ಜೋಡು ಬಂಗಾರದ ಓಲಿ ತೊಲಿ ಐದು

೨ ಪುತಳಿ ಸರಾ

ಹೊರಗೆ ಹಾಕಿ ಮೂರು ವರ್ಷವಾಯಿತು ಆಗಿನಿಂದ ನಾನು ತವರ ಮನೆಯಲ್ಲಿದ್ದು, ಹಾಗೂ ಹೀಗೂ ಇರುತ್ತಿದ್ದೆ. ನಡುವೆ ನೀನು ಒಂದೊಂದು ತಿಂಗಳು ಕರಕೊಂಡು ಹೋಗುತ್ತಿದ್ದಿ ಆದರೆ ನಿನ್ನಲ್ಲಿ ಪುರುಷತ್ವವಿರಲಿಲ್ಲ ಈ ಸಾರೆ ಒಂದು ತಿಂಗಳ ಹಿಂದೆ ನೀನು ನನ್ನ ಮನೆಗೆ ಬಂದು, ನಾನು ಔಷಧ ತಕ್ಕೊಂಡು ಸಟ್ಟಗಾಗಿದ್ದೇನೆ. ಬಾ ಎಂದು ಕರೆದದ್ದರಿಂದ ನನ್ನ ತವರ ಮನೆಯವರು ಕಳಿಸಿದರು. ಆದರೆ ನೀನು ನನ್ನ ಕೂಡ ಬಾಳಿವೆ ಮಾಡುವದರ ಬದಲು– ನನ್ನನ್ನು ಮನೀಬಿಟ್ಟು ಹೊರಗೆ ಹಾಕಿ, ನನ್ನ ಮೇಲೆ ಕಳವಿನ ಆರೋಪಹೊರಿಸಿ, ಮಾಮಲೇದಾರ ಕೋರ್ಟಿನಲ್ಲಿ ಫಿರ್ಯಾದಿ ಮಾಡಿರುತ್ತೀದಿ. ನಿನಗೆ ನಾನು ಈ ನೋಟೀಸಿನಿಂದ ತಿಳಿಸುವದೇನಂದರೆ– ನೀನು ನನ್ನ ಮಾನಹಾನಿಯಾಗುವಂಥ ಕೃತ್ಯ ಮಾಡಿದ್ದರಿಂದ ಮತ್ತು ನಿನ್ನಲ್ಲಿ ಪುರುಷತ್ವವಿಲ್ಲದ್ದರಿಂದ ನಾನು ನಿನ್ನ ಕೂಡ ಬಾಳಿವೆ ಮಾಡಲಿಕ್ಕೆ ಬಿಲಕೂಲ ಇಚ್ಛಿಸುವದಿಲ್ಲ. ಮತ್ತು ಈ ನೋಟೀಸ ಸೋಡಪತ್ರವೆಂದು ತಿಳಿಯಬೇಕು. ಇಂದಿನಿಂದ ನನ್ನ ನಿನ್ನ ಗಂಡಹೆಂಡರೆಂಬ ಸಂಬಂಧ ಉಳಿಯಲಿಲ್ಲ. ತಿಳಿಯುವದು. ತಾ|| ೧೩ ಜುಲೈ ೧೯೩೦ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಶಿದ್ದವ್ವಾ ಕೋಮ ಈರಾ ಕುಂಬಾರ ಈಕಿಯದು ಇರುತ್ತದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಾಗ್ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧   ಧಾರವಾಡ ಸೋಮವಾರ ತಾರೀಖು ೧೪ ನೇ ಜುಲೈ, ೧೯೩೦   (ಸಂಚಿಕೆ ೧೫೬

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್

(ಇಂಗ್ಲಂಡದಲ್ಲಿ ಇನ್ಕಾರಪೊರೆಟೆಡ್ ಮಾಡಿದ್ದು.)

ನೋಟೀಸು

ಕೆಲಸಕ್ಕೆ ನಿರುಪಯೋಗವಾದಂಥ ಪೆರಂಬೂರಿನಲ್ಲಿರುವ ರೇಲ್ವೆ ಸ್ಟೋರಿನಲ್ಲಿರುವ ಸಾಮಾನು ಅಂದರೆ- ಹಳೇ ಆಯುಧಗಳು (ಟೂಲ್ಸ) ಡಬ್ಲು. ಆಯ. ಕ್ಯಾಬ ಮತ್ತು ಸಿಲೆಂಡರದ ಟಾಕಿಗಳು, ಮೋಜಣಿಯ ಸಾಮಾನುಗಳು ವಿದ್ಯುತ್ತಿನ ಉಪಕರಣಗಳು ಟಿ. ಡಬ್ಲು. ಬಾಗಿಲ ಮತ್ತು ಕಿಟಕಿಯ ಕಟ್ಟುಗಳು, ಶಿಟರ್ಸಗಳು, ಸ್ಲೀಪರ ಮತ್ತು ಸ್ಕ್ಯಾಂಟಲಿಂಗ, ಉಕ್ಕಿನ ತುಂಡುಗಳು, ಖಾಲೀ ಡ್ರಮ್ಮುಗಳು ಪೀಪಾಯಿಗಳು, ಸಿಮೆಂಟಿನ ಚೀಲಗಳು ಇವು ಮುಂತಾದವುಗಳ ಜಾಹೀರ ಲಿಲಾವು ಪೆರಂಬೂರಿನಲ್ಲಿ ೧೯೩೦ನೇ ಇಸವಿಯ ಜುಲೈ ತಿಂಗಳ ೨೮ನೇ ತಾರೀಖು ಸೋಮವಾರ ಪ್ರಾತಃಕಾಲದ ಎಂಟು ಗಂಟೆಗೆ ಪ್ರಾರಂಭವಾಗಿ ಮುಂದೆ ಹಾಗೇ ನಡೆಯುವದು.

ಹಣ ರೋಖ

ಲಿಲಾವಿನ ಶರ್ತುಗಳನ್ನೊಳಗೊಂಡ ಮತ್ತು ಮಾರಾಟದ ಸಾಮಾನದ ಯಾದಿಯು ಛಾಪಿಸಿದ ಫಾರ್ಮುಗಳನ್ನು ಪೆರಂಬೂರದಲ್ಲಿರುವ ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿಯ ಕಂಟ್ರೋಲರ ಆಫ್ ಸ್ಟೋರ್ಸ ಇವರಿಗೆ ಅರ್ಜೀ ಮಾಡಿ ಇವರಿಂದ ತರಿಸಿಕೊಳ್ಳಬೇಕು.

ಸವಾಲು ಮಾಡಲಿಕ್ಕೆ ಬರತಕ್ಕವರಿಗೆ ರೇಲ್ವೆಯ ಫ್ರೀ ಪಾಸ ದೊರೆಯಲಾರದು.

A. C. TURNER.
Controller of Stores.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಬಾಗೀನೆಗಳನು ವಸ್ತೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ವಿ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಆಷಾಢ ವದ್ಯ ೪

ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವದು ಯಾರ ಕಯ್ಯಲ್ಲುಂಟು ?

(೦)

ಹಿಂದುಸ್ಥಾನಕ್ಕೆ ಈ ಕ್ಷಣವೇ ವಸಾಹಾತಿನ ಸ್ವರಾಜ್ಯ ಕೊಡಬೇಕೆಂಬ ವಿಷಯದ ಪ್ರಸ್ತಾಪವು ಕೌನ್ಸಿಲ ಆಫ ಸ್ಟೇಟದಲ್ಲಿ ನಡೆಯಿತು. ಪಾರ್ಲಮೆಂಟ ಸಭೆಯಲ್ಲಿ ಮೆ. ಬೆನ್ನ ವೆಜ್ಜವುಡ್ಡ ಸಾಹೇಬರೂ ಹಿಂದುಸ್ಥಾನದಲ್ಲಿ ಲಾರ್ಡ ಆಯರ್ವಿನಸಾಹೇಬರೂ ವಸಾಹಾತಿನ ಸ್ವರಾಜ್ಯವು ತಮ್ಮ ಕೊನೆಯ ಧ್ಯೇಯವಾಗಿದೆಂದೂ, ರಾವುಂಡ ಟೇಬಲದಲ್ಲಿ ಈ ವಿಷಯವು ಅಂಗೋಪಾಂಗವಾಗಿ ಪ್ರತಿಯೊಬ್ಬರು ನಿರ್ಮಲ ಮನಸ್ಸಿನಲ್ಲಿ ಮಾತಾಡಬಹುದೆಂದೂ ಹೇಳಿದ್ದಾರೆ. ಇವರು ಹೀಗೆ ಹೇಳಿದರೇನಾಯಿತು? ಇವರೆಷ್ಟು ಸಹಾನುಭೂತಿಯುಳ್ಳವರಾದರೂ, ಸ್ವರಾಜ್ಯ ಕೊಡುವದು ಇವರೀರ್ವರ ಕಯ್ಯಲ್ಲಿಯೂ ಇಲ್ಲೆಂದು ಕುಲದಿಂದ ಫಾರ್ಸಿ, ಮತದಿಂದ ಮವಾಳರಾದಂಥ ಸರ ಫೆರೋಜ ಸೆಟನಾಸಾಹೇಬರೇ ಉದ್ಗಾರ ತೆಗೆದಿದ್ದಾರೆ. ಈ ಸಾಹೇಬರು ಹೇಳುವದು ಯಥಾರ್ಥವಾದಿ ಬಹುಜನ ವಿರೋಧಿ ಎಂಬಂತೆ ಅಸೆಂಬ್ಲಿಯ ಜನರಲ್ಲಿ ಕಂಡು ಬಂತು. ಸರಕಾರದವರು ಹೇಗಾದರೂ ವಚನಕೊಟ್ಟಿದ್ದಾರೆ. ಆದ್ದರಿಂದ ನಿಮ್ಮ ಠರಾವನ್ನು ಹಿಂದಕ್ಕೆ ತಕ್ಕೊಳ್ಳಿರೆಂದು ಸರರಿಗೆ ಒತ್ತಾಯ ಮಾಡಲು- ಅವರು ತಥಾಸ್ತು ಎಂದರು.

ಲಾರ್ಡ ಆಯರ್ವಿನಸಾಹೇಬರು ಮಾಡಿದ ಭಾಷಣವು ಮವಾಳರಿಗೆಲ್ಲ ಮಹದಾನಂದವನ್ನುಂಟು ಮಾಡಿರುತ್ತದೆ. ಲಂಡನಕ್ಕೆ ಹೋಗಿ, ಅಲ್ಲಿ ಕೃತಕೃತ್ಯರಾಗೇ ಬರಬೇಕೆಂದು ಇವರು ಪಂಥಗಟ್ಟಿದ್ದಾರೆ. ಇವರಲ್ಲೆಲ್ಲೋರ್ವ ಪ್ರಮುಖರಾದ ಬ್ಯಾರಿಸ್ಟರ ಜಿನ್ನಾಸಾಹೇಬರು ಅಸೆಂಬ್ಲಿಯಲ್ಲಿ ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

ಒಂದು ವೇಳೆ ರಾವುಂಡ ಟೇಬಲವು ಮುರಿಯಬಹುದು. ಮತ್ತು ನಮ್ಮ ಆಶೆಗಳು ಒಡೆದು ಹಂಚು ಆಗಬಹುದು. ನಮ್ಮ ಹೇಳಿಕೆ ಕೇಳಿಕೆಯು ಪವಿತ್ರ ಮತ್ತು ನ್ಯಾಯವಾದದ್ದಿರುವದರಿಂದ ಅದ [illegible] ಧ್ಯತೆಗಾಗಿ ಲಂಡನಕ್ಕೆ ಹೋಗತಕ್ಕವನೇ ಸರಿ. [illegible] ಅಲ್ಲಿಗೆ ಹೋಗದಿದ್ದರೆ- ಜಗತ್ತಿನ ಮುಂ[illegible] ನನ್ನ ಕರ್ತವ್ಯ ಮಾಡಿದಂತಾಗುವದಿಲ್ಲ. [illegible] ಹೇಳಿಕೆಯನ್ನು ಟೇಬಲದ ಮುಂದಿಡುವೆನು. [illegible]ತ್ತು ಅದರಿಂದ ನಿರ್ಣಯಮಾಡಿಕೊಳ್ಳುವೆನು. ಈ ಕೆಲಸದಲ್ಲಿ ಅಪಜಯ ಬಂದರೆ ಮುಂದೆ ನನ್ನ ಬುದ್ಧಿಗೆ ತೋಚಿದಂತೆ ನಡೆಯುವೆನು. ಜಯಬಂದರೆ- ನನ್ನ ದೇಶಿಯರಿಗಾಗಿ ಅತಿ ಶ್ರೇಷ್ಠವಾದ ಕರ್ತವ್ಯ ಮಾಡಿದಂತಾಗುವದು. ಈ ಸಮಯದಲ್ಲಿ ನಿಜವಾದ ಪ್ರತಿನಿಧಿಗಳನ್ನೇ ಆರಿಸಬೇಕೆಂದು ನಾನು ಸರಕಾರಕ್ಕೆ ಅತ್ಯಗತ್ಯವಾಗಿ ಸೂಚಿಸುತ್ತೇನೆ.

ಬ್ಯಾರಿಸ್ಟರ ಜಿನ್ನಾಸಾಹೇಬರು ಹಲವು ಸಾರೆ ಲಾರ್ಡ ಆಯರ್ವಿನಸಾಹೇಬರ ಕೂಡ ಈ ವಿಷಯವಾಗಿ ಸಂಭಾಷಣೆಗೈದಿದ್ದಾಗ್ಗೆ ಯಾರಾರಿಗೆ ಆಮಂತ್ರಣ ಬರಬಹುದೆಂಬದು ಗೊತ್ತಾಗಿರಬಹುದು. ಆ ಜನರ ವಿಷಯವಾಗಿ ಸಂಶಯ ಬಂದೇ ನಿಜವಾದ ಪ್ರತಿನಿಧಿಗಳನ್ನು ಆರಿಸಬೇಕೆಂದು ಸೂಚಿಸುತ್ತಾರೆ. ಹಿಂದೀ ಪ್ರತಿನಿಧಿಗಳ ಹೆಸರು ಪ್ರಸಿದ್ಧವಾಗುವ ಮುಂಚಿತವಾಗಿ, ಸಿವ್ಹಿಲ ಸರ್ವಂಟರಾದಂಥ ಮೂವರು ಸಾಹೇಬರನ್ನು ನೇಮಿಸಿದಂತೆ ಸರಕಾರದವರು ಜಾಹೀರ ಮಾಡಿದ್ದಾರೆ. ಸರಕಾರದ ಈ ಕೃತ್ಯವನ್ನು ಇವರು ದೂಷಿಸಿದ್ದಾರೆ. ಈ ದೂಷಣೆಯು ಮುಂದಿನ ಭವಣೆಯ ಪ್ರಸಾದ ಚಿನ್ಹವಾಗುವದಿಲ್ಲವೇ?

ಬ್ಯಾರಿಸ್ಟರ ಜಿನ್ನಾ ಸಾಹೇಬರ ತರುವಾಯಾ ಸರ ಸಿ. ಪಿ ರಾಮಸ್ವಾಮಿ ಅಯ್ಯರರು ಬ್ರಿಟಿಶರ ನ್ಯಾಯ-ರೀತಿಯ ಪ್ರಶಂಸೆ ಮಾಡಿದರು. ಆಗ ಅಸೆಂಬ್ಲಿಗೆ ರಾಜೀನಾಮೆ ಕೊಡದೆ, ಶೇಷವಾಗಿ ಉಳಿದಿದ್ದ ಕೆಲ ಮೆಂಬರರು " ಇಂಗ್ಲಿಷರು ನಿಃಪಕ್ಷಪಾತಿ ಮತ್ತು ಯಥಾರ್ಥ ಜನರಾಗಿರುವದಿಲ್ಲೆಂದು " ಕೂಗೆಬ್ಬಿಸಿದರು. ಅದೇ ಪ್ರಕಾರ ಕಾಂಗ್ರೆಸದ ಪ್ರಮುಖರ ಮತವಾಗಿದೆ. ಲಾರ್ಡ ಆಯರ್ವಿನಸಾಹೇಬರು ಹೊಸದೇನೂ ಹೇಳಲಿಲ್ಲೆಂದು ಸರದಾರ ಪಟೇಲರ ಮತವಾಗಿದೆ. ಪ್ರತಿಯೋಗಿ ಸಹಕಾರಿಯಾಗಿದ್ದ ಪುಣೆಯ ಶ್ರೀ. ಕೇಳಕರರೂ ನಿರಾಶೆಯ ಉದ್ಗಾರ ತೆಗೆದಿದ್ದಾರೆ. ಹಿಂದುಸ್ಥಾನಕ್ಕೆ ವಸಾಹಾತಿನ ಸ್ವರಾಜ್ಯ ಕೊಡುವ ವಿಷಯವಾಗಿ ಕೂಲಿಕಾರ ಮಂತ್ರಿಗಳಿಗೆ ಅಡಚಣೆಗಳಿಬಹುದು. ಅವರಿಗಿಂತ ಹೆಚ್ಚು ಅಡಚಣೆಗಳು ಹಿಂದುಸ್ಥಾನಕ್ಕಿರುತ್ತವೆ. ಆದ್ದರಿಂದ, ಸರಕಾರದ ಕೂಡ ಸಹಕಾರ ಮಾಡಲು ನಿರುಪಾಯವಾಗುತ್ತೆಂದು ಇವರಂದಿದ್ದಾರೆ.

ಮುಂಬಯಿಯ ಸತ್ಯಾಗ್ರಹ ಮಂಡಲದವರಂತೂ ಲಾರ್ಡ ಆಯರ್ವಿನಸಾಹೇಬರ ಭಾಷಣವನ್ನೇ ಓದುವದಿಲ್ಲೆಂತಲೂ, ನಮ್ಮ ಕಾಯದೇಭಂಗವನ್ನೇ ಗುರುಮಂತ್ರವಾಗಿ ಜಪಿಸುವೆವೆಂದೂ ಸ್ಪಷ್ಟವಾಗಿ ಹೇಳಿದ್ದಾರೆ. ವಿಲಾಯತಿಯ ಸರಕಿಗೆ ಬಹಿಷ್ಕಾರ ಹಾಕಿ, ಮುಂಬಯಿ ಪೇಟೆಯಲ್ಲಿ ಅದರ ಅಂಶವುಳಿಯದಂತೆ ಮಾಡುವದೇ ಸದ್ಯದ ಕರ್ತವ್ಯವೆಂದು ಒಬ್ಬ ಪ್ರಖ್ಯಾತ ವ್ಯಾಪಾರಸ್ಥರು ಅಂದಿದ್ದಾರೆ. ತರುಣ ಸಂಘದವರು ಸಹ ಇದೇ ಮತದವರಾಗಿ, ಕಾಂಗ್ರೆಸವು ಹೆಚ್ಚು ಕರ್ತೃತ್ವಶಾಲಿಯಾಗಬೇಕೆಂದು ಅಂದಿದ್ದಾರೆ. ಒಟ್ಟಿನಿಂದ ಈ ಭಾಷಣವು. ಈ ವಚನವು ಕಾಂಗ್ರೆಸ ಪಕ್ಷಕ್ಕೆ ಅತೃಪ್ತಿಯನ್ನುಂಟುಮಾಡಿದ್ದು, ಕಾಂಗ್ರೆಸದ ಕಾಯದೇಭಂಗದ ಚಳವಳಿಯು ಅವಿಚ್ಛಿನ್ನವಾಗಿ ಯಥಾಪ್ರಕಾರ ನಡೆಯುವಂತಾಯಿತು.

* * *

ಮವಾಳರು ಸ್ವರಾಜ್ಯ ತರುವ ಆಣೆಮಾಡುವರೇ ?

———(೦)———

ಕಾಂಗ್ರೆಸ ಮತ್ತು ಅವರ ಮುಖಂಡರಾದ ಜನರೇ ಹಿಂದುಸ್ಥಾನದಿಂದ ಬಹುವಾಗಿ ರಾವುಂಡ ಟೇಬಲಕ್ಕೆ ಹೋಗದೆ, ಅವರಲ್ಲಿ ಒಬ್ಬಿಬ್ಬರಿಗೆ ಮತ್ತು ತಮಗೆ ಬೇಕಾದ ಅನೇಕರಿಗೆ ಆಮಂತ್ರಣ ಕಳಿಸಿದರೂ, ಆ ಉದ್ದೇಶವು ವ್ಯರ್ಥವಾಗಿ ಅರ್ಥಹಾನಿ ಶ್ರಮಹಾನಿಯುಂಟಾಗುವದು. ಕಾಂಗ್ರೆಸದ ಒಬ್ಬಿಬ್ಬರನ್ನು ಕೂಡ ಸರಕಾರದವರು ಕರೆಯುವದಿಲ್ಲವಾದ್ದರಿಂದ ಮವಾಳರು ಅಲ್ಲಿಗೆ ಹೋಗಿ ಯಾವ ಕಸರತ್ತು ಮಾಡುವರೋ ? ತಿಳಿಯದು. ರಾಜಕೀಯ ಸ್ವಾತಂತ್ರ್ಯ ಬೇಕೆಂದು ಕೋಲಾಹಲವೆಬ್ಬಿಸಿದವರು ಕಾಂಗ್ರೆಸದವರು. ಕೃಷ್ಣ ಶಿಷ್ಠಾಯಿಯಂತೆ ಹಸ್ತಿನಾಪೂರಕ್ಕೆ ಹೋದವರು ಮವಾಳರು. ಇವರು ನಿರಾಶೆಯ ಬದಲಾಗಿ ಆಶಾತಂತು ವಿಗಂಟಿಕೊಂಡು ಬಂದದ್ದೊಂದು ತಪ್ಪೇ! ಅಲ್ಲಿಗೆ ಹೋಗಿ, ಕಾಂಗ್ರೆಸದವರ ಮನದಣಿ ತೃಪ್ತಿಯಾಗುವಂತೆ ಹಕ್ಕುಗಳನ್ನು ಸಂಪಾದಿಸಿಕೊಂಡು ಬಂದರೇ ಕ್ಷೇಮ. ಇಲ್ಲವಾದರೆ- ಇವರ ಪರಾಕ್ರಮವೆಲ್ಲ ವ್ಯರ್ಥವೇ! ಇಜಿಪ್ತದಲ್ಲಿ ರಾಜೀನಾಮೆ ಕೊಟ್ಟ ನಾಹಸಪಾಶ್ಚಾನ ಬಣದವರು ಬಹುಸಂಖ್ಯಾಕರಾಗಿದ್ದು, ಅವರು ಆ ದೇಶದ ರಾಜ್ಯಘಟನೆಯನ್ನು ಸ್ಥಿರಪಡಿಸಲು ನೆರೆಯಿಸಿದ ಸಭೆಯಲ್ಲಿ ಎಲ್ಲ ಮೆಂಬರರು ಪ್ರತಿಜ್ಞೆ ಮಾಡಿದರು. ಅದು ಹೇಗೆಂದರೆ-

ನಾಹಸಪಾಶ್ಚಾನು ಎದ್ದುನಿಂತು ಎಲ್ಲರಿಗೂ ಕೇಳಿಸುವಂತೆ ಗಟ್ಟಿ ದನಿಯಿಂದ- ಮಿತ್ರರೇ ನೀವೆಲ್ಲರೂ ಎದ್ದು ನಿಲ್ಲಿರೆಂದನು. ಎಲ್ಲರೂ ಎದ್ದು ನಿಂತರು. ಮತ್ತು ನಾಹಸಪಾಶ್ಚಾನು ಅನ್ನುತ್ತಿದ್ದಂಥ ಒಂದೊಂದೇ ಶಬ್ದವನ್ನು ಅಂದು ಸತ್ಯವಚನದ ಪ್ರತಿಜ್ಞೆ ಮಾಡಿದರು. ನಾಹಸಪಾಶ್ಚಾ ಮತ್ತು ಆತನ ಬಣದ

ವರು ದೇವರನ್ನು ಸ್ಮರಿಸಿ, ಆಣೆ ಮಾಡಿದಂತೆ ಲಂಡನಕ್ಕೆ ಹೋಗುವ ಮವಾಳರು ಮುಂಬಯಿಯಲ್ಲಿ ಒಟ್ಟಾಗಿ ಸೇರಿ, ಸಭೆಮಾಡಿ, ನಾವು ಹಿಂದುಸ್ಥಾನಕ್ಕೆ ಸ್ವರಾಜ್ಯ ತರುವೆವು; ತರದಿದ್ದರೆ ತಿರಿಗಿ ಬಂದು, ಕಾಂಗ್ರೆಸದ ಕಾಯದೆಭಂಗದಲ್ಲಿ ಸೇರುವೆವೆಂದು ದೇವರ ಆಣೆಮಾಡಿ, ಲಂಡನದ ದಾರೀ ಹಿಡಿಯುವರೇನು?

ಪ್ರಭಾತ ಫೇರಿಯ ದೆಸೆಯಿಂದ ಎಂಟು ಹುಡುಗೆಯರಿಗೆ ಶಿಕ್ಷೆ !!!

—(೦)—

ಜಳಗಾವಿಯ ಕಲೆಕ್ಟರರು ಪ್ರಾತಃಕಾಲದಲ್ಲಿ ನಗರ ಸಂಕೀರ್ತನೆ ಮಾಡುವಾಗ ನಾಲ್ವರಿಗಿಂತ ಹೆಚ್ಚು ಜನರಿರಬಾರದೆಂದು ಜಾಹೀರನಾಮೆ ಹಚ್ಚಿದರು. ಈ ಜಾಹೀರನಾಮೆಯನ್ನು ಮುರಿಯಲು ಅಲ್ಪವಯಿಯಾದ ಎಂಟು ಜನ ಹುಡುಗೆಯರು ನಗರ ಸಂಕೀರ್ತನೆ ಮಾಡಿದರು. ಇವರ ಕೂಡ ಜನರೂ ತಂಡ ತಂಡಾಗಿ ಹೋಗಲು ಮ್ಯಾಜಿಸ್ಟ್ರೇಟರ ಹುಕುಮು ಮುರಿದ ಬಗ್ಗೆ ವಿಚಾರಣೆ ನಡೆಯಿತು. ಹುಡುಗೆಯರು ಕೋರ್ಟಿನಲ್ಲಿ ಕದುರುಂಡಿಗೆಯಿಂದ ನೂಲುತ್ತಾ ಕೂತುಕೊಂಡು ತಾವು ನಗರ ಪ್ರತಿಕ್ಷಣೆ ಹಾಕಿದ್ದು ನಿಜವೆಂದೂ, ಮೂವರಿಗಿಂತ ಹೆಚ್ಚಿಗೆ ಇರಲಿಲ್ಲೆಂದೂ ಹೇಳಿದರು. ಆದರೂ ಮ್ಯಾಜಿಸ್ಟ್ರೇಟರು ಇವರಲ್ಲಿ ಕೆಲವರಿಗೆ ೧೦೦, ಕೆಲವರಿಗೆ ೫೦ ರೂಪಾಯಿ ದಂಡ ಮಾಡಿದರು. ದಂಡ ಕೊಡದಿದ್ದರೆ- ಶಿಕ್ಷೆ ಎಂದು ಬೇರೆ ಶಿಕ್ಷೆ ಹೇಳಲಿಲ್ಲ. ಸ್ವಯಂಸೇವಿಕೆಯರು ದಂಡ ಕೊಡುವದಿಲ್ಲೆಂದರು. ಮ್ಯಾಜಿಸ್ಟ್ರೇಟರು ನಿರುಪಾಯವಾಗಿ ಇವರನ್ನು ಬಿಟ್ಟು ಬಿಟ್ಟರು.

ಅಸೆಂಬ್ಲಿಯ ಬಾಗಿಲದಲ್ಲಿ ಸ್ತ್ರೀಯರ ಪಿಕೆಟಿಂಗ.

—(೦)—

ಲಾರ್ಡ ಆಯರ್ವಿನಸಾಹೇಬರು ಬುಧವಾರ ದಿವಸ ಭಾಷಣ ಮಾಡಲು ಅಸೆಂಬ್ಲಿಗೆ ಬರುವಾಗ, ಬಾಗಿಲದಲ್ಲಿಯೇ ಶುಭ್ರಖಾದೀ ವಸ್ತ್ರ ಪರಿಧಾನ ಮಾಡಿದಂಥ ೨೫ ಜನ ಸ್ತ್ರೀಯರು ಕಯ್ಯಲ್ಲಿ ಕರೇ ನಿಶಾನೆ ಹಿಡಕೊಂಡು ನಿಂತಿದ್ದರು. ಪೋಲಿಸರಿಗೆ ತಮ್ಮ ಉದ್ದೇಶ ತಿಳಿಯಬಾರದೆಂದು ಒಬ್ಬೊಬ್ಬರೇ ಹೋದರು. ಒಂದು ಚೀಲದಲ್ಲಿ ಕರೇ ನಿಶಾನೆ ಹಾಕಿಕೊಂಡು ಒಬ್ಬನು ಗುಪ್ತವಾಗಿ ಹೋದನು. ಸಾಹೇಬರು ಬಂದ ಕೂಡಲೆ- ಕರೇ ನಿಶಾನೆಯ ಚವರಿ ಹಾಕುತ್ತಾ ಸ್ತ್ರೀಯರು ರಾಜ್ಯಕ್ರಾಂತಿಯು ಚಿರಾಯುವಾಗಲಿ; ರಾಷ್ಟ್ರೀಯ ಧ್ವಜದ ಉಚ್ಛ್ರಯವಾಗಲಿ; ಇಂಗ್ರೇಜಿ ನಿಶಾನೆಯ ಅಧಃಪತನವಾಗಲಿ; ಮಹಾತ್ಮಾಗಾಂಧೀ [illegible] ಕೂಗನ್ನು ದಶದಿಕ್ಕುಗಳನ್ನು ವ್ಯಾಪಿಸಿದರು. ಲಾರ್ಡಸಾಹೇಬರು ನಗುತ್ತಾ ಮುಂದೆ ಸಾಗಿದರು

ಗಡಂಗದವರಿಗೂ ಕುಡುಕರಿಗೂ ನೋಟೀಸು.

—(೦)—

ಸುರತದಲ್ಲಿ ಈ ಕೆಳಗಿನ ನೋಟೀಸನ್ನು ಕೆಲವು ಸ್ಥಳಗಳಲ್ಲಿ ಹಚ್ಚಿದ್ದಾರೆ

ಕಾತರ ಗ್ರಾಮದ ಕೋಳಿ ಬಂಧುಗಳೇ: ನೀವು ಒಂದು ವಾರದಲ್ಲಿ ಗಡಂಗವನ್ನು ತೆರವು ಮಾಡಿರಿ. ಇಲ್ಲವಾದರೆ- ನಿಮ್ಮ ಮೇಲೆ ಬರುವ ಗಂಡಾಂತರಕ್ಕೆ ತಲೆಗೊಡಲು ಸಿದ್ಧರಾಗಿರಿ. ಎಲೇ ಮುಛಾ ಭಂಗಿಯಾ-ನೀನು ಒಂದು ವಾರದಲ್ಲಿ ಕುಡಿಯುವದನ್ನು ಬಿಡಬೇಕು. ಇಲ್ಲದಿದ್ದರೆ- ನಿನ್ನನ್ನು ತುಂಡು ತುಂಡು ಮಾಡುವೆವು. ಡುಬಲಾ ನೀನು ಶರೆದ ಅಂಗಡಿಯ ಕೆಲಸ ಬಿಡು; ಇಲ್ಲವಾದರೆ-ನಿನ್ನ ಕೈಕಾಲು ಕಟ್ಟಿ, ನಿನ್ನ ಅಂಗಡಿಗೆ ಬೆಂಕೆ ಹಚ್ಚಿ ನಿನ್ನನ್ನು ಸುಟ್ಟು ಬಿಡುವೆವು

ಮಹಾತ್ಮರಿಗಾಗಲಿ; ಕಾಂಗ್ರೆಸಕ್ಕಾಗಿ ರಾವುಂಡಟೇಬಲಕ್ಕೆ ಅಮಂತ್ರಣವಿಲ್ಲ.

——(೦)——

ಕೌನ್ಸಿಲ ಆಫ ಸ್ಟೇಟದಲ್ಲಿ ನಾಮದಾರ ಸುಖತಾಜರೆಂಬ ಮೆಂಬರರು ರಾವುಂಡಟೇಬಲಕ್ಕೆ ಮಹಾತ್ಮರನ್ನೂ ಕಳಿಸುವ ಆಮಂತ್ರಣ ಕೊಡಬೇಕೆಂಬ ಪ್ರಶ್ನೆ ಕೇಳಲು- ಸರಕಾರದ ವತಿಯ ಮೆಂಬರರಾದ ಮಿ. ಇಮರಸನ್ನಸಾಹೇಬರು " ಮಹಾತ್ಮರು ಕಾಯದೆಭಂಗದ ಆದ್ಯ ಪ್ರವರ್ತಕರಲ್ಲೊಬ್ಬರಾಗಿದ್ದಾರೆ. ಅವರು ಈ ಚಳವಳಿಯನ್ನು ನಿಲ್ಲಿಸುವ ತನಕ ಅವರಿಗೆ ಆಮಂತ್ರಣ ಕೊಡಲಾರವೆಂದು ಉತ್ತರ ಕೊಟ್ಟಿದ್ದಾರೆ.

ಶೆಂದಿಯ ಸವಾಲಿನಲ್ಲಿ ಸ್ತ್ರೀಯರ ಪಿಕೆಟಿಂಗ.

—(೦)—

ಠಾಣೆಯಲ್ಲಿ ಮೂರು ದಿವಸ ಸ್ತ್ರೀಯರು ಸತತವಾಗಿ ಪಿಕೆಟಿಂಗ ಮಾಡಿದ್ದರಿಂದ, ಅಲ್ಲಿಯ ಶೆಂದೀ ಸವಾಲೇ ಆಗಲಿಲ್ಲ. ಸ್ವಯಂಸೇವಿಕೆಯರಲ್ಲಿ ಒಬ್ಬಳಾದ ಕಮಲಾಬಾಯಿ ಸಂಘವಿಯವರು ಒಂದು ಗಡಂಗದ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಇವಳಿಗೆ ನಾಲ್ಕು ತಿಂಗಳ ಸಾದಾ ಕೈದಿನ ಶಿಕ್ಷೆ ವಿಧಿಸಿದರು.

ಮುಂಬಯಿಯಲ್ಲಿ ಐನೂರು ಜನರ ತಲೆಯೊಡೆದರು.

—(-:*:-)—

ಇದಕ್ಕಾಗಿ ಪಟ್ಟಣದ ತುಂಬ ಹರತಾಳ.

——(೦)——

ಶುಕ್ರವಾರ ದಿವಸ ಮುಂಬಯಿಯವರು ಗಡವಾಲಿ ದಿನದ ಮೆರವಣಿಗೆ ತೆಗೆದರು. ಮೆರವಣಿಗೆ ತೆಗೆಯಬಾರದೆಂದು ಪೋಲಿಸರು ಜಾಹೀರನಾಮೆ ಹಚ್ಚಿದರು. ಆದರೂ ಕಾಂಗ್ರೆಸದವರು ಮೆರವಣಿಗೆ ತೆಗೆದರು. ಎಸಪ್ಲೆನೆಡ ಬೈಲಿನಲ್ಲಿ ಬಹುಸಂಖ್ಯೆಯಿಂದ ಸೇರಿದರು. ಆಗ ಪೋಲಿಸರು ನಡೆಸಿದ ಲಾಠೀ ಪ್ರಯೋಗದಿಂದ ಐನೂರು ಜನರು ಘಾಯವಾಗಿದ್ದಾರೆ.

ಗವ್ಹರ್ನರಸಾಹೇಬರು ಕಣ್ಣೀರು ಹಾಕಿದರು.

—(೦)—

ನಾನು ಗವ್ಹರ್ನರನಾಗಿ ಬಂದು ಐದು ವರ್ಷವಾಗುತ್ತ ಬಂತು. ಈಗ ನಡೆದಿರುವ ಹೊಡೆಬಡೆ ನೋಡಿ, ಬಹಳ ದುಃಖವಾಗಿರುತ್ತದೆಂದು ಸಾಹೇಬರು ಕಣ್ಣೀರು ಹಾಕಿದ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ. ಈ ಅನರ್ಥಕ್ಕೆ ಕಾರಣರಾರೆಂದು ಸಾಹೇಬರು ಹೇಳುವರೇ ?

ಕರ್ನಾಟಕ ಕಾಲೇಜದ ಮುಂದೆ ಪಿಕೆಟಿಂಗ.

-○()*⁎*()○-

ಇಲ್ಲಿಯ ಕರ್ನಾಟಕ ಕಾಲೇಜದ ಮುಂದೆ ಇಂದು ಪಿಕೆಟಿಂಗ ಮಾಡುವರೆಂದು ವರ್ತಮಾನವಾಗಿದೆ. ಕಾಲೇಜದ ವಿದ್ಯಾರ್ಥಿಗಳು ಪಿಕೆಟಿಂಗ ಮಾಡಿದರೆ- ಅವರನ್ನು ಕಾಲೇಜದಿಂದ ಹೊರಗೆ ಹಾಕುವೆವೆಂದು ಪ್ರಿನ್ಸಿಪಾಲರು ನೋಟೀಸು ಹಚ್ಚಿರುತ್ತಾರೆ.

ಮ್ಯಾಜಿಸ್ಟ್ರೇಟರಿಗೆ ಕಮಲಾಬಾಯಿಯ ಉಪದೇಶ

—(೦)—

ಘಾಟಕೋಪರದಲ್ಲಿ ಗಡಂಗದ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ಶಿಕ್ಷೆ ಹೊಂದಿದ ಶ್ರೀ. ಕಮಲಾಬಾಯಿಯು- ಮ್ಯಾಜಿಸ್ಟ್ರೇಟರೇ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಕಾಂಗ್ರೆಸದ ಚಳವಳಿಯಲ್ಲಿ ಸೇರಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಶ್ರೀ. ಶಿವಾಜಿಯ ವಂಶಸ್ಥರೆಂಬುದನ್ನು ಸಿದ್ಧ ಮಾಡಿ ತೋರಿಸಿರೆಂದು ಉಪದೇಶ ಮಾಡಿದಳು.

R· N. B 1443

ವಿಜಯ

ಸಾಪ್ತಾಹಿಕ

ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧) ಧಾರವಾಡ ಮಂಗಳವಾರ ತಾರೀಖು ೧೫ ನೇ ಜುಲೈ ೧೯೩೦ • (ಸಂಖ್ಯೆ ೨೬

ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವದು ಯಾರ ಕಯ್ಯಲ್ಲಿ ಇದೆ?

ಹಿಂದುಸ್ಥಾನಕ್ಕೆ ಈ ಕ್ಷಣವೇ ವಸಾಹಾತಿಕ ಸ್ವರಾಜ್ಯ ಕೊಡಬೇಕೆಂಬ ವಿಷಯದ ಪ್ರಸ್ತಾಪವು ಕೌನ್ಸಿಲ ಆಫ ಸ್ಟೇಟದಲ್ಲಿ ನಡೆಯಿತು. ಪಾರ್ಲಿಮೆಂಟ ಸಭೆಯಲ್ಲಿ ಮಿ. ಬೆನ್ನ ವೆಜ್ಜವುಡ್ಡಸಾಹೇಬರೂ ಹಿಂದುಸ್ಥಾನದಲ್ಲಿ ಲಾರ್ಡ ಆಯರ್ವಿನಸಾಹೇಬರೂ ವಸಾಹಾತಿಕ ಸ್ವರಾಜ್ಯವು ತಮ್ಮ ಕೊನೆಯ ಧ್ಯೇಯವಾಗಿದೆಂದೂ, ರಾವುಂಡ ಟೇಬಲದಲ್ಲಿ ಈ ವಿಷಯವು ಅಂಗೋಪಾಂಗವಾಗಿ ಪ್ರತಿಯೊಬ್ಬರು ನಿರ್ಮಲ ಮನಸ್ಸಿನಿಂದ ಚರ್ಚಿಸಬಹುದೆಂದೂ ಹೇಳಿದ್ದಾರೆ. ಇವರು ಹೀಗ್ಯೆ ಹೇಳಿದರೇನಾಯಿತು? ಇವರೆಷ್ಟು ಸಹಾನುಭೂತಿಯುಳ್ಳವರಾದರೂ, ಸ್ವರಾಜ್ಯ ಕೊಡುವದು ಇವರೀರ್ವರ ಕಯ್ಯಲ್ಲಿಯೂ ಇಲ್ಲೆಂದು ಕುಲದಿಂದ ಪಾರ್ಸಿ, ಮತದಿಂದ ಮಹಮ್ಮದೀಯರಾದಂಥ ಸರ ಫಿರೋಜ ಸೇಟನಾಸಾಹೇಬರೇ ಉದ್ಗಾರ ತೆಗೆದಿದ್ದಾರೆ. ಈ ಸಾಹೇಬರು ಹೇಳುವದು ಯಥಾರ್ಥವಾದಿ ಬಹುಜನ ವಿರೋಧಿ ಎಂಬಂತೆ ಅಸೆಂಬ್ಲಿಯ ಜನರಲ್ಲಿ ಕೆಂಪು ಬಂಪು· ಸರಕಾರದವರು ಹೇಗಾದರೂ ವಚನಕೊಟ್ಟಿದ್ದಾರೆ. ಆದ್ದರಿಂದ ನಿಮ್ಮ ಠರಾವನ್ನು ಹಿಂದಕ್ಕೆ ತಕ್ಕೊಳ್ಳಿರೆಂದು ಸರರಿಗೆ ಒತ್ತಾಯ ಮಾಡಲು- ಅವರು ತಥಾಸ್ತು ಎಂದರು.

ಲಾರ್ಡ ಆಯರ್ವಿನಸಾಹೇಬರು ಮಾಡಿದ ಭಾಷಣವು ಮವಾಳರಿಗೆಲ್ಲ ಮಹದಾನಂದವನ್ನುಂಟು ಮಾಡಿರುತ್ತದೆ. ಲಂಡನಕ್ಕೆ ಹೋಗಿ, ಅಲ್ಲಿ ಕೃತಕೃತ್ಯರಾಗೇ ಬರಬೇಕೆಂದು ಇವರು ಪಂಥಗಟ್ಟಿದ್ದಾರೆ. ಇವರಲ್ಲಿ ಲಿಬರಲ ಪ್ರಮುಖರಾದ ಬ್ಯಾರಿಸ್ಟರ ಜಿನ್ನಾಸಾಹೇಬರು ಅಸೆಂಬ್ಲಿಯಲ್ಲಿ ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

ಒಂದು ವೇಳೆ ರಾವುಂಡ ಟೇಬಲವು ಮುರಿಯಬಹುದು. ಮತ್ತು ನಮ್ಮ ಆಶೆಗಳು ಒಡೆದು ಹೋಳು ಆಗಬಹುದು. ನಮ್ಮ ಹೇಳಿಕೆ ಕೇಳಿಕೆಯು ಪವಿತ್ರ ಮತ್ತು ನ್ಯಾಯವಾದದ್ದಿರುವದರಿಂದ ಅದರ ಸಾಧ್ಯತೆಗಾಗಿ ಲಂಡನಕ್ಕೆ ಹೋಗತಕ್ಕವನೇ ಸರಿ. ನಾನು ಅಲ್ಲಿಗೆ ಹೋಗದಿದ್ದರೆ- ಜಗತ್ತಿನ ಮುಂದೆ ನಾನು ನನ್ನ ಕರ್ತವ್ಯ ಮಾಡಿದಂತಾಗುವದಿಲ್ಲ. ನನ್ನ ಹೇಳಿಕೆಯನ್ನು ಟೇಬಲದ ಮುಂದಿಡುವೆನು. ಮತ್ತು ಅದರಿಂದ ನಿರ್ಣಯಪಡಕೊಳ್ಳುವೆನು. ಈ ಕೆಲಸದಲ್ಲಿ ಅಪಜಯ ಒಂದರೆ ಮುಂದೆ ನನ್ನ ಬುದ್ಧಿಗೆ ತೋಚಿದಂತೆ ನಡೆಯುವೆನು. ಜಯಬಂದರೆ- ನನ್ನ ದೇಶಿಯರಿಗಾಗಿ ಅತಿ ಶ್ರೇಷ್ಠವಾದ ಕರ್ತವ್ಯ ಮಾಡಿದಂತಾಗುವದು. ಈ ಸಮಯದಲ್ಲಿ ನಿಜವಾದ ಪ್ರತಿನಿಧಿಗಳನ್ನೇ ಆರಿಸಬೇಕೆಂದು ನಾನು ಸರಕಾರಕ್ಕೆ ಅತ್ಯಗತ್ಯವಾಗಿ ಸೂಚಿಸುತ್ತೇನೆ.

ಬ್ಯಾರಿಸ್ಟರ ಜಿನ್ನಾಸಾಹೇಬರು ಹಲವು ಸಾರೆ ಲಾರ್ಡ ಆಯರ್ವಿನಸಾಹೇಬರ ಕೂಡ ಈ ವಿಷಯವಾಗಿ ಸಂಭಾಷಣೆಗೈದಿದ್ದಾರೆ. ಯಾರಾರಿಗೆ ಆಮಂತ್ರಣ ಬರಬಹುದೆಂಬದು ಗೊತ್ತಾಗಿರಬಹುದು. ಆ ಜನರ ವಿಷಯವಾಗಿ ಸಂಶಯ ಒಂದೇ. ನಿಜವಾದ ಪ್ರತಿನಿಧಿಗಳನ್ನು ಆರಿಸಬೇಕೆಂದು ಸೂಚಿಸುತ್ತಾರೆ. ಹಿಂದೀ ಪ್ರತಿನಿಧಿಗಳ ಹೆಸರು ಪ್ರಸಿದ್ಧವಾಗುವ ಮುಂಚಿತವಾಗಿ, ಸಿವ್ಹಿಲ ಸರ್ವಂಟರಾದಂಥ ಮೂವರು ಸಾಹೇಬರನ್ನು ನೇಮಿಸಿದಂತೆ ಸರಕಾರದವರು ಜಾಹೀರ ಮಾಡಿದ್ದಾರೆ. ಸರಕಾರದ ಈ ಕೃತ್ಯವನ್ನು ಇವರು ದೂಷಿಸಿದ್ದಾರೆ. ಈ ದೂಷಣೆಯು ಮುಂದಿನ ಭವಣೆಯ ಪ್ರಸಾದ ಚಿನ್ಹವಾಗುವದಿಲ್ಲವೇ?

ಬ್ಯಾರಿಸ್ಟರ ಜಿನ್ನಾಸಾಹೇಬರ ತರುವಾಯ ಸರ ಸಿ. ಪಿ ರಾಮಸ್ವಾಮಿ ಅಯ್ಯರರು ಬ್ರಿಟಿಶರ ನ್ಯಾಯನೀತಿಯ ಪ್ರಶಂಸೆ ಮಾಡಿದರು. ಆಗ ಅಸೆಂಬ್ಲಿಗೆ ರಾಜೀನಾಮೆ ಕೊಡದೆ, ಶೇಷವಾಗಿ ಉಳಿದಿದ್ದ ಕೆಲ ಮೆಂಬರರು "ಇಂಗ್ಲಿಷರು ನಿಃಪಕ್ಷಪಾತಿ ಮತ್ತು ಯಥಾರ್ಥ ಜನರಾಗಿರುವದಿಲ್ಲೆಂದು" ಕೂಗೆಬ್ಬಿಸಿದರು. ಅದೇ ಪ್ರಕಾರ ಕಾಂಗ್ರೆಸದ ಪ್ರಮುಖರ ಮತವಾಗಿಷ್ಟೆ, ಲಾರ್ಡ ಆಯರ್ವಿನಸಾಹೇಬರು ಹೊಸದೇನೂ ಹೇಳಲಿಲ್ಲೆಂದು ಸರದಾರ ವಟೇಲರ ಮತವಾಗಿದೆ. ಪ್ರತಿಯೋಗಿ ಸಹಕಾರಿಯಾಗಿದ್ದ ಪುಣೆಯ ಶ್ರೀ. ಕೇಳಕರರೂ ನಿರಾಶೆಯ ಉದ್ಗಾರ ತೆಗೆದಿದ್ದಾರೆ. ಹಿಂದುಸ್ಥಾನಕ್ಕೆ ವಸಾಹಾತಿಕ ಸ್ವರಾಜ್ಯ ಕೊಡುವ ವಿಷಯವಾಗಿ ಕೂಲಿಕಾರ ಮಂತ್ರಿಗಳಿಗೆ ಅಡಚಣೆಗಳಿರಬಹುದು. ಅವರಿಗಿಂತ ಹೆಚ್ಚು ಅಡಚಣೆಗಳು ಹಿಂದುಸ್ಥಾನಕ್ಕಿರುತ್ತವೆ. ಆದ್ದರಿಂದ, ಸರಕಾರದ ಕೂಡ ಸಹಕಾರ ಮಾಡಲು ನಿರುಪಾಯವಾಗುತ್ತದೆಂದು ಇವರಂದಿದ್ದಾರೆ.

ಮುಂಬಯಿಯ ಸತ್ಯಾಗ್ರಹ ಮಂಡಲದವರಂತೂ ಲಾರ್ಡ ಆಯರ್ವಿನಸಾಹೇಬರ ಭಾಷಣವನ್ನೇ ಓದುವದಿಲ್ಲೆಂತಲೂ, ನಮ್ಮ ಕಾಯದೇಭಂಗವನ್ನೇ ಗುರುಮಂತ್ರವಾಗಿ ಜಪಿಸುವೆವೆಂದೂ ಸ್ಪಷ್ಟವಾಗಿ ಹೇಳಿದ್ದಾರೆ. ವಿಲಾಯತಿಯ ಸರಕಿಗೆ ಬಹಿಷ್ಕಾರ ಹಾಕಿ, ಮುಂಬಯಿ ಪೇಟೆಯಲ್ಲಿ ಅದರ ಅಂಶವುಳಿಯದಂತೆ ಮಾಡುವದೇ ಸದ್ಯದ ಕರ್ತವ್ಯವೆಂದು ಒಬ್ಬ ಪ್ರಖ್ಯಾತ ವ್ಯಾಪಾರಸ್ಥರು ಅಂದಿದ್ದಾರೆ. ತರುಣ ಸಂಘದವರು ಸಹ ಇದೇ ಮತದವರಾಗಿ, ಕಾಂಗ್ರೆಸವು ಹೆಚ್ಚು ಕರ್ತೃತ್ವಶಾಲಿಯಾಗಬೇಕೆಂದು ಅಂದಿದ್ದಾರೆ. ಒಟ್ಟಿನಂತೆ ಈ ಭಾಷಣವು, ಈ ವಚನವು ಕಾಂಗ್ರೆಸ ಪಕ್ಷಕ್ಕೆ ಅತೃಪ್ತಿಯನ್ನುಂಟುಮಾಡಿದ್ದು, ಕಾಂಗ್ರೆಸದ ಕಾಯದೇಭಂಗದ ಚಳವಳಿಯು ಅವಿಚ್ಛಿನ್ನವಾಗಿ ಯಥಾಪ್ರಕಾರ ನಡೆಯುವಂತಾಯಿತು.

ಮವಾಳರು ಸ್ವರಾಜ್ಯ ತರುವ ಆಣೆಮಾಡುವರೇ?

ಕಾಂಗ್ರೆಸ ಮತ್ತು ಅವರ ಮುಖಂಡರಾದ ಜನರೇ ಹಿಂದುಸ್ಥಾನದಿಂದ ಬಹುವಾಗಿ ರಾವುಂಡ ಟೇಬಲಕ್ಕೆ ಹೋಗದೆ, ಅವರಲ್ಲಿ ಒಬ್ಬೊಬ್ಬರಿಗೆ ಮತ್ತು ತಮಗೆ ಬೇಕಾದ ಅನೇಕರಿಗೆ ಆಮಂತ್ರಣ ಕಳಿಸಿದರೂ, ಆ ಉದ್ದೇಶವು ವ್ಯರ್ಥವಾಗಿ ಅರ್ಥಹಾನಿ ಶ್ರಮಹಾನಿಯುಂಟಾಗುವದು. ಕಾಂಗ್ರೆಸದ ಒಬ್ಬೊಬ್ಬರನ್ನು ಕೂಡ ಸರಕಾರದವರು ಕರೆಯುವದಿಲ್ಲ. ಆದ್ದರಿಂದ ಮವಾಳರು ಅಲ್ಲಿಗೆ ಹೋಗಿ ಯಾವ ಕಸರತ್ತು ಮಾಡುವರೋ? ತಿಳಿಯದು. ರಾಜಕೀಯ ಸ್ವಾತಂತ್ರ್ಯ ಬೇಕೆಂದು ಕೋಲಾಹಲವೆಬ್ಬಿಸಿದವರು ಕಾಂಗ್ರೆಸದವರು. ಕೃಷ್ಣ ಶಿಷ್ಟಾಯಿಯಂತೆ ಹಸ್ತಿನಾಪೂರಕ್ಕೆ ಹೋದವರು ಮವಾಳರು. ಇವರು ನಿರಾಶೆಯ ಬದಲಾಗಿ ಆಶಾತಂತು ವಿಗಂಟಿಕೊಂಡು ಒಂದದ್ದೊಂದು ತಪ್ಪೇ! ಅಲ್ಲಿಗೆ ಹೋಗಿ, ಕಾಂಗ್ರೆಸದವರ ಮನದಣಿ ತೃಪ್ತಿಯಾಗುವಂತೆ ಹಕ್ಕುಗಳನ್ನು ಸಂಪಾದಿಸಿಕೊಂಡು ಬಂದರೇ ಕ್ಷೇಮ. ಇಲ್ಲವಾದರೆ- ಇವರ ಪರಾಕ್ರಮವೆಲ್ಲ ವ್ಯರ್ಥವೇ! ಇಜಿಪ್ತದಲ್ಲಿ ರಾಜೀನಾಮೆ ಕೊಟ್ಟ ನಾಹಸಪಾಶಾನ ಬಣದವರು ಬಹುಸಂಖ್ಯಾಕರಾಗಿದ್ದು, ಅವರು ಆ ದೇಶದ ರಾಜ್ಯಘಟನೆಯನ್ನು ಸ್ಥಾಪಿಸಲು ನೆರೆಯಿಸಿದ ಸಭೆಯಲ್ಲಿ ಎಲ್ಲ ಮೆಂಬರರು ಪ್ರತಿಜ್ಞೆ ಮಾಡಿದರು. ಅದು ಹೇಗಂದರೆ-

ನಾಹಸಪಾಶಾನು ಎದ್ದುನಿಂತು ಎಲ್ಲರಿಗೂ ಕೇಳಿಸುವಂತೆ ಗಟ್ಟಿ ದನಿಯಿಂದ- ಮಿತ್ರರೇ ನೀವೆಲ್ಲರೂ ಎದ್ದು ನಿಲ್ಲಿರೆಂದನು. ಎಲ್ಲರೂ ಎದ್ದು ನಿಂತರು. ಮತ್ತು ನಾಹಸಪಾಶಾನು ಅನ್ನುತ್ತಿದ್ದಂಥ ಒಂದೊಂದೇ ಶಬ್ದವನ್ನು ಅಂದು ಸತ್ಯವಚನದ ಪ್ರತಿಜ್ಞೆ ಮಾಡಿದರು. ನಾಹಸಪಾಶಾ ಮತ್ತು ಆತನ ಬಣದವರು ದೇವರನ್ನು ಸ್ಮರಿಸಿ, ಆಣೆ ಮಾಡಿದಂತೆ ಲಂಡನಕ್ಕೆ ಹೋಗುವ ಮವಾಳರು ಮುಂಬಯಿಯಲ್ಲಿ ಒಟ್ಟಾಗಿ ಸೇರಿ, ಸಭೆಮಾಡಿ, ನಾವು ಹಿಂದುಸ್ಥಾನಕ್ಕೆ ಸ್ವರಾಜ್ಯ ತರುವೆವು, ತರದಿದ್ದರೆ ತಿರಿಗಿ ಬಂದು, ಕಾಂಗ್ರೆಸದ ಕಾಯದೆಭಂಗದಲ್ಲಿ ಸೇರುವೆವೆಂದು ದೇವರ ಆಣೆಮಾಡಿ, ಲಂಡನದ ದಾರೀ ಹಿಡಿಯುವರೇನು?

ಮಿರಜೆಯಲ್ಲಿ ಕಾಯದೆಭಂಗದ ಮೇಲೆ ಕಾಯದೆಭಂಗ.

ಮಿರಜೆಯಲ್ಲಿ ಶ್ರೀ. ಶಿಖರೆಯವರಿಗೆ ಸಭಾಬಂದಿಯ ಹುಕುಮು ಮುರಿದರೆಂದು ಮ್ಯಾಜಿಸ್ಟ್ರೇಟರು ಇನ್ನೂರು ರೂಪಾಯಿ ದಂಡ, ದಂಡ ಕೊಡದಿದ್ದರೆ- ಇಪ್ಪತ್ತು ದಿವಸದ ಕೈದಿನ ಶಿಕ್ಷೆ ವಿಧಿಸಿದರು. ಶ್ರೀ. ಶಿಖರೆಯವರು ದಂಡಕೊಡದೆ ತುರಂಗಕ್ಕೆ ಹೋದರು. ಸಂಸ್ಥಾನಿಕರಲ್ಲಿ ಕಾಯದೆಭಂಗದ ಬಗ್ಗೆ ಎಷ್ಟು ದ್ವೇಷ ಮತ್ತು ಕುಸುಸುಂಟೆಂಬದು ಆಗ್ಗೆ ವ್ಯಕ್ತವಾಯಿತು. ಶಿಕ್ಷೆಯಾದ ಕೂಡಲೆ ಪೋಲೀಸರು ವಾರಂಟು ತಕ್ಕೊಂಡು, ಶ್ರೀ. ಶಿಖರೆಯವರ ಮನೆಗೆ ಹೋಗಿ, ದಂಡದ ಬಗ್ಗೆ ಅವರ ಅನೇಕ ಸಾಮಾನುಗಳನ್ನು ಜಪ್ತಮಾಡಿಕೊಂಡು ಹೋದರು. ಪೋಲೀಸರ ಈ ಕೃತ್ಯವು ಪಟ್ಟಣಿಗರನ್ನು ಮತ್ತಿಷ್ಟು ಸಂತಾಪಗೊಳಿಸಿತು. ಊರ ತುಂಬ ಹರತಾಳವಾಯಿತು. ಇದೇನೂ ಆಶ್ಚರ್ಯವಲ್ಲ. ಏಕಂದರೆ ಹರತಾಳವು ಎಲ್ಲ ಕಡೆಯಲ್ಲಿಯೂ ಮಯ್ಯಾಗಿ ಹೋಗಿದೆ. ಜನರು ಹರತಾಳದಲ್ಲಿ ಪುನಃ ಕಾಯದೆಭಂಗ ಮಾಡುವ ಸಭೆ ಕೂಡಿಸಿದರು. ಆರು ಸಾವಿರ ಜನರು ಸೇರಿದರು. ಸಭೆಯಲ್ಲಿ ಶ್ರೀ. ಶಿಖರೆಯವರ ಹತ್ತು ವರ್ಷದ ಮಗನು ತಾನು ಬರೆದು ತಂದ ನಿಬಂಧ ಓದಿ ಕಾಯದೆಭಂಗ ಮಾಡಿದನು. ಪೋಲೀಸರು ಅಂದು ಯಾರನ್ನೂ ಹಿಡಿಯಲಿಲ್ಲ. ಮೂರನೇ ದಿವಸ ಪುನಃ ಸಭೆ ಮಾಡಿದರು. ಅಂದು ಅರಿಷಣ ಕುಂಕುಮದ ನಿಮಿತ್ಯಮಾಡಿ, ಒಂದು ಸಾವಿರ ಸ್ತ್ರೀಯರ ಸಭೆ ಕೂಡಿಸಿ, ಸ್ವದೇಶಿಯಮೇಲೆ ವ್ಯಾಖ್ಯಾನಕೊಟ್ಟು, ಸ್ತ್ರೀಯರಿಂದಲೇ ಕಾಯದೆಭಂಗ ಮಾಡಿಸಿದರು. ಈ ದಿವಸದ ಕಾರ್ಯಕ್ರಮದಲ್ಲಿ ವೈಕರ ವತಿಯಿಂದ ಸತ್ಯಾಗ್ರಹದ ಮುಂದಾಳುತ್ವವನ್ನು ವಹಿಸಿದ್ದ ಶ್ರೀ. ಜೋಶಿಯವರು ಮುಖ್ಯ ಭಾಗ ತಕ್ಕೊಂಡಿದ್ದರು.

ಕರ್ನಾಟಕದಲ್ಲಿ
ಸಾಯಮನ್ನ ರಿಪೋರ್ಟನ್ನು ಹುಗಿದರು ಮತ್ತು ಸುಟ್ಟರು.

ಹೋದ ಆದಿತ್ಯವಾರದ ದಿವಸ ಕರ್ನಾಟಕದ ಕಲವು ಸ್ಥಳಗಳಲ್ಲಿ ಸಾಯಮನ್ನ ರಿಪೋರ್ಟನ್ನು ಸುಟ್ಟರು ಮತ್ತು ಕಲವು ಸ್ಥಳಗಳಲ್ಲಿ ಹುಗಿದರು. ವಿಜಾಪೂರ ತಿಗ್ಗಾವಿ ಮತ್ತು ರಾಣೇಬಿನ್ನೂರಿನಲ್ಲಿ ಅಗ್ನಿಸಂಸ್ಕಾರ ಮಾಡಿದರು. ಹುಬ್ಬಳ್ಳಿ ಮುಂತಾದ ಬೇರೆ ಪಟ್ಟಣಗಳಲ್ಲಿ ಅದಕ್ಕೆ ಮಣ್ಣು ಕೊಟ್ಟರು. ಆ ದಿನ ಆದ ಸ್ಮಶಾನಯಾತ್ರೆಗಳಲ್ಲಿ ಹುಬ್ಬಳ್ಳಿಯಲ್ಲಿಯದು ಮೇಲಾಯಿತು. ಇದರಲ್ಲಿ ಹತ್ತುಸಾವಿರ ಜನರಿದ್ದರು. ಎಲ್ಲರೂ ಬೋಳ್ಕ ನೆತ್ತಿಯವರೇ! ಅರ್ಧ ಮೈಲಿಗಿಂತ ಹೆಚ್ಚಾಗಿದ್ದ ಮೆರವಣಿಗೆಯಲ್ಲಿ ಎತ್ತ ನೋಡಿದತ್ತ ಕರೇ ತಲೆಗಳೇ ಕಾಣಿಸುತ್ತಿದ್ದವು. ನೆಯಕಾರರಂತೂ ಜೋಕೆ ಹಿಡಿಯುವವರಂತೆ ಪಂಜೆಗಳನ್ನುಟ್ಟಿದ್ದರು. ಮೆರವಣಿಗೆಯು ಸ್ಮಶಾನಕ್ಕೆ ಹೋದ ಬಳಿಕ ರಿಪೋರ್ಟನ್ನು ತಿರಸ್ಕರಿಸಿದ ಭಾಷಣವಾಗಿ, ಅದಕ್ಕೆ ಮಣ್ಣು ಕೊಡಲ್ಪಟ್ಟಿತು. ಆಗ ಪಾಸು ಮಾಡಿದ ಠರಾವಿನ ಕೊನೆಯ ವಾಕ್ಯವು ಮುಂದೆ ಕೊಟ್ಟಂದಿರುತ್ತದೆ.

ಸಾಯಮನ್ನ ಸಪ್ತಕರ ಕೂಸಿಗೆ ಬಂದ ಅಕಾಲ ಮರಣದ ಬಗ್ಗೆ ನಮ್ಮೆಲ್ಲರಿಗೆ ಅತ್ಯಂತ ವಿಷಾದವೆನಿಸುತ್ತದೆ. ಆದರೆ ಈ ಮರಣದ ಬಗ್ಗೆ ಪರಮೇಶ್ವರನಾಗಲಿ, ಮತ್ತಾರಾಗಲಿ, ಜವಾಬದಾರರಲ್ಲ. ಆ ಕೂಸಿಗೆ ಜನನ ಕೊಟ್ಟ ಸಾಯಮನ್ನ ಸಪ್ತಕರೂ, ಬ್ರಿಟಿಶ ಸರಕಾರದವರೂ ಹೊಣೆಗಾರರಾಗಿದ್ದಾರೆ.

ಹಾಯಕೋರ್ಟಿನ ಜಡ್ಜರು ಪೋಲೀಸರ ಕಿವೀ ಹಿಂಡಿದರು.

ಪೋಲೀಸರು ಪೇಶಾವರದಲ್ಲಿ ಕೆಲ ಜನರನ್ನು ಸಂಶಯದಿಂದ ಹಿಡಿದರು. ಕಚ್ಚಾ ಕೈದಿನಲ್ಲಿರುವಂಥವರಿಗೆ ಮನೆಯ ಅನ್ನ ತರಿಸಿಕೊಡುವರು. ಅವರ ಅರಿವೆ ಮತ್ತು ಹಾಸಿಗೆ ಕೊಡಿಸುವರು. ಇದು ಎಲ್ಲಾ ಕಡೆಯಲ್ಲಿ ನಡೆದಿರುವ ಪದ್ಧತಿಯು. ಈ ಪ್ರಕಾರ ಜೇಲಿನ ಕಾಯದೆಯಲ್ಲಿ ಉಂಟು. ಪೋಲೀಸರು ಹಿಡಿದಂಥವರು ರಾಜಕೀಯ ಸಂಬಂಧವುಳ್ಳಂಥವರಾದ್ದರಿಂದ, ಪೋಲೀಸರು ಇವರಿಗಾವ ಅನುಕೂಲತೆಗಳನ್ನೊದಗಿಸಿಕೊಡಲಿಲ್ಲ. ಆರೋಪಿಗಳ ವಕೀಲರು ಸ್ಥಾನಿಕ ಮ್ಯಾಜಿಸ್ಟ್ರೇಟರ ಮುಂದೆ ದೂರಿಕೊಂಡರು. ಅಲ್ಲಿ ಪೋಲೀಸ ಪುಂಡಾಟಿಕೆಗೇ ಉತ್ತೇಜನ ದೊರೆಯಿತು. ಪ್ರಕರಣವು ಹಾಯಕೋರ್ಟಿಗೆ ಹೋಗಿ ನ್ಯಾಯಮೂರ್ತಿ ಭಿಡೆಯವರ ಮುಂದೆ ವಿಚಾರಣೆ ನಡೆಯಿತು. ಇವರು ಪೋಲೀಸರ ಕಿವೀ ಹಿಂಡಿ, ಬುದ್ಧಿಗಲಿಸಿದಂಥ ತೀರ್ಪು ಹೇಳಿದ್ದಾರೆ. ಪೋಲೀಸರು "ಆರೋಪ ಸಹ ಇಲ್ಲದೆ ಸಂಶಯದಿಂದ ಹಿಡಿದವರನ್ನು ಕಡಿಮೆ ದರ್ಜೆಯವರೆಂದು ತಿಳಿಯಲಾಗದು. ತಮ್ಮ ರಕ್ಷಣೆಗಾಗಿ ಕಾಯದೇಶೀರ ಆಲೋಚನೆ ಕೇಳಿಕೊಳ್ಳುವದು ಅವರ ಹಕ್ಕು ಆಗಿರುವಾಗ ಅವರಿಗೆ ಈ ಅನುಕೂಲತೆಗಳನ್ನೇಕೆ ಒದಗಿಸಿ ಕೊಡಲಿಲ್ಲೆಂಬದು ಆಶ್ಚರ್ಯಜನಕವಾಗಿರುತ್ತದೆ. ಈ ನಂತರ ಯಾವನೊಬ್ಬ ಆರೋಪಿಯನ್ನು ಈ ಪ್ರಕಾರ (ತುಚ್ಛತನದಿಂದ) ನಡಿಸಿಕೊಳ್ಳುವದು ಕಂಡು ಬಂದರೆ- ಅವನನ್ನು ಪೋಲೀಸರ ವಶದಿಂದ ಬಿಡಿಸಿ, ಕೋರ್ಟಿನ ವಶದಲ್ಲಿ ಕೊಡಿಸಲಾದೀತು. ಅಥವಾ ಜಾಮೀನದ ಮೇಲೆ ಬಿಡಲಾದೀತು." ಎಂಬದಾಗಿ ನ್ಯಾಯಮೂರ್ತಿಯವರು ತೀರ್ಪು ಹೇಳಿದ್ದಾರೆ. ಪೋಲೀಸರು ಬುದ್ಧಿಗಲಿಯುವಂಥ ತೀರ್ಪೇ ಸರಿ.

ಪ್ರಭಾತ ಫೇರಿಯ ನೆಸೆಯಿಂದ ಎಂಟು ಹುಡುಗೆಯರಿಗೆ ಶಿಕ್ಷೆ !!!

ಜಳಗಾವಿಯ ಕಲೆಕ್ಟರರು ಪ್ರಾತಃಕಾಲದಲ್ಲಿ ನಗರ ಸಂಕೀರ್ತನೆ ಮಾಡುವಾಗ ನಾಲ್ವರಿಗಿಂತ ಹೆಚ್ಚು ಜನರಿರಬಾರದೆಂದು ಜಾಹೀರನಾಮೆ ಹಚ್ಚಿದರು. ಈ ಜಾಹೀರನಾಮೆಯನ್ನು ಮುರಿಯಲು ಅಲ್ಪವಯಿಯಾದ ಎಂಟು ಜನ ಹುಡುಗೆಯರು ನಗರ ಸಂಕೀರ್ತನೆ ಮಾಡಿದರು. ಇವರ ಕೂಡ ಜನರೂ ತಂಡ ತಂಡಾಗಿ ಹೋಗಲು ಮ್ಯಾಜಿಸ್ಟ್ರೇಟರ ಹುಕುಮು ಮುರಿದ ಬಗ್ಗೆ ವಿಚಾರಣೆ ನಡೆಯಿತು. ಹುಡುಗೆಯರು ಕೋರ್ಟಿನಲ್ಲಿ ಕಡುಗುಂಡಿಗೆಯಿಂದ ನೂಲುತ್ತಾ ಕೂತುಕೊಂಡು, ತಾವು ನಗರ ಪ್ರದಕ್ಷಿಣೆ ಹಾಕಿದ್ದು ನಿಜವೆಂದೂ, ಮೂವರಿಗಿಂತ ಹೆಚ್ಚಿಗೆ ಇರಲಿಲ್ಲೆಂದೂ ಹೇಳಿದರು. ಆದರೂ ಮ್ಯಾಜಿಸ್ಟ್ರೇಟರು ಇವರಲ್ಲಿ ಕೆಲವರಿಗೆ ೧೦೦, ಕೆಲವರಿಗೆ ೫೦ ರೂಪಾಯಿ ದಂಡ ಮಾಡಿದರು. ದಂಡ ಕೊಡದಿದ್ದರೆ- ಶಿಕ್ಷೆ ಎಂದು ಬೇರೆ ಶಿಕ್ಷೆ ಹೇಳಲಿಲ್ಲ. ಸ್ವಯಂಸೇವಿಕೆಯರು ದಂಡ ಕೊಡುವದಿಲ್ಲೆಂದರು. ಮ್ಯಾಜಿಸ್ಟ್ರೇಟರು ನಿರುಪಾಯರಾಗಿ ಇವರನ್ನು ಬಿಟ್ಟು ಬಿಟ್ಟರು.

ಧಾರವಾಡ-

ಇವತ್ತಿನ ದಿವಸ ಸಾಯಂಕಾಲದಲ್ಲಿ ಈ ಊರಲ್ಲಿ ವಕೀಲರ ಕಾರಕೂನರ ಖಾದೀ ಟೊಪ್ಪಿಯಲ್ಲಿ ಮೆರವಣಿಗೆ ಹೊರಡುವದು.

ಹೋದ ವಾರದಲ್ಲಿ ಮಳೆಯಿರಲಿಲ್ಲ. ನಿನ್ನೆನಿಂದ ಪುನಃ ಜೋಡವಾಗಿ ತುಂತುರ ಹನಿಯುದುರುತ್ತಿರುವದು.

ಹೋದದ್ದನ್ನು ನೋಡಿದರೆ- ಅದು ಎಷ್ಟು ದೂರ ಹೋಗಿರುತ್ತದೆಂಬುದರ ಊಹೆಯಾಗುವದು. ಆದ್ದರಿಂದಲೇ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯು ಬೇಕಾಯದೆಶೀರವಾಗಿರುತ್ತದೆಂದು ಜಾಹೀರು ಮಾಡಬೇಕಾಯಿತು. ಇಂಥ ವಿಷ ಜಂತುಗಳು ಸಮಾಜದಲ್ಲಿ ಸಾಂಕ್ರಾಮಿಕ ರೋಗದಂತೆ ಸೇರಿಕೊಂಡವೆಂದರೆ- ಅವು ಪುನಃ ಪುನಃ ಎದ್ದು ಹಿಂದುಸ್ಥಾನ ಸರಕಾರವನ್ನೇ ಸಂಕಷ್ಟಕ್ಕೆ ತರುವವು ಆದ್ದರಿಂದ ಆರ್ಡಿನನ್ಸಗಳನ್ನು ತೆಗೆಯುವ ಹೊತ್ತು ಬಂದಿತು.

ರಾವುಂಡ ಟೇಬಲಿಗಾಗಿ ಬಾಯಿಗೆ ನೀರು ಬಿಟ್ಟ ಮವಾಳರು

ರಾವುಂಡ ಟೇಬಲದಲ್ಲಿ ನಡೆಯುವ ವಾದವಿವಾದ ಮತ್ತು ಅದರಿಂದುಂಟಾಗುವ ಅದ್ಭುತದಂಥ ನಿರ್ಣಯವು ಹಿಂದುಸ್ಥಾನಕ್ಕೆ ಬಹು ಭಾಗ್ಯ ತರುವದೆಂದು ಲಾರ್ಡ ಆಯರ್ವಿನಸಾಹೇಬರು ಭಾಷಣ ಮಾಡಿದ ಕೂಡಲೆ, ಮವಾಳರಾದಂಥ ಹಿಂದೂ ಮುಸಲಮಾನರ ಬಾಯಿಗೆ ನೀರು ಬಿಟ್ಟು ಹೋಯಿತು. ಬುಧವಾರ ಮಧ್ಯಾಹ್ನದ ಮೂರು ಗಂಟೆಗೆ ಲಾರ್ಡಸಾಹೇಬರ ಭಾಷಣವಾಯಿತು. ಆ ಮುಂಜಾವದಲ್ಲಿಯೇ ಇವರೊಂದು ಜಾಹೀರ ಸಂದೇಶ ಪ್ರಸಿದ್ಧ ಮಾಡಿ, ಈ ಹೊತ್ತು ಕಳೆಯದೆ, ಕಾಂಗ್ರೆಸದವರು ಸಹ ರಾವುಂಡ ಟೇಬಲಕ್ಕೆ ಹೋಗಲೇಬೇಕೆಂದು ಹಠಮಾಡುವಂತೆ ಹೇಳುತ್ತಲಿದ್ದಾರೆ. ಇದರಲ್ಲಿ ಮುಂದಿನವರು ಸಹೀ ಮಾಡಿದಂಥವರು:-

೧ ಬ್ಯಾರಿಸ್ಟರ ಜಯಕರ, ೨ ಬ್ಯಾರಿಸ್ಟರ ಸಿನ್ಹಾ ೩ ಸರ ಫಿರೋಜ ಸೇಠನಾ ೪ ಸರ ಸಿ ಪಿ ರಾಮಸ್ವಾಮಿ ಅಯ್ಯರ ೫ ಸರ ಕಾವಸಜಿ ಜಹಾಂಗೀರ ೬ ನಾಮದಾರ ರಾಮಸ್ವಾಮಿ ಮೊದ್ಲಿಯಾರ, ೭ ನಾಮದಾರ ನಟೇಶನ ೮ ಪಿ. ಷಣ್ಮುಖಂ ಶೆಟ್ಟಿ ೯ ಪಿ. ಮೋದಿ ೧೦ ರಾಜಾ ಗಜನಾಥ ಲ್ಲಿ ೧೧ ಫಜಲ ಇಬ್ರಾಹಿಮ ರಹಿಮತುಲ್ಲಾ ೧೨ ಮಹಮದ ಇಸ್ಮಾಯಿಲಖಾನ ೧೩ ಪಿ ಎಸ ಎನ. ಸೇನ, ೧೪ ಎಂ. ಬಿ. ದಾಸ ೧೫ ಡಾಕ್ಟರ ಶಫಾಮುದ್ದೀನ ಅಹಮದ.

ಇವರು ತಮ್ಮ ಪ್ರಕಟನೆಯಲ್ಲಿ ಅನ್ನುವದೇನಂದರೆ-

೧ ವಿಲಾಯತಿ ಸರಕಾರದವರು ಹಿಂದೀ ಪ್ರತಿನಿಧಿಗಳ ಮತ್ತು ಹಿಂದೀ ಸಂಸ್ಥಾನಿಕರ ಪ್ರತಿನಿಧಿಗಳ ಕೂಡ ಮಾತಾಡಿ ಹಿಂದುಸ್ಥಾನಕ್ಕೆ ಆದಷ್ಟು ಹೆಚ್ಚಿನ ಪ್ರಮಾಣದಿಂದ ಹಿತಮಾಡುವರೆಂದು ಲಾರ್ಡ ಆಯರ್ವಿನ ಸಾಹೇಬರು ಹೋದವರ್ಷ ಅಕ್ಟೋಬರ ತಿಂಗಳ ೩೧ನೆಯ ತಾರೀಖಿನ ದಿವಸ ಭಾಷಣ ಮಾಡಿದರು.

೨ ಅನಂತರ ಸಾಯಮನ್ನ ಕಮೀಶನದ ರಿಪೋರ್ಟ ಪ್ರಸಿದ್ಧವಾಯಿತು. ಇದು ಹಿಂದುಸ್ಥಾನದಲ್ಲಿ ಯಾವ ಪಕ್ಷದ ಸಮಾಧಾನ ಮಾಡಲಿಲ್ಲ. ಇಷ್ಟೇ ಅಲ್ಲ; ಇದು ಹಿಂದುಸ್ಥಾನದ ಪ್ರಗತಿಗೆ ವಿಘ್ನ ತರುವಂಥದ್ದಾಗಿರುತ್ತದಲ್ಲದೆ, ಸರಕಾರ ಮತ್ತು ಪ್ರಜಾ ಪಕ್ಷದವರು ಅಪೇಕ್ಷಿಸುವಂಥ ವಸಾಹತಿನ ಸ್ವರಾಜ್ಯವನ್ನು ತಂದುಕೊಡದಂತಹದಾಗಿರುತ್ತದೆ.

೩ ಇಂಗ್ಲಂಡದ ಜನರು ಮತ್ತು ಇಂಗ್ಲಿಷ ವರ್ತಮಾನಪತ್ರಕಾರರು ಸಾಯಮನ್ನ ರಿಪೋರ್ಟಿನ ಪ್ರಶಂಸೆ ಮಾಡಿ, ಅದರ ಬೆನ್ನು ಚಪ್ಪರಿಸಿದ್ದಾರೆ. ಇದರ ವಿರುದ್ಧವಾಗಿ ಈ ದೇಶದ ಲೋಕಮತವಾಗಿದೆ ಲಾರ್ಡ ಆಯರ್ವಿನಸಾಹೇಬರು ಆಡಿದ ನುಡಿಗೂ ಹಿಂದೂ ಜನರ ಧ್ಯೇಯಕ್ಕೂ ಇದು ವಿರೋಧವಾಗಿದೆ

೪ ನಾವು ರಾವುಂಡಟೇಬಲಕ್ಕೆ ಹೋಗಿ, ಅಲ್ಲಿ ನಿಷ್ಕಪಟ ಮತ್ತು ಉದಾತ್ತವಾದ ಹೇತುವಿನಿಂದ ಚರ್ಚೆಯು ನಡೆಸುತ್ತಿದ್ದೇ ಆದರೆ ನಮ್ಮ ಬಿನ್ನತ್ತಿಯಿಂದ ಸರಕಾರ ಮತ್ತು ಜನರು ನಿಂದ, ಶಾಂತಿ ಸಮಾಧಾನಕರವಾದ ವಾತಾವರಣವನ್ನುಂಟು ಮಾಡುವದೆಂದು ಕರ್ತವ್ಯವಾಗಿರತಕ್ಕದೆಂದು ನಾವು ತಿಳಿಯುತ್ತೇವೆ.

೫ ರಾವುಂಡಟೇಬಲಕ್ಕೆ ಕಾಂಗ್ರೆಸವು ವಿರುದ್ಧವಿರುತ್ತದೆ. ಕಾಂಗ್ರೆಸದಂಥ ಪ್ರಬಲ ಪಕ್ಷವು ಇದರಲ್ಲಿ ಸೇರಿ, ಚರ್ಚೆಮಾಡಿದರೆ- ಟೇಬಲಕ್ಕೆ ಹೆಚ್ಚು ಮಹತ್ವ ಬರುವದು. ಮತ್ತು ನಿಜವಾಗಿ ಪ್ರಜಾಪ್ರಾತಿನಿಧಿಕತ್ವವಾಗುವದು.

೬ ಸರಕಾರದವರು ಆರ್ಡಿನನ್ಸುಗಳನ್ನು ಮಾಡಿ, ದಬ್ಬಾಳಿಕೆ ನಡೆಸುವದೂ, ಪ್ರಜರು ಕಾಯದೆ ಕಾನೂನು ಮುರಿದು, ದೇಶದತುಂಬ ಚಳವಳಿ ನಡೆಸುವದೂ, ದೇಶದಲ್ಲಿ ಈಗ್ಗೆ ವಿಸ್ತಾರವಾಗಿ ಹಬ್ಬಿದ ಕ್ಷೋಭೆಯನ್ನು ಮತ್ತಷ್ಟು ಬಲಪಡಿಸುವದು. ಒಂದಕ್ಕೊಂದು ವಿರುದ್ಧವಾಗಿ ನಡೆದ ಕೃತ್ಯದಿಂದ ಯಾವದೊಂದು ಪರಿಣಾಮವಾಗದೆ, ಅವರವರ ಬಲಾಬಲದ ಪರೀಕ್ಷೆ ನಡೆಸಿದಂತಾಗುತ್ತದೆ ಇದೇ ಶಕ್ತಿಯನ್ನು ರಾಷ್ಟ್ರಹಿತ ಸಂವರ್ಧನೆಗಾಗಿ ಉಪಯೋಗಿಸುವದೇ ಮೇಲು.

೭ ಸರಕಾರದವರು ಈ ಬಿಕ್ಕಟ್ಟಿನ ಸಮಯದಲ್ಲಿ ದಬ್ಬಾಳಿಕೆಯ ಎಲ್ಲ ಆಯುಧಗಳನ್ನು ರದ್ದು ಮಾಡಿ, ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂದು ಸರಕಾರಕ್ಕೆ ಆಗ್ರಹಪೂರ್ವಕವಾಗಿ ಹೇಳುತ್ತೇವೆ. ಇದೇ ವೇಳೆಯಲ್ಲಿ ಕಾಂಗ್ರೆಸ ಮತ್ತು ಅದಕ್ಕೆ ಸಂಬಂಧಿಸಿದ ಬೇರೆ ಸಂಸ್ಥೆಗಳು ಅಸಹಕಾರ ಕಾಯದೆಭಂಗವನ್ನು ನಿಲ್ಲಿಸಿ, ರಾವುಂಡಟೇಬಲಿನಂಥ ಸಭೆಯನ್ನು ಕಳಕೊಳ್ಳಬಾರದೆಂದು ಸೂಚಿಸುತ್ತೇವೆ ಹಿಂದುಸ್ಥಾನದಲ್ಲಿ ಇಂಥ ಎಲ್ಲ ಪಕ್ಷ ಮತ್ತು ಸಂಘಗಳ ಶಕ್ತಿ ಮತ್ತು ಧ್ಯೇಯವು ಒಂದೇ ಆಗಿದ್ದು, ಅವರ ಕ್ರಮದ ಬಗ್ಗೆ ವಿಚಾರ ಮಾಡತಕ್ಕದ್ದಾಗಿದೆ. ಆದ್ದರಿಂದ ಲಂಡನಕ್ಕೆ ಹೋಗಿ, ಸಂಯುಕ್ತ ಸಂಘಟನೆಯಿಂದ ಈ ಉದ್ದೇಶವನ್ನು ನೆರವೇರಿಸಿಕೊಳ್ಳತಕ್ಕದ್ದಾಗಿರುತ್ತದೆ

ಇಜಿಪ್ತ ಮತ್ತು ಹಿಂದುಸ್ಥಾನ.

ಮವಾಳ ಮುಖಂಡರು ಜಾಹೀರ ಪತ್ರಿಕೆಯನ್ನು ತೆಗೆಯುವಾಗ, ಅವರಿಗೆ ಇಜಿಪ್ತದ ಇತಿಹಾಸವು ನೆನಪಾದಂತೆ ತೋರಲಿಲ್ಲ. ಒಂದು ವೇಳೆ ಗೊತ್ತಿದ್ದರೂ, ಅವರು ಅದನ್ನು ಕಣ್ಣಾಮರೆ ಮಾಡಿಕೊಂಡಿರಬಹುದು ಇಜಿಪ್ತವು ಸ್ವತಂತ್ರ್ಯಪೇಕ್ಷೆಯಿಂದ ಹಳಹಳಿಸುತ್ತಿದ್ದಾಗ, ಮವಾಳರು ಮಂತ್ರಿಯಾಗಿದ್ದರು. ಮವಾಳರ ಕೂಡ ಸಂಧಿಯನ್ನು ಮಾಡಿಕೊಂಡರೆ- ಅದು ಪ್ರಜಾಪಕ್ಷಕ್ಕೆ ಒಪ್ಪಿಗೆಯಾಗಲಾರದು ಮವಾಳರು ಲಂಡನಕ್ಕೆ ಹೋಗುವದು ನಿರರ್ಥಕವಾಗುವದು. ಆದುದರಿಂದ ಮೊದಲು ಅಲ್ಲಿ ಪಾರ್ಲಮೆಂಟಿನ ಚುನಾವಣೆಯಾಗಲಿ, ಲೋಕಮತದ ಅಳವು ತಿಳಿಯಲಿ; ಪ್ರಧಾನಪಕ್ಷಾರೂಢರಾದಂಥವರು ಒಡಂಬಡಿಕೆಗೆ ಬರಲೆಂದು ಸೂಚಿಸಲು- ಚುನಾವಣೆಯಾಗಿ, ನಾಹಸ ಪಾಷಾನ ಬಳಗವೇ ಬಹುಮತವುಳ್ಳದ್ದಾಗಿ, ವಿಲಾಯತಿಗೆ ಹೋಯಿತು. ಅಲ್ಲಿ ಸುದಾನ ಪ್ರಾಂತದ ಆಡಳಿತೆಯ ಬಗ್ಗೆ ಮತಭೇದವಾಗಿ ಈ ಮಂಡಲವು ತಿರುಗಿ ಬಂತು. ಇದೇ ಪ್ರಕಾರ ಹಿಂದುಸ್ಥಾನದಿಂದ ರಾವುಂಡ ಟೇಬಲಕ್ಕೆ ಹೋಗುವ ಮಂಡಲವೂ ಹಿಂದಿರುಗಿ ಬರಬಹುದು. ಅಥವಾ ಬರಲಾರದು. ಏಕೆಂದರೆ- ಅವರಲ್ಲಿ ನಾಹಸ ಪಾಷಾನಂತೆ ಒಂದೇ ಪಂಗಡದ ಪ್ರತಿನಿಧಿಗಳು ಹೋಗಲಾರರು. ಹದಿನೆಂಟು ಪಕ್ಷಗಳ ಕೂಡ ಬಳಿಯಂತೆ ಈ ಮಂಡಲವಾಗುತ್ತದೆ. ಕಾಂಗ್ರೆಸ

ವಿಲಾಯತಿಯ ಲೋಕಮತವು.

ಇಂಗ್ಲಂಡದಲ್ಲಿ, ಲಾರ್ಡ ಆಯರ್ವಿನಸಾಹೇಬರು ಮಾಡಿದ ಭಾಷಣದ ಪ್ರತಿಗಳನ್ನು ಮುದ್ರಿಸಿ ಪಾರ್ಲಮೆಂಟ ಸಭೆಯಲ್ಲಿ ಆಗಿಂದಾಗ ಹಂಚಿದರು. ಕಾನ್ಸರ್ವೇಟಿವ್ಹ ಮತ್ತು ಲಿಬರಲರ ಮುಖಂಡರಾದ ಮಿ. ಬಾಲ್ಡವಿನ್ನ ಮತ್ತು ಲಾಯಿಡ ಜಾರ್ಜ ಸಾಹೇಬರು ಈಗಲೇ ಅಭಿಪ್ರಾಯ ಕೊಡುವದಿಲ್ಲೆಂದರು. ಸಾಮಾನ್ಯವಾಗಿ ಇವೆರಡೂ ಪಕ್ಷಗಳ ಜನರು ಸಾಯಮನ್ನ ರಿಪೋರ್ಟಿಗೇ ಮಹತ್ವ ಕೊಡುತ್ತಿದ್ದು, ಅದರ ಮುಂದೆ ಒಂದು ಹೆಜ್ಜೆ ಕೂಡ ಮುಂದೆ ಹೋಗಲಾಗದೆಂಬ ಮತದವರಾಗಿದ್ದಾರೆ ಮಾಜೀ ಭಾರತ ಮಂತ್ರಿಯಾದ ಲಾರ್ಡ ಬರ್ಕನಹೆಡ್ಡ, ಸರ್ವಾಧಿಪತಿ ಲಾರ್ಡ ರೀಡಿಂಗಸಾಹೇಬ ಚರ್ಚಿಲ್ಲರವರು ಹಿಂದುಸ್ಥಾನದ ಜನ್ಮಜನ್ಮಾಂತರದ ವೈರಿಗಳಂತೆ ಗೊಂದಲವೆಬ್ಬಿಸಿದ್ದಾರೆ. ಕಾಲಿಕಾರಂ ಇರುವ ಬಣದವರು ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂದೂ ರಾವುಂಡಟೇಬಲಿನಲ್ಲಿ ಮಹಾತ್ಮರೂ, ಪಂಡಿತ ಮೋತಿಲಾಲರೂ ಇರಲೇಬೇಕೆಂದೂ ಆಗ್ರಹಪೂರ್ವಕವಾದ ಸೂಚನೆ ಮಾಡಿದ್ದಾರೆ. ಆದರೆ ಇವರಿಗೆ ಲಾರ್ಡಸಾಹೇಬರ ಭಾಷಣವು ತೃಪ್ತಿಯನ್ನುಂಟು ಮಾಡಿಲ್ಲ. ಹಿಂದುಸ್ಥಾನಕ್ಕೆ ವಸಾಹತಿನ ಸಂಪೂರ್ಣ ಸ್ವರಾಜ್ಯ ಕೊಡುತ್ತೇವೆಂದು ವಚನ ಕೊಟ್ಟರೇ ಹಿಂದುಸ್ಥಾನದ ಸಮಾಧಾನವಾಗುವದೆಂದು ಮಿ ಬ್ರಾಕವೇಸಾಹೇಬರು ಅಂದಿರುತ್ತಾರೆ ಪಳುವಾರ ಪೈಲುಗಳ ಮೇಲಿರುವಂಥ ಯುರೋಪಿಯನ್ನರಿಗೆ ಹಿಡಿಸುವಂಥ ಮಾತು. ಹಿಂದುಸ್ಥಾನದಲ್ಲಿರುವ ಮವಾಳರಿಗೆ ಹೊಳೆಯುವದಿಲ್ಲ! ಜಾಹೀರನಾಮೆ ತೆಗೆದ ಮೇಲೆ ಹೇಳಿದ ಮವಾಳರಿಗೆಲ್ಲ ರಾವುಂಡಟೇಬಲದ ಆಮಂತ್ರಣವೇ ಬೇಕು! ಅಷ್ಟೇ ಅವರು ಅದಕ್ಕಾಗಿ ಹಪಾಹಪಿಸಿದ್ದಾರೆ.

ಇಂಗ್ಲಂಡದ ಬಟ್ಟೆಯ ವ್ಯಾಪಾರಕ್ಕೆ ಬಂದ ಗೋಳು.

ಮ್ಯಾಂಚೆಸ್ಟರದ ವ್ಯಾಪಾರಕ್ಕೆ ಬಂದಂಥ ಬಟ್ಟೆಯ ವ್ಯಾಪಾರದ ಗೋಳನ್ನು ತಪ್ಪಿಸಿ, ಅದನ್ನು ಮತ್ತೆ ಒಳ್ಳೇ ಸ್ಥಿತಿಗೆ ತರುವದೆಂಬದಾಗಿ ವಿಚಾರಿಸುವ ಕುರಿತು ಒಂದು ಕಮಿಟಿ ಕೂಡಿಸಿದ್ದರು. ಇಂಗ್ಲಂಡದ ಗಿರಣಿಗಳು ಬಹುವಾಗಿ ಅಮೇರಿಕೆಯ ಉದ್ದ ಎಳೆ ಹೊರಡುವ ಹತ್ತಿಯನ್ನು ಕೊಳ್ಳುವವು. ಜಪಾನರು ಹಿಂದುಸ್ಥಾನದ ಉರುಟು ಎಳೆಯ ಹತ್ತಿ ಕೊಂಡು ಹಿಂದುಸ್ಥಾನ, ಚೀನ ಮಾತ್ರವಲ್ಲದೆ, ದಕ್ಷಿಣ ಆಫ್ರಿಕೆಯ ತನಕ ವ್ಯಾಪಾರವನ್ನು ಹಬ್ಬಿಸುತ್ತಲಿದ್ದಾರೆ. ಹಿಂದುಸ್ಥಾನ ಮತ್ತು ಪೂರ್ವ ಆಶಿಯಾಖಂಡದಲ್ಲಿಯ ಇಂಗ್ರೇಜಿ ವ್ಯಾಪಾರವು ಈ ರೀತಿಯಾಗಿ ಸಂಕಷ್ಟಕ್ಕೆ ಬರುತ್ತಲಿದೆ. ಆದ್ದರಿಂದ ಇಂಗ್ಲಿಷ ಗಿರಣಿಯವರು ಹಿಂದುಸ್ಥಾನದಲ್ಲಿ ಹುಟ್ಟುವಂಥ ಹತ್ತಿ ಮತ್ತು ಈ ದೇಶೀಯರಿಗೆ ಬೇಕಾಗುವಂಥ ಧಡೋತ್ರಿಯ ಬಟ್ಟೆಯನ್ನು ನೆಯದು, ಜಪಾನವನ್ನು ಹಿಂದೆ ಹಾಕಬೇಕೆಂದು ಕಮಿಟಿಯವರು ಸೂಚನೆ ಮಾಡಿದ್ದಾರೆ. ಹಿಂದುಸ್ಥಾನದಲ್ಲಿ ರಾಟಿ, ಮಗ್ಗ ಮತ್ತು ಗಿರಣಿಗಳ ಪ್ರಸಾರವಾಗಿ, ಹಿಂದುಸ್ಥಾನವು ತನ್ನ ವಸ್ತ್ರವನ್ನು ತಾನೇ ಒದಗಿಸಿಕೊಳ್ಳುವಂತೆ ಬಂಡವಲದ ಸಹಾಯ ಮಾಡಬೇಕೆಂಬ ಸುಬುದ್ಧಿಯು ಹಿಂದುಸ್ಥಾನ ಸರಕಾರಕ್ಕೆಂದು ಹುಟ್ಟುವದು? ಒಂದರ ಮೇಲೊಂದರಂತೆ ದಬ್ಬಾಳಿಕೆಯ ವಿಚಾರ ಹುಟ್ಟುವಾಗ, ಇಂಗ್ರೇಜಿ ಜನರ ಹೊಟ್ಟೆಯ ಮೇಲೆ ಕಾಲು ಬರುವಂಥ ವಿಚಾರವೇಕೆ ತಲೆದೋರಬೇಕು?

ಳ ನಾವು ರಾವುಂಡಟೇಬಲಕ್ಕೆ ಹೋಗಿ, ಅಲ್ಲಿ ನಿಷ್ಕಪಟ ಮತ್ತು ಉದಾತ್ತವಾದ ಹೇತುವಿನಿಂದ ನಮ್ಮ ಬೇಡಿಕೆಗಳನ್ನು ಕಮೀಟಿಯ ಮುಂದಿಟ್ಟು ಸ್ವಾರ್ಥವನ್ನು ಸಾಧಿಸಿಕೊಳ್ಳಬಹುದು. ಅಲ್ಲಿಗೆ ಹೋದ ಪಕ್ಷದಿಂದ ರಾಜ್ಯಕರ್ತರು ಹೇಳುವಂತೆ ನಡೆಯುತ್ತೇವೆಂದು ನಾವು ಕಾಯಾವಾಚಾ ಬದ್ಧರಾಗಲಾರೆವು. ಅದರಲ್ಲಿ ಭಾಗ ತಕ್ಕೊಳ್ಳುವದರಿಂದ ನಮ್ಮದೇನೂ ಹಾನಿಯಾಗಲಾರದು. ಸನ್ಮಾನನೀಯವೆನಿಸುವಂಥ ಒಡಂಬಡಿಕೆಯಾದರೇ ಅ ಹೋಗಲಾರರು. ಹದಿನೆಂಟು ಧಾನ್ಯಗಳ ಕೋಡಬಳ್ಳಿಯಂತೆ ಈ ಮಂಡಳವಾಗುತ್ತದೆ. ಕಾಂಗ್ರೆಸ ಪಕ್ಷದವರು ಐದಾರು ಜನರಾದರೆ ಬೇಡವೆನ್ನುವಂಥ ಜನರಿಗೇನೂ ಕೊರತೆಯಾಗಲಾರದು. ಅದ್ದರಿಂದ ಕೆಲವು ತತ್ವಗಳನ್ನು ಮೊದಲು ಒಪ್ಪಿರಿ; ಅನಂತರ ನಮ್ಮನ್ನು ಎಲ್ಲಿ ಬೇಕಾದಲ್ಲಿಗೆ ಕರೆಯಿರೆಂದು ಮಹಾತ್ಮರು ಹೇಳುತ್ತಲಿದ್ದಾರೆ. ಲಾರ್ಡ ಆಯರ್ವಿನಸಾಹೇಬರಿಗೆ ಮಹಾತ್ಮರ ಹೇಳಿಕೆಯು ಅಪಥ್ಯವೆನಿಸಿದ್ದರಿಂದಲೇ, ಈಗಿನ ಪ್ರಜಾಕ್ಷೋಭೆಯು ರವೇಕೆ ತಲೆದೋರಬೇಕು?

ಜಳಗಾವ ಮ್ಯುನಿಸಿಪಾಲಿಟಿಯ
ಮೇಲೆ ರಾಷ್ಟ್ರೀಯ ನಿಶಾನೆ.

ಪೂರ್ವ ಖಾನದೇಶ ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ರಾಷ್ಟ್ರೀಯ ನಿಶಾನೆ ಹಚ್ಚುವ ಠರಾವಾಯಿತು. ಕಚೇರಿಯ ಆವಾರಿನಲ್ಲಿ ಪೋಲೀಸ ಚೌಕಿಯುಂಟು. ಕಾರಣ ಮ್ಯುನಿಸಿಪಾಲಿಟಿಯ ಮೇಲೆ ಹಚ್ಚಕೂಡದೆಂದು ಕಲೆಕ್ಟರರು ಪ್ರೆಸಿಡೆಂಟರಿಗೆ ಪತ್ರ ಬರೆದರು. ಈ ಬಗ್ಗೆ ಮ್ಯುನಿಸಿಪಾಲಿಟಿಯವರು ತ

ಧಾರವಾಡದ ವಕೀಲರ ಬಹಿಷ್ಕಾರ.

ಮತ್ತು

ಅವರ ಉತ್ಸಾಹಪೂರ್ಣವಾದ ಮೆರವಣಿಗೆ.

* * *

ಧಾರವಾಡದ ವಕೀಲರು ಸ್ವದೇಶೀ ವ್ರತದಲ್ಲಿ ಸಂಪೂರ್ಣ ಪ್ರವೇಶ ಮಾಡಿದರೆಂದು ಬರೆಯುವದಕ್ಕೆ ಯಾವ ಪ್ರತ್ಯವಾಯವಿರುವದಿಲ್ಲ. ಇವರು ಎರಡು ತಿಂಗಳ ಹಿಂದೆಯೇ ತಮ್ಮ ವಕೀಲ ಸಂಘದಲ್ಲಿ ಎಲ್ಲ ವಕೀಲರು ಖಾದಿಯನ್ನೇ ಉಪಯೋಗಿಸಬೇಕೆಂಬ ಗೊತ್ತು ಮಾಡಿದರು. ಆ ಪ್ರಕಾರ ಬಹುತೇಕ ವಕೀಲರು ಖಾದಿಮಯರಾದ್ದರಿಂದ ಮನಸ್ಸಿನಲ್ಲಿ [illegible] ಉಂಟಾಯಿತು. ಅನ ವಾದವಾಗಿ ಯಾರದು ವಿಲಾಯತಿಯ ಅರಿವೆಯನ್ನು [illegible]. ಆಶ್ಚರ್ಯವು, ಅವರಿಗೊ ಬುದ್ಧಿ ಬಂದು, ಕೆಲ ದಿವಸಗಳಲ್ಲಿ ಖಾದಿಯಲ್ಲಿ ಭಕ್ತಿ ಹುಟ್ಟಿಸುವದು. ಖಾದಿಯು ರಾಷ್ಟ್ರದ [illegible] ರೀತಿಯಿಂದ ಸ್ವದೇಶೀ ಆಂದೋಲನ [illegible] ಮಾಡುತ್ತಲೇ ಇದ್ದಾರೆ. [illegible] ಈ ಸಂಘ [illegible] ಇವರ [illegible] ಇವರು ಸೂಚಿತ [illegible] ಹಿಡಿದ ಬಗ್ಗೆ ಸರಕಾರ [illegible] ನಿಷೇಧ ಮಾಡಿದ್ದರಿಂದ ಸರಕಾರದವರು ವಕೀಲರ ಸ್ವಾತಂತ್ರ್ಯ ಪಸೆಯಿಂದ ನಿನ್ನಿನ ಹೊಸದಿನಾದ ನಡೆಸುವ ದಬ್ಬಾಳಿಕೆಯು ನಿಷೇಧವು ಅವರ [illegible], ಸ್ವದೇಶ ಭಕ್ತರನ್ನು [illegible] ದಿ [illegible] ಕಟಿದಂತೆ ಇವರು [illegible] ಟ್ಟಿಗೆ [illegible] ತ, ಬರೇ ವಕೀಲರು [illegible] ಹೋಡೆದು ನಿಂತು, [illegible] ಹಿಂದ ಸ್ಥಾನದಲ್ಲಿ [illegible] ದ [illegible] ಕ್ಕೆ ಇವರು ಈ ಮಾನ [illegible] ಕೊಟ್ಟದ್ದಕ್ಕೆ ಇವರು ಅಭಿನಂದನೆಗೆ ಪಾತ್ರರಾದರು [illegible].

ಈ ಉತ್ಸಾಹದಿಂದ ಒಬ್ಬ ವಕೀಲರು ಇವರ ಸಂಘದಲ್ಲಿ ಪಿಕೆಟಿಂಗ [illegible] ತೆಗೆದು, [illegible] ಒಟ್ಟಿಗೆ [illegible] ಪ್ರತಿಜ್ಞೆ [illegible] ತೆಯ [illegible] ಗಂತ್ರಾಯಿತು. ಆ ಪ್ರಕಾರ ಮೊನ್ನೆ [illegible] ಮೆರವಣಿಗೆ ಹೊರಡಿದರು. ಇದರಲ್ಲಿ [illegible] ಭಾಗ ತೆಗೆದುಕೊಂಡಿದ್ದರು [illegible] ಶ್ರೀ ಹೊನ್ನಾಪೂರ ಪಕ್ಕಿರಪ್ಪನವರ [illegible] ಉತ್ಸವದಲ್ಲಿ ಸೇರಿ, [illegible], ಸ್ವದೇಶೀ [illegible] ಪಾಡುತ್ತಿದ್ದರು. ಮೆರವಣಿಗೆಯು ಬಹಳೇ ಶಿಸ್ತಿನಿಂದ ನಡೆದು ದಂಡಿಕರವಾಯನ್ನು ಹೋಲುತ್ತಿತ್ತು. ಎಲ್ಲಕ್ಕೂ ಮುಂದೆ [illegible] ವದಕ್ಕೆ [illegible] ಶ್ರೀ ಕಬ್ಬೂರ ವಕೀಲರು ಮುಂಭಾಗದಲ್ಲಿ ರಾಷ್ಟ್ರೀಯ ನಿಶಾನೆ, ಬಿಗುಲ ಮತ್ತು ಶ್ರೀ ಜೋಗಿ, ಹೊನ್ನಾಪೂರ ಮೊದಲಾದವರಿದ್ದರು. ಮಹತ್ವದ ಕೂಟಿಗೆ ಮತ್ತು ಜನ ದಟ್ಟಣೆಯಾಗಿರುವ ಸ್ಥಳಗಳಲ್ಲಿ ಶ್ರೀ ಕಬ್ಬೂರ ವಕೀಲರ ಸಂಜ್ಞೆಯ ಪ್ರಕಾರ ಬಿಗುಲ ಹಿಡಿಯುವರು. ಮೆರವಣಿಗೆಯವರೆಲ್ಲರೂ ತಟ್ಟನೆ ನಿಲ್ಲುವರು. ಆಗ ಶ್ರೀ ಕಬ್ಬೂರರವರು 'ಬಾಯಕಾಟ ಬ್ರಿಟಿಶ ಗುಡ್ಸನಂ" ದು ಘೋಷಣೆ ಮಾಡುವರು. ಅದಕ್ಕೆಲ್ಲರೂ ಧ್ವನಿಗೊಡುವರು. ವಕೀಲರಲ್ಲಿ ಕಂಡುಬಂದ ಉತ್ಸಾಹ ಮತ್ತು ಮೆರವಣಿಗೆಯ ಶಿಸ್ತು ನೋಡಲು ಜನರ ಜಾತ್ರೆ ಕೂಡಿತು. ಅಂದು ಮಂಗಳವಾರ, ಊರ ಸಂತೆ, ಸ್ತ್ರೀಯರು ಜವಳೀ ಅಂಗಡಿಗಳ ಮುಂದೆ ಸರ ಅಂಗಡಿಯಲ್ಲಿ ಬಹಳ ದೊಡ್ಡ ವ್ಯಾಪಾರವಾಗುವದು. ಅಂದು ಸಾವಿರ ರೂಪಾಯಿಯ ತಕ್ಕೆಗಳಲ್ಲಿಯಲ್ಲಿ [illegible] ಅವರ ಬದಲಾಗಿ [illegible] ಯನ್ನು ಅಂಗಡಿಯನ್ನು ಬಂದು ಮಾಡಿ, ಹಸರಿಗ ಬಂಗೆರಡು [illegible] ಕೂತಿದ್ದರು. ಜವಳೀ ಪೇಟೆಯಲ್ಲಿ [illegible], ಶೀವಿಕರ ಹೇಳು [illegible] ಬೇರೆ ಗಿರಾಕಿ [illegible] ನಾಗರಿಕರೆಲ್ಲ [illegible]. [illegible] ಮಕ್ಕಳು [illegible] ಗಾಗಿ ಅರಿವೆಯನ್ನು ಕೊಳ್ಳುವ ಸಮಯ. ಇದನ್ನು ಸಾಧಿ, ಪರದೇಶಿ ಅರಿವೆ ಬಿಟ್ಟು, ಸ್ವದೇಶಿ ಅರಿವೆಯನ್ನೇ ಕೊಳ್ಳಬೇಕೆಂದು ಅವರಲ್ಲಿ [illegible] ಹುಟ್ಟುವಂತಾದ ನಿನ್ನಿನ ಪಿಕೆಟಿಂಗ ಮತ್ತು ಮೆರವಣಿಗೆಯು ಯಶಸ್ವಿಯಾಯಿತು. ಜನರ ಮೇಲೆ ಮ [illegible] ಪರಿಣಾಮ [illegible] ಇದರ ಕಾರಣ ವಕೀಲರು ಈ ಚಳವಳಿಯಲ್ಲಿ ಹಿಂದಿದ್ದಾರೆಂಬ ಅಪವಾದವು ದೂರಾಗಿ, ಅವರು [illegible] ರಾಜ್ಯ ಯುದ್ಧದ [illegible] ಮುಂಚೂಣಿಯಲ್ಲಿ ನಿಂತಿದ್ದಾರೆ [illegible] ಪ್ರಜೆಗಳ ನಿದರ್ಶನಕ್ಕೆ ಬಂದದ್ದಂತೂ ಮಹತ್ವದ ಕಾರ್ಯವಾಯಿತು. ಭಾಪು! ವಕೀಲರೇ ಭಾಪು !!

ಧಾರವಾಡದಲ್ಲಿ ಪಿಕೆಟಿಂಗ ಪ್ರಾರಂಭ

ಧಾರವಾಡದಲ್ಲಿ ವಿಲಾಯತಿ [illegible] ಅಂಗಡಿಗಳ ಮುಂದೆ ನಿನ್ನೆಯಿಂದ ಪಿಕೆಟಿಂಗ ಪ್ರಾರಂಭವಾಯಿತು. [illegible] ಅಂಗಡಿಗಳ ಮುಂದೆ ಸ್ತ್ರೀ [illegible] ಕೂತು, ಬಂದವರಿಗೆ ವಿಲಾಯತಿ ಬಟ್ಟೆ ಕೊಳ್ಳಬೇಡಿರೆಂದು ಉಪದೇಶ ಮಾಡುತ್ತಿದ್ದಾರೆ. ಪರದೇಶಿ ಅರಿವೆ ತರಿಸಿದ್ದಕ್ಕೆ ಅಂಗಡಿಕಾರರಿಗೆ [illegible] ತೋರುತ್ತಿದ್ದು, ಪಿಕೆಟಿಂಗ ಎಬ್ಬಿಸಬೇಡಿರೆಂದು ಇನ್ನೂ ಪೋಲೀಸರಿಗೆ ಹೇಳಿಕೊಳ್ಳಲಿಲ್ಲ. ನಿನ್ನಿನ ದಿವಸ ಶಿಂದಿಯ [illegible] ಒದ್ದರಿಂದ ಶಿಂದಿಯ ಅಂಗಡಿಯು ಬಾಗಿಲ ಹಾಕಿತ.

ಧಾರವಾಡದಲ್ಲಿ

ಪರದೇಶೀ ಅರಿವೆಯ ಅಂಗಡಿಗಳ ಮುಂದೆ

ಪಿಕೆಟಿಂಗ ಮಾಡಿದ ಸ್ವಯಂಸೇವಿಕೆಯರ

ಹೆಸರುಗಳು

ಜವಳೀ ಪೇಟೆ—

೧ ಶ್ರೀ ಸೌ|| ಕೃಷ್ಣಾಬಾಯಿ ಪೂಜೇಕರ

೨ ಶ್ರೀ ಶಿರೂರ ಮತ್ತು ಸಾವಿತ್ರೀ ಸೊನ್ನಾಯಟಿಯ [illegible] ಜನ ಹೆಣ್ಣುಮಕ್ಕಳ

ಮಾರ್ಕೆಟ —

೧ ಶ್ರೀ [illegible] ಬಾಯಿ ಜೋಗಳೇಕರ

೨ ಶ್ರೀ ಸೌ| ಜಾನಕಿಬಾಯಿ ಕಿರ್ಲೋಸ್ಕರ

೩ ಶ್ರೀ ಸೌ|| ಲೀಲಾಬಾಯಿ ಹಿರೇಮಠ

ಶಿಂದಿಯ ಲಿಲಾವು

ಜಯಜಯಕಾರವೆಂದಿತು.

ಶಿಂದಿಯ ಲಿಲಾವು ಮುಂಬಯಿ ಇಲಾಖೆಯ ತುಂಬ ಜೋಳ್ಳು ಹೊಡೆಯಿತು. ಯಾವದೇ ಜಿಲ್ಲೆಯಲ್ಲಿ ನಡೆದ ಸವಾಲು ನೋಡಿದರೂ ಇನ್ಸಪೆಕ್ಟರ, ಸಿಪಾಯರ ಸಂಬಳ ಪೂರಯಿಸುವಷ್ಟು ರಕಮಿಗೆ ಸಹ ಸವಾಲಾಗಿಲ್ಲೆಂದು ಕೇಳಬರುವದು. ಹತ್ತು ಸಾವಿರ ಕ್ಕಾಗಿದ್ದ ಅಂಗಡಿಯನ್ನು ಐವತ್ತಕ್ಕೆ ಕೂಡ ಯಾ [illegible] ಬೇರರು.

ಸವದತ್ತಿಯಲ್ಲಿಯೂ ರಾಷ್ಟ್ರೀಯ ನಿಶಾನೆ ಹಚ್ಚುವ ದೊಡ್ಡ ಚಳವಳಿಯು ಕಳೆದೊಂದು ತಿಂಗಳಿಂದ ನಡೆದಿತ್ತಷ್ಟೇ, ಅಧ್ಯಕ್ಷ ಮಹಾಶಯರು ಅದನ್ನು ಬೇನಸನ ದಿನದಂತೆ ಮುಂದೆ ಮುಂದೆ ಹಾಕುತ್ತಾ ಇದ್ದರು. ಊರವರು ಇದನ್ನು ಕೊನೆಗೆ ಬಿಟ್ಟಿಗೆ ಹಚ್ಚುವದು. ದೊಡ್ಡ ಮೆರವಣಿಗೆ ತೆಗೆದರು. ಅದರಲ್ಲಿ ಐವತ್ತು ಸ್ತ್ರೀಯರೇ ಇದ್ದರು. ಅಧ್ಯಕ್ಷರು ನಾಡಗುಡಿಯನ್ನೇರಿಸದಿದ್ದರೆ ತಾವೇ ಏರಿಸಬೇಕೆಂಬ ವೀರ ಪ್ರತಿಜ್ಞೆ ಮಾಡಿ ಮ್ಯುನಿಸಿಪಾಲಿಟಿಗೆ ಹೋದರು. ಈ ಸಂಕಟ ಕಂಡು ಅಧ್ಯಕ್ಷರು ಮೆಲ್ಲಗೆ ಜಾರಿಕೊಂಡು ಹತ್ತರವೇ ಇದ್ದ ಮನೆಯಲ್ಲಿ ಕೂತುಕೊಂಡರು. ಜನರು ಅಲ್ಲಿಗೆ ಹೋದರು. ತಾವೇ ಪಚ್ಚನಂತೆ ಅಧ್ಯಕ್ಷರು ಒಣ ಮಾತಿನ ಸಂವಿಗೆ ಹೇಳಿದರು. ಮಹಿಳಾ ಸಾಹಸ್ಯ ಕೃತಿಬೇಕೆಂದು ಇವರು ಸತ್ಯಾಗ್ರಹ ನಡೆಸಿದರು. ಅಧ್ಯಕ್ಷರ ಆಟ ನಿಂತಿತು. ಆಗ ಉಪಾಯ ಗಾಣದೆ, ಅಧ್ಯಕ್ಷರು ಬೇರೆ ಮೆಂಬರರನ್ನು ಆಫೀಸಿಗೆ ಕರಿಸಿಕೊಂಡು, ನಾಳೆ ಹತ್ತನೆಯ ತಾರೀಖಿನ ದಿವಸ ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂಬ ಠರಾವು ಮಾಡಿದರು.

ಸವದತ್ತಿಯಲ್ಲಿ ಶಿಂದೀ ಗಿಡದ ಕಿಚ್ಚು.

ಸರಕಾರಕ್ಕೆ ಸಾಕ್ಷೀದಾರರೇ ಸಿಗಲಿಲ್ಲ.

ಸವದತ್ತಿಯಲ್ಲಿ ಸರಕಾರೀ ಶಿಂದೀಗಿಡಗಳನ್ನು ಕಡಿದರೆಂದು ಪೋಲೀಸರು ಹ್ಯಾಲಟಿಯವರ ಮೇಲೆ ಖಟ್ಲೆ ಹಾಕಿದ್ದರಷ್ಟೇ, ಇದರ ವಿಚಾರಣೆಯು ಹೋದ [illegible] ನಡೆಯಬೇಕಾಗಿತ್ತು. ಸರಕಾರದ [illegible] ದವರು ವಿಚಾರಣೆಗಾಗಿ ಕಚೇರಿಗೆ ಹೋಗುವಾಗ [illegible] ಜನರು ದೊಡ್ಡ ಮೆರವಣಿಗೆ ತೆಗೆದರು. ಸ್ತ್ರೀಯರು ಆರತಿ ಬೆಳಗಿದರು. ಯಾವನೇ ಸಾಕ್ಷಿ ಹೇಳಲಿ, ಅವನ ಸಮಾಚಾರ ತಕ್ಕೊಳ್ಳಬೇಕೆಂದ ದಾರೀ ಹಿಡಿದು ಕೂತರು. ಬಹಿಷ್ಕಾರ ಹಾಕಿ, ಸಾಕ್ಷಿದಾರರಿಗೆ ಬೆಂಕಿ ಸಹ ಸಿಗದಂತೆ ಮಾಡಬೇಕೆಂದು ಊರೇ ಪಣತೊಟ್ಟು ನಿಂತಿತು. ಈ ಭಾವೀ ಸಂಕಟ ನೋಡಿ, ಸಾಕ್ಷೀದಾರರೇ ಹುಟ್ಟಲಿಲ್ಲ. ಸಾಕ್ಷೀದಾರರು ಪೋಲೀಸರ ವಶದಲ್ಲಿಯ ಕೆಲಸದವರೇ ಆಗಿ, ಪರಿಷ್ಕಾರ ಅಪ್ಪಣೆ ಪಡೆಯದೆ, ಎಲ್ಲ ತಕ್ಕೊಳ್ಳುವದೆಂದು ಮ್ಯಾಜಿಸ್ಟ್ರೇಟರಿಗೆ ಅರಿಕೆ ಮಾಡಿಕೊಂಡು ತಮ್ಮ ದಾರೀ ಹಿಡಿದರು.

ಪಾರ್ಸಿ ಸ್ತ್ರೀಯರು ಚಳವಳಿಯಲ್ಲಿ ಸೇರಿದರು.

ಮುಂಬಯಿ ಸರಕಾರದವರು ಸ್ವರಾಜ್ಯ ಸ್ಥಾಪನೆಯ ಆದ್ಯಪ್ರವರ್ತಕರಾದ ಶ್ರೀ ದಾದಾಭಾಯಿ ನವರೋಜಿಯವರ ಮೊಮ್ಮಗಳಾದ ಶ್ರೀ ಪೆರಿನ ಕ್ಯಾಪ್ಟನವರಿಗೆ ಶಿಕ್ಷೆ ವಿಧಿಸಿದ್ದು, ಸೌಮ್ಯದ ಸೂಗಸುಗಾರಿಕೆಯಲ್ಲಿ ಕಾಲ ಕಳೆಯುತ್ತಿದ್ದಂಥವರನ್ನು ಒಡೆಯ ಎಬ್ಬಿಸಿತು. ಶ್ರೀ ಪೆರಿನಬಾಯಿ ಶಿಕ್ಷೆಯನ್ನು ನಿಷೇಧಿಸಲು ಸ್ತ್ರೀಯರ ಪ್ರಚಂಡ ಸಭೆ ಕೂಡಿಸಿದ್ದರು. ಸಾವಿರಾರು ರೂಪಾಯಿ ಬೆಲೆಬಾಳುವಂಥ ರೇಶಿಮೆಯ ವಸ್ತ್ರ ಉಪಯೋಗಿಸುವಂಥವರು ಖಾದಿಯ ಕುರುಬರ ಶೀರೆ ಉಟ್ಟಿದ್ದರು. ಸಭೆಯು ಉತ್ಸಾಹಪೂರ್ಣವಾಗಿದ್ದು ಸಂಕಾರ ಕೃತ್ಯದ ನಿಷೇಧ ಮಾಡುವಾಗ ಶೀಮತಬ್ಬದ ಸುರಿಮಳೆಯಾಯಿತು. ಶ್ರೀ ಪಟೇಲರು ಸಭೆಗೆ ಹೋಗಿ, ಇವರ ಸ್ವದೇಶಿ ಮತ್ತು ರಾಜಕೀಯ ಜಾಗ್ರತೆಯನ್ನು ಅಭಿನಂದಿಸಿ, ಕೋಟ್ಯಾಧೀಶರಾದಂಥ ಪಾರ್ಸಿಗಳು ಅಬ್ಕಾರಿ ಧೀಶರಾಗಲೆಂದು ಹಾರೈಸಿದರು. ಸಭೆಯು ಮುಗಿದ ಬಳಿಕ, ಇವರು ಮೆರವಣಿಗೆಯಿಂದ ದಾದಾಭಾಯಿಯವರ ಪ್ರತಿಮೆಯ ಸ್ಥಳಕ್ಕೆ ಹೋಗಿ, ಅಲ್ಲಿ ಸ್ವರಾಜ್ಯ ಪ್ರಾಪ್ತಿಯಾಗಲೆಂದು ಹರಕೆ ಹೊತ್ತು, ತಂತಮ್ಮ ಮನೆಗೆ ತೆರಳಿದರು.

ದೀಕ್ಷೆ ತಕ್ಕೊಂಡರು..

ನಾಮದಾರ ಬೋಪಯವರು ಸೈನಸಗಯಲ್ಲಿ ಸೇರಿದರು.

ಇಂಗ್ರೇಜಿ ಸರಕಾರದ [illegible] ಬ್ಬೆಳಿಕೆಯು ದಿನಾಲು ಹೆಚ್ಚುತ್ತಲಿರುವಂತೆ, ಸತ್ಯಾಗ್ರಹ [illegible] ಹೆಚ್ಚುತ್ತಲಿರುವದು. ಸರಕಾರದವರು [illegible] ನೀರುಹಾಕಿ, ಆರಿಸುವದರ ಬದ್ದಲ್ದರೆ ಹಾಕುತ್ತಿರುವದರಿಂದ, ಉರಿ [illegible] ವಾಗಿ ಉರಿಯುದ [illegible] ಮನ್ನ ರಿಪೋರ್ಟನ [illegible] ಬರ ಮತ್ತು ಆ ಬಳಿಸ ಬಗ್ಗೆ ಸರಕಾರ [illegible] ಹೀರ ಮಾಡುವಂಥ ಸಂಧಿ [illegible] ತಿಳಿಯಲದನ್ನು ಕೇವಲ [illegible] ದು ಉತ್ತೇಜ ರದಿಂದ ಹಿಡಿದರು. [illegible] ಆರು ತಿಂಗಳ ಶಿಕ್ಷೆ [illegible] ದು [illegible] ಬಗ್ಗೆ ಅಲ್ಲಾ [illegible] ಗಿದ್ದ, ಅದರ [illegible] ದ್ದುಂಟು [illegible] ತಕ್ಕೊಂಡು ಹೋಗಿದ್ದದ ನಿಷೇಧಿಯರಿಗೆ ಆರು ತಿಂಗಳ [illegible] ಉಚ್ಚ ಭಾಗಗಳ ಮೊದಲನೆಯ [illegible] ವರು ಸರಕಾರಿಯಂತೀಕರಿಗೆ ಆರು ತಿಂ [illegible] ಹೀರ ಮಾಡಿದ [illegible] ರಾದಂತೆ ಜಾಹೀರ [illegible] ಯಾ ಈಗ ಲಂಡನ್ನದ ವಕೀಲರು [illegible] ಂಥ ಲಕ್ಷ ವರ್ಷದಿದ್ದರಿಂದ ಪೋಲೀಸ ಹುರುಪು ಹುಟ್ಟಿ, [illegible] ದ ವರ್ಕಿಂಗ [illegible] ಬೇಡಿಕಾಂಡದ್ದರಿಂದ, ಅ [illegible] ರಿಂದ ತಿಳಿ [illegible] ತೆಗೆದು ಹಾಕಲ್ಪಟ್ಟಿತು.

ಹಿಂದಕ್ಕೊಮ್ಮೆ — [illegible] ಬಗ್ಗುದ್ದಿನ ಕಯ್ಯ ಯದೆಭಂಗ ಮಾಡಿ [illegible] ಪವಿಸಿದ್ದರು. ಆದ [illegible] ಯಲ್ಲಿ ಪಿಕಟಿಂಗ ಸಹಕಾರವು ಅನಿಸ್ಸ [illegible] ಶಿಕ್ಷೆಯಾಯಿತು. ಯು ಸಂಪೂರ್ಣವಾ [illegible] ಯಿಂದ ಕೂಡಿದ [illegible] ED ಇ [illegible] ಗುತ್ತದೆಂದ [illegible]) is wanted ರಸಲು ವರ್ಕಿಂಗ [illegible] Majid High ಇವರ ಕರುಪಾಯಾ [illegible] [illegible] with ಬೆಳಗಾವಿಯ ನ್ಯಾಯ [illegible] ವಕೀಲರೂ ಪಂಡಿತ [illegible] ghatgi, ರ ನಿಷೇಧವೆಂದು ಹೊ [illegible] ದಾಳಿತ್ವವನ್ನು ವಹಿಸಿ [illegible] ಹೊಸ ಜನರು ಕೆಂಭಕ್ತಿ [illegible] ರು ಸಹ ಚಳವಳಿಯಲ್ಲಿ [illegible] BANK LTD ವರು ಕಿಚ್ಚು ಒಡೆದಂತೆ ಹಾರಿ, ಹತ್ತರದ [illegible]

ದಿವಾನ ಹಾಕ್ [illegible] arwai

ಮುಂದೆ [illegible] chcrur

ದಿವಾನ ಚಾಷ [illegible]

ಗಬಾರದೆಂದು ಅವರ [illegible] on ಗ ಮಾಡಿದ ಅಸರಾ [illegible] ದು ಸಾಯೋಕಂಬವಲ್ಲೆ BANK ಪಾಲ್ಸಾ ಸಾವಿರ [illegible] ಣೆಯು ಯಾರೂ ANKALGI ಮೊ ಟೆಕ್ಕ [illegible] ging Director ರದ ಸದ್ದಿನಲ್ಲಿ [illegible]

ಮ. ವ್ಯಾಕಳೋ [illegible] ಸುಬಕ್ತಿ

ಹೆಸಿದ ಪಿಕೆಟಿಂಗ ನೋಡಲು ಅಲ್ಲಲ್ಲಿ ಹಳ್ಳಿಗಳ ಜನರು ಗುಂಪುಗುಂಪಾಗಿ ನಿಂತಿದ್ದರು. ಇವುಗಳಲ್ಲಿ ಈ ಮೆರವಣಿಗೆಯು ಬಂಗಾರಕ್ಕೆ ಪುಟ ಹಾಕಿದಂತಾಯಿತು. ಮೆರವಣಿಗೆಯು ಮತ್ತು ಸ್ತ್ರೀಯರ ಪಿಕೆಟಿಂಗವು ಹಳ್ಳಿಯ ಜನರ ಮೇಲೆ ಉತ್ಕೃಷ್ಟವಾದ ಪರಿಣಾಮವನ್ನುಂಟುಮಾಡಿತು. ವಿಲಾಯತಿಯ ಅರಿ

ರಾಣಿಪಲ್ಲಿ ಮೂರು ದಿವಸ ಸ್ತ್ರೀಯರು ಸತತವಾಗಿ ಪಿಕೆಟಿಂಗ ಮಾಡಿದ್ದರಿಂದ, ಅಲ್ಲಿಯ ಶಿಂದೀ ಸವಾಲೇ ಆಗಲಿಲ್ಲ. ಸ್ವಯಂಸೇವಿಕೆಯರಲ್ಲಿ ಪ್ರಸಿದ್ಧಳಾದ ಕಮಲಾಬಾಯಿ ಸೇಸೂವಿಯವರು ಒಂದು ಗಡಂಗದ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಇವಳಿಗೆ ನಾಲ್ಕು ತಿಂಗಳ ಸಾದಾ ಕೈದಿನ ಶಿಕ್ಷೆ ವಿಧಿಸಿದರು.

ಮುಂಬಯಿಯಲ್ಲಿ ಐವರು ಜನರ ತಲೆಯೊಡೆದರು.

ಇದಕ್ಕಾಗಿ ಪಟ್ಟಣದ ತುಂಬ ಹರತಾಳ.

ಶುಕ್ರವಾರ ದಿವಸ ಮುಂಬಯಿಯವರು ಗಢವಾಲಿ ದಿನದ ಮೆರವಣಿಗೆ ತೆಗೆದರು. ಮೆರವಣಿಗೆ ತೆಗೆಯಬಾರದೆಂದು ಪೋಲಿಸರು ಜಾಹೀರನಾಮೆ ಹಚ್ಚಿದರು. ಆದರೂ ಕಾಂಗ್ರೆಸದವರು ಮೆರವಣಿಗೆ ತೆಗೆದರು. ಎಸಪ್ಲೆನೆಡ ಬೈಲಿನಲ್ಲಿ ಬಹುಸಂಖ್ಯೆಯಿಂದ ಸೇರಿದರು. ಆಗ ಪೋಲಿಸರು ನಡೆಸಿದ ಲಾಠೀ ಪ್ರಯೋಗದಿಂದ ಐವರು ಜನರು ಘಾಯವಾಗಿದ್ದಾರೆ

ಗವ್ಹರ್ನರಸಾಹೇಬರು ಕಣ್ಣೀರು ಹಾಕಿದರು.

ನಾನು ಗವ್ಹರ್ನರನಾಗಿ ಇಂದು ಐದು ವರ್ಷವಾಗುತ್ತಾ ಬಂತು. ಈಗ ನಡೆದಿರುವ ಹೊಡೆಬಡೆ ನೋಡಿ, ಬಹಳ ದುಃಖವಾಗಿರುತ್ತದೆಂದು ಸಾಹೇಬರು ಕಣ್ಣೀರು ಹಾಕಿದ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ ಈ ಅನರ್ಥಕ್ಕೆ ಕಾರಣರಾರೆಂದು ಸಾಹೇಬರು ಹೇಳುವರೇ ?

ಮ್ಯಾಜಿಸ್ಟ್ರೇಟರಿಗೆ ಕಮಲಾಬಾಯಿಯ ಉಪದೇಶ

ಘಾಟಕೋಪರದಲ್ಲಿ ಗಡಂಗದ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ಶಿಕ್ಷೆ ಹೊಂದಿದ ಶ್ರೀ. ಕಮಲಾಬಾಯಿಯು- ಮ್ಯಾಜಿಸ್ಟ್ರೇಟರೇ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕಾಂಗ್ರೆಸದ ಚಳವಳಿಯಲ್ಲಿ ಸೇರಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಶ್ರೀ. ಶಿವಾಜಿಯ ವಂಶಸ್ಥರೆಂಬುದನ್ನು ಸಿದ್ಧ ಮಾಡಿ ತೋರಿಸಿರೆಂದು ಉಪದೇಶ ಮಾಡಿದಳು.

ಧಾರವಾಡದ ಚಹಾದ ಅಂಗಡಿಯವರ ಸಭೆ

ಗೊತ್ತಾದ ನಿರ್ಣಯಗಳು.

ಬುಧವಾರ ತಾ|| ೯-೭-೩೦ನೇ ದಿನ ರಾತ್ರಿ ೮ ಘಂಟೆಗೆ ಸರಿಯಾಗಿ ಧಾರವಾಡ ಪ್ರಮುಖ ಚಹಾದ ಅಂಗಡಿಯವರ ಸಭೆಯು ಶ್ರೀ ಗುತ್ತಲ ಗೋವಿಂದಾಚಾರ್ಯರ (ವಕೀಲ) ಅಧ್ಯಕ್ಷತೆಯಲ್ಲಿ ಕಾಂಗ್ರೆಸ ಕಾರ್ಯಾಲಯದಲ್ಲಿ ಸೇರಿತ್ತು. ಸಭೆಗೆ ಬಂದವರ ಹೆಸರುಗಳು - ೧ ವಾಮನ ಅಪ್ಪಯ್ಯಾ ಕಾಮತ ೨ ರಾಮಚಂದ್ರ ನಾರಾಯಣ ಕಂಟೋಟಿ ೩ ವಿಠ್ಠಲ ಬಾಬು ಪೈ ೪ ಅಯ್ಯಪ್ಪ ವೆಂಕಟೇಶ ೫ ಕೆ, ಶ್ರೀನಿವಾಸಾಚಾರ್ಯ ೬ ಕೆ ರಾಮಕೃಷ್ಣಾಚಾರ್ಯ ೭ ವೆಂಕಟರಮಣಾಚಾರ್ಯ ೮ ಉಡುಪಿ ಕೆ ಶ್ರೀನಿವಾಸಾಚಾರ್ಯ ೯ ಹಯಗ್ರೀವಾಚಾರ್ಯ ಉಡುಪಿ ೧೦ ಗುಂಡಾಚಾರ್ಯ.

೧ ಲಿಪ್ಟನ, ಬ್ರುಕಬ್ಯಾಂಡ ಮತ್ತು ಕಂಗೋ ಈ ಮೂರು ಕಂಪನಿಗಳ ಚಹಾವನ್ನು ಬರುವ ಆಗಷ್ಟ ೧೦ನೇ ತಾರೀಖಿನ ನಂತರ ಯಾರೂ ಉಪಯೋಗಿಸತಕ್ಕದ್ದಲ್ಲ. ೧೦ನೇ ಆಗಷ್ಟರೊಳಗಾಗಿ ಕಾಂಗ್ರೆಸ ಕಮೀಟಿಯವರು ದೇಶೀ ಚಹಾ ಕಂಪನಿಗಳನ್ನು ತಪಾಸ ಮಾಡಿ ಅವುಗಳ ಪತ್ತೆ ಹಚ್ಚಿ ಕೊಡಬೇಕು.

೨ ಇಂದಿನಿಂದ ಬ್ರಿಟಿಶ ಚಹಾವನ್ನು ಸಕ್ಕರಿಯನ್ನು ಯಾರೂ ಉಪಯೋಗಿಸತಕ್ಕದ್ದಲ್ಲ.

೩ ಇನ್ನು ಮೇಲೆ ಚಹಾದ ಅಂಗಡಿಯವರು ಸಿಗರೇಟಿನ ವ್ಯಾಪಾರ ಮಾಡಬಾರದು. ಶ್ರೀ ಆರ್ ಎಸ್, ಕಂಟೋಟಿಯವರು ದೇಶೀ ಸಿಗರೇಟ ಇಡಬೇಕೆಂದು ತಮ್ಮ ಮತವನ್ನು ಕೊಟ್ಟರು.

೪ ಹಿಟ್ಟಿನ ರವೆ ಮುಂತಾದ್ದು ಸ್ವದೇಶೀ ಇದ್ದವರಿಂದ ಆ ವಿಷಯದಲ್ಲಿ ವಿಚಾರವಾಗಲಿಲ್ಲ.

ಮೇಲಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

ಎಲ್ಲ ಚಹಾದ ಅಂಗಡಿಯವರೂ ನಂಬಿಗೆಯಿಂದ ಮೇಲಿನ ಠರಾವುಗಳಂತೆ ವರ್ತಿಸಬೇಕೆಂಬ ವಿನಂತಿ ಇದೆ.

ಧಾರವಾಡ ಗೋ ಗು ಗುತ್ತಲ.
೯-೭-೩೦ ಅಧ್ಯಕ್ಷರು

ಇಜಿಪ್ತದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಗೋಳಿಬಾರು

ಆರು ಜನರು ಸತ್ತರು, ೫೦ ಜನರು ಘಾಯವಾದರು.

ಇಜಿಪ್ತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರಕಿಸಲೋಸುಗ ಇಂಗ್ಲಂಡಕ್ಕೆ ಹೋಗಿ, ನಿರಾಶೆಯಿಂದ ಕೃಷ್ಣ ಮುಖ ಮಾಡಿಕೊಂಡು ಬಂದಂಥ ನಾಹಶ ಪಾಶಾನವರು ಮಂತ್ರಿ ಪದಕ್ಕೆ ರಾಜೀನಾಮೆ ಕೊಟ್ಟರು. ರಾಜೀನಾಮೆ ಕೊಟ್ಟು ಸ್ವತಂತ್ರರಾದ್ದರಿಂದ, ಸ್ವಾತಂತ್ರ್ಯದ ದಸೆಯಿಂದ ದೇಶದ ತುಂಬ ಚಳವಳಿಯನ್ನೆಬ್ಬಿಸಿದ್ದಾರೆ. ಮನಸೋಹರಾವೆಂಬಲ್ಲೊಂದು ಜಾಹೀರ ಸಭೆ ಕೂಡಿಸುವ ಸಿದ್ಧತೆ ಮಾಡಿದರು. ಆದರೆ ಪೋಲೀಸ ಮತ್ತು ದಂಡಿನವರು ಸೇರಿ ಸರಕಾರದ ಹುಕುಮಿನ ಪ್ರಕಾರ ಅದನ್ನು ಪ್ರತಿಬಂಧಿಸುವಂಥವರಾದರು. ಆದರೂ ನಾಹಾಶ ಪಾಶಾನು ಕಾಯದೆಭಂಗ ಮಾಡಲು ಮೋಟಾರಿನಲ್ಲಿ ಅನೇಕ ಜನ ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ಹೋಗಿ, ಮೊದಲಿದ್ದ ಪೋಲಿಸರ ಬಳ್ಳೀಮುರಿದು ಹೋದರು. ಹಿಂದಿದ್ದ ದಂಡಿನವರು ಕತ್ತಿ ಮತ್ತು ಬೆಯೋನೆಟ್ಟುಗಳ ಬಲದಿಂದ ಇವರನ್ನು ಮುಂದೆ ಬಿಡಗೊಡಲಿಲ್ಲ. ಆಗ ದೊಡ್ಡ ದಂಗೆಗೇ ಕಾರಣವಾಗಿ, ಪೋಲಿಸರು ಗುಂಡು ಹಾಕಿದರು. ಗುಂಡಿನ ಪ್ರಸಾದದಿಂದ ಪ್ರಜಾಪಕ್ಷದ ಮೂವರೂ, ಸರಕಾರ ಪಕ್ಷದ ಮೂವರೂ ಸತ್ತರು. ಎರಡೂ ಪಕ್ಷ ಸೇರಿ ೫೦ ಜನರು ಘಾಯವಾಗಿದ್ದಾರೆ.

ಕರ್ನಾಟಕ ಕಾಲೇಜದ ಮುಂದೆ ಪಿಕೆಟಿಂಗ.

ಇಲ್ಲಿಯ ಕರ್ನಾಟಕ ಕಾಲೇಜದ ಮುಂದೆ ಪಿಕೆಟಿಂಗ ಮಾಡುವರೆಂದು ವರ್ತಮಾನವಾಗಿದೆ. ಕಾಲೇಜದ ವಿದ್ಯಾರ್ಥಿಗಳು ಪಿಕೆಟಿಂಗ ಮಾಡಿದರೆ ಅವರನ್ನು ಕಾಲೇಜದಿಂದ ಹೊರಗೆ ಹಾಕುವೆವೆಂದು ಪ್ರಿನ್ಸಿಪಾಲರು ನೋಟೀಸು ಹಚ್ಚಿರುತ್ತಾರೆ

ದಿ ಧಾರವಾಡ ಅರ್ಬನ ಕೋ
ಆಪರೇಟಿವ್ಹ ಬ್ಯಾಂಕ ಲಿಮಿಟೆಡ
ಮಂಗಳವಾರ ಪೇಟೆ ಧಾರವಾಡ.
ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಎಂಟು ಲಕ್ಷದ ಮೇಲುಂಟು ಚೆಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮುತ್ತುರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಸೇಫ ಇಟ್ಟುಕೊಳ್ಳುವ ಬಡಿಗೆಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ [illegible]

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಇದುವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳುವದಿದ್ದರಿಂದ ಬಯಸುವವರ ನಿರಾಶೆಯಾಗಬಾರದೆಂದು ಮುಂದಾಗಿಯೇ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ಪ್ರೈ. ಎಸ್. ಇಟಗಿ.
ಮುನಸಫಕೋರ್ಟ ಹತ್ತಿರ, ಧಾರವಾಡ

ಜಾಹೀರ ನೋಟೀಸು
ಇಮಾರತಿ ಕಟ್ಟಿಗೆಗಳ ವಖಾರ
ಯಾವತ್ತು ಜನರಿಗೆ ತಿಳಿಸುವದೇನಂದರೆ.

ನಮ್ಮ ಕಟಗಿ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಮತ್ತಿ ಕರಿಸಂ ನಾಟುಗಳು

ಸಾಗವಾನಿ ಯಲ್ಲಿ ಸಾಗವಾನಿ (L) ತೊಟಿನ ಪವಳ್ಕ ತುಂಡುಗಳು

ಸಾಗವಾನಿ ಕೊರೆದ ಹಲಿಗೆಗಳು ವ ಜಂತಿ ವ ರೀಪು ವ ಶಿಲಿಂಗು ತಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತು ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಬೇಕಾದವರಿಗೆ ತಯಾರ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

ನೋಟೀಸು

—(೦)—

ಮ|| ರಾ|| ರಾ|| ಹಿರೇನಾಯಕ ಕಾಯಿ ಗಂಗವ್ವಾ ತಳವಾರ ಸಾ|| ಮೈಲಾರ ತಾಲ್ಲೂಕ ಹುವಿನಹಡಗಲೀ ಜಿಲ್ಹಾ ಬಳ್ಳಾರಿ ಇವರಿಗೆ-

ಕೆಳಗೆ ಸಹಿ ಮಾಡುವಳು ನೋಟೀಸಿನ ದ್ವಾರದಿಂದ ತಿಳಿಸುವದೇನಂದರೆ- ನೀನು ನನ್ನ ಮೊದಲಿ ಗಂಡನಿದ್ದು ಲಗ್ನವಾಗಿ ಐದು ವರ್ಷ ಆಯಿತ್ತು ಮದುವೆಯಾದ ಆರು ತಿಂಗಳಲ್ಲಿ ನನ್ನ ತಾಯಿಯು ಬಾಳ್ವೆ ಮಾಡಲಿಕ್ಕೆ ಕಳಿಸಿಕೊಟ್ಟಳು ನಾನು ನಿನ್ನ ಮನೆಯಲ್ಲಿ ಪ್ರಪಂಚದ ಸಮಿಲ್ಲದೆ ಅಗದಿ ಕಷ್ಟದಿಂದಲೇ ಅಜಮಾಸು ಎರಡು ವರ್ಷ ಬಾಳ್ವೆ ಮಾಡಿದೆ ಆದರೂ ನೀನು ಬಾಳ್ವೆಯ ಪಕ್ಷ್ಯವಿಲ್ಲದೆ ದುರ್ವ್ಯಸನಕ್ಕೆ ಬಿದ್ದು ನನ್ನ ವ ಮನೆತನದ ಎಚ್ಚರವಿಲ್ಲದೆ ದೇಶಾವರಿ ತಿರಿಗಿಕೋತ ಇಸ್ಪೇಟು ವೈರೆ ಕೆಟ್ಟ ಕೃತ್ಯದಿಂದಲೇ ನಡಿಯಲಿಕ್ಕೆ ಹತ್ತಿ ಮನೆಯ ಸ್ಥಾವರ ಜಂಗಮ ಆಸ್ತಿಯನ್ನೆಲ್ಲಾ ಕಳೆಗು ಆ ವೇಳೆ ನನ್ನ ತವರಮನಿಯವರು ಕೊಟ್ಟ ದಾಗೀನಗಳು ಅಜಮಾಸು ಎರಡನೂರು (೨೦೦) ರೂಪಾಯಿ ಕಿಮ್ಮತ್ತಿಗಳುಳ್ಳ ದಾಗೀನಗಳನ್ನು ನನ್ನ ಮೈಮೇಲೆ ಇರುತ್ತಿರಲಿಕ್ಕೆ ನೀನು ಜೋರಿನಿಂದಾ ನನ್ನನ್ನು ಹೊಡೆದು ಬಡೆದು ಮರ್ಯಾದಯಿಲ್ಲದಂತೆ ಮಾಡಿ ನನ್ನ ಮೈಮೇಲಿನ ದಾಗೀನಗಳನ್ನು ಕಸಿದುಕೊಂಡು ನನ್ನ ಮೈದುನನ ಸಂಗಡ ಹೋಗಿ ದೂಡಿ ಕಳಿಸಿಕೊಟ್ಟಿ ಆ ಮಾತಿಗೆ ಅಜಮಾಸು ೧೮-೨೦ ತಿಂಗಳಾದವು ಆಗಿನ ಲಾಗಾಯಿತ ನಾನು ನಿನಗೆ ಪುಷ್ಕಳ ಸಾರೆ ಕರೆದುಕೊಂಡು ಹೋಗಲಿಕ್ಕೆ ಹೇಳಿ ಕಳಿಸಿದೆ ನೀನು ಎಂದು ನನ್ನನ್ನು ಕರೆದುಕೊಂಡು ಹೋಗಲಿಲ್ಲಾ ನಿನ್ನ ಕೆಟ್ಟ ಗುಣದಿಂದಲೇ ವರ್ತಿಸಲಿಕ್ಕೆ ಹತ್ತಿರುತ್ತೀ ಆದ್ದರಿಂದಾ ನಾನು ಇಲ್ಲಿಯವರೆಗೆ ನನ್ನ ಹೊಟ್ಟೆ ಬಟ್ಟೆಯ ದೆಶೆಯಿಂದಾ ಎರಡುನೂರು (೨೦೦) ರೂಪಾಯಿಗಳನ್ನು ಸಾಲಾ ಮಾಡಿಕೊಂಡಿರುತ್ತೇನೆ ನಿನಗೆ ಈ ನೋಟೀಸು ತಲ್ಪಿದ ಎಂಟು ದಿವಸದಲ್ಲಿ ಸದರೀ ನಾನು ಮಾಡಿದ ಸಾಲಾ ವ ದಾಗೀನಗಳ ರೂಪಾಯಿ ಅಂತು ನಾಲ್ಕುನೂರು (೪೦೦) ರೂಪಾಯಿಗಳನ್ನು ತೆಗೆದುಕೊಂಡು ಒಂದು ನನ್ನ ಸಾಲ್ವಾ ತೀರಿಸಿ ನನ್ನ ಕರೆದುಕೊಂಡು ಹೋಗಿ ಚಲೋ ರೀತಿಯಿಂದಾ ಬಾಳ್ವೆ ಮಾಡಿಕೋತ ಹೋಗಬೇಕು ಇದಕ್ಕೆ ನೀನು ತಪ್ಪಿದಲ್ಲಿ ನನ್ನ ಮರ್ಜಿ ಪ್ರಕಾರ ನನ್ನ ಉಪಜೀವನ ಸಾಗಲಿಕ್ಕೆ ವೃದ್ಧಿ ಗಂಡನನ್ನು ಮಾಡಿಕೊಳ್ಳುತ್ತೇನೆ ವೃದ್ಧಿ ಆದ ನಂತರ ನನ್ನ ಮೇಲೂ ಪುತ್ರ ಗಂಡನ ಮೇಲೂ ನಿನ್ನ ಯಾವ ತರದ್ದು ಹಕ್ಕು ನಡಿಯಲಾರದು ಸದರ ನೋಟೀಸಿಗೆ ತಪ್ಪಿದಲ್ಲಿ ಇದೇ ಸೋಡಚೀಟಿ ಅಂತಾ ತಿಳಿಯಬೇಕಾದ್ದು ಅಂತಾ ಕೊಟ್ಟ ನೋಟೀಸು ಸಹಿ-

ತಾರೀಖು ೧೪-೭-೧೯೩೦ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಪಕ್ಕೀರವ್ವಾ ಕೋಂ ಹಿರೇನಾಯಕ ತಳವಾರ ಸಾ|| ಮೈಲಾರ ಹಾಲಿವಸ್ತಿ ಬೆಳವಿಗಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂಜೀವಿ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಬಿಳಿಯ ಸೆರಗು [illegible] ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯ [illegible] ಈ ಔಷದದಿಂದ [illegible] ಮೂರೇ ದಿವಸಗಳಲ್ಲಿ ಸಂಪೂರ್ಣ ಗುಣ [illegible] ಇದಲ್ಲದೆ [illegible] ಪ್ರತ್ಯಕ್ಷ ಪ್ರಮಾಣ [illegible] ರೂಪಾಯಿ, [illegible] ಗಳನ್ನು [illegible] ಗಳ, ಪ್ರೋಷ್ಟ ಖರ್ಚಿನ ರೂಪದಿಂದಾ [illegible] ಕಳಿಸಲ್ಪಡುವದು.

ವಿಳಾಸ—ಪ್ರೋ. [illegible] ದೀಕ್ಷಿತ
C/o [illegible] ಧಾರವಾಡ

[illegible] ಔಷದ [illegible] ಜಾಹೀರಾತು [illegible] ಈ [illegible] ಮಾಡಿದವರು [illegible]

ಜಾಹೀರ ನೋಟೀಸು

—(೧)—

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗ ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಯೊಸ್ಸಿ ಹೆದ್ದಿ ವ ತಿಸಂ ನಾಟುಗಳು

ಸಾಗವಾನಿ ಯಾ ವ ಸಾಗವಾನಿ (೬) ಸ್ಕೂಟಿನ ಚಮಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಿಗಿಗಳು ವ ಜಂತಿ ವ ರೀಪು ವ ಕಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರದ ಕೊಡುತ್ತೇವೆ

ಮತ್ತು ಚಿಲ್ಲರ ಫೆರನೀಚರ ಕೆಲಸ ಮಾಡುವವರಿಗೆ ತಯಾರಿ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಕಾಕಶೆಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ

ಧಾರವಾಡದಲ್ಲಿ
ಮೋಟಾರ ನಡೆಸುವದನ್ನು
ಕಲಿಯುವ ಸುಸಂಧಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸಂಸ್ಥೆ

ಮೋಟಾರ ಡ್ರೈವಿಂಗ ವಿದ್ಯೆ, ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ ನೂರಕ್ಕೆ ನೂರು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಪ್ರಾಯಕ್ಟಿಕಲ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ಧಾರವಾಡದಲ್ಲಿ ತೆರೆದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಸ್ವತಃ [illegible] ಮಿತ ಜನರನ್ನು ತಕ್ಕೊಳ್ಳುವದಾದ್ದರಿಂದ ಕಲಿಯುವವರ [illegible] ಮುಂದಾಗಿ ಈ [illegible] ಜಾಗ್ರತ ದೊರಕಿಸಿಕೊಳ್ಳುವದಕ್ಕಾಗಿ [illegible] ಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬಹುದು.

ಪ್ರೊ. ಸ್ವಿ. ಎಸ್. ಇವಗಿ.
[illegible], ಧಾರವಾಡ

ಈ ಪತ್ರವನ್ನು [illegible] ಯ ಮೂಲಕ ಧಾರವಾಡದಲ್ಲಿ ತಮ್ಮ ಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಿಪಡಿಸಿದರು.

ನಿತ್ಯ ಪತ್ರ

ವಿಜಯ

ಸಂಪಾದಕರು:- [illegible]

ವರ್ಷ ೧೧ : ಧಾರವಾಡ ಬುಧವಾರ ತಾರೀಖು ೧೬ ನೇ ಜುಲೈ, ೧೯೩೦ (ಸಂಖ್ಯೆ [illegible]

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್

(ಇಂಗ್ಲಂಡದಲ್ಲಿ ಇನ್‌ಕಾರ್ಪೋರೇಟೆಡ್ ಮಾಡಿದ್ದು)

ನೋಟೀಸು

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿಯ ಏಜೆಂಟರವರು ೧೯೩೦ನೇ ಇಸವಿ ಆಗಸ್ಟ ತಿಂಗಳ ೧೨ನೇ ತಾರೀಖಿನ ಮಧ್ಯಾಹ್ನದ ಮೂರು ಗಂಟೆಯ ತನಕ ಮದ್ರಾಸ ಪೆರಂಬೂರಿನಲ್ಲಿ ಸದರ್ನ ರೇಲ್ವೆಯ ಹಳೆಯ ಬೇಕಿಲ್ಲದ ಸಾಮಾನುಗಳು ಅಂದರೆ- ಬೇರೆ ಬೇರೆ ಧಾತುಗಳ ತುಂಡುಗಳು, [illegible] ಮತ್ತು [illegible] ಉಪಯೋಗವಾಗದಂಥ ಹಳೆ ಕಬ್ಬಿಣದ ಸಾಮಾನುಗಳು, [illegible] ತಂತಿಗಳು, ಯಂತ್ರ ಸಾಮಗ್ರಿಗಳು, ಗಡಿಯಾರ ಮತ್ತು [illegible] ಸಾಮಾನುಗಳು [illegible] ಕಬ್ಬಿಣದ ಸ್ಲೀಪರಗಳು, ಹಳೇ ರೇಲುಗಳು, ಸಾಮಾನು [illegible] ಕಲ್ಲು ಒಡೆಯುವ ಒಂದು [illegible] ಯಂತ್ರವು ಇವೇ ಮೊದಲಾದವುಗಳ [illegible] ಟೆಂಡರ ತರಿಸುವರು.

ಮಾರಾಟಕ್ಕೆ ಸಿದ್ಧವಾಗಿರುವ ಸಾಮಾನುಗಳ ಯಾದಿ ಸಹಿತವಾಗಿ ಟೆಂಡರ ಫಾರ್ಮ ಒಂದು ರೂಪಾಯಿ ಕೊಟ್ಟು, ಎಮ್. ಎಸ್. ಎಮ್. ರೇಲ್ವೆಯ ಪೆರಂಬೂರದಲ್ಲಿಯ ಕಂಟ್ರೋಲರ ಆಫ ಸ್ಟೋರ್ಸ ಇವರಿಂದ ಪಡೆಯಬಹುದು. ಇದರ ರಕಮು ತಿರುಗಿ ಸಿಗಲಾರದು.

ಟೆಂಡರ ಫಾರ್ಮುಗಳು ವ್ಹ್ಯಾಲ್ಯು ಪೇಯಬಲದಿಂದ ದೊರೆಯಲಾರವು.

ಟೆಂಡರ ಫಾರ್ಮಿನ ಮೇಲೆ "ಸ್ಕ್ರ್ಯಾಪ ಮಟೀರಿಯಲದ [illegible] ಟೆಂಡರ ಎಂದು [illegible] ಬರೆದು ಕಳಿಸತಕ್ಕದ್ದು, ಇದರ [illegible] ಟೆಂಡರ ಫಾರ್ಮಿನ [illegible] ಸ್ಪಷ್ಟಪಡಿಸುವದು.

A. C. TURNER.
Contr l'ler of Stores.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೇಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಂಪೂರ್ಣ ಶಿಕ್ಷಣ ಕೊಡುತ್ತೇವೆ. [illegible] ಕಟಿಂಗ [illegible] ಎರಡು ೨ ತಿಂಗಳ ಮತ್ತು ಟೇಲರಿಂಗ [illegible] ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಫೀ [illegible] ರೂಪಾಯಿ ಮತ್ತು ಟೇಲರಿಂಗ ಫೀ [illegible] ರೂಪಾಯಿ) ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ [illegible] ಮಾಡಿಕೊಳ್ಳಬಹುದು. ವಿಸ್ತಾರ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ [illegible] ಸ್ಟ್ಯಾಂಪ ಟಿಕೇಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಸರ್ಟಿಫಿಕೇಟೆಡ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ದಿ ಧಾರವಾಡ ಅರ್ಬನ ಕೋ- ಆಪರೇಟಿವ್ ಬ್ಯಾಂಕ ಲಿಮಿಟಿಡ

ಮಂಗಳವಾರ ಪೇಟೆ ಧಾರವಾಡ.

ಕೋ- ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಹುಂಡಿ ಮಾಡುವಾಗ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳ್ಳುವ [illegible] ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೦-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಮ್ಯಾ. ವಿಜಯ, ಧಾರವಾಡ

ಸಯು.

ವಿಕ್ರಮ ಶಕೆ ೧೮೫೨ ಆಷಾಢ ವದ್ಯ ೬

ಕಾಂಗ್ರೆಸ ಸಭೆಯು
ಮುಂದಿನ ಚಳ್ವಳಿಯ, ಹಾದಿಯು.

—(೦)—

ಲಾರ್ಡ ಆಯರ್ವಿನಸಾಹೇಬರು ರಾವುಂಡ ಟೇಬಲಿನಲ್ಲಿ ನಡೆಯುವ ವಾದವಿವಾದವು, ಅದರಿಂದ ನಿಷ್ಪನ್ನವಾಗುವ ಸಂಗತಿಗಳು, ಹಿಂದುಸ್ಥಾನದ ಭವಿತವ್ಯವನ್ನು ಹೇಳುವವೆಂದು ಸಿಮ್ಲಾದಲ್ಲಿ ಮಾಡಿದ ಭಾಷಣವು ಅದಕ್ಕೆ ಪಾರ್ಲಮೆಂಟ ಸಭೆಯಲ್ಲಿ ಮಿ. ಬೆನ್ ವೆಜ್ವುಡ್‍ಸಾಹೇಬರು ದನಿಗೂಡಿಸಿದ್ದು, ಕಾಂಗ್ರೆಸದವರ ಮೇಲೆ ಅವರ ದೃಷ್ಟಿಯಿಂದ ಇಷ್ಟು ಪರಿಣಾಮವನ್ನುಂಟುಮಾಡಲಿಲ್ಲ. ಕಾಂಗ್ರೆಸದವರಿಗೆ ಈ ಭಾಷಣದಲ್ಲಿ ತಥ್ಯವಿರುವದೆಂದು ಕಂಡು ಬಂದಿದ್ದರೆ ಮುಖಂಡರಲ್ಲಿ ಒಬ್ಬರಾದರೂ ಲಾರ್ಡ ಸಾಹೇಬರ ಅಭಿನಂದನ ಮಾಡಿ, ಅವರ ಬೆನ್ನು ಚಪ್ಪರಿಸುತ್ತಿದ್ದರು. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಒಬ್ಬರಿಗಾದರೂ ಈ ಭಾಷಣದಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯವು ಪ್ರಾಪ್ತವಾಗುವದೆಂದೆನಿಸಿಲ್ಲ. ಪಂಡಿತ ಮಾಲವೀಯರಂಥ ಶಾಂತ ಸ್ವಭಾವದವರು ಕಾಂಗ್ರೆಸದ ಸ್ತುತಿಮಾಡಿದ್ದಾರಲ್ಲದೆ, ಲಾರ್ಡ ಆಯರ್ವಿನಸಾಹೇಬರ ಸ್ತುತಿಮಾಡಿರುವದಿಲ್ಲ.

ಕಾಂಗ್ರೆಸದವರ ಚಳವಳಿಯು ಅಖಂಡವಾಗಿ ನಡೆದಿದೆ. ಸಾಹೇಬರ ಜಾಹೀರನಾಮೆ ಹೊರಟ ನಂತರ ಮುಂಬಯಿಯಲ್ಲಿ ಐವತ್ತು ಜನರು ತಲೆಯೊಡೆದುಕೊಂಡರು; ಕೈಕಾಲು ಮುರಿದುಕೊಂಡರು; ಅರವತ್ತು ಜನ ಬಿದ್ದರು. ಪೇಶಾವರದಲ್ಲಿ ನಡೆದಂಥ ಹತ್ಯಾಕಾಂಡವು ಲಖನೌ ದ್ವಾರದಲ್ಲಿ ನಡೆಯುವಂತೆ ಗೋಚರಿಸಿತು. ಕಲಕತ್ತೆಯಲ್ಲಿ ಹೆಣ್ಣುಮಕ್ಕಳೇ ಪಿಕೆಟಿಂಗ ಮಾಡಿ, ಸ್ತ್ರೀಯರ ಪ್ರತಿಷ್ಠೆಗೆ ಒಪ್ಪುವ ಕಾರ್ಯದಂತೆ ಮಾಡಿದರು. ಇದರ ಸ್ಥಿತಿಯು ಎಲ್ಲ ಕಾಂಗ್ರೆಸ ಕಾರ್ಯಕರ್ತರಿಗೆ ಒಪ್ಪುವಂತೆ ಲಕ್ಷ್ಮಣರಾಗಿದ್ದು ಧಾರವಾಡದ ಕರ್ನಾಟಕ ಕಾಲೇಜು, ಈ ಸಂಕಟದ ತೀವ್ರತೆಯಿಂದ ನರಳುತ್ತಿರುವದು.

ರಾವುಂಡಟೇಬಲಿಗಿಂತ [illegible] ವಿದೇಶೀ ಬಹಿಷ್ಕಾರ, ಶರಾಬಿಯ ಅಂಗಡಿಗಳ ಪಿಕೆಟಿಂಗ, [illegible]ದ ಜನರನ್ನು ಕಾನೂನುಭಂಗವನ್ನು ಬಿಡಿಸಿ, ಉಪ್ಪಿನ [illegible]ದಲ್ಲಿ ಸ್ವಾತಂತ್ರ್ಯವನ್ನುಂಟು ಮಾಡುವದು ಕೂಡ, ಸಂಕ್ರಾಂತಿ ಬಡತನದಲ್ಲಿ [illegible] ಧರ್ಮವರ್ಧನ, ಮುಂದೆ ರೈತರು ಕಷ್ಟದಿಂದ [illegible] ಜಗತ್ತಿನಲ್ಲಿ ಆಗಾಧವಾದ ಅಧ್ಯಕ್ಷರೆನಿಸುವ [illegible] ಮಾಡುತ್ತಲಿದ್ದಾರೆ. ಇಂಗ್ಲಂಡದ ಅಧಿಕಾರಿಗಳ ಭಾವನೆಯಿಂದಲೇ ಸರಕಾರವು ಸ್ವರಾಜ್ಯ ಕೊಡದವರಲ್ಲದೆ, ರಾವುಂಡಟೇಬಲಿನಲ್ಲಿ ವಾಕ್ಸ್ವಾತಂತ್ರ್ಯ ಪ್ರದರ್ಶನ ಮಾಡುವದರಿಂದ ಕ್ಷೇಮವಾದೆಂದು ಕಾಂಗ್ರೆಸದ ಬಹಿಷ್ಕಾರದ ಮತವಾಗಿರುತ್ತದೆ

ಲಾರ್ಡ ಆಯರ್ವಿನಸಾಹೇಬರು ಘಟಿಸಿದಂತೆ ಮಾಡಿದ ಭಾಷಣವು ಬರೇ ನಾಟಕವೆಂದು ಕಾಂಗ್ರೆಸದವರು ಹೇಳಿದ್ದರೂ, ಮವಾಳರು ಇದೊಂದು ಆಶಾಕಿರಣವೆಂದು ತಿಳಿಕೊಂಡಿದ್ದಾರೆ. ಮ್ಯಾಲ [illegible] ವೃತ್ತಪತ್ರದಲ್ಲಿರುವರು ವ್ಯಕ್ತಿಸ್ವಾತಂತ್ರ್ಯದ [illegible], ಇಷ್ಟಾದರೂ, [illegible] ಬಂದ ಸಾಮರ್ಥ್ಯವನ್ನು ತೋರಿಸುವದು ಸಾಕು. ರಾವುಂಡಟೇಬಲಿನಲ್ಲಿ ನಿಮ್ಮ ಹಣೆಬರಹವನ್ನು ಗೊತ್ತು ಮಾಡಿಕೊಳ್ಳಿರೆಂದು ಹೇಳಿದ್ದಾರೆ. ಕಾಂಗ್ರೆಸದವರು ಒಂದು ವೇಳೆ ರಾವುಂಡಟೇಬಲಕ್ಕೆ ಹೋಗಬಹುದು. ಬ್ಯಾರಿಸ್ಟರ ಜಯಕರ ಮೊದಲಾದವರು ಈ ಬಗ್ಗೆ ಲಾರ್ಡ ಆಯರ್ವಿನಸಾಹೇಬರಲ್ಲಿ ಯಾಚನೆಯನ್ನು ಮಾಡುತ್ತಿದ್ದಾರೆ. ಆದರೆ ಅದರಿಂದ ಪ್ರಯೋಜನವಾದೀತೆಂದು ನಮಗೆ ಅನಿಸುವದಿಲ್ಲ.

ಕಾಂಗ್ರೆಸದವರು ಮೊದಲು ಸತ್ಯಾಗ್ರಹ ಕಾರ್ಯದ ಭಾಗವನ್ನು ನಿಲ್ಲಿಸಬೇಕು. ಅಂದರೆ ರಾಜಕೀಯ ಕೈದಿಗಳಿಗೆ ಬಿಡುಗಡೆ ಕೊಟ್ಟು, ಅವರ ಮುಖಂಡರಾದ ಮಹಾತ್ಮಾಜಿಯೂ ಪಂಡಿತ ಮೋತಿಲಾಲಜಿಯವರಿಗೆ ಆಮಂತ್ರಣ ಕೊಡುವೆವೆಂದು ಅನ್ನುತ್ತಾರೆ. ಇದಕ್ಕೆ ಕಾಂಗ್ರೆಸದವರು ಸರ್ವಾತ್ಮನಾ ಒಪ್ಪುವದಿಲ್ಲ. ಕಾಂಗ್ರೆಸದವರು ಚಳವಳಿ ನಿಲ್ಲಿಸಿದರೆ ಸೋಲು ಒಪ್ಪಿದಂತಾಗುತ್ತದೆ. ರಾಜಿಯಾಗಬೇಕಾದರೆ ಎರಡೂ ಪಕ್ಷಗಳೂ ಸರಿಸಮಾನದ ರೀತಿಯಿಂದ ನಡೆಯತಕ್ಕದ್ದುಂಟು. ವಸಾಹತಿನ ಸ್ವರಾಜ್ಯದ ಕೆಲವು ಬಗೆಗಾದರೂ ಸ್ವಾತಂತ್ರ್ಯ ದೊರೆಯುತ್ತದೆಂದು ನಮಗೆ ತಿಳಿಯುವ ಹಾಗೆ ಹೇಳಿರಿ ಅಂದರೆ ನಾವು ಚಳವಳಿ ನಿಲ್ಲಿಸುವೆವು; ನಿಮ್ಮ ಶಬ್ದದ ಮೇಲಾದರೂ ಹಗಲು ರಾತ್ರಿ ಯಾತನೆ [illegible] ತಪ್ಪಿದಂತಾಗುತ್ತದೆ. ಅಂಥದೇನೂ ನೆಚ್ಚಿಕೆ ದೊರೆತ ಹೊರತು ಕಾಂಗ್ರೆಸವು ತನ್ನ ಚಳವಳಿಯನ್ನು ನಿಲ್ಲಿಸದು. ಈಗ ನಿಲ್ಲಿಸಿದರೆ ನಡುನೀರಲ್ಲಿ ಬಿಟ್ಟಂತಾಗುವದೆಂದೂ, ಈ ಕಾರ್ಯಕ್ಕೆ ಕಷ್ಟದ [illegible] ಇವರು ಪೂರಾ ತಿಳಕೊಂಡಿದ್ದಾರೆ.

ಅಸೆಂಬ್ಲಿಯಲ್ಲಿ
ನಾಯುಡುಸಾಹೇಬರಿಗೆ ಶಾಬಾಸಗಿರಿ.

—(೦)—

ಮಿಲಿಟರಿಯ ಶಿಕ್ಷಣಕ್ಕೆ ಬೇಕಾಗುವ ರಾಷ್ಟ್ರೀಯ ಸೈನ್ಯದ ವೆಚ್ಚಕ್ಕಾಗಿ ಆರು ಲಕ್ಷ ರೂಪಾಯಿ ರಕ್ಕ ಮಂಜೂರ ಮಾಡಬೇಕೆಂದು ದಿಲ್ಲಿಯ ಫಾರಿನ್ ಸೆಕ್ರೆಟರಿಯವರು ಅಂದಾಜು ಪತ್ರಕ್ಕೆ, ಒಪ್ಪಿಗೆ ಕೇಳಿದರು. ಈ ರಕಮಿನ ಮಂಜೂರಿಯು ಹಿಂದಿನ ಅಸೆಂಬ್ಲಿಯಲ್ಲಿ ಸರಕಾರದಿಂದ ತಳ್ಳಲ್ಪಟ್ಟಿತು. ಈ ರಕ್ಕದ ಸಮಯದಲ್ಲಿ, ಮೆಂಬರರು ನಾಯುಡುಸಾಹೇಬರ ರಿಪೋರ್ಟನ್ನು ಹಿಡಿದು ಅದರಲ್ಲಿ ಗಿದ್ದರು. ಅವರ ಪಕ್ಷವು ಸರಕಾರದ [illegible] ಗಳು ಬಿದ್ದು, ನಾಯುಡುಸಾಹೇಬರ ರಿಪೋರ್ಟ [illegible]ಕಿಂತ ಕಡಿಮೆಯಾಗಿ [illegible]ರು. ಆ ಮೆಂಬರರು ಹಿಂದುಸ್ಥಾನದ ಪರ್ವತಪ್ರದೇಶದ ಸ್ಥಿತಿಯ ಬಗ್ಗೆ ವರದಿಯಲ್ಲಿದ್ದ ಎಲ್ಲ ವಿಚಾರಗಳನ್ನು ಹೊರಗೆ ಹಾಕಿದರು. ಕೆಲವರು ಕಾಯಿದೆಸಂಗತ ಟೀಕೆ ಮಾಡಿದ್ದು ನಿಜ. ಈ ಟೀಕೆಗಿಂತ ಹೆಚ್ಚಾಗಿ ಪ್ರಾಂತಿಕ [illegible] ರಾಜ್ಯವನ್ನು ಹಳಿದರು. ಒಬ್ಬ ಮೆಂಬರರು ನಾಯುಡುವನ್ನು [illegible] ರಿಪೋರ್ಟನ್ನು ಸುಟ್ಟು ಹಾಕಿರೆಂದು ಅಷ್ಟರಲ್ಲಿ ಇಂಗ್ಲೀಷರು ಪೋಲೀಸ ರಾಜ್ಯವೆಂದರೆ ಜಾಲಿಯನವಾಲಾಬಾಗದ ದ್ವಿತೀಯಾವೃತ್ತಿಯೇ ಆಗಿರುತ್ತದೆಂದು ಸ್ಪಷ್ಟ ಶಬ್ದಗಳಲ್ಲಿ ಹೇಳಿ, ಕಾಂಗ್ರೆಸದ ಕೂಡ ರಾಜಿ ಮಾಡಿಕೊಳ್ಳಿರೆಂದೂ ಈಗಿನಿಂದಲೇ ಮುಂದೆ ಆವೇಶ ಮೀರಿದರೆ ಭಯಂಕರವಾಗ ಪರಿಣಾಮ ಸರಕಾರಕ್ಕೆ ಎಚ್ಚರಿಕೆಯ ಮಾತು ಹೇಳಿದರು. ರಾಜಕೀಯ ಕೈದಿಗಳಿಗೆ ಬಿಡುಗಡೆ ಕೊಡಿರಿ, ಕಾಂಗ್ರೆಸದವರಿಗೆ ರಾವುಂಡಟೇಬಲಕ್ಕೆ ಕರೆಯಿರೆಂದು [illegible] ಮೆಂಬರರು ಸರಕಾರಕ್ಕೆ ಸೂಚನೆ ಮಾಡಿದ್ದಾರೆ

ಕಡಕೋಳದಲ್ಲಿ ಖಾದೀ ಭಾಂಡಾರ.

—(೦)—

ಧಾರವಾಡ ತಾಲೂಕ ಕಡಕೋಳದಲ್ಲಿ ನರ[illegible]ದ ಸಾವಿರ ರೂಪಾಯಿಯ ಬಂಡವಲು ಕೂಡಿಸಿ, ಖಾದಿ ಭಾಂಡಾರ ತೆರೆದಿದ್ದಾರೆ ಕಡಕೋಳ ಸುತ್ತುಮುತ್ತಿನ ಗ್ರಾಮಗಳಲ್ಲಿ ಪೇಟೆ ತೆರೆಸಿ, ಖಾದೀ ಮಾರುವರು. ಈ ಸಂಘವು ಶ್ರೀ. ದೇಶಪಾಂಡೆ ಬಾಬು ಇವರ ಉತ್ತೇಜನದಿಂದ ಅಲ್ಲಿಯ ತರುಣರು ಸ್ಥಾಪಿಸಿ, ಅದಕ್ಕೆ ಶ್ರೀ ಗಂಗಾಧರ ಚರಕಾ ಸಂಘವೆಂದು ಹೆಸರಿಟ್ಟಿದ್ದಾರೆ ಶ್ರೀ. ವೆಂಕಟೇಶ ದತ್ತಾತ್ರಯ ಕುಲಕರ್ಣಿಯವರು ಅಧ್ಯಕ್ಷರಾಗಿದ್ದಾರೆ. ಒಳ್ಳೆ [illegible] ಗ್ರಾಮಗಳು [illegible].

ಪೋಲೀಸ ಅಮಲದಾರರ ಎರಡು ಮೋಜಿನ ಸಂಗತಿಗಳು.

—೦—

ಸಕಲತವಾಲಾನು ಪಾರ್ಲಮೆಂಟ ಸಭೆಯ ಬಾಗಿಲ ಮುಂದೆ ಒಳಗೆ ಹೋಗಿ ಸಭೆ ಮಾಡಿದ ಕಾಂಗ್ರೆಸಿಯನ್ನು [illegible] ಸಾಹೇಬನು ಹೀಗೆ ಒಳಗೆ ಹೋಗುವಾಗ, ಬಾಗಿಲದಲ್ಲಿ ಒಬ್ಬ ಪೋಲೀಸ ಮನುಷ್ಯ ನಿಂತುಕೊಂಡಿದ್ದನು. [illegible] ಹುಕುಮು ಮಾಡಿದ್ದು, ಇವರಿಗೆ ಹೋಗಗೊಟ್ಟನು. [illegible] ಮಂತ್ರಿಯಾದ ಬಳಿಕ ಈತನಿಗೆ ಬಡತಿ ದೊರೆಯುವದು ನಿಶ್ಚಯ. ಮುಂದಿನ [illegible] ರೂ, ತಮ್ಮ ಹಕ್ಕನ್ನು ಮರೆಯೆವೆಂದು ಈತನಿಗೆ [illegible] ಮಾಡುವ ಸ್ವಭಾವವು ಈಗಿನ ಮಂತ್ರಿಗಳಿಗಾಗಿರುವದೇ ಇಲ್ಲ.

ಹೋದ ವಾರದಲ್ಲಿ [illegible] ದಂಗೆಯಾಯಿತಷ್ಟೇ, ದಂಗೆಯಾಗುವ ಸಭೆಗೆ [illegible] ಮತ್ತು ಅತನ ಕೂಡ ಹೋದ ಬೇರೆ ಪ್ರತಿಷ್ಠಿತರನ್ನು ಇಂಗ್ಲಿಷ ಪೋಲೀಸ ಅಧಿಕಾರಿಯು ತಡೆದನು. ಅದರೂ ಇವರು ಮುಂದೆ ಹೋಗಲು, ಸಾಹೇಬನು ಇವರಿಗೆ ಗುಂಡು ಹಾಕುವ ಭಯ ತೋರಿಸಿದನು. ನೀನೊಬ್ಬನೇ ಗುಂಡು ಹಾಕುವವನೇ? ನಾವೂ ಗುಂಡು ಹಾಕಲು ಸಮರ್ಥರಾಗಿದ್ದೇವೆಂದು ಇವರು ಪ್ರತ್ಯುತ್ತರ ಕೊಡಲು- ಸಾಹೇಬನು ಇವರನ್ನು ಸುಮ್ಮನೆ ಹೋಗಗೊಟ್ಟನು.

ಐದು ಸಾವಿರ ಜನರ ಮುಂದೆ ಡಾಕ್ಟರ ಮುಂಜೆಯವರು ಕಾಯದೆಭಂಗ ಮಾಡಿದರು.

—(೦)—

ಡಾಕ್ಟರ ಮುಂಜೆಯವರು ಕೋರ್ಟು ಏಳುವ ತನಕ ಶಿಕ್ಷೆ ಅನುಭವಿಸಿದ ನಂತರ ಎರಡನೆಯ ಸಾರೆ ಕಾಯದೆಭಂಗ ಮಾಡಿದರು. ಈ ಸಾರೆ ನೋಡಲು ಹೆಂಗಸರು ಮಕ್ಕಳುಸಹಿತ ಹೋಗಿದ್ದರು. ಪೋಲೀಸರೂ ದಯಮಾಡಿಸಿದ್ದರು. ಡಾಕ್ಟರರು ಹುಲ್ಲು ಕಟ್ಟಿಗೆಯನ್ನು ಕೊಯ್ದು ಕಾಯದೆಭಂಗ ಮಾಡಿದರು. ಈ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಇವರಿಗೆ ಐವತ್ತು (ರೂಪಾಯಿ) ದಂಡ ಅಥವಾ ಒಂದು ವಾರದ ಕೈದು ಹೇಳಿದರು. ಡಾಕ್ಟರರು ದಂಡ ಕೊಡದೆ ಜೇಲಿಗೆ ಹೋದರು.

ಅಸೆಂಬ್ಲಿಯಲ್ಲಿ ರಾ. ಬ. ಡಿ. ಎಸ್. ಪಾಟೀಲರು ರಾವುಂಡ ಟೇಬಲಕ್ಕೆ ಬ್ರಾಹ್ಮಣೇತರರ ಪ್ರತಿನಿಧಿಗಳಿಗೂ ಆಮಂತ್ರಣ ಕೊಡಬೇಕೆಂದು [illegible] ಕೇಳಿದರು.

ರಾಜನಿಷ್ಠರು ಪ್ರಜಾನಿಷ್ಠರ ಮೇಲೆ ಗುಂಡು ಹಾಕಿದರು.

—(೦)—

ಅಹ್ಮದಾಬಾದ ಜಿಲ್ಲೆಯಲ್ಲಿ ಸೋರೀಸವೆಂಬಲ್ಲಿ [illegible]- ರಾಜನಿಷ್ಠರ ಸಭೆ ಕೂಡಿತ್ತು. ಸಭೆಗೆ ಕಲೆಕ್ಟರ, ಪೋಲೀಸ ಸುಪ|| ಮೊದಲಾದ ಅಮಲದಾರರು ಹೋಗಿದ್ದರೆಂದು ಹೇಳತಕ್ಕ ಅವಶ್ಯಕತೆಯೇ ಇಲ್ಲ. ಸಭೆಗೆ ಜನರು ಹೋಗಬಾರದೆಂದು ಕಾಂಗ್ರೆಸಿನವರು ಪಿಕೆಟಿಂಗ ಮಾಡಿದರು. ಈ ಪಿಕೆಟಿಂಗದಿಂದ ಗೊಂದಲವೆದ್ದಿತೆಂದು ಕಲೆಕ್ಟರ ಸಾಹೇಬರು ಜನರ ಮೇಲೆ ಗುಂಡು ಹಾಕಲಿಕ್ಕೆ ಹುಕುಮ ಮಾಡಿದರು. ಗುಂಡಿನಿಂದ ಒಬ್ಬನು ಮರಣೋನ್ಮುಖನಾಗಿದ್ದು, ಅನೇಕರು ಘಾಯವಾಗಿದ್ದಾರೆ. ರಾಜನಿಷ್ಠ ಸಭೆಯವರು ಜನರ ಪ್ರಾಣಕ್ಕೆ ಎರವಾಗುವದರ ಬದಲು- ಅಧಿಕಾರ ಬಲದಿಂದ ಜನರಿಗೆ ಚದರಿ ಹೋಗಿರೆಂದು ಹೇಳುವರ ಬದಲು- ತಾವೇ ಎದ್ದು ಹೋಗಿದ್ದರೆ- ಪ್ರಜಾಹತ್ಯದ ಪಾಪದಿಂದ ದೂರಾಗುತ್ತಿದ್ದಿಲ್ಲವೇ?

ಗುಳೇದಗುಡ್ಡದಲ್ಲಿ ಪಿಕೆಟಿಂಗ.

-೦()೦()೦-

ಗುಳೇದಗುಡ್ಡದಲ್ಲಿ [illegible] ಮುಂದೆ ಪಿಕೆಟಿಂಗ ಮಾಡಿದಂತೆ ಪರದೇಶಿ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ನಡೆಯುವದು. ಶ್ರೀ ಸೋಮಣ್ಣ ಫಕೀರಪ್ಪ ಸಿಂಗದ ಇವರು ಪರದೇಶಿ ಅರಿವೆ ಮತ್ತು ಸ್ಟೇಶನರಿ ತರಿಸುವವರಿಗೆ ಇವನ್ನು ತರಿಸಬೇಡಿರೆಂದು ಉಪದೇಶ ಮಾಡುತ್ತಿದ್ದು, ಅದಕ್ಕೆ ಅಂಗಡಿಕಾರರು ಒಪ್ಪಂಬಟ್ಟಿರುತ್ತಾರೆ. ಶ್ರೀ. ರಾಮಚಂದ್ರ ರ ಸಿರಸಗೆಂಬ ಆರೇಳು ವರ್ಷದ ಹುಡುಗನು ೨೦-೩೦ ಹುಡುಗರನ್ನು ಕರಕೊಂಡು ಚಹಾ ಕುಡಿಯಬೇಡಿರೆಂದು ಹೇಳುತ್ತ ಓಣಿಓಣಿಗೆ ಹೋಗುವನು. ಈತನ ದಿಟ್ಟತನವು ಹೊಗಳುವಂತಿದೆ.

ಈ ಜನ್ಮದಲ್ಲಂತೂ ಸ್ವರಾಜ್ಯ ದೊರೆಯದು.

——(೦)——

ಕಾನ್ಸರವೇಟಿವ್ಹ ಪಕ್ಷದ ಮಂತ್ರಿಗಳ ಕಾಲಕ್ಕೆ ಮುಖ್ಯ ಮಂತ್ರಿಯಾಗಿದ್ದ ಸರ ಜಾಯಿನ್ಸಹಿಕ್ಸಸಾಹೇಬರು ಹಿಂದುಸ್ಥಾನಕ್ಕೆ ನಮ್ಮ ಜನ್ಮದಲ್ಲಿ ಸ್ವರಾಜ್ಯ ದೊರೆಯಲಾರದು. ಸುಮ್ಮನೆ ರಾವುಂಡ ಟೇಬಲದ ಘೋಷಣೆ ಮಾಡಿ ಹಿಂದುಸ್ಥಾನವನ್ನು ಹುಚ್ಚು ಹಿಡಿಸಬೇಡಿರೆಂದು ಕೂಲಿಕಾರ ಮಂತ್ರಿಗಳಿಗೆ ಮುಂದಾಗಿ ಎಚ್ಚರಿಕೆ ಹೇಳಿದ್ದಾರೆ.

ನಿಜಾಮ ಹೈದರಾಬಾದಿನ ಮಾಜೀ ಮಂತ್ರಿಯು ಕಾಂಗ್ರೆಸ ಸೇರಿದನು.

——(೦)——

ಮಿ. ಹಸನ ಇಮಾಮರು ಪಾಟಣಾದ ವಕೀಲರು. ಹೆಸರಾದ ಕಾಂಗ್ರೆಸ ಭಕ್ತರು. ಆಗಲೆ [illegible]ರಂಗ ಕಂಡಿದ್ದಾರೆ. ಇವರ ಅಣ್ಣಂದಿರಾದ ಸರ ಅಲಿ ಹಸನ ಇಮಾಮರೂ ಕಾಂಗ್ರೆಸ ಸೇರಿ, ಪಟಣಾದ ಯುದ್ಧ ಕಮಿಟಿಯ ಸದಸ್ಯರಾಗಿದ್ದಾರೆಂದು ತಾರಿನ ವರ್ತಮಾನ ಪ್ರಸಿದ್ಧವಾಗಿದೆ. ಇವರು ಸಾಮಾನ್ಯರಲ್ಲ. ಹಿಂದಕ್ಕೆ ಮುಂಬಯಿಯಲ್ಲಿ ಕೂಡಿದ್ದ ಸ್ಪೇಶಲ ಕಾಂಗ್ರೆಸದ ಅಧ್ಯಕ್ಷರಾಗಿದ್ದರು. ಹಿಂದುಸ್ಥಾನ ಸರಕಾರದ ಕೌನ್ಸಿಲರರಾಗಿದ್ದರು. ಜಿನೇವ್ಹಾದ ಪರಿಷತ್ತಿಗೆ ಸರಕಾರದ ಪರಿಯಿಂದ ಪ್ರತಿನಿಧಿಯಾಗಿ ಹೋದವರಲ್ಲೊಬ್ಬರು. ಸರಕಾರದವರು ಇವರಿಗೆ ಸರ ಪದವಿ ಕೊಟ್ಟಿದ್ದಾರೆ. ಹೈದರಾಬಾದ ಸಂಸ್ಥಾನದ ಮುಖ್ಯ ಮಂತ್ರಿಯಾಗಿದ್ದರು. ನಿಜಾಮಸಾಹೇಬರು ಇವರಿಗೆ ನವಾಬ [illegible] ಮುಲ್ಕ ಬಹಾದ್ದೂರ ಎಂಬ ಬಿರುದು ಕೊಟ್ಟಿದ್ದಾರೆ. ಇಂಥವರು ಆದರಲ್ಲಿ ಮುಸಲಮಾನರು ಕಾಂಗ್ರೆಸ ಸೇರುವದೆಂದರೆ- ಕಾಂಗ್ರೆಸದ ಸತ್ಯತೆಯನ್ನು ಒರೆಗಲ್ಲಿಗೆ ಹಚ್ಚಿ ಅದು ಚೊಕ್ಕಾಗಿರುತ್ತದೆಂದು ತೋರಿಸುವಂತಾಗುತ್ತದೆ.

೨೦ ಲಕ್ಷದ ದಿವಾಳಿ.

—(೦)—

ವ್ಯಾಪಾರವು ಬಹಳವಾಗಿ ಮಂದವಾಗಿರುವದರಿಂದ ಸಿಂಧ ಹೈದರಾಬಾದಿನಲ್ಲಿರುವ ಎರಡು ದೊಡ್ಡ ಪೇಢಿಗಳ ೨೦ ಲಕ್ಷದ ದಿವಾಳಿ ಹೊರಟಿತು.

ಸತ್ಯಾಗ್ರಹದ ಚಳವಳಿ ಪ್ರಾರಂಭವಾದಂದಿನಿಂದ ೧೭ ಸಾವಿರ ಜನರು ಶಿಕ್ಷೆ ಹೊಂದಿದ್ದಾರೆ. ಇವರಲ್ಲಿ ಕನ್ನಡಿಗರು ಐನೂರು ಆಗುವರು.

ಸೊಲ್ಲಾಪೂರದಲ್ಲಿ ದಂಗೆಯ ಕಾಲದ ಆರೋಪಿಗಳೆಂದು ೧೨ ಜನರಿಗೆ ಸಕ್ತಮಜೂರಿಯ ಶಿಕ್ಷೆಯಾಯಿತು.

ಧಾರವಾಡ —

ನಾಳೆಯಿಂದ ಇಲ್ಲಿಯ ಕರ್ನಾಟಕ ಕಾಲೇಜದಲ್ಲಿ ವಿದ್ಯಾರ್ಥಿಗಳು ಕಾಲೇಜಕ್ಕೆ ಹೋಗಬಾರದೆಂದು ಪಿಕೆಟಿಂಗ ಪ್ರಾರಂಭವಾಗತಕ್ಕದ್ದಿದೆ.

ನಿನ್ನಿನ ದಿವಸ ಸಂಜೆ ಇದ್ದವರಿಂದ ಪರದೇಶೀ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ನಡೆಯಿತು.

ಜಾಹೀರ ನೋಟೀಸು

ಮ|| ರಾ|| ರಾ|| ನಾಗೇಶ ಚಿಕ್ಕೋಡಿ ವರಗೇರಿ ಸಾ|| ದೇವರಗುಡ್ಡ ತಾಲೂಕ ರಾಣೇಬೆನ್ನೂರ ಇವರಿಗೆ–

ಕೆಳಗೆ ಸಹಿ ಮಾಡಿದವನ ಕಡಿಂದಾ ನೋಟೀಸು ಕೊಡುವದೇನಂದರೆ– ರಾಣೇಬೆನ್ನೂರ ತಾಲೂಕ ಬ್ಯಾಡಗಿ ಗ್ರಾಮದ ನಮ್ಮ ಮಾಲಕಿಯುಳ್ಳ ರಿ|| ಸರ್ವೆನಂಬರ ೩೩೧ ನೇ ಜಮೀನನ್ನು ನೀವು ನನಗೆ ಸಟ್ಟು ಕಡಿಸಿ ಕೊಡಬೇಕು ಅಂಬುವ ಕರಾರಿಂದ ಹತ್ತು ೧೦ ವರ್ಷ ಲಾವಣಿ ಕೊಟ್ಟು ಲಾವಣಿ ಪತ್ರ ನೋಂದ ಮಾಡಿಸಿ ಕೊಟ್ಟಿರುತ್ತೀರಿ ಆ ಪ್ರಕಾರ ನೀವು ಈವರಿಗೂ ಸಟ್ಟು ಕಡಿಸಿಕೊಡಲಿಲ್ಲಾ ಇದರಿಂದ ನನಗೆ ಈವರಿಗೆ ಆದ ಲುಕ್ಸಾನು ಕೊಡಬೇಕು ಮುಂದೆ ಸಟ್ಟು ಕಡಿಸಿಕೊಡಬೇಕು ಒರ ಕಡಿಸಿಕೊಡದೆ ಇದ್ದರೆ ಮುಂದಿನ ಲುಕ್ಸಾನು ಸಹಾ ಕೊಡಬೇಕಾಗುವದು. ಈ ಸಂಬಂಧಿ ಖರ್ಚು ನಿಮ್ಮ ತಲೆಯ ಮೇಲೆ ಆದೆ ತಿಳಿಯೋದು

ತಾ|| ೧೪-೭-೧೯೩೦ ನೇ ಇಸ್ವಿ

ಸಹಿ ಬಸವಣೆಪ್ಪಾ ಸಣ್ಣಬಸಪ್ಪಾ ಸಂಕಣ್ಣನವರ ಸಾಕೀನ ಬ್ಯಾಡಗಿ

ನೋಟೀಸು

ರಾ|| ಬಸಪ್ಪಾ ಘಟಿಗೆಪ್ಪಾ ಕುಂಬಾರ ಸಾ|| ದ್ಯಾಗಾವಿ ತಾ|| ಬೈಲಹೊಂಗಲ ಜಿಲ್ಹಾ ಬೆಳಗಾವ ಇವರಿಗೆ–

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡಿದ ಬಸವ್ವಾ ಕೋಂ ಬಸಪ್ಪಾ ಕುಂಬಾರ ಸಾ|| ಹೊಸತೇಗೂರ ತಾ|| ಧಾರವಾಡ ನೋಟೀಸು ಕೊಡುವದೇನಂದರೆ–

ನೀನು ನನ್ನ ಲಗ್ನದ ಗಂಡನಿದ್ದು ನನ್ನ ಲಗ್ನ ಆಗಿ ಅಜಮಾಸ ೨೨ ವರ್ಷವಾಯಿತು ನಿನ್ನ ಕೂಡ ಬಾಳ್ವೆ ಮಾಡಿಕೋತಾ ಇದ್ದು ಒಂದು ಗಂಡುಮಗನನ್ನು ಹಡದಿದ್ದೆ ಆದರೆ ಅದು ನನ್ನ ದುರ್ದೈವದಿಂದ ಸತ್ತಿತು ನೀನು ಈಗ ಅಜಮಾಸ ೭-೮ ವರ್ಷದ ಕೆಳಗೆ ಚನ್ನವ್ವಾ ಅಂಬುವಾಕೆಯನ್ನು ಉಡ್ಕಿ ಮಾಡಿಕೊಂಡು ಆಕಿ ಮಾತು ಕೇಳಿ ನನಗೆ ಹೊಡೆದು ಬಡೆದು ಮಾಡಿ ೧|| ವರ್ಷದ ಕೆಳಗೆ ಉಟ್ಟ ಸೀರಿಸಹಿತ ಮನಿಬಿಟ್ಟು ಹೊರಗೆ ಹಾಕಿದಿ ನಾನು ತವರ ಮನಿಯಲ್ಲಿ ನಿಂತುಕೊಂಡೆ ಆದರೆ ಅವರು ಬಡವರು ಇರುವದರಿಂದ ಖರ್ಚಿಗೆ ಕೊಡುವ ತಾಕತ ಇಲ್ಲದಕಾರಣಾ ಕಲ್ಲಪ್ಪಾ ಮುದಕಪ್ಪನವರ ಸಾ|| ಕಾಜಿಕೋಳಿ ಇವರ ಕಡಿಂದಾ ೫೦ ರೂಪಾಯಿ ಸಾಲಾ ಮಾಡಿ ಉಪಜೀವನ ಮಾಡಿಸುತ್ತಾ ಬಂದೆ ಆದರೆ ಮುಂದೆ ಸಾಲ ಸಹಾ ಹುಟ್ಟುವದಿಲ್ಲಾ ವ ಬಾಳ್ವೆ ಇಲ್ಲದೆ ಕೂಡ್ರುವದು ನನ್ನ ಮನಸ್ಸಿಗೆ ಬರುವದಿಲ್ಲ ಕಾರಣಾ ಈ ನೋಟೀಸ ಮುಟ್ಟಿದ ೮ ದಿವಸಗಳೊಳಗೆ ನಾನು ಮಾಡಿದ ಸಾಲಾ ತೀರಿಸಿ ನನ್ನನ್ನು ಮನಿಗೆ ಕರಕೊಂಡು ಹೋಗಬೇಕು ವ ಹೊಡದು ಬಡದು ಮಾಡಲಿಕ್ಕಿಲ್ಲಾ ಅಂತಾ ಜಾಮೀನು ಕೊಡಬೇಕು ಆದರಂತೆ ಮಾಡದೆ ಹೋದರೆ ನನ್ನ ಉಪಜೀವನದ ಸಲುವಾಗಿ ವ ಬಾಳ್ವೆ ಸಲುವಾಗಿ ನಾನು ನನ್ನ ಮರ್ಜಿಗೆ ಬಂದವರನ್ನು ಉಡ್ಕಿ ಮಾಡಿಕೊಂಡು ಹೋಗತೇನೆ ಆ ಮೇಲೆ ನಿನ್ನದು ನನ್ನ ಮೇಲೆ ವ ನನ್ನ ಉಡ್ಕಿ ಗಂಡನ ಮೇಲೆ ಯಾವ ತರದ ಇಲಾಜ ನಡಿಲಿಕ್ಕಿಲ್ಲಾ ಅಂತ ಬರೆಕೊಟ್ಟ ನೋಟೀಸು ಸಹಿ ತಾ|| ೧೫-೭-೩೦

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಬಸವ್ವಾ ಕೋಂ ಬಸಪ್ಪಾ ಕುಂಬಾರ ಇಕಿದು ಆದೆ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸುದ್ದಿ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ [illegible] ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! [illegible] ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರಿನಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ:– ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತ ನೋಡಿ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವಖಾರ

[illegible] ತಿಳಿಸುವದೇನಂದರೆ–

ನಮ್ಮ ಕಟಿಗಿ ಅಡ್ಡದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳೆ ವ ಸಾಗವಾನಿ (೬) ಫೂಟಿನ ಚವಕ್ಕ ಕಂಬಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ಲೀಪು ವ ಪಿಲೀಗಳು ತೈಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊಡಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವವರಿಗೆ ತಯಾರ ಸಿಗುತ್ತವೆ

ಮಾಲಪ್ಪಾ ಗುರಪ್ಪಾ ಗೋಡಿಶೆಟ್ಟಿ.
ಟಿಂಬರ ಮರ್ಚಂಟ್ಸ
ಮಾರ್ಕೆಟ್ಟ ಧಾರವಾಡ

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸಂಸ್ಥೆ!

ಮೋಟಾರ ಡ್ರಾಯ[illegible] ಪರೀಕ್ಷೆಯಲ್ಲಿ ಜನರಿಗೆ ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವಂಥ ಈ ವೆಚ್ಚದ ಅಡಚಣೆಯು [illegible], ಪ್ರಾಯೋಗಿಕದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆರೆದು, ಆಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ [illegible] ಜನರು [illegible] ಕಲಿಯುವವರ [illegible] ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರ [illegible] ಜನರನ್ನು [illegible]. ಅದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ಕೇಳಕೊಳ್ಳಬಹುದು.

ಪ್ರೊ. ವ್ಹಿ. ಎಸ. ಇಟಗಿ.
[illegible], ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ

R. N. ೫೪

ನಿತ್ಯ ಪತ್ರ

ವಿಜಯ

ಸಂಪಾದಕರು:- ಅಶ್ವಾಚಾರ್ಯ ಬಾಳಾಚಾರ್ಯ ಜೋಶೀ.

ವರ್ಷ ೨೧ | ಧಾರವಾಡ ಗುರುವಾರ ತಾರೀಖು ೧೭ ನೇ ಜುಲೈ ೧೯೩೦ (ಸಂಚಿಕೆ

ದಿ ಧಾರವಾಡ ಅರ್ಬನ ಕೋ|| ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ|| ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಂಸ್ಥೆ.

ಬೆಂಡಿಗೇರಿ ಚಾಲು ಲೆಕ್ಕದ ಮೇಲಿಂದ, ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಠರಾವಿಸಿದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ „	೭-೦-೦
೩ „	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿಗಳಿಗೆ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾಪದೂಶರ ಅನ-ರ್ಜ, ಶ್ರೀ ಆರೂಢ ಸ್ವಾಮಿಗಳ ಕೃಷಿಯುತು ಮತ್ತು ಮುನಸೀಫರಾದ ಶ್ರೀ ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಛಾಯಾಚಿತ್ರಗಳನ್ನೂ ಕೊಟ್ಟಿರುತ್ತದೆ. ಪ್ರಜೆಗಳ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡನೇ ಸಾವಿರ ಪ್ರತಿಗಳನ್ನು ತೆಗೆಸಿದೆ ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು. ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಖರೀದಿಸುವವರಿಗೆ ಒಂದು ಪ್ರತಿ ಬಕ್ಷೀಸ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಂಪೂರ್ಣ ಶಿಕ್ಷಣ ಕೊಡುತ್ತೇವೆ. ಕೇವಲ ಕಟಿಂಗ ಮುದತ ಎರಡು ತಿಂಗಳು ಮತ್ತು ಟೇಲರಿಂಗ ಮುದತ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕತ ಕಟಿಂಗ ಫೀ ೨೫ ಇಪ್ಪತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ. ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ, ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ಪರಿಶ್ರಮದ ಪ್ರಕಾರ ತಿಂಗಳಿಗೆ ಕನಿಷ್ಠ ಇಪ್ಪತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಎಸ್. ಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ವಿಜಯ.

ವಿಕ್ರಮ ವರ್ಷ ೧೯೮೭ ಆಷಾಢ ವದ್ಯ ೭

ಅಸೆಂಬ್ಲಿಯಲ್ಲಿ ಲಾಠೀ ರಾಜ್ಯದ ತೀವ್ರ ನಿಷೇಧ.

ಶ್ರೀ. ನಿಯೋಗಿಯವರು ಮಾಡಿದ ಭಾಷಣ-

ಕಾಯದೆ ಮತ್ತು ಹುಕುಮನ್ನು ಮಾತ್ರ ಮಲಿನಲ್ಲಿ ತರುವದೇ ತಮ್ಮ ಉದ್ದೇಶವಾಗಿರುತ್ತದೆಂದು ವ್ಹಾಯಿಸರಾಯರು ಅನ್ನುತ್ತಾರೆ. ನಿರಪರಾಧಿ ಜನರನ್ನು ಪೋಲೀಸರು ವಿನಾಕಾರಣ ಹೊಡೆದರೆಂಬದಾಗಿ ಸರ ಕಾವಸಜಿ ಜಹಾಂಗೀರರು ಆಡಿದ ಭಾಷಣವನ್ನು ಮಿ. ಹೇಗರು ಸುಳ್ಳೆಂದು ಅನ್ನುತ್ತಾರೆ. ಆದರೆ ಸರ ಕಾವಸಜಿಯವರು ಹೇಳುವದು ನಿಜವೆಂದು ನಾನು ಸಾರಿ ಹೇಳುತ್ತೇನೆ. ನಿರಪರಾಧಿಗಳ ಹಿಂಸೆಯು ಮುಂಬಯಿಯಲ್ಲಿ ಮಾತ್ರವಲ್ಲ. ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ ನಡೆಯುತ್ತಲಿದೆ. ಮಿ. ಹೇಗಸಾಹೇಬರು ತಮ್ಮ ಕಣ್ಣುಗಳನ್ನಾದರೂ ಮುಚ್ಚುತ್ತಿರಬೇಕು. ಅಥವಾ ಹೋಮ ಮೆಂಬರರಂಥ ಜವಾಬದಾರ ಅಧಿಕಾರ ಸ್ಥಳವು ಸಾಹಾಯು ಮಾಡಬೇಕು. ಬ್ರಿಟಿಶ ಸಾಮ್ರಾಜ್ಯವು ನೌಕರಶಾಹಿಯ ಉದ್ರೇಕವೇ ಆಗಿರುವದು. ಜಲಿಯಾನವಾಲಾಬಾಗದ ಮರಿಯೇ ದೇಶವನ್ನು ಕಂಗೆಡಿಸುತ್ತಿರುವದು. ಹಿಂದುಸ್ಥಾನದ ತುಂಬ ಜಾಲಿಯನವಾಲಾದ ನಾಟಕವೇ ನಡೆಯುತ್ತದೆ. ಹೋಮ ಮೆಂಬರರು ಅಜ್ಞಾನದ ಸೋಗು ಹಾಕುತ್ತಿದ್ದರೆ- ಅವರು ಈ ಕೆಲಸಕ್ಕೆ ಲಾಯಖರಲ್ಲವೆಂದೂ ವ್ಹಾಯಿಸರಾಯಸಾಹೇಬರು ದೇಶದಲ್ಲಿ ಶಾಂತತೆ ಮತ್ತು ಸ್ನೇಹಭಾವವನ್ನುಂಟುಮಾಡಬೇಕೆನ್ನುವ ಕೃತ್ಯಕ್ಕೆ ಸಹಾಯ ಮಾಡುವಂತೆ ಅವರಿಗೆ ಏಕನಿಷ್ಠೆಯಿಂದ ನೆರವಾಗತಕ್ಕವರಾಗಿಲ್ಲೆಂದೂ ಸ್ಪಷ್ಟವಾಗಿ ಹೇಳುತ್ತೇನೆ. ಬಂಗಾಲದಲ್ಲಿ ಇವರು ಬೇಬಂದಶಾಹಿಯನ್ನೇ ನಡೆಸಿದ್ದಾರೆಂದು ನನ್ನ ಅನುಭವಕ್ಕೆ ಬಂದ ಮಾತಾಗಿದೆ. ಮಿದನಾಪೂರದಲ್ಲಾದ ಪೋಲೀಸ ಅತ್ಯಾಚಾರಗಳನ್ನು ಕುರಿತು ವಿಚಾರಣೆ ಮಾಡಲಿಕ್ಕೆ ಹೋದಂಥ ಕಮಿಟಿಯ ಅಧ್ಯಕ್ಷರು ಅಂಥಿಂಥವರಲ್ಲ; ಲಿಬರಲ ಅಸೋಸಿಯೇಶನದ ಅಧ್ಯಕ್ಷರು. ಇವರ ಯೋಗ್ಯತೆಯ ಬಗ್ಗೆ ಸ್ವತಃ ನಿಮ್ಮ ಕಾರಬಾರಿ ಮಂಡಳದವರೇ ಪ್ರಶಂಸಾರ್ಹವಾದ ಅಭಿಪ್ರಾಯ ಕೊಡಬಹುದು. ಈ ಕಮಿಟಿಯವರು ಜನರನ್ನು ದಂಗೆಗೆ ಪ್ರವೃತ್ತ ಮಾಡುತ್ತಾರೆಂಬ ಆರೋಪದಿಂದ ಹಿಡಿದು ಹಾಕಿದರು. ಮತ್ತು ಇವರ ಸಂಗಡ ಹೋದ ಒಬ್ಬ ನಿರಪರಾಧಿ ಮನುಷ್ಯನನ್ನು ಹೊಡೆದರು. ಕಮಿಟಿಯು ರಿಪೋರ್ಟ ಬರೆದು ಸಿದ್ಧವಾಗಿದೆ. ಸರಕಾರದ ದಬ್ಬಾಳಿಕೆಯ ದೆಸೆಯಿಂದ ಒಂದು ಮುದ್ರಾಲಯವೂ ಇದನ್ನು ಮುದ್ರಿಸಲಿಕ್ಕೆ ಮುಂದೊರೆಯದಾಗಿದೆ. ನಾನು ರಾಜೀನಾಮೆ ಕೊಡತಕ್ಕವನೇ! ಶ್ರೀ. ಬಸು ಇವರ ರಿಪೋರ್ಟಿನಲ್ಲಿ ಪೋಲೀಸರ ಅನೇಕ ಅತ್ಯಾಚಾರದ ಸಂಗತಿಗಳಿವೆ. ಮ್ಯಾಜಿಸ್ಟ್ರೇಟರ ಎದುರಿನಲ್ಲಿಯೇ ಹೆಣ್ಣುಮಕ್ಕಳ ಅಪಮಾನ ಮಾಡಿದ್ದಾರೆ. ಇವೆಲ್ಲ ಕೃಷ್ಣಕೃತ್ಯಗಳನ್ನು ಅಸೆಂಬ್ಲಿಯಲ್ಲಿ ಹೇಳುವದಕ್ಕಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ.

ಮಿ. ಹೇಗ- ಬಂಗಾಲ ಸರಕಾರದ ಜಾಹೀರ ಪತ್ರಿಕೆ ನೋಡಿರಿ. ಹೆಂಗಸರ ಮೇಲೆ ಕೈ ಎತ್ತಿದರೆಂಬದು ಸುಳ್ಳಾಗುತ್ತದೆಂದು ಬರೆದಿದೆ

ಮಿ. ನಿಯೋಗಿ- ನನಗೆ ಈ ರಿಪೋರ್ಟನ್ನು ಮುದ್ರಿಸಲಿಕ್ಕೆ ಅಪ್ಪಣೆ ಕೊಡಿರಿ; ಅಂದರೆ ಈ ಸುಳ್ಳಿನ ಕಾರಖಾನೆಯೊಳಗಿನ ಎಲ್ಲ ಸುಳ್ಳುಗಳ ದೆಸೆಯಿಂದ ನೀವು ನನ್ನ ಮೇಲೆ ಖಟ್ಲೆ ಮಾಡಿರಿ.

ಆಗ ಮಿ. ಹೇಗಸಾಹೇಬರು ಆ ಪತ್ರಿಕೆಯು ಹವಾಲಿ ಕೊಟ್ಟು ಸುಮ್ಮನೆ ಕೂತರು.

ಇದರಂತೆ ಎಷ್ಟೇಕ ಮೆಂಬರರು ಪೋಲೀಸ ಲಾಠೀ ರಾಜ್ಯವನ್ನು ಹಳಿದ ಭಾಷಣ ಮಾಡಿದ್ದಾರೆ.

ಕಾಂಗ್ರೆಸದ ಮೇಲೆ ಮಿ. ಮ್ಯಾಕಡೊನಾಲ್ಡ ಸಾಹೇಬರ ವ್ಯಾಖ್ಯಾನ.

ಮುಖ್ಯ ಮಂತ್ರಿಯಾದ ಮಿ. ಮ್ಯಾಕಡೋನಾಲ್ಡಸಾಹೇಬರು ಕಾಂಗ್ರೆಸದ ಮೇಲೆ ಮಾಡಿದ ಟೀಕೆಯು-

ಹಿಂದುಸ್ಥಾನದಲ್ಲಿ ಹುಟ್ಟಿದ ಈಗಿನ ಭಯಾನಕವಾದ ಗೊಂದಲವು ಪೂರಾ ಅನವಶ್ಯಕವಾದದ್ದು. ಈ ಚಳವಳಿಯು ಹಿಂದುಸ್ಥಾನದ ವಿನಯಶೀಲವಾದ ಆಕಾಂಕ್ಷೆಗಳನ್ನು ಹೆಚ್ಚಿಸುವದಕ್ಕೂ ಹಿಂದುಸ್ಥಾನವು ವಸಾಹತಿನ ಸ್ವರಾಜ್ಯ ಸಂಪಾದನೆ ಮಾಡುವದನ್ನು ಮುಂದೆ ಹಾಕುವದಕ್ಕೂ ಕಾರಣವಾಗುತ್ತದೆ. ನಾನು ಯಾವ ಸಂಗತಿ ಸಾಕ್ಷಾತ್ಕಾರ ಮಾಡಬೇಕೆಂದಿದ್ದೆನು. ಅವನ್ನು ಹಿಡಿಯುವ ಸಮಯ ಬಂದಿದೆ. ಈಗ ಹಿಡಿದಂಥವರ ಎದುರಿಗೆ ಇಂಥ ಸಮಯ ಬಂದಿದ್ದರೆ- ನಮ್ಮಂತೆ ಅವರೂ ದಸ್ತಗಿರಿಯ ಸತ್ರ ನಡೆಸುತ್ತಿದ್ದರು. ಇದೆಲ್ಲ ಅನಾವಶ್ಯಕವು ದುಃಖದಾಯಕವಾಗಿ, ಅನವಶ್ಯಕವಾಗಿರುತ್ತದೆ. ಮುಂದೆ ಗವ್ಹರ್ನರರಾಗುವಂಥವರು ಮತ್ತು ರಾಜ್ಯಕಾರಭಾರ ಪ್ರವರ್ತಕರಾಗುವಂಥವರು ಈ ತಪ್ಪು ರೀತಿಯು ಹೇಗಾಗುತ್ತಾ ನಡೆಯಬೇಕೆಂಬದನ್ನು ಲಕ್ಷ್ಯದಲ್ಲಿಡತಕ್ಕದ್ದು.

ಕಾಂಗ್ರೆಸದ ಹುಠಿಯನ್ನು ದಪಾಟಿ ಬಿಡತಕ್ಕದ್ದು.

—(o)—

ಕಾಂಗ್ರೆಸದ ಅಕ್ಟಿಂಗ ಅಧ್ಯಕ್ಷರಾದ ಸರದಾರ ಪಟೇಲರು, ಲಾರ್ಡ ಅರ್ವಿನರವರ ಭಾಷಣಕ್ಕೆ ಉತ್ತರವಾಗಿ ಮುಂದೆ ಕೊಟ್ಟಿರುವ ಒಂದು ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ.

ಕಾಂಗ್ರೆಸವು ಈಗಿನ ತನ್ನ ಕ್ರಮದಲ್ಲಿ ಬದಲು ಮಾಡುವದಕ್ಕೆ ತೀರ ಆತುರವಾದದ್ದೇನೂ ಕಾರಣವಿಲ್ಲ. ಮಹಾತ್ಮರು ಸಹ ತಮ್ಮ ಕ್ರಮದಲ್ಲಿ ಬದಲು ಮಾಡಬೇಕೆನ್ನುವ ಕಾರಣವೂ ನನಗೆ ಕಂಡು ಬರುವದಿಲ್ಲ. ಕೆಲ ಸುರಕ್ಷಿತತೆಗಳನ್ನು ಕಾಯ್ದುಕೊಂಡು ವಸಾಹತಿನ ಸ್ವರಾಜ್ಯದ ಘಟನೆಯನ್ನು ಮಾಡುವದಕ್ಕೆ ರಾವುಂಡಟೇಬಲವನ್ನು ಕರೆಯಿಸುತ್ತೇವೆಂಬ ಸಾದಾ ಬೇಡಿಕೆಯನ್ನು ಸಹ ವ್ಹಾಯಿಸರಾಯರು ಅಂಗೀಕರಿಸಿಲ್ಲ. ಬ್ರಿಟಿಶ ಪ್ರತಿನಿಧಿಗಳ ಸಮ್ಮತಿಯಿಂದ ಎಂಥ ಮತ್ತು ಯಾವ ತರದ ಸ್ವರಾಜ್ಯ ಘಟನೆಯು ಲಂಡನದಲ್ಲಾಗುವ ಪರಿಷತ್ತಿನಿಂದ ಆಗಿ ಅಲ್ಲಿ ಇಂಗ್ಲಿಷ ಪ್ರತಿನಿಧಿಗಳು ಒಪ್ಪಿದ್ದನ್ನು ಮಾತ್ರ ಕೊಡಲಾಗುತ್ತದೆಂದು ಲಾರ್ಡ ಅರ್ವಿನ ಸಾಹೇಬರು ಸ್ಪಷ್ಟವಾಗಿ ಹೇಳಿದ್ದಾರೆ. ರಾವುಂಡಟೇಬಲಕ್ಕೆ ಹೋಗುವ ಪ್ರತಿನಿಧಿಗಳು ಮೃಗಜಲದ ಬೆನ್ನು ಹತ್ತಿ ಹೋದರೆಂದು ದಣಿಯುವದು ನಿಶ್ಚಯ.

ಸಂಗಮನೇರ ತಾಲೂಕಿನಲ್ಲಿ ವನಗಾವಲದ ಕಾಯದೆಭಂಗ.

—o*o—

ಪುಣೆ ಜಿಲ್ಲೆಗೆ ಸೇರಿದ ಸಂಗಮನೇರ ತಾಲೂಕಿನಲ್ಲಿಯ ರೈತರು ವನಗಾವಲದ ಕಾಯದೆಯನ್ನು ಮುರಿಯಲು ಪೂರ್ವಸಿದ್ಧತೆ ಮಾಡಿದ್ದು, ವನಗಾವಲದಲ್ಲಿ ಹುಡಗೋಲಿನ ಮೊದಲನೆಯ ಕೂರಕತ್ತರಿಯು ಹಾಕುವಿಸ ದಿವಸ ಆಗತಕ್ಕದ್ದುಂಟು. ಒಂದೆರಡು ಸ್ಥಳದಲ್ಲಿ ಕಾಯದೆಭಂಗ ಮಾಡದೆ, ಅಲ್ಲಲ್ಲಿಯ ವನಗಾವಲದಲ್ಲಿ ಅಂದರೆ ಅನೇಕ ಕಡೆಗಳಲ್ಲಿ ಕಾಯದೆಭಂಗ ಮಾಡುವರು.

ಇಂಗ್ಲಂಡದಲ್ಲಿ ಹಿಂದುಸ್ಥಾನಕ್ಕೆ ಅನುಕೂಲವಾದ ಪಕ್ಷ.

—:-:*:-:—

ಮಿ. ಬ್ರ್ಯಾಕವೇನಾಲ್ಡ ಮತ್ತು ಲಾರ್ಡ ಅಯರ್ವಿನಸಾಹೇಬರಿಗೆ ಸರದಾರ ಪಟೇಲರಂತೆ ಉತ್ತರ ಹೇಳಿದಂತೆ ಕೂಲಿಕಾರ ಪಕ್ಷದ ಸ್ವತಂತ್ರ ಪಕ್ಷದವರು ತಮ್ಮ ಸಭೆಯಲ್ಲಿ ಮುಂದೆ ಕೊಟ್ಟಂತೆ ಠರಾವು ಮಾಡಿದ್ದಾರೆ:-

೧ ಈ ಸಭೆಯು ಹಿಂದುಸ್ಥಾನದ ದಬ್ಬಾಳಿಕೆಯನ್ನು ನಿಷೇಧಿಸುತ್ತದೆ.

೨ ಹಿಂದುಸ್ಥಾನದ ಜನರು ಸ್ವತಂತ್ರವಾಗಿ ಸ್ವರಾಜ್ಯವನ್ನನುಭವಿಸಲು ಹಕ್ಕುದಾರರಿದ್ದಾರೆಂದು ಸಭೆಯು ಒಪ್ಪುತ್ತದೆ.

೩ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕು.

೪ ಸಂಪೂರ್ಣ ಜವಾಬದಾರ ಪದ್ಧತಿಯ ರಾಜ್ಯಕಾರಭಾರ ಕೊಡುತ್ತೇನೆಂಬ ಶರ್ತಿನಿಂದ ಹಿಂದೀ ಪ್ರತಿನಿಧಿಗಳ ಕೂಡ ಒಡಂಬಡಿಕೆಯ ಪ್ರಸ್ತಾಪ ಮಾಡಬೇಕು.

ಪರದೇಶೀ ಅರಿವೆಗೆ ವಕೀಲರ ಕಾರಕೂನರ ಬಹಿಷ್ಕಾರ ಮತ್ತು ಮೆರವಣಿಗೆ.

—(೦)—

ಕಳೆದ ಮಂಗಳವಾರ ದಿವಸ ಸಾಯಂಕಾಲದಲ್ಲಿ ಇಲ್ಲಿಯ ವಕೀಲರ ಕಾರಕೂನರು ಸುಮಾರು ನೂರು ಜನರು ಶುದ್ಧ ಖಾದಿಯ ಉಡಿಗೆತೊಡಿಗೆಯಲ್ಲಿ ಮೆರವಣಿಗೆ ತೆಗೆದರು. ಕಾರಕೂನರು ಪೂರ್ಣ ಸ್ವದೇಶಿಯಾಗಿದ್ದು, ಎಷ್ಟೋ ಜನರು ಕೋರ್ಟಿನಲ್ಲಿ ಕೆಲಸವಿಲ್ಲದೆ ಕೂತಾಗ ಚರಕದಿಂದ ನೂಲು ತೆಗೆಯುತ್ತಾ ಕೂಡ್ರುತ್ತಾರೆ. ಮೆರವಣಿಗೆಯ ವರ್ತಮಾನವು ಮೊದಲೇ ಗೊತ್ತಾದ್ದರಿಂದ, ಮತ್ತು ಇವರ ಜಯಧ್ವನಿಯು ಬಹಳ ದೂರದ ವರೆಗೆ ಹೋಗುತ್ತಿದ್ದದರಿಂದ ದಾರಿಗುಂಟ ಮೆರವಣಿಗೆ ನೋಡಲು ಸ್ತ್ರೀ ಪುರುಷ ಪ್ರೇಕ್ಷಕರ ದೊಡ್ಡ ಸಮುದಾಯ ಕೂಡಿತ್ತು. ವಿಲಾಯತಿಯ ಅರಿವೆಗೆ ಬಹಿಷ್ಕಾರ ಹಾಕಿರಿ; ಸ್ವದೇಶಿ ವ್ರತ ಕೈಕೊಳ್ಳಿರಿ; ಗಾಂಧೀ ಮಹಾರಾಜಕೀ ಜಯ, ವಂದೇ ಮಾತರಮ್ ಧ್ವನಿಯು ಸಂತೆಗಾಗಿ ಬಂದಿದ್ದ ಜನರ ಮೇಲೆ ಒಳ್ಳೇ ಪರಿಣಾಮವನ್ನುಂಟು ಮಾಡಿ, ವಿಲಾಯತಿಯ ಅರಿವೆಯ ವ್ಯಾಪಾರವು ಪೂರ್ತಾ ಅಳದಕ್ಕೆಗೆ ಬಂದಿತು.

ಕರ್ಮವೀರದ ಮೇಲೆ ಸೆಕ್ಯುರಿಟಿಯ ವಾರಂಟು.

—(೦)—

ಇಲ್ಲಿಯ ಕರ್ಮವೀರ ವರ್ತಮಾನಪತ್ರ ಮತ್ತು ಮುದ್ರಾಲಯಕ್ಕೆ ವರ್ತಮಾನಪತ್ರಗಳ ದಬ್ಬಾಳಿಕೆಯ ಜಾಹೀರನಾಮೆಯ ಪ್ರಕಾರ ಸಾವಿರ ರೂಪಾಯಿಯ ಜಾಮೀನು ಕೊಡಬೇಕೆಂದು ಸರಕಾರದಿಂದ ವಾರಂಟು ಬಂದಿದೆ. ಜಾಮೀನು ಕೊಡಬಾರದೆಂದು ಪತ್ರ ಸಂಪಾದಕರಾದ ಶ್ರೀ. ದಿವಾಕರರ ಮತವು. ಆದ್ದರಿಂದ ವಾರಂಟು ಹತ್ತುವ ಮುಂಚಿತವಾಗಿ ನಿತ್ಯ ನಿಯಮದಂತೆ ಶುಕ್ರವಾರ ಪತ್ರ ತೆಗೆಯುವ ಮುಂಚಿತವಾಗಿ ನಿನ್ನಿನ ದಿವಸವೇ ಪತ್ರ ತೆಗೆದು, ಸದ್ಯದ ಮಟ್ಟಿಗೆ ವಾಚಕರ ನಿರೋಪ ತಕ್ಕೊಂಡಿದ್ದಾರೆ.

ಆರ್ಡಿನನ್ಸ ಪ್ರಾರಂಭವಾಗಿ ಎರಡು ತಿಂಗಳಾಯಿತು. ಇದರ ಆಯುಷ್ಯ ಆರು ತಿಂಗಳು. ಅಷ್ಟರಲ್ಲಿ ಹಿಂದಿನಂತೆ ದಬ್ಬಾಳಿಕೆಯನ್ನು ಅಮಲಿನಲ್ಲಿ ತರಲು ಕಾಯದೆ ಮಾಡಿಕೊಂಡರೆ ಸೆಕ್ಯುರಿಟಿಯ ಬ್ರಹ್ಮಕಪಾಲ ತಪ್ಪದು. ಇಲ್ಲವಾದರೆ ನಾಲ್ಕು ತಿಂಗಳ ನಂತರ ಕರ್ಮವೀರವು ಪುನಃ ಹೊರಡುವದು.

ಕರ್ಮವೀರಕ್ಕೆ ಒದಗಿದ ಪ್ರಸಂಗವು ಪಾಂಡವರು ಸ್ವರ್ಗಾರೋಹಣ ಮಾಡಿದಂತಿದೆ. ಮೊದಲು ಸಹದೇವ, ನಂತರ ನಕುಲ, ಬಳಿಕ ಅರ್ಜುನ ತರುವಾಯ ಭೀಮನು ದಾರಿಗುಂಟ ಬೀಳುವದನ್ನು ನೋಡುತ್ತಾ ಧರ್ಮರಾಯನು ಸ್ವರ್ಗಕ್ಕೆ ಹೋದನು. ಅದೇ ಪ್ರಕಾರ ಇಂದು ಯಾವ ಪತ್ರ ಬಂದಾಯಿತು. ನಾಳೆ ಯಾರಿಗೆ ಈ ಚಕ್ರ ಬರುವದೆಂದು ನೋಡುತ್ತಾ ವರ್ತಮಾನಪತ್ರಕಾರರು ಮಾರ್ಗಕ್ರಮಣ ಮಾಡಬೇಕಾಗಿದೆ.

ಶೋಲಾಪೂರದ ಫಾಸಿಯ ಅಪೀಲಿನ ತೀರ್ಪು.

——(೦)——

ಧನಶೆಟ್ಟಿಗೆ ಗಲ್ಲು; ಉಳಿದ ಮೂವರ ದೆಸೆಯಿಂದ ಮತಭೇದ.

—(೦)—

ಮುಂಬಯಿ ಹಾಯಕೋರ್ಟಿನಲ್ಲಿ ಈ ಅಪೀಲು ಮುಖ್ಯ ಜಡ್ಜರಾದ ಸರ ಬೋಮಂಟ ಮತ್ತು ಮಿ. ಮಾಡಗಾಂವಕರ ಇವರ ಮುಂದೆ ನಡೆಯಿತು. ಧನಶೆಟ್ಟಿಯವರು ಅಪರಾಧಿಯಾಗಿದ್ದಾರೆಂದು ಇಬ್ಬರದೂ ಏಕಮತವಾಗಿ, ಇವರ ಗಲ್ಲಿನ ಶಿಕ್ಷೆ ಕಾಯಂ ಮಾಡಲ್ಪಟ್ಟಿತು. ಉಳಿದ ಮೂವರಾದ ಶ್ರೀಕಿಸನ ಸಾರಡಾ, ಜಗನ್ನಾಥ ಭಗವಾನ ಶಿಂದೆ ಮತ್ತು ರಸೂಲ ಕುರ್ಬಾನ ಹುಶೇನ ಇವರ ವಿಷಯವಾಗಿ ಜಡ್ಜರಲ್ಲಿ ಮತಭೇದವಾಗಿದೆ. ಮೂರನೆಯ ಜಡ್ಜರ ಕಡಿಗೆ ಪುನಃ ಇವರ ವಿಚಾರಣೆ ನಡೆಯುವದು.

ಹುಬ್ಬಳ್ಳಿಯ ಶ್ರೀ. ಜೋಶೀ ವಕೀಲರ ಮೇಲೆ ವಾರಂಟು.

—(-:*:-)—

ಹುಬ್ಬಳ್ಳಿಯ ಶ್ರೀ. ವಿಶ್ವನಾಥರಾವ ಜೋಶೀ ವಕೀಲರು ಕಾರವಾರ ಜಿಲ್ಹೆಗೆ ಹೋದಾಗ ಭಾಷಣ ಮಾಡಿದ್ದು ಅಪರಾಧವಾಗುತ್ತದೆಂದು ಅವರ ಮೇಲೆ ಪಿನಲ ಕೋಡಿನ ೫೦೪ ಕಲಮಿನನ್ವಯ ವಾರಂಟು ಬಂದಿರುತ್ತದೆಂದು ತಿಳಿಯುತ್ತದೆ.

ಪಿಕೆಟಿಂಗದವರನ್ನು ಹಿಡಿದುದಕ್ಕಾಗಿ ವಿದ್ಯಾರ್ಥಿಗಳು ಕಾಲೇಜಕ್ಕೆ ಶರಣು ಹೊಡೆದರು.

-○()*⁎*()○-

ಕಲಕತ್ತೆಯಲ್ಲಿ ಪ್ರೆಸಿಡೆನ್ಸಿ ಕಾಲೇಜದ ಮುಂದೆ ನಡೆದ ಪಿಕೆಟಿಂಗ ನಡೆಸಿದ ಆರೋಪದಿಂದ ಪೋಲಿಸರು ೧೭ ಜನ ವಿದ್ಯಾರ್ಥಿಗಳನ್ನು ಹಿಡಿದರು. ಕೂಡಲೆ ಎಲ್ಲ ವಿದ್ಯಾರ್ಥಿಗಳು ಕಾಲೇಜಕ್ಕೆ ಶರಣು ಹೊಡೆದು, ಸಭೆ ಮಾಡಿ, ಪ್ರಿನ್ಸಿಪಾಲರ ವರ್ತನವನ್ನು ಬಹುವಾಗಿ ನಿಷೇಧಿಸಿದರು.

ಮಹಾತ್ಮರಿಗೂ ಸರಕಾರಕ್ಕೂ ರಾಜೀ ಮಾಡಿಸುವದಕ್ಕೆ ಬ್ಯಾರಿಸ್ಟರ ಜಯಕರರಿಗೆ ಸರ್ವಾಧಿಕಾರ.

—(೦)—

ಸಿಮುಲಾದಲ್ಲಿ ಅಸೆಂಬ್ಲಿ ಮತ್ತು ಕೌನ್ಸಿಲ ಆಫ ಸ್ಟೇಟ್ಸ ಪ್ರಮುಖ ಮೆಂಬರರು ಸೇರಿ ಒಂದು ಕಮೀಟಿ ಮಾಡಿಕೊಂಡು, ಬ್ಯಾರಿಸ್ಟರ ಜಯಕರರನ್ನು ಚೇರಮನ್ನ ಮಾಡಿದ್ದಾರೆ. ಈ ಚೇರಮನ್ನ ಸಾಹೇಬರು ಲಾರ್ಡ ಆಯರ್ವಿನ್ನರನ್ನೂ, ಮಹಾತ್ಮರು, ತಂದೆ ಮಕ್ಕಳಾದ ಪಂಡಿತ ಮೋತಿಲಾಲ ಜವ್ಹೆರಲಾಲ ಇನ್ನು ಬೇಕಾದ ಗೃಹಸ್ಥರನ್ನೂ ಕಂಡು, ರಾಜೀ ಮಾಡಿಸುವ ಕುರಿತು ಸಾರೋದ್ಧಾರ ಅಧಿಕಾರ ಕೊಟ್ಟಿದ್ದಾರೆ.

ಒಬ್ಬ ಹಾಲಂಟಿಯರನ ವೀರಸ್ವರ್ಗಾರೋಹಣ.

——(೦)——

ಮುಂಬಯಿಯಲ್ಲಿ ಶ್ರೀ. ನಾರಾಯಣ ಗೋವಾಳ ಗೌರಿ ಎಂಬ ತರುಣ ವ್ಹಾಲಂಟಿಯರನು ವರ್ಲಿಯ ತುರಂಗದಲ್ಲಿ ಜಡ್ಡಿನಿಂದ ಮಲಗಿ ಕೊನೆಯಲ್ಲಿ ವೀರಸ್ವರ್ಗಾರೋಹಣ ಮಾಡಿದನು. ಈತನ ಅಂತ್ಯಸಂಸ್ಕಾರವು ಕಾಂಗ್ರೆಸದ ಬಹು ದೊಡ್ಡ ಮೆರವಣಿಗೆಯಿಂದ ಮಾಡಲ್ಪಟ್ಟಿತು.

ಕಿತ್ತೂರಿನ ಶ್ರೀ. ಶಾಂತಿನಾಥ ಇಂಗಳೆ ಇವರಿಗೆ ಬೈಲಹೊಂಗಲದ ಮ್ಯಾಜಿಸ್ಟ್ರೇಟರು ನಾಲ್ಕು [illegible]

ನೋಟೀಸು

ಲಿಂಗಪ್ಪಾ ಪಕ್ಕೀರಪ್ಪಾ ನಾಲ್ಕುರವಿ ಸಾ|| ಹಳ್ಳಿಗುಡಿ ತಾಲ್ಕು ಗದಗ ಇವರಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತು ಮಾಡಿದ ಚಿನ್ನವ್ವಾ ಕೋಂ ಗುರುಸಿದ್ದಪ್ಪಾ ನಾಲ್ಕುರವಿ ಈಕೆಯು ನೀನು ತಾರೀಖು ೧೬ ಮಾಹೆ ಮೇ ೧೯೩೦ನೇ ಇಸ್ವಿಯ ದಿವಸ ಧಾರವಾಡ ವಿಜಯ ವರ್ತಮಾನಪತ್ರ ತಾರೀಖು ೨೩ ಮಾಹೆ ಮೇ ೧೯೩೦ನೇ ಸಂಚಿಕೆಯಲ್ಲಿ ಕೊಟ್ಟ ನೋಟೀಸನ್ನು ನೋಡಿತು ಅದರಲ್ಲಿ ನಾನು ನನಗೆ ಮಾನಹಾನಿಕಾರಕ ಸುಳ್ಳು ಮಜಕೂರನ್ನು ಬರೆದು ಪ್ರಸಿದ್ಧ ಮಾಡಿ ನನ್ನ ಅಬರು ಲುಕ್ಸಾನ ಮಾಡಿರುತ್ತೀದಿ ನೀನು ಬರೆದ ಮಜಕೂರು ಅಗದೀ ಸುಳ್ಳು ಇರುತ್ತದೆ ನಾನು ಸಿಂಗಪ್ಪಾ ಅಂಬುವ ಹುಡುಗನನ್ನು ನನ್ನ ಜ್ಯಾತಿ ಧರ್ಮ ರಿವಾಜ ಪ್ರಕಾರ ದತ್ತಕ ತೆಗೆದುಕೊಂಡಿರುತ್ತೇನೆ ಮತ್ತು ನನ್ನ ಗಂಡನ ಸ್ಥಾವರ ವ ಜಂಗಮ ಆಸ್ತಿ ನನ್ನ ತಾಬಾದಲ್ಲಿರುತ್ತದೆ ನಿನ್ನ ತಾಬಾದಲ್ಲಿ ಎಂದೂ ಇಲ್ಲಾ ಸುಳ್ಳು ಸಾಧಣೂಕಿ ದಸಿಂದ ಬರೆದಿರುತ್ತೀದಿ ನೋಟೀಸಿನಲ್ಲಿ ದಾಗೀನಿಗಳ ಬಾಬತ ಬರೆದ ಮಜಕೂರು ಸಹ ಖೋಟಿ ಇರುತ್ತದೆ ಬುದ್ಧ್ಯಾಪೂರ್ವಕ ನನ್ನ ಅಬರು ಲುಕ್ಸಾನ ಮಾಡುವ ಲೇಖನ್ನು ಬರೆದ ಬಗ್ಗೆ ವ ಪ್ರಸಿದ್ಧ ಮಾಡಿದ ಬಗ್ಗೆ ನಿನ್ನ ಮೇಲೆ ರೀತಿ ಪ್ರಕಾರ ಫವಜದಾರಿ ವ ದಿವಾಣಿ ಖಟ್ಲೆ ಮಾಡುತ್ತೇನೆ ತಿಳಿಯೋದು. ಅಂತಾ ಕೊಟ್ಟ ನೋಟೀಸು

ತಾರೀಖು ೧೧-೭-೧೯೩೦ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಚಿನ್ನವ್ವಾ ಕೋಂ ಗುರುಸಿದ್ದಪ್ಪಾ ಸಿಂಗಪ್ಪಾ ನಾಲ್ಕುರವಿ ಸಾ|| ಹಳ್ಳಿಗುಡಿ ಈಕೆ ಕೈದು ಅದೆ.

ನೋಟೀಸು

ದುಂಡಾ ತಂದಿ ಸಂಗಪ್ಪಾ ಟೊಣ್ಣಿ ಸಾಕೀನ ಸಂಪಗಾವ ಈತನಿಗೆ-

ಚನ್ನಬಸವ್ವಾ ಕೋಮ ದುಂಡಾ ಟೊಣ್ಣಿ ಹಾಲಿವಸ್ತಿ ದೊಡ್ಡವಾಡ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದವಿಯ ಗಂಡನಿದ್ದು, ನನ್ನನ್ನು ಬಿಟ್ಟು ಅಜಮಾಸು ನಾಲ್ಕು ವರ್ಷವಾಯಿತು ಅಜಮಾಸು ೧೧ ದಿವಸಗಳ ಹಿಂದೆ ನನ್ನ ಮಾವಾ ತೀರಿಕೊಂಡನು ಮಾವ ತೀರಿಕೊಂಡ ವರ್ತಮಾನ ಕೇಳಿ ನಾನು ಸಂಪಗಾವಿಗೆ ಬಂದೆನು ಆಗ ನೀವು ನನ್ನ ಮೇಲೆ ಬಲಾತ್ಕಾರ ಮಾಡಿ, ನನ್ನ ಎಡಗೈ ಹಿಡಿದು, ನನ್ನ ಎಡಗೈ ಹೆಬ್ಬಟ್ಟಿನ ಗುರ್ತು ತಕ್ಕೊಂಡಿ ಇದಕ್ಕೆ ವೀರಭದ್ರಪ್ಪ ಬಾಗೇಗಾಡಿ ಈತನು ಸಾಮೀಲು ಆಗಿದ್ದನು ನೀವು ಯಾವ ಕಾರಣದಿಂದ ಬಲಾತ್ಕಾರದಿಂದ ಗುರ್ತು ತಕ್ಕೊಂಡಿರೆಂಬದು ಗೊತ್ತಾಗಿಲ್ಲ ನನಗೆ ನೀವು ಹೇಳಿಲ್ಲ ಗುರ್ತು ತಕ್ಕೊಂಡವರೇ ನನ್ನ ತವರ ಮನೆಗೆ ಅಟ್ಟಿದಿರಿ ಗುರ್ತು ತಕ್ಕೊಂಡ ಕಾರಣ ತಿಳಿಯದ್ದರಿಂದ ಈ ನೋಟೀಸು ಕೊಡುವ ಪ್ರಸಂಗಬಿತ್ತು ಸದರ ಗುರ್ತು ತಕ್ಕೊಂಡ ಕಾಗದ ರದ್ದಬಾತಲ ಇದ್ದು, ಇದರಲ್ಲಿ ನೀವು ಏನಾದರ ನಿಮ್ಮ ಮನಸಿಗೆ ಬೇಕಾದ ಮಜಕೂರು ಬರಕೊಂಡಿದ್ದರೆ ಅದು ರದ್ದು ಇರುತ್ತದೆ. ಅದಕ್ಕೆ ನಾನು ಯಾವ ರೀತಿಯಿಂದಲೂ ಬಾಂಧಾಯಿಸಲಾರೆನು ಅಂತಾ ಕೊಟ್ಟ ನೋಟೀಸು

ತಾ|| ೧೬ ಜುಲೈ ೧೯೩೦ ನೇ ಇಸವಿ

ಚನಬಸವಾ ಕೋಂ ದುಂಡಪ್ಪಾ ಟೊಣ್ಣಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

॥ ಸಿರಿಗನ್ನಡಂ ಗೆಲ್ಗೆ ॥

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡ್ಡಿ
ಮತ್ತು ———— ಧಾರವಾಡ
ಕಾಮನಕಟ್ಟಿ,

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು ಬಾಂಡಾರದ ಬೆಲೆಪಟ್ಟಿ ಬೇಕಾದವರು ಅರ್ಧ ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಪಡೆಯಬೇಕು ವ್ಯಾಪಾರಕ್ಕೆ ರಿಯಾಯತಿಯುಂಟು, ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸ. ೧,೨. ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೦-೦
೪. ಕರ್ನಾಟಕ ಸಿಂಹಾಸನ ಸ್ಥಾಪನೆ	೧- ೦ ೦
೫. ಚರಿತ್ರ ಸಂಗ್ರಹ ಭಾ. ೧.	೧- ೯-೦
೬. ಆಳಸಿಂಗಾಚಾರ್ಯರ ರಾಮಾಯಣ ೯ ಸಂಪುಟಗಳು	೧೪- ೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೧-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೯- ೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ [illegible] ೧ಕ್ಕೆ	೧- ೮-೦
೧೦. ಲ್ಯಾಂಡ ರೆವಿನ್ಯೂ ಕೋಡು	೨-೧೧-೦
೧೧. ಗ್ರಾಮ ನಮೂನೆ ತಿಳುವ ಪುಸ್ತಕ	೨-೧೩-೦
೧೨. ಸ್ತ್ರೀಧರ್ಮನೀತಿ, ಗೃಹಕಾರ್ಯ ನಿರ್ವಾಹ ಪ್ರತಿ ೧ಕ್ಕೆ	೦-೧೦-೦
೧೩. ಅನೂಪನೀತಿ ಕಥೆ ಭಾ. ೧, ೨,	೨- ೯-೦
೧೪. ಕೀರ್ತನ ಕಂಠಾಭರಣ	೧-೧೦-೦

ಶ್ರೀ. ಹಾಬ ರಾಮಚಂದ್ರ ದೇಶಕಾಂತಿ ಬಿ. ಎ.

ಜಾಹಿರ ನೋಟೀಸು

[illegible] ಸಂದರೆ-

[illegible] ಸಾತಿ ಸಾಗ [illegible] ಹದ್ದಿ ಪ [illegible]

[illegible] (೬) ಪೂಟಿನ [illegible]

[illegible] ಹಲಗಿಗಳು ವ ಜಂತಿ ವ [illegible]

ಇದರ ಹೊರತಾಗಿ [illegible] ತಮ್ಮ [illegible] ದೊರೆತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವವರಿಗೆ ತಯಾರಿ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧] ಧಾರವಾಡ ಶುಕ್ರವಾರ ತಾರೀಖು ೧೮ ನೇ ಜುಲೈ ೧೯೩೦ (ಸಂಚಿಕೆ ೧೫೯

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ

ಕೋ| ಆಪರೇಟಿವ [illegible] ಪ್ರಕಾರ [illegible]

ಕರ್ನಾಟಕದಲ್ಲಿ [illegible] ಮಾಡ

[illegible] ಹುಂಡಿ [illegible] ವಿಮಾ [illegible]

ವಿಶೇಷ ಸಂಗತಿಗಳನ್ನು [illegible] ದವರಿಂದ ತಿಳಕೊಳ್ಳಬೇಕು.

[illegible]

[illegible]

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಠೇವಿನಿಂದ ಹಣವನ್ನು [illegible] ಇಟ್ಟುಕೊಳ್ಳುತ್ತಾರೆ. ಬಡ್ಡಿಯನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗಿನೆಗಳನು ಮತ್ತು [illegible] ಇಟ್ಟುಕೊಂಡು [illegible] ತಿಂಗಳಿಗೆ ಹನ್ನೆರಡು ಆಗುತ್ತಿದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೨-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್

(ಇಂಗ್ಲಂಡದಲ್ಲಿ ಇನ್ಕಾರಪೊರೇಟೆಡ್ ಮಾಡಿದ್ದು.)

ನೋಟೀಸು

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿಯ ಮಜಕೂರವರು ೧೯೩೦ನೇ ಇಸವಿ ಆಗಷ್ಟ ತಿಂಗಳ ೧೨ನೇ ತಾರೀಖಿನ ಮಧ್ಯಾನ್ಹ ಮೂರು ಗಂಟೆಯ ತನಕ [illegible] ತನ್ನ ರೇಲ್ವೆ [illegible] ಸಾಮಾನುಗಳು ಅಂದರೆ ಬೇರೆ ಬೇರೆ ಧಾತುಗಳ ತುಂಡುಗಳು, [illegible] ಉಕ್ಕಿನ ಸಾಮಾನುಗಳು, [illegible] ಯಂತ್ರ ಸಾಮಗ್ರಿಗಳು, ಗಡಿಯಾರ ಮತ್ತು ಗಡಿಯಾರಗಳ ಸಾಮಾನುಗಳು, [illegible] ಸ್ಪ್ರಿಂಗ ತುಂಡುಗಳು ಉಕ್ಕಿನ ಸ್ಪ್ರಿಂಗಗಳು, [illegible] ರೇಲುಗಳು, [illegible] ತುಂಡುಗಳು. ಕಲ್ಲು ಒಡೆಯುವ ಎಂಟು ಟನ್ನಿನ ಯಂತ್ರ [illegible] ಮುಂತಾದವುಗಳ ದೇಸಿಯಿಂದ ಟೆಂಡರ ಕರೆಯುವರು.

ಮಾರಾಟಕ್ಕೆ ಸಿದ್ಧವಾಗಿರುವ ಸಾಮಾನಗಳ ಯಾದಿ ಸಹಿತವಾಗಿ ಟೆಂಡರ ಫಾರ್ಮ ಐದು ರೂಪಾಯಿ ಕೊಟ್ಟು, ಎಮ್. ಎಸ್. ಎಮ್. ರೇಲ್ವೆ ಪೆರಂಬೂರದಲ್ಲಿಯ ಕಂಟ್ರೋಲರ ಆಫ ಸ್ಟೋರ್ಸ ಇವರಿಂದ ಪಡೆಯಬಹುದು. ಇದರ ರಕಮು ತಿರುಗಿ ಬಾರದು.

ಟೆಂಡರ ಫಾರ್ಮುಗಳು [illegible] ಪೋಸ್ಟಿನಿಂದ ದೊರೆಯಲಾರವು.

ಟೆಂಡರ ಫಾರ್ಮಿನ ಮೇಲೆ "ಸ್ಕ್ರ್ಯಾಪ್ [illegible] ದೇಸಿಯಿಂದ ಟೆಂಡರ ಎಂದ ವಿಳಾಸ ಬರೆದು ಕಳಿಸತಕ್ಕದ್ದು, ಇದರ [illegible] ಟೆಂಡರ ಫಾರ್ಮಿನ ಕೂಡ [illegible].

A. C. TURNER.
Controller of Stores.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೇಟ್.

ನಾವು ಪೌರಾತ್ಯ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲಿಯುವ ಸುವ್ಯವಸ್ಥಿತ ಶಿಕ್ಷಣ ಕೊಡುತ್ತೇವೆ. ಕೇವಲ ಕಟಿಂಗ ಮಾತ್ರ [illegible] ೨ ತಿಂಗಳ ಮತ್ತು ಟೇಲರಿಂಗ ಮಾತ್ರ [illegible] ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಕೇವಲ ಕಟಿಂಗ ಫೀ [illegible] ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ. ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ಮರ್ಜಿಯ ಪ್ರಕಾರ ತಿಂಗಳಾ [illegible] ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಸಲುವಾಗಿ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ವಿಜಯ.

ಶಾಲಿಶಕೆ ವಿಕ್ರಮ ವರ್ಷ ೧೮೫೨ ಆಷಾಢ ವದ್ಯ ೮

ಪಾರ್ಲಮೆಂಟ ಸಭೆಯಲ್ಲಿಯ ಮೆಂಬರರು ಗಾಂಧೀ ಟೊಪ್ಪಿಗೆ ಹಾಕಿದರು.

* * *

ಸಭೆಯು ತುಂಬ ಆನಂದ ಮತ್ತು ಚಪ್ಪಾಳೆ.

——(೦)——

ಮದ್ರಾಸ ಇಲಾಖೆಯಲ್ಲಿ ಗುಂಟೂರಿನ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ ಸ್ಟ್ಯುವರ್ಟಸಾಹೇಬರು ಮುಸಲೋನಿಯ ಚಿಕ್ಕ ಅವತಾರವಾಗಿರುತ್ತಾರೆಂಬುದನ್ನು ಈ ಮೊದಲು ಬರೆದಿದ್ದೇವೆ. ಇವರು ಗಾಂಧೀ ಟೊಪ್ಪಿಗೆ ಹಾಕಬಾರದೆಂದು ಜಾಹೀರನಾಮೆ ತೆಗೆದ ಬಳಿಕ, ಗಾಂಧೀ ಟೊಪ್ಪಿಗೆ ಹಾಕಿದವರನ್ನು ತುರಂಗಕ್ಕೆ ಕಳಿಸಿದರು. ತುರಂಗಕ್ಕೆ ಹಾಕುವದು ಸಾಕಾಗಿ, ಪೋಲಿಸರಿಂದ ಅವರಿಗೆ ದೊಣ್ಣೆಯ ಪ್ರಸಾದ ಕೊಡಿಸಿದರು. ಅಸಾಮದಲ್ಲಿಯು ಒಬ್ಬ ಮ್ಯಾಜಿಸ್ಟ್ರೇಟನು ಇವರನ್ನು ತಮ್ಮ [illegible] ಸುದ್ದಿಸಿದರು. ಸೊಲ್ಲಾಪೂರದ ಲಷ್ಕರೀ ಕಾಯದೆಯ ಕೋಲಾಹಲವಂತೂ ವಾಚಕರಿಗೆ ಗೊತ್ತುಂಟು. ಆದರೂ ಇಲಾಖೆ ಮತ್ತು ವರಿಷ್ಠ ಸರಕಾರದವರು ಕಣ್ಣು ಮುಚ್ಚಿಕೊಂಡೇ ಕೂತರು. ಮದ್ರಾಸ ಸರಕಾರದವರು ಜಗತ್ತಿನಲ್ಲಿ ಅಪಹಾಸ್ಯವಾಗುವಂತೆ, ಸ್ಟ್ಯುವರ್ಟಸಾಹೇಬರ ಸಮರ್ಥನ ಮಾಡಿದ್ದಾರೆ. ಹಿಂದುಸ್ಥಾನದಲ್ಲಿ ಈ ಪ್ರಕಾರ ಅನ್ಯಾಯದ ಕಮರ್ದನೆ ನಡೆದ ಬಗ್ಗೆ ಪಾರ್ಲಮೆಂಟ ಸಭೆಯಲ್ಲಿ ಸ್ವತಂತ್ರ ಕೂಲಿಕಾರ ಸಂಘದ ಮೆಂಬರರು ಪ್ರಶ್ನ ಕೇಳಿದರು. ಮುಂದೆ ಕೊಟ್ಟಂತೆ ಪ್ರಶ್ನೋತ್ತರ ನಡೆಯಿತು.

ಮಿ ಬ್ರಾಕವೇ- ಹಿಂದುಸ್ಥಾನದಲ್ಲಿ ಗಾಂಧಿ ಟೊಪ್ಪಿಗೆ ಹಾಕುವದಕ್ಕೆ ಸರಕಾರವು ಪ್ರತಿಬಂಧ ಮಾಡಿರುತ್ತದೇನು ?

ಭಾರತ ಮಂತ್ರಿ- ವರ್ತಮಾನಪತ್ರಗಳಲ್ಲಿ ಇಂಥ ಸುದ್ದಿಗಳು ಬಂದಿರುತ್ತವೆ. ಇದರ ಹೊರ್ತು ನನಗೆ ಸ್ವತಂತ್ರವಾಗಿ ಏನೂ ತಿಳಿದಿಲ್ಲ. ಸೊಲ್ಲಾಪೂರದಲ್ಲಿ ಮಾತ್ರ ಲಷ್ಕರೀ ಕಾ.ವಿ.ನ ನೆಲೆಯಲ್ಲಿ ಕಾಂಗ್ರೆಸ ಚಿನ್ಹಧಾರಕರಿಗೆ ಪ್ರತಿಬಂಧ ಮಾಡಲ್ಪಟ್ಟಿತ್ತು.

ಮಿ ಬ್ರಾಕವೇ- ಗುಂಟೂರಿನ ಡಿ|| ಮ್ಯಾಜಿಸ್ಟ್ರೇಟನು ಪ್ರತಿಬಂಧದ ಹುಕುಮು ತೆಗೆದಿದ್ದು ನಿಮಗೆ ಗೊತ್ತುಂಟೋ ?

ಭಾರತ ಮಂತ್ರಿ- ಆ ಪ್ರಕಾರ ವರ್ತಮಾನ ಪತ್ರದಲ್ಲಿ ಓದಿದ್ದೇನೆ. ಹೆಚ್ಚಿಗೆ ಗೊತ್ತಿಲ್ಲ.

ಮಿ ಬ್ರಾಕವೇ- ಇದು ನೋಡಿರಿ ಆ ಮ್ಯಾಜಿಸ್ಟ್ರೇಟರು ತೆಗೆದ ಹುಕುಮಿನ ನಕಲಪ್ರತಿಯು! ಒಂದು ಸಾದಾ ಗಾಂಧೀ ಟೊಪ್ಪಿಗೆ ಹಾಕಿದರೆ- ಹಿಂದುಸ್ಥಾನದಲ್ಲಿ ಬ್ರಿಟಿಶ ರಾಜ್ಯಕ್ಕೆ ಧಕ್ಕೆ ಬರುತ್ತದೆಂದು ನೀವು ತಿಳಿಯುತ್ತೀರಾ ?

ಹೀಗೆ ಅಂದವರೇ- ಮಿ ಬ್ರಾಕವೆಸಾಹೇಬರು ತಮ್ಮ ಕಿಸೆಯಲ್ಲಿಯ ಗಾಂಧೀ ಟೊಪ್ಪಿಗೆಯನ್ನು ಹೊರಗೆ ತೆಗೆದು ತೋರಿಸಲು- ಅನೇಕ ಮೆಂಬರರು ಟೊಪ್ಪಿಗೆ ಹಾಕಿರಿ, ಟೊಪ್ಪಿಗೆ ಹಾಕಿರೆಂದು ಸಂತೋಷದ ಗರ್ಜನೆ ಮಾಡಿದರು. ಕೆಲವರು ವಿರೋಧವನ್ನು ಮಾಡಿದರು. ಈ ಕಲಕಲಿಕಿನಲ್ಲಿ ಮಿ ಬ್ರಾಕವೇಸಾಹೇಬರು ತಮ್ಮ ತಲೆಯ ಮೇಲೆ ಟೊಪ್ಪಿಗೆ ಹಾಕಿದರು. ಆಗಂತೂ ಹಸ್ತತಾಡನದಿಂದ ಸಭೆಯು ದಣಾಣಿಸಿ ಹೋಯಿತು.

ಮಿ. ಧಟಲ- ಗಾಂಧೀ ಟೊಪ್ಪಿಗೆಯ ವಿಷಯವಾಗಿದ್ದ ಪ್ರತಿಬಂಧದ ಹುಕುಮನ್ನು ತೆಗೆದು ಹಾಕಲು ಹಿಂದುಸ್ಥಾನ ಸರಕಾರಕ್ಕೆ ತಿಳಿಸುವಿರಾ ?

ಭಾರತಮಂತ್ರಿಯವರು ಈ ಪ್ರಶ್ನಕ್ಕೆ ಉತ್ತರವನ್ನೇ ಕೊಡಲಿಲ್ಲ. ಸಾಹೇಬರು ಅಂತರಂಗದಲ್ಲಿ ಪ್ರತಿಬಂಧ ಮಾಡಬೇಕೆಂಬುವ ಹುಕುಮು ಕೊಡಿಸಿದ್ದರೆ- ಗಾಂಧೀಟೊಪ್ಪಿಗೆಯು ಮೇಲೆ ಹಿಂದುಸ್ಥಾನದ ಕುಂಬಸ್ಥಲದ ಕೊಡೆಯು ನೇರವಾಗಿ, ಅದಕ್ಕಾಗಿಯೂ ಒಂದು ಅರ್ಥವನ್ನು ಹೊಂದಬಹುದು.

ಡಿಪ್ಯುಟಿ ಪೋಲಿಸ ಸಾಹೇಬರನ್ನು ಕ್ಲಬ್ಬಿನಿಂದ ಹೊರಗೆ ಹಾಕಿದರು.

——(೦)——

ಧಾರಾಸಾನದ ಉಪ್ಪಿನ ಸತ್ಯಾಗ್ರಹದಲ್ಲಿ ಲಾಠೀ ಪ್ರಯೋಗದಲ್ಲಿ ಹೆಸರಾಗಿ, ಮಾವನ ಮನೆಗೆ ಸಹ ಬಹಿಷ್ಕಾರ ಹೊಂದಿದ್ದ ಅಂತಿಯಾ ನಾಮದ ಪಾರ್ಸೀ ಡೆಪ್ಯುಟಿ ಪೋಲೀಸಸಾಹೇಬರು ಅಹಮುದಾಬಾದಿನಲ್ಲಿ ಗುಜರಾಥ ಕ್ಲಬ್ಬಿನ ಮೆಂಬರರಿದ್ದರು. ಇದರಲ್ಲಿ ಕಾಮದಾರರೂ, ವಕೀಲರೂ, ಸಾವುಕಾರರೂ ಮೆಂಬರರಾಗಿದ್ದಾರೆ. ಇಂಥ ಪ್ರತಿಷ್ಠಿತ ಜನರ ಕ್ಲಬ್ಬಿನಲ್ಲಿ ಅಂತಿಯಾ ಮಹಾನುಭಾವರ ವರ್ತನದ ವಿಚಾರಣೆ ಹೂಡಿ, ಇವರನ್ನು ಕ್ಲಬ್ಬಿನಿಂದ ಹೊರಗೆ ಹಾಕಬೇಕೆಂತಲೂ, ಕ್ಲಬ್ಬಿನ ಮೇಲೆ ರಾಷ್ಟ್ರೀಯ ನಿಶಾನೆ ಏರಿಸಬೇಕೆಂತಲೂ ಠರಾವು ಪಾಸಾಯಿತು.

ಸೊಲ್ಲಾಪೂರದ ಕೊಲೆಯ ಅಪೀಲಿನಲ್ಲಿ ನ್ಯಾಯಮೂರ್ತಿ ಮಡಗಾಂವಕರರ ತೀರ್ಪು.

—(೦)—

ಈ ಪ್ರಕರಣದಲ್ಲಿ ಎರಡು ಪ್ರಕಾರದ ಸಾಕ್ಷಿದಾರರಿದ್ದಾರೆ. ಒಬ್ಬರು ಪೋಲೀಸರು; ಇನ್ನೊಬ್ಬರು ಜನರು. ಕೊಲೆಯಾದ ದಿವಸ ಪೋಲೀಸರು ಆರೋಪಿಗಳ ಹೆಸರನ್ನು ಮ್ಯಾಜಿಸ್ಟ್ರೇಟರಿಗೆ ತಿಳಿಸಲಿಲ್ಲ. ಈ ಪೋಲಿಸ ಸಾಕ್ಷಿದಾರರಿಗೆ ಅಂದು ಸ್ಟೇಶನದಲ್ಲಿ ಮಾತ್ರ ಭೆಟ್ಟಿಯಾಗಿತ್ತು. ಆ ದಿನ ನಡೆದ ಎಲ್ಲ ಸಂಗತಿಗಳನ್ನು ಹೇಳುವಾಗ ಆರೋಪಿಗಳ ಹೆಸರು ಮಾತ್ರ ಹೇಳಿಲ್ಲ. ಹೆಸರು ಹೇಳಲಿಕ್ಕೆ ಮರೆತರೆಂಬುದು ಶಕ್ಯವಿಲ್ಲ. ಆರೋಪಿಗಳು ಊರೊಳಗಿನ ಸಾಮಾನ್ಯ ಜನರಲ್ಲ. ಪೋಲೀಸರಿಗೆ ಗೊತ್ತಿದ್ದಂಥ ಪ್ರಮುಖ ಜನರೆ ಆಗಿದ್ದಾರೆ. ಹೆದರಿಕೊಂಡು ಇವರ ಹೆಸರು ಹೇಳಲಿಲ್ಲೆಂಬುದು ನನಗಂತೂ ಸಂದೇಹವಿಲ್ಲ. ಊರ ಸಾಕ್ಷಿದಾರರು ಅಪರಾಧ ಸ್ಥಳದಿಂದ ಒಂದೆರಡು ಮನೆಗಳನ್ನು ದಾಟಿ, ಮನೆಯ ಮೇಲಂತಸ್ತಿನ ಮೇಲೆ ನಿಂತು ನೋಡಿದವರಾಗಿದ್ದಾರೆ. ಇದು ಸಾಕ್ಷಿ ಪುರಾವೆಗೆ ಧಕ್ಕೆ ಹಾಕಿದಂಥಾದ್ದು. ಈ ಮೂವರು ಸಾಕ್ಷಿದಾರರು ಸಾಧಾರಣ ದರ್ಜೆಯವರಿದ್ದಾರೆ. ಪ್ರತಿಷ್ಠಿತರಾಗಿರುವದಿಲ್ಲ. ಪೋಲಿಸರಿಗೆ ಇವರ ಹೆಸರು ಹೇಗೆ ತಿಳಿಯಿತೆಂಬುದು ಗೊತ್ತಾಗುವದಿಲ್ಲ. ಇವರ ಮೇಲೆ ಲಷ್ಕರೀ ಕಾಯದೆಯ ಭಯದ ಪರಿಣಾಮವಾಗಿರಬೇಕು. ಸಾಕ್ಷಿದಾರರ ತಪಾಸಣೆಯಾಗುವ ಮುಂಚಿತವಾಗಿಯೇ ಆರೋಪಿಗಳಿಗೆ ಎರಡು ವರ್ಷ ಸಕ್ತ ಶಿಕ್ಷೆ ಮತ್ತು ಎರಡು ಸಾವಿರ ರೂಪಾಯಿ ದಂಡವಾಗಿತ್ತು. ಊರೊಳಗಿಂದ ಯಾವನೊಬ್ಬನನ್ನು ಹಿಡತಂದು, ಅಪರಾಧವು ತನಗೆ ಗೊತ್ತುಂಟೆಂದು ಅವನಿಂದ ಕಬೂಲ ಮಾಡಿಸುವಂಥ ಪರಿಸ್ಥಿತಿಯಲ್ಲಿ ಸಾಕ್ಷಿದಾರರಿಗೆ ಆರೋಪಿಗಳ ಹೆಸರು ಗೊತ್ತಿಲ್ಲೆಂದು ಹೇಳುವಂಥವನು ಒಳ್ಳೇ ಧೈರ್ಯಸ್ಥನಿರಬೇಕು. ಆರೋಪಿಗಳು ಪೋಲಿಸ ಚಾಕಿಯಲ್ಲಿ ಹೋದರೆಂದು ಯಾವ ಸಾಕ್ಷಿಯಿಂದಲೂ ಸಿದ್ಧವಾಗುವದಿಲ್ಲ. ಆದರೆ ಮಂಗಳವಾರದ ಚಾಕಿಯ ಕಡೆಗೆ ಹೋದವರಲ್ಲಿ ಧನಶೆಟ್ಟಿಯು ಇದ್ದನು. ಆರೋಪಿ ಶಾಬದಾನು ಮುಸಲಮಾನ ಪೋಲಿಸ ನಾಯಕನ ಮೇಲೆ ಕಲ್ಲನ್ನು ಉಗ್ಗಿ, [illegible] ಉರಿಹಚ್ಚಿನೆಂಬದು ನನಗೆ ತಕ್ಕ ತೋರುವದಿಲ್ಲ. ಶಿಂದೆ ಮತ್ತು ಕುರಬಾನ ಹುಸೇನ. ಈ ಗುಂಪಿನಲ್ಲಿದ್ದರೆಂಬದು ಸಂಶಯಾಸ್ಪದವಾಗಿದೆ. ಅದ್ದರಿಂದ ಈ ಮೂವರು ಆರೋಪಿಗಳಿಗೆ ಸಂಶಯದ ಫಾಯದೆ ಕೊಟ್ಟು, ಅವರ ಶಿಕ್ಷೆ ರದ್ದು ಮಾಡು

ತ್ತೇನೆ. ಧನಶೆಟ್ಟಿಯು ಆರೋಪಿತನಾಗಿದ್ದು, ಆತನ ಶಿಕ್ಷೆಯನ್ನು ಕಾಯಮು ಮಾಡುತ್ತೇನೆ.

ಬೆಳಗಾವಿಯ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಏರಿಸಿದರು.

—(೦)—

ಬೆಳಗಾವಿಯ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆಯನ್ನೇರಿಸಬೇಕೆಂಬ ಠರಾವು ಏಪ್ರಿಲ ತಿಂಗಳಲ್ಲಿಯೇ [illegible] ಆದರೆ ಇದಕ್ಕಾಗಿ ಸ್ಪೆಶಲ್ ಜನರಲ್ ಮೀಟಿಂಗ ಕರೆಯಬೇಕೆಂದು ಮೆಂಬರರು ರಿಕ್ವಿಜಿಶನದ ಅರ್ಜಿಯನ್ನು ಕಳಿಸಿದರು. ಅದರಂತೆ ಈ [illegible] ಹೋದ ಸೋಮವಾರದ ತನಕ ಮಧ್ಯಾಹ್ನ [illegible] ಗಂಟೆ [illegible] ಬಿದ್ದಿತ್ತು. ಈ ಸೋಮವಾರ [illegible] ವಿಷಯ ಹೊರಟ ಕೂಡಲೆ, ಮೆಸರ್ಸ ಮುಜುಮದಾರ ಮತ್ತು ಭಾತಖಂಡೆಯವರು ಅಧ್ಯಕ್ಷರಾದ ಶ್ರೀ ಪೋತದಾರರ ಸಮಾಚಾರ ತಕ್ಕೊಂಡರು. ಸಭೆಗೆ ೨೧ ಜನ ಮೆಂಬರರು ಬಂದಿದ್ದರು. ಇವರಲ್ಲಿ ೧೫ ಜನರು ಅನುಕೂಲ ಮತ ಕೊಟ್ಟರು. ಮೆಸರ್ಸ ಪವಾರ, ಜಮಾಲಾಬ್ದೀನ ಸೌದಾಗರ ಮತ್ತು ಪಾಪಣ್ಣಾ ಜಾಧವ ಇವರು ವಿರುದ್ಧ ಮತ ಕೊಟ್ಟರು. ಮೆಸರ್ಸ ಭೋಸಲೆ, ಕಾರಲಕರ ಮತ್ತು ಅಹಮದ ಫೋಂಡ ಕ್ರಿಯಾ ತಟಸ್ಥರಾದರು. ಬಹುಮತದಿಂದ ಠರಾವು ಪಾಸಾದ ಕೂಡಲೆ, ಅಧ್ಯಕ್ಷ ಶ್ರೀ. ಪೋತದಾರ ಮತ್ತು ಉಪಾಧ್ಯಕ್ಷ ಶ್ರೀ. ಬಂಕಲೆಯವರಿಂದ ಒಂದೊಂದು ರಾಷ್ಟ್ರೀಯ ನಿಶಾನೆ ಏರಿಸಲ್ಪಟ್ಟಿತು. ಈ ಸಮಾರಂಭ ನೋಡಲು ಸ್ತ್ರೀಪುರುಷರ ಪ್ರಚಂಡ ಜನಸಮುದಾಯ ಕೂಡಿತ್ತು.

ಕಮೀಟಿಗೆ ಹೋಗದೆ ಗೈರಹಾಜರ ಇದ್ದಂಥ ಮೆಂಬರರು.

ಶ್ರೀ ಜಕಾತೀ, ಶ್ರೀ. ಶಲ್ಡಾಲಕರ, ದೇಸಾಯಿ, ಭಾವುಸಾಹೇಬ ಬಿಲಗೋಳ, ಶ್ರೀಮತಿ ರಂಗುಬಾಯಿ ಭೋಸಲೆ, ಸುಂಠಣಕರ, ಪ್ರೊ. [illegible] ಆಗಾ ಮಹಮದಗೌಸ ಮತ್ತು ಸಾವಂತ (ಇವರು ಊರಲ್ಲಿರಲಿಲ್ಲ.)

೨೦ನೇ ತಾರೀಖಿನ ದಿನ ಡಾ. ಬಿ. ಕಂಬಳಿಯವರು ಹುಬ್ಬಳ್ಳಿಯಲ್ಲಿ ಕಾಲಾವಧಿ ತಕ್ಕೊಂಡಿದ್ದಾರೆ. ಬೆಳಗಾವಿಯಲ್ಲಿ ನಡೆದ ಪ್ರಶಂಸಾರ್ಹವಾದ ರೀತಿಯನ್ನು ಅನುಸರಿಸಿ, ತಮ್ಮ ರಾಷ್ಟ್ರೀಯತ್ವವನ್ನು ವ್ಯಕ್ತಗೊಳಿಸುವರೆಂದು ಆಶಿಸುತ್ತೇವೆ.

ಈ. ಮೊದಲು ಪ್ರಸಿದ್ಧವಾದ ಮೇರೆಗೆ [illegible] ವರ ರಾಜಕೀಯ ಪರಿಷತ್ತು ಪುಣೇಯಲ್ಲಿ ಆಗಸ್ಟ ತಿಂಗಳ ಹತ್ತನೆಯ ತಾರೀಖಿನ ದಿವಸ ಕೂಡುವದು.

ಕಿತ್ತೂರ ಶಾಲೆಯ ವಿದ್ಯಾರ್ಥಿಗಳ ಸತ್ಯಾಗ್ರಹ.

—(೦)—

ಗಾಂಧೀ ಫೋಟೋ ಇಟ್ಟ ಹೊರ್ತು ಶಾಲೆಗೆ ಬರುವದಿಲ್ಲ.

—(೦)—

೧೫ನೇ ತಾರೀಖು ಮಂಗಳವಾರ ದಿವಸ ಕಿತ್ತೂರದಲ್ಲಿರುವ ಪ್ರಾಥಮಿಕ ಶಾಲೆಯ ಚಿಕ್ಕ ದೊಡ್ಡ ಹುಡುಗರು ಶಾಲೆಯಲ್ಲಿ ಗಾಂಧೀ ಫೋಟೋ ಇಡಬೇಕು; ಫೋಟೋ ಇಡದಿದ್ದರೆ ಶಾಲೆಗೆ ಬರುವದಿಲ್ಲೆಂದು ಹರತಾಳ ಮಾಡಿ, ಊರ ತುಂಬ ಮೆರವಣಿಗೆ ತೆಗೆದರು. ಫೋಟೋ ಇಡದಿದ್ದರೆ ಶಾಲೆಗೇ ಬಹಿಷ್ಕಾರ ಹಾಕತಕ್ಕವರಿದ್ದಾರೆ.

ವನಗಾವಲದ ಕಾಯದೆಭಂಗ.

—(೦)—

೮೦ ಜನ ಗೌಡರ ರಾಜೀನಾಮೆ.

—(೦)—

ನಾಸಿಕ ಜಿಲ್ಲೆಗೆ ಸೇರಿದ ಬಾಗಲಾಣ ತಾಲೂಕಿನಲ್ಲಿ ವನಗಾವಲದ ಕಾಯದೆಭಂಗವು ವಿರಾಟ ಸ್ವರೂಪ ಧಾರಣ ಮಾಡಿದೆ. ಕಾಯದೆಭಂಗದಂತೆ ಸರಕಾರದ ದಸ್ತಗಿರಿಯೂ ಹೆಚ್ಚಿದೆ. ಪ್ರಸಿದ್ಧ ಅಸಹಕಾರಿಯಾದ ಶ್ರೀ. ಸೀತಾರಾಮ ಶಾಸ್ತ್ರಿಯವರಿಗೆ ಆರು ತಿಂಗಳ ಶಿಕ್ಷೆಯಾಯಿತು. ಗುಜರಾಥದ ಗೌಡರಂತೆ ಈ ತಾಲೂಕಿನ ೮೦ ಜನ ಗೌಡರು ಸರಕಾರೀ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ.

ವಿಜಾಪೂರದಲ್ಲಿ ಶಿಂದಿ ಗಿಡ ಕಡಿದುದಕ್ಕೆ ಶಿಕ್ಷೆ

—:*:—

ವಿಜಾಪೂರದಲ್ಲಿ ಶಿಂದಿಗಿಡ ಕಡಿದರೆಂಬ ಆರೋಪದಿಂದ ವ್ಹಾಲಂಟಿಯರ ಕ್ಯಾಪ್ಟನ ದೇಶಪಾಂಡೆ, ನಿಕಮ ಮತ್ತು ಇನ್ನೂ ಮೂವರು ಸ್ವಯಂಸೇವಕರಿಗೆ ಐದೂವರೆ ತಿಂಗಳ ಶಿಕ್ಷೆಯಾಯಿತು. ಗಿಡ ಕಡಿದದ್ದಕ್ಕೆ ಬೆಳಗಾವಿ ಜಿಲ್ಹೆಯಲ್ಲಿ ಅನೇಕರಿಗೆ ಶಿಕ್ಷೆಯಾಗಿದ್ದರೂ, ಆ ಕಡತವೆಲ್ಲಿ ನಿಂತಿತೆ? ಇದೇ ಪ್ರಕಾರ ಕಡತ ನಿಲ್ಲದೆ ಅದಕ್ಕೆ ಹೆಚ್ಚು ಉತ್ತೇಜನ ಮಾತ್ರ ಕೊಟ್ಟಂತಾಯಿತು.

ಹೋದ ವಾರದಲ್ಲಿ ಮುಂಬಯಿಯ ಗವರ್ನರ ಸಾಹೇಬರು ಧಾರವಾಡ ಮತ್ತು ಸಾತಾರೆಗೆ ಬಂದು ಹೋದರು. ನಾಗರಿಕರು ಮನೆಮನೆಗೆ ಕರೀ ನಿಶಾನೆ ಹಚ್ಚಿ, ಊರ ತುಂಬ ಕರೀ ನಿಶಾನೆಯ ಪ್ರಚಂಡ ಮೆರವಣಿಗೆ ತೆಗೆದು ಮತ್ತು ಸಾಹೇಬರು ಬರುವ ದಾರಿಗುಂಟ ಕರೀನಿಶಾನೆ ಹಿಡಕೊಂಡು ನಿಂತು ಶೇಮ್ ಶಬ್ದಗಳಿಂದ ದಬ್ಬಾಳಿಕೆಯನ್ನು ನಿಷೇಧಿಸಿದರು.

ಎಮ್. ಕೆ. ಆಚಾರ್ಯರಿಗೆ ಹೆಂಗಸರ ಬಳೆಗಳ ಬಹುಮಾನ.

—(೦)—

ಸಿಮ್ಲಾದಲ್ಲಿ ಶ್ರೀ. ಎಮ್. ಕೆ. ಆಚಾರ್ಯರವರು ಅಸೆಂಬ್ಲಿಯ ಸಭೆಗೆ ಹೋಗಬಾರದೆಂದು ಅವರ ಬಾಗಿಲದಲ್ಲಿ ಸ್ತ್ರೀಯರು ಪಿಕೆಟಿಂಗ ಮಾಡಿದರು. ಆದರೂ ಆಚಾರ್ಯರು ಹೋದರು. ಇದರ ಮುಯ್ಯವೆಂದು ಯಾರೋ ಸರಕಾರೀ ಲಕೋಟೆಯಲ್ಲಿ ಎರಡು ಬಳೆಗಳನ್ನಿಟ್ಟು ಅದು ಅಸೆಂಬ್ಲಿಯಲ್ಲಿಯೇ ಅವರಿಗೆ ಮುಟ್ಟುವಂತೆ ವ್ಯವಸ್ಥೆ ಮಾಡಿದರು. ಆಚಾರ್ಯರು ಸರಕಾರೀ ಲಕೋಟೆಯೆಂದು, ಏನೋ ಅಗತ್ಯದ ವಿಷಯವಿರಬೇಕೆಂದೂ ಉಬ್ಬಿ ಅದನ್ನು ಒಡೆದು ನೋಡಲು ಎರಡು ಬಳೆಗಳು ಹೊರಟವು. ಎಡಬಲದಲ್ಲಿ ಕೂತ ಮೆಂಬರರು ನೋಡಿ ಬಿದ್ದು ನಕ್ಕರು. ಆಗ ಆಚಾರ್ಯರ ಮೋರೆ ಹೇಗಾಗಿದ್ದೀತು!

ಸಾಯಮನ್ನ ರಿಪೋರ್ಟ ಸುಟ್ಟ ಬಗ್ಗೆ ಬೆಳಗಾವಿಯಲ್ಲಿ ಖಟ್ಲೆ.

—(೦)—

ಬೆಳಗಾವಿಯಲ್ಲಿ ಸಾಯಮನ್ನ ರಿಪೋರ್ಟನ್ನು ಮೆರೆಸಿ, ಶ್ರೀ ಹನುಮಂತದೇವರ ಗುಡಿಯ ಮುಂದೆ ಅದನ್ನು ಸುಟ್ಟರಷ್ಟೇ; ರಿಪೋರ್ಟ ಸುಟ್ಟದ್ದು ಒಂದು ಅಪರಾಧವೆಂದು ಸ್ವಯಂಸೇವಕರಾದ ಶ್ರೀ. ದೇಶಪಾಂಡೆ ಮತ್ತು ಫೇಮಾರಿಯವರ ಮೇಲೆ ಖಟ್ಲೆ ಹಾಕಿದ್ದಾರೆ.

ಮಂತ್ರ ಕುಸು, ಉಗುಳು ಬಹಳ.

—(-:*:-)—

ಉಗುಳಿಗೆ ಭೂರಿ ದಕ್ಷಿಣೆ.

—(೦)—

ಸಾಯಮನ್ನ ರಿಪೋರ್ಟಿನಲ್ಲಿ ಮುದ್ರಣದ ಚಲೋ ಅಕ್ಷರ ಮತ್ತು ಬಾಯ್ಂಡಿಂಗದ ಹೊರ್ತು ತಥ್ಯಾಂಶವೇನೂ ಇರುವದಿಲ್ಲ. ಇಂಥ ರಿಪೋರ್ಟಿಗಾಗಿ ೧೯ ಲಕ್ಷ ೫೦ ಸಾವಿರ ರೂಪಾಯಿ ವೆಚ್ಚಬಂತೆಂದು ಹಿಂದುಸ್ಥಾನ ಸರಕಾರದವರು ಕಬೂಲಿ ಕೊಟ್ಟಿದ್ದಾರೆ? ಇದೊಂದು ಬಿಳೀ ಬ್ರಾಹ್ಮಣರಿಗೆ ಭೂರಿ ದಕ್ಷಿಣೆಯೇ ಸರಿ.

ಫಸ್ಟಕ್ಲಾಸ ಸಬ್ಜಡ್ಜರಾಗಿ ಪೆನಶನ ಪಡೆದಿದ್ದ ಶ್ರೀವಾದಿ ರಾಜರಾವ ಗುತ್ತೀಕರ ಇವರು ಔಂಧಕ್ಕೆ ಹೋಗಿದ್ದರು. ಅಲ್ಲಿ ದೇವಿಯ ಪಾದದ ಮೇಲೆ ತಲೆಯಿಟ್ಟು ಏಳುವಾಗ ಒಮ್ಮಿಂದೊಮ್ಮೆ ಪ್ರಾಣೋತ್ಕ್ರಮಣವಾಯಿತೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ನೋಟೀಸು

ತಿ॥ ಗವಿಗೆವ್ವಾ ಕೋಂ ಸಿಂಗಪ್ಪಾ ಮುಂಶಾ ಸಾ॥ ಸವದತ್ತಿ (ಹಣುಮಗೇರಿ) ಇವರಿಗೆ-

ಕೆಳಗೆ ಸಹಿ ಮಾಡಿದವಳ ಕಡಿಂದಾ ನೋಟೀಸು ಕೊಡುವದುಯೇನಂದರೆ- ನೀನು ನನ್ನ ಖಾಸ ತಾಯಿ ಇದ್ದು ತಾರೀಖು [illegible] ನೇ ಜೂನ ೧೯೩೦ ಇಸ್ವಿ ದಿವಸ ವಿಜಯ ವರ್ತಮಾನಪತ್ರದಲ್ಲಿ ಕೊಟ್ಟ ಖೊಟ್ಟಿ ನೋಟೀಸು ಮುಟ್ಟಿ ಅಭಿಪ್ರಾಯವಾಯಿತು ಅದು ಅಜಿ ಖೊಟ್ಟಿ ಇದ್ದು ನೀನು [illegible] ನನ್ನ ತಂಗಿ ಕರೆವ್ವನ ಮಾತು ಕೇಳಿ ನನಗೆ ತ್ರಾಸು ಕೊಡುವ ಇರಾದೆಯಿಂದ ಕೊಟ್ಟ ನೋಟೀಸು ಇದೆ ನಮ್ಮವ್ವಾ ಅಂದ್ರೆ ನಿನ್ನ ಖಾಸತಾಯಿಯಾದ ಲಕ್ಷ್ಮವ್ವಾ ಇವಳು ನನಗೆ ತನ್ನ ಗಂಡಾ ಫಕೀರಪ್ಪಾ ಈತಾ ತಾನು ಸಾಯುವ ಪೂರ್ವದಲ್ಲಿ ಆಜ್ಞಾ ಮಾಡಿದ ಪ್ರಕಾರ ನನಗೆ ಮೃತ ಫಕೀರಪ್ಪನ ಸ್ವಾರ್ಜಿತ ಆಸ್ತಿ ಅಂದರೆ ಸವದತ್ತಿ ಗ್ರಾಮದಲ್ಲಿ ಇರುವ ಹೊಲಾ ವ ಮನಿ ತಾರೀಖು [illegible] ಅಕ್ಟೋಬರ ೧೯[illegible] ಇಸ್ವಿ ದಿನ ಬಕ್ಷೀಸಪತ್ರ ಬರಕೊಟ್ಟು ನೊಂದಣಿ ಮಾಡಿಸಿ ಆಸ್ತಿ ಸಹಾ ನನ್ನ ತಾಬಾದಲ್ಲಿ ಕೊಟ್ಟಿರುತ್ತಾಳೆ ಆ ಪ್ರಕಾರ ಆ ಲಾಗಾಯತ ಸದ್ರಿ ಆಸ್ತಿ ನಾನೇ ವಹಿವಾಟ ಮಾಡಹತ್ತಿದ್ದು ಸದರಿ ಲಕ್ಷ್ಮವ್ವಗ ಸಹಾ ನಾನೇ ಸಂರಕ್ಷಣೆ ಮಾಡುತ್ತಾ ಇರತೇನೆ ಮೃತ ಫಕೀರಪ್ಪಾ ಈತಾ ನನ್ನ ಖಾಸ ಅಜ್ಜ ಇದ್ದು ನನ್ನ ಮೇಲೆ ವಿಶೇಷ ಕಾಳಜಿ ಇದ್ದ ಕಾರಣಾ ತನ್ನ ಹೆಂಡತಿಗೆ ನನಗೆ ಸಂರಕ್ಷಣ ಮಾಡಲಿಕ್ಕೆ ಹೇಳಿ ತನ್ನ ಸ್ವಾರ್ಜಿತ ಆಸ್ತಿ ನನಗೆ ಕೊಟ್ಟಿರುತ್ತಾನೆ. ಈ ಕಾರಣದಿಂದ ನಿನ್ನ ಎರಡನೇ ಮಗಳಾದ ಕರೆವ್ವಗೆ ಮೃತ ಫಕೀರಪ್ಪನ ಆಸ್ತಿಯಲ್ಲಿ ಏನೂ ದೊರೆಯುವದಿಲ್ಲದ ನೀನು ಆಕೆಯ ಮಾತಿನ ಮೇಲಿಂದ ಈ ಖೊಟ್ಟಿ ನೋಟೀಸು ಕೊಟ್ಟಿದ್ದು ಇದೆ ನಾನು ನಿನ್ನ ನೋಟೀಸಿನಲ್ಲಿ ಬರೆದ ಪ್ರಕಾರ [illegible] ಕೊಟ್ಟು ಲಕ್ಷ್ಮವ್ವನ ಕಡಿಂದಾ ಕಾಗದ ಬರಿಸಿಕೊಂಡಿಲ್ಲಾ ವ ಅವಳ ಮನಿಯಲ್ಲಿ ದಾಗೀನೆ ವಗೈರೆ [illegible] ಕಾರಣ ಇಲ್ಲಾ ಸದ್ರಿ ಲಕ್ಷ್ಮವ್ವಾ ಇವಳು ತನ್ನ ಗಂಡನ ಆಜ್ಞಾ ಪ್ರಕಾರ ನನಗೆ ಬಕ್ಷೀಸಪತ್ರ ಬರಕೊಟ್ಟಿರುತ್ತಾಳೆ ಸದ್ರಿ ಬಕ್ಷೀಸಪತ್ರ ಆದಾಗ ನೀನು ಸಹಾ ಹಾಜರ ಇದ್ದು ಹೀಗೆ ಖೊಟ್ಟಿ ನೋಟೀಸು ಕೊಟ್ಟು ನನಗೆ ಅಂಜಿಕೆ ಹಾಕುವದು ಸರಿಯಲ್ಲಾ ಈ [illegible] ನಿನಗೆ ನಿನ್ನ ಮಗಳು ಕರೆವ್ವ ಈಕೆಗೆ [illegible] ತಿಳಿಯಬೇಕು ಈ ನೋಟೀಸಿನ ಖರ್ಚು ನಿಮ್ಮ ಮೇಲೆ ಅದೆ ಅಂತಾ ಕೊಟ್ಟ ನೋಟೀಸು ಸಹಿ ತಾರೀಖು [illegible] ನೇ ಜುಲೈ [illegible] ೧೯೩೦ ಇಸ್ವಿ

ಈ [illegible] ಹೆ. ಗು. ಬಸವಣ್ಣಾ ಕೋಂ ಫಕ್ಕೀರಪ್ಪಾ [illegible] ಅದೆ

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. [illegible], ಶ್ರೀ ಆರೂಢ ಸ್ವಾಮಿಗಳ [illegible] ಮತ್ತು ನ್ಯಾಯಾಧೀಶರಾದ ಶ್ರೀ ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು [illegible] ಛಾಯಾಚಿತ್ರಗಳನ್ನು ಕೊಟ್ಟಿರುತ್ತೇವೆ. [illegible] ಜನರ ಅಗ್ರಹದ [illegible] ಈ ಪುಸ್ತಕವನ್ನು [illegible] ಮಾಡಿರುತ್ತದೆ. ಇದರ [illegible] ಸಾವಿರ ಪ್ರತಿಗಳನ್ನು [illegible]. [illegible] ಪ್ರತಿಗಳು [illegible] ಗ್ರಾಹಕರು [illegible].

[illegible]

ಮ್ಯಾನೇಜರ [illegible] ವಿಜಯ, ಧಾರವಾಡ.

ಜಾಹೀರ ನೋಟೀಸು-

—— ([illegible]) ——

ಇಮಾರತಿ ಕಟ್ಟಿಗೆಗಳ ವಖಾರ

[illegible] ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದ ವ ಶಿಸಂ ನಾಟುಗಳು

ಸಾಗವಾನಿ [illegible] ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಕಿಲಿಂಗು ತೈಯಾರಿ ಶಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಶಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವವರಿಗೆ ತಯಾರಿ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ

[illegible] ಯಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ [illegible] ಯಲ್ಲಿ

[illegible]

[illegible] ಧಾರವಾಡದಲ್ಲಿ [illegible] ಶಿಕ್ಷಣ ಪಡೆದು [illegible] ಈ ಜಾಹೀರಾತು ಕೊಟ್ಟಿದ್ದೇವೆ. [illegible] ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೋ. [illegible] ಎಸ. ಇಟಗಿ.
[illegible], ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೯ [illegible] ರವಿವಾರ ತಾರೀಖು ೨೦ ನೇ ಜುಲೈ ೧೯೩೦ (ಸಂಚಿಕೆ ೧೬೧

ದಿ ಧಾರವಾಡ [illegible]

[illegible] ಟೆಡ್

[illegible]

ನಾಲ್ಕು ದಿವಸವಾಯಿತು. ಹಾವೇರಿಯಿಂದ ಯಾವ ಅನಿಷ್ಟ ವರ್ತಮಾನ ಬರುವದೆಂದು ಧಾರವಾಡದವರು ಎದುರು ನೋಡುತ್ತಿದ್ದರು. ಹಾವೇರಿಯ ಕಾಂಗ್ರೆಸದ ಚಳವಳಿಯು ಹೊಗಳುವಂತಿದ್ದು, ಜನರು ಹುಲಬನ್ನಿಯ ಸವಾಲು ಸಹ ಬೇಡಲಿಲ್ಲ. ಬೇಡಿದವನಿಗೆ ಬಹಿಷ್ಕಾರ ಹಾಕಿ; ಆತನಿಂದ ಕ್ಷಮೆ ಕೂಡ ಬೇಡಿಸಿಕೊಂಡರು.

ಅಲ್ಲಿ ಹೆಗ್ಗೇರಿಯುಂಟು. ಇದರ ನೀರಿನಿಂದ ಮೈಲೆರಡು ಮೈಲಿನ ತನಕ ತೋಟಪಟ್ಟಿಗಳಾಗುತ್ತವೆ. ಸರಕಾರದವರು ಈ ಕೆರೆಯಲ್ಲಿ ಮೀನ ಹಿಡಿಯುವ ಗುತ್ತಿ ಕೊಡುವರು. ಶೇಂದೀ ಗಾಜಾದ ಗುತ್ತೆದಂತೆ!! ಒಬ್ಬನು ಗುತ್ತಿ ಹಿಡಿಯುವನು ಅವನೇ ವರ್ಷದ ತನಕ ಜಾಂಗಾರರಿಗೂ, ಮೀನ ಬೇಕೆಂಬುವವರಿಗೂ ಏನಾದರೂ ಫೀ ತಕ್ಕೊಂಡು ಅವರಿಗೆ ಮೀನ ಹಿಡಿಯಗೊಡುವನು.

ಸತ್ಯಾಗ್ರಹದ ಕೋಲಾಹಲದಲ್ಲಿ ಮೀನ ಭಕ್ಷಕರು ಈತನಿಗೇಕೆ ಫೀ ಕೊಡಬೇಕು? ತಾವೇಕೆ ಪುಕ್ಕಟೆಯಾಗಿ ಮೀನ ಹಿಡಿಯಬಾರದೆಂದುಕೊಂಡು, ಸಾವಿರ ಸಂಖ್ಯೆಯಿಂದ ಕೆರೆಗೆ ಹೋದರು. ಈ ಸಂಗತಿಯು ಕಾಂಗ್ರೆಸದವರಿಗೆ ಗೊತ್ತೇ ಇರಲಿಲ್ಲ. ಇಲ್ಲಿ ಸತ್ಯಾಗ್ರಹ ಮಾಡಬೇಕೆಂದು ಕಾಂಗ್ರೆಸದವರು ಕನಸು ಮನಸ್ಸಿನಲ್ಲಿ ಸಹ ವಿಚಾರ ಮಾಡಿದ್ದಿಲ್ಲ. ಸತ್ಯಾಗ್ರಹಕ್ಕೆ ಹೋದವರು ಒಡ್ಡರು ಲಮಾಣಿಗಳು, ಜಾಲಗಾರರು, ಮುಸಲಮಾನರು ಇವರೇ ಮೊದಲಾದವರು. ಎಲ್ಲರೂ ಹುಡುಗತನದವರು ಪ್ರಬುದ್ಧರೆಂಬವರಾರೂ ಇರಲಿಲ್ಲ. ಇವರ ಗೊಂದಲ ನೋಡಿ, ಗುತ್ತೇದಾರನು ಪೋಲೀಸರಲ್ಲಿ ಫಿರ್ಯಾದಿ ಮಾಡಿದನು. ಪೋಲೀಸರು ಫಿರ್ಯಾದಿ ಪ್ರಕಾರ ಕೆಲವರನ್ನು ಹಿಡಿದಿದ್ದಾರೆ. ಜನರನ್ನು ಹಿಡಿದರೂ ಮೀನ ಹಿಡಿಯುವದು ತಪ್ಪಲಿಲ್ಲ. ಪೋಲೀಸರು ಧಾರವಾಡಕ್ಕೆ ತಾರು ಮಾಡಿದರು. ಮೆ. ಹಾಲಂಡಸಾಹೇಬರು ೨೫ ಆರೀ ಪೋಲೀಸರನ್ನೂ ಕೆಲ ಬಂದೂಕಿನ ಪೋಲೀಸರನ್ನೂ ಸಂಗಡ ಕರಕೊಂಡು ಸೋಮವಾರ ದಿವಸ ಹಾವೇರಿಗೆ ಪ್ರಯಾಣ ಮಾಡಿದರು.

ಮರು ದಿವಸ ಮೆ. ಇಲಾಖಾಸಾಹೇಬರೂ, ಪೋಲೀಸಸಾಹೇಬರೂ ಕೆರೆಗೆ ಹೋಗಿ ಸಾವಿರಾರು ಜನರು ಮೀನ ಹಿಡಿಯುತ್ತಿರುವದನ್ನು ಕಂಡರು. ಇಲಾಖೆಸಾಹೇಬರು ಇವರಲ್ಲಿ ಕೆಲವರಿಗೆ ನೀವು ಹಾಸಿಲು ಕೊಡದೆ, ಮೀನ ಹಿಡಿಯತಕ್ಕದ್ದಿಲ್ಲ. ಫೀ ಕೊಟ್ಟು, ಬೇಕಾದಷ್ಟು ಮೀನ ಹಿಡಿಯಿರೆಂದು ಉಪದೇಶ ಮಾಡಿದರು. ಜನರು ಇವರ ಮಾತನ್ನು ಕೇಳದೆ ತಮ್ಮದೇ ಕಾಯಕ ನಡೆಸಿದರು. ಆಗ ಪೋಲೀಸರು ಶಕ್ಯವಾದಷ್ಟು ಸಾಮೋಪಚಾರದಿಂದ ಜನರನ್ನು ಚದರಿಸಿದರು. ಈ ಜನರು ಹೋಗವಷ್ಟರಲ್ಲಿ ಮತ್ತೊಂದು ದೊಡ್ಡ ಗುಂಪು ಬಂತು. ಪೋಲಿಸ ಮತ್ತು ಮ್ಯಾಜಿಸ್ಟ್ರೇಟರನ್ನು ಕಂಡು ಬೆದರಲಿಲ್ಲ ಮೀನ ಹಿಡಿಯುವ ಕಾಯಕ ನಡೆಯಿತು. ಆಗ ದೊಡ್ಡ ಗೊಂದಲವೇಳುವ ದುಶ್ಚಿನ್ಹ ತೋರಿತು.

ಮೆ. ಹಾಲಂಡಸಾಹೇಬರು ಗುಜರಾಥದ ಚಳವಳಿ ಮತ್ತು ಬೇರೆ ರಾಜ್ಯ ನೋಡಿದವರು ಮುಂಬಯಿ ವಡಾಲಾ ಮುಂತಾದ ಸ್ಥಳಗಳಲ್ಲಿಯ ಸಂಗತಿಗಳನ್ನು ವರ್ತಮಾನಪತ್ರಗಳಲ್ಲಿ ಓದಿದವರು ತಮ್ಮ ಪಾಲಿಗೂ ಅಪಕೀರ್ತಿ ಬರಬಾರದೆಂದು ಬಹಳ ಶಾಂತತನದಿಂದ ಆಗಿನ ಹೊತ್ತಿನಲ್ಲಿ ನಡೆದರೆಂದು ಬರೆಯುವದಕ್ಕೆ ಸಂತೋಷವಾಗುತ್ತದೆ. ಬೆಳಗಾವಿಯ ವೆಲ್ಸಸಾಹೇಬನಂಥ ಉಗ್ರ ಮ್ಯಾಜಿಸ್ಟ್ರೇಟರಿದ್ದರೆ— ಗೋಳೀಬಾರಾಗುವದಕ್ಕೆ ಅವಕಾಶವಾಗುತ್ತಿದ್ದಿಲ್ಲ. ಪ್ರಾಂತಾಧಿಕಾರಿಯಾದ ಮೆ. ಮೆಯರಸಾಹೇಬರೂ ಸಂಪೂರ್ಣ ಶಾಂತವೃತ್ತಿಯಿಂದಿದ್ದರು. ಜನರು ನಾವು ಮೀನ ಹಿಡಿಯುವದು ನಿಜ. ನೀವು ಬೇಕಾದದ್ದು ಮಾಡಿರೆಂದು ಇವರನ್ನು ಸುತ್ತುಗಟ್ಟಿ ಹೇಳಿದರು. ಇವರು ಉಪಾಯದಿಂದ ಪೋಲಿಸರನ್ನು ಹೊರಗೆ ತೆಗೆದು, ಅವರನ್ನು ದೂರ ಕಳಿಸಿ, ಯಾವ ಅರಿಷ್ಟ ಬಂದೊಗದಂತೆ ಮಾಡಿದರು. ಕೆಲಹೊತ್ತಿನ ಮೇಲೆ ಗೊಂದಲ ಶಾಂತವಾಯಿತು. ಈ ವಿಷಯವಾಗಿ ಪೋಲಿಸ ಮತ್ತು ಮ್ಯಾಜಿಸ್ಟ್ರೇಟರ ವಿಚಾರಣೆ ನಡೆದಿದೆ. ಮೆ. ಹಾಲಂಡ ಮತ್ತು ಮೆಯರ್ಸಸಾಹೇಬರಂತೆ ಬೇರೆ ಕಡೆಯ ಅಮಲದಾರರು ವರ್ತಿಸುತ್ತಾ ಬಂದಿದ್ದರೆ— ಅಲ್ಲಲ್ಲಾಗುತ್ತಾ ಬಂದಿದ್ದ ಗುಂಡಿನ ಮಳೆಯಾಗದೆ, ಜನಲಯವಾಗದೆ, ನರಹತ್ಯದ ಪಾಪವೇ ಬರುತ್ತಿದ್ದಿಲ್ಲ.

ಬಂಕಾಪುರದಲ್ಲಿ ಪುಂಡಾಟಿಕೆ.

ಶೇಂದಿಯವರಿಂದ ಸ್ವಯಂಸೇವಕರಿಗೆ ಹೊಡತ.

ಇಂದು ಬಂಕಾಪುರದ ಸ್ವಯಂಸೇವಕರು ಪದ್ಧತಿಯಂತೆ ಈಚಲಗಿಡ ಕಡಿಯಲಿಕ್ಕೆ ಶ್ರೀ ಶಂಕರ ದೀಕ್ಷಿತ ಕರ್ಮರ ಇವರ ನೇತೃತ್ವದಲ್ಲಿ ಹೊರಟರು ನೀರಲಗಿಯ ಹತ್ತರದ ಶ್ರೀ ವೆಂಕಟೇಶ ಶ್ರೀನಿವಾಸ ಹೊನ್ನತ್ತಿ ಅಗಡಿ ಇವರ ನಂಬರಿನಲ್ಲಿಯ ಗಿಡ ಕಡಿಯಲು ಮಾಲಿಕರನ್ನು ಕರೆದುಕೊಂಡು ಹೊರಟರು. ಅಲ್ಲಿ ಶೇಂದೀ ಇಳಿಸಿ ಸಂಗ್ರಹಿಸುವ ಗುಡಿಸಲು ಇವೆ. ಅಲ್ಲಿ ಶೇಂದೀ ಕಂಟ್ರಾಕ್ಟರನ ನಾಕರನು ಈ ಸ್ವಯಂಸೇವಕರನ್ನು ಹೊಡಿಸಬೇಕೆಂದು ಹುಬ್ಬಳ್ಳಿಯಿಂದ ಶೇಂದೀ ಹೇರುವ ಮೋಟಾರಿನಲ್ಲಿ ಕೆಲವು ಪುಂಡರನ್ನು ಅಂದೇ ಬೆಳಿಗ್ಗೆ ಕರೆಯಿಸಿಕೊಂಡು ಅವರಿಗೆ ಆ ಗುಡಿಸಲಲ್ಲಿ ಕುರಿ ಶೇಂದೀ ವಗೈರೆ ಕೊಟ್ಟು ಸಿದ್ಧಪಡಿಸಿಟ್ಟಿದ್ದನು. ಸ್ವಯಂಸೇವಕರು ಮಧ್ಯಾನ್ಹಕ್ಕೆ ಅಲ್ಲಿಗೆ ಮುಟ್ಟಿದರು. ಇವರು ಕಡಿಯುವ ಗಿಡಗಳು ಇನ್ನೂ ೧ ಫರ್ಲಾಂಗ ದೂರವಿದ್ದವು. ಹಾದಿ ಮಾತ್ರ ಗುಡಿಸಲ ಸಮೀಪವಿದ್ದದ್ದರಿಂದ ಇವರು ಅಲ್ಲಿಯೇ ಹಾಸಿ ಹೋಗುತ್ತಿದ್ದರು. ಇವರನ್ನು ಕಂಡೊಡನೆಯೇ " ಎಲೆ ಎಲೆ ಟೊಪಗಿಯವರು ನಮ್ಮ ಆಕಳಾ (ಶೇಂದೀ ಗಿಡ) ಕಡಿಯಾಕ ಬಂದಾರು ತಗೊಳಿ, ಒಂದು ಕೈ " ಎಂದು ಹಲ್ಕಾ ಭಾಷೆಯಿಂದ ಡೊಣ್ಣೆ ತಕ್ಕೊಂಡು ಸುಮಾರು ೬೦ರ ಮೇಲೆ ಜನರು ಬಂದರು. ಒಬ್ಬ ಸ್ವಯಂಸೇವಕನನ್ನು ಹಿಡಿದು ಗಿಡ ಕಡಿಯಲಿಕ್ಕೆ ಹೋಗಬೇಡಿರಿ ಹೋದರೆ ಇದು ನೋಡಿರೆಂದು ಡೊಣ್ಣೆ ತೋರಿಸಿ, ಕಪಾಳಕ್ಕೆ ಬಲವಾಗಿ ಹೊಡೆದರು. ಕೂಡಲೇ ಸ್ವ. ಸೇ. ಮುಖಂಡನು ನಾವು ಸರಕಾರೀ ಗಿಡ ಕಡಿಯುವದಿಲ್ಲ. ಹೊಲದ ಮಾಲಿಕರನ್ನೇ ಕರೆದುಕೊಂಡು ಬಂದರುವೆವು ಅವರ ಗಿಡಗಳನ್ನು ಮಾತ್ರ ಕಡೆಯುವೆವು ನೀವು ನಮ್ಮವರು ಹೀಗೆ ಜಗಳ ತೆಗೆಯಬಾರದೆಂದು ಹೇಳುವಷ್ಟರಲ್ಲಿಯೇ ಅವರ ಧ್ವಜ, ಟೊಪ್ಪಿಗೆ, ಮತ್ತು ಕೊಡ್ಲಿ ಕಸದುಕೊಂಡು ಎಲ್ಲ ಸ್ವಯಂಸೇವಕರನ್ನು ಸುತ್ತುಗಟ್ಟಿ ಹೊಡೆಯಹತ್ತಿದರು. ಹೊಲದ ಮಾಲೀಕನಿಗೂ ಹೊಡತ ಬಿದ್ದವು. ಕೃಷ್ಣಾಜಿ ರಾಮಚಂದ್ರ ಜೋಶಿ ಎಂಬವನ ಎಡಗೈ ಮುರಿದಿದೆ. ಕೇಶವ ಶ್ರೀನಿವಾಸ ಕುಲಕರ್ಣಿ ಎಂಬವನ ತಲೆಗೆ ೨ ಕಡೆಗೆ ಒಡೆದಿದೆ. ಅಲ್ಲಿಯ ಗೌಡರಿಗೆ ಇದೆಲ್ಲಾ ಸಮಾಚಾರ ನಡೆಯುವದೆಂಬದು ಮೊದಲೇ ಗೊತ್ತಿತ್ತೆಂಬದರಲ್ಲಿ ಸಂದೇಹವಿಲ್ಲ. ಇದು ಸಮೀಪದ ಹಳ್ಳಿಯವರಿಗೂ ಮೊದಲೇ ಗೊತ್ತಾಗಿತ್ತು. ಅವರು ಸ್ವಯಂಸೇವಕರಿಗೆ ಕಡಿಯಬೇಡಿರೆಂದು ಬೋಧಿಸಿದರೇ ಹೊರತು ಸಹಾಯಕ್ಕಾದರೂ ಬರಲಿಲ್ಲ. ಎಲ್ಲರೂ ದೂರ ನಿಂತರು. ಮೂರ್ಛೆ ತಿಳಿದೆದ್ದ ಸ್ವಯಂಸೇವಕರು ನೇಳುತ್ತ ಬಂಕಾಪೂರದ ದಾರೀ ಹಿಡಿದರು. ಹಾದಿಯಲ್ಲಿ ಅಲ್ಲಲ್ಲಿ ಮೂರ್ಛೆ ಬರುತ್ತ ಬರುತ್ತಿದ್ದು ಕೂಡುತ್ತ ನಿಲ್ಲುತ್ತ ಒಬ್ಬೊಬ್ಬರೇ ಅಲ್ಲಿಯ ಡಾ. ಕೆರೂರ ಇವರ ದವಾಖಾನೆಯಲ್ಲಿ ಉಪಚಾರ ಹೊಂದಹೋದರು. ತಲೆಯೊಡಿಸಿಕೊಂಡ, ಕೈಮುರಿಸಿಕೊಂಡ ಸ್ವಯಂಸೇವಕರು ಹೊಲದಲ್ಲಿ ನರಳುತ್ತ ಕುಳಿತಾಗ ಲೋ. ಬೋ. ಶಾಲೆಗಳ ಆರೋಗ್ಯ ನೋಡಬಂದ ಡಾಕ್ಟರರು ಅದೇ ದಾರಿಯಿಂದ ಸುಮ್ಮನೆ ನೋಡುತ್ತ ನಡೆದು ಕೈಮುರಿದ ಹುಡುಗನ ಕೈಹಿಡಿದು ನಿನ್ನ ಕೈಕಾಲು ಚಾದು ಆಗುವದೆಂದು ಹೇಳಿ ಏನೂ ಉಪಚಾರಮಾಡದೆ ಹಾಗೇ ಹೋದರಂತೆ. ಸಂಜೆ ೬ ಗಂಟೆಗೆ ಬಂಕಾಪುರದಲ್ಲಿ ಸುದ್ದಿ ಹಬ್ಬಿ ಜನರು ತಂಡಗಟ್ಟಿ ತಿರುಗುತ್ತ ಸ್ವಯಂಸೇವಕರು ಉಪಚಾರ ಹೊಂದುತ್ತಿದ್ದ ದವಾಖಾನೆಗೆ ಬಂದರು. ಅಲ್ಲಿ ಇವರನ್ನು ನೋಡಲು ಜನಸಂದಣಿ ಕೂಡಿತು. ಆಗಲೇ ಹುಬ್ಬಳ್ಳಿಯಿಂದ ಬಂದ ಶ್ರೀ ಶಿವಾನಂದ ಸೂನು ಬಂಕಾಪೂರ ಇವರ ನೇತೃತ್ವದ ಕೆಳಗೆ ಪೇಟೆಯಲ್ಲಿ ಸಭೆ ಕೂಡಿಸುವ ಕೆಲಸ ನಡೆದು ರಾತ್ರಿ ೮ ಗಂಟೆಗೆ ಸಭೆಯಾಯಿತು. ೨೦೦೦ ಜನರ ಮೇಲೆ ಕೂಡಿದ್ದರು. ಊರೆಲ್ಲಾ ಸಭೆಯ ಸುದ್ದಿಯನ್ನು ತಿಳಿಸಲು ಅವಕಾಶವಾಗಲಿಲ್ಲ. ಹೊಡತ ತಿಂದವರಲ್ಲಿ ಶಂಕರ ದೀಕ್ಷಿತ, ಬಸಪ್ಪ, ರಾಮದೀಕ್ಷಿತ ವೈದ್ಯ ಇವರು ಸ್ವಲ್ಪ ಮಾತಾಡಿದರು. ಅದರಲ್ಲಿ ವಿಶೇಷವಾಗಿ ಬಸಪ್ಪನೆಂಬುವನು ನಾವು ಎಲ್ಲರೂ ಅಲ್ಲಿಯೇ ಮಡಿದು ವೀರಸ್ವರ್ಗ ಹೊಂದದೆ ತಿರುಗಿ ಬಂದದ್ದಕ್ಕೆ ನನಗೆ ದುಃಖವಾಗಿದೆಯೆಂದು ಹೇಳಿದ್ದು ಬಹಳ ಮಹತ್ವದ್ದು. ಕದಡಿ ಬಸಪ್ಪನವರು ಅಧ್ಯಕ್ಷರಾಗಿದ್ದರು. ನಂತರ ಶ್ರೀ ಶಿವಾನಂದಸೂನುಗಳ ಸದ್ಯಸ್ಥಿತಿ ಇನ್ನು ಬಂಕಾಪೂರದವರು ಮಾಡಬೇಕಾದ ಕಾರ್ಯಗಳನ್ನು ತಿಳಿಸುವ ಹೃದಯದ್ರಾವಕವಾದ ಭಾಷಣ ಮಾಡಿದ ಮೇಲೆ ಸಭೆಯ ಕೆಲಸ ಮುಗಿಯಿತು. ಅಧ್ಯಕ್ಷರು ಪೆಟ್ಟುತಿಂದವರ ಚಿಕಿತ್ಸೆಗಾಗಿ ಸಭೆಯಲ್ಲಿಯೇ ೨ ರೂ ಕೊಟ್ಟರು. ತಲೆಯೊಡೆದವನ ರಕ್ತ ಮುಣುಗಿದ ವಸ್ತ್ರಗಳು ಸಭೆಯಲ್ಲಿ ತೋರಿಸಲ್ಪಟ್ಟವು. ಊರವರೆಲ್ಲ ಸೇನಾಪತಿ ಡಾ॰ ಹರ್ಡೀಕರರ ಹುಕುಮಿನ ದಾರಿಯನ್ನು ಆತುರದಿಂದ ನೋಡುತ್ತಿರುವರು. ಸ್ವಯಂಸೇವಕರಾದರೂ ಹಿಂಸೆಯ ಪ್ರತೀಕಾರದ ಇಚ್ಛೆ ಕೂಡ ಮಾಡಲಿಲ್ಲ. ಧೈರ್ಯದಿಂದಿರುವರು ಊರು ಉತ್ಸಾಹದಲ್ಲಿದೆ. ತಲೆಯೊಡಕೊಂಡ ಸ್ವಯಂಸೇವಕರಿಗೆ ಬೆನ್ನಿಗೂ ಬಲವಾದ ಪೆಟ್ಟು ಬಿದ್ದ ಕಾರಣಾ ಎದೆಯೂ ನೋವಾಗಿ ಶ್ವಾಸಬಿಟ್ಟರೆ ತ್ರಾಸವಾಗುತ್ತದೆ. ಸ್ವಯಂಸೇವಕರ ಕೊಡ್ಲಿ ಪತಾಕೆ ಗಾಂಧೀ ಟೊಪ್ಪಿಗೆಗಳನ್ನು ಕಸಿದುಕೊಂಡಿದ್ದು ಅವುಗಳನ್ನು ತಿರುಗಿ ಕೊಟ್ಟಿಲ್ಲ. ಯತ್ನಿಸಿದ್ದಾಯಿತು ಫಲಿಸಲಿಲ್ಲ.

ಗಿಡ ಕಡಿಯಲಿಕ್ಕೆ ಹೋಗಿ ಹೊಡತ ತಿಂದವರು—

ಶ್ರೀ ಶಂಕರದೀಕ್ಷಿತ ಕರ್ಮರ
ರಾಮದೀಕ್ಷಿತ ಜಂತಲೀ ವೈದ್ಯ
ಕೇಶವ ಶ್ರೀನಿವಾಸ ಕುಲಕರ್ಣಿ ಟೇಲರ
ಕೃಷ್ಣಾಜಿ ಚಂದ್ರಾಮ ಜೋಶಿ
ಬಸಪ್ಪಾ ಕೋತಂಬಿರಿ
ನಾಗಪ್ಪಾ ಗೋಪಾಳಿ

ನಿಂಬಣ್ಣಾ ಎಂಬ ೧೬ ವರ್ಷದ ದಾರಿಕಾರ ಹುಡುಗನೊಬ್ಬನು ಇದನ್ನು ನೋಡುತ್ತಾ ನಿಂತಿರಲು ಆತನನ್ನೂ ಹೊಡೆದಿರುವರು.

ಮದ್ರಾಸದಂಥ ದೊಡ್ಡ ಮ್ಯುನಸಿಪಾಲಿಟಿಯವರು ಪೋಲೀಸರ ಅತ್ಯಾಚಾರವನ್ನು ನಿಷೇಧಿಸುತ್ತಿದ್ದಾಗ, ಆ ಸರಕಾರದವರು ಪೋಲೀಸ ಬಹಾದ್ದರರ ಬೆನ್ನು ಚಪ್ಪರಿಸಿ, ಅವರಿಗೆ ರೋಖು ರೂಪಾಯಿ ಇನಾಮು ಕೊಡುವ ನಿಶ್ಚಯ ಮಾಡಿದ್ದಾರೆ.

ಹುತ್ತಿರುವರು. ಸ್ವಯಂಸೇವಕರಾದರೂ ಹಿಂಸೆಯ ಪ್ರತೀಕಾರದ ಇಚ್ಛೆ ಕೂಡ ಮಾಡಲಿಲ್ಲ. ಧೈರ್ಯದಿಂದಿರುವರು ಕೂಡ ಉತ್ಸಾಹವಿಲ್ಲದೆ, ತಲೆಯೊಡೆದುಕೊಂಡ ಸ್ವಯಂಸೇವಕರಿಗೆ ಬೆನ್ನಿಗೂ ಬಲವಾದ ಪೆಟ್ಟು ಬಿದ್ದ ಕಾರಣ ಎದೆಯೂ ನೋವಾಗಿ ಶ್ವಾಸೋಚ್ಛ್ವಾಸಕ್ಕೆ ತ್ರಾಸವಾಗುತ್ತದೆ. ಸ್ವಯಂಸೇವಕರ ಕೈಯಲ್ಲಿ ಪತಾಕ ಗಾಂಧೀ ಟೊಪ್ಪಿಗೆಗಳನ್ನು ಕಸಿದುಕೊಂಡರು. ಅವುಗಳನ್ನು ತಿರುಗಿ ಕೊಟ್ಟಿಲ್ಲ. ಯತ್ನಿಸಿದ್ದಾಯಿತು ಫಲಿಸಲಿಲ್ಲ.

ಗಿಡ ಕಡಿಯಲಿಕ್ಕೆ ಹೋಗಿ, ಹೊಡೆತ ತಿಂದವರು—

ಶ್ರೀ ಶಂಕರದೀಕ್ಷಿತ ಕರ್ಮಾರ
ರಾಮದೀಕ್ಷಿತ ಜಂತಲೀ ವೈದ್ಯ
ಕೇಶವ ಶ್ರೀನಿವಾಸ ಕುಲಕರ್ಣಿ ಟೇಲರ
ಕೃಷ್ಣಾಜಿ ಚಂದ್ರಾಮ ಜೋಶಿ
ಬಸಪ್ಪಾ ಕೋಳಂಬರಿ
ನಾಗಪ್ಪಾ ಗೋಪಾಳಿ

ಸಿಂಚನ್ನಾ ಎಂಬ ೧೬ ವರ್ಷದ [illegible] ಹುಡುಗನೊಬ್ಬನು ಇದನ್ನು ನೋಡುತ್ತಾ ನಿಂತಿರಲು ಆತನನ್ನೂ ಹೊಡೆದಿರುವರು.

ಹೆಂಡತಿಗೆ ಪಿಕೆಟಿಂಗದ ಶಿಕ್ಷೆ.

—(o)—

ಗೌರವಕ್ಕಾಗಿ ಗಂಡನಿಂದ ಹೆಂಡತಿಗೆ ಹೂವಿನ ಹಾರ.

—(o)—

ಮಿರತದಲ್ಲಿ ಪಿಕೆಟಿಂಗ ಮಾಡಿದ್ದಕ್ಕಾಗಿ ಸ್ತ್ರೀಯರ ಕಪ್ತಾನಳಾದ ಊರ್ಮಿಲಾದೇವಿಗೆ ಆರು ತಿಂಗಳ ಶಿಕ್ಷೆಯಾಯಿತು. ಮ್ಯಾಜಿಸ್ಟ್ರೇಟರು ಶಿಕ್ಷೆ ಹೇಳುವಾಗ ಗಂಡನು ಹೆಂಡತಿಯ ಹತ್ತರವೇ ನಿಂತಿದ್ದನು. ಹೊರಗೆ ಬಂದ ಬಳಿಕ ತುರಂಗಕ್ಕೆ ಹೋಗುವಾಗ ನಾಗರಿಕರು ಮಾಡಿದ ಸನ್ಮಾನದಲ್ಲಿ ಗಂಡ ಪ್ರೊಫೇಸರ ಶಾಸ್ತ್ರಿಯವರು ಸ್ವತಃ ಹೆಂಡತಿಯ ಕೊರಳೊಳಗೆ ಮಾಲೀ ಹಾಕಿದರು. ಮದುವೆಯಲ್ಲಿ ಹೆಂಡತಿಯು ಗಂಡನಿಗೆ ಮಾಲೆ ಹಾಕುವದುಂಟು. ರಾಜಕಾರಣದಲ್ಲಿ ಗಂಡನು ಹೆಂಡತಿಗೆ ಮಾಲೆ ಹಾಕಿದ್ದು ಲೋಕಾನಂದದಾಯಕವಾದದ್ದೇ ಸರಿ.

ಮ್ಯುನಿಸಿಪಾಲಿಟಿಗೆ ರಾಜಕೀಯ ವಿಷಯಗಳನ್ನು ಕುರಿತು ಠರಾವ ಮಾಡಲು ಅಧಿಕಾರವುಂಟಾಗುತ್ತದೆಂದು ಕರಾಚಿಯ ಜ್ಯುಡಿಶಿಯಲ ಕಮೀಶನರರು ತೀರ್ಪು ಹೇಳಿದ್ದಲ್ಲದೆ, ಮ್ಯುನಿಸಿಪಾಲಿಟಿಯು ಬೆಂಬಲಕ್ಕೆ ಸ್ವದೇಶಿ ಆಂದೋಲನವನ್ನು ಚಳುವಳಿ ರೀತಿಯಿಂದ ನಡೆಯಿಸಿಕೊಳ್ಳಬೇಕೆಂದೂ ಠರಾವು ಮಾಡಲಿಕ್ಕೆ ಬರುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ.

ಪರದೇಶಿ ವಸ್ತ್ರದ ಬಹಿಷ್ಕಾರವು.

ಜುಲೈ ೧೫ನೇ ತಾರೀಖಿನಿಂದಾ ಒಂದು ತುಂಡಾದರೂ ಪರದೇಶೀ ಬಟ್ಟೆಯ ವ್ಯಾಪಾರವು ಆಗಬಾರದೆಂದು ಅಖಿಲ ಭಾರತ ಕಾಂಗ್ರೆಸ ವರ್ಕಿಂಗ ಕಮೀಟಿಯವರು ನಿರ್ಣಯಿಸಿದ್ದಾರೆ. ಪ್ರತಿಯೊಂದು ಕಾಂಗ್ರೆಸ ಕಮಿಟಿಯವರು ಈ ಠರಾವನ್ನು ಅಮಲಿನಲ್ಲಿ ತಂದು ಮೇಲಿಂದ ಮೇಲೆ ರಿಪೋರ್ಟ ಕಳಿಸಬೇಕೆಂದು ತಿಳಿಸಿದ್ದಾರೆ. ಈ ಠರಾವಿಗೆ ಅನುಸರಿಸಿ ಧಾರವಾಡ ಕಾಂಗ್ರೆಸ ಕಮಿಟಿಯವರು ಎಲ್ಲ ವ್ಯಾಪಾರಸ್ಥರನ್ನು ಈ ವಿಷಯದಲ್ಲಿ ವಿಚಾರಿಸಲು ಎಲ್ಲ ವ್ಯಾಪಾರಸ್ಥರು ಪರದೇಶಿ ಅರಿವೆಗಳನ್ನೂ ಸ್ವದೇಶೀ ಅರಿವೆಗಳನ್ನೂ ಬೇರೆ ಬೇರೆ ಇಟ್ಟು ಎಲ್ಲರಿಗೂ ತಿಳಿಯುವಂತೆ ಬರೆದು ಹಚ್ಚಿ ಪರದೇಶಿ ವಸ್ತ್ರಗಳನ್ನು ಕೇಳಿದೇ ಇದ್ದವನಿಗೆ ಅವನ್ನು ಮಾರುವದಿಲ್ಲೆಂತಲೂ ಮತ್ತು ಸ್ವದೇಶಿ ವಸ್ತ್ರಗಳೇ ಇದ್ದ ಪಕ್ಷದಲ್ಲಿ ಅವುಗಳ ಸಂಬಂಧಿ ಯಾರಿಗಾದರೂ ಸಂಶಯ ಬಂದರೆ ಅದನ್ನು ಪರಿಹರಿಸಲಿಕ್ಕೆ ಪ್ರತಿಯೊಂದು ಅಂಗಡಿಯಲ್ಲಿ ಒಬ್ಬೊಬ್ಬ ಸ್ವಯಂಸೇವಕನನ್ನು ಕೂಡಿಸಿಕೊಳ್ಳಲಿಕ್ಕೂ ಒಪ್ಪಿದ್ದಾರೆ. ಆದ್ದರಿಂದ ಅರಿವೆಯನ್ನು ಕೊಳ್ಳತಕ್ಕಂಥ ಜನರು ಕೇವಲ ಸ್ವದೇಶಿ ವಸ್ತ್ರಗಳನ್ನೇ ಕೊಳ್ಳಬೇಕು. ಮತ್ತು ತಮಗೆ ಸಂಶಯ ಬಂದಲ್ಲಿ ಅಲ್ಲಿದ್ದ ಸ್ವಯಂಸೇವಕನನ್ನು ಕೇಳಿ ಖಾತ್ರಿ ಮಾಡಿಕೊಂಡು ತಕ್ಕೊಳ್ಳಬೇಕು. ಯಾವ ಅಂಗಡಿಯಲ್ಲಿ ಸ್ವದೇಶಿ ಮಾಲನ್ನು ಬೇರೆ ಇಟ್ಟಿಲ್ಲವೋ ಮತ್ತು ಯಾವ ಅಂಗಡಿಯಲ್ಲಿ ರವಿವಾರ ಹಾಗೂ ಸೋಮವಾರ ಈ ಎರಡು ದಿನ ಸ್ವಯಂಸೇವಕನು ಇಲ್ಲವೋ ಅಲ್ಲಿ ಯಾವ ವ್ಯವಹಾರವನ್ನೂ ಮಾಡಬಾರದು. ಸಂಶಯಬಂದಲ್ಲಿ ಕಾಂಗ್ರೆಸ ಕಮಿಟಿಯಲ್ಲಿ ಬಂದು ಕೇಳಬೇಕು. ಈ ಸೂಚನೆಗೆ ಎಲ್ಲರೂ ಮಾನಕೊಟ್ಟು ಅದರಂತೆ ವರ್ತಿಸಲಿಕ್ಕೆ ಬೇಕು.

ಅಧ್ಯಕ್ಷ
ಪರದೇಶಿ ವಸ್ತ್ರ ಬಹಿಷ್ಕಾರ ಮಂಡಲ,
ಧಾರವಾಡ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟರ ಡ್ರಾಯವ್ಹರ ವಿದ್ಯೆಗಳಿಸಲು ಜನರು ಈವರೆಗೆ ಪುಣೆ, ಬೆಂಗಳೂರಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ ಸ್ವಲ್ಪವೇ ನಿಯಮಿತ ಜನರನ್ನು ತಕ್ಕೊಳ್ಳಬೇಕಾದ್ದರಿಂದ ಆಯಾ ಜನರ ನಿರಾಶೆಯಾಗಬಾರದೆಂದು ಮುಂದಾಗಿಯೇ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಆಖೇರದೊಳಗಾಗಿ ಹತ್ತು ಜನರನ್ನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಜುಬಿಲಿಸರ್ಕಲನಹತ್ತರ, ಧಾರವಾಡ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ಬಜಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ—

ನಮ್ಮ ಕಟ್ಟಿಗೆ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಲಿ ವ ಸಾಗವಾನಿ (೬) ಫೂಟಿನ ಜವಳ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಕಿಡಿಗಿ ತೈಯಾರ ಸಿಗುತ್ತವೆ

ಇದರ ಜೋಡಿಗೆ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆಸಿ ಕೊಡುತ್ತೇವೆ

ಮತ್ತು ಜಿಲ್ಲದ ಫರನೀಚರ ಕೆಲಸ ಮಾಡುವವರಿಗೆ ತಯಾರ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಕೃಷ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು:- [illegible]

ವರ್ಷ ೧೧ ಧಾರವಾಡ ಗುರುವಾರ ತಾರೀಖು ೨೪ ನೇ ಜುಲೈ ೧೯೩೦ (ಅಂಕ [illegible]

[illegible]

[illegible]

[illegible]

ದಿಂದ ತಿಳಕೊಳ್ಳ ಬೇಕು.

[illegible]

—

[illegible]

[illegible]

—

[illegible]

ನಿತ್ಯ ಪತ್ರಕ್ಕೆ	
[illegible]	ರೂ. [illegible]
[illegible] ,,	[illegible]
[illegible] ,,	[illegible]
[illegible]	[illegible]

[illegible]

ವ್ಯ. ವಿಜಯ ಧಾರವಾಡ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ

[illegible]

[illegible]

[illegible]

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. [illegible]

[illegible]

[illegible]

[illegible] ವಿಜಯ, ಧಾರವಾಡ.

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೫ ಆಷಾಢ ವದ್ಯ ೧೩

ಒಡಂಬಡಿಕೆಗೆ ದಿಲ್ಲಿಯು ಬಹಳ ದೂರಿರುವದು.

ಲಾರ್ಡ ಆಯರ್ವಿನ್ನಸಾಹೇಬರ ಕೂಡ ಮಾತನಾಡಿಕೊಂಡಂತೆ ಬ್ಯಾರಿಷ್ಟರ ಜಯಕರ ಮತ್ತು ಸರ ಸಪ್ರೂ ಸಾಹೇಬರು ದಿಲ್ಲಿಯಿಂದ ಹೊರಟು, ಪುಣೆಗೆ ಬಂದಿದ್ದಾರೆ. ಇಂದು ನಾಳೆ ಇವರಲ್ಲಿ ಇವರು ಮಹಾತ್ಮರನ್ನು ಕಂಡು, ಪಿತಾಪುತ್ರರಾದ ಪಂಡಿತ ಮೋತಿಲಾಲ ಜವಾಹಿರಲಾಲರನ್ನು ಕಾಣಲು ಅಲಹಾಬಾದಕ್ಕೂ ಹೋಗುವರು. ಪುಣೆಯಲ್ಲಿ ಶ್ರೀ ಕೇಳಕರ, ಮುಂಬಯಿಯಲ್ಲಿ ಸರದಾರ ಪಟೇಲ ಮುಂತಾದವರ ಕೂಡ ಮಾತಾಡಿದರು. ಈ ಒಡಂಬಡಿಕೆಯಲ್ಲಿ ರಾಜೀ ಮಾಡಿಸುವವರು ಹಾವೇರಿ ನ್ಯಾಯ ಮಾಡುವಂತಾಗಿ, ರಾಮನೂ ಸತ್ತ, ರಾವಣನೂ ಸತ್ತ ಎಂದಂತಾಗುವದುಂಟು. ಸ್ವಾತಂತ್ರ್ಯದಲ್ಲಿ ಪಾರತಂತ್ರ್ಯ ಪಾರತಂತ್ರ್ಯದಲ್ಲಿ ಸ್ವಾತಂತ್ರ್ಯವೆಂಬ ಆಕ್ಷೇಪಯುಕ್ತ ರಾಜಕೀಯ ಅಧಿಕಾರವು ತಮಗೆ ಅಂದರೆ ಕಾಂಗ್ರೆಸ್ಸಿಗೆ ಬೇಕಾಗಿಲ್ಲೆಂದು ಸರದಾರ ಪಟೇಲರು ತಮ್ಮ ಆಜ್ಞಾಪತ್ರಿಕೆಯಲ್ಲಿ ಅಭಿಪ್ರಾಯ ಪಡುತ್ತಾರೆ. ಇವರ ವಿಚಾರದಿಂದ ಒಡಂಬಡಿಕೆಗೆ ಕಾಲವೇ ಬಂದಿಲ್ಲ. ದಿಲ್ಲಿಯು ಬಹಳ ದೂರವಿರುವದು. ಹುಡುಗರು ಇಸ್ಪೀಟ ಆಟದ [illegible] ದಿಲ್ಲಿಯಿಂದ ಸಹ ಹೆಚ್ಚು ತರುವೆನೆಂಬ ಅಭಿಮಾನದಿಂದ ಹೇಳುತ್ತಾರೆ. ಹಾಗೆ ದಿಲ್ಲಿವಾಸವಾಗಿರುವ ಲಾರ್ಡ ಆಯರ್ವಿನ್ನಸಾಹೇಬರ ಒಡಂಬಡಿಕೆಯು ಮಾತ್ರ ಹೊರಟ, [illegible] ತಾವಾಗಿ ಯರವಡೆಗೆ ಬಂದು, ತುರಂಗದ ಬಾಗಿಲ ತೆರೆದು, "ಮಹಾತ್ಮರ ಮುಂದೆ ವಿನಂತಿ ಮಾಡುತ್ತಿರುವಾಗಲೇ 'ನಿಜವಾದ ಒಡಂಬಡಿಕೆಗೆ ಪ್ರಾರಂಭವಾಗುವದು' ಎಂದು ಸರದಾರರು ಹೇಳುತ್ತಾರೆ. ಇವರ ಭಾಷಣದ ಸ್ವಾರಸ್ಯವು ಮುಂದೆ ಕೊಟ್ಟಂತಿರುವದು.

ಹಿಂದೀ ಮುಂದಾಳುಗಳು ನಡೆಸಿದ ಪ್ರಯತ್ನದ ಬಗ್ಗೆ ನೀವು ಮೋಸಹೋಗಬೇಡಿರಿ ಮತ್ತು ತಪ್ಪುತಿಳುವಳಿಕೆ ಮಾಡಿಕೊಳ್ಳಬೇಡಿರಿ" ಬ[illegible]ನುಯ ಬಂದ ಕಡಕಲಿ. ಹ್ಯಾಯಿಸರ ಕಾರು ಮತ್ತು ಪತ್ರಗಳನ್ನು ಕಳಿಸುವ [illegible]ವೆಲ್ಲ ಉಪಯೋಗವಾಗುವವಲ್ಲ. ಆಗ ತುರಂಗದ ಬಾಗಿಲುಗಳು ತಾವಾಗಿ ತೆರೆಯುವವು. ಸರ ತೇಜಬಹಾದ್ದೂರ ಮತ್ತು ಬ್ಯಾರಿಸ್ಟರ ಜಯಕರರ ಉದ್ದೇಶಕ್ಕಾಗಿ ಮಹಾತ್ಮರ ಸಂಶಯ. ತಕ್ಕಷ್ಟು [illegible] ಆದರೆ ಅವರು ಸೇರಿಕೆಗಾಗಿ ಕೈಕೊಂಡ ಮಾರ್ಗವು ನಮಗೆ ಪಸಂತವಾಗಿರುವದಿಲ್ಲ. ಸ್ವಾತಂತ್ರ್ಯದ ನಮ್ಮ ಮಾರ್ಗವು ದೊರೆತರೆ. ಒಡಂಬಡಿಕೆ ಮಾತನಾಡ್ಯನೇನು ಮಹಾತ್ಮರು, ಈ ವಿಷಯದಲ್ಲಿ ಹೇಳಿದ್ದಾರೆ. ಉಭಯತರ ಜೆಲ್ಲಿನಲ್ಲಿ ಇದಕ್ಕೆ ಹೆಜ್ಜೆ ಇಡುವಾ ನಡೆದಿದೆ. ಹಿಂದುಸ್ಥಾನದ ಹಿತದ ಬಗ್ಗೆ ರಾಜಕೀಯ ಹೋರಾಟ ಪೂರ್ಣ ಸ್ವಾತಂತ್ರ್ಯ ಭಿತ್ತಿಯುಳ್ಳದ್ದಾಗಿರಲಿ. ಹೇಳುವದಕ್ಕೇನು? ಆದರೆ ನಿಂದ ಪಿಂದ ಸ್ವಾತಂತ್ರ್ಯದ ಹೆಜ್ಜೆಗೆ ಇಂಗ್ಲಂಡದ ಹಿತವನ್ನು ಬಲಿಸುವ ಧರ್ಮವೇನಿಲ್ಲವೆ? ಬಿಟ್ಟಿಂತ ಆರಾಮ ಮನುಷ್ಯರು ದಬ್ಬಾಳಿಕೆಯು ಸ್ವರೂಪದಿಂದ ಸಾಹೇಬರು ಒಡಂಬಡಿಕೆಗೆ ಸಿದ್ಧರಿಲ್ಲೆಂದು ತಿಳಿಸುತ್ತಿದೆ. ಸ್ವರಾಜ್ಯ ದೊರೆಯುವ ಮಾರ್ಗವು ಯಾವ ಗಲು ಕಷ್ಟಸಾಧ್ಯವಾಗಿರುತ್ತದೆ. ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಂದಿರುವ ಕೋಟಿ ಜನರು ಹೆಣಗಿಸಿಕೊಂಡು ಬಡಿಸಿಕೊಂಡ ನ್ಯಾಯವಾದ ಪತ್ತೆ ಅತ್ಯಂತ ಮರ್ಮವೇನು? ಆದರೆ ಟ್ಯಿ ಬಂಧುವಂಧುವರ ದೇಶಿಯ ಜನರು ಬಯಸುವದರೆ. ಅವರಿಗೆ ಅಕ ವಾದರೂ ದೊರೆದೀತೆ? ಇದ್ದರಿಂದ ನಾವು ಈಗ ಬಿಟ್ಟ ಅತ್ಯಪ್ರಾಂಧ ಉದುರೆಯು ಹಾಗೇ ಹೋಗತಕ್ಕದ್ದು. ಯಾವ ಕಾರಣದಿಂದಲೂ ಜನರಳಿಯನ್ನು ನಿಲ್ಲಿಸತಕ್ಕದ್ದಲ್ಲ. ಹಿಂದುಸ್ಥಾನಕ್ಕೆ ಯಾವ ಪ್ರಕಾರದ ಹಕ್ಕು ಬೇಕು ಯಾವದು ಬೇಡೆಂಬದನ್ನು ನಿರ್ಣಯಿಸುವ ಕಾಲವು ಹಿಂದೀ ಜನರದಾಗಿ. ಈನಂತರ ಹಿಂದುಸ್ಥಾನದಲ್ಲಿ ರಾಜ್ಯ ಮಾಡುವದು ತಮಗೆ ಶಕ್ಯವಾದುದಲ್ಲೆಂದು ಪ್ರತಿಪಕ್ಷ ಇಂಗ್ಲಂಡವು ಮನುಷ್ಯರಿಗೆ ಅರಿಕೆಯಾಗಬೇಕು. ಪರದೇಶಿ ಅರಸರಿಗೆ ಹಾಕಿದ ಬಹಿಷ್ಕಾರವು ಇನ್ನೂ ಹೆಚ್ಚು ಬಿಗಿಯಾಗಬೇಕು. ಬಟ್ಟೆ ತಿರುಗಿಸಿದ, ಆದರೆ ಪರದೇಶಿ ಆವನ್ನು ಮುಟ್ಟಲಿಕ್ಕಿಲ್ಲೆಂದು ಪ್ರತಿಯೊಬ್ಬನು ಪ್ರತಿಜ್ಞೆ ಮಾಡತಕ್ಕದ್ದು. ಕಾಂಗ್ರೆಸ ಜನರಳಿಗೆ ಮನಸ್ಸು [illegible] ಕೊಟ್ಟು ಸಹಾಯ ಮಾಡಿರಿ. ಈ ಕಾರ್ಯಯುದ್ಧದಲ್ಲಿ ಪುರುಷರಿಗೆ ಸರಿಯಾಗಿ ಸ್ತ್ರೀಯರು ಕೆಲಸ ಮಾಡಿದ್ದಾರೆ. ಹೊಸ್ತಿಲ ಹೊರಗೆ ಅವರಿಗೆ ಕೆಲಸವಿಲ್ಲೆಂದು ತಿಳಿದಿರುವದು ಸುಳ್ಳು ಮಾಡಿದ್ದಾರೆ. ಹೆಂಡಂದಿರು ಗಂಡಂದಿರನ್ನು ಕಾಂಗ್ರೆಸ ಮಂದಿಯ ಮಾಡಬೇಕು. ಅವರು ಮನೆ ಬಂದಾಗದಿದ್ದರೆ. ಅವರಿಗೆ ಸೇವಾಪತ್ರ ಕೊಡತಕ್ಕದ್ದು. ಇಂಥ ಹೆಂಡತಿಯರ ಬಗ್ಗೆ ಹೆಮ್ಮೆಯಿಂದ ತಲೆಬಾಗಿಸುವೆನು. ಮಹಾತ್ಮಾಗಾಂಧಿ ಕೆಲಸ ಮಾಡುತ್ತಿದ್ದಾರೆಂದು ಬುದ್ಧಿಭ್ರಮೆ ನಾಶವಾಯಿತು, ಜನಶಕ್ತಿ ಬೆಳೆದಿರುವದು.

ಖಾದಿಯ ಮೇಲೆ

ಸರಕಾರದ ವಕ್ರದೃಷ್ಟಿಯು.

—( )—

ಹತ್ತು ವರ್ಷಗಳಿಂದ ಈ ದೇಶದಲ್ಲಿ ಖಾದಿಯ ಪ್ರಚಾರವಾಗಿ ವರ್ಷ ವರ್ಷಕ್ಕೆ ಅದರ ಪ್ರಚಾರವಾಗುತ್ತಲಿದೆ. ಖಾದಿಯೆಂದರೆ ಕೈನೂಲಿನಿಂದ, ಕೈಯಿಂದ ನೇಯಿಸಿದ ವಸ್ತ್ರವು ಎಂದು ತಿಳಿದು ಒಟ್ಟು ಬಡವರ ಕಸುಬು ಸರ್ಕಾರ ನಾಶವಾಗಿ ಶ್ರೀಮಂತರೂ ಬಡವರೂ ಕೊಡುತ್ತಿರುವ ಮೇಲಿನ ಆದರ್ಶ ಇದರಿಂದ ಒಡೆದವು. ಇಂದಿಗೂ ಸಂತೆಗಳಲ್ಲಿ ಇಂಥ ರೀತಿ, ಧೋತರ ಮತ್ತು ಸೀರೆಗಳನ್ನು ಮಾರಾಟಕ್ಕೆ ತಂದದ್ದನ್ನು ನೋಡಲಿಕ್ಕೆ ಸಿಗುತ್ತದೆ. ಹಳ್ಳಿಯ ಜನರಿಗೆ ಹಳ್ಳಿಯಲ್ಲಿಯೇ ಆವೆ ದೊರೆಯಬೇಕೆಂದು ಪೂರ್ವದ ಗ್ರಾಮವ್ಯವಸ್ಥೆಯು. ಮಹಾತ್ಮರು ಈ ವ್ಯವಸ್ಥೆಗೆ ಪುನರ್ಜನ್ಮ ಕೊಟ್ಟಿದ್ದಾರೆ. ಆದರೆ ಖಾದಿಯ ಒನವದಿಂದ ಅದನ್ನು ದುಷ್ಟ ದೃಷ್ಟಿಯಿಂದಲೇ ನೋಡುತ್ತ ಬಂದಿದ್ದಾರೆ. ಮದ್ಯ ಕೆಲಕಾಲ ಉದಾಸೀನತೆಯಿತ್ತು. ಅದಕ್ಕೆ ಈ ಚಳವಳಿಯಲ್ಲಿ ವಸ್ತ್ರ ಉತ್ಪಾದನೆ ಬಂತು. ಈ ಉತ್ಪಾದನೆಯಲ್ಲಿ ಗುಂಟೂರಿನ ಸ್ಟುವರ್ಟಸಾಹೇಬರು ಸರದಾರ ಪದವಿ ಪಡೆದರು. ಆಲ್ಲಿಯ ಮ್ಯಾಜಿಸ್ಟ್ರೇಟರು ಖಾದಿಯನ್ನುಟ್ಟಾದರು. ಅವರ ಸುಂಕವು ತುಂಬ ಯ ಇಲಾಖೆಯೂ ಒಡೆಯಿತು. ಗಾಂಧೀ ಅಂಗಿ ಮತ್ತು ಟೊಪ್ಪಿಗೆ ಹಾಕಿಕೊಂಡು ಹೊರಟ ಯರವಡೆಯ ತುರಂಗದಲ್ಲಿ ಬಿಕಲು. ಈ ವಿಷಯವಾಗಿ ಕೌನ್ಸಿಲದಲ್ಲಿ ಪ್ರಶ್ನೆ ಕೇಳಲು ಮೆ. ಹಾಟ್ಸನ್ನ ಸಾಹೇಬರು—

> "ಹಿಂದೆ ಏನೇ ಆಗಿರಲಿ, ಸದ್ಯದಲ್ಲಿ ಗಾಂಧೀ ಅಂಗಿ ಮತ್ತು ಟೊಪ್ಪಿಗೆಗೆ ಒಂದು ಪ್ರಕಾರದ ವಿಶಿಷ್ಟ ರಾಜಕೀಯ ಸ್ವರೂಪ ಬಂದಿರುತ್ತದೆಂದು".

ಉತ್ತರ ಕೊಟ್ಟಿದ್ದಾರೆ. ಖಾದಿಗೆ ರಾಜಕೀಯ ಸ್ವರೂಪ ಬರಬಹುದು. ಅದರಿಂದ ಸರಕಾರದ ಹಾನಿಯೇನೂ ಇರುವದಿಲ್ಲ. ಹಾಯಕೋರ್ಟಿನ ಜಡ್ಜರು ಬ್ಯಾರಿಸ್ಟರರು ಗೌನನ್ನು ಹಾಕಿಕೊಂಡು ಬರುವರು. ಅದೊಂದು ಪ್ರಕಾರದ ವಿಶಿಷ್ಟ ವಸ್ತ್ರ. ಹಿಂದೀ ಜನರ ಉಡಿಗೆಯು ದೃಷ್ಟಿಯಿಂದ ವಿಶಿಷ್ಟವಾಗಿರುತ್ತದೆ. ಆ ಪ್ರಕಾರ ಅದರಂತೆ ಖಾದಿ ಧಾರಣದಲ್ಲಿಯೂ ವಿಶಿಷ್ಟತೆ ತೋರುವದು. ಆದರೆ ಖಾದಿಯ ಪ್ರಚಾರ ಮತ್ತು ಧಾರಣವನ್ನು ಪೂರ್ತಿಯಿಂದಲೂ ತಡೆಯುವಾಗನು. ಖ

ಗೆ ರಾಷ್ಟ್ರೀಯತ್ವ ಮಾತ್ರವಲ್ಲ. ರಾಷ್ಟ್ರೀಯ [illegible] ಸ್ವರೂಪ ಬರುತ್ತಿರುವದೆಂಬುದನ್ನು ಮರೆಯಬಾರದು.

ಕ್ರೈಸ್ತರು ಚಳವಳಿಯಲ್ಲಿ ಸೇರಿದ್ದರೆ ಏನಾಗುವದು?

ಹೇಳಲಿಕ್ಕೆ ಕಾರಣವಿಲ್ಲದೆ ಹೋಗುವದು.

ಹಿಂದುಸ್ಥಾನದಲ್ಲಿ ಕ್ರಿಶ್ಚನ್ನರಾದಂಥವರು ಪ್ರಾಂತಗಳ ಆಯಾ ಭಾಗದಲ್ಲಿ ಸಿಕ್ಕ [illegible] ಜನರನ್ನು ಅಸ್ಪೃಶ್ಯರತ್ತ ಬಂದರು. ಇವರಿಗೆ ಸಾಮಾಜಿಕ ರಾಜಕೀಯ ಹಕ್ಕುಗಳಿಗೂ ಆರ್ಥಿಕ ಸಂಬಂಧವಾದ ಕಷ್ಟ ಹೆಚ್ಚು ಬಂದವು. ರಾಜಕೀಯ ದೃಷ್ಟಿಯಿಂದ ಇವರೇ ನಿಜವಾದ ಅಸ್ಪೃಶ್ಯರಾಗಿದ್ದರೆ ಆ ಅಸ್ಪೃಶ್ಯತೆಯನ್ನು ಕಳಕೊಳ್ಳಲು ಇವರು ಜಾಗೃತರಾಗಿದ್ದಾರೆ. ಯುದ್ಧಕಾಲದಲ್ಲಿ ಕಾಂಗ್ರೆಸ್ಸಿನ ಸಭೆಯಿಂದ ಎಷ್ಟೋ ಸಹಾಯ ಪಡೆಯುತ್ತಿದ್ದಾರೆ. ಎಲ್ಲ ಕಡೆಯ ಕ್ರಿಶ್ಚನ್ನರು ಇದರಲ್ಲಿ ಸೇರಲು ಉತ್ಸುಕರಾಗಿದ್ದಾರೆ. ಕೆಲವರು ಸ್ವಯಂಸೇವಕರಾಗಿ ಕೆಲಸ ಕಂಡಿದ್ದಾರೆ. ಒಬ್ಬ ಆಂಗ್ಲೋಇಂಡಿಯನು ರಾಜದ್ರೋಹದಿಂದ ಪ್ರಜಾಧರ್ಮವೆಂದು ಜನರ ಪಕ್ಷ ವಹಿಸಿ ಮಾತಾಡುವ ಅನೇಕ ಕ್ರೈಸ್ತರಿರುವಾಗ ಇನ್ನೊಬ್ಬ ಆಂಗ್ಲೋಇಂಡಿಯನು ಸತ್ಯಾಗ್ರಹಿಯಾಗಿದ್ದಾನೆ. ಜನರು ಭಿಡೆಬಿಟ್ಟು [illegible]ಯಾಗಿರುವದು ನಿಜ. ಕಾಂಗ್ರೆಸದಲ್ಲಿ ಸೇರಿದರೆ ಕ್ರಿಶ್ಚನರು ಕಾಂಗ್ರೆಸ ಸೇರಿದರೆಂದು ಜಗತ್ತಿಗೆ ಜಾಹೀರ ಮಾಡಲೋಸುಗ ಮುಂಬಯಿಯಲ್ಲಿ ಸಭೆ ಮಾಡಿದರು. ಪ್ರಚಂಡ ಜನಸಮೂಹ ಕೂಡಿತು. ಅವರೊಳಗಿನ ಎಲ್ಲ ಪ್ರಭೇದಗಳ ಜನರು ಮತವಿಚಾರವನ್ನು ಹಿಂದಿಟ್ಟು ಸಭೆಗೆ ಬಂದಿದ್ದರು. ಇವರು ಮಾಡಿದ ಭಾಷಣಗಳಲ್ಲಿ ಒಂದೇ ಒಂದು ಸಂಗತಿಯು ಒಡೆದು ಕಾಣುತ್ತಿತ್ತು. ನಾವು ಈಗಿನ ಚಳವಳಿಯಲ್ಲಿ ಸೇರದಿದ್ದರೆ ನಮ್ಮ ನಿರ್ನಾಮ (wiped off) ಮಾಡುವದೆಂದು ಹೇಳಿದರು. ಯುರೋಪಿಯನ್ನರು ಹಿಂದುಸ್ಥಾನ ಬಿಟ್ಟು ಹೋಗುವಾಗ ೪೦-೫೦ ಲಕ್ಷ ಕ್ರಿಶ್ಚನರನ್ನು ಹೆಗಲ ಕಟ್ಟಿಕೊಂಡು ಹೋಗರು. ಹತ್ತು ವರ್ಷಗಳ ಹಿಂದೆ ಮುಸಲಮಾನರು ಹಿಜರತ ಮಾಡಿ, ಸ್ವಧರ್ಮದ ದೇಶವೆಂದು ಕಾಬೂಲಕ್ಕೆ ಹೋದರು. ಆಷ್ಟು ಜನರ ಹೊಟ್ಟೆಗೆ ಹಾಕಲಿಕ್ಕಾದೀತೆ? ಇವರನ್ನು ಹಿಂದಕ್ಕೆ ಅಟ್ಟಿದರು. ಅದೇ ಪ್ರಕಾರ ಮುಂದಕ್ಕೂ ಹಿಂದುಸ್ಥಾನಿ ಕ್ರಿಶ್ಚನರಿಗೆ ಭೋಗಿಸಬೇಕಾದೀತು. [illegible] ವ್ಯವಹಾರದಲ್ಲಿ ಸೇರಿ ಜೀವಂತವಿದ್ದರೂ ಸತ್ತಂತೆಯೇ. ನಿರ್ವಾಣ ಮಾಡಿಕೊಳ್ಳುವ ಬದಲು ಈ ಚಳವಳಿಯಲ್ಲಿ ನಾವು ಸೇರಬೇಕೆಂದು ಇವರು ಈ ಸಭೆಯಲ್ಲಿ ಠರಾವು ಮಾಡಿದರು. ಫಾದರ್ [illegible] ನೈಜಾಮ [illegible] ಪಾರ್ಲಿಮೆಂಟು [illegible] ಹಿಂದಿನ ಮತೀಯರಾದ ರಕ್ಷಣೆ ಹಾಕುವಾಗ ಮೊದಲು [illegible] ಕ್ರಿಶ್ಚನ್ ಮಂಡಳಿಯ ಬುದ್ಧಿಗೆ ತಿಳಿಯುವಂತೆ [illegible].

ಬಂಕಾಪುರದಲ್ಲಿ ಪ್ರಾಸಂಗಿಕ.

— (ಬಂಕಾಪುರ) —

ಪೋಲೀಸರಿಂದ ಸ್ವಯಂಸೇವಕರಿಗೆ ಹೊಡೆತ.

ಇಂದು ಬಂಕಾಪುರದ ಸ್ವಯಂಸೇವಕರು ಪದ್ಧತಿಯಂತೆ ಈ ಕಡೆಯ [illegible] ಶ್ರೀ ಶಂಕರ ದೀಕ್ಷಿತ ಇವರ ನೇತೃತ್ವದಲ್ಲಿ ಹೊರಟು, ನೀರಲಗಿಯ ಹತ್ತಿರದ ಶ್ರೀ ವೆಂಕಟೇಶ ಶ್ರೀನಿವಾಸ [illegible] ಇವರ ಸಂಗಡದಲ್ಲಿ ಗಿಡ ಕಡಿಯಲು ಬಾಳಿಕರನ್ನು ಕರೆದುಕೊಂಡು ಹೊರಟರು. ಅಲ್ಲಿ [illegible] ಗುಡಿಸಲು ಇದೆ. ಅಲ್ಲಿ ಕೆಲವು ಕಂಟ್ರ್ಯಾಕ್ಟರನ ನೌಕರನು ಈ ಸ್ವಯಂಸೇವಕರನ್ನು ಹೊಡೆಯಬೇಕೆಂದು ಹುಬ್ಬಳ್ಳಿಯಿಂದ [illegible] ಕೆಲವು ಜನರನ್ನು ಇದೇ ಬಗ್ಗೆ ಕರೆಸಿ ಇಟ್ಟಿದ್ದ. ಆವಾಗ ಆ ಗುಡಿಸಲಲ್ಲಿ [illegible] ಸಿದ್ಧಪಡಿಸಿಟ್ಟಿದ್ದನು. ಸ್ವಯಂಸೇವಕರು ಮಧ್ಯಾಹ್ನಕ್ಕೆ ಅಲ್ಲಿಗೆ ಮುಟ್ಟಿದರು. ಇವರು ಕಡಿಯುವ ಗಿಡಗಳು ಇವರಿಗೆ [illegible] ದೂರದಲ್ಲಿದ್ದವು. ಹಾದಿ ಮಾತ್ರ ಗುಡಿಸಲು ಸಮೀಪವಿದ್ದದ್ದರಿಂದ ಇವರು ಅಲ್ಲಿಯೇ ಹಾಸಿ ಹೋಗುತ್ತಿದ್ದರು. ಇಷ್ಟರಲ್ಲಿ ಕಂಟ್ರ್ಯಾಕ್ಟರನು "ಎಲೆ ಎಲೆ [illegible] ನಮ್ಮ [illegible] (ಶ್ರೀಮಂತ) ಗಿಡ ಕಡಿಯಲು ಬಂದಿರಾ ಬಡಿಯಿರಿ" ಎಂದು ಹೇಳಿ ಗುಡಿಸಲಿನಿಂದ [illegible] ಬಂದರು. ಒಬ್ಬ ಸ್ವಯಂಸೇವಕನನ್ನು ಹಿಡಿದು ಗಿಡ ಕಡಿಯಲಿಕ್ಕೆ ಹೋಗಗೊಡಬೇಡಿ ಇದು ನೋಡಿರೆಂದು [illegible] ಬಲವಾಗಿ ಹೊಡೆದರು. [illegible] ನಾವು ಸರಕಾರೀ ಗಿಡ ಕಡಿಯುವದಿಲ್ಲ. ಹೊಲದ ಮಾಲಿಕರನ್ನೇ ಕರೆದುಕೊಂಡು ಬಂದಿರುವೆವು. ಅವರ ಗಿಡಗಳನ್ನು ಮಾತ್ರ ಕಡಿಯುವೆವು ಎಂದು ನಿವೇದಿಸಿದರು. ಹೀಗೆ [illegible] ಬಡಿದರು [illegible] ಅವರ ಧ್ವಜ [illegible] ಎಲ್ಲ ಸ್ವಯಂಸೇವಕರನ್ನು ಸುತ್ತುಗಟ್ಟಿ ಹೊಡೆಯುತ್ತಿದ್ದರು. ಹೊಲದ ಮಾಲಿಕನಿಗೂ ಹೊಡೆತ ಬಿದ್ದವು. [illegible] ಜಿರಾಯತದಾರರ [illegible] ಎಷ್ಟೋ ಗಾಯಗಳಾಗಿವೆ. ಕೆಲವರ ತಲೆಗೆ [illegible] ಬಡಿದರು. ಅಲ್ಲಿದ್ದ ಗೌಡರಿಗೆ ಇದೆಲ್ಲ ಸಮಾಚಾರ ನಡೆಯುವ ದೊಂಬಿಯು ಮೊದಲೇ ಗೊತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಇದು ಸಮೀಪದ ಹಳ್ಳಿಯವರಿಗೂ ಮೊದಲೇ ಗೊತ್ತಾಗಿತ್ತು. ಅವರು ಸ್ವಯಂಸೇವಕರಿಗೆ ಕಡಿಯಬೇಡಿರೆಂದು ಬೋಧಿಸಿದರೇ ಹೊರತು ಸಹಾಯಕ್ಕಾರೂ ಬರಲಿಲ್ಲ. ಎಲ್ಲರೂ ದೂರ ನಿಂತರು. ಮೂರ್ಛೆ ತಿಳಿದೆದ್ದ ಸ್ವಯಂಸೇವಕರು ನರಳುತ್ತ ಬಂಕಾಪುರದ ದಾರಿ ಹಿಡಿದರು. ಹಾದಿಯಲ್ಲಿ ಅಲ್ಲಲ್ಲಿ ಮೂರ್ಛೆ ಬರುತ್ತ ಬರುತ್ತಿದ್ದರೂ ಕೂಡ ನಿಲ್ಲುತ್ತ ಬಂದಿದ್ದರೆ ಅಲ್ಲಿಯ ಡಾ. ಕೆರೂರ ಇವರ ದವಾಖಾನೆಯಲ್ಲಿ ಉಪಚಾರ ಹೊಂದ ಹೋದರು. ತಲೆಯೊಡೆಸಿಕೊಂಡ, ಕೈಮುರಿಸಿಕೊಂಡ ಸ್ವಯಂಸೇವಕರು ಪೇಟೆಯಲ್ಲಿ ನರಳುತ್ತ ಹೊರಟಾಗ ಲೋ. ಬೋ. ಶಾಲೆಗಳ ಆರೋಗ್ಯ ನೋಡ ಬಂದ ಡಾಕ್ಟರರು ಅದೇ ದಾರಿಯಿಂದ ಸುಮ್ಮನೆ ನೋಡುತ್ತ ನಡೆದರು. ಕೈಮುರಿದ ಹುಡುಗನ ಕೈ ಹಿಡಿದು ನಿನ್ನ ಕೈ ಕಾಲು ಬಾಡು ಆಗುವದೆಂದು ಹೇಳಿ ಏನೂ ಉಪಚಾರ ಮಾಡದೆ ಹಾಗೇ ಹೋದರಂತೆ. ಸಂಜೆ ೬ ಗಂಟೆಗೆ ಬಂಕಾಪುರದಲ್ಲಿ ಸುದ್ದಿ ತಿಳಿದು ಜನರು ತಂಡತಂಡವಾಗಿ ಸ್ವಯಂಸೇವಕರು ಉಪಚಾರ ಹೊಂದುತ್ತಿದ್ದ ದವಾಖಾನೆಗೆ ಬಂದರು. ಅಲ್ಲಿ ಅವರನ್ನು ನೋಡಲು ಜನಸಂದಣಿ ಕೂಡಿತು. ಆಗಲೇ ಹುಬ್ಬಳ್ಳಿಯಿಂದ ಬಂದ ಶ್ರೀ ಶಿವಾನಂದ ಸ್ವಾಮಿ ಬಂಕಾಪುರ ಇವರ ನೇತೃತ್ವದ ಕೆಳಗೆ ಪೇಟೆಯಲ್ಲಿ ಸಭೆ ಕೂಡಿಸುವ ಕೆಲಸ ನಡೆಯಿತು. ರಾತ್ರಿ ೮ ಗಂಟೆಗೆ ಸಭೆಯಾಯಿತು. ೩೦೦೦ ಜನರು ಮೇಳೈಸಿ ಕೂಡಿದ್ದರು. ಊರಿನಲ್ಲಿ ಸಭೆಯ ಸುದ್ದಿಯನ್ನು ತಿಳಿಸಲು ಅವಕಾಶವಾಗಲಿಲ್ಲ. ಹೊಡೆತ ತಿಂದವರಲ್ಲಿ ಶಂಕರ ದೀಕ್ಷಿತ, ಬಸಪ್ಪ, ರಾಮದೀಕ್ಷಿತ ವೈದ್ಯ ಇವರು ಸ್ವಪ್ರಮಾಣ ಮಾಡಿದರು. ಅವರಲ್ಲಿ ವಿಶೇಷವಾಗಿ ಬಸಪ್ಪನೆಂಬುವನು ನಾವು ಎಲ್ಲರೂ ಅಲ್ಲಿಯೇ ಮಡಿದು ವೀರಸ್ವರ್ಗ ಹೊಂದದೆ ತಿರುಗಿ ಬಂದದ್ದಕ್ಕೆ ನನಗೆ ದುಃಖವಾಗಿದೆಯೆಂದು ಹೇಳಿದ್ದು ಬಹಳ ಮಹತ್ವದ್ದು. [illegible] ಬಸಪ್ಪನವರು ಅಧ್ಯಕ್ಷರಾಗಿದ್ದರು. ನಂತರ ಶ್ರೀ ಶಿವಾನಂದಸ್ವಾಮಿಗಳು ಸ್ಪಷ್ಟ ಇನ್ನು ಬಂಕಾಪುರದವರು ಮಾಡಬೇಕಾದ ಕಾರ್ಯಗಳನ್ನು ತಿಳಿಸುವ ಹೃದಯಸ್ಪರ್ಶಿಯಾದ ಭಾಷಣ ಮಾಡಿದ ಮೇಲೆ ಸಭೆಯ ಕೆಲಸ ಮುಗಿಯಿತು. ಅಧ್ಯಕ್ಷರು [illegible] ಚಿಕಿತ್ಸೆಗಾಗಿ ಸಭೆಯಲ್ಲಿಯೇ [illegible] ಕೊಟ್ಟರು. [illegible] ಸಭೆಯಲ್ಲಿ [illegible] ಊರಿನ [illegible] ಹಿಂದಿನ ದಿನವನ್ನು [illegible]

ಪರದೇಶಿ ವಸ್ತ್ರದ ಬಹಿಷ್ಕಾರವು.

ಜುಲೈ ೧೫ನೇ ತಾರೀಖಿನಿಂದಾ ಒಂದು ತುಂಡಾದರೂ ಪರದೇಶೀ ಬಟ್ಟೆಯ ವ್ಯಾಪಾರವು ಆಗಬಾರದೆಂದು ಅಖಿಲ ಭಾರತ ಕಾಂಗ್ರೆಸ ವರ್ಕಿಂಗ ಕಮಿಟಿಯವರು ನಿರ್ಣಯಿಸಿದ್ದಾರೆ. ಪ್ರತಿಯೊಂದು ಕಾಂಗ್ರೆಸ ಕಮಿಟಿಯವರು ಈ ಠರಾವನ್ನು ಅಮಲಿನಲ್ಲಿ ತಂದು ಮೇಲಿಂದ ಮೇಲೆ ರಿಪೋರ್ಟು ಕಳಿಸಬೇಕೆಂದು ತಿಳಿಸಿದ್ದಾರೆ. ಈ ಠರಾವಿಗೆ ಅನುಸರಿಸಿ ಧಾರವಾಡ ಕಾ. ಕಮಿಟಿಯವರು ಎಲ್ಲ ವ್ಯಾಪಾರಸ್ಥರನ್ನು ಈ ವಿಷಯದಲ್ಲಿ ವಿಚಾರಿಸಲು ಎಲ್ಲ ವ್ಯಾಪಾರಸ್ಥರು ಪರದೇಶಿ ಅರಿವೆಗಳನ್ನೂ ಸ್ವದೇಶೀ ಅರಿವೆಗಳನ್ನೂ ಬೇರೆ ಬೇರೆ ಇಟ್ಟು ಎಲ್ಲರಿಗೂ ತಿಳಿಯುವಂತೆ ಬರೆದು ಹಚ್ಚಿ ಪರದೇಶಿ ವಸ್ತ್ರಗಳನ್ನು ಕೇಳದೇ ಇದ್ದವನಿಗೆ ಅವನ್ನು ಮಾರುವದಿಲ್ಲವೆಂತಲೂ ಮತ್ತು ಶುದ್ಧ ಸ್ವದೇಶಿ ವಸ್ತ್ರಗಳೇ ಇದ್ದ ಪಕ್ಷದಲ್ಲಿ ಅವುಗಳ ಸಂಬಂಧಿ ಯಾರಿಗಾದರೂ ಸಂಶಯ ಬಂದರೆ ಅದನ್ನು ಪರಿಹರಿಸಲಿಕ್ಕೆ ಪ್ರತಿಯೊಂದು ಅಂಗಡಿಯಲ್ಲಿ ಒಬ್ಬೊಬ್ಬ ಸ್ವಯಂ ಸೇವಕನನ್ನು ಕೂಡಿಸಿಕೊಳ್ಳಲಿಕ್ಕೂ ಒಪ್ಪಿದ್ದಾರೆ. ಆದ್ದರಿಂದ ಅರಿವೆಯನ್ನು ಕೊಳ್ಳತಕ್ಕಂಥ ಜನರು ಕೇವಲ ಸ್ವದೇಶಿ ವಸ್ತ್ರಗಳನ್ನೇ ಕೊಳ್ಳಬೇಕು. ಮತ್ತು ತಮಗೆ ಸಂಶಯ ಬಂದಲ್ಲಿ ಅಲ್ಲಿದ್ದ ಸ್ವಯಂಸೇವಕನನ್ನು ಕೇಳಿ ಖಾತ್ರಿ ಮಾಡಿಕೊಂಡು ತಕ್ಕೊಳ್ಳಬೇಕು. ಯಾವ ಅಂಗಡಿಯಲ್ಲಿ ಸ್ವದೇಶಿ ಮಾಲನ್ನು ಬೇರೆ ಇಟ್ಟಿಲ್ಲವೋ ಮತ್ತು ಯಾವ ಅಂಗಡಿಯಲ್ಲಿ ರವಿವಾರ ಹಾಗೂ ಮಂಗಳವಾರ ಈ ಎರಡು ದಿನ ಸ್ವಯಂಸೇವಕನು ಇಲ್ಲವೋ ಅಂಥಲ್ಲಿ ಯಾವ ವ್ಯವಹಾರವನ್ನೂ ಮಾಡಬಾರದು. ಸಂಶಯಬಂದಲ್ಲಿ ಕಾಂಗ್ರೆಸ ಕಮಿಟಿಯಲ್ಲಿ ಬಂದು ಕೇಳಬೇಕು. ಈ ಸೂಚನೆಗೆ ಎಲ್ಲರೂ ಮಾನಕೊಟ್ಟು ಅದರಂತೆ ವರ್ತಿಸಲಿಕ್ಕೆ ಬೇಕು.

ಅಧ್ಯಕ್ಷ
ಪರದೇಶಿ ವಸ್ತ್ರ ಬಹಿಷ್ಕಾರ ಮಂಡಲ,
ಧಾರವಾಡ

ಮಾರಾಟಕ್ಕೆ ಸಿದ್ಧವಾಗಿದೆ-

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿವಾಧ್ವವದೂತರ ಅಸಲರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಟನೀಸ ಇವರ ತೀರ್ಪು ಕೊಡಲ್ಪಟ್ಟಿವೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ಶೀಘ್ರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಟ್ಪಾ. ಹಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯ್ವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ವಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜೀಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟನಹತ್ತಿರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹದ್ದಿ ವ ಶಿಸಂ ಸಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಜವಳ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವವರಿಗೆ ತಯಾರ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶುಕ್ರವಾರ ತಾರೀಖು ೨೫ ನೇ ಜುಲೈ ೧೯೩೦ (ಸಂಚಿಕೆ ೩೬೫

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ(ಆಪರೇಟಿವ ಕ್ರೆಡಿಟ್ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೋಡಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವತ್ತಿ, ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ್ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ. ಧಾರವಾಡ

ಮಾರಾಟದ

ನೋಟೀಸು.

ಪೆರಾಂಬೂರು ಮತ್ತು ಹುಬ್ಬಳ್ಳಿ ಜನರಲ್ ಸ್ಟೋರ್ಸ್ ಡಿಪೋಗಳಲ್ಲಿ ಮಾರಾಟಕ್ಕೆ ಸಿದ್ಧವಾಗಿರುವ ಕೆಳಗೆ ಕಾಣಿಸಿದ ನಮೂನೆಯ ಖಾಲಿ ಚಿಮಣಿ ಎಣ್ಣೆ ಡಬ್ಬಿಗಳನ್ನು ಖರೀದಿ ಮಾಡಬೇಕೆಂದು ಅಪೇಕ್ಷಿಸುವವರು ೧೯೩೦ನೆಯ ಇಸವಿ ಜುಲಾಯಿ ತಿಂಗಳ ೩೦ನೇ ತಾರೀಖಿನ ಒಳಗಾಗಿ ಕಂಟ್ರೋಲರ ಆಫ್ ಸ್ಟೋರ್ಸ್ ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್, ಪೆರಾಂಬೂರು ಇವರ ಕಡೆಗೆ ಟೆಂಡರುಗಳನ್ನು ಕಳುಹಿಸಬೇಕು.

ವರ್ಗ ೧ **ಪೂರ್ಣ** ಮಜಬೂತಾಗಿರುವ ಡಬ್ಬಿಗಳು.
,, ೨ **ಪೂರ್ಣ** ಮಜಬೂತಾಗಿದ್ದರೂ, ಅಲ್ಲಲ್ಲಿ ಸ್ವಲ್ಪ ಕಲೆಕೂತ ಮತ್ತು— ಅಥವಾ ತುಕ್ಕು ಹಿಡಿದ ಡಬ್ಬಿಗಳು
,, ೩ ಪೂರ್ಣ ಮಜಬೂತಾಗಿದ್ದರೂ, ತುಕ್ಕು ಹಿಡಿದ ಮತ್ತು ಕಲೆ ಕೂತ ಡಬ್ಬಿಗಳು.

ಈ ಡಬ್ಬಿಗಳನ್ನು ನೋಡಬೇಕೆಂದು ಅಪೇಕ್ಷಿಸುವವರು ತಮಗೆ ಬೇಕಾದ ಪೆರಾಂಬೂರು ಮತ್ತು ಹುಬ್ಬಳ್ಳಿಗಳಲ್ಲಿಯ ಡಿಪೋ ಸ್ಟೋರುಗಳಲ್ಲಿರುವ ಡಿಸ್ಟ್ರಿಕ್ಟ್ ಕಂಟ್ರೋಲರ್ ಆಫ್ ಸ್ಟೋರ್ಸ್ ಇವರ ಕಡೆಗೆ ಅರ್ಜಿ ಮಾಡಬೇಕು. ಮತ್ತು ಮುಂಜಾನೆ ೮ ಘಂಟೆಯಿಂದ ಸಾಯಂಕಾಲ ೪ ಘಂಟೆಯವರೆಗೆ ಸದರಿ ಡಿಪೋಗಳಲ್ಲಿ ಹೋಗಿ ನೋಡಬಹುದು. ಅಲ್ಲಿರುವ ರಾಶಿಗಳಲ್ಲಿ ಡಬ್ಬಿಗಳನ್ನು ಆರಿಸುವದಕ್ಕೆ ಪರವಾನಿಗಿ ಇರುವದಿಲ್ಲ.

ಈ ಡಬ್ಬಿಗಳು ಬೇಕಾದವರು ಯಾವ ವರ್ಗದ ಡಬ್ಬಿಗಳು ಬೇಕೆಂಬುವದನ್ನೂ ಮತ್ತು ಆಯಾ ವರ್ಗದಲ್ಲಿ ಎಷ್ಟೆಷ್ಟು ಡಬ್ಬಿಗಳು ಬೇಕೆಂಬುದನ್ನೂ ಬರೆದು ತಿಳಿಸಬೇಕು. ೧೦೦ ಡಬ್ಬಿಗಳ ಒಂದ ಗುಂಪುಗಳನ್ನೇ ಮಾತ್ರ ಬೇಡಬೇಕು. ಈ ಡಬ್ಬಿಗಳನ್ನು ಡಿಪೋದಲ್ಲಿಯೇ ವಾಗೀನಿಗೆ ಹೇರಿಸಿಕೊಳುವದು. ಪ್ಯಾಕ್ ಮಾಡುವದು ಅವಶ್ಯವಾಗಿದ್ದರೆ, ಅದನ್ನು ಖರೀದಿ ತೆಗೆದುಕೊಂಡವರೇ ತಮ್ಮ ಸ್ವಂತ ಖರ್ಚಿನಿಂದಲೇ ಮಾಡಿಕೊಳ್ಳಬಹುದು.

A. C. TURNER,
Controller of Stores.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕತ ಕಟಿಂಗ ಫೀ ೨೫ ಇಪ್ಪತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಕಸ್ಸಿನ ಪ್ರಕಾರ ತಿಂಗಳಾ ಕನಿಷ್ಟ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಆಷಾಢ ವದ್ಯ ೩೦

ಹಾವೇರಿಯು ದೊಡ್ಡ ಸಂಕಟದಿಂದ ಪಾರಾಯಿತು.

ನಾಲ್ಕು ದಿವಸವಾಯಿತು. ಹಾವೇರಿಯಿಂದ ಯಾವ ಅನಿಷ್ಟ ವರ್ತಮಾನ ಬರುವದೆಂದು ಧಾರವಾಡದವರು ಎದುರು ನೋಡುತ್ತಿದ್ದರು. ಹಾವೇರಿಯ ಕಾಂಗ್ರೆಸದ ಚಳವಳಿಯು ಹೊಗಳುವಂತಿದ್ದು, ಜನರು ಹುಲಟನ್ನಿಯ ಸವಾಲು ಸಹ ಬೇಡಲಿಲ್ಲ. ಬೇಡಿದವನಿಗೆ ಬಹಿಷ್ಕಾರ ಹಾಕಿ; ಆತನಿಂದ ಕ್ಷಮೆ ಕೂಡ ಬೇಡಿಸಿಕೊಂಡರು.

ಅಲ್ಲಿ ಹೆಗ್ಗೇರಿಯುಂಟು. ಇದರ ನೀರಿನಿಂದ ಮೈಲೆರಡು ಮೈಲಿನ ತನಕ ತೋಟಪಟ್ಟಿಗಳಾಗುತ್ತವೆ. ಸರಕಾರದವರು ಈ ಕೆರೆಯಲ್ಲಿ ಮೀನ ಹಿಡಿಯುವ ಗುತ್ತೆ ಕೊಡುವರು. ಶಿಂದೀ ಗಾಂಜಾದ ಗುತ್ತೆಯಂತೆ!! ಒಬ್ಬನು ಗುತ್ತೆ ಹಿಡಿಯುವನು ಆವನೇ ವರ್ಷದ ತನಕ ಜಾಲಗಾರರಿಗೂ, ಮೀನ ಬೇಕೆಂಬುವವರಿಗೂ ಏನಾದರೂ ಫೀ ತಕ್ಕೊಂಡು ಅವರಿಗೆ ಮೀನ ಹಿಡಿಯಗೊಡುವನು.

ಸತ್ಯಾಗ್ರಹದ ಕೋಲಾಹಲದಲ್ಲಿ ಮೀನ ಭಕ್ಷಕರು ಈತನಿಗೇಕೆ ಫೀ ಕೊಡಬೇಕು? ತಾವೇಕೆ ಫುಕ್ಕಟೆಯಾಗಿ ಮೀನ ಹಿಡಿಯಬಾರದೆಂದುಕೊಂಡು, ಸಾವಿರ ಸಂಖ್ಯೆಯಿಂದ ಕೆರೆಗೆ ಹೋದರು. ಈ ಸಂಗತಿಯು ಕಾಂಗ್ರೆಸದವರಿಗೆ ಗೊತ್ತೇ ಇರಲಿಲ್ಲ. ಇಲ್ಲಿ ಸತ್ಯಾಗ್ರಹ ಮಾಡಬೇಕೆಂದು ಕಾಂಗ್ರೆಸದವರು ಕನಸು ಮನಸ್ಸಿನಲ್ಲಿ ಸಹ ವಿಚಾರ ಮಾಡಿದ್ದಿಲ್ಲ. ಸತ್ಯಾಗ್ರಹಕ್ಕೆ ಹೊರಟವರು ಒಡ್ಡರು ಲಮಾಣಿಗಳು, ಜಾಲಗಾರರು, ಮುಸಲಮಾನರು ಇವರೇ ಮೊದಲಾದವರು. ಎಲ್ಲರೂ ಹುಡುಗತನದವರು ಪ್ರಬುದ್ಧರೆಂಬವರಾರೂ ಇರಲಿಲ್ಲ. ಇವರ ಗೊಂದಲ ನೋಡಿ, ಗುತ್ತೇದಾರನು ಪೋಲೀಸರಲ್ಲಿ ಫಿರ್ಯಾದಿ ಮಾಡಿದನು. ಪೋಲೀಸರು ಫಿರ್ಯಾದಿ ಪ್ರಕಾರ ಕೆಲವರನ್ನು ಹಿಡಿದಿದ್ದಾರೆ. ಜನರನ್ನು ಹಿಡಿದರೂ ಮೀನ ಹಿಡಿಯುವದು ತಪ್ಪಲಿಲ್ಲ. ಪೋಲೀಸರು ಧಾರವಾಡಕ್ಕೆ ತಾರು ಮಾಡಿದರು. ಮೆ. ಹಾಲಂಡಸಾಹೇಬರು ೨೫ ಲಾಠೀ ಪೋಲೀಸರನ್ನೂ ಕೆಲ ಬಂದೂಕಿನ ಪೋಲೀಸರನ್ನೂ ಸಂಗಡ ಕರಕೊಂಡು ಸೋಮವಾರ ದಿವಸ ಹಾವೇರಿಗೆ ಪ್ರಯಾಣ ಮಾಡಿದರು.

ಮರು ದಿವಸ ಮೆ. ಇಲಾಖಾಸಾಹೇಬರೂ, ಪೋಲೀಸಸಾಹೇಬರೂ ಕೆರೆಗೆ ಹೋಗಿ ಸಾವಿರಾರು ಜನರು ಮೀನ ಹಿಡಿಯುತ್ತಿರುವದನ್ನು ಕಂಡರು. ಇಲಾಖೆಸಾಹೇಬರು ಇವರಲ್ಲಿ ಕೆಲವರಿಗೆ ನೀವು ಹಾಸಿಲು ಕೊಡದೆ, ಮೀನ ಹಿಡಿಯತಕ್ಕದ್ದಲ್ಲ. ಫೀ ಕೊಟ್ಟು, ಬೇಕಾದಷ್ಟು ಮೀನ ಹಿಡಿಯಿರೆಂದು ಉಪದೇಶ ಮಾಡಿದರು. ಜನರು ಇವರ ಮಾತನ್ನು ಕೇಳದೆ ತಮ್ಮದೇ ಕಾಯಕ ನಡೆಸಿದರು. ಆಗ ಪೋಲೀಸರು ಶಕ್ಯವಾದಷ್ಟು ಸಾಮೋಪಚಾರದಿಂದ ಜನರನ್ನು ಚದರಿಸಿದರು. ಈ ಜನರು ಹೋಗುವಷ್ಟರಲ್ಲಿ ಮತ್ತೊಂದು ದೊಡ್ಡ ಗುಂಪು ಬಂತು. ಪೋಲಿಸ ಮತ್ತು ಮ್ಯಾಜಿಸ್ಟ್ರೇಟರನ್ನು ಕಂಡು ಬೆದರಲಿಲ್ಲ. ಮೀನ ಹಿಡಿಯುವ ಕಾಯಕ ನಡೆಯಿತು ಆಗ ದೊಡ್ಡ ಗೊಂದಲವೇಳುವ ದುಶ್ಚಿನ್ಹ ತೋರಿತು.

ಮೆ. ಹಾಲಂಡಸಾಹೇಬರು ಗುಜರಾಥದ ಚಳವಳಿ ಮತ್ತು ಲಾಠೀ ರಾಜ್ಯ ನೋಡಿದವರು ಮುಂಬಯಿ ವಡಾಲಾ ಮುಂತಾದ ಸ್ಥಳಗಳಲ್ಲಿಯ ಸಂಗತಿಗಳನ್ನು ವರ್ತಮಾನಪತ್ರಗಳಲ್ಲಿ ಓದಿದವರು, ತಮ್ಮ ಪಾಲಿಗೂ ಅಪಕೀರ್ತಿ ಬರಬಾರದೆಂದು ಬಹಳ ಶಾಂತತನದಿಂದ ಆಗಿನ ಹೊತ್ತಿನಲ್ಲಿ ನಡೆದರೆಂದು ಬರೆಯುವದಕ್ಕೆ ಸಂತೋಷವಾಗುತ್ತದೆ. ಬೆಳಗಾವಿಯ ವೆಲ್ಸಸಾಹೇಬನಂಥ [illegible] ಮ್ಯಾಜಿಸ್ಟ್ರೇಟರಿದ್ದರೆ ಗೋಳೀಬಾರಾಗುವದಕ್ಕೆ ಅವಕಾಶವಾಗುತ್ತಿದ್ದಿಲ್ಲ. ಪ್ರಾಂತಾಧಿಕಾರಿಯಾದ ಮೆ. ಮೆಯರಸಾಹೇಬರೂ ಸಂಪೂರ್ಣ ಶಾಂತವೃತ್ತಿಯಿಂದಿದ್ದರು ಜನರು ನಾವು ಮೀನ ಹಿಡಿಯುವದು ನಿಜ ನೀವು ಬೇಕಾದದ್ದು ಮಾಡಿರೆಂದು ಇವರನ್ನು ಸುತ್ತುಗಟ್ಟಿ ಹೇಳಿದರು. ಇವರು ಉಪಾಯದಿಂದ ಪೋಲಿಸರನ್ನು ಹೊರಗೆ ತೆಗೆದು, ಅವರನ್ನು ದೂರ ಕಳಿಸಿ, ಯಾವ ಅರಿಷ್ಟ ಬಂದೊಗದಂತೆ ಮಾಡಿದರು. ಕೆಲಹೊತ್ತಿನ ಮೇಲೆ ಗೊಂದಲ ಶಾಂತವಾಯಿತು. ಈ ವಿಷಯವಾಗಿ ಪೋಲಿಸ ಮತ್ತು ಮ್ಯಾಜಿಸ್ಟ್ರೇಟರ ವಿಚಾರಣೆ ನಡೆದಿದೆ. ಮೆ ಹಾಲಂಡ ಮತ್ತು ಮೆಯರ್ಸಸಾಹೇಬರಂತೆ ಬೇರೆ ಕಡೆಯ ಅಮಲದಾರರು ವರ್ತಿಸುತ್ತಾ ಬಂದಿದ್ದರೆ ಅಲ್ಲಲ್ಲಿ ಗುತ್ತಾ ಬಂದಿದ್ದ ಗುಂಡಿನ ಮಳೆಯಾಗಲಿ, ಜನಲಯವಾಗಲಿ, ನರಹತ್ಯದ ಪಾಪವೇ ಬರುತ್ತಿದ್ದಿಲ್ಲ.

ಲೋಕಲಬೋರ್ಡ ಮ್ಯುನಿಸಿಪಾಲಿಟಿಗಳಿಗೆ ಮುಂಬಯಿ ಸರಕಾರದ ಅಂಜಿಸುವಿಕೆ.

ಅಂಜುವವರ ಮೇಲೆ ಮಾತ್ರ ಕಪ್ಪ.

—(-:*:-)—

ಮುಂಬಯಿ ಸರಕಾರದವರು ಒಂದು ಸರಕ್ಯುಲರ ತೆಗೆದು, ತಾವು ಲೋಕಲಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳಿಗೆ ಕೊಡುತ್ತಿರುವಂಥ ಗ್ರಾಂಟನ್ನು ರಾಜಕೀಯ ಕಾರಣಕ್ಕಾಗಿ ಮನಸಿಗೆ ಬಂದಾಗ ನಿಲ್ಲಿಸುವಂತೆ ಭಯ ಹಾಕಿದ್ದಾರೆ. ಸ್ಥಾನಿಕ ಸಂಸ್ಥೆಗಳು ಕಾಯದೆಭಂಗಕ್ಕೆ ನೆರವಾಗುವಂಥ ಮನೋವೃತ್ತಿಯುಳ್ಳಂಥವಾಗಿ ಅಸಹಕಾರಗಳಿಗೆ ಸಹಾಯ ಮಾಡುತ್ತವೆ. ಇದು ಸರಕಾರೀ ಅಧಿಕಾರದ ವಿರುದ್ಧ ಕೃತ್ಯವಾಗಿದ್ದು, ಇದರಿಂದ ರಾಜ್ಯಕಾರಭಾರ ನಡೆಯುವದೇ ದುಸ್ತರವಾಗುತ್ತದೆ. ಆದುದರಿಂದ ಈ ಪ್ರಕಾರ ನೆರವಾಗುವಂಥವುಗಳಿಗೆ ಸರಕಾರದಿಂದ ದೊರೆಯುವ ಗ್ರಾಂಟು ಬಂದು ಮಾಡಲಾಗುತ್ತೆಂದು ಜಾಹೀರ ಮಾಡಿದ್ದಾರೆ. ಮ್ಯುನಿಸಿಪಾಲಿಟಿ, ಲೋಕಲಬೋರ್ಡುಗಳೆಂದರೆ ಬೀದಿಯಲ್ಲಿ ಕಸಗೂಡಿಸುವ ಮತ್ತು ಲೈನ ರಸ್ತೆ ಹಾಕಿಸುವದಿಷ್ಟೇ ಕೆಲಸವೆಂದು ಪ್ರಾರಂಭದಲ್ಲಿ ತಿಳಿಯಲ್ಪಟ್ಟಿತ್ತು. ಆದರೆ ಈಗ ಇವೂ ಭಾವೀ ಸ್ವರಾಜ್ಯ ಸ್ವಾತಂತ್ರ್ಯದ ತಳಗಲ್ಲಾಗಿರುತ್ತವೆಂದು ಸಿದ್ಧಾಂತವಾಗಿದೆ. ಇವು ದೇಶಹಿತದಲ್ಲಿ ತೊಡಗಿದರೆ ಸರಕಾರವೇಕೆ ಕೋಪಪಡುವದು? ಸರಕಾರ ಹೇಳಿದಂತೆಯೇ ನಡೆಯಬೇಕೆಂದು ಆವೇನೂ ಕೈಕಾಲು ಕಟ್ಟಿಕೊಂಡಿಲ್ಲ. ಇದರ ನಿರ್ಣಯ ಮಾಡುವದು ಕೌನ್ಸಿಲ ಮತ್ತು ಅಸೆಂಬ್ಲಿಯ ಕೆಲಸವಲ್ಲದೆ, ಕಾಯದೆಭಂಗದ ವಿರುದ್ಧ ಕತ್ತೀ ಹಿಡಿದಂಥ ಆಳರಸರ ಕೆಲಸವಲ್ಲ. ಈ ಠರಾವು ಅಂಜುವಂಥವರ ಮೈ ಮೇಲೆ ಕಪ್ಪೆ ಚಲ್ಲುವಂತಿದ್ದು, ಕರಾಚಿ, ಅಹಮದಾಬಾದ, ಪುಣೆ ಮುಂಬಯಿಯಂಥ ಪ್ರಬಲ ಮ್ಯುನಿಸಿಪಾಲಿಟಿಗಳು ಸೊಪ್ಪು ಹಾಕಲಾರವು.

ಕಿತ್ತೂರಿನಲ್ಲಿ ಶ್ರೀ. ನೇಮಿನಾಥನಿಗೆ ಸೇನಾಧಿಪತ್ಯ.

—(o)—

ಬೇರೆ ಪಟ್ಟಣಗಳಂತೆ ಕಿತ್ತೂರಿನಲ್ಲಿ ಸತ್ಯಾಗ್ರಹದ ಒಂದು ಯುದ್ಧ ಮಂಡಲವನ್ನು ಸ್ಥಾಪಿಸಿ, ಕಾಂಗ್ರೆಸ ಕಮೀಟಿಯ ಉಪಾಧ್ಯಕ್ಷರಾದ ಶ್ರೀ. ನೇಮಿಚಂದ್ರರನ್ನು ಮುಖ್ಯ ಸೇನಾಧಿಪತಿಯಾಗಿ ನೇಮಿಸಿದ್ದಾರೆ.

ಶ್ರೀ. ಪೆರೂರ ಮಾಮಲೇದಾರರ ವಾಕ್ಪಾಂಡಿತ್ಯ.

—೦*೦—

ಹುನಗುಂದದಲ್ಲಿ ಶ್ರೀ. ಪೆರೂರರೆಂಬವರು ಮಾಮಲೇದಾರರಾಗಿದ್ದಾರೆ. ಇವರು ಊರೂರಿಗೆ ಆಬುನ ಸಭೆ ಮಾಡತೊಡಗಿದ್ದಾರೆ. ಒಂದು ಸಭೆಯಲ್ಲಿ ಇವರು-

ಈಶಸೃಷ್ಟವಾದ ಈಚಲ ಯೋನಿಯನ್ನೇ ನಾಶಪಡಿಸುವಂತೆ ಮಾಡುವದು ದೇವದ್ರೋಹವಾಗುತ್ತದೆ ಈಚಲ ನಾಶದಿಂದ ಬುಟ್ಟಿ, ಚಾಪಿ, ಕಸಬರಿಗೆ ಮತ್ತು ಗುಡಿಸಲಕ್ಕೆ ಬೇಕಾಗುವ ಸಾಹಿತ್ಯಗಳನ್ನು ಇಲ್ಲದಂತೆ ಮಾಡುವದು ಪರ ಪೀಡೆಯು.

ಎಂಬದಾಗಿ ಕೌಲೆತ್ತಿನಂತೆ ತಲೆದೂಗಿಸಿದ ಹೊರ್ತು ಗತ್ಯಂತರವಿಲ್ಲೆನ್ನುವರ ಮುಂದೆ ಭಾಷಣ ಮಾಡುತ್ತಿದ್ದಾರೆ. ರಾಯರಿಗೇನು ಗೊತ್ತು? ಶೇಂದೀಗಿಡ ಕಡಿಯುವಾಗ ಹೋಗಿ ನೋಡಬೇಕು. ಗೊಬ್ಬಿ ಕಟ್ಟುವಂಥ ಗಿಡಗಳನ್ನೇ ಕಡಿಯುವರು. ಐದಾರು ವರ್ಷವಾಗುವ ತನಕ ಅವಕ್ಕೆ ಕೈ ಹಚ್ಚುವದೇ ಇಲ್ಲ. ಮಾಮಲೇದಾರರು ಹೇಳುವಂತೆ ಈಚಲದ ಸಮೂಲ ನಾಶವೂ ಆಗುವದಿಲ್ಲ. ಬಡಜನರ ಬುಟ್ಟಿ, ಕಸಬರಿಗೆಗಾಗಿ ಅವುಗಳ ಕೊರತೆಯೂ ಆಗುವದಿಲ್ಲ. ಕಡಿಯುವ ಗಿಡಗಳ ಪರಕೆಗಳು ಕೈಗೆ ಹತ್ತದಷ್ಟು ಮೇಲೆ ಹೋಗಿರುತ್ತವೆಂಬದಾದರೂ ರಾವಸಾಹೇಬರಿಗೆ ಗೊತ್ತುಂಟೇನು? ಒಮ್ಮೆಯಾದರೂ ನೋಡಿ, ವ್ಯಾಖ್ಯಾನ ಕೊಡುವಂಥವರಾಗಲಿ; ಇಲ್ಲವಾದರೆ- ನಗುವವರ ಮುಂದೆ ಎಡವಿ ಬಿದ್ದಂತಾಗುವದು

ಸಿಮಲಾದ ಕಲೆಕ್ಟರರು ಸಾಮಾನ್ಯರಲ್ಲ.

——(೦)——

ಹತ್ತಿರ ಅಮೃತ ಸಂಜೀವನಿಯುಂಟು.

——:-*:——

ಸಿಮಲಾದಲ್ಲಿ ಪೋಲೀಸರು ಸ್ವಯಂಶೇವಕರನ್ನು ಸಾಯುವಂತೆ ಹೊಡೆದರು. ಒಬ್ಬನು ಎಚ್ಚರದಪ್ಪಿ ಬಿದ್ದನು. ಸಾಯುವ ಸ್ಥಿತಿ ಬಂತು. ಡಾಕ್ಟರರು ಬಂದು ನೋಡುವಾಗ ನಾಡಿಯ ವೇಗವು ಭಯಂಕರವಾಗಿ, ಅದು ಕೈಗೇ ಹತ್ತಲಿಲ್ಲ. ತುಸು ಹೊತ್ತಿನ ನಂತರ ಸ್ವತಃ ಕಲೆಕ್ಟರರು ಬಂದರು. ಅಷ್ಟರೊಳಗಾಗಿ ಅವನು ಎದ್ದು ಓಡಾಡುತ್ತಿದ್ದನು. ಸ್ವಯಂಶೇವಕನಿಗೇನೂ ಅಪಾಯವಾಗಿರಲಿಲ್ಲೆಂದು ಅಸೆಂಬ್ಲಿಯಲ್ಲಿ ಮಿ. ಹೇಗಸಾಹೇಬರು ಉತ್ತರ ಕೊಟ್ಟಿದ್ದಾರೆ. ಸಾಹೇಬರ ಹತ್ತಿರ ಸಂಜೀವನಿ ಇದ್ದಂತಾಗಲಿಲ್ಲವೇ ?

ಸುಳ್ಳಪ್ಪನವರ ಚಾವಡಿಯಲ್ಲಿ ಹೌದಪ್ಪ.

—(೦)—

ಸರ ರಾಮಸ್ವಾಮಿ ಅಯ್ಯರರು ಯರವಡೆಯ ತುರಂಗಕ್ಕೆ ಹೋಗಿ, ಮಹಾತ್ಮರನ್ನೂ, ದೇವಿ ಸರೋಜನಿಯವರನ್ನೂ ಕಂಡು ಬಂದರಷ್ಟೇ; ಸರರ ಮಹಾತ್ಮರನ್ನು ಕಾಣಲೇ ಇಲ್ಲ. ಖಾಸಗಿ ಕೆಲಸದೆಸೆಯಿಂದ ದೇವಿಯವರನ್ನು ಮಾತ್ರ ಕಂಡರೆಂದು ಸರಕಾರದ ವತಿಯಿಂದ ಮಿ. ಹಾಟಸನ್ನ ಸಾಹೇಬರು ಜಾಹೀರ ಮಾಡಿದರು. ಇವರು ಹೇಳುವದು ಸುಳ್ಳು ನಾನು ಮಹಾತ್ಮರನ್ನು ಕಂಡು ಬಂದದ್ದು ನಿಜವೆಂದು ಸರರು ಉತ್ಕಳಮಂಡಲದಿಂದ ತಾರಿನ ಉತ್ತರ ಪ್ರಸಿದ್ಧ ಮಾಡಿದ್ದಾರೆ.

ಬೆಳಗಾವಿಯಲ್ಲಿ ಸಾಯಮನ್ನ ರಿಪೋರ್ಟು ಸುಟ್ಟಿದ್ದಕ್ಕೆ ಶಿಕ್ಷೆ.

—(೦)—

ಬೆಳಗಾವಿಯಲ್ಲಿ ಮೆರವಣಿಗೆಯಿಂದ ಸಾಯಿಮನ್ನ ರಿಪೋರ್ಟು ತಂದು ಹುಣಮಂತದೇವರ ಗುಡಿಯ ಮುಂದೆ ಸುಟ್ಟ ಆರೋಪ ಹೊರಿಸಿ, ಶ್ರೀ ಘೋವಾರ ಮತ್ತು ದೇಶಪಾಂಡೆ ಇವರ ಮೇಲೆ ಖಟ್ಲೆ ಮಾಡಿದ್ದರಷ್ಟೇ; ಮ್ಯಾಜಿಸ್ಟ್ರೇಟರು ಇವರಿಗೆ ೧೫ ದಿವಸಗಳ ಸಾದಾ ಶಿಕ್ಷೆ ವಿಧಿಸಿದರು.

ಶ್ರೀ. ನಟರಾಜರ ಮಗಳ ಪಿಕೆಟಿಂಗ.

——(೦)——

ಮುಂಬಯಿಯಲ್ಲಿ ದರಬಾರ ಹಾಲಿನಲ್ಲಿ ಶಿಂದಿಯ ಲಿಲಾವಾಯಿತು. ಅಲ್ಲಿ ಇನ್ನೂರು ಜನರು ಗುತ್ತೇದಾರರಿದ್ದಾರೆ. ಒಳಗೆ ಹೋದವರು ಒಂದೇ ಡಜನಿನಷ್ಟು. ಉಳಿದವರೆಲ್ಲರೂ ಹೊರಗೆ ನಿಂತರು. ಒಂದು ಕಂಪನಿಯವರು ಮಾತ್ರ ಒಟ್ಟಾಗಿ ೩೪ ಅಂಗಡಿಗಳನ್ನು ಹಿಡಿದರು. ಉಳಿದ ನೂರು ಅಂಗಡಿಗಳ ಲಿಲಾವಾಗಲೇ ಇಲ್ಲ. ಒಳಗೆ ಹೋದವರು ಮೋಜು ನೋಡಿದರಲ್ಲದೆ, ಸವಾಲಿನಲ್ಲಿ ದೇಡಲೇ ಇಲ್ಲ. ಸ್ತ್ರೀಯರೇ ಪಿಕೆಟಿಂಗ ಮಾಡಿದರು. ಅವರಲ್ಲಿ ಪ್ರಸಿದ್ಧ ಮುಖಂಡರಾದ ಶ್ರೀ ನಟರಾಜರ ಮಗಳೂ ಇದ್ದಳು. ಪೋಲಿಸರು ಸವಾಲು ಮುಗಿಯುವ ತನಕ ಇವರನ್ನು ಹಿಡಕೊಂಡು ಹೋಗಿ, ಮುಗಿದ ಮೇಲೆ ಬಿಟ್ಟು ಬಿಟ್ಟರು.

ದೇಶದ ಸುದೈವ. ಸ್ವಂತದ ದುರ್ದೈವ.

—(೦)—

ತಮ್ಮ ಒಡಂಬಡಿಕೆಯ ಪ್ರಯತ್ನದಲ್ಲಿ ಯಶ ಬಂದರೆ- ದೇಶದ ಸುದೈವವೆಂದೂ ಅಪಯಶ ಬಂದರೆ- ನನ್ನ ದುರ್ದೈವವೆಂದೂ ತಿಳಿಯಬೇಕೆಂದು ಬ್ಯಾರಿಸ್ಟರ ಜಯಕರರು ಅಂದಿದ್ದಾರೆ.

ಬಹಿಷ್ಕಾರದ ಮಹಿಮೆ.

——(೦)——

ವಿಲಾಯತಿಯ ವ್ಯಾಪಾರ ಅರ್ಧ ಕರಗಿತು.

——(೦)——

ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ಬರುತ್ತಿರುವ ನೂಲು ಮತ್ತು ಬಟ್ಟೆಯ ವ್ಯಾಪಾರವು ಅರ್ಧಕ್ಕೆ ಅರ್ಧ ಇಳಿಯಿತು. ಅದರ ಅಂಕಿಗಳು

ನೂಲು

೧೯೨೯	೧೯೩೦
೯೧೩೦ ಪೆಟ್ಟಿಗೆ-	೫೯೪೪
ಅರಿವೆ	
೪೨೮೧೩	೨೭೦೮೨

ಇದೇ ಪ್ರಕಾರ ಇಂಗ್ಲಂಡದ ಹೊರ್ತು ಬೇರೆ ಪರದೇಶಗಳಿಂದ ಬರುವ ನೂಲು ಮತ್ತು ಬಟ್ಟೆಯು ಇಳಿತರಕ್ಕೆ ಬಂದಿರುತ್ತದೆ.

ಪುಣೆಯಲ್ಲಿ ಪ್ರಸ್ತಾಪ.

—(೦)—

ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರೂ ಅವರು ಮಹಾತ್ಮರ ಕೂಡ ಮಾತನಾಡಲು ಪುಣೆಗೆ ಬಂದಿದ್ದಾರೆ. ಪಂಡಿತ ಮೋತಿಲಾಲ ಮತ್ತು ಜವ್ಹೆರಿಲಾಲರನ್ನೂ ಯರವಡೆಗೆ ಕರತಂದಿದ್ದು, ಒಂದೇ ಸ್ಥಳದಲ್ಲಿ ಮೂವರ ಕೂಡಿ ಮಾತಾಡುವ ವ್ಯವಸ್ಥೆ ಮಾಡಿದ್ದಾರೆಂದು ದಟ್ಟ ವರ್ತಮಾನವುಂಟು.

ಕೌನ್ಸಿಲ ಚುನಾವಣೆಯ ತಿಥಿ ಮತ್ತು ನಕ್ಷತ್ರ.

——(೦)——

ಮುಂಬಯಿ ಸರಕಾರದವರು ಕೌನ್ಸಿಲ ಚುನಾವಣೆಯ ತಿಥಿ, ವಾರ ನಕ್ಷತ್ರವನ್ನು ಗೊತ್ತು ಮಾಡಿದ್ದಾರೆ. ಉಮೇದವಾರರು ಆಗಸ್ಟದ ನಾಲ್ಕನೆಯ ತಾರೀಖಿನ ದಿವಸ ಅರ್ಜಿ ಕೊಡತಕ್ಕದ್ದು. ಅರ್ಜಿಯ ತಪಾಸಣೆಯು ಆರನೆಯ ತಾರೀಖಿನ ದಿವಸವಾಗಬೇಕು. ಮತ್ತು ಹತ್ತನೆಯ ಸಪ್ಟಂಬರದ ದಿವಸ ಚುನಾವಣೆ ನಡೆಯತಕ್ಕದ್ದು. ೧೯ನೆಯ ದಿವಸ ಮತಗಳನ್ನು ಎಣಿಸತಕ್ಕದ್ದು.

ನಾಗಪೂರದಲ್ಲಿ ಪ್ರಚಂಡ ಹರತಾಳ.

ಗಿರಣಿ ಸಹ ಬಂದಾದವು.

—(೦)—

ನಾಗಪೂರ ಸರಕಾರದವರು ಸತ್ಯಾಗ್ರಹದ ಯುದ್ಧ ಮಂಡಲದವರನ್ನು ಹಿಡಿದದ್ದರಿಂದ, ಊರ ತುಂಬ ಹರತಾಳವಾಯಿತು. ಮುಸಲಮಾನರು ಸಹ ಅಂಗಡಿಯ ಬಾಗಿಲ ಹಾಕಿದರು. ಗಿರಣಿಗಳೂ ಬಂದಾದವು.

ಮುಂಬಯಿಯಲ್ಲಿ ಕಾಂಗ್ರೆಸವಾರದಲ್ಲಿ ಒಂದು ಲಕ್ಷ ಜನರು ಕಾಂಗ್ರೆಸದ ಮೆಂಬರರಾದರು.

ಕೌನ್ಸಿಲ ಚುನಾವಣೆಯಲ್ಲಿ ಉಮೇದವಾರರಾಗಿ ನಿಲ್ಲಬೇಕು.

ಮದ್ರಾಸದ ಪ್ರಮುಖರಾದ ರಾಷ್ಟ್ರೀಯ ಮತ್ತು ಸ್ವತಂತ್ರ ಪಕ್ಷದವರು ಬರುವ ಕೌನ್ಸಿಲ ಚುನಾವಣೆಯಲ್ಲಿ ಉಮೇದವಾರರಾಗಿ ನಿಲ್ಲಬೇಕು. ಮಹಾತ್ಮಾಗಾಂಧಿಯವರು ಬಂಧಮುಕ್ತರಾಗಬೇಕು. ಮತ್ತು ರಾವುಂಡ ಟೇಬಲಕ್ಕೆ ಬಹಿಷ್ಕಾರಹಾಕಬೇಕು ಎಂಬೆರಡು ಉದ್ದೇಶಗಳನ್ನು ಮುಂದಿಟ್ಟುಕೊಂಡು ಪ್ರತಿಸ್ಪರ್ಧಿಗಳ ಕೂಡ ಹೋರಾಡಬೇಕೆಂದು ಇವರು ಗೊತ್ತು ಮಾಡಿದ್ದಾರೆ.

ಮುಂಬಯಿ ಮ್ಯುನಿಸಿಪಾಲಿಟಿಯವರು ತಮ್ಮ ಹದ್ದಿನಲ್ಲಿರುವ ತೆಂಗಿನ ಗಿಡಗಳನ್ನು ಸಾರಾಯಿಗಾಗಿ ಗುತ್ತೆ ಕೊಡಬಾರದೆಂಬ ಠರಾವು ಪಾಸ ಮಾಡಿದರು. ಇದರಿಂದ ಮ್ಯುನಿಸಿಪಾಲಿಟಿಗೆ ವರ್ಷಕ್ಕೆ ಐವತ್ತು ಸಾವಿರದ ನಷ್ಟ ಬರುವದು.

ಸಾಂಗಲಿಯ ಯಜಮಾನರು ರಾವುಂಡ ಟೇಬಲಕ್ಕಾಗಿ ಲಂಡನಕ್ಕೆ ಹೋದ ಕಾಲದಲ್ಲಿ ಇವರ ಮಾವಂದಿರಾದ ಸರ ಮೋರೋಪಂತ ಜೋಶಿಯವರು ಸಂಸ್ಥಾನದ ಸರ್ವಾಧಿಕಾರಿಯಾಗುವರು. ಸರರು ಕೆಲಕಾಲ ನಾಗಪೂರದ ಗವ್ಹರ್ನರರಾಗಿದ್ದರು.

ಸೊಲ್ಲಾಪೂರದಲ್ಲಿ ಜಡ್ಜ ಕೋರ್ಟನ್ನು ಸುಟ್ಟ ಆರೋಪದಿಂದ ೪೨ ಜನರ ಮೇಲೆ ಖಟ್ಲೆ ಹಾಕಿದ್ದಾರೆ. ಇವರಲ್ಲಿ ೨೫ ಜನರು ದೇಶಾಂತರ ಹೋಗಿ, ಅದೃಶ್ಯರಾಗಿದ್ದಾರೆ.

ಜಾಹೀರ ನೋಟೀಸು

ರಾಣೇಬೆನ್ನೂರ ತಾಲೂಕ ಮೇಡ್ಲೇರಿ ಗ್ರಾಮದಲ್ಲಿರುವ ಫಕೀರಿ ಕೋಂ ಗೋಣೆಪ್ಪಾ ಬಾರ್ಕಿ ಇವಳಿಗೆ-

ಕೆಳಗೆ ಸಹಿಮಾಡಿದವನಿಂದ ನೋಟೀಸ ಕೊಡುವದೇನಂದರೆ-

ನೀನು ನನ್ನ ಲಗ್ನದ ಹೆಂಡತಿ ಇದ್ದು ನನ್ನ ಸಹವಾಸ ಬಿಟ್ಟು ೨-೩ ವರ್ಷಗಳಾದವು ಆದರೆ ನನಗೆ ಹುಟ್ಟಿದ ೩ ವರ್ಷದ ಹೆಣ್ಣುಕೂಸು ಮಾತ್ರ ನಿನ್ನ ಹತ್ತರ ಅದೆ. ಆದರೆ ನೀನು ಇತ್ತೀಚೆಗೆ ವ್ಯಭಿಚಾರ ಮಾಡಲಿಕ್ಕೆ ಹತ್ತಿರುತ್ತೀ ಇನ್ನು ಮೇಲೆ ನಿನಗೆ ಮಕ್ಕಳು ಹುಟ್ಟಿದರೆ ಅವು ನನಗೆ ಏನೂ ಸಂಬಂಧವಿಲ್ಲ ಮತ್ತು ಇಲ್ಲಿಯ ವರೆಗೆ ನಿನ್ನನ್ನು ಹಿಟ್ಟು ಹೊಟ್ಟೆಗೆ ಕೊಡುತ್ತಿದ್ದೆ ಆದರೆ ನಿನ್ನ ವ್ಯಭಿಚಾರವು ಬಹಳವಾಗಿ ನಡೆದದ್ದರಿಂದ ನಿನಗೆ ಇನ್ನು ಮುಂದೆ ನಿನಗೂ ನನಗೂ ಯಾವ ಸಂಬಂಧವೂ ಇಲ್ಲ ಇದೇ ಸೋಡಚೀಟಿ ಎಂದು ತಿಳಿಯತಕ್ಕದ್ದು. ತಾ॥ ೨೩-೭-೩೦

ಸಹಿ- ಗೋಣೆಪ್ಪಾ ಬಸಪ್ಪಾ ಬಾರ್ಕಿ ಸಾ॥ ಮೇಡ್ಲೇರಿ

ಸ್ವಾತಂತ್ರ್ಯ ಸಪ್ತಾಹದಲ್ಲಿ

ನೂಲುವ ಮೇಲಾಟ

ಸ್ವಾತಂತ್ರ್ಯ ಸಪ್ತಾಹದಲ್ಲಿ ಎರಡನೆಯ ದಿನ ಅಂದರೆ ಸೋಮವಾರ (೨೮-೭-೩೦) ದಿನ **ಕದರುಂಡಿಗೆಯ ಮೆರವಣಿಗೆ**ಯಾಗುವದು. ಕದರುಂಡಿಗೆಯನ್ನು ಚನ್ನಾಗಿಯೂ ಚಾತುರ್ಯದಿಂದಲೂ ಉಪಯೋಗಿಸಬಲ್ಲವರಿಗೆ ಬೆಳ್ಳಿಯ ಕದರುಂಡಿಗೆಗಳನ್ನು ಮೆಚ್ಚಾಗಿ ಕೊಡುವವರಿದ್ದೇವೆ. ಆ ದಿನದ ಮೆರವಣಿಗೆ ಹೊರಟ ಮೇಲೆ ಮುಗಿಯುವ ವರೆಗೆ ಮಾತ್ರ **ಸಣ್ಣ ನೂಲನ್ನು ನೂತವರೇ** ಈ ಮೆಚ್ಚು ಪಡೆಯಲು ಯೋಗ್ಯರು. ಮೇಲಾಟದಲ್ಲಿ ಮೊದಲು ಬಂದ ನಾಲ್ವರಿಗೆ **ಕನ್ನಡಿಗರ ಕೂಟ**ದ್ದೊಂದು **ವಿಜಯ** ಮುದ್ರಾಲಯದ್ದೊಂದು **ಹುಧ್ವ ಬ್ಯಾಂಕಿನ**ದೊಂದು ಹಾಗೂ **ಕಾಂಗ್ರೆಸ** ಕಾರ್ಯಾಲಯದ್ದೊಂದು, ಹೀಗೆ ನಾಲ್ಕು ಕದರುಂಡಿಗೆಗಳು ಮೆಚ್ಚು ಕೊಡಲ್ಪಡುವವು. ಇವಲ್ಲದೆ ಕೇವಲ ಹೆಣ್ಣುಮಕ್ಕಳ ಸಲುವಾಗಿಯೇ ಎರಡು ಕದರುಂಡಿಗೆಗಳು ಕಾದಿಡಲಾಗಿವೆ. ಕುತೂಹಲಗಳು ಖಾದೀ ಅಂಗಡಿ ಕಾಂಗ್ರೆಸಕಮಿಟಿ ಇಲ್ಲವೆ ವಿಜಯ ಮುದ್ರಾಕ್ಷರಶಾಲೆಯಲ್ಲಿ ಹೆಸರು ಬರೆಸಬೇಕು.

ಧಾರವಾಡ ತಾ॥ ೨೨-೭-೩೦

ಕಾರ್ಯದರ್ಶಿ

ಟೀಪು:— ಮೆರವಣಿಗೆಯ ಸ್ಥಳ ಮತ್ತು ವೇಳೆಯನ್ನು ಹಿಂದನಿಂದ ತಿಳಿಸಲಾಗುವದು.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿಪ್ಪಾವಧೂತರ ಅಸಲರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನತ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಪ್ಯಾ. ಖ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R· N. B 1443

ವಿಜಯ

ನಿತ್ಯ ಪತ್ರ
ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶನಿವಾರ ತಾರೀಖು ೨೬ ನೇ ಜುಲೈ ೧೯೩೦ (ಸಂಚಿಕೆ ೧೬೬

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟೀಜು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಡಿಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ರ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಮನ್ನಿ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

The Madras & Southern Mahratta Railway Co. Ltd.
(Incorporated in England)

ಮಾರಾಟದ ನೋಟೀಸು.

ಪೆರಾಂಬೂರು ಮತ್ತು ಹುಬ್ಬಳ್ಳಿ ಜನರಲ್ ಸ್ಟೋರ್ಸ್ ಡಿಪೋಗಳಲ್ಲಿ ಮಾರಾಟಕ್ಕೆ ಸಿದ್ಧವಾಗಿರುವ ಕೆಳಗೆ ಕಾಣಿಸಿದ ನಮೂನೆಯ ಖಾಲಿ ಚಿಮಣಿ ಎಣ್ಣೆ ಡಬ್ಬಿಗಳನ್ನು ಖರೀದಿ ಮಾಡಬೇಕೆಂದು ಅಪೇಕ್ಷಿಸುವವರು ೧೯೩೦ನೆಯ ಇಸವಿ ಜುಲಾಯಿ ತಿಂಗಳ ೩೧ನೇ ತಾರೀಖಿನ ಒಳಗಾಗಿ ಕಂಟ್ರೋಲರ ಆಫ್ ಸ್ಟೋರ್ಸ ಮದ್ರಾಸ ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್, ಪೆರಾಂಬೂರು ಇವರ ಕಡೆಗೆ ಟೆಂಡರುಗಳನ್ನು ಕಳುಹಿಸಬೇಕು.

ವರ್ಗ ೧ ಪೂರ್ಣ ಮಜಬೂತಾಗಿರುವ ಡಬ್ಬಿಗಳು.
,, ೨ ಪೂರ್ಣ ಮಜಬೂತಾಗಿದ್ದರೂ, ಅಲ್ಲಲ್ಲಿ ಸ್ವಲ್ಪ ಕಲೆಕೂತ ಮತ್ತು— ಅಥವಾ ತುಕ್ಕು ಹಿಡಿದ ಡಬ್ಬಿಗಳು
,, ೩ ಪೂರ್ಣ ಮಜಬೂತಾಗಿದ್ದರೂ, ತುಕ್ಕು ಹಿಡಿದ ಮತ್ತು ಕಲೆ ಕೂತ ಡಬ್ಬಿಗಳು.

ಈ ಡಬ್ಬಿಗಳನ್ನು ನೋಡಬೇಕೆಂದು ಅಪೇಕ್ಷಿಸುವವರು ತಮಗೆ ಬೇಕಾದ ಪೆರಾಂಬೂರು ಮತ್ತು ಹುಬ್ಬಳ್ಳಿಗಳಲ್ಲಿಯ ಡಿಪೋ ಸ್ಟೋರುಗಳಲ್ಲಿರುವ ಡಿಸ್ಟ್ರಿಕ್ಟ್ ಕಂಟ್ರೋಲರ್ ಆಫ್ ಸ್ಟೋರ್ಸ್ ಇವರ ಕಡೆಗೆ ಅರ್ಜಿ ಮಾಡಬೇಕು. ಮತ್ತು ಮುಂಜಾನೆ ೮ ಘಂಟೆಯಿಂದ ಸಾಯಂಕಾಲ ೪ ಘಂಟೆಯ ವರೆಗೆ ಸದರಿ ಡಿಪೋಗಳಲ್ಲಿ ಹೋಗಿ ನೋಡಬಹುದು. ಅಲ್ಲಿರುವ ರಾಶಿಗಳಲ್ಲಿ ಡಬ್ಬಿಗಳನ್ನು ಆರಿಸುವದಕ್ಕೆ ಪರವಾನಿಗಿ ಇರುವದಿಲ್ಲ.

ಈ ಡಬ್ಬಿಗಳು ಬೇಕಾದವರು ಯಾವ ವರ್ಗದ ಡಬ್ಬಿಗಳು ಬೇಕೆಂಬುವದನ್ನೂ ಮತ್ತು ಆಯಾ ವರ್ಗದಲ್ಲಿ ಎಷ್ಟೆಷ್ಟು ಡಬ್ಬಿಗಳು ಬೇಕೆಂಬುದನ್ನೂ ಬರೆದು ತಿಳಿಸಬೇಕು. ೧೦೦ ಡಬ್ಬಿಗಳ ಒಂದ ಗುಂಪುಗಳನ್ನೇ ಮಾತ್ರ ಬೇಡಬೇಕು. ಈ ಡಬ್ಬಿಗಳನ್ನು ಡಿಪೋದಲ್ಲಿಯೇ ವಾಗೀನಿಗೆ ಹೇರಿಸಿಕೊಡುವದು. ಪ್ಯಾಕ್ ಮಾಡುವದು ಅವಶ್ಯವಾಗಿದ್ದರೆ, ಅದನ್ನು ಖರೀದಿ ತೆಗೆದುಕೊಂಡವರೇ ತಮ್ಮ ಸ್ವಂತ ಖರ್ಚಿನಿಂದಲೇ ಮಾಡಿಕೊಳ್ಳಬಹುದು.

A. C. TURNER,
Controller of Stores.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ
ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ ಕಟಿಂಗ ಫೀ ೩೫ ಮೂವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ಸರ್ಜಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ಪೋಸ್ಟಮನ್ನನ ಹೃದಯದ್ರಾವಕ ಕೊಲೆ.

ಲಾಹೋರಿನಲ್ಲಿ ಎರಡು ಸಾವಿರ ರೂಪಾಯಿಗಳ ನೋಟು ಮತ್ತು ರೂಪಾಯಿಗಳಿದ್ದ ವಾಲಯಾತಾಲಿ ಎಂಬ ಹೆಸರಿನ ಪೋಸ್ಟಮನ್ನನು ಖಾನಬಹಾದ್ದೂರ ಅಬ್ದುಲ ಅಜೀಜಸಾಹೇಬರ ಮನೆಯತನಕ ಡಿಲಿವ್ಹರಿ ಮಾಡುತ್ತಾ ಹೋದನು. ಆಗ ಮಳೆ ಬಂತು. ಪೋಸ್ಟಮನ್ನನು ಒಳಗೆ ಹೋದನು. ಈತನ ಭಾರವಾದ ಥೈಲಿಯನ್ನು ನೋಡಿ, ಖಾನಬಹಾದ್ದೂರರ ತಮ್ಮನ ಮನಸಿನಲ್ಲಿ ಈತನನ್ನು ಕೊಂದು, ಎಲ್ಲ ರಕಮನ್ನು ಅಪಹರಿಸಬೇಕೆಂಬ ದುರ್ಬುದ್ಧಿ ಹುಟ್ಟಿತು. ಕೂಡಲೆ ಮನೆಯಲ್ಲಿದ್ದ ಬಂದೂಕು ತಂದು, ಗುಂಡು ಹಾಕಿ, ಆತನನ್ನು ಕೊಂದನು ಬಳಿಕ ಒಂದು ಟ್ರಂಕು ತಂದು, ಅದರಲ್ಲಿ ಹೆಣ ಹಾಕಹೋದನು. ಅದು ಹಿಡಿಯಲಿಲ್ಲ. ಚೂರಿ ತಂದು ರುಂಡ ಮತ್ತು ಒಂದು ಕಾಲನ್ನು ಕೊಯ್ದು ಧಡವನ್ನು ಟ್ರಂಕಿನಲ್ಲಿ ಹಾಕಿ, ಅದನ್ನು ರೇಲ್ವೆ ಸ್ಟೇಶನಕ್ಕೆ ಒಯ್ದು, ಒಂದು ಬಂಡಿಯಲ್ಲಿ ಕೂತನು. ದಾರಿಯಲ್ಲಿ ರಕ್ತದ ಕಲೆ ಕೂತಿದ್ದ ತನ್ನ ಅರಿವೆಯ ಗಂಟನ್ನು ಚೆಲ್ಲಿ ಮತ್ತೊಂದು ಸ್ಟೇಶನದಲ್ಲಿಳಿದು, ಮನೆಗೆ ಬಂದನು. ಅಲ್ಲುಳಿದಿದ್ದ ರುಂಡ ಮತ್ತು ಕಾಲನ್ನು ಒಂದು ತೊಗಲಿನ ಚೀಲದಲ್ಲಿ ಹಾಕಿ, ಬಾಯಿಸಿಕಲ್ಲಿನ ಮೇಲೆ ಒಂದು ಅಡವಿಗೆ ತಕ್ಕೊಂಡು ಹೋಗಿ, ಸ್ಪಿರಿಟ ಹಾಕಿ, ಅವನ್ನು ಅರ್ಧಮರ್ಧ ಸುಟ್ಟನು. ಅಲ್ಲಿಂದ ಮನೆಗೆ ಬಂದು, ಬಂದೂಕು ತಕ್ಕೊಂಡು ಹೋಗಿ ಒಂದು ಬಾವಿಯಲ್ಲಿ ಚೆಲ್ಲಿದನು. ಈತನು ತನ್ನ ಅಪರಾಧಗಳನ್ನು ಮುಚ್ಚಿಕೊಳ್ಳಲು ನಾನಾಪ್ರಕಾರದ ಯುಕ್ತಿಗಳನ್ನು ಮಾಡುತ್ತಿದ್ದಾಗ, ಮನೆಯವರು ಕೊಲೆಗಡಕನು ಅದೃಶ್ಯನಾಗಿದ್ದಾನೆಂತಲೂ, ಮನೆಯಲ್ಲಿ ಬಂದೂಕು ಮತ್ತು ಒಂದು ಟ್ರಂಕು ಹೋಗಿದೆಂದೂ ಪೋಲಿಸರಿಗೆ ವರದೀ ಕೊಟ್ಟರು ಪೋಲಿಸರಿಗೆ ಇಷ್ಟು ಸಂಶಯ ಸಾಕಾಯಿತು. ಕೊಲೆಗಡಕನನ್ನು ಹಿಡಿದು ಬಿಟ್ಟರು. ಈತನು ಇಂಟರದಲ್ಲಿ ಓದುವ ವಿದ್ಯಾರ್ಥಿಯಾಗಿದ್ದಾನೆ.

ಗಾಂಧಿ ಟೊಪ್ಪಿಗೆ ಸುಡಿಸಿದ್ದಕ್ಕೆ ದಾವೆ.

ಆಸಾಮುದಲ್ಲೋರ್ವ ಮ್ಯಾಜಿಸ್ಟ್ರೇಟರು ಗಾಂಧೀ ಟೊಪ್ಪಿಗೆಯನ್ನು ಸುಡಿಸಿದರಷ್ಟೇ; ಈಗ ಆ ಆರೋಪಿಯು ತನ್ನ ಟೊಪ್ಪಿಗೆ ಸುಡಿಸಿದ್ದಂ ಹಾನಿಯೆಂದು ೫೫ ರೂಪಾಯಿಗಳನ್ನು ಕೊಡಿಸಬೇಕೆಂದು ಮ್ಯಾಜಿಸ್ಟ್ರೇಟರ ಮೇಲೆ ದಿವಾಣಿಯಲ್ಲಿ ದಾವೇ ಮಾಡಿದ್ದಾನೆ.

ಸರಕಲ್ ಇನಸ್ಪೆಕ್ಟರನ ಕಿಡಿಗೇಡಿತನ.

ವಿಜಾಪುರ ಸತ್ಯಾಗ್ರಹ ಶಿಬಿರದಿಂದ ಶ್ರೀ. ಯವರ ನೇತೃತ್ವದಲ್ಲಿ ೩ ಜನ ಸ್ವಯಂಸೇವಕರು ಪ್ರಚಾರಕ್ಕಾಗಿ ಹೊನ್ನುಟಗಿ ಎಂಬ ಹಳ್ಳಿಗೆ ಹೋಗಿದ್ದರು. ಅಲ್ಲಿ ಸ. ಇನಸ್ಪೆಕ್ಟರನು ಆ ಸ್ವಯಂಸೇವಕರನ್ನು ಹೊರಗೆ ಹಾಕಲು ಪಾಲೀಕಾರರಿಗೆ ಹೇಳಿದನು. ಆ ಪಾಲೀಕಾರನು ಸ್ವಯಂಸೇವಕರ ನೇತೃಗಳಾದ ಶ್ರೀ ಶೋರವಿಯವರನ್ನು ಹೆಗಲಮೇಲೆ ಹೊತ್ತುಕೊಂಡು ಅಪ್ಪಳಿಸುತ್ತ ಊರ ಹೊರಗೆ ಒಯ್ದನು. ಮುಂದೆ ಅವರನ್ನು ಊರು ಬಿಟ್ಟು ೨ ಮೈಲು ದೂರ ಬಿಡಬೇಕೆಂದು ಮುಂದೆ ಹಾಗೆಯೇ ತೆಗೆದುಕೊಂಡು ಹೋದನು. ಇದೆಲ್ಲವನ್ನು ಕಂಡು ಆ ಹಳ್ಳಿಯಲ್ಲಿಯ ಜನರು ಸಿಟ್ಟಿಗೆದ್ದು ಆ ಪಾಲೀಕಾರರನ್ನು ದಬ್ಬಿ ಸ್ವಯಂಸೇವಕರನ್ನು ಊರಲ್ಲಿ ಕರೆದುಕೊಂಡು ಹೋಗಿ ಸಭೆಮಾಡಿದರು. ಸರ್ಕಲ್ ಇನಸ್ಪೆಕ್ಟರರು ಮಿಕಿಮಿಕಿ ನೋಡುತ್ತ ಸುಮ್ಮನೆ ಕುಳಿತಿದ್ದರು.

ಗುಳೇದಗುಡ್ಡದಲ್ಲಿ ಸ್ತ್ರೀಯರ ಪಿಕೆಟಿಂಗ.

ಶರೆ ಕುಡಿಯುವದಿಲ್ಲೆಂದು ಕುಡುಕರು ಸ್ಟಾಂಪು ಬರಕೊಟ್ಟರು.

ಗುಳೇದಗುಡ್ಡದಲ್ಲಿಯ ಮಕ್ತೇದಾರರು ಕುಡುಕರಿಗೆ ಪುಕಟವಾಗಿ ಕುಡಿಸುತ್ತೇವೆ; ಬನ್ನಿರೆಂದು ಮನೆಮನೆಗೆ ಹೋಗಿ ಕರೆದರು. ಹೀಗೆ ಕರೆದರೂ ಗಡಂಗಕ್ಕೆ ಹೋದವರು ಹತ್ತು ಜನರೊಳಗಿದ್ದರು. ಇವರ ವರ್ತಮಾನ ಕೇಳಿ, ಪೈಚಾಚಾರದವರು ಇವರಿಗೆ ಐದು ರೂಪಾಯಿ ದಂಡಮಾಡಿದ್ದಲ್ಲದೆ ಮುಂದೆ ಕುಡಿಯುವದಿಲ್ಲೆಂದು ಕಾಗದ ಬರಿಸಿಕೊಂಡಿದ್ದಾರೆ. ಶ್ರೀ ಸೀತಾಬಾಯಿ ಬೆಳ್ಳಳ್ಳಿ ಮತ್ತು ಶ್ರೀ ಫಕೀರವ್ವಾ ಹಂಪಿಹೊಳಿ ಇವರು ದಿನಾಲು ಪಿಕೆಟಿಂಗ ಮಾಡುತ್ತಿದ್ದಾರೆ.

ಶಿಕಾರಪೂರದಲ್ಲಿ ಗಡಂಗ ಸುಟ್ಟರು.

ಕಾಗದಪತ್ರಗಳು ಬೂದಿಯಾದವು.

ಸಿಂಧ ಪ್ರಾಂತಕ್ಕೆ ಸೇರಿದ ಶಿಕಾರಪೂರದಲ್ಲಿ ಸ್ವಯಂಸೇವಕರು ಸರಾಯಿಯ ಉಗ್ರಾಣದಲ್ಲಿ ಪೀಪುಗಳ ಮೇಲೆ ಕೂತು ಸತ್ಯಾಗ್ರಹ ನಡಿಸಿದರು. ಪೋಲೀಸರು ಬಂದು ಸ್ವಯಂಸೇವಕರನ್ನು ಲಾಠೀ ಪ್ರಯೋಗದಿಂದ ಹೊರಗೆ ಹಾಕಿದರು. ಊರ ಜನರು ಗಡಂಗಕ್ಕೆ ಬೆಂಕಿ ಹಚ್ಚಿ, ಅಲ್ಲಿದ್ದ ಕಾಗದ ಪತ್ರಗಳನ್ನೆಲ್ಲ ಬೂದಿ ಮಾಡಿದರು.

ರಾಜಿಯಾದರೆ ಈ ವಾರದಲ್ಲಾಗುವದು.

ಬುಧವಾರ ಗುರುವಾರ ಈ ಎರಡು ದಿವಸ ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರೂಸಾಹೇಬರು ಯರವಡೆಯ ತುರಂಗದಲ್ಲಿ ಮಹಾತ್ಮರ ಕೂಡ ನಾಲ್ಕು ತಾಸುಗಳ ವರೆಗೆ ಮಾತಾಡಿದರು. ಒಂದು ದಿವಸ ದೇವಿ ಸರೋಜಿನಿಯವರ ಸಂಗಡ ಸಂಭಾಷಣೆ ಮಾಡಿದರು. ಇವರ ಪ್ರಕೃತಿಯು ನೆಟ್ಟಗೆ ಉಂಟು.

ರಾಜಿಯಲ್ಲಿ ಯಾವ ಮಾತು ನಡೆಯಿತು. ಶುಭವೇ ಎಂದು ವರ್ತಮಾನ ಪತ್ರಗಳ ಸುದ್ದಿಗಾರರು ತುರಂಗದಿಂದ ಹೊರಬಿದ್ದು ಬಂದಕೂಡಲೆ ಇವರನ್ನು ದುಂಬಾಲಬಿದ್ದು ಕೇಳಿದರು. ಬ್ಯಾರಿಸ್ಟರ ಜಯಕರರು ಏನೂ ಉತ್ತರ ಹೇಳಲಿಲ್ಲ. ತುಸು ಉಸುರೊಡೆದರೆ ಸಾಕು. ಎಲ್ಲ ಭಟ್ಟಿಯು ಕೆಟ್ಟು ಹೋಗುವದೆಂದು ಇವರು ಹೇಳಿದರು. ಇವರ ಮೋರೆಯು ಗಂಟು ಹಾಕಿತ್ತೆಂದು ಹೇಳಿದರೂ ಸಾಕು. ಸರ ಸಪ್ರುಸಾಹೇಬರು ನಗೆಮೊಗದವರಾಗಿದ್ದರು. ಇದರಿಂದ ಜನರಲ್ಲಿ ರಾಜೀಯಾಗುವ ಗೆಂ.. ಉತ್ಸುಕತೆಯುಂಟಾಗಿರುತ್ತದೆಂದು ಊಹೆಯಾಗಿರುತ್ತದೆ.

ಇವರೀರ್ವರು ಯರವಡೆಯ ಕೆಲಸ ತೀರಿಸಿಕೊಂಡು ಮಹಾತ್ಮರಿಂದ ಪಂಡಿತರ ಹೆಸರಲೆ ಪತ್ರ ಪಡಕೊಂಡು ಅಲಾಹಾಬಾದಕ್ಕೆ ಹೋದರು. ಪಂಡಿತದ್ವಯ ತಂದೆ ಮಗನನ್ನು ಯರವಡೆಗೆ ಕರೆತಂದಿರುವರೆಂಬ ಮಾತು ಸುಳ್ಳು. ಇವರು ನೈನೀತಾಳದಲ್ಲಿ ತಂದೆ ಮಗನನ್ನು ಕಂಡು, ಸಿಮಲಾಕ್ಕೆ ಹೋಗಿ, ಲಾರ್ಡ ಆಯರ್ವಿನಸಾಹೇಬರ ಮುಂದೆ, ನಡೆದ ವಿದ್ಯಮಾನ ಹೇಳುವರು.

ಸರ ಸಪ್ರುಸಾಹೇಬರು ಆಗಸ್ಟ ತಿಂಗಳ ೧ನೆಯ ತಾರೀಖಿನಿಂದ ಬೇರೆ ಕೆಲಸಗಳಲ್ಲಿ ತೊಡಗಿದರಿಂದ, ಅವರಿಗೆ ಮುಂದೆ ಅವಕಾಶ ದೊರೆಯದು ಆದ್ದರಿಂದ ರಾಜಿಯಾದರೆ ಈಯೊಂದು ವಾರದಲ್ಲಾಗುವದೆಂದು ಹೇಳಲ್ಪಟ್ಟಿರುತ್ತದೆ

ಸುಭಾಷ್ ಬೋಸರ ಅನ್ನತ್ಯಾಗ.

ಅಲೀಪೂರ ತುರಂಗದಲ್ಲಿ ಶ್ರೀ ಸುಭಾಷಚಂದ್ರ ಬೋಸರೂ, ಇನ್ನೂರು ಜನ ರಾಜಕೀಯ ಕೈದಿಗಳೂ ಅನ್ನತ್ಯಾಗ ಮಾಡಿದ್ದಾರೆ. ಇವರಲ್ಲಿಯ ೧ ಜನರನ್ನು ‹ ಕ › ವರ್ಗಕ್ಕೆ ಹಾಕಿದ್ದೇ ಕಾರಣ.

ಗೋವೆಯಲ್ಲಿ ಕ್ರಿಶ್ಚನ್ನ ಧರ್ಮ ಬಿಟ್ಟು ಹಿಂದೂ ಆದಂಥವರ ಹೆಸರನ್ನು ಬದಲು ಮಾಡಲಿಕ್ಕೆ ಸರಕಾರದವರು ತಲೆಗೆ ೪೦ ರೂಪಾಯಿ ಫೀ ಬೇಡುತ್ತಲಿದ್ದಾರೆ. ಬಡಜನರು ಇಷ್ಟು ಹಣವನ್ನು ಎಲ್ಲಿಂದ ಬರುವದು ?

ಜಾಹೀರ ನೋಟೀಸು

ಯಾವತ್ತು ಜನರಿಗೆ ಕೆಳಗೆ ಸಹಿ ಮಾಡಿದರು ಕೊಡುವ ನೋಟೀಸು ಏನಂದರೆ ನನ್ನ ಮಗ ಮಲ್ಹಾರ ಉರ್ಫ ಬಾಬೂರಾವ ನರಸಿಂಗರಾವ ನಾಡಿಗೇರ ಸಾ॥ ಧಾರವಾಡ ಇವನು ತುಸು ಭ್ರಾಂತಿಷ್ಟನಿದ್ದು ಇವನ ತಲೆ ಸ್ವಾಧೀನದಲ್ಲಿ ಇರೋ ಲ್ಲ ಮೇಲಾಗಿ ಇವನು ತನ್ನ ಮನಸ್ಸಿಗೆ ಬಂದಂತೆ ಆಸ್ತಿ ವಿಲೆವಾಟ ಮಾಡಲು ಪ್ರಯತ್ನ ಮಾಡಹತ್ತಿದ್ದಾನೆ ನನಗೆ ಇನ್ನೊಬ್ಬ ಮಗನಿದ್ದು ಅವನು ಹುಚ್ಚನಾಗಿ ಹುಚ್ಚ ಆಸ್ಪತ್ರೆಯಲ್ಲಿ ಇರುತ್ತಾನೆ ಆದ್ದರಿಂದ ಸದರಿ ನನ್ನ ಮಗ ಮಲ್ಹಾರ ಉರ್ಫ ಬಾಬೂರಾವ ಅಂಬುವವನಿಗೆ ಯಾರೂ ಏನೂ ಸಾಲಾ ವಗೈರೆ ಕೊಡಬಾರದು ಅಗರ ಅವನ ಕಡೆಯಿಂದ ನಮ್ಮ ಘರಾಣೆದ ಆಸ್ತಿ ವತ್ತೀ ಖರೀದಿ ವಗೈರೆ ಹಿಡಿಯಬಾರದು ಆ ಪ್ರಕಾರ ವತ್ತಿ ಖರೀದಿ ಹಿಡಿದಲ್ಲಿ ಅದು ಬೇಕಾಯದೇಶೀರ ಆಗುವದು ಆದರಿಂದ ಅವರಿಗೆ ಮುಂದೆ ಭಾರಿ ಲುಕ್ಸಾನ ಆಗುವದು ತಿಳಿಯಬೇಕು ತಾ೨೭-೭-೧೯೩೦

ಸಹಿ ಕಾಶೀಬಾಯಿ ಭ್ರತಾರ ನರಸಿಂಗರಾವ
ನಾಡಗೇರ ಸಾ॥ ಧಾರವಾಡ

ಶೀರೆ! ಪತ್ತಲ!! ಕಿಂಗ!!!

ಶ್ರೀದತ್ತ ವ್ಹೀವಿಂಗ್ ಮಿಲ್

ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ
ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಚವಕಶಿ ಮಾಡಿ, ನಿಮಗೆ ಬೇಕಾದ ಮಾಲು ಕೊಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ- ಮಾಲು ತಿರಿಗಿ ತಕ್ಕೊಳ್ಳುವೆವು.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಮಾರಾಟಕ್ಕೆ ಸಿದ್ಧವಾಗಿದೆ-

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾವಧೂತರ ಅಸಲರ್ಜಿ, ಶ್ರೀ. ಆರೂಢ ಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಿಂಗಳ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜೀ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೋ. ವ್ಹಿ. ಎಸ. ಇಟಿಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊಸ್ಲಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಾ ವ ಸಾಗವಾನಿ (೬) ಫೂಟು ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಸಿ ಕೊಡುತ್ತೇವೆ

ಮತ್ತು ಚಲ್ಲರ ಫರ್ನೀಚರ ಕೆಲಸ ಮಾಡುವವರಿಗೆ ತಯಾರ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ರವಿವಾರ ತಾರೀಖು ೨೭ ನೇ ಜುಲೈ ೧೯೩೦ (ಸಂಚಿಕೆ ೩೬೭

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲಿಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ ಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

[illegible]

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತಿ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಸ್ವಾತಂತ್ರ್ಯ ಸಪ್ತಾಹದಲ್ಲಿ

ನೂಲುವ ಮೇಲಾಟ

ಸ್ವಾತಂತ್ರ್ಯ ಸಪ್ತಾಹದಲ್ಲಿ ನಾಲ್ಕನೆ ದಿನ ಅಂದರೆ ಬುಧವಾರ (೩೦-೭-೩೦) ದಿನ **ಕದರುಂಡಿಗೆಯ ಮೆರವಣಿಗೆ**ಯಾಗುವದು. ಕದರುಂಡಿಗೆಯನ್ನು ಚನ್ನಾಗಿಯೂ ಚಾತುರ್ಯದಿಂದಲೂ ಉಪಯೋಗಿಸಬಲ್ಲವರಿಗೆ **ಬೆಳ್ಳಿಯ ಕದರುಂಡಿಗೆ**ಗಳನ್ನು ಮೆಚ್ಚಾಗಿ ಕೊಡುವವರಿದ್ದೇವೆ. ಆ ದಿನದ ಮೆರವಣಿಗೆ ಹೊರಟ ಮೇಲೆ ಮುಗಿಯುವ ವರೆಗೆ **ಮಾತ್ರ ಸಣ್ಣ ನೂಲನ್ನು ನೂತವರೇ** ಈ ಮೆಚ್ಚು ಪಡೆಯಲು ಯೋಗ್ಯರು. ಮೇಲಾಟದಲ್ಲಿ ಮೊದಲು ಬಂದ ನಾಲ್ವರಿಗೆ **ಕನ್ನಡಿಗರ ಕೂಟ**ದ್ದೊಂದು **ವಿಜಯ** ಮುದ್ರಾಲಯದ್ದೊಂದು **ಮಧ್ವ ಬ್ಯಾಂಕಿ**ನದೊಂದು ಹಾಗೂ **ಕಾಂಗ್ರೆಸ** ಕಾರ್ಯಾಲಯದ್ದೊಂದು ಹೀಗೆ ನಾಲ್ಕು ಕದರುಂಡಿಗೆಗಳು ಮೆಚ್ಚು ಕೊಡಲ್ಪಡುವವು. ಇವಲ್ಲದೆ ಕೇವಲ ಹೆಣ್ಣುಮಕ್ಕಳ ಸಲುವಾಗಿಯೇ ಎರಡು ಕದರುಂಡಿಗೆಗಳು ಕಾದಿಡಲಾಗಿವೆ. ಕುತೂಹಲಿಗಳು ಖಾದೀ ಅಂಗಡಿ ಕಾಂಗ್ರೆಸಕಮಿಟಿ ಇಲ್ಲವೆ ವಿಜಯ ಮುದ್ರಾಕ್ಷರಶಾಲೆಯಲ್ಲಿ ಹೆಸರು ಬರೆಸಬೇಕು.

ಧಾರವಾಡ ತಾ|| ೨೬-೭-೩೦ ಕಾರ್ಯದರ್ಶಿ

ಟೀಪು:— ಮೆರವಣಿಗೆಯ ಸ್ಥಳ ಮತ್ತು ವೇಳೆಯನ್ನು ಹಿಂದಿನಿಂದ ತಿಳಿಸಲಾಗುವದು.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಆರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
[illegible] ಡಿಪ್ಲೋಮಿಸ ಪ್ರಿನ್ಸಿಪಾಲ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ಶುದ್ಧ ೨

ಇಜಿಪ್ತದಲ್ಲಾದ ರಕ್ತ ಪಾತ.

—(-:*:-)—

ಕಳೆದ ವಾರದಲ್ಲಿ ಇಜಿಪ್ತದ ರಾಜಕೀಯ ಪರಿಸ್ಥಿತಿಯು ಬಂಡಾಯದ ಸ್ವರೂಪ ಧಾರಣ ಮಾಡಿತ್ತು. ಇದು ಮುರಿಯುವಂತೆ ಹೆದರಿಕೆ ಹಾಕುವ ಅಂತರಂಗದ ಉದ್ದೇಶ ಮತ್ತು ಪಂಕೀಯರ ಜೀವ ರಕ್ಷಣೆಯ ಬಹಿರಂಗದ ಉದ್ದೇದಿಂದ ಬ್ರಿಟಿಶ ಸರಕಾರದವರು ಮಾಲ್ಟಾದಿಂದ ಯುದ್ಧದ ಹಡಗಗಳನ್ನು ಕಳಿಸುವ ಭಯ ಹಾಕಿದರು. ದಂಗೆಯು ಕೇವಲ ರಾಜಕೀಯ ಸ್ವಾತಂತ್ರ್ಯಕ್ಕಾಗಿತ್ತು. ದಂಗೆ ಶಾಂತವಾದರೂ, ಅದು ಬೂದಿ ಮುಚ್ಚಿದ ಕೆಂಡದಂತಿರುತ್ತದೆ.

ದಂಗೆಗುಂಟಾದ ಕಾರಣವು ನಾಹಾಸ ಪಾಷಾನ ಮಂತ್ರಿ ಮಂಡಲದ ರಾಜೀನಾಮೆಯೇ ಆಯಿತು. ಮವಾಳ ಮಂತ್ರಿಗಳ ಕಾಲದಲ್ಲಿ ಲಂಚ ಮತ್ತು ಅನ್ಯಾಯದ ಪ್ರಕಾರಗಳಾದವು. ಲಂಚದ ಆರೋಪ ಹೊರುವ ಮಂತ್ರಿಗಳ ಮೇಲೆ ಖಟ್ಲೆ ಹಾಕಬೇಕೆಂದು ನಾಹಾಸಪಾಷಾನು ಪಾರ್ಲಮೆಂಟ ಸಭೆಯಲ್ಲಿ ಬಿಲ್ಲು ತಂದನು. ಸುಲ್ತಾನನು ಇದಕ್ಕೆ ಮಂಜೂರಿ ಕೊಡದ್ದರಿಂದ, ನಾಹಾಸಪಾಷಾನು ತನ್ನ ಪರಿವಾರ ಸಹಿತವಾಗಿ ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟನು.

ಈತನು ರಾಜೀನಾಮೆ ಕೊಡುವದರಿಂದ ಪಾರ್ಲಮೆಂಟದ ಹೊಸ ಚುನಾವಣೆಯಾಗುವದು ವಾಸ್ತವಿಕವಾಗಿತ್ತು. ಸುಲ್ತಾನರು ಹಾಗೆ ಮಾಡದೆ, ಶಿರಾಳಕೆಟ್ಟಿಯಂಥವನ್ನು ದಿವಾನರಾಗಿ ನೇಮಿಸಿ, ರಾಜ್ಯಕಾರಭಾರ ನಡೆಸಿದ್ದಾರೆ. ಈ ಅಸಹ್ಯವಾದ ಧೋರಣವು ಪ್ರಜೆಗೆ ಬೇಡಾಗಿದೆ. ಅವರು ಲೋಕಮತ ಜಾಹೀರ ಮಾಡಲು ಊರೂರಿಗೆ ಜಾಹೀರ ಸಭೆ ಕೂಡಿಸುವರು. ಸರಕಾರದವರು ಈ ಸಭೆಗಳಿಗೆ ವಿಘ್ನ ತಂದದ್ದರಿಂದ ಪ್ರಜಾಕ್ಷೋಭವು ಮತ್ತಿಷ್ಟು ಹೆಚ್ಚಾಗಲು ನಿಮಿತ್ಯವಾಗಿದೆ. ಹಿಂದುಸ್ಥಾನದಲ್ಲಿ ನಡೆದಂಥ ಕಾಯದೆಭಂಗದ ದ್ವಿತೀಯಾವೃತ್ತಿಯೇ ಹೊರಟಿರುತ್ತದೆಂದು ಧಾರಾಳವಾಗಿ ಹೇಳಬಹುದು.

ರಾಜಧಾನಿ ಕೇರೋ, ಮುಖ್ಯ ಬಂದರ ಅಲೆಕ್ಝಾಂಡ್ರಾ, ಸುಯೇಜ ಕಾಲಿವೆಯ ಮೂಳು, ಇವೇ ಮುಂತಾದ ಚಿಕ್ಕ ದೊಡ್ಡ ಪಟ್ಟಣಗಳಲ್ಲಿ ಭಯಂಕರ ದಂಗೆಗಳಾದವು. ಪೋಲಿಸರು ಗುಂಡು ಹಾಕಿ, ಅನೇಕ ಜನರನ್ನು ಯಮಸದನಕ್ಕೆ ಅಟ್ಟಿದರು. ಘಾಯವಾದಂಥವರ ಸಂಖ್ಯೆಯ ಲೆಖ್ಖ ಹತ್ತುವಂತಿಲ್ಲ. ದಂಗೆಗಾರರೆಂದು ಹಿಡಿಯಲ್ಪಟ್ಟಂಥವರು ಭಂಡ ಸಾವಿರವಾಗಿದ್ದಾರೆ. ಪೋಲಿಸರ ದಂಡಶಾಹಿಯಿಂದ ದಂಗೆಗಳು ಹೊರಗೆ ಶಾಂತವಾದಂತೆ ತೋರಿದರೂ, ಒಳಗಿನ ನೋವು ಹೋಗುವಂಥ ಉಪಾಯ ಮಾಡಿದರೇ ದೇಶಕ್ಕೆ ಕ್ಷೇಮವೆಂಬದನ್ನು ಯಾವ ದೇಶದ ರಾಜ್ಯಕರ್ತರಾದರೂ ಧ್ಯಾನದಲ್ಲಿಡತಕ್ಕದ್ದು.

ಸಂಗಮನೇರದಲ್ಲಿ ಸಾವಿರಾರು ಜನರ ಸತ್ಯಾಗ್ರಹ.

—(೦)—

ವನಗಾವಲದ ಅದ್ಭುತ ಕಾಯದೆಭಂಗ.

——:-:*:-:——

ಅಹಮದನಗರ ಜಿಲ್ಲೆಗೆ ಸೇರಿದ ಸಂಗಮನೇರ ತಾಲೂಕಿನ ಹತ್ತು ಸಾವಿರ ಜನರು ಹೋದ ಬುಧವಾರ ದಿವಸ ವನಗಾವಲದ ಕಾಯದೆಭಂಗ ಮಾಡಿದರು. ಈ ಕೆಲಸದಲ್ಲಿ ಗಂಡಸರು, ಹೆಂಗಸರು. ಹುಡುಗರು, ಕಲಿತವರು ಕಲಿಯದವರು ಎಲ್ಲ ಜಾತಿಯ ಮತ್ತು ಎಲ್ಲ ವ್ಯವಸಾಯಗಳ ಜನರಿದ್ದರು. ಎರೆಯ ನೆಲ, ಆಂದು ವಿಪರೀತವಾಗಿ ಮಳೆ ಸುರಿದು ಓಡಾಡಲಿಕ್ಕೆ ಬರದಷ್ಟು ಕೆಸರಾಗಿದ್ದರೂ, ಅಡವಿಗೆ ಹೋಗುವಂಥವರ ಹುರುಪು ಅವರ್ಣನೀಯವಾಗಿತ್ತು. ಕಾಯದೆಭಂಗ ಮಾಡಿದವರು ಒಂದೇ ಊರವರಲ್ಲ; ಸುತ್ತಲಿನ ಹಲವು ಗ್ರಾಮದವರು. ಸರಕಾರೀ ಅಡವಿಯ ಸುತ್ತಲಿನ ಎಲ್ಲ ದಿಕ್ಕುಗಳು ಸ್ತ್ರೀಪುರುಷರಿಂದ ತುಂಬಿ ಹೋಗಿದ್ದವು.

ಜಂಗಲಕಾ ಕಾಯದಾ ತೋಡದಿಯಾ

ಎಂದು ಜನರು ಗಗನಮಂಡಲವನ್ನಡರುವಂಥ ದನಿಯಿಂದ ಸರಕಾರದ ಹುಲ್ಲಿಗೆ ಕುಡಗೋಲು ಹಾಕುತ್ತಿದ್ದರು. ಪಾಪ. ಸರಕಾರೀ ಕಾಮದಾರರಿಗೆ ಇವರನ್ನು ಹಿಡಿಯುವಷ್ಟು ಪೋಲಿಸ ಸಹಾಯವೇ ಇರಲಿಲ್ಲ. ಇವರು ನಡೆಸಿದ ಅತಿಕ್ರಮಣವನ್ನು ಸುಮ್ಮನೆ ನೋಡುತ್ತಾ ನಿಂತಿದ್ದರು. ಹುಲ್ಲಿನ ಕೊಯ್ಕದಿಂದ ಸರಕಾರದ ಹದಿನಾರು ಸಾವಿರದ ಹಾನಿಯಾಗಿರುತ್ತದೆಂದು ಅಂದಾಜು ಮಾಡಲ್ಪಟ್ಟದೆ. ಅಂಕೋಲೆ ಮುಂತಾದ ಸ್ಥಳಗಳಲ್ಲಿ ಕಾಯದೆಭಂಗದ ಉಪ್ಪನ್ನು ಮೆರೆಸಿದರಷ್ಟೇ; ಅದೇ ಪ್ರಕಾರ ಸಂಗಮನೇರದಲ್ಲಿ ಕೊಯ್ದು ತಂದ ಹುಲ್ಲಿನ ಹೊರೆಗಳ ಮೆರವಣಿಗೆ ತೆಗೆದಿದ್ದರು.

ಬೆಳಗಾವಿಯ ಕಲೆಕ್ಟರರಿಗೆ ಖಾನಾಪೂರ ತಾಲೂಕಿನವರ ನೋಟೀಸು.

—(೦)—

ಖಾನಾಪೂರ ತಾಲೂಕಿನವರು ತಮ್ಮ ಜಿಲ್ಲೆಯ ಕಲೆಕ್ಟರರಿಗೆ ಮುಂದೆ ಕೊಟ್ಟಂತೆ ಒಂದು ಖಂಡತುಂಡಿನ ಪತ್ರ ಬರೆದಿರುತ್ತಾರೆ:-

೧ ಪ್ರತಿಯೊಂದು ಹಳ್ಳಿಯಲ್ಲಿ ರೈತರ ವಿಚಾರದಿಂದ ದನಗಳು ಮೆಯ್ಯಲಿಕ್ಕೆ ಒಂದು ಅಡವಿಯನ್ನು ಗೊತ್ತು ಮಾಡಿ ಕೊಡತಕ್ಕದ್ದು.

೨ ಈ ಅಡವಿಯ ಹೊರ್ತು ಸರಕಾರದ ಉಳಿದ ಭೂಮಿಯನ್ನು ಎಕರೆಗೆ ನಾಲ್ಕಾಣೆ ತಕ್ಕೊಂಡು ರೈತರಿಗೆ ಸಾಗಮಾಡಲಿಕ್ಕೆ ಕೊಡತಕ್ಕದ್ದು.

೩ ಕಾದಿಟ್ಟ ಅಡವಿಯಲ್ಲಿರುವ ಹುಲ್ಲು, ಉರುವಲ ತೊಪ್ಪಲ ಮುಂತಾದವುಗಳನ್ನು ರೈತರ ಉಪಯೋಗಕ್ಕೆ ಕೊಡತಕ್ಕದ್ದು ಮಾರಾಟತಕ್ಕಲ್ಲ.

೪ ದನಗಳ ದೆಸೆಯಿಂದ ತಕ್ಕೊಳ್ಳುವ ಫೀ ರದ್ದು ಮಾಡಬೇಕು.

೫ ಬೆಳೆಯ ರಕ್ಷಣೆಗಾಗಿ ರೈತರಿಗೆ ಬಂದೂಕು ಕತ್ತಿಯ ಪರವಾನಗಿ ಕೊಡಬೇಕು.

೬ ಸ್ವಂತದ ಹೊಲದೊಳಗಿನ ಅಳಲೆಕಾಯಿಗಳನ್ನು ಫಾರೆಸ್ಟದವರ ಅಪ್ಪಣೆ ಪಡಕೊಂಡು ಇಳಿಸಿಕೊಂಡು ಹೋಗುವದಕ್ಕಾಗಿದ್ದ ನಿಯಮವನ್ನು ರದ್ದು ಮಾಡಬೇಕು.

ಮೇಲಿನ ಶರ್ತುಗಳನ್ನು ಪೂರ್ಣ ಮಾಡದಿದ್ದರೆ- ರೈತರು ಕಾಯದೆಭಂಗ ಮಾಡಿ, ಹುಲಬನ್ನಿ ಕೊಡದೆ ದನಗಳನ್ನು ಸರಕಾರೀ ಅಡವಿಯಲ್ಲಿ ಮೇಯಿಸುವರು.

ದರಿದ್ರ ಬಂಡಿಯಲ್ಲಿ ಕೂಡ್ರುವದಿಲ್ಲೆಂದು ಕೈದಿಗಳ ಸತ್ಯಾಗ್ರಹ.

——(೦)——

ಮುಂಬಯಿಯ ಕೈದಿಗಳನ್ನು ನಾಸಿಕದ ತುರಂಗಕ್ಕೆ ಕರಕೊಂಡು ಹೋಗಲು ಬಾಯಿಖಾಳಾದ ಸ್ಟೇಶನಕ್ಕೆ ಬಂದರು. ಪೋಲಿಸರು ಇವರಿಗೆ ಮೂರನೆಯ ವರ್ಗದ ಡಬ್ಬಿಯಲ್ಲಿ ಕೂಡ್ರಲಿಕ್ಕೆ ಹೇಳಿದರು. ಇಂಥ ಭಿಕಾರ ಬಂಡಿಯಲ್ಲಿ ನಾವೆಂದೂ ಕೂಡ್ರತಕ್ಕವರಲ್ಲ; ಕನಿಷ್ಠ ಪಕ್ಷಕ್ಕೆ ಇಂಟರದಲ್ಲಿ ಕೂಡ್ರುವೆವೆಂದು ಕೈದಿಗಳು ಅಂದರು. ಹೀಗೆ ಪೋಲಿಸರಿಗೂ ಇವರಿಗೂ ಹಾಕಾಟ ನಡೆಯುತ್ತಿರುವಾಗ ಬಂಡಿಯು ಹೊರಟು ಹೋಯಿತು. ಪೋಲಿಸರು ಕಣ್ಣು ತೆಗೆದು, ಒಟ್ಟರಿಸಿದರು. ಸತ್ಯಾಗ್ರಹಿಗಳು ಇವರಿಗೆ ಜಪ್ಪಯ್ಯವೆನ್ನಲಿಲ್ಲ. ಬಂಡಿ ಹೋದ್ದರಿಂದ ಪೋಲಿಸರು ಇವರನ್ನು ತಿರುಗಿ ಜೇಲಿಗೆ ಕರಕೊಂಡು ಹೋದರು. ಅಲ್ಲಿಂದ ಇವರನ್ನು ಬೋರಿಬಂದರಕ್ಕೆ ಕರಕೊಂಡು ಹೋಗಿ, ಇಂಟ

ಲ್ಲಿ ಕಡಿದ್ರಿಸಿಕೊಂಡು, ನಾಸಿಕಕ್ಕೆ ಹೋದರು. ವ್ಹಾಲಂಟಿಯರರ ದಯೆಯಿಂದ ಪೋಲೀಸರಿಗೆ ಇಂ ರದ ಪ್ರವಾಸದ ಸೌಖ್ಯ ದೊರೆಯಿತು. ದೊಡ್ಡ ರ ಸಹವಾಸದಿಂದ ಹೀಗೆ ಸುಖವಾಗುವದುಂಟು

ಮುಸಲಮಾನ ಮತ್ತು ಸಿವ್ಹಿಲ ಸರ್ವಂಟರ ಸಂಗನಮತ.

—(೦)—

ಮುಸಲಮಾನರಿಗೆ ರಾವುಂಡಟೇಬಲಿನಲ್ಲಿ ಜಂ ಜನರ ಮೇಲೆ ತಮಗೆ ಹೆಚ್ಚಿಗೆ ಹಕ್ಕುಗಳನ್ನು ದೊರಕಿಸಿಕೊಡುವಂತೆ ಸಿವಿಲಸರ್ವಂಟ ಮತ್ತು ಮಿ. ಜಲಿಹುಶೇನರ ನಡುವೆ ಒಪ್ಪಂದವಾಗಿದೆ. ಈ ಉಪಕಾರಕ್ಕಾಗಿ ಮಿ. ಫಜಲಿಸಾಹೇಬರು ಇಲಾಖೆ ಮತ್ತು ಹಿಂದುಸ್ಥಾನ ಸರಕಾರದ ಆತಳತೆಯಲ್ಲಿ ಸಿ ಲ ಸರ್ವಂಟರಿಗೆ ಅನುವು ದೊರೆಕಿಸಿಕೊಡುವಂತೆ ವಚನಕೊಟ್ಟಿರುತ್ತಾರೆ. ಪ್ರಾಂತಿಕ ಸ್ವಾತಂತ್ರ್ಯದ ಯೋಜನೆಯಲ್ಲಿ ಸಿವ್ಹಿಲ ಸರ್ವಂಟರಿಗೆ ಕಮೀಶನರ ಗದ್ದೆಯೇ ಕೊನೆಯ ಅಧಿಕಾರವಾಗುತ್ತದೆ ಕೌ ಲರರಾಗುವದೇ ಇಲ್ಲ. ಈ ಪ್ರಕಾರ ಉಭಯ ರ ನಡುವೆಯಾದಂಥ ಹೇಯವಾದ ಕರಾರಗಳಿಗೆ ಎಷ್ಟು ಬರಬಾರದೆಂದು ಕಾಂಗ್ರೆಸದವರನ್ನು ರಾವುಂಡಟೇಬಲಕ್ಕೆ ಬರಗೊಡಬಾರದೆಂದೂ, ಸಿವ್ಹಿಲಸರ್ವಂಟರು ಪಂಡಿತ ಮೋತಿಲಾಲರನ್ನು ವಿಹಿತಾ ಯದ ವಿಚಾರ ಮಾಡದೆ, ಅವಸರದಿಂದ ಹಿಡಿದು, ತುರಂಗದಲ್ಲಿ ಹಾಕಿದರೆಂದು ದೊಡ್ಡ ದೊಡ್ಡ ಇಂಗ್ರೇಜಿ ವರ್ತಮಾನಪತ್ರಗಳಲ್ಲಿ ಲೇಖಗಳು ಬರುತ್ತಿವೆ

ಮುಸಲಮಾನರ ಆತುರತೆ-

ಕೌನ್ಸಿಲ ಮತ್ತು ಅಸೆಂಬ್ಲಿಯ ಚುನಾವಣೆಗಾಗಿ ಮುಸಲಮಾನರು ಬಹಳವಾಗಿ ಆತುರಗೊಂಡಂತೆ ತೋರುತ್ತದೆ. ಏಕೆಂದರೆ ಈಗಾಗಲೆ ಯಾರಾರು ಉಮೇದವಾರರಾಗುವರೆಂಬ ಹೆಸರು ದೊಡ್ಡ ಯಾ ಬಿಯೇ ವರ್ತಮಾನಪತ್ರಗಳಲ್ಲಿ ಬರಲಾರಂಭಿಸಿದೆ. ಮೌಲಾನಾ ಮಹಮುದಲ್ಲಿಸಾಹೇಬರೂ ಉಮೇದವಾರರಾಗಿ ನಿಲ್ಲುವರು. ಚುನಾವಣೆಯಾದ ಬಳಿಕ ರಾವುಂಡ ಟೇಬಲಿಗಾಗಿ ವಿಲಾಯತಿಯ ಹಾದೀ ಹಿಡಿಯುವರು

ಹೈದರಾಬಾದಿನ ಹುಶೇನಸಾಗರ ಕೆರೆಯಲ್ಲಿ ನಾವಿನಲ್ಲಿ ಕೂತು ಸಂಧ್ಯಾಮಾಡುತ್ತಿದ್ದ ಈರ್ವರು ಸಾಹೇಬರು, ನಾವು ಬೋಲ್ಟ ಬಿದ್ದು ಸತ್ತರು. ಎಷ್ಟು ಹುಡುಕಿದರೂ ಅವರ ಹೆಣಗಳು ಸಿಕ್ಕಿಲ್ಲ. ನಡುಕೆರೆಯಲ್ಲಿ ಇವರು ಮುಣುಗುವದನ್ನು ಸಾವಿರಾರು ಜನರು ನೋಡಿದರು.

ಸರಸಪ್ರು ಜಯಕರರ ಪ್ರಯಾಗಕ್ಕೆ ಪ್ರಯಾಣ.

—(೦)—

ಮಹಾತ್ಮರಿಗೆ ದಿನಾಲು ಟಾಯಿಮ್ಸ ಮತ್ತು ಕ್ರಾನಿಕಲ ಪತ್ರಗಳು ದೊರೆಯುತ್ತಿರುವದರಿಂದ, ಅವರಿಗೆ ದೇಶದಲ್ಲಿ ನಡೆದ ಸಂಗತಿಯು ತಪ್ಪದೆ ತಿಳಿಯುತ್ತಾ ಬಂದಿದೆ. ಆದುದರಿಂದ, ಅವರಿಗೆ ಶಿಷ್ಟಾಯಿಗಳು ಹೊಸದಾಗಿ ಯಾವದನ್ನೂ ಹೇಳುವ ಅಗತ್ಯವುಂಟಾಗಲಿಲ್ಲ. ಮಹಾತ್ಮರು ಪಂಡಿತದ್ವಯರಿಗೆ ಕೊಟ್ಟ ಪತ್ರದಿಂದ ಇವರ 'ರಾಜಿಯ ವಿಚಾರವು ಸದ್ಯದಲ್ಲಂತೂ ಆಶೆಯನ್ನು ಕೊಡಿಸಿರುತ್ತದೆಂದು ಧ್ವನಿತವಾಗಿದೆ. ಇವರು ನಿನ್ನೆ ರಾತ್ರಿ ಪ್ರಯಾಗ ಮುಟ್ಟಿದರು. ನಾಳಿನ ದಿವಸ ತುರಂಗದಲ್ಲಿ ಪಿತಾ ಪುತ್ರರನ್ನು ಕಂಡು, ಮಾತನಾಡುವರು. ಪಂಡಿತ ಜವ್ಹೇರಲಾಲರು ಬಹಳ ದೀರ್ಘಕ್ಕೆ ಹೋಗಲಾರರೆಂದು ಇವರು ಭಾವನೆ ಮಾಡಿದ್ದಾರೆ. ಇವರು ಪುಣೆ ಮತ್ತು ಮುಂಬಯಿಯಲ್ಲಿಯೂ ಸರದಾರ ಪಟೇಲರೇ ಮುಂತಾದವರ ಕೂಡ ರಾಜಿಯ ಕುರಿತು ಸಂಭಾಷಣೆ ಮಾಡಿದರು.

ಇವರೀರ್ವರು ತುರಂಗದ ಬಾಗಿಲದಿಂದ ಹೊರಗೆ ಬಂದ ಕೂಡಲೆ ಒಂದು ವಿನೋದ ನಡೆಯಿತು. ಇಷ್ಟಿಗೆ ಪಂಡಿತ ಮೋತಿಲಾಲ ಜವ್ಹೇರಲಾಲರನ್ನು ತಂದಿರುವರೇ ಎಂಬುದಾಗಿ ಕೆಲವರು ಮಾಡಿದ ಪ್ರಶ್ನಕ್ಕೆ ಉತ್ತರವಾಗಿ ಪಿತಾ ಪುತ್ರರೇ ಏಕೆ? ಲಾರ್ಡ ಆಯರ್ವಿನ ಮತ್ತು ಮಿ ಬೆನ್ನಸಾಹೇಬರೂ ಬಂದಿದ್ದರು. ಮಿ ಮ್ಯಾಕಡೋನಾಲ್ಡ ಸಾಹೇಬರೂ ವಿಮಾನದಿಂದ ಈಗ ಬರುವರೆಂದು ಉತ್ತರ ಕೊಟ್ಟರು.

ಪ್ರಯಾಗದಲ್ಲಿ ಸಂಭಾಷಣೆಯಾದ ಬಳಿಕ ಇವರು ಪುನಃ ಮಹಾತ್ಮರನ್ನು ಕಾಣಲು ಯರವಡೆಗೆ ಬರಬಹುದೆಂದು ಲೋಕ ಚರ್ಚೆ ನಡೆದಿದೆ.

ಮುಂಬಯಿಯ ಪರದೇಶಿ ಜವಳಿಯ ಮಾರ್ಕೆಟು ಬಂದಾದವು.

—(೦)—

ಮುಂಬಯಿಯಲ್ಲಿ ವಿಲಾಯತಿಯ ಬಟ್ಟೆಯ ವ್ಯಾಪಾರ ಮಾಡುತ್ತಿರುವ ವರ್ತಕರು ಸಭೆ ಮಾಡಿ, ಸರಕಾರವು ರಾಷ್ಟ್ರೀಯ ಬೇಡಿಕೆಯನ್ನು ಪೂರ್ಣ ಮಾಡುವ ತನಕ ಮಾರ್ಕೆಟು ಬಂದು ಮಾಡಬೇಕೆಂಬ ಠರಾವು ಮಾಡಿದರು. ಒಂದು ತಿಂಗಳ ತನಕ ಬಂದಿಡಬೇಕೆಂದು ಒಬ್ಬರು ಸೂಚಿಸಿದರು. ಆದರೆ ಅದು ಪಾಸಾಗಲಿಲ್ಲ.

ದಿವಾನ ಚಾಧವರಾಯರು ಅಸೆಂಬ್ಲಿಯ ಚುನಾವಣೆಗಾಗಿ ಉಮೇದವಾರರಾಗಿ ನಿಲ್ಲುವರು. ಅಲ್ಲಿ ಹೊಸ ಸುಧಾರಣೆಯ ಮಂತ್ರಿಯಾಗುವ ಆಶೆಯಿರಬಹುದು

ರೇಲ್ವೆ ಗಾರ್ಡನು ಇಬ್ಬರನ್ನು ಕೊಂದು ತಾನೂ ಗುಂಡು ಹಾಕಿಕೊಂಡನು.

—(೦)—

ಜಗತಪುರಿಯಲ್ಲಿಯ ಅನ[illegible]ರನೆಂಬ ಮುಸಲಮಾನ ಗಾರ್ಡನಿಗೆ ಪಂಜಾಬಿ ಸುಂದರಿಯಾದಂಥ ಹೆಂಡತಿ ಇದ್ದಳು. ಈಕೆಯು ಅಡ್ಡ ದಾರಿಗೆ ಬಿದ್ದ ಸಂಶಯ ಬಂತು. ಒಬ್ಬ ಹುಡುಗನು ಕುಂಟಲತನ ಮಾಡುತ್ತಾನೆಂದೂ ಕಂಡಿತು. ಈತನು ಈ ಹುಡುಗನ ತಲೆಗೆ ಗುಂಡು ಹಾಕಿ, ಕೊಂದನು. ಬಳಿಕ ಹೆಂಡತಿಯ ಕೂಡ ಸಂಬಂಧವಿದ್ದ ಬ್ರೈಕ್ಸ ಮನಸನನ್ನು ಕೊಂದನು. ಬಳಿಕ ಹೆಂಡತಿಯನ್ನು ಹುಡುಕಿದನು. ಅವಳು ಸಿಗದಾದಳು. ತಾನೇ ಗುಂಡು ಹಾಕಿಕೊಂಡು ಇಹಲೋಕದ ವೇದನೆಯಿಂದ ಪಾರಾದನು.

ಲಾರ್ಡ ಆಯರ್ವಿನಸಾಹೇಬರ ಎದುರಿಗೇ ಹರತಾಳ.

—(೦)—

ಸಿಮ್ಲಾದಲ್ಲಿ ಪೋಲೀಸರು ಕಾಂಗ್ರೆಸದ ಸೆಕ್ರೆಟರಿ ಮತ್ತು ಸ್ವಯಂಸೇವಕರನ್ನು ದಸ್ತಗಿರ ಮಾಡಲು ಊರ ಜನರು ಹರತಾಳ ಮಾಡಿ, ಎಲ್ಲ ವ್ಯವಹಾರ ಬಂದು ಮಾಡಿದರು. ಲಾರ್ಡಸಾಹೇಬರು ವೇಷ ಬದಲಿಸಿಕೊಂಡು ಊರೊಳಗೆ ಹೋಗಿ ನೋಡಿದ್ದರೆ- ಅವರಿಗೆ ಹರತಾಳವನ್ನು ಪ್ರತ್ಯಕ್ಷ ನೋಡಲು ದೊರೆಯುತ್ತಿತ್ತು.

ಲಾಠಿಯ ಹೊಡತದಿಂದ ವಿದ್ಯಾರ್ಥಿಯ ಮರಣ.

ಢಾಕಾ ಯುನಿವ್ಹರ್ಸಿಟಿಯ ಮುಂದೆ ಹಲವು ವಿದ್ಯಾರ್ಥಿಗಳು ಪಿಕೆಟಿಂಗ ಮಾಡುತ್ತಿದ್ದಾಗ ಪೋಲೀಸರು ಅವರಿಗೆ ಲಾಠಿಯ ಹೊಡತ ತಿನ್ನಿಸಿದರು. ಅವರಲ್ಲಿ ಒಬ್ಬನಿಗೆ ವಿಶೇಷ ಮಾತಿ ಪೆಟ್ಟುಗಳು ಸಿಕ್ಕವು. ಇದರ ನೋವು ಹೆಚ್ಚಾಗಿ ಅವನು ಮರಣ ಹೊಂದಿದನು.

ಮಾಯಾ ಬಾಜಾರ.

ಇಂದು ರವಿವಾರ ತಾ|| ೨೭-೭-೧೯೩೦ನೇ ದಿವಸ ಮಧ್ಯಾನ್ಹ ೪ ಗಂಟೆಗೆ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು ಅನ್ನಪೂರ್ಣಾ ಥಿಯೇಟರದಲ್ಲಿ ಕರ್ನಾಟಕ ಮಹಿಳಾ ವಿದ್ಯಾಲಯದ ಸಹಾಯಾರ್ಥವಾಗಿ "ಮಾಯಾಬಾಜಾರ" ಎಂಬ ನಾಟಕ ಪ್ರಯೋಗವನ್ನು ಮಾಡಿ ತೋರಿಸುವವರಿದ್ದಾರೆ. ವಿದ್ಯಾಲಯದ ಎಲ್ಲ ಹಿತಚಿಂತಕರೂ ಬಂದು ವಿದ್ಯಾಲಯಕ್ಕೆ ಸಹಾಯ ಮಾಡಬೇಕಾಗಿ ವಿನಂತಿ ಇರುತ್ತದೆ.

ಕೃಷ್ಣರಾವ ಗುಂಜೀಕರ
ಚೇರಮನ್
ಕರ್ನಾಟಕ ಮಹಿಳಾ ವಿದ್ಯಾಲಯ, ಧಾರವಾಡ

"ಕರ್ಮವೀರ" ನ ಬಿನ್ನಹ.

ಹೊಸದಾಗಿ ಅಮಲಿನಲ್ಲಿ ಬಂದ ವೃತ್ತಪತ್ರ ಕಾನೂನಿನ ೪ನೆಯ ನಿಯಮದ ಮೇರೆಗೆ ೧೦೦೦ ರೂಪಾಯಿಗಳ ಜಾಮೀನನ್ನು ಕೊಡಿರೆಂದು ಸರಕಾರದವರು "ಕರ್ಮವೀರ" ಪತ್ರಕ್ಕೆ ಕಳುಹಿಸಿದ ನೋಟೀಸು ತಾ|| ೧೭-೭-೧೯೩೦ ನೆಯ ದಿವಸ ನಮ್ಮ ಕೈಸೇರಿತು. ಇಂತಹ ಪ್ರಸಂಗ ಬಂದರೆ ಜಾಮೀನು ಕೊಟ್ಟು ಪತ್ರವನ್ನು ನಡೆಸುವದಕ್ಕಿಂತಲೂ ಅದನ್ನು ವೃತ್ತಪತ್ರ ಕಟ್ಟಳೆಯಿರುವವರೆಗೆ ಪತ್ರವನ್ನು ನಿಲ್ಲಿಸುವದೇ ಶ್ರೇಯಸ್ಕರವೆಂದು ಶ್ರೀ. ದಿವಾಕರರ ಅಭಿಪ್ರಾಯವಿತ್ತು. ಅಲ್ಲದೆ ಅಖಿಲ ಭಾರತೀಯ ಕಾಂಗ್ರೆಸ್ ಕಾರ್ಯಕಾರೀ ಮಂಡಲದವರೂ ವರ್ತಮಾನಪತ್ರಗಳು ಜಾಮೀನು ಕೊಡಬಾರದೆಂದು ಸ್ಪಷ್ಟವಾಗಿ ನಿರ್ಬಂಧಿಸಿದ್ದಾರೆ. ಕಾಂಗ್ರೆಸ್ಸು ಹಾಕಿಕೊಟ್ಟ ಮಾರ್ಗವನ್ನು ತಪ್ಪದೇ ಅನುಸರಿಸುವದು, "ಕರ್ಮವೀರ" ದ ನಿಯಮವಿದ್ದುದು ಎಲ್ಲರಿಗೂ ಗೊತ್ತೇ ಇದೆ. ಆದುದರಿಂದ ವರ್ತಮಾನಪತ್ರವನ್ನು ಕೆಲಕಾಲ ನಿಲ್ಲಿಸುವದರಿಂದ ವರ್ತಮಾನಪತ್ರಕ್ಕೂ ಓದುಗರಿಗೂ ಅನನುಕೂಲತೆಯನ್ನುಂಟುಮಾಡುವದಾದರೂ ಅದೇ ರಾಷ್ಟ್ರೀಯ ಸ್ವಾಭಿಮಾನದ ಮಾರ್ಗವೆಂದು ತಿಳಿದು ಸರಕಾರದ ಅನ್ಯಾಯದ ವೃತ್ತಪತ್ರದ ಕಟ್ಟಳೆಯು ಅಮಲಿನಲ್ಲಿರುವವರೆಗೆ ಅಂದರೆ ನಮ್ಮ ಲೆಕ್ಕದಂತೆ ಇನ್ನು ೬|| ತಿಂಗಳ ವರೆಗೆ "ಕರ್ಮವೀರ" ಪತ್ರಿಕೆಯನ್ನು ನಿಲ್ಲಿಸಬೇಕೆಂದು ನಿಶ್ಚಯಿಸಿದ್ದೇವೆ. ಇದುವರೆಗೆ ಎಡೆಬಿಡದೆ ಸಹಾಯ ಮಾಡುತ್ತ ಬಂದಿರುವ "ಕರ್ಮವೀರ" ನ ಮಿತ್ರರಿಗೂ ಓದುಗರಿಗೂ ನಾವು ತುಂಬಾ ಋಣಿಯಾಗಿದ್ದೇವೆ. ೬|| ತಿಂಗಳಾದ ಮೇಲೆ "ಕರ್ಮವೀರ" ಮತ್ತೆ ಎಲ್ಲರ ಕೈಸೇರುವನು.

೨೦-೭-೧೯೩೦

ದತ್ತಾತ್ರೇಯ ಪರಶುರಾಮ ಕರಮರಕರ
ಸಂಪಾದಕರು "ಕರ್ಮವೀರ" ಧಾರವಾಡ.

ಬ್ಯಾಡಗಿ

ಇದೇ ಶ್ರಾವಣ ಶುದ್ಧ ೫ ಬುಧವಾರ ತಾ. ೩೦-೭-೩೦ನೇ ಸಾಯಂಕಾಲ ೫ ಕ್ಕೆ ಇಲ್ಲಿಯ ಶ್ರೀ ಲಿಂಗರಾಜ ವಾಚನಾಲಯದ ಒಂಬತ್ತನೆಯ ವರ್ಷದ ಸಭೆಯು, ಶ್ರೀ. ಸಿದ್ದಪ್ಪನವರು ಹೊಸಮನಿ ಬಿ. ಎ. ಎಲ್. ಎಲ್. ಬಿ. ಹಾವೇರಿ ಇವರ ಅಧ್ಯಕ್ಷತೆಯ ಕೆಳಗೆ ನಡೆಯುವದು. ಅದೇ ವೇಳೆಯಲ್ಲಿ ಕೈರಾಟಿಯಿಂದ ಉತ್ತಮ ನೂಲು ತೆಗೆದು ತೋರಿಸಿದವರಿಗೆ, ಅಧ್ಯಕ್ಷರವರ ಹಸ್ತದಿಂದ ಇಲ್ಲಿಯ ತರುಣ ಸಂಘದವರು ಇನಾಮು ಕೊಡಿಸುವರು.

ಮರುದಿವಸ, ಶ್ರೀ. ವೀರಪ್ಪನವರು ಬಳಿಅಂಗಡಿ ಬಿ. ಎ. ಎಲ್. ಎಲ್. ಬಿ. ಹುಬ್ಬಳ್ಳಿ ಇವರ ಅಧ್ಯಕ್ಷತೆಯಲ್ಲಿ ಶ್ರೀ. ಶಿವಯೋಗೀಶ್ವರ ವೀರಶೈವ ಬೋರ್ಡಿಂಗಿನ ೫ನೇ ವರ್ಷದ ಸಭೆಯು ನಡೆಯುವದು. ಸರ್ವರೂ ಬರಬೇಕೆಂದು ವಿನಂತಿ.

ಬ್ಯಾಡಗಿ   ರು. ಫ. ಸಂಕಣ್ಣನವರ
ಸೆಕ್ರೆಟರಿ
ತಾ ೨೫-೭-೩೦   ಶ್ರೀ ಲಿಂಗರಾಜ ವಾಚನಾಲಯ.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡುತ್ತೇವೆ. ಇದರಲ್ಲಿ ವಾದೀ ಶ್ರೀ. ಸಿದ್ಧಾಂತ ಶಿವದೂತರ ಅಸಲ ಅರ್ಜಿ, ಶ್ರೀ. ಆರೂಢ ಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತೇವೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡುತ್ತೇವೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆದಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ, ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಜಾಹೀರ ನೋಟೀಸು.

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳೆ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆದು ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವವರಿಗೆ ತಯಾರ ಸಿಗುತ್ತವೆ

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನ್ನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರದೊಳಗಾಗಿ ಹತ್ತು ಜನರನ್ನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧) ಧಾರವಾಡ ಸೋಮವಾರ ತಾರೀಖು ೨೮ ನೇ ಜುಲೈ, ೧೯೩೦ (ಸಂಚಿಕೆ [illegible]

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟು ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

ಮ್ಯಾ. ವಿಜಯ ಧಾರವಾಡ

ಸ್ವಾತಂತ್ರ್ಯ ಸಪ್ತಾಹದಲ್ಲಿ

ನೂಲುವ ಮೇಲಾಟ

ಸ್ವಾತಂತ್ರ್ಯ ಸಪ್ತಾಹದಲ್ಲಿ ನಾಲ್ಕನೆ ದಿನ ಅಂದರೆ ಬುಧವಾರ (೩೦-೭-೩೦) ದಿನ **ಕದರುಂಡಿಗೆಯ ಮೆರವಣಿಗೆಯಾಗುವದು.** ಕದರುಂಡಿಗೆಯನ್ನು ಚನ್ನಾಗಿಯೂ ಚಾತುರ್ಯದಿಂದಲೂ ಉಪಯೋಗಿಸಬಲ್ಲವರಿಗೆ **ಬೆಳ್ಳಿಯ ಕದರುಂಡಿಗೆ**ಗಳನ್ನು ಬಹುಮಾನ ಕೊಡುವವರಿದ್ದೇವೆ. ಆ ದಿನದ ಮೆರವಣಿಗೆ ಹೊರಟ ವೇಳೆ ಮುಗಿಯುವ ತನಕ ಮಾತ್ರ **ಸಣ್ಣ ನೂಲನ್ನು ನೂತವರೇ** ಈ ಬಹುಮಾನ ಪಡೆಯಲು ಯೋಗ್ಯರು. ಮೇಲಾಟದಲ್ಲಿ ಮೊದಲು ಬಂದ ನಾಲ್ವರಿಗೆ **ಕನ್ನಡಿಗರ ಕೂಟ**ದೊಂದು **ವಿಜಯ** ಮುದ್ರಾಲಯದ್ದೊಂದು **ಮಧ್ವ ಬ್ಯಾಂಕಿನ**ದೊಂದು ಹಾಗೂ **ಕಾಂಗ್ರೆಸ** ಕಾರ್ಯಾಲಯದ್ದೊಂದು ಹೀಗೆ ನಾಲ್ಕು ಕದರುಂಡಿಗೆಗಳು ಬಹುಮಾನ ಕೊಡಲ್ಪಡುವವು. ಇವಲ್ಲದೆ ಕೇವಲ ಹೆಣ್ಣು ಮಕ್ಕಳ ಸಲುವಾಗಿಯೇ ಎರಡು ಕದರುಂಡಿಗೆಗಳು ಕಾದಿರಿಸಲಾಗಿವೆ. ಕುತೂಹಲಿಗಳು [illegible] ಕಾಂಗ್ರೆಸಕಮಿಟಿ ಇಲ್ಲವೆ ವಿಜಯ ಮುದ್ರಾಕ್ಷರಶಾಲೆಯಲ್ಲಿ ಹೆಸರು ಬರೆಸಬೇಕು.

ಧಾರವಾಡ ತಾ|| ೨೬-೭-೩೦ ಕಾರ್ಯದರ್ಶಿ

ಟೀಪು — ಮೆರವಣಿಗೆಯ ಸ್ಥಳ ಮತ್ತು ವೇಳೆಯನ್ನು ಹಿಂದಿನಿಂದ ತಿಳಿಸಲಾಗುವದು.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೇಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಶಾಸ್ತ್ರಶಿಕ್ಷಣ ಕೊಡುತ್ತೇವೆ. ಕೇವಲ ಕಟಿಂಗ ಮುದತ ಎರಡು ೨ ತಿಂಗಳ ಮಾತ್ರ ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಕೇವಲ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ. ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಕಶಾಪಿನ ಪ್ರಕಾರ ತಿಂಗಳಾ ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು

ಆರ್. ಬಿ. ಮುಧೋಳಕರ
[illegible] ಟೇಲರಿಂಗ ಕ್ಲಾಸಿನ ಪ್ರಿನ್ಸಿಪಾಲ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ಶುದ್ಧ ೩

ವಿಲಾಯತಿಯ ಜವಳೀ ವ್ಯಾಪಾರಕ್ಕೆ ಭಯಂಕರ ಹೊಡೆತ.

-○()*.*()○-

ಸರದಾರ ಪಟೇಲರು ಸುರತದಲ್ಲಿ ಮಾತಾಡುವಾಗ ಗುಜರಾಥವು ಹಿಂದುಸ್ಥಾನದ ಇತಿಹಾಸವನ್ನು ಬೇರೆ ರೀತಿಯಾಗಿ ಮಾಡುವದೆಂದು ಅಭಿಮಾನದಿಂದ ಹೇಳಿದ್ದಾರೆ. ನಕಾಶದಲ್ಲಿ ಇಂಗ್ರೇಜಿ ಬಣ್ಣವು ನಸುಗೆಂಪು ಮತ್ತು ಸ್ವತಂತ್ರ ರಾಜ್ಯಗಳ ಬಣ್ಣವು ಹಸುರಿರುವದು. ಇವರು ಇಂದೇ ಗುಜರಾಥ, ಆದರ ಕೂಡ ಹಿಂದುಸ್ಥಾನದ ಬಣ್ಣವನ್ನು ಹಸರು ಮಾಡದಿದ್ದರೂ, ಅದರಲ್ಲಿ ಹೆಸರಿನ ಅಂಶ ಕೂಡಿಸುವರೆಂಬದು ನಿರ್ವಿವಾದವಾದದ್ದು.

ಕಳೆದ ಮೂರು ತಿಂಗಳಿಂದ ಮುಂಬಯಿಯಲ್ಲಿ ನಡೆದ ಚಳವಳಿ ನೋಡಿರಿ. ಬೇರೆ ಪಟ್ಟಣಗಳ ವ್ಯಾಪಾರಸ್ಥರು ನಾಚಿ, ತಲೆ ಕೆಳಗೆ ಮಾಡುವಂತೆ ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ಸಾಹಸಪಡುತ್ತಿದ್ದಾರೆ. ದ್ರವ್ಯಬಲ ಮತ್ತು ಮನುಷ್ಯಬಲವನ್ನು ಎಷ್ಟು ಬೇಕಾದಷ್ಟು ಪೂರೈಸುತ್ತಿದ್ದಾರೆ. ತಲೆಯೊಡಿಸಿಕೊಳ್ಳುವದಕ್ಕೂ, ತುರಂಗದ ಭವಣೆಗಳನ್ನು ಅನುಭವಿಸಲಿಕ್ಕೂ, ಮನೆಗೊಬ್ಬನಂತೇಕೆ? ಮನೆಯವರೆಲ್ಲರೂ ಸಿದ್ಧರಾಗಿದ್ದಾರೆ. ಪರಚಕ್ರನಗರದಲ್ಲಿ ಮನೆಗೊಬ್ಬನಂತೆ ಕೊಟ್ಟರೆ- ಅವನ ಪಾಳೀ ತೀರಿಹೋಗುತ್ತಿತ್ತು. ಆದರೆ ಇಲ್ಲಿ ಹೆಂಗಸರು, ಗಂಡಸರು, ಪ್ರಬುದ್ಧ ಹುಡುಗರು, ಚಿಕ್ಕವರು ಎಲ್ಲರೂ ಹುರಿಗಟ್ಟಿ ಮುಂದೆ ಬರುತ್ತಿದ್ದಾರೆ

ವ್ಯಾಪಾರಸ್ಥರು ಈ ಪರ್ಯಂತರ ಸಂಗ್ರಹ ಮಾಡಿದಂಥ ದುಡ್ಡನ್ನಷ್ಟೇ ಕಳಕೊಳ್ಳುವದಿಲ್ಲ. ಮುಂದಾದರೂ ಕಳಕೊಳ್ಳಲು ಸಿದ್ಧರಿದ್ದಾರೆ. ಈ ಪರ್ಯಂತರ ನಾವು ಸಲಕಿಯಿಂದ ರೊಕ್ಕ ಎಳೆದವು ಈಗ ಅದೇ ಸಲಕಿಯಿಂದ ದೇಶಕಾರ್ಯಕ್ಕಾಗಿ ಬುಟ್ಟಿ ತುಂಬಿ ರೊಕ್ಕ ಕೊಡುವೆವೆಂದು ಕರ್ಣನಂತೆ ದಾನ ಮಾಡಲು ಸಿದ್ಧರಾಗಿದ್ದಾರೆ.

ಕಾಂಗ್ರೆಸದವರಿಗೆ ರಾಜೀಯಾಗುವ ಆಶೆಯು ಇಲ್ಲವೇ ಇಲ್ಲ. ರೋಗಿಯು ಮರಣೋನ್ಮುಖನಾಗಿರುವಾಗ, ಡಾಕ್ಟರನು ಹೊರದುಟಿಯಿಂದ ಆಶೆ ಹೇಳುತ್ತಿರುವಂತೆ !! ಒಡಂಬಡಿಕೆಯು ಈ ತರದ ಆಶೆಯಾಗಿರುತ್ತದೆಂದು ಇವರ ಗ್ರಹಿಕೆ. ಆದುದರಿಂದ ಈಗಿನ ಚಳವಳಿಯನ್ನು ನಿಲ್ಲಿಸದೆ, ತಮ್ಮ ರಾಷ್ಟ್ರದ ಮಹತ್ವಾಕಾಂಕ್ಷೆಯು ಪೂರ್ಣವಾಗುವ ತನಕ ಅದನ್ನು ನಿಲ್ಲಿಸಲಾಗದೆಂದು ವೀರಪ್ರತಿಜ್ಞೆ ಮಾಡಿದ್ದಾರೆ. ವಿಲಾಯತಿಯ ಅರಿವೆಗೆ ಬಹಿಷ್ಕಾರ ಹಾಕುವಂಥ ಬ್ರಹ್ಮಾಸ್ತ್ರವು ಅವರ ವಶದಲ್ಲುಂಟು. ಅದನ್ನು ವಿಲಾಯತಿಯ ಮೇಲೆ ಬಿಡುವ ನಿಶ್ಚಯ ಮಾಡಿ, ಶನಿವಾರ ೨೬ನೆಯ ತಾರೀಖಿನ ದಿವಸ ಅದನ್ನು ಬಿಟ್ಟರು. ಮುಂಬಯಿಯಲ್ಲಿ ನಾಲ್ಕು ದೊಡ್ಡ ಮಾರ್ಕೆಟುಗಳುಂಟು. ಅದರಲ್ಲಿ ಮೂಲಜಿ ಜೇಠಾ ಬಹಳ ದೊಡ್ಡದು. ಒಟ್ಟು ೪೪೦ ಜನರು ಈ ಅರಿವಿಯ ದೊಡ್ಡ ವ್ಯಾಪಾರಿಗಳಾಗಿದ್ದಾರೆ. ಇವರಿಂದ ಕೊಂಡು ಮಾರುವಂಥವರು ಲಕ್ಷಾವಧಿ ಅಂಗಡಿಕಾರರು. ಹಿಂದುಸ್ಥಾನಕ್ಕೆ ಅರವತ್ತು ಕೋಟಿಯ ಅರಿವೆ ಬರುತ್ತಿದ್ದು ಅದರಲ್ಲಿ ೨೦ ಕೋಟಿಯಷ್ಟು ಮುಂಬಯಿಗೆ ಬರುತ್ತದೆ. ಈ ೨೦ ಕೋಟಿಯ ವ್ಯಾಪಾರಕ್ಕೆ ಖಾರ ಹಾಕಬೇಕೆಂದು ಇವರ ಸತ್ಯಪ್ರತಿಜ್ಞೆಯಾಗಿದೆ. ಈ ಪ್ರತಿಜ್ಞೆ ಪೂರೈಸಲು- ಮಹಾತ್ಮಾ ಗಾಂಧಿಯವರು ಹೇಳುವಂಥ ಸ್ವರಾಜ್ಯ ಸ್ವಾತಂತ್ರ್ಯದೊರೆಯುವತನಕ ತಾವಾರೂ ವಿಲಾಯತಿಯ ಬಟ್ಟೆ ತರಿಸುವದೊಂದಿದೆಡೆಯುಳ್ಳಿಂಲಿ; ಈಗಿದ್ದ ಸರಕಿಗೆ ಮೋಹರು ಮಾಡಿ, ಅಂಗಡಿಗಳ ಬಾಗಿಲ ಹಾಕಿ, ಎಲ್ಲ ವ್ಯಾಪಾರವನ್ನು ನಿಲ್ಲಿಸಬೇಕೆಂದು ಗೊತ್ತು ಮಾಡಿದ್ದಾರೆ. ಹೀಗೆ ಮಾರ್ಕೆಟಿನ ಬಾಗಿಲಕ್ಕೇ ಕೀಲೀಹಾಕುವದರಿಂದ ಅವರ ಹಾನಿಯು ಎಷ್ಟಾದೀತೆಂಬದನ್ನು ಲೆಕ್ಕ ಮಾಡಿ ಹೇಳಲು ಯಾರು ಸಮರ್ಥರಾಗುವರು? ಹೀಗೆ ಅರ್ಥಹಾನಿ ಪ್ರಾಣಹಾನಿ ಮಾಡಿಕೊಳ್ಳಲಿಕ್ಕೆ ಸಿದ್ಧರಾದರೇ ಸ್ವದೇಶಕ್ಕೆ ಸ್ವಾತಂತ್ರ್ಯ ದೊರೆಯುವದುಂಟು.

ಸುರತದಲ್ಲಿ ಸರದಾರ ಪಟೇಲರು ಸಾರಿ ಹೇಳಿದ್ದು.

—(೦)—

ಕಾಂಗ್ರೆಸವನ್ನು ಬಲಪಡಿಸಿರಿ; ಕಾಂಗ್ರೆಸದ ಆಜ್ಞಾನುಸಾರ ನಡೆಯಿರಿ. ತುರಂಗಗಳನ್ನು ತುಂಬಿರಿ. ಜಯ ಬರುವತನಕ ಹೋರಾಡಿರಿ. ಒಡಂಬಡಿಕೆಯ ವಿಷಯವಾಗಿ ಸದ್ಯದಲ್ಲಿ ಯಾವ ಮಾತನ್ನಾದರೂ ಆಡಬೇಡಿರಿ. ನಮ್ಮ ೩೦ ಸಾವಿರ ಜನರು ತುರಂಗದಲ್ಲಿರುವಾಗ ಅವರ ದುಃಖಗಳ ವಿಚಾರ ಮಾಡಿರಿ. ಮೆರವಣಿಗೆ ಸಾಕು; ಗಟ್ಟಿಮುಟ್ಟಿಯಾದಂಥ ಕೆಲಸ ಮಾಡಲು ಹುರಿಯಾಳಾಗಿರಿ. ಗುಜ್ಜರು ಮಹಾತ್ಮರ ಹೇಳಿಕೆಯಂತೆ ನಡೆಯುತ್ತಿದ್ದು, ಗುಜರಾಥದ ಇತಿಹಾಸವನ್ನೇ ಬೇರೆ ಮಾಡುತ್ತಿದ್ದಾರೆ. ಲಾರ್ಡ ಆಯರ್ವಿನಸಾಹೇಬರಿಗೆ ಇದೊಂದು ಉತ್ತರವಾಗಿರುತ್ತದೆ. ಇಷ್ಟರಿಂದ ನಾವು ನಮ್ಮ ಕರ್ತವ್ಯವಾಯಿತೆಂದು ತಿಳಿಯತಕ್ಕದ್ದಲ್ಲ. ಪ್ರತಿಯೊಬ್ಬನು ತುರಂಗದ ಹೊರಗೆ ಇರುವತನಕ ದೇಶಸೇವೆ ಮಾಡಬೇಕೆಂದು ಕಂಕಣಬದ್ಧನಾಗಬೇಕು.

ಡಾಕ್ಟರ ಅಂತ್ರೋಳಿಕರರು ಪ್ರಕಟರಾದರು.

—o*o—

ಸೊಲ್ಲಾಪೂರದ ಗೊಂದಲದಲ್ಲಿ ಅದೃಶ್ಯರಾದ ಹಲವು ಜನರಲ್ಲಿ ಡಾಕ್ಟರ ಅಂತ್ರೋಳಿಕರರೊಬ್ಬರಾಗಿದ್ದಾರೆ. ಕಲೆಕ್ಟರರು ಇವರ ಆಸ್ತಿಯನ್ನು ಸಹ ಜಪ್ತಮಾಡಿದಂತೆ ಜಾಹೀರನಾಮೆ ಹಚ್ಚಿದರು. ಈಗ ಡಾಕ್ಟರರು ತಾವಾಗಿ ಇಂಥ ದಿವಸ ಬರುತ್ತೇವೆಂದು ಪೋಲೀಸರಿಗೆ ಪತ್ರ ಬರೆದು, ಆ ಪ್ರಕಾರ ಕೋರ್ಟಿನಲ್ಲಿ ಹಾಜರಾದರು. ಪೋಲೀಸರು ಇವರನ್ನು ಹಿಡಿದು ತುರಂಗಕ್ಕೆ ಕಳಿಸಿದರು. ಜಡ್ಜ ಕೋರ್ಟನ್ನು ಸ್ಥಾಪಿಸಿ ಆರೋಪದ ಎಲ್ಲ ಜನರನ್ನು ಸೆಶನ ಕಮೀಟ ಮಾಡಿದರು.

ಸಂಗಮನೇರದಲ್ಲಿ ಹಿಡಿತ ಮತ್ತು ಶಿಕ್ಷೆ.

—(೦)—

ಸಂಗಮನೇರದಲ್ಲಿ ಸತ್ಯಾಗ್ರಹ ಮತ್ತು ಕಾಯದೆಭಂಗ ಮಾಡಿದಂಥವರಲ್ಲಿ ಪ್ರಮುಖರಾದವರನ್ನು ಹಿಡಿದು ಅವರಿಗೆ ಶಿಕ್ಷೆ ಮಾಡುತ್ತಲಿದ್ದಾರೆ. ಶಿಕ್ಷೆ ಕೊಡುವವರು ಧಾರವಾಡದವರೇ ಆದಂಥ ರಾವಸಾಹೇಬ ಯಾರ್ದಿ ಕಲ್ಯಾಣರಾಯರು: ಕಾಯದೆಭಂಗ ಮಾಡಿದವರು ಹತ್ತು ಸಾವಿರ ಜನರು. ಶಿಕ್ಷೆಯಾಗುವರು ಹತ್ತೆಂಟು ಜನರು. ಸರಕಾರದವರು ಕಳವು ದರೋಡೆ ಮಾಡುವಂಥವರಲ್ಲಿ ಮುಖ್ಯಮುಖ್ಯರಾದವರನ್ನು ತುರಂಗಕ್ಕೆ ಕಳಿಸಿ ಉಳಿದವರಿಗೆ ಮನೆಗೆ ಹೋಗಗೊಡುವರೇನು ?

ಪೋಲೀಸರ ಹುಕುಮು ಮುರಿದು ಮೆರವಣಿಗೆ ತೆಗೆದುದಕ್ಕೆ ಪ್ರಸಿದ್ಧ ಸ್ತ್ರೀಯರ ಮೇಲೆ ನೋಟೀಸು.

—(೦)—

ಪಾಟಣಾ ಪಟ್ಟಣದಲ್ಲಿ ಶ್ರೀ ಸಾ॥ ಹಸನ ಇಮಾಮ, ಸಿ. ಸಿ. ದಾಸ, ಸಾಮಿ, ಅಂಬಿಕಾ ರೂನ ಮೊದಲಾದ ದೊಡ್ಡ ದೊಡ್ಡ ಕುಟುಂಬಗಳ ಪ್ರಮುಖ ಸ್ತ್ರೀಯರು ಪೋಲೀಸರಿಂದ ಅಪ್ಪಣೆ ಪಡೆಕೊಳ್ಳದೆ, ಮೆರವಣಿಗೆ ತೆಗೆದರು. ಈ ಅಪರಾಧಕ್ಕಾಗಿ ಇವರ ಮೇಲೆ ಪೋಲೀಸ ಆಕ್ಟಿನ ೩೨ ಕಲಮು ಪ್ರಕಾರ ಖಟ್ಲೆ ಹಾಕಿದ್ದಾರೆ.

ಕೌನ್ಸಿಲ ಚುನಾವಣೆಯ ಉಮೇದವಾರರ ಬಾಗಿಲದಲ್ಲಿ ಪಿಕೆಟಿಂಗ.

—(೦)—

ಕರಾಚಿಯಲ್ಲಿ ಮಿ. ತಾಕೂರಸಿಂಗ ಸಿಂಧಿ ಎಂಬವರು ಸುಡುವ ಮನೆಯ ಗಳ ಹಿರಕೊಳ್ಳುವಂತೆ ಸತ್ಯಾಗ್ರಹಿಗಳ ರಾಜೀನಾಮೆಯಿಂದ ತೆರವಾದ ಕೌನ್ಸಿಲದ ಮೆಂಬರರಾಗಿ ಒಂದೇ ತಿಂಗಳಾಯಿತು. ಇವರು ಬರುವ ಚುನಾವಣೆಯಲ್ಲಿ ಉಮೇದವಾರರಾಗಬೇಕೆಂದಿದ್ದಾರೆ. ನೀವು ಪುನಃ ಉಮೇದವಾರರಾಗಿ ನಿಲ್ಲುವದಿಲ್ಲೆಂದು ಮೂರು ದಿವಸಗಳಲ್ಲಿ ಬರೆಕೊಡದಿದ್ದರೆ- ನಿಮ್ಮ ಬಾಗಿಲದಲ್ಲಿ ಪಿಕೆಟಿಂಗ ಮಾಡುವೆವೆಂದು ಕಾಂಗ್ರೆಸ ಕಮೀಟಿಯವರು ಇವರಿಗೆ ನೋಟೀಸು ಕೊಟ್ಟಿರುತ್ತಾರೆ

ಪೋಲಿಸರಿಗೆ ಸರಕಾರದ ಸತ್ಯವಚನ

—(೦)—

ಕೃಷ್ಣಾ ಜಿಲ್ಹೆಗೆ ಸೇರಿದ ಅಂಗಲೂರ ಗ್ರಾಮದಲ್ಲಿ ಪೋಲಿಸ ಮತ್ತು ಮ್ಯಾಜಿಸ್ಟ್ರೇಟರ ಅತ್ಯಾಚಾರದ ಬಗ್ಗೆ ದಿವಾಣಿಯಲ್ಲಿ ದಾವೇ ತಂದು ನಷ್ಟ ತುಂಬಿಕೊಳ್ಳಬೇಕೆಂದೂ ದಿವಾಣಿ ಕೋರ್ಟಿನ ಮುಖಾಂತರ ಇವರ ಅತ್ಯಾಚಾರಗಳನ್ನು ಬೈಲಿಗೆ ತರಬೇಕೆಂದೂ ವಿಚಾರ ನಡೆದಿದೆ. ಹೀಗೆ ದಾವೆಯಾದರೆ- ಸರಕಾರವು ನಿಮಗೆ ಸಹಾಯ ಮಾಡುವದು. ಹೆದರಬೇಡಿರೆಂದು ಮದ್ರಾಸ ಸರಕಾರದವರು ಇವರಿಗೆ ಆಶ್ವಾಸನ ಕೊಟ್ಟಿದ್ದಾರೆ.

ಪ್ರಭಾತ ಪತ್ರದ ಮೇಲೆ ೨೧ ಸಾರೆ ಖಟ್ಲೆ.

—(೦)—

ಗೋವೆಯಲ್ಲಿ ಪ್ರಭಾತವೆಂಬ ಹೆಸರಿನ ವರ್ತಮಾನಪತ್ರವುಂಟು. ಅದರ ಸಂಪಾದಕರ ಮೇಲೆ ಈವರೆಗೆ ೨೧ ಸಾರೆ ಖಟ್ಲೆಗಳಾಗಿರುತ್ತವೆ. ಈ ವಾರದಲ್ಲಾದ ಫಿರ್ಯಾದಿಯಲ್ಲಿ ನಾಲ್ಕು ತಿಂಗಳ ಶಿಕ್ಷೆಯಾಯಿತು: ಅವರು ಇಷ್ಟು ಕಷ್ಟಗಳನ್ನು ದೇಶಸೇವೆಗಾಗಿ ಭೋಗಿಸುತ್ತಿದ್ದಾರೆ.

ಬಿಸಿಲಿನ ಝಳದಿಂದ ಮುನ್ನೂರು ಜನರ ಮರಣ.

—(೦)—

ಅಮೇರಿಕೆಯಲ್ಲಿ ಬಹುವಾಗಿ ಬಿಸಿಲು ಕಾಯ್ದು, ಅದರಲ್ಲಿ ಹುಟ್ಟಿದ ಬೆಂಕಿಯಂಥ ಗಾಳಿಯ ಹೊಡತದಿಂದ ಸಾವಿರಾರು ಜನರು ಸಾಯುವ ಹಾಗೆ ತಳಮಳಿಸಿದರು. ಮುನ್ನೂರು ಜನರು ಸತ್ತೇ ಹೋದರು.

ಭೂಕಂಪಿನಿಂದ ಹಾಹಾಕಾರ.

—:(*):—

ಇಟಲಿಯ ದಕ್ಷಿಣ ಭಾಗದಲ್ಲಿ ಭಯಂಕರವಾದ ಭೂಕಂಪವಾಗಿ, ನೂರಾರು ಮನೆಗಳು ನೆಲಸಮವಾದವು. ಅನೇಕ ಜನರು ಸತ್ತರು. ನೇಪಲ್ಸದಲ್ಲಿಯ ಅರಮನೆಯು ಕೊಸರ ಬಿದ್ದು, ಅದರ ಬುಡದಲ್ಲಿ ಇಬ್ಬರು ಸಿಕ್ಕು ಸತ್ತರು. ೨೭೬ ಜನರು ಸತ್ತರು. ೩೨೦ ಜನರು ಘಾಯವಾಗಿದ್ದಾರೆ.

ಸಿಡ್ಲು ಬಿದ್ದು ಒಂಭತ್ತು ಜನರ ಮರಣ.

—(೦)—

ವಾಯುವ್ಯ ಸರಹದ್ದಿನಲ್ಲಿ ಒಲತಾಲವೆಂಬಲ್ಲಿ ಸಿಡ್ಲು ಬಿದ್ದು ಮೂವರು ಯುರೋಪಿಯನ್ನರೂ ಆರು ಜನ ಏತದ್ದೇಶಿಯರೂ ಸತ್ತರು.

ಬಂಕಾಪೂರದ ಸುದ್ದಿ-

ಗುರುವಾರ ಸಾಯಂಕಾಲದಲ್ಲಿ ಶ್ರೀ ಚನ್ನಪ್ಪಾ ನೆಯಕಾರ ಇವರ ಅಧ್ಯಕ್ಷತೆಯಲ್ಲಿ ಶ್ರೀ ಆಗಳಗಟ್ಟಿಯ ರಂಗಾಚಾರ್ಯರ ಭಾಷಣವಾಗಿ, ಅಲ್ಲಿ ಸೆಂದಿಯವರಿಂದ ಕೂಡಿಸಿಕೊಂಡ ಜನರ ಅಭಿನಂದನ, ಶ್ರೀ ಧನಶೆಟ್ಟಿಯವರಿಗಾದ ಗಲ್ಲಿನ ಶಿಕ್ಷೆ ರದ್ದು ಮಾಡಲು ಸರಕಾರಕ್ಕೆ ಬಿನ್ನಪ ಮತ್ತು ಪಿನಹರಕರನ ಹುಂಬತನದಿಂದ ಹೊಡೆದವರ ಕೃತ್ಯದ ನಿಷೇಧ ಮಾಡಿದ ಠರಾವುಗಳು ಪಾಸ ಮಾಡಲ್ಪಟ್ಟವು.

ಶಿಗ್ಗಾವಿ-

ಮೇಲಿನಂತೆ ಶಿಗ್ಗಾವಿಯಲ್ಲಿಯೂ ಸಭೆಯಾಗಿ ಮೇಲಿನಂತೆ ಠರಾವು ಪಾಸ ಮಾಡಲ್ಪಟ್ಟವು.

ಬಾಗಲಕೋಟೆಯ ಕನ್ನಡಿಗನಿಗೂ, ಅದರ ಶ್ರೀ ವಿದ್ಯಾರಣ್ಯ ಮುದ್ರಾಲಯಕ್ಕೂ ಸರಕಾರದವರು ಒಂದೊಂದು ಸಾವಿರ ರೂಪಾಯಿಯ ಜಾಮೀನು ಬೇಡಿದ್ದರಿಂದ, ಕನ್ನಡಿಗವು ಬಂದಾಯಿತು. ಕರ್ನಾಟಕದಲ್ಲಿ ಬಲಿಬಿದ್ದ ಪತ್ರಗಳಲ್ಲಿ ಇದು ಐದನೆಯದು-

೧ ಕರ್ನಾಟಕ ವೈಭವ, ೨ ಕರ್ಮವೀರ, ೩ ಕಾನಡಾ ಧುರೀಣ, ೪ ಕಾನಡಾವೃತ್ತ, ೫ ಕನ್ನಡಿಗ

ಪುಣೆಯಲ್ಲಿ ವೀರಶೈವರು ಜಾಹೀರ ಸಭೆ ಕೂಡಿಸಿ, ಶ್ರೀ ಧನಶೆಟ್ಟಿಯವರಿಗಾದ ಶಿಕ್ಷೆಯನ್ನು ರದ್ದು ಮಾಡುವಂತೆ ಮುಂಬಯಿ ಸರಕಾರಕ್ಕೆ ಬಿನ್ನಹ ಮಾಡಿಕೊಳ್ಳಬೇಕೆಂಬ ಠರಾವು ಪಾಸ ಮಾಡಿದರು. ಇದೇ ಪ್ರಕಾರ ಬೆಳಗಾವಿಯಲ್ಲಿಯೂ ಸಭೆಯಾಯಿತು

ಧಾರವಾಡದ ಹಾಯಸ್ಕೂಲಿನ ಮೇಲೆ ರಾಷ್ಟ್ರೀಯ ನಿಶಾನೆ.

ಇಲ್ಲಿಯ ಸರಕಾರೀ ಹಾಯಸ್ಕೂಲಿನ ಮೇಲೆ ನಿನ್ನೆ ಬೆಳಗಾಗುವದರೊಳಗಾಗಿ ಯಾರೋ ರಾಷ್ಟ್ರೀಯ ನಿಶಾನೆಯನ್ನೇರಿಸಿದ್ದನ್ನು ಜನರು ನೋಡಿದರು. ಜನರು ಅದರ ಫೋಟೋ ಸಹ ತಕ್ಕೊಂಡರು. ಹೆಡ್ಡಮಾಸ್ತರರು ನಿಶಾನೆ ತೆಗೆಯಿಸಿದರು. ಇಂದು ಡಾಯರೆಕ್ಟರಸಾಹೇಬರು ಶಾಲೆಯ ತಪಾಸಣಿಗೆ ಬರುವರು. ಅವರಿಗಾಗಿ ಈ ಬಹುಮಾನವಿರಬಹುದು!!

ಮೆಡ್ಲೇರಿಯಲ್ಲಿ ಕುಡಿತಕ್ಕೆ ಬಹಿಷ್ಕಾರ.

ನಮ್ಮ ಈ ಮೆಡ್ಲೇರಿ ಗ್ರಾಮದಲ್ಲಿ ಹಾಲುಮತದವರು ನಿನ್ನಿನ ದಿವಸ ಅರಸೀ ಬೀರಪ್ಪನ ಗುಡಿಯಲ್ಲಿ ಸಭೆಗೂಡಿ ಚನ್ನಪ್ಪ ಮುಂಡಾಸದ, ಚೆನ್ನಪ್ಪ ಬಾದಾಮಿ, ನಾಗಪ್ಪ ಮುಂಡಾಸದ, ಲಕ್ಕಪ್ಪ ಪೂಜಾರ, ಅದರಪ್ಪ ಹಾಲುಮತದ, ಗ್ಯಾರಜ್ಜಾ ಹಾಲುಮತದ, ದಬ್ಬಣ್ಣಾ ಹಾಲುಮತದ, ಹುಚ್ಚಪ್ಪ ಹಾಲುಮತದ, ಮುದಿಮಲ್ಲಪ್ಪ ಗೋರಮಾಳ, ನೀಲಪ್ಪ ಕೊನದೇವ, ಹಾಲಪ್ಪ ಬಿಲ್ಲಾಳ, ನಾಗಪ್ಪ ಬಿಲ್ಲಾಳ, ಕಾಗಪ್ಪ ಸಳ್ಳಪ್ಪಳ್ಳ, ಅಬ್ಬಗಪ್ಪ ಪೂಜಾರ, ಮಾನಪ್ಪ ಅಕಾರ್ಚಾರಿ, ಇನ್ನೂ ಮುಂತಾದ ಮಹನೀಯರನ್ನೂ ಕೂಡಿಕೊಂಡು ನಮ್ಮ ಹಾಲುಮತದವರು ಮೊದಲಿನಿಂದಲೂ ಸುಶೀಲರಿದ್ದು ಈ ಪಾಶ್ಚಿಮಾತ್ಯರ ದುಶ್ಶೀಲಕ್ಕೊಳಗಾಗಿ ಈ ಕುಡಿತವೆಂಬ ದುಶ್ಚಟವನ್ನು ಕಲಿತು ಮನೆಮಾರುಗಳನ್ನೂ ಆರೋಗ್ಯವನ್ನೂ ಕಳಕೊಳ್ಳಬಾರದು ಎಂಬ ವ್ಯಾಖ್ಯಾನಗಳನ್ನು ಎಲ್ಲರೂ ಒಳ್ಳೇ ಸ್ಫೂರ್ತಿಯಿಂದ ಜನಜಾಗ್ರತೆಯನ್ನು ಮಾಡಿದರು. ಅದಕ್ಕೆ ಪ್ರತಿಯೊಬ್ಬ ಹಾಲುಮತದವರು ಒಳ್ಳೇ ಪ್ರೀತಿಯಿಂದ ಒಪ್ಪಿಕೊಂಡದ್ದಲ್ಲದೆ ತಮ್ಮ ಮತದೊಳಗೆ ಇನ್ನು ಮೇಲೆ ಸರೆ ತಂದಿ ಕುಡಿದರೆ ಅವನಿಗೆ ೫೦ ರೂಪಾಯಿ ದಂಡ, ಕುಡಿದವನನ್ನು ಹಿಡಿದುಕೊಟ್ಟವನಿಗೆ ೧ ರೂಪಾಯಿ ಇನಾಮು. ಅಂತಾ ಠರಾಯಿಸಿಕೊಂಡರು. ಇದಲ್ಲದೆ ನಮ್ಮ ಹಾಲುಮತದಲ್ಲಿ ಮಾಂಸ (ಕುರಿ ಕೊಯ್ಯುವದು) ಹಾಗು ಭಕ್ಷಿಸುವ ಪರಿಪಾಠವಿದ್ದು ಅದನ್ನೂ ಸಹ ಸದ್ಯದಲ್ಲಿಯೇ ಬಿಡಬೇಕು. ಅಂತಾ ಮಾಡಿದ್ದಾರೆ. ಈ ಪಂಚಮೀ ಹಬ್ಬದಲ್ಲಿ ಒಂದೇ ಒಂದು ದಿವಸಕ್ಕೆ ೫೦೦ ರೂಪಾಯಿಗಳ ಸರೆ ಕುಡಿಯುತ್ತಿದ್ದು ಅದು ನಿಂತಿತು. ಇದಲ್ಲದೆ ಪಂಚಮಿಯಾದ ೮ ದಿವಸಕ್ಕೆ ಕರಿ ಅಂಬಲಿ ಎಂಬ (ಹೋ' ಗಂಗವ್ವನ ಹಬ್ಬ) ಹಬ್ಬವಿದ್ದು ಆ ದಿವಸ ಒಂದು ಸಾವಿರ ರೂಪಾಯಿಯ ಸರೆ ಕುಡಿಯುತ್ತಿದ್ದು ಅದನ್ನೂ ಸಹ ನಿಲ್ಲಿಸಿ ೧೫೦೦ ರೂಪಾಯಿಗಳ ದುಡ್ಡನ್ನು ಉಳಿಸಿ ತಮ್ಮ ಆರೋಗ್ಯವನ್ನು ಬೆಳೆಯಿಸಿಕೊಂಡ ಬಗ್ಗೆ ಅವರಿಗೆ ನನ್ನ ವಂದನೆ.

ಓರ್ವ ಬಂಧು

ದಿಳ್ಳೆಪ್ಪ ಕೋಲಿಕಾರ

ಸಾಪ್ತಾಹಿಕ

ವಿಜಯ

ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧] ಧಾರವಾಡ ಮಂಗಳವಾರ ತಾರೀಖು ೨೯ ನೇ ಜುಲೈ ೧೯೩೦ (ಸಂಚಿಕೆ ೨

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ಶುದ್ಧ ೪

ವಿಲಾಯತಿಯ ಜವಳೀ ವ್ಯಾಪಾರಕ್ಕೆ ಭಯಂಕರ ಹೊಡತ.

ಸರದಾರ ಪಟೇಲರು ಸುರತದಲ್ಲಿ ಮಾತಾಡುವಾಗ ಗುಜರಾಥವು ಹಿಂದುಸ್ಥಾನದ ಇತಿಹಾಸವನ್ನು ಬೇರೆ ರೀತಿಯಾಗಿ ಮಾಡುವದೆಂದು ಅಬಿಮಾನದಿಂದ ಹೇಳಿದ್ದಾರೆ. ನಕಾಶದಲ್ಲಿ ಇಂಗ್ರೇಜಿ ಬಣ್ಣವು ನಸುಗೆಂಪು ಮತ್ತು ಸ್ವತಂತ್ರ ರಾಜ್ಯಗಳ ಬಣ್ಣವು ಹಸುರಿರುವದು. ಇವರು ಇಂದೇ ಗುಜರಾದ, ಆದರ ಕೂಡ ಹಿಂದುಸ್ಥಾನದ ಬಣ್ಣವನ್ನು ಹಸರು ಮಾಡದಿದ್ದರೂ, ಅದರಲ್ಲಿ ಹೆಸರಿನ ಅಂಶ ಕೂಡಿಸುವರೆಂಬದು ನಿರ್ವಿವಾದವಾದದ್ದು.

ಕಳೆದ ಮೂರು ತಿಂಗಳಿಂದ ಮುಂಬಯಿಯಲ್ಲಿ ನಡೆದ ಚಳವಳಿ ನೋಡಿರಿ. ಬೇರೆ ಪಟ್ಟಣಗಳ ವ್ಯಾಪಾರಸ್ಥರು ನಾಚಿ, ತಲೆ ಕೆಳಗೆ ಮಾಡುವಂತೆ [illegible] ಸ್ವಾತಂತ್ರ್ಯಕ್ಕಾಗಿ ಸಾಹಸಪಡುತ್ತಿದ್ದಾರೆ. ದ್ರವ್ಯಬಲ ಮತ್ತು ಮನುಷ್ಯಬಲವನ್ನು ಎಷ್ಟು ಬೇಕಾದಷ್ಟು ಪೂರೈಸುತ್ತಿದ್ದಾರ. ತಲೆಯೊಡಿಸಿಕೊಳ್ಳುವದಕ್ಕೂ, ತುರಂಗದ ಮನೆಗಳನ್ನು ಅನುಭವಿಸಲಿಕ್ಕೂ, ಮನೆಗೊಬ್ಬನಂತೇಕೆ? ಮನೆಯವರೆಲ್ಲರೂ ಸಿದ್ಧರಾಗಿದ್ದಾರೆ. [illegible]ದಲ್ಲಿ ಮಸನೊಬ್ಬನಂತೆ ಕೊಟ್ಟರೆ ಅವನ ಪಾಳಿ ತೀರಿಹೋಗುತ್ತಿತ್ತು. ಆದರೆ ಇಲ್ಲಿ ಹೆಂಗಸರು, ಗಂಡಸರು, ಪ್ರಬುದ್ಧ ಹುಡುಗರು, ಚಿಕ್ಕವರು ಎಲ್ಲರೂ ಸರಿಗಟ್ಟಿ ಮುಂದೆ ಬರುತ್ತಿದ್ದಾರೆ.

ವ್ಯಾಪಾರಸ್ಥರು ಈ ಪರ್ಯಂತರ ಸಂಗ್ರಹ ಮಾಡಿದಂಥ ದುಡ್ಡನ್ನಷ್ಟೇ ಕಳಕೊಳ್ಳುವದಿಲ್ಲ, ಮುಂದಾದರೂ ಕಳಕೊಳ್ಳಲು ಸಿದ್ಧರಿದ್ದಾರೆ. ಈ ಪರ್ಯಂತರ ನಾವು ಸಲಿಕೆಯಿಂದ ರೊಕ್ಕ ಎಳೆದೆವು, ಈಗ ಅದೇ ಸಲಿಕೆಯಿಂದ ದೇಶಕಾರ್ಯಕ್ಕಾಗಿ ಒಟ್ಟಿ ತುಂಬಿ ರೊಕ್ಕ ಕೊಡುವೆವೆಂದು ಕರ್ಣನಂತೆ ದಾನ ಮಾಡಲು ಸಿದ್ಧರಾಗಿದ್ದಾರ.

ಕಾಂಗ್ರೆಸದವರಿಗೆ ರಾಜೀಯಾಗುವ ಆಶೆಯು ಇಲ್ಲವೇ ಇಲ್ಲ. ರೋಗಿಯು ಮರಣೋನ್ಮುಖನಾಗಿರುವಾಗ, ಡಾಕ್ಟರನು ಹೊರಗಿನಿಂದ ಆಶೆ ಹೇಳುತ್ತಿರುವಂತೆ!! ಒಡಂಬಡಿಕೆಯು ಈ ತರದ ಆಶೆಯಾಗಿರುತ್ತದೆಂದು ಇವರ ಗ್ರಹಿಕೆ. ಅದುದರಿಂದ ಈಗಿನ ಚಳವಳಿಯನ್ನು ನಿಲ್ಲಿಸದೆ, ತಮ್ಮ ರಾಷ್ಟ್ರದ ಮಹತ್ವಾಕಾಂಕ್ಷೆಯು ಪೂರ್ಣವಾಗುವ ತನಕ ಅ[illegible] [illegible]ಗದೆಂದು ಪ್ರತಿಜ್ಞೆ ಮಾಡಿದಾರೆ. ವಿಲಾಯತಿಯ ಅರಿವೆಗೆ ಬಹಿಷ್ಕಾರ ಹಾಕುವಂಥ ಪ್ರಸ್ತಾವ ಅವರ ಮನದಲ್ಲುಂಟು. ಅದನ್ನು ವಿಲಾಯತಿಯ ಮೇಲೆ ಬಿಡುವ ನಿಶ್ಚಯ ಮಾಡಿ, ಶನಿವಾರ ೧೬ನೆಯ ತಾರೀಖಿನ ದಿವಸ ಅದನ್ನು ಬಿಟ್ಟರು. ಮುಂಬಯಿಯಲ್ಲಿ ನಾಲ್ಕು ದೊಡ್ಡ ಮಾರ್ಕೆಟುಗಳುಂಟು. ಅದರಲ್ಲಿ ಮೂಲಜಿ ಜೇಠಾ ಬಹಳ ದೊಡ್ಡದು. [illegible] ೪೪೦ ಜನರು ಈ ಅರವಿಯ ದೊಡ್ಡ ವ್ಯಾಪಾರಿಗಳಾಗಿದ್ದಾರೆ. ಇವರಿಂದ ಕೊಂಡು ಮಾರುವಂಥವರು ಲಕ್ಷಾವಧಿ ಅಂಗಡಿಕಾರರು. ಹಿಂದುಸ್ಥಾನಕ್ಕೆ ಅರವತ್ತು ಕೋಟಿಯ ಅರಿವೆ ಬರುತ್ತಿದ್ದು, ಅದರಲ್ಲಿ ೩೦ ಕೋಟಿಯಷ್ಟು ಮುಂಬಯಿಗೆ ಬರುತ್ತದೆ. ಈ ೩೦ ಕೋಟಿಯ ವ್ಯಾಪಾರಕ್ಕೆ ಖಾರ ಹಾಕಬೇಕೆಂದು ಇವರ ಶಕ್ಯ ಪ್ರತಿಜ್ಞೆಯಾಗಿದೆ. ಈ ಪ್ರತಿಜ್ಞೆ ಪೂರೈಸಲು ಮಹಾತ್ಮಾ ಗಾಂಧಿಯವರು ಹೇಳುವಂಥ ಸ್ವರಾಜ್ಯ ಸ್ವಾತಂತ್ರ್ಯ ದೊರೆಯುವತನಕ ತಾವಾರೂ ವಿಲಾಯತಿಯ ಬಟ್ಟೆ ತರಿಸುವ[illegible], ಈಗಿದ್ದ ಸರಕಿಗೆ ಮೋಹರು ಮಾಡಿ, ಅಂಗಡಿಗಳ ಬಾಗಿಲು ಹಾಕಿ, ಎಲ್ಲ ವ್ಯಾಪಾರವನ್ನು ನಿಲ್ಲಿಸಬೇಕೆಂದು ಗೊತ್ತು ಮಾಡಿದ್ದಾರೆ. ಹೀಗೆ ಮಾರ್ಕೆಟಿನ ಬಾಗಿಲಕ್ಕೇ ಕೀಲಿ ಹಾಕುವದರಿಂದ ಅವರ ಹಾನಿಯು ಎಷ್ಟಾದೀತೆಂಬದನ್ನು ಲೆಕ್ಕ ಮಾಡಿ ಹೇಳಲು ಯಾರು ಸಮರ್ಥರಾಗುವರು? ಹೀಗೆ ಅರ್ಥಹಾನಿ ಪ್ರಾಣಹಾನಿ ಮಾಡಿಕೊಳ್ಳಲಿಕ್ಕೆ ಸಿದ್ಧರಾದರೇ ಸ್ವದೇಶಕ್ಕೆ ಸ್ವಾತಂತ್ರ್ಯ ದೊರೆಯುವದುಂಟು.

ಬಹಿಷ್ಕಾರದ ಮಹಿಮೆ.

ವಿಲಾಯತಿಯ ವ್ಯಾಪಾರ ಅರ್ಧ ಕರಗಿತು

ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ಬರುತ್ತಿರುವ ನೂಲು ಮತ್ತು ಬಟ್ಟೆಯ ವ್ಯಾಪಾರವು ಅರ್ಧಕ್ಕೆ ಅರ್ಧ ಇಳಿಯಿತು. ಅದರ ಅಂಕಿಗಳು

	೧೯೨೯	೧೯೩೦
ನೂಲು	೯೭೩೦ ಪೆಟ್ಟಿಗೆ-	೫೯೪೪
ಅರಿವೆ	೪೨೮೭೩	೨೭೦೦೨

ಇದೇ ಪ್ರಕಾರ ಇಂಗ್ಲಂಡದ ಹೊರತು ಬೇರೆ ಪರದೇಶಗಳಿಂದ ಬರುವ ನೂಲು ಮತ್ತು ಬಟ್ಟೆಯು ಇಳಿತಕ್ಕೆ ಒಂದಿರುತ್ತದೆ

ಬೆಳಗಾವಿಯಲ್ಲಿ ಸಾಯಮನ್ನ ರಿಪೋರ್ಟು ಸುಟ್ಟದ್ದಕ್ಕೆ ಶಿಕ್ಷೆ

ಬೆಳಗಾವಿಯಲ್ಲಿ ಮೆರವಣಿಗೆಯಿಂದ ಸಾಯಮನ್ನ ರಿಪೋರ್ಟು ತಂದು ಹನುಮಂತದೇವರ ಗುಡಿಯ ಮುಂದೆ ಸುಟ್ಟ ಆರೋಪ ಹೊರಿಸಿ, ಶ್ರೀ ಪೋವಾರ ಮತ್ತು ದೇಶಪಾಂಡೆ ಇವರ ಮೇಲೆ ಖಟ್ಲೆ ಮಾಡಿದ್ದರಷ್ಟೇ, ಮ್ಯಾಜಿಸ್ಟ್ರೇಟರು ಇವರಿಗೆ ೧೫ ದಿವಸಗಳ ಸಾದಾ ಶಿಕ್ಷೆ ವಿಧಿಸಿದರು.

ರಾಜಿಯಾದರೆ ಈ ವಾರದಲ್ಲಾಗುವದು.

ಬುಧವಾರ ಗುರುವಾರ ಈ ಎರಡು ದಿವಸ ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರುಸಾಹೇಬರು ಯರವಡೆಯ ತುರುಂಗದಲ್ಲಿ ಮಹಾತ್ಮರ ಕೂಡ ನಾಲ್ಕು ತಾಸುಗಳ ವರೆಗೆ ಮಾತಾಡಿದರು. ಒಂದು ದಿವಸ ದೇವಿ ಸರೋಜಿನಿಯವರ ಸಂಗಡ ಸಂಭಾಷಣೆ ಮಾಡಿದರು. ಇವರ ಪ್ರಕೃತಿಯು ನೆಟ್ಟಗೆ ಉಂಟು.

ರಾಜಿಯಲ್ಲಿ ಯಾವ ಮಾತು ನಡೆಯಿತು? ಶುಭವೇ ಎಂದು ವರ್ತಮಾನ ಪತ್ರಗಳ ಸುದ್ದಿಗಾರರು ತುರುಂಗದಿಂದ ಹೊರಬಿದ್ದ ಕೂಡಲೇ ಇವರನ್ನು ದುಂಬಾಲಬಿದ್ದು ಕೇಳಿದರು. ಬ್ಯಾರಿಸ್ಟರ ಜಯಕರರು ಏನೂ ಉತ್ತರ ಹೇಳಲಿಲ್ಲ. ತುಸು ಉಸುರೊಡೆದರೆ ಸಾಕು, ಎಲ್ಲ ಭಟ್ಟಿಯು ಕೆಟ್ಟು ಹೋಗುವದೆಂದು ಇವರು ಹೇಳಿದರು. ಇವರ ಮೋರೆಯು ಗಂಟು ಹಾಕಿತ್ತೆಂದು ಹೇಳಿದರು ಸಾಕು. ಸರ ಸಪ್ರುಸಾಹೇಬರು ನಗಮೊಗದವರಾಗಿದ್ದರು. ಇದರಿಂದ ಜನರಲ್ಲಿ ರಾಜೀಯಾಗುವದೆಂಬ ಉತ್ಸುಕತೆಯುಂಟಾಗಿರುತ್ತದೆಂದು ಊಹೆಯಾಗಿರುತ್ತದೆ.

ಇವರೀರ್ವರು ಯರವಡೆಯ ಕೆಲಸ ತೀರಿಸಿಕೊಂಡು ಮಹಾತ್ಮರಿಂದ ಪಂಡಿತರ ಹೆಸರಲೆ ಪತ್ರ ಪಡಕೊಂಡು ಅಲಾಹಾಬಾದಕ್ಕೆ ಹೋದರು. ಪಂಡಿತದ್ವಯ ತಂದೆ ಮಗನನ್ನು ಯರವಡೆಗೆ ಕರೆತಂದಿರುವರೆಂಬ ಮಾತು ಸುಳ್ಳು. ಇವರು ನೈನೀತಾಳದಲ್ಲಿ ತಂದೆ ಮಗನನ್ನು ಕಂಡು, ಸಿಮುಲಾಕ್ಕೆ ಹೋಗಿ, ಲಾರ್ಡ ಆಯರ್ವಿನಸಾಹೇಬರ ಮುಂದೆ, ನಡೆದ ವಿದ್ಯಮಾನ ಹೇಳುವರು.

ಸರ ಸಪ್ರುಸಾಹೇಬರು ಅಗಸ್ಟ ತಿಂಗಳ ೧೬. ತಾರೀಖಿನಿಂದ ಬೇರೆ ಕೆಲಸಗಳಲ್ಲಿ ತೊಡಗುವದರಿಂದ, ಅವರಿಗೆ ಮುಂದೆ ಅವಕಾಶ ದೊರೆಯದು. ಆದ್ದರಿಂದ ರಾಜಿಯಾದರೆ ಈಯೊಂದು ವಾರದಲ್ಲಾಗುವದೆಂದು ಹೇಳಲ್ಪಟ್ಟಿರುತ್ತದೆ.

ಇವರೀರ್ವರು ತುರುಂಗದ ಬಾಗಿಲದಿಂದ ಹೊರಗೆ ಬಂದ ಕೂಡಲೆ ಒಂದು ವಿನೋದ ನಡೆಯಿತು. ಇಲ್ಲಿಗೆ ಪಂಡಿತ ಮೋತಿಲಾಲ ಜವ್ಹೆರಿಲಾರನ್ನು ತಂದಿರುವರೇ ಎಂಬದಾಗಿ ಕೆಲವರು ಮಾಡಿದ ಪ್ರಶ್ನಕ್ಕೆ ಉತ್ತರವಾಗಿ ಪಿತಾಪುತ್ರರೇ ಏಕೆ ಲಾರ್ಡ ಆಯರ್ವಿನ ಮತ್ತು ಮಿ ಬೆನ್ನಸಾಹೇಬರೂ ಬಂದಿದ್ದರು. ಮೆ. ಮ್ಯಾಕಡೋನಾಲ್ಡಸಾಹೇಬರೂ ವಿಮಾನದಿಂದ ಈಗ ಬರುವರೆಂದು ಉತ್ತರ ಕೊಟ್ಟರು.

ಪ್ರಯಾಗದಲ್ಲಿ ಸಂಭಾಷಣೆಯಾದ ಬ[illegible] ಇವರು ಪುನಃ ಮಹಾತ್ಮರನ್ನು ಕಾಣಲು ಯರವಡೆಗೆ ಬರಬಹುದೆಂದು ಲೋಕ ಚರ್ಚೆ ನಡೆದಿದೆ.

ಒಡಂಬಡಿಕೆಯ ಅನುಸಂಧಾನ.

ಸರ ರಾಮಸ್ವಾಮಿಯವರಿಗೂ ಮಹಾತ್ಮರಿಗೂ ಭೆಟ್ಟಿ.

ಕೃಷ್ಣಶಿಷ್ಟಾಯಿಗೆ ತಾವೇ ಬಾಸಿಂಗ ಕಟ್ಟಿಕೊಂಡಿದ್ದ ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರುಸಾಹೇಬರು ಲಾರ್ಡ ಆಯರ್ವಿನಸಾಹೇಬರಿಂದ ಆಜ್ಞಾಪತ್ರ ಪಡಕೊಂಡು, ಕಾಂಗ್ರೆಸದ ಮುಖಂಡರನ್ನು ಕಾಣುವ ಮುಂಚಿತವಾಗಿ ಸರ ಸಿ. ಪಿ. ರಾಮಸ್ವಾಮಿ ಅಯ್ಯರವರು ಸಿಮಲಾದಿಂದ ಮದ್ರಾಸಕ್ಕೆ ಹೋಗುವಾಗ ದಾರಿಯಲ್ಲಿ ಪುಣೆಯಲ್ಲಿಳಿದು, ಯರವಡೆಯ ತುರಂಗಕ್ಕೆ ಹೋಗಿ, ಮಹಾತ್ಮರ ಮತ್ತು ದೇವೀ ಸರೋಜನಿಯವರ ದರ್ಶನ ಲಾಭ ಪಡಕೊಂಡು, ಅವರ ಕೂಡ ಏಕಾಂತದಲ್ಲಿ ಒಡಂಬಡಿಕೆಯ ಬಗ್ಗೆ ಮಾತನಾಡಿಕೊಂಡು ಹೋದರು ಈ ಔತಣದ ಅನುಸಂಧಾನಕ್ಕೆ ಬಿಕಾನೇರದ ಮಹಾರಾಜರೂ ಪೂರ್ಣ ಅನುಕೂಲರಾಗಿದ್ದು, ಬ್ರಿಟಿಶ ಸರಕಾರದವರು ನಡೆಸಿದ ಹಿಂಸಾಮಯವಾದ ದಬ್ಬಾಳಿಕೆಯ ಭಾವೀ ಅರಿಷ್ಟದ ಬಗ್ಗೆ ಹಿಂದುಸ್ಥಾನಸರಕಾರಕ್ಕೆ ನಾಲ್ಕು ಎಚ್ಚರಿಕೆಯ ಮಾತುಗಳನ್ನು ಹೇಳಿದ್ದಲ್ಲದೆ, ಪರಸ್ಪರ ಹಿತ ವಿಚಾರ, ನ್ಯಾಯ ಮತ್ತು ವಿಹಿತ ಧರ್ಮದಿಂದಲೇ ಹಿಂದೀ ಜನಾಂಗದ ಕೂಡ ನಡೆಯಬೇಕೆಂದು ಬ್ರಿಟಿಶ ಸರಕಾರಕ್ಕೆ ಸಾಮೋಪಚಾರವನ್ನು ಹೇಳಿದ್ದಾರೆ. ಈ ಒಡಂಬಡಿಕೆಯ ಮಾತು ಕಥೆಗೆ ತಮ್ಮದೇನೂ ಅಡ್ಡಿಯಿಲ್ಲೆಂದು ವೆ ಬೆನ್ನಸಾಹೇಬರೂ ಮನದಾಶೆಯನ್ನು ತೋರಿಸಿರುವರು

ಈ ಪ್ರಕಾರ ನಡೆದ ಸಂಧಿ ವಿಚಾರಕ್ಕೆ ತೀರ ವಿರುದ್ಧವಾಗಿ ಅಸೆಂಬ್ಲಿಯ ಅಧ್ಯಕ್ಷರಾಗಿದ್ದ ಶ್ರೀ. ವಿಠ್ಠಲಭಾಯಿ ಪಟೇಲರು ಕಾಶಿಯಲ್ಲಿ ಭಾಷಣ ಮಾಡಿದ್ದಾರೆ.

ಜಯ ಬರುವ ತನಕ

ಯುದ್ಧ ಮಾಡಿರಿ. ಈಗ ಹೊತ್ತಿದ ಯುದ್ದನ್ನು ಆರಿಸಬೇಡಿರೆಂದೇ ಇವರ ಮುಖ್ಯವಾದ ಹೇಳಿಕೆ- ಅದೇನಂದರೆ-

ನವ್ಹಂಬರ ೧ನೆಯ ತಾರೀಖಿನ ದಿವಸ ಲಾರ್ಡ ಆಯರ್ವಿನಸಾಹೇಬರು ತಾವು ಆಡಿದ ಭಾಷಣದ ಹಿಂದೆ ಈಗ ಹೇಳಿದರು ತೀರ ತುಸು ದಿವಸಗಳ ಹಿಂದೆ ರಾಜಿಗಾಗಿ ಓಡಾಡಬೇಕೆನ್ನುವ ಮವಾಳರು ಮಹಾತ್ಮರು ಹಾಕಿದ ಕರಾರು ಕಟ್ಟಳೆಗಳಂತೆಯೇ ಒಡಂಬಡಿಕೆಯಾಗಬೇಕು. ಒಡಂಬಡಿಕೆ ಮಾಡಿಕೊಳ್ಳುವಂಥವರು ಮಹಾತ್ಮರೊಬ್ಬರೇ ಸಮರ್ಥರೆಂದು ಸಾರಿ ಸಾರಿ ಹೇಳಿದ್ದಾರೆ. ಇಂಥವರ ಬುದ್ಧಿ ತಿರುಗಲಿಕ್ಕೆ ಅಂಥ ಯಾವ ಮಹತ್ವದ ಕಾರಣವುಂಟಾಯಿತೆಂದು ತಿಳಿಯುವದು ಕಠಿಣವಾಗುತ್ತದೆ ಮವಾಳ ಬಾಂಧವರೇ- ನೀವು ಪ್ರಾಮಾಣಿಕ ಮತ್ತು ನಿರ್ವಂಚನೆಯಿಂದ ನಿಮ್ಮಲ್ಲಿ ಪ್ರಜರ ನಂಬಿಗೆಯಿಲ್ಲೆಂಬದನ್ನು ಒಪ್ಪಿರಿ ನಾವು ಪ್ರಜರ ಪ್ರತಿನಿಧಿಗಳಲ್ಲೆಂಬದನ್ನೂ ಹೇಳಿರಿ. ನಿಜವಾದ ಪ್ರಜಾಪ್ರತಿನಿಧಿಗಳು ಪೋಲೀಸರಿಂದ ಡೊಣ್ಣೆಯ ಹೊಡತ ತಿನ್ನುವಂಥವರು ವಪಿಂಡರಾಗಿ ತುರಂಗದ ಗೋಡೆಯೊಳಗೆ ಕೂತಿರುವಂಥ ಮಹಾತ್ಮಾಗಾಂಧಿಯವರೊಬ್ಬರೇ ಆಗಿದ್ದಾರೆ. ಈ ಬಗ್ಗೆ ಅಧಿಕಾರವಾಣಿಯಿಂದ ಹೇಳತಕ್ಕವರು ಪಂಡಿತ ಮಾಲವಿಯಾನೂ ಅಲ್ಲ; ಪಟೇಲನೂ ಅಲ್ಲ. ಮಹಾತ್ಮರೆಂದರೆ- ಕಾಂಗ್ರೆಸ; ಕಾಂಗ್ರೆಸವೆಂದರೆ- ಮಹಾತ್ಮರು ಮಹಾತ್ಮರೊಬ್ಬರೇ ಕೋಟ್ಯಾನುಕೋಟಿ ಪ್ರಜರ ಪ್ರತಿನಿಧಿಯಾಗಿದ್ದಾರೆ ಯುದ್ಧ ಮಾಡದಂಥ ಜನರು ಒಡಂಬಡಿಕೆಯ ಶರ್ತುಗಳನ್ನು ಕುರಿತು ವಿಚಾರ ಮಾಡುವದನ್ನು ನೀವೆಂದಾದರೂ ಕೇಳಿದ್ದೀರಾ? ಪೋಲೀಸ ಮತ್ತು ಪಡೆಯವರ ಅತ್ಯಾಚಾರಗಳು ಅತ್ಯಂತವಾಗಿ ದೂಷಣೀಯವಾಗಿರುತ್ತವೆ. ನಿಮಗೆ ಜಯಬರಬೇಕಾದರೆ- ಕಡೇತನಕ ಹೋರಾಡುವದೊಂದೇ ಕರ್ತವ್ಯ.

ಸರ ರಾಮಸ್ವಾಮಿಯವರಾಗಲಿ, ಬ್ಯಾರಿಸ್ಟರ ಜಯಕರ ಮೊದಲಾದವರಾಗಲಿ, ಮಹಾತ್ಮರನ್ನೂ ಪಂಡಿತ ಮೋತಿಲಾಲ ಜವ್ಹೇರಿಲಾಲರನ್ನೂ ಕಾಣಲಿಕ್ಕೆ ಹೋಗಿಬರುವ ಮಾತ್ರದಿಂದ ಒಡಂಬಡಿಕೆಯ ವಿಚಾರವಾಗಿ ಕಾಂಗ್ರೆಸದವರು ಯುದ್ಧ ತಡೆಯುವ ಕಹಳೆ ಹಿಡಿಯುವರೆಂದು ತಿಳಿಯಲಾಗದು. ಮಹಾತ್ಮರು ಒಂದು ವೇಳೆ ಇವರ ಮಾತಿಗೆ ಒಡಂಬಟ್ಟರೆ- ಅದಕ್ಕೊಂದು ಶರ್ತು ಹಾಕದೆ ಬಿಡರು. ಲಂಡನದ ಪ್ರತಿನಿಧಿಗಳು ರಾವುಂಡ ಟೇಬಲಿನಲ್ಲಿ ಆಳವೋಚೆ ಮಾಡುವ ಪ್ರಸಂಗ ಬಂದು, ಹಿಂದುಸ್ಥಾನಕ್ಕೆ ಮರಳಿ ಬಂದ ಬಳಿಕ ತಾವೂ ಕಾಯದೆಭಂಗದಲ್ಲಿ ಸೇರಿ, ಜೋಳದ ಹಿಟ್ಟಿನ ಗಂಜೀ ಕುಡಿಯುವದಕ್ಕೆ ಸಿದ್ಧರಾಗಬೇಕೆಂಬದೇ ಈ ಶರ್ತಾಗುವದು. ಮವಾಳರು ಇದಕ್ಕೆ ಒಪ್ಪಿ ವಚನಕೊಟ್ಟು ಲೇಖ ಬರೆದು ಕೊಡುವರೇ ?

ಒಡಂಬಡಿಕೆಗೆ ದಿಲ್ಲಿಯು ಬಹಳ ದೂರಿರುವದು.

ಲಾರ್ಡ ಆಯರ್ವಿನಸಾಹೇಬರ ಕೂಡ ಮಾತನಾಡಿಕೊಂಡಂತೆ ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರುಸಾಹೇಬರು ದಿಲ್ಲಿಯಿಂದ ಹೊರಟು, ಪುಣೆಗೆ ಬಂದಿದ್ದಾರೆ. ಇಂದು ನಾಳೆ ಇಷ್ಟರಲ್ಲಿ ಇವರು ಮಹಾತ್ಮರನ್ನು ಕಂಡು, ಪಿತಾಪುತ್ರರಾದ ಪಂಡಿತ ಮೋತಿಲಾಲ ಜವ್ಹೇರಿಲಾಲರನ್ನು ಕಾಣಲು ಅಲ್ಹಾಬಾದಕ್ಕೂ ಹೋಗುವರು. ಪುಣೆಯಲ್ಲಿ ಶ್ರೀ ಕೇಳಕರ, ಮುಂಬಯಿಯಲ್ಲಿ ಸರದಾರ ಪಟೇಲ ಮುಂತಾದವರ ಕೂಡ ಮಾತಾಡಿದರು. ಈ ಒಡಂಬಡಿಕೆಯಲ್ಲಿ ರಾಜೀಮಾಡಿಸುವದು ಹಾವೇರಿ ನ್ಯಾಯ ಮಾಡುವಂತಾಗಿ, ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ ಎಂದಂತಾಗುವದುಂಟು ಸ್ವಾತಂತ್ರ್ಯದಲ್ಲಿ ಪಾರತಂತ್ರ್ಯ ಪಾರತಂತ್ರ್ಯದಲ್ಲಿ ಸ್ವಾತಂತ್ರ್ಯವೆಂಬ ಅಳಬಾರುಕ ರಾಜಕೀಯ ಅಧಿಕಾರವು ತಮಗೆ ಅಂದರೆ ಕಾಂಗ್ರೆಸಕ್ಕ ಬೇಕಾಗಿಲ್ಲೆಂದು ಸರದಾರ ಪಟೇಲರು ತಮ್ಮ ಅಣ್ಣಂದಿರಂತೆಯೇ ಅಭಿಪ್ರಾಯಪಟ್ಟಿರುತ್ತಾರೆ. ಇವರ ವಿಚಾರದಿಂದ ಒಡಂಬಡಿಕೆಗೆ ಕಾಲವೇ ಬಂದಿಲ್ಲ. ದಿಲ್ಲಿಯು ಬಹಳ ದೂರವಿರುವದು ಹುಡುಗರು ಇಸ್ಪೇಟಿನ ಆಟವಾಡುತ್ತಿರುವಾಗ ದಿಲ್ಲಿಯಿಂದ ನಹ ಪೆಟ್ಟು ತರುವೆನೆಂದು ಅಭಿಮಾನದಿಂದ ಹೇಳುತ್ತಾರೆ. ಹಾಗೆ ದಿಲ್ಲೀನಿವಾಸವಾಗಿರುವ ಲಾರ್ಡ ಆಯರ್ವಿನಸಾಹೇಬರಿಂದ ಒಡಂಬಡಿಕೆಯ ಮಾತು ಹೊರಟು, ಅದು ತಾನಾಗಿ ಯರವಡೆಗೆ ಬಂದು, ತುರಂಗದ ಬಾಗಿಲು ತೆರೆದು, ಮಹಾತ್ಮರ ಮುಂದೆ ವಿನಂತಿಮಾಡಿಕೊಳ್ಳುವಾಗಲೇ ನಿಜವಾದ ಒಡಂಬಡಿಕೆಗೆ ಪ್ರಾರಂಭವಾಗುವದೆಂದು ಸರದಾರರು ಹೇಳುತ್ತಾರೆ ಇವರ ಭಾಷಣದ ಸಾರಾಂಶವು ಮುಂದೆ ಕೊಟ್ಟಂತಿರುತ್ತದೆ.

ಹಿಂದೀ ಮುಂದಾಳುಗಳು ನಡೆಸಿದ ಪ್ರಯತ್ನದ ಬಗ್ಗೆ ನೀವು ಮೋಸಹೋಗಬೇಡಿರಿ. ಮತ್ತು ತಪ್ಪುತಿಳುವಳಿಕೆ ಮಾಡಿಕೊಳ್ಳಬೇಡಿರಿ. ಒಪ್ಪಂದದ ಸಮಯ ಬಂದ ಕೂಡಲೆ- ಹ್ವಾಯಿಸರಾಯರು ತಾರು ಮತ್ತು ಪತ್ರಗಳನ್ನು ಕಳಿಸುವ ಅಗತ್ಯವೇ ಉಂಟಾಗುವದಿಲ್ಲ. ಆಗ ತುರಂಗದ ಬಾಗಿಲುಗಳು ತಾವಾಗಿ ತೆರೆಯುವವು ಸರ ತೇಜಬಹಾದ್ದೂರ ಮತ್ತು ಬ್ಯಾರಿಸ್ಟರ ಜಯಕರರ ಉದ್ದೇಶಕ್ಕಾಗಿ ಯಾರೂ ಸಂಶಯ ತಕ್ಕೊಳ್ಳುವಂತಿಲ್ಲ. ಆದರೆ ಅವರು ದೇಶಹಿತಕ್ಕಾಗಿ ಕೈಕೊಂಡ ಮಾರ್ಗವು ನನಗೆ ಸಮ್ಮತವಾಗಿರುವದಿಲ್ಲ. ಸ್ವಾತಂತ್ರ್ಯದ ಸಾರವಾದರೂ ದೊರೆತರೆ- ಒಡಂಬಡಿಕೆ ಮಾಡಿಕೊಳ್ಳುವೆವೆಂದು ಮಹಾತ್ಮರು ಈ ಮೊದಲೇ ಹೇಳಿದ್ದಾರೆ. ಉಭಯತರ ಭೆಟ್ಟಿಯಲ್ಲಿ ಇದಕ್ಕೂ ಹೆಚ್ಚಿನದೇನೂ ನಡೆಯಲಾರದು. ಹಿಂದುಸ್ಥಾನದ ಹಿತದ ಬಗ್ಗೆ ಲಾರ್ಡಸಾಹೇಬರು ಪೂರ್ಣ ಸಹಾನುಭೂತಿಯುಳ್ಳವರಾಗಿದ್ದಾರೆಂದು ಹೇಳಲ್ಪಡುತ್ತದೆ. ಆದರೆ ಅವರು ಹಿಂದುಸ್ಥಾನಕ್ಕಿಂತ ಹೆಚ್ಚಾಗಿ ಇಂಗ್ಲಂಡದ ಹಿತವನ್ನು ಬಯಸುವಂಥವರಿರುವದಿಲ್ಲವೇ? ಒಟ್ಟಿನಿಂದ ಅವರ ಭಾಷಣ ಮತ್ತು ದಬ್ಬಾಳಿಕೆಯ ಸ್ವರೂಪದಿಂದ ಸಾಹೇಬರು ಒಡಂಬಡಿಕೆಗೆ ಸಿದ್ಧರಿಲ್ಲೆಂದು ಸ್ಪಷ್ಟವಾಗುತ್ತದೆ. ಸ್ವರಾಜ್ಯ ದೊರೆಯುವ ಮಾರ್ಗವು ಯಾವಾಗಲು ಕಷ್ಟಸಾಧ್ಯವಾಗಿದ್ದಿರುತ್ತದೆ. ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದೆರಡು ಕೋಟಿ ಜನರು ಹೊಡಿಸಿಕೊಂಡು ಬಡಿಸಿಕೊಂಡು ಫಾಸಿಯಾದರ ಸತ್ತರೆ ಆಶ್ಚರ್ಯವೇನು ? ಅರೆಹೊಟ್ಟೆಯಿಂದಿರುವಂಥವರ ದೆಸೆಯಿಂದ ಈ ಜನರು ಲಯವಾದರೆ- ಅವರಿಗೆ ಅನ್ನವಾದರೂ ದೊರೆದೀತು? ಇದ್ದರಿಂದ ನಾವು ಈಗ ಬಿಟ್ಟ ಅಶ್ವಮೇಧ ಕುದುರೆಯು ಹಾಗೇ ಹೋಗತಕ್ಕದ್ದು. ಯಾವ ಕಾರಣದಿಂದಲೂ ಚಳವಳಿಯನ್ನು ನಿಲ್ಲಿಸತಕ್ಕದ್ದಲ್ಲ. ಹಿಂದುಸ್ಥಾನಕ್ಕೆ ಯಾವ ಪ್ರಕಾರದ ಹಕ್ಕು ಬೇಕು; ಯಾವದು ಬೇಡೆಂಬದನ್ನು ನಿರ್ಣಯಿಸುವ ಕೆಲಸವು ಹಿಂದೀ ಜನರದಾಗಿದೆ. ಈನಂತರ ಹಿಂದುಸ್ಥಾನದಲ್ಲಿ ರಾಜ್ಯ ಮಾಡುವದು ತಮಗೆ ಶಕ್ಯವಾದುದಲ್ಲೆಂದು ಪ್ರತಿಯೊಬ್ಬ ಇಂಗ್ಲಿಷ ಮನುಷ್ಯನಿಗೆ ಅನಿಸಲಿಕ್ಕೆ ಬೇಕು. ಪರದೇಶಿ ಅರಿವೆಗೆ ಹಾಕಿದ ಬಹಿಷ್ಕಾರವು ಇನ್ನೂ ಹೆಚ್ಚು ಬಿಗಿಯಾಗಬೇಕು. ಬತ್ತಲೆ ತಿರುಗುವೆನು, ಆದರೆ ಪರದೇಶಿ ಅರಿವೆ ಮುಟ್ಟಲಿಕ್ಕಿಲ್ಲೆಂದು ಪ್ರತಿಯೊಬ್ಬನು ಪ್ರತಿಜ್ಞೆ ಮಾಡತಕ್ಕದ್ದು. ಕಾಂಗ್ರೆಸ ಚಳವಳಿಗೆ ಮನುಷ್ಯ ಬಲ ಕೊಟ್ಟು ಸಹಾಯ ಮಾಡಿರಿ. ಈ ಕೋಲಾಹಲದಲ್ಲಿ ಪುರುಷರ ಸರಿಯಾಗಿ ಸ್ತ್ರೀಯರು ಕೆಲಸ ಮಾಡಿದ್ದಾರೆ ಹೊಸ್ತಿಲದ ಹೊರಗೆ ಅವರಿಗೆ ಕೆಲಸವಿಲ್ಲೆಂಬದನ್ನು ಸುಳ್ಳು ಮಾಡಿದ್ದಾರೆ. ಹೆಂಡಂದಿರು ಗಂಡಂದಿರನ ಕಾಂಗ್ರೆಸ ಮೆಂಬರ ಮಾಡಬೇಕು. ಅವರು ಮೆಂಬರರಾಗದಿದ್ದರೆ. ಅವರಿಗೆ ಸೋಡಪತ್ರ ಕೊಡುತ್ತೇವೆಂಬ ಹೆದರಿಕೆ ಹಾಕಬೇಕು. ಮುಖ್ಯವಾಗಿ ರಜೆಯಾಗುತ್ತದೆಂದು ಬುದ್ಧಿಭ್ರಮೆ ಮಾಡಿಕೊಂಡು ಚಳವಳಿ ಬಿಡಬಾರದು.

ಪಿಕೆಟಿಂಗಕ್ಕೆ ಜಯ.

ದಿಲ್ಲಿಯಲ್ಲಿ ನಿಮ್ಮ ನೂಲು ಒಂದು ವಾರಹ ಮಾರದಾಯಿತು. ಎಲ್ಲಿಯೂ ಗಿರಾಕಿ ಇಲ್ಲ ಕರಾರ ಗಿರಾರಗಳಿಲ್ಲ ಶಾಂತತೆಯ ಕಾಲದಲ್ಲಿ; 'ದು ಮನುಷ್ಯ ಶಕ್ತಿ ಮತ್ತು ಉಪಾಯವನ್ನು ಮೀರಿದ ಚಳವಳಿಯಾಗಿದೆ ಇದಕ್ಕೆ ನಿಮ್ಮ ಜನರೆ ಕಾರಣರೆಂದು ದಿಲ್ಲಿಯ ನೂಲಿನ ವರ್ತಕರು ಲ್ಯಾಂಕೆಶಾಯರಕ್ಕೆ ತಾರಿನಿಂದ ತಿಳಿಸಿದ್ದಾರೆ. ಪಿಕೆಟಿಂಗಕ್ಕೆ ಜಯವಲ್ಲವೇ ?

ಹಿಂದುಸ್ಥಾನದಿಂದ ಅಮೇರಿಕೆಯ ಒಂದು ಕಂಪನಿಯು ಗುಡಚೇಪೆ ಕಟ್ಟಿತು.

ಚಿಕಾಗೋದ ಫೇರ ಬ್ಯಾಂಕ್ಸ ಬೋರ್ಸವೆಂಬ ಇಂಜನಿಯರಕಂಪನಿಯ ಅನೇಕ ಏಜಂಟರು ಹಿಂದುಸ್ಥಾನದ ಬೇರೆ ಬೇರೆ ಪಟ್ಟಣಗಳಲ್ಲಿದ್ದಾರೆ. ಇವರು ಕಾಯದೆಭಂಗ ಮತ್ತು ಬಹಿಷ್ಕಾರದ ದೆಸೆಯಿಂದ ನೊಣ ಜಾಡಿಸುತ್ತಾ ಕೂತದ್ದರಿಂದ, ನೀವು ಸುಸ್ಥಿತಿಯು ಚೆನ್ನಾಗುವತನಕ ಚೀನ, ಜಪಾನ ಮತ್ತು ಆಫ್ರಿಕೆಗೆ ಹೋಗಿ ಉದ್ಯೋಗ ಹುಡುಕಿರೆಂದು ಕಂಪನಿಯವರು ಇವರಿಗೆ ತಾರಿನಿಂದ ತಿಳಿಸಿದ್ದಾರೆ.

ಪಂಡಿತ ಮಾಲವಿಯಾಯವರ ಮಹತ್ವದ ಭಾಷಣವು

ಪಂಡಿತ ಮಾಲವಿಯಾ ಮತ್ತು ಶ್ರೀ, ವಿಠ್ಠಲಭಾಯಿ ಪಟೇಲರು ಲಖನೌಕ್ಕೆ ಹೋಗಿದ್ದರು ಅಲ್ಲಿ ಕೂಡಿದ ೨೦ ಸಾವಿರ ಜನರ ಸಭೆಯಲ್ಲಿ ಸದ್ಯಸ್ಥಿತಿಯನ್ನು ಕುರಿತು ಪಂಡಿತರು ಮಹತ್ವದ ಭಾಷಣ ಮಾಡಿದ್ದಾರೆ. ಈ ಮಹಾಶಯರು ಅನ್ನುವದೇನಂದರೆ-

ಬ್ಯಾರಿಸ್ಟರ ಜಯಕರರಿಗೆ ಯಶ ಬಂದೀತೆಂಬ ವಿಷಯದಲ್ಲಿ ನನಗೆ ಸಂಶಯವುಂಟು. ಏಕಂದರೆ- ಸೊಲ್ಲಾಪೂರ, ಪೇಶಾವರ, ಮುಂಬಯಿ ಮುಂತಾದ ಸ್ಥಳಗಳಲ್ಲಿ ದಬ್ಬಾಳಿಕೆಯ ಹುರಾಟಿಕೆ ನಡೆದಿರುವಾಗ ಹೇಗೆ ಒಡಂಬಡಿಕೆಯು ಮಾಡುವದು? ವ್ಹಾಯಿಸರಾಯ ಮತ್ತು ಇಲಾಖೆಗಳ ಗವ್ಹರ್ನರರು ಕಾಯದೆಭಂಗದ ನಿಷೇದ ಮಾಡುತ್ತಾರೆ. ಆದರೆ- ಪೋಲಿಸ ಮತ್ತು ದಂಡಿನವರ ಅತ್ಯಾಚಾರದ ಬಗ್ಗೆ ಒಂದು ಅಕ್ಷರ ಕೂಡ ಹೇಳುವದಿಲ್ಲ. ಕಾಯದೆಭಂಗದ ಜನಕತ್ವವು ಮಹಾತ್ಮರ ಕಡೆಗಿರುವದಿಲ್ಲ ಅದನ್ನು ನಿರ್ಮಾಣ ಮಾಡಿದವರು ಸರಕಾರದವರೇ ಹಿಂದುಸ್ಥಾನಕ್ಕೆ ವಸಾಹಾತಿನ ಸಂಪೂರ್ಣ ಸ್ವರಾಜ್ಯಾಧಿಕಾರ ಕೊಡುವ ಜವಾಬದಾರಿಯನ್ನು ಸರಕಾರವು ಹೊತ್ತು, ರಾವುಂಡ ಟೇಬಲಿನಲ್ಲಿ ಅದರ ನಡುವಳಿಕೆಯ ಮಟ್ಟಿಗೆ ಮಾತ್ರ ವಿಚಾರವಾಗುವದೆಂದು ನಂಬಿಗೆಯನ್ನು ಕೊಟ್ಟು ಮಹಾತ್ಮರನ್ನು ಬಂಧಮುಕ್ತ ಮಾಡಿದ ಹೊರ್ತು, ಈ ಪರಿಷತ್ತಿನಲ್ಲಿ ಭಾಗತಕ್ಕೊಳ್ಳುವದರಲ್ಲಿ ಪ್ರಯೋಜನವೆಷ್ಟೂ ಇರುವದಿಲ್ಲ. ಕೂಲಿಕಾರ ಮಂತ್ರಿಗಳು ಈವರೆಗೆ ಹೇಳುತ್ತಾ ಬಂದಂಥ ಹೆಬ್ಬಳಿಕೆಯ ಮಾತಿಗೆ ಸರಿಯಾಗುವಂಥ ಒಂದೂ ಕೃತ್ಯ ಮಾಡಲಿಲ್ಲ ಆದ್ದರಿಂದ ನಮ್ಮ ಶಸ್ತ್ರಭಾಂಡಾರದೊಳಗಿನ ಬಹಿಷ್ಕಾರದ ಶಸ್ತ್ರ ಹಿರಿದ ಹೊರ್ತು, ಅನ್ಯಮಾರ್ಗವೇ ಉಳಿದಿರುವದಿಲ್ಲ ಅದನ್ನು ಹೆಚ್ಚಾಗಿ, ಉಪಯೋಗಿಸಿದಷ್ಟು ನಮಗೆ ಹಿತ

ಕಾಂಗ್ರೆಸ್ಸಕ್ಕೆ ಮುಸಲ್ಮಾನರ ಅನುಕೂಲ.

ಲಖನೌದಲ್ಲಿ ಮುಸಲಮಾನರ ಮಹತ್ವದ ಸಭೆ ಕೂಡಿತ್ತು. ಅದರಲ್ಲಿ ಕಾಂಗ್ರೆಸಕ್ಕೆ ಸಂಪೂರ್ಣ ಅನುಕೂಲವಾದ ಠರಾವು ಪಾಸಾಯಿತು ಕೆಲ ಸ್ವಾರ್ಥಪರಾಯಣರಾದ ಮುಸಲಮಾನರು ಕಾಂಗ್ರೆಸವನ್ನು ದೂಷಿಸುವರು; ಕಾಂಗ್ರೆಸವು ಹಿಂದೂ ಜನರ ಸಭೆಯಾಗಿದೆಂದು ದೂರಕೊಳ್ಳುವರು. ಈ ಅಪವಾದವು ತೀರಾ ಸುಳ್ಳೆಂದು ಈ ಸಭೆಯವರು ಸ್ಪಷ್ಟ ಶಬ್ದಗಳಿಂದ ಜಗತ್ತಿಗೆ ಸಾರಿ ಹೇಳಿದರು ಹಿಂದೂ ಮತ್ತು ಮುಸಲಮಾನರಲ್ಲಿ ಕೆಲ ಜನರು ರಾವುಂಡ ಟೇಬಲಕ್ಕೆ ಹೋಗಲು ಆಶೆಪಡುವರು ಅಲ್ಲಿ ಕೆಲಸವಾಗಲಿ, ಆಗದಿರಲಿ, ಆಶಾ ನಿರಾಶೆಯು ಬಾಗವಿಲ್ಲ. ಅಲ್ಲಿಗೆ ಹೋದರೆ ತಮಗ ಗೌರವ ಬಂದಂತಾಯಿತೆಂದು ಅಭಿಮಾನಪಡುವರು ಇಂದವರು ನಮ್ಮ ಪ್ರತಿನಿಧಿಗಳಲ್ಲೇ ಅಲ್ಲ, ಕಾಂಗ್ರೆಸಕ್ಕೆ ಆಮಂತ್ರಣವಿಲ್ಲದೆ, ಮಹಾತ್ಮರೇ ಮೊದಲಾದ ಮುಖಂಡರು ಪ್ರತಿನಿಧಿಯಾಗಿ ಹೋಗದಂಥ ರಾವುಂಡ ಟೇಬಲಕ್ಕೆ ನಮ್ಮ ಸಮ್ಮತಿಯಿಲ್ಲೆಂದು ಇವರು ಠರಾವು ಮಾಡಿದ್ದಾರೆ. ಇದಲ್ಲದೆ ಇವರು ಬೇಡುವ ಸ್ವರಾಜ್ಯದ ಒಕ್ಕಣಿಕೆಯು ಮುಂದ ಕೊಟ್ಟಂತಿರುತ್ತದೆ.

೧ ಸ್ವರಾಜ್ಯ ಸ್ವಾತಂತ್ರ್ಯ ದೊರೆಯಬೇಕು

೨ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕು.

೩ ಎಲ್ಲ ದಬ್ಬಾಳಿಕೆಯನ್ನು ನಿಲ್ಲಿಸಬೇಕು.

ಆಳರಸರು ಪೇಶಾವರ, ಮುಂಬಯಿ, ಲಖನೌ, ವಾ [illegible] ದ ನಡೆಸಿದ ದಬ್ಬಾಳಿಕೆಯನ್ನು ನಿಷೇಧಿಸಿದರು. ಈವರೆಗೆ ದೇಶಕಾರ್ಯಕ್ಕಾಗಿ ಕುರಂಗವಾಸಿಯಾದಂಥ ಸ್ವಾರ್ಥತ್ಯಾಗಿ ಮುಸಲಮಾನ ಬಾಂಧವರ ಅಭಿನಂದನ ಮಾಡಿದರು.

ರಾವುಂಡಟೇಬಲಕ್ಕೆ ಮಹಾತ್ಮರಿಂದೇನೂ ಅಡಗಾಣಿಯಿರುವದಿಲ್ಲ.

ಮಿ. ದೇಹಲವಿಸಾಹೇಬರ ಮತ

ಮುಂಬಯಿ ಕೌನ್ಸಿಲವು ವಿಸರ್ಜನವಾದ ಬಳಿಕ, ಅದರ ಅಧ್ಯಕ್ಷರಾಗಿದ್ದ ಮಿ ದೆಹಲವಿಸಾಹೇಬರ ಅಧ್ಯಕ್ಷ ಪದದ ವಿಸರ್ಜನೆಯೂ ಆಗಿ ಅವರು ಸ್ವತಂತ್ರರಾದರು ಈಗ ಇವರು ರಾವುಂಡ ಟೇಬಲದ ಬಗ್ಗೆ ಮುಂದೆ ಕೊಟ್ಟಂತೆ ಅಭಿಪ್ರಾಯಪಟ್ಟಿರುತ್ತಾರೆ-

ಕಾಂಗ್ರೆಸದವರು ರಾವುಂಡ ಟೇಬಲಕ್ಕೆ ಬರದಿದ್ದರೆ- ನನಗೆ ಕೆಡುಕೆನಿಸೀತು. ಗಾಂಧಿ ಅಥವಾ ಕಾಂಗ್ರೆಸದವರು ಹೋಗದಿದ್ದರೆ- ಅದು ಯಶಸ್ವಿಯಾಗಲಾರದೆಂದು ನಾನೆಂದೂ ಹೇಳಲಾರೆನು ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರುನವರ ಸಂಧಿವಿಚಾರವು ನಿಷ್ಫಲವಾದರೆ- ಉಳಿದ ಮುಂದಾಳುಗಳು ಈ ದೇಶದಲ್ಲಿರುವ ಜಾತಿ ವಿಷಯಕ ಜಗಳಗಳನ್ನು ಬಗೀಹರಿಸಿಕೊಳ್ಳಬೇಕು ಈ ವಿಷಯದಲ್ಲಿ ಮುಸಲಮಾನ ಸಮಾಜದವರು ಬೇಡುವ ಹಕ್ಕುಗಳನ್ನು ಕೊಟ್ಟ ಹೊರ್ತು ಹಿಂದುಸ್ಥಾನದಲ್ಲಿ ಯಾವ ಸ್ವರಾಜ್ಯವಾದರೂ ಶಕ್ಯವಾಗಲಾರದು. ಕಾಯದೆಭಂಗದ ಜನರ ವಿಷಯವಾಗಿ ಜನತೆಯಲ್ಲಿ ಸಹಾನುಭೂತಿಯುಂಟು. ಏಕೆಂದರೆ- ಅವರ ಧ್ಯೇಯವೇ ಎಲ್ಲರ ಧ್ಯೇಯವಾಗಿದೆ. ಸರಕಾರದವರು ಈ ಚಳವಳಿಯ ಪ್ರತಿಕಾರ ಮಾಡುವಾಗ ಸಹಾನುಭೂತಿ ಮತ್ತು ಸದಯವುಳ್ಳವರಾದರೆ- ಈ ಚಳವಳಿಯು ಬೇಗನೆ ಶಾಂತವಾಗುವದು

ಶ್ರೀ ಪೆರೂರ ಮಾಮಲೇದಾರರ ಪಾಂಡಿತ್ಯ.

ಹುನಗುಂದದಲ್ಲಿ ಶ್ರೀ ಪೆರೂರರೆಂಬವರು ಮಾಮಲೇದಾರರಾಗಿದ್ದಾರೆ ಇವರು ಊರೂರಿಗೆ ಆಮನ ಸಭೆ ಮಾಡತೊಡಗಿದ್ದಾರೆ. ಒಂದು ಸಭೆಯಲ್ಲಿ ಇವರು-

ಈಶಸೃಷ್ಟವಾದ ಈಚಲ ಯೋನಿಯನ್ನೇ ನಾಶಪಡಿಸುವಂತೆ ಮಾಡುವದು ದೇವದ್ರೋಹವಾಗುತ್ತದೆ ಈಚಲ ನಾಶದಿಂದ ಬುಟ್ಟಿ, ಚಾಪಿ, ಕಸಬರಿಗೆ ಮತ್ತು ಗುಡಿಸಲಕ್ಕೆ ಬೇಕಾಗುವ ಸಾಹಿತ್ಯಗಳನ್ನು ಇಲ್ಲದಂತೆ ಮಾಡುವದು ಪರಪೀಡೆಯು.

ಎಂಬದಾಗಿ ಗಾಲೆತ್ತಿನಂತೆ ತಲೆದೂಗಿಸಿದ ಹೊರ್ತು ಗತ್ಯಂತರವಿಲ್ಲೆನ್ನುವರ ಮುಂದೆ ಭಾಷಣ ಮಾಡುತ್ತಿದ್ದಾರೆ ರಾಯರಿಗೇನು ಗೊತ್ತು? ಶೇಂದೀಗಿಡ ಕಡಿಯುವಾಗ ಹೋಗಿ ನೋಡಬೇಕು. ಗೊಬ್ಬಿ ಕಟ್ಟುವಂಥ ಗಿಡಗಳನ್ನೇ ಕಡಿಯುವರು ಐದಾರು ವರ್ಷವಾಗುವ ತನಕ ಅವಕ್ಕೆ ಕೈ ಹಚ್ಚುವದೇ ಇಲ್ಲ. ಮಾಮಲೇದಾರರು ಹೇಳುವಂತೆ ಈಚಲದ ಸಮೂಲ ನಾಶವೂ ಆಗುವದಿಲ್ಲ. ಬಡಜನರ ಬುಟ್ಟಿ, ಕಸಬರಿಗಾಗಿ ಅವುಗಳ ಕೊರತೆಯೂ ಆಗುವದಿಲ್ಲ ಕಡಿಯುವ ಗಿಡಗಳ ಪರಿಕಗಳು ಕೈಗೆ ಹತ್ತದಷ್ಟು ಮೇಲೆ ಹೋಗಿರುತ್ತವೆಂಬದಾದರೂ ರಾವಸಾಹೇಬರಿಗೆ ಗೊತ್ತುಂಟೇನು? ಒಮ್ಮೆಯಾದರೂ ನೋಡಿ, ವ್ಯಾಖ್ಯಾನ ಕೊಡುವಂಥವರಾಗಲಿ; ಇಲ್ಲವಾದರೆ- ನಗುವವರ ಮುಂದೆ ಎಡವಿ ಬಿದ್ದಂತಾಗುವದು

ಲೋಕಲಬೋರ್ಡ ಮ್ಯುನಿಸಿಪಾಲಿಟಿಗಳಿಗೆ ಮುಂಬಯಿ ಸರಕಾರದ ಅಂಜಿಸುವಿಕೆ.

ಅಂಜುವವರ ಮೇಲೆ ಮಾತ್ರ ಕಪ್ಪೆ.

ಮುಂಬಯಿ ಸರಕಾರದವರು ಒಂದು ಸ ಕ್ಯೂಲರ ತೆಗೆದು, ತಾವು ಲೋಕಲಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳಿಗೆ ಕೊಡುತ್ತಿರುವಂಥ ಗ್ರಾಂಟನ್ನು ರಾಜಕೀಯ ಕಾರಣಕ್ಕಾಗಿ ಮನಸಿಗೆ ಬಂದಾಗ ನಿಲ್ಲಿಸುವಂತೆ ಭಯ ಹಾಕಿದ್ದಾರೆ. ಸ್ಥಾನಿಕ ಸಂಸ್ಥೆಗಳು ಕಾಯದೆಭಂಗಕ್ಕೆ ನೆರವಾಗುವಂಥ ಮನೋವೃತ್ತಿಯುಳ್ಳಂಥವಾಗಿ ಅಸಹಕಾರಿಗಳಿಗೆ ಸಹಾಯ ಮಾಡುತ್ತವೆ. ಇದು ಸರಕಾರೀ ಅಧಿಕಾರದ ವಿರುದ್ಧ ಕೃತ್ಯವಾಗಿದ್ದು, ಇದರಿಂದ ರಾಜ್ಯಕಾರಭಾರ ನಡೆಯುವದೇ ದುಸ್ತರವಾಗುತ್ತದೆ. ಆದುದರಿಂದ ಈ ಪ್ರಕಾರ ನೆರವಾಗುವಂಥವುಗಳಿಗೆ ಸರಕಾರದಿಂದ ದೊರೆಯುವ ಗ್ರಾಂಟು ಬಂದು ಮಾಡಲಾಗೀತೆಂದು ಜಾಹೀರ ಮಾಡಿದ್ದಾರೆ. ಮ್ಯುನಿಸಿಪಾಲಿಟಿ, ಲೋಕಲಬೋರ್ಡುಗಳೆಂದರೆ- ಬೀದಿಯಲ್ಲಿ ಕಸಗೂಡಿಸುವ ಮತ್ತು ಲೈಟ ರಸ್ತೆ ಹಾಕಿಸುವದಿಷ್ಟೇ ಕೆಲಸವೆಂದು ಪ್ರಾರಂಭದಲ್ಲಿ ತಿಳಿಯಲ್ಪಟ್ಟಿತ್ತು. ಆದರೆ ಈಗ ಇವೂ ಭಾವೀ ಸ್ವರಾಜ್ಯ ಸ್ವಾತಂತ್ರ್ಯದ ತಳಗಲ್ಲಾಗಿರುತ್ತವೆಂದು ಸಿದ್ಧಾಂತವಾಗಿದೆ. ಇವು ದೇಶಹಿತದಲ್ಲಿ ತೊಡಗಿದರೆ- ಸರಕಾರವೇಕೆ ಕೋಪಪಡುವದು? ಸರಕಾರ ಹೇಳಿದಂತೆಯೇ ನಡೆಯಬೇಕೆಂದು ಅವೇನೂ ಕೈಕಾಲು ಕಟ್ಟಿಕೊಂಡಿಲ್ಲ. ಇದರ ನಿರ್ಣಯ ಮಾಡುವದು ಕೌನ್ಸಿಲ ಮತ್ತು ಅಸೆಂಬ್ಲಿಯ ಕೆಲಸವಲ್ಲದೆ, ಕಾಯದೆಭಂಗದ ವಿರುದ್ಧ ಕತ್ತೀ ಹಿಡಿದಂಥ ಆಳರಸರ ಕೆಲಸವಲ್ಲ. ಈ ಕರಾವು ಅಂಜುವಂಥವರ ಮೈ ಮೇಲೆ ಕಪ್ಪೆ ಚಲ್ಲುವಂತಿದ್ದು, ಕರಾಚಿ, ಅಹಮದಾಬಾದ, ಪುಣೆ ಮುಂಬಯಿಯಂಥ ಪ್ರಬಲ ಮ್ಯುನಿಸಿಪಾಲಿಟಿಗಳು ಸೊಪ್ಪು ಹಾಕಲಾರವು.

ಗುಳೇದಗುಡ್ಡದಲ್ಲಿಯ ಮಕ್ತೇದಾರರು ಕುಡುಕರಿಗೆ ಪುಕಟವಾಗಿ ಕುಡಿಸುತ್ತೇವೆ, ಬನ್ನಿರೆಂದು ಮನೆಮನೆಗೆ ಹೋಗಿ ಕರೆದರು ಹೀಗೆ ಕರೆದರೂ ಗಡಂಗಕ್ಕೆ ಹೋದವರು ಹತ್ತು ಜನರೊಳಗಿದ್ದರು. ಇವರ ವರ್ತಮಾನ ಕೇಳಿ, ದ್ಯಚಾಚಾರದವರು ಇವರಿಗೆ ಐದು ರೂಪಾಯಿ ದಂಡಮಾಡಿದ್ದಲ್ಲದೆ ಮುಂದೆ ಕುಡಿಯುವದಿಲ್ಲೆಂದು ಕಾಗದ ಬರಿಸಿಕೊಂಡಿದ್ದಾರೆ ಶ್ರೀ ಸೀತಾಬಾಯಿ ಬೆಳ್ಳಿ ಮತ್ತು ಶ್ರೀ ಫಕೀರಪ್ಪಾ ಹಂಪಿಹೊಳಿಯವರು ದಿನಾಲು ಪಿಕೆಟಿಂಗ ಮಾಡುತ್ತಿದ್ದಾರೆ

ಸಿಂಧ ಪ್ರಾಂತಕ್ಕೆ ಸೇರಿದ ಶಿಕಾರಪೂರದಲ್ಲಿ ಸ್ವಯಂಸೇವಕರು ಸರಾಯಿಯ ಉಗ್ರಾಣದಲ್ಲಿ ಪೀಪುಗಳ ಮೇಲೆ ಕೂತು ಸತ್ಯಾಗ್ರಹ ನಡಿಸಿದರು. ಪೋಲೀಸರು ಒಂದು ಸ್ವಯಂಸೇವಕರನ್ನು ಲಾರೀ ಪ್ರಯೋಗದಿಂದ ಹೊರಗೆ ಹಾಕಿದರು. ಊರ ಜನರು ಗಡಂಗಕ್ಕೆ ಬೆಂಕೆ ಹಚ್ಚಿ, ಅಲ್ಲಿದ್ದ ಕಾಗದ ಪತ್ರಗಳನ್ನೆಲ್ಲ ಬೂದಿ ಮಾಡಿದರು

ವಿಜಾಪೂರದ ತುರಂಗದಲ್ಲಿ ಪುಣೆಯ ವಕೀಲರಾದ ಶ್ರೀ. ಸಾಠೆಯವರಿದ್ದಾರೆ. ಖಾದಿಯ ಹೊರ್ತು ಬೇರೆ ಅರಿವೆ ಮುಟ್ಟುವದಿಲ್ಲೆಂದು ಇವರ ಸತ್ಯ ಪ್ರತಿಜ್ಞೆ. ಒಂದು ವಾರವಾಯಿತು. ಅನ್ನ ಮುಟ್ಟಿಲ್ಲ. ಉಪವಾಸದಿಂದ ಎಚ್ಚರತಪ್ಪಿದಾಗ, ಇವರ ಮೈಮೇಲೆ ತುರಂಗದ ಅರಿವೆ ಹಾಕಿದರು. ಎಚ್ಚರಿಕೆ ಬಂದ ಕೂಡಲೆ ಇವರು ಅದನ್ನು ಹರಿದು ದಿಗಂಬರರಾದರು. ಜೇಲಿನ ಅಧಿಕಾರಿಗಳು ಬಲವಂತಿಕೆಯಿಂದ ಗೂದದ್ವಾರದಿಂದ ಹಾಲು ಹಾಕಿದಾರೆ

ಹಾವೇರಿಯು ದೊಡ್ಡ ಸಂಕಟದಿಂದ ಪಾರಾಯಿತು.

ನಾಲ್ಕು ದಿವಸಗಳ ಹಿಂದೆ ಹಾವೇರಿಯಿಂದ ಬ[illegible] [illegible] ಪತ್ರ[illegible] [illegible] ಧಾರವಾಡದವರು [illegible] ಹೋಗುತ್ತಿದ್ದರು ಹಾವೇರಿಯ ಕಾಂಗ್ರೆಸದ [illegible] ಹೇಗಲು ವಂತದ್ದು, ಅವರು ಮುಲ್ಲನ್ನ [illegible] [illegible] ಬೇಡವಿಲ್ಲ [illegible] [illegible] ಸಿಂದ ಕ್ಷಮೆ ಕೂಡ ಬೇಡಿಕೊಂಡರು.

ಇಲ್ಲಿ ಹೆಗ್ಗೇರಿಯ [illegible] [illegible] ವೈಲೆರಡು ಮೈಲಿನ ಸನಕ [illegible] [illegible] ತ್ತವ ಸರಕಾರದವರ ಈ ಕೆರೆಯಲ್ಲಿ ಮೀನ ಹಿಡಿಯುವ ಗುತ್ತಿಗೆ ಕೊಡುವ [illegible] ಜಾದ ಗುತ್ತೆದಂತೆ!! [illegible] ಹಿಡಿ [illegible] ಅನೇ ವರ್ಷದ [illegible] [illegible] ಬೇಕೆಂಬ [illegible] [illegible] ಅವರಿಗೆ ಮೀನ ಹಿಡಿಯಗೊಡ[illegible]

ಸತ್ಯಾಗ್ರಹದ ಕಾಲಕ್ಕೆ [illegible] ಯಲ್ಲಿ ಮೀನ ಪಕ್ಷಕರು ಈತನಿಗೇಕ [illegible] ಈ ವೇಕೆ ಪ್ರಕ್ಯಟಯಾಗಿ ಮೀನ ಹಿಡಿಯಬಾರದೆಂದು [illegible], ಸಾವಿರ ಸಂಖ್ಯೆಯಿಂದ ಕರೆ ಹೋದರು ಈ ಸಂಗತಿಯು ಕಾಂಗ್ರೆಸದವರಿಗೆ ಗೊತ್ತೇ ಇರಲಿಲ್ಲ. ಇಲ್ಲಿ ಸತ್ಯಾಗ್ರಹ ಮಾಡಬೇಕೆಂದು ಕಾಂಗ್ರೆಸದವರು ಕನಸು ಮನಸ್ಸಿನಲ್ಲಿ ಸಹ ವಿಚಾರ ಮಾಡಿದ್ದಿಲ್ಲ. ಸತ್ಯಾಗ್ರಹಕ್ಕೆ ಹೋದವರು [illegible] ಗಳು, ಜಾಲಗಾರರು, ಮುಸಲ್ಮಾನರು ಇವರೇ ಮೊದಲಾದವರು ಎಲ್ಲರೂ ಹಮಗತನದವರು ಪ್ರಬುದ್ಧರೆಂಬವರಾರೂ ಇರಲಿಲ್ಲ. ಇವರ [illegible] ದಲ ನೋಡಿ, ಗುತ್ತೇದಾರನು ಪೋಲೀಸರಲ್ಲಿ ಪಿರ್ಯಾದಿ ಮಾಡಿದನು ಪೋಲೀಸರು ಫಿರ್ಯಾದಿ ಪ್ರಕಾರ ಕೆಲವರನ್ನು ಹಿಡಿದಿದಾರೆ ಒಬ್ಬನ್ನ ಹಿಡಿದರೂ ಮೀನ ಹಿಡಿಯುವದು ತಪ್ಪಲಿಲ್ಲ. ಪೋಲೀಸರು ದಾರವಾಡಕ್ಕೆ ತಾರು ಮಾಡಿದರು ಮಿ ಹಾಲಂಡಸಾಹೇಬರು ೨೫ [illegible] ಪೋಲೀಸರನ್ನೂ ಕೆಲ ಬಂದೂಕಿನ ಪೋಲೀಸರನ್ನೂ ಸಂಗಡ ಕರಕೊಂಡು ಸೋಮವಾರ ದಿವಸ ಹಾವೇರಿಗೆ ಪ್ರಯಾಣ ಮಾಡಿದರು.

ಮರು ದಿವಸ ಮಿ ಹಾಲಂಡಸಾಹೇಬರೂ ಪೋಲೀಸಸಾಹೇಬರೂ ಕೆರೆಗೆ ಹೋಗಿ ಸಾವಿರಾರು ಜನರು ಮೀನ ಹಿಡಿಯುತ್ತಿರುವದನ್ನು ಕಂಡರು ಕಲೆಕ್ಟರಸಾಹೇಬರು ಇವರಲ್ಲಿ ಕೆಲ [illegible] [illegible] ಹಾಸಿಲು ಕೊಡದೆ, ಮೀನ ಹಿಡಿಯತಕ್ಕದ್ದಲ್ಲ. [illegible] ಕೊಟ್ಟು, ಬೇಕಾದಷ್ಟು ಮೀನ ಹಿಡಿಯಿರೆಂದು ಉಪದೇಶ ಮಾಡಿದರು ಜನರು ಇವರ ಮಾತನ್ನ ಕೇಳದೆ ತಮ್ಮದೇ ಕಾಯಕ ನಡೆಸಿದರು. ಆಗ ಪೋಲೀಸರು ಶಕ್ಯವಾದಷ್ಟು ಸಾಮೋಪಚಾರದಿಂದ ಜನರನ್ನು ಚದರಿಸಿದರು ಈ ಜನರು ಹೋಗುವಷ್ಟರಲ್ಲಿ ಮತ್ತೊಂದು ದೊಡ್ಡ ಗುಂಪು ಬಂತು. ಪೋಲಿಸ ಮತ್ತು ಮ್ಯಾಜಿಸ್ಟ್ರೇಟರನ್ನು ಕಂಡು ಬೆದರಲಿಲ್ಲ. ಮೀನ ಹಿಡಿಯುವ ಕಾಯಕ ನಡಯಿತು. ಆಗ ದೊಡ್ಡ ಗೊಂದಲವೇಳುವ ದುಶ್ಚಿನ್ಹ ತೋರಿತು.

ಮಿ ಹಾಲಂಡಸಾಹೇಬರು ಗುಜರಾತದ ಚಳವಳಿ ಮತ್ತು [illegible] ರಾಜ್ಯ ನೋಡಿದವರು ಮುಂಬಯಿ ವಡಾಲಾ ಮುಂತಾದ ಸ್ಥಳಗಳಲ್ಲಿಯ ಸಂಗತಿಗಳನ್ನು ವರ್ತಮಾನಪತ್ರಗಳಲ್ಲಿ ಓದಿದವರು ತಮ್ಮ ಪಾಲಿಗೂ ಅಪಕೀರ್ತಿ ಬರಬಾರದೆಂದು ಬಹಳ ಶಾಂತತನದಿಂದ ಆಗಿನ ಹೊತ್ತಿನಲ್ಲಿ ನಡೆದರೆಂದ ಬರೆಯುವದಕ್ಕೆ ಸಂತೋಷವಾಗುತ್ತದೆ. ಬ[illegible] [illegible] ಪೆಲ ಸಾಹೇಬನಂಥ ಉದ್ಧಟ ವ್ಯಾಸ್ತೆ ಬಂದರೆ ಗೋಲೀಬಾರಾಗುವದಕ್ಕೆ ಅವಕಾಶವಾಗುತ್ತಿದ್ದಿತು. ಪ್ರಾಂತಾಧಿಕಾರಿಯಾದ ಮಿ [illegible] ಸಾಹೇಬರೂ ಸಂಪೂರ್ಣ ಶಾಂತವೃತ್ತಿಯಿಂದಿದ್ದರು. ಜನರು ನಾವು ಮೀನ ಹಿಡಿಯುವದು ನಿಜ [illegible] ಬೇಕಾದ್ದು ಮಾಡಿರೆಂದು ಇವರನ್ನು ಸ್ಪಷ್ಟಗಟ್ಟಿ ಹೇಳಿದರು. ಇವರು ಉಪಾಯದಿಂದ ಪೋಲೀಸರನ್ನು ಹೊರಗ ತೆಗೆದು ಅವರನ್ನು ದೂರ ಕಳಿಸಿ, [illegible] ಬಂದೋಗದಂತೆ ಮಾಡಿದರು. [illegible] ಮೇಲೆ ಗೊಂದಲ ಶಾಂತವಾಯಿತು. ಈ ವಿಷಯವಾಗಿ ಪೋಲೀಸ ಮತ್ತು ಮ್ಯಾಜಿಸ್ಟ್ರೇಟರ ವಿಚಾರಣೆ ನಡೆದಿದೆ. ಮಿ. ಹಾಲಂಡ ಮತ್ತು [illegible] ಸಾಹೇಬರಂತೆ ಬೇರೆ ಕಡೆಯ ಅಮಲದಾರರು ವರ್ತಿಸುತ್ತಾ ಬಂದಿದ್ದರೆ ಅಲ್ಲಲ್ಲಿ ಗುತ್ತಾ ಬಂದಿದ್ದ ಗುಂಡಿನ ಮಳೆಯಾಗದೆ, ಜನಲಯವಾಗದೆ, ನರಹತ್ಯದ ಪಾಪವೇ ಒದಗುತ್ತಿದ್ದಿಲ್ಲ.

ಬಂಕಾಪುರದಲ್ಲಿ ಪುಂಡಾಟಿಕೆ.

ಶೇಂದಿಯವರಿಂದ ಸ್ವಯಂಸೇವಕರಿಗೆ ಹೊಡತ.

ಇಂದು ಬಂಕಾಪುರದ ಸ್ವಯಂಸೇವಕರು ಪದ್ಧತಿಯಂತೆ ಈಚಲಗಿಡ ಕಡೆಯಲಿಕ್ಕೆ ಶ್ರೀ ಶಂಕರ ದೀಕ್ಷಿತ ಕರ್ಮರ ಇವರ ನೇತೃತ್ವದಲ್ಲಿ ಹೊರಟರು ನೀರಲಗಿಯ ಹತ್ತರದ ಶ್ರೀ ವೆಂಕಟೇಶ ಶ್ರೀನಿವಾಸ ಹೊನ್ನತ್ತಿ [illegible]ಗಡಿ ಇವರ ನಂಬರಿನಲ್ಲಿಯ ಗಿಡ ಕಡಿಯಲು ಮಾಲಿಕರನ್ನು ಕರೆದುಕೊಂಡು ಹೊರಟರು. ಅಲ್ಲಿ ಶೇಂದೀ ಇಳಿಸಿ ಸಂಗ್ರಹಿಸುವ ಗುಡಿಸಲು ಇದೆ. ಅಲ್ಲಿ ಶೇಂದೀ ಕಂಟ್ರ್ಯಾಕ್ಟರನ ನೌಕರನು ಈ ಸ್ವಯಂಸೇವಕರನ್ನ ಹೊಡಿಸಬೇಕೆಂದು ಹುಬ್ಬಳ್ಳಿಯಿಂದ ಶೇಂದೀ ಹೇರುವ ಮೋಟಾರಿನಲ್ಲಿ ಕೆಲವು ಪುಂಡರನ್ನ ಅಂದೇ ಬೆಳಿಗ್ಗೆ ಕರೆಯಿಸಿಕೊಂಡು ಅವರಿಗೆ ಆ ಗುಡಿಸಲಲ್ಲಿ ಕುಡಿ ಶೇಂದೀ ವಗ್ಯೆರೆ ಕೊಟ್ಟು ಸಿದ್ಧಪಡಿಸಿಟ್ಟಿದ್ದನು ಸ್ವಯಂಸೇವಕರು ಮಧ್ಯಾನ್ಹಕ್ಕೆ ಅಲ್ಲಿಗೆ ಮುಟ್ಟಿದರು ಇವರು ಕಡಿಯುವ ಗಿಡಗಳು ಇನ್ನೂ ೧ ಫರ್ಲಾಂಗ ದೂರವಿದ್ದವು ಹಾದಿ ಮಾತ್ರ ಗುಡಿಸಲ ಸಮೀಪವಿದ್ದದ್ದರಿಂದ ಇವರು ಅಲ್ಲಿಯೇ ಹಾಸಿ ಹೋಗುತ್ತಿದ್ದರು. ಇವರನ್ನು ಕಂಡೊಡನೆಯೇ 'ಎಲೆ ಎಲೆ ಟೊಪಗಿಯವರು ನಮ್ಮ [illegible] (ಶೇಂದೀ ಗಿಡ) ಕಡಿಯಾಕ ಬಂದಾರು ತಗೊಳಿ ಬಡಿಯಿರಿ" ಎಂದು ನಾಲ್ಕೂ ಕಡೆಯಿಂದ ಬೊಣ್ಣೆ ತಕ್ಕೊಂಡು ಸುಮಾರು ೭೦ರ ಮೇಲೆ ಜನರು ಬಂದರು. ಒಬ್ಬ ಸ್ವಯಂಸೇವಕನನ್ನು ಹಿಡಿದು ಗಿಡ ಕಡಿಯಲಿಕ್ಕೆ ಹೋಗಬೇಡಿರಿ ಹೋದರೆ ಇದು ನೋಡಿರೆಂದು ಬೊಣ್ಣೆ ತೋರಿಸಿ, ಕಪಾಳಕ್ಕೆ ಬಲವಾಗಿ ಹೊಡೆದರು ಕೂಡಲೇ ಸ್ವಯಂಸೇವಕರ ಮುಖಂಡನು ನಾವು ಸರಕಾರೀ ಗಿಡ ಕಡಿಯುವದಿಲ್ಲ. ಹೊಲದ ಮಾಲಿಕರನ್ನೇ ಕರೆದುಕೊಂಡು ಬಂದಿರುವೆವು. ಅವರ ಗಿಡಗಳನ್ನು ಮಾತ್ರ ಕಡೆಯುವೆವು. ನೀವು ನಮ್ಮವರು ಹೀಗೆ ಜಗಳ ತೆಗೆಯಬಾರದೆಂದು ಹೇಳುವಷ್ಟರಲ್ಲಿಯೇ ಅವರ ಧ್ವಜ, ಟೊಪ್ಪಿಗೆ, ಮತ್ತು ಕೊಡ್ಲಿ ಕಸೆದುಕೊಂಡು ಎಲ್ಲ ಸ್ವಯಂಸೇವಕರನ್ನು ಸುತ್ತುಗಟ್ಟಿ ಹೊಡೆಯುತ್ತಿದ್ದರು. ಹೊಲದ ಮಾಲೀಕನಿಗೂ ಹೊಡತ ಬಿದ್ದವು. ಕೃಷ್ಣಾಜಿ ರಾಮಚಂದ್ರ ಜೋಶಿ ಎಂಬವನ ಎಡಗೈ ಮುರಿದದೆ. ಕೇಶವ ಶ್ರೀನಿವಾಸ ಕುಲಕರ್ಣಿ ಎಂಬವನ ತಲೆಗೆ ೨ ಕಡೆಗೆ ಬಡಿದಿದೆ. ಅಲ್ಲಿಯ ಗೌಡರಿಗೆ ಇದೆಲ್ಲಾ ಸಮಾಚಾರ ನಡೆಯುವದೆಂಬದು ಮೊದಲೇ ಗೊತ್ತಿತ್ತೆಂಬದರಲ್ಲಿ ಸಂದೇಹವಿಲ್ಲ. ಇದು ಸಮೀಪದ ಹಳ್ಳಿಯವರಿಗೂ ಮೊದಲೇ ಗೊತ್ತಾಗಿತ್ತು. ಅವರು ಸ್ವಯಂಸೇವಕರಿಗೆ ಕಡಿಯಬೇಡಿರೆಂದು ಬೋಧಿಸಿದರೇ ಹೊರತು ಸಹಾಯಕ್ಕಾರೂ ಬರಲಿಲ್ಲ. ಎಲ್ಲರೂ ದೂರ ನಿಂತರು. ಮೂರ್ಛಿತರಾದ ಸ್ವಯಂಸೇವಕರು [illegible] ಳುತ್ತ ಬಂಕಾಪೂರದ ದಾರೀ ಹಿಡಿದರು. ಹಾದಿಯಲ್ಲಿ [illegible] ಮೂರ್ಛೆ ಬರುತ್ತ ಬರುತ್ತಿದ್ದು ಕೂಡುತ್ತ ನಿಲ್ಲುತ್ತ [illegible] ಅಲ್ಲಿಯ [illegible] ರ ಇವರ ದವಾಖಾನೆಯಲ್ಲಿ ಉಪಚಾರ ಕೊಂಡ ಹೋದರು ತಲೆಯೊಡಿಸಿಕೊಂಡ, ಕೈ ಮುರಿಸಿಕೊಂಡ ಸ್ವಯಂಸೇವಕರ ಹೊಲದಲ್ಲಿ ನರಳುತ್ತ ಕುಳಿತಾಗ ಲೋ. ಬೋ. ಶಾಲೆಗಳ ಆರೋಗ್ಯ ನೋಡುವ ಒಂದ ಡಾಕ್ತರರು ಅವರ ದಾರಿಯಿಂದ ಸುಮ್ಮನೆ ನೋಡುತ್ತ ನಡೆದು ಕೈಮುರಿದ ಹುಡುಗನ ಕೈ ಹಿಡಿದು ನಿನ್ನ ಕೈಕಾಲು ಬಾದು ಆಗುವದೆಂದು ಹೇಳಿ ಏನೂ ಉಪಚಾರ ಮಾಡದೆ ಹಾಗೇ ಹೋದರಂತೆ ಸಂಜೆ ೫ ಗಂಟೆಗೆ ಬಂಕಾಪುರದಲ್ಲಿ ಸುದ್ದಿ ತಪ್ಪಿ ಜನರು ಕುಸಗಟ್ಟಿ ತಿರುಗುತ್ತ ಸ್ವಯಂಸೇವಕರು ಉಪಚಾರ ಹೊಂದುತ್ತಿದ್ದ ದವಾಖಾನೆಗೆ ಬಂದರು ಅಲ್ಲಿ ಅವರನ್ನ ನೋಡಲು ಜನಸಂದಣಿ ಕೂಡಿತು ಆಗಲೇ ಹುಬ್ಬಳ್ಳಿಯಿಂದ [illegible] ಶ್ರೀ ಶಿವಾನಂದಸೂನು ಬಂಕಾಪೂರ ಇವರ ನೇತೃತ್ವದ ಕಳಗ ಪೇಟೆಯಲ್ಲಿ ಸಭೆ ಕೂಡಿಸುವ ಕೆಲಸ ನಡೆದು ರಾತ್ರಿ ೮ ಗಂಟೆಗೆ ಸಭೆಯಾಯಿತು. ೨೦೦ ಜನರ ಮೇಲೆ ಕೂಡಿದ್ದರು [illegible] ಸಭೆಯ ಸುದ್ದಿಯನ್ನು ತಿಳಿಸಲು ಅವಕಾಶವಾಗಲಿಲ್ಲ. ಹೊಡತ ತಿಂದವರಲ್ಲಿ ಶಂಕರ ದೀಕ್ಷಿತ, ಬಸಪ್ಪ, ರಾಮದೀಕ್ಷಿತ ವೈದ್ಯ ಇವರು ಸ್ವಲ್ಪ ಮಾತಾಡಿದರು. ಅದರಲ್ಲಿ ವಿಶೇಷವಾಗಿ ಬಸಪ್ಪನೆಂಬುವನು ನಾವು ಎಲ್ಲರೂ ಅಲ್ಲಿಯೇ ಮಡಿದು ವೀರಸ್ವರ್ಗ ಹೊಂದದೆ [illegible] ರುಗಿ ಬಂದದ್ದಕ್ಕೆ ನನಗೆ ದುಃಖವಾಗಿದೆಯೆಂದು ಹೇಳಿದ್ದು ಬಹಳ ಮಹತ್ವದ್ದು ಕಡದಿ ಬಸಪ್ಪನವರು [illegible] ಧ್ಯಕ್ಷರಾಗಿದ್ದರು ನಂತರ ಶ್ರೀ ಶಿವಾನಂದಸೂನುಗಳು ಸದ್ಯಸ್ಥಿತಿ ಇನ್ನು ಬಂಕಾಪೂರದವರು ಮಾಡಬೇಕಾದ ಕಾರ್ಯಗಳನ್ನು ತಿಳಿಸುವ ಹೃದಯದ್ರಾವಕವಾದ ಭಾಷಣ ಮಾಡಿದ ಮೇಲೆ ಸಭೆಯು ಕೆಲಸ ಮುಗಿಯಿತು ಅಧ್ಯಕ್ಷರು ಪೆಟ್ಟು ತಿಂದವರ ಚಿಕಿತ್ಸೆಗಾಗಿ ಸಭೆಯಲ್ಲಿಯೇ ೨ ರೂ ಕೊಟ್ಟರು. ತಲೆಯೊಡೆದವರ ರಕ್ತ ಮುಣುಗಿದ ವಸ್ತ್ರಗಳು ಸಭೆಯಲ್ಲಿ ತೋರಿಸಲ್ಪಟ್ಟವು. ಊರವರೆಲ್ಲ ಸೇನಾಪತಿ ಡಾ ಹಕೆರರ ಹುಕುಮಿನ ದಾರಿಯನ್ನು ಆತುರದಿಂದ [illegible] ಡುತ್ತಿರುವರು. ಸ್ವಯಂಸೇವಕರಾರೂ ಹೀಗೆ ಪ್ರತೀಕಾರದ ಇಚ್ಛೆ ಕೂಡ ಮಾಡಲಿಲ್ಲ. [illegible] ರ್ಯದಿಂದಿರುವರು ಊರು ಉತ್ಸಾಹದಲ್ಲಿದೆ ತಲೆಯೊಡಕೊಂಡ ಸ್ವಯಂಸೇವಕರಿಗೆ ಬೆನ್ನಿಗೆ ಸಾದ ಪಟ್ಟು ಬಿದ್ದ ಕಾರಣಾ ಎದೆಯೂ [illegible] ಗಿ ಶ್ವಾಸ ಬಿಟ್ಟರೆ ತ್ರಾಸವಾಗುತ್ತದೆ. ಸ್ವಯಂಸೇವಕರ ಕೊಡ್ಲಿ ಪತಾಕೆ ಗಾಂಧೀ ಟೊಪ್ಪಿಗೆ ಕಸಿದುಕೊಂಡಿದ್ದು ಅವುಗಳನ್ನು ತಿರುಗಿ ಕೊಡಲು ಯತ್ನಿಸಿದ್ದಾಯಿತು ಫಲಿಸಲಿಲ್ಲ.

ಗಿಡ ಕಡಿಯಲಿಕ್ಕೆ ಹೋಗಿ ಹೊಡತ [illegible]

ಶ್ರೀ ಶಂಕರದೀಕ್ಷಿತ ಕರ್ಮರ
ರಾಮದೀಕ್ಷಿತ ಜಂತಲೀ ವೈದ್ಯ
ಕೇಶವ ಶ್ರೀನಿವಾಸ ಕುಲಕರ್ಣಿ
ಕೃಷ್ಣಾಜಿ ಚಂದ್ರಾಮ ಜೋಶಿ
ಬಸಪ್ಪಾ ಕೋತಂಬಿರಿ
ನಾಗಪ್ಪಾ ಗೋಪಾಳಿ

ನಿಂಬಣ್ಣಾ ಎಂಬ ೧೦ ವರ್ಷದ ಹುಡುಗನೊಬ್ಬನು ಇದನ್ನು ನೋಡುತ್ತಾ [illegible] ನನ್ನೂ ಹೊಡೆದಿರುವರು.

ಮದ್ರಾಸದಂಥ ದೊಡ್ಡ ವ[illegible] ಯವರು ಪೋಲೀಸರ ಅತ್ಯಾಚಾರ [illegible] ಸುತ್ತಿದ್ದಾಗ, ಆ ಸರಕಾರದವರು [illegible] ದ್ದರರ ಬೆನ್ನು ಚಪ್ಪರಿಸಿ, ಅವರಿಗೆ [illegible] ಯಿ ಇನಾಮು ಕೊಡುವ ನಿಶ್ಚಯ [illegible]

ವಿದೇಶೀ ವಸ್ತ್ರಗಳನ್ನು ಹೇಗೆ ಬಹಿಷ್ಕರಿಸಬೇಕು.

—:-:*:-:—

ಸಂಪೂರ್ಣ ಒಂದು ವರ್ಷದವರೆಗೆ ಅರಿವೆಯನ್ನು ಕೊಳ್ಳಬೇಡಿರಿ. ವಿದೇಶೀ ಅರಿವೆಯನ್ನು ಎಂದಿಗೂ ಕೊಳ್ಳಬೇಡಿರಿ. ಆಗ ವ್ಯಾಪಾರಿಗಳು ಎಚ್ಚರರಾಗುವರು; ಪರದೇಶಿ ಅರಿವೆಗಳ ವ್ಯವಹಾರವನ್ನು ನಿಲ್ಲಿಸುವರು. ಇನ್ನು ಮೇಲೆ ಪರದೇಶಿ ಅರಿವೆಗಳನ್ನು ತರಿಸಲಿಕ್ಕಿಲ್ಲೆಂದು ವ್ಯಾಪಾರಸ್ಥರು ಪ್ರತಿಜ್ಞೆಯನ್ನು ತಕ್ಕೊಳ್ಳಲಿಕ್ಕೇಬೇಕು.

ಮೊನ್ನಿನ ಯುದ್ಧದಲ್ಲಿ ಪರದೇಶದಿಂದ ಅರಿವೆ ಬರುವದು ಬಂದಾಗಿತ್ತು. ಆಗ ಜನರೆಲ್ಲರೂ ಮಿತವ್ಯಯಿಗಳಾಗಿ ತಮ್ಮಲ್ಲಿದ್ದ ಅರಿವೆಗಳಿಂದಲೇ ಕೆಲಸ ಸಾಗಿಸಿದರು. ಹೊಸ ಅರಿವೆಯನ್ನು ಕೊಳ್ಳಲೇ ಇಲ್ಲ.

ಸದ್ಯಕ್ಕೆ ನಾವು ರಣಭೂಮಿಯಲ್ಲಿರುವೆವು. ಒಪ್ಪಂದದ ಮೃಗಜಲವು ಕಾಣಹತ್ತಿದೆ. ಪರದೇಶಿ ಅರಿವೆಗಳನ್ನು ಕೊಳ್ಳದೆ, ಇದ್ದ ಅರಿವೆಗಳಲ್ಲಿಯೇ ತೃಪ್ತರಾಗಿರಿ. ಖಾದಿಯು ಸ್ವದೇಶೀ ಅರಿವೆಯು ಸಿಕ್ಕದಿದ್ದರೆ, ಮತ್ತು ನಿಮ್ಮಲ್ಲಿ ಅರಿವೆಯು ಇಲ್ಲದಿದ್ದರೆ ಬಹಳ ಸ್ವಲ್ಪ ಅರಿವೆಯನ್ನು ಕೊಳ್ಳಿರಿ. ಹಳೇ ಅರಿವೆಗಳಿಗೆ ತ್ಯಾಪಿ ಹಚ್ಚಿರಿ. ಆದರೆ ವರ್ಷಕ್ಕೆ ಬೇಕಾದ ಅರಿವೆಗಳ ಎರಡು ಮೂರಾಂಶಕ್ಕಿಂತ ಹೆಚ್ಚಿಗೆ ಕೊಳ್ಳಬೇಡಿರಿ.

ಮೂವತ್ತು ವರ್ಷಗಳ ಹಿಂದೆ ಹಿಂದುಸ್ಥಾನದಲ್ಲಿ ೨೦೦ ಕೋಟಿ ವಾರ ಅರಿವೆ ಬೇಕಾಗುತ್ತಿತ್ತು. ಆದರೆ ಈಗ ಹಿಂದುಸ್ಥಾನದಲ್ಲಿ ೩೮೦ ಕೋಟಿ ವಾರ ಅರಿವೆಯು ಸಿದ್ಧವಾಗುವದು. ನಮಗೆ ೫೫೦ ಕೋಟಿ ವಾರ ಅರಿವೆಯು ಬೇಕಾಗುವದು. ಇದನ್ನು ಕಡಿಮೆ ಮಾಡಿ ೩೫೦ ಕೋಟಿ ವಾರ ಅರಿವೆಯಲ್ಲಿ ನಮ್ಮ ಎಲ್ಲ ಕೆಲಸವನ್ನು ಸಾಗಿಸಬೇಕು. ಅಂದರೆ ಪರದೇಶದಿಂದ ಬರುವ ಎಲ್ಲ ಅರಿವೆಯನ್ನು ಅಂದರೆ ೨೦೦ ಕೋಟಿ ವಾರ ಅರಿವೆಯನ್ನು ಬಹಿಷ್ಕರಿಸಿದಂತಾಗುವದು.

ಈ ೨೦೦ ಕೋಟಿ ವಾರ ಅರಿವೆಯಲ್ಲಿ ಬ್ರಿಟನ್‌ದಿಂದ ೧೬೦ ಕೋಟಿ ವಾರ ಬರುವದು. ಆದುದರಿಂದ ೩ ವಾರದ ಬದಲು ೨ ವಾರ ಅರಿವೆ ತಕ್ಕೊಂಡರೆ ಗಿರಣಿ ಅರಿವೆಗಳ ಬೆಲೆಯು ಹೆಚ್ಚಾಗಲಾರದು. ಏನೇ ಇದ್ದರೂ ಅರಿವೆಗಳಿಗಾಗಿ ನಾವು ಹೆಚ್ಚು ಖರ್ಚು ಮಾಡತಕ್ಕದ್ದಿಲ್ಲ. ಗಿರಣಿ ಅರಿವೆಯ ಬೆಲೆಯು ಇದ್ದಕ್ಕಿದ್ದಹಾಗೆ ಉಳಿದರೂ ಅರಿವೆಯನ್ನು ಕೊಳ್ಳತಕ್ಕದ್ದಲ್ಲ.

ಗಿರಣಿಯ ಅರಿವೆಯ ಬೆಲೆ ಏರದೆ ೩ ವಾರದ ಬದಲು ೨ ವಾರ ಅರಿವೆಯನ್ನು ನಾವು ಕೊಂಡರೆ ಒಂದು ಮೂರಾಂಶ ಹಣವು ನಮ್ಮ ಕೈಯ್ಯಲ್ಲಿಯೇ ಉಳಿಯುವದು. ನೂರಕ್ಕೆ ೧೫ರಿಂದ ೨೦ರವರೆಗೆ ಕೊಡಬೇಕಾದ ಕಸ್ಟಮ ಡ್ಯೂಟಿಯು ಕೂಡ ತಪ್ಪುವದು. ಈ ಕಸ್ಟಮ ಡ್ಯೂಟಿಯಿಂದ ಸರಕಾರಕ್ಕೆ ೫ರಿಂದ ೧೦ ಕೋಟಿಯ ವರೆಗೆ ಹಾನಿಯು ತಟ್ಟುವದು. ಆ ಹಣವು ನಮ್ಮ ಜನರ ಕೈಯಲ್ಲಿಯೇ ಉಳಿಯುವದು.

ಈ ಬಹಿಷ್ಕಾರವು ಯಶಸ್ವಿಯಾಗಬೇಕಾದರೆ–

ನಿಮಗೆ ವೇಳೆ ದೊರೆತಾಗ ಕದರುಂಡಿಗೆಯ ಮೇಲೆ ಅಥವಾ ರಾಟಿಗಳ ಮೇಲೆ ನೂಲು ತೆಗೆಯಿರಿ.

ಆದಷ್ಟು ಖಾದಿಯನ್ನೇ ಉಪಯೋಗಿಸಿರಿ. ನೆಯ್ಯಲಿಕ್ಕೆ ಕಲಿಯಿರಿ. ಇದರಿಂದ ನಿರುದ್ಯೋಗತನವು ಕಡಿಮೆಯಾಗುವದು. ಅದಕ್ಕಾಗಿಯೇ ತರುಣರು ಇದನ್ನು ಮಾಡಲೇಬೇಕು.

ಕಾರ್ಯದರ್ಶಿ
ಜಿಲ್ಲಾ ಕಾಂಗ್ರೆಸ ಕಮೀಟಿ ಧಾರವಾಡ

ನೋಟೀಸು.

-○()*()○-

ಇಂಡಿಯನ್ನ ಲೆಜಿಸ್ಲೆಟಿವ್ಹ ಕೌನ್ಸಿಲ್ ದಕ್ಷಿಣಭಾಗ ನಾನ್ ಮಹಮ್ಮಡನ್ ಮತ್ತು ಮಹಮ್ಮಡನ್ ಕಾನಸ್ಟಿಟ್ಯೂಯನ್ಸಿಗಳ ಬಾಬತು ಬರುವ ಚುನಾವಣೆಯ ಸಂಬಂಧವಾಗಿ ಕೆಳಗಿನ ಕಾರ್ಯಕ್ರಮವನ್ನು ಗೊತ್ತುಪಡಿಸಿರುತ್ತದೆ.

ಜಿಲ್ಲಾ.- ಧಾರವಾಡ

೧	ನಾಮಿನೇಶನ್ ಪೇಪರಗಳ ಸ್ವೀಕಾರ	(ಶುಕ್ರವಾರ) ೧—೮—೧೯೩೦
೨	ನಾಮಿನೇಶನ್ ಪೇಪರಗಳ ತಪಾಸಣೆಯು	(ಸೋಮವಾರ) ೪—೮—೧೯೩೦
೩	ಮತ ಕೊಡುವದು	೨-೯—೧೯೩೦ ಮಂಗಳವಾರ
೪	ಮತಗಳನ್ನು ಎಣಿಸುವದು	ಮಂಗಳವಾರ ೯—೯—೧೯೩೦

ಸೂಚನೆ:– ನಾಮಿನೇಶನ್ ಪೇಪರವನ್ನು ಮೆ|| ಕಮಿಶನರ ಸಾ|| ಮತ್ತು ರಿಟರ್ನಿಂಗ ಆಫೀಸರ ದಕ್ಷಿಣಭಾಗ ಇವರ ಕಡೆಗೆ ಕೊಡತಕ್ಕದ್ದು.

J. Abbot
Collector Dharwar

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲು
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು
ಬೆಲೆ ೩ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ. ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ: — ಎಮ್. ಎಚ್. ಅಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಆ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಅದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ಕೇಳಿಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

B· N. B 1643

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಬುಧವಾರ ತಾರೀಖು ೩೦ ನೇ ಜುಲೈ, ೧೯೩೦ (ಸಂಖ್ಯೆ ೩೬೯

ದಿ ಧಾರವಾಡ ಅರ್ಬನ ಕೋ| ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ| ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಎರಡು ಲಕ್ಷದ ಮೇಲಿಂದೆ. ಶೇರ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಡಾಗೀನೆಗಳನು ವತ್ತಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಸ್ವಾತಂತ್ರ್ಯ ಸಪ್ತಾಹದಲ್ಲಿ

ನೂಲುವ ಮೇಲಾಟ

ಸ್ವಾತಂತ್ರ್ಯ ಸಪ್ತಾಹದಲ್ಲಿ ನಾಲ್ಕನೆ ದಿನ ಅಂದರೆ ಬುಧವಾರ (೩೦-೭-೩೦) ದಿನ **ಕದರುಂಡಿಗೆಯ ಮೆರವಣಿಗೆ**ಯಾಗುವದು. ಕದರುಂಡಿಗೆಯನ್ನು ಚನ್ನಾಗಿಯೂ ಚಾತುರ್ಯದಿಂದಲೂ ಉಪಯೋಗಿಸಬಲ್ಲವರಿಗೆ **ಬೆಳ್ಳಿಯ ಕದರುಂಡಿಗೆ**ಗಳನ್ನು [illegible] ಕೊಡಲ್ಪಡುವವು. ಆ ದಿವಸದ ಮುಂಜಾನೆಗೆ [illegible] ಯವರೆಗೆ ಮಾತ್ರ **ಸಣ್ಣ ನೂಲನ್ನು ನೂತವರೇ** ಈ ಬಹುಮಾನ ಪಡೆಯಲು ಅರ್ಹರು. ಮೇಲಾಟದಲ್ಲಿ ಮೊದಲು ಬಂದ ನಾಲ್ವರಿಗೆ **ಕನ್ನಡಿಗರ ಕೂಟ**ದಿಂದೊಂದು **ವಿಜಯ** ಮುದ್ರಾಲಯದ್ದೊಂದು **ಮಧ್ವ ಬ್ಯಾಂಕಿ**ನದೊಂದು ಹಾಗೂ **ಕಾಂಗ್ರೆಸ** ಕಾರ್ಯಾಲಯದ್ದೊಂದು ಹೀಗೆ ನಾಲ್ಕು ಕದರುಂಡಿಗೆಗಳು ಕೊಡಲ್ಪಡುವವು. ಇವಲ್ಲದೆ ಕೇವಲ ಹೆಣ್ಣುಮಕ್ಕಳ ಸಲುವಾಗಿಯೇ ಎರಡು ಕದರುಂಡಿಗೆಗಳು ಕಾದಿಡಲಾಗಿವೆ. ಕುತೂಹಲಿಗಳು ಖಾದೀ ಅಂಗಡಿ ಕಾಂಗ್ರೆಸ ಕಮಿಟಿ ಇಲ್ಲವೆ ವಿಜಯ ಮುದ್ರಣಾಲಯಗಳಲ್ಲಿ ಹೆಸರು ಬರೆಸಬೇಕು.

ಧಾರವಾಡ ತಾ| ೨೭-೭-೩೦ ಕಾರ್ಯದರ್ಶಿ

ಟೀಪು — ಮೆರವಣಿಗೆಯ ಸ್ಥಳ ಮತ್ತು ವೇಳೆಯನ್ನು ಹಿಂದಿನಿಂದ ತಿಳಿಸಲಾಗುವದು.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿವಾವಧೂತರ ಅರ್ಜಿ, ಶ್ರೀ ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿವೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ಶುದ್ಧ ೫

ಧಾರವಾಡ ಹಾಯಸ್ಕೂಲಿನಲ್ಲಾದ ರಾಷ್ಟ್ರೀಯ ನಿಶಾನೆಯ ಗೊಂದಲ.

—(೦)—

ಇಲ್ಲಿಯ ಸರಕಾರೀ ಹಾಯಸ್ಕೂಲಿನಲ್ಲಿ ರವಿವಾರ ಬೆಳಗಾಗುವದರೊಳಗೆ ಯಾರೋ ನಾಡಗುಡಿಯನ್ನೇರಿಸಿದರು. ಹೆಡ್ಡಮಾಸ್ತರರು ದಿನಾಲು ಉಷಃಕಾಲದಲ್ಲೆದ್ದು ಗ್ರಾಮಪ್ರದಕ್ಷಿಣೆಗೆ ಹೋಗುವರು. ಅವರು ತಿರುಗಿ ಬರುವಷ್ಟರಲ್ಲಿ ಒಬ್ಬಿಬ್ಬರು ಅದರ ಫೋಟೋ ತೆಕ್ಕೊಂಡಿದ್ದರು. ಮಾಸ್ತರರು ತಿರುಗಿ ಬಂದು ನೋಡಿದವರೇ ಅದನ್ನು ಸಿಪಾಯಿಯಿಂದ ಕೆಳಗಿಳಿಸಿದರು. ಇಷ್ಟು ಸಂಗತಿಯನ್ನು ಈ ಮೊದಲು ಬರೆದಿದ್ದೇವೆ

ಸೋಮವಾರ ೧೧ ಗಂಟೆಗೆ ನಿತ್ಯದಂತೆ ಹುಡುಗರು ಶಾಲೆಗೆ ಹೋದರು. ನಿಶಾನೆಯು ಹರಿದು ಬಿದ್ದಿತ್ತು. ನಿಶಾನೆಯನ್ನು ಹರಿದು ಅಪಮಾನ ಮಾಡಿದ್ದು ಅವರಿಗೆ ಸಹನವಾಗಲಿಲ್ಲ. ತೆಗೆಯುವಾಗ ಹರಿಯಿತೆಂದು ಮಾಸ್ತರರು ಹೇಳಿದ ಸಮಾಧಾನವು ಹುಡುಗರಿಗೆ ತೃಪ್ತಿಯಾಗಲಿಲ್ಲ. ನಾವು ಪುನಃ ನಿಶಾನೆ ಏರಿಸಿ, ಅದರ ಪೂಜೆ ಮಾಡುತ್ತೇವೆ. ರಾಷ್ಟ್ರಗೀತ ಹೇಳಿ ಇಳಿಸುತ್ತೇವೆಂದು ಅನ್ನುತ್ತಿರುವಾಗ, ಮಿ. ಡಾಯರೆಕ್ಟರಸಾಹೇಬರು ಅಲ್ಲಿಗೆ ದಯಮಾಡಿಸಿದರು. ಹೆಡ್ಡಮಾಸ್ತರ ಹಾಗು ಹುಡುಗರಿಂದ ನಡೆದ ವಿದ್ಯಮಾನಗಳನ್ನು ತಿಳಕೊಂಡರು.

ಶಾಲೆಯಲ್ಲಿ ೬೫೦ಕ್ಕಿಂತ ತುಸು ಹೆಚ್ಚು ಹುಡುಗರಿದ್ದಾರೆ. ಇವರಲ್ಲಿ ೧೫೦ಕ್ಕಿಂತ ಹೆಚ್ಚು ಜನರು ಶಾಲೆಯ ಹೊರಗೆ ಬಂದರು. ಮೇಲಿನ ವರ್ಗಗಳು ಬಹುವಾಗಿ ಹಾಳು ಸುರಿದವು. ಡಾಯರೆಕ್ಟರಸಾಹೇಬರು ಇವರಿಗೆ ನಿಮ್ಮಲ್ಲಿಯ ಮುಖಂಡರು ಬಂದು ತಮ್ಮ ಕಡೆ ಮಾತಾಡಿರೆಂದರು. ಎಲ್ಲರೂ ಮುಖಂಡರೇ. ಒಬ್ಬನೂ ಹೆಚ್ಚು, ಒಬ್ಬನು ಕಡಿಮೆ ಇಲ್ಲೆಂದು ಇವರು ಉತ್ತರ ಕೊಟ್ಟರು. ಬಳಿಕ ಶಾಲೆಗೆ ಬರದಿದ್ದರೆ ಸ್ಕಾಲರ್ ಇದ್ದವರ ಶಿಷ್ಯವೇತನ ಹೋಗುವದು. ಮಾಫೀ ಇದ್ದವರ ಮಾಫೀ ಹೋಗುವದೆಂದು ಸಾಹೇಬರು ಬೆದರಿಕೆ ಹಾಕಿದರು. ಈ ಮಾತ್ರೆಯು ಹುಡುಗರ ಮೇಲೆ ನಡೆಯಲೇ ಇ

ಸ್ಕಾಲರ ಮತ್ತು ಮಾಫಿ ಇದ್ದವರ ಹೆಸರುಗಳನ್ನೂ ಪಿಕೆಟಿಂಗ ಮಾಡಿದಂಥ ನೂರಾರು ಹುಡುಗರ ಹೆಸರನ್ನೂ ತಮಗೆ ತಿಳಿಸಬೇಕೆಂದು ಹೆಡ್ಡಮಾಸ್ತರರಿಗೆ ಸಾಹೇಬರು ಹೇಳಿ, ಹೊರಟು ಹೋದರು.

ಸಾಯಂಕಾಲದಲ್ಲಿ ವಿದ್ಯಾರ್ಥಿಗಳ ಸಭೆ ಕೂಡಿತು. ಮಂಗಳವಾರ ಏಳು ಹೊಡೆಯುವದರೊಳಗಾಗಿ ಶಾಲೆಗೆ ಹೋಗಬೇಕು. ಕ್ಲಾಸ ಪ್ರಾರಂಭವಾಗುವದರೊಳಗಾಗಿ ಶಾಲೆಯ ಬಳಂಗಳದಲ್ಲಿ ರಾಷ್ಟ್ರಧ್ವಜವನ್ನು ನಿಲ್ಲಿಸಿ, ರಾಷ್ಟ್ರಗೀತವೆಂದು ಧ್ವಜ ಇಳಿಸಿ, ವರ್ಗಗಳಲ್ಲಿ ಕೂತು ನಿತ್ಯಕ್ರಮದಂತೆ ಅಭ್ಯಾಸ ಸಾಗಿಸಬೇಕೆಂದು ಗೊತ್ತು ಮಾಡಿ ಆ ಪ್ರಕಾರ ನಡೆದರು.

ಪಿಕೆಟಿಂಗ ಮಾಡಿದವರಲ್ಲಿ ಸರಕಾರಿ ಕಾಮದಾರರು, ಕಾಲೇಜದ ಪ್ರೊಫೇಸರರು, ವಕೀಲರು ಸುಖವಸ್ತುಗಳು, ಜಮೀನದಾರ ಇನಾಮದಾರರು ಇವರೇ ಮುಂತಾದವರ ಮಕ್ಕಳಿದ್ದರು. ಕೆಲವರಂತೂ ಡಾಯರೆಕ್ಟರಸಾಹೇಬರಿಗೆ ಕಾಣಿಸುವಂತೆ ರಟ್ಟಿನ ತುಂಡಿನ ಮೇಲೆ ಇಂಗ್ರೇಜಿಯಲ್ಲಿ ಬಾಯಕಾಟ ಬ್ರಿಟಿಶ ಗುಡ್ಸ (ಇಂಗ್ರೇಜಿ ಅರವೆಗೆ ಬಹಿಷ್ಕಾರ ಹಾಕಿರಿ) ಎಂದ ಬರೆದದ್ದನ್ನು ಎದೆಗೆ ಹಚ್ಚಿಕೊಂಡಿದ್ದರು. ಸ್ವರಾಜ್ಯ ಸಂಬಂಧವಾದ ಬೇರೆ ಪದಕಗಳಂತೂ ಪ್ರತಿಯೊಬ್ಬ ವಿದ್ಯಾರ್ಥಿಯ ಎದೆಯ ಮೇಲಿರುವದು ಸರ್ವಸಾಮಾನ್ಯವಾಗಿರುತ್ತದೆ

ಶರ್ಯತಿಯ ಉಗಿಬಂಡಿಯ ಪಿಕೆಟಿಂಗ.

—(೦)—

ಪುಣೆಯಲ್ಲಿ ಕುದುರೆಯ ಪಂದ್ಯನಡೆದಿದೆ ಅದು ಈಗ ಪಂಚಲೂರಾಗಿದೆ. ಪಂದ್ಯ ನೋಡಲು ಮುಂಬಯಿಯಿಂದ ಫರ್ಸ್ಟ, ಸೇಕಂಡ ಹಾಗೂ ಥರ್ಡಕ್ಲಾಸಿನ ಸ್ಪೇಶಲ ಟ್ರೇನುಗಳು ಬಿಡುವವು. ಕಾಂಗ್ರೆಸದವರು ಪಿಕೆಟಿಂಗ ಮಾಡಿದ್ದರಿಂದ ಆರು ನೂರು ಜನರು ಹೋಗುವಂಥ ಥರ್ಡದಲ್ಲಿ ೧೫೦ ಜನರು ವ್ಹಾಲಂಟಿಯರರಿಂದ ಅನಿಸಿಕೊಂಡು, ಹೀಯಾಳಿಸಿಕೊಂಡು, ಹೋದರು. ರೇಲ್ವೆಯವರು ಸೇಕಂಡ ಮತ್ತು ಫರ್ಸ್ಟ ಒಂದೇ ಮಾಡಿ, ಕೆಲವರನ್ನು ಹೊಟ್ಟೆಯ ಕಿಚ್ಚಿಗಾಗಿ ಬೈದರು.

ಸವದತ್ತಿಯಲ್ಲಿ ಕಾಯದೆಭಂಗದ ವಿರುದ್ಧ ನೋಟೀಸು.

—(೨)—

ಸವದತ್ತಿಯಲ್ಲಿ ಅಧ್ಯಕ್ಷರು ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಿಸುವ ವಿಷಯವಾಗಿ ಈ ಪರ್ಯಂತರ ನಡೆಸಿದ ಪ್ರಯತ್ನವು ನಿಷ್ಫಲವಾಯಿತು. ಊರ ಜನರೇ ಹಚ್ಚಬೇಕೆಂದು ನಿರ್ಧರಿಸಿದರು. ಬೆಳಗಾವಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ೧೪೪ನೆಯ ಶಾಂತತಾ ಭಂಗದ ಕಲಮು ಹಚ್ಚಿ, ಈ ಕೆಲಸ ಮಾಡುವ ಮತ್ತು ಮಾಡಲಿಕ್ಕೆ ಉತ್ತೇಜನ ಕೊಡುವವರ ಮೇಲೆ ಇದರ ಪ್ರಯೋಗ ಮಾಡಿ ಶ್ರೀ ಗುರುರಾವ ಮುನೋಳಿ ಮೊದಲಾದ ಐವರ ಮೇಲೆ ನೋಟೀಸು ತೆಗೆದಿದ್ದಾರೆ.

ಕಾಬೂಲದಲ್ಲಿ ಬಚ್ಚೇಸಾಕಾನ ಭೂತವೆದ್ದಿತು.

—(೦)—

ಹೊಸ ಅಮೀರ ನಾದಿರಖಾನರು ಬಚ್ಚಾಸಾಕುವಿಗೆ ಕ್ಷಮೆ ಕೊಡುತ್ತೇನೆಂದು ವಚನ ಕೊಟ್ಟು, ವಚನಭ್ರಷ್ಟರಾಗಿ ಆತನನ್ನು ಕೊಲ್ಲಿಸಿದರೆಂ[illegible]ಸು, ಆತನ ಕುಲದವರಾದ ಕೋಹಿಸ್ತಾನ್ಯರೆಂಬವರಲ್ಲಿದ್ದ ಆ ಬೆಂಕಿಯು ಒಳಗಿಂದೊಳಗೆ ಹೊತ್ತುತ್ತಿತ್ತು. ಕಾಬೂಲದ ಮೇಲೆ ದಂಡೆತ್ತಿ ಹೋಗಲು ಸಾಕಷ್ಟು ಸಾಮರ್ಥ್ಯ ಬಂದಿತೆಂದು ಕಂಡು ಬಂದು, ಇವರು ಕಾಬೂಲದ ಮೇಲೆ ದಂಡೆತ್ತಿ ಹೋದರು. ಅದರ ಬಾಗಿಲದಲ್ಲಿಯೇ ಯುದ್ಧವಾಯಿತು. ನಾದಿರಖಾನ ಖಜಿನೆಯಲ್ಲಿ ದ್ರವ್ಯವಿಲ್ಲದ್ದರಿಂದ, ಸೈನಿಕರು ಸಂಬಳವಿಲ್ಲದೆ ಕೂತಿದ್ದರು. ಈ ಸಮಯ ಸಾಧಿಸಿ, ಅವರು ಕಾಬೂಲದ ಮೇಲೆ ಕಯ್ಯಿಕ್ಕಿದ್ದರು. ಆದರೆ ಘಜನಿಯ ಸೈನಿಕರು ನಾದಿರಖಾನರ ನೆರವಿಗೆ ಬಂದು, ಕಹನಾಬಾಷಿಯವರನ್ನು ಸೋಲಿಸಿದರೆಂದು ಹಿಂದಕ್ಕೋಡಿಸಿದರಂತೆ. ವಿಸ್ತಾರವಾದ ವರ್ತಮಾನಗಳು ಬರುತ್ತವೆ.

ಸ್ವರ್ಗಲೋಕದಿಂದ ತಂದೆಯಿಂದ ಮಗನಿಗೆ ಬಂದ ಪತ್ರವು.

—(೦)—

ಸಾತಾರೆಯ ಕುಲಕರ್ಣಿ ಉಪನಾಮದ ಒರ್ವ ವಿದ್ಯಾರ್ಥಿಯು ಕಾಯದೆಭಂಗದಲ್ಲಿ ಸಿಕ್ಕು ಯರವಡೆಯಲ್ಲಿ ಬ್ರಿಟಿಶ ಸರಕಾರದ ಅತಿಥಿಯಾಗಿದ್ದಾನೆ. ಈತನಿಗೆ ತಂದೆಯು ಬರೆದಂತೆ ಒಂದು ಪತ್ರ ಬಂತು. ಅಪ್ಪಾ ಮಗನೇ ನೀನು ಸರಕಾರದ ಕ್ಷಮೆ ಬೇಡಿಕೊಳ್ಳು. ಅಂದರೆ ಕಾಲೇಜದಲ್ಲಿ ಓದುವಿ ಮತ್ತು ಟರ್ಮ ಸಿಗುವದು ಎಂಬದಾಗಿ ಕಕ್ಕುಲಾತಿಯಿಂದ ಉಪದೇಶ ಮಾಡಿದಂತೆ ಆ ಪತ್ರದ ಒಕ್ಕಣಿಕೆಯಾಗಿತ್ತು. ಜೇಲರರು ಆನಂದದಿಂದ ಈ ಪತ್ರವನ್ನು ಕುಲಕರ್ಣಿಯ ಕಯ್ಯಲ್ಲಿ ಕೊಟ್ಟರು. ಇದನ್ನು ನೋಡಿ ಈತನು ಆಶ್ಚರ್ಯಚಕಿತನಾದನು. ತನ್ನ ತಂದೆಯು ಸ್ವರ್ಗಸ್ಥನಾಗಿದ್ದಾನೆ ಕೃತಕ ಪತ್ರವೆಂದನು ಆಗ ಜೇಲರಸಾಹೇಬರ ಮೋರೆ ಹೇಗಾಗಿರಬಹುದು ?

ಪ್ರೊಫೇಸರರ ಇಂಗ್ರೇಜಿ ಟೊಪ್ಪಿಗೆಗಳನ್ನು ಸುಟ್ಟರು.

—(೦)—

ಕೊಲ್ಹಾಪೂರದಲ್ಲಿ ರಾಜಾರಾಮ ಕಾಲೇಜದ ಎದುರಿನಲ್ಲಿಯೇ ೪೦೦-೫೦೦ ಹುಡುಗರು ಪ್ರಚಂಡ ಜಯಘೋಷದಲ್ಲಿ ವಿಲಾಯತಿಯ ಅರಿವೆಯನ್ನು ಅಗ್ನಿ ನಾರಾಯಣನಿಗೆ ಅರ್ಪಿಸುವ ಕೆಲಸ ನಡೆಸಿದ್ದರು. ಸಾವಿರಾರು ಜನರು ಮನೆ, ಗಿಡ, ಮಾಳಿಗೆ ಮತ್ತು ಬೀದಿಗಳಲ್ಲಿ ನಿಂತು, ಈ ಸಂಭ್ರಮ ನೋಡುತ್ತಿದ್ದರು. ಆಗ ಪ್ರೊಫೆಸರ ದ್ವಯರಾದ ಫಡಕೆ ಮತ್ತು ಶಿಂದೆಯವರು ಹ್ಯಾಟ ಹಾಕಿಕೊಂಡು ಅಲ್ಲಿಗೆ ಬಂದರು. ವಿದ್ಯಾರ್ಥಿಗಳು ವಿನಯದಿಂದ ಇವರ ಹ್ಯಾಟಗಳನ್ನು ಇಸಗೊಂಡು, ಇವರ ಕಯ್ಯಿಂದಲೇ ಇವನ್ನು ಆ ಹೋಮದಲ್ಲಿ ಹಾಕಿಸಿದರು. ಆಗ ವಂದೇ ಮಾತರಮ ಮತ್ತು ಗಾಂಧಿಯವರ ಹೆಸರಿನ ದಶದಿಕ್ಕುಗಳದರುವಂತೆ ಜಯಘೋಷವಾಯಿತು.

ಇಜಿಪ್ತದಲ್ಲಿಯೂ
ಅಸಹಕಾರ ಮತ್ತು ಕಾಯದೆಭಂಗ

— ೦*೦ —

ಕರಕಂದಾಯ ಕೊಡಬಾರದೆಂಬ ಚಳವಳಿ

—(೦)—

ಇಜಿಪ್ತದ ಸುಲ್ತಾನರು ಸುಲ್ತಾನಶಾಹಿಯಂತೆ ರಾಜ್ಯಕಾರಭಾರ ಪ್ರಾರಂಭಿಸಿ, ಸಭಾಬಂದಿ, ದಸ್ತಗಿರಿ, ಶಿಕ್ಷೆ ಮತ್ತು ಗೋಳಿಬಾರು ಮುಂತಾದ ದಬ್ಬಾಳಿಕೆ ನಡೆಸಿದ್ದರಿಂದ, ಅದನ್ನು ಪ್ರತಿಬಂಧಿಸಲು ಹಿಂದುಸ್ಥಾನದ ಗಾಂಧಿ ತತ್ವದಂತೆ ಅಸಹಕಾರ ಮತ್ತು ಕಾಯದೆಭಂಗ ಮಾಡಿ, ಕರಕಂದಾಯ ಕೊಡಬಾರದೆಂಬ ಚಳವಳಿ ಪ್ರಾರಂಭಿಸುವ ಏರ್ಪಾಡು ಮಾಡುತ್ತಲಿದ್ದಾರೆ.

ಸ್ಕೂಲಬೋರ್ಡಿನ ಹುಕುಮು ತಿರುಗಿಸಲಿಕ್ಕೆ ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಅಧಿಕಾರವಿಲ್ಲ

—(೦)—

ರತ್ನಾಗಿರಿ ಜಿಲ್ಲೆಯ ಸ್ಕೂಲಬೋರ್ಡಿನವರು ಇಬ್ಬರು ಶಿಕ್ಷಕರನ್ನು ಸುಪರವಾಯಜರ ಮಾಡಿ, ಕೆಲ ಮಾಸ್ತರರ ವರ್ಗಾವರ್ಗಿ ಮಾಡಿದರು. ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಈ ಬಡತಿ ಮತ್ತು ವರ್ಗಾವರ್ಗಿಯು ಸಮ್ಮತವಾಗಲಿಲ್ಲ. ಇಬ್ಬರ ಜಗಳವು ನಿರ್ಣಯಕ್ಕಾಗಿ ಡಾಯರೆಕ್ಟರಸಾಹೇಬರ ಕಡೆ ಹೋಯಿತು. ಡಿ|| ಎಲ್|| ಬಿಗೆ ಸ್ಕೂಲಬೋರ್ಡಿನ ವಿರುದ್ಧ ತಕರಾರು ಕೇಳಲಿಕ್ಕೆ ಅಥವಾ ಅದರ ಹುಕುಮು ತಿರುಗಿಸಲಿಕ್ಕೆ ಅಧಿಕಾರವಿಲ್ಲೆಂದು ಸಾಹೇಬರು ನಿರ್ಣಯ ಹೇಳಿದ್ದಾರೆ.

ಹಿಂದುಸ್ಥಾನವು ತನ್ನ ಅರಿವೆಯನ್ನು ತಾನೇ ನೆಯ್ದುಕೊಳ್ಳುವದು ಖಂಡಿತ.

—(೦)—

ಇಂಗ್ಲಂಡದ ಜವಳಿಯ ವ್ಯಾಪಾರವೇಕೆ ಕುಂದುತ್ತಾ ನಡೆಯಿತೆಂಬ ವಿಚಾರ ಮಾಡಲು ಒಂದು ಕಮೀಟಿ ಕೂಡಿತ್ತು. ಮಹಾಯುದ್ಧವಾದ ಬಳಿಕ ಹಿಂದುಸ್ಥಾನ, ಚೀನ, ಜಪಾನ ಮುಂತಾದ ದೇಶಗಳಲ್ಲಿ ಕಲ್ಪನಾಬಾಹ್ಯವಾಗಿ ಗಿರಣಿಗಳಾದವು. ಹಿಂದುಸ್ಥಾನವು ಇಂದು ಪರತಂತ್ರ-ಪರಾವಲಂಬಿಯಾದರೂ, ಕೆಲವು ವರ್ಷಗಳಲ್ಲಿ ತನಗೆ ಹತ್ತುವಷ್ಟು ಬಟ್ಟೆಗಳನ್ನು ತಾನು ಮಾಡಿಕೊಳ್ಳುವಂತೆ ಸಮರ್ಥವಾಗುವದು ಶತಸಿದ್ಧಾಂತವೆಂದು ಈ ಕಮೀಟಿಯವರು ಅಭಿಪ್ರಾಯಪಟ್ಟಿರುತ್ತಾರೆ.

ನಾಶಿಕದಲ್ಲಾದ ಒಂದು ಮೋಜು

—(೦)—

ನಾಶಿಕ ಪಟ್ಟಣಕ್ಕೆ ಗವರ್ನರಸಾಹೇಬರು ಬರುವರು. ಅವರಿಗೆ ಮಾನಪತ್ರ ಕೊಡಬೇಕೆಂದು ಕೆಲ ರಾಜನಿಷ್ಠರು ಮ್ಯುನಿಸಿಪಾಲ ಪಟಕಿ [illegible] ಅಧ್ಯಕ್ಷರ ಕಡೆಗೆ ಪದ್ಧತಿ ಪ್ರಕಾರ ವಿನಂತಿಪತ್ರ ಕಳಿಸಿದರು. ರಾ. ಬ. ಪ್ರಧಾನರು ಅಧ್ಯಕ್ಷರಾಗಿದ್ದಾರೆ. ಗವರ್ನರಸಾಹೇಬರು ಬರುತ್ತಾರೆಂಬುದು ನಮಗೆ ಸರಕಾರದಿಂದ ಬರೆದು ಬಂದಿಲ್ಲ. ಆದ್ದರಿಂದ ನಿಮ್ಮ ವಿನಂತಿ ಅರ್ಜಿಯು ಕ್ರಮಬಾಹ್ಯವಾಗಿರುತ್ತದೆಂದು ಹೇಳಿ, ಅಧ್ಯಕ್ಷರು ಅರ್ಜಿಯನ್ನು ತೆಗೆದು ಹಾಕಿದರು.

ಬಹಾದ್ದೂರ ಕಳ್ಳನಿಗೆ [illegible]

—(೦)

ಕಲಕತ್ತೆಯಲ್ಲಿ ಶೇಖು ಇಸ್ಮಾಯಿಲನೆಂಬವನಿಗೆ ಹಲವು ಸಾರೆ ಶಿಕ್ಷೆಯಾಗಿದೆ. ಈತನೇ ಕಳವು ಮಾಡಿದಾಗ ಈತನನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ನಾನು ಬಹಾದ್ದೂರ ಕಳ್ಳನಾಗಿದ್ದೇನೆ. ನನ್ನಷ್ಟು ಶಿಕ್ಷೆಯಾರಿಗೂ ಆಗಿಲ್ಲ. ಸರಕಾರದಿಂದ ನನಗೊಂದು [illegible] ಈತನು ಮ್ಯಾಜಿಸ್ಟ್ರೇಟರಿಗೆ ಹೇಳಿಕೊಂಡನು. ಅವರು ಈತನಿಗೆ ಒಂದು ತಿಂಗಳ ಶಿಕ್ಷೆ ವಿಧಿಸಿ, ಹೋಗಿ ಬಾ ಎಂದರು.

ದೇವಿಯವರ ನಿತ್ಯಕ್ರಮ.

ದೇವಿ ಸರೋಜಿನಿಯವರು ತುರಂಗದಲ್ಲಿ ಅಡಿಗೆ, ತೋಟದ ಕೆಲಸ, ಕಾದಂಬರಿ ವಾಚನ ಮುಂತಾದ ಕೆಲಸ ಮತ್ತು ವಾಚನದಿಂದ ಮನರಂಜನ ಮಾಡಿಕೊಳ್ಳುವರು. ಫಾರ್ಸಿ ಭಾಷೆಯಲ್ಲಿರುವ ಕೆಲ ಗ್ರಂಥಗಳನ್ನು ಕಳಿಸಿಕೊಡುವಂತೆ ಸರ ಸಾಹೇಬರಿಗೆ ತಿಳಿಸಿದ್ದಾರೆ.

ತಂದೆ ಮಗನ ಕೂಡ ರಾಜಿಯ ಮಾತು.

ಆದಿತ್ಯವಾರವಿದ್ದರೂ, ಅಧಿಕಾರಿಗಳ ಸಮ್ಮತಿಯಿಂದ ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರುಸಾಹೇಬರು ನೈನಿತಾಳದ ತುರಂಗಕ್ಕೆ ಹೋಗಿ, ಪಂಡಿತ ಮೋತಿಲಾಲ ಮತ್ತು ಜವ್ಹೆರಲಾಲರ ಕೂಡ ನಾಲ್ಕುವರೆ ತಾಸಿನ ತನಕ ಸಂಭಾಷಣೆ ಮಾಡಿದರು. ಅಂದಿಗೆ ಎಲ್ಲ ಮಾತು ಮುಗಿಯದ್ದರಿಂದ, ಸೋಮವಾರ ಪುನಃ ಹೋಗಿ ಚರ್ಚೆ ನಡೆಸಿದರು. ಇವರು ಹೋಗುವಾಗ ಮಹಾತ್ಮರ ಪತ್ರ ತಕ್ಕೊಂಡು ಹೋದ್ದರಿಂದ ರಾಜಿಯ ಚರ್ಚೆಯು ಸುಗಮವಾಯಿತು. ಯರವಡೆಯ ಚರ್ಚೆಯಂತೆ ಈ ಚರ್ಚೆಯನ್ನೂ ಗುಪ್ತವಾಗಿಟ್ಟಿರುತ್ತಾರೆ.

ಈ ಶಿಷ್ಟಾಯಿಯಲ್ಲಿ ನಡೆದ ವಿಚಾರಗಳನ್ನು ಗುಪ್ತವಿಡುವಂತೆ ಮಹಾತ್ಮರು ಹೇಳಿದ್ದರಿಂದ, ಇವರೀರ್ವರೂ ಒಂದು ಅಕ್ಷರ ಕೂಡ ಹೊರಗೆ ಹಾಕುವದಿಲ್ಲ. ಇವರ ಪರಮ ಮಿತ್ರರಿಗೆ ಸಹ ಏನು ನಡೆದದೆಂಬುದರ ವಾಸನೆ ಹತ್ತಿಲ್ಲ. ಮೂರು ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ ಮುಟ್ಟುತ್ತದೆಂಬ ಮಾತು ಈಗಂತೂ ಸುಳ್ಳಾಗಿರುತ್ತದೆ. ಇವರಿಂದ ಏನಾದರೂ ಉಸುರೊಡಿಸಬೇಕೆಂದು "ಲಾರ್ಡ ಅರ್ವಿನಸಾಹೇಬರು ವಸಾಹತಿಕ ಸ್ವರಾಜ ಕೊಡಲಿಕ್ಕೆ ಸಿದ್ಧರಾಗಿದ್ದಾರೆಂದು" ಹುಟ್ಟಿದ ಸುದ್ದಿಯು ನಿಜವೇನೆಂದು ಸರ ಸಪ್ರುಸಾಹೇಬರಿಗೆ ಪ್ರಶ್ನೆ ಮಾಡಲು ಇಂಥ ಪ್ರಶ್ನೆ ಹಾಕಿ ನನ್ನನ್ನು ಇರಕಿನಲ್ಲಿ ತರಬೇಡಿರೆಂದು ಇವರು ಉತ್ತರ ಕೊಟ್ಟರು.

ಹಿರೇಕೆರೂರ ತಾಲೂಕಿನಲ್ಲಿ ವನಗಾವಲದ ಪಿಕೆಟಿಂಗ.

—(೦)—

ಹಿರೇಕೆರೂರ ತಾಲೂಕಿಗೆ ಸೇರಿದ ಚಟ್ಟಿಹಳ್ಳಿ ಗ್ರಾಮದಲ್ಲಿ ಅದರ ಸುತ್ತಲಿನ ಮಾಸೂರ, ಬನ್ನಿಹಳ್ಳಿ, ತಳಗ, ಶಿವಪೂರ, ಬಡಾ ಸಂಗಾಪೂರ, ಮತ್ತು ಚಟ್ಟಿಹಳ್ಳಿಯಲ್ಲಿನ ಸರಕಾರೀ ಅಡವಿಗಳಲ್ಲಿರುವ ಹುಲ್ಲಿನ ಸವಾಲು ಮಾಡಲಿಕ್ಕೆ ಮಾಮಲೇದಾರರು ಹೋದರು. ಅಲ್ಲಿಯ ತರುಣರು ಪಿಕೆಟಿಂಗ ಮಾಡಿದ್ದರಿಂದ, ಬೇರೆ ಬೇರೆ ಊರುಗಳಿಂದ ಬಂದಿದ್ದ ನೈಕರು ಸವಾಲು ಮಾಡದೆ, ಹಾಗೇ ಹೊರಟು ಹೋದರು. ತಮಗೆ ಯಶ ಬಂದ ಬಗ್ಗೆ ತರುಣರು ಆನಂದಪಟ್ಟಿದ್ದು, ತಮಗೆ ಈ ಕೆಲಸದಲ್ಲಿ ಸಹಾಯ ಮಾಡಿದವರಿಗೆ ಇವರು ಕೃತಜ್ಞರಾಗಿದ್ದಾರೆ.

ನಾಗಪಂಚಮಿಯ ರಜೆ.—

ಇಂದು ನಾಗಪಂಚಮಿಯ ದೆಸೆಯಿಂದ ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು

ವಿಜಯ ನಿತ್ಯಪತ್ರಿಕೆ 1930 ಆಗಸ್ಟ್

ಶನಿವಾರ	2.8.1930
ರವಿವಾರ	3.8.1930
ಮಂಗಳವಾರ	5.8.1930
ಬುಧವಾರ	6.8.1930
ಗುರುವಾರ	7.8.1930
ಶನಿ ~~ಶುಕ್ರ~~ವಾರ	9.8.1930
ಮಂಗಳವಾರ	12.8.1930
ಗುರವಾರ	14.8.1930
ಶುಕ್ರವಾರ	15.8.1930
ಶನಿವಾರ	16.8.1930
ಸೋಮವಾರ	18.8.1930
ಮಂಗಳವಾರ	19.8.1930
ಬುಧವಾರ	20.8.1930
ಗುರುವಾರ	21.8.1930
ಶುಕ್ರವಾರ	22.8.1930
ಶನಿವಾರ	23.8.1930
ರವಿವಾರ	24.8.1930
ಸೋಮವಾರ	25.8.1930
ಮಂಗಳವಾರ	26.8.1930
ಬುಧವಾರ	27.8.1930
ಶುಕ್ರವಾರ	29.8.1930
ಶನಿವಾರ	30.8.1930
ರವಿವಾರ	31.8.1930



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸಳವು

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿದವಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರೀದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜೀ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಜಾಹೀರ ನೋಟೀಸು-
ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಪೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಶಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತ್ಯಯಾರಿ ಶಿಗುತ್ತವೆ

ಇದರ ಹೊತಾರ್ಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಶಿ ಕೊಡುತ್ತೇವೆ

ಮತ್ತು ಬಿಲ್ಡರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ

ನಿತ್ಯ ಪತ್ರ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ

ವರ್ಷ ೧೧। ಧಾರವಾಡ ಶನಿವಾರ ತಾರೀಖು ೨ ನೇ ಅ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ ಕ್ರೆಡಿಟ ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ ಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವತ್ತಿ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಮಾರಾಟ

ಶ್ರೀ. ಸಿದ್ಧಾರೂಢಸ್ವಾಮಿಯ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾ
ನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರ
ಸ್ವಾಮಿಗಳ ಕೃಪೆಯತು ಮತ್ತು ಮುನಸಫರಾ
ವಾದಿ, ಪ್ರತಿವಾದಿ, ಹಾಗು ಮುನಸಫರ ಭಾ
ಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು
ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿ
ಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾ

ಒಂದು ಪುಸ್ತಕದ ಬೆಲೆ ನಾಲ್ಕು ಆ
ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ
ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿ
ಬೇಕು. ಬಹಳ ಪ್ರತಿ ಬೇಡುವವರು ಮುಂ
ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ವ

ಔದ್ಯೋ

ದಿ ಸಾಯಂಟಿಫಿಕ ಟೇಲ

ಧಾರವಾ

ವಿಜಯದ ವರ್ಗಣಿ ದರ

ಸತ್ಯ ಪತ್ರಕ್ಕೆ

೧೨ ತಿಂಗಳಿಗೆ ರೂ. ೧೨-೮-೦

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿ
ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡು
ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕ
ಕಟಿಂಗ ಫೀ ರೂಪಾಯಿ ಮತ್ತು

ಮರಾಟಿ, ತೆಲಗಿನಲ್ಲಿಯೂ ಬರಿಯಬಹುದು. ಆದ್ದರಿಂದ ಇಂಗ್ರೇಜಿ ಶರತಾವನ್ನು ರದ್ದು ಮಾಡಿದ್ದೇವೆಂದು ಜಡ್ಜರು ತೀರ್ಪು ಹೇಳಿದ್ದಾರೆ.

---

೧೪೦ ಪಾಟೀಲರ ರಾಜೀನಾಮೆ.

—(೦)—

ನಾಸಿಕ ಜಿಲ್ಹೆಗೆ ಸೇರಿದ ಬಾಗಲಣ ತಾಲೂಕಿನಲ್ಲಿ ೧೪೦ ಜನ ಗೌಡರು ರಾಜೀನಾಮೆ ಕೊಟ್ಟರು. ಇದೀ ತಾಲೂಕಿನ ರೈತರು ವನಗಾವಲದ ಕಾಯದೆ ಮುರಿದಿದ್ದು, ಒಬ್ಬನೂ ವನಚರಾಯಿ ಕೊಟ್ಟಿರುವದಿಲ್ಲ.

ಶ್ರೀ. ಧನಶೆಟ್ಟಿಯವರಿಗಾಗಿ ಸಹಾನುಭೂತಿ-

ಸೊಲ್ಲಾಪೂರದ ಶ್ರೀ. ಧನಶೆಟ್ಟಿಯವರಿಗಾದ ಗಲ್ಲಿನ ಶಿಕ್ಷೆ ರದ್ದುಪಡಿಸಬೇಕೆಂದು ಮೈಸೂರ ಇಲಾಖೆಯ ವಕೀಲರೂ ಮುಂಬಯಿ ಸರಕಾರಕ್ಕೆ ವಿನಂತಿ ಪತ್ರ ಬರೆದಿರುತ್ತಾರೆ. ಬೆಂಗಳೂರಿನ ವಿಶ್ವಕರ್ನಾಟಕ ಪತ್ರದ ಸಂಪಾದಕರಾದ ಶ್ರೀ. ತಿರುಮಲೆ ತಾತಾಚಾರ್ಯ ಮೊದಲಾದವರೂ ಸರಕಾರಕ್ಕೆ ಬರೆಕೊಂಡಿದ್ದಾರೆ. ಅನೇಕ ಊರುಗಳಿಂದ ಬಂದಿರುವ ಅರ್ಜಿ ಮತ್ತು ತಾರುಗಳನ್ನು ನೋಡಿ, ಮುಂಬಯಿ ಸರಕಾರದವರು ಈ ಬಗ್ಗೆ ವಿಚಾರಮಾಡುತ್ತಲಿದ್ದಾರೆ.

ಮುಂಬಯಿಯಲ್ಲಿ ೧೪ ಜನರಲ್ಲಿ ಒಬ್ಬನು ಬಡಮಾನಸನಿರುತ್ತಾನೆ. ಒಂದು ವರ್ಷದಲ್ಲಿ ದಾರಿಗಳಲ್ಲಾದ ಅಪಘಾತಗಳಿಂದ ೮೮೦ ಜನರು ಸತ್ತರು. ೧೯ ಲಕ್ಷದ ಆಸ್ತಿಯು ಕಳವಾಯಿತೆಂದು ಸರಕಾರದ ಪುದ್ದೀಸೂಂಪ್ಪನು ಹೇಳುತ್ತಾನೆ.

ಜಾಹೀರ ನೋಟೀಸು

ಯಾವತ್ತು ಜನರಿಗೆ-

ಕೆಳಗೆ ಸಹಿ ಮಾಡಿದವನು ತಿಳಿಸುವದೇನಂದರೆ:- ಧಾರವಾಡ ಶಹರ ಮಂಗಳವಾರ ಪೇಟೆ ಕೆರೀಕೆಳಗಿನ ಓಣಿಯಲ್ಲಿರುವ ಮುನಸಿಪಾಲಿಟಿ ನಂ. ೧೯೭೬ಅ ಸಿಟಿಸರ್ವೆ ನಂ ೮೦೯/ಅ ನೇ ಮನೆಯು ಶ್ರೀ ಸುಬಣಾಚಾರ್ಯ ಅಧ್ವರ್ಯ ಇವರ ಮಾಲಕಿಯದಿದ್ದು, ಅದನ್ನು ಮತ್ತು ಕೆಲವು ಆಸ್ತಿಯನ್ನು ಅವರು ನನಗೆ ೨೪೦೦ ರೂಪಾಯಿಗಳಲ್ಲಿ ತೋರ್ಣವತ್ತಿ ಹಾಕಿರುವರು. ಅದರ ಸಂಬಂಧೀ ನನಗೆ ಅವರಿಂದ ಪೂರಾ ಹಣ ಮುಟ್ಟಿಲ್ಲ. ಈ ಬಗ್ಗೆ ನನ್ನ ಹಾಗು ಅವರ ನಡುವೆ ತಂಟೆ ಇರುತ್ತದೆ. ಈಗ ಸದರೀ ಅಧ್ವರ್ಯ ಇವರು ಆ ಮನೆಯನ್ನು ಮಾರತಕ್ಕವರಿದ್ದಾರೆಂದು ತಿಳಿಯುತ್ತದೆ. ಹಾಗೆ ಯಾರಾದರೂ ಅವರ ಮನೆಯನ್ನು ಮಾರಲಿಕ್ಕೆ ತೆಗೆದುಕೊಂಡರೆ ನನಗೆ ಅವರು ಕೊಡತಕ್ಕ ಸಾಲವನ್ನು ಕೊಂಡುಕೊಳ್ಳತಕ್ಕವರೇ ತೀರಿಸಬೇಕಾದೀತು. ತಿಳಿಯುವದು.

ವೆಂಕಟೇಶ ಶ್ರೀನಿವಾಸ ಮಿರಜಿ
ಹಾವೇರಿಪೇಟೆ, ಧಾರವಾಡ

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ. ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೆಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

—(೦)—

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೆಜರ ವಿಜಯ, ಧಾರವಾಡ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖ್ಯೇರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜೀಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ತಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಪೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ಕ್ಯೈಯಾದಿ ಶಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಶನಿವಾರ ತಾರೀಖು ೨ ನೇ ಅಗಸ್ಟ ೧೯೩೦ (ಸಂಚಿಕೆ ೩೭೧

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಪತ್ತಿ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ್ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ. ವಿಜಯ ಧಾರವಾಡ

ಮಾರಾಟಕ್ಕೆ ಸಿದ್ಧವಾಗಿದೆ·

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿವಪ್ಪವಧೂತರ ಅಸಲರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ· ಪಟನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತಾರೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು ಪೋ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ· ಫಕತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ಪರ್ಜನ್ಸಿನ ಪ್ರಕಾರ ತಿಂಗಳಾ ಕನಿಷ್ಟ ಆರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ಶುದ್ಧ ೮

ವಿಲಾಯತಿಯ ಗಿರಣಿಗಳಿಗೆ ಬಂದ ಗೋಳು.

—(೦)—

ಬಂಗಾರ ಬಳ್ಳಿಯ ಬೆಲೆಗೆ ಮಾರುವಂತೆ ಮಾರಾಟ.

—(೦)—

ಹಿಂದುಸ್ಥಾನದಲ್ಲಿ ಇಂಗ್ಲಂಡದ ಅರಿವೆಗೆ ಹಾಕಿದ ಬಹಿಷ್ಕಾರವು ಇಂಗ್ಲಿಷ ವರ್ತಕರನ್ನು ಹೌಹಾರಿಸಿ ಬಿಟ್ಟಿರುತ್ತದೆ. ಎಷ್ಟೋ ಗಿರಣಿಗಳು ಬಂದಾಗಿದ್ದು, ದಿನಾಲು ಅವುಗಳಿಗೆ ಬರುತ್ತಿರುವ ಭೋಗದ ಕೆಟ್ಟ ಸುದ್ದಿಗಳೇ ಬರುತ್ತವೆ. ಅವುಗಳ ಭವಣೆಯವನ್ನು ಹೇಳುವದೊಂದು ಪತ್ರವು ಅಹಮದಾಬಾದಿನ ಒಬ್ಬ ಏಜಂಟರಿಗೆ ಬಂದಿದೆ. ಅದು ಆ ಗಿರಣಿಗಳ ದುಃಸ್ಥಿತಿಯನ್ನು ಮುಂದೆ ಕೊಟ್ಟಂತೆ ಹೇಳುತ್ತದೆ.

ನಿಮ್ಮ ಬಹಿಷ್ಕಾರವು ಮ್ಯಾಂಚೆಸ್ಟರದಲ್ಲಿ ಯಾವ ಧೂಮಶ್ಚಕ್ರಿಯನ್ನು ಹಾಕುತ್ತದೆಂಬದನ್ನು ನೀವು ಬಲ್ಲಿರಾ. ಒತ್ತರದಿಂದ ದಿವಾಳಿಗೆ ಬರುತ್ತಿರುವದು. ಮೂರು ವರ್ಷವಾಯಿತು ಲ್ಯಾಂಕೆಶಾಯರವು ತಲೆಯನ್ನು ಮೇಲೆತ್ತಲು, ನೀರೊಳಗೆ ಮುಣುಗುವವರು ನೀರ ಮೇಲೆ ತಲೆಯೆತ್ತಲು ತಡಪಡಿಸುವಂತೆ, ತಡಪಡಿಸುತ್ತಿರುವದು. ಕೆಲವು ಗಿರಣಿಗಳು ತೆರೆದಿರುವವು. ಬಹಿಷ್ಕಾರವು ಇವುಗಳಿಗೂ ಅಂತ್ಯಕಾಲ ತಂದಿದೆ. ಪ್ರತಿಯೊಂದು ಗಿರಣಿಯು ಬ್ಯಾಂಕುಗಳಿಗೆ ಒತ್ತೀ ಬಿದ್ದಿದೆ. ಹೆಚ್ಚಿಗೆ ಹಣದೊರೆಯುವದಷ್ಟು ಒತ್ತಿಯ ರಕಮು ಆಗಿದೆ. ಇಷ್ಟೇ ಅಲ್ಲ; ಪ್ರತಿಯೊಂದು ವಾರದಲ್ಲಿಯೂ ಗಿರಣಿಗಳ ಲಿಲಾವಿನ ಸವಾಲು ಆಗುತ್ತಿರುವದು. ಇವುಗಳಿಗೆ ಕಬ್ಬಿಣದ ತುಂಡುಗಳಿಗೆ ಬರುವಷ್ಟು ಬೆಲೆ ಬರುತ್ತಿರುವದು. ಆದ್ದರಿಂದ ಇವನ್ನು ಕೈಗೆ ಬಂದ ಬೆಲೆಗೆ ಮಾರುವರು. ಒಂದು ದೊಡ್ಡ ಗಿರಣಿ ೩೦ ಸಾವಿರ ಕದರು, ೧೧೦೦ ಮಗ್ಗ, ಅದರ ನೆಲ ಮತ್ತು ಕಟ್ಟಡ ಸಹಿತವಾಗಿ ೩೧ ಲಕ್ಷಕ್ಕೆ ಮಾರಲ್ಪಟ್ಟಿತು. ಐದು ವರ್ಷಗಳ ಹಿಂದೆ ಇದು ನೂರಕ್ಕೆ ಹತ್ತಕ್ಕಿಂತ ಕಡಿಮೆ ಲಾಭ ಕೊಡಲಿಲ್ಲ. ಇದರ ಮೂರು ಕೋಟಿಯ ಬಂಡವಲವೆಲ್ಲ ಹೋಯಿತು. ಡಾಯರೆಕ್ಟರರಿಗಾಗಲಿ, ಶೇರಹೋಲ್ಡರರಿಗಾಗಲಿ ಒಂದಾಣೆ ಸಹ ಸಿಗಲಿಲ್ಲ. ನೂರಾರು ಉದಾಹರಣೆಗಳಲ್ಲಿ ಇದೊಂದಾಗಿದೆ. ಕೆಲವು ವರ್ಷಗಳಲ್ಲಿ ಗರ್ಭಶ್ರೀಮಂತರಾಗಿದ್ದಂಥವರು ಇಂದು ದರಿದ್ರನಾರಾಯಣರಾಗಿದ್ದಾರೆ. ದಿವಾಳಿ ಹೊರಟದ್ದರಿಂದ ಅನೇಕರು ಆತ್ಮಹತ್ಯ ಮಾಡಿಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಪರಿಸ್ಥಿತಿಯು ಅತ್ಯಂತವಾಗಿ ದುಃಖಮಯವಾಗಿರುತ್ತದೆ.”

ಇಂಗ್ಲಂಡದಂತಾಗದಿದ್ದರೂ, ಹಿಂದುಸ್ತಾನವೂ ಹತ್ತಿಗೆ ಬಂದಿದೆ

—(೦)—

ಬಹಿಷ್ಕಾರವೇನು ಮಾಡೀತೆಂದು ಹೆಮ್ಮೆಗೆ ಬಂದಿದ್ದ ಇಂಗ್ರೇಜಿ ವ್ಯಾಪಾರಸ್ಥರೂ, ಆಳರಸರೂ ಈಗ ನಿಚ್ಚಳಾಗಿ ಕಣ್ದೆರೆದು ನೋಡುತ್ತಿದ್ದಾರೆ. ವಿಲಾಯತಿಯ ವರ್ತಕರು ತಮ್ಮ ಮುಂದೆ ಪರ್ವತಪ್ರಾಯವಾಗಿ ಬಿದ್ದಿರುವ ಬಟ್ಟೆಗಳ ಪೆಟ್ಟಿಗೆಗಳನ್ನು ಮುಂಬಯಿಗೆ ಹೊತ್ತು ಹಾಕುತ್ತಿದ್ದಾರೆ. ಮಾರಾಟವಿಲ್ಲ; ಕಳಿಸಬೇಡಿರೆಂದು ತಾರಿನ ಮೇಲೆ ತಾರು ಕೊಟ್ಟರೂ ಕಳಿಸುತ್ತಿದ್ದಾರೆ. ಮುಂಬಯಿ ಬಂದರದಲ್ಲಿ ೪೦ ಸಾವಿರ ಪೆಟ್ಟಿಗೆಗಳು ದಿಕ್ಕಿಲ್ಲದೆ ಬಿದ್ದದ್ದು, ಅವನ್ನು ತಕ್ಕೊಂಡು ಹೋಗುವಂಥವರ ಗತಿಯೇ ಇಲ್ಲ. ಏಕಂದರೆ- ವಿಲಾಯತಿಯ ಜವಳಿಯ ವ್ಯಾಪಾರ ಮಾಡಬಾರದೆಂದು ವರ್ತಕರು ಮಾರ್ಕೆಟಿಗೇ ಬೀಗ ಹಾಕಿದ್ದಾರೆ. ಇಂಗ್ಲಂಡದಂತೆ ಮುಂಬಯಿ ಗಿರಣಿಗಳಿಗೂ ಆಪತ್ತು ಬಂದಿತ್ತು. ಖಾದಿಯ ಕೂಡ ಸ್ವದೇಶಿ ಗಿರಣಿಗಳ ಅರಿವೆಯನ್ನು ಕೊಳ್ಳಬಹುದೆಂದು ಕಾಂಗ್ರೆಸದ ಅಧ್ಯಕ್ಷರಾದ ಸರದಾರ ಪಟೇಲರು ಪ್ರಸಿದ್ಧ ಮಾಡಿದ್ದರಿಂದ ಇವುಗಳಿಗೆ ಹೋದ ಜೀವ ಬಂದಿತು. ಇಲ್ಲವಾದರೆ ೧ನೆಯ ಅಗಸ್ಟದಿಂದ ಅನೇಕ ಗಿರಣಿಗಳು ಬಂದಾಗಿ ಸಹಜವಾಗಿ ಒಂದು ಲಕ್ಷ ಕೂಲಿಕಾರರು ನಿರುದ್ಯೋಗಿಗಳಾಗುತ್ತಿದ್ದರು. ವಿಲಾಯತಿಯ ನೂಲಿನಿಂದಾಗುವ ಬಟ್ಟೆಗಳನ್ನು ಕೊಳ್ಳಬಾರದೆಂದು ಕಾಂಗ್ರೆಸದ ಆಜ್ಞೆಯಾಗಿರುವದರಿಂದ, ಇಂಥ ಗಿರಣಿಗಳು ಮಾತ್ರ ಕತ್ತರಿಸುವವು. ಬಹುತೇಕರಾಗಿ ಇವು ಸಾಹೇಬರಿಂದ ನಡೆಸಲ್ಪಡುತ್ತವೆ.

ಮುಂಬಯಿ ಹತ್ತರಿರುವ ಮಾಹೀಮದಲ್ಲಿ ಒಂದೂವರೀ ಲಕ್ಷ ತಾಡಾವಲಿಯ ಗಿಡಗಳುಂಟು. ಇವುಗಳನ್ನು ಶೇಂದೀ ತೆಗೆಯಲಿಕ್ಕೆ ಕೊಡಬಾರದೆಂದು ಅವುಗಳ ಮಾಲೀಕರು ಠರಾವು ಮಾಡಿದ್ದಾರೆ. ಇದರಿಂದ ಮಾಲೀಕರಿಗೆ ಗಿಡಕ್ಕೆ ಒಂದರಂತೆ ಒಂದೂವರೀ ಲಕ್ಷ ಹಾಗೂ ಸರಕಾರಕ್ಕೆ ಅಷ್ಟೇ ನಷ್ಟ ಸಂಭವಿಸಿರುತ್ತದೆ.

ಸ್ವತಃ ಲಾರ್ಡ ಆಯರ್ವಿನಸಾಹೇಬರ ಕಬೂಲಿಯು.

—(೦)—

ಉತ್ತರ ಹಿಂದುಸ್ಥಾನದ ಜಮೀನದಾರರು ಲಾರ್ಡ ಆಯರ್ವಿನಸಾಹೇಬರ ಕಡೆಗೆ ಶಿಷ್ಟಮಂಡಲ ತಕ್ಕೊಂಡು ಹೋಗಿದ್ದರು. ಇದಕ್ಕೆ ಉತ್ತರ ಕೊಡುವಾಗ ಲಾರ್ಡ ಆಯರ್ವಿನಸಾಹೇಬರು ಹಿಂದುಸ್ಥಾನದ ವ್ಯಾಪಾರವು ಕಾಯದೆಭಂಗದ ಕೋಲಾಹಲದಿಂದ ಮುಗ್ಗಿದೆಂದು ಒಪ್ಪಿದ ಭಾಷಣ ಮಾಡಿದ್ದಾರೆ. ಸಾಹೇಬರು ಅಂದದ್ದೇನಂದರೆ-

ಬೇರೆ ದೇಶಗಳ ವ್ಯಾಪಾರವನ್ನು ನಮ್ಮಾಧೀನದಲ್ಲಿಟ್ಟುಕೊಳ್ಳುವದಕ್ಕೆ ನಾವೇನೂ ಮಾಡಲಾರೆವು. ಏಕಂದರೆ ಇದಕ್ಕೆ ಅಲ್ಲಲ್ಲಿಯ ಪರಿಸ್ಥಿತಿಯೇ ಕಾರಣ. ನಮ್ಮ ಹಿಂದುಸ್ಥಾನದ ಮಾರ್ಕೆಟೂ ಮಹತ್ವದ್ದಾಗಿರುತ್ತದೆ. ಈ ದೇಶದಲ್ಲಿಯ ಆಂದೋಲನವು ಜಗತ್ತಿನಲ್ಲಿ ಹೆಚ್ಚಿನದಾಗಿ ಕೂತರೆ- ಪರಿಣಾಮವು ಅತ್ಯಂತವಾಗಿ ಅನಿಷ್ಟಕಾರಕವಾಗುವದು. ಈ ಗೊಂದಲವು ಕಾಯದೆಭಂಗದಿಂದ ಉತ್ಪನ್ನವಾದದ್ದಿರುತ್ತದೆ. ಇದರ ಪರಿಣಾಮವು ದೇಶದ ತುಂಬ ಎಲ್ಲಾ ಸ್ಥಳಗಳಲ್ಲಿಯೂ ಒಡೆದು ಕಾಣಿಸುತ್ತದೆ. ಎಲ್ಲ ತರದ ವ್ಯಾಪಾರಗಳಲ್ಲಿಯೂ ಜನರ ವಿಶ್ವಾಸ ಹಾರಿ ಹೋಗಿದೆ. ಆದ್ದರಿಂದ ಯಾರೂ ಹೊಸ ವ್ಯವಹಾರ ಮತ್ತು ಕರಾರ ಮಾಡದಾಗಿದ್ದಾರೆ. ಚಿಕ್ಕ ದೊಡ್ಡ ಅಂಗಡಿಕಾರರು ಸರಕು ಸಂಗ್ರಹಿಸದಾಗಿದ್ದಾರೆ. ಮುಂಬಯಿಯ ಗಿರಣಿಯವರು ತಮ್ಮ ಸರಕು ಮಾರಲಾರದಾಗಿದ್ದಾರೆ. ಅನೇಕ ಗಿರಣಿಗಳು ಅರಳೆಯನ್ನು ಕೊಳ್ಳದಾಗಿವೆ. ಇದರ ಪರಿಣಾಮವು ಅರಳೆಯ ವ್ಯಾಪಾರಸ್ಥರ ಮೇಲೆ ಮಾತ್ರವಲ್ಲ ರೈತರ ಮೇಲೂ ಆಗಿರುತ್ತದೆ. ವ್ಯಾಪಾರದಲ್ಲಾದ ಹಾನಿ ಮತ್ತು ಜನರು ಉದ್ಯೋಗವಿಲ್ಲದೆ ಕೂತು, ಪದಾರ್ಥಗಳನ್ನು ಕೊಳ್ಳುವ ತ್ರಾಣ ಹೋದ್ದರಿಂದ, ಧಾನ್ಯ ಮತ್ತು ಒಕ್ಕಲತನದ ಬೇರೆ ಪದಾರ್ಥಗಳ ಬೆಲೆಯು ಕಡಿಮೆಯಾಗಿ ಹೋಗಿದೆ.

ಕಾಯದೆಭಂಗದಿಂದ ಇಂಗ್ಲಂಡ ಮತ್ತು ಹಿಂದುಸ್ಥಾನದ ವ್ಯಾಪಾರವು ಹನ್ನೊಂದು ತಾಸಿಗೆ ಬಂದಿದೆಂದು ಹೇಳುವದಕ್ಕಿಂತ, ಹಿಂದುಸ್ಥಾನವು ಬೇಡುವಂಥ ಸ್ವರಾಜ್ಯ ಸ್ವಾತಂತ್ರ್ಯ ಕೊಡದ್ದಕ್ಕಾಗಿ ಬಂದರ ಹಿಂದೊಂದರಂತೆ ಈ ಅನರ್ಥ ಪರಂಪರೆಯುಂಟಾಗಿರುತ್ತದೆಂದೇಕೆ ಒಪ್ಪಬಾರದು ?

ಸಿಂಧ ಪ್ರಾಂತದಲ್ಲಿ ಜಲಪ್ರಳಯದಂಥ ಮಳೆಯಾಗಿ ೨೦ ಗ್ರಾಮಗಳು ನೀರೊಳಗೆ ಮುಣುಗಿವೆ. ಶಿಕಾರಪೂರವು ನೆಲಸಮವಾಗುವದಾಗಿದೆ. ಸರಕಾರದವರು ಕೈದಿಗಳನ್ನು ಸ್ಪೇಶಲಟ್ರೇನಿನಿಂದ ಹೈದರಾಬಾದಕ್ಕೆ ತಂದರು. ಕ್ವೇಟಾದ ಎಲ್ಲ ವ್ಯವಹಾರ ನಿಂತು ಹೋಗಿವೆ.

ಕೊಯಿಂಮತ್ತೂರಿನ ನೆಯಕಾರರಿಗೆ ಕೆಲಸವಿಲ್ಲದಾಯಿತು.

—೦*೦—

ಖಾದೀ ಮತ್ತು ಸ್ವದೇಶಿಯ ಪ್ರಸಾರದಿಂದ ಸ್ತ್ರೀಯರು ಒಳ್ಳೇ ಸೊಗಸುಗಾರಿಕೆಯಿಂದ ಉಡುವ ಕೊಯಿಂಮತ್ತೂರಿನ ಪತ್ತಲಗಳಿಗೆ ಬೇಡಿಕೆಗಳೇ ಅಪರೂಪವಾಗಿದೆ. ಆದ್ದರಿಂದ ಈ ಕೆಲಸ ಮಾಡುತ್ತಿರುವಂಥ ಹತ್ತು ಸಾವಿರ ನೆಯಕಾರರು ಕೆಲಸವಿಲ್ಲದೆ ಕೂತಿದ್ದಾರೆ. ಕೊಯಿಂಮತ್ತೂರಿನಂತೆ ಸೇಲಮದಲ್ಲಿ ವಿಲಾಯತಿಯ ನೂಲಿನಿಂದ ಧೋತರಗಳಾಗುತ್ತವೆ. ಇವಕ್ಕೂ ಗಿರಾಕಿ ಇಲ್ಲದ್ದರಿಂದ ಸಾವಿರಾರು ಜನರು ನಿರುದ್ಯೋಗಿಯಾಗಿದ್ದಾರೆ. ಈ ಕೆಲಸವಿಲ್ಲದಾದರೆ- ಸ್ವದೇಶಿ ನೂಲಿನಿಂದ ಧೋತರ ಶೀರೆಗಳನ್ನೇಕೆ ನೇಯಬಾರದು ?

ಕಾಂಗ್ರೆಸದವರು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಬೇಕು.

—(೦)—

ಈ ವಾರವು ಕೌನ್ಸಿಲ ಮತ್ತು ಅಸೆಂಬ್ಲಿಗಾಗಿ ಉಮೇದವಾರರಾಗುವಂಥವರಿಗೆ ದೊಡ್ಡ ಪರ್ವಣಿಯಾಗುವದು. ಕಾಂಗ್ರೆಸದಲ್ಲಿ ಸಂದೇಹರಾಯರಾಗಿರುವಂಥವರಿಗೆ ಅದರ ಆಶೆಯು ಇನ್ನೂ ಬಿಟ್ಟಿರುವದೇ ಇಲ್ಲ. ಇಂಥವರಿಗೆ ಅಂಜನ ಹಾಕಲು ಒಂದು ಠರಾವು ಮಾಡುವದು ಕಾಂಗ್ರೆಸದ ವರ್ಕಿಂಗ ಕಮೀಟಿಯವರಿಗೆ ಅತ್ಯಗತ್ಯವಾಯಿತು. ಎರಡು ದಿವಸಗಳ ಹಿಂದೆ ಮುಂಬಯಿಯಲ್ಲಿ ವರ್ಕಿಂಗ ಕಮೀಟಿ ಕೂಡಿತು. ಈ ಕಮೀಟಿಯಲ್ಲಿ ಕಾಂಗ್ರೆಸ ಪಕ್ಷದವರು ಕೌನ್ಸಿಲ ಅಥವಾ ಅಸೆಂಬ್ಲಿಗೆ ಉಮೇದವಾರರಾಗಬಾರದೆಂದು ನಿರ್ಣಯ ಮಾಡಿದ್ದಾರೆ. ಕಾಂಗ್ರೆಸದ ಉಮೇದವಾರಿ, ಅದರ ಚುನಾವಣೆ, ಮತದಾರರ ಹೇಳಿಕೆ ಬೇಡಿಕೆ, ಪೋಲಿಂಗ ಸ್ಟೇಶನಕ್ಕೆ ಹೋಗುವ ಓಡಾಟ ಇವುಗಳಲ್ಲಿ ವ್ಯರ್ಥವಾಗಿ ಕಾಲ ಕಳೆಯದೆ, ಈಗಿನ ಚಳವಳಿಯನ್ನು ಹೆಚ್ಚಾಗಿ ಬಲಪಡಿಸಿ, ಸ್ವರಾಜ್ಯ ಸ್ವಾತಂತ್ರ್ಯದ ದಾರಿಯನ್ನು ಸನಿಯ ಮಾಡಬೇಕೆಂದು ಜಾಹೀರ ಮಾಡಿದ್ದಾರೆ. ಇಷ್ಟೇ ಅಲ್ಲ; ಯಾರಾದರೂ ಉಮೇದವಾರರಿಗೆ ನೆಂವಾಗಿ, ಅವರ ದಸೆಯಿಂದ ವೋಟುಗಳನ್ನು ಕೂಡಿಸಿ ಕೊಡಲುದ್ಯುಕ್ತರಾದರೆ- ಶಾಂತ ಮತ್ತು ಸಾತ್ವಿಕ ವೃತ್ತಿಯಿಂದ ಪಿಕೆಟಿಂಗ ಮಾಡಿ, ಮತದಾರರು ಪೋಲಿಂಗ ಸ್ಟೇಶನಕ್ಕೆ ಹೋಗದಂತೆಯೂ ಮಾಡಬೇಕೆಂದಿದ್ದಾರೆ. ಕಾಂಗ್ರೆಸದ ಆಜ್ಞೆಯನ್ನು ಮೂರು ಮನೆಯ ಹಳ್ಳಿ ಸಹ ಪಾಲಿಸುತ್ತದೆ. ಉಮೇದವಾರರು ಹೋಟು ಕೇಳಲಿಕ್ಕೆ ಬಂದೇ ಬರುವರು. ಏಕಂದರೆ- ಭಿಕ್ಷುಕರಿಗೆ ದಶ ದಿಕ್ಕುಗಳು ತೆರೆದಿರುತ್ತವೆ. ಇವರು ತಮ್ಮ ಹಳ್ಳಿಗೆ ಬಂದಾಗ, ನಾವು ಹೋಟು ಕೊಡುವದಿಲ್ಲ. ನೀವು ರಾಜೀನಾಮೆ ಕೊಡಿರೆಂದು ಮಂಗಳಾರುತಿ ಮಾಡಿ ಕಳಿಸಬೇಕು. ಕುಲಾಭಿಮಾನ, ಜನಾಭಿಮಾನ ಬಿಟ್ಟು ದೇಶಾಭಿಮಾನವನ್ನು ತೋರಿಸುವದಕ್ಕೆ ಇದೊಂದು ಪರೀಕ್ಷೆಯ ಕಾಲವೇ ಆಗಿರುತ್ತದೆ.

ಕಾಂಗ್ರೆಸದವರಿಗೆ ಕಾರಾಗ್ರಹವಾಸ.

-◯()⁎*⁎()◯-

ಕಾಂಗ್ರೆಸ ಕಮೀಟಿಗಳ ಹೇಳಿಕೆ.

—(೦)—

೧ ಕಾಂಗ್ರೆಸದ ಅಧ್ಯಕ್ಷ ಮತ್ತು ಕಾಂಗ್ರೆಸದ ವರ್ಕಿಂಗ ಕಮೀಟಿಯ ಮೆಂಬರರು ಸೇರಿ ಒಟ್ಟು ೨೧ ಜನರು ತುರಂಗದಲ್ಲಿದ್ದಾರೆ.
೨ ಕಾಂಗ್ರೆಸ ಕಮೀಟಿಯ ೬೦ ಉಪಶಾಖೆಗಳು ಬೇಕಾಯದೇಶೀರವೆಂದು ಸರಕಾರದಿಂದ ಜಾಹೀರ ಮಾಡಲ್ಪಟ್ಟವೆ
೩ ಒಂದು ನೂರು ಸ್ಥಳಗಳಲ್ಲಿ ೧೪೪ ಕಲಮು ಹಚ್ಚಿ ಸಭಾಬಂದಿ ಹುಕುಮು ತೆಗೆದಿದ್ದಾರೆ
೪ ಗುಜರಾಥದಲ್ಲಿ ೯೬೧ ಮತ್ತು ಮುಂಬಯಿಯಲ್ಲಿ ೧೭೦೨ ಜನರು ತುರಂಗವಾಸಿಯಾಗಿದ್ದಾರೆ. ಕಾಂಗ್ರೆಸದವರ ಹೊರ್ತು ಬೇರೆ ಅನೇಕ ಜನರೂ ತುರಂಗವಾಸಿಯಾಗಿದ್ದಾರೆ. ಕಾಂಗ್ರೆಸ ಕಚೇರಿಯಲ್ಲಿ ಇವರ ಲೆಕ್ಕ ವಿರುವದಿಲ್ಲ.

ಯರವಡೆಯ ತುರಂಗವು ಸ್ವರಾಜ್ಯದ ಪಾರ್ಲಮೆಂಟಾಗುವದು.

——(೦)——

ಬ್ಯಾರಿಸ್ಟರ ಜಯಕರರು ಯರವಡೆಗೆ ಬಂದು, ಗುರುವಾರ ಮತ್ತು ಶುಕ್ರವಾರ ಎರಡೂ ದಿವಸ ಮಹಾತ್ಮರ ಕೂಡ ಸಂಭಾಷಣೆ ಮಾಡಿದರು. ಪಾರ್ಲಮೆಂಟ ಸಭೆಯಲ್ಲಿ ಮಿ. ಬ್ರಾಕವೇಸಾಹೇಬರು ಸೂಚನೆ ಮಾಡಿದಂತೆ- ಕಾಂಗ್ರೆಸ ಪಕ್ಷದ ಪ್ರಮುಖರ ಒಂದು ಕಮೀಟಿಯನ್ನು ಮಹಾತ್ಮರ ಸನ್ನಿಧಾನದಲ್ಲಿ ಕೂಡಿಸುವದಕ್ಕೆ ಮಾಡಿದ ಸೂಚನೆಯಂತೆ ಲಾರ್ಡ ಆಯರ್ವಿನಸಾಹೇಬರ ಒಪ್ಪಿಗೆ ಪಡೆಕೊಳ್ಳಲು ಸರ ಸಪ್ರುಸಾಹೇಬರು ಸಿಮಲೆಕ್ಕೆ ಹೋಗುವರು. ಮಿ. ಬ್ರಾಕವೇಸಾಹೇಬರ ಸೂಚನೆಯು ಲಾರ್ಡಸಾಹೇಬರಿಗೂ ಒಪ್ಪಿಗೆಯಾಗಿದೆ. ಇದಕ್ಕೆ ಅವರು ಅನುಮತಿ ಕೊಟ್ಟರೆ-

೧ ಪಂಡಿತ ಮೋತಿಲಾಲ, ೨ ಪಂಡಿತ ಜವ್ಹಾರಿಲಾಲ, ೩ ಶ್ರೀ ವಿಠ್ಠಲಭಾಯಿ ಪಟೇಲ, ೪ ಪಂಡಿತ ಮಾಲವಿಯಾ ೫ ಸರದಾರ ವಲ್ಲಭಬಾಯಿ ಪಟೇಲ ೬ ದೇವಿ ಸರೋಜನಿ ಮತ್ತು ಬ್ಯಾರಿಸ್ಟರ ಜಯಕರರು ಯರವಡೆಯಲ್ಲಿ ಮಹಾತ್ಮರ ಸನ್ನಿಧಾನದಲ್ಲಿ ಸೇರಿ ರಾಜಿಯ ಬಗ್ಗೆ ಸಂಭಾಷಣೆ ಮಾಡುವರು. ಆಗ್ಗೆ ಸರ ಸಪ್ರುಸಾಹೇಬರೂ ದಯಮಾಡಿಸುವರು.

ರಾವುಂಡ ಟೇಬಲವು ಒಂದು ತಿಂಗಳ ಮುಂದೆ ಬಿತ್ತು.

ಆಕ್ಟೋಬರ ತಿಂಗಳ ೨೦ ನೆಯ ತಾರೀಖಿಗೆ ಕೂಡಬೇಕಾಗಿದ್ದ ರಾವುಂಡಟೇಬಲವು ನವ್ಹಂಬರದಲ್ಲಿ ಕೂಡುವದೆಂದು ಜಾಹೀರು ಮಾಡಲ್ಪಟ್ಟದೆ.

ಶ್ರೀ ಬಾವೂಣಗಾವಕರರ ದಸ್ತಗಿರಿ.

——(೦)——

ಮಾರವಾಡಿಯು ಯುದ್ಧ ಮಂಡಲದ ಸೇನಾಪತಿಯಾದನು.

—(೦)—

ಬಳ್ಳಾರಿಯಲ್ಲಿ ಕೂಡಿದ ವೀರಶೈವ ಮಹಾಸಭೆಯಲ್ಲಿ ಮಹಾದೇವಸ್ವಾಮಿ ಎಂದು ಉಪನಾಮ ಪಡೆದ ವರ್‍ಹಾಡದ ಶ್ರೀ ನಾರಾಯಣ ರಾಮಲಿಂಗ ಬಾವೂಣಗಾವಕರರು ವನಗಾವಲದ ಸತ್ಯಾಗ್ರಹದ ಮುಖಂಡರಾಗಿದ್ದು, ಕಾಯದೆಭಂಗ ಮಾಡಲು ಅಕೋಟ ಗ್ರಾಮಕ್ಕೆ ಹೋಗತಕ್ಕವರಿದ್ದರು. ಆದರೆ ಪೋಲೀಸರು ಇವರನ್ನು ಅಮರಾವತಿಯಲ್ಲಿ ಹಿಡಿದರು. ಇವರು ತಮ್ಮ ಸ್ಥಳದಲ್ಲಿ ಶ್ರೀ ರಾವಸುರಜಾಮಲ್ಲಜಿಯವರನ್ನು ಮುಖ್ಯ ನಾಯಕನಾಗಿ ನೇಮಿಸಿದ್ದಾರೆ.

ಇಂಗ್ರೇಜಿಯಲ್ಲಿ ಬರೆದ ಠರಾವು ರದ್ದಾಯಿತು.

——(೦)——

ಹೈದರಾಬಾದ ಹಾಯಕೋರ್ಟಿನ ನಿರ್ಣಯ.

—§(*)§—

ನಿಜಾಮರಾಜ್ಯದ ಕೋರ್ಟಿನ ಭಾಷೆಯು ಉರ್ದು ಆಗಿದೆ. ಕಲಬುರ್ಗಿಯ ಜಡ್ಜಸಾಹೇಬರು ಯಾವ ಕಾರಣದಿಂದಲೋ ಇಂಗ್ರೇಜಿಯಲ್ಲಿ ತೀರ್ಪು ಬರೆದರು. ಈ ತೀರ್ಪು ಅಕ್ರಮವಾಗಿದೆಂದು ಹಾಯಕೋರ್ಟಿಗೆ ಅಪೀಲು ಮಾಡಿದರು. ಪ್ರಕೃತದ ಫಿರ್ಯಾದಿಯಲ್ಲಿ ಇಂಗ್ರೇಜಿ ಕಾಗದ ಪತ್ರಗಳ ಸೇರ್ಪಡೆಯಾಗಿದೆ. ಹಾಯಕೋರ್ಟಿನ ಜಡ್ಜರಿಗೆ ಇಂಗ್ಲಿಷ ತಿಳಿಯುತ್ತದೆ. ಆದ್ದರಿಂದ ಇಂಗ್ರೇಜಿಯಲ್ಲಿ ಠರಾವು ಬರೆದೆವೆಂದು ಜಡ್ಜಸಾಹೇಬರು ಹಾಯಕೋರ್ಟಿಗೆ ಸಮಾಧಾನದ ಪತ್ರ ಬರೆದರು. ಆದರೆ ಜಡ್ಜರಿಗೆ ಈ ಬರಹವೆಷ್ಟೂ ಸಮಾಧಾನವಾಗಲಿಲ್ಲ. ಕೋರ್ಟಿನ ಭಾಷೆಯು ಉರ್ದು ಆಗಿದೆ. ಅದರಲ್ಲಿಯೇ ಬರೆಯಬೇಕು. ಜಡ್ಜರ ಮನಸ್ಸಿಗೆ ಬಂದ ನುಡಿಯಲ್ಲಿ ಠರಾವು ಬರೆಯಬೇಕಾದರೆ- ಜನರು ಕನ್ನಡ

ಸೊಲ್ಲಾಪೂರದ ಗಲ್ಲಿನ ಶೀಕ್ಷೆ ಕಾಹೀಮವಾಯಿತು.

—:-:*:-:—

ಮುಂಬಯಿ ಹಾಯಕೋರ್ಟಿನಲ್ಲಿ ಮುಖ್ಯ ಜಡ್ಜ ಮತ್ತು ಜಡ್ಜ ಮಾಡಗಾವಕರರ ನಡುವೆ ಮತಭೇದವಾಗಿ ಮೂವರು ಆರೋಪಿಗಳ ಸ್ಪೇಶಲ ಅಪೀಲಿಯು ನ್ಯಾಯಮೂರ್ತಿ ಬೇಕರಸಾಹೇಬರ ಮುಂದೆ ನಡೆಯಿತು. ಈ ಸಾಹೇಬರು ಮೂವರ ಗಲ್ಲಿನ ಶೀಕ್ಷೆಯನ್ನು ಕಾಹಿಮ ಮಾಡಿದರು. ಶೀಕ್ಷೆಯಾದವರ ಹೆಸರು-

೧ ಶ್ರೀ ಕೃಷ್ಣ ಸಾರಡಾ
೨ ಕುರಬಾನ ಹುಶೇನ
೩ ಜಗನ್ನಾಥ ಶಿಂದೆ

ತುರಂಗದಲ್ಲಿದ್ದರೂ ಕೌನ್ಸಿಲಕ್ಕೆ ಉಮೇದವಾರಿಯು.

—(೦)—

ಕಾಂಗ್ರೆಸದವರು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿದರೂ ಕಾಂಗ್ರೆಸ ಕಾರ್ಯಕ್ಕಾಗಿ ತುರಂಗವಾಸಿಯಾಗಿರುವ ಅಹಮದಾಬಾದಿನ ಶ್ರೀ ಸ್ವಾಮಿನಾರಾಯಣ ಮತ್ತು ಮಾಲವಣಕರರು ಕೌನ್ಸಿಲ ಚುನಾವಣೆಗೆ ಉಮೇದವಾರರಾಗಿ ನಿಂತಿದ್ದಾರೆ.

ಧಾರವಾಡ ಹಾಯಸ್ಕೂಲಿನ ವಿದ್ಯಾರ್ಥಿಗಳಿಗಿಂತ ಕಲಕತ್ತೆಯ ವಿದ್ಯಾರ್ಥಿಗಳು ಮುಂದೆ ಹೋದರು.

—(೦)—

ಕಲಕತ್ತೆಯ ಕ್ರಿಶ್ಚನ್ನ ಕಾಲೇಜದ ವಿದ್ಯಾರ್ಥಿಗಳು ಕಾಲೇಜದ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಿದರು. ಪ್ರಿನ್ಸಿಪಾಲರಾದ ಮಿ. ಮೂಕರಜಿಯವರು ಇದನ್ನು ಕಿತ್ತಿಸಿದರು. ಆಗ ಕೆಲ ವಿದ್ಯಾರ್ಥಿಗಳು ಪ್ರಿನ್ಸಿಪಾಲರ ಕಾಲ ಮೇಲೆ ಅಡ್ಡ ಬಿದ್ದು ಅವರು ಅತ್ತಿತ್ತ ಸರಿದಾಡದಂತೆ ಮಾಡಿದರು. ಕೆಲ ವಿದ್ಯಾರ್ಥಿಗಳು ಕಟ್ಟಡ ಏರಿ, ಪುನಃ ನಿಶಾನೆ ಹಚ್ಚಿದರು

ಪುಣೆಯಲ್ಲಿ ರಾಷ್ಟ್ರೀಯ ಸಪ್ತಾಹ ಪ್ರಾರಂಭವಾಗುವ ದಿವಸ ಒಂದು ಸಾವಿರ ಸ್ತ್ರೀಯರು ಪಟ್ಟಣದ ಬೇರೆ ಬೇರೆ ಭಾಗಗಳಲ್ಲಿ ನಗರ ಸಂಕೀರ್ತನೆ ಮಾಡಿದ್ದಾರೆ.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ ಇದೊಂದೇ ಶಿಕ್ಷಣದ ಸಳವು

ಮೋಟಾರ ಡ್ರಾಯವ್ಹಿಂಗ ವಿದ್ಯ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿದವ ಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜೀಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟನಹತ್ತರ, ಧಾರವಾಡ

ಜಾಹೀರ ನೋಟೀಸು-

—(೦)—

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಾ ವ ಸಾಗವಾನಿ (ಟ) ಪೂಜಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಶಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು
ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಪಳಿಗೆ ಒಂದೂವರ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೆಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

—(೦)—

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರಪತದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೆಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಳೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ

ಸ. N. B 1443

ವಿಜಯ

ನಿತ್ಯ ಪತ್ರ
ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ರವಿವಾರ ತಾರೀಖು ೩ ನೇ ಅಗಸ್ಟ ೧೯೩೦ (ಸಂಚಿಕೆ ೧೭೨

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವಕ್ಕಿ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಮಾರಾಟಕ್ಕೆ ಸಿದ್ಧವಾಗಿದೆ-

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾವಧೂತರ ಅಸೆಸರ್, ಶ್ರೀ. ಆರೂಢ ಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ. ಪ್ರತಿವಾದಿ. ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಎರಡಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಕಿಸ್ಟಿನ ಪ್ರಕಾರ ತಿಂಗಳಾ ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ಶುದ್ಧ ೯

ರಾವುಂಡ ಟೇಬಲಿನ ಕಲಕು ಮಲಕು.

ಹಿಂದುಸ್ಥಾನದಲ್ಲಿ ಸ್ವರಾಜ್ಯ ವಿಷಯಕವಾಗಿ ಕಲಕು- ಮಲಕಾಗಿದ್ದ ನೀರು ಝುಳಝುಳ ಮತ್ತು ಜುಳುಜುಳು ಹರಿಯುತ್ತಿದ್ದಾಗ, ಇಂಗ್ಲಂಡದಲ್ಲಿಯ ರಾವುಂಡ ಟೇಬಲದ ಸ್ವಚ್ಛ ನೀರು ಕಲಕು ಮಲಕಾಗಿ, ಹೆಚ್ಚೆಚ್ಚು ರಾಡಿಯಾಗಲಾರಂಭಿಸಿದೆ. ಸಾಯಮನ್ನ ರಿಪೋರ್ಟಿನ ತರುವಾಯಾ ರಾವುಂಡ ಟೇಬಲ ಕೂಡಿಸುತ್ತೇವೆಂದು ಮಿ. ಮ್ಯಾಕಡೋನಾಲ್ಡ ಸಾಹೇಬರು ಹೇಳಿದಾಗ- ಬ್ರಿಟಿಶ ಮಂತ್ರಿಗಳಿಗೂ, ಹಿಂದುಸ್ಥಾನದ ಪ್ರತಿನಿಧಿಗಳಿಗೂ ಸ್ವರಾಜ್ಯವಿಷಯವಾಗಿ ವಿಚಾರ ವಿನಿಮಯವಾಗುವದೆಂದು ಉದ್ಗಾರ ತೆಗೆದನು. ಈ ಹೇಳಿಕೆಯು ಅಥವಾ ಹಿಂದುಸ್ಥಾನದ ಜನರಿಗೆ ಕೊಟ್ಟ ಭಾಷೆಯು ಮಂತ್ರಿಗಳ ವಿರುದ್ಧ ಪಕ್ಷದವರಿಗೆ ಸಮ್ಮತವಾಗಲಿಲ್ಲ. ಅದರಲ್ಲಿ ಶಿವ್ಮವರ ಹಾಗು ಸರ ಸಾಯಮನ್ನ ಸಾಹೇಬರ ಸೇರ್ಪಡೆಯಾಗಬೇಕೆಂಬ ಸೂಚನೆ ಮಾಡಿದರು. ಈ ಸೂಚನೆಯ ವರ್ತಮಾನ ಕೇಳಿದ ಕೂಡಲೆ, ಮವಾಳರ ಮುಖಂಡರಾದ ಸರ ಸೆತಲವಾಡರು. ವಿರುದ್ಧ ಪಕ್ಷದವರೂ ರಾವುಂಡ ಟೇಬಲಕ್ಕೆ ಬರುವದಾದರೆ- ನಾವು ನಮ್ಮ ಸಹಕಾರಿತ್ವದ ಬಗ್ಗೆ ಪುನಃ ವಿಚಾರ ಮಾಡಬೇಕಾದೀತೆಂದು ಮಂತ್ರಿಗಳಿಗೆ ಬೆದರಿಕೆ ಹಾಕಿದ ತಾರು ಕಳಿಸಿದರು. ಮವಾಳರ ತಕರಾರು- ಅದು ಹೊರದುಟಿಯಿಂದ ಹೆದರಿಸುವಂತಹದಲ್ಲದ, ಕಾಂಗ್ರೆಸದವರಂತೆ ಒರೆಗೆ ಹಚ್ಚತಕ್ಕದ್ದಲ್ಲೆಂದು ಗೊತ್ತು. ಹಳ್ಳಕ್ಕೆ ಕಳವು ಬಹಳೆಂಬಂತೆ ಮವಾಳರ ತಾರಿನ ವ್ಯವಸ್ಥೆಯಾಯಿತು. ಇದು ಮುಂದೆ ವಿಸ್ತಾರವಾಗಿ ಸಮುದ್ರದ ಕೊರೆಯಾಯಿತು. ವಿಲಾಯತಿಯ ವಿರುದ್ಧ ಪಕ್ಷದವರು ಎಬ್ಬಿಸಿದ ಗೊಂದಲದಿಂದ ಮಂತ್ರಿಗಳಿಗೇ ಎದ್ದಲಗಾಟ ಬರುವದಾಯಿತು. ಆಗ ಅವರು ಬ್ರಿಟಿಶ ಸರಕಾರವಲ್ಲ; ಬ್ರಿಟಿಶ ಜನತೆಯ ಕೂಡ ಸಂಧಿ ಎಂದು ಲಾರ್ಡ ಆಯರ್ವಿನಸಾಹೇಬರಿಂದ ನುಡಿಸಿದರು. ಸರಕಾರ ಹೋಗಿ ಜನತೆ ಎಂಬ ಹೆಸರು ಏಕೆ ಬಂತೆಂದು ಈ ದೇಶಿಯರಿಗೆ ಗೂಢಬಿತ್ತು. ಅದು ಬೈಲಿಗೆ ಬರಲು ಬಹಳ ಅವಕಾಶ ಹತ್ತಲಿಲ್ಲ. ಸ್ವತಃ ಮಂತ್ರಿ ಮ್ಯಾಕಡೋನಾಲ್ಡಸಾಹೇಬರು ಎರಡೂ ಪಕ್ಷದ ನಾಲ್ವರನ್ನು ರಾವುಂಡಟೇಬಲದಲ್ಲಿ ಸೇರಿಸಿಕೊಳ್ಳುವಂತೆ ಜಾಹೀರ ಮಾಡಿದ್ದಾರೆ. ಇದಕ್ಕೆ ಕಾನ್ಸರವೇಟಿವ್ಹ ಮತ್ತು ಲಿಬರಲರು ತದರ್ಥಮದರ್ಥವೆನ್ನುವಂತೆ ಒಪ್ಪಿಗೆ ಕೊಟ್ಟಿದ್ದಾರೆ. ಈ ಒಪ್ಪಿಗೆಯಲ್ಲಿ ಸರ ಸಾಯಮನ್ನ ಸಾಹೇಬರಿಗೂ ಆಮಂತ್ರಣವಿರಬೇಕೆಂದು ಕಾನ್ಸರವೇಟಿವ್ಹರಾದ ಸರ ಚೆಂಬರಲೆನ್ನ ಸಾಹೇಬರು ಆಗ್ರಹ ಹಿಡಿದರು. ಆ ಆಗ್ರಹವು ದುರಾಗ್ರಹವಾಗಿ ಪರಿಣಮಿಸಿದೆ. ಸರ ಸಾಯಮನ್ನರನ್ನು ಕರೆಯದಿದ್ದರೆ- ತಾವೊಂದು ನಿಂದಾವ್ಯಂಜಕ ಠರಾವನ್ನು ಪಾರ್ಲಮೆಂಟದಲ್ಲಿ ತರುವಂತೆ ಭಯ ಹಾಕಿದ್ದಾರೆ. ಅಧ್ಯಕ್ಷರಾದ ಸ್ಪೀಕರರು ಇದನ್ನು ಸಭೆಯ ಮುಂದೆ ತರಗೊಡಲಾರರೆಂದು ಭವಿಷ್ಯ ಮಾಡಲ್ಪಟ್ಟಿದೆ.

ವಿಲಾಯತಿಯ ಪ್ರತಿನಿಧಿಗಳಲ್ಲದೆ ವಸಾಹತಿನ ಪ್ರತಿನಿಧಿಗಳಿಗೂ ಆಮಂತ್ರಣವಿರಬೇಕೆಂದು ಮತ್ತೊಂದು ಹೊಸ ಸೂಚನೆಯು ಮುಂದೆ ಬಂದಿದೆ. ಎಷ್ಟೇ ಸೂಚನೆಗಳಾಗಲಿ; ಹಿಂದುಸ್ಥಾನದಿಂದ ಹೋಗುವಷ್ಟು ಪ್ರತಿನಿಧಿಗಳಷ್ಟು ಇವರ ಸಂಖ್ಯೆಯಾಗುವದಿಲ್ಲ. ಮನುಷ್ಯಬಲವಾಗುವದಿಲ್ಲ. ಕಾನ್ಸರವೇಟಿವ್ಹ ನಾಲ್ಕು, ಲಿಬರಲ ನಾಲ್ಕು ಅಂತೂ ಮತ್ತು ಮಂತ್ರಿ ಮೊದಲಾಗಿ ಎಂಟು, ಇನ್ನಾರಾದರೂ ಸೇರಿ ಇವರ ಸಂಖ್ಯೆಯು ಇಪ್ಪತ್ತರೊಳಗೆಯಾಗುವದುಂಟು. ಹಿಂದುಸ್ಥಾನದಿಂದ ಹೋಗತಕ್ಕವರು ಕನಿಷ್ಠ ೬೦ ಜನರು. ಯಾವದೊಂದು ಮಾತಿನ ನಿರ್ಣಯವಾಗಲಿಕ್ಕೆ ಬಹುಮತವೇ ಮುಖ್ಯ ಸಂಗತಿಯಾದರೆ- ಹಿಂದೀ ಜನರ ಪ್ರಚಂಡ ಬಹುಮತವಾಗಿ ಪ್ರತಿಯೊಂದು ಕಲಮು ಹಿಂದುಸ್ಥಾನಕ್ಕೆ ಅನುಕೂಲವಾಗಿಯೇ ಪಾಸಾಗುವದು. ಆದರೆ ಇಲ್ಲಿ ಬಹುಮತದ ಪ್ರಶ್ನವೇ ಇರಲಾರದೆಂದು ಮಿ. ಮ್ಯಾಕಡೋನಾಲ್ಡ ಸಾಹೇಬರು ಸಾರಿ ಹೇಳಿದ್ದಾರೆ. ರಾವುಂಡ ಟೇಬಲಿನಲ್ಲಿ ಸಾಯಮನ್ನ ಸಾಹೇಬರು ಮೂರ್ತಿಮಂತವಾಗಿ ಕೂಡ್ರದಿದ್ದರೂ, ಅವರ ರಿಪೋರ್ಟು ಮೂರ್ತಿಮಂತಭಯವಾಗಿ ನಿಲ್ಲುವದು. ಕಾನ್ಸರವೇಟಿವ್ಹರೂ ಲಿಬರಲರೂ ಇದನ್ನು ಬಾಯಿ ಬಲವಾಗಿ ತಿಳಕೊಂಡು ಇದನ್ನು ಹಿಡಕೊಂಡೇ ನಡೆಯುವರು. ಆದರೆ ನಮ್ಮ ಸರ ಶಂಕರನಾಯರರ ರಿಪೋರ್ಟಿಗೆ ಮಾತ್ರ ದೆಸೆಯೇ ಇರುವದಿಲ್ಲ. ತಮ್ಮ ರಿಪೋರ್ಟಿನಲ್ಲಿಯೂ ಕಂಡ ಸಂಗತಿಗಳ ಊಹಾಪೋಹವಾಗಬೇಕೆಂದು ಸರ ನಾಯರರು ಕರೆಯದವರ ಮನೆಯ ಕಳಸಗಿತ್ತಿಯಾಗಿ ಹೋಗಬೇಕೆಂದಿದ್ದಾರೆ. ಇವರೆಲ್ಲರೂ ಕೂಡಿದವರಿಂದ ನಡೆಯುವ ವಾದವಿವಾದವು ಎತ್ತು ಎರೆಗೆಳೆದರೆ- ಕೋಣ ಕೆರೆಗೆಳೆಯದೆ ಇರಲಿಕ್ಕಿಲ್ಲೆಂದು ಯಾರು ಹೇಳುವರು? ರಾವುಂಡಟೇಬಲಿನಲ್ಲಿ ಬೇಕಾದವರು ಬೇಕಾದಷ್ಟು ವಾಂಛಿಕ್ಯ ತೋರಿಸಲಿ; ಬೃಹಸ್ಪತ್ಯಾಚಾರ್ಯರಂತೆ ಭಾಷಣ ಮಾಡಲಿ ಸೂಚನೆ ಉಪಸೂಚನೆ ಮಾಡಲಿ; ಇವೆಲ್ಲವುಗಳ ಸಾರ ತೆಗೆದು ಅಥವಾ ತಮಗೆ ಹೊಳೆದಂತೆ ಬೇರೊಂದು ಯೋಜನೆ ಬರೆದು, ಅದನ್ನು ಪಾರ್ಲಮೆಂಟದ ಮುಂದಿಡತಕ್ಕವರೆಂದು ಮಿ. ಮ್ಯಾಕಡೋನಾಲ್ಡಸಾಹೇಬರು ಮತ್ತೊಂ ಮುಟೊಮ್ಮೆಯನ್ನು ಹೇರಿದ್ದಾರೆ ವೈಕುಂಠಪಟವೆಂಬದೊಂದು ಕವಡಿಯ ಆಟವುಂಟು. ಇದರಲ್ಲಿ ವೈಕುಂಠಕ್ಕೆ ತೀರ ಸನಿಯ ಹೋದವರು ಕೆಟ್ಟ ಘಾಸಿಬಿದ್ದರೆ- ಜರ್ರನೆ ಇಳಿದು ಮೊದಲಿನ ಮನೆಗೆ ಬರುತ್ತಾರೆ. ಅದೇ ಪ್ರಕಾರ ಸ್ವರಾಜ್ಯ ತರುತ್ತೇವೆಂದು ಶ್ವೇತದ್ವೀಪಕ್ಕೆ ಹೋಗುವ ಹಿಂದೂ, ಮುಸಲಮಾನ ಮತ್ತು ಶೀಖ ಮುಖಂಡರೂ ನಾನಾ ಜಾತಿಗಳ ಸಂಸ್ಥಾನಿಕರೂ, ಆಟವೋರೆ ಮಾಡಿಕೊಂಡು ಬರಲಿಕ್ಕೆ ಮೇಲಿನ ಬಂಧಕ್ಕಿಂತ ಒಂದು ಬಲವಾಗಿ ಬಿಗಿಯಾದ ತೊಡಕುಗಳೇಕೆ ಉತ್ಪಾದದಂತೆ ತೋರಲಿಕ್ಕಿಲ್ಲೆಂದು ಹೇಳಬಾರದು? ಆದರೂ ಕಡೆಯ ಪ್ರಯತ್ನವೆಂದು ಹಿಂದೀ ಜನರು ಲಂಡನದ ಯಾತ್ರೆಗೆ ಹೋಗಬೇಕೆಂದಿದ್ದಾರೆ.

ನಾಮದಾರ ಶಾಸ್ತ್ರಿಯವರು ಬ್ರಿಟಿಶ ಸರಕಾರಕ್ಕೆ ಕೊಟ್ಟ ಸರ್ಟಿಫಿಕೇಟು.

ನಾಮದಾರ ಶಾಸ್ತ್ರಿಯವರು ಬ್ರಿಟಿಶ ಸರಕಾರದ ಅತ್ಯಂತ ವಿಶ್ವಾಸದ ಗೃಹಸ್ಥರು. ಲೋಕಪಕ್ಷೀಯರಲ್ಲಿ ಇವರಲ್ಲಿದ್ದಷ್ಟು ನಂಬಿಗೆಯು ಇನ್ನಾರಲ್ಲಿಯೂ ಇರಲಾರದು. ಅಂತೇ ರಾವುಂಡ ಟೇಬಲಕ್ಕೆ ಸಹಾಯ ಮಾಡಬೇಕೆಂದು ಇವರನ್ನು ಮುಂದಾಗಿ ಲಂಡನಕ್ಕೆ ಕರೆಸಿಕೊಂಡಿದ್ದಾರೆ. ಅಲ್ಲಿಗೆ ಹೋದ ಬಳಿಕ ಇವರು ಸುಮ್ಮನೆ ಕೂತಿಲ್ಲ. ಹಿಂದುಸ್ಥಾನದ ಸ್ವರಾಜ್ಯವು ಸಂಪೂರ್ಣ ಸ್ವಾತಂತ್ರ್ಯದ್ದಿರಬೇಕು. ಹಿಂದೀ ಜನರು ಬೇಕಾದರೆ ಬ್ರಿಟಿಶ ಸಾಮ್ರಾಜ್ಯಾಂತರ್ಗತರಾಗುವರು. ಅಥವಾ ಆ ಸಂಬಂಧ ಕಡಕೊಂಡು ಸ್ವತಂತ್ರರಾಗುವರೆಂದು ಭಾಷಣ ಮಾಡಿದರು. ಮವಾಳ ಮಂಡಳದಲ್ಲಿ ಈ ಮೇರೆಗೆ ಭಾಷಣ ಮಾಡಿದವರಲ್ಲಿ ಇವರೇ ಮೊದಲೆಂದರೂ ಸಲ್ಲುವದು. ಇವರ ಭಾಷಣವು ಲಾರ್ಡ ಚೆಲ್ಮ್ಸಫೋರ್ಡಸಾಹೇಬರಿಗೆ ಅಪಥ್ಯವಾಯಿತು. ಬ್ರಿಟಿಶ ಸಾಮ್ರಾಜ್ಯದ ಒಂದು ಭಾಗವಾಗಬೇಕೆಂಬ ಶರ್ತಿನಿಂದಲೇ ಈ ಸುಧಾರಣೆಯು ತಳಗಲ್ಲು ಕೂಡ್ರಿಸಿದ್ದೇವೆಂದು ಇವರು ಶಾಸ್ತ್ರಿಗಳಿಗೆ ಉತ್ತರ ಕೊಟ್ಟಿದ್ದಾರೆ. ಈ ವಿಚಾರವಿರಲಿ; ಈ ಭಾಷಣದ ತರುವಾಯ ನಾಮದಾರರ ಮತ್ತೊಂದು ಭಾಷಣವಾಯಿತು. ಇದರಲ್ಲಿ ಅಂದದ್ದೇನಂದರೆ-

« ಬಹುತೇಕ ಇಂಗ್ಲಿಷ ಜನರಿಗೆ ಹಿಂದುಸ್ಥಾನದ ವರ್ತಮಾನ ಪರಿಸ್ಥಿತಿಯು ತಿಳಿದೇ ಇಲ್ಲ.

ವರು ಆ ಬಗ್ಗೆ ಅಜ್ಞಾನಿಯಾಗಿದ್ದಾರೆ. ಹಿಂದುಸ್ಥಾನದಲ್ಲಿ ರಾಜ್ಯ ಮಾಡತಕ್ಕವರು ನವಾಬರಂತೆ ನಿ ಂಕುಶರಾಗಿದ್ದು, ಬೇಜವಾಬದಾರರಾಗಿದ್ದಾರೆ. ಸ ಕಾರವು ಯಾವಾಗಲು ಅಪ್ರಬುದ್ಧ ವಿಚಾರವುಳ್ಳ ದ್ದಾಗಿ, ಹಿಂದುಸ್ಥಾನದ ಮಹತ್ವಾಕಾಂಕ್ಷೆಗಳ ದ್ವೇ ಮಾಡುವಂತಹದಾಗಿರುತ್ತದೆ. ರಾವುಂಡ ಟೇಬ ನಲ್ಲಿ ಸಾಯಮನ ರಿಪೋರ್ಟಿನ ಉಸಾಬರಿಗೆ ಹೋ ತಕ್ಕದ್ದಲ್ಲ. ಅಲ್ಲಿ ವಾದವಿವಾದಗಳ ಬಗ್ಗೆ ಠರಾ ಬರಿಯತಕ್ಕದ್ದಲ್ಲ. ಹಿಂದುಸ್ಥಾನಕ್ಕೆ ನ್ಯಾಯ ರೆಯುವಂತೆಯೇ ನಿರ್ಣಯಿಸತಕ್ಕದ್ದಾಗಿರುತ್ತದೆ”

ದೇವಾಲಯದಲ್ಲಿ ರಾಷ್ಟ್ರೀಯ ನಿಶಾನೆ
ಮತ್ತು
ಅದರ ಅದ್ಭುತ ಸತ್ಯಾಗ್ರಹ.

—ಃ(*)ಃ—

ಸಾತಾರಾ ಜಿಲ್ಹೆಗೆ ಸೇರಿದ ವಿಲಾಸಿ ಎಂಬ ಗ್ರಾಮದಲ್ಲಿರುವ ರಾಮದೇವರ ಗುಡಿಯ ಮುಂದೆ ದು ತೇಗಿನ ಕಂಬವುಂಟು. ಇದು ವನಗಾವಲ ಾಖೆಗೆ ಸೇರಿದ್ದು. ಜನರು ಈ ಕಂಬಕ್ಕೆ ರಾಷ್ಟ್ರೀ ಯ ನಿಶಾನೆ ಹಚ್ಚಿದರು. ಸರಕಾರೀ ಕಂಬವಾದ್ದ ಂದ, ಇದನ್ನು ಕಿತ್ತಬೇಕೆಂದು ವನಗಾವಲದವರ ಯತ್ನ. ಕಂಬ ಕಿತ್ತಿದರೆ ಅದರ ಕೂಡ ನಿಶಾ ಯೂ ಹೋಗುವದೆಂದು ಬಗೆದು, ಊರ ಜನರು ದನ್ನು ಕಿತ್ತಗೊಡದಂತೆ ಸತ್ಯಾಗ್ರಹ ನಡೆಸಿದ್ದಾರೆ. ವಿರಾರು ಜನ ಸ್ತ್ರೀಪುರುಷರು ಅದರ ಸುತ್ತಲು ರೆದು ವನಗಾವಲದವರು ಅದರ ಹತ್ತರ ಹೋಗ ಂತೆ ಬಂದುಕಟ್ಟು ಮಾಡಿದ್ದಾರೆ ಈ ವರ್ತ ಾನ ಕೇಳಿ, ಕಲೆಕ್ಟರರು ಪೋಲಿಸರ ದೊಡ್ಡ ಪಡೆ ಕ್ಕೊಂಡು ಅಲ್ಲಿಗೆ ಹೋಗಿದ್ದಾರೆ. ಕೂಡಿದ ಸಾ ರಾರು ಜನರು ಸಮಯ ಸಾಧಿಸಿ, ಸರಕಾರದ ಅ ವಿಯಲ್ಲಿ ಹೋಗಿ, ಹುಲ್ಲು ಕೊಯ್ಯುವರು; ಗಿಡ ಡಿಯುವರು. ಬೇರೆ ರೀತಿಯಿಂದಲೂ ಫಾರೆಸ್ಟದ ಾಸಿ ಮಾಡುವರು.

ಒಂದು ಕೋಟಿಯ ಹಾನಿಯು.

——(೦)——

ಸಿಂಧ ಪ್ರಾಂತದಲ್ಲಾದ ಜಲಪ್ರಳಯದಿಂದ ಜರ ಒಂದು ಕೋಟಿಯ ಹಾನಿಯಾಗಿದೆ. ರಲೀ ಫಂಡು ಕೂಡಿಸುತ್ತಿದ್ದಾರೆ. ಕಾಂಗ್ರೆಸದ ಸ್ವ ಯಂಸೇವಕರು ಕಾಯದೆಭಂಗ ಮಾಡುವದನ್ನು ನಿಲ್ಲಿ , ಅನಾಥರಾದಂಥವರ ಸಹಾಯಕ್ಕೂ ಪ್ರಾಣರ ಣೆಗೂ ಟೊಂಕಕಟ್ಟಿ ಹಗಲಿರುಳು ದುಡಿಯುತ್ತಿ ದ್ದಾರೆ.

ಧಾರವಾಡದಲ್ಲಿ ನೂಲುವ ಪಂದ್ಯ.

-○()***()○-

ಹೋದ ಬುಧವಾರ ದಿವಸ ಈ ಊರಲ್ಲಾದ ಮೆರವಣಿಗೆಯ ಕೂಡ ಚದುರುಂಡಿಗೆಯ ಮೇಲೆ ನೂಲುತ್ತಾ ಹೋದ ನೂರಾರು ಉಮೇದವಾರರಲ್ಲಿ ಕೆಳಗಿನವರಿಗೆ ಬೆಳ್ಳಿಯ ಚದುರುಂಡಿಗೆಗಳ ಇನಾಮು ದೊರೆಯಿತು

ಹದಿನಾರು ವರ್ಷದೊಳಗಿನವರು

೧ ಜಿ. ಎಚ್. ಕುಂಠೆ, ಧಾರವಾಡ ಹಾಯಸ್ಕೂಲ. ೬೯ ಯಾರ್ಡ ಉದ್ದ ನೂಲು ನಂಬರ ೨೬

ಕ್ಯಾಂಪ ಹಾಲಂಟಿಯರರು

೧ ಸಾಂಬಾಜಿ ಬೆಂಗಳೂರು- ನೂಲು ನಂಬರ ೨೦, ಉದ್ದ ೫೩ ಯಾರ್ಡ

೧೬ ವರ್ಷ ಮೇಲ್ಪಟ್ಟವರು

೧ ಆನಂದ ವಾಸುದೇವ ಉಮಚಗಿ ೨೦॥ ನಂಬರು ೫೩ ಯಾರ್ಡ

೨ ಶ್ರೀ. ಕೃಷ್ಣ ರಾಮಚಂದ್ರ ಸಾಲಿ ೧೮ ನಂಬರ ೫೩ ಯಾರ್ಡ

ಈ ನಾಲ್ವರಲ್ಲಿ ಕುಂಠೆಯು ಎಲ್ಲರಿಗಿಂತ ಚಿಕ್ಕವನು ಹೆಚ್ಚು ಜಿಸಗು ಮತ್ತು ಉದ್ದ ನೂತವನಿದ್ದಾನೆ. ಇವು ಶ್ರೀ. ಉಮಾಬಾಯಿ ಕುಂದಾಪೂರ ಇವರಿಂದ ಬಹುಮಾನವಾಗಿ ಕೊಡಿಸಲ್ಪಟ್ಟವು.

ಲೋಕಮಾನ್ಯ ವಕ್ತೃತ್ವ ಸ್ಪರ್ಧೆ.

—೦*೦—

೧ನೆಯ ತಾರೀಖಿನ ದಿವಸ ಇಲ್ಲಿ ಶಾಂತೇಶ ವಾಚನಾಲಯದ ವತಿಯಿಂದಾದ ವಕ್ತೃತ್ವದ ಸ್ಪರ್ಧೆಗೆ ಎಂಟು ಜನ ಉಮೇದವಾರರು ಸೇರಿದ್ದರು. ಖಾದಿ, ಲೋಕಮಾನ್ಯರ ವಿದ್ಯಾರ್ಥಿ ದೆಸೆಯಲ್ಲಿಯ ಚಟುವಟಿಕೆ ಮತ್ತು ಅದರಿಂದ ವಿದ್ಯಾರ್ಥಿಗಳು ಕಲಿಯತಕ್ಕ ಪಾಠ ಮತ್ತು ಕರ್ನಾಟಕದ ಕಟ್ಟಡಗಳು ಈ ಪ್ರಕಾರ ಮೂರು ವಿಷಯಗಳಿದ್ದವು. ಖಾದಿಯ ಬಗ್ಗೆ ಆರು ಮತ್ತು ಕಟ್ಟಡದ ಬಗ್ಗೆ ಒಬ್ಬನು ಮತ್ತು ಲೋಕಮಾನ್ಯರ ಬಗ್ಗೆ ಒಬ್ಬನು ಭಾಷಣ ಮಾಡಿದರು. ಇನಾಮು ಪಡೆದವರು

೧ ಆನಂದ ವಾಸುದೇವ ಉಮಚಗಿ- ಧಾರವಾಡ ಹಾಯಸ್ಕೂಲು.

೨ ಉಪ್ಪಿನ- }
೩ ಅರಮನೆ } ವಿಕ್ಟೋರಿಯಾ ಹಾಯಸ್ಕೂಲು

ಶ್ರೀ. ಉಮಚಗಿಯವರಿಗೆ ಮೊದಲನೆಯದು ಮತ್ತು ಎರಡನೆಯದು ಉಳಿದ ಇಬ್ಬರಿಗೆ ಹಂಚಿ ಕೊಡಲ್ಪಟ್ಟಿತು.

ಯಂಗ ಇಂಡಿಯಾ ಮತ್ತು ನವಜೀವನದ ಜಪ್ತಿ.

—(೦)—

ಆರ್ಡಿನನ್ಸದ ದಬ್ಬಾಳಿಕೆಗಾಗಿ ಮಹಾತ್ಮರ ಯಂಗ ಇಂಡಿಯಾ ಮತ್ತು ನವಜೀವನದ ಮುದ್ರಾಲಯ ಬಂದಾಯಿತು. ಕಾಯದೆಭಂಗ ಮಾಡಿ, ವೃತ್ತಪತ್ರಗಳನ್ನು ತೆಗೆದದ್ದಕ್ಕಾಗಿ ಸರಕಾರದವರು ಮುದ್ರಾಲಯವನ್ನು ಜಪ್ತ ಮಾಡಿದರು. ಮುದ್ರಾಲಯದ ಬಂಡವಲ ೪೦ ಸಾವಿರ. ಸರಕಾರದವರು ಇದನ್ನು ಲಿಲಾವಿಗೆ ಹಚ್ಚಿದರೆ ಯಾರೂ ಸವಾಲು ಮಾಡಬಾರದೆಂದು ಅಹಮದಾಬಾದಿನ ಮುದ್ರಾಲಯ ಸಂಘದವರು ಠರಾವು ಮಾಡಿದ್ದಾರೆ. ಮುದ್ರಾಲಯ ಬಂದಾದ ಬಳಿಕ ಇವನ್ನು ಸ್ಯಾಯಕ್ಲೋಸ್ಟಾಯಿಲದ ಮೇಲೆ ತೆಗೆದ ಪತ್ರಿಕೆಗಳನ್ನು ಮುಂಬಯಿಯಲ್ಲಿ ಮಾರತೊಡಗಿದರು. ನೂರಾರು ಹುಡುಗರು ಇವನ್ನು ಮಾರುತ್ತಿದ್ದರು. ಅಂಗಡಿಗಳಲ್ಲಿಯೂ ಮಾರುತ್ತಿದ್ದರು. ಪೋಲಿಸರು ಇವೆಲ್ಲ ಪ್ರತಿಗಳನ್ನು ಜಪ್ತ ಮಾಡಿದರು.

ಕೂಲಿಕಾರ ಮೆಂಬರರ ಮೇಲೆ
ಲಂಚ ಮತ್ತು ಕುಡಿಯುವ ಆರೋಪ.

——(೦)——

ಮ್ಯಾಂಚೆಸ್ಟರದ ವತಿಯಿಂದ ಪಾರ್ಲಮೆಂಟಿನ ಮೆಂಬರರಾದ ಸಂಡ್ಯಾಮಸಾಹೇಬರು ಕೂಲಿಕಾರ ಪಕ್ಷದ ಕೆಲ ಮೆಂಬರರು ಜನರಿಂದ ಲಂಚ ತಕ್ಕೊಂಡು, ಅವರ ಬಿಲ್ಲುಗಳನ್ನು ಪಾಸ ಮಾಡುತ್ತಾರೆಂದೂ, ದುಂದು ಶರೆ ಕುಡಿದು ಸಭೆಯಲ್ಲಿ ಬೀಳುತ್ತಾರೆಂದೂ ಆರೋಪ ಹೊರಿಸಿದ ಭಾಷಣ ಮಾಡಿದ್ದಾರೆ. ಈ ಬಗ್ಗೆ ಮಂತ್ರಿ ಮ್ಯಾಕಡೋನಾಲ್ಡಸಾಹೇಬರು ವಿಚಾರ ಮಾಡಲು ಇವರಿಗೆ ಸಮನ್ಸು ಮಾಡಿ ಕರೆದಿದ್ದಾರೆ ನನ್ನ ಭಾಷಣದಲ್ಲಿಯ ಕೆಲವು ವಾಕ್ಯಗಳನ್ನು ತಕ್ಕೊಂಡಿದ್ದಾರೆಂದು ಸಂಡಾಮಸಾಹೇಬರು ಆತ್ಮಸಮರ್ಥನ ಮಾಡಿಕೊಂಡಿದ್ದಾರೆ.

ಹಿಂದೀ ಗೃಹಸ್ಥರಿಗೆ ಗವ್ಹರ್ನರ ಕೆಲಸ.

—(೦)—

ನಾಗಪೂರದ ಗವ್ಹರ್ನರಸಾಹೇಬರು ವಿಲಾಯತಿಗೆ ಹೋದಾಗ ಸರ ತಾಂಬೆಯವರು ಆಕ್ಟಿಂಗ ಗವ್ಹರ್ನರರಾಗಿದ್ದರು. ಇವರ ತರುವಾಯ ಈಗ ಬ್ರಹ್ಮದೇಶದಲ್ಲಿ ಹಿಂದೀ ಗೃಹಸ್ಥರಾದ ಮೋಂಗ ಗಾಯಿ ಇವರಿಗೆ ಆಕ್ಟಿಂಗ ಕೆಲಸ ದೊರೆತಿದೆ. ಗವ್ಹರ್ನರರಾದ ಸರ ಚಾರ್ಲ್ಸ ಇನ್ನೆಸಸಾಹೇಬರು ಪ್ರಕೃತಿಯ ದೆಸೆಯಿಂದ ವಿಲಾಯತಿಗೆ ಹೋಗುವರು. ಸರ ಮೋಂಗ ಗಾಯಿಯವರು ಗವ್ಹರ್ನರರಾಗುವರು.

ಸಾಪ್ತಾಹಿಕ

ವಿಜಯ

ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಮಂಗಳವಾರ ತಾರೀಖು ೫ ನೇ ಅಗಸ್ಟ ೧೯೩೦ (ಸಂಚಿಕೆ ೨೯

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ಶುದ್ಧ ೧೧

ದಬ್ಬಾಳಿಕೆಯು ಮಿತಿಮೀರಿತು.

ಮುಂಬಯಿಯಲ್ಲಿ ರಾಷ್ಟ್ರಪ್ರಮುಖರ ದಸ್ತಗಿರಿ.

ಸರ್ದಾರ ಪಟೇಲ, ಪಂ. ಮಾಲವಿಯಾ, ಡಾ ಹರ್ಡೀಕರ, ಬ್ಯಾ· ಶೆರ್ವಾಣಿ, ಶ್ರೀ ಜಯರಾಮದಾಸ ದೌಲತರಾಮ, ಇವರು ಸರಕಾರದ ಅತಿಥಿಗಳಾದರು. ಮುಂಬಯಿಯಲ್ಲಿ ಲೋಕಮಾನ್ಯರ ಉತ್ಸವದ ಮನೆಯಿಂದ ತೆಗೆಯುವ ಮೆರವಣಿಗೆಯನ್ನು ಯುರೋಪಿಯನ್ನರ ಪೇಟೆಯಲ್ಲಿ ಹಾಯಿಸಬಾರದೆಂದು ಪೋಲೀಸ ಕಮಿಶನರರು ತೆಗೆದ ಅಪ್ಪಣೆಯನ್ನು ಇವರು ಮುರಿದರೆಂದು ಇವರನ್ನು ನಿನ್ನೆ ಹಿಡಿದಿರುತ್ತಾರೆಂದು ತಾರು ಬಂದಿರುತ್ತದೆ

ಮುನ್ನೂರು ಜನರು ಹೊಡತ ತಿಂದರು.

ಪೋಲಿಸರ ಹುಕುಮು ಮುರಿಯುವದಕ್ಕೆ ಕಾಂಗ್ರೆಸದ ವ್ಹಾಲಂಟಿಯರರ ಮೆರವಣಿಗೆಯು ಕೂಡ ಒಂದು ಲಕ್ಷವಿತ್ತು. ಸಾಯಂಕಾಲದಿಂದ ಬೆಳತನಕ ಇವರು ಅಲ್ಲೇ ಕೂತರು. ಪೋಲೀಸ ಕಮೀಶನರರು ಒಂದು ಸಾವಿರ ಪೋಲೀಸರೊಂದಿಗೆ ಇವರನ್ನು ತಡವಿದರು. ಬೆಳಗಾದ ಮೇಲೆ ಸಾರ್ವಜನಿಕ ಸಂಸ್ತೆಯು ಒಂದಾಗುತ್ತದೆಂದು ಪೋಲಿಸರು ಲಾಠೀ ಪ್ರಯೋಗ ಮಾಡಿ, ಮುನ್ನೂರು ಜನರನ್ನು ಹೊಡದು ಘಾಯ ಪಡಿಸಿದರು. ಇವರಿಗಾಗಿ ಕಾಂಗ್ರೆಸದವರು ಹೊಸದಾಗಿ ಆಸ್ಪತ್ರೆ ನಿರ್ಮಾಣ ಮಾಡಬೇಕಾಯಿತು.

ಹುಕುಮು ಅಲ್ಲ; ವಿನಂತಿಯು.

ಪೋಲಿಸ ಕಮೀಶನರರು ಸಭಾಬಂದಿಯ ಹುಕುಮು ಕೊಡುವಾಗ ನಾನು ವಿನಂತಿ ಮಾಡಿಕೊಳ್ಳುತ್ತೇನೆಂದು ಶಬ್ದಗಳಿರುವದರಿಂದ, ಅದು ಹುಕುಮು [illegible]ದೆಂದು ಪ್ರಶ್ನೆ ಹೊರಟು, ಪಂಡಿತ ಮೊದ[illegible] ವಿಚಾರಣೆಯು ತಹಕೂಬಾಗಿರುತ್ತದೆ.

ಧಾರವಾಡದಲ್ಲಿ ಹರತಾಳ.

ನಿನ್ನಿನ ದಿವಸ ಈ ಊರಲ್ಲಿ ಹರತಾಳವಾಯಿತು. ಪ್ರಾತಃಕಾಲದಲ್ಲಿ ಜವಳೀಪೇಟೆಯಲ್ಲಿ ದೊಡ್ಡ ಪ್ರಮಾಣದಿಂದ ರಾಷ್ಟ್ರಧ್ವಜವಂದನೆಯಾಯಿತು. ಪ್ರಾತಃಕಾಲದಿಂದ ಸಾಯಂಕಾಲದ ವರೆಗೆ ಊರ ತುಂಬ ಚಿಕ್ಕ ದೊಡ್ಡ ಮೆರವಣಿಗೆಗಳು ಜಯಘೋಷ ಮಾಡುತ್ತಾ ತಿರುಗಾಡಿದವು. ಸಾಯಂಕಾಲದಲ್ಲಿ ಪ್ರಚಂಡ ಮೆರವಣಿಗೆ ಹೊರಟಿತು. ಇದರಲ್ಲಿ ಇನ್ನೂರಕ್ಕಿಂತ ಹೆಚ್ಚು ಸ್ತ್ರೀಯರಿದ್ದರು. ಮೆರವಣಿಗೆಯು ಎರಡು ಫರ್ಲಾಂಗ ಉದ್ದವಾಗಿತ್ತು. ಬಳಿಕ ಸಭೆಯಾಯಿತು. ಐದಾರು ಸಾವಿರ ಜನರು ಸೇರಿದ್ದರು. ಶ್ರೀ ಸೌ॥ ಕೃಷ್ಣಾಬಾಯಿ ಪಣಜೇ, ರಾಷ್ಟ್ರಪುರೋಹಿತರಾದ ಹುಚ್ಚಾಚಾರ್ಯ ಅಗಳಗಟ್ಟಿ, ಮತ್ತು ಶ್ರೀ ಕರಮರಕರರ ಭಾಷಣಗಳಾದವು

ಮಿತ್ರಸಮಾಜದಲ್ಲಾದ ಒಂದು ಮೋಜು.

ಊರೊಳಗೆ ಹರತಾಳವಾಗಿ ಎಲ್ಲ ವ್ಯವಹಾರ ಬಂದಾಗಿದ್ದರೂ, ಮಿತ್ರಸಮಾಜದಲ್ಲಿ ವಿದ್ಯುತ್ತಿನ ಪ್ರಕಾಶದಲ್ಲಿ ಆಟ ನೋಟುಗಳು ನಡೆದಿದ್ದವು. ರೋಮ ಪಟ್ಟಣವು ಸುಡುತ್ತಿದ್ದಾಗ ಬಾದಶಹ ನೀರೋನು ಪಿಡಿಲ ಬಾರಿಸುತ್ತಿದ್ದನಂತೆ, ಅದರ ಚಿಕ್ಕಂದ ನಡೆದಿತ್ತು. ಮೆರವಣಿಗೆಯು ಅಲ್ಲಿಗೆ ಬಂದ ಕೂಡಲೆ ಸ್ತ್ರೀ ಸ್ವಯಂಸೇವಿಕೆಯರು ಒಳಗೆ ಹೋಗಿ, ಬುದ್ಧಿ ಬರುವಂಥ ಎರಡು ಮಾತು ಹೇಳಿ, ಅವರ ಆಟ ಬಿಡಿಸಿದರು. ಶ್ರೀ [illegible] ವಕೀಲರ ಸೂಚನೆಯಂತೆ ಎಲ್ಲ ದೀಪಗಳನ್ನಾರಿಸಿ, ಕಗ್ಗತ್ತಲೆ ಮಾಡಿದರು. ಹೊರಗೆ ನೆರೆದ ಸಾವಿರಾರು ಜನರು ಮಿತ್ರಸಮಾಜ ಹಾಳಾಗಲೆಂದು ಘನಗರ್ಜನೆ ಮಾಡಿದರು. ಸಮಾಜದವರು ಈನಂತರವಾದರೂ ಈ ಚಳವಳಿಯಿಂದ ತಮಗೂ ಹಿತವುಂಟೆಂದು ಆತ್ಮಜ್ಞಾನ ಮಾಡಿಕೊಳ್ಳಲಿ

ಡಾ. ಹರ್ಡೀಕರರ ಸಂದೇಶ.

ನನ್ನ ತರುವಾಯ ಧಾರವಾಡದ ಶ್ರೀ ಡಿ. ಪಿ ಕರಮರಕರ ಇವರು ಕರ್ನಾಟಕದ ಸತ್ಯಾಗ್ರಹ ಮಂಡಲದ ಪ್ರೆಸಿಡೆಂಟರಾಗಿ ಕೆಲಸ ಮಾಡತಕ್ಕದ್ದು ಮತ್ತು ಹಿಂದುಸ್ಥಾನಿ ಸೇವಾದಲದ ಅಂಡರ ಸೆಕ್ರೆಟರಿ ಕೆಲಸವನ್ನು ಎ. ಬಿ ಜೆ ಲೋಕೂರ ಇವರು ಮಾಡತಕ್ಕದ್ದು ಮತ್ತು ಅವರ ಕಡೆಗ ಚೇರಮನ್ನ ಕೆಲಸದ ಅಧಿಕಾರ ಇರತಕ್ಕದ್ದು. ಮಂಡಲಕ್ಕೆ ಜನರಿಂದಲೂ, ಧನದಿಂದಲೂ ಸಹಾಯ ಮಾಡಬೇಕಾಗಿ ವಿನಂತಿ.

ಮುಂಬಯಿಯಲ್ಲಿ ೧೪ ಜನರಲ್ಲಿ ಒಬ್ಬನು ಬಡಮಾನವನಿರುತ್ತಾನೆ. ಒಂದು ವರ್ಷದಲ್ಲಿ ಬಾರಿಗಳಲ್ಲಾದ ಅಪಘಾತಗಳಿಂದ ೪೮೦ ಜನರು ಸತ್ತರು. ೧೯ ಲಕ್ಷದ ಆಸ್ತಿಯು ಕಳವಾಯಿತೆಂದು ಸರಕಾರದ [illegible] ಹೇಳುತಾನೆ

ಕೊರಡೂರಲ್ಲಿ ಶೇಂದಿ ಗಿಡ ಕಡಿದದ್ದಕ್ಕೆ ದಸ್ತಗಿರಿ.

ಕರ್ಜಗಿ ತಾಲೂಕ ಕೊರಡೂರ ಗ್ರಾಮದಲ್ಲಿ, ಶೇಂದಿ ಗಿಡ ಕಡಿದರೆಂಬ ಆರೋಪದಿಂದ ಈ ಕೆಳಗಿನವರನ್ನು ಹಿಡಿದಂತೆ ಸುದ್ದಿ ಬಂದಿದೆ

೧ ಭರಿಯಪ್ಪ ಕಲಕೋಟಿ, ೨ ಬಸಪ್ಪ ಮುಗದೂರ, ೩ ಚನ್ನಬಸಪ್ಪ ಸವಣೂರ, ೪ ಬಸಪ್ಪಾ ಅಡರಕಟ್ಟಿ, ೫ ರಾಜೇಸಾಹೇಬ ಪಿಂಜಾರ, ೬ ಫಕೀರಸಾಹೇಬ ಪಿಂಜಾರ, ೭ ಗದಿಗೆಪ್ಪ ಹಳ್ಳೀಕೇರಿ, ೮ ಕೊಟ್ರಪ್ಪ ಕೋಟಿ

ಶ್ರೀ ಗುದ್ದೆಪ್ಪ ಹಳ್ಳೀಕೇರಿ, ವೆಂಕಟೇಶ ರಾಮಚಂದ್ರ ದೇಶಪಾಂಡೆ ಇವರ ಮೇಲೆ ವಾರಂಟು ಇರುತ್ತದೆ.

ಹಿಡಿದ ಆರೋಪಗಳ ಕಲಮು- ೧೪೩, ೪೦೬ ಮತ್ತು ೪೪೭

ಕೊರಡೂರ ಮತ್ತು ಹಾವೇರಿಯಲ್ಲಿ ಇವರ ಪ್ರಯಾಣ ಮತ್ತು ಆಗಮನ ಕಾಲದಲ್ಲಿ ಸಾವಿರಾರು ಜನರು ದೊಡ್ಡ ಉತ್ಸವ ಮಾಡಿದರು. ಸ್ತ್ರೀಯರು ಮನೆಮನೆಗೆ ಬೀದಿಬೀದಿಗೆ ಇವರಿಗೆ ಆರುತಿ ಬೆಳಗಿ ಜಯಘೋಷ ಮಾಡಿದರು.

ಸೊಲ್ಲಾಪೂರದ ಗಲ್ಲಿನ ಶಿಕ್ಷೆ ಕಾಯಮವಾಯಿತು.

ಮುಂಬಯಿ ಹಾಯಕೋರ್ಟಿನಲ್ಲಿ ಮುಖ್ಯ ಜಡ್ಜ ಮತ್ತು ಜಡ್ಜ ಮಾರಗಾವಕರರ ನಡುವೆ ಮತಭೇದವಾಗಿ ಮೂವರು ಆರೋಪಿಗಳ ಸ್ಪೇಶಲ ಅಪೀಲಿಯು ನ್ಯಾಯಮೂರ್ತಿ ಬೇಕರಸಾಹೇಬರ ಮುಂದೆ ನಡೆಯಿತು. ಈ ಸಾಹೇಬರು ಮೂವರ ಗಲ್ಲಿನ ಶಿಕ್ಷೆಯನ್ನು ಕಾಯಮ ಮಾಡಿದರು. ಶಿಕ್ಷೆಯಾದವರ ಹೆಸರು-

೧ ಶ್ರೀ ಕೃಷ್ಣ ಸಾರಡಾ
೨ ಕುರಬಾನ ಹುಶೇನ
೩ ಜಗನ್ನಾಥ ಶಿಂದೆ

ಒಬ್ಬ ಹೆಡ್‌ಮಾಸ್ತರರ ಮೂರ್ಖತನ.

ಈ ಜಿಲ್ಹೆಯ ತುದಿಯಲ್ಲಿರುವ ಒಂದು ದೊಡ್ಡೂರಿನ ಹೆಡ್‌ಮಾಸ್ತರರು ತಮ್ಮ ಶಾಲೆಗೆ ಖದರುಂಡಿಗೆ ಮತ್ತು ಸ್ವದೇಶೀ ಲಾಕೆಟ್ಟುಗಳನ್ನು ಮಾರಲಿಕ್ಕೆ ಹೋಗುವ ಹುಡುಗರಿಗೆ ಶಿಕ್ಷೆ ಮಾಡುತ್ತೇವೆಂದು ಅಂಜಿಸುವದಲ್ಲದೆ, ವರ್ಗದಲ್ಲಿರುವ ಹುಡುಗರಿಗೆ ಖದರುಂಡಿಗೆ ಕಂಡರೆ ಮತ್ತು ನೂತರೆ, ಶಾಲೆಯಿಂದ ಹೊರಗೆ ಹಾಕಿಸುತ್ತೇವೆಂದು ಭಯಹಾಕುತ್ತಾರೆ. ಇವರು ಮೂರ್ಖರೆಂಬ ಸರ್ಟಿಫಿಕೇಟಿಗೆ ಸಂಪೂರ್ಣ ಯೋಗ್ಯರಿದ್ದಾರೆ.

ಒಡಂಬಡಿಕೆಯ ಸಂಭವ.

ಅಲ್ಹಾಬಾದಿನಿಂದ ಯರವಡೆಗೆ

ಶ್ರೀ. ಜಯಕರರ ಆಗಮನ.

ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ತಮ್ಮ ಶಿಷ್ಟಾಯಿಯಲ್ಲಿ ಯಶ ಬರುವದೆಂದು ಆನಂದ ಪಟ್ಟಿರುತ್ತಾರೆ. ಯರವಡೆಯಲ್ಲಿ ಎರಡು ದಿವಸ ಮಹಾತ್ಮರ ಕೂಡ ಮಾತಾಡಿದನಂತರ- ಇಂವರು ಮಹಾತ್ಮರಿಂದ ಪಂಡಿತ ದ್ವಯರ ಹೆಸರಿನಿಂದ ಪತ್ರ ತಕ್ಕೊಂಡು ಹೋದರು. ಮಹಾತ್ಮರು ಪತ್ರ ಕೊಟ್ಟದ್ದು ಒಂದು ಶುಭವೇ; ಅರ್ಧ ಬಾರೀ ನಡೆದಂತಾಯಿತೆಂದು ಸಂತೋಷಪಟ್ಟರು. ಅಲ್ಹಾಬಾದಿಗೆ ಹೋಗುವ ಪೂರ್ವದಲ್ಲಿ ಇವರು ಮುಂಬಯಿಯಲ್ಲಿರುವಾಗಲೇ ನೈನೀತಾಳದ ತುರಂಗದ ಅಧಿಕಾರಿಗಳಿಂದ ಇವರಿಗೆ ತಾರು ಬಂತು. ಆದಿತ್ಯವಾರವಾದರೂ ನಿಮಗೆ ಭೆಟ್ಟಿಯ ಯೋಗ ತಂದು ಕೊಡುತ್ತೇವೆಂದು ಇದರಲ್ಲಿ ಬರೆದಿತ್ತು. ಆ ಪ್ರಕಾರ ಇವರು ನೈನೀತಾಳಕ್ಕೆ ಹೋಗಿ ಆದಿತ್ಯವಾರ ಮತ್ತು ಸೋಮವಾರ ಎರಡು ದಿವಸ ಸೇರಿ ಇವರ ಕೂಡ ೯||. ತಾಸುಗಳವರೆಗೆ ಚರ್ಚೆ ಮಾಡಿದರು. ಈ ಚರ್ಚೆಯ ನಂತರ ತಂದೆ ಮಗನು ಸೇರಿ ಮಹಾತ್ಮರ ಹೆಸರಿನಿಂದ ಪತ್ರ ಕೊಟ್ಟರು. ಈ ಪತ್ರ ತಕ್ಕೊಂಡು ಬ್ಯಾರಿಸ್ಟರ ಜಯಕರರೊಬ್ಬರೇ ಯರವಡೆಗೆ ಬಂದಿದ್ದಾರೆ. ಸರ ಸಪ್ರು ಸಾಹೇಬರು ಅಲ್ಹಾಬಾದಿನಲ್ಲಿಯೇ ಇರುವರು. ಬ್ಯಾರಿಸ್ಟರ ಜಯಕರರೊಬ್ಬರೇ ಬರುವದರಿಂದ, ಒಡಂಬಡಿಕೆಯ ಬ್ರಹ್ಮಗಂಟುಗಳೆಲ್ಲ ಬಿಚ್ಚಿ, ರಾಜಿಯ ದಾರಿಯು ಪೂರಾ ಸಾಗಿದೆಂದು ಸಹಜವಾಗಿ ತರ್ಕವಾಗುತ್ತದೆ. ಇವರು ನೈನಿತಾಳದ ತುರಂಗದಿಂದ ಹೊರಗೆ ಬಂದ ಕೂಡಲೆ ಮುಂದೆ ಕೊಟ್ಟಂತೆ ಒಂದು ಜಾಹೀರ ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ

ಇಂದು ನಾವು ನೈನಿತಾಳದ ತುರಂಗದಲ್ಲಿ ಪಂಡಿತ ಮೋತಿಲಾಲ ಮತ್ತು ಜವ್ಹೇರಿಲಾಲರ ಕೂಡ ನಾಲ್ಕು ತಾಸಿನ ತನಕ ಪುನಃ ಭಾಷಣ ಮಾಡೆವು. ನಮ್ಮಲ್ಲಿದ್ದ ಎಲ್ಲ ಮಾಹಿತಿಯನ್ನು ಅವರ ಮುಂದಿಟ್ಟೆವು. ಸದ್ಯಸ್ಥಿತಿಯನ್ನು ಕುರಿತು ಬಹಳ ಹೊತ್ತಿನ ತನಕ ವಿಚಾರ ವಿನಿಮಯ ಮಾಡಿದೆವು. ಪಂಡಿತ ಮೋತಿಲಾಲ ಹಾಗು ಪಂಡಿತ ಜವ್ಹೇರಿಲಾಲರು ಒಂದು ದೊಡ್ಡದು ಮತ್ತು ಒಂದು ಸಣ್ಣದು ಈ ಪ್ರಕಾರ ಎರಡು ಪತ್ರಗಳನ್ನು ಕೊಟ್ಟಿದ್ದಾರೆ. ಬ್ಯಾರಿಸ್ಟರ ಜಯಕರರು ಇವನ್ನು ತಕ್ಕೊಂಡು ಮಹಾತ್ಮರನ್ನು ಕಾಣಲಿಕ್ಕೆ ಹೋಗುವರು. ಸದ್ಯಸ್ಥಿತಿಯ ಬಗ್ಗೆ ಹೆಚ್ಚಿಗೆ ಹೇಳಲಿಕ್ಕಾಗುವದಿಲ್ಲ.

ವರ್ತಮಾನಪತ್ರಗಳ ರಿಪೋರ್ಟರರು ಇವರ ಕೂಡ ಮಾಡಿದ ಬೇರೆ ಭಾಷಣ ಮತ್ತು ಆಗ ಇವರ ಮೋರೆಯ ಮೇಲಿದ್ದು ಕಾಣಿಸುತ್ತಿದ್ದ ಆನಂದದ ಭಾವದಿಂದ ಒಡಂಬಡಿಕೆಯು ಅಸಂಭವನೀಯವಲ್ಲೆಂದೂ, ಕಾಂಗ್ರೆಸದವರು ರಾವುಂಡ ಟೇಬಲಕ್ಕೆ ಹೋಗಬಹುದೆಂದೂ ವ್ಯಕ್ತವಾಗಿರುತ್ತದೆ

ಪಾರ್ಲಮೆಂಟ ಸಭೆಯಲ್ಲಾದ ಪ್ರಶ್ನೋತ್ತರ.

ಮಿ. ಬ್ರಾಕವೇ-

ಒಡಂಬಡಿಕೆಯಂಥ ಮಹತ್ವದ ಬಾಬತಿಯಲ್ಲಿ ಬೇರೆ ಬೇರೆ ಜನರ ಕೂಡ ಬೇರೆ ಬೇರೆ ಸ್ಥಳಗಳಲ್ಲಿ ವಿಚಾರವಿನಿಮಯ ಮಾಡುವದಕ್ಕಿಂತ, ಎಲ್ಲರನ್ನೂ ಒಂದೇ ಸ್ಥಳದಲ್ಲಿ ಕೂಡಿಸಿ, ಮಾತಾಡುವದು ಯೋಗ್ಯವಾಗುವದಲ್ಲವೇ?

ಮಿ ಬೆನ್ನ-

ಇದು ಹಿಂದುಸ್ಥಾನ ಸರಕಾರದ ಅಧೀನದೊಳಗಿನ ಪ್ರಶ್ನವು. ಅವಶ್ಯ ಕಂಡರೆ ನಿಮ್ಮ ವಿಚಾರವನ್ನು ಯೋಗ್ಯ ಮಾರ್ಗವಾಗಿ ಹಿಂದುಸ್ಥಾನ ಸರಕಾರಕ್ಕೆ ತಿಳಿಸಿರಿ.

ಈ ಪ್ರಕಾರ ಪ್ರಶ್ನೋತ್ತರ ನಡೆದಾಗ ಕಾನ್ಸವೇಟಿವ್ಹ ಪಕ್ಷದ ಓರ್ವ ಮೆಂಬರರಾದ ಸರ ಆಲ್ಫ್ರಡ ನೋಕ್ಸರೆಂಬ ಸಾಹೇಬರು

ತುರಂಗದಲ್ಲಿ ಒಡಂಬಡಿಕೆಯ ಪ್ರಸ್ತಾಪ ಮಾಡುವದು ಸರಕಾರದ ದೊಡ್ಡಸ್ತನಕ್ಕೆ ನ್ಯೂನತೆಯನ್ನುಂಟು ಮಾಡುವದಲ್ಲವೇ

ಎಂದು ಪ್ರಶ್ನ ಮಾಡಲು ಅಧ್ಯಕ್ಷರು ಈ ಪ್ರಶ್ನ ಕೇಳಗೊಡಲಿಲ್ಲ.

ಪರೀಕ್ಷೆಗೆ ಕೂತ ವಿದ್ಯಾರ್ಥಿಗಳನ್ನು ಅನಾಮತ ಎತ್ತಿಕೊಂಡು ಹೋದರು.

ಕಲಕತ್ತೆಯಲ್ಲಿ ವಕೀಲಿಯ ಪರೀಕ್ಷೆಯು ಪಿಕೆಟಿಂಗದ ಮೂಲಕ ಮುಂದೆ ಬಿದ್ದಿತಷ್ಟೇ; ಒಂದೇ ಸ್ಥಳದಲ್ಲಿ ಪರೀಕ್ಷೆಯಾದರೆ- ಪುನಃ ಪಿಕೆಟಿಂಗವಾಗುವದೆಂದು ಮುಂದಾಗಿ ಆಲೋಚಿಸಿ, ಬೇರೆ ಬೇರೆ ಸ್ಥಳಗಳಲ್ಲಿ ಪರೀಕ್ಷೆ ತಕ್ಕೊಳ್ಳುವ ಏರ್ಪಾಡು ಮಾಡಿದರು. ಆದರೇನಾಯಿತು? ಸ್ವಯಂಸೇವಕರು ಎಲ್ಲಾ ಸ್ಥಳಗಳಲ್ಲಿಯೂ ದುತ್ತೆಂದು ನಿಂತರು. ಒಂದು ಸ್ಥಳದಲ್ಲಂತೂ ಇವರು ಪರೀಕ್ಷೆ ನಡೆದಿರುವಲ್ಲಿಗೆ ಹೋಗಿ, ಪ್ರಶ್ನಗಳಿಗೆ ಉತ್ತರ ಬರೆಯುತ್ತಿದ್ದ ಉಮೇದವಾರರನ್ನು ಅನಾಮತ ಹೊತ್ತುಕೊಂಡು ಹೊರಗೆ ತಂದರು. ಅಧಿಕಾರಿಗಳು ಈ ಅನಾಹುತ ಕಂಡು, ಪುನಃ ಪರೀಕ್ಷೆಯನ್ನು ಮುಂದೆ ಹಾಕಿದರು

ಸ್ಕೂಲಬೋರ್ಡ ಅ್ಯಡಮಿನಿಸ್ಟ್ರೇಟರನ ಬಂಟತನ.

ಸ್ಕೂಲಬೋರ್ಡ ಮತ್ತು ಅವುಗಳ ಶಿಕ್ಷಕರು ದಬ್ಬಾಳಿಕೆಯಲ್ಲಿ ಸೇರಬಾರದೆಂದು ಮುಂಬಯಿ ಸರಕಾರದವರು ವಿಶೇಷ ಸರ್ಕ್ಯೂಲರ ಮತ್ತು ಅದಕ್ಕನುಸರಿಸಿ ನಡೆಯುವ ಅ್ಯಡಮಿನಿಸ್ಟ್ರೇಟರಿಗೆ ಬಂಟತನದ ಉತ್ತರವೆನ್ನುವಂತೆ ಅಹಮುದಾಬಾದಿನ ಅ್ಯಡಮಿನಿಸ್ಟ್ರೇಟರರು ವರ್ತಿಸಿದ್ದಾರೆ. ಇವರು ಮೊದಲು ಶಾಲೆಗಳ ಎಲ್ಲ ವಿದ್ಯಾರ್ಥಿಗಳ ಮೆರವಣಿಗೆ ತೆಗೆದರು. ಮೆರವಣಿಗೆಯು ಮುಗಿದ ಬಳಿಕ

> "ಪ್ರಾಥಮಿಕ ಶಿಕ್ಷಣದ ಕಾಯದೆಯ ಪ್ರಕಾರ ನಾವು ಮ್ಯುನಿಸಿಪಾಲಿಟಿಯ ನವಕರರಾಗಿದ್ದೇವೆ ನವಕರರು ಹೇಗೆ ನಡೆಯಬೇಕೆಂಬದನ್ನು ನಿರ್ಣಯಿಸುವ ಅಧಿಕಾರವು ಮ್ಯುನಿಸಿಪಾಲಿಟಿಗಿದ್ದು ಸರಕಾರಕ್ಕಿರುವದಿಲ್ಲ."

ಎಂದು ಭಾಷಣ ಮಾಡಿದ್ದಾರೆ. ಎಷ್ಟು ಜನ ಅ್ಯಡಮಿನಿಸ್ಟ್ರೇಟರು ಈ ಸೂಕ್ಷ್ಮವನ್ನು ತಿಳಿಯುವಷ್ಟು ಬುದ್ಧಿವಂತರಾಗಿರಬೇಕೆಂಬದನ್ನು ಯಾರು ಹೇಳುವರು?

ಸವದತ್ತಿಯಲ್ಲಿ ಕಾಯದೆಭಂಗದ ವಿರುದ್ಧ ನೋಟೀಸು.

ಸವದತ್ತಿಯಲ್ಲಿ ಅಧ್ಯಕ್ಷರು ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಿಸುವ ವಿಷಯವಾಗಿ ಈ ಪರ್ಯಂತರ ನಡೆದ ಪ್ರಯತ್ನವು ನಿಷ್ಫಲವಾಯಿತು. ಊರ ಜನರೇ ಹಚ್ಚಬೇಕೆಂದು ನಿರ್ಧರಿಸಿದರು. ಬೆಳಗಾವಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ೧೪೪ನೆಯ ಶಾಂತತಾ ಭಂಗದ ಕಲಮು ಹಚ್ಚಿ, ಈ ಕೆಲಸ ಮಾಡುವ ಮತ್ತು ಮಾಡಲಿಕ್ಕೆ ಉತ್ತೇಜನ ಕೊಡುವವರ ಮೇಲೆ ಇದರ ಪ್ರಯೋಗ ಮಾಡಿ ಶ್ರೀ ಗುರುರಾವ ಮುನೋಳಿ ಮೊದಲಾದ ಐವರ ಮೇಲೆ ನೋಟೀಸು ತೆಗೆದಿದ್ದಾರೆ.

ಶ್ರೀ. ದೇವಜಿ ಬಾಬೂರಾಯರಿಗೆ ಶಿಕ್ಷೆ.

ನಿನ್ನಿನ ದಿವಸ ಪರ್ನಲ ಅಸಿಸ್ಟಂಟರಾದ ಮಿ. ದಿವೇಕರರು ಶ್ರೀ. ದೇವಜಿ ಬಾಬೂರಾವ-ಹಾ ತಾಲೀಕ ದೇಸಾಯಿಯವರಿಗೆ ಆರು ತಿಂಗಳು ಸಕ್ತ ಮತ್ತು ಮುನ್ನೂರು ರೂಪಾಯಿ ದಂಡ ಮಾಡಿದರು. ದಂಡ ಕೊಡದಿದ್ದರೆ- ಹೆಚ್ಚಿಗೆ ಆರು ತಿಂಗಳು ಶಿಕ್ಷೆ. ಶ್ರೀ ಬಾಬೂರಾಯರು ಹೇಳಿದ ಸುದೇಶವು:—

ಕನ್ನಡ ಬಾಂಧವರಲ್ಲಿ ಬಿನ್ನಹ.

ಪ್ರಿಯ ಬಂಧುಗಳೇ,

ಮಹಾತ್ಮರಿಂದ ಪ್ರಾರಂಭಿಸಲ್ಪಟ್ಟ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ ನೀವು ಎಷ್ಟೇ ಎಡರುಗಳು ಎದುರಿಸಿದಾಗ್ಯೂ ಹತಾಶರಾಗದೆ, ಯುದ್ಧವು ಕೊನೆಗಂಡು ಸ್ವಾತಂತ್ರ್ಯ ದೇವಿಯು ನಿಮ್ಮ (ಭಾರತೀಯರ) ಕೊರಳಿಗೆ ಜಯಮಾಲೆಯನ್ನು ಹಾಕುವವರೆಗೆ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಬೇಡಿರಿ.

ತಮ್ಮ ಬಂಧು
ದೇವಜೀ ಬಾಬು

ಸ್ವಯಂಸೇವಕರು ತಂಬಿಟ್ಟು ತಿಂದು ತೇಗಿದರು.

ಇಲ್ಲಿಯ ರಾಷ್ಟ್ರ ಪುರೋಹಿತರಾದ ಶ್ರೀ. ಅಗಳಗಟ್ಟಿಯ ಹುಚ್ಚಾಚಾರ್ಯರು ದಿನಾಲು ಪ್ರಾತಃಕಾಲದಲ್ಲಿ ರಾಷ್ಟ್ರೀಯ ಭಿಕ್ಷೆಯಿಂದ ಸ್ವಯಂಸೇವರಿಗೆ ಸಾಲುವಷ್ಟು ಅಕ್ಕಿ ಜೋಳವನ್ನು ಪೂರೈಸುತ್ತಿದ್ದಾರೆಂಬದನ್ನು ಈ ಮೊದಲು ಬರೆದಿದ್ದೇವೆ. ಸ್ವಯಂಸೇವಕರು ಬೇರೆ ಬೇರೆ ಊರುಗಳಿಂದ ಬಂದವರು. ಇವರಿಗೆ ನಾಗಪಂಚಮಿಯ ಅವಲಕ್ಕಿ, ತಂಬಿಟ್ಟು, ಚಕ್ಕಲಿ, ಕರ್ಚಿಕಾಯಿ ದೊರೆಯುವದೆಂತು? ಆಚಾರ್ಯರು ಪುರಾಣದಲ್ಲಿ ಈ ವಿಚಾರವಾಗಿ ಹೇಳಲು ಸ್ತ್ರೀಯರು ಪುರಾಣದಲ್ಲಿ ಇವನ್ನು ತಂದು ಕೊಟ್ಟರು. ತೆನೆ ತೆನೆ ಕೂಡಿ ರಾಸಿ ಎನ್ನುವಂತೆ ಇವುಗಳ ರಾಸಿಯೇ ಬಿದ್ದಿತು. ಮೊನ್ನೆ ರಾತ್ರಿ ಭೋಜನದ ಬದಲಾಗಿ ಸ್ವಯಂಸೇವಕರು ಇವುಗಳ ಫಲಹಾರದಿಂದ ತೇಗಿದರು. ಒಬ್ಬರ ವಿಚಾರ, ಹತ್ತು ಜನರ ಸಹಾಯವಾಗಿ ಸ್ವಯಂಸೇವಕರಿಗೆ ಮನೆಗಿಂತ ಹೆಚ್ಚಾದ ಸಂಭ್ರಮದಿಂದ ಪಂಚಮಿಯ ಹಬ್ಬವಾಯಿತು. ಈ ನಂತರ ಚಾತುರ್ಮಾಸ್ಯ ತೀರುವ ತನಕ ಹಬ್ಬಗಳಲ್ಲಿ ತಂತಮ್ಮ ಮನೆಯಲ್ಲಾಗುವ ಪಕ್ವಾನ್ನಗಳನ್ನು ಇವರಿಗಾಗಿ ಎಡೆಮಾಡಿ ತಂದು ಕೊಡುವಂತೆ ಸ್ತ್ರೀಯರು ಹೇಳಿದ್ದಾರೆ. ಧಾರವಾಡ ಮಂಗಳವಾರ ಪೇಟೆಯ ಸ್ತ್ರೀಯರು ಮಾಡಿದಂಥ ಮತ್ತು ಮುಂದ ಮಾಡುವಂಥ ಸ್ಪೃಹಣೀಯವಾದ ಕೆಲಸದ ಅನುಕರಣವನ್ನು ಬೇರೆಯವರೂ ಮಾಡುವರೆಂದು ನಂಬಿದ್ದೇವೆ.

ಶರ್ಯತಿಯ ಉಗೆಬಂಡಿಯ ಪಿಕೆಟಿಂಗ.

ಪುಣೆಯಲ್ಲಿ ಕುದುರೆಯ ಪಂದ್ಯನಡೆದಿದೆ ಅದು ಈಗ ಪಂದಲೂರಾಗಿದೆ. ಪಂದ್ಯ ನೋಡಲು ಮುಂಬಯಿಯಿಂದ ಫರ್ಸ್ಟ, ಸೇಕಂಡ ಹಾಗೂ ಥರ್ಡಕ್ಲಾಸಿನ ಸ್ಪೇಶಲ ಟ್ರೇನುಗಳು ಬಿಡುವವು. ಕಾಂಗ್ರೆಸದವರು ಪಿಕೆಟಿಂಗ ಮಾಡಿದ್ದರಿಂದ ಆರು ನೂರು ಜನರು ಹೋಗುವಂಥ ಥರ್ಡದಲ್ಲಿ ೯೦ ಜನರು ಹ್ವಾಲಂಟಿಯರರಿಂದ ಅನಿಸಿಕೊಂಡು, ಯಾಳಿಸಿಕೊಂಡು, ಹೋದರು. ರೇಲ್ವೆಯವರು ಸೇಕಂಡ ಮತ್ತು ಫರ್ಸ್ಟ ಒಂದೇ ಮಾಡಿ, ಕೆಲವರನ್ನು ಹೊಟ್ಟೆಯ ಕಿಚ್ಚಿಗಾಗಿ ಒಯ್ದರು.

ರೌಂಡ ಟೇಬಲಿನ ಕಲಕು ಮುಳಕು.

ಹಿಂದುಸ್ಥಾನದಲ್ಲಿ ಸ್ವರಾಜ್ಯ ವಿಷಯಕವಾಗಿ ಕಳಕು ಮುಳಕಾಗಿದ್ದ ನೀರು ಝುಳಝುಳ ಮತ್ತು ಜುಳುಜುಳು ಹರಿಯುತ್ತಿದ್ದಾಗ, ಇಂಗ್ಲಂಡದಲ್ಲಿಯ ರೌಂಡ ಟೇಬಲದ ಸ್ವಚ್ಛ ನೀರು ಕಲಕು ಮುಳಕಾಗಿ, ಹೆಚ್ಚೆಚ್ಚು ರಾಡಿಯಾಗಲಾರಂಭಿಸಿದೆ. ಸಾಯಮನ್ನ ರಿಪೋರ್ಟಿನ ತಳಪಾಯಾ ರೌಂಡ ಟೇಬಲ ಕೂಡಿಸುತ್ತೇವೆಂದು ಮಿ. ಮ್ಯಾಕಡೋನಾಲ್ಡ ಸಾಹೇಬರು ಹೇಳಿದಾಗ- ಬ್ರಿಟಿಶ ಮಂತ್ರಿಗಳಿಗೂ, ಹಿಂದುಸ್ಥಾನದ ಪ್ರತಿನಿಧಿಗಳಿಗೂ ಸ್ವರಾಜ್ಯವಿಷಯವಾಗಿ ವಿಚಾರ ವಿನಿಮಯವಾಗುವದೆಂದು ಉದ್ಗಾರ ತೆಗೆದರು. ಈ ಹೇಳಿಕೆಯು ಅಥವಾ ಹಿಂದುಸ್ಥಾನದ ಜನರಿಗೆ ಕೊಟ್ಟ ಭಾಷೆಯು ಮಂತ್ರಿಗಳ ವಿರುದ್ಧ ಪಕ್ಷದವರಿಗೆ ಸಮ್ಮತವಾಗಲಿಲ್ಲ. ಅದರಲ್ಲಿ ತಮ್ಮವರ ಹಾಗು ಸರ ಸಾಯಮನ್ನಸಾಹೇಬರ ಸೇರ್ಪಡೆಯಾಗಬೇಕೆಂಬ ಸೂಚನೆ ಮಾಡಿದರು. ಈ ಸೂಚನೆಯ ವರ್ತಮಾನ ಕೇಳಿದ ಕೂಡಲೆ, ಮವಾಳರ ಮುಖಂಡರಾದ ಸರ ಸೆತಲವಾಡರು. ವಿರುದ್ಧ ಪಕ್ಷದವರೂ ರೌಂಡ ಟೇಬಲಕ್ಕೆ ಬರುವದಾದರೆ- ನಾವು ನಮ್ಮ ಸಹಕಾರಿತ್ವದ ಬಗ್ಗೆ ಪುನಃ ವಿಚಾರ ಮಾಡಬೇಕಾದೀತೆಂದು ಮಂತ್ರಿಗಳಿಗೆ ಬೆದರಿಕೆ ಹಾಕಿದ ತಾರು ಕಳಿಸಿದರು. ಮವಾಳರ ಕಡೆ- ಅದು ಹೊರದುಟಿಯಿಂದ ಹೆದರಿಸುವಂತಹದಲ್ಲದೆ, ಕಾಂಗ್ರೆಸದವರಂತೆ ಒರೆಗೆ ಹಚ್ಚತಕ್ಕದ್ದಲ್ಲೆಂದು ಗೊತ್ತು. ಹಳ್ಳಕ್ಕೆ ಕಳವು ಒಪ್ಪಳೆಂಬಂತೆ ಮವಾಳರ ತಾರಿನ ವ್ಯವಸ್ಥೆಯಾಯಿತು. ಇದು ಮುಂದೆ ವಿಶ್ವಾಗವಾ? ಸಮುದ್ರದ ಕೊರೆಯಾಯಿತು. ವಿಲಾಯತಿಯ ವಿರುದ್ಧ ಪಕ್ಷದವರು ಎಬ್ಬಿಸಿದ ಗೊಂದಲದಿಂದ ಮಂತ್ರಿಗಳಿಗೇ ಎದ್ದಲಗಾಟ ಒರುವದಾಯಿತು: ಆಗ ಅವರು ಬ್ರಿಟಿಶ ಸರಕಾರವಲ್ಲ; ಬ್ರಿಟಿಶ ಜನತೆಯು ಕೂಡ ಸಂಧಿ ಎಂದು ಲಾರ್ಡ ಅಯರ್ವಿನಸಾಹೇಬರಿಂದ ನುಡಿಸಿದರು. ಸರಕಾರ ಹೋಗಿ ಜನತೆ ಎಂಬ ಹೆಸರು ಏಕೆ ಬಂತೆಂದು ಈ ದೇಶಿಯರಿಗೆ ಗೂಢವಿತ್ತು. ಅದು ಬೈಲಿಗೆ ಬರಲು ಬಹಳ ಅವಕಾಶ ಹತ್ತಲಿಲ್ಲ. ಸ್ವತಃ ಮಂತ್ರಿ ಮ್ಯಾಕಡೋನಾಲ್ಡಸಾಹೇಬರು ಎರಡೂ ಪಕ್ಷದ ನಾಲ್ವರನ್ನು ರೌಂಡಟೇಬಲದಲ್ಲಿ ಸೇರಿಸಿಕೊಳ್ಳುವಂತೆ ಜಾಹೀರ ಮಾಡಿದ್ದಾರೆ. ಇದಕ್ಕೆ ಕಾನ್ಸರವೇಟಿವ್ಹ ಮತ್ತು ಲಿಬರಲರು [illegible] ವನ್ನುವಂತೆ ಒಪ್ಪಿಗೆ ಕೊಟ್ಟಿದ್ದಾರೆ. ಈ ಒಪ್ಪಿಗೆಯಲ್ಲಿ ಸರ ಸಾಯಮನ್ನ ಸಾಹೇಬರಿಗೂ ಆಮಂತ್ರಣವಿರಬೇಕೆಂದು ಕಾನ್ಸರವೇಟಿವ್ಹರಾದ ಸರ ಚೇಂಬರಲೇನ್ನಸಾಹೇಬರು ಆಗ್ರಹ ಹಿಡಿದರು. ಈ ಆಗ್ರಹವು ದುರಾಗ್ರಹವಾಗಿ ಪರಿಣಮಿಸಿದೆ. ಸರ ಸಾಯಮನ್ನರನ್ನು ಕರೆಯದಿದ್ದರೆ- ತಾವೊಂದು ನಿಂದಾವ್ಯಂಜಕ ಠರಾವನ್ನು ಪಾರ್ಲಮೆಂಟದಲ್ಲಿ ತರುವಂತೆ ಭಯ ಹಾಕಿದ್ದಾರೆ. ಅಧ್ಯಕ್ಷರಾದ ಸ್ಪೀಕರರು ಇದನ್ನು ಸಭೆಯ ಮುಂದೆ ತರಗೊಡಲಾರರೆಂದು ಭವಿಷ್ಯ ಮಾಡಲ್ಪಟ್ಟದೆ.

ವಿಲಾಯತಿಯ ಪ್ರತಿನಿಧಿಗಳಲ್ಲದೆ ವಸಾಹಾತಿನ ಪ್ರತಿನಿಧಿಗಳಿಗೂ ಆಮಂತ್ರಣವಿರಬೇಕೆಂದು ಮತ್ತೊಂದು ಹೊಸ ಸೂಚನೆಯು ಮುಂದೆ ಬಂದಿದೆ. ಎಷ್ಟೇ ಸೂಚನೆಗಳಾಗಲಿ; ಹಿಂದುಸ್ಥಾನದಿಂದ ಹೋಗುವಷ್ಟು ಪ್ರತಿನಿಧಿಗಳಷ್ಟು ಇವರ ಸಂಖ್ಯೆಯಾಗುವದಿಲ್ಲ. ಮನುಷ್ಯಬಲವಾಗುವದಿಲ್ಲ. ಕಾನ್ಸರವೇಟಿವ್ಹ ನಾಲ್ಕು, ಲಿಬರಲ ನಾಲ್ಕು ಅಂತೂ ಮತ್ತು ಮಂತ್ರಿ ಮೊದಲಾಗಿ ಎಂಟು, ಇನ್ನಾ ಕಾದರೂ ಸೇರಿ ಇವರ ಸಂಖ್ಯೆಯು ಇಪ್ಪತ್ತರೊಳಗೆಯಾಗುವದುಂಟು. ಹಿಂದುಸ್ಥಾನದಿಂದ ಹೋಗತಕ್ಕವರು ಕನಿಷ್ಠ ೬೦ ಜನರು. ಯಾವದೊಂದು ಮಾತಿನ ನಿರ್ಣಯವಾಗಲಿಕ್ಕೆ, ಬಹುಮತವೇ ಮುಖ್ಯ ಸಂಗತಿಯಾದರೆ- ಹಿಂದೀ ಜನರ ಪ್ರಚಂಡ ಬಹುಮತವಾಗಿ ಪ್ರತಿಯೊಂದು ಠರಾವು ಹಿಂದುಸ್ಥಾನಕ್ಕೆ ಅನುಕೂಲವಾಗಿಯೇ ಪಾಸಾಗುವದು. ಆದರೆ ಇಲ್ಲಿ ಬಹುಮತದ ಪ್ರಶ್ನವೇ ಇರಲಾರದೆಂದು ಮಿ. ಮ್ಯಾಕಡೋನಾಲ್ಡ ಸಾಹೇಬರು ಸಾರಿ ಹೇಳಿದ್ದಾರೆ. ರೌಂಡ ಟೇಬಲಿನಲ್ಲಿ ಸಾಯಮನ್ನ ಸಾಹೇಬರು ಮೂರ್ತಿಮಂತವಾಗಿ ಕೂಡ್ರದಿದ್ದರೂ, ಅವರ ರಿಪೋರ್ಟ ಮೂರ್ತಿಮಂತಭಯವಾಗಿ ನಿಲ್ಲುವದು. ಕಾನ್ಸರವೇಟಿವ್ಹರೂ ಲಿಬರಲರೂ ಇದನ್ನು ಬಾಯಿಬಲವಾಗಿ ತಿಳಕೊಂಡು ಇದನ್ನು ಹಿಡಕೊಂಡೇ ನಡೆಯುವರು. ಆದರೆ ನಮ್ಮ ಸರ ಶಂಕರನಾಯರರ ರಿಪೋರ್ಟಿಗೆ ಮಾತ್ರ ದೆಸೆಯೇ ಇರುವದಿಲ್ಲ. ತಮ್ಮ ರಿಪೋರ್ಟಿನಲ್ಲಿಯೂ ಕಂಡ ಸಂಗತಿಗಳ ಊಹಾಪೋಹವಾಗಬೇಕೆಂದು ಸರ ನಾಯರರು ಕರೆಯದವರ ಮನೆಯ ಕಳಸಗಿತ್ತಿಯಾಗಿ ಹೋಗಬೇಕೆಂದಿದ್ದಾರೆ. ಇವರೆಲ್ಲರೂ ಕೂಡವದರಿಂದ ನಡೆಯುವ ವಾದವಿವಾದವು ಎತ್ತು ಎರಿಗೆಳೆದರೆ- ಕೋಣ ಕೆರೆಗೆಳೆಯುದ ತಾಗಲಿಕ್ಕಿಲ್ಲೆಂದು ಯಾರು ಹೇಳುವರು? ರೌಂಡಟೇಬಲಿನಲ್ಲಿ ಬೇಕಾದವರು ಬೇಕಾದಷ್ಟು ಪಾಂಡಿತ್ಯ ತೋರಿಸಲಿ; ಬ್ರಹಸ್ಪತ್ಯಾಚಾರ್ಯರಂತೆ ಭಾಷಣ ಮಾಡಲಿ ಸೂಚನೆ ಉಪಸೂಚನೆ ಮಾಡಲಿ; ಇವೆಲ್ಲವುಗಳ ಸಾರ ತೆಗೆದು ಅಥವಾ ತಮಗೆ ಹೊಳೆದಂತೆ ಬೇರೊಂದು ಯೋಜನೆ ಬರೆದು, ಅದನ್ನು ಪಾರ್ಲಮೆಂಟದ ಮುಂದಿಡತಕ್ಕವರೆಂದು ಮಿ. ಮ್ಯಾಕಡೋನಾಲ್ಡಸಾಹೇಬರು ಮತ್ತೊಂದು ಟೊಮ್ಮೆಯನ್ನು ಹೇರಿದ್ದಾರೆ ವೈಕುಂಠಪಟವೆಂಬದೊಂದು ಕವಡಿಯ ಆಟವುಂಟು. ಇದರಲ್ಲಿ ವೈಕುಂಠಕ್ಕೆ ತೀರ ಸನಿಯ ಹೋದವರು ಕೆಟ್ಟ ಫಾಸಿ ಬಿದ್ದರೆ- ಜರ್ರನೆ ಇಳಿದು ಮೊದಲಿನ ಮನೆಗೆ ಬರುತ್ತಾರೆ. ಅದೇ ಪ್ರಕಾರ ಸ್ವರಾಜ್ಯ ತರುತ್ತೇವೆಂದು ಶ್ವೇತದ್ವೀಪಕ್ಕೆ ಹೋಗುವ ಹಿಂದೂ, ಮುಸಲಮಾನ ಮತ್ತು ಶೀಖ ಮುಖಂಡರೂ ನಾನಾ ಜಾತಿಗಳ ಸಂಸ್ಥಾನಿಕರೂ, ಆಳಮೋರೆ ಮಾಡಿಕೊಂಡು ಬರಲಿಕ್ಕೆ ಮೇಲಿನ ಬಂದಕ್ಕಿಂತ ಒಂದು ಬಲವಾಗಿ ಬಿಗಿಯಾದ ತೊಡಕುಗಳೇಕೆ ಉತ್ಪಾದದಂತೆ ತೋರಲಿಕ್ಕಿಲ್ಲೆಂದು ಹೇಳಬಾರದು? ಆದರೂ ಕಡೆಯ ಪ್ರಯತ್ನವೆಂದು ಹಿಂದೀ ಜನರು ಲಂಡನದ ಯಾತ್ರೆಗೆ ಹೋಗಬೇಕಂದಿದ್ದಾರೆ

ನಾಮದಾರ ಶಾಸ್ತ್ರಿಯವರು ಬ್ರಿಟಿಶ ಸರಕಾರಕ್ಕೆ ಕೊಟ್ಟ ಸರ್ಟಿಫಿಕೇಟು.

ನಾಮದಾರ ಶಾಸ್ತ್ರಿಯವರು ಬ್ರಿಟಿಶ ಸರಕಾರದ ಅತ್ಯಂತ ವಿಶ್ವಾಸದ ಗೃಹಸ್ಥರು. ಲೋಕಪಕ್ಷಿಯರಲ್ಲಿ ಇವರಲ್ಲಿದ್ದಷ್ಟು ನಂಬಿಗೆಯು ಇನ್ನಾರಲ್ಲಿಯೂ ಇರಲಾರದು. ಅಂತೇ ರೌಂಡ ಟೇಬಲಕ್ಕೆ ಸಹಾಯ ಮಾಡಬೇಕೆಂದು ಇವರನ್ನು ಮುಂದಾಗಿ ಲಂಡನಕ್ಕೆ ಕರೆಸಿಕೊಂಡಿದ್ದಾರೆ. ಅಲ್ಲಿಗೆ ಹೋದ ಬಳಿಕ ಇವರು ಸುಮ್ಮನೆ ಕೂತಿಲ್ಲ. ಹಿಂದುಸ್ಥಾನದ ಸ್ವರಾಜ್ಯವು ಸಂಪೂರ್ಣ ಸ್ವಾತಂತ್ರ್ಯದ್ದಿರಬೇಕು. ಹಿಂದೀ ಜನರು ಬೇಕಾದರೆ ಬ್ರಿಟಿಶ ಸಾಮ್ರಾಜ್ಯಾಂತರ್ಗತರಾಗುವರು. ಅಥವಾ ಆ ಸಂಬಂಧ ಕಡಕೊಂಡು ಸ್ವತಂತ್ರರಾಗುವರೆಂದು ಭಾಷಣ ಮಾಡಿದರು. ಮವಾಳ ಮಂಡಳದಲ್ಲಿ ಈ ಮೇರೆಗೆ ಭಾಷಣ ಮಾಡಿದವರಲ್ಲಿ ಇವರೇ ಮೊದಲೆಂದರೂ ಸಲ್ಲುವದು. ಇವರ ಭಾಷಣವು ಲಾರ್ಡ ಡೆಲ್ಸ್ತ್ರಫೋರ್ಡಸಾಹೇಬರಿಗೆ ಅಪಥ್ಯವಾಯಿತು. ಬ್ರಿಟಿಶ ಸಾಮ್ರಾಜ್ಯದ ಒಂದು ಭಾಗವಾಗಬೇಕೆಂಬ ಶರ್ತಿನಿಂದಲೇ ಈ ಸುಧಾರಣೆಯ ತಳಗಲ್ಲು ಕೂಡ್ರಿಸಿದ್ದೇವೆಂದು ಇವರು ಶಾಸ್ತ್ರಿಗಳಿಗೆ ಉತ್ತರ ಕೊಟ್ಟಿದ್ದಾರೆ. ಈ ವಿಚಾರವಿರಲಿ; ಈ ಭಾಷಣದ ತರುವಾಯ ನಾಮದಾರರ ಮತ್ತೊಂದು ಭಾಷಣವಾಯಿತು. ಇದರಲ್ಲಿ ಅಂದದ್ದೇನಂದರೆ-

“ಬಹುತೇಕ ಇಂಗ್ಲಿಷ ಜನರಿಗೆ ಹಿಂದುಸ್ಥಾನದ ವರ್ತಮಾನ ಪರಿಸ್ಥಿತಿಯು ತಿಳಿದೇ ಇಲ್ಲ. ಅವರು ಆ ಬಗ್ಗೆ ಅಜ್ಞಾನಿಯಾಗಿದ್ದಾರೆ. ಹಿಂದುಸ್ಥಾನದಲ್ಲಿ ರಾಜ್ಯ ಮಾಡತಕ್ಕವರು ನವಾಬರಂತೆ ನಿರಂಕುಶರಾಗಿದ್ದು, ಬೇಜವಾಬದಾರರಾಗಿದ್ದಾರೆ. ಸರಕಾರವು ಯಾವಾಗಲೂ ಅಪ್ರಬುದ್ಧ ವಿಚಾರವುಳ್ಳದ್ದಾಗಿ, ಹಿಂದುಸ್ಥಾನದ ಮಹತ್ವಾಕಾಂಕ್ಷೆಗಳ ದ್ವೇಷ ಮಾಡುವಂತಹದಾಗಿರುತ್ತದೆ. ರೌಂಡ ಟೇಬಲಿನಲ್ಲಿ ಸಾಯಮನ ರಿಪೋರ್ಟಿನ ಉಸಾಬರಿಗೆ ಹೋಗತಕ್ಕದ್ದಲ್ಲ. ಅಲ್ಲಿ ವಾದವಿವಾದಗಳ ಬಗ್ಗೆ ಕರಾವು ಬರಿಯತಕ್ಕದ್ದಲ್ಲ. ಹಿಂದುಸ್ಥಾನಕ್ಕೆ ನ್ಯಾಯ ದೊರೆಯುವಂತೆಯೇ ನಿರ್ಣಯಿಸತಕ್ಕದ್ದಾಗಿರುತ್ತದೆ”

ದೇವಾಲಯದಲ್ಲಿ ರಾಷ್ಟ್ರೀಯ ನಿಶಾನೆ ಮತ್ತು ಅದರ ಅದ್ಭುತ ಸತ್ಯಾಗ್ರಹ.

ಸಾತಾರಾ ಜಿಲ್ಹೆಗೆ ಸೇರಿದ ವಿಲಾಸಿ ಎಂಬ ಗ್ರಾಮದಲ್ಲಿರುವ ರಾಮದೇವರ ಗುಡಿಯ ಮುಂದೆ ಒಂದು ತೇಗಿನ ಕಂಬವುಂಟು. ಇದು ವನಗಾವಲ ಖಾತೆಗೆ ಸೇರಿದ್ದು. ಜನರು ಈ ಕಂಬಕ್ಕೆ ರಾಷ್ಟ್ರೀಯ ನಿಶಾನೆ ಹಚ್ಚಿದರು. ಸರಕಾರೀ ಕಂಬವಾದ್ದರಿಂದ, ಇದನ್ನು ಕಿತ್ತಬೇಕೆಂದು ವನಗಾವಲದವರ ಪ್ರಯತ್ನ. ಕಂಬ ಕಿತ್ತಿದರೆ- ಅದರ ಕೂಡ ನಿಶಾನೆಯೂ ಹೋಗುವದೆಂದು ಬಗೆದು, ಊರ ಜನರು ಅದನ್ನು ಕಿತ್ತಗೊಡದಂತೆ ಸತ್ಯಾಗ್ರಹ ನಡೆಸಿದ್ದಾರೆ. ಸಾವಿರಾರು ಜನ ಸ್ತ್ರೀಪುರುಷರು ಅದರ ಸುತ್ತಲು ನೆರೆದು ವನಗಾವಲದವರು ಅದರ ಹತ್ತರ ಹೋಗದಂತೆ ಬಂದುಕಟ್ಟು ಮಾಡಿದ್ದಾರೆ ಈ ವರ್ತಮಾನ ಕೇಳಿ, ಕಲೆಕ್ಟರರು ಪೋಲಿಸರ ದೊಡ್ಡ ಪಡೆ ತೆಕ್ಕೊಂಡು ಅಲ್ಲಿಗೆ ಹೋಗಿದ್ದಾರೆ. ಕೂಡಿದ ಸಾವಿರಾರು ಜನರು ಸಮಯ ಸಾಧಿಸಿ, ಸರಕಾರದ ಅಡವಿಯಲ್ಲಿ ಹೋಗಿ, ಹುಲ್ಲು ಕೊಯ್ಯುವರು; ಗಿಡ ಕಡಿಯುವರು. ಬೇರೆ ರೀತಿಯಿಂದಲೂ ಫಾರೆಸ್ಟದ ಹಾನಿ ಮಾಡುವರು.

ಧಾರವಾಡದಲ್ಲಿ ನೂಲುವ ಪಂದ್ಯ.

ಹೋದ ಬುಧವಾರ ದಿವಸ ಈ ಊರಲ್ಲಾದ ಮೆರವಣಿಗೆಯ ಕೂಡ ಕದರುಂಡಿಗೆಯ ಮೇಲೆ ನೂಲುತ್ತಾ ಹೋದ ನೂರಾರು ಉಮೇದವಾರರಲ್ಲಿ ಕೆಳಗಿನವರಿಗೆ ಬೆಳ್ಳಿಯ ಕದರುಂಡಿಗೆಗಳ ಇನಾಮು ದೊರೆಯಿತು.

ಹದಿನಾರು ವರ್ಷದೊಳಗಿನವರು

೧ ಪಿ. ಎಚ್. ಕುಂಠೆ, ಧಾರವಾಡ ಹಾಯಸ್ಕೂಲ. ೬೯ ಯಾರ್ಡ ಉದ್ದ ನೂಲು ನಂಬರ ೨೭

ಕ್ಯಾಂಪ ವ್ಹಾಲಂಟಿಯರರು

೧ ಸಾಂಬಾಜಿ ಬೆಂಗಳೂರು- ನೂಲು ನಂಬರ ೨೦, ಉದ್ದ ೫೩ ಯಾರ್ಡ

೧೬ ವರ್ಷ ಮೇಲ್ಪಟ್ಟವರು

೧ ಆನಂದ ವಾಸುದೇವ ಉಮಚಗಿ ೨೦॥ ನಂಬರು ೫೭ ಯಾರ್ಡ

೨ ಶ್ರೀ. ಕೃಷ್ಣ ರಾಮಚಂದ್ರ ಸಾಲಿ ೧೮ ನಂಬರ ೫೩ ಯಾರ್ಡ

ಈ ನಾಲ್ವರಲ್ಲಿ ಕುಂಠೆಯು ಎಲ್ಲರಿಗಿಂತ ಚಿಕ್ಕವನು, ಹೆಚ್ಚು ಬೆಸಗು ಮತ್ತು ಉದ್ದ ನೂತವನಿದ್ದಾನೆ. ಇವು ಶ್ರೀ. ಉಮಾಬಾಯಿ ಕುಂದಾಪೂರ ಇವರಿಂದ ಬಹುಮಾನವಾಗಿ ಕೊಡಿಸಲ್ಪಟ್ಟವು.

ಧಾರವಾಡ ಹಾಯಸ್ಕೂಲಿನಲ್ಲಾದ ರಾಷ್ಟ್ರೀಯ ನಿಶಾನೆಯ ಗೊಂದಲ.

ಇಲ್ಲಿಯ ಸರಕಾರೀ ಹಾಯಸ್ಕೂಲಿನಲ್ಲಿ ರವಿವಾರ ಬೆಳಗಾಗುವದರೊಳಗೆ ಯಾರೋ ನಾಡಗುಡಿಯನ್ನೇರಿಸಿದರು. ಹೆಡ್ಡಮಾಸ್ತರರು ದಿನಾಲು ಉಷಃಕಾಲದಲ್ಲೆದ್ದು ಗ್ರಾಮಪ್ರದಕ್ಷಿಣೆಗೆ ಹೋಗುವರು. ಅವರು ತಿರಿಗಿ ಬರುವಷ್ಟರಲ್ಲಿ ಒಬ್ಬಿಬ್ಬರು ಅದರ ಫೋಟೋತಕ್ಕೊಂಡಿದ್ದರು. ಮಾಸ್ತರರು ತಿರಿಗಿ ಬಂದು ನೋಡಿದವರೇ ಅದನ್ನು ಸಿಪಾಯರಿಂದ ಕೆಳಗಿಳಿಸಿದರು. ಇಷ್ಟು ಸಂಗತಿಯನ್ನು ಈ ಮೊದಲು ಬರೆದಿದ್ದೇವೆ

ಸೋಮವಾರ ೧೧ ಗಂಟೆಗೆ ನಿತ್ಯದಂತೆ ಹುಡುಗರು ಶಾಲೆಗೆ ಹೋದರು. ನಿಶಾನೆಯು ಹರಿದು ಬಿದ್ದಿತ್ತು. ನಿಶಾನೆಯನ್ನು ಹರಿದು ಅಪಮಾನ ಮಾಡಿದ್ದು ಅವರಿಗೆ ಸಹನವಾಗಲಿಲ್ಲ ತೆಗೆಯುವಾಗ ಹರಿಯಿತೆಂದು ಮಾಸ್ತರರು ಹೇಳಿದ ಸಮಾಧಾನವು ಹುಡುಗರಿಗೆ ತೃಪ್ತಿಯಾಗಲಿಲ್ಲ ನಾವು ಪುನಃ ನಿಶಾನ ಏರಿಸಿ, ಅದರ ಪೂಜೆ ಮಾಡುತ್ತೇವೆ. ರಾಷ್ಟ್ರಗೀತ ಹೇಳಿ ಇಳಿಸುತ್ತೇವೆಂದು ಅನ್ನುತ್ತಿರುವಾಗ, ಮಿ. ಡಾಯರೆಕ್ಟರಸಾಹೇಬರು ಅಲ್ಲಿಗೆ ದಯಮಾಡಿಸಿದರು. ಹೆಡ್ಡಮಾಸ್ತರ ಹಾಗು ಹುಡುಗರಿಂದ ನಡೆದ ವಿದ್ಯಮಾನಗಳನ್ನು ತಿಳಕೊಂಡರು.

ಶಾಲೆಯಲ್ಲಿ ೧೫೦ಕ್ಕಿಂತ ತುಸು ಹೆಚ್ಚು ಹುಡುಗರಿದ್ದಾರೆ. ಇವರಲ್ಲಿ ೧೫೦ಕ್ಕಿಂತ ಹೆಚ್ಚು ಜನರು ಶಾಲೆಯ ಹೊರಗೆ ಬಂದರು. ಮೇಲಿನ ವರ್ಗಗಳು ಬಹುವಾಗಿ ಹಾಳು ಸುರಿದವು ಡಾಯರೆಕ್ಟರಸಾಹೇಬರು ಇವರಿಗೆ ನಿಮ್ಮಲ್ಲಿಯ ಮುಖಂಡರು ಬಂದು ತಮ್ಮ ಕೂಡ ಮಾತಾಡಿರೆಂದರು. ಎಲ್ಲರೂ ಮುಖಂಡರೇ ಒಬ್ಬನು ಹೆಚ್ಚು, ಒಬ್ಬನು ಕಡಮೆ ಇಲ್ಲೆಂದು ಇವರು ಉತ್ತರ ಕೊಟ್ಟರು. ಒಳಿಕ ಶಾಲೆಗೆ ಬರದಿದ್ದರೆ ಸ್ಕಾಲರ ಇದ್ದವರ ಶಿಷ್ಯವೇತನ ಹೋಗುವದು. ಮಾಫೀ ಇದ್ದವರ ಮಾಫೀ ಹೋಗುವದೆಂದು ಸಾಹೇಬರು ಬದರಿಕ ಹಾಕಿದರು. ಈ ಮಾತ್ರೆಯು ಹುಡುಗರ ಮೇಲೆ ನಡೆಯಲೇ ಇಲ್ಲ ಸ್ಕಾಲರ ಮತ್ತು ಮಾಫಿ ಇದ್ದವರ ಹೆಸರುಗಳನ್ನೂ ಪಿಕೆಟಿಂಗ ಮಾಡಿದಂಥ ನೂರಾರು ಹುಡುಗರ ಹೆಸರನ್ನೂ ತಮಗೆ ತಿಳಿಸಬೇಕೆಂದು ಹೆಡ್ಡಮಾಸ್ತರರಿಗೆ ಸಾಹೇಬರು ಹೇಳಿ, ಹೊಂಟು ಹೋದರು.

ಸಾಯಂಕಾಲದಲ್ಲಿ ವಿದ್ಯಾರ್ಥಿಗಳ ಸಭೆ ಕೂಡಿತು. ಮಂಗಳವಾರ ಏಳು ಹೊಡೆಯುವದರೊಳಗಾಗಿ ಶಾಲೆಗೆ ಹೋಗಬೇಕು. ಕ್ಲಾಸ ಪ್ರಾರಂಭವಾಗುವದರೊಳಗಾಗಿ ಶಾಲೆಯ ಒಳಂಗಳದಲ್ಲಿ ರಾಷ್ಟ್ರಧ್ವಜವನ್ನು ನಿಲ್ಲಿಸಿ, ರಾಷ್ಟ್ರಗೀತವಂದು ಧ್ವಜ ಇಳಿಸಿ, ವರ್ಗಗಳಲ್ಲಿ ಕೂತು ನಿತ್ಯಕ್ರಮದಂತೆ ಅಭ್ಯಾಸ ಸಾಗಿಸಬೇಕೆಂದು ಗೊತ್ತು ಮಾಡಿ ಆ ಪ್ರಕಾರ ನಡೆದರು.

ಪಿಕೆಟಿಂಗ ಮಾಡಿದವರಲ್ಲಿ ಸರಕಾರಿ ಕಾಮದಾರರು, ಕಾಲೇಜದ ಪ್ರೊಫೇಸರರು, ವಕೀಲರು ಸುಖವಸ್ತುಗಳು, ಜಮೀನದಾರ ಇನಾಮದಾರರು ಇವರೇ ಮುಂತಾದವರ ಮಕ್ಕಳಿದ್ದರು. ಕೆಲವರಂತೂ ಡಾಯರೆಕ್ಟರಸಾಹೇಬರಿಗೆ ಕಾಣಿಸುವಂತೆ ಲಟ್ಟಿನ ತುಂಡಿನ ಮೇಲೆ ಇಂಗ್ರೇಜಿಯಲ್ಲಿ ಬಾಯಕಾಟ ಬ್ರಿಟಿಶ ಗುಡ್ಸ (ಇಂಗ್ರೇಜಿ ಅರವಿಗೆ ಬಹಿಷ್ಕಾರ ಹಾಕು) ಎಂದು ಬರೆದದ್ದನ್ನು ಎದೆಗೆ ಹಚ್ಚಿಕೊಂಡಿದ್ದರು. ಸ್ವರಾಜ್ಯ ಸಂಬಂಧವಾದ ಬೇರೆ ಪದಕಗಳಂತೂ ಪ್ರತಿಯೊಬ್ಬ ವಿದ್ಯಾರ್ಥಿಯ ಎದೆಯ ಮೇಲಿರುವದು ಸರ್ವಸಾಮಾನ್ಯವಾಗಿರುತ್ತದೆ

ಕೊಲ್ಹಾಪೂರದಲ್ಲಿ ವಿಲಾಯತಿಯ ಅರಿವೆಯ ಅದ್ಭುತ ಹೋಳಿಯು.

ಮಹಾರಾಜ ಮತ್ತು ರೆಸಿಡೆಂಟರು ಬೆರಗಾದಂಥ ಹೋಳಿಯು.

ಕೊಲ್ಹಾಪೂರದಲ್ಲಿ ರಾಜಾರಾಮ ಕಾಲೇಜದ ಮುಂದೆ ವಿದ್ಯಾರ್ಥಿಗಳು ಪ್ರೊಫೇಸರರ ಹ್ಯಾಟುಗಳನ್ನು ಸುಟ್ಟ ವರ್ತಮಾನವನ್ನು ಹಿಂದಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಅನಂತರ ಆ ನಗರದಲ್ಲಿ ಲೋಕಾದ್ಭುತವೆನಿಸುವಂಥ ಸಂಗತಿ ನಡೆಯಿತು. ಸಾಂಗಲಿಯ ನೂರಿನ್ನೂರು ಸ್ವಯಂಸೇವಕರು ಆದಿತ್ಯವಾರ ಪ್ರಾತಃಕಾಲದ ಮೇಲಿನಿಂದ ಕೊಲ್ಹಾಪೂರಕ್ಕೆ ಬಂದರು. ಇವರು ಊರ ತುಂಬ ನಗರ ಸಂಕೀರ್ತನೆ ತೆಗೆಯುತಕ್ಕವರಿದ್ದರು. ಪೋಲೀಸರಿಗೆ ಈ ವರ್ತಮಾನವು ಮುಂದಾಗಿ ತಿಳಿದಿದ್ದರಿಂದ, ಇವರನ್ನು ಊರೊಳಗೆ ಬಿಡದಂತೆ ಮುಂದಾಗಿ ಸ್ಟೇಶನಕ್ಕೆ ಬಂದು ನಿಂತುಕೊಂಡಿದ್ದರು. ಸ್ವಯಂಸೇವಕರು ಬಂಡಿಯಿಂದಿಳಿದ ಕೂಡಲೆ, ಪೋಲಿಸರು ಇವರನ್ನು ಹುಲಿವೊರಿದು, ನೀವು ಊರೊಳಗೆ ದೇವಿಯ ಗುಡಿ, ಪಂಚಗಂಗೆಯ ಸ್ನಾನ ಮತ್ತು ಒಂದೆರಡು ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಬಹುದು. ಮೋಟಾರ ಲಾರಿಗಳು ಸಿದ್ಧವಿವೆ. ಅವುಗಳಲ್ಲಿ ಕೂತುಕೊಳ್ಳಿರೆಂದರು ಇದಕ್ಕೆ ಆ ಸ್ವಯಂಸೇವಕರು ಒಪ್ಪಲಿಲ್ಲ ನಾವು ನಗರ ಸಂಕೀರ್ತನೆ ಮಾಡುತ್ತಲೇ ಹೋಗತಕ್ಕವರೆಂದು ಸತ್ಯಾಗ್ರಹ ನಡೆಸಿದರು. ಈ ವರ್ತಮಾನವು ಊರಲ್ಲಿ ಕ್ಷಣಮಾತ್ರದಲ್ಲಿ ಹಬ್ಬಿತು. ಸಾವಿರಾರು ಜನರು ಸ್ಟೇಶನಕ್ಕೆ ಬಂದರು ಪೋಲೀಸ ಮತ್ತು ಮಿಲಟರಿ (ದಂಡು) ಬಂತು. ಸ್ವತಃ ಮಹಾರಾಜರೂ ಪೋಲಿಟಿಕಲ ಏಜಂಟರೂ ಬಂದರು. ಏನು ಹೇಳಿದರೂ, ಸ್ವಯಂಸೇವಕರು ಕೇಳದಾದರು ಸುತ್ತಲು ಪೋಲಿಸರೂ ಮಹಾರಾಜರೇ ಮೊದಲಾದವರೂ ನಿಂತದ್ದರಿಂದ, ಅವರು ಬಂದಿವಾನರಾದಂಥ ಅವಸ್ಥೆಗೀಡಾದರು. ಆಗ ಊರ ಜನರ ತಲೆಯಲ್ಲಿ ವಿಲಾಯತಿಯ ಅರಿವೆಯನ್ನು ಕೂಡಿ ಹಾಕಿ, ಪ್ರಚಂಡ ಹೋಳೀ ಮಾಡಬೇಕೆಂಬ ವಿಚಾರ ಬಂತು. ಕೂಡಲೆ ಬಟ್ಟೆಗಳ ರಾಶಿ ಬೀಳಹತ್ತಿತು. ವಂದೇಮಾತರಂದ ಜಯಘೋಷದಲ್ಲಿ ಮಹಾರಾಜ ಮತ್ತು ರೆಸಿಡೆಂಟರ ಮುಂದೆ ಇವುಗಳ ಉರಿಯು ಎದ್ದಿತು. ಇಂದ್ರಾಯ ತಕ್ಷಕಾಯ ಸ್ವಾಹಾಃ ಎಂದು ಪುರಾಣದಲ್ಲಿ ಹೇಳಿದಂತೆ ಆಕಾಶದಲ್ಲಿ ಅನೇಕ ಟೊಪ್ಪಿಗೆಗಳು ಹಾರಿ, ಉರಿಯಲ್ಲಿ ಬೀಳಲಾರಂಭಿಸಿದವು. ಬರೇ ಟೊಪ್ಪಿಗೆಗಳಲ್ಲ. ಮರಾಠಾ ಜನರು ಸುತ್ತುವಂಥ ೧೦-೧೫ ಮೊಳ ಉದ್ದವಾದಂಥ ಪಟಕಾಗಳೂ ಅಗ್ನಿದೇವರಿಗೆ ಅರ್ಪಣವಾದವು ಇದರ ಬೇಗೆ ಊರತುಂಬ ಹಬ್ಬಿತು; ಅಲ್ಲಲ್ಲಿಯ ಜನರು ಕೂಟ ಕೂಟಿಗೆ ನಿಷೇಧದ ಅರಿವೆಗಳನ್ನು ಕೂಡಿಹಾಕಿ, ಅಲ್ಲಲ್ಲಿ ಕಾಮದಹನದಂತೆ ದಹನ ಮಾಡಿದರು. ಮುಂಜಾವಿನಿಂದ ಸಾಯಂಕಾಲದ ತನಕ ಊರ ತುಂಬ ಇದೇ ಉತ್ಸವವವೇ ಉತ್ಸವವು!! ಇಷ್ಟು ಗೊಂದಲಾದರೂ ಮಹಾರಾಜರು ಪ್ರಜರ ತಲೆಯೊಡಿಸಲು ಹುಕುಮು ಮಾಡಲಿಲ್ಲ. ಪೋಲಿಸರೂ ಉಲುಕೋಚಿಯಾಗಲಿಲ್ಲ. ರೆಸಿಡೆಂಟರು ನಿಂತು ಮೋಜು ನೋಡಿದರಲ್ಲದೆ, ಬ್ರಿಟಿಶ ಬಲದ ಉಪಯೋಗ ಮಾಡಲು ಮಹಾರಾಜರಿಗೆ ಹೇಳಲಿಲ್ಲ. ಎಲ್ಲವೂ ಶಾಂತತನದಿಂದಾಯಿತು ಟೊಪ್ಪಿಗೆ ಮತ್ತು ಪಟಕಾ ಸೇರಿ, ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಗೇ ಸುಟ್ಟು ಹೋದವು. ಬೊಕ್ಕನೆತ್ತಿಯವರೆಲ್ಲರೂ ಗಾಂಧೀ ಟೊಪ್ಪಿಗೆ ಹಾಕಿಕೊಂಡರು. ಆಗಿಂದಾಗ ಟೊಪ್ಪಿಗೆ ಹೊಲಕೊಡುವದಾಗಿ, ಸಿಂಪಿಗರಿಗೆ ಜವರಿ ಬೀಸಿತು. ಎತ್ತ ನೋಡಿದತ್ತ ಗಾಂಧಿ ಟೊಪ್ಪಿಗೇ ಟೊಪ್ಪಿಗೆ!! ಮಹಾರಾಜರು ಸಾಂಗಲಿಯಿಂದ ಬಂದ ಪ್ರಭಾತಫೇರಿಯವರನ್ನು ಮೋಟಾರ ಲಾರಿಯಲ್ಲಿ ಕೂಡಿಸಿ, ಪೋಲೀಸ ಬಂದೋಬಸ್ತಿನಲ್ಲಿ ಸಾಂಗಲಿಗೆ ಕಳಿಸಿಕೊಟ್ಟರು. ಇಂಥ ಅಪೂರ್ವ ಉತ್ಸವವು ಕೊಲ್ಹಾಪೂರದಲ್ಲಿಯೇ ಆಯಿತೆಂದು ಹೇಳುವಂತಾಯಿತು.

ವಿದೇಶೀ ವಸ್ತ್ರಗಳನ್ನು ಹೇಗೆ ಬಹಿಷ್ಕರಿಸಬೇಕು.

ಸಂಪೂರ್ಣ ಒಂದು ವರ್ಷದವರೆಗೆ ಅರಿವೆಯನ್ನು ಕೊಳ್ಳಬೇಡಿರಿ. ವಿದೇಶೀ ಅರಿವೆಯನ್ನು ಎಂದಿಗೂ ಕೊಳ್ಳಬೇಡಿರಿ ಆಗ ವ್ಯಾಪಾರಿಗಳು ಎಚ್ಚರಾಗುವರು, ಪರದೇಶಿ ಅರಿವೆಗಳ ವ್ಯವಹಾರವನ್ನು ನಿಲ್ಲಿಸುವರು. ಇನ್ನು ಮೇಲೆ ಪರದೇಶಿ ಅರಿವೆಗಳನ್ನು ತರಿಸಲಿಕ್ಕಿಲ್ಲೆಂದು ವ್ಯಾಪಾರಸ್ಥರು ಪ್ರತಿಜ್ಞೆಯನ್ನು ತಕ್ಕೊಳ್ಳಲಿಕ್ಕೇಬೇಕು.

ಮೊನ್ನಿನ ಯುದ್ಧದಲ್ಲಿ ಪರದೇಶದಿಂದ ಅರಿವೆ ಬರುವದು ಬಂದಾಗಿತ್ತು ಆಗ ಜನರೆಲ್ಲರೂ ಮಿತವ್ಯಯಿಗಳಾಗಿ ತಮ್ಮಲ್ಲಿದ್ದ ಅರಿವೆಗಳಿಂದಲೇ ಕೆಲಸ ಸಾಗಿಸಿದರು. ಹೊಸ ಅರಿವೆಯನ್ನು ಕೊಳ್ಳಲೇ ಇಲ್ಲ.

ಸದ್ಯಕ್ಕೆ ನಾವು ರಣಭೂಮಿಯಲ್ಲಿರುವೆವು. ಒಪ್ಪಂದದ ಮೃಗಜಲವು ಕಾಣಹತ್ತಿದೆ ಪರದೇಶಿ ಅರಿವೆಗಳನ್ನು ಕೊಳ್ಳದೆ, ಇದ್ದ ಅರಿವೆಗಳಲ್ಲಿಯೇ ತೃಪ್ತರಾಗಿರಿ. ಖಾದಿಯು ಸ್ವದೇಶೀ ಅರಿವೆಯು ಸಿಕ್ಕದಿದ್ದರೆ, ಮತ್ತು ನಿಮ್ಮಲ್ಲಿ ಅರಿವೆಯು ಇಲ್ಲ. ಇದ್ದರೆ ಬಹಳ ಸ್ವಲ್ಪ ಅರಿವೆಯನ್ನು ಕೊಳ್ಳಿರಿ. ಹಳೇ ಅರಿವೆಗಳಿಗೆ ಕ್ಯಾಪಿ ಹಚ್ಚಿರಿ. ಆದರೆ ವರ್ಷಕ್ಕೆ ಬೇಕಾದ ಅರಿವೆಗಳ ಎರಡು ಮೂರಾಂಶಕ್ಕಿಂತ ಹೆಚ್ಚಿಗೆ ಕೊಳ್ಳಬೇಡಿರಿ.

ಮೂವತ್ತು ವರ್ಷಗಳ ಹಿಂದೆ ಹಿಂದುಸ್ಥಾನದಲ್ಲಿ ೨೦೦ ಕೋಟಿ ವಾರ ಅರಿವೆ ಬೇಕಾಗುತ್ತಿತ್ತು ಆದರೆ ಈಗ ಹಿಂದುಸ್ಥಾನದಲ್ಲಿ ೪೮೦ ಕೋಟಿ ವಾರ ಅರಿವೆಯು ಸಿದ್ಧವಾಗುವದು. ನಮಗೆ ೫೫೦ ಕೋಟಿ ವಾರ ಅರಿವೆಯು ಬೇಕಾಗುವದು. ಇದನ್ನು ಕಡಿಮೆ ಮಾಡಿ ೪೫೦ ಕೋಟಿ ವಾರ ಅರಿವೆಯಲ್ಲಿ ನಮ್ಮ ಎಲ್ಲ ಕೆಲಸವನ್ನು ಸಾಗಿಸಬೇಕು ಅಂದರೆ ಪರದೇಶದಿಂದ ಬರುವ ಎಲ್ಲ ಅರಿವೆಯನ್ನು ಅಂದರೆ ೨೦೦ ಕೋಟಿ ವಾರ ಅರಿವೆಯನ್ನು ಬಹಿಷ್ಕರಿಸಿದಂತಾಗುವದು.

ಈ ೨೦೦ ಕೋಟಿ ವಾರ ಅರಿವೆಯಲ್ಲಿ ಬ್ರಿಟನ್‌ದಿಂದ ೧೬೦ ಕೋಟಿ ವಾರ ಬರುವದು. ಆದುದರಿಂದ ೪ ವಾರದ ಬದಲು ೨ ವಾರ ಅರಿವೆ ತಕ್ಕೊಂಡರೆ ಗಿರಣಿ ಅರಿವೆಗಳ ಬೆಲೆಯು ಹೆಚ್ಚಾಗಲಾರದು. ಏನೇ ಇದ್ದರೂ ಅರಿವೆಗಳಿಗಾಗಿ ನಾವು ಹೆಚ್ಚು ಖರ್ಚು ಮಾಡತಕ್ಕದ್ದಲ್ಲ. ಗಿರಣಿ ಅರಿವೆಯ ಬೆಲೆಯು ಇದ್ದಕ್ಕಿದ್ದಹಾಗೆ ಉಳಿದರೂ ಅರಿವೆಯನ್ನು ಕೊಳ್ಳತಕ್ಕದ್ದಲ್ಲ.

ಗಿರಣಿಯ ಅರಿವೆಯ ಬೆಲೆ ಏರದೆ ೪ ವಾರದ ಬದಲು ೨ ವಾರ ಅರಿವೆಯನ್ನು ನಾವು ಕೊಂಡರೆ ಒಂದು ನೂರಾಂಶ ಹಣವು ನಮ್ಮ ಕೈಯ್ಯಲ್ಲಿಯೇ ಉಳಿಯುವದು. ನೂರಕ್ಕೆ ೧೫ರಿಂದ ೨೦ರವರೆಗೆ ಕೊಡಬೇಕಾದ ಕಸ್ಟಮ ಡ್ಯೂಟಿಯು ಕೂಡ ತಪ್ಪುವದು. ಈ ಕಸ್ಟಮ ಡ್ಯೂಟಿಯಿಂದ ಸರಕಾರಕ್ಕೆ ೫ರಿಂದ ೧೦ ಕೋಟಿಯ ವರೆಗೆ ಹಾನಿಯು ತಟ್ಟುವದು. ಆ ಹಣವು ನಮ್ಮ ಜನರ ಕೈಯಲ್ಲಿಯೇ ಉಳಿಯುವದು.

ಈ ಬಹಿಷ್ಕಾರವು ಯಶಸ್ವಿಯಾಗಬೇಕಾದರೆ

ನಿಮಗೆ ವೇಳೆ ದೊರೆತಾಗ ಕೆದರುಂಡಿಗೆಯ

ಮೇಲೆ ಅಥವಾ ರಾಟಿಗಳ ಮೇಲೆ ನೂಲು ತೆಗೆಯಿರಿ;

ಅದಷ್ಟು ಖಾದಿಯನ್ನೇ ಉಪಯೋಗಿಸಿರಿ. ನೆಯ್ಯಲಿಕ್ಕೆ ಕಲಿಯಿರಿ. ಇದರಿಂದ ನಿರುದ್ಯೋಗತನವು ಕಡಿಮೆಯಾಗುವದು ಅದಕ್ಕಾಗಿಯೇ ತರುಣರು ಇದನ್ನು ಮಾಡಲೇಬೇಕು

ಕಾರ್ಯದರ್ಶಿ

ಜಿಲ್ಲಾ ಕಾಂಗ್ರೆಸ ಕಮೀಟಿ ಧಾರವಾಡ

ವಿಲಾಯತಿಯ ಗಿರಣಿಗಳಿಗೆ ಬಂದ ಗೋಳು.

ಬಂಗಾರ ಒಳ್ಳೊಳ್ಳೆಯ ಬೆಲೆಗೆ ಮಾರುವಂತೆ ಮಾರಾಟ

ಹಿಂದುಸ್ಥಾನದಲ್ಲಿ ಇಂಗ್ಲಂಡದ ಅರಿವೆಗೆ ಹಾಕಿದ ಬಹಿಷ್ಕಾರವು ಇಂಗ್ಲಿಷ ವರ್ತಕರನ್ನು ಹೌಹಾರಿಸಿ ಬಿಟ್ಟಿರುತ್ತದೆ. ಎಷ್ಟೋ ಗಿರಣಿಗಳು ಬಂದಾಗಿದ್ದು, ದಿನಾಲು ಅವುಗಳಿಗೆ ಒದಗುತ್ತಿರುವ ಭೋಗದ ಕೆಟ್ಟ ಸುದ್ದಿಗಳೇ ಬರುತ್ತವೆ ಅವುಗಳ ಭವಣೆಯನ್ನು ಹೇಳುವದೊಂದು ಪತ್ರವು ಅಹಮದಾಬಾದಿನ ಒಬ್ಬ ಏಜಂಟರಿಗೆ ಬಂದಿದೆ. ಅದು ಆ ಗಿರಣಿಗಳ ದುಃಸ್ಥಿತಿಯನ್ನು ಮುಂದೆ ಕೊಟ್ಟಂತೆ ಹೇಳುತ್ತದೆ

ನಿಮ್ಮ ಬಹಿಷ್ಕಾರವು ಮ್ಯಾಂಚೆಸ್ಟರದಲ್ಲಿ ಯಾವ ಧೂಮ್ರಕ್ಷಕ್ರಿಯನ್ನು ಹಾಕುತ್ತದೆಂಬದನ್ನು ನೀವು ಬಲ್ಲಿರಾ. ಒತ್ತರದಿಂದ ದಿವಾಳಿಗೆ ತರುತ್ತಿರುವದು ಮೂರು ವರ್ಷವಾಯಿತು ಲ್ಯಾಂಕೆಶಾಯರವು ತಲೆಯನ್ನು ಮೇಲೆತ್ತಲು, ನೀರೊಳಗೆ ಮುಣುಗುವವರು ನೀರ ಮೇಲೆ ತಲೆಯೆತ್ತಲು ತಡಪಡಿಸುವಂತೆ, ತಡಪಡಿಸುತ್ತಿರುವದು ಕೆಲವು ಗಿರಣಿಗಳು ತೆರೆದಿರುವವು. ಬಹಿಷ್ಕಾರವು ಇವುಗಳಿಗೂ ಅಂತ್ಯಕಾಲ ತಂದಿದೆ. ಪ್ರತಿಯೊಂದು ಗಿರಣಿಯು ಬ್ಯಾಂಕುಗಳಿಗೆ ಒತ್ತೀ ಬಿದ್ದಿದೆ ಹೆಚ್ಚಿಗೆ ಹಣದೊರೆಯದಷ್ಟು ಒತ್ತಿಯು ರಕಮು ಆಗಿದೆ. ಇಷ್ಟೇ ಅಲ್ಲ; ಪ್ರತಿಯೊಂದು ವಾರದಲ್ಲಿಯೂ ಗಿರಣಿಗಳ ಲಿಲಾವಿನ ಸವಾಲು ಆಗುತ್ತಿರುವದು ಇವುಗಳಿಗೆ ಕಬ್ಬಿಣದ ತುಂಡುಗಳಿಗೆ ಬರುವಷ್ಟು ಬೆಲೆ ಬರುತ್ತಿರುವದು. ಆದ್ದರಿಂದ ಇವನ್ನು ಕೈಗೆ ಬಂದ ಬೆಲೆಗೆ ಮಾರುವರು ಒಂದು ದೊಡ್ಡ ಗಿರಣಿ ೩೦ ಸಾವಿರ ಕದರು, ೧೧೮೦ ಮಗ್ಗ, ಅದರ ನೆಲ ಮತ್ತು ಕಟ್ಟಡ ಸಹಿತವಾಗಿ ೩೧ ಲಕ್ಷಕ್ಕೆ ಮಾರಲ್ಪಟ್ಟಿತು ಐದು ವರ್ಷಗಳ ಹಿಂದೆ ಇದು ನೂರಕ್ಕೆ ಹತ್ತಕ್ಕಿಂತ ಕಡಿಮೆ ಲಾಭ ಕೊಡಲಿಲ್ಲ. ಇದರ ಮೂರು ಕೋಟಿಯ ಬಂಡವಲವೆಲ್ಲ ಹೋಯಿತು. ಡಾಯರೆಕ್ಟರರಿಗಾಗಲಿ, ಶೇರಹೋಲ್ಡರರಿಗಾಗಲಿ ಬಿಂದಾಣೆ ಸಹ ಸಿಗಲಿಲ್ಲ. ನೂರಾರು ಉದಾಹರಣೆಗಳಲ್ಲಿ ಇದೊಂದಾಗಿದೆ. ಕೆಲವು ವರ್ಷಗಳಲ್ಲಿ ಗರ್ಭಶ್ರೀಮಂತರಾಗಿದ್ದಂಥವರು ಇಂದು ದರಿದ್ರನಾರಾಯಣರಾಗಿದ್ದಾರೆ. ದಿವಾಳಿ ಹೊಂದಿದ್ದರಿಂದ ಅನೇಕರು ಆತ್ಮಹತ್ಯ ಮಾಡಿಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಪರಿಸ್ಥಿತಿಯು ಅತ್ಯಂತವಾಗಿ ದುಃಖಮಯವಾಗಿರುತ್ತದೆ."

ಇಂಗ್ಲಂಡದಂತಾಗದಿದ್ದರೂ, ಹಿಂದುಸ್ಥಾನವೂ ಹತ್ತಿಗೆ ಬಂದಿದೆ

ಬಹಿಷ್ಕಾರವೇನು ಮಾಡೀತೆಂದು ಹೆಮ್ಮೆಗೆ ಬಂದಿದ್ದ ಇಂಗ್ರೇಜಿ ವ್ಯಾಪಾರಸ್ಥರೂ, ಆಳರಸರೂ ಈಗ ನಿಚ್ಚಳಾಗಿ ಕಣ್ದೆರೆದು ನೋಡುತ್ತಿದ್ದಾರೆ. ವಿಲಾಯತಿಯ ವರ್ತಕರು ತಮ್ಮ ಮುಂದೆ ಪರ್ವತಪ್ರಾಯವಾಗಿ ಬಿದ್ದಿರುವ ಬಟ್ಟೆಗಳ ಪೆಟ್ಟಿಗೆಗಳನ್ನು ಮುಂಬಯಿಗೆ ಹೊತ್ತು ಹಾಕುತ್ತಿದ್ದಾರೆ ಮಾರಾಟವಿಲ್ಲ; ಕಳಿಸಬೇಡಿರೆಂದು ತಾರಿನ ಮೇಲೆ ತಾರು ಕೊಟ್ಟರೂ ಕಳಿಸುತ್ತಿದ್ದಾರೆ. ಮುಂಬಯಿ ಬಂದರದಲ್ಲಿ ೯೦ ಸಾವಿರ ಪೆಟ್ಟಿಗೆಗಳು ದಿಕ್ಕಿಲ್ಲದೆ ಬಿದ್ದಿದ್ದು, ಅವನ್ನು ತೆಗೆದುಕೊಂಡು ಹೋಗುವಂಥವರ ಗತಿಯೇ ಇಲ್ಲ ಏಕೆಂದರೆ- ವಿಲಾಯತಿಯ ಜವಳಿಯ ವ್ಯಾಪಾರ ಮಾಡಬಾರದೆಂದು ವರ್ತಕರು ಮಾರ್ಕೆಟಿಗೇ ಬೀಗ ಹಾಕಿದ್ದಾರೆ. ಇಂಗ್ಲಂಡದಂತೆ ಮುಂಬಯಿ ಗಿರಣಿಗಳಿಗೂ ವಿಪತ್ತು ಬಂದಿತ್ತು. ಖಾದಿಯ ಕೂಡ ಸ್ವದೇಶಿ ಗಿರಣಿಗಳ ಅರಿವೆಯನ್ನು ಕೊಳ್ಳಬಹುದೆಂದು ಕಾಂಗ್ರೆಸದ ಅಧ್ಯಕ್ಷರಾದ ಸರದಾರ ಪಟೇಲರು ಪ್ರಸಿದ್ಧ ಮಾಡಿದ್ದರಿಂದ ಇವುಗಳಿಗೆ ಹೋದ ಜೀವ ಬಂದಿತು ಇಲ್ಲವಾದರೆ ೧ನೆಯ ಅಗಸ್ಟದಿಂದ ಅನೇಕ ಗಿರಣಿಗಳು ಬಂದಾಗಿ ಸಹಜವಾಗಿ ಒಂದು ಲಕ್ಷ ಕೂಲಿಕಾರರು ನಿರುದ್ಯೋಗಿಗಳಾಗುತ್ತಿದ್ದರು. ವಿಲಾಯತಿಯ ನೂಲಿನಿಂದಾಗುವ ಬಟ್ಟೆಗಳನ್ನು ಕೊಳ್ಳಬಾರದೆಂದು ಕಾಂಗ್ರೆಸದ ಆಜ್ಞೆಯಾಗಿರುವದರಿಂದ, ಇಂಥ ಗಿರಣಿಗಳು ಮಾತ್ರ ತತ್ತರಿಸುವವು ಬಹುತೇಕವಾಗಿ ಇವು ಸಾಹೇಬರಿಂದ ನಡೆಸಲ್ಪಡುತ್ತವೆ.

ಸ್ವತ ಲಾರ್ಡ ಅಯರ್ವಿನಸಾಹೇಬರ ಕಬೂಲಿಯು.

ಉತ್ತರ ಹಿಂದುಸ್ಥಾನದ ಜಮೀನದಾರರು ಲಾರ್ಡ ಅಯರ್ವಿನಸಾಹೇಬರ ಕಡೆಗೆ ಶಿಷ್ಟಮಂಡಲ ತಕ್ಕೊಂಡು ಹೋಗಿದರು. ಇದಕ್ಕೆ ಉತ್ತರ ಕೊಡುವಾಗ ಲಾರ್ಡ ಅಯರ್ವಿನಸಾಹೇಬರು ಹಿಂದುಸ್ಥಾನದ ವ್ಯಾಪಾರವು ಕಾಯದೆಭಂಗದ ಕೋಲಾಹಲದಿಂದ ಮುಗ್ಗಿದೆಂದು ಒಪ್ಪಿದ ಭಾಷಣ ಮಾಡಿದ್ದಾರೆ. ಸಾಹೇಬರು ಅಂದದ್ದೇನಂದರೆ-

ಬೇರೆ ದೇಶಗಳ ವ್ಯಾಪಾರವನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದಕ್ಕೆ ನಾವೇನೂ ಮಾಡಲಾರೆವು. ಏಕೆಂದರೆ ಇದಕ್ಕೆ ಅಲ್ಲಲ್ಲಿಯ ಪರಿಸ್ಥಿತಿಯೇ ಕಾರಣ ನಮ್ಮ ಹಿಂದುಸ್ಥಾನದ ಮಾರ್ಕೆಟೂ ನುಹಕ್ಕದ್ದಾಗಿರುತ್ತದೆ ಈ ದೇಶದಲ್ಲಿಯ ಆಂದೋಲನವು ಜಗತ್ತಿನಲ್ಲಿ ಹೆಚ್ಚಿನದಾಗಿ ಕೂತರೆ- ಪರಿಣಾಮವು ಅತ್ಯಂತವಾಗಿ ಅನಿಷ್ಟಕಾರಕವಾಗುವದು, ಈಗಿನ ಗೊಂದಲವು ಕಾಯದೆಭಂಗದಿಂದ ಉತ್ಪನ್ನವಾದದ್ದಿರುತ್ತದೆ ಇದರ ಪರಿಣಾಮವು ದೇಶದ ತುಂಬ ಎಲ್ಲಾ ಸ್ಥಳಗಳಲ್ಲಿಯೂ ಒಡೆದು ಕಾಣಿಸುತ್ತದೆ ಎಲ್ಲ ತರದ ವ್ಯಾಪಾರಗಳಲ್ಲಿಯೂ ಜನರ ವಿಶ್ವಾಸ ಹಾರಿ ಹೋಗಿದೆ. ಆದ್ದರಿಂದ ಯಾರೂ ಹೊಸ ವ್ಯವಹಾರ ಮತ್ತು ಕರಾರು ಮಾಡದಾಗಿದ್ದಾರೆ. ಚಿಕ್ಕ ದೊಡ್ಡ ಅಂಗಡಿಕಾರರು ಸರಕು ಸಂಗ್ರಹಿಸದಾಗಿದ್ದಾರೆ ಮುಂಬಯಿಯ ಗಿರಣಿಯವರು ತಮ್ಮ ಸಗಟು ಮಾರಲಾರದಾಗಿದ್ದಾರೆ ಅನೇಕ ಗಿರಣಿಗಳು ಅರಳೆಯನ್ನು ಕೊಳ್ಳದಾಗಿವೆ ಇದರ ಪರಿಣಾಮವು ಅರಳೆಯ ವ್ಯಾಪಾರಸ್ಥರ ಮೇಲೆ ಮಾತ್ರವಲ್ಲ ರೈತರ ಮೇಲೂ ಆಗಿರುತ್ತದೆ. ವ್ಯಾಪಾರದಲ್ಲಾದ ಹಾನಿ ಮತ್ತು ಜನರು ಉದ್ಯೋಗವಿಲ್ಲದೆ ಕೂತು, ಪದಾರ್ಥಗಳನ್ನು ಕೊಳ್ಳುವ ತ್ರಾಣ ಹೋದ್ದರಿಂದ, ಧಾನ್ಯ ಮತ್ತು ಒಕ್ಕಲತನದ ಬೇರೆ ಪದಾರ್ಥಗಳ ಬೆಲೆಯು ಕಡಿಮೆಯಾಗಿ ಹೋಗಿದೆ

ಕಾಯದೆಭಂಗದಿಂದ ಇಂಗ್ಲಂಡ ಮತ್ತು ಹಿಂದುಸ್ಥಾನದ ವ್ಯಾಪಾರವು ಹನ್ನೊಂದು ತಾಸಿಗೆ ಬಂದಿದೆಂದು ಹೇಳುವದಕ್ಕಿಂತ, ಹಿಂದುಸ್ಥಾನವು ಬೇಡುವಂಥ ಸ್ವರಾಜ್ಯ ಸ್ವಾತಂತ್ರ್ಯ ಕೊಡದ್ದಕ್ಕಾಗಿ ಒಂದರ ಹಿಂದೊಂದರಂತೆ ಈ ಅನರ್ಥ ಪರಂಪರೆಯುಂಟಾಗಿರುತ್ತದೆಂದೇಕೆ ಒಪ್ಪಬಾರದು ?

ಬಹಿಷ್ಕಾರ·

ಕಾಂಗ್ರೆಸದವರು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಬೇಕು.

ಈ ವಾರವು ಕೌನ್ಸಿಲ ಮತ್ತು ಅಸೆಂಬ್ಲಿಗಾಗಿ ಉಮೇದವಾರರಾಗುವಂಥವರಿಗೆ ದೊಡ್ಡ ಪರ್ವಣಿಯಾಗುವದು. ಕಾಂಗ್ರೆಸದಲ್ಲಿ ಸಂದೇಹರಾಯರಾಗಿರುವಂಥವರಿಗೆ ಅದರ ಆಶೆಯು ಇನ್ನೂ ಬಿಟ್ಟಿರುವದೇ ಇಲ್ಲ. ಇಂಥವರಿಗೆ ಅಂಜನ ಹಾಕಲು ಒಂದು ಠರಾವು ಮಾಡುವದು ಕಾಂಗ್ರೆಸದ ವರ್ಕಿಂಗ ಕಮೀಟಿಯವರಿಗೆ ಅತ್ಯಗತ್ಯವಾಯಿತು. ಎರಡು ದಿವಸಗಳ ಹಿಂದೆ ಮುಂಬಯಿಯಲ್ಲಿ ವರ್ಕಿಂಗ ಕಮೀಟಿ ಕೂಡಿತು. ಈ ಕಮೀಟಿಯಲ್ಲಿ ಕಾಂಗ್ರೆಸ ಪಕ್ಷದವರು ಕೌನ್ಸಿಲ ಅಥವಾ ಅಸೆಂಬ್ಲಿಗೆ ಉಮೇದವಾರರಾಗಬಾರದೆಂದು ನಿರ್ಣಯ ಮಾಡಿದ್ದಾರೆ. ಕಾಂಗ್ರೆಸದ ಉಮೇದವಾರಿ, ಅದರ ಚುನಂವಣೆ, ಮತದಾರರ ಭೇಟಿ ಬೇಡಿಕೆ, ಪೋಲಿಂಗ ಸ್ಟೇಶನಕ್ಕೆ ಹೋಗುವ ಓಡಾಟ ಇವುಗಳಲ್ಲಿ ವ್ಯರ್ಥವಾಗಿ ಕಾಲಕಳೆಯದೆ, ಈಗಿನ ಚಳವಳಿಯನ್ನು ಹೆಚ್ಚಾಗಿ ಬಲಪಡಿಸಿ, ಸ್ವರಾಜ್ಯ ಸ್ವಾತಂತ್ರ್ಯದ ದಾರಿಯನ್ನು ಸನಿಯ ಮಾಡಬೇಕೆಂದು ಜಾಹೀರ ಮಾಡಿದ್ದಾರೆ ಇಷ್ಟೇ ಅಲ್ಲ; ಯಾರಾದರೂ ಉಮೇದವಾರರಿಗೆ ನೇರವಾಗಿ, ಅವರ ದಸೆಯಿಂದ ವೋಟಗಳನ್ನು ಕೂಡಿಸಿ ಕೊಡಲುದ್ಯುಕ್ತರಾದರೆ- ಶಾಂತ ಮತ್ತು ಸಾತ್ವಿಕ ವೃತ್ತಿಯಿಂದ ಪಿಕೆಟಿಂಗ ಮಾಡಿ, ಮತದಾರರು ಪೋಲಿಂಗ ಸ್ಟೇಶನಕ್ಕೆ ಹೋಗದಂತೆಯೂ ಮಾಡಬೇಕೆಂದಿದ್ದಾರೆ. ಕಾಂಗ್ರೆಸದ ಆಜ್ಞೆಯನ್ನು ಮೂರು ಮನೆಯ ಹಳ್ಳಿ ಸಹ ಪಾಲಿಸುತ್ತದೆ. ಉಮೇದವಾರರು ವೋಟು ಕೇಳಲಿಕ್ಕೆ ಬಂದೇ ಬರುವರು. ಏಕೆಂದರೆ ಭಕ್ಷ್ಯಗಾರರಿಗೆ ದಶ ದಿಕ್ಕುಗಳು ತೆರೆದಿರುತ್ತವೆ. ಇವರು ತಮ್ಮಲ್ಲಿಗೆ ಬಂದಾಗ, ನಾವು ವೋಟು ಕೊಡುವದಿಲ್ಲ ನೀವು ರಾಜೀನಾಮೆ ಕೊಡಿರೆಂದು ಮಂಗಲಾರುತಿ ಮಾಡಿ ಕಳಿಸಬೇಕು ಕುಲಾಭಿಮಾನ, ಜನಾಭಿಮಾನ ಬಿಟ್ಟು ದೇಶಾಭಿಮಾನವನ್ನು ತೋರಿಸುವದಕ್ಕೆ ಇದೊಂದು ಪರೀಕ್ಷೆಯ ಕಾಲವೇ ಆಗಿರುತ್ತದೆ·

ಶ್ರೀ ಬಾಮಣಗಾವಕರರ ದಸ್ತಗಿರಿ.

ಮಾರವಾಡಿಯು ಯುದ್ಧ ಮಂಡಲದ ಸೇನಾಪತಿಯಾದನು.

ಬಳ್ಳಾರಿಯಲ್ಲಿ ಕೂಡಿದ ವೀರಶೈವ ಮಹಾಸಭೆಯಲ್ಲಿ ಮಹಾದೇವಸ್ವಾಮಿ ಎಂದು ಉಪನಾಮ ಪಡೆದ ವರ್‍ಹಾಡದ ಶ್ರೀ ನಾರಾಯಣ ರಾವ. ಲಿಂಗ ಬಾಮಣಗಾವಕರರು ವನಗಾವಲದ ಸತ್ಯಾಗ್ರಹದ ಮುಖಂಡರಾಗಿದ್ದು, ಕಾಯದೆಭಂಗ ಮಾಡಲು ಅಕೋಟ ಗ್ರಾಮಕ್ಕೆ ಹೋಗತಕ್ಕವರಿದ್ದರು ಆದರೆ ಪೋಲೀಸರು ಇವರನ್ನು ಉಮರಾವತಿಯಲ್ಲಿ ಹಿಡಿದರು ಇವರು ತಮ್ಮ ಸ್ಥಳದಲ್ಲಿ ಶ್ರೀ ರಾವ ಸುರಜಾಮಲ್ಲಜಿಯವರನ್ನು ಮುಖ್ಯ ನಾಯಕನಾಗಿ ನೇಮಿಸಿದ್ದಾರೆ.

ಶ್ರೀ. ದಾಬಡೆ ನಾಯಕರ ಪ್ರಕೃತಿಯು.

ಶ್ರೀ. ದಾಬಡೆ ನಾಯಕರು ತುರಂಗದಲ್ಲಿ ಆ ಪೌಂಡು ಇಳಿದಿದ್ದಾರೆ. ರಕ್ತಾಭಿಸರಣವು ನೆಟ್ಟಗಿಲ್ಲ. ಆಸ್ಪತ್ರಿಯಲ್ಲಿದ್ದಾರೆ. ಡಾಕ್ಟರರು ಹೆಚ ಕಾಳಜಿ ತಕ್ಕೊಳ್ಳಬೇಕೆಂದು ಅವರನ್ನು ಕಾಣಲಿ ಹೋಗಿ ಬಂದ ಡಾಕ್ಟರ ಕೊಕಟನೂರ ಸವಣೂ ಮೊದಲಾದವರ ಮತವಾಗಿದೆ·

ವಿವಿಧ ವಿಷಯಗಳು-

ಆರ್ಡಿನನ್ಸದ ದಬ್ಬಾಳಿಕೆಗಾಗಿ ಮಹಾತ್ಮರ ಯಂಗ ಇಂಡಿಯಾ ಮತ್ತು ನವಜೀವನದ ಮುದ್ರಾಲಯ ಬಂದಾಯಿತು. ಕಾಯದೆಭಂಗ ಮಾಡಿ, ಪುನಃ ಪತ್ರಗಳನ್ನು ತೆಗೆದದ್ದಕ್ಕಾಗಿ ಸರಕಾರದವರು ಮುದ್ರಾಲಯವನ್ನು ಜಪ್ತ ಮಾಡಿದರು. ಮುದ್ರಾಲಯದ ಬಂಡವಲ ೬೦ ಸಾವಿರ ಸರಕಾರದವರು ಇದನ್ನು ಲಿಲಾವಿಗೆ ಹಚ್ಚಿದರೆ- ಯಾರೂ ಸವಾಲು ಮಾಡಬಾರದೆಂದು ಅಹಮದಾಬಾದಿನ ಮುದ್ರಾಲಯ ಸಂಘದವರು ಠರಾವು ಮಾಡಿದ್ದಾರೆ ಮುದ್ರಾಲಯ ಬಂದಾದ ಬಳಿಕ ಇವನ್ನು ಸ್ಟಾಯಕೋಸ್ಟ್ಯೈಲ ಮೇಲೆ ತೆಗೆದ ಪತ್ರಿಕೆಗಳನ್ನು ಮುಂಬಯಿಯಲ್ಲಿ ಮಾರಕೊಡಗಿದರು. ನೂರಾರು ಹುಡುಗರು ಇವನ್ನು ಮಾರುತ್ತಿದ್ದರು ಅಂಗಡಿಗಳಲ್ಲಿಯೂ ಮಾರುತ್ತಿದ್ದರು. ಪೋಲಿಸರು ಇವೆಲ್ಲ ಪ್ರತಿಗಳನ್ನು ಜಪ್ತ ಮಾಡಿದರು.

ಮ್ಯಾಂಚೆಸ್ಟರದ ಪ್ರತಿನಿಧಿ ಪಾರ್ಲಮೆಂಟಿನ ಮೆಂಬರರಾದ ಸಂಡ್ಯಾಮಸಾಹೇಬರು ಕೂಲಿಕಾರ ಪಕ್ಷದ ಕೆಲ ಮೆಂಬರರು ಜನರಿಂದ ಲಂಚ ತೆಕ್ಕೊಂಡು, ಅವರ ಬಿಲ್ಲುಗಳನ್ನು ಪಾಸ ಮಾಡುತ್ತಾರೆಂದೂ, ದುಂದು ಶರೆ ಕುಡಿದು ಸಭೆಯಲ್ಲಿ ಬೀಳುತ್ತಾರೆಂದೂ ಆರೋಪ ಹೊರಿಸಿದ ಭಾಷಣ ಮಾಡಿದ್ದಾರೆ. ಈ ಬಗ್ಗೆ ಮಂತ್ರಿ ಮ್ಯಾಕಡೋನಾಲ್ಡ ಸಾಹೇಬರು ವಿಚಾರ ಮಾಡಲು- ಇವರಿಗೆ ಸಮನ್ಸು ಮಾಡಿ ಕರೆದಿದ್ದಾರೆ ನನ್ನ ಭಾಷಣದಲ್ಲಿಯ ಕೆಲವು ವಾಕ್ಯಗಳನ್ನು ತಕ್ಕೊಂಡಿದ್ದಾರೆಂದು ಸಂಡಾಮ ಸಾಹೇಬರು ಆತ್ಮಸಮರ್ಥನ ಮಾಡಿಕೊಂಡಿದ್ದಾರೆ

ಕೊಲ್ಹಾಪೂರದಲ್ಲಿ ರಾಜಾರಾಮ ಕಾಲೇಜದ ಎದುರಿನಲ್ಲಿಯೇ ೪೦೦-೫೦೦ ಹುಡುಗರು ಪ್ರಚಂಡ ಜಯಘೋಷದಲ್ಲಿ ವಿಲಾಯತಿಯ ಅರಿವೆಯನ್ನು ಅಗ್ನಿ ನಾರಾಯಣನಿಗೆ ಅರ್ಪಿಸುವ ಕೆಲಸ ನಡೆಸಿದ್ದರು. ಸಾವಿರಾರು ಜನರು ಮನೆ, ಗಿಡ, ಮಾಳಿಗೆ ಮತ್ತು ಬೀದಿಗಳಲ್ಲಿ ನಿಂತು, ಈ ಸಂಭ್ರಮ ನೋಡುತ್ತಿದ್ದರು ಆಗ ಪ್ರೊಫೆಸರ ದ್ವಯರಾದ ಫಡಕೆ ಮತ್ತು ಶಿಂದೆಯವರು ಹ್ಯಾಟ ಹಾಕಿಕೊಂಡು ಅಲ್ಲಿಗೆ ಬಂದರು ವಿದ್ಯಾರ್ಥಿಗಳು ವಿನಯದಿಂದ ಇವರ ಹ್ಯಾಟಗಳನ್ನು ಇಸಗೊಂಡು, ಇವರ ಕಯ್ಯಿಂದಲೇ ಇವನ್ನು ಆ ಹೋಮದಲ್ಲಿ ಹಾಕಿಸಿದರು. ಆಗ ವಂದೇ ಮಾತರಮ ಮತ್ತು ಗಾಂಧಿಯವರ ಹೆಸರಿನ ದಶದಿಕ್ಕುಗಳಡರುವಂತೆ ಜಯಘೋಷವಾಯಿತು.

ಹೊಸ ಅಮೀರ ನಾದಿರಖಾನರು ಬಚ್ಚಾಸಾಕುವಿಗೆ ಕ್ಷಮೆ ಕೊಡುತ್ತೇನೆಂದು ವಚನ ಕೊಟ್ಟು, ವಚನಭ್ರಷ್ಟರಾಗಿ ಆತನನ್ನು ಕೊಲ್ಲಿಸಿದರೆಂಬ ಕನಸು, ಆತನ ಕುಲದವರಾದ ಕೋಡಿಮನ್ನರೆಂಬವರಲ್ಲಿದ್ದು ಆ ಬೆಂಕೆಯು ಒಳಗಿಂದೊಳಗೆ ಹೊತ್ತುತ್ತಿತ್ತು. ಕಾಬೂಲದ ಮೇಲೆ ದಂಡೆತ್ತಿ ಹೋಗಲು ಸಾಕಷ್ಟು ಸಾಮರ್ಥ್ಯ ಬಂದಿದೆಂದು ಕಂಡು ಒಂದು, ಇವರು ಕಾಬೂಲದ ಮೇಲೆ ದಂಡೆತ್ತಿ ಹೋದರು. ಅದರ ಬಾಗಿಲದಲ್ಲಿಯೇ ಯುದ್ಧವಾಯಿತು ನಾದಿರಖಾನರ ಖಜೀನಿಯಲ್ಲಿ ದ್ರವ್ಯವಿರದ್ದರಿಂದ, ಸೈನಿಕರು ಸಂಬಳವಿಲ್ಲದೆ ಕೂತಿದ್ದರು. ಈ ಸಮಯ ಸಾಧಿಸಿ, ಅವರು ಕುಡಿಮನ್ನರ ಮೇಲೆ ಕಯ್ಯೆತ್ತಲಿಲ್ಲ. ಆದರೆ ಘಜನಿಯ ಸೈನಿಕರು ನಾದಿರಖಾನರ ನೆರವಿಗೆ ಬಂದು, ಕೊಡಮಾನಿಯವರನ್ನು ಸೋಲಿಸಿದರೆಂದು, ಒಂದಕ್ಕೊಂದು ವಿರುದ್ಧವಾದ ವರ್ತಮಾನಗಳು ಬಂದಿರುತ್ತವೆ.

ಸಾತಾರೆಯ ಕುಲಕರ್ಣಿ ಉಪನಾಮದ ಓರ್ವ ವಿದ್ಯಾರ್ಥಿಯು ಕಾಯದೆಭಂಗದಲ್ಲಿ ಸಿಕ್ಕು ಯರವಡೆಯಲ್ಲಿ ಬ್ರಿಟಿಶ ಸರಕಾರದ ಅತಿಥಿಯಾಗಿದ್ದಾನೆ. ಈತನಿಗೆ ತಂದೆಯು ಬರೆದಂತೆ ಒಂದು ಪತ್ರ ಬಂತು. ಅಪ್ಪಾ ಮಗನೇ ನೀನು ಸರಕಾರದ ಕ್ಷಮೆ ಬೇಡಿಕೊಳ್ಳು. ಅಂದರೆ ಕಾಲೇಜದಲ್ಲಿ ಓದುವಿ ಮತ್ತು ಟರ್ಮ ಸಿಗುವದು ಎಂಬದಾಗಿ ಕಕ್ಕುಲಾತಿಯಿಂದ ಉಪದೇಶ ಮಾಡಿದಂತೆ ಆ ಪತ್ರದ ಒಕ್ಕಣಿಕೆಯಾಗಿತ್ತು ಜೇಲರರು ಆನಂದದಿಂದ ಈ ಪತ್ರವನ್ನು ಕುಲಕರ್ಣಿಯ ಕಯ್ಯಲ್ಲಿ ಕೊಟ್ಟರು. ಇದನ್ನು ನೋಡಿ ಈತನು ಆಶ್ಚರ್ಯಚಕಿತನಾದನು ತನ್ನ ತಂದೆಯು ಸ್ವರ್ಗಸ್ಥನಾಗಿದ್ದಾನೆ ಕೃತಕ ಪತ್ರವೆಂದನು ಆಗ ಜೇಲರಸಾಹೇಬರ ಮೋರೆ ಹೇಗಾಗಿರಬಹುದು?

ಖಾದೀ ಮತ್ತು ಸ್ವದೇಶಿಯ ಪ್ರಸಾರದಿಂದ ಸ್ತ್ರೀಪುರುಷರು ಒಳ್ಳೇ ಸೊಗಸುಗಾರಿಕೆಯಿಂದ ಉಡುವ ಕೊಯಂಬತ್ತೂರಿನ ಪತ್ತಲಗಳಿಗೆ ಬೇಡಿಕೆಗಳೇ ಅಪರೂಪವಾಗಿವೆ. ಇದ್ದರಿಂದ ಈ ಕೆಲಸ ಮಾಡುತ್ತಿರುವಂಥ ಹತ್ತು ಸಾವಿರ ನೆಯಕಾರರು ಕೆಲಸವಿಲ್ಲದೆ ಕೂತಿದ್ದಾರೆ. ಕೊಯಂಬತ್ತೂರಿನಂತೆ ಸೇಲಮದಲ್ಲಿ ವಿಲಾಯತಿಯ ನೂಲಿನಿಂದ ಧೋತರಗಳಾಗುತ್ತವೆ ಇವಕ್ಕೂ ಗಿರಾಕಿ ಇಲ್ಲದ್ದರಿಂದ ಸಾವಿರಾರು ಜನರು ನಿರುದ್ಯೋಗಿಯಾಗಿದ್ದಾರೆ. ಈ ಕೆಲಸವಿಲ್ಲದಾದರೆ- ಸ್ವದೇಶಿ ನೂಲಿನಿಂದ ಧೋತರ ಶೀರೆಗಳನ್ನೇಕೆ ನೇಯಬಾರದು?

ಇಜಿಪ್ತದ **ಸುಲ್ತಾನರು ಸುಲ್ತಾನಶಾಹಿಯಂತೆ** ರಾಜ್ಯಕಾರಭಾರ ಪ್ರಾರಂಭಿಸಿ, ಸಭಾಬಂದಿ, ದಸ್ತಗಿರಿ, ಶಿಕ್ಷೆ ಮತ್ತು ಗೋಳಿಬಾರು ಮುಂತಾದ ದಬ್ಬಾಳಿಕೆ ನಡೆಸಿದ್ದರಿಂದ, ಅದನ್ನು ಪ್ರತಿಬಂಧಿಸಲು ಹಿಂದುಸ್ಥಾನದ ಗಾಂಧಿ ತತ್ವದಂತೆ ಅಸಹಕಾರ ಮತ್ತು ಕಾಯದೆಭಂಗ ಮಾಡಿ, ಕರಕಂದಾಯ ಕೂಡ ಕೊಡಬಾರದೆಂಬ ಚಳವಳಿ ಪ್ರಾರಂಭಿಸುವ ಏರ್ಪಾಡು ಮಾಡುತ್ತಲಿದ್ದಾರೆ.

ರತ್ನಾಗಿರಿ ಜಿಲ್ಹೆಯ ಸ್ಕೂಲಬೋರ್ಡಿನವರು ಇಬ್ಬರು ಶಿಕ್ಷಕರನ್ನು ಸುಪರವಾಯಜರ ಮಾಡಿ, ಕೆಲ ಮಾಸ್ತರರ ವರ್ಗಾವರ್ಗಿ ಮಾಡಿದರು. ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಈ ಬಡತಿ ಮತ್ತು ವರ್ಗಾವರ್ಗಿಯು ಸಮ್ಮತವಾಗಲಿಲ್ಲ. ಇಬ್ಬರ ಜಗಳವು ನಿರ್ಣಯಕ್ಕಾಗಿ ಡಾಯರೆಕ್ಟರಸಾಹೇಬರ ತನಕ ಹೋಯಿತು. ಡಿ|| ಎಲ್|| ಬಿಗೆ ಸ್ಕೂಲಬೋರ್ಡಿನ ವಿರುದ್ಧ ತಕರಾರು ಕೇಳಲಿಕ್ಕೆ ಅಥವಾ ಅದರ ಹುಕುಮು ತಿರುಗಿಸಲಿಕ್ಕೆ ಅಧಿಕಾರವಿಲ್ಲೆಂದು ಸಾಹೇಬರು ನಿರ್ಣಯ ಹೇಳಿದ್ದಾರೆ.

ನಾಗಪೂರದ ಗವ್ಹರ್ನರಸಾಹೇಬರು ವಿಲಾಯತಿಗೆ ಹೋದಾಗ ಸರ ಶಾಂಬೆಯವರು ಆಕ್ಟಿಂಗ ಗವ್ಹರ್ನರರಾಗಿದ್ದರು. ಇವರ ತರುವಾಯ ಈಗ ಬ್ರಹ್ಮದೇಶದಲ್ಲಿ ಹಿಂದೀ ಗೃಹಸ್ಥರಾದ ಮಾಂಗ ಗಾಯಿ ಇವರಿಗೆ ಆಕ್ಟಿಂಗ ಕೆಲಸ ದೊರೆತಿದೆ. ಗವ್ಹರ್ನರರಾದ ಸರ ಚಾರ್ಲ್ಸ ಇನ್ನೆಸಸಾಹೇಬರು ಪ್ರಕೃತಿಯ ದೆಸೆಯಿಂದ ವಿಲಾಯತಿಗೆ ಹೋಗುವರು. ಸರ ಮಾಂಗ ಗಾಯಿಯವರು ಗವ್ಹರ್ನರರಾಗುವರು.

ಪುಣೆಯಲ್ಲಿ ರಾಷ್ಟ್ರೀಯ ಸಪ್ತಾಹ ಪ್ರಾರಂಭವಾಗುವ ದಿವಸ ಒಂದು ಸಾವಿರ ಸ್ತ್ರೀಯರು ಪಟ್ಟಣದ ಬೇರೆ ಬೇರೆ ಭಾಗಗಳಲ್ಲಿ ನಗರ ಸಂಕೀರ್ತನೆ ಮಾಡಿದ್ದಾರೆ.

ಹಿರೇಕೆರೂರ ತಾಲೂಕಿಗೆ ಸೇರಿದ ರಟ್ಟಿಹಳ್ಳಿ ಗ್ರಾಮದಲ್ಲಿ ಅದರ ಸುತ್ತಲಿರುವ ಮಾಸೂರ, ಬನ್ನಿಹಳ್ಳಿ, ಮಳಗಿ, ಶಿದ್ದಾಪೂರ, ಬಡಾ ಸಂಗಾಪೂರ, ಮತ್ತು ರಟ್ಟಿಹಳ್ಳಿಯಲ್ಲಿರುವ ಸರಕಾರೀ ಅಡವಿಗಳಲ್ಲಿರುವ ಹುಲಬನ್ನಿಯ ಸವಾಲು ಮಾಡಲಿಕ್ಕೆ ಮಾಮಲೇದಾರರು ಹೋದರು. ಅಲ್ಲಿಯ ತರುಣರು ಪಿಕೆಟಿಂಗ ಮಾಡಿದ್ದರಿಂದ, ಬೇರೆ ಬೇರೆ ಊರುಗಳಿಂದ ಬಂದಿದ್ದ ರೈತರು ಸವಾಲು ಮಾಡದೆ, ಹಾಗೇ ಹೊಂಟು ಹೋದರು. ತಮಗೆ ಯಶ ಬಂದ ಬಗ್ಗೆ ತರುಣರು ಆನಂದಪಟ್ಟಿದ್ದು, ತಮಗೆ ಈ ಕೆಲಸದಲ್ಲಿ ಸಹಾಯ ಮಾಡಿದವರಿಗೆ ಇವರು ಕೃತಜ್ಞರಾಗಿದ್ದಾರೆ.

ಸಿಂಧ ಪ್ರಾಂತದಲ್ಲಾದ ಜಲಪ್ರಳಯದಿಂದ ಪ್ರಜರ ಒಂದು ಕೋಟಿಯ ಹಾನಿಯಾಗಿದೆ. ರಿಲೀಫ ಫಂಡು ಕೂಡಿಸುತ್ತಿದ್ದಾರೆ. ಕಾಂಗ್ರೆಸದ ಸ್ವಯಂಸೇವಕರು ಕಾಯದೆಭಂಗ ಮಾಡುವದನ್ನು ನಿಲ್ಲಿಸಿ, ಅನಾಥರಾದಂಥವರ ಸಹಾಯಕ್ಕೂ ಪ್ರಾಣರಕ್ಷಣೆಗೂ ಟೊಂಕಕಟ್ಟಿ ಹಗಲಿರುಳು ದುಡಿಯುತ್ತಿದ್ದಾರೆ.

ನಾಸಿಕ ಪಟ್ಟಣಕ್ಕೆ ಗವ್ಹರ್ನರಸಾಹೇಬರು ಬರುವರು. ಅವರಿಗೆ ಮಾನಪತ್ರ ಕೊಡಬೇಕೆಂದು ಕೆಲ ರಾಜನಿಷ್ಠರು ಮುಂಗಾಲ ಪಟಕಿ ಹೊಡೆದು, ಅಧ್ಯಕ್ಷರ ಕಡೆಗೆ ಪದ್ಧತಿ ಪ್ರಕಾರ ವಿನಂತಿಪತ್ರ ಕಳಿಸಿದರು. ರಾ. ಬ. ಪ್ರಧಾನರು ಅಧ್ಯಕ್ಷರಾಗಿದ್ದಾರೆ. ಗವ್ಹರ್ನರಸಾಹೇಬರು ಬರುತ್ತಾರೆಂಬದು ನಮಗೆ ಸರಕಾರದಿಂದ ಬರೆದು ಬಂದಿಲ್ಲ. ಆದ್ದರಿಂದ ನಿಮ್ಮ ವಿನಂತಿ ಅರ್ಜಿಯು ಕ್ರಮಬಾಹ್ಯವಾಗಿರುತ್ತದೆಂದು ಹೇಳಿ, ಅಧ್ಯಕ್ಷರು ಅರ್ಜಿಯನ್ನು ತೆಗೆದು ಹಾಕಿದರು.

ಕಲಕತ್ತೆಯಲ್ಲಿ ಶೇಖ ಇಸ್ಮಾಯಿಲನೆಂಬವನಿಗೆ ೪೮ ಸಾರೆ ಶಿಕ್ಷೆಯಾಗಿದೆ. ೪೯ನೇ ಕಳವು ಮಾಡಿದಾಗ ಈತನನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ನಾನು ಬಹಾದ್ದೂರ ಕಳ್ಳನಾಗಿದ್ದೇನೆ. ನನ್ನಷ್ಟು ಶಿಕ್ಷೆಯಾರಿಗೂ ಆಗಿಲ್ಲ. ಸರಕಾರದಿಂದ ನನಗೊಂದು ಮೆಡಲಕೊಡಿಸಬೇಕೆಂದು ಈತನು ಮ್ಯಾಜಿಸ್ಟ್ರೇಟರಿಗೆ ಹೇಳಿಕೊಂಡನು. ಅವರು ಈತನಿಗೆ ಒಂದು ತಿಂಗಳ ಶಿಕ್ಷೆ ವಿಧಿಸಿ, ಹೋಗಿ ಬಾ ಎಂದರು.

ಧಾರವಾಡ-

ಎರಡು ದಿವಸಗಳಿಂದ ಸರವಿಸ ಮೇಲೆ ಸರವು ಮಳೆಯಾಗಿ ಹಸಿಯಾಗುವಷ್ಟು ಭೂಮಿ ತೊಯ್ದಿದೆ.

ಇಲ್ಲಿಯ ಮಿಶನ ಹಾಯಸ್ಕೂಲಿನ ಹೆಡ್ಡಮಾಸ್ತರರಾಗಿದ್ದ ಮಿ. ಜ್ಞಾನಕಂ ಇವರು ಬೆಂಗಳೂರಿಂದ ಬರುತ್ತಿರುವಾಗ ದಾರಿಯಲ್ಲಿ ಹತ್ತಿಮತ್ತೂರ ಸ್ಟೇಶನದಲ್ಲಿ ಉಸುರು ಬಂದಾಗಿ ಕ್ರಿಸ್ತವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಈ ಪತ್ರವನ್ನು ಅಣ್ಣಾಚಾರ್ಯ [illegible]ರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ [illegible] ಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ[illegible] ಮಾಡಿದರು.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ — ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ

ಚಾಲೂ ಖಾತೆಗಳು — ಪುಕ್ಕಟೆಯಾಗಿ ತೆಗೆಯಲ್ಪಡುವವು

ಸೇವ್ಹಿಂಗ್ಸ ಬ್ಯಾಂಕು:— ಬಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು ಬಡ್ಡೀ ದರ ೩ ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು ಬಡ್ಡಿಗೆ ದರ ೩॥ ರೂ

ದೇಣೆ:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ ೭ ರೂ. ಹತ್ತಿ ಮತ್ತು ಧಾನ್ಯಗಳ ಅಡವಿನ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ವ ನಿಯಮಿತ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಆಯಾ ಖಾತೆಗೆ ಜಮೆ ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತ್ತು ಯೋಗ್ಯ ಕಮಿಶನ್ ತಕ್ಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವ ವಿಕ್ರಿ ಮಾಡುವದರಲ್ಲಿಯೂ ಬರುವದು ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಚಕ್ಕು ಹುಂಡಿಗಳನ್ನು ಮಾರುವದರಲ್ಲಿಯೂ ಬರುವದು

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ತರದ ಅಧಿಕಾರವಿರುವದು. ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್ ರಿಕಾರ್ಟ.
ಏಜಂಟ

ತ್ವರೆ ಮಾಡಿರಿ! ತ್ವರೆ ಮಾಡಿರಿ!

THE UNITED KARNATAK INSURANCE COMPANY
LTD. DHARWAR

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ
ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೭ನೇ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಏಜಂಟರು ಬೇಕು

ಕನ್ನಡ ನಾಡಿನಲ್ಲಿ ಕನ್ನಡಿಗರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮತ್ತು **ಕನ್ನಡಿಗರಿಂದ** ನಡೆಸಲ್ಪಟ್ಟ ಈ ಮೊದಲನೇ ಕಂಪನಿಗೆ ಶೇರುಗಳನ್ನು ಮಾರುವದಕ್ಕೂ ವಿಮೆಯ ಕೆಲಸವನ್ನು ತಂದು ಕೊಡುವದಕ್ಕೂ ಎಲ್ಲಾ ಸ್ಥಳಗಳಲ್ಲಿ **ಏಜಂಟರು** ಬೇಕಾಗಿರುವರು. ವಿಮೆಯ ಕೆಲಸವನ್ನು **ಗ್ಯಾರಂಟಿ ಮಾಡಿದಲ್ಲಿ** ವಿಶೇಷ ಸವಲತ್ತುಗಳು ಕೊಡಲ್ಪಡುವವು. **ಕನ್ನಡಿಗರೇ** ತೀವ್ರವೇ ನಮ್ಮ ಕೆಲಸವನ್ನು ಕೈಕೊಂಡು ಲಾಭ ಮಾಡಿಕೊಳ್ಳಿರಿ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar.
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ-

ಸ್ಥಾವರ ಆಸ್ತಿಯ ಮೇಲೆ ಮತ್ತು ಮಾರ್ಗೇಜಿನ ಮೇಲೆ

ಗಿರಣಿಯ (ಶೇಅರ್ಸ) ಮತ್ತು ದಿ ಬ್ಯಾಂಕ ಆಫ್ ಬಾರಶಿ ಲಿಮಿಟೆಡ್ (ಶೇಅರ್ಸ) ಸಿಗುವವು. ಪ್ರತ್ಯುತ್ತರದ **ಸಲುವಾಗಿ** ಬಂದು ಆಣೆಯ ಪೋಷ್ಟ ಸ್ಟಾಂಪು ಕಳಿಸಿ ಕೊಡ್ರಿ. ದೊಡ್ಡ ದೊಡ್ಡ ಶಹರುಗಳಲ್ಲಿ ಪಗಾರ ಕಮೀಶನ್‌ದ ಮೇಲೆ ಕೆಲಸ ಮಾಡುವರು ಬೇಕು.

ಪತೆ ಮನಿಲೆಂಡ

ಟೆಲಿಫೋನ,
ಹೋಸ ನಂಬರ

ಪಿ. ಡಿ. **ಘಾಟಪಾಂಡೇ** (ಬೆಂಕರ
ಕೇಸರ ಬಾಗೆ ಗೋಲ್ಡ ಮೋಹರದ ಮುಂದೆ
ಪೋಷ್ಟ ಬೊಕ್ಸ ನಂಬರ ೫೫೦೧,
ದಾದರ, ಬೊಂಬೈ.

(೧) ರಾಣೆಬಿನ್ನೂರ (೨) ಹಿರೇಕೇರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿನ ಗಣೇಶ ಶಂಕರ ಜೋಶಿ ಇವರನ್ನು ನಾವು ಏಜಂಟರಾಗಿ ನೇಮಿಸಿದ್ದೇವೆ. ಈ ನಾಲು ತಾಲೂಕಿನ ವ್ಯವಹಾರವನ್ನು ಇವರ ಹತ್ರ ಮಾಡುವದಕ್ಕೆ ಹರಕತ್ತು ಇಲ್ಲಾ

ನೋಟೀಸು

ರಾ॥ ಗಾ॥ ನಾಗಪ್ಪ ರುದ್ರಪ್ಪ ಕರಡಿ ಶಾಳಾಮಾಸ್ತರ ಗಜೇಂದ್ರಗಡ ತಾಲೂಕ ರೋಣ ಇವರಿಗೆ-

ಇದರಲ್ಲಿ ಕೆಳಗೆ ಸಹಿ ಮಾಡುವವರು ನೋಟೀಸಿನಿಂದಾ ತಿಳಿಸುವದೇನಂದರೆ ನಾನು ವ ನನ್ನ ಅಪ್ಪಳಾದ ಸುಬ್ಬಾಬಾಯಿ ಇವರು ಕೂಡಿ ನನ್ನ ದತಿಂದಾ ಒಂದು ಮೋಟಾರಗಾಡಿ ಕೊಳ್ಳುವದರ ಸಲುವಾಗಿ ಹಣದ ಅಡಚಣೆ ಬಿದ್ದ ಮೂಲಕಾ ನಿಮ್ಮ ಕಡಿಗೆ ಬರಲಾಗಿ ನೀವು ಸುಬ್ಬಾಬಾಯಿ ಕಡಿಯಿಂದಾ ೩೦೦ ರೂಪಾಯದ ಒಂದು ಪ್ರೋನೋಟು ಬರ್ಸಕೊಂಡು ಪಾಲಿ ಸಂಗಪ್ಪ ಅಂಬುವವರಲ್ಲಿ ರೂಪಾಯಿ ೩೦೦ ತಂದು ಕೊಟ್ಟಿರಿ ಮತ್ತು ಇದಲ್ಲದೆ ಇನ್ನೂ ಎಸಿಕ ರಕಮು ೧೨೪೮. ರೂಪಾಯಿಗಳನ್ನು ಒಬ್ಬ ಚನ್ನಯ್ಯಾ ಅಂಬುವವರಲ್ಲಿ ತೆಗೆದುಕೊಂಡು ಬಂದು ನಮಗೆ ಕೊಟ್ಟಿರಿ ಈ ಪ್ರಕಾರ ನಿಮಗೆ ನಾವು ಒಟ್ಟಿಗೆ ೧೫೪೮. ರೂಪಾಯಿಗಳು ಕೊಡತಕ್ಕವು ಆದ್ದರಿಂದ ನೀವು ನನಗೆ ಹೇಳಿ ನನ್ನ ಕೂಡಾ ಕರಾರ ಮಾಡಿಕೊಂಡದ್ದು ಅದೇನಂದ್ರೆ ಮೋಟಾರಗಾಡಿ ನನ್ನ ಹೆಸರಿಲೆ ಏಕ್ರಾಸ ಖರೀದಿ ಮಾಡಿಟ್ಟು ಗಾಡಿ ನಿನ್ನ ತಾಬೆಕ್ಕೆ ತಗೊಂಡು ದುಡಿದು ಬಂದ ಹಣಾ ಚನ್ನಯ್ಯನವರಲ್ಲಿ ಜಮಾ ಮಾಡಿಸಿ ಯಾವತ್ತು ಸಾಲ ಫೇಡ ಆದ ಕೂಡ್ಲೆ ನಿನ್ನ ಗಾಡಿ ನನ್ನ ತಾಬಾಕ್ಕೆ ಬಿಟ್ಟು ಗಾಡಿ ನಿನ್ನ ಹೆಸರಿಲೆ ಪರತ ಖರೀದಿ ಮಾಡಿಕೊಡತೇನೆ ಅಂತಾ ಶರ್ತ ಮಾಡಿದ ಪ್ರಕಾರಕ್ಕೆ ನಾನು ದುಡಿದು ಚನ್ನಯ್ಯನಲ್ಲಿ ಹಣಾ ಜಮಾ ಮಾಡಿಕೋತಾ ಮಾಡಿಸಿಕೋತಾ ಬಂದೆ ಸದರ ಸಾಲವು ಯಾವತ್ತು ಫೇಡ ಆದ ಮೇಲೆ ನನ್ನ ಗಾಡಿ ನನಗೆ ಪರತ ಖರೀದಿ ಮಾಡಬೇಕು ಅಂತಾ ನಿಮಗೆ ಕೇಳಿದರೆ ಮಾಡಿಕೊಡಲಿಲ್ಲ ಆದ್ದರಿಂದ ನಾನು ಡಿ. ಎಸ್. ಪಿ. ಜಿಲ್ಲಾ ಧಾರವಾಡ ಇವರ ಕಡಿಗೆ ಅರ್ಜಿಮಾಡಲಾಗಿ ಅವರಲ್ಲಿ ತಾಂತ್ರಿಕ ಚವಕಶಿಯಿಂದಾ ದಿವಾಣಿ ಕೋರ್ಟಿಗೆ ಹೋಗಬೇಕಂತಾ ಆರ್ಡರ ಮಾಡಿದಮೇರೆಗೆ ನನ್ನ ಗಾಡಿ ಆಗದ ನನಗೆ ತಟ್ಟಿದ ಲುಕ್ಸಾನ ಹಣಾ ರೂಪಾಯಿಗಳ ೨೦೦೦. ವರೆಗೆ ಆದದ್ದು ಅದರ ಬಗ್ಗೆ ದಿವಾಣಿ ಕೋರ್ಟಿನಲ್ಲಿ ನಿಮ್ಮ ಮೇಲೆ ದಾವಾ ಮಾಡತಕ್ಕವನು ಇದ್ದೆನು ಈ ಹಕೀಕತ್ತು ತಿಳಕೊಂಡು ನನಗಿಂತ ಮುಂಚಿತವಾಗಿ ನೀವೇ ಪೋಕಳ ಉಳಿದ ಪ್ರೋನೋಟಿನ ಮೇಲಿಂದ್ಲು ಸುಬ್ಬಾಬಾಯಿಯ ಮೇಲೆ ಒಂದು ಸುಳ್ಳು ದಾವೆಯನ್ನು ತಂದಂತೆ ತಿಳಿತದೆ ಈ ಪ್ರಕಾರ ಮಾಡಲಿಕ್ಕೆ ಬರಲಾರದು ಆದ ಕಾರಣಾ ನಿಮಗೆ ಈ ನೋಟೀಸಿನಿಂದಾ ಬಕಕೊಡುತ್ತೇನಲ್ಲಾ ಈ ನೋಟೀಸು ಮುಟ್ಟಿದ ೭ ದಿವಸಗಳಲ್ಲಿ ನಮ್ಮ ನಿಮ್ಮ ನಡುವೆ ಆದ ವ್ಯವಹಾರದ ಸಂಮಂಧಿ ಲೆಖ್ಖಾ ಬರಾಬರಮಾಡಿ ನನಗೆ ಬರತಕ್ಕ ಗಾಡಿ ನನಗೆ ಬಿಡಬೇಕು ಅಗರ ಅದರ ಬಾಬತು ಲುಕ್ಸಾನಿ ಹಣಾ ರೂಪಾಯಿ ೨೦೦೦ ಕೊಟ್ಟು ಪಾವತಿ ಪಡಕೋಬೇಕು ಇಲ್ಲವಾದರೆ ನಿಮ್ಮ ಮೇಲೆ ರೀತಿ ಪ್ರಕಾರ ದಿವಾಣಿ ಕೋರ್ಟಿನಲ್ಲಿ ದಾವೇ ಮಾಡತೇನ ಈ ನೋಟೀಸಿನ ಖರ್ಚು ನಿನ್ನ ತಲಿಯಮೇಲೆ ಆದ ತಿಳಿಯುವದು ತಾ॥ ೪-೮-೩೦

ರಾಮಪ್ಪಾ ದುರಗೋಜಿ ಪವಾರ ಮೆಣಶಿನಕಾಯಿಗಲ್ಲಿ ಧಾರವಾಡ.

ಚಂದಾದಾರರಿಗೆ ಸೂಚನೆ

ಅಗಷ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ !

ತಮ್ಮಲ್ಲಿ ವ್ಯಾಪಾರ, ಔದ್ಯೋಗಿಕ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ " ಮಹಾತ್ಮಾ ವೇಮಣ್ಣ " ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರಡ್ಡಿ ಕಂಪನಿ ಲಿಮಿಟೆಡ್-

ವೆಂಬ ನಾಮೇದ **ದಲಾಲಿ ಅಂಗಡಿಯನ್ನು ಗದಗ** ಶಹರದಲ್ಲಿ ಇದೇ ವರ್ಷ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯ ವ್ಯವಸ್ಥೆಯು ರದೊಡ್ಡ ದೊಡ್ಡ ಜಮೀನದಾರ ಮತ್ತು ವ್ಯವಹಾರತಜ್ಞರಾದ ಸುಶಿಕ್ಷಿತ ಜನರಿಂದಲೇ ಮಾಡಲ್ಪಡುವನು.

ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಹುಟ್ಟಿಸಿ ಮತ್ತು ನೈತಿಕ ಉನ್ನತಿಯನ್ನ ಬೆಳೆಯಿಸಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಬಾರದಾನ, ಜಾಲೀಚೀಲ, ಹತ್ತೀಕಾಳು, ಚಿಮಣಿಎಣ್ಣಿ ಕಿರಾಣಿ ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ ಸೋವಿದರದಿಂದ ಕೊಂಡುಕೊಳ್ಳಬೇಕಾಗಿ ವಿನಂತಿಯು. ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತೀಕಾಳು ಹುರುಳಿ ವಗೈರೆ ಮಾಲನ್ನು ಸಂಗ್ರಹ ಮಾಡುವದು ಹೆಚ್ಚು ಲಾಭಕರವಿದೆ. ಕಾರಣ ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು ನಮಗೆ ಮುಂಗಡವಾಗಿ ಕಳುಹಿಸಿಕೊಟ್ಟು ಟೇಖಿಯಿಂದ ಖರೀದಿ ಮಾಡಲಿಕ್ಕೆ ತಿಳಿಸಿದಲ್ಲಿ ಯೋಗ್ಯದರದಿಂದ ಖರೀದಿಮಾಡಿ ಇಡುವವರಲ್ಲಿ ಬರುವದು ಈ ಸುಸಂಧಿಯನ್ನು ವ್ಯರ್ಥ ಕಳೆದುಕೊಳ್ಳಬಾರದಾಗಿ ವಿನಂತಿ ಮತ್ತು ತಾವೆಲ್ಲರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳಿ, ಗೋದಿ, ಜೋಳ, ಶೇಂಗಾ ವಗೈರೆ ಯಾವತ್ತು ತರಹದ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾರಾಶ್ರಯ ಕೊಡಬೇಕೆಂದೂ ಮತ್ತು ತಾವೂ ಲಾಭಹೊಂದಬೇಕೆಂದೂ ಇಚ್ಛಿಸುತ್ತೇವೆ.

ಗದಗ.
ಅಂಗಡಿ ನಂ ೧೭೨೨
ಕಾಟನ್ ಮಾರ್ಕೇಟ ರೋಡ

ತಮ್ಮ
ರಾ. ಸಾ. ಲಿಂಗನಗೌಡಾ ಪಾಟೀಲ, ಚೇರಮನ್ನ.
ಲಕ್ಷ್ಮಪ್ಪಾ ಗೋಣೆಪ್ಪಾ, ಸಾಹುಕಾರ ಮೈದೂರ ಅಂತರವಳ್ಳಿ
ವೆಂಕರಡ್ಡಿ ಕೃಷ್ಣರಡ್ಡಿ ಇನಾಮತಿ ಅಸುಂಡಿ, ಗದಗ
ದ್ಯಾವನಗೌಡಾ ಪಾಟೀಲ, ಹಾಯಕೋರ್ಟ ವಕೀಲ ಧಾರವಾಡ
ಹನಮರಡ್ಡಿ ತಿಮ್ಮರಡ್ಡಿ ಕಾಲವಾಡ ಮ್ಯಾನೇಜರ, ರಡ್ಡಿ ಬ್ಯಾಂಕ ಧಾರವಾಡ

ಸೂಚನೆ:— ವಿಮೆ ಇಳಿಸಿದಲ್ಲಿ ಮಾಲಿನ ಮೇಲೆ ೭೫ರಕ್ಕಿಂತ ಹೆಚ್ಚಲ್ಲದಷ್ಟು ರಕಮು ಅಗಾವು ಕೊಡುವದರಲ್ಲಿ ಬರುವದು. ಹೀಗೆ ಒಯ್ದ ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ ೧ ರೂಪಾಯಿಗಿಂತ ಮೀರದಷ್ಟು ಬಡ್ಡೀ ಕೊಡಬೇಕಾಗುವದು. ಕಂಪನಿಯವರು ಆಸಾಮಿಗಳ ಇಚ್ಛೆಯ ಪ್ರಕಾರ, ವಖಾರದಲ್ಲಿ ಖಾಸಗಿ ರೀತಿ ಲಿಲಾವ ಇಲ್ಲವೆ **ಗದಗ ಕಾಟನ್ ಮಾರ್ಕೇಟ ಅಸೋಸಿಯೇಶನ್ನದ** ಮುಖಾಂತರವಾಗಿ ಲಿಲಾವಿನಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫಿಸಿನಲ್ಲಿ ತಿಳಿದುಕೊಳ್ಳಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ತೀರ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ನಾಮದೇವ ಶಿಂಪಿ, ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಕಬ್ಬೇರ, ಒಡ್ಡರ, ಗೊಲ್ಲರ, ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ, ಶಿಕ್ಕಲಿಗಾರ ಲಮಾಣಿ ಮೊದಲಾದ ನಿಕೃಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ ಹಾಗೂ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ಯಾವತ್ತೂ ಅಡಚಣಿ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು.

ಮೆಂಬರರು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾವಿ, ಕಾರವಾರ ಹಾಗೂ ಸೊಲ್ಲಾಪೂರ ಮೊದಲಾದ ಬ್ರಿಟಿಶ ಜಿಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಲ್ಲದ ವಯಸ್ಸಿನ ಸ್ತ್ರೀಪುರುಷರು ಕೆಳಗೆ ಕಾಣಿಸಿದಂತೆ ಆಯಾ ತರಗತಿಯ ದೇಣಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರಾಗಬಹುದು

ಆಶ್ರಯದಾತರು:— ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಲ್ಲದಷ್ಟು ದೇಣಿಗೆಯನ್ನು ಕೊಡುವಂತವರು.
ದಾತೃಗಳು. ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.
ಆಜೀವ ಸಭಾಸದರು:— ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.
ಸಾಧಾರಣ ಸಭಾಸದರು:— ಡುವವರು. ಕೊ ೧ ನೇ ತರಗತಿ:— ಕನಿಷ್ಟ ೫ ರೂ. ವಾರ್ಷಿಕ ವರ್ಗಣಿ
೨ ನೇ ತರಗತಿ:— ಕನಿಷ್ಟ ೨ ರೂ. ವಾರ್ಷಿಕ ವರ್ಗಣಿ ಕೊಡುವವರು.
೩ ನೇ ತರಗತಿ:— ಕನಿಷ್ಟ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.
೪ ನೇ ತರಗತಿ:— ಕನಿಷ್ಟ ೪ ಆಣೆ. ವಾರ್ಷಿಕ ವರ್ಗಣಿ ಕೊಡುವವರು.

ಯಾವತ್ತೂ ಬಂಧುಭಗಿನಿಯರು ಅವಶ್ಯತೀವ್ರ ಸಂಘದ ಮೆಂಬರರಾಗಬೇಕೆಂದು ಒಳ್ಳೇ ಆಗ್ರಹದ ವಿನಂತಿಯು

ದೇವನಗೌಡ ಲಿಂಗನಗೌಡ ಪಾಟೀಲ,
ಬಿ. ಎ. ಎಲ್ಎಲ್. ಬಿ. ಹಾಯಕೋರ್ಟ ವಕೀಲ, ಧಾರವಾಡ
ಸೆಕ್ರೆಟರಿ.

THE ANKLAGI BANK LTD

Head Office
Kamankatta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT.

Dharwar 3-1-1927
K. B. ANKALGI
Managing Director

WANTED

A graduate (B. Sc.) is wanted to teach Science in the Majid High School Savanur. Applications with testimonials are invited.

Savanur
26-6-1930

K. G. Kalghatgi,
Divan of Savanur

ADVERTISEMENT

SWADESHI CLOTH:- Dhotis, Sarees, Mulls, Shirtings, etc. woven from fine yarns spun by ourselves. For particulars, please write to,

The Bharatkhand Textile Mfg. Co. Ltd.,
Post Box No. 30, Ahmedebad.

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಪೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೇಟ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—
ಕೃಷ್ಣಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—
೧೯-೧೧-೨೯

ಮೈಸೂರಸ್ಟೋರ,
ಬೆಳಗಾವಿಯವರಗಲ್ಲಿ

(ವಿಜಯ ಮುದ್ರಾಲಯ ಧಾರವಾಡ)

ಜಾಹೀರ ನೋಟೀಸು

ಕೆಳಗೆ ಸಹೀ ಮಾಡುವ ಶಿವ್ದಪ್ಪಾ ತಂದಿ ಗುರುಶಿದ್ದಪ್ಪಾ ಕಳಸೂರ ಸಾಕೀನ ಚಿಲ್ಲೂರಬಡ್ನಿ ತಾಲೂಕ ಬಂಕಾಪೂರ ಈತನು ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ—

ನಾನು ಶಿದ್ದಪ್ಪಾ, ಚನ್ನಬಸಪ್ಪಾ ಮತ್ತು ಹನಮಂತಪ್ಪಾ ಈ ಮೂವರು ಏಕೋದರರು. ನಾವು ಏಕತ್ರ ಘರಾಣೆದವರಾಗಿ, ಮನೆತನದ ಆಸ್ತಿಯನ್ನು ಅವಿಭಕ್ತತನದಿಂದ ಉಪಭೋಗಿಸುತ್ತಾ ಬಂದಿದ್ದೇವೆ ನಮ್ಮ ಪೈಕಿ ಹನಮಂತಪ್ಪನು ಸತ್ತು ಐದಾರು ವರ್ಷವಾಯಿತು ಆತನಿಗೆ ಕೆಂಚವ್ವಾ ಎಂಬ ಹೆಂಡತಿ ಇದ್ದಾಳೆ ಈಕೆಯು ಸ್ತ್ರೀ ಧರ್ಮ ಪ್ರಕಾರ ಉಡಿಕೆ ವಗೈರೆ ಮಾಡಿಕೊಳ್ಳದೆ, ವ್ಯಭಿಚಾರ ಕೃತ್ಯ ನಡಿಸಿದ್ದಾಳೆ ಮತ್ತು ನಮ್ಮ ಮನೆತನದಲ್ಲಿದ್ದು ಬಾಳಿವೆ ಮಾಡಿಕೊಳ್ಳದೆ, ಈಗ ನಮಗೆ ಆಗಲಾರದವರ ಮಾತು ಕೇಳಿ, ತಾನು ವಿಭಕ್ತಳೆಂದು ಸಾಧಿಸಿ ನಮ್ಮ ಪೂರ್ವಾರ್ಜಿತ ಆಸ್ತಿಯಲ್ಲಿ ತನಗೆ ಹಿಸೆಯುಂಟೆಂದು ದತ್ತಕ ಮಾಡಿಕೊಳ್ಳುವ ಹಾಗು ಸ್ಥಾವರ ಜಂಗಮ ಜಿಂದಿಗೆಯನ್ನು ಹಾಳು ಮಾಡುವ ವಿಚಾರದಲ್ಲಿದ್ದಾಳೆ ಕಾಯದೆಯಿಂದ ಈಕೆಗೆ ದತ್ತಕ ಮಾಡಿಕೊಳ್ಳುವ ಅಧಿಕಾರವಿಲ್ಲ ಸ್ಥಾವರ ಜಂಗಮ ಆಸ್ತಿಯ ಮೇಲೆ ವಾರಸಾ ತರೀಕ ಮಾಲಕಿಯ ಹಕ್ಕು ಇರುವದಿಲ್ಲ ಅದ್ದರಿಂದ ಈಕೆಗೆ ಯಾವ ಸಾಲಸಂಬಂಧ ಕೊಡಬಾರದು ಜಮೀನು ಪರಾಧೀನಪಡಿಸಿಕೊಳ್ಳಬಾರದು ದತ್ತಕ ಕೊಡಬಾರದು ಈಕೆಯ ಕೂಡ ನಮ್ಮ ಮನೆತನಕ್ಕೆ ಬಾಧೆ ಬರುವಂಥ ಯಾವದೇ ವ್ಯವಹಾರ ಮಾಡಬಾರದು ಮಾಡಿದರೆ- ಅದು ಬೇಕಾಯದೇಶೀರವಾಗಿ ರದ್ದಬಾತಲವಾಗುವದು ಅದಕ್ಕೆ ನಾನು, ನನ್ನ ಇನ್ನೊಬ್ಬ ತಮ್ಮ ಚನ್ನಬಸಪ್ಪ ಪಾತ್ರರಾಗಲಾರೆವು ಅದಕ್ಕೆ ಆಕೆಯ ಕೂಡ ವ್ಯವಹಾರ ಮಾಡಿದವರೇ ಜವಾಬದಾರರಾಗಿ ಹಾನಿಗೆ ಗುರಿಯಾಗುವರು ಅದು ನನ್ನ ಮನೆತನದ ಆಸ್ತಿಗೆ ಬಾಂಧಾಯಿಸಲಾರದು ಆಸ್ತಿಯ ವರ್ಣನೆ-

೧	ಕಲಭಾವಿ ಹೊಲಾ	
೨	ಗುಡ್ಡದ ಹೊಲಾ	
೩	ಬಂಗಾರದ ಒಳೀ ಜೋಡು ಒಂದು ಕಿ|| ರು||	೧೨೦
೪	ತೋಳಬಂದಿ ಬೆಳ್ಳೀವು ಕಿ||	೨೦
೫	ಗುಂಡಿನ ಟೀಕ ಬಂಗಾರದ್ದು ಕಿ||	೬೦
೬	ಪದಕದ ಸರಾ ಬಂಗಾರದ್ದು ಕಿ||	೩೦
೭	ತಾಂಬ್ರದ ಹಂಡೆ ಎರಡು ಕಿ||	೩೨
೮	ಸಂದಕಾ ಒಂದು ಕಿ||	೧೬
೯	ಆಕಳ ಎರಡು ಕಿ||	೨೪
೧೦	ಆಕಳಕರಾ ಎರಡು ಕಿ||	೧೨
೧೧	ತಾಂಬ್ರದ ಕೊಡಾ ಕಿ||	೮

ಇವನ್ನು ಯಾರೂ ತಕ್ಕೊಳ್ಳಬಾರದು ಅಂತಾ ಜಾಹೀರ ಮಾಡಿದ ನೋಟೀಸು ಈ ಸಂಬಂಧವಾಗಿ ಏನಾದರೂ ಕಾಯದೇಶೀರ ಇಲಾಜ ಮಾಡುವ ಪ್ರಸಂಗ ನಮಗೆ ಬಂದರೆ- ಅವುಗಳ ಖರ್ಚಿನ ಬೋಜಾ ಸದರಿಯವರ ಮೇಲಿರುತ್ತದೆ ತಿಳಿಯುವದು.

ತಾ|| ೪ ಅಗಸ್ಟ ೧೯೩೦ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಶಿದ್ದಪ್ಪಾ ತಂದಿ ಗುರುಶಿದ್ದಪ್ಪಾ ಕಳಸೂರ ಈತನ ಕೈದು ಇರುತ್ತದೆ.

ನೋಟೀಸು

ಹನಮಪ್ಪಾ ರಂಗಪ್ಪಾ ದ್ಯಾವನೂರ ಸಾ|| ಹೆಬಸೂರ ವ ಶ್ಯಾಮಪ್ಪಾ ಬಿನ್ನ ಮರಿಯಪ್ಪಾ ದ್ಯಾವನೂರ ಸಾ| ಅಣ್ಣೀಗೇರಿ ವ ತಮ್ಮಪ್ಪಾ ಬಿಂಕಪ್ಪಾ ದ್ಯಾವನೂರ ಸಾಕೀನ ಅಣ್ಣೀಗೇರಿ ಇವರಿಗೆ-

ನಾನು ಬಡವ್ವಾ ಕೋಂ ಕೃಷ್ಣಪ್ಪಾ ಕುರ್ಡಿಗಿ ಸಾಕೀನ ಹೆಬಸೂರ ತಾಲ್ಲೂಕ ಹುಬ್ಬಳ್ಳಿ ಈ ನೋಟೀಸಿನಿಂದಾ ತಿಳಿಸುವದೇನಂದರೆ-

ನವಲಗುಂದ ತಾಲ್ಲೂಕ ಪೈಕಿ ಅಣ್ಣೀಗೇರಿ ಗ್ರಾಮದಲ್ಲಿ ಇರುವ ಸರಕಾರೀ ಜಮೀನು ೮೧ ಸರ್ವೆ ನಂಬರ ಎಕರೆ ೯-೨ ತರಂ ರೂಪಾಯಿ ೨೩-೦ ಈ ಪ್ರಕಾರ ಇರುವ ಜಮೀನು ನನ್ನ ವ ನನ್ನ ಅಕ್ಕ ಭೀಮವ್ವಾ ಕೋಂ| ಫಕೀರಪ್ಪಾ ಸಾಸ್ವಿಹಳ್ಳಿ ಇವರಿಬ್ಬರ ಮಾಲ್ಕೀದು ಇದ್ದು ಸದರೀ ಜಮೀನು ನಾವು ಇಬ್ಬರು ನಿಮಗೆ ತಾರೀಖು ೯-೬-೧೯೨೩ನೇ ಇಸ್ವಿ ದಿವಸ ವ್ಯತ್ಯಪತ್ರ ಬರೆಕೊಟ್ಟಿರುತ್ತೇವೆ ಸದರೀ ಜಮೀನದಲ್ಲಿ ನನ್ನ ಅರ್ಧ ಜಮೀನು ಇದ್ದು ನನ್ನ ಅರ್ಧಾ ಹಿಸೇದ ಮಟ್ಟಿಗೆ ನಿಮಗೆ ವ್ಯತ್ಯಪತ್ರ ಬರಕೊಟ್ಟಿದ್ದು ಆ ಹಕ್ಕು ರದ್ದು ಮಾಡಿರುತ್ತೇನೆ ವ್ಯತ್ಯಪತ್ರದಿಂದಾ ಅದರ ಮೇಲೆ ನಿಮ್ಮ ಹಕ್ಕು ಅಗರ ಮಾಲ್ಕೀ ವಗೈರೆ ಇಲ್ಲಾದು ನನ್ನದೇ ಸಂಪೂರ್ಣ ಮಾಲ್ಕೀ ಹಕ್ಕ ಅದೆ ಈ ನೋಟೀಸಿನಿಂದಾ ನಿಮಗೆ ಬರಕೊಟ್ಟ ವ್ಯತ್ಯಪತ್ರವು ರದ್ದು ಇರುತ್ತದೆ ಸದರೀ ಜಮೀನಿಯ ಪೈಕಿ ಅರ್ಧಾ ಜಮೀನಿಯ ಮೇಲೆ ನಿಮ್ಮದೇನೂ ಮಾಲ್ಕೀ ಹಕ್ಕು ಇರುವದಿಲ್ಲಾ ತಿಳಿಯೋದು ಸಹಿ ತಾರೀಖು ೨-೮-೧೯೩೦ನೇ ಇಸ್ವಿ

ಈ ಎಡಗೈ ಹೆಬ್ಬರಳಿನ ಗುರ್ತು ಬಡವ್ವಾ ಕೋಂ| ಕೃಷ್ಣಪ್ಪಾ ಕುರ್ಡಿಗಿ ಸಾ|| ಹೆಬಸೂರ ತಾಲ್ಲೂಕ ಹುಬ್ಬಳ್ಳಿ ಇವರು ಮಾಡಿದ್ದು ಅದೆ-

---

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ ಇದೊಂದೇ ಶಿಕ್ಷಣದ ಸಳಿಕೆ

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ವಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜೀಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ಸ್ಹಿ. ಎಸ. ಇಟಗಿ.
ಮುನಸಫಕೋರ್ಟನಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹಿಪ್ಪಿ ವ ಶಿಸಂ ನಾಟುಗಳು

ಸಾಗವಾನಿ ಯಾ ವ ಸಾಗವಾನಿ (೬) ಫೂಟಿನ ಜವಳ್ಯ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಕಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ವಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಬುಧವಾರ ತಾರೀಖು ೬ ನೇ ಅಗಸ್ಟ ೧೯೩೦ (ಸಂಚಿಕೆ ೧೭೩

ಮುನ್ನೂರು ಜನರು ಹೊಡೆತ ತಿಂದರು.

ಮುಂಬಯಿಯಲ್ಲಿ ಪೋಲಿಸರ ಹುಕುಮು ಮುರಿಯುವದಕ್ಕೆ ಕಾಂಗ್ರೆಸದ ಹ್ವಾಲಂಟಿಯರರ ಮೆರವಣಿಗೆಯ ಕೂಡ ಒಂದು ಲಕ್ಷವಿತ್ತು. ಸಾಯಂಕಾಲದಿಂದ ಬೆಳತನಕ ಇವರು ಅಲ್ಲೇ ಕೂತರು. ಪೋಲೀಸ ಕಮೀಶನರರು ಒಂದು ಸಾವಿರ ಪೋಲೀಸರೊಂದಿಗೆ ಇವರನ್ನು ಕಾಯಿದರು. ಬೆಳಗಾದ ಮೇಲೆ ಸಾರ್ವಜನಿಕ ರಸ್ತೆಯು ಬಂದಾಗುತ್ತದೆಂದು ಪೋಲಿಸರು ಲಾಠೀ ಪ್ರಯೋಗ ಮಾಡಿ, ಮುನ್ನೂರು ಜನರನ್ನು ಹೊಡೆದು ಘಾಯ ಪಡಿಸಿದರು. ಇವರಿಗಾಗಿ ಕಾಂಗ್ರೆಸದವರು ಹೊಸದಾಗಿ ಆಸ್ಪತ್ರೆ ನಿರ್ಮಾಣ ಮಾಡಬೇಕಾಯಿತು.

ಧಾರವಾಡದಲ್ಲಿ ಹರತಾಳ.

ನಿನ್ನಿನ ದಿವಸ ಈ ಊರಲ್ಲಿ ಹರತಾಳವಾಯಿತು. ಪ್ರಾತಃಕಾಲದಲ್ಲಿ ಜವಳೀಪೇಟೆಯಲ್ಲಿ ದೊಡ್ಡ ಪ್ರಮಾಣದಿಂದ ರಾಷ್ಟ್ರಧ್ವಜವಂದನೆಯಾಯಿತು. ಪ್ರಾತಃಕಾಲದಿಂದ ಸಾಯಂಕಾಲದ ವರೆಗೆ ಊರ ತುಂಬ ಚಿಕ್ಕ ದೊಡ್ಡ ಮೆರವಣಿಗೆಗಳು ಜಯಘೋಷ ಮಾಡುತ್ತಾ ತಿರುಗಾಡಿದವು. ಸಾಯಂಕಾಲದಲ್ಲಿ ಪ್ರಚಂಡ ಮೆರವಣಿಗೆ ಹೊರಟಿತು ಇದರಲ್ಲಿ ಇನ್ನೂರಕ್ಕಿಂತ ಹೆಚ್ಚು ಸ್ತ್ರೀಯರಿದ್ದರು. ಮೆರವಣಿಗೆಯು ಎರಡು ಫರ್ಲಾಂಗ ಉದ್ದವಾಗಿತ್ತು. ಬಳಿಕ ಸಭೆಯಾಯಿತು. ಎಂಟಾರು ಸಾವಿರ ಜನರು ಸೇರಿದ್ದರು. ಶ್ರೀ ಸೌ॥ ಕೃಷ್ಣಾಬಾಯಿ ಪಣಜೀ, ರಾಷ್ಟ್ರಪುರೋಹಿತರಾದ ಹುಚ್ಚಾಚಾರ್ಯ ಅಗಳಗಟ್ಟಿ, ಮತ್ತು ಶ್ರೀ. ಕರಮರಕರರ ಭಾಷಣಗಳಾದವು.

ಮಿತ್ರಸಮಾಜದಲ್ಲಾದ ಒಂದು ಮೋಜು.

ಊರೊಳಗೆ ಹರತಾಳವಾಗಿ ಎಲ್ಲ ವ್ಯವಹಾರ ಬಂದಾಗಿದ್ದರೂ, ಮಿತ್ರಸಮಾಜದಲ್ಲಿ ವಿದ್ಯುತ್ತಿನ ಪ್ರಕಾಶದಲ್ಲಿ ಆಟ ನೋಟುಗಳು ನಡೆದಿದ್ದವು. ರೋಮ ಪಟ್ಟಣವು ಸುಡುತ್ತಿದ್ದಾಗ ಬಾದಶಹ ನೀರೋನು ಫಿಡಿಲ ಬಾರಿಸುತ್ತಿದ್ದನೆಂಬಂತೆ, ಅದರ ಚಿಕ್ಕಂದ ನಡೆದಿತ್ತು. ಮೆರವಣಿಗೆಯು ಅಲ್ಲಿಗೆ ಬಂದ ಕೂಡಲೆ ಸ್ತ್ರೀ ಸ್ವಯಂಸೇವಿಕೆಯರು ಒಳಗೆ ಹೋಗಿ, ಬುದ್ಧಿ ಬರುವಂಥ ಎರಡು ಮಾತು ಹೇಳಿ, ಅವರ ಆಟ ಬಿಡಿಸಿದರು. ಶ್ರೀ ಹೊನ್ನಾಪೂರವರ ವಕೀಲರ ಸೂಚನೆಯಂತೆ ಎಲ್ಲ ದೀಪಗಳನ್ನಾರಿಸಿ, ಕಗ್ಗತಲೆ ಮಾಡಿದರು ಹೊರಗೆ ನೆರೆದ ಸಾವಿರಾರು ಜನರು ಮಿತ್ರಸಮಾಜು ಹಾಳಾಗಲೆಂದು ಘನಗರ್ಜನೆ ಮಾಡಿದರು. ಸಮಾಜದವರು ಇನ್ನಂತರವಾದರೂ ಈ ಚಳವಳಿಯಿಂದ ತಮಗೂ ಹಿತವುಂಟೆಂದು ಆತ್ಮಜ್ಞಾನ ಮಾಡಿಕೊಳ್ಳಲಿ.

ಡಾ. ಹರ್ಡೀಕರರ ಸಂದೇಶ.

ನನ್ನ ತರುವಾಯ ಧಾರವಾಡದ ಶ್ರೀ. ಡಿ. ಪಿ. ಕರಮರಕರ ಇವರು ಕರ್ನಾಟಕದ ಸತ್ಯಾಗ್ರಹ ಮಂಡಲದ ಪ್ರೆಸಿಡೆಂಟರಾಗಿ ಕೆಲಸ ಮಾಡತಕ್ಕದ್ದು. ಮತ್ತು ಹಿಂದುಸ್ಥಾನಿ ಸೇವಾದಲದ ಅಂಡರ ಸೆಕ್ರೆಟರಿ ಕೆಲಸವನ್ನು ಎ. ಪಿ. ಜಿ. ಲೋಕೂರ ಇವರು ಮಾಡತಕ್ಕದ್ದು. ಮತ್ತು ಅವರ ಕಡೆಗೆ ಹೇರವನ್ನ ಕೆಲಸದ ಅಧಿಕಾರ ಇರತಕ್ಕದ್ದು. ಮಂಡಲಕ್ಕೆ ಜನರಿಂದಲೂ, ಧನದಿಂದಲೂ ಸಹಾಯ ಮಾಡಬೇಕಾಗಿ ವಿನಂತಿ.

ಧಾರವಾಡ-

ಎರಡು ದಿವಸಗಳಿಂದ ಸರವಿನ ಮೇಲೆ ಸರವು ಮಳೆಯಾಗಿ ಹಸಿಯಾಗುವಷ್ಟು ಭೂಮಿ ತೊಯ್ದಿದೆ.

ಇಲ್ಲಿಯ ಮಿಶನ ಹಾಯಸ್ಕೂಲಿನ ಹೆಡ್ಮಾಸ್ತರರಾಗಿದ್ದ ಮಿ. ಜ್ಞಾನಕಂ ಇವರು ಬೆಂಗಳೂರಿಂದ ಬರುತ್ತಿರುವಾಗ ದಾರಿಯಲ್ಲಿ ಹತ್ತಿಮತ್ತೂರ ಸ್ಟೇಶನದಲ್ಲಿ ಉಸುರು ಬಂದಾಗಿ ಕ್ರಿಸ್ತವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೀ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳರಿ.

ಮ್ಯಾ ವಿಜಯ ಧಾರವಾಡ.

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೪ ಶ್ರಾವಣ ಶುದ್ಧ ೧೧

ಅರಸನ ಇಚ್ಛೆಯಲ್ಲ ಬದನೀಕಾಯಿ ಇಚ್ಛೆ.

ಈಗ ನಡೆದ ಆಂದೋಲನದಲ್ಲಿ ವಿದ್ಯಾರ್ಥಿಗಳು ಬಹು ದೊಡ್ಡ ಭಾಗ ತಕ್ಕೊಂಡಿದ್ದಾರೆ. ಇವರು ರಾಜಕೀಯ ಚಳವಳಿಯಲ್ಲಿ ಸೇರಬಾರದೆಂದು ಸರಕಾರದವರು ಕಳೆದ ಮೂವತ್ತು ವರ್ಷಗಳಿಂದ ಮಾಡಬೇಕಾದ ಮತ್ತು ಮಾಡಬಾರದ ಪ್ರಯತ್ನೋಪಾಯಗಳನ್ನು ಮಾಡಿದರು. ಮುಂಬಯಿ ಸರಕಾರದವರು ತಳೆಗಾವದ ರಾಷ್ಟ್ರೀಯ ಶಾಲೆಯನ್ನು ಬಂದು ಮಾಡಲು ಹಿಂದೆ ಮುಂದೆ ನೋಡಲಿಲ್ಲ. ಏನು ಮಾಡಿದರೂ ವಿದ್ಯಾರ್ಥಿಗಳು ರಾಜಕೀಯ ಚಳವಳಿಯಲ್ಲಿ ಸೇರುವದನ್ನು ಬಿಡಲಿಲ್ಲ. ಈಗಂತೂ ಅವರನ್ನು ಕೇಳತಕ್ಕವರೇ ಇಲ್ಲ. ವಿದ್ಯಾಧಿಕಾರಿಗಳು ದುರ್ಬಲರಾಗಿ ಇವರಿಗೆ ಬೇಕಾದರೆ- ಕಲಿಯಿರಿ; ಸಾಕಾದರೆ ಬಿಡಿರೆನ್ನುವಂಥ ಪರಿಸ್ಥಿತಿ ಬಂದಿದೆ. ಬಹಿಷ್ಕಾರ, ಪಿಕೆಟಿಂಗ ಹರತಾಳದ ರಣಭೇರಿ ಹೊಡೆದರೆ ತೀರಿತು. ಇವರು ಶಾಲೆ-ಕಾಲೇಜಗಳಿಗೆ ಶರಣು ಹೊಡೆದರೆಂದೇ ತಿಳಿಯಬೇಕು. ಶಿಸ್ತು, ಶಾಲೆಯಿಂದ ಹೊರಗೆ ಹಾಕುವದು, ವರ್ಷೆರಡು ವರ್ಷ ಮೇಲಿನ ವರ್ಗಕ್ಕೆ ಹಾಕದಿರುವದು; ದಂಡ ಇವೆಲ್ಲ ತ್ರೇತಾಯುಗದ ಮಾತುಗಳಾಗಿರುತ್ತವೆ. ಸ್ವದೇಶದ ದೆಸೆಯಿಂದ ಮಾಡತಕ್ಕ ಕರ್ತವ್ಯದಲ್ಲಿ ಇವರು ತಮ್ಮ ವಯಸ್ಸಿಗೆ, ತಮ್ಮ ಜ್ಞಾನಕ್ಕೆ ಮತ್ತು ಪ್ರಕೃತಿಗೆ ಮಾನಿಸುವಷ್ಟು ಪೂರ್ಣ ಜಾಗ್ರತರಾಗಿದ್ದಾರೆ. ಹೆಡ್ಡಮಾಸ್ತರರು ರಾಷ್ಟ್ರೀಯ ನಿಶಾನೆ ಕಿತ್ತಿಸಿದರೆ ಪುನಃ ಹಚ್ಚುವರು. ಸರಕಾರದಿಂದ ಆಪೇಕ್ಷಾರ್ಹವೆಂದೆನಿಸಿದ ಪುಸ್ತಕಗಳಲ್ಲಿಯ ಪಾಠಗಳನ್ನು ಪ್ರೊಫೇಸರರ ಎದುರಿಗೆ ಓದುವರು. ಸ್ವಯಂಸೇವಕರಾಗಿ ತುರಂಗಕ್ಕೆ ಹೋಗುವರು. ನಗರ ಸಂಕೀರ್ತನೆ ಮಾಡಿ, ಮೆರವಣಿಗೆಯಲ್ಲಿ ಸೇರಿ, ಹಳ್ಳಿಗಾಡಿನವರಲ್ಲಿಯೂ ಜಾಗೃತಿಯನ್ನುಂಟುಮಾಡುವರು. ಸ್ವರಾಜ್ಯ ಚಳವಳಿಯು ಇಷ್ಟು ಘನ ಮಹಿಮೆ ಹೊಂದಲಿಕ್ಕುಂಟಾದ ಹಲವು ಬಾಬುಗಳ ಇವರು ಇದ್ದೇ ಇರುವರು. ಈ ಪ್ರಕಾರ ವಿದ್ಯಾರ್ಥಿಗಳು ಕೈಕೊಂಡ ಕರ್ತವ್ಯದಲ್ಲಿ ಹೊತ್ತಿಳಿದರೆ- ಶಾಲೆ ಕಾಲೇಜಗಳಿಗೆ ಹೋಗುವರು. ಇವರು ಹೋದಾಗ ಕಲಿಸುವದಿಷ್ಟೇ ಪಂತರು ಪ್ರೊಫೇಸರರ ಕೆಲಸ. ಏಕೆ ಬರಲಿಲ್ಲೆಂದು ಕೇಳುವ ಭಾಗವೇ ಉಳಿದಿಲ್ಲ, ಹೀಗೇಕಾಯಿತೆಂದು ವಿಚಾರ ಮಾಡುವದು ಆಳರಸರ ಅವಶ್ಯವಾದ ಕೆಲಸ. ಮೇಲೆ ಹೇಳಿದ ಕನ್ನಡ ಗಾದೆಯ ಮಾತಿನಂತೆ ಇವರ ಹುಕುಮತ್ತು ಎಷ್ಟೂ ಉಳಿದಿಲ್ಲ. ಮೊದಲಿನ ಗುರುಭಕ್ತಿಯುಳಿಯಲಿಕ್ಕಾವ ಕರ್ತವ್ಯ ಮಾಡಬೇಕಾದೀತೆಂಬದನ್ನು ಕಂಡು ಹಿಡಿಯತಕ್ಕದ್ದು ಅವಶ್ಯಕ.

ವಿಸಾಪುರದ ತುರಂಗದ ವೇದನೆಗಳು.

ಗಾಯದ ಮೇಲೆ ಉಪ್ಪು ಸವರಿದಂಥ ವೇದನೆಗಳು.

ಕಾಂಗ್ರೆಸ ಕಮೀಟಿಯ ವತಿಯಿಂದ ಸರಕಾರದಿಂದ ಅಪ್ಪಣೆ ಪಡಕೊಂಡು ವಿಸಾಪೂರದ ತುರಂಗದ ಒಳ ವಿಚಾರವನ್ನು ನೋಡಲಿಕ್ಕೆ ಹೋದ ಗೃಹಸ್ಥರು ಅಲ್ಲಿಯ ದುಃಖಮಯಸ್ಥಿತಿಯನ್ನು ಅತ್ಯಂತ ಹೃದಯದ್ರಾವಕವಾಗಿ ವರ್ಣಿಸಿದ್ದಾರೆ. ಅವರು ಹೇಳುವದೇನಂದರೆ-

೧ ತುರಂಗವು ದನದ ಹಕ್ಕಿ ಅಥವಾ ಕೋಣದ ವಾಡೆಯಾಗಿದೆ.

೨ ನೊರಜು, ಚಿಕ್ಕಾಡ, ಗುಂಗಾಡಗಳ ಕಾಟ ಮಾತ್ರವಲ್ಲ; ಹಾವೂ ಚೇಳೂ ಸ್ಪರ್ಧೆಯಿಂದ ಕೈದಿಗಳ ಕೋಣೆಯಲ್ಲಿ ದರ್ಶನ ಕೊಡುವವು.

೩ ಕೈದಿಗಳಿಗೆ ಶೌಚ ಮೂತ್ರ ಸ್ನಾನಪಾನಸೇರಿ ಒಂದು ಬಿಂದಿಗೆಯಷ್ಟು ನೀರು ಕೊಡುವರು

೪ ವಾರ್ಡರ ಮತ್ತು ಪೋಲಿಸರು ಕೈದಿಗಳಿಗೆ ದೊಣ್ಣೆಯ ಪ್ರಸಾದ ಕೊಡುವರು.

೫ ಡಾಕ್ಟರರ ಸರ್ಟಿಫಿಕೇಟಿನ ಹೊರತು ಯಾರಿಗೂ ಹೆಚ್ಚು ವೇಳೆ ಬೈಲಕಡಿಗೆ ಕೂಡ್ರಗೊಡುವದಿಲ್ಲ.

೬ ಅನ್ನ ರೊಟ್ಟಿಯಲ್ಲಿ ಹರಳು ಮಣ್ಣೇ ಕೂಡಿರುತ್ತವೆ

ಈ ತುರಂಗವನ್ನು ಬಂದು ಮಾಡಿ, ಕೈದಿಗಳ ಯಮಯಾತನೆಗಳನ್ನು ತಪ್ಪಿಸಬೇಕೆಂದು ಇವರು ಸರಕಾರಕ್ಕೆ ಸೂಚನೆ ಮಾಡಿದ್ದಾರೆ.

ಮೌಲಾನಾ ಮಹಮದಲ್ಲಿಯವರ ಮಹದಾಶೆ.

ಮೌಲಾನಾ ಮಹಮದಲ್ಲಿಯವರು ಬ್ರಿಟಿಶ ಸರಕಾರದಿಂದಲೇ ತಮ್ಮ ಹಾಗು ತಮ್ಮ ಜನಾಂಗದ ಉದ್ಧಾರವಾಗುವದೆಂಬ ಮತದವರಾಗಿ, ಈಗಿನ ಚಳವಳಿಯನ್ನು ಆದಷ್ಟು ವಿರೋಧಿಸುವದಲ್ಲದೆ, ಕಾಯದೆಭಂಗ ಮಾಡಿ, ಮಹಾತ್ಮರು ದೊಡ್ಡ ತಪ್ಪು ಮಾಡಿದರೆಂದು ಹೇಳುವದಕ್ಕೂ ಹಿಂದೆ ಸರಿದಿಲ್ಲ. ಅಸೆಂಬ್ಲಿ ಮತ್ತು ಕೌನ್ಸಿಲಗಳಲ್ಲಿ ಅರ್ಥವಿಲ್ಲೆಂದವರು ಅಸೆಂಬ್ಲಿಯ ಏಕನಿಷ್ಠ ಭಕ್ತರಾಗಿ, ಉಮೇದವಾರರಾಗಿದ್ದಾರೆ. ಮುಂದೆ ಅಸೆಂಬ್ಲಿಯ ಮೆಂಬರರಾಗುವದಕ್ಕಿಂತ ಹೆಚ್ಚಿನ ಹಾರಿಕೆಯನ್ನೂ ಹಾರಿದ್ದಾರೆ. ಅದರ ಅಧ್ಯಕ್ಷರಾಗಬೇಕೆಂಬ ಅಭಿಲಾಷೆ. ಸರಕಾರವೂ ಅನುಕೂಲ. ಅಧ್ಯಕ್ಷರಾಗಲು ತನ್ನ ಹೋಟುಗಳನ್ನೆಲ್ಲ ಇವರಿಗೆ ಕೊಡಲು ಸಿದ್ಧವಾಗಿದೆ. ಒಮ್ಮೆ ತುರಂಗದಲ್ಲಿ ಹಾಕಿದ ಸರಕಾರವೇ ಇವರನ್ನು ಅಧ್ಯಕ್ಷ ಪದದ ಪಟ್ಟಗಟ್ಟಲಿಕ್ಕೆ ಸಿದ್ಧವಾಗುವದನ್ನು ನೋಡಿದರೆ- ಜನರು ಹೇಗೆ ಹೊತ್ತು ಬಂದಂತೆ ಕೊಡೆ ಹಿಡಿಯುತ್ತಾರೆಂಬದನ್ನು ತೋರಿಸುತ್ತದೆ.

ಈಚಲಗಿಡ ಕಡಿದುದಕ್ಕೆ ಹುಬ್ಬಳ್ಳಿಯಲ್ಲಿ ದಸ್ತಗಿರಿ

ಹುಬ್ಬಳ್ಳಿಯ ಕಾಂಗ್ರೆಸ ಕಮೀಟಿಯ ಮುಖಂಡರಾದ ಶ್ರೀ. ರಮಾಕಾಂತ ಗೋಳೀಕೇರಿ ಮತ್ತು ಶ್ರೀ. ರಾಮಚಂದ್ರ ವೆಂಕಟೇಶ ಕರಗುದರಿ ಇವರನ್ನು ಸರಕಾರೀ ಗಿಡ ಕಡಿದರೆಂಬ ಆರೋಪದಿಂದ ನಿನ್ನಿನ ದಿವಸ ಪ್ರಾತಃಕಾಲದಲ್ಲಿ ದಸ್ತಗಿರ ಮಾಡಿ ಧಾರವಾಡಕ್ಕೆ ತಂದರು. ವಿಚಾರಣೆಯು ಡಿ|| ಡಿ|| ಕಲೆಕ್ಟರರಾದ ಶ್ರೀ. ದೇಶಪಾಂಡೆಯವರ ಮುಂದೆ ನಡೆಯಿತು. ಆರೋಪಿಗಳು ವಿಚಾರಣೆಯಲ್ಲಿ ಭಾಗ ತಕ್ಕೊಳ್ಳುವದಿಲ್ಲೆಂದು ಹೇಳಿದರು. ಇಂದು ಮಧ್ಯಾಹ್ನಕ್ಕೆ ಉಳಿದ ವಿಚಾರಣೆಯಾಗಿ ತೀರ್ಪು ಹೇಳಲ್ಪಡುವದು.

ನರಗುಂದದಲ್ಲಿ ಕದರುಂಡಿಗೆಯ ಬಹುಮಾನ.

ನರಗುಂದದಲ್ಲಿ ಉತ್ತಮವಾಗಿ ನೂತವರಿಗೆ ಕದರುಂಡಿಗೆ ಕೊಡುವ ಸಮಾರಂಭವನ್ನು ತರುಣ ಸಂಘದವರು ನಡೆಸಿದರು. ಇನಾಮು ಪಡೆದವರು

೧ ಶ್ರೀ. ರಾಚಪ್ಪಾ ಜನಗಾ- ಬೆಳ್ಳಿಯದು
೨ ,, ಸಿದ್ಧಪ್ಪಾ ಕೋಟಿ ,,
೩ ,, ವಾಸುದೇವ ಜೋಶಿ ಸಾದಾ

ತರುಣ ಸಂಘದವರು ನೂಲುವ ಮತ್ತು ನೇಯಿಸುವ ಕೆಲಸವನ್ನು ಉತ್ತಮ ರೀತಿಯಿಂದ ನಡಿಸಿದಾರೆ

ಗೆರೆ ಕೊರೆದು ಕೆಲಸ.

ಬಂಕಾಪೂರದಲ್ಲಿ ಈಚಲದ ಭಯಂಕರ ಸಂಹಾರ.

—(೦)—

ಅಧಿಕಾರಸ್ಥರ ಎದುರಿಗೇ ಗಿಡ ಕಡಿದರು.

——:-:*:-:——

ಶಿಂದಿಯವರು ಬಂಕಾಪೂರದ ಸ್ವಯಂಸೇವಕರನ್ನು ಹೊಡೆದ ಮುಯ್ಯ ತೀರಿಸಿಕೊಳ್ಳಲು- ಊರವರು ಮೊದಲು ಪೋಲಿಸರಿಗೂ ಮ್ಯಾಜಿಸ್ಟ್ರೇಟರಿಗೂ ಮುಂದಾಗಿ ತಿಳಿಸಿ, ಗಿಡಗಳನ್ನು ಕಡಿಯಲಿಕ್ಕೆ ಹೋದರು. ಕನಿಷ್ಠ ೧೫೦೦ ಜನರಿದ್ದರು. ಸಂಗಡ ಹೋದ ಮಾಲೀಕ, ಹೊಲದ ನಕಾಶೆ, ಗೌಡ ಕುಲಕರ್ಣಿಯವರನ್ನು ಕರೆದುಕೊಂಡು ಹೋದರು. ಮಾಮಲೇದಾರರೂ ಪೋಲಿಸ ಸಾಹೇಬರೂ ಬಂದರು. ಅವರ ಎದುರಿಗೆ ಮಾಲಕೀ ಗಿಡಗಳನ್ನು ನಿರ್ಭಯದಿಂದ ಕಡೆದರು. ಊರಲ್ಲಿ ಹರತಾಳಮಾಡಿ, ಚಹಾ, ಚುಟ್ಟಾ ಮೊದಲಾಗಿ ಯಾವ ಪದಾರ್ಥವೂ ದೊರೆಯದಂತೆ ಮಾಡಿದ್ದರು.

ಶ್ರೀ ಚಿಕ್ಕೋಡಿ ಪಂಡಿತಪ್ಪನವರ ಮೇಲೆ ರಾ. ಬ. ಅಂಗಡಿಯವರ ನಿಷೇಧದ ಠರಾವು.

—(೦)—

ಬೆಳಗಾವಿಯ ಡಿಸ್ಟ್ರಿಕ್ಟ ಲೋಕಲಬೋರ್ಡಿನಲ್ಲಿ ಇಂಜಿನಿಯರರಿಗೆ ಒಬ್ಬ ಪರ್ಸನಲ ಅಸಿಸ್ಟಂಟರನ್ನು ನೇಮಿಸುವದು ಗೊತ್ತಾಯಿತು. ಈ ಸ್ಥಳದ ದೆಸೆಯಿಂದ ಅಧ್ಯಕ್ಷರಾದ ಶ್ರೀ. ಪಂಡಿತಪ್ಪನವರು ವರ್ತಮಾನಪತ್ರಗಳಲ್ಲಿ ಜಾಹೀರಾತು ಕೊಟ್ಟರು. ಜಾಹೀರಾತಿನಿಂದ ಬರತಕ್ಕಷ್ಟು ಅರ್ಜಿಗಳು ಬರಲಿಲ್ಲ. ಇದರಿಂದ ಶ್ರೀ. ಪಂಡಿತಪ್ಪನವರ ವರ್ತನವು ನಿಷೇಧಾರ್ಹವಾಗಿರುತ್ತದೆಂದೂ ಇವರಲ್ಲಿ ನಂಬಿಗೆಯಿಲ್ಲೆಂದೂ ರಾ ಬ ಅಂಗಡಿಯವರು ನಿಷೇಧದ ಠರಾವು ತಂದರು. ಶ್ರೀ. ಮುಜಲಿಯವರು ಠರಾವನ್ನು ವಿರೋಧಿಸಿ, ಶ್ರೀ ಪಂಡಿತಪ್ಪನವರಲ್ಲಿ ಪೂರ್ಣ ವಿಶ್ವಾಸವಿರುತ್ತದೆಂಬ ಠರಾವು ತಂದರು ಈ ಠರಾವು ದೊಡ್ಡ ಬಹುಮತದಿಂದ ಪಾಸಾಯಿತು

ಶ್ರೀ. ಸತ್ಯಮೂರ್ತಿಯವರ ಸತ್ಯವಚನ

—೦*೦—

ಈಗಿನ ಆಂದೋಲನದಲ್ಲಿ ಇಂಗ್ಲಂಡ ಮತ್ತು ಹಿಂದುಸ್ಥಾನದ ನಡುವೆ ಸರಿಸಮಾನಸ್ಕಂದರಂತೆ ಒಡಂಬಡಿಕೆಯಾಗಬೇಕಾದ್ದರಿಂದ ತಾವು ಕೌನ್ಸಿಲಕ್ಕೆ ಉಮೇದವಾರರಾಗಿ ನಿಲ್ಲುವಷ್ಟು ಉಚಿತವಾಗದ್ದರಿಂದ, ಉಮೇದವಾರಿ ಬಿಟ್ಟಿದ್ದೇವೆಂದು ಶ್ರೀ. ಸತ್ಯಮೂರ್ತಿಯವರು ಪ್ರಸಿದ್ಧ ಮಾಡಿದ್ದಾರೆ.

ರಾಜಕೀಯ ಕೆಲಸಕ್ಕೆ ಟಿಳಕ ಫಂಡಿನಿಂದ ಮೂರು ಲಕ್ಷದ ಸಹಾಯ.

——(೦)——

ಚಿರೋಲ ಪ್ರಕರಣದಲ್ಲಿ ಲೋಕಮಾನ್ಯರಿಗೆ ಸಹಾಯವೆಂದು ಅವರ ಹಿತೈಷಿಗಳು ಲೋಕಮಾನ್ಯರಿಗೆ ಒಂದು ಲಕ್ಷ ರೂಪಾಯಿಯ ಕಾಣಿಕೆ ಕೊಟ್ಟರು. ಲೋಕಮಾನ್ಯರು ಇದನ್ನು ತಾವು ತಕ್ಕೊಳ್ಳದೆ, ಸಾರ್ವಜನಿಕ ಕೆಲಸಕ್ಕೆ ಕೊಟ್ಟರು ಅದು ಈಗ ಮೂರು ಲಕ್ಷವಾಗಿದೆ. ಇದನ್ನು ಶ್ರೀ. ಕೇಳಕರ ಮತ್ತು ವಿದ್ವಾಂಸರು ರಾಜಕೀಯ ಕೆಲಸಕ್ಕೆ ಕೊಟ್ಟರು. ಅದನ್ನು ಇಡೀ ಹಿಂದುಸ್ಥಾನಕ್ಕೆ ಹಂಚಿಕೊಟ್ಟದ್ದು, ಕರ್ನಾಟಕದ ಪಾಲಿಗೆ ೩೫ ಸಾವಿರ ರೂಪಾಯಿ ಬಂದಿವೆ ಇದರ ಬಡ್ಡಿಯನ್ನು ಮಾತ್ರ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಾಗಿ ವೆಚ್ಚ ಮಾಡತಕ್ಕದ್ದಿರುತ್ತದೆ

ಪಂಡಿತ ಮಾಲವಿಯಾಯವರು ಡಿಫೆನ್ಸ ಕೊಡುವರು.

—(೦)—

ಮುಂಬಯಿಯಲ್ಲಿ ಕಾಂಗ್ರೆಸ ಕಮಿಟಿಯವರಲ್ಲಿ ಪಂಡಿತ ಮಾಲವಿಯಾಯವರು ಡಿಫೆನ್ಸ ಕೊಡುವರೆಂದು ಸುದ್ದಿ ಬಂದಿದೆ. ಪೋಲಿಸ ಕಮಿಶನರರು ಸಭಾಬಂದಿಗಾಗಿ ತೆಗೆದ ಹುಕುಮಿನಲ್ಲಿ ಅನೇಕ ಆಕ್ರಮಗಳಿದ್ದು ಕೋರ್ಟಿನಲ್ಲಿ ಖಟ್ಲೆಯು ನಡೆಯದೆಂದು ಅವರ ಮತವಾಗಿದೆ ಈ ಬಗ್ಗೆ ಅವರು ಒಬ್ಬ ವಕೀಲರ ಕೂಡ ಬಹಳ ಹೊತ್ತಿನ ತನಕ ಸಂಭಾಷಣೆ ಮಾಡಿದ್ದಾರೆ.

ಒಡಂಬಡಿಕೆಯು ನಿದ್ದೆ ಮಾಡುವದು

——(೦)——

ಮಹಾತ್ಮರ ಕೂಡ ಮಾತಾಡಿದ್ದಾಯಿತು. ಇನ್ನು ಪಂಡಿತದ್ವಯರು ಮತ್ತು ಬೇರೆ ಮುಖಂಡರು ಕೂಡ ಮಹಾತ್ಮರ ಸನ್ನಿಧಾನದಲ್ಲಿ ಮಾತಾಡುವದಕ್ಕೆ ಅಪ್ಪಣೆ ಬೇಡಿದ್ದು, ಆ ಬಗ್ಗೆ ಇನ್ನೂ ಲಾರ್ಡ ಅಯರ್ವಿನಸಾಹೇಬರಿಂದ ಉತ್ತರ ಬಂದಿಲ್ಲ. ಉತ್ತರ ಬರುವ ತನಕ ಒಡಂಬಡಿಕೆಯು ಮುಂದಿನ ಮಾತು ಕುಂಭಕರ್ಣನ ನಿದ್ದೆ ಮಾಡುವದು.

ಪಾರಸಿ ಜನರ ಪೂರ್ಣ ಸಹಾನುಭೂತಿ.

——(೦)——

ಈಗಿನ ರಾಜಕೀಯ ಚಳವಳಿಗೆ ತಮ್ಮ ಪೂರ್ಣ ಸಹಾನುಭೂತಿಯುಂಟೆಂದು ತೋರಿಸುವದಕ್ಕಾಗಿ ಮುಂಬಯಿಯ ಪಾರಸಿ ಜನರು ರವಿವಾರ ದಿವಸ ಪ್ರಚಂಡ ಮೆರವಣಿಗೆ ತೆಗೆದಿದ್ದರು. ಬೋರಿಬಂದರದ ಹತ್ತಿರಿರುವ ವಿಶಾಲವಾದ ದಾರಿಯಲ್ಲಿ ಇರುವೆ ಹೋಗಲಿಕ್ಕೆ ಅನುವು ಇಲ್ಲದಾಯಿತು. ಪೋಲೀಸರಿಂದ ಅಪ್ಪಣೆ ಪಡಕೊಳ್ಳದೆ ಮೆರವಣಿಗೆ ತೆಗೆದಿದ್ದರು. ಟ್ರಾಮು, ಮೋಟಾರ ಕುದುರೆಯ ಬಂಡಿಗಳ ವ್ಯವಹಾರವೆಲ್ಲ ಬಂದಾಯಿತು. ಶ್ರೀ. ಸಾ॥ ಗೋಶಿನವಶ್ಯಾಪ್ಪನ ಮತ್ತು ಡಾಕ್ಟರ ದಾದಾಚಾಂಜಿಯವರು ಇದರ ಮುಂದಾಳುವಾಗಿದ್ದರು.

ಗೋಕಾವಿಯ ಸುದ್ದೀ ಪತ್ರ.

—(೦)—

ತಾರೀಖು ೧೬-೭-೩೦ನೇ ದಿವಸ ಇಲ್ಲಿಯ ಮಾಮಲೇದಾರಸಾಹೇಬರು ತಮ್ಮ ಕಚೇರಿಯಲ್ಲಿ ಸಭೆಗೂಡಿಸಿ ತಾಲೂಕಿನಲ್ಲಿಯ ಯಾವತ್ತು ಗೌಡರನ್ನು ಕರೆಕಳುಹಿಸಿದ್ದರು. ಮತ್ತು ಅದರಲ್ಲಿ ಕೂಡಿದ ಪಾಟೀಲರಿಗೆಲ್ಲ ಬೆಳಗಾವಿಯಲ್ಲಿ ಹೊರಡುವ "ಪ್ರಜಾಧ್ವನಿ" ಎಂಬ ವರ್ತಮಾನ ಪತ್ರವನ್ನು ತೆಗೆದುಕೊಳ್ಳಲು ಹೇಳಿದರು.-

ಸಿಂದೀ ಗಿಡಗಳನ್ನು ಕಡೆದ ಹುದ್ದಿಯ ಮತ್ತು ಅಕ್ಕತಂಗೇರಹಾಳದ ಜನರ ಮೇಲೆ ನಡೆದ ಖಟ್ಲೆಯು ಮಾಮಲೇದಾರ ಮುಂದೆ ಸುರುವಾಯಿತು. ಅದರಲ್ಲಿ ಮಿಡಕನಹಟ್ಟಿ ಮತ್ತು ಕಟ್ಟಾಳದಲ್ಲಿ ಗಿಡಗಳನ್ನು ಕಡೆದ ಬಗ್ಗೆ ಬೇರೆ ಬೇರೆ ಎರಡು ಫಿರ್ಯಾದಿಗಳು ಮಾಡಲ್ಪಟ್ಟವೆ. ಈ ಖಟ್ಲೆಯಲ್ಲಿ ಒಬ್ಬ ಆರೋಪಿಯ ಹೊರ್ತು ಬೇರೆ ಯಾರೂ ವಕೀಲರನ್ನು ಕೂಡಲಿಲ್ಲ. ಹಾಗೂ ಕೋರ್ಟಿನ ಕೆಲಸದಲ್ಲಿ ಯಾವ ತರದ ಭಾಗವನ್ನೂ ತೆಗೆದುಕೊಳ್ಳುವದಿಲ್ಲೆಂದು ಹೇಳಿದರು. ಈ ಆರೋಪಿಗಳಲ್ಲಿ ಅಣ್ಣಾ ಬನಪ್ಪನೆಂಬ ಆರೋಪಿಗೆ ಹೆಸರು ಕೇಳಲಾಗಿ ಅವನು "ವಂದೇ ಮಾತರಂ" ಎಂದೂ ತಂದೆಯ ಹೆಸರು "ಗಾಂಧೀಮಹಾರಾಜ" ರೆಂದೂ ಹೇಳಿದನು. ಇದನ್ನು ಕೇಳಿ ಮಾಮಲೇದಾರಸಾಹೇಬರು ಸಿಟ್ಟಿಗೆದ್ದು ನೆಟ್ಟಗೆ ಉತ್ತರ ಕೊಡು; ಇಲ್ಲದಿದ್ದರೆ ನಿನ್ನನ್ನು ಮಾಫೀ ಬೇಡುವವರೆಗೆ ಕುರಂಗದಲ್ಲಿ ಹಾಕುವೆನೆಂದು ಗಟ್ಟಿಯಾಗಿ ನುಡಿದರು. ಅದಕ್ಕೆ ನನ್ನದೇನೂ ಅಡ್ಡಿಯಿಲ್ಲವೆಂದು ಆರೋಪಿಯು ಉತ್ತರ ಕೊಟ್ಟನು ಮಾಮಲೇದಾರಸಾಹೇಬರು ಹೀಗೆ ಮಾಡಲಿಕ್ಕೆ ಕಾಯದೇ ಪುಸ್ತಕಗಳನ್ನು ತಿರುವಿ ಹಾಕಿದರು. ಆದರೆ ಆ ತರದ ಅಧಿಕಾರವು ದೊರೆಯದ್ದರಿಂದ ಸುಮ್ಮನಾದರು.

ಅ. ಭಾ. ವೀರಶೈವ ರಾಜಕೀಯ ಪರಿಷತ್ತು, ಹಾವೇರಿ.

ಈ ಪರಿಷತ್ತಿಗೆ ಸ್ವಾಗತ ಕಮೀಟಿಯವರು ವೀರಶೈವ ಜನರ ಸೂಚನೆಯ ಮೇರೆಗೆ ರಾವಸಾಹೇಬ ಹಳಕಟ್ಟಿ ಇವರನ್ನು ಅಧ್ಯಕ್ಷರಾಗಿ ಆರಿಸಬೇಕೆಂದು ಠರಾವು ಮಾಡಿದ್ದರು ಆ ಪ್ರಕಾರ ಅವರಿಗೆ ಆಮಂತ್ರಣ ಕೊಡಲು ಹೋದಾಗ್ಯೆ ರಾವಸಾಹೇಬ ಹಳಕಟ್ಟಿಯವರು ದೇಹದಲ್ಲಿ ಸ್ವಸ್ಥವಿಲ್ಲದ ಕಾರಣ ತಮಗೆ ಅಧ್ಯಕ್ಷರಾಗಲಿಕ್ಕೆ ಶಕ್ಯವಿಲ್ಲವೆಂದು ಹೇಳಿದರು. ರಾವಸಾಹೇಬರ ತರುವಾಯ ಯಾರಿಗೆ ಹೆಚ್ಚು ಸೂಚನೆಗಳು ಬಂದಿದ್ದವೋ ಅಂಥಾ ಮ|| ರಾ|| ಮಂಜಪ್ಪನವರು ಹರಡೇಕರ ಇವರಿಗೆ ವಿನಂತಿ ಮಾಡಿಕೊಂಡಿತು. ಅವರು ನಮ್ಮ ವಿನಂತಿ ಮಾನ ಮಾಡಿ ಸಭೆಗೆ ಅಧ್ಯಕ್ಷರಾಗಲಿಕ್ಕೆ ಒಪ್ಪಿದ್ದಾರೆ.

ವಿಷಯಗಳು-

೧ ಅಖಿಲ ಭಾರತೀಯ ವೀರಶೈವ ರಾಜಕೀಯ ಸಂಸ್ಥೆಯ ಅವಶ್ಯಕತೆ ಮತ್ತು ಸ್ಥಾಪನೆ.
೨ ಸಂಸ್ಥೆಯ ರಚನೆ ಹಾಗು ನಿಯಮಗಳು
೩ ಕಾವುನ್ಸಿಲ್-ಅಸೆಂಬ್ಲಿಗಳ ಚುನಾವಣೆಗಳು
೪ ವಿಧಾಯಕ ಕಾರ್ಯಕ್ರಮ.
೫ ಸಾಯಮನ್ ಕಮಿಶನ್ ಮತ್ತು ರಾವುಂಡ ಟೇಬಲ್ ಕಾನಫರನ್ಸ್,
೬ ಸದ್ಯದ ರಾಷ್ಟ್ರೀಯ ಚಳವಳ ಮತ್ತು ಲಿಂಗಾಯತರ ಕರ್ತವ್ಯ.

ಕಾರ್ಯಕ್ರಮ

ಪರಿಷತ್ತಿನ ಕಾರ್ಯಕ್ರಮವು ತಾ|| ೯ನೆಯ ಶನಿವಾರ ದಿವಸ ಸಾಯಂಕಾಲಕ್ಕೆ ಪ್ರಾರಂಭವಾಗುವದು. ಆ ದಿವಸ ಸಾಯಂಕಾಲದ ಮೇಲ್‌ಗಾಡಿಗೆ ಅಧ್ಯಕ್ಷರ ಆಗಮನವಾಗುವದು. ಅಧ್ಯಕ್ಷರಿಗೆ ಸ್ಟೇಶನ್‌ದ ಮೇಲೆ ಸ್ವಾಗತವನ್ನಿತ್ತು ಊರಲ್ಲಿ ಮೆರವಣಿಗೆ ತೆಗೆಯುವದು. ಪರಿಷತ್ತಿನಲ್ಲಿ ಚರ್ಚಿಸತಕ್ಕ ವಿಷಯಗಳ ಮುಂದಾಲೋಚನೆಯ [ಪ್ರಿಲಿಮಿನರಿ] ಚರ್ಚೆಯು ರಾತ್ರಿ ಖಾಸಗಿ ರೀತಿಯಿಂದ ನಡೆಯುವದು. ತಾ|| ೧೦ನೆಯ ಆದಿತ್ಯವಾರ ದಿವಸ ಪ್ರಾತಃಕಾಲ ೮|| ಘಂಟೆಗೆ ಪರಿಷತ್ತಿನ ಕಾರ್ಯವು ಪ್ರಾರಂಭವಾಗುವದು. ಸ್ವಾಗತಾಧ್ಯಕ್ಷ, ಅಧ್ಯಕ್ಷರ, ಭಾಷಣಗಳಾದ ಮೇಲೆ ೧೦|| ಘಂಟೆಯಿಂದ ೧೨|| ಘಂಟೆಯವರೆಗೆ ವಿಷಯನಿಯಾಮಕ ಕಮೀಟಿಯು ಕೂಡುವದು. ಮಧ್ಯಾಹ್ನ ೩ ಘಂಟೆಗೆ ಪರಿಷತ್ತು ಪುನಃ ಪ್ರಾರಂಭವಾಗಿ ಅನೇಕ ಮಹತ್ವದ ಠರಾವುಗಳು ಪಾಸಾಗುವದಲ್ಲದೆ, ಮುಖಂಡರನೇಕರ ಭಾಷಣಗಳೂ ಆಗುವವು.

ವಿನಂತಿ

ಆದ ಕಾರಣ, ಸಕಲ ಸಮಾಜಾಭಿಮಾನಿಗಳು ಸದ್ಯದ ಹೀನಸ್ಥಿತಿಯ ಕಡೆಗೆ ಲಕ್ಷ್ಯಕೊಟ್ಟು ಮಾತೃಭಕ್ತಿಯಿಂದ ಪ್ರೇರಿತರಾಗಿ ಅವಶ್ಯವಾಗಿ ಪರಿಷತ್ತಿಗೆ ಬಂದು ಪರಿಷತ್ತನ್ನು ಯಶಸ್ವಿಯನ್ನಾಗಿ ಮಾಡಿ ಯಶೋಭಾಜನರಾಗಬೇಕೆಂದು ಬಲವಾದ ಬಿನ್ನಹವಿದೆ.

ತಾ|| ೨-೮-೩೦,   ಶಿವಶಂಕರಪ್ಪ ನೇಸರಗಿ,
ಹಾವೇರಿ.   ಅಧ್ಯಕ್ಷ ಸ್ವಾಗತ ಸಂಘ.

-ಬ್ಯಾಡಗಿ.-

ಪ್ರತಿವರ್ಷದ ಪದ್ಧತಿಯಂತೆ ಕಳೆದ ಬುಧವಾರ ತಾರೀಖು ೩೦-೭-೩೦ನೆಯ ಶ್ರಾವಣ ಶು|| ೫ ನೇ ದಿವಸ ಶ್ರೀ. ಲಿಂಗರಾಜ ವಾಚನಾಲಯದ ೯ನೆಯ ವರ್ಷದ ಉತ್ಸವವೂ ಮರುದಿವಸ ಶ್ರೀ ಶಿವಯೋಗೀಶ್ವರ ವೀರಶೈವ ಬೋರ್ಡಿಂಗಿನ ಉತ್ಸವವೂ ಬಹು ವಿಜೃಂಭಣೆಯಿಂದ ನೆರವೇರಿದವು.

ತಾ|| ೩೧-೭-೩೦ನೆಯ ದಿವಸ ಶ್ರೀ ಶಿವಯೋಗಿಗಳವರ ಹಾಗೂ ಶ್ರೀ. ಲಿಂಗರಾಜರವರ ಭಾವಚಿತ್ರದ ಮೆರವಣಿಗೆಯು ಸಾಯಂಕಾಲ ೪|| ಘ.ಟೆಗೆ ಹೊರಟು ಪುರ ಪ್ರದಕ್ಷಿಣೆ ಮಾಡಿಕೊಂಡು ೬ ಘಂಟೆಗೆ ಶ್ರೀಗಳವರ ಮಠವನ್ನು ಸೇರಿತು.

ಒಳಿಶ ಶ್ರೀಯುತ ಸಿದ್ದಪ್ಪನವರು ಸೋಗಿ ಇವರ ಅಧ್ಯಕ್ಷತೆಯ ಕೆಳಗ ಸಭೆ ನಡೆದು ಎ.|| ವೇಲ್ಮೂರಿ, ಎ|| ಮಾ. ತ್ರಿ ಕುಲಕರ್ಣಿ, ವೇ|| ಇಂಡಿಮಠ ಇವರ ಭಾಷಣಗಳಾದವು. ಕೊನೆಗೆ ಅಧ್ಯಕ್ಷರ ಮಹತ್ವದ ಭಾಷಣವಾಗಿ ಆಭಾರ ತಾಂಬೂಲ ಮಂಗಲಗಳೊಡನೆ ಸಭಾ ವಿಸರ್ಜನೆಯಾಯಿತು

ಮರುದಿವಸ ಶ್ರೀ. ಬೋರ್ಡಿಂಗಿನ ಸಭೆಯು ಕೂಡಿತು. ಶ್ರೀಯುತ ಬಿಳಿಅಂಗಡಿ ಬಿ ಎ. ಎಲ್ ಎಲ್. ಬಿ. ಹುಬ್ಬಳ್ಳಿ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಇದರಲ್ಲಿ ವಿ|| ಕ್ಯಾತಾರಿ ಇವರು ಚನ್ನಾಗಿ ಮಾತನಾಡಿದರು. ಕೊನೆಗೆ ಅಧ್ಯಕ್ಷರವರು ಬಹು ರಸವತ್ತಾಗಿ ಭಾಷಣ ಮಾಡಿ ಬೋರ್ಡಿಂಗಿಗೆ ಹತ್ತು (೧೦) ರೂಪಾಯಿ ಕಾಣಿಕೆಯನ್ನು ಕೊಟ್ಟರು. ಇದರಿಂದ ಜನರು ಒಳ್ಳೇ ಆನಂದಭರಿತರಾದರು. ನಮ್ಮ ವಾಚನಾಲಯಕ್ಕೆ ಮುರಿಗೆಪ್ಪ ಚಂದ್ರಾಪಟ್ಟಣ, ರಾಮಣ್ಣಾ ಸೂರ್ಯವಂಶಿ, ಸಿದ್ದಪ್ಪಾ ಮುಂಡಕ್ಕಿ, ಶಿವಯ್ಯಾ ಕಬ್ಬಿಮ್ಮನವರ ಇವರು ಮೆಂಬರರಾಗಲಿಕ್ಕೆ ಒಡಂಬಟ್ಟರು.

ಬ್ಯಾಡಗಿ   ಸೆಕ್ರೆಟರ
೩-೮-೩೦   ಕು ಫ. ಸಂಕಣ್ಣನವರ
ಶ್ರೀ. ಲಿಂಗರಾಜ ವಾಚನಾಲಯ

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಜುಲೈ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜೀಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫ ಕೋರ್ಟಿನ ಹತ್ತರ, ಧಾರವಾಡ

ಜಾಹೀರ ನೋಟೀಸು-
ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳೆ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಶಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧) ಧಾರವಾಡ ಗುರುವಾರ ತಾರೀಖು ೭ ನೇ ಅಗಸ್ಟ ೧೯೩೦ (ಸಂಚಿಕೆ ೧೭೪

ಪರದೇಶಿ ಬಟ್ಟೆ ಬಿಡಿರಿ.

——(೦)——

ದುರದೃಷ್ಟವು ನಮಗೊದಗಿತು ಸ್ವಹಿತವ |
ಮರೆತೆವು ನಾವುನ್ಮತ್ತರಂತೆಂದೆ ||
ಉರಲನು ಬಿಗಿದಿರಿಸಿದೆವವಿವೇಕದೆ |
ಕೊರಲೊಳು ಹೂಮಾಲೆಯುದೆಂದು ! ||೧||

ಹೊಂಗಿನ ಹೊಳಪಿಗೆ ಮನಸೋತೆವು ವೈ- |
ಮರೆತೆವು, ಹಣವನು ಸುರಿವಿದೆವು ||
ಪರದೇಶದ ಬಟ್ಟೆಯ ಕೊಂಡೊಡನೆಯೆ |
ಕರೆತಂದೆವು ದಾರಿದ್ರ್ಯವನು ! ||೨||

ತೊರೆದೆವು ಸಾರಾಸಾರ ವಿಚಾರವ
ಮೆರೆದೆವು ಪರದೇಶದ ವಸ್ತ್ರದಲಿ ! ||
ಮುರಿದೆವು ಸ್ವಜನರ ಗೋಣನು ಮರಮರ |
ಮರುಗಿಸಿದೆವು ಪಾಪಿಗಳೈ ನಾವು ! ||೩||

ಪರದೇಶದ ಬಟ್ಟೆಯು ಮಾರಲು ತೆರೆ- |
ದರು ವ್ಯಾಪಾರಿಗಳಂಗಡಿಗಳನು ||
ದುರುಳತನದೆ ಭೂಮಾತೆಯು ಮೈಗೆ |
ಹರಹರ ತೂತುಗಳನು ಮಾಡಿದರು ! ||೪||

ಹರಿವುದು ಭರದಲಿ ಧನದ ಪ್ರವಾಹವು |
ತೆರಪಿಲ್ಲದೆ ಪರದೇಶಿಗಳೆಡೆಗೆ ! ||
ಹರಿವುದು ನಾಡಿನ ನೆತ್ತರ ಪೂರವು ! |
ತೆರೆಯಿರಿ ಕಣ್ಣನು, ನೋಡಿರಿದೇನು ! ||೫||

ತೆರೆಯಿರಿ ಕಣ್ಗಳನಿನ್ನಾದರು ನೋ- |
ಡಿರಿ ನಾಡಿನ ದುರವಸ್ಥೆಯನು ||
ಕರಿಗಾಲಿನ ಪರದೇಶದ ಬಟ್ಟೆಯು |
ಹರಿದದಕಿಕ್ಕಿರಿ ಬೆಂಕಿಯನು ! ||೬||

ಪರಿಶುದ್ಧವು ತಾಯ್ನಾಡಿನ ವಸ್ತ್ರವು |
ಪರಮೋತ್ಸಾಹವು ನಮಗದರಿಂದೆ ||
ಪರಮಾಭ್ಯುದಯವು ಭಾರತ ಭೂಮಿಗೆ |
ಪರಮಾದರದಿಂದದನೆ ಧರಿಸಿರಿ ||೭||

೫-೮-೧೯೩೦.

"ಪ್ರದ್ಯುಮ್ನ"

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುದು. ದರವನು, ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವತ್ತಿ ಇಟ್ಟುಕೊಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ ವಿಜಯ ಧಾರವಾಡ.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲು
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಅಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೆಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

ಅಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೆಜರ ವಿಜಯ, ಧಾರವಾಡ

ಧಾರವಾಡ ಪ್ರಯ ಗುರುವಾರ ತಾರೀಖು ೭ ನೇ ಆಗಸ್ಟ ೧೯೩೦ ಇಸ್ವಿ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ಶುದ್ಧ ೧೨

ಯಾರ ಹಟ! ಅಧಿಕಾರಬಲದ ಹಟ!!

ಮುಂಬಯಿಯಲ್ಲಿ ಮುನ್ನೂರು ಜನರು ತಲೆಯೊಡಿಸಿಕೊಂಡದ್ದರ ಅಪರಾಧದ ಮೊಟ್ಟೆಯನ್ನು ಪೋಲೀಸರು ಕಾಂಗ್ರೆಸದವರ ಮೇಲೆ, ಮತ್ತು ಕಾಂಗ್ರೆಸಿನವರು ಪೋಲಿಸರ ತಲೆಯ ಮೇಲೆ ಹಾಕತೊಡಗಿದ್ದಾರೆ. ಇಬ್ಬರ ಜಗಳವನ್ನು ತೂಷ್ಣೀಭಾವದಿಂದ ನೋಡುತ್ತಿರುವಂಥ ಮವಾಳರು ಎಲ್ಲ ತಪ್ಪನ್ನು ಪೋಲಿಸರ ಮೇಲೆ ಹಾಕಿದ್ದಾರೆ. ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮಿ ಮೋಡಿ ಹಾಗು ವ್ಯಾಪಾರ ಸಂಘದ ಅಧ್ಯಕ್ಷ ಶ್ರೀ. ಲಾಲಜಿಯವರೂ ಪೋಲಿಸರದೇ ಸರ್ವಾಪರಾಧವೆಂದು ಹೇಳಿದ ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ.

ಮೆರವಣಿಗೆಯು ಬೋರಿಬಂದರಕ್ಕೆ ಬಂದ ಕೂಡಲೆ- ಇದು ಹಾರ್ನಬಿಬೀದಿಗೆ ಹೋಗಬಾರದೆಂದು ಒಂದು ಸಾವಿರ ಪೋಲಿಸರು ಇದನ್ನು ಅಡ್ಡಗಟ್ಟಿ ತರಬಿದರು. ಜನರು ಧರಣೀ ಕೂತರು. ಆಗ ಸಂಧ್ಯಾಕಾಲವಾಗಿತ್ತು. ಮುಖ್ಯ ದಾರಿ ಬಂದಾಯಿತು. ಲೋಕಮಾನ್ಯರನ್ನು ದಹನ ಮಾಡಿದ ರುದ್ರಭೂಮಿಯಿಂದ ಇಲ್ಲಿಯ ತನಕ ಮೆರವಣಿಗೆಯು ದಾರಿ ಕಟ್ಟುತ್ತಲೇ ಬಂತು. ಆಗ ಪೋಲಿಸರು ಇದಕ್ಕೆ ಯಾವ ಪ್ರಕಾರದಿಂದಲೂ ಅಡ್ಡ ಬಂದಿಲ್ಲ. ಯುರೋಪಿಯನ್ನರ ಬೀದಿಯಲ್ಲಿ ಹೋಗಬಾರದೆಂಬ ಕುಬುದ್ಧಿಯಿಂದ ಇದನ್ನು ಬೋರೀ ಬಂದರದ ಹತ್ತರ ತಡವಿದರು.

ಧರಣೀ ಕೂತವರು ಇಡೀ ರಾತ್ರಿ ಅಲ್ಲಿ ಕಾಲ ಕಳೆದರು. ಪೋಲೀಸರು ಇವರಿಗೆ ಹೋಗಗೊಡದಂಥ ಹಾರ್ನಬಿ ರೋಡದಲ್ಲಿಯ ಎಲ್ಲ ಅಂಗಡಿಗಳು ಸಾಯಂಕಾಲದಲ್ಲಿ ಮುಚ್ಚುತ್ತಿವೆ. ರಾತ್ರಿ ಹತ್ತರ ತರುವಾಯ ಅಲ್ಲಿ ಕಗ್ಗತ್ತಲು ಆಗುತ್ತದೆ. ಮ್ಯುನಿಸಿಪಾಲಿಟಿಯ ದೀಪಗಳ ಹೊರ್ತು ಬೆಳಕೇ ಇರುವದಿಲ್ಲ. ಸಾಯಂಕಾಲದಲ್ಲಿ ಬೀದಿ ಹಿಡಿಸಲಾರದಷ್ಟು ಜನಸಂಮರ್ದನೆ ಇರುವದು. ಅದೇ ಸ್ಥಳವು ರಾತ್ರಿಯಲ್ಲಿ ನಿರ್ಜನವಾಗುವದು. ಪೋಲೀಸರು ನಿರ್ಜನವಾದಾಗ ಕೂಡ ಮೆರವಣಿಗೆ ತೆಗೆಯಗೊಡಲಿಲ್ಲ.

ಮೆರವಣಿಗೆಯಿಂದ ದಾರಿ ಕಟ್ಟಾಗುತ್ತದೆಂದು ಪೋಲೀಸ ಕಮೀಶನರರು ಅಂದದ್ದು ಮೇಲ್ಬುಟಿಯ ಮಾತು. ಹೊಟ್ಟೆಯೊಳಗಿನ ಸಂಕಟ ಬೇರೆ ಇತ್ತು. ದಾರಿ ಬಂದು ಮಾಡುವದಿಲ್ಲ. ವಾಹನಗಳಿಗೆ ಬೇಕಾದಷ್ಟು ಹಾದೀ ಕೊಡುತ್ತೇವೆ. ನಾಲ್ವರದೊಂದು ಸಾಲು ಮಾಡುತ್ತೇವೆಂದು ಸರದಾರ ಪಟೇಲರೆಂದರು. ನಾಲ್ವರೂ ಬೇಡ; ಇಬ್ಬರದೊಂದು ಸಾಲು ಮಾಡುತ್ತೇವೆಂದು ಪಂಡಿತ ಮಾಲವಿಯಾಯವರು ಹೇಳಿದರು. ಪೋಲೀಸ ಕಮೀಶನರರು ಈ ವ್ಯವಸ್ಥೆಗೆ ಒಪ್ಪದೆ ತಮ್ಮ ಬಿಂಕ ಬಿಡಲೇ ಇಲ್ಲ. ರಾಜಿಯ ಎಲ್ಲ ಉಪಾಯ ನಿಂತಿತು. ಬೆಳಗಾಯಿತು. ಪೋಲೀಸರು ಮುಖಂಡರನ್ನು ಹಿಡಿದು, ಉಳಿದವರ ಮೇಲೆ ಲಾಠಿಯ ಪ್ರಯೋಗ ಮಾಡಿದರು. ಇವರಿಗೆ ಪ್ರಸಾದ ಕೊಟ್ಟದ್ದರೆ ಲೋಕೋತ್ತರ ಅಪಕೀರ್ತಿ ಬರುವದೆಂದು ಬಗೆದು, ಇವರ ಕೂದಲೆಳೆಗೆ ಸಹ ಕೈ ಹಚ್ಚದೆ, ಇವರನ್ನು ಕಾಯದೆಯ ಹೆಸರಿನಿಂದ ಹಿಡಿದು, ಉಳಿದವರಿಗೆ ಡೊಣ್ಣೆಯ ಪ್ರಸಾದ ಕೊಟ್ಟರು.

ಈ ಅಲ್ಪ ವಿವೇಚನೆಯಿಂದ ಕಾಂಗ್ರೆಸದವರ ಹಟವಿರಲಿಲ್ಲ. ಸಾಮೋಪಚಾರಕ್ಕೆ ಸಿದ್ಧರಿದ್ದರೆಂದೂ, ಪೋಲೀಸರು ಅಧಿಕಾರ ಬಲದಿಂದ ತಮ್ಮದೇ ಹಟ ನಡಿಸಿದರೆಂದೂ ಸ್ಪಷ್ಟವಾಗುತ್ತದೆ. ಲೋಕಮತವಾದರೂ ಕಾಂಗ್ರೆಸಕ್ಕೇ ಅನುಕೂಲವಾಗಿರುತ್ತದೆ

ಕುರಂಗವಲ್ಲ; ಕೊಂಡವಾಡೆಯು.

———(೦)———

ಮುಂಬಯಿಯಲ್ಲಿ ಪಂಡಿತ ಮಾಲವಿಯವರನ್ನು ಇಟ್ಟ ಪೋಲೀಸರ ಕುರಂಗವು ಕುರಂಗವಲ್ಲ; ಕೊಂಡವಾಡೆಯಾಗಿರುತ್ತದೆಂದು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿಯೇ ಪ್ರಶ್ನೋತ್ತರಗಳು ನಡೆದವು. ಪೋಲೀಸರ ಲಾಕಪ್ಪಿನಲ್ಲಿರುವದು ಮನುಷ್ಯ ಮಾತ್ರನಿಗೆ ಅಶಕ್ಯವಾದದ್ದು. ಕೋಣೆಗಳು ಬಹಳ ಹೊಲಸಿರುತ್ತವೆ. ಇವು ಕೈದಿಗಳ ಕೋಣೆಗಳಲ್ಲ. ಕೊಂಡವಾಡೆಗಳಾಗಿವೆಂದು ಸರದಾರ ಪಟೇಲರೆಂದರು. ಇಲ್ಲಿಯ ತಗಣಿಗಳು ಸಾಮಾನ್ಯವಲ್ಲ. ಮನುಷ್ಯರಷ್ಟು ದೊಡ್ಡವಾಗಿರುತ್ತವೆಂದು ಬ್ಯಾರಿಸ್ಟರ ಶಿರವಾನಿಯವರೆಂದರು. ಒಂದೇ ಕೋಣೆಯಲ್ಲಿ ಸ್ತ್ರೀ ಮತ್ತು ಪುರುಷ ಕೈದಿಗಳನ್ನು ಹಾಕುತ್ತಾರೆಂದು ಈ ಪ್ರಶ್ನೋತ್ತರದಲ್ಲಿ ಹೊರಬಿದ್ದದ್ದಂತೂ ಆಶ್ಚರ್ಯಕರವಾದದ್ದು.

ಶಹಾಪೂರನವರ ಮೇಲೆ
ಬೆಳಗಾವಿಯ ಕಲೆಕ್ಟರರ ಬದಗುರ್ಕಂಡು

—-:-:*:-:—

ಬೆಳಗಾವಿಯ ಹತ್ತರಿರುವ ಸಾಂಗಲಿ ಸಂಸ್ಥಾನದ ಶಹಾಪೂರ ಪಟ್ಟಣವು ಬೆಳಗಾವಿಯ ಒಂದು ಭಾಗದಂತುಂಟು. ಇಲ್ಲಿಯ ಜನರು ಇಂಗ್ರೇಜಿ ಹದ್ದಿನಲ್ಲಿ ಬಂದು ಕಾಯದೆಭಂಗದ ಚಳವಳಿಯಲ್ಲಿ ಸೇರಿ, ವ್ಯಾಖ್ಯಾನ, ನಗರ ಸಂಕೀರ್ತನ, ಪಿಕೆಟಿಂಗ ಮುಂತಾದವುಗಳನ್ನು ಉತ್ಸಾಹದಿಂದ ನಡೆಸುವರು. ಇವರು ಈ ನಂತರ ಇಂಗ್ರೇಜಿ ಹದ್ದಿನಲ್ಲಿ ಬಂದು ಗೊಂದಲಹಾಕುವದಾದರೆ- ಇವರನ್ನು ಬೆಳಗಾವ ಜಿಲ್ಲೆಯ ಹೊರಗೆ ಹದ್ದುಪಾರ ಮಾಡುವೆವೆಂದು ಭಯ ಹಾಕಿದ್ದಾರೆ. ಹಿಡಿದು, ಕುರಂಗದಲ್ಲಿ ಹಾಕಿ, ಅನ್ನ ಹಾಕುವದಕ್ಕಿಂತ ಹದ್ದುಪಾರು ಮಾಡುವದು ಮೇಲಾದ ಉಪಾಯವೆಂದು ಸಾಹೇಬರು ಯೋಚಿಸಿರಬಹುದು.

ಇಳಕಲ್ಲ ಶೀರೆಗಳಿಗೆ ಸ್ವದೇಶಿ ನೂಲು ಉಪಯೋಗಿಸುವರು.

——(೦)——

ಎಷ್ಟೋ ಜನರು ಖಾದಿಯ ಉಪದೇಶಕರಿಗೆ ಮಂಗಚೇಷ್ಟೆ ಮಾಡಲು- ನಿಮ್ಮ ಹೆಂಡರು ಮಕ್ಕಳು ಇಳಕಲ ಶೀರೆಯನ್ನೇಕೆ ಉಡುತ್ತಾರೆಂದು ಪ್ರಶ್ನ ಮಾಡುತ್ತಾರೆ. ಇಂಥವರಿಗೆ ತಪರಾಕಿ ಹೊಡೆದಂಥ ಉತ್ತರವನ್ನು ಇಳಕಲ ವರ್ತಕರು ಕೊಟ್ಟಿದ್ದಾರೆ. ಇವರು ಒಂದು ಕಮಿಟಿ ಮಾಡಿ, ಕೆಳಗೆ ಕೊಟ್ಟಂತೆ ಠರಾವು ಮಾಡಿದ್ದಾರೆ.

೧ ಪರದೇಶಿ ನೂಲು ಮತ್ತು ರೇಶಿಮೆಯು ಎಷ್ಟು ಅಗ್ಗವಾದರೂ, ಕೊಳ್ಳಬಾರದು.

೨ ಈ ಠರಾವಿನ ವಿರುದ್ಧ ಯಾವನಾದರು ನಡೆದರೆ- ಆತನ ಎಲ್ಲ ಗಂಟುಗಳನ್ನು ಸಂಘದವರು ತಮ್ಮ ವಶದಲ್ಲಿ ತಕ್ಕೊಂಡು, ಗಂಟು ಕಟ್ಟಿ, ಅದರ ಮೇಲೆ ಮೋಹರು ಮಾಡಬೇಕು.

೩ ಈ ಪ್ರಕಾರ ನಡೆಯದೆ ಅಪರಾಧ ಮಾಡಿದವನು ೫೧ ರೂಪಾಯಿ ದಂಡ ಕೊಡಬೇಕು.

೪ ಮೇಲಿನ ಠರಾವುಗಳ ವಿರುದ್ಧ ಯಾವ ಅಂಗಡಿಕಾರನಾದರು ನಡೆದರೆ ಆತನ ಕೂಡ ಯಾರೂ ವ್ಯವಹಾರ ಮಾಡಬಾರದು. ಮತ್ತು ಆತನ ಹೆಸರನ್ನು ವರ್ತಮಾನಪತ್ರದಲ್ಲಿ ಪ್ರಸಿದ್ಧ ಮಾಡತಕ್ಕದ್ದು.-

೫ ಈ ಠರಾವಿನ ವಿರುದ್ಧ ಯಾರೂ ನಡೆಯಬಾರದೆಂದು ಪ್ರತಿಯೊಂದು ಶೀರಿಯ ಮೇಲೆ ಕಾಂಗ್ರೆಸದ ಮೊಹರು ಹೊಡೆಯತಕ್ಕದ್ದು.

ಮಾಲವೀಯಾ ಮತ್ತು ಸರದಾರರಿಗೆ ಏ ಕ್ಲಾಸ.

—(೦)—

ಡಾಕ್ಟರ ಹರ್ಡೀಕರ ಮತ್ತು ಬ್ಯಾರಿಸ್ಟರ ಶೇರವಾನಿಯವರಿಗೆ " ಬಿ " ಕ್ಲಾಸ.

——(೦)——

ಕೋರ್ಟಿನಲ್ಲಿ ಪಂಡಿತ ಮಾಲವೀಯಾಯವರು ಡಿಫೆನ್ಸ ಕೊಟ್ಟದ್ದರಿಂದ, ವಿಚಾರಣೆಯು ಮುಂದೆ ಬಿದ್ದಿದೆ. ಇವರು ತುರಂಗದಲ್ಲಿಯೇ ಇರುವದರಿಂದ, ಸರಕಾರದಿಂದಲೇ ಇವರ ವ್ಯವಸ್ಥೆ ನಡೆದಿದೆ. ಶಿಕ್ಷೆ ಅಥವಾ ಬಿಡುಗಡೆಯಾಗುವ ಮುಂಚಿತವಾಗಿ ಸರಕಾರದವರು ಪಂಡಿತ ಮಾಲವೀಯಾ, ಸರದಾರ ಪಟೇಲ ಇವರಿಗೆ ಏ ಕ್ಲಾಸ ಕೊಟ್ಟು, ಡಾಕ್ಟರ ಹರ್ಡೀಕರ, ಜಯರಾಮ ದೌಲತರಾಮ ಮತ್ತು ಬ್ಯಾರಿಸ್ಟರ ಶೇರವಾನಿಯವರಿಗೆ ಬಿ ಕ್ಲಾಸ ಕೊಟ್ಟಿದ್ದಾರೆ. ಕೌನ್ಸಿಲ ಮತ್ತು ಅಸೆಂಬ್ಲಿಯ ಮೆಂಬರರಿಗೆ ಏ ಕ್ಲಾಸ ಕೊಡಬೇಕೆಂದು ನಿಯಮವಿದ್ದರೂ, ತಮಗೆ ಬಿ ಕ್ಲಾಸ ಕೊಟ್ಟದ್ದಕ್ಕಾಗಿ ಬ್ಯಾರಿಸ್ಟರ ಶೇರವಾನಿಯವರು ಅನ್ನತ್ಯಾಗ ಮಾಡುವಂತೆ ಜಾಹೀರ ಮಾಡಿದ್ದಾರೆ

ಒಟ್ಟ ಮಹಾರಾಜರು ಚೌಹು ಮಹಾರಾಜರಾದರು.

-○()*()○-

ಅಗಸರು ಖಾದೀ ಅರಿವೆ ಒಗೆಯಬಾರದೆಂದು ಹುಕುಮು.

—(೦)—

ಮದ್ರಾಸ ಇಲಾಖೆಯಲ್ಲಿ ಪಾಲಮಕೋಟೆಯ ಅರಸರು ಖಾದಿಯ ಜನ್ಮದ ವೈರಿಯಂತೆ ನಟಿಸುತ್ತಿದ್ದಾರೆ. ಅಗಸರು ಖಾದೀ ಬಟ್ಟೆಗಳನ್ನು ಒಗೆಯಬಾರದು ; ಒಗೆದದ್ದಾರೆ- ಇವರಿಗೆ ಸರಕಾರೀ ಅಡವಿಯಲ್ಲಿಯ ತೊಪ್ಪಲ ಮತ್ತು ಕಟ್ಟಿಗೆ ದೊರೆಯಲಾರದೆಂದು ಮಹಾರಾಜರು ಹುಕುಮು ಮಾಡಿದ್ದಾರೆ.

ಆಥಣಿಯಲ್ಲಿ ರಾಷ್ಟ್ರೀಯ ನಿಶಾನೆ.

—೦*೦—

ಪಂಡಿತ ಮಾಲವೀಯಾ ಮೊದಲಾದವರನ್ನು ಹಿಡಿದ ದಿವಸ ಅಥಣಿಯಲ್ಲಿ ಹರತಾಳವಾಯಿತು. ಮತ್ತು ಶ್ರೀ ಜೋಶಿಯವರ ಹಸ್ತದಿಂದ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಏರಿಸಲ್ಪಟ್ಟಿತು.

ಮ್ಯುನಿಸಿಪಾಲಿಟಿಯ ಮಹತ್ವದ ಠರಾವು.

—(೦)—

೧೫೦೦ ಜನ ಕೆಲಸಗಾರರ ಮೆರವಣಿಗೆ.

——(೦)——

ಈಗಿನ ದಬ್ಬಾಳಿಕೆಯಲ್ಲಿ ತುರಂಗವಾಸಿಯಾಗಿರುವಂಥ ದೇಶಬಂಧುಗಳ ಬಗ್ಗೆ ಸಹಾನುಭೂತಿಯನ್ನು ತೋರಿಸಲೋಸುಗ ಮ್ಯುನಿಸಿಪಾಲಿಟಿಯ ಎಲ್ಲ ಕೆಲಸಗಾರರ ಮೆರವಣಿಗೆ ತೆಗೆಯಬೇಕೆಂದು ನಾಗಪೂರ ಮ್ಯುನಿಸಿಪಾಲಿಟಿಯ ಜನರಲ್ ಕಮಿಟಿಯಲ್ಲಿ ಠರಾವು ಪಾಸಾಯಿತು. ಆ ಪ್ರಕಾರ ಚೀಫ ಆಫೀಸರನಿಂದ ಭಂಗಿಯ ತನಕ ೧೫೦೦ ಜನ ಕೆಲಸಗಾರರ ದೊಡ್ಡ ಮೆರವಣಿಗೆಯು ಹೊರಟಿತು. ಶ್ರೀ ಜೋಗ ವಕೀಲರು ಧಾರವಾಡದಲಿ ಇಂಥ ಮೆರವಣಿಗೆ ತೆಗೆಸುವರೇನು?

ಐನೂರು ಸಾಯಕಲ ಸ್ವಯಂಸೇವಕರ ನಗರ ಸಂಕೀರ್ತನೆ.

—§(*)§—

ಪುಣೆಯಲ್ಲಿ ರಾಷ್ಟ್ರೀಯ ಸಪ್ತಾಹದಲ್ಲಿ ಒಂದು ದಿವಸ ಕಾಲೇಜದ ವಿದ್ಯಾರ್ಥಿಗಳು ಸಾಯಕಲ ಮೇಲೆ ಕೂತು ಪ್ರಭಾತ ಫೇರಿ ತೆಗೆಯಬೇಕೆಂದು ಗೊತ್ತು ಮಾಡಿದ್ದರು ಆ ಪ್ರಕಾರ ಆದಿತ್ಯವಾರದ ದಿವಸ ಇವರ ಮೆರವಣಿಗೆ ಹೊರಟಿತು. ಪ್ರತಿಯೊಂದು ಸಾಯಕಲಿಗೆ ಒಂದು ರಾಷ್ಟ್ರೀಯ ನಿಶಾನೆಯನ್ನೂ, ವಿಲಾಯತಿ ಅರಿವೆಗೆ ಬಹಿಷ್ಕಾರ ಹಾಕಿರೆಂಬ ಪಟವನ್ನೂ ಹಚ್ಚಿದ್ದರು. ಮುಂಭಾಗದಲ್ಲಿ ಬ್ಯುಗಿಲ್ ಇತ್ತು. ಈ ನಗರ ಸಂಕೀರ್ತನೆಯು ಅತ್ಯಂತ ಪ್ರೇಕ್ಷಣೀಯವಾಗಿತ್ತು.

ಕೌನ್ಸಿಲ ಚುನಾವಣೆಗಾಗಿ ಉಮೇದವಾರರು.

—(೦)—

ಧಾರವಾಡ ಜಿಲ್ಹೆ-

೧ ರಾ. ಬ. ಕಂಬಳಿ
೨ ಶ್ರೀ. ಜೋಗ ವಿಶ್ವನಾಥರಾಯರು
೩ ಶ್ರೀ. ಗಿರಿಯಪ್ಪನವರು
೪ ಶ್ರೀ. ಕೇಸರಿ ವಕೀಲರು

ಇನಾಮದಾರರ ವತಿಯಿಂದ-

ಶ್ರೀ. ಹಣಮಂತರಾವ ದೇಸಾಯಿಯವರು ಇನಾಮದಾರರ ವತಿಯಿಂದ ಉಮೇದವಾರರಾಗಿದ್ದಾರೆ. ಇವರಿಗೆ ಹ್ವ. ನ. ಮುತಾಲಿಕ ಸಾತಾರಿ ಇವರು ಪ್ರತಿಸ್ಪರ್ಧಿಯಾಗಿದ್ದಾರೆ.

ಬೆಳಗಾವ ಜಿಲ್ಹೆಯಲ್ಲಿ ರಾ. ಬ. ಅಂಗಡಿ ಮತ್ತು ಚಿಕ್ಕೋಡಿಯವರಿಬ್ಬರೇ ಉಮೇದವಾರರಾಗಿದ್ದರಿಂದ ಅವರು ಆರಿಸಲ್ಪಟ್ಟಂತಾಯಿತು.

ಜಾಲಿಹಾಳ ವಕೀಲರ ಮೇಲೆ ಖಟ್ಲೆ.

—(೦)—

ಗದಗಿನಲ್ಲಿ ಶ್ರೀ. ಅನಂತರಾವ ಜಾಲಿಹಾಳರ ಮೇಲೆ ಖಟ್ಲೆ ಹಾಕಿದ್ದು, ಇಂದು ವಿಚಾರಣೆ ನಡೆಯುವದು. ನಾಲ್ಕು ಆರೋಪಗಳುಂಟು.

ಶ್ರೀ. ಕರಗುದರಿ ಮತ್ತು ಗೋಳೀಕೇರಿಗೆ ಶಿಕ್ಷೆ.

—(೦)—

ನಿನ್ನಿನ ದಿವಸ ಶ್ರೀ. ಕರಗುದರಿ ಮತ್ತು ಗೋಳೀಕೇರಿಯವರಿಗೆ ಮೂರು ತಿಂಗಳು ಸಕ್ತವು ಶಿಕ್ಷೆ. ಮತ್ತು ನೂರು ರೂಪಾಯಿ ದಂಡವಾಯಿತು. ದಂಡ ಕೊಡದಿದ್ದರೆ- ಒಂದು ತಿಂಗಳು ಹೆಚ್ಚಿಗೆ ಶಿಕ್ಷೆ ಅನುಭವಿಸತಕ್ಕದ್ದು.

ಹಿರೇಕೆರೂರ ಪತ್ರ.

—(೦)—

ತಾರೀಖು ೨-೮-೧೯೩೦ನೇ ದಿವಸ ಈ ಊರಲ್ಲಿ ಹಿರೇಕೆರೂರ ತಾಲೂಕಾ ಕಾಂಗ್ರೆಸ ಕಮಿಟಿಯು ಸ್ಥಾಪಿತವಾಯಿತು. ಮತ್ತು ಕೆಳಗೆ ಕಾಣಿಸಿದಂತೆ ಅಧಿಕಾರಿ ವರ್ಗವು ಆರಿಸಲ್ಪಟ್ಟಿತು.

ಪ್ರೆಸಿಡೆಂಟರು, ಚಿಕ್ಕೋ ನರಸಿಂಹ ಜೋಸಿ.
ವ್ಹಾ. ಪ್ರೆಸಿಡೆಂಟ, ಚಿಕ್ಕೋ ಗಣೇಶ ಜೀವಣ್ಣನವರ.

ವರ್ಕಿಂಗ ಕಮಿಟಿ ಮೆಂಬರರು—

೧ ಶ್ರೀ ಸಾವಳಗೆಪ್ಪ ಎಸ್. ಕುಬಸದ (ಚೇರಮನ್)
೨ ,, ವ್ಹಿ. ಜಿ. ನಾಡಿಗೇರ
೩ ,, ಹಾವ್ರಿಹಳ್ಳಿ ಪ್ರಭೂಜಿ
೪ ,, ಮಹದೇವಪ್ಪ ಎಸ್ ಅಣಗೊಂಡರ
೫ ,, ಆರ್. ಕೆ. ಹಂಚಿನ
೬ ,, ಸಿ ಎನ್. ಜೋಶಿ
೭ ,, ಬಿ. ವ್ಹಿ. ವೈಕ್ಕರ
೮ ,, ಚನಬಸಪ್ಪ ಎಮ್. ಬ್ಯಾಡಿಗಿ
೯ ,, ಸಿದ್ಲಿಂಗನಗೌಡ್ರು ಪಾಟೀಲ
೧೦ ,, ಶಿವದಾಸ ಎಸ್. ಕಜ್ಜರಿ, ಸೆಕ್ರೆಟರಿ.

ಚಿಕ್ಕೋ ನರಸಿಂಹ ಜೋಶಿ
ಪ್ರೆಸಿಡೆಂಟ,
ತಾ, ಕಾಂ. ಕ ಹಿರೇಕೆರೂರ.

ಶಿಕ್ಷಣಕ್ಕಾಗಿ ಲಕ್ಷಾವಧಿ ರೂಪಾಯಿಗಳ ಧರ್ಮ.

—(೧)—

ಕಾಶಿವಾಸಿಯಾಗಿ, ಕಲಕತ್ತೆಯಲ್ಲಿ ಕಲ್ಲಿದ್ದಿ ಯ ವ್ಯಾಪಾರಿಯಾಗಿದ್ದ ಶ್ರೀ ಜಗನ್ನಾಥ ಪ್ರಸಾ ರೆಂಬವರು ಹೋದವಾರದಲ್ಲಿ ಸ್ವರ್ಗವಾಸಿಯಾದರು. ಮರಣಸಮಯದಲ್ಲಿ ಇವರು ಲಕ್ಷಾವಧಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಕೊಟ್ಟಿದ್ದಾರೆ

ಂದು ಲಕ್ಷ ಹಿಂದೂ ವಿದ್ಯಾಲಯ

,, ,, ಕಾಶಿಯಲ್ಲಿ ಹಾಯಸ್ಕೂಲು ಕಟ್ಟಲಿಕ್ಕೆ

,, ,, ಹಾಯಸ್ಕೂಲಿನ ವೆಚ್ಚಕ್ಕಾಗಿ

೪೦ ಸಾವಿರ ಕಾಂಗ್ರಿಯಲ್ಲಿರುವ ಗುರುಕುಲಕ್ಕೆ

೧,೨೦,೦೦೦ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಿಗಾಗಿ

ಇವರ ಆಸ್ತಿಯ ಮೇಲ್ವಿಚಾರಣೆಯನ್ನು ಹಿಂದೂ ವಿಶ್ವವಿದ್ಯಾಲಯದವರು ನೋಡಿ, ಆದರ ಉತ್ಪನ್ನವನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚ ಮಾಡತಕ್ಕದ್ದು.

ಸರಕಾರಕ್ಕೆ ಕಾಶೀ ಮ್ಯುನಿಸಿಪಾಲಿಟಿಯ ನಿರ್ಭಯದ ಉತ್ತರ.

—೦*೦—

ಕಾಶೀ ಮ್ಯುನಿಸಿಪಾಲಿಟಿಯ ಸ್ಕೂಲಬೋರ್ಡಿನ ಅಡಮಿನಿಸ್ಟ್ರೇಟರರು ರಾಜಕೀಯ ಚಳವಳಿಯಲ್ಲಿ ಪ್ರತ್ಯಕ್ಷ ಭಾಗ ತಕ್ಕೊಂಡಿದ್ದಾರೆ ಇವರನ್ನು ಕೆಲಸದಿಂದ ದೂರ ಮಾಡಬೇಕೆಂದು ಆ ಇಲಾಖೆಯ ಸರಕಾರದವರು ಮ್ಯುನಿಸಿಪಾಲಿಟಿಗೆ ಪತ್ರ ಬರೆದರು. ಅವರು ತಥಾಸ್ತು ಅನ್ನಲಿಲ್ಲ. ಅವರನ್ನು ದೂರ ಮಾಡುವದಿಲ್ಲೆಂದು ಸ್ಪಷ್ಟವಾಗಿ ಉತ್ತರ ಬರೆದು ಕಳಿಸಿದ್ದಾರೆ.

ನಾಳಿನ ರಜೆ–

ಶ್ರಾವಣ ಪೌರ್ಣಿಮೆ ಮತ್ತು ಉಪಾಕರ್ಮದ ದೆಸೆಯಿಂದ ಇಂದು ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು.

ಮೈಸೂರು [illegible]

[illegible]

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹೊಲಸು ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಪ್ಪಸ್ತರ ಅನೇಕ ವರ್ಷಗಳ ಅನುಭವವಿ ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ಈ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

☞ ನಿಮ್ಮ ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತ ನೋಡಿ ಈ ಔಷಧಿಯನ್ನು ತರಿಸುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹಿಂಗ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದವ ನವರ ನಿರಾಶೆಯಾಗಬಾರದೆಂದು [illegible] ಜಾಹೀರಾತು ಕೊಟ್ಟಿದೆ. [illegible]

ಜಾಹೀರ ನೋಟೀಸು-
ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ–

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದ ವ ಕಿಸಂ ನಾಟುಗಳು

ಸಾಗವಾನಿ ಯಲೀ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಕಿಲಿಂಗು ತೈಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರಪತ್ರದ ಚಂದಾದಾರರ [illegible] ಚಂದಾ

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧) ಧಾರವಾಡ ಶನಿವಾರ ತಾರೀಖು ೯ ನೇ ಅಗಸ್ಟ ೧೯೩೦ (ಸಂಚಿಕೆ ೧೭೭

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾವದೂತರ ಅಸಲರ್ಜಿ, ಶ್ರೀ ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಖರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತು [illegible] ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣಶಿಕ್ಷಣ ಕೊಡುತ್ತೇವೆ. ಫಕ [illegible] ರೂಪಾಯಿ ಮತ್ತು [illegible] ಹದಿನೈದು ರೂಪಾಯಿ ಶಿಕ್ಷಣವನ್ನು ಕ [illegible] ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾ [illegible] ರೂಪಾಯಿ ಗಳಿ [illegible] ಸು. ವಿಶೇಷ ಮಾಹಿತಿ [illegible]

[illegible]

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂತಿಗೆಯು ಎಂಟು ಲಕ್ಷದ ಮೇಲುಂಟು, ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೆ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ಶ್ರಾವಣ ಶುದ್ಧ ೧೫

ಶ್ರೀ. ಗುರುರಾವ ಹರಕಾರೆಯವರ ದಿಟ್ಟತನ.

—(೦)—

ಮ್ಯಾಜಿಸ್ಟ್ರೇಟ ಮತ್ತು ಪೋಲಿಸಸಾಹೇಬರ
ಮೇಲೆ
ದಂಗೆ ಮಾಡುವ ಮತ್ತು ಮಾಡಿಸುವ ಆರೋಪ.

—(೦)—

ಶ್ರೀ. ಗುರುರಾವ ಹರಕಾರೆಯವರ ವಿಷಯವಾಗಿ ಹಿಂದಕ್ಕೊಮ್ಮೆ ವಿಜಯದಲ್ಲಿ ಬರೆದಿದ್ದೇವೆ ಇವರು ಯಾರನ್ನೂ ಲೆಕ್ಕಿಸತಕ್ಕವರಲ್ಲ ಇವರು ಈಗ ಮುಂಬಯಿಯ ಮುಖ್ಯ ಮ್ಯಾಜಿಸ್ಟ್ರೇಟರಾದ ಮಿ. ದಸ್ತೂರ ಹಾಗು ಪೋಲಿಸಕಮೀಶನರರಾದ ಮಿ. ಹೀಲೀಸಾಹೇಬರ ಮೇಲೆ ದಂಗೆಗಾರರ ಆರೋಪ ಹೊರಿಸಿ, ಒಳ್ಳೇ ನಡತೆಯ ಬಗ್ಗೆ ಅವರಿಂದ ಜಾಮೀನು ಮುಚ್ಚಳಿಕ ತಕ್ಕೊಳ್ಳಬೇಕೆಂಬ ಅರ್ಜಿಯನ್ನು ಬರಕೊಂಡು, ಆ ಅರ್ಜಿಯನ್ನು ಸ್ವತಃ ಮಿ. ದಸ್ತೂರರ ಕೋರ್ಟಿನಲ್ಲಿಯೇ ಕೊಟ್ಟರು. ಅರ್ಜಿಯಲ್ಲಿ ಇವರು ಅಂದದ್ದೇನೆಂದರೆ

"ಮಿ. ದಸ್ತೂರ ಹಾಗು ಮಿ. ಹೀಲಿಯವರು ಒಳಸಂಚು ಮತ್ತು ಸಂಗನಮತ ಮಾಡಿಕೊಂಡು ಬೇಕಾಯದೇಶೀರ ಹುಕುಮುಗಳನ್ನು ತೆಗೆದು ಮುಂಬಯಿಯಲ್ಲಿ ಗೊಂದಲವೆಬ್ಬಿಸುತ್ತಿದ್ದಾರೆ. ಗರವಾಲ ಮತ್ತು ಟಿಳಕ ಮೆರವಣಿಗೆಗಳ ದಿವಸ ಮಿ. ದಸ್ತೂರಸಾಹೇಬರು ಮಿ ಹೀಲಿಯವರಿಗೆ ಶಾಂತತಾಪ್ರಿಯರಾದಂಥ ಜನರ ಮೇಲೆ ಹಲ್ಲೆ ಮಾಡಲು ಉತ್ತೇಜನ ಕೊಟ್ಟರು."

ತಮ್ಮ ಮೇಲೆ ಬಂದ ಅರ್ಜಿಯನ್ನು ಕಂಡು ಬೆರಗಾಗಿ, ದಸ್ತೂರಸಾಹೇಬರು ಅದನ್ನು ಕಿತ್ತಿಹಾಕಿದರು. ಆಗ ಶ್ರೀ. ಹರಕಾರೆಯವರು—

ದಸ್ತೂರಸಾಹೇಬರೇ— ನೀವು ಅರ್ಜಿಯನ್ನು ಕಿತ್ತಿ ಹಾಕಿದುದಕ್ಕೆ ನಾನೇನೂ ಆಶ್ಚರ್ಯಪಡುವದಿಲ್ಲ. ಈ ಅರ್ಜಿಯ ಚಂಡು ಮುಂದೆ ಹಾಗೇ ಪುಟಿಯುತ್ತಾ ಹೋಗತಕ್ಕದ್ದುಂಟು. ಇದಿನ್ನೂ ಪ್ರಾರಂಭ. ಎಂದು ಪಂಡಿತ ಮಾಳವಿಯಾ ಮೊದಲಾದವರ ಮೇಲೆ ಸುಳ್ಳು ಮತ್ತು ಹೊಟ್ಟೆಕಿಚ್ಚಿ[illegible] ಖಟ್ಲೆ ಮಾಡಿದ ಹಾಗೆ ಅವರ ಮೇಲೆ ಕೋಡಿನ ೨೧೧ನೆಯ ಕಲಮಿನ ಪ್ರಕಾರ ಕೆಲಸ ನಡಿಸಬೇಕೆಂದು ಮತ್ತೊಂದು ಅರ್ಜಿಯನ್ನು ಕೊಟ್ಟರು.

ಮ್ಯಾಜಿಸ್ಟ್ರೇಟರು ಈ ಅರ್ಜಿಯನ್ನೂ ಡಿಸಮಿಸ ಮಾಡಿದರು. ಒಳಿಕ ಶ್ರೀ ಹರಕಾರೆಯವರು ಒಂದೇ ಮೈಲಿನೊಳಗಿದ್ದ ಹಾಯಕೋರ್ಟಿನ ಹಾದೀ ಹಿಡಿದರು. ಅಲ್ಲಿ ಅರ್ಜಿಕೊಟ್ಟರು ಅದರಲ್ಲಿ ಬರಕೊಂಡಿದ್ದೇನೆಂದರೆ—

ದಸ್ತೂರಸಾಹೇಬರು ತೆಗೆದು ಹಾಕಿದ ಅರ್ಜಿಗಳ ಸಂಬಂಧವಾದ ಕಾಗದ ಪತ್ರಗಳನ್ನು ಹಾಯಕೋರ್ಟಿನವರು ತರಿಸಿಕೊಳ್ಳಬೇಕು. ಬರೇ ಪಿಕೆಟಿಂಗ ಮಾಡಿದರೆ ಅಪರಾಧವಾಗುವದಿಲ್ಲ. ಗಿರಾಕಿಗಳಿಗೆ ತ್ರಾಸ ಕೊಟ್ಟರೆ ಅಥವಾ ಹೆದರಿಕೆ ಹಾಕಿದರೆ ಅಪರಾಧವಾಗುತ್ತದೆಂದು ದಬ್ಬಾಳಿಕೆಯ ಆರ್ಡಿನನ್ಸದ ಮೂರನೇ ಕಲಮಿನಲ್ಲಿ ಸ್ಪಷ್ಟವಾಗಿ ಹೇಳಿದೆ. ದಸ್ತೂರಸಾಹೇಬರು ಪಿಕೆಟಿಂಗದ ಫಿರ್ಯಾದಿಗಳನ್ನು ತಕ್ಕೊಂಡರೂ, ಆರೋಪ ಸಿದ್ಧತೆಗಾಗಿ ಸ್ವತಂತ್ರ ಸಾಕ್ಷಿ ಪುರಾವೆಗಳನ್ನು ತಕ್ಕೊಂಡಿಲ್ಲ. ಆರೋಪಿಗಳು ಕೋರ್ಟುಗಳಿಗೆ ಬಹಿಷ್ಕಾರ ಹಾಕಿದ್ದರಿಂದ, ವಿಚಾರಣೆಯಲ್ಲಿ ಯಾವದೇ ಪ್ರಕಾರದ ಭಾಗ ತಕ್ಕೊಳ್ಳುವದಿಲ್ಲ. ಇವರು ಜವಾಬು ಸಾಕ್ಷಿ, ಪುರಾವೆ ಕೊಡದ ಮಾತ್ರಕ್ಕೆ ಇವರು ಅಪರಾಧವನ್ನು ಒಪ್ಪಿದಂತಾಗುವದಿಲ್ಲ ಆದುದರಿಂದ ನ್ಯಾಯದ ಅನ್ಯಾಯದ ಪರಮಾವಧಿಯಾಗಿರುತ್ತದೆ ನಾನು ಯಾವ ಪಕ್ಷಕ್ಕೂ ಸೇರಿದವನಲ್ಲ. ಅಲಹಾಬಾದಿನಲ್ಲಿ ಪಂಡಿತ ಮೋತಿಲಾಲರ ವಿಷಯವಾಗಿ ಮೂರನೆಯವರು ಹಾಯಕೋರ್ಟಿಗೆ ಅರ್ಜಿ ಮಾಡಿದಂತ ನಾನು ಈ ಅರ್ಜಿ ಮಾಡಿಕೊಂಡಿದ್ದೇನೆ.

ಫರ್ಗ್ಯುಸನ್ನ ಕಾಲೇಜದ ಮೇಲೆ ರಾಷ್ಟ್ರೀಯ ನಿಶಾನೆ.

—(೦)—

ಪುಣೆಯಲ್ಲಿ ಮರಾಠರ ಫರ್ಗ್ಯುಸನ್ನ ಕಾಲೇಜದ ಮೇಲೆ ವಿದ್ಯಾರ್ಥಿಗಳು ರಾಷ್ಟ್ರೀಯ ನಿಶಾನೆಯನ್ನೇರಿಸಿದರು ಏರಿಸುವಾಗ ದೊಡ್ಡ ಉತ್ಸವ ಮಾಡಿದರು. ಕಾಲೇಜ ಪ್ರಾರಂಭವಾಗುವಾಗ, ಅಂದರೆ ಪ್ರಾತಃಕಾಲದ ಹನ್ನೊಂದು ಗಂಟೆಯ ಸಮಯದಲ್ಲಿ ಆರೇಳು ನೂರು ವಿದ್ಯಾರ್ಥಿಗಳು ಸೇರಿದರು. ನಿಶಾನೆ ಹಚ್ಚುವ ಸಮಯಕ್ಕಾದ ಕಹಳೆ ಬಿಗಿಲು ಹಿಡಿದರು. ಆಗ ಎಲ್ಲರೂ ಕಾಲೇಜದ ಮುಂಭಾಗದಲ್ಲಿ ಸೇರಿದರು. ಒಬ್ಬನು ಮಾಳಿಗೆ ಹತ್ತಿ, ಮಧ್ಯಸ್ಥಳದಲ್ಲಿ ನಿಶಾನೆ ಹಚ್ಚಿ [illegible] ಟ್ಟುಗಿ [illegible] ಳಿ. ಪ್ರಿನ್ಸಿಪಾಲ ಮ [illegible] ಹಚ್ಚಿದವನಿಗೆ [illegible] ಕಜನ ಹೇಳದೆ ನಿಶಾನೆ ಇಳಿಸುವದಿಲ್ಲೆಂದು ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ವಚನ ಕೊಟ್ಟ ಬಳಿಕ, ಆತನು ಕೆಳಗಿಳಿದನು

ಮಾಮಲೇದಾರರಿಗೆ ಮೈಸೂರಿನ ದಿವಾನರ ಉಪದೇಶ

—(೦)—

ಮೈಸೂರ ಇಲಾಖೆಯ ಅಮಲದಾರರ ಪರಿಷತ್ತು ಕೂಡಿದೆ. ಇದರಲ್ಲಿ ದಿವಾನರ ಭಾಷಣವಾಯಿತು ಅವರು ಅಮಲದಾರರಿಗೆ ಮಾಡಿದ ಉಪದೇಶವೇನಂದರೆ:

"ರೈತರ ಹಿತಗಳ ದೆಸೆಯಿಂದ ನೀವು ಸಹಾನುಭೂತಿಯುಳ್ಳವರಾದರೆ ನಿಮ್ಮ ತಾಲೂಕಿನಲ್ಲಿ ಆಶ್ಚರ್ಯವೆನಿಸುವಂಥ ಕೆಲಸಗಳನ್ನು ಮಾಡಬಹುದು ಸಹಾನುಭೂತಿಇಲ್ಲದೆ ಯಾವಕೆಲಸ ಮಾಡಲಾರಿರಿ ಸರಕಾರದ ಕಾಯದೆ ಮತ್ತು ಹುಕುಮುಗಳು ಎಷ್ಟೇ ಪ್ರಶಂಸಾರ್ಹವಾಗಿದ್ದರೂ, ಅದರಲ್ಲಿ ಅಮಲದಾರನ ಸ್ವಭಾವವೊಂದು ಹೆಚ್ಚಾಗಿ ಬೇಕಾಗುತ್ತದೆ ಆ ಸ್ವಭಾವದ ಕೊರತೆಯಾದರೆ ರಾಜ್ಯದಾಡಳಿತೆಯು ಅಪೂರ್ಣ ಮತ್ತು ಅವ್ಯವಸ್ಥಿತವಾಗುವದು. ರಾಜ್ಯಾಧಿಕಾರ ನಡೆಸುವಂಥವರಲ್ಲಿ ಪ್ರತಿಯೊಬ್ಬನು ಬಹಳ ಬುದ್ಧಿವಂತನೇ ಆಗಿರಬೇಕಾಗಿಲ್ಲ ಆದರೆ ಆತನು ಒಳ್ಳೇ ನಡತೆಯವನೂ, ನಂಬಿಗಸ್ಥನೂ, ಸತ್ಪಕ್ಷಪಾತಿಯೂ ಆಗಿರಬೇಕು."

ಬೆಂಗಳೂರ ಸುಲ್ತಾನಪೇಟೆಯಲ್ಲಿಯ ಗಣಪತ್ಯುತ್ಸವದ ಗಲಭೆಯಲ್ಲಿ ದಿವಾನರೇ ಮೊದಲ್ಗೊಂಡು ಯಾರಾರು ಎಷ್ಟೆಷ್ಟು ಪ್ರಜಾರಂಜಕರಾಗಿದ್ದರೆಂಬದನ್ನು ಯಾರಾದರೂ ಹೇಳುವರೇ?

ಸರಕಾರೀ ಕಾಲೇಜ ಬಂದಾಯಿತು.

—(೦)—

ನಾಗಪೂರದಲ್ಲಿ ಸರಕಾರದ ನಾಲ್ಕೈದು ಕಾಲೇಜಗಳು ಬಂದಾದವು. ಅಮರಾವತಿಯಲ್ಲಿಯ ಕಾಲೇಜವೂ ಬಂದಾಯಿತು. ಹರತಾಳ ಮಾಡಲಿಕ್ಕಿಲ್ಲ. ಮೆರವಣಿಗೆ ತೆಗೆಯಲಿಕ್ಕಿಲ್ಲ. ರಾಷ್ಟ್ರೀಯ ಚಳವಳಿಯಲ್ಲಿ ಸೇರಲಿಕ್ಕಿಲ್ಲೆಂದು ವಚನಕೊಟ್ಟರೆ ಕಾಲೇಜ ನಡಿಸತಕ್ಕವರೆಂದು ಯ[illegible] ನ್ಸಿಪಾಲರು ವಿ[illegible]

ಇಂದುವಿನಂತೆ ಪಂಡ್ಯರಾದವರಿಗೆ ಶೀಕ್ಷೆ.

-○()*‌*()○-

ಪಂಡಿತ ಮಾಲವಿಯಾಯವರು ಮುಂಬಯಿಯ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾಡಿದ ಡಿಫೆನ್ಸಿನ ಭಾಷಣದಲ್ಲಿ ಒಹಳವಾದರೆ. ನಮ್ಮ ಮೇಲೆ ಹೊತ್ತ ಆರೋಪಕ್ಕೆ ನೂರು ರೂಪಾಯಿ ದಂಡವುಂಟೆಂದು ಭಾಷಣ ಮಾಡಿದ್ದರು. ಆದರೆ ಮ್ಯಾಜಿಸ್ಟ್ರೇಟರು ಇವರೆಲ್ಲರಿಗೆ ಶೀಕ್ಷೆ ಮತ್ತು ದಂಡ ಎರಡೂ ಹೇಳಿ, ಮಾಲವಿಯಾಯವರ ಡಿಫೆನ್ಸನ್ನು ಮೂಲೆಗೊತ್ತಿದರು. ಸೋಮವಾರ ಅಥವಾ ಅದಕ್ಕೂ ಮೊದಲು ತೀರ್ಪು ಹೇಳುವಂತೆ ಮ್ಯಾಜಿಸ್ಟ್ರೇಟರು ಅಂದಿದ್ದರು. ಗುರುವಾರ ದಿವಸವೇ ಫರ್ಮಾವು ಹೇಳಿದರು. ಶೀಕ್ಷೆ ಹೇಳಿದ ಕ್ರಮ-

ಪಂಡಿತ ಮಾಲವಿಯಾ- ೧೫ ದಿವಸ ಕೈದು ನೂರು ರೂಪಾಯಿ ದಂಡ

ಉಳಿದವರಿಗೆ ಮೂರು ತಿಂಗಳ ಕೈದು ನೂರು ರೂಪಾಯಿ ದಂಡ

೧ ಸರದಾರ ಪಟೇಲಿ ೨ ಜಯರಾಮದಾಸ ದೌಲತರಾಮ, ೩ ಡಾಕ್ಟರ ಹರ್ಡಿಕರ. ೪ ಬ್ಯಾರಿಸ್ಟರ ಶೇರವಾಣಿ. ಇವರು ಕಾಂಗ್ರೆಸದ ವರ್ಕಿಂಗ ಕಮಿಟಿಯ ಮೆಂಬರರು

ಇವರ ಕೂಡ ಕಾಂಗ್ರೆಸದವರಿಗಾದ ಶೀಕ್ಷೆ ೧ ಶ್ರೀ. ಪಾಲೇಕರ ೨ ಬಾಬುಭಾಯಿ ಜವ್ಹೇರಿ ೩ ರಮಾಕಾಂತ ಮೋಸಕಾ, ೪ ನಾರಾಯಣಯ್ಯಂಗಾರ, ಎಚ್. ವೆಂಕಟರಾವ. ನಾಲ್ವರು ಸ್ತ್ರೀಯರಿಗೆ ೧೦೦ ರೂಪಾಯಿ ದಂಡ, ದಂಡ ಕೊಡದಿದ್ದರೆ- ೧೫ ದಿವಸದ ಸಾದಾ ಕೈದು ಹೇಳಿದ್ದಾರೆ.

ಬುಧವಾರ ದಿವಸ ಪಂಡಿತ ಮಾಲವಿಯಾಯವರು ಮಿಸರ್ಸ ಮೋದಿ ಮತ್ತು ಬಾಲಜಿಯವರ ಸಾಕ್ಷೀ ತಕ್ಕೊಳ್ಳಬೇಕೆಂದು ಹೊಸದೊಂದು ಅರ್ಜಿ ಕೊಟ್ಟರು. ಆದರೆ ಮ್ಯಾಜಿಸ್ಟ್ರೇಟರು ಅರ್ಜಿಯನ್ನು ನಿರಾಕರಿಸಿದರು.

ಶೀಕ್ಷೆ ಹೇಳುವಾಗ ಮೇಲಿನವರನ್ನು ಹಿತ್ತಲ ಬಾಗಿಲದಿಂದ ಕೋರ್ಟಿನೊಳಗೆ ಕರತಂದರು. ಆಗ ಪ್ರಚಂಡ ಜನಸ್ತೋಮ ಕೂಡಿತ್ತು. ಪಂಡಿತರು ಕೋರ್ಟಿನಲ್ಲಿ ಬಂದ ಕೂಡಲೆ, ಅವರಿಗೆ ಮಾನ ಕೊಡಲು ಮ್ಯಾಜಿಸ್ಟ್ರೇಟರ ಹೊರ್ತು ಎಲ್ಲರೂ ಎದ್ದು ನಿಂತರು. ಕೂಡಿದ ಸಾವಿರಾರು ಜನರು ಜಯಜಯಕಾರದ ಜವಾಳ ಕೊಗೆದರು ಈ ಸಾ ಯದಿಂದ ಅವರ ಆಲಿಂಗನ ತಕ್ಕೊಂಗಕ್ಕೆ ಕರಕೊಂಡು ಹೋಗುವಾಗ ಸ ಸರು ಇವರ ಜಯಜಯಕಾರ ಮಾಡಿದರು

ಡಿಸ್ಟ್ರಿಕ್ಟ ಲೋಕಲಬೋರ್ಡಿನ ಅಧ್ಯಕ್ಷರು ಕಾಯದೆಭಂಗ ಮಾಡಿದರು.

—:(*):—

೫೦ ಸಾವಿರ ಸ್ತ್ರೀಪುರುಷರು ವನಗಾವಲದ ಕಾಯದೆ ಮುರಿದರು.

—(೦)—

ನಾಸಿಕ ಜಿಲ್ಹೆಯಲ್ಲಿ ವನಗಾವಲದ ತಾಪದಾಯಕ ಕಾಯದೆಯನ್ನು ಮುರಿಯುವ ಯುದ್ಧವು ಮಹಾಯುದ್ಧದಂತೆ ಪರಿಣಮಿಸಿದೆ. ಹೆಂಗಸರು ಹುಡುಗರು, ಮುದುಕರು ಕೂಸು ಕುನ್ನಿ ಸಹಿತ ಎಲ್ಲರೂ ವನಗಾವಲದ ಅವತಾರ ಸಮಾಪ್ತಿ ಮಾಡಲು ಸಿದ್ಧರಾಗಿದ್ದಾರೆ. ಡಿಸ್ಟ್ರಿಕ್ಟ ಲೋಕಲಬೋರ್ಡಿನ ಅಧ್ಯಕ್ಷರಾದ ಶ್ರೀ. ಗದ್ರೆಯವರು ಸೇನಾಪತಿಯಾಗಿದ್ದಾರೆ. ೪೮ ಸಾವಿರ ಗಂಡಸರು ಮತ್ತು ಎರಡು ಸಾವಿರ ಹೆಂಗಸರು ಅಂತೂ ೫೦ ಸಾವಿರ ಜನರು ಧಿಲವಾಡವೆಂಬಲ್ಲಿಗೆ ಹೋಗಿ ಅನಿರ್ಬಂಧವಾಗಿ ಸರಕಾರದ ಅಡವಿಯಲ್ಲಿ ಹೊಕ್ಕು ಹುಲ್ಲು ಕೊಯ್ದರು. ಉರುವಲ ತಂದರು. ಮತ್ತು ದನಗಳನ್ನು ಮೇಯಿಸಿದರು.

ಸಪ್ರು, ಜಯಕರ ಸಂಧಾನದಲ್ಲಿ ಸ್ವಾರಸ್ಯವಿಲ್ಲ.

—(೦)—

ಮೌಲಾನಾ ಅಬ್ದುಲ ಕಲಮ ಆಜದರ ಸ್ಪಷ್ಟೋದ್ಗಾರ.

—(೦)—

ನಿನ್ನಿನ ದಿವಸ ಯರವಡೆಯಲ್ಲಿ ಪಂಡಿತ ದ್ವಯರೂ, ಮಹಾತ್ಮರೂ ಯರವಡೆಯ ತುರಂಗದಲ್ಲಿ ಸೇರಿ ಮಾತನಾಡುವ ಸಮಯವಾಗಿತ್ತು. ಈ ಸಮಯವನ್ನರಿತು ಮೌಲಾನಾ ಅಬ್ದುಲ ಕಲಮ ಆಜದರು ರಾಜಿಯ ಸಂಧಾನದಲ್ಲಿ ಸ್ವಾರಸ್ಯವಿಲ್ಲೆಂದು ಸ್ಪಷ್ಟೋದ್ಗಾರ ತೆಗೆದಿದ್ದಾರೆ.

ಸರ ಸಪ್ರುಸಾಹೇಬರು ತಮ್ಮ ಅಭಿಪ್ರಾಯವನ್ನು ಕುರಿತು ಒಳ್ಳೇ ಇಂಪಾದ ಧ್ವನಿಯಿಂದ, ಹೆಬ್ಬುಳಿ ಮಾತುಗಳನ್ನು ಹೇಳುತ್ತಾರೆ ಯೋಗ್ಯ ಮುಖಂಡರನ್ನು ದಸ್ತಗಿರ ಮಾಡಿದ್ದಾರೆ. ಹೀಗೆ ಒಂದಕ್ಕೊಂದು ತಾಳ ಕೂಡುವದೆಂತು ?

ಎಂದೆಂದು ಮುಸಲಮಾನರೂ ಹೆಚ್ಚೆಚ್ಚಾಗಿ ಕಾಂಗ್ರೆಸ ಸೇರಲಾರಂಭಿಸಿದ್ದು ಸಮಾಧಾನದ ಸಂಗತಿ ಎಂದೂ ಮೌಲಾನಾರವರು ಅಭಿಪ್ರಾಯಪಟ್ಟಿರುತ್ತಾರೆ.

ಡಾಕ್ಟರ ಕಿಚಲೂಸಾಹೇಬರ ಸುತ್ತಲು ಕಾವಲು.

—(೦)—

ಡಾಕ್ಟರ ಕಿಚಲೂಸಾಹೇಬರು ಮೊದಲಿನ ಅಸಹಕಾರದಲ್ಲಿ ಎರಡು ವರ್ಷ ಶೀಕ್ಷೆ ಅನುಭವಿಸಿದ್ದಾರೆ ಅವರು ಜೇಲಿನ ಒಳವಿಚಾರವನ್ನು ತಿಳಿದು, ಜೇಲಿನಲ್ಲಿ ಹೇಗೆ ನಿರ್ಭಯದಿಂದ ನಡೆಯಬೇಕೆಂಬದನ್ನು ದರಗಂಡವರು ಈಗಿನ ತುರಂಗವಾಸದಲ್ಲಿ ಯಾರೂ ಯಾರಿಗೂ ಹೆದರದವರಾದ್ದರಿಂದ, ಮತ್ತು ಇವರ ದಿಟ್ಟತನದ ವರ್ತನದ ಪರಿಣಾಮವು ಜೇಲ ಕೈದಿಗಳ ಮೇಲಾಗುತ್ತಿರುವದರಿಂದ, ಇವರ ನಡೆನುಡಿಗಳ ಮೇಲೆ ಸಹ ಅಧಿಕಾರಿಗಳು ಕತ್ತೀ ಹಿರಿದಿದ್ದಾರೆ. ಇವರು ಏನು ಮಾಡುತ್ತಾರೆ; ಯಾರ ಸಂಗಡ ಮಾತಾಡುತ್ತಾರೆ; ಬಹಳವೇಳೆ ಯಾವ ಸೊನ್ನೆ ಸೂಕ್ಷ್ಮಗಳನ್ನು ತೋರಿಸುತ್ತಾರೆಂಬದನ್ನು ನೋಡಲಿಕ್ಕೆ ಸಹ ಹಗಲಿರುಳು ಇವರ ಸುತ್ತಲು ಅನುಭವಿಕರಾದ ಪೋಲಿಸ ಮತ್ತು ಜೇಲ ವಾರ್ಡರರ ಕಾವಲು ಇಟ್ಟಿದ್ದಾರೆಂದು ಪ್ರಸಿದ್ಧವಾಗಿರುತ್ತದೆ.

ಮೂವತ್ತು ಸಾವಿರ ಜನರ ಕಾಯದೆಭಂಗ ನಾಸಿಕದಂತೆ ಅದೇ ಜಿಲ್ಹೆಗೆ ಸೇರಿದ ವಕನಾವಾಡವೆಂಬಲ್ಲಿ ಡಾಕ್ಟರ ಖಾಡಿಲಕರರ ಅಧ್ಯಕ್ಷತೆಯಲ್ಲಿ ೩೦ ಸಾವಿರ ಜನರು ವನಗಾವಲದ ಕಾಯದೆ ಮುರಿದರು.

ಲಖನೌದ ಕಾಲೇಜದ ಹುಡುಗರು ಪಂಡಿತರನ್ನು ಹಿಡಿದ ಬಗ್ಗೆ ಹರತಾಳ ಮಾಡಿ, ಮೆರವಣಿ ತೆಗೆದರು ದಾರಿಯಲ್ಲಿ ಕರೆಯನ್ನು ಪಯ್ಯುತ್ತಿ ಪೇಪರಗಳನ್ನು ಬೋಲ್ಡು ಹಾಕಿದರು.

R. N. B 1443

ವಿಜಯ

ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಮಂಗಳವಾರ ತಾರೀಖು ೧೨ ನೇ ಅಗಸ್ಟ ೧೯೩೦ (ಸಂಚಿಕೆ ೩೦

ಬಂಕಾಪೂರದ ಬಹಾದ್ದೂರಿಯು.

ಸ್ವಯಂಸೇವಕರನ್ನು ಹೊಡೆದ ಸೇಡು ತೀರಿತು.

ಸಶಸ್ತ್ರ ಪೋಲೀಸರ ಮುಂದೆ ಸಾವಿರಾರು ಜನರು ಸತ್ಯಾಗ್ರಹದಿಂ ಸಾವಿರಾರು ಗಿಡ ಕಡಿದರು.

ಪೋಲೀಸ ಅಧಿಕಾರಿಗಳಿಗೂ ಶ್ರೀ ಮುದವೀಡು ಕೃಷ್ಣರಾಯರಿಗೂ
[illegible] ಭಾಷಣ

* * *

ವಿಜಯನಗರದ ಸಾಮ್ರಾಜ್ಯ ಕಾಲದಲ್ಲಿ ಬಂಕಾಪೂರವು ದೊಡ್ಡ ಪಡಮೂಲಿಯ ಪಟ್ಟಣವಾಗಿತ್ತು. ಗೋವೆಯವರು ಇಲ್ಲಿಗೆ ಬಂದು ವ್ಯಾಪಾರ ಮಾಡಿಕೊಂಡು ಹೋಗುತ್ತಿದ್ದರು. ಅದೆಷ್ಟು ದೊಡ್ಡ ಪಟ್ಟಣವಾಗಿರುತ್ತದೆಂಬದು ಇಂದಿಗೂ ಹಳೇ ಕುರುಹುಗಳಿರುತ್ತವೆ. ಅಂಥ ದೊಡ್ಡ ಪಟ್ಟಣವು ಈಗ ಸಾಧಾರಣ ಗ್ರಾಮವಾಗಿದೆ. ಆ ಗ್ರಾಮಕ್ಕೆ ಇಂದು ಹಿಂದುಸ್ಥಾನದ ತುಂಬ ಹೆಸರು ಬರುವಂಥ ಉತ್ತಮ ಯೋಗ ಒಂದದ್ದು ಸಂತೋಷದ ಸುದ್ದಿಯು. ಸಣ್ಣ ಮಾತಿನಿಂದ ದೊಡ್ಡ ಕೆಲಸ ಹೇಗಾಗುತ್ತದೆಂಬದು ಇಂದು ಬಂಕಾಪೂರದಲ್ಲಿ ಪ್ರತ್ಯಕ್ಷ ಕಂಡು ಬಂತು. ಹೋದ ವಾರದಲ್ಲಿ ಕೆಲ ಜನ ಸ್ವಯಂಸೇವಕರು ಶೇಂದಿ ಗಿಡ ಕಡಿಯಲಿಕ್ಕೆ ಹೋಗಲು ಕಲಾಲರು ಇವರನ್ನು ಮೈಮುರಿ ಹೊಡೆದು, ರಕ್ತಬಂಬಾಳ ಮಾಡಿದರು. ಪೋಲೀಸರು ಇದರ ವಿಚಾರ ಮಾಡಿ, ಅಪರಾಧಿಗಳಿಗೆ ಶಿಕ್ಷೆ ಮಾಡಿದ್ದರೆ ಇಂದು ಒದೆಯುವ ಬಂಕಾಪೂರದ ಇತಿಹಾಸಕ್ಕೆ ಆಸ್ಪದವೇ ಉಳಿಯುತ್ತಿದ್ದಿಲ್ಲ. ದೇವರ ಮನಸ್ಸಿಗೆ ಬಂದ ಈ ಚಳವಳಿಯಲ್ಲಿ ಪೋಲೀಸರಿಗೆ ಇಂಥ ಸುಬುದ್ಧಿ ಹುಟ್ಟುವದು ಹೇಗೆ ?

ಅನ್ಯಾಯವಾಗಿ ಹೊಡಿಸಿಕೊಂಡಂಥ ಸ್ವಯಂಸೇವಕರ ಪಡೆಯಿಂದ ಸೇಡು ತೀರಿಸಿಕೊಳ್ಳಲು ಬಂಕಾಪೂರ ಮತ್ತು ಅದರ ಸುತ್ತಲು ನಾಲ್ಕು ಹರದಾರಿಯೊಳಗಿನ ಕುಂದೂರು, ನೀರಲಗಿ, ಶಿಗ್ಗಾವಿ, ಸವಣೂರು, ಹಾನಗಲ್ಲ, ಆಲೂರು, ಅಲದಕಟ್ಟಿ, ಬೊಮ್ಮನಹಳ್ಳಿ, ಹಾವೇರಿ, ದೇವಗಿರಿ ಗ್ರಾಮಗಳಿಂದ ಸಾವಿರಾರು ಜನರು ಸಜ್ಜಾದರು. ದೂರಿನವರು ಸ್ಪೇಶಲ ಮೋಟಾರ ಮಾಡಿಕೊಂಡು ಬಂದರು. ಕಡಿದ ಮನೆಯಲ್ಲಿ ಕಡಿದರೆ ಹೇಗ ಕಡತ ಮುಣುಗುತ್ತದೆಂಬದನ್ನು ಶೇಂದಿ ಕಲಾಲರಿಗೆ ಜನ್ಮ ಜನ್ಮಾಂತರದಲ್ಲಿಯೂ ನೆನಪಿರುವಂತೆ ಗುರ್ತು ಮಾಡಿಕೊಟ್ಟರು. ಇವರೆಲ್ಲರು ಶೇಂದಿ ಗಿಡ ಸಂಹಾರದ ಜಯಭೇರಿ ಹೊಡೆದು ಜಯಸ್ತಂಭವನ್ನೇ ನಿಲ್ಲಿಸಿದರೆಂದು ಎದೆ ತಟ್ಟಿ ಹೇಳುವಂತಾಯಿತು.

ಸೋಮವಾರ ನಾಲ್ಕನೆಯ ತಾರೀಖಿನ ದಿವಸ ಶೇಂದಿ ಗಿಡಗಳನ್ನು ಕಡಿಯಬೇಕೆಂದು ಗೊತ್ತಾಯಿತು. ಮುನ್ನಾ ದಿವಸ ಧಾರವಾಡದಿಂದ ಶ್ರೀ ಮುದವೀಡು ಕೃಷ್ಣರಾಯರು, ಬುರ್ಲಿ, ಜಿಜಿಬ ಪುರೋಹಿತ ಎಮ್. ಎ. ಹಾವೇರಿಯಿಂದ ಶ್ರೀ ಪರಮಣ್ಣಾ ಹೊಸಮನಿ ಮೊದಲಾದವರು ಹೋದರು. ಸಾಯಂಕಾಲದಲ್ಲಿ ಸಾರ್ವಜನಿಕ ಸಭೆಯಲ್ಲಿ ಶ್ರೀ. ಕೃಷ್ಣರಾಯರ ಮುಖ್ಯ ಭಾಷಣವಾಯಿತು. ಭಾಷಣವು ಒಳ್ಳೇ ಹುರುಪಿನದಾಯಿತು. ಅದು:-

ಅನ್ಯಾಯದಿಂದ ಮತ್ತು ಹೇಡಿತನದಿಂದ ನಮ್ಮ ಒಂಬತ್ತು ಜನ ಸ್ವಯಂಸೇವಕರನ್ನು ಹೊಡೆದು, ರಕ್ತಸೂರೆ ಮಾಡಿದಂಥ ಕೃತ್ಯದ ಪರಿಮಾರ್ಜನೆಯನ್ನು ಶಾಂತತನದಿಂದ ಪ್ರತೀಕಾರ ಮಾಡುವದಕ್ಕೆ ನಾವು ಇಲ್ಲಿಗೆ ಬಂದಿದ್ದೇವೆ. ಬಂಕಾಪೂರದವರು ಈ ಕೆಲಸ ಮಾಡುವದಂತೂ ನಿಜವು. ಅವರ ಸಹಾಯಕ್ಕಾಗಿ ನಾವು ಬಂದಿದ್ದೇವೆ. ಬಂಕಾಪೂರದವರು ನೆರವಾಗದಿದ್ದರೆ ಇದನ್ನು ಕರ್ನಾಟಕ ಅಥವಾ ಪರಕಖಂಡದ ಕೇಂದ್ರ ಮಾಡಬೇಕಾದೀತು. ನಿಮ್ಮ ಹಿಂದಿನ ಇತಿಹಾಸವು ದೊಡ್ಡದಿದೆ. ಅದನ್ನು ನೆನಪಿಗೆ ತಂದು, ನೀವು ಕರ್ತವ್ಯ ಮಾಡುವಿರೆಂದು ಆಶಿಸುತ್ತೇವೆ.

ಗಿಡಗಳನ್ನು ಕಡಿಯುತ್ತೇವೆಂದು ಊರವರು ಕಲೆಕ್ಟರರಿಗೂ ಶಿಗ್ಗಾವಿ ಮತ್ತು ಹಾವೇರಿಯ ಮಾಮಲೇದಾರರಿಗೂ ಮುಂದಾಗಿ ತಿಳಿಸಿದ್ದರು. ತಿಳಿಸುವಾಗ ಹೊಲದ ನಂಬರು ಸಹ ಬರೆದಿದ್ದರು. ಕಲೆಕ್ಟರ ಸಾಹೇಬರು ಪೋಲೀಸರಿಗೆ ಪತ್ರ ಬರೆದು, ಬಂದೋಬಸ್ತಿಗೆ ಹೋಗಲು ಅಪ್ಪಣೆ ಕೊಟ್ಟರು. ಮಿ. ಹಾಲಂಡಸಾಹೇಬರು, ಅ|| ಪೋ|| ಸು|| ಮಿ. ಬರೋಚಾ, ಆ ಭಾಗದ ಪೋಲೀಸ ಇನ್ಸಪೇಕ್ಟರ ಮಿ. ಕರಕರ, ಹಾನಗಲ್ಲಿನ ಇಬ್ಬರು, ರಾಣೇಬೆನ್ನೂರ ಮತ್ತು ಹಾವೇರಿಯ ಒಬ್ಬೊಬ್ಬರು ಹೀಗೆ ನಾಲ್ವರು ಫೌಜದಾರರು ೫೦ ಸಶಸ್ತ್ರ, ಮತ್ತು ೫೦ ಲಾಠೀ ಪೋಲೀಸರು ಇಷ್ಟು ಜನರು ಬಂದೋಬಸ್ತಿಗಾಗಿ ಬಂದರು. ಇವರು ನೀರಲಗಿಯಲ್ಲಿ ತಳಹಾಕಿದರು. ಸಣ್ಣ ಹಳ್ಳಿ, ಇವರಿಗೆ ನಿಲ್ಲಲು ಸ್ಥಳವಿರಲಿಲ್ಲ. ಕುಡಿಯಲಿಕ್ಕೆ ನೀರು ಸಿಗಲಿಲ್ಲ. ಪೋಲೀಸರ ಛಾವಣಿಯು ಯುದ್ಧಮಂಡಲದಂತೆ ತೋರಿತು. ಇಂಗ್ರೇಜಿಯಲ್ಲಿ ವಾಟರಲೂ ಅಥವಾ ಕನ್ನಡದಲ್ಲಿ ತಾಳೀಕೋಟಿಯ ಕಾಳಗವನ್ನು ವಾತೆ ಆ ಊರು ರಣಗುಟ್ಟುತ್ತಿತ್ತು.

ಸೋಮವಾರ ೧೧ ಗಂಟೆಯ ಸಮಯದಲ್ಲಿ ಬಂಕಾಪೂರದಿಂದ ಪ್ರತ್ಯಕ್ಷ ಪರಶುರಾಮನ ಮೆರವಣಿಗೆ ಹೊರಟಿತು. ೬೦೦ ಜನ ಚಿಕ್ಕ ಹುಡುಗರು, ಹಾಗಿ ಹಣ್ಣಿನಂಥ ಮುದುಕರು ಮತ್ತು ಹೇಡಿಗಳ ಹೊರ್ತು ಗಂಡಸರೆಂಬುವರೆಲ್ಲರೂ ಹೊರಟರು. ನಾಲ್ಕುನೂರು ಕೊಡ್ಲಿಗಳಿದ್ದವು. ಮೆರವಣಿಗೆಯು ಅಗಸೀದಾಟುವತನಕ ಬ್ಯಾಂಡಿನವರು ಕಾವಾಗಿ ಬ್ಯಾಂಡು ಬಾರಿಸಿದರು. ಹೆಣ್ಣುಮಕ್ಕಳು ಮನೆಮನೆಗೆ ಆರುತಿ ಬೆಳಗಿದರು. ಚುರುಮುರಿಯ ಮಳೆ ಸುರಿಯಿತು. ಅಗಸೀ ದಾಟಿದ ಕೂಡಲೆ ವ್ಹಾಲಂಟಿಯರರನ್ನು ಹೊಡೆದ ಹೊಲಕ್ಕೆ ಹೋದರು. ಈ ಹೊಲವು ನೀರಲಗಿ ಗ್ರಾಮದಲ್ಲಿರುವದು. ಸುತ್ತಲಿನ ಹಳ್ಳಿಗಳು ಸೇರಿ, ಎರಡುಸಾವಿರ ಜನವು ಗಿಡಕಡಿಯುವದಕ್ಕೆ ಸುಗುವುಗೊಂಡಿತ್ತು. ಇದರಲ್ಲಿ ಹಿಂದೂ ಮುಸಲಮಾನರು ಸರಿಯಾಗಿ ಭಾಗತಕ್ಕೊಂಡಿದ್ದರು. ಶ್ರಾವಣ ಸೋಮವಾರವಾದ್ದರಿಂದ, ಬ್ರಾಹ್ಮಣ, ವೀರಶೈವ, ಮರಾಠಾ ಮೊದಲಾದ ವೀರಶೈವರು ಉಪವಾಸದಿಂದಲೇ ಗಿಡ ಕಡಿಯಲಿಕ್ಕೆ ಬಂದಿದ್ದರು. ಶಾಂತಿಯುದ್ಧ ಮಾಡುವ ಸೈನಿಕರು ಮೈಲೆರಡು ಮೈಲಿನ ತನಕ ನಿಂತಿರುವದನ್ನು ಕಂಡು ಬರೋಚಾಸಾಹೇಬರು ಶ್ರೀ ಮುದವೀಡು ಕೃಷ್ಣರಾಯರಿಗೆ ಇದೇನು ಆರ್ಭಾಟವೆಂದು ಪ್ರಶ್ನ ಮಾಡಿದರು. ಆಗ ನಡೆದ ಪ್ರಶ್ನೋತ್ತರ

ಸಾಹೇಬರು ಬಂಕಾಪೂರದ ಹೊರ್ತು ಹೊರಗಿನ ಜನರೂ ಗಿಡ ಕಡಿಯಲಿಕ್ಕೆ ಬಂದದ್ದು ನಿಜವೇ

ಶ್ರೀ ಮು- ಹೌದು ಗಿಡ ಕಡಿಯುವದೇ ನಮ್ಮ ಮುಖ್ಯ ಉದ್ದೇಶವಲ್ಲ. ನಮ್ಮ ಹಕ್ಕು ಸ್ಥಾಪಿಸುವದಕ್ಕೆ ಇಷ್ಟು ಜನರು ಕೂಡಿದ್ದಾರೆ.

ಸಾ ಗಿಡಗಳು ಸ್ವಲ್ಪೇ ಅವೆ. ಎರಡನೇ ಊರವರು ಬರಲಿಕ್ಕೆ ಕಾರಣವೇನು ?

ಮು- ಹೋದ ಸಾರೆ ಗಿಡಕಡಿಯಲಿಕ್ಕೆ ಸ್ವತಃ ಮಾಲೀಕನ ಬಂದರೂ, ಪುಂಡತನದಿಂದ ಹೊಡೆದು, ಹೆದರಿಕೆ ಹೊಡಿಸಿವೆವೆಂದು ಹೌಂಸ ಪಡೆದವರು ನಮ್ಮ ಹಕ್ಕಿಗೆ ಪ್ರತಿಬಂಧ ಮಾಡಿದ್ದರ ಪರಿಮಾರ್ಜನೆ ಮಾಡಿಕೊಳ್ಳುವದಕ್ಕಾಗಿ ಇಷ್ಟು ಜನರು ಸೇರಿದ್ದಾರೆ.

ಬಳಿಕ ಈ ಸಾಹೇಬರು ಮಾಮಲೇದಾರರಿಗೆ ಪರವಾನಿಗಿ ತಂದ ಹೊಲಗಳಲ್ಲಿಯ ಗಿಡಗಳನ್ನು ತೋರಿಸಲಿಕ್ಕೆ ಹೇಳಿ, ಸಂಗಡ ಕೆಲ ಪೋಲೀಸರನ್ನೂ ಕಳಿ

ದರು. ಜನರು ಹುರುಪಿನಿಂದ ಇವರ ಕೂಡ ಗಿಡ ಕಡಿಯಲಿಕ್ಕೆ ಹೋದರು. ಜನರು ಸುರಾಂತಾಕ್ಷನ ಸಂಹಾರ ಸ್ಥಳಕ್ಕೆ ಹೋಗಿ ಮುಟ್ಟುವಾಗ- ಮೆ॥ ಹಾಲಂಡಸಾಹೇಬರು ಅಲ್ಲಿಗೆ ಬಂದರು. ಆಗ ನಡೆದ ಪ್ರಶ್ನೋತ್ತರವು

ಮೆ॥ ಹಾಲಂಡ- ಇಷ್ಟು ಜನರನ್ನು ಕೂಡಿಕೊಂಡು ಎಷ್ಟೇ ಪ್ರಚಂಡ ರೀತಿಯಿಂದ ಗಿಡ ಕಡಿದರೂ, ಕಡಿಯುವ ಘಟ ಕಡಿಮೆಯಾಗುತ್ತದೇನು ತಿಳಿಸುವಿರಾ- ಜನರು ಕದ್ದು ಕಡಿಯುವರು ನೈತಿಕ ದೃಷ್ಟಿಯಿಂದ ಮತ್ತಿಷ್ಟು ಅಧಃಪತನವಾಗುತ್ತದೆ.

ಶ್ರೀ. ಮು- ಕೇವಲ ನೈತಿಕ ದೃಷ್ಟಿಯ ಉದ್ದೇಶವಿಟ್ಟುಕೊಂಡು ಗಿಡ ಕಡಿಯುವದಕ್ಕೆ ಬಂದಿಲ್ಲ. ಮುಖ್ಯ ಉದ್ದೇಶವು ಸರಕಾರದ ಉತ್ಪನ್ನ ಕಡಿಮೆ ಮಾಡುವದಾಗಿರುತ್ತದೆ. ಅದಷ್ಟು ಸರಕಾರದ ಉತ್ಪನ್ನಕ್ಕೆ ಕೇರು ಹಾಕುವದೇ ನಮ್ಮ ಕೆಲಸ.

ಇದು ರಾಜಕಾರಣವಾದ್ದರಿಂದ ಸಾಹೇಬರು ಈ ವಾದವಿವಾದವನ್ನು ಮುಂದೆ ಬೆಳೆಯಿಸಲಿಲ್ಲ. ಆದರೆ ಬೇರೊಂದು ರೀತಿಯಿಂದ

ಸಾಹೇಬರು- ಇಲ್ಲಿ ನನ್ನ ಶಕ್ತಿಯನ್ನೇ ತಂದಿದ್ದೇನೆ. ಐದಾರು ನೂರು ರೂಪಾಯಿ ವೆಚ್ಚ ಬಂತು. ಇದು ರೈತರ ದುಡ್ಡು; ಅನ್ಯಾಯದಿಂದ ಈ ದುಡ್ಡು ಕಳೆದಂತಾಗುವದಿಲ್ಲವೇ ?

ಶ್ರೀ ಮು- ಇದಕ್ಕೆ ಮಾತ್ರ ರೈತರ ದುಡ್ಡು ಅನ್ಯಾಯದಿಂದ ಹೋದಂತೆ ನಿಮಗೆ ಕಾಣಿಸುತ್ತದೆ. ಸಕ್ಕರ ಮತ್ತು ಬ್ಯಾಕಬೇದಲ್ಲಿ ನೊಸ್ಕ ಸುರುವುವಾಗ ರೈತರ ದುಡ್ಡು ಹೋಗುತ್ತದೆಂದು ಅನಿಸಲಿಲ್ಲವೇಕೆ ?

ಸಾಹೇಬರು- ಸಾವಿರಾರು ಜನರು ಕೂಡಿ ಗಿಡ ಕಡಿಯುತ್ತಿದ್ದಾರೆ. ಮೈಮೇಲೆ ಹಾಕಿಕೊಂಡು ಅಪಘಾತ ಮಾಡಿಕೊಂಡಾರು. ಅವರಿಗೆ ಎಚ್ಚರಿಕೆ ಕೊಡುತ್ತಾ ಬನ್ನಿ.

ಶ್ರೀ ಮು- ಹೆದರುವ ಅಂಜುವ ಕಾರಣವಿಲ್ಲ. ಗಿಡ ಕಡಿಯುವದು ಅವರ ನಿತ್ಯದ ವ್ಯವಸಾಯವಾಗಿರುತ್ತದೆ. ನಿಮಗೆ ಮಾತ್ರ ಇದು ಹೊಸದು. ಇಂಥ ಅಪೂರ್ವ ಪ್ರಸಂಗವನ್ನು ನೋಡಲಿಕ್ಕೆ ನಿಮಗೆ ದೊರೆಯುವದಿಲ್ಲ. ಕೆಲಸವಾದ ಬಳಿಕ, ನೀವು ನೋಡಲಿಕ್ಕೆ ಬಂದು ಹೋಗುತ್ತೀರಿ

ಬಳಿಕ ಸಾಹೇಬರು ಕೆಲವು ಪೋಲೀಸರನ್ನು ಮಾತ್ರ ಇಟ್ಟು ಉಳಿದವರನ್ನು ಅವರವರ ಸ್ಥಳಕ್ಕೆ ಕಳಿಸಿದರು. ತಾವೂ ಹೊರಟುಹೋದರು

ಅಲ್ಲಿ ಅಷ್ಟಿಷ್ಟು ಗಿಡಗಳಿರಲಿಲ್ಲ. ಏಳು ಸಾವಿರ ಗಿಡಗಳದ್ದೇ ವಿಸ್ತಾರವಾದ ಬನವಿತ್ತು. ಸಾಯಂಕಾಲದ ವರೆಗೆ ಎರಡು ಸಾವಿರದ ತನಕ ದೊಡ್ಡ ದೊಡ್ಡ ಗಿಡಗಳು ನೆಲಕ್ಕುರುಳಿದವು. ಸಂಜೆ ಎಲ್ಲ ಜನರು ಬಂಕಾಪೂರಕ್ಕೆ ಪ್ರಚಂಡ ಮೆರವಣಿಗೆಯಿಂದ ಬಂದರು. ದಾರಿಯಲ್ಲಿ ನೀರಲಗಿ, ಕುಂದೂರುಗಳಲ್ಲಿ ಸಭೆಯಾಯಿತು. ಸ್ವಯಂಸೇವಕರನ್ನು ಹೊಡಿಸಲು ಕಾರಣೀಭೂತನಾದಂಥ ಈಳಿಗೇರ ಬಸಯ್ಯನೆಂಬವನಿಗೆ ಸಾಮಾಜಿಕ ಬಹಿಷ್ಕಾರ ಹಾಕಬೇಕೆಂಬ ಧ್ವನಿಯೇ ಎದ್ದಿದೆ. ಅವನಿಗೆ ಬೆಂಕಿ ಸಹ ಕೊಡಲಿಕ್ಕಾಗದಂತೆ ಜನರು ಕಟ್ಟು ಮಾಡಿದ್ದಾರೆ. ಬಂಕಾಪೂರದಲ್ಲಿ ಮೆರವಣಿಗೆ ಬಂದಾಗ- ಲೆಕ್ಕವಿಲ್ಲದಷ್ಟು ಆರುತಿ ಬೆಳಗಿದವು. ಮುಸಲಮಾನರು ಊದಿನಕಡ್ಡಿಯಿಂದ ಸನ್ಮಾನಿಸಿದರು. ಬಂಕಾಪೂರದಲ್ಲಿ ಇಂಥ ಉತ್ಸವವು ಹಿಂದೆಯಾಗಲಿಲ್ಲ; ಮುಂದೆಯಾಗಲಿಕ್ಕಿಲ್ಲೆನಿಸಿತು. ಬಳಿಕ ಸಭೆಯಾಯಿತು. ಆಗ ಶ್ರೀ ಕೃಷ್ಣರಾಯರು ಉಪಸಂಹಾರದ ಭಾಷಣ ಮಾಡಿದ್ದೇನಂದರೆ-

“ ಬಂಕಾಪೂರಕ್ಕೆ ಒಪ್ಪುವಂತೆ ನೀವು ಕೆಲಸ ಮಾಡಿದಿರಿ. ಕರ್ನಾಟಕಕ್ಕೆ ಮಾನ ತಂದಿರಿ. ನೀವು ಪೋಲೀಸರ ದೊಡ್ಡ ಸಿದ್ಧತೆಗೆ ಹೆದರದೆ, ಜಯ ಸಂಪಾದನೆ ಮಾಡಿಕೊಂಡು ಬಂದಿರಿ. ಸೋತಿದ್ದರೆ- ದೊಡ್ಡ ಕಳಂಕ ಬರುತ್ತಿತ್ತು. ಅದನ್ನು ತಪ್ಪಿಸಿ, ಕಾಂಗ್ರೆಸದ ವಿಧಾಯಕ ಕಾರ್ಯಕ್ರಮಕ್ಕೆ ಯಶ ತಂದಿರಿ. ಕಾಂಗ್ರೆಸ ಕಮೀಟಿಯ ವತಿಯಿಂದ ನಿಮ್ಮೆಲ್ಲರ ಉಪಕಾರ ಸ್ಮರಿಸುತ್ತೇನೆ. ಇಂದು ಹಿಂದೂ ಮುಸಲಮಾನ, ಬ್ರಾಹ್ಮಣ ಲಿಂಗಾಯತರೆಲ್ಲರೂ ಒಂದಾಗಿ ಏಕೋಭಾವದಿಂದ ಕೆಲಸ ಮಾಡಿದಂತೆ ಮುಂದಾದರೂ ಮಾಡುವಿರೆಂದು ದೃಢವಾಗಿ ಆಶಿಸುತ್ತೇನೆ. ಬಸಯ್ಯನಿಗೆ ಬರೇ ಬಹಿಷ್ಕಾರ ಹಾಕಿ ಉಪಯೋಗವಿಲ್ಲ. ಆತನು ತನ್ನ ಹ್ವಾಲಂಟಿಯರರು ಎರಡು ಗಾಂಧಿಟೊಪ್ಪಿಗೆ ಎಂಟು ನಿಶಾನೆ, ಐದು ಕೊಡ್ಲಿಗಳನ್ನು ತಕ್ಕೊಂಡಿದ್ದಾನೆ. ಒಂದು ವಾರದೊಳಗಾಗಿ ಇವನ್ನು ತಂದುಕೊಟ್ಟು ಸ್ವಯಂ ಸೇವಕರ ಕ್ಷಮೆ ಬೇಡಿಕೊಳ್ಳಬೇಕು. ಅದಕ್ಕೆ ತಪ್ಪಿದರೆ- ಸಾವಿರಾರು ಜನರು ಸತ್ಯಾಗ್ರಹ ಮಾಡಿ, ಅವನ್ನು ತಕ್ಕೊಳ್ಳುವರೆಂದು ಆತನು ಪೂರಾ ತಿಳಿಯಬೇಕು.”

ಗಿಡ ಕಡಿಯುವ ಉತ್ಸವದಲ್ಲಿ ಸ್ತ್ರೀಯರು ಒಳ್ಳೇ ಉತ್ಸಾಹಾಸಕ್ತಿಯುಳ್ಳವರಾದರು. ಶ್ರೀ. ರಾಚಪ್ಪ ಪವಾರನೆಂಬವನು ಮೆರವಣಿಗೆಯ ಮುಂದೆ ರಾಷ್ಟ್ರೀಯ ನಿಶಾನೆ ಹಿಡಕೊಂಡು ನಡೆದನು. ಆತನ ಹೆಂಡತಿ ಸಾವಕ್ಕನೂ ಉತ್ಸಾಹಗೊಂಡು, ಆತನ ಜೋಡಿಯಿಂದ ನಿಶಾನೆ ಹಿಡಕೊಂಡು ಹೊರಟಳು. ಗಂಡಹೆಂಡತಿಯ ಜೋಡಿಯನ್ನು ನೋಡಿ, ಜನರು ಬಹುವಾಗಿ ಬೆರಗಾಗಿ, ಅವರ ಸ್ವದೇಶಾಭಿಮಾನವನ್ನು ಹೊಗಳಿದರು. ಪೋಲೀಸರ ಕತ್ತಿ ಬಂದೂಕು ಮತ್ತು ಲಾಠಿಯ ಸಿದ್ಧತೆ ನೋಡಿ, ಏನಾದರೂ ಅನಿಷ್ಟ ಪ್ರಸಂಗ ಬಂದೀತೆಂದು ಕೆಲವರು ಭಯಭೀತರಾಗಿದ್ದರು. ಆದರೆ ಕೊನೆಯಲ್ಲಿ ಗಾಂಧೀಮಹಾರಾಜ ಜಯವಾದದ್ದನ್ನ ಕಂಡು ಎಲ್ಲರಿಗೂ ಆನಂದವೇ ಆನಂದವಾಯಿತು.

ಇಳಕಲ್ಲ ಶೀರೆಗಳಿಗೆ ಸ್ವದೇಶಿ ನೂಲು ಉಪಯೋಗಿಸುವರು.

ಎಷ್ಟೋ ಜನರು ಖಾದಿಯ ಉಪದೇಶಿಗಳಿಗೆ ಮಂಗಚೇಷ್ಟೆ ಮಾಡಲು- ನಿಮ್ಮ ಹೆಂಡರು ಮಕ್ಕಳು ಇಳಕಲ ಶೀರೆಯನ್ನೇಕೆ ಉಡುತ್ತಾರೆಂದು ಪ್ರಶ್ನ ಮಾಡುತ್ತಾರೆ ಇಂಥವರಿಗೆ ತಪರಾಕಿ ಹೊಡೆದಂಥ ಉತ್ತರವನ್ನು ಇಳಕಲ ವರ್ತಕರು ಕೊಟ್ಟಿದ್ದಾರೆ. ಇವರು ಒಂದು ಕಮೀಟಿ ಮಾಡಿ, ಕೆಳಗೆ ಕೊಟ್ಟಂತೆ ಠರಾವು ಮಾಡಿದ್ದಾರೆ.

೧ ಪರದೇಶಿ ನೂಲು ಮತ್ತು ರೇಶಿಮೆಯು ಎಷ್ಟು ಅಗ್ಗವಾದರೂ, ಕೊಳ್ಳಬಾರದು.

೨ ಈ ಠರಾವಿನ ವಿರುದ್ಧ ಯಾವನಾದರು ನಡೆದರೆ- ಆತನ ಎಲ್ಲ ಗಂಟುಗಳನ್ನು ಸಂಘದವರು ತಮ್ಮ ವಶದಲ್ಲಿ ತಕ್ಕೊಂಡು, ಗಂಟು ಕಟ್ಟಿ, ಅದರ ಮೇಲೆ ಮೋಹರು ಮಾಡಬೇಕು.

೩ ಈ ಪ್ರಕಾರ ನಡೆಯದೆ ಅಪರಾಧ ಮಾಡಿದವನು ೫೧ ರೂಪಾಯಿ ದಂಡ ಕೊಡಬೇಕು.

೪ ಮೇಲಿನ ಠರಾವುಗಳ ವಿರುದ್ಧ ಯಾವ ಅಂಗಡಿಕಾರನಾದರು ನಡೆದರೆ ಆತನ ಕೂಡ ಯಾರೂ ವ್ಯವಹಾರ ಮಾಡಬಾರದು. ಮತ್ತು ಆತನ ಹೆಸರನ್ನು ವರ್ತಮಾನಪತ್ರದಲ್ಲಿ ಪ್ರಸಿದ್ಧ ಮಾಡತಕ್ಕದ್ದು.

೫ ಈ ಠರಾವಿನ ವಿರುದ್ಧ ಯಾರೂ ನಡೆಯಬಾರದೆಂದು ಪ್ರತಿಯೊಂದು ಶೀರಿಯ ಮೇಲೆ ಕಾಂಗ್ರೆಸದ ಮೊಹರು ಹೊಡೆಯತಕ್ಕದ್ದು.

ಶೀಕ್ಷೆ.
ಪಂಡಿತ ಮಾಲವಿಯಾಯವರಿಗೆ ಹದಿನೈದು ದಿವಸ-

ಸರದಾರ ಪಟೇಲ, ಡಾಕ್ಟರ ಹರ್ಡಿಕರ, ಶೀ ಜಯರಾಮ ದೌಲತರಾಮ ಮತ್ತು ಬ್ಯಾರಿಸ್ಟರ ಶೇರವಾನಿಯವರಿಗೆ ಮೂರು ಮೂರು ತಿಂಗಳ ಸಾದಾ ಶೀಕ್ಷೆಯಾಯಿತು.

ಮಾಲವಿಯಾ ಮತ್ತು ಸರದಾರರಿಗೆ ಬಿ ಕ್ಲಾಸ.

ಡಾಕ್ಟರ ಹರ್ಡಿಕರ್ರ ಮತ್ತು ಬ್ಯಾರಿಸ್ಟರ ಶೇರವಾನಿಯವರಿಗೆ “ ಬಿ ” ಕ್ಲಾಸ

ಕೋರ್ಟಿನಲ್ಲಿ ಪಂಡಿತ ಮಾಲವಿಯಾಯವರು ಡಿಫೆನ್ಸ ಕೊಟ್ಟದ್ದರಿಂದ, ವಿಚಾರಣೆಯು ಮುಂದೆ ಬಿದ್ದಿದೆ ಇವರು ತುರಂಗದಲ್ಲಿಯೇ ಇರುವದರಿಂದ, ಸರಕಾರದಿಂದಲೇ ಇವರ ವ್ಯವಸ್ಥೆ ನಡೆದಿದೆ. ಶೀಕ್ಷೆ ಅಥವಾ ಬಿಡುಗಡೆಯಾಗುವ ಮುಂಚಿತವಾಗಿ ಸರಕಾರದವರು ಪಂಡಿತ ಮಾಲವಿಯಾ, ಸರದಾರ ಪಟೇಲ ಇವರಿಗೆ ಎ ಕ್ಲಾಸ ಕೊಟ್ಟು, ಡಾಕ್ಟರ ಹರ್ಡಿಕರ, ಜಯರಾಮ ದೌಲತರಾಮ ಮತ್ತು ಬ್ಯಾರಿಸ್ಟರ ಶೇರವಾನಿಯವರಿಗೆ ಬಿ ಕ್ಲಾಸ ಕೊಟ್ಟಿದ್ದಾರೆ ಕೌನ್ಸಿಲ ಮತ್ತು ಅಸೆಂಬ್ಲಿಯ ಮೆಂಬರರಿಗೆ ಎ ಕ್ಲಾಸ ಕೊಡಬೇಕೆಂದು ನಿಯಮವಿದ್ದರೂ, ತಮಗೆ ಬಿ ಕ್ಲಾಸ ಕೊಟ್ಟದ್ದಕ್ಕಾಗಿ ಬ್ಯಾರಿಸ್ಟರ ಶೇರವಾನಿಯವರು ಅನ್ನತ್ಯಾಗ ಮಾಡುವಂತೆ ಜಾಹೀರ ಮಾಡಿದ್ದಾರೆ

ಶ್ರೀ ಚಿಕ್ಕೋಡಿ ಪಂಡಿತಪ್ಪನವರ ಮೇಲೆ ರಾ. ಬ. ಅಂಗಡಿಯವರ ನಿಷೇಧಕ ಠರಾವು.

ಬೆಳಗಾವಿಯ ಡಿಸ್ಟ್ರಿಕ್ಟ ಲೋಕಲಬೋರ್ಡಿನಲ್ಲಿ ಇಂಜಿನಿಯರರಿಗೆ ಒಬ್ಬ ಪರ್ಸನಲ ಅಸಿಸ್ಟಂಟರನ್ನು ನೇಮಿಸುವದು ಗೊತ್ತಾಯಿತು. ಈ ಸ್ಥಳದ ದೆಸೆಯಿಂದ ಅಧ್ಯಕ್ಷರಾದ ಶ್ರೀ. ಪಂಡಿತಪ್ಪನವರು ವರ್ತಮಾನಪತ್ರಗಳಲ್ಲಿ ಜಾಹೀರಾತು ಕೊಟ್ಟರು. ಜಾಹೀರಾತಿನಂತೆ ಬರತಕ್ಕಷ್ಟು ಅರ್ಜಿಗಳು ಬರಲಿಲ್ಲ. ಇದರಿಂದ ಶ್ರೀ. ಪಂಡಿತಪ್ಪನವರ ವರ್ತನವು ನಿಷೇಧಾರ್ಹವಾಗಿರುತ್ತದೆಂದೂ ಇವರಲ್ಲಿ ನಂಬಿಗೆಯಿಲ್ಲೆಂದೂ ರಾ. ಬ. ಅಂಗಡಿಯವರು ನಿಷೇಧಕ ಠರಾವು ತಂದರು. ಶ್ರೀ. ಮುಜಲಿಯವರು ಠರಾವನ್ನು ವಿರೋಧಿಸಿ, ಶ್ರೀ. ಪಂಡಿತಪ್ಪನವರಲ್ಲಿ ಪೂರ್ಣ ವಿಶ್ವಾಸವಿರುತ್ತದೆಂಬ ಠರಾವು ತಂದರು ಈ ಠರಾವು ದೊಡ್ಡ ಬಹುಮತದಿಂದ ಪಾಸಾಯಿತು.

ತುರಂಗವಲ್ಲ; ಕೊಂಡವಾಡೆಯು.

ಮುಂಬಯಿಯಲ್ಲಿ ಪಂಡಿತ ಮಾಲವಿಯವರನ್ನು ಇಟ್ಟ ಪೋಲೀಸರ ತುರಂಗವು ತುರಂಗವಲ್ಲ; ಕೊಂಡವಾಡೆಯಾಗಿರುತ್ತದೆಂದು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿಯೇ ಪ್ರಶ್ನೋತ್ತರಗಳು ನಡೆದವು ಪೋಲೀಸರ ಲಾಕಪ್ಪಿನಲ್ಲಿರುವದು ಮನುಷ್ಯ ಮಾತ್ರನಿಗೆ ಅಶಕ್ಯವಿದ್ದು ಕೋಣೆಗಳು ಬಹಳ ಹೊಲಸಿರುತ್ತವೆ. ಇವು ಕೈದಿಗಳ ಕೋಣೆಗಳಲ್ಲ. ಕೊಂಡವಾಡೆಗಳಾಗಿವೆಂದು ಸರದಾರ ಪಟೇಲರೆಂದರು. ಇಲ್ಲಿಯ ತಗಣಿಗಳು ಸಾಮಾನ್ಯವಲ್ಲ. ಮನುಷ್ಯರಷ್ಟು ದೊಡ್ಡವಾಗಿರುತ್ತವೆಂದು ಬ್ಯಾರಿಸ್ಟರ ಶೇರವಾನಿಯವರೆಂದರು. ಒಂದೇ ಕೋಣೆಯಲ್ಲಿ ಸ್ತ್ರೀ ಮತ್ತು ಪುರುಷ ಕೈದಿಗಳನ್ನು ಹಾಕುತ್ತಾರೆಂದು ಈ ಪ್ರಶ್ನೋತ್ತರದಲ್ಲಿ ಹೊರಬಿದ್ದದ್ದಂತೂ ಆಶ್ಚರ್ಯಕರವಾದದ್ದು.

ಲಖನೌದ ಕಾಲೇಜದ ಹುಡುಗರು ಪಂಡಿತರನ್ನು ಹಿಡಿದ ಬಗ್ಗೆ ಹರತಾಳ ಮಾಡಿ, ಮೆರವಣಿಗೆ ತೆಗೆದರು ದಾರಿಯಲ್ಲಿ ಕರೆಯನ್ನು ವಯ್ಯುತ್ತಿದ್ದ ಪೇಪರಗಳನ್ನು ಬೋರ್ಲು ಹಾಕಿದರು.

ಯಾರ ಹಟ! ಅಧಿಕಾರಬಲದ ಹಟ!!

ಮುಂಬಯಿಯಲ್ಲಿ ಮುನ್ನೂರು ಜನರು ತಲೆಯೊಡಿಸಿಕೊಂಡದ್ದರ ಅಪರಾಧಗ ಮೊಟ್ಟೆಯನ್ನು ಪೋಲೀಸರು ಕಾಂಗ್ರೆಸದವರ ಮೇಲೆ, ಮತ್ತು ಕಾಂಗ್ರೆಸಿನವರು ಪೋಲಿಸರ ತಲೆಯ ಮೇಲೆ ಹಾಕತೊಡಗಿದ್ದಾರೆ. ಇಬ್ಬರ ಜಗಳವನ್ನು ತಟಸ್ಥೀಭಾವದಿಂದ ನೋಡುತ್ತಿರುವಂಥ ಮವಾಳರು ಎಲ್ಲ ತಪ್ಪನ್ನು ಪೋಲಿಸರ ಮೇಲೆ ಹಾಕಿದ್ದಾರೆ. ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮಿ ಮೋದಿ ಹಾಗು ವ್ಯಾಪಾರ ಸಂಘದ ಅಧ್ಯಕ್ಷ ಶ್ರೀ. ಲಾಲಜಿಮುವರೂ ಪೋಲಿಸರದೇ ಸರ್ವಾಪರಾಧವೆಂದು ಹೇಳಿದ ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ.

ಮೆರವಣಿಗೆಯು ಬೋರಿಬಂದರಕ್ಕೆ ಬಂದ ಕೂಡಲೆ– ಇದು ಹಾರ್ನಬಿಬೀದಿಗೆ ಹೋಗಬಾರದೆಂದು ಒಂದು ಸಾವಿರ ಪೋಲಿಸರು ಇದನ್ನು ಅಡ್ಡಗಟ್ಟಿ ತರಬಿದರು. ಜನರು ಧರಣೇ ಕೂತರು. ಆಗ ಸಂಧ್ಯಾಕಾಲವಾಗಿತ್ತು. ಮುಖ್ಯ ದಾರಿ ಬಂದಾಯಿತು. ಲೋಕಮಾನ್ಯರನ್ನು ದಹನ ಮಾಡಿದ ರುದ್ರಭೂಮಿಯಿಂದ ಇಲ್ಲಿಯ ತನಕ ಮೆರವಣಿಗೆಯು ದಾರಿ ಕಟ್ಟುತ್ತಲೇ ಬಂತು. ಆಗ ಪೋಲಿಸರು ಇದಕ್ಕೆ ಯಾವ ಪ್ರಕಾರದಿಂದಲೂ ಅಡ್ಡ ಬರಲಿಲ್ಲ. ಯುರೋಪಿಯನ್ನರ ಬೀದಿಯಲ್ಲಿ ಹೋಗಬಾರದೆಂಬ ಕುಬುದ್ಧಿಯಿಂದ ಇದನ್ನು ಬೋರೀ ಬಂದರದ ಹತ್ತರ ತಡವಿದರು.

ಧರಣೇ ಕೂತವರು ಇಡೀ ರಾತ್ರಿ ಅಲ್ಲಿ ಕಾಲ ಕಳೆದರು. ಪೋಲೀಸರು ಇವರಿಗೆ ಹೋಗಗೊಡದಂಥ ಹಾರ್ನಬಿ ರೋಡದಲ್ಲಿಯು ಎಲ್ಲ ಅಂಗಡಿಗಳು ಸಾಯಂಕಾಲದಲ್ಲಿ ಮುಚ್ಚುತ್ತವೆ. ರಾತ್ರಿ ಹತ್ತರ ತರುವಾಯ ಅಲ್ಲಿ ಕಗ್ಗತ್ತಲು ಆಗುತ್ತದೆ. ಮ್ಯುನಿಸಿಪಾಲಿಟಿಯ ದೀಪಗಳ ಹೊರ್ತು ಬೆಳಕೇ ಇರುವದಿಲ್ಲ. ಸಾಯಂಕಾಲದಲ್ಲಿ ಬೀದಿ ಹಿಡಿಯಲಾರದಷ್ಟು ಜನಸಂಮರ್ದನೆ ಇರುವದು. ಅದೇ ಸ್ಥಳವು ರಾತ್ರಿಯಲ್ಲಿ ನಿರ್ಜನವಾಗುವದು. ಪೋಲೀಸರು ನಿರ್ಜನವಾದಾಗ ಕೂಡ ಮೆರವಣಿಗೆ ತೆಗೆಯಗೊಡಲಿಲ್ಲ.

ಮೆರವಣಿಗೆಯಿಂದ ದಾರಿ ಕಟ್ಟಾಗುತ್ತದೆಂದು ಪೋಲೀಸ ಕಮಿಶನರರು ಅಂದದ್ದು ವೇಳ್ಪುಟಿಯ ಮಾತು. ಹೊಟ್ಟೆಯೊಳಗಿನ ಸಂಕಟ ಬೇರೆ ಇತ್ತು. ದಾರಿ ಬಂದು ಮಾಡುವದಿಲ್ಲ. ವಾಹನಗಳಿಗೆ ಬೇಕಾದಷ್ಟು ಹಾದೀ ಕೊಡುತ್ತೇವೆ, ನಾಲ್ವರದೊಂದು ಸಾಲು ಮಾಡುತ್ತೇವೆಂದು ಸರದಾರ ಪಟೇಲರಂದರು. ನಾಲ್ವರೂ ಬೇಡ; ಇಬ್ಬರದೊಂದು ಸಾಲು ಮಾಡುತ್ತೇವೆಂದು ಪಂಡಿತ ಮಾಲವಿಯಾಯವರು ಹೇಳಿದರು. ಪೋಲೀಸ ಕಮಿಶನರರು ಈ ವ್ಯವಸ್ಥೆಗೆ ಒಪ್ಪದೆ ತಮ್ಮ ಬಿಂಕ ಬಿಡಲೇ ಇಲ್ಲ. ರಾಜಿಯ ಎಲ್ಲ ಉಪಾಯ ನಿಂತಿತು. ಬೆಳಗಾಯಿತು. ಪೋಲೀಸರು ಮುಖಂಡರನ್ನು ಹಿಡಿದು, ಉಳಿದವರ ಮೇಲೆ ಲಾಠಿಯ ಪ್ರಯೋಗ ಮಾಡಿದರು. ಇವರಿಗೆ ಪ್ರಸಾದ ಕೊಟ್ಟದ್ದರೆ ಲೋಕೋತ್ತರ ಅಪಕೀರ್ತಿ ಬರುವದೆಂದು ಬಗೆದು, ಇವರ ಕೂದಲೆಳೆಗೆ ಸಹ ಕೈ ಹಚ್ಚದೆ, ಇವರನ್ನು ಕಾಯಿದೆಯ ಹೆಸರಿನಿಂದ ಹಿಡಿದು, ಉಳಿದವರಿಗೆ ಡೊಣ್ಣೆಯ ಪ್ರಸಾದ ಕೊಟ್ಟರು.

ಈ ಅಲ್ಪ ವಿವೇಚನೆಯಿಂದ ಕಾಂಗ್ರೆಸದವರ ಹಟವಿರಲಿಲ್ಲ. ಸಾವೇ: ಜಾರಕ್ಕೆ ಸಿದ್ಧರಿದ್ದರೆಂದೂ, ಪೋಲೀಸರು ಅಧಿಕಾರ ಬಲದಿಂದ ತಮ್ಮದೇ ಹಟ ನಡಿಸಿದರೆಂದೂ ಸ್ಪಷ್ಟವಾಗುತ್ತದೆ. ಲೋಕಮತವಾದರೂ ಕಾಂಗ್ರೆಸಕ್ಕೇ ಅನುಕೂಲವಾಗಿರು

ಅರಸನ ಇಚ್ಛೆಯಲ್ಲ ಬದನೀಕಾಯಿ ಇಚ್ಛೆ.

ಈಗ ನಡೆದ ಆಂದೋಲನದಲ್ಲಿ ವಿದ್ಯಾರ್ಥಿಗಳು ಬಹು ದೊಡ್ಡ ಭಾಗ ತೆಕ್ಕೊಂಡಿದ್ದಾರೆ. ಇವರು ರಾಜಕೀಯ ಚಳವಳಿಯಲ್ಲಿ ಸೇರಬಾರದೆಂದು ಸರಕಾರದವರು ಕಳೆದ ಮೂವತ್ತು ವರ್ಷಗಳಿಂದ ಮಾಡಬೇಕಾದ ಮತ್ತು ಮಾಡಬಾರದ ಪ್ರಯತ್ನೋಪಾಯಗಳನ್ನು ಮಾಡಿದರು. ಮುಂಬಯಿ ಸರಕಾರದವರು ತಳೆಗಾವದ ರಾಷ್ಟ್ರೀಯ ಶಾಲೆಯನ್ನು ಬಂದು ಮಾಡಲು ಹಿಂದೆ ಮುಂದೆ ನೋಡಲಿಲ್ಲ. ಏನು ಮಾಡಿದರೂ ವಿದ್ಯಾರ್ಥಿಗಳು ರಾಜಕೀಯ ಚಳವಳಿಯಲ್ಲಿ ಸೇರುವದನ್ನು ಬಿಡಲಿಲ್ಲ. ಈಗಂತೂ ಅವರನ್ನು ಕೇಳತಕ್ಕವರೇ ಇಲ್ಲ. ವಿದ್ಯಾಧಿಕಾರಿಗಳು ದುರ್ಬಲರಾಗಿ ಇವರಿಗೆ ಬೇಕಾದರೆ– ಕಲಿಯಿರಿ; ಸಾಕಾದರೆ ಬಿಡಿರೆನ್ನುವಂಥ ಪರಿಸ್ಥಿತಿ ಬಂದಿದೆ. ಬಹಿಷ್ಕಾರ, ಪಿಕೆಟಿಂಗ ಹರತಾಳದ ರಣಭೇರಿ ಹೊಡೆದರೆ ತೀರಿತು. ಇವರು ಶಾಲೆ–ಕಾಲೇಜಗಳಿಗೆ ಶರಣು ಹೊಡೆದರೆಂದೇ ತಿಳಿಯಬೇಕು. ಶಿಸ್ತು, ಶಾಲೆಯಿಂದ ಹೊರಗೆ ಹಾಕುವದು, ವರ್ಷೇರಡು ವರ್ಷ ಮೇಲಿನ ವರ್ಗಕ್ಕೆ ಹಾಕದಿರುವದು; ದಂಡ ಇವೆಲ್ಲ ತ್ರೇತಾಯುಗದ ಮಾತುಗಳಾಗಿರುತ್ತವೆ. ಸ್ವದೇಶದ ದಸೆಯಿಂದ ಮಾಡತಕ್ಕ ಕರ್ತವ್ಯದಲ್ಲಿ ಇವರು ತಮ್ಮ ವಯಸ್ಸಿಗೆ, ತಮ್ಮ ಜ್ಞಾನಕ್ಕೆ ಮತ್ತು ಪ್ರಕೃತಿಗೆ ಮಾನಿಸುವಷ್ಟು ಪೂರ್ಣ ಜಾಗ್ರತರಾಗಿದ್ದಾರೆ. ಹೆಡ್ಡಮಾಸ್ತರರು ರಾಷ್ಟ್ರೀಯ ನಿಶಾನೆ ಕಿತ್ತಿಸಿದರೆ ಪುನಃ ಹಚ್ಚುವರು. ಸರಕಾರದಿಂದ ಆಕ್ಷೇಪಾರ್ಹವೆಂದೆನಿಸಿದ ಪುಸ್ತಕಗಳಲ್ಲಿಯ ಪಾಠಗಳನ್ನು ಪ್ರೊಫೇಸರರ ಎದುರಿಗೆ ಓದುವರು ಸ್ವಯಂಸೇವಕರಾಗಿ ತುರಂಗಕ್ಕೆ ಹೋಗುವರು. ನಗರ ಸಂಕೀರ್ತನೆ ಮಾಡಿ, ಮೆರವಣಿಗೆಯಲ್ಲಿ ಸೇರಿ, ಹಳ್ಳಿಗಾಡಿನವರಲ್ಲಿಯೂ ಜಾಗೃತಿಯನ್ನುಂಟುಮಾಡುವರು. ಸ್ವರಾಜ್ಯ ಚಳವಳಿಯು ಇಷ್ಟು ಘನ ಮಹಿಮೆ ಹೊಂದಲಿಕ್ಕುಂಟಾದ ಹಲವು ಬಾಬುಗಳಲ್ಲಿ ಇವರು ಇದ್ದೇ ಇರುವರು. ಈ ಪ್ರಕಾರ ವಿದ್ಯಾರ್ಥಿಗಳು ಕೈಕೊಂಡ ಕರ್ತವ್ಯದಲ್ಲಿ ಹೆತ್ತುಳಿದರೆ– ಶಾಲೆ ಕಾಲೇಜಗಳಿಗೆ ಹೋಗುವರು. ಇವರು ಹೋದಾಗ ಕಲಿಸುವದಿಷ್ಟೇ ಪಂತರು ಪ್ರೊಫೇಸರರ ಕೆಲಸ. ಏಕೆ ಬರಲಿಲ್ಲೆಂದು ಕೇಳುವ ಭಾಗವೇ ಉಳಿದಿಲ್ಲ, ಹೀಗೇಕಾಯಿತೆಂದು ವಿಚಾರ ಮಾಡುವದು ಆಳರಸರ ಅವಶ್ಯವಾದ ಕೆಲಸ. ಮೇಲೆ ಹೇಳಿದ ಕನ್ನಡ ಗಾದೆಯ ಮಾತಿನಂತೆ ಇವರ ಹುಕುಮತ್ತು ಎಷ್ಟು ಉಳಿದಿಲ್ಲ. ಮೊದಲಿನ ಗುರುಭಕ್ತಿಯುಳಿಯಲಿಕ್ಕಾವ ಕರ್ತವ್ಯ ಮಾಡಬೇಕಾದೀತೆಂಬದನ್ನು ಕಂಡು ಹಿಡಿಯತಕ್ಕದ್ದು ಅವಶ್ಯಕ.

ರಾಣೇಬಿನ್ನೂರಲ್ಲಿ

ಮೂರುಸಾವಿರ ಶೇಂದಿ ಗಿಡಗಳ ಸಂಹಾರ

ರಾಣೇಬಿನ್ನೂರ ತಾಲೂಕಿನಲ್ಲಿ ಈ ಪರ್ಯಂತರ ಏಳು ಸಾವಿರ ಶೇಂದಿ ಗಿಡಗಳ ಸಂಹಾರವಾಯಿತು. ತಾಲೂಕಿನಲ್ಲಿ ಏಳುಸಾವಿರ ಗಿಡಗಳ ಸಂಹಾರವಾಗಿರುತ್ತದೆ. ಸ್ವಾತಂತ್ರ್ಯ ಸಪ್ತಾಹದಲ್ಲಿ ಶ್ರೀ ಸೌ|| ಕೃಷ್ಣಾಬಾಯಿ ಪಣಜಿ, ಶ್ರೀ ರಾಮರಾವ ಹುಕ್ಕೇರಿ, ಹಣಮಂತಾಚಾರ್ಯ ಪಾಂಡುರಂಗಿ, ಗುರುನಾಥಪ್ಪಾ ಬಿಜಾಪೂರ ಮೊದಲಾದವರ ಭಾಷಣಗಳಾದವು- ಪಂಡಿತ ಮಾಲವಿಯಾ ಮೊದಲಾದವರನ್ನು ಹಿಡಿದ ಬಗ್ಗೆ ಊರ ತುಂಬ ಹರತಾಳವಾಯಿತು-

---

ಪೇಶಾವರದ ಮೇಲೆ ಆಫ್ರಿದಿ ಜನರ ದಾಳಿಯು.

ಇಂಗ್ಲಿಷರಿಗೂ ಆಫ್ರಿದಿಗಳಿಗೂ ಮೊದಲನೆಯ ಚಕಮಕಿಯು

ಸರಹದ್ದಿನಲ್ಲಿ ವಾಸವಾಗಿರುವ ಹಲವು ಕುಲಗಳ ಜನರಲ್ಲಿ ಆಫ್ರಿದಿ ಕುಲದವರು ಬ್ರಿಟಿಶ ಸರಕಾರದ ಕೂಡ ಯುದ್ಧ ಮಾಡಲು ಸೇನಾಸಿದ್ಧತೆ ಮಾಡಿದ್ದಾರೆ– ಇವರು ತಮಗೆ ಅನುಕೂಲವಾಗಿ ಯುದ್ಧದಲ್ಲಿ ಸೇರುವಂತೆ ಬೇರೆ ಕುಲದವರಿಗೂ ಕೇಳಿದರು. ಅವರು ಒಪ್ಪಲಿಲ್ಲೆಂದು ಇಂಗ್ರೇಜಿ ಪತ್ರಗಳ ಹೇಳಿಕೆ. ಆಫ್ರಿದಿಗಳ ದೇಶವಿಸ್ತಾರವು ೯೦೦ ಮೈಲುಂಟು. ಇವರು ವನಚರರು. ಶಸ್ತ್ರಾಸ್ತ್ರಧಾರಕರು. ಹತ್ತುಸಾವಿರ ಜನರು ಪೇಶಾವರದಿಂದ ೧೫ ಮೈಲಿನ ಮೇಲಿರುವ ಒಂದು ಕೊಳ್ಳದಲ್ಲಿ ಸೇರಿದರು. ಗುರುವಾರ ದಿವಸ ರಾತ್ರಿ ಹೊತ್ತಿನಲ್ಲಿ ಪೇಶಾವರದ ಮೇಲೆ ಅಭಿಯೋಗ ಮಾಡಬೇಕೆಂದು ಪೂರ್ವ ಸಿದ್ಧತೆ ಮಾಡಿದರು. ಈ ವರ್ತಮಾನ ಕೇಳಿ, ಇಂಗ್ಲಿಷ ಸರಕಾರದವರು ಇವರ ದಾರಿಯಲ್ಲಿರುವ ಎಲ್ಲ ಆಯಕಟ್ಟಿನ ಕೊಳ್ಳಕೊತ್ತಳಗಳನ್ನು ಆಕ್ರಮಿಸಿ, ತೋಫು ಹೂಡಿಕೊಂಡು ಕೂತಿದ್ದಾರೆ. ರಾತ್ರಿ ೯ರ ನಂತರ ಅಗಸೀ ಬಾಗಿಲ ಬಂದಾಗುವದು ಹೊರಗಿನ ಜನರು ಅಷ್ಟರೊಳಗಾಗಿ ಒಳಗೆ ಬರಬೇಕೆಂದು ಡಂಗುರ ಸಾರಿದ್ದಾರೆ.

ಮೊದಲೇ ಗೊತ್ತಾದ ಮೇರೆಗೆ ಆಫ್ರಿದಿಗಳು ಗುರುವಾರ ರಾತ್ರಿ ಪಟ್ಟಣಕ್ಕೆ ಸನಿಯವಾಗಿ ಒಂದೇ ಮೈಲಿನಲ್ಲಿ ಬಂದರು. ಉಭಯ ಪಕ್ಷಗಳಿಗೂ ಚಕಮಕಿಯಾಯಿತು. ಇದಿನ್ನೂ ಜೂಣೆ ಕಾಳಗ. ಇದರಲ್ಲಿ ವೈರಿಗಳಲ್ಲಿ ಅನೇಕರು ಸತ್ತರು; ಮತ್ತು ಹಿಂದಕ್ಕೆ ಸರಿದು ಹೋದರು ಹೋಗುವಾಗ ತಾರು ಮತ್ತು ಟೆಲಿಫೋನುಗಳನ್ನು ಹರಿದರು. ಇಂಗ್ಲಿಷರ ಮೋಟಾರಗಳು ಬೆನ್ನಟ್ಟಿ ಬರದಂತೆ ಗಿಡಗಳನ್ನು ಕಡಿದು ದಾರಿಯನ್ನು ದುರ್ಘಟ ಮಾಡಿದ್ದಾರೆ. ಇದು ಬಲಾಬಲದ ಜೂಣೆ ಕಾಳಗವು. ದೊಡ್ಡ ಕಾಳಗವು ಈನಂತರವಾಗುವದೆಂದು ನಿನ್ನೆ ಸಾಯಂಕಾಲದಲ್ಲಿ ಬಂದ ವರ್ತಮಾನವಾಗಿದೆ.

ಕಾಂಗ್ರೆಸದವರು ಕಾಂಗ್ರೆಸದ ಆಫ್ರಿದಿಜರ ನೆರವು ಕೇಳಿದರು. ಅವರು ಕಾಂಗ್ರೆಸದವರ ಸಹಾಯಕ್ಕಾಗಿ ಪೇಶಾವರದ ಮೇಲೆ ಹಲ್ಲೆ ತಂದಿದ್ದಾರೆಂದು ಇಂಗ್ರೇಜಿ ಜನರ ವರ್ತಮಾನಪತ್ರಗಳು ಬೊಬ್ಬೆಗುಟ್ಟುತ್ತಲಿವೆ.

ಸುಪ್ರಸಿದ್ಧ ಖಾದೀ ಪ್ರಚಾರಕರೂ, ಅಂಕೋಲೆಯ ಉಪ್ಪಿನ ಕಾಯಿದೆಭಂಗದಲ್ಲಿ ಶಿಕ್ಷೆ ಹೊಂದಿದವರೂ ಆದ ಶ್ರೀ. ಕೌಜಲಗಿ ಹಣಮಂತರಾಯರು ಬಂಧಮುಕ್ತರಾದರೆಂದು ಬರೆಯುವದಕ್ಕೆ ಸಂತೋಷಪಡುತ್ತೇವೆ.

ಪೋಲಿಸರು ಜಾಲಿನವಾಲಾ ಬಾಗದಲ್ಲಿದ್ದ ಸ್ವಯಂಸೇವಕರ ಹಾಗು ಸತ್ಯಾಗ್ರಹ ಶಿಬಿರದ ಎಲ್ಲ ಗುಡಿಸಲುಗಳನ್ನು ಕೆಡವಿ, ನೆಲಸಮ ಮಾಡಿ, ಡವಗಿ, ಗಳ, ತಟ್ಟಿಗಳನ್ನು ಜಪ್ತಮಾಡಿ, ಮೋಟಾರದಲ್ಲಿ ತುಂಬಿಕೊಂಡು ಹೋದರು.

ರಾ. ಬ ಪಿ. ಎಲ್. ಪಾಟೀಲರು ಅಸೆಂಬ್ಲೆಗಾಗಿ ಮತ್ತು ಶ್ರೀ ಹನಮಂತರಾವ ದೇಸಾಯಿ ಇನಾಮದಾರರ ವತಿಯಿಂದ ಮೆಂಬರರಾದರು.

ಬೆಳಗಾವಿಯಲ್ಲಿ ಶ್ರೀ ಗೋಖಲೆಯವರನ್ನು ಪುನಃ ದಸ್ತಗಿರ ಮಾಡಿದ್ದಾರೆ.

ಇಂದುವಿನಂತೆ ವಂದ್ಯರಾದವರಿಗೆ ಶಿಕ್ಷೆ.

ಪಂಡಿತ ಮಾಲವಿಯಾಯವರು ಮುಂಬಯಿಯ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾಡಿದ ಡಿಫೆನ್ಸಿನ ಭಾಷಣದಲ್ಲಿ ಬಹಳವಾದರೆ ನಮ್ಮ ಮೇಲೆ ಹೊತ್ತ ಆರೋಪಕ್ಕೆ ನೂರು ರೂಪಾಯಿ ದಂಡವುಂಟೆಂದು ಭಾಷಣ ಮಾಡಿದ್ದರು. ಆದರೆ ಮ್ಯಾಜಿಸ್ಟ್ರೇಟರು ಇವರೆಲ್ಲರಿಗೆ ಶಿಕ್ಷೆ ಮತ್ತು ದಂಡ ಎರಡೂ ಹೇಳಿ, ಮಾಲವಿಯಾಯವರ ಡಿಫೆನ್ಸನ್ನು ಮೂಲಿಗೊತ್ತಿದರು. ಸೋಮವಾರ ಅಥವಾ ಅದಕ್ಕಿಂತ ಮೊದಲು ತೀರ್ಪು ಹೇಳುವಂತೆ ಮ್ಯಾಜಿಸ್ಟ್ರೇಟರು ಅಂದಿದ್ದರು. ಗುರುವಾರ ದಿವಸವೇ ಠರಾವು ಹೇಳಿದರು. ಶಿಕ್ಷೆ ಹೇಳಿದ ಕ್ರಮ-

ಪಂಡಿತ ಮಾಲವಿಯಾ- ೧೫ ದಿವಸ ಕೈದು ಅಥವಾ ನೂರು ರೂಪಾಯಿ ದಂಡ

ಉಳಿದವರಿಗೆ ಮೂರು ತಿಂಗಳ ಕೈದು ನೂರು ರೂಪಾಯಿ ದಂಡ.

೧ ಸರದಾರ ಪಟೇಲ ೨ ಜಯರಾಮದಾಸ ದೌಲತರಾಮ, ೩ ಡಾಕ್ಟರ ಹರ್ಡೀಕರ. ೪ ಬ್ಯಾರಿಸ್ಟರ ಶೇರವಾಣಿ. ಇವರು ಕಾಂಗ್ರೆಸದ ವರ್ಕಿಂಗ ಕಮೀಟಿಯ ಮೆಂಬರರು

ಇವರ ಕೂಡ ಕಾಂಗ್ರೆಸದವರಿಗಾದ ಶಿಕ್ಷೆ

೧ ಶ್ರೀ. ಪಾಲೇಕರ ೨ ಬಾಬುಭಾಯಿ ಜವ್ಹೇರಿ ೩ ರಮಾಕಾಂತ ಮೇಹತಾ, ೪ ನಾರಾಯಣಯ್ಯಂಗಾರ, ಎಚ್. ವೆಂಕಟರಾಮ ನಾಲ್ವರು ಸ್ತ್ರೀಯರಿಗೆ ೧೦೦ ರೂಪಾಯಿ ದಂಡ, ದಂಡ ಕೊಡದಿದ್ದರೆ- ೧೫ ದಿವಸದ ಸಾದಾ ಕೈದು ಹೇಳಿದ್ದಾರೆ.

ಬುಧವಾರ ದಿವಸ ಪಂಡಿತ ಮಾಲವಿಯಾಯವರು ಮೆಸರ್ಸ್ ಮೋದಿ ಮತ್ತು ಲಾಲಜಿಯವರ ಸಾಕ್ಷೀ ತಕ್ಕೊಳ್ಳಬೇಕೆಂದು ಹೊಸದೊಂದು ಅರ್ಜಿ ಕೊಟ್ಟರು. ಆದರೆ ಮ್ಯಾಜಿಸ್ಟ್ರೇಟರು ಅರ್ಜಿಯನ್ನು ನಿರಾಕರಿಸಿದರು

ಶಿಕ್ಷೆ ಹೇಳುವಾಗ ಮೇಲಿನವರನ್ನು ಹಿತ್ತಲ ಬಾಗಿಲದಿಂದ ಕೋರ್ಟಿನೊಳಗೆ ಕರತಂದರು. ಆಗ ಪ್ರಚಂಡ ಜನಸ್ತೋಮ ಕೂಡಿತ್ತು. ಪಂಡಿತರು ಕೋರ್ಟಿನಲ್ಲಿ ಬಂದ ಕೂಡಲೆ, ಅವರಿಗೆ ಮಾನ ಕೊಡಲು ಮ್ಯಾಜಿಸ್ಟ್ರೇಟರ ಹೊರ್ತು ಎಲ್ಲರೂ ಎದ್ದು ನಿಂತರು ಕೂಡಿದ ಸಾವಿರಾರು ಜನರು ಜಯಜಯಕಾರದ ಚಪ್ಪಾಳಿ ಹೊಡೆದರು. ಈ ಸ್ವಾಗತವು ದಸ್ತೂರಸಾಹೇಬರಿಗೆ ಸಹನವಾಗಲಿಲ್ಲ.

ಠರಾವು ಓದಿ ಹೇಳುವದಕ್ಕೆ ದಸ್ತೂರಸಾಹೇಬರಿಗೆ ೨೦ ಮಿನಿಟು ಹತ್ತಿತು. ಶಿಕ್ಷೆ ಹೇಳಿದ ಕೂಡಲೆ, ಶಿಕ್ಷೆ ಹೊಂದಿದ ಎಲ್ಲ ಮುಂದಾಳುಗಳು ಪಂಡಿತರ ಪಾದಕ್ಕೆರಗಿ, ಅವರಲ್ಲಿದ್ದ ಗುರುಭಕ್ತಿಯನ್ನು ವ್ಯಕ್ತಪಡಿಸಿದರು. ಪಂಡಿತರು ಪ್ರೇಮಾತಿಶಯದಿಂದ ಅವರ ಆಲಿಂಗನ ತಕ್ಕೊಂಡರು. ತುರಂಗಕ್ಕೆ ಕರಕೊಂಡು ಹೋಗುವಾಗ ಸಾವಿರಾರು ಜನರು ಇವರ ಜಯಜಯಕಾರ ಮಾಡಿದರು.

ಪಂಡಿತ ಮಾಲವಿಯಾಯವರ ವೀರ ಪ್ರತಿಜ್ಞೆ.

ಯಾವನೋ ಒಬ್ಬ ದೇಶದ್ರೋಹಿಯು ಮುಂದೆ ಬರಲಿಕ್ಕೆ ಹೆದರಿಕೊಂಡು, ಬಂದರೆ ತನ್ನ ಕಂದೂರಿಯಾದೀತೆಂದು ಅಂಜಿಕೊಂಡು, ಗುಪ್ತರೀತಿಯಿಂದ ತುರಂಗಕ್ಕೆ ಹೋಗಿ ಪಂಡಿತರಿಗಾದ ದಂಡಕೊಟ್ಟು ಅವರನ್ನು ಬಂಧಮುಕ್ತ ಮಾಡಿಸಿದನು. ತಮ್ಮ ದಂಡವನ್ನು ಯಾರಾದರೂ ಕೊಟ್ಟರೆ- ಅದನ್ನು ಹಿಡಿಯಬಾರದೆಂದು ಪಂಡಿತರು ಮಿ. ದಸ್ತೂರಸಾಹೇಬರಿಗೆ ಮುಂದಾಗಿ ತಿಳಿಸಿದ್ದರು. ಯಾರೇ ತಂದು ಕೊಡಲಿ; ಅದನ್ನು ಹಿಡಿಯತಕ್ಕವರೇ ಸೈ ಎಂದು ದಸ್ತೂರವರು ಆಗ ಉದ್ಗಾರ ತೆಗೆದರು. ಹೇಗೆ ಇದೇ ಇರಲಿ; ಪಂಡಿತರು ತುರಂಗದಿಂದ ಹೊರಬಿದ್ದು ಬಂದ ಕೂಡಲೆ, ಚೌಪಾಟಿಯಲ್ಲಾದ ಸಾರ್ವಜನಿಕ ಸಭೆಯಲ್ಲಿ, ಪೋಲಿಸರ ಹಿಂಸಾತ್ಮಕ ಕಾಯದೆಯನ್ನು ಸಮಯ ಬಂದ ಕೂಡಲೆ ಮುರಿಯತಕ್ಕವರೆಂದು ಭೀಷ್ಮ ಪ್ರತಿಜ್ಞೆ ಮಾಡಿದ್ದಾರೆ.

ಮೂರು ವರ್ಷದ ಹುಡುಗನ ಬುದ್ಧಿ ಮೂವತ್ತು ವರ್ಷದವರಿಗಿರಬೇಕು

ನಿನ್ನಿನ ದಿವಸ ಈ ಊರಲ್ಲಿ ಸ್ವರಾಜ್ಯ ಕಾರ್ಯಕ್ಕಾಗಿ ತುರಂಗವಾಸಿಯಾದಂಥವರ ದೆಸೆಯಿಂದ ನಗರ ಸಂಕೀರ್ತನೆ, ರಾಷ್ಟ್ರಧ್ವಜವಂದನೆ, ವ್ಯಾಖ್ಯಾನ ಮೊದಲಾದ ಸಂಗತಿಗಳು ನಡೆದವು- ನಗರ ಸಂಕೀರ್ತನೆಯಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರವೆನ್ನದೆ, ಇನ್ನೂರಕ್ಕಿಂತ ಹೆಚ್ಚು ಜನ ಸ್ತ್ರೀಯರು ಸೇರಿದ್ದರು- ನಾಡಗುಡಿಯ ವಂದನೆಯ ಕಾಲದಲ್ಲಿ ಸಾವಿರ ತನಕ ಜನ ಕೂಡಿತ್ತು- ಈ ಸಮಾರಂಭದಲ್ಲಿ ಇಲ್ಲಿಯ ಹಳೇ ಮತ್ತು ಹೊಸ ಪುಸ್ತಕಾಲಯದ ಒಡೆಯರಾದ ಶ್ರೀ ಮಹಾದೇವರಾವ ಸಾಠೆಯವರ ಇನ್ನೂ ಮೂರು ವರ್ಷ ತುಂಬದ ಹುಡುಗನ ಸ್ಫೂರ್ತಿಯು ವರ್ಣನೀಯವಾಗಿತ್ತು ಈ ಕಂದಮ್ಮನು ಮೆರವಣಿಗೆಯಲ್ಲಿ ನಿಶಾನೆ ಹಿಡಕೊಂಡು ಮುಂದೆ ನಡೆಯುವನು- ಪಂಡಿತ ಮಾಲವಿಯಾಯವರನ್ನು ಹಿಡಿದ ದಿವಸ ಹೊರಟ ಮೆರವಣಿಗೆಯಲ್ಲಿ ಎಲ್ಲರಕ್ಕೂ ಮುಂದೆ ನಿಶಾನೆ ಹಿಡಕೊಂಡು ಮುಂದೆ ನಡೆದಿದ್ದನು- ನಿನ್ನಿನ ನಗರ ಸಂಕೀರ್ತನೆಯಲ್ಲಿ ಐದು ಹೊಡೆಯುವಾಗ ಎದ್ದು, ಮನೆಯವರ ಕೂಡ ಎಲ್ಲರಿಗಿಂತ ಹೆಚ್ಚು ಉತ್ಸಾಹದಿಂದ ನಿಶಾನೆ ಹಿಡಕೊಂಡು ಮುಂದೆ ನಡೆದಿದ್ದನು- ಒಂದು ಮೈಲು ನಡೆದರೂ ದಣಿಯಲಿಲ್ಲ. ಧ್ವಜ ವಂದನೆಯವೇಳೆಯಲ್ಲಿ ಈತನನ್ನು ಧ್ವಜದ ಹತ್ತರ ಎತ್ತರ ಸ್ಟೂಲಿನ ಮೇಲೆ ನಿಲ್ಲಿಸಿ ಫೋಟೋ ತಕ್ಕೊಂಡರು- ಮನೆಯ ಮುಂದೆ ಸಂಕೀರ್ತನೆ ಬರುತ್ತಿದ್ದರೂ, ಹಾಸಿಗೆಯ ಮೇಲೆ ಸೋಮಾರಿಗಳಂತೆ ಹೊರಳುತ್ತಿರುವಂಥವರು ಈ ಹುಡುಗನಿಂದಾದರೂ ಬುದ್ಧಿಗಲಿಯಲಿ-

ಹೆಸರು ವಸಂತ- ವಯ ೨ ವರ್ಷ ಎಂಟು ತಿಂಗಳು; ತನ್ನದೇ ನಿಶಾನೆ ಹಿಡಿಯುವನು. ಬೇರೆಯವರು ಎಂಥ ಚಲೋ ನಿಶಾನೆ ಕೊಟ್ಟರೂ ಹಿಡಿಯುವದಿಲ್ಲ.

ಸಪ್ರು, ಜಯಕರ ಸಂಧಾನದಲ್ಲಿ ಸ್ವಾರಸ್ಯವಿಲ್ಲ.

ಮೌಲಾನಾ ಅಬ್ದುಲ ಕಲಮ ಅಜದರ ಸ್ಪಷ್ಟೋದ್ಗಾರ.

ನಿನ್ನಿನ ದಿವಸ ಯರವಡೆಯಲ್ಲಿ ಪಂಡಿತದ್ವಯರೂ, ಮಹಾತ್ಮರೂ ಯರವಡೆಯ ತುರಂಗದಲ್ಲಿ ಸೇರಿ ಮಾತನಾಡುವ ಸಮಯವಾಗಿತ್ತು. ಈ ಸಮಯವನ್ನರಿತು ಮೌಲಾನಾ ಅಬ್ದುಲ ಕಲಮ ಅಜದರು ರಾಜಿಯ ಸಂಧಾನದಲ್ಲಿ ಸ್ವಾರಸ್ಯವಿಲ್ಲೆಂದು ಸ್ಪಷ್ಟೋದ್ಗಾರ ತೆಗೆದಿದ್ದಾರೆ

ಸರ ಸಪ್ರುಸಾಹೇಬರು ತಮ್ಮ ತಿಷ್ಟಾಯಿಯನ್ನು ಕುರಿತು ಒಳ್ಳೇ ಇಂಪಾದ ಧ್ವನಿಯಿಂದ ಹೆಬ್ಬಳಿಕೆಯ ಮಾತುಗಳನ್ನು ಹೇಳುತ್ತಾರೆ ಅತಿಶಯೋಕ್ತಿಯೆನಿಸುವಂತೆ ಬಣ್ಣಿಸುತ್ತಾರೆ. ಸರಕಾರದವರು ಕೆಲವು ಸಂಗತಿಗಳನ್ನು ತಮ್ಮಾಧೀನದಲ್ಲಿಟ್ಟುಕೊಂಡು ವಸಾಹಾತಿನ ಸ್ವರಾಜ್ಯ ಕೊಡುತ್ತಾರೆಂದೂ ಹೇಳುತ್ತಾರೆ. ಇದು ಸತ್ಯವಾಗಿರುವಂತೆ ತೋರುವದಿಲ್ಲ. ಏಕೆಂದರೆ- ಸಂಪೂರ್ಣವಾಗಿ ನಡೆಸಿದ ಚಳವಳಿಕೆಯಿಂದ ತೃಪ್ತರಾಗದೆ, ಕಾಂಗ್ರೆಸದ ಐವರು ಮುಖಂಡರನ್ನು ದಸ್ತಗಿರ ಮಾಡಿದ್ದಾರೆ. ಹೀಗೆ ಒಂದಕ್ಕೊಂದು ತಾಳ ಕೂಡುವದೆಂತು ?

ಎಂದೆಂದು ಮುಸಲಮಾನರೂ ಹೆಚ್ಚಾಗಿ ಕಾಂಗ್ರೆಸ ಸೇರಲಾರಂಭಿಸಿದ್ದು ಸಮಾಧಾನದ ಸಂಗತಿ ಎಂದೂ ಮೌಲಾನಾನವರು ಅಭಿಪ್ರಾಯಪಟ್ಟಿರುತ್ತಾರೆ.

ಮದ್ರಾಸ ಇಲಾಖೆಯಲ್ಲಿ ಪಾಲಮಕೋಟಿಯ ಅರಸರ ಖಾದಿಯ ಜನ್ಮದ ವೈರಿಯಂತೆ ನಟಿಸುತ್ತಿದ್ದಾರೆ. ಅಗಸರು ಖಾದೀ ಬಟ್ಟೆಗಳನ್ನು ಒಗೆಯಬಾರದು ; ಒಗೆದದ್ದರೆ- ಇವರಿಗೆ ಸರಕಾರೀ ಅಡವಿಯಲ್ಲಿಯ ತೊಪ್ಪಲ ಮತ್ತು ಕಟ್ಟಿಗೆ ದೊರೆಯಲಾರದೆಂದು ಮಹಾರಾಜರು ಹುಕುಮು ಮಾಡಿದ್ದಾರೆ.

ವಿಸಾಪುರದ ತುರಂಗದ ವೇದನೆಗಳು.

ಕಾಂಗ್ರೆಸ ಕಮೀಟಿಯ ವತಿಯಿಂದ ಸರಕಾರದಿಂದ ಅಪ್ಪಣೆ ಪಡಕೊಂಡು ವಿಸಾಪೂರದ ತುರಂಗದ ಒಳ ವಿಚಾರವನ್ನು ನೋಡಲಿಕ್ಕೆ ಹೋದ ಗೃಹಸ್ಥರು ಅಲ್ಲಿಯ ದುಃಖಮಯಸ್ಥಿತಿಯನ್ನು ಅತ್ಯಂತ ಹೃದಯದ್ರಾವಕವಾಗಿ ವರ್ಣಿಸಿದ್ದಾರೆ. ಅವರು ಹೇಳುವದೇನಂದರೆ-

೧ ತುರಂಗವು ದನದ ಹಕ್ಕಿ ಅಥವಾ ಕೊಂಡವಾಡೆಯಾಗಿದೆ.

೨ ನೊರಜು, ಚಿಕ್ಕಾಡ, ಗುಂಗಾಡಗಳ ತಾಪ ಮಾತ್ರವಲ್ಲ; ಹಾವೂ ಚೇಳೂ ನಿರ್ಭಯದಿಂದ ಕೈದಿಗಳ ಕೋಣೆಯಲ್ಲಿ ದರ್ಶನ ಕೊಡುವವು.

೩ ಕೈದಿಗಳಿಗೆ ಶೌಚ ಮೂತ್ರ ಸ್ನಾನಪಾನಸೇರಿ ಒಂದು ಬಿಂದಿಗೆಯಷ್ಟು ನೀರು ಕೊಡುವರು.

೪ ವಾರ್ಡರ ಮತ್ತು ಪೋಲಿಸರು ಕೈದಿಗಳಿಗೆ ಬೊಣ್ಣೆಯ ಪ್ರಸಾದ ಕೊಡುವರು.

೫ ಡಾಕ್ಟರರ ಸರ್ಟಿಫಿಕೇಟಿನ ಹೊರ್ತು ಯಾರಿಗೂ ಹೆಚ್ಚು ವೇಳೆ ಬೈಲಕಡಿಗೆ ಕೂಡ್ರಗೊಡುವದಿಲ್ಲ.

೬ ಅನ್ನ ರೊಟ್ಟಿಯಲ್ಲಿ ಹರಳು ಮಣ್ಣೇ ಕೂಡಿರುತ್ತವೆ.

ಈ ತುರಂಗವನ್ನು ಒಂದು ಮಾಡಿ, ಕೈದಿಗಳ ಯಮಯಾತನೆಗಳನ್ನು ತಪ್ಪಿಸಬೇಕೆಂದು ಇವರು ಸರಕಾರಕ್ಕೆ ಸೂಚನೆ ಮಾಡಿದ್ದಾರೆ.

ಕೌನ್ಸಿಲ ಚುನಾವಣಿಗಾಗಿ ಉಮೇದವಾರರು.

ಧಾರವಾಡ ಜಿಲ್ಹೆ-

೧ ರಾ. ಬ. ಕಂಬಳಿ.
೨ ಶ್ರೀ. ಜೋಗ ವಿಶ್ವನಾಥರಾಯರು
೩ ಶ್ರೀ. ಕೇಸರಿ ವಕೀಲರು

ಬೆಳಗಾವ ಜಿಲ್ಹೆಯಲ್ಲಿ ರಾ. ಬ. ಅಂಗಡಿ ಮತ್ತು ಚಿಕ್ಕೋಡಿಯವರಿಬ್ಬರೇ ಉಮೇದವಾರರಾಗಿದ್ದರಿಂದ ಅವರು ಆರಿಸಲ್ಪಟ್ಟಂತಾಯಿತು.

ನೆಹರೂದ್ವಯರು ಮಹಾತ್ಮರ ಭೆಟ್ಟಿಗಾಗಿ ಯರವಡೆಗೆ ಬರುವರು.

ಒಪ್ಪಂದ ಮಾಡಿಸುವೆವೆಂದು ಹೊರಟ ಪಂಡಿತದ್ವಯರಾದ ಜಯಕರ ಸಪ್ರೂರವರು ಪ್ರಾರ್ಥಿಸಿಕೊಂಡಂತೆ, ವ್ಹಾಯಿಸರಾಯರು, ಪಂಡಿತ, ಮೋತಿಲಾಲ ಜವಾಹಿರಲಾಲರು ಮಹಾತ್ಮರೊಡನೆ ಪ್ರತ್ಯಕ್ಷವಾಗಿ ಮಾತನಾಡಲು ಯರವಡೆಗೆ ಹೋಗಲು ಅಪ್ಪಣೆ ಕೊಟ್ಟಿದ್ದಾರೆ. ಇವರು ಶೀಘ್ರವೇ ಯರವಡೆಗೆ ಬರಬಹುದು.

ಡಿಸ್ಟ್ರಿಕ್ಟ ಲೋಕಲಬೋರ್ಡಿನ ಅಧ್ಯಕ್ಷರು ಕಾಯದೆಭಂಗ ಮಾಡಿದರು

೫೦ ಸಾವಿರ ಸ್ತ್ರೀಪುರುಷರು ವನಗಾವಲದ ಕಾಯದೆ ಮುರಿದರು.

ನಾಸಿಕ ಜಿಲ್ಹೆಯಲ್ಲಿ ವನಗಾವಲದ ಕಾಪದಾಯಕ ಕಾಯದೆಯನ್ನು ಮುರಿಯುವ ಯುದ್ಧವು ಮಹಾಯುದ್ಧದಂತೆ ಪರಿಣಮಿಸಿದೆ. ಹೆಂಗಸರು ಹುಡುಗರು, ಮುದುಕರು ಕೂಸು ಕುನ್ನಿ ಸಹಿತ ಎಲ್ಲರೂ ವನಗಾವಲದ ಅವತಾರ ಸಮಾಪ್ತಿ ಮಾಡಲು ಸಿದ್ಧರಾಗಿದ್ದಾರೆ. ಡಿಸ್ಟ್ರಿಕ್ಟ ಲೋಕಲಬೋರ್ಡಿನ ಅಧ್ಯಕ್ಷರಾದ ಶ್ರೀ. ಗದ್ರೆಯವರು ಸೇನಾಪತಿಯಾಗಿದ್ದಾರೆ. ೪೮ ಸಾವಿರ ಗಂಡಸರು ಮತ್ತು ಎರಡು ಸಾವಿರ ಹೆಂಗಸರು ಅಂತೂ ೫೦ ಸಾವಿರ ಜನರು ಒಲವಾಡವೆಂಬಲ್ಲಿಗೆ ಹೋಗಿ ಅನಿರ್ಬಂಧವಾಗಿ ಸರಕಾರಿ ಅಡವಿಯಲ್ಲಿ ಹೊಕ್ಕು ಹುಲ್ಲು ಕೊಯ್ದರು. ಉರುವಲ ತಂದರು. ಮತ್ತು ದನಗಳನ್ನು ಮೇಯಿಸಿದರು.

ಮ್ಯುನಿಸಿಪಾಲಿಟಿಯ ಮಹತ್ವದ ಠರಾವು

೧೫೦೦ ಜನ ಕೆಲಸಗಾರರ ಮೆರವಣಿಗೆ.

ಈಗಿನ ದಬ್ಬಾಳಿಕೆಯಲ್ಲಿ ತುರಂಗವಾಸಿಯಾಗಿರುವಂಥ ದೇಶಬಂಧುಗಳ ಬಗ್ಗೆ ಸಹಾನುಭೂತಿಯನ್ನು ತೋರಿಸಲೋಸುಗ ಮ್ಯುನಿಸಿಪಾಲಿಟಿಯು ಎಲ್ಲ ಕೆಲಸಗಾರರ ಮೆರವಣಿಗೆ ತೆಗೆಯಬೇಕೆಂದು ನಾಗಪೂರ ಮ್ಯುನಿಸಿಪಾಲಿಟಿಯ ಜನರಲ ಕಮಿಟಿಯಲ್ಲಿ ಠರಾವು ಪಾಸಾಯಿತು. ಆ ಪ್ರಕಾರ ಚೀಫ ಆಫೀಸರನಿಂದ ಭಂಗಿಯ ತನಕ ೧೫೦೦ ಜನ ಕೆಲಸಗಾರರ ದೊಡ್ಡ ಮೆರವಣಿಗೆಯು ಹೊರಟಿತ್ತು. ಶ್ರೀ ಜೋಗ ವಕೀಲರು ಧಾರವಾಡದಲ್ಲಿ ಇಂಥ ಮೆರವಣಿಗೆ ತೆಗೆಸುವರೇನು?

ಐನೂರು ಸಾಯಕಲ ಸ್ವಯಂಸೇವಕರ ನಗರ ಸಂಕೀರ್ತನೆ.

ಪುಣೆಯಲ್ಲಿ ರಾಷ್ಟ್ರೀಯ ಸಪ್ತಾಹದಲ್ಲಿ ಒಂದು ದಿವಸ ಕಾಲೇಜದ ವಿದ್ಯಾರ್ಥಿಗಳು ಸಾಯಕಲ ಮೇಲೆ ಕೂತು ಪ್ರಭಾತ ಫೇರಿ ತೆಗೆಯಬೇಕೆಂದು ಗೊತ್ತು ಮಾಡಿದ್ದರು ಆ ಪ್ರಕಾರ ಆದಿತ್ಯವಾರದ ದಿವಸ ಇವರ ಮೆರವಣಿಗೆ ಹೊರಟಿತು. ಪ್ರತಿಯೊಂದು ಸಾಯಕಲ್ಲಿಗೆ ಒಂದು ರಾಷ್ಟ್ರೀಯ ನಿಶಾನೆಯನ್ನೂ, ವಿಲಾಯತಿ ಅರಿವೆಗೆ ಬಹಿಷ್ಕಾರ ಹಾಕಿರೆಂಬ ಪಟವನ್ನೂ ಹಚ್ಚಿದ್ದರು. ಮುಂಭಾಗದಲ್ಲಿ ಬ್ಯಾಗಿಲ್ ಇತ್ತು. ಈ ನಗರ ಸಂಕೀರ್ತನೆಯು ಅತ್ಯಂತ ಪ್ರೇಕ್ಷಣೀಯವಾಗಿತ್ತು.

ಪಾರ್ಸಿ ಜನರ ಪೂರ್ಣ ಸಹಾನುಭೂತಿ.

ಈಗಿನ ರಾಜಕೀಯ ಚಳವಳಿಗೆ ತಮ್ಮ ಪೂರ್ಣ ಸಹಾನುಭೂತಿಯುಂಟೆಂದು ತೋರಿಸುವದಕ್ಕಾಗಿ ಮುಂಬಯಿಯ ಪಾರ್ಸಿ ಜನರು ರವಿವಾರ ದಿವಸ ಪ್ರಚಂಡ ಮೆರವಣಿಗೆ ತೆಗೆದಿದ್ದರು. ಬೋರಿಬಂದರದ ಹತ್ತಿರಿರುವ ವಿಶಾಲವಾದ ದಾರಿಯಲ್ಲಿ ಇರುವೆ ಹೋಗಲಿಕ್ಕೆ ಅನುವು ಇಲ್ಲದಾಯಿತು. ಪೋಲೀಸರಿಂದ ಅಪ್ಪಣೆ ಪಡಕೊಳ್ಳದೆ ಮೆರವಣಿಗೆ ತೆಗೆದಿದ್ದರು. ಟ್ರಾಮ್, ಮೋಟಾರ ಕುದುರೆಯ ಬಂಡಿಗಳ ವ್ಯವಹಾರವೆಲ್ಲ ಬಂದಾಯಿತು. ಶ್ರೀ. ಸೌ|| ಗೋಶೆನಪಕ್ಯಾಪ್ಟನ ಮತ್ತು ಡಾಕ್ಟರ ದಾದಾಚಾಂಜಿಯವರು ಇದರ ಮುಂದಾಳುವಾಗಿದ್ದರು

ಡಾಕ್ಟರ ಕಿಚಲೂಸಾಹೇಬರ ಸುತ್ತಲು ಕಾವಲು

ಡಾಕ್ಟರ ಕಿಚಲೂಸಾಹೇಬರು ಮೊದಲಿನ ಅಸಹಕಾರದಲ್ಲಿ ಎರಡು ವರ್ಷ ಶಿಕ್ಷೆ ಅನುಭವಿಸಿದ್ದಾರೆ. ಅವರು ಜೇಲಿನ ಒಳವಿಚಾರವನ್ನು ತಿಳಿದು, ಜೇಲಿನಲ್ಲಿ ಹೇಗೆ ನಿರ್ಭಯದಿಂದ ನಡೆಯಬೇಕೆಂಬದನ್ನು ದಿಗಂಡವರು ಈಗಿನ ತುರಂಗವಾಸದಲ್ಲಿಯೂ ಯಾರಿಗೂ ಹೆದರದವರಾದ್ದರಿಂದ, ಮತ್ತು ಇವರ ದಿಟ್ಟತನದ ವರ್ತನದ ಪರಿಣಾಮವು ಬೇರೆ ಕೈದಿಗಳ ಮೇಲಾಗುತ್ತಿರುವದರಿಂದ, ಇವರ ನಡೆನುಡಿಗಳ ಮೇಲೆ ಸಹ ಅಧಿಕಾರಿಗಳು ಕತ್ತೀ ಹಿರಿದಿದ್ದಾರೆ. ಇವರು ಏನು ಮಾಡುತ್ತಾರೆ; ಯಾರ ಸಂಗಡ ಮಾತಾಡುತ್ತಾರೆ, ಬಹಳವೇಕೆ ಯಾವ ಸೊನ್ನೆ ಸೂಕ್ಷ್ಮಗಳನ್ನು ತೋರಿಸುತ್ತಾರೆಂಬದನ್ನು ನೋಡಲಿಕ್ಕೆ ಸಹ ಹಗಲಿರುಳು ಇವರ ಸುತ್ತಲು ಅನುಭವಿಕರಾದ ಪೋಲಿಸ ಮತ್ತು ಜೇಲ ವಾರ್ಡರರ ಕಾವಲು ಇಟ್ಟಿದ್ದಾರೆಂದು ಪ್ರಸಿದ್ಧವಾಗಿರುತ್ತದೆ.

ಹಿಂದೂ ಮುಸಲಮಾನಕಿ ಜಯ.

ಮೌಲಾನಾ ಶೌಕತಅಲ್ಲಿಯವರ ಫಜಿತಿ.

ಬಾಂದ್ರಾದಲ್ಲಿ ಶೌಕತಅಲ್ಲಿಯವರು ಮುಸಲ್ಮಾನರು ಕಾಂಗ್ರೆಸ ಕೂಡಬಾರದೆಂಬ ಚಳವಳ ನಡೆಸಿದ್ದಾರೆ. ಇದೇ ನಿಮಿತ್ತವಾಗಿ ಇವರು ಒಂದು ಸಭೆಗೂಡಿಸಿದರು. ಅಲ್ಲಿ, ಮುಸಲಮಾನರು ಕಾಂಗ್ರೆಸ ಸೇರತಕ್ಕದ್ದಲ್ಲ, ಅದರಿಂದ ಲಾಭವಿಲ್ಲ, ಎಂದು ಮುಂತಾಗಿ ಕಂಠಶೋಷಣ ನಡೆಸಿದರು. ಆಗ ಸಭಿಕರು ಇವರಿಗೆ ಕೆಲವು ಪ್ರಶ್ನೆಗಳನ್ನು ಹಾಕಿದರು. ಇವರು ಅವಕ್ಕೆ ಉತ್ತರ ಕೊಡದೆ ತಮ್ಮ ಕಾಯಕ ನಡೆಸಿದ್ದರಿಂದ ಸುಮಾರು ನೂರೈವತ್ತು ಜನರು ಸಭೆ ಬಿಟ್ಟು ಎದ್ದರು. ಇವರನ್ನು ತಿರುಗಿಸಲು ಶೌಕತಲ್ಲಿಯವರು ತಮ್ಮ ಧ್ವನಿ ಏರಿಸಿದರು. ಕಡೆಗೆ, 'ಮಹಾತ್ಮಾ ಗಾಂಧೀಕಿ ಜಯ', 'ಹಿಂದೂ ಮುಸಲ್ಮಾನಕೀ ಜಯ', ಮೊದಲಾದ ಜಯಘೋಷದಲ್ಲಿ ಸಭೆ ಮುರಿಯಿತು.

ಮೌಲಾನಾ ಮಹಮುದಲ್ಲಿಯವರ ಸುಹದಾಶೆ.

ಮೌಲಾನಾ ಮಹಮುದಲ್ಲಿಯವರು ಬ್ರಿಟಿಶ ಸರಕಾರದಿಂದಲೇ ತಮ್ಮ ಹಾಗು ತಮ್ಮ ಜನಾಂಗದ ಉದ್ಧಾರವಾಗುವದೆಂಬ ಮತದವರಾಗಿ, ಈಗಿನ ಚಳವಳಿಯನ್ನು ಅದಷ್ಟು ವಿರೋಧಿಸುವದಲ್ಲದೆ, ಕಾಯದೆಭಂಗ ಮಾಡಿ, ಮಹಾತ್ಮರು ದೊಡ್ಡ ತಪ್ಪು ಮಾಡಿದರೆಂದು ಹೇಳುವದಕ್ಕೂ ಹಿಂದೆ ಸರಿದಿಲ್ಲ. ಅಸೆಂಬ್ಲಿ ಮತ್ತು ಕೌನ್ಸಿಲಗಳಲ್ಲಿ ಅರ್ಥವಿಲ್ಲೆಂದವರು ಅಸೆಂಬ್ಲಿಯ ಏಕನಿಷ್ಠ ಭಕ್ತರಾಗಿ, ಉಮೇದವಾರರಾಗಿದ್ದಾರೆ. ಮುಂದೆ ಅಸೆಂಬ್ಲಿಯ ಮೆಂಬರರಾಗುವದಕ್ಕಿಂತ ಹೆಚ್ಚಿನ ಹಾರಿಕೆಯನ್ನೂ ಹೊಂದಿದ್ದಾರೆ. ಅದರ ಅಧ್ಯಕ್ಷರಾಗಬೇಕೆಂಬ ಅಭಿಲಾಷೆ. ಸರಕಾರವೂ ಅನುಕೂಲ ಅಧ್ಯಕ್ಷರಾಗಲು ತನ್ನ ಹೋಟುಗಳನ್ನೆಲ್ಲ ಇವರಿಗೆ ಕೊಡಲು ಸಿದ್ಧವಾಗಿದೆ. ಒಮ್ಮೆ ತುರಂಗದಲ್ಲಿ ಹಾಕಿದ ಸರಕಾರವೇ ಇವರನ್ನು ಅಧ್ಯಕ್ಷ ಪದದ ಪಟ್ಟಗಟ್ಟಲಿಕ್ಕೆ ಸಿದ್ಧವಾಗುವದನ್ನು ನೋಡಿದರೆ ಜನರು ಹೇಗೆ ಹೊತ್ತು ಬಂದಂತೆ ಕೊಡೆ ಹಿಡಿಯುತ್ತಾರೆಂಬದನ್ನು ತೋರಿಸುತ್ತದೆ.

ಶ್ರೀ. ಸತ್ಯಮೂರ್ತಿಯವರ ಸತ್ಯವಚನ

ಈಗಿನ ಆಂದೋಲನದಲ್ಲಿ ಇಂಗ್ಲಂಡ ಮತ್ತು ಹಿಂದುಸ್ಥಾನದ ನಡುವೆ ಸರಿಸಮಾನಸ್ಕಂದರಂತೆ ಒಡಂಬಡಿಕೆಯಾಗಬೇಕಾದ್ದರಿಂದ ತಾವು ಕೌನ್ಸಿಲಕ್ಕೆ ಉಮೇದವಾರರಾಗಿ ನಿಲ್ಲುವಷ್ಟು ವಿಹಿತವಾಗದ್ದರಿಂದ, ಉಮೇದವಾರಿ ಬಿಟ್ಟಿದ್ದೇವೆಂದು ಶ್ರೀ. ಸತ್ಯಮೂರ್ತಿಯವರು ಪ್ರಸಿದ್ಧ ಮಾಡಿದ್ದಾರೆ.

ಫರ್ಗ್ಯುಸನ್ನ ಕಾಲೇಜದ ಮೇಲೆ ರಾಷ್ಟ್ರೀಯ ನಿಶಾನೆ

ಪುಣೆಯಲ್ಲಿ ಮುಸಾಳರ ಫರ್ಗ್ಯುಸನ್ನ ಕಾಲೇಜದ ಮೇಲೆ ವಿದ್ಯಾರ್ಥಿಗಳು ರಾಷ್ಟ್ರೀಯ ನಿಶಾನೆಯನ್ನೇರಿಸಿದರು. ಏರಿಸುವಾಗ ದೊಡ್ಡ ಉತ್ಸವ ಮಾಡಿದರು. ಕಾಲೇಜ ಪ್ರಾರಂಭವಾಗುವಾಗ, ಅಂದರೆ ಪ್ರಾತಃಕಾಲದ ಹನ್ನೊಂದು ಗಂಟೆಯ ಸಮಯದಲ್ಲಿ ಆರೇಳು ನೂರು ವಿದ್ಯಾರ್ಥಿಗಳು ಸೇರಿದರು. ನಿಶಾನೆ ಹಚ್ಚುವ ಸಮಯವಾದ ಕೂಡಲೆ ಬಿಗಿಲು ಹಿಡಿದರು. ಆಗ ಎಲ್ಲರೂ ಕಾಲೇಜದ ಮುಂಭಾಗದಲ್ಲಿ ಸೇರಿದರು. ಒಬ್ಬನು ಮಾಳಿಗೆ ಹತ್ತಿ, ಮಧ್ಯಸ್ಥಳದಲ್ಲಿ ನಿಶಾನೆ ಹಚ್ಚಿದನು. ಬ್ಯೂಗಿಲದ ಧ್ವನಿ ಕೇಳಿ, ಪ್ರಿನ್ಸಿಪಾಲ ಮಹಾಜನಿಯವರು ಬಂದು, ನಿಶಾನೆ ಹಚ್ಚಿದವನಿಗೆ ಕೆಳಗಿಳಿಯ ಹೇಳಿದರು. ಆತನು ಸತ್ಯಾಗ್ರಹ ಮಾಡಿ, ಅಲ್ಲೇ ನಿಂತನು. ನಿಮಗೆ ಹೇಳದೆ ನಿಶಾನೆ ಇಳಿಸುವದಿಲ್ಲೆಂದು ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ವಚನ ಕೊಟ್ಟ ಬಳಿಕ, ಆತನು ಕೆಳಗಿಳಿದನು

ಸರಕಾರೀ ಕಾಲೇಜ ಬಂದಾಯಿತು.

ನಾಗಪೂರದಲ್ಲಿ ಸರಕಾರದ ನಾಲ್ಕೈದು ಕಾಲೇಜಗಳು ಬಂದಾದವು. ಅಮರಾವತಿಯಲ್ಲಿಯ ಕಾಲೇಜವೂ ಬಂದಾಯಿತು. ಹರತಾಳ ಮಾಡಲಿಕ್ಕಿಲ್ಲ, ಮೆರವಣಿಗೆ ತೆಗೆಯಲಿಕ್ಕಿಲ್ಲ. ರಾಷ್ಟ್ರೀಯ ಚಳವಳಿಯಲ್ಲಿ ಸೇರಲಿಕ್ಕಿಲ್ಲೆಂದು ವಚನಕೊಟ್ಟರೆ ಕಾಲೇಜ ನಡಿಸತಕ್ಕವರೆಂದು ಯುರೋಪಿಯನ್ನ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ಸೂಚಿಸಿದರು. ರಾಷ್ಟ್ರಕಲಹದಲ್ಲಿ ಧುಮುಕತಕ್ಕವರೇ ಎಂದು ವಿದ್ಯಾರ್ಥಿಗಳು ಸಾಹೇಬರಿಗೆ ಉತ್ತರ ಕೊಡಲು ಸಾಹೇಬರು ಎರಡನೇ ನೋಟೀಸು ತೆಗೆಯುವ ತನಕ ಕಾಲೇಜವನ್ನು ಬಂದು ಮಾಡಿದರು.

ರಾಜಕೀಯ ಕೆಲಸಕ್ಕೆ

ಟಿಳಕ ಫಂಡಿನಿಂದ ಮೂರು ಲಕ್ಷದ ಸಹಾಯ

ಚಿರೋಲ ಪ್ರಕರಣದಲ್ಲಿ ಲೋಕಮಾನ್ಯರಿಗೆ ಸಹಾಯವೆಂದು ಅವರ ಹಿತೈಷಿಗಳು ಲೋಕಮಾನ್ಯರಿಗೆ ಒಂದು ಲಕ್ಷ ರೂಪಾಯಿಯ ಕಾಣಿಕೆ ಕೊಟ್ಟರು. ಲೋಕಮಾನ್ಯರು ಇದನ್ನು ತಾವು ತಕ್ಕೊಳ್ಳದೆ, ಸಾರ್ವಜನಿಕ ಕೆಲಸಕ್ಕೆ ಕೊಟ್ಟರು. ಅದು ಈಗ ಮೂರು ಲಕ್ಷವಾಗಿದೆ. ಇದನ್ನು ಶ್ರೀ. ಕೇಳಕರ ಮತ್ತು ವಿದ್ವಾಂಸರು ರಾಜಕೀಯ ಕೆಲಸಕ್ಕೆ ಕೊಟ್ಟರು. ಅದನ್ನು ಇಡೀ ಹಿಂದುಸ್ಥಾನಕ್ಕೆ ಹಂಚಿಕೊಟ್ಟಿದ್ದು, ಕರ್ನಾಟಕದ ಪಾಲಿಗೆ ೨೫ ಸಾವಿರ ರೂಪಾಯಿ ಬಂದಿವೆ. ಇದರ ಬಡ್ಡಿಯನ್ನು ಮಾತ್ರ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಾಗಿ ವೆಚ್ಚ ಮಾಡತಕ್ಕದ್ದಿರುತ್ತದೆ

ನರಗುಂದದಲ್ಲಿ ಕದರುಂಡಿಗೆಯ ಬಹುಮಾನ.

ನರಗುಂದದಲ್ಲಿ ಉತ್ತಮವಾಗಿ ನೂತವರಿಗೆ ಕದರುಂಡಿಗೆ ಕೊಡುವ ಸಮಾರಂಭವನ್ನು ತರುಣ ಸಂಘದವರು ನಡೆಸಿದರು. ಇನಾಮು ಪಡೆದವರು

೧	ಶ್ರೀ. ರಾಚಪ್ಪಾ ಚಿನಗಾ-	ಬೆಳ್ಳಿಯದು
೨	,, ಶಿದ್ದಪ್ಪಾ ಕೋಟಿ	,,
೩	,, ವಾಸುದೇವ ಜೋಶಿ	ಸಾದಾ

ತರುಣ ಸಂಘದವರು ನೂಲುವ ಮತ್ತು ನೆಯಿಸುವ ಕೆಲಸವನ್ನು ಉತ್ತಮ ರೀತಿಯಿಂದ ನಡಿಸಿದ್ದಾರೆ

ಮುಂಬಯಿ ಮತ್ತು ಅಹಮದಾಬಾದಿನ ವರ್ತಕ ಸಂಘದವರು ತಮ್ಮ ವತಿಯಿಂದ ಕೌನ್ಸಿಲ ಮತ್ತು ಅಸೆಂಬ್ಲಿಗೆ ಮೆಂಬರರನ್ನು ಆರಿಸಬಾರದೆಂಬ ಠರಾವು ಮಾಡಿದ್ದಾರೆ.

ಪಟಾಕ್ಷಿ ಹಾರಿಸಬಾರದು

ಶ್ರೀ. ಗಣೇಶ ಚತುರ್ಥಿಯಲ್ಲಿ ಪಟಾಕ್ಷಿ, ಮತಾಪು, ಹೂವಿನಕಡ್ಡಿ, ಗರ್ನಲ್ ವಗೈರೆ ಮದ್ದಿನ ಸಾಮಾನುಗಳಿಗೆ ವ್ಯರ್ಥವಾಗಿ ಹಣ ಖರ್ಚು ಮಾಡದೆ, ಪರದೇಶಕ್ಕೆ ಪ್ರತಿಯೊಂದು ಊರಿಂದ ಸಾವಿರಾರು ರೂಪಾಯಿ ಹಾಳುಮಾಡುವದನ್ನು ತಪ್ಪಿಸಿರಿ. ಯಾಕಂದರೆ ಈಗಿನ ಪರಿಸ್ಥಿತಿಯು ಯಾವತ್ತರನ್ನೂ ಅವಲಂಬಿಸಿದೆ. ಕಾರಣ ನಾವು ಯಾವದೇ ರೀತಿಯಿಂದಲೂ ಪರದೇಶಕ್ಕೆ ಹೋಗುವ ದುಡ್ಡಿಗೆ ಒಡ್ಡು ಹಾಕಿ, ಹಿಂದುಸ್ಥಾನದ ಸಂಪತ್ತಿಯನ್ನು ಕಳೆಯದಂತೆ ಪ್ರಯತ್ನ ಮಾಡುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಆದಕಾರಣ ಯಾವ ವ್ಯವಹಾರಸ್ಥರೂ ಮದ್ದಿನ ಸಾಮಾನುಗಳನ್ನು ತರಿಸಬಾರದಾಗಿಯೂ, ಯಾರೂ ಉಪಯೋಗಿಸಬಾರದಾಗಿಯೂ, ಮತ್ತು ಸದ್ಯಕ್ಕೆ ಒಂದಿರುವ ಅಷ್ಟಮಿ ಹಬ್ಬದಲ್ಲಿಯೂ, ವ ಇತರ ಹಬ್ಬ ಹುಣ್ಣಿವೆ ವಗೈರೆ ಸಂದರ್ಭಗಳಲ್ಲಿಯೂ, ವ್ಯರ್ಥವಾಗಿ ಪರದೇಶಿ ಕಾಗದ, ಒಣ್ಣ, ಚಿತ್ರ ವಗೈರೆ ಅನಾವಶ್ಯಕ ವಸ್ತುಗಳನ್ನು ಬಿಟ್ಟು, ದೇಶೀ ವಸ್ತುಗಳನ್ನೇ ಉಪಯೋಗಿಸಬೇಕಾಗಿ ಬೇಡಿಕೊಳ್ಳುತ್ತೇವೆ. ಹೀಗೆ ಮಾಡುವದರಿಂದ ಪರದೇಶಕ್ಕೆ ಹೋಗುವ ಕೋಟಿಗಟ್ಲೆ ರೂಪಾಯಿ ನಮ್ಮ ದೇಶದಲ್ಲೆ ಉಳಿಯುವದು. ಇದರಂತೆ ತಾವೆಲ್ಲರೂ ನಡಿಯುವಿರಾಗಿ ನಂಬಿರುವ,

ಬ್ಯಾಡಿಗಿ, **ಅಧ್ಯಕ್ಷ.**
೭-೮-೧೯೩೦ ಬ್ಯಾಡಿಗಿ, ಕಾಂಗ್ರೆಸ ಕಮಿಟಿ

ಗೋಕಾವಿಯ ಸುದ್ದೀ ಪತ್ರ.

ತಾರೀಖು ೧೬-೭-೩೦ನೇ ದಿವಸ ಇಲ್ಲಿಯ ಮಾಮಲೇದಾರಸಾಹೇಬರು ತಮ್ಮ ಕಚೇರಿಯಲ್ಲಿ ಸಭೆಗೂಡಿಸಿ ತಾಲೂಕಿನಲ್ಲಿಯ ಯಾವತ್ತು ಗೌಡರನ್ನು ಕರೆಕಳುಹಿಸಿದ್ದರು. ಮತ್ತು ಅದರಲ್ಲಿ ಕೂಡಿದ ಪಾಟೀಲರಿಗೆಲ್ಲ ಬೆಳಗಾವಿಯಲ್ಲಿ ಹೊರಡುವ "ಪ್ರಜಾಧ್ವನಿ" ಎಂಬ ವರ್ತಮಾನ ಪತ್ರವನ್ನು ತೆಗೆದುಕೊಳ್ಳಲು ಹೇಳಿದರು -

ಸಿಂದೀ ಗಿಡಗಳನ್ನು ಕಡೆದ ಸುದ್ದಿಯು ಮತ್ತು ಅಕ್ಕತಂಗೆಂಹಾಳದ ಜನರ ಮೇಲೆ ನಡೆದ ಖಟ್ಲೆಯು ಮಾಮಲೇದಾರ ಮುಂದೆ ಸುರುವಾಯಿತು. ಅದರಲ್ಲಿ ಮಿಡಕನಹಟ್ಟಿ ಮತ್ತು ಕಟ್ಟಾಳದಲ್ಲಿ ಗಿಡಗಳನ್ನು ಕಡೆದ ಬಗ್ಗೆ ಬೇರೆ ಬೇರೆ ಎರಡು ಫಿರ್ಯಾದಿಗಳು ಮಾಡಲ್ಪಟ್ಟವೆ. ಈ ಖಟ್ಲೆಯಲ್ಲಿ ಒಬ್ಬ ಆರೋಪಿಯು ಹೊರ್ತು ಬೇರೆ ಯಾರೂ ವಕೀಲರನ್ನು ಕೊಡಲಿಲ್ಲ. ಹಾಗೂ ಕೋರ್ಟಿನ ಕೆಲಸದಲ್ಲಿ ಯಾವ ತರದ ಭಾಗವನ್ನೂ ತೆಗೆದುಕೊಳ್ಳುವದಿಲ್ಲೆಂದು ಹೇಳಿದರು. ಈ ಆರೋಪಿಗಳಲ್ಲಿ ಅಣ್ಣಾ ಬಸಪ್ಪನೆಂಬ ಆರೋಪಿಗೆ ಹೆಸರು ಕೇಳಲಾಗಿ ಅವನು "ವಂದೇ ಮಾತರಂ" ಎಂದೂ ತಂದೆಯ ಹೆಸರು "ಗಾಂಧೀಮಹಾರಾಜ" ರೆಂದೂ ಹೇಳಿದನು. ಇದನ್ನು ಕೇಳಿ ಮಾಮಲೇದಾರಸಾಹೇಬರು ಸಿಟ್ಟಿಗೆದ್ದು ನೆಟ್ಟಗೆ ಉತ್ತರ ಕೊಡು; ಇಲ್ಲದಿದ್ದರೆ ನಿನ್ನನ್ನು ಮಾಫೀ ಬೇಡುವವರೆಗೆ ತುರಂಗದಲ್ಲಿ ಹಾಕುವೆನೆಂದು ಗಟ್ಟಿಯಾಗಿ ನುಡಿದರು. ಅದಕ್ಕೆ ನನ್ನದೇನೂ ಆಡ್ಡಿಯಿಲ್ಲವೆಂದು ಆರೋಪಿಯು ಉತ್ತರ ಕೊಟ್ಟನು ಮಾಮಲೇದಾರಸಾಹೇಬರು ಹೀಗೆ ಮಾಡಲಿಕ್ಕೆ ಕಾಯಿದೇ ಪುಸ್ತಕಗಳನ್ನು ತಿರುವಿ ಹಾಕಿದರು. ಆದರೆ ಆ ತರದ ಅಧಿಕಾರವು ದೊರೆಯದ್ದರಿಂದ ಸುಮ್ಮನಾದರು.

ವಂದೇ ಮಾತರಂ

ತಾ. ಕಾ ಕಮಿಟಿ ಹಾವೇರಿ
೮-೮-೧೯೩೦ಇಸ್ವಿ

ಮೊನ್ನೆ ಆದ ಸ್ವಾತಂತ್ರ್ಯ ಸಪ್ತಾಹದ ಕಾರ್ಯಕ್ರಮಗಳಂತೆ ಸಪ್ತಾಹವು ಆಚರಿಸಲ್ಪಟ್ಟಿತು. ಸಪ್ತಾಹದ ೨ ನೇ ದಿನವು ಚರಕಾ ವ ತಕಲೀ ದಿನವಿದ್ದದರಿಂದಾ ಅವತ್ತೆ ನೊದಲೇ ಗೊತ್ತಾದಂತೆ ಚ ಕಾ ವ ತಕಲೀ ಮೇಲಾಟ ಇಟ್ಟಿತು. ರಾಟೀ ಮೇಲಾಟಕ್ಕೆ ಗಂಡಸರು ಹುಡುಗರು ಹೆಂಗಸರು ಕೂಡಿ ೨೬ ಜನರು ಬಂದಿದ್ದರು. ತಕಲೀ ಮೇಲಾಟಕ್ಕೆ ೨೫-೩೦ ಜನರು ಬಂದಿದ್ದರು. ಅವುಗಳಲ್ಲಿ ೧-೨-೩ನೇ ನಂಬರು ಬಂದವರಿಗೆ ಬಹುಮಾನ ಸಪ್ತಾಹದ ಕಡೇ ದಿವಸ ಸಭೆಯಲ್ಲಿ ಕೊಟ್ಟಿತು. ಅವುಗಳ ವಂದಿಯು ಕೆಳಗೆ ಕೊಟ್ಟಂತೆ ಇರುತ್ತದೆ

ರಾಟಿಯ ಮೇಲಾಟದಲ್ಲಿ

ಗಂಡಸರು	ಬಹುಮಾನಕೊಟ್ಟ ಸಾಮಾನ
(೧) ರಾಮಾಚಾರ್ಯ ಗುಡಿ	೧ ಖಾದೀ ಫಟಕಾ
(೨) ಶಂಕರಪ್ಪಾ ಶಿಡೆಣ್ಣಿಳ್ಳಿ	೧ ಖಾದೀ ಶರಟು
(೩) ಶ್ಯಾಂತಪ್ಪಾ ಶಟ್ರ	೧ ಗಾಂಧಿಟೊಪ್ಪಿಗೆ
ಹುಡುಗರು	
(೧) ರಾಜಶೇಖರ ಹಿರೇಮಠ	೧ ಊ ಗಾ. ಟೊ.
(೨) ಬಾಬು ಮಾಸೂರ	೧ ಗಾಂಧಿಟೊಪ್ಪಿಗೆ
(೩) ಮಹಾದೇವ ಪವಾರ	೧ ಗಾಂಧಿಟೊಪ್ಪಿಗೆ
ಹೆಂಗಸರು	ರೂ ಆ ಪೈ
(೧) ಸಾವಂತ್ರೆವ್ವಾ ಹೊಸಮನಿ	೩-೦-೦
( ) ಗಂಗವ್ವಾ ಹಂಚಿಗೇರಿ	೨-೦-೦
(೩) ಶಿವಲಿಂಗವ್ವಾ ಲಕ್ಷ್ಮೇಶ್ವರ	೧-೦-೦

ತಕಲೀ ಮೇಲಾಟದಲ್ಲಿ

(೧) ನರಸಪ್ಪ ಅಗಸರ	೧ ಬೆಳ್ಳೀ ತಕಲಿ
(೨) ತಿರಕಪ್ಪಾ ದೇಶಪಾಂಡೆ	೧ ಗಾಂಧಿಟೊಪ್ಪಿಗೆ
(೩) ಶಿ ಖರಪ್ಪಾ ಹುರಕಡ್ಲಿ	೧ ನಿಶಾನೆ

ತಮ್ಮ
ಎಚ್. ಎಸ್ ನಾಡಿಗೇರ.
ಸೇಕ್ರೆಟರಿ ಹಾವೇರಿ
ಟಿ ಇ ಇ.

ಕಿತ್ತೂರಿನ ಪತ್ರ.

ತಾ|| ೭-೮-೩೦ಇಸ್ವಿ ದಿವಸ ಶ್ರೀ. ವಿಠ್ಠಲ ಮಂದಿರದಲ್ಲಿ ವೆ. ವಾ. ಕಾವ್ಯಾನಂದ ಪರಸಿಂಹಾಚಾರ್ಯರ ವಾರ್ಷಿಕ ಪುಣ್ಯ ತಿಥಿಯ ನಿಮಿತ್ತ ಸಭೆ ಸೇರಿ "ಕಾವ್ಯಾನಂದ ಸ್ಮಾರಕ ಮಂಡಲ" ವು ಸ್ಥಾಪಿತವಾಯಿತು. ಅವರದೊಂದು ಎನ್‌ಲಾರ್ಜ ಮಾಡಿಸಿದ ಭಾವಚಿತ್ರವನ್ನು ಇಡುವದು, ಅವರ ವಾರ್ಷಿಕ ಪುಣ್ಯತಿಥಿಯು ಪ್ರತಿವರ್ಷ ತಪ್ಪದೆ ಜರುಗುವಂತೆ ಮಾಡುವದು ಮತ್ತು ಅವರ ಚರಿತ್ರ ಹಾಗು ಲೇಖ ಸಂಗ್ರಹ ಮಾಡಿ ಪ್ರಸಿದ್ಧಪಡಿಸುವದು ಇವೇ ಮೊದಲಾದವುಗಳು ಮಂಡಲದ ಉದ್ದಿಷ್ಟ ಕಾರ್ಯಗಳಾಗಿರುವವು, ಒಂದೊಂದನ್ನೇ ಕ್ರಮೇಣ ಕೈಕೊಂಡು ಕೆಲಸ ಸಾಗಿಸುವದು ಮಂಡಲದವರ ಆಲೋಚನೆಯದೆ ಈ ಸಾರೆ ಸ್ಮರಣಾರ್ಥ ಇಲ್ಲಿಯ ಚತ್ರುರ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅವರ ಶಿಷ್ಯರೊಬ್ಬರು ಪುಸ್ತಕಗಳನ್ನು ಇನಾಮು ಕೊಡುವವರಾದರು.

ಮುಂಬಯಿ ಬಂದರದಲ್ಲಿ ಬಿದ್ದ ಪರದೇಶಿ ಅರಿವೆಗಳ ಗಂಟುಗಳ ಸಂಖ್ಯೆಯು ಒಂದು ಲಕ್ಷವಾಯಿತು. ಪ್ರತಿತಿಂಗಳಲ್ಲಿಯೂ ಈ ಸಂಖ್ಯೆಯು ಬೆಳೆಯುತ್ತಿರುವದು ಈ ಗಂಟು ಪರಸ್ಥಳಕ್ಕೆ ಹೋಗಬಾರದೆಂದು ಪಿಕೆಟಿಂಗ ನಡೆದದ್ದರಿಂದ, ಅಲ್ಲಿ ಕೆಲಸ ಮಾಡುತ್ತಿರುವಂಥ ಬಂದರದಲ್ಲಿ ಸಾವಿರ ಕೂಲಿಗಳಿಗೆ ಸಹ ಕೆಲಸವಿಲ್ಲದಾಗಿದೆ.

ವಿವಿಧ ವಿಷಯಗಳು-

ಬೆಳಗಾವಿಯ ೪೦-೫೦ ಹುಡುಗರು ಗೋಕಾವಿಯ ಗಿರಣಿಯನ್ನು ನೋಡಲಿಕ್ಕೆ ಹೋದರು ಇವರ ತಲೆಯ ಮೇಲೆ ಖಾದೀ ಟೊಪ್ಪಿಗೆ ಕಯ್ಯಲ್ಲಿ ಟಕಲಿ ಇತ್ತು. ಇವನ್ನು ಬಿಟ್ಟು ಗಿರಣಿ ನೋಡಲಿಕ್ಕೆ ಒಲ್ಲಿರೆಂದು ಮ್ಯಾನೇಜರರು ಹೇಳಿದರು. ಇವರು ಯುರೋಪಿಯನ್ನರು. ಸಾಹೇಬರ ಹುಕುಮಿನಂತೆ ನಡೆಯದೆ, ವಿದ್ಯಾರ್ಥಿಗಳು ಹಾಗೇ ತಿಂದಿರಿಗಿದರು ಒಂದಾಣೆ ಕೊಟ್ಟು ಟಿಕೀಟು ಕೊಂಡದರು. ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿದ್ದ ಗಿರಣಿ ನೋಡಲಿಕ್ಕೆ ಹೋದ್ದರ ಘೂರ್ದಂಡವೆಂದು ಆ ಆಣೆ ಕಳಕೊಂಡರು.

ಕಾಯದೆಭಂಗದ ದೆಸೆಯಿಂದ ಕಿತ್ತೂರಿನವರ ಮೇಲೆ ಬೈಲಹೊಂಗಲದಲ್ಲಿ ವಿಚಾರಣೆ ನಡೆದಿದೆ. ಇವರು ಜಾಮೀನೂ ಕೊಟ್ಟಿಲ್ಲ. ತುರಂಗದಲ್ಲಿಯೂ ಇಲ್ಲ. ಮಾಮಲೆದಾರರು ವಿಚಾರಣೆ ಮುಂದೆ ಹಾಕಿ, ಮುದ್ದತಿಗೆ ಬರಬೇಕೆಂದು ಹುಕುಮು ಮಾಡಿದರು. ನಾವು ಹಗಲೆಲ್ಲ ಎಡತಾಕಬಾರರು, ನಮಗೆ ದಾರೀ ವೆಚ್ಚ ಕೊಟ್ಟರೇ ಮುದ್ದತಿಗೆ ಸರಿಯಾಗಿ ಬರಬಹುದೆಂದು ಹೇಳಿ, ಇವರು ತಮ್ಮೂರಿಗೆ ಹೊರಗೆ ಬಂದಿದ್ದಾರೆ.

ಕಾಶೀ ಮ್ಯುನಿಸಿಪಾಲಿಟಿಯ ಸ್ಕೂಲಬೋರ್ಡಿನ ಆ್ಯಡಮಿನಿಸ್ಟ್ರೇಟರರು ರಾಜಕೀಯ ಚಳವಳಿಯಲ್ಲಿ ಪ್ರತ್ಯಕ್ಷ ಭಾಗ ತಕ್ಕೊಂಡಿದ್ದಾರೆ ಇವರನ್ನು ಕೆಲಸದಿಂದ ದೂರ ಮಾಡಬೇಕೆಂದು ಆ ಇಲಾಖೆಯ ಸರಕಾರದವರು ಮ್ಯುನಿಸಿಪಾಲಿಟಿಗೆ ಪತ್ರ ಬರೆದರು. ಅವರು ತಥಾಸ್ತು ಅನ್ನಲಿಲ್ಲ. ಅವರನ್ನು ದೂರ ಮಾಡುವದಿಲ್ಲೆಂದು ಸ್ಪಷ್ಟವಾಗಿ ಉತ್ತರ ಬರೆದು ಕಳಿಸಿದ್ದಾರೆ.

ಇಂಗ್ಲಂಡದ ಗಿರಣಿಗಳು ಕಾಸಿನ ಬೆಲೆಗಾಣದೆ ತತ್ತರಿಸಿರುತ್ತವೆಂದು ಈ ಮೊದಲು ಬರೆದಿರುತ್ತೇವೆ. ಮ್ಯಾಂಚೆಸ್ಟರದಲ್ಲಿ ತಮಗೆ ಜೀವನಸಾಗದೆಂದು ಹೇವೃದ್ಧವೆಂಬ ಕಂಪನಿಯವರು ಆಸ್ಟ್ರೇಲಿಯದಲ್ಲಿ ಗಿರಣಿ ಹಾಕಲು ಅದರ ಎಲ್ಲ ಸಾಮಾನುಗಳನ್ನು ಹಡಗ ಏರಿಸಿದರೆಂದು ಪ್ರಸಿದ್ಧವಾಗಿರುತ್ತದೆ

ಪಂಡಿತ ಮಾಲವಿಯಾ ಮೊದಲಾದವರನ್ನು ಹಿಡಿದ ದಿವಸ ಅನ್ನಣೆಯಲ್ಲಿ ಹರತಾಳವಾಯಿತು. ಮತ್ತು ಶ್ರೀ ಜೋಶಿಯವರ ಹಸ್ತದಿಂದ ಮ್ಯುನಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಏರಿಸಲ್ಪಟ್ಟಿತು.

ಮೂವತ್ತು ಸಾವಿರ ಜನರ ಕಾಯದೆಭಂಗ ನಾಸಿಕದಂತೆ ಅದೇ ಜಿಲ್ಲೆಗೆ ಸೇರಿದ ವತನವಾಡವೆಂಬಲ್ಲಿ ಡಾಕ್ಟರ ಖಾಡಿಲಕರರ ಅಧ್ಯಕ್ಷತೆಯಲ್ಲಿ ೩೦ ಸಾವಿರ ಜನರು ವನಗಾವಲದ ಕಾಯದೆ ಮುರಿದರು.

ಮದ್ರಾಸದ ಜನರಲ ಪೋಸ್ಟ ಆಫೀಸಿನಲ್ಲಿ ೧೭೦೦೦ ದ ಟಿಕೀಟುಗಳು ಮಟಾಮಾಯವಾಗಿರುತ್ತದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನೋಟೀಸಿಗೆ ಉತ್ತರ

ದುರಗಿ ಕೋಮು ದ್ಯಾವಪ್ಪಾ ಕಂಬಳಿಯವರ ಸಾ|| ಚಳಗೇರಿ ಹಾಲಿವಸ್ತಿ ರಾಣೆಬಿನ್ನೂರ ಇವರಿಗೆ-

ಈ ಕೆಳಗೆ ಸಹ ಮಾಡಿದವನು ಉತ್ತರ ಕೊಡುವದೇನಂದರೆ-

ನೀನು ನನ್ನ ಸಂಗಡ ೪-೫ ವರ್ಷ ಸುರಳೀತ ವಾಳ್ವೆ ಮಾಡಿಕೊತ ಒಂದು ಗಂಡು ಕೂಸು ಹಡೆದಿರುತ್ತೀದಿ ಹೀಗಿರತ ನಿನ್ನ ಚಿಗವ್ವನ ಮನಿ ರಾಣೇಬೆನ್ನೂರಿಗೆ ೩-೪ ಸಾರೆ ಹಬ್ಬಕ್ಕ ಹೋದಿ ಆ ಊರಾಗ ನನ್ನ ವ ನನ್ನ ಮಗನ ಮೇಲೆ ವೈಮನಸ್ಸು ಮಾಡತಾ ವ್ಯಭಿಚಾರದ ವ್ಯಸನದಿಂದ ೫ ವರ್ಷದ ಗಂಡು ಕೂಸಿನ ಪರಿವೆ ಇಲ್ಲದೆ ನಾನಿಲ್ಲದ ವೇಳೆಯಲ್ಲಿ ಆ ಕೂಸನ್ನು ಬಿಟ್ಟು ಮೈಮೇಲೆ ಇಟ್ಟ ದಾಗಿನೆ ಸಹಿತ ತಗೊಂಡು ರಾಣೇಬಿನ್ನೂರಿಗೆ ೩ ತಿಂಗಳ ಹಿಂದೆ ನೀನು ವೋಡಿಹೋಗಿ ನನ್ನ ನಿನ್ನ ಸಮ್ಮಂಧ ತಪ್ಪಿಸಿಕೊಂಡು ಸ್ವೇಚ್ಛೆಯಿಂದ ಇರಬೇಕೆಂಬ ದುಷ್ಟ ಇರಾದೆಯಿಂದ ನಿನ್ನ ಸ್ನೇಹಿತರ ಮಾತು ಕೇಳಿ ಇಲ್ಲದ್ದೊಂದು ಖೊಟ್ಟಿ ಮಜಕೂರ ಕಾಣಿಸಿ ನನಗೆ ಟಪಾಲದ್ವಾರ ನೋಟೀಸು ಕೊಟ್ಟಿರುತ್ತೀದಿ ಇದರ ಮೇಲಿಂದ ನೀನು ಪೂರ್ಣ ವ್ಯಭಿಚಾರಕ್ಕೆ ಬಿದ್ದಂತೆ ನನಗೆ ತಿಳಿಯುತ್ತದೆ

ಆದಕೂ ಚಿಂತೆ ಇಲ್ಲಾ ಇನ್ನಾದರೂ ನಿನಗೆ ಬುದ್ಧೀ ಹೇಳಿ ಚಲೋ ರೀತಿಯಿಂದ ಬಾಳ್ವೆ ಮಾಡಬೇಕೆಂಬ ಇರಾದೆಯಿಂದ ನಿನಗೆ ನೋಟೀಸಮೂಲಕ ತಿಳಿಸುತ್ತೇನಲ್ಲಾ ಈ ನೋಟೀಸ ಮುಟ್ಟಿದ ೧೫ ದಿವಸದಲ್ಲಿ ದಾಗಿನೆ ಸಹಿತ ತಗೊಂಡು ನನ್ನಲ್ಲಿ ಬಂದು ಯೋಗ್ಯ ರೀತಿಯಿಂದ ಬಾಳ್ವೆ ಮಾಡಿಕೋತ ಹೋಗತಕ್ಕದ್ದು ಜರ ನೀನು ತಕ್ಕೆ ತಪ್ಪಿದರೆ ನಿನಗೆ ಇದೇ ನನ್ನ ಸೋಡಚೀಟಿ ಅಂತ ತಿಳಿಯಬೇಕು ಆನಂತರ ನನ್ನ ನಿನ್ನ ಸಮ್ಮಂಧ ಯಾವತರದ್ದು ಇರುವದಿಲ್ಲಾ ಇದರ ಮಗನ ಮೇಲೆ ನಿನ್ನ ಮಾಲ್ಕಿ ಯೇನೂ ಇಲ್ಲಾ ಮುಂದಾವರೂ ನಿನ್ನ ಹೊಟ್ಟಿಲಿ ಹುಟ್ಟಿದ ಮಕ್ಕಳೂ ನಿನಗೆ ಯಾವ ತರದ ಸಮ್ಮಂಧವಿಲ್ಲ ಆ ಮೇಲೆ ನೀನು ವೈದ ದಾಗೀನೆ ಸಮ್ಮಂಧಿ ನಾನು ಅಲಾಹಿದಾ ಕೆಲಸ ನಡಸುತ್ತೇನೆ ತಿಳಿಯುವದು

ತಾರೀಖು ೭ ೮-೧೯೩೦ ಇಸ್ವಿ

ಸಹಿ ದ್ಯಾವಪ್ಪಾ ತಂದಿ ಹಾಲಪ್ಪಾ ಕಂಬಳಿ

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಬಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವಕೃತ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ವಬ್ಯಾಂಕ ಧಾರವಾಡ

ಟಿಪ್ಪಣಿ— ನಿಮ್ಮ ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತು ನೋಡಿ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯುವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಆಗಸ್ಟ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಅದ್ದರಿಂದ ಕೂಡಲೆ ಅರ್ಜಿನಾಮೆ, ಸಳ ಕಾಯುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೇ. ನಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ತಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಗುರುವಾರ ತಾರೀಖು ೧೪ ನೇ ಅಗಸ್ಟ ೧೯೩೦ (ಸಂಚಿಕೆ ೧೭೯

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾವಧೂತರ ಅಸಲರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತೇವೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಕಸ್ಸಿನ ಪ್ರಕಾರ ತಿಂಗಳಾ ಕನಿಷ್ಟ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ

ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ

ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ

ಶ್ರೇಷ್ಠವಾದ ಸ್ಥಾನ.

ಜಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುದು. ದರವನು. ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವಸ್ತಿ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ವದ್ಯ ೫

ಹಾವೇರಿಯಲ್ಲಿ ನಡೆದ ರಾಜಕೀಯ ಸಮಾರಂಭ.

—(೦)—

ವೀರಶೈವರಲ್ಲಿ ಅಪೂರ್ವ ಉತ್ಸಾಹ.

——(೦)——

ತಾರೀಖು ೧೦ ಅಗಸ್ಟ ೧೯೩೦ನೆಯ ಆದಿತ್ಯವಾರ ದಿವಸ ಹಾವೇರಿಯಲ್ಲಿ ನೆರೆದ ವೀರಶೈವರ ರಾಜಕೀಯ ಪರಿಷತ್ತು ಆವಂ ಜನಾಂಗದ ಸ್ವತಂತ್ರ ಇತಿಹಾಸದಲ್ಲಿ ಬಂಗಾರದ ಅಕ್ಷರಗಳಿಂದ ಬರೆಯುವಂತಾಯಿತು. ವೀರಶೈವ ಜನಾಂಗದಲ್ಲಿ ಪರಮ ಪೂಜ್ಯರೂ, ಸಾಧುಶ್ರೇಷ್ಠರೂ, ರೋಮರಂಧ್ರದಲ್ಲಿ ಹಗಲಿರುಳು ಖಾದೀ ಧ್ಯಾನಪರರೂ ಆದಂಥ ಶ್ರೀ. ಮಂಜಪ್ಪ ಹರ್ಡೇಕರರು ಅಗ್ರಸ್ಥಾನವನ್ನು ವಹಿಸಿದ್ದರು. ಸಭೆಯು ಸಂಪೂರ್ಣ ಪ್ರಾತಿನಿಧಿಕ ಸ್ವರೂಪದ್ದಾಗಿತ್ತು. ಉತ್ತರದಲ್ಲಿ ಸೊಲ್ಲಾಪೂರ ಹಿಡಿದು ದಕ್ಷಿಣದಲ್ಲಿ ಶಿರ್ಸಿ ಸಿದ್ದಾಪೂರದ ನಕ ಪ್ರತಿನಿಧಿಗಳು ಬಂದಿದ್ದರು. ಬೈಲಹೊಂಗಲದ ಶ್ರೀ. ಮೆಟಗುಡ್ಡ, ಬೆಳಗಾವಿಯ ಹ್ವ ಹ್ವ ಪಾಟೀಲ, ವಿಜಾಪೂರದ ಶ್ರೀ. ಮುರುಳಾರಾಧ್ಯಶಾಸ್ತ್ರಿಯವರು, ಬಾಗಲಕೋಟೆಯ ಶ್ರೀ. ಜಂಗಿನ ಮ[illegible]ಗಯ್ಯನವರು, ಹುನಗುಂದದ ತರುಣ ಸಂಘದ ಬಸವಶೆಟ್ಟೆಪ್ಪನವರು, ಧಾರವಾಡದಿಂದ ಶ್ರೀ. ಕೇಸ[illegible], ಹುಂಡೇಕಾರ, ಗಿರಿಮಲ್ಲಪ್ಪಾ ನೆಲವಡಿ, ಹುಬ್ಬಳ್ಳಿಯಿಂದ ಶ್ರೀ. ಕೆಂಪಣ್ಣನವರ ಮತ್ತು ಶ್ರೀ. ಪುರಾಣಿಕ ಇವರೇ ಮೊದಲಾದವರಲ್ಲದೆ, ಮೈಸೂರ ಸಂಸ್ಥಾನದ ಒಂದು ದೊಡ್ಡ ಪಟ್ಟಣವಾದ ದಾವಣಗೇರಿಯಿಂದ ವಕೀಲ, ವರ್ತಕ, ಸುಖವಸ್ತು ಮೊದಲಾಗಿ ೪೦ ಜನ ಪ್ರಮುಖರು ಬಂದಿದ್ದರು. ಇದೇ ಪ್ರಕಾರ ಬ್ಯಾಡಗಿ, ರಾಣೇಬಿನ್ನೂರ ಹಾನಗಲ್ಲ, ಗದಗ ಮುಂತಾದ ಸ್ಥಳಗಳಿಂದಲೂ ಬಹು ಜನರು ದಯಮಾಡಿಸಿದ್ದರು. ಐನೂರು ಪ್ರತಿನಿಧಿಗಳು ಬಂದಿದ್ದರೆಂದು ಸಹಜವಾಗಿ ಹೇಳಬಹುದು. ದೂರದೂರಿನವರಾಗಿ ಅನಾನುಕೂಲತೆಯ ಮೂಲಕ ಸಭೆಗೆ ಬರಲಿಕ್ಕಾಗದಂಥವರು ಸಹಾನುಭೂತಿಯ ಪತ್ರ ಮತ್ತು ತಾರುಗಳನ್ನು ಕಳಿಸಿದ್ದರು. ಧಾರವಾಡದ ಶ್ರೀ. ಹೊನ್ನಾಪೂರಮಠ ವಕೀಲರು ಬರೆದ ಪತ್ರವು ವೀರಶೈವ ತರುಣರಿಗೆ ಉತ್ತೇಜಕವಾಗಿತ್ತು. ಮುಂಬಯಿ, ಅಮರಾವತಿ, ಯವತಮಾಳ, ಮುಂತಾದ ದೂರ ದೂರಿನವರು ತಾರುಗಳನ್ನು ಕಳಿಸಿದ್ದರು ಹಾವೇರಿಯ ಬ್ರಾಹ್ಮಣರಾದ ವಕೀಲರೂ ಮಹಾಜನರೂ ಸಭೆಯ ಬಗ್ಗೆ ಪೂರ್ಣ ಆದರವುಳ್ಳವರಾಗಿ, ಪ್ರೇಕ್ಷಕರಾಗಿ ಬಂದಿದ್ದರು. ಈ ಎಲ್ಲ ಸಹಾನುಭೂತಿಯ ಪತ್ರ, ತಾರು ಮತ್ತು ಪರಮತೀಯರ ಆಗಮನಕ್ಕಿಂತ ಹೆಚ್ಚಾದದ್ದೊಂದು ಸಂಗತಿಯನ್ನು ಹೆಚ್ಚು ಪ್ರಶಂಸನೀಯವಾಗಿ ಹೇಳತಕ್ಕದ್ದಿದೆ. ಉಪ್ಪಿನ ಕಾಯದೆಯನ್ನು ಮುರಿದ ಬಗ್ಗೆ ಶಿಕ್ಷೆ ಹೊಂದಿ ಹಿಂಡಲಗಿಯ ತುರಂಗದಲ್ಲಿ ಅಜ್ಞಾತವಾಸಿಯಾಗಿರುವ ಶ್ರೀ. ವೆಂಡಗುಪ್ಪಿ ಮಹಾದೇವಪ್ಪ ಮತ್ತು ಬಸಪ್ಪಾ ನಾಗಾವಿ ಮೊದಲಾದವರು ಕಳಿಸಿದ ಸಂದೇಶವನ್ನು ಓದುವಂಗ ಪ್ರತಿಯೊಬ್ಬನ ಅಂತಃಕರಣವು ದ್ರವಿಸಿ, ಸಭೆಯ ವಾತಾವರಣದಲ್ಲಿ ಒಂದು ಪ್ರಕಾರದ ಚೈತನ್ಯವುಂಟಾಗಿ ಪ್ರತಿಯೊಬ್ಬನಲ್ಲಿಯೂ ರಾಷ್ಟ್ರಾಭಿಮಾನದ ದಿವ್ಯ ಜ್ಯೋತಿಯುತ್ಪನ್ನವಾಯಿತು. ಆ ಸಂದೇಶವೇನಂದರೆ-

ರಾಷ್ಟ್ರದ ಏಳ್ಗೆಯಾದ ಹೊರ್ತು ಜನಾಂಗದ ಏಳ್ಗೆಯಾಗಲು ಶಕ್ಯವಿಲ್ಲ. ಆದುದರಿಂದ ಕರ್ನಾಟಕದ ಮುಖ್ಯ ಜನಾಂಗವಾದ ವೀರಶೈವರು ಯಾವ ತರದ ಸಂಕೋಚವನ್ನು ಎಷ್ಟು ಮಾತ್ರವೂ ತಕ್ಕೊಳ್ಳದೆ, ಕಾಂಗ್ರೆಸದಲ್ಲಿ ಸಂಪೂರ್ಣವಾಗಿ ಸೇರಿಕೊಳ್ಳತಕ್ಕದ್ದು. ಮತ್ತು ಮಹಾತ್ಮಾಜಿಯವರಿಂದ ಪ್ರಾರಂಭಿಸಲ್ಪಟ್ಟಂಥ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ, ಕರ್ನಾಟಕಕ್ಕೆ ಕೀರ್ತಿ ತರಬೇಕು. ಸಭೆಯಲ್ಲಿ

“ಈ ವರೆಗೆ ವೀರಶೈವರು ಕಾಂಗ್ರೆಸಕಾರ್ಯ ಮಾಡದಿದ್ದದ್ದು ದೊಡ್ಡ ತಪ್ಪಾಗಿರುತ್ತದೆ. ಆದುದರಿಂದ ನಾವು ಕಾಂಗ್ರೆಸದಲ್ಲಿ ಸೇರಿಕೊಂಡು ವಿಧಾಯಕ ಕಾರ್ಯಕ್ರಮವನ್ನು ಮಾಡಬೇಕೆಂದು” ನಿರ್ಣಯಿಸುವದೇ ಮುಖ್ಯ ಸಂಗತಿಯಾಗಿತ್ತು. ಸಭಾಧ್ಯಕ್ಷರಾದ ಶ್ರೀ. ಹರ್ಡೇಕರ ಮಂಜಪ್ಪನವರು ಸಮಯೋಚಿತ ಭಾಷಣ ಮಾಡಿದರು. ಅದರ ಮುಖ್ಯಾಂಶಗಳನ್ನು ನಾಳಿನ ಸಂಚಿಕೆಯಲ್ಲಿ ಕೊಡುವೆವು. ವೀರಶೈವ ರಾಜಕೀಯ ಸಂಘವೆಂಬದೊಂದು ಸಂಸ್ಥೆಯು ಬೇರೆ ಇರಬೇಕೆಂದು ಅಧ್ಯಕ್ಷರೇ ಮೊದಲಾಗಿ ಕೆಲವರ ಮತವಿತ್ತು. ಇರಬಾರದೆಂದು ಬಹುಜನರದ್ದಾಗಿತ್ತು. ವಿಷಯನಿಯಾಮಕ ಕಮೀಟಿಯಲ್ಲಿ ಇದನ್ನು ಓಟಿಗೆ ಹಾಕಲು- ಪ್ರಚಂಡ ಬಹುಮತದಿಂದ ಸ್ವತಂತ್ರ ಪಕ್ಷವಿಚಾರವೆಂದು ಠರಾವು ಪಾಸಾಯಿತು. ಈ ಸಮಯದಲ್ಲಿ ಶ್ರೀ. ಹೊಸಮನಿಯ ಪರಮಣ್ಣನವರು ಮಾಡಿದ ಭಾಷಣವು ಒಳ್ಳೇ ಪರಿಣಾಮಕಾರಕವಾಯಿತು. ಅದೇನಂದರೆ-

“ಕಾಂಗ್ರೆಸವು ಬ್ರಾಹ್ಮಣರದಾಗಿರುತ್ತದೆಂಬ ವ್ಯರ್ಥವಾದ ಅಂಜಿಕೆಯಿಂದ ಪ್ರತ್ಯೇಕ ಸಂಸ್ಥೆ ಇರಬೇಕೆಂಬ ಮತವು ತೀರ ತಪ್ಪಿನದು. ಇದು ಕೇವಲ ಭ್ರಮೆಯು. ಕಾಂಗ್ರೆಸವು ಯಾವ ಜಾತಿ. ಯಾವ ಪಕ್ಷದ್ದೂ ಅಲ್ಲ. ಅದರಲ್ಲಿ ನೀವು ಸೇರಿಕೊಂಡಿಲ್ಲೆಂದು ಬ್ರಾಹ್ಮಣರದಾಗಿದೆ. ಲೋಕಲಬೋರ್ಡ ಮ್ಯುನಿಸಿಪಾಲಿಟಿಗಳನ್ನು ನೀವು ಬ್ರಾಹ್ಮಣರಿಂದ ತಕ್ಕೊಂಡಂತೆ, ಕಾಂಗ್ರೆಸವನ್ನೂ ತಕ್ಕೊಳ್ಳಬಹುದು. ಮ್ಯುನಿಸಿಪಾಲಿಟಿ, ಲೋಕಲಬೋರ್ಡುಗಳಂತೆ ಮಾತ್ರ ಅಲ್ಲಿ ಸ್ವಾರ್ಥ ಸಾಧಿಸಲಿಕ್ಕೆ ಶಕ್ಯವಿಲ್ಲ. ಇದಕ್ಕೆ ವಿರುದ್ಧವಾಗಿ ಸ್ವಾರ್ಥತ್ಯಾಗ ಮತ್ತು ಧೈರ್ಯಬೇಕು ಈ ತರದ ಸ್ವಾರ್ಥತ್ಯಾಗ ತೋರಿಸಿರಿ ಅಸೆಂಬ್ಲಿಗೆ ಹೋಗಬೇಕೆಂದು ಹೇವ ತೊಟ್ಟಂತೆ, ಅಖಿಲ ಇಂಡಿಯಾ ವರ್ಕಿಂಗ ಕಮೀಟಿಗೆ ಹೋಗಿ ಡಾಕ್ಟರ ಹರ್ಡೀಕರ ಸ್ಥಳವನ್ನು ಆಕ್ರಮಿಸಿರಿ ಕರ್ನಾಟಕದಲ್ಲಿ ಈಗ ತೋರಿಬಂದ ಜಾಗ್ರತೆಯು ವೀರಶೈವರು ಸೇರಿದ್ದರಿಂದಲೇ ಉಂಟಾಗಿರುತ್ತದೆ. ಸಾಮಾನ್ಯ ಜನತೆಯಲ್ಲಿ ಹೊರಟಿರುವ ಪ್ರವಾಹಕ್ಕೆ ವಿಶಿಷ್ಟ ರೂಪ ಕೊಡಲಿಕ್ಕೆ ನಿಮ್ಮಂಥ ಮುಖಂಡರು ಮುಂದೊರೆದು ಬರುವದು ಅಗತ್ಯವದೆ. ಆದ್ದರಿಂದ ಸ್ವತಂತ್ರ ವಿಚಾರ ಮಾಡದೆ, ಎಲ್ಲರೂ ಸಂಕೋಚ ವಿಚಾರ ಬಿಟ್ಟುಗೊಟ್ಟು ಕಾಂಗ್ರೆಸವನ್ನು ಸೇರಬೇಕು.

ಸಭೆಯಲ್ಲಿ ಪಾಸಾದ ಠರಾವುಗಳನ್ನು ಈ ಮೊದಲು ಪ್ರಸಿದ್ಧ ಮಾಡಿದ್ದೇವೆ. ಸಂಪೂರ್ಣ ಉತ್ಸಾಹ, ಕಾಂಗ್ರೆಸ ಕಾರ್ಯದಲ್ಲಿ ದೇಹದಂಡನೆ ಮಾಡಬೇಕೆಂಬ ಅಭಿಮಾನದಿಂದ ಸಭೆಯು ವಿಸರ್ಜನೆಯಾಯಿತು.

ಬಾಂಬಿನಿಂದ ಬ್ಯಾಂಕು ಹಾರಿತು.

——(೦)——

ಅಮೇರಿಕೆಯಲ್ಲಿ ಸ್ಟಾಕಯಾರ್ಡ ನ್ಯಾಶನಲ ಬ್ಯಾಂಕಿಗೆ ಒಬ್ಬ ಕಳ್ಳನು ಕಯ್ಯಲ್ಲಿ ಕರೇ ನಿಶಾನೆ ಮತ್ತು ಒಂದು ಚೀಲ ಹಿಡಕೊಂಡು ಹೋಗಿ, ವ್ಹಾಯಿಸ ಪ್ರೆಸಿಡೆಂಟನಿಗೆ ಎರಡು ಸಾವಿರ ಪವನು ಕೊಡೆಂದನು. ಆತನು ಕೊಡದಾಗಲು, ಕಳ್ಳನು ಚೀಲವನ್ನು ನೆಲಕ್ಕಪ್ಪಳಿಸಿದನು. ಬಾಂಬು ಭಯಂಕರವಾಗಿ ಹಾರಿ, ಕಳ್ಳನನ್ನು ಚೂರುಚೂರು ಮಾಡಿತು. ವ್ಹಾಯಿಸಪ್ರೆಸಿಡೆಂಟನನ್ನು ಕೊಂದಿತು. ಬ್ಯಾಂಕಿನ ಕಟ್ಟಡವನ್ನೂ ಬಹುವಾಗಿ ನಾಶಗೊಳಿಸಿತು.

ಸಂಸ್ಥಾನಿಕರ ವತಿಯಿಂದ ದಿವಾಣರೆಂದು ರಾ. ಬ. ಲಠ್ಠೆಯವರು ರಾವುಂಡ ಟೇಬಲ ಪರಿಷತ್ತಿಗಾಗಿ ಲಂಡನಕ್ಕೆ ಹೋಗುವರು.

ಸ್ಪೇಶಲ ಟ್ರೇನಿನಿಂದ ಯರವಡೆಗೆ ಪಿತಾಪುತ್ರರ ಆಗಮನ.

ನಿನ್ನಿನಿಂದ ಸಂಧೀ ವಿಚಾರ.

ಮಹಾತ್ಮಾ ಗಾಂಧಿಯವರ ಕೂಡ ಒಡಂಬಡಿಕೆಯ ವಿಷಯವಾಗಿ ಸಂಭಾಷಣೆ ಮಾಡಲು ಹಿಂದುಸ್ಥಾನ ಸರಕಾರದವರು ಸಮ್ಮತಿ ಕೊಟ್ಟರು. ಆದರೆ ಅವರೆಂದು ಯರವಡೆಗೆ ಬರುವದೆಂಬದನ್ನು ಗುಪ್ತವಾಗಿಟ್ಟರು. ಸರಕಾರದವರು ಮೊದಲು ರೇಲ್ವೆ ಕಂಪನಿಯವರಿಗೆ ತಿಳಿಸಿ, ಸ್ಪೇಶಲ ಟ್ರೇನಿನ ವ್ಯವಸ್ಥೆ ಮಾಡಿದರು. ಬಳಿಕ ಆದಿತ್ಯವಾರ ಪ್ರಾತಃಕಾಲದಲ್ಲಿ ರೇಲ್ವೆ ಮತ್ತು ಡಿಸ್ಟ್ರಿಕ್ಟ ಪೋಲೀಸರಿಗೆ ಅಂದು ರಾತ್ರಿ ನೈನಿತಾಳದಿಂದ ಪುಣೆಗೆ ಸ್ಪೇಶಲ ಟ್ರೇನು ಹೋಗುವದೆಂದೂ ಈ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಬೇಕೆಂದೂ ಸೂಚಿಸಿದರು. ಆ ಪ್ರಕಾರ ಅವರು ಎಲ್ಲ ವ್ಯವಸ್ಥೆ ಮಾಡಿಕೊಂಡರು. ಮತ್ತು ಅಂದೇ ಸಾಯಂಕಾಲದಲ್ಲಿ ಪಂಡಿತರ ಕುಟುಂಬದವರಿಗೆ ಈ ವರ್ತಮಾನ ತಿಳಿಸಿದರು ಶ್ರೀ. ಸೌ|| ಮೋತಿಲಾಲ ನೆಹರು ಇವರ ಸೊಸಿ, ಮಕ್ಕಳು ಅಳಿಯಂದಿರು ಮತ್ತು ಬೇರೆ ಹತ್ತಗಡೆಯವರನ್ನು ಕೂಡಿಕೊಂಡು ಮೋಟಾರಿನಿಂದ ನೈನಿತಾಳಕ್ಕೆ ಬಂದರು. ಬಾಗಿಲದಲ್ಲಿ ಪಂಡಿತದ್ವಯರ ಕೂಡ ಪುಣೆಗೆ ಬರಲಿಕ್ಕೆ ಪೋಲೀಸ ಅಮಲದಾರರು ಸಿದ್ಧರಾಗಿ ನಿಂತಿದ್ದರು. ಇವರ ಕೂಡ ಮಾತಾಡುತ್ತಾ ನಿಂತಿರುವಾಗ ಪಂಡಿತದ್ವಯರು ಮೋಟಾರದಲ್ಲಿ ಕೂತೇ ತುರಂಗದಿಂದ ಹೊರಗೆ ಬಂದರು. ಎಲ್ಲರೂ ಸ್ಟೇಶನಕ್ಕೆ ಬಂದರು. ಬಂಡಿ ಹೊರಡಲಿಕ್ಕೆ ಹದಿನೈದೇ ನಿಮಿಷವಿತ್ತು. ಚಂದ್ರಪ್ರಕಾಶ ಸ್ವಚ್ಛವಾಗಿದ್ದಿಲ್ಲ. ಪಂಡಿತ ಮೋತಿಲಾಲರು ಖಾಕಿ ಅರಿವೆ ತೊಟ್ಟಿದ್ದರಿಂದ, ಬೇರೆಯವರಿಗೆ ಅವರ ಗುರ್ತು ಚನ್ನಾಗಿ ಹತ್ತಲಿಲ್ಲ. ಪಂಡಿತ ಜವಾಹರಲಾಲರು ಬಿಳಿ ಖಾದೀ ಧಾರಣ ಮಾಡಿದ್ದರಿಂದ ಕೂಡಲೆ ಅವರ ಗುರ್ತು ಹತ್ತಿತು. ತುಸು ಹೊತ್ತು ಇವರು ಮನೆಯವರ ಕೂಡ ಮಾತಾಡಿದರು. ಗಂಟೆಯಾದ ಕೂಡಲೆ ತಮಗಾಗಿ ಕಾದಿಟ್ಟ ಫರ್ಸ್ಟಕ್ಲಾಸ ಡಬ್ಬಿಯಲ್ಲಿ ಕೂತರು. ಇವರ ಸಂಗಡ ಒಬ್ಬ ಮುಸಲಮಾನ ಮತ್ತು ಒಬ್ಬ ಯುರೋಪಿಯನ್ನ ಡೆಪ್ಯುಟಿ ಸುಪರಿಂಡೆಂಟರು ಕೂತರು. ಬಂಡಿಯಲ್ಲಿ ಇನ್ನೊಂದು ಫಸ್ಟಕ್ಲಾಸ, ಒಂದು ಥರ್ಡಕ್ಲಾಸ ಮತ್ತು ಒಂದು ಬ್ರೆಕ ಇಷ್ಟೇ ಇದ್ದವು. ಥರ್ಡದಲ್ಲಿ ಬೇರೆ ಪೋಲಿಸರು ಕೂತರು. ಬಂಡಿ ಹೊರಡುವಾಗ ಕೂಡಿದ ಜನರು ಜಯಜಯಕಾರ ಮಾಡಿದರು. ತಂದೆಯು ತುಸು ಸೋತಂತೆಯೂ ಮಗನು ಸಂಪೂರ್ಣ ಆನಂದ ವೃತ್ತಿಯಲ್ಲಿದ್ದಂತೆಯೂ ಕಂಡು ಬಂತು.

ಇವರ ಸಂಗಡ ಡಾಕ್ಟರ ಸಯ್ಯದ ಮಹಮುದರನ್ನೂ ಕರೆತಂದಿದ್ದಾರೆ.

ಬಂಡಿಯು ಮಂಗಳವಾರ ರಾತ್ರಿ ಒಂಭತ್ತಕ್ಕೆ ಖಡಕಿ ಸ್ಟೇಶನಕ್ಕೆ ಬಂತು. ಇಲ್ಲಿ ಇವರನ್ನು ಇಳಿಸಿಕೊಂಡು ನೀಟಾಗಿ ಯರವಡೆಗೆ ಕರಕೊಂಡು ಹೋದರು. ಅಂದೇ ಸಾಯಂಕಾಲದಲ್ಲಿ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಪುಣೆಗೆ ಬಂದರು. ಬುಧವಾರ ಮಧ್ಯಾಹ್ನದಲ್ಲಿ ಪ್ರಾರಂಭವಾಗುವ ಚರ್ಚೆಯ ಮುಂಚೆ ಪಂಡಿತದ್ವಯರಿಗೂ ಮಹಾತ್ಮರಿಗೂ ಪರಸ್ಪರ ವಿಚಾರ ವಿನಿಮಯ ಮಾಡಲಿಕ್ಕೆ ಅವಕಾಶವಾಗಬೇಕೆಂದು ಈ ವ್ಯವಸ್ಥೆ ಮಾಡಿದ್ದರು. ಮಹಾತ್ಮರ ಹತ್ತರ ಅ್ಯಾಡವೋಕೇಟ ಮುನಸಿ ಮೊದಲಾದವರಿದ್ದರು. ಪಂಡಿತರಿಗೆ ಸ್ಥಳಾನುಕೂಲತೆಯಾಗಲೆಂದು ಇವರನ್ನು ಠಾಣೆಗೆ ಕರಕೊಂಡು ಹೋದರು. ಮತ್ತು ಸರದಾರ ಪಟೇಲ ಜಯರಾಮ ದೌಲತರಾಮರನ್ನು ಯರವಡೆಗೆ ಕರಕೊಂಡು ಬಂದರು. ಅಲ್ಲೇನು ನಡೆಯಿತೆಂಬದನ್ನು ಕೇಳಲು ಜಗತ್ತೇ ಆತುರವಾಗಿರುತ್ತದೆ.

ಬಂಕಾಪೂರದ ಬಹಾದ್ದೂರಿಯ ದ್ವಿತೀಯಾವೃತ್ತಿಯು.

ಹೋದ ವಾರದಲ್ಲಿ ಬಂಕಾಪೂರದವರೂ, ಸುತ್ತಲಿನ ಬೇರೆ ಗ್ರಾಮಗಳ ಜನರೂ ತೋರಿಸಿದ ಬಹಾದ್ದೂರಿಯು ಕೇವಲ ಪೂರ್ಣವಾಗಿದ್ದಿಲ್ಲ. ಅಲ್ಲಿದ್ದ ಏಳು ಸಾವಿರ ಗಿಡಗಳಲ್ಲಿ ಮೂರೇ ಸಾವಿರ ಗಿಡಗಳ ಸಂಹಾರವಾಗಿತ್ತು. ಉಳಿದ ಗಿಡಗಳನ್ನು ಆಚೆ ಮೊನ್ನೆ ಸೋಮವಾರ ದಿವಸ ನಿರ್ಮೂಲ ಮಾಡಿದರು. ಆಗ ಗಿಡಗಳನ್ನು ಕಡಿಯುತಕ್ಕವರಷ್ಟೇ ಹೋಗಿದ್ದರು. ಬಂದೋಬಸ್ತಿಗೆಂದು ಮೂವರು ಸಬ್ಬ ಇನ್ಸಪೇಕ್ಟರರು ೫೦ ಜನ ಸಶಸ್ತ್ರ ಸಿಪಾಯಿರೊಂದಿಗೆ ಬಂದಿದ್ದರು. ಯಾವ ಗೊಂದಲವಿಲ್ಲದೆ, ವಿಘ್ನವಿಲ್ಲದೆ ಸಂಹಾರ ಕೃತ್ಯವು ಯಶಸ್ವಿಯಾಗಿ ನೆರವೇರಿತು. ಈಳಗೇರ ಒಪಯ್ಯನವರು ಸಾಮಾಜಿಕ ಬಹಿಷ್ಕಾರಕ್ಕಾಗಿ ಬಳ್ಳೇ ಹಣ್ಣಿಗೆ ಬಂದಿದ್ದು, ಊರ ಜನರ ಕ್ಷಮೆ ಬೇಡಿಕೊಳ್ಳುವ ಸಂಧಾನ ಹಚ್ಚಿರುತ್ತಾರೆಂದು ಅಲ್ಲಿಂದ ಬಂದ ವರ್ತಮಾನವಾಗಿದೆ.

ಎಂಜಿನದ ಮುಂದೆ ಸತ್ಯಾಗ್ರಹ.

ಗೋಧ್ರಾದಿಂದ ಅಹಮದಾಬಾದಿಗೆ ಬರುವ ಲೋಕಲ ಬಂಡಿಯು ಉಮರೇಡ ಸ್ಟೇಶನಕ್ಕೆ ಬಂತು. ಆಗ ಇನ್ನೂ ರಾತ್ರಿಯಿತ್ತು. ಬಂಡಿಯೊಳಗಿನ ಎಲ್ಲ ದೀಪಗಳು ಆರಿಹೋ[illegible]. ಪ್ರಯಾಣಿಕರು ಎಷ್ಟು ಹೇಳಿದರೂ ದೀಪ ಹಚ್ಚಲಿಲ್ಲ. ಆಗ ಇನ್ನೂರು ಜನರು ಬಂಡಿಯಿಂದಿಳಿದು, ಇಂಜಿನದ ಮುಂದೆ ಸತ್ಯಾಗ್ರಹ ಮಾಡಿ ನಿಂತರು. ಆಗ ಸ್ಟೇಶನದ ಅಧಿಕಾರಿಗಳು ದೀಪ ಹಚ್ಚಿದರು. ಪ್ರಯಾಣಿಕರು ಬಂಡಿಯಲ್ಲಿ ಕೂತರು. ಮುಂದೆ ಬಂಡಿ ಸಾಗಿತು.

ಊರೂರಿಗೆ ಬಹಾದ್ದೂರ ಮ್ಯಾಜಿಸ್ಟ್ರೇಟರ ಗೊಂಬೆಗಳನ್ನು ನಿಲ್ಲಿಸಬೇಕು.

ಈಗಿನ ದಬ್ಬಾಳಿಕೆಯಲ್ಲಿ ಸರಕಾರದ ಪ್ರೀತಿಯನ್ನು ದೊರೆಕಿಸಲು ಮ್ಯಾಜಿಸ್ಟ್ರೇಟರು ಒಬ್ಬರಮೇಲೊಬ್ಬರು ದಬ್ಬಾಳಿಕೆಯಲ್ಲಿ ಹಿರಿದಾಗಲು ಸ್ಪರ್ಧೆಮಾಡುತ್ತಲಿದ್ದಾರೆ ಅವರಲ್ಲಿ ಗುಂಟೂರಿನ ಸ್ಟೂವರ್ಟ, ಮುಂಬಯಿಯ ದಸ್ತೂರ, ಫರ್ನಾಂಡೀಜ ಮೊದಲಾದವರು ಅಗ್ರಗಣ್ಯರಿದ್ದಾರೆ. ಇವರ ಹೆಸರು ಬಹುದಿವಸವಿರುವಂತೆ ಸರಕಾರದವರು ತಮ್ಮ ವೆಚ್ಚದಿಂದ ಇವರ ಗೊಂಬೆಗಳನ್ನು ಮಾಡಿಸಿ, ಅವನ್ನು ಅಲ್ಲಲ್ಲಿ ನಿಲ್ಲಿಸಬೇಕೆಂಬ ಸೂಚನೆಯು ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಬಂದಿದೆ. ಒಳ್ಳೇ ಉಪಕಾರಿಯಾದ ಮ್ಯಾಜಿಸ್ಟ್ರೇಟರ ಒಂದು ಯಾದಿಯನ್ನು ಮಾಡಿ ಅವರ ಗೊಂಬೆಗಳನ್ನು ಮಾಡಿಸಬೇಕು ಮತ್ತು ದೊಡ್ಡ ಸಮಾರಂಭದಿಂದ ಅವನ್ನೇ ನಿಲ್ಲಿಸಬೇಕು. ಇವುಗಳ ಕೂಡ ಧಾರವಾಡದ ಗೋಳೀಬಾರಿನಲ್ಲಿ ಹೆಸರು ಪಡೆದಂಥ ಕಾಮದಾರರ ಗೊಂಬೆಗಳನ್ನು ಮಾಡಿ, ಮಾರ್ಕೆಟಿನಲ್ಲಿ ಗಡಂಗದ ಹತ್ತಿರಿರುವ ಬೈಲಿನಲ್ಲಿ ನಿಲ್ಲಿಸಬೇಕೆಂದು ಸೂಚಿಸುವದು ಅಪ್ರಸ್ತುತವಾಗಲಾರದು.

ಪೇಶಾವರ ಮತ್ತು ಬಂಗಾಲಿ ಮುಸಲಮಾನರಿಗೆ ಹೊಡದಾಟ.

ಕಲಕತ್ತೆಯಲ್ಲಿರುವ ಪೇಶಾವರದ ಮುಸಲಮಾನರು ಕಾಂಗ್ರೆಸ ಪಕ್ಷದವರು; ಬಂಗಾಲಿ ಮುಸಲಮಾನರು ಮೌ. ಶೌಕತಲ್ಲಿಯವರ ಪಕ್ಷದವರು. ಅಲ್ಲಿ ಕೂಡಿದ ಒಂದು ಸಭೆಯಲ್ಲಿ ಉಭಯ ಪಕ್ಷಗಳಿಗೂ ಹೊಡದಾಟವಾಗಿ, ಅನೇಕರು ಘಾಯ ಹೊಂದಿದರು. ಪೇಶಾವರದವರು ಅನುಭವಿಸುತ್ತಿರುವ ದುಃಖತಾಪಗಳು ಬಂಗಾಲಿಗಳಿಗೇನು ಗೊತ್ತು?

ಸುರಂಗದಿಂದ ಅಟಕದ ಸೇತುವೆಯನ್ನು ಹಾರಿಸಬೇಕೆಂದು ಅಪ್ರಿಡಿಗಳು ರಹಸ್ಯವಾಗಿ ವಿಚಾರ ಮಾಡುತ್ತಲಿದ್ದಾರೆಂದೂ ಒಂದು ವರ್ತಮಾನವುಂಟು.

ಧಾರವಾಡ–

ಸಿಂದೀ ಗಿಡ ಕಡಿದ ಆರೋಪದಿಂದ ಕೊರಡೂರವರ ಮೇಲೆ ಹಾಕಿದ ಖಟ್ಲೆಯು ಯೋಗ್ಯ ಪುರಾವೆ ಸಿಗದ್ದರಿಂದ ತೆಗೆದು ಹಾಕಲಾಯಿತು.

ನೋಟೀಸಿಗೆ ಉತ್ತರ

ದುರಗಿ ಕೋಮ ದ್ಯಾವಪ್ಪಾ ಕಂಬಳಿಯವರ ಸಾ॥ ಚಳಗೇರಿ ಹಾಲಿವಸ್ತಿ ರಾಣೆಬೆನ್ನೂರ ಇವರಿಗೆ-

ಈ ಕೆಳಗೆ ಸಹ ಮಾಡಿದವನು ಉತ್ತರ ಕೊಡುವದೇನಂದರೆ-

ನೀನು ನನ್ನ ಸಂಗಡ ೮-೫ ವರ್ಷ ಸುಶೀಲತ ಬಾಳ್ವೆ ಮಾಡಿಕೊತ ಒಂದು ಗಂಡು ಕೂಸು ಹಡೆದಿರುತ್ತೀದಿ ಹೀಗಿರತ ನಿನ್ನ ಚಿಗವ್ವನ ಮನಿ ರಾಣೇಬೆನ್ನೂರಿಗೆ ೨-೩ ಸಾರೆ ಹಬ್ಬಕ್ಕೆ ಹೋದಿ ಆ ಲಾಗಾಯ್ತು ನನ್ನ ವ ನನ್ನ ಮಗನ ಮೇಲೆ ವೈಮನಸ್ಸು ಮಾಡತಾ ವ್ಯಭಿಚಾರದ ವ್ಯಸನದಿಂದ ಮೂರು ವರ್ಷದ ಗಂಡು ಕೂಸಿನ ಪರಿವೆ ಇಲ್ಲದೆ ನಾನಿಲ್ಲದ ವೇಳೆಯಲ್ಲಿ ಆ ಕೂಸನ್ನು ಬಿಟ್ಟು ಮೈಮೇಲೆ ಇಟ್ಟ ದಾಗಿನೆ ಸಹಿತ ತಗೊಂಡು ರಾಣೇಬೆನ್ನೂರಿಗೆ ೨ ತಿಂಗಳ ಹಿಂದೆ ನೀನು ಓಡಿಹೋಗಿ ನನ್ನ ನಿನ್ನ ಸಮ್ಮಂಧ ತಪ್ಪಿಸಿಕೊಂಡು ಸ್ವೇಚ್ಛೆಯಿಂದ ಇರಬೇಕೆಂಬ ದುಷ್ಟ ಇರಾದೆಯಿಂದ ನಿನ್ನ ಸ್ನೇಹಿತರ ಮಾತು ಕೇಳಿ ಇಲ್ಲದ್ದೊಂದು ಖೊಟ್ಟಿ ಮಜಕೂರ ಕಾಣಿಸಿ ನನಗೆ ಟಪಾಲದ್ವಾರ ನೋಟೀಸು ಕೊಟ್ಟಿರುತ್ತೀದಿ ಇದರ ಮೇಲಿಂದ ನೀನು ಪೂರ್ಣ ವ್ಯಭಿಚಾರಕ್ಕೆ ಬಿದ್ದಂತೆ ನನಗೆ ತಿಳಿಯುತ್ತದೆ

ಆದರೂ ಚಿಂತೆ ಇಲ್ಲಾ ಇನ್ನಾದರೂ ನಿನಗೆ ಬುದ್ಧಿ ಹೇಳಿ ಚಲೋ ರೀತಿಯಿಂದ ಬಾಳ್ವೆ ಮಾಡಬೇಕೆಂಬ ಇರಾದೆಯಿಂದ ನಿನಗೆ ನೋಟೀಸಮೂಲಕ ತಿಳಿಸುತ್ತೇನಲ್ಲಾ ಈ ನೋಟೀಸ ಮುಟ್ಟಿದ ೧೫ ದಿವಸದಲ್ಲಿ ದಾಗಿನೆ ಸಹಿತ ತಗೊಂಡು ನನ್ನಲ್ಲಿ ಬಂದು ಯೋಗ್ಯ ರೀತಿಯಿಂದ ಬಾಳ್ವೆ ಮಾಡಿಕೊತ ಹೋಗತಕ್ಕದ್ದು ಜರ ನೀನು ಇದಕ್ಕೆ ತಪ್ಪಿದರೆ ನಿನಗೆ ಇದೇ ನನ್ನ ಸೋಡಚೀಟಿ ಅಂತ ತಿಳಿಯಬೇಕು ಆನಂತರ ನನ್ನ ನಿನ್ನ ಸಮ್ಮಂಧ ಯಾವತರಹ ಇರುವದಿಲ್ಲಾ ಸದರ ಮಗನ ಮೇಲೆ ನಿನ್ನ ಮಾಲ್ಕಿ ಯೇನೂ ಇಲ್ಲಾ ಮುಂದಾದರೂ ನಿನ್ನ ಹೊಟ್ಟಿಲಿ ಹುಟ್ಟಿದ ಮಕ್ಕಳೂ ನಿನಗೆ ಯಾವ ತರದ ಸಮ್ಮಂಧವಿಲ್ಲಾ ಆ ಮೇಲೆ ನೀನು ಮೈದ ದಾಗೀನೆ ಸಮ್ಮಂಧಿ ನಾನು ಅಲಾಹಿದಾ ಕೆಲಸ ನಡಸುತ್ತೇನೆ ತಿಳಿಯುವದು

ತಾರೀಖು ೭ ೮-೧೯೩೦ ಇಸ್ವಿ

ಸಹಿ ದ್ಯಾವಪ್ಪಾ ತಂದಿ ಹಾಲಪ್ಪಾ ಕಂಬಳಿ

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! [illegible] ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ. ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

[illegible] ನೀವು ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತ ಓದಿ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಆಗಸ್ಟ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸೀಫ ಕೋರ್ಟಸಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಚಿದ್ದಿ ವ ತಿಸಂ ನಾಟುಗಳು

ಸಾಗವಾನಿ ಯಲಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಶಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧' ಧಾರವಾಡ ಗುರುವಾರ ತಾರೀಖು ೧೪ ನೇ ಅಗಸ್ಟ ೧೯೩೦ (ಸಂಚಿಕೆ ೧೭೯

ಮಾರಾಟಕ್ಕೆ ಸಿದ್ಧವಾಗಿದೆ-

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾವಧೂತರ ಅಸಲೀರ್ಜ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತೇವೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯ ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ಎರಡ ಹಪ್ತ್ಯಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ವದ್ಯ ೫

ಹಾವೇರಿಯಲ್ಲಿ ನಡೆದ ರಾಜಕೀಯ ಸಮಾರಂಭ.

—(೦)—

ವೀರಶೈವರಲ್ಲಿ ಅಪೂರ್ವ ಉತ್ಸಾಹ.

——(೦)——

ತಾರೀಖು ೧೦ ಅಗಸ್ಟ ೧೯೩೦ನೆಯ ಆದಿತ್ಯವಾರ ದಿವಸ ಹಾವೇರಿಯಲ್ಲಿ ನೆರೆದ ವೀರಶೈವರ ರಾಜಕೀಯ ಪರಿಷತ್ತು ಆ ಜನಾಂಗದ ಸ್ವತಂತ್ರ ಇತಿಹಾಸದಲ್ಲಿ ಬಂಗಾರದ ಅಕ್ಷರಗಳಿಂದ ಬರೆಯುವಂತಾಯಿತು. ವೀರಶೈವ ಜನಾಂಗದಲ್ಲಿ ಪರಮಪೂಜ್ಯರೂ, ಸಾಧುಶ್ರೇಷ್ಠರೂ, ರೋಮರಂಧ್ರದಲ್ಲಿ ಹಗಲಿರುಳು ಖಾದೀ ಧ್ಯಾನಪರರೂ ಆದಂಥ ಶ್ರೀ. ಮಂಜಪ್ಪ ಹರ್ಡೇಕರರು ಅಗ್ರಸ್ಥಾನವನ್ನು ವಹಿಸಿದ್ದರು. ಸಭೆಯು ಸಂಪೂರ್ಣ ಪ್ರಾತಿನಿಧಿಕ ಸ್ವರೂಪದ್ದಾಗಿತ್ತು. ಉತ್ತರದಲ್ಲಿ ಸೊಲ್ಲಾಪೂರ ಹಿಡಿದು ದಕ್ಷಿಣದಲ್ಲಿ ಶಿರ್ಸಿ ಸಿದ್ದಾಪೂರದ ತನಕ ಪ್ರತಿನಿಧಿಗಳು ಬಂದಿದ್ದರು. ಬೈಲಹೊಂಗಲದ ಶ್ರೀ. ಮೆಟಗುಡ್ಡ, ಬೆಳಗಾವಿಯ ಹ್ವಿ ಹ್ವಿ ಪಾಟೀಲ, ವಿಜಾಪೂರದ ಶ್ರೀ. ಮರುಳಾರಾಧ್ಯಶಾಸ್ತ್ರಿಯವರು, ಬಾಗಲಕೋಟೆಯ ಶ್ರೀ. ಜಂಗಿನ ಮುರಿಗಯ್ಯನವರು, ಹುನಗುಂದದ ತರುಣ ಸಂಘದ ಬಸವಶೆಟ್ಟೆಪ್ಪನವರು, ಧಾರವಾಡದಿಂದ ಶ್ರೀ. ಕೇಸರಿ, ಹುಂಡೇಕಾರ, ಗಿರಿಮಲ್ಲಪ್ಪಾ ನೆಲವಡಿ, ಹುಬ್ಬಳ್ಳಿಯಿಂದ ಶ್ರೀ. ಕೆಂಪಣ್ಣನವರ ಮತ್ತು ಶ್ರೀ. ಪುರಾಣಿಕ ಇವರೇ ಮೊದಲಾದವರಲ್ಲದೆ, ಮೈಸೂರ ಸಂಸ್ಥಾನದ ಒಂದು ದೊಡ್ಡ ಪಟ್ಟಣವಾದ ದಾವಣಗೇರಿಯಿಂದ ವಕೀಲ, ಶರ್ಕಳ, ಸುಖವಸ್ತು ಮೊದಲಾಗಿ ೪೦ ಜನ ಪ್ರಮುಖರು ಬಂದಿದ್ದರು. ಇದೇ ಪ್ರಕಾರ ಬ್ಯಾಡಗಿ, ರಾಣೇಬಿನ್ನೂರ ಹಾನಗಲ್ಲ, ಗದಗ ಮುಂತಾದ ಸ್ಥಳಗಳಿಂದಲೂ ಬಹು ಜನರು ದಯಮಾಡಿಸಿದ್ದರು. ಐನೂರು ಪ್ರತಿನಿಧಿಗಳು ಬಂದಿದ್ದರೆಂದು ಸಹಜವಾಗಿ ಹೇಳಬಹುದು. ದೂರದೂರಿನವರಾಗಿ ಅನಾನುಕೂಲತೆಯ ಮೂಲಕ ಸಭೆಗೆ ಬರಲಿಕ್ಕಾಗದಂಥವರು ಸಹಾನುಭೂತಿಯ ಪತ್ರ ಮತ್ತು ತಾರುಗಳನ್ನು ಕಳಿಸಿದ್ದರು. ಧಾರವಾಡದ ಶ್ರೀ. ಹೊಸಪೂರಮಠ ವಕೀಲರು ಬರೆದ ಪತ್ರವು ವೀರಶೈವ ತರುಣರಿಗೆ ಉತ್ತೇಜಕವಾಗಿತ್ತು. ಮುಂಬಯಿ, ಅಮರಾವತಿ, ಯವತಮಾಳ, ಮುಂತಾದ ದೂರ ದೂರಿನವರು ತಾರುಗಳನ್ನು ಕಳಿಸಿದ್ದರು. ಹಾವೇರಿಯ ಬ್ರಾಹ್ಮಣರಾದ ವಕೀಲರೂ ಮಹಾಜನರೂ ಸಭೆಯ ಬಗ್ಗೆ ಪೂರ್ಣ ಆದರವುಳ್ಳವರಾಗಿ, ಪ್ರೇಕ್ಷಕರಾಗಿ ಬಂದಿದ್ದರು. ಈ ಎಲ್ಲ ಸಹಾನುಭೂತಿಯ ಪತ್ರ, ತಾರು ಮತ್ತು ಪರಮತೀಯರ ಆಗಮನಕ್ಕಿಂತ ಹೆಚ್ಚಾದದ್ದೊಂದು ಸಂಗತಿಯನ್ನು ಹೆಚ್ಚು ಪ್ರಶಂಸನೀಯವಾಗಿ ಹೇಳತಕ್ಕದ್ದಿದೆ. ಉಪ್ಪಿನ ಕಾಯದೆಯನ್ನು ಮುರಿದ ಬಗ್ಗೆ ಶಿಕ್ಷೆ ಹೊಂದಿ ಹಿಂಡಲಗಿಯ ತುರಂಗದಲ್ಲಿ ಅಜ್ಞಾತವಾಸಿಯಾಗಿರುವ ಶ್ರೀ. ಮೆಂಡಗುಪ್ಪಿ ಮಹಾದೇವಪ್ಪ ಮತ್ತು ಬಸಪ್ಪಾ ಮಾಗಾವಿ ಮೊದಲಾದವರು ಕಳಿಸಿದ ಸಂದೇಶವನ್ನು ಓದುವಾಗ ಪ್ರತಿಯೊಬ್ಬನ ಅಂತಃಕರಣವು ದ್ರವಿಸಿ, ಸಭೆಯ ವಾತಾವರಣದಲ್ಲಿ ಒಂದು ಪ್ರಕಾರದ ಚೈತನ್ಯವುಂಟಾಗಿ ಪ್ರತಿಯೊಬ್ಬನಲ್ಲಿಯೂ ರಾಷ್ಟ್ರಾಭಿಮಾನದ ದಿವ್ಯ ಜ್ಯೋತಿಯುತ್ಪನ್ನವಾಯಿತು. ಆ ಸಂದೇಶವೇನಂದರೆ-

ರಾಷ್ಟ್ರದ ಏಳ್ಗೆಯಾದ ಹೊರತು ಜನಾಂಗದ ಏಳ್ಗೆಯಾಗಲು ಶಕ್ಯವಿಲ್ಲ. ಆದುದರಿಂದ ಕರ್ನಾಟಕದ ಮುಖ್ಯ ಜನಾಂಗವಾದ ವೀರಶೈವರು ಯಾವ ತರದ ಸಂಕೋಚವನ್ನು ಎಷ್ಟು ಮಾತ್ರವೂ ತಕ್ಕೊಳ್ಳದೆ, ಕಾಂಗ್ರೆಸದಲ್ಲಿ ಸಂಪೂರ್ಣವಾಗಿ ಸೇರಿಕೊಳ್ಳತಕ್ಕದ್ದು. ಮತ್ತು ಮಹಾತ್ಮಾಜಿಯವರಿಂದ ಪ್ರಾರಂಭಿಸಲ್ಪಟ್ಟಂಥ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ, ಕರ್ನಾಟಕಕ್ಕೆ ಕೀರ್ತಿ ತರಬೇಕು. ಸಭೆಯಲ್ಲಿ

" ಈ ವರೆಗೆ ವೀರಶೈವರು ಕಾಂಗ್ರೆಸಕಾರ್ಯ ಮಾಡದಿದ್ದದ್ದು ದೊಡ್ಡ ತಪ್ಪಾಗಿರುತ್ತದೆ. ಆದುದರಿಂದ ನಾವು ಕಾಂಗ್ರೆಸದಲ್ಲಿ ಸೇರಿಕೊಂಡು ವಿಧಾಯಕ ಕಾರ್ಯಕ್ರಮವನ್ನು ಮಾಡಬೇಕೆಂದು" ನಿರ್ಣಯಿಸುವದೇ ಮುಖ್ಯ ಸಂಗತಿಯಾಗಿತ್ತು. ಸಭಾಧ್ಯಕ್ಷರಾದ ಶ್ರೀ. ಹರ್ಡೇಕರ ಮಂಜಪ್ಪನವರು ಸಮಯೋಚಿತ ಭಾಷಣ ಮಾಡಿದರು. ಅದರ ಮುಖ್ಯಾಂಶಗಳನ್ನು ನಾಳಿನ ಸಂಚಿಕೆಯಲ್ಲಿ ಕೊಡುವೆವು. ವೀರಶೈವ ರಾಜಕೀಯ ಸಂಘವೆಂಬದೊಂದು ಸಂಸ್ಥೆಯು ಬೇರೆ ಇರಬೇಕೆಂದು ಅಧ್ಯಕ್ಷರೇ ಮೊದಲಾಗಿ ಕೆಲವರ ಮತವಿತ್ತು. ಇರಬಾರದೆಂದು ಬಹುಜನದ್ದಾಗಿತ್ತು. ವಿಷಯನಿಯಾಮಕ ಕಮೀಟಿಯಲ್ಲಿ ಇದನ್ನು ವೋಟಿಗೆ ಹಾಕಲು- ಪ್ರಚಂಡ ಬಹುಮತದಿಂದ ಸ್ವತಂತ್ರ ಪಕ್ಷ ಇರಬಾರದೆಂದು ಠರಾವು ಪಾಸಾಯಿತು. ಈ ಸಮಯದಲ್ಲಿ ಶ್ರೀ. ಹೊಸಮನಿಯ. ಪರಮಣ್ಣನವರು ಮಾಡಿದ ಭಾಷಣವು ಒಳ್ಳೇ ಪರಿಣಾಮಕಾರಕವಾಯಿತು. ಅದೇನಂದರೆ-

"ಕಾಂಗ್ರೆಸವು ಬ್ರಾಹ್ಮಣರದಾಗಿರುತ್ತದೆಂಬ ವ್ಯರ್ಥವಾದ ಅಂಜಿಕೆಯಿಂದ ಪ್ರತ್ಯೇಕ ಸಂಸ್ಥೆಯಿರಬೇಕೆಂಬ ಮತವು ತೀರ ತಪ್ಪಿನದು. ಇದು ಕೇವಲ ಭ್ರಮೆಯು. ಕಾಂಗ್ರೆಸವು ಯಾವ ಜಾತಿ. ಯಾವ ಪಕ್ಷದ್ದೂ ಅಲ್ಲ. ಅದರಲ್ಲಿ ನೀವು ಸೇರಿಕೊಂಡಿಲ್ಲೆಂದು ಬ್ರಾಹ್ಮಣರದಾಗಿದೆ. ಲೋಕಲ ಬೋರ್ಡ ಮ್ಯುನಿಸಿಪಾಲಿಟಿಗಳನ್ನು ನೀವು ಬ್ರಾಹ್ಮಣರಿಂದ ತಕ್ಕೊಂಡಂತೆ, ಕಾಂಗ್ರೆಸವನ್ನೂ ತಕ್ಕೊಳ್ಳಬಹುದು. ಮ್ಯುನಿಸಿಪಾಲಿಟಿ, ಲೋಕಲಬೋರ್ಡುಗಳಂತೆ ಮಾತ್ರ ಅಲ್ಲಿ ಸ್ವಾರ್ಥ ಸಾಧಿಸಲಿಕ್ಕೆ ಶಕ್ಯವಿಲ್ಲ. ಇದಕ್ಕೆ ವಿರುದ್ಧವಾಗಿ ಸ್ವಾರ್ಥತ್ಯಾಗ ಮತ್ತು ಧೈರ್ಯಬೇಕು. ಈ ತರದ ಸ್ವಾರ್ಥತ್ಯಾಗ ತೋರಿಸಿರಿ ಅಸೆಂಬ್ಲಿಗೆ ಹೋಗಬೇಕೆಂದು ಹೇವ ಕೊಟ್ಟಂತೆ, ಆಲ ಇಂಡಿಯಾ ವರ್ಕಿಂಗ ಕಮೀಟಿಗೆ ಹೋಗಿ ಡಾಕ್ಟರ ಹರ್ಡೀಕರರ ಸ್ಥಳವನ್ನು ಆಕ್ರಮಿಸಿರಿ ಕರ್ನಾಟಕದಲ್ಲಿ ಈಗ ತೋರಿಬಂದ ಜಾಗ್ರತೆಯು ವೀರಶೈವರು ಸೇರಿದ್ದರಿಂದಲೇ ಉಂಟಾಗಿರುತ್ತದೆ. ಸಾಮಾನ್ಯ ಜನತೆಯಲ್ಲಿ ಹೊಂಟಿರುವ ಪ್ರವಾಹಕ್ಕೆ ವಿಶಿಷ್ಟ ರೂಪ ಕೊಡಲಿಕ್ಕೆ ನಿಮ್ಮಂಥ ಮುಖಂಡರು ಮುಂದೊರೆದು ಬರುವದು ಅಗತ್ಯವದೆ. ಆದ್ದರಿಂದ ಸ್ವತಂತ್ರ ವಿಚಾರ ಮಾಡದೆ, ಎಲ್ಲರೂ ಸಂಕೋಚ ವಿಚಾರ ಬಿಟ್ಟುಗೊಟ್ಟು ಕಾಂಗ್ರೆಸವನ್ನು ಸೇರಬೇಕು

ಸಭೆಯಲ್ಲಿ ಪಾಸಾದ ಠರಾವುಗಳನ್ನು ಈ ಮೊದಲು ಪ್ರಸಿದ್ಧ ಮಾಡಿದ್ದೇವೆ. ಸಂಪೂರ್ಣ ಉತ್ಸಾಹ, ಕಾಂಗ್ರೆಸ ಕಾರ್ಯದಲ್ಲಿ ದೇಹದಂಡನೆ ಮಾಡಬೇಕೆಂಬ ಅಭಿಮಾನದಿಂದ ಸಭೆಯು ವಿಸರ್ಜನೆಯಾಯಿತು.

ಬಾಂಬಿನಿಂದ ಬ್ಯಾಂಕು ಹಾರಿತು.

——(೦)——

ಅಮೇರಿಕೆಯಲ್ಲಿ ಸ್ಟಾಕಯಾರ್ಡ ನ್ಯಾಶನಲ ಬ್ಯಾಂಕಿಗೆ ಒಬ್ಬ ಕಳ್ಳನು ಕಯ್ಯಲ್ಲಿ ಕರೇ ನಿಶಾನೆ ಮತ್ತು ಒಂದು ಚೀಲ ಹಿಡಕೊಂಡು ಹೋಗಿ, ಹ್ವಾಯಿಸ ಪ್ರೆಸಿಡೆಂಟನಿಗೆ ಎರಡು ಸಾವಿರ ಪವನು ಕೊಡೆಂದನು. ಆತನು ಕೊಡದಾಗಲು, ಕಳ್ಳನು ಚೀಲವನ್ನು ನೆಲಕ್ಕಪ್ಪಳಿಸಿದನು. ಬಾಂಬು ಭಯಂಕರವಾಗಿ ಹಾರಿ, ಕಳ್ಳನನ್ನು ಚೂರುಚೂರು ಮಾಡಿತು. ಹ್ವಾಯಿಸಪ್ರೆಸಿಡೆಂಟನನ್ನು ಕೊಂದಿತು. ಬ್ಯಾಂಕಿನ ಕಟ್ಟಡವನ್ನೂ ಬಹುವಾಗಿ ನಾಶಗೊಳಿಸಿತು.

ಸಂಸ್ಥಾನಿಕರ ವತಿಯಿಂದ ದಿವಾಣರೆಂದು ರಾ. ಬ. ಲಕ್ಷ್ಮೈಯವರು ರಾವುಂಡ ಟೇಬಲ ಪರಿಷತ್ತಿಗಾಗಿ ಲಂಡನಕ್ಕೆ ಹೋಗುವರು.

ಸ್ಪೇಶಲ ಟ್ರೇನಿನಿಂದ ಯರವಡೆಗೆ ಪಿತಾಪುತ್ರರ ಆಗಮನ.

ನಿನ್ನಿನಿಂದ ಸಂಧೀ ವಿಚಾರ.

—o*o—

ಮಹಾತ್ಮಾ ಗಾಂಧಿಯವರ ಕೂಡ ಒಡಂಬಡಿಕೆಯ ವಿಷಯವಾಗಿ ಸಂಭಾಷಣೆ ಮಾಡಲು ಹಿಂದುಸ್ಥಾನ ಸರಕಾರದವರು ಸಮ್ಮತಿ ಕೊಟ್ಟರು. ಆದರೆ ಅವರೆಂದು ಯರವಡೆಗೆ ಬರುವದೆಂಬದನ್ನು ಗುಪ್ತವಾಗಿಟ್ಟರು. ಸರಕಾರದವರು ಮೊದಲು ರೇಲ್ವೆ ಕಂಪನಿಯವರಿಗೆ ತಿಳಿಸಿ, ಸ್ಪೇಶಲ ಟ್ರೇನಿನ ವ್ಯವಸ್ಥೆ ಮಾಡಿದರು. ಬಳಿಕ ಆದಿತ್ಯವಾರ ಪ್ರಾತಃಕಾಲದಲ್ಲಿ ರೇಲ್ವೆ ಮತ್ತು ಡಿಸ್ಟ್ರಿಕ್ಟ ಪೋಲೀಸರಿಗೆ ಅಂದು ರಾತ್ರಿ ನೈನಿತಾಳದಿಂದ ಪುಣೆಗೆ ಸ್ಪೇಶಲ ಟ್ರೇನು ಹೋಗುವದೆಂದೂ ಈ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಬೇಕೆಂದೂ ಸೂಚಿಸಿದರು. ಆ ಪ್ರಕಾರ ಅವರು ಎಲ್ಲ ವ್ಯವಸ್ಥೆ ಮಾಡಿಕೊಂಡರು. ಮತ್ತು ಅಂದೇ ಸಾಯಂಕಾಲದಲ್ಲಿ ಪಂಡಿತರ ಕುಟುಂಬದವರಿಗೆ ಈ ವರ್ತಮಾನ ತಿಳಿಸಿದರು. ಶ್ರೀ. ಸೌ|| ಮೋತಿಲಾಲ ನೆಹರು ಇವರ ಸೊಸಿ, ಮಕ್ಕಳು ಅಳಿಯಂದಿರು ಮತ್ತು ಬೇರೆ ಹತ್ತಿಗಡೆಯವರನ್ನು ಕೂಡಿಕೊಂಡು ಮೋಟಾರಿನಿಂದ ನೈನಿತಾಳಕ್ಕೆ ಬಂದರು. [illegible]ದಲ್ಲಿ ಪಂಡಿತದ್ವಯರ ಕೂಡ ಪುಣೆಗೆ ಒರಕ್ಷಕ ಪೋಲಿಸ ಅಮಲದಾರರು ಸಿದ್ಧರಾಗಿ ನಿಂತಿದ್ದರು. ಇವರ ಕೂಡ ಮಾತಾಡುತ್ತ ನಿಂತಿರುವಾಗ ಪಂಡಿತದ್ವಯರು ಮೋಟಾರದಲ್ಲಿ ಕೂತೇ ತುರಂಗದಿಂದ ಹೊರಗೆ ಬಂದರು. ಎಲ್ಲರೂ ಸ್ಟೇಶನಕ್ಕೆ ಬಂದರು. ಬಂಡಿ ಹೊರಡಲಿಕ್ಕೆ ಹದಿನೈದೇ ನಿಮಿಷವಿತ್ತು. ಚಂದ್ರಪ್ರಕಾಶ ಸ್ವಚ್ಛವಾಗಿದ್ದಿಲ್ಲ. ಪಂಡಿತ ಮೋತಿಲಾಲರು ಖಾಕಿ ಅರಿವೆ ತೊಟ್ಟದ್ದರಿಂದ, ಜೇಲರವರಿಗೆ ಅವರ ಗುರ್ತು ಚನ್ನಾಗಿ ಹತ್ತಲಿಲ್ಲ. ಪಂಡಿತ ಜವ್ಹೇರಲಾಲರು ಶುಭ್ರ ಖಾದೀ ಧಾರಣ ಮಾಡಿದ್ದರಿಂದ ಕೂಡಲೆ ಅವರ ಗುರ್ತು ಹತ್ತಿತು. ತುಸು ಹೊತ್ತು ಇವರು ಮನೆಯವರ ಕೂಡ ಮಾತಾಡಿದರು. ಗಂಟೆಯಾದ ಕೂಡಲೆ ತಮಗಾಗಿ ಕಾದಿಟ್ಟ ಫಸ್ಟಕ್ಲಾಸ ಡಬ್ಬಿಯಲ್ಲಿ ಕೂತರು. ಇವರ ಸಂಗಡ ಒಬ್ಬ ಮುಸಲಮಾನ ಮತ್ತು ಒಬ್ಬ ಯುರೋಪಿಯನ್ನ ಡೆಪ್ಯುಟಿ ಸುಪರಿಂಟೆಂಟರು ಕೂತರು. ಬಂಡಿಯಲ್ಲಿ ಇನ್ನೊಂದು ಫಸ್ಟಕ್ಲಾಸ, ಒಂದು ಥರ್ಡಕ್ಲಾಸ ಮತ್ತು ಒಂದು ಬ್ರೇಕ ಇಷ್ಟೇ ಇದ್ದವು. ಥರ್ಡದಲ್ಲಿ ಬೇರೆ ಪೋಲಿಸರು ಕೂತರು. ಬಂಡಿ ಹೊರಡುವಾಗ ಕೂಡಿದ ಜನರು ಜಯಜಯಕಾರ ಮಾಡಿದರು. ತಂದೆಯು ತುಸು ಸೋತಂತೆಯೂ ಮಗನು ಸಂಪೂರ್ಣ ಆನಂದ ವೃತ್ತಿಯಲ್ಲಿದ್ದಂತೆಯೂ ಕಂಡು ಬಂತು.

ಇವರ ಸಂಗಡ ಡಾಕ್ಟರ ಸಯ್ಯದ ಮಹಮುದರನ್ನೂ ಕರೆತಂದಿದ್ದಾರೆ.

ಬಂಡಿಯು ಮಂಗಳವಾರ ರಾತ್ರಿ ಒಂಭತ್ತಕ್ಕೆ ಖಡಕಿ ಸ್ಟೇಶನಕ್ಕೆ ಬಂತು. ಇಲ್ಲಿ ಇವರನ್ನು ಇಳಿಸಿಕೊಂಡು ನೀಟಾಗಿ ಯರವಡೆಗೆ ಕರಕೊಂಡು ಹೋದರು. ಅಂದೇ ಸಾಯಂಕಾಲದಲ್ಲಿ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಪುಣೆಗೆ ಬಂದರು. ಬುಧವಾರ ಮಧ್ಯಾಹ್ನದಲ್ಲಿ ಪ್ರಾರಂಭವಾಗುವ ಚರ್ಚೆಯ ಮುಂಚೆ ಪಂಡಿತದ್ವಯರಿಗೂ ಮಹಾತ್ಮರಿಗೂ ಪರಸ್ಪರ ವಿಚಾರ ವಿನಿಮಯ ಮಾಡಲಿಕ್ಕೆ ಅವಕಾಶವಾಗಬೇಕೆಂದು ಈ ವ್ಯವಸ್ಥೆ ಮಾಡಿದ್ದರು. ಮಹಾತ್ಮರ ಹತ್ತರ ಅಡ್ವಹೋಕೇಟ ಮುನಸಿ ಮೊದಲಾದವರಿದ್ದರು. ಪಂಡಿತರಿಗೆ ಸ್ಥಳಾನುಕೂಲತೆಯಾಗಲೆಂದು ಇವರನ್ನು ಠಾಣೆಗೆ ಕರಕೊಂಡು ಹೋದರು. ಮತ್ತು ಸರದಾರ ಪಟೇಲ ಜಯರಾಮ ದೌಲತರಾಮರನ್ನು ಯರವಡೆಗೆ ಕರಕೊಂಡು ಬಂದರು. ಅಲ್ಲೇನು ನಡೆಯಿತೆಂಬದನ್ನು ಕೇಳಲು ಜಗತ್ತೇ ಆತುರವಾಗಿರುತ್ತದೆ.

ಬಂಕಾಪೂರದ ಬಹಾದ್ದೂರಿಯ ದ್ವಿತೀಯಾವೃತ್ತಿಯು.

ಹೋದ ವಾರದಲ್ಲಿ ಬಂಕಾಪೂರದವರೂ, ಸುತ್ತಲಿನ ಬೇರೆ ಗ್ರಾಮಗಳ ಜನರೂ ತೋರಿಸಿದ ಬಹಾದ್ದೂರಿಯ ಕೆಲಸ ಪೂರ್ಣವಾಗಿದ್ದಿಲ್ಲ. ಅಲ್ಲಿದ್ದ ಏಳು ಸಾವಿರ ಗಿಡಗಳಲ್ಲಿ ಮೂರೇ ಸಾವಿರ ಗಿಡಗಳ ಸಂಹಾರವಾಗಿತ್ತು. ಉಳಿದ ಗಿಡಗಳನ್ನು ಆಚೆ ಮೊನ್ನೆ ಸೋಮವಾರ ದಿವಸ ನಿರ್ಮೂಲ ಮಾಡಿದರು. ಆಗ ಗಿಡಗಳನ್ನು ಕಡಿಯತಕ್ಕವರಷ್ಟೇ ಹೋಗಿದ್ದರು. ಬಂದೋಬಸ್ತಿಗೆಂದು ಮೂವರು ಸಬ್ಇನ್ಸಪೇಕ್ಟರರು ೫೦ ಜನ ಸಶಸ್ತ್ರ ಸಿಪಾಯಿರೊಂದಿಗೆ ಬಂದಿದ್ದರು. ಯಾವ ಗೊಂದಲವಿಲ್ಲದೆ, ವಿಘ್ನವಿಲ್ಲದೆ ಸಂಹಾರ ಕೃತ್ಯವು ಯಶಸ್ವಿಯಾಗಿ ನೆರವೇರಿತು. ಕುಳಗೇರಿ ಬಸಯ್ಯನವರು ಸಾಮಾಜಿಕ ಬಹಿಷ್ಕಾರಕ್ಕಾಗಿ ಒಳ್ಳೇ ಹಣ್ಣಿಗೆ ಬಂದಿದ್ದು, ಊರ ಜನರ ಕ್ಷಮೆ ಬೇಡಿಕೊಳ್ಳುವ ಸಂಧಾನ ಹಚ್ಚಿರುತ್ತಾರೆಂದು ಅಲ್ಲಿಂದ ಒಂದು ವರ್ತಮಾನವಾಗಿದೆ.

ಎಂಜಿನದ ಮುಂದೆ ಸತ್ಯಾಗ್ರಹ.

ಗೋಧ್ರಾದಿಂದ ಅಹಮದಾಬಾದಿಗೆ ಬರುವ ಲೋಕಲ ಬಂಡಿಯು ಉಮರೇಡ ಸ್ಟೇಶನಕ್ಕೆ ಬಂತು. ಆಗ ಇನ್ನೂ ರಾತ್ರಿಯಿತ್ತು. ಬಂಡಿಯೊಳಗಿನ ಎಲ್ಲ ದೀಪಗಳು ಆರಿಹೋದ ಪ್ರಯಾಣಿಕರು ಎಷ್ಟು ಹೇಳಿದರೂ ದೀಪ ಹಚ್ಚಲಿಲ್ಲ. ಆಗ ಇನ್ನೂರು ಜನರು ಬಂಡಿಯಿಂದಿಳಿದು, ಇಂಜಿನದ ಮುಂದೆ ಸತ್ಯಾಗ್ರಹ ಮಾಡಿ ನಿಂತರು. ಕಡೆಗೆ ಸ್ಟೇಶನದ ಅಧಿಕಾರಿಗಳು ದೀಪ ಹಚ್ಚಿದರು. ಪ್ರಯಾಣಿಕರು ಬಂಡಿಯಲ್ಲಿ ಕೂತರು. ಮುಂದೆ ಬಂಡಿ ಸಾಗಿತು.

ಊರೂರಿಗೆ ಬಹಾದ್ದೂರ ಮ್ಯಾಜಿಸ್ಟ್ರೇಟರ ಗೊಂಬೆಗಳನ್ನು ನಿಲ್ಲಿಸಬೇಕು.

—(೦)—

ಈಗಿನ ದಬ್ಬಾಳಿಕೆಯಲ್ಲಿ ಸರಕಾರದ ಪ್ರೀತಿಯನ್ನು ದೊರಕಿಸಲು ಮ್ಯಾಜಿಸ್ಟ್ರೇಟರು ಒಬ್ಬರಮೇಲೊಬ್ಬರು ದಬ್ಬಾಳಿಕೆಯಲ್ಲಿ ಹಿರಿದಾಗಲು ಸ್ಪರ್ಧೆಮಾಡುತ್ತಲಿದ್ದಾರೆ. ಅವರಲ್ಲಿ ಗುಂಟೂರಿನ ಸ್ಟೂವರ್ಟ, ಮುಂಬಯಿಯ ದಸ್ತೂರ, ಫರ್ನಾಂಡೀಜ ಮೊದಲಾದವರು ಅಗ್ರಗಣ್ಯರಿದ್ದಾರೆ. ಇವರ ಹೆಸರು ಬಹುದಿವಸವಿರುವಂತೆ ಸರಕಾರದವರು ತಮ್ಮ ವೆಚ್ಚದಿಂದ ಇವರ ಗೊಂಬೆಗಳನ್ನು ಮಾಡಿಸಿ, ಅವನ್ನು ಅಲ್ಲಲ್ಲಿ ನಿಲ್ಲಿಸಬೇಕೆಂಬ ಸೂಚನೆಯು ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಬಂದಿದೆ. ಒಳ್ಳೇ ಉಪಕಾರಿಯಾದ ಮ್ಯಾಜಿಸ್ಟ್ರೇಟರ ಒಂದು ಯಾದಿಯನ್ನು ಮಾಡಿ ಅವರ ಗೊಂಬೆಗಳನ್ನು ಮಾಡಿಸಬೇಕು ಮತ್ತು ದೊಡ್ಡ ಸಮಾರಂಭದಿಂದ ಅವನ್ನೇ ನಿಲ್ಲಿಸಬೇಕು. ಇವುಗಳ ಕೂಡ ಧಾರವಾಡದ ಗೋಳೀಬಾರಿನಲ್ಲಿ ಹೆಸರು ಪಡೆದಂಥ ಕಾ. ಚಾವರ ಗೊಂಬೆಗಳನ್ನು ಮಾಡಿ, ಮಾರ್ಕೆಟಿನಲ್ಲಿ ಗಡಂಗದ ಹತ್ತಿರಿರುವ ಜೈಲಿನಲ್ಲಿ ನಿಲ್ಲಿಸಬೇಕೆಂದು ಸೂಚಿಸುವದು ಅಪ್ರಸ್ತುತವಾಗಲಾರದು

ಪೇಶಾವರ ಮತ್ತು ಬಂಗಾಲಿ ಮುಸಲಮಾನರಿಗೆ ಹೊಡದಾಟ.

—(೧)—

ಕಲಕತ್ತೆಯಲ್ಲಿರುವ ಪೇಶಾವರದ ಮುಸಲಮಾನರು ಕಾಂಗ್ರೆಸ ಪಕ್ಷದವರು; ಬಂಗಾಲಿ ಮುಸಲಮಾನರು ಮೌ ಶೌಕತಲ್ಲಿಯವರ ಪಕ್ಷದವರು. ಅಲ್ಲಿ ಕೂಡಿದ ಒಂದು ಸಭೆಯಲ್ಲಿ ಉಭಯ ಪಕ್ಷಗಳಿಗೂ ಹೊಡದಾಟವಾಗಿ, ಅನೇಕರು ಘಾಯ ಹೊಂದಿದರು. ಪೇಶಾವರದವರು ಅನುಭವಿಸುತ್ತಿರುವ ದುಃಖತಾಪಗಳು ಬಂಗಾಲಿಗಳಿಗೇನು ಗೊತ್ತು?

ಸುರಂಗದಿಂದ ಆಟಕದ ಸೇತುವೆಯನ್ನು ಹಾರಿಸಬೇಕೆಂದು ಅಫ್ರಿಡಿಗಳು ರಹಸ್ಯವಾಗಿ ವಿಚಾರ ಮಾಡುತ್ತಲಿದ್ದಾರೆಂದೂ ಒಂದು ವರ್ತಮಾನವುಂಟು.

ಧಾರವಾಡ-

ಸಿಂದೀ ಗಿಡ ಕಡಿದ ಆರೋಪದಿಂದ ಕೊರಡೂರವರ ಮೇಲೆ ಹಾಕಿದ ಖಟ್ಲೆಯು ಯೋಗ್ಯ ಪುರಾವೆ ಸಿಗದ್ದರಿಂದ ತೆಗೆದು ಬಾತಲಾಯಿತು.

ಜಾಹೀರನೋಟೀಸು

ಯಾವತ್ತೂ ಜನರಿಗೆ ಈ ನೋಟೀಸಿನ ಮುಲಕಾ ತಿಳಿಸುವದೇನಂದರೆ- ನವಲಗುಂದ ಮುನಸಿಪಾಲಿಟಿ ನಂಬರ ೧೫೦೮ ನೇ ವ|| ಸಿ|| ನ|| ನಂಬರ ೧೮೦ ಇದು ನಮ್ಮ ಪಿತರಾರ್ಜಿತ ಮನೆ ಇದ್ದು ಸದರಿ ಮನೆಯು ಈಪೊತ್ತಿನ ವರೆಗೂ ಸಮೋಹಿಕ ಇರುತ್ತದೆ ಈಗ ಕೆಲವು ಮಂದಿ ಸದರಿ ಮನೆಯನ್ನು ಒಬ್ಬ ಗುರುನಗವಡಾ ಜನಕ ತಂದಿ ದೊಡ್ಡನಗವಡಾ ಪಾಟೀಲ ಅನ್ನುವ ಅಲ್ಪವಯಿ ಹುಡಗನ ಸಂರಕ್ಷಣದಾರರ ಕಡಿಂದಾ ಖರೀದಿ ತಕ್ಕೊಳ್ಳಡಿರುತ್ತಾರೆಂದು ಕೇಳುತ್ತೇನೆ ಅಲ್ಪವಯಿ ಸದರಿ ಗುರುನಗವಡನು ಸದರ ಮನಿಗೆ ಒಬ್ಬನೇ ಮಾಲಿಕನೂ ಇರುವದಿಲ್ಲ ನಮ್ಮದೂ ಸಹಿತಾ ಹಿಶೆ ಇರುತ್ತದೆ ಮುಂದೆ ನಾನು ಕಾಯ್ದೇಶೀರ ಇಲಾಜ ಮಾಡತಕ್ಕವಳು ಇದ್ದೇವೆ ಖರೀದಿ ತಕ್ಕೊಂಡವರಿಗೆ ಮುಂದೆ ಲುಕ್ಸಾನ ಆಗಬಾರದೆಂದು ಈ ನೋಟೀಸು ಕೊಟ್ಟಿರುತ್ತೇನೆ ತಿಳಿಯೋದು

ತಾರೀಖು ೧೨-೮-೧೯೩೦ ನೇ ಇಸ್ವಿ

ಈ ಯಡಗೈ ಹೆಬ್ಬಟ್ಟಿನ ಗುರ್ತು ಸಿಂಗವ್ವಾ ಕೋಂ ಬಸನಗವಡಾ ಶಿವನಗವಡರ ಸಾಕೀನ ನವಲಗುಂದ ಇವಳ ಸ್ವೈದು ಅದೆ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಠ್ಠಲರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ

ಆಗಸ್ಟ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— **ಶ್ರೀ. ಜಾನಕೀಬಾಯಿ ದೀಕ್ಷಿತ**
C/o **ಮಧ್ಯಬ್ಯಾಂಕ ಧಾರವಾಡ**

ಸೂಚನೆ— ನೀವು ಔಷಧ ಬೇಡುವಾಗ ಯಾವ **ವರ್ತಮಾನಪತ್ರದ ಜಾಹೀರಾತ**ನ್ನು ನೋಡಿ ಈ ಬೇಡಿಕೆಯನ್ನು ಮಾಡುವಿರಿಯೆಂಬದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಅಗಸ್ಟ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯು ಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಅಟಗಿ.
ಮುನಸಫಕೋರ್ಟಿನ ಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಲಿ ವ ಸಾಗವಾನಿ (ಪ್ರ) ಫೂಟಿನ ಜವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಶಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತದೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿ. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧। ಧಾರವಾಡ ಶುಕ್ರವಾರ ತಾರೀಖು ೧೫ ನೇ ಅಗಸ್ಟ ೧೯೩೦ (ಸಂಚಿಕೆ ೧೮೦

ಕರ್ನಾಟಕದೊಳಗೆ ನಡೆದ ಸ್ವಾತಂತ್ರ್ಯ ಸಪ್ತಾಹ.

—೦*೦—

(ಧಾರವಾಡ ಕಾಂಗ್ರೆಸ ಕಮೀಟಿಯಿಂದ ಬಂದ ಲೇಖ)

ಧಾರವಾಡ ಜಿಲ್ಲೆ:- ಧಾರವಾಡ, ಹುಬ್ಬಳ್ಳಿ, ಗದಗು, ಬೆಟಗೇರಿ, ಕಲಘಟಗಿ, ಹಿರೇಹೊನ್ನಳ್ಳಿ' ಹಾನಗಲ್ಲ. ಹಾವೇರಿ, ಬಂಕಾಪುರ, ರಾಣೆಬೆನ್ನೂರ, ಶಿಗ್ಗಾಂವಿ, ಬ್ಯಾಡಗಿ, ಆಲೂರು, ಹಂಸಭಾವಿ, ಗುತ್ತಲ, ಅಣ್ಣೀಗೇರಿ, ನವಲಗುಂದ, ಮೊದಲಾದ ಊರುಗಳಲ್ಲಿ ಈ ಸಪ್ತಾಹವು ಬಹು ಸೊಗಸಾಗಿ ಸಾಗಿತು.

ಬೆಳಗಾಂವಿ ಜಿಲ್ಲೆ:- ಬೆಳಗಾಂವಿ, ಕಿತ್ತೂರ, ನಂದಗಡ, ಬೈಲಹೊಂಗಲ ಸಂಪಗಾಂವಿ, ಮುರಗೋಡ, ಮುನೊಳ್ಳಿ, ಸವದತ್ತಿ, ಕರೀಕಟ್ಟಿ, ಅಥಣಿ, ಐನಾಪುರ, ನಿಪ್ಪಾಣಿ, ಸಂಕೇಶ್ವರ, ಜಮಖಂಡಿ, ಮೊದಲಾದ ಊರುಗಳಲ್ಲಿಯೂ ನಡೆಯಿತು.

ವಿಜಾಪುರ ಜಿಲ್ಲೆ:- ವಿಜಾಪುರ, ಹುನಗುಂದ, ಕೆರೂರು, ಬಾಗಲಕೋಟೆ, ಗಲಗಲಿ. ಗುಳೇದಗುಡ್ಡ, ಇಲಕಲ್ಲ, ಮೊದಲಾದವುಗಳಲ್ಲಿ ನಡೆಯಿತು

ಬಳ್ಳಾರಿ ಜಿಲ್ಲೆ:- ಬಳ್ಳಾರಿ, ಹೊಸಪೇಟೆ, ಹಂಪನಹಳ್ಳಿ. ಮೊದಲಾದವುಗಳಲ್ಲಿ ಆಯಿತು.

ಕಾರವಾರ ಜಿಲ್ಲೆ:- ಕಾರವಾರ, ಹೊನ್ನಾವರ, ಶಿದ್ದಾಪೂರ, ಭಟಕಳ, ಶಿರಸಿ, ಕುಮಟಾ, ಅಂಕೋಲಾ, ಯಲ್ಲಾಪುರ, ಮೊದಲಾದವುಗಳಲ್ಲಿಯೂ ನಡೆಯಿತು

ಮಂಗಳೂರು ಜಿಲ್ಲೆಯಲ್ಲಿಯೂ ಅನೇಕ ಕಡೆಗಳಲ್ಲಿ ಈ ಸ್ವಾತಂತ್ರ್ಯಸಪ್ತಾಹವು ನಡೆದಿದೆ. ಆದರೆ ಇನ್ನ ಸಾಕಷ್ಟು ವರದಿಯು ನಮ್ಮಲ್ಲಿ ಬಂದಿಲ್ಲ

ಹೀಗೆ ಕರ್ನಾಟಕದ ಎಲ್ಲ ಭಾಗದಲ್ಲಿಯೂ ನಡೆದ ಈ ಸಪ್ತಾಹದಲ್ಲಿ ಆಯಾ ಜಿಲ್ಲೆಯ ತಾಲೂಕಿನ ಪ್ರಮುಖರು ಅಲ್ಲಲ್ಲಿ ವ್ಯಾಖ್ಯಾನಗಳನ್ನು ಕೊಟ್ಟಿರುವರು. ಬೆಳಗಾಂವಿಯ ಶ್ರೀ. ಗೋಖಲೆಯವರು, ಕಿತ್ತೂರು, ಸಂಪಗಾಂವಿ, ಹೊಂಗಲ, ಸವದತ್ತಿ, ಗುರ್ಲಹೊಸೂರು, ಮುನವಳ್ಳಿ, ಮೊದಲಾದ ಕಡೆಗೆ ಹೋಗಿ ಬಂದಿರುವರು. ಧಾರವಾಡದಿಂದ ಶ್ರೀ. ಹುಕ್ಕೇರಿಯವರು ಹುಬ್ಬಳ್ಳಿ, ಮೊರಬ, ಹಾನಗಲ್, ಬಂಕಾಪೂರ, ಹಾವೇರಿ, ಬ್ಯಾಡಗಿ, ರಾಣೆಬೆನ್ನೂರ ಕಡೆಗೆ ಹೋಗಿದ್ದರು. ಶ್ರೀಮತಿ ಸಾಕೃಷ್ಣಾಬಾಯಿಯವರು ಹಾವೇರಿ, ಬ್ಯಾಡಗಿ, ರಾಣೆಬೆನ್ನೂರ, ಗದಗ, ಬಾಗಲಕೋಟೆ ಕಡೆಗೆ ಹೋಗಿದ್ದರು. ಶ್ರೀ ಕರಮರಕರರು ಹುಬ್ಬಳ್ಳಿ, ಮೋಟೇಬೆನ್ನೂರ, ಹಾವೇರಿ, ಗದಗಿನ ಕಡೆಗೆ ಹೋಗಿದ್ದರು. ಶ್ರೀ ಮುದವೀಡು ಕೃಷ್ಣರಾಯರು ಗುರ್ಲಹೊಸೂರು, ಬಾಗಲಕೋಟೆ, ಬಂಕಾಪುರ, ಶಿಗ್ಗಾವಿ, ಹಾನಗಲ್ ಕಡೆಗೆ ಹೋಗಿದ್ದರು. ಶ್ರೀ ಪುರೋಹಿತರೂ ಶ್ರೀ ಗೋಸಾವಿಯವರೂ ಕಿತ್ತೂರಿಗೂ, ಶ್ರೀ. ಅ. ರಂಗಾಚಾರ್ಯ ಬೊಡಗುಡಿ ಸವದತ್ತಿ, ಮುನವಳ್ಳಿ, ಯಕ್ಕುಂಡಿ, ಕರೀಕಟಿ , ಕಡೆಗೆ ಹೋಗಿದ್ದರು. ಶ್ರೀ. ಹಿರೇಮಠರೂ ರಂಗಾಚಾರ್ಯರೂ ಮೊರಬಕ್ಕೆ ಹೋಗಿದ್ದರು. ಧಾರವಾಡದಲ್ಲಿ ಶ್ರೀ. ಬೆಳಗಾಂವಕರ ರಾಮರಾಯರೂ, ಮುದವೀಡು ಕೃಷ್ಣರಾಯರೂ ಹುಕ್ಕೇರಿಯವರೂ, ಕರಮರಕರರೂ ಡಾ. ಅಶ್ವತ್ಥ ನಾರಾಯಣರಾಯರೂ ವ್ಯಾಖ್ಯಾನ ಕೊಟ್ಟರು ಹೊರಗಿನಿಂದ ಶ್ರೀಮತಿ ಕುಂದಾಪುರ ಉಮಾಬಾಯಿಯವರೂ, ಶ್ರೀ. ಗೋಳೀಕೇರಿ ರಮಾಕಾಂತರೂ, ಶ್ರೀ. ಪುರಾಣಿಕ, ಕೆಂಪಣ್ಣವರ, ಕರಿಗುಡರಿ ಹಾಗು ಹಾವೇರಿಯ ಶ್ರೀ. ಹೊಸಮನಿ ಸಿದ್ದಪ್ಪನವರೂ ಚವಟಿಯವರೂ ಹಾಗೆಯೇ ದಾವಣಗೇರಿಯವರೂ ಬಂದಿದ್ದರು. ಶ್ರೀ. ಅಶ್ವತ್ಥ ನಾರಾಯಣರಾಯರು, ಅಣ್ಣಿಗೇರಿ, ನವಲಗುಂದ, ರಾಣೆಬೆನ್ನೂರ ಕಡೆಗೆ ಹೋಗಿದ್ದರು. ಇದೇ ಮೇರೆಗೆ ಆಯಾ ಭಾಗದ ತಮ್ಮ ತಮ್ಮ ಭಾಗಗಳಲ್ಲಿ ಉತ್ತಮ ರೀತಿಯಿಂದ ಸ್ವಾತಂತ್ರ್ಯಸಪ್ತಾಹವನ್ನು ಜರಗಿಸಿರುವರು.

ಅಖಿಲ ಭಾರತೀಯ ಸೆರೆಯಾಳುಗಳ ದಿನ

ಈ ದಿನ ನಗರ ಸಂಕೀರ್ತನ, ಉಪೋಷಣ ಸಭೆ ಮೊದಲಾದ ಎಲ್ಲ ಕಾರ್ಯಕ್ರಮಗಳು ಕರ್ನಾಟಕದ ಎಲ್ಲ ಭಾಗದಲ್ಲಿಯೂ ನಡೆದವು. ಧಾರವಾಡ [illegible] ಶ್ರೀ. ಅಶ್ವತ್ಥ ನಾರಾಯಣರಾಯರು ಎಸ್. ಎಮ್. ಕುಲಕರ್ಣಿ, ಹಿರೇಮಠ, ರಂಗಾಚಾರ್ಯ, ಕರಮರಕರ ಮೊದಲಾದವರ ಭಾಷಣವಾಯಿತು. ಹಾಗೆಯೇ ಕಿತ್ತೂರ, ನರೇಂದ್ರ, ಸವದತ್ತಿ, ಕರೀಕಟ್ಟಿ, ಮುನವಳ್ಳಿ, ಸಂಕೇಶ್ವರ, ನಿಪ್ಪಾಣಿ, ಗುಳೇದಗುಡ್ಡ, ರಾಣೇಬೆನ್ನೂರ, ಸಂಪಗಾಂವಿ, ಕಲಘಟಗಿ, ಗದಗು, ಬಾಗಲಕೋಟ, ವಿಜಾಪುರ, ಬೆಳಗಾಂವಿ, ಬಳ್ಳಾರಿ, ಹೊಸಪೇಟ, ಕಾರವಾರ, ಅಂಕೋಲಿ, ಶಿರ್ಸಿ, ಶಿದ್ದಾಪುರ, ಉಡಪಿ, ಮೊದಲಾದ ಬಹುಶಃ ಎಲ್ಲ ದೊಡ್ಡ ದೊಡ್ಡ ಹಳ್ಳಿಗಳಲ್ಲಿಯೂ ನಗರಗಳಲ್ಲಿಯೂ ಈ ದಿನವು ಪಾಲಿಸಲಾಯಿತು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವಕ್ಕಿ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ವದ್ಯ ೬

ಗಾಂಧೀ ಟೊಪ್ಪಿಗೆ ಮತ್ತು ರಾಷ್ಟ್ರೀಯ ನಿಶಾನೆಯ ಜಯ.

* * *

ಗುಂಟೂರಿನ ಸ್ಟ್ಯುವರ್ಟ ಮ್ಯಾಜಿಸ್ಟ್ರೇಟರು ತಮ್ಮದೇ ಹುಕುಮು ನಡಿಸಬೇಕೆಂದರು. ಸ್ಟೇಟಸೇಕ್ರೆಟರಿ ಮಿ. ಬೆನ್ನ ವೆಜ್ಜವುಡ್ಡಸಾಹೇಬರು ಅಲ್ಲಿಂದ ಮಾತನ್ನು ಇವರು ಹೌದೆಂದೆನಿಸಲು ಜಂಗುಕಟ್ಟಿದರು. ಗಾಂಧೀ ಟೊಪ್ಪಿಗೆ ಹಾಕುವದು ಕಾಯದೆಭಂಗದ ಕೃತಿಯೆಂದರು. ಸಾವಿರಾರು ಜನರನ್ನು ತುರಂಗಕ್ಕೆ ಕಳಿಸಿದರು. ಇದರ ಸುಂಕವು ಅನೇಕ ಸ್ಥಳಗಳಲ್ಲಿ ಹತ್ತಿತು. ಈ ಹುಕುಮು ತೀರ ಅನ್ಯಾಯದ್ದಾಗುತ್ತದೆಂದು ಗುಂಟೂರಿನ ವಕೀಲರು ಮದ್ರಾಸದ ಹಾಯಕೋರ್ಟಿಗೆ ಅಪೀಲು ಮಾಡಿದರು. ಅದರ ವಿಚಾರಣೆಯು ನ್ಯಾಯಮೂರ್ತಿ ಪಂಡಾಲೆಯವರ ಮುಂದೆ ನಡೆದು, ಅವರು ಗಾಂಧೀ ಟೊಪ್ಪಿಗೆಯ ಜಯವೆನ್ನುವಂಥ ತೀರ್ಪು ಹೇಳಿದಾರೆ. ತೀರ್ಪಿನಲ್ಲಿಯ ಮುಖ್ಯ ಸಂಗತಿಗಳು ಕೆಳಗೆ ಕೊಟ್ಟಿಂತಿವೆ.

ಗಾಂಧೀ ಟೊಪ್ಪಿಗೆಯು ಜನರ ನಿತ್ಯದ ಉಡುವಳಿಕೆಯಲ್ಲಿಂದೆ, ಕಳೆದ ಹತ್ತು ವರ್ಷಗಳಿಂದ ಗಾಂಧಿಯ ಅನುಯಾಯಿಗಳೇ ಅದನ್ನು ಉಪಯೋಗಿಸುತ್ತಾರೆ. ಆದ್ದರಿಂದ ಈ ಟೊಪ್ಪಿಗೆ ಹಾಕುವಂಥವರು ಗಾಂಧಿಯವರು ಮಾಡುವದಕ್ಕೆಲ್ಲ ಬಲಕೊಟ್ಟು ಅವರಿಗೆ ಸಹಾಯ ಮಾಡುತ್ತಾರೆ. ಪ್ರಕೃತದಲ್ಲಿ ಗಾಂಧೀಯವರು ಕಾಯದೆಭಂಗದ ಚಳವಳಿಯನ್ನು ಪ್ರಾರಂಭಿಸಿದ್ದು, ಇದಕ್ಕೆ ಗಾಂಧಿಟೊಪ್ಪಿಗೆ ಹಾಕುವಂಥವರೆಲ್ಲರೂ ಈ ಚಳವಳಿಗೆ ಸಹಾನುಭೂತಿಯುಳ್ಳವರಾಗಿದ್ದಾರೆಂದು ಮ್ಯಾಜಿಸ್ಟ್ರೇಟರು ಅನುವದನ್ನು ನಾನು ಸಮ್ಮತಿಸುವದಿಲ್ಲ. ಏಕೆಂದರೆ ಗಾಂಧೀಟೊಪ್ಪಿಗೆ ಹಾಕುವಂಥವರೆಲ್ಲರೂ ಕಾಯದೆಭಂಗ ಮಾಡುವದಿಲ್ಲ. ಅದರ ಮುಂದಾಳೂ ಆಗಿರುವದಿಲ್ಲ. ಈ ಚಳವಳಿಯು ಪ್ರಾರಂಭವಾಗುವ ಮೊದಲು ಗಾಂಧಿಯವರ ದೆಸೆಯಿಂದ ಸಹಾನುಭೂತಿಯುಳ್ಳವರೆಲ್ಲರೂ ಈ ಟೊಪ್ಪಿಗೆ ಹಾಕುತ್ತಿದ್ದರು. ಗಾಂಧಿಯವರು ಬರೇ ಕಾಯದೇಭಂಗದ ಚಳವಳಿಯಲ್ಲಿ ಮನಸ್ಸು ಹಾಕುವದಿಲ್ಲ. ಮದ್ಯಪಾನ ಅಸ್ಪೃಶ್ಯತಾ ನಿವಾರಣ ಮುಂತಾದ ವಿಷಯಗಳಲ್ಲಿಯೂ ಮನಸ್ಸು ಹಾಕುತ್ತಾರೆ. ಆದ್ದರಿಂದ ಗಾಂಧಿಟೊಪ್ಪಿಗೆ ಹಾಕುವಂಥವರು ಚಳವಳಿಗೆ ಸಹಾನುಭೂತಿ ತೋರಿಸುತ್ತಾರೆಂದು ಅರ್ಥಮಾಡುವದು "ಗಾಂಧೀಟೊಪ್ಪಿಗೆ ಹಾಕುವಂಥವರ ಮೇಲೆ ಅನ್ಯಾಯ ಮಾಡಿ" ದಂತಾಗುತ್ತದೆ. ಮುಂದಾಗುವ ಸಂಗತಿಯ ಭವಿಷ್ಯಮಾಡಿ ಮ್ಯಾಜಿಸ್ಟ್ರೇಟರು ಹುಕುಮು ತೆಗೆದಿದ್ದಾರೆ. ಪ್ರತ್ಯಕ್ಷ ನಡೆದ ಸಂಗತಿಯ ಆಧಾರ ತಕ್ಕೊಂಡೇ ಇಲ್ಲಿ ಇಂಥ ಪರಿಸ್ಥಿತಿಯಲ್ಲಿ ಜನರಿಗೆ ಸಿಟ್ಟು ಬಂದು, ಇಂಥ ಹುಕುಮುಗಳಿಂದಲೇ ಶಾಂತತೆಯ ಭಂಗವಾಗುವ ಸಂಭವವುಂಟು. ಈ ಅನ್ಯಾಯವನ್ನು ದೂರಮಾಡುವದು ಹಾಯಕೋರ್ಟಿನ ಕರ್ತವ್ಯವಾದ್ದರಿಂದ, ಮ್ಯಾಜಿಸ್ಟ್ರೇಟರ ಅನ್ಯಾಯದ ಹುಕುಮನ್ನು ರದ್ದುಮಾಡುತ್ತೇವೆ.

ಗುಂಟೂರಿನ ಮ್ಯಾಜಿಸ್ಟ್ರೇಟರಂತೆ ರಾಜಮಹೇಂದ್ರಿಯ ಇನ್ನೊಬ್ಬ ಮ್ಯಾಜಿಸ್ಟ್ರೇಟರು ಮನೆಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಬಾರದೆಂದು ಒಬ್ಬ ವಕೀಲರ ಮೇಲೆ ನೋಟೀಸು ತೆಗೆದಿದ್ದರು. ಇದರ ವಿಚಾರಣೆಯೂ ಇವರ ಮುಂದೆಯೇ ನಡೆಯಿತು. ಈ ಹುಕುಮನ್ನು ರದ್ದು ಮಾಡಿದರು. ತೀರ್ಪಿನಲ್ಲಿ ಬರೆದದ್ದೇನಂದರೆ–

ರಾಷ್ಟ್ರೀಯ ನಿಶಾನೆಯನ್ನು ಹಚ್ಚುವದರಿಂದ ಸಾರ್ವಜನಿಕ ಶಾಂತತೆಯು ಭಂಗವಾಗುವದಿಲ್ಲ. ಈ ನಿಶಾನೆ ಹಚ್ಚುವದರ ವಿರುದ್ಧ ಅಲ್ಲಿಯ ನಾಗರಿಕರೂ ಇರುವದಿಲ್ಲ. ಆದ್ದರಿಂದ ಈ ಹುಕುಮನ್ನೂ ರದ್ದು ಮಾಡುತ್ತೇವೆ

ಹುಬ್ಬಳ್ಳಿಯಲ್ಲಿ ಮ್ಯುನಿಸಿಪಾಲಟಿಯಲ್ಲಿ ಗಿಡಕ್ಕೆ ನಿಶಾನೆ ಹಚ್ಚಿದರು. ಸವದತ್ತಿಯಲ್ಲಿ ನಿಶಾನೆ ಹಚ್ಚಬಾರದೆಂದು ಬೆಳಗಾವಿಯ ಡಿಸ್ಟ್ರಿಕ ಮ್ಯಾಜಿಸ್ಟ್ರೇಟರು ರಾಜಮಹೇಂದ್ರಿಯ ಮ್ಯಾಜಿಸ್ಟ್ರೇಟರ ಕಿತ್ತಿಯನ್ನೇ ತೀಡಿದ್ದಾರೆ. ನ್ಯಾಯಮೂರ್ತಿ ಪಂಡಾಲೆಯವರ ತೀರ್ಪಿನಿಂದ ಮ್ಯುನಿಸಿಪಾಲಟಿಗಳ ಮೇಲೆ ನಿಶಾನೆ ಹಚ್ಚಲು ಯಾವ ಅಡ್ಡಿಯೂ ಇಲ್ಲದಾಯಿತು.

ನಮ್ಮ ಜಯಕರರ ಮೋರೆಯು ಸಂತೋಷದಿಂದ ಉಕ್ಕುತ್ತಲಿದೆ.

* * *

ಕಳೆದೆರಡು ದಿವಸಗಳಿಂದ ಯರವಡೆಯಲ್ಲಿ ರಾಜೀ ಸಂಧಾನ ನಡೆದಿರುತ್ತದಷ್ಟೇ ? ತುರಂಗದಿಂದ ಹೊರಗೆ ಬಂದಾಗ ಇವರ ಮೋರೆಯು ಸಂತೋಷದಿಂದ ಉಕ್ಕುತ್ತಿತ್ತೆಂದೂ ಒಡಂಬಡಿಕೆಯಾಗುವದೆಂದೂ ಜನರು ತರ್ಕಮಾಡುತ್ತಲಿದ್ದಾರೆ.

ಕಾಂಗ್ರೆಸದಿಂದ ಜಾತಿಗಳ ಉಚ್ಚ ನೀಚ ಭಾವ ಹೋಗುವದು

ಅಸ್ಪೃಶ್ಯರಾದ ಬ್ಯಾರಿಸ್ಟರ ಅಂಬಡೇಕರರ ಸ್ಪಷ್ಟ ಮತ

(೦)

ನಾಗಪೂರಿನಲ್ಲಿ ಕೂಡಿದ ಅಖಿಲಭಾರತೀಯ ಅಸ್ಪೃಶ್ಯರ ಪರಿಷತ್ತಿನಲ್ಲಿ ಡಾಕ್ಟರ ಮತ್ತು ಬ್ಯಾರಿಸ್ಟರರಾದ ಅಂಬಡೆಕರರು ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

ಬ್ರಿಟಿಶ ಸರಕಾರದವರು ಈ ಕ್ಷಣವೇ ವಸಾಹತಿನ ಸ್ವರಾಜ್ಯ ಕೊಟ್ಟಿದ್ದರೆ ಕಾಂಗ್ರೆಸದ ಸಮಾಧಾನವಾಗುತ್ತಿತ್ತು. ಕೊಡದ್ದರಿಂದ, ಕಾಂಗ್ರೆಸವು ಸ್ವಾತಂತ್ರ್ಯದ ಕಹಳೆ ಹಿಡಿಯಿತು. ಬ್ರಿಟಿಶ ರಾಜ್ಯದಿಂದ ಆದ ವಿಶಿಷ್ಟ ಲಾಭಗಳಲ್ಲಿ ನಮ್ಮ ಪರಿಸ್ಥಿತಿಯ ಬಗ್ಗೆ ಪೂರ್ಣ ತಿಳುವಳಿಕೆಯಾದದ್ದೊಂದಿರುತ್ತದೆ. ಹಿಂದುಸ್ಥಾನದ ತುಂಬ ಒಂದೇ ಕಾಯದೆ ಮತ್ತು ಒಂದೇ ರಾಜ್ಯಪದ್ಧತಿಯುಂಟಾಗಿರುವದರಿಂದ, ನಮ್ಮಲ್ಲಿ ಏಕ ರಾಷ್ಟ್ರೀಯತ್ವದ ಭಾವನೆಯುಂಟಾಗಿರುತ್ತದೆ. ಆದರೆ ಇದಕ್ಕೆ ನಾವು ಬಹಳ ದೊಡ್ಡ ಬೆಲೆ ಕೊಡಬೇಕಾಗುತ್ತದೆಂಬದನ್ನು ಲಕ್ಷ್ಯದಲ್ಲಿಡಿರಿ. ನಾವು ಒಂದು ಪ್ರಕಾರದ ಕೀಳ ವಾತಾವರಣದಲ್ಲಿದ್ದೇವೆ. ನಮ್ಮೊಳಗಿನ ಅತ್ಯಂತ ಶ್ರೇಷ್ಠ ಮನುಷ್ಯನಿಗೆ ಸಹ ಮೋರೆಯನ್ನು ಕೆಳಗೆ ಮಾಡಬೇಕಾಗುತ್ತದೆ. ಬ್ರಿಟಿಶ ರಾಜ್ಯ ಪದ್ಧತಿಯು ದೊಡ್ಡ ವೆಚ್ಚದ್ದಾಗಿದ್ದು, ಅದು ನಮ್ಮ ದೇಶಕ್ಕೆ ಹೊರಲಾರದಷ್ಟು ಭಾರವಾಗಿರುತ್ತದೆ. ಕಳೆದ ೨೫ ವರ್ಷಗಳಲ್ಲಿ ಹಿಂದುಸ್ಥಾನದಲ್ಲಿ ಹತ್ತು ದುಷ್ಕಾಳಗಳು ಬಿದ್ದು ಒಂದು-ಒಂದೂವರೆ ಕೋಟಿ ಜನರು ಮೃತ್ಯುಮುಖದಲ್ಲಿ ಬಿದ್ದಿದ್ದಾರೆ. ಇದರ ಕಾರಣವನ್ನು ಹುಡುಕಲಿಕ್ಕೆ ಬಹಳ ದೂರ ಹೋಗಬೇಕಾಗಿಲ್ಲ. ಬ್ರಿಟಿಶ ಸರಕಾರವು ಹಿಂದುಸ್ಥಾನದ ವ್ಯಾಪಾರ ಉದ್ದಿಮೆಯನ್ನು ಬುದ್ಧಿಪೂರ್ವಕವಾಗಿ ಮುಣುಗಿಸಿದ್ದೇ ಕಾರಣ. ಬ್ರಿಟಿಶರ ಈ ಧೋರಣದಿಂದ ಒಕ್ಕಲತನದವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಅರೆಹೊಟ್ಟೆಯಿಂದಿರುತ್ತಾರೆ. ಇವರಲ್ಲಿ ಅಸ್ಪೃಶ್ಯರ ಸಂಖ್ಯೆಯು ಬಹಳದೊಡ್ಡದಾಗಿರುತ್ತದೆ. ಬ್ರಿಟಿಶರು ಕಾಯದೆ ಮತ್ತು ಸುವ್ಯವಸ್ಥೆ ಮಾಡಿದ್ದು ನಿಜ. ಆದರೆ ಅದರಿಂದ ಹೊಟ್ಟೆ ತುಂಬುವದಿಲ್ಲೆಂಬದನ್ನು ಖಂಡಿತವಾಗಿ ತಿಳಿಯಬೇಕು. ಜಮೀನದಾರ ಮತ್ತು ಸಾಹುಕಾರರು ನಡೆಸಿರುವ ಅತ್ಯಾಚಾರಗಳನ್ನು ದೂರ ಮಾಡಲು ಸರಕಾರವೆಷ್ಟು ಸಹಾಯ ಮಾಡಿರುವದು ? ಅದೇ ಪ್ರಕಾರ ಸಾಮಾಜಿಕ ಅನ್ಯಾಯಗಳನ್ನು ದೂರ ಮಾಡಲು ಎಷ್ಟು ಸಹಾಯ ಮಾಡಿರುವದು ? ಇವೆಲ್ಲ ದುಷ್ಟ ಅನಿಷ್ಟ

ನಿರ್ಮೂಲವಾಗಲಿಕ್ಕೆ ನಮಗೆ ಸ್ವರಾಜ್ಯ ದೊ , ನಮ್ಮ ಕಯ್ಯಲ್ಲಿಯೇ ಅಧಿಕಾರ ದೊರೆಯಬೇ ಇದು ಸ್ವರಾಜ್ಯದಿಂದಲೇ ಸಾಧ್ಯವಾಗುವ ಟು. ಸ್ವರಾಜ್ಯದಲ್ಲಿ ಮೊದಲಿನ ಸ್ಥಿತಿಯೇ ಬ ರದೆಂದು ಅಂಜಿಕೊಂಡು ನಾವು ಮುಂದಿಟ್ಟ ಕಾ ಲ್ಲ ಹಿಂದಡಲಾಗದು. ಆದ್ದರಿಂದ ನೀವು ಸ್ವ ಜ್ಯವೇ ನಿಮ್ಮ ಧ್ಯೇಯವೆಂದು ಖಂಡಿತವಾಗಿ ಯತಕ್ಕದ್ದು.

ಪೇಶಾವರದ ಬಾಗಿಲದಲ್ಲಿಯೇ
ಅಫ್ರಿದಿಗಳ ಹಾವಳಿಯು

——(೦)——

ಪೇಶಾವರದ ಮೇಲೆ ದಂಡೆತ್ತಿಬಂದ ಅಫ್ರಿದಿಗಳ ಹಾರಿಕೆಯು ಸಣ್ಣ ಬಾಯಿಯಿಂದ ದೊಡ್ಡ ತ್ತು ನುಂಗುವಂತಿರುವದು ನಿಜ. ಇದನ್ನು ಅವ ಬಲ್ಲರು. ಆದರೂ ಸರಕಾರಕ್ಕೆ ಕೀಟಕೋ ವ ಕೊಟ್ಟು, ಏನಾದರೊಂದು ಲಾಭಮಾಡಿಕೊ ಪೆ ಬಿಡರು ಸರಹದ್ದಿನಲ್ಲಿ ಶಾಂತತೆ ಕಾಯಲು ಬ್ರಿಟಿಶ ಸರಕಾರದವರು ಇವರಿಗೆ ಕಪ್ಪವೆನಿಸುವ ರೀತಿಯ ರ್ಷಾಶನ ಮಾಡಿಕೊಟ್ಟಿದ್ದಾರೆ. ಈ ಗೊಂದಲದ ಲ್ಲಿ ಅದನ್ನು ಇಮ್ಮಡಿ, ಮುಮ್ಮಡಿ ಮಾಡಿಕೊಳ್ಳುವ ಉದ್ದೇಶವಿರಬಹುದು

ಪೇಶಾವರದ ಪಶ್ಚಿಮದಲ್ಲಿ ಐದಾರು ಮೈಲಿನ ಲ್ಲಿಯೇ ಅಫ್ರಿದಿಗಳ ದೇಶವುಂಟು. ಆದ್ದರಿಂದ ಇವರು ಪಟ್ಟಣದ ಮೇಲೆ ದಾಳೀ ತರಲು ದೊಡ್ಡ ಪ್ರವಾಸ ಮಾಡಬೇಕಾಗುವದಿಲ್ಲ. ನಾಲ್ಕಾರ ಮೈಲುಗಳಲ್ಲಿ ನೆರೆದು, ವಿದ್ಯುದ್ವೇಗವೆನ್ನುವಂತೆ ಪಟ್ಟಣದ ಸುತ್ತಲು ಹಾವಳಿ ಮಾಡಲು ನಿರಾಯಾಸವಾಗಿ ಸಾಧಿಸುತ್ತದೆ.

ಅಫ್ರಿದಿಗಳು ಇಂಗ್ಲಿಷ ಯುಕ್ತಿಗಳನ್ನು ಕಲಿತವರಾದ್ದರಿಂದ ಯುದ್ಧ ಪೇಚುಗಳನ್ನು ಪೂರಾ ಬಲ್ಲರು. ಇವರಲ್ಲಿ ತೋಫು ಇಲ್ಲ; ವಿಮಾನಗಳಿಲ್ಲ. ಇವೆರಡರ ಬಲದಿಂದ ವೈರಿಗಳನ್ನು ಸೋಲಿಸಬೇಕೆಂದು ಬ್ರಿಟಿಶ ಸೈನಿಕರ ಅಭಿಲಾಷೆ; ಅದಕ್ಕೆ ಇವರು ತಂತ್ರಗಳನ್ನು ಮಾಡಿರುವರು. ಇದು ಬೆಳೆಗಳ ಹಂಗಾಮು ಭೂಮಿಗಳು ಬಟಾಬೈಲಾಗಿರುವದಿಲ್ಲ. ಎತ್ತರವಾಗಿ ಬೆಳೆದ ಪೈರುಗಳು ನಿಂತಿರುವವು. ಮೇಲಾಗಿ ತೋಟಗಳು ಬಹಳ. ಬೆಳೆ ಮತ್ತು ತೋಟಗಳ ಝುಡುಪಿನಲ್ಲಿ ಇವರು ಮೈಲ್ಲಿಗೆ ಬರುವರು ಊರ ಅಗಸೀ ಬಾಗಿಲ ತನಕ ಬರುವರು. ಬರುವದೇ ಕಾಣಿಸದ ಬಳಿಕ ತೋಫುಗಳೇನು ಮಾಡುವವು? ಇದರಂತೆ ವಿಮಾನಗಳು. ಬರುವ ಸಪ್ಪಳ ಕೇಳಿದ ಕೂಡಲೆ ಕವಾಯತಿನ ಸೈನಿಕರಂತೆ ಟೊಪ್ಪಿಗೆ ಫೇಟಾಗಳನ್ನಿಟ್ಟು ದೂರ ಕೊಳ್ಳದಲ್ಲಿ ಅಡಗಿಕೊಳ್ಳುವರು. ಸೈನ್ಯವೆಂದೇ ತಿಳಿದು ವಿಮಾನದವರು ಮೇಲಿನಿಂದ ಬಾಂಬು ಚಲ್ಲುವರು. ಈ ವರೆಗೆ ಆರು ಸಾವಿರ ಬಾಂಬುಗಳನ್ನು ಚಲ್ಲಿದ್ದಾರೆ. ಆಶ್ಚರ್ಯವೆಂದರೆ- ಇವಕ್ಕೆ ಒಂದೂ ನರಬಲಿ ಬೀಳಲಿಲ್ಲ.

ಪೇಶಾವರದಿಂದ ನವಶರಾದತನಕ ೨೦ ಮೈಲು ಉದ್ದವಾಗಿ ರಣಕ್ಷೇತ್ರವಾಗಿದೆ. ಅಫ್ರಿದಿಗಳು ಈ ದಾರಿಗುಂಟಿರುವ ತಾರು ಮತ್ತು ಟೆಲಿಫೋನಗಳನ್ನು ಹರಿದು ಹಾಕಿದ್ದರಿಂದ, ಪೇಶಾವರ ಮತ್ತು ಲಾಹೋರಿನ ನಡುವಿನ ಈ ವ್ಯವಹಾರವು ನಿಂತು ಹೋಗಿದೆ. ರೇಲ್ವೆ ದಾರಿ ಮತ್ತು ತಾರುಗಳ ಸಂರಕ್ಷಣೆ ಮಾಡಲು ಲಾಹೋರಿನಿಂದ ಒಂದು ಕವಚದ ಉಗಿಬಂಡಿಯು ಹೋಗಿರುತ್ತದೆ. ಪಟ್ಟಣದ ಅಗಸೀಬಾಗಿಲು ಹಾಕಿದ್ದರಿಂದ ಮತ್ತು ದಿನಾಲು ಹಾರಸುದ್ದಿಗಳು ಹುಟ್ಟುತ್ತಿರುವದರಿಂದ, ಪಟ್ಟಣಿಗರು ಹೌಹಾರಿದ್ದಾರೆ. ತಮ್ಮ ಜೀವಕ್ಕೆ ಯಾವದೇ ತರದ ವಿಪತ್ತು ಬರಬಾರದೆಂದು ರಾತ್ರಿಯಲ್ಲಿ ಗುಡಿಗುಂಡಾರದಲ್ಲಿ ಕೂತು ಭಜನಿ ಮಾಡುವರು.

ಪರಶಿಯಾದ ಮೇಲೆ ತುರ್ಕಸ್ಥಾನದ
ದಾಳಿಯು

—(೦)—

ಇರಾಣದೇಶದ ಹದ್ದಿನಲ್ಲಿರುವ ಖುರ್ದರನ್ನು ಶಿಕ್ಷಿಸಲು ಅಂಗೋರಾ ಸರಕಾರದ ಸೈನ್ಯವು ಒಂದಿದೆ ಇದು ಉಭಯ ದೇಶಗಳಿಗೆ ಯುದ್ಧ ಪತ್ತಪ ಪೂರ್ವ ಚಿನ್ಹವೇ ಸರಿ.

ಪಂಡಿತ ಮಾಲವಿಯಾಯವರ
ವಿದ್ಯಾರ್ಥಿಗಳ ಪಿಕೆಟಿಂಗ

——(೦)——

ಪಂಡಿತ ಮಾಲವಿಯಾಯವರ ಕಾಶಿಯ ವಿದ್ಯಾಪೀಠದ ನೂರು ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡಿ, ಮುಂಬಯಿಗೆ ಬಂದಿದ್ದು, ಅವರು ಮುಂಬಯಿಯ ಕಾಲೇಜುಗಳ ಮುಂದೆ ಪಿಕೆಟಿಂಗ ಮಾಡತಕ್ಕವರಿದ್ದಾರೆ.

ಅಸೆಂಬ್ಲಿಯ ಚುನಾವಣೆ

ಮುಂಬಯಿ ಇಲಾಖೆಯ ದಕ್ಷಿಣ ಭಾಗದಿಂದ ಮುಸಲಮಾನರಿಗಾಗಿ ಕಾದಿಟ್ಟ ಒಂದು ಸ್ಥಳಕ್ಕಾಗಿ ಐವರು ಉಮೇದವಾರರಿದ್ದರು. ಇವರಲ್ಲಿ ನಾಲ್ವರು ರಾಜೀನಾಮೆ ಕೊಟ್ಟದ್ದರಿಂದ ಮುಂಬಯಿಯ ಸರ ರಹಿಮತುಲ್ಲಾಸಾಹೇಬರು ಅವಿರೋಧವಾಗಿ ಮೆಂಬರರಾದರು.

ಕೋ ಆಪರೇಟಿವ್ಹ ಸುಪರವಾಯಜರ
ಪರೀಕ್ಷೆಯ ಪರಿಣಾಮ.

——(೦)——

೮—೮—೧೯೩೦

೧	ಕುಲಕರ್ಣಿ, ಜಿ ಆರ್.	(ಸೆಕಂಡಕ್ಲಾಸ)
೨	ದೇಸಾಯಿ, ಜಿ. ಬಿ.	ಪಾಸಕ್ಲಾಸ
೩	ಜೋಶಿ, ಬಿ ಜಿ.	,,
೪	ಕಗದಾಳ, ಎಚ್. ಆರ್.	,,
೫	ಕುಲಕರ್ಣಿ, ಎಚ್. ಬಿ.	,,
೬	ನೇಸರಗಿ, ಎಮ್ ಯು.	,,
೭	ಪಟ್ಟಣಶೆಟ್ಟಿ, ಬಿ. ಮ್.	,,

ಅರ್ಬನ್ ಬ್ಯಾಂಕ ಸೆಕ್ರೆಟರಿ
ಪರೀಕ್ಷೆಯ ಪರಿಣಾಮ

——(೦)——

೧ ಜೋಶಿ, ಬಿ. ಜಿ.
೨ ಕುಲಕರ್ಣಿ, ಜಿ. ಆರ್.
೩ ಪಟ್ಟಣಶೆಟ್ಟಿ, ಬಿ. ಮ್
೪ ಸಿಂದೆ, ಜಿ. ಕೆ.

S. S. Basawanal (M. A.)
Principal
Karuatak Coop. School
Dharwar

ಬಹಿಷ್ಕಾರದ ಮೂಲಕ ಎಲ್ಲ ವ್ಯವಹಾರ ಕಟ್ಟಾದ್ದರಿಂದ, ಕಳೆದ ಮೂರು ತಿಂಗಳಲ್ಲಿ ಹಿಂದುಸ್ಥಾನದ ರೇಲ್ವೆಖಾತೆಗೆ ಒಂದೂವರೀ ಕೋಟಿ ರೂಪಾಯಿಗಳ ಪ್ರಾಪ್ತಿ ಕಡಿಮೆಯಾಗಿದೆ.

ಶಿರ್ಶಿ, ಸಿದ್ದಾಪೂರ ಮತ್ತು ಯಲ್ಲಾಪೂರ ತಾಲೂಕುಗಳಲ್ಲಿ ವನಗಾವಲದ ಸತ್ಯಾಗ್ರಹ ಮತ್ತು ಕಾಯದೆಭಂಗ ನಡೆದಿದೆ.

ಅಫ್ರಿದಿಗಳು ಪೇಶಾವರದ ತುರಂಗದ ಮೇಲೆ ಹಲ್ಲೆಮಾಡುವವರಿದ್ದಾರೆಂಬ ಹಾರಸುದ್ದೀ ಕೇಳಿ, ಅದರ ಮುಂಭಾಗದಲ್ಲಿ ಇಂಗ್ಲಿಷ ಸರಕಾರದವರು ಸೈನ್ಯದ ದೊಡ್ಡ ರಣಮಂಡಲ ಹೂಡಿದ್ದಾರೆ.

ಪುಣೆಯಲ್ಲಿ ಫರಗ್ಯುಸನ್ನ ಕಾಲೇಜದ ಮುಂದೆ ಪಿಕೆಟಿಂಗ ಮಾಡಿದ್ದರಿಂದ, ಕಾಲೇಜವು ಹಾಳುಬಿತ್ತು.

ಹುಬ್ಬಳ್ಳಿಯಲ್ಲಿ ಶ್ರೀ. ಕುಲಕರ್ಣಿ ಎಂಬವರು ಕಾಂಗ್ರೆಸ ವರ್ಕಿಂಗ ಕಮೀಟಿಯ ಠರಾವುಗಳನ್ನು ಓದಿದರೆಂಬ ಆರೋಪದಿಂದ ಅವರನ್ನು ಹಿಡಿದು ಕಲ್ಲಿಗೆ ತಂದಿದ್ದು, ವಿಚಾರಣೆಯು ಇಂದು ನಡೆಯುವದು.

ಕಿತ್ತೂರಿನಲ್ಲಿ ದಬ್ಬಾಳಿಕೆ.

ಸೋಮವಾರ, ತಾ|| ೧೧ನೇ ದಿನ ಮಧ್ಯಾಹ್ನ ೧೨ ಗಂಟೆಯಿಂದ ರಾತ್ರಿ ೮ ರ ವರೆಗೆ ಮದ್ಯದಂಗಡಿಯ ಮುಂದೆ ಕಾವಲ ನಡೆಯಿತು. ಸಂಜೆಗೆ ಪೋಲೀಸ ಇನ್ಸಪೇಕ್ಟರರು ಅಲ್ಲಿಗೆ ತಮ್ಮ ಪರಿವಾರ ಸಹ ಬಂದು ಪಿಕೆಟಿಂಗ ಮಾಡಬೇಡಿರೆಂದು ಸ್ವಯಂಸೇವಕರಿಗೆ ಕಟ್ಟಪ್ಪಣೆ ಕೊಟ್ಟರು. ಅದಕ್ಕೆ ಅವರು ಶಕ್ಯವಿಲ್ಲೆಂದು ಹೇಳಲು ಶ್ರೀ ಶಂಕರೆಪ್ಪ ಪದಕಿ ಗುರುಸಿದ್ದಯ್ಯಾ ತಿಮ್ಮಾಪೂರ ಸಂಗನಬಸಪ್ಪ ಶರಣನವರ ಮೊದಲಾದ ೭ ಜನರನ್ನು ದಸ್ತಗೀರ ಮಾಡಿ ಚಾವಡಿಗೆ ಒಯಿದರು. ಆ ದಿವಸ ಸಂತೆಯಿದ್ದದರಿಂದ ಹಳ್ಳಿಗಳ ರೈತ ಜನರ ಮನಸಿನ ಮೇಲೆ ಪರಿಣಾಮವಾಗಿದ್ದು ಒಳ್ಳೇ ಜಾಗೃತಿಯುಂಟಾಗಿದೆ. ರಾತ್ರಿ ೮ಕ್ಕೆ ಎಲ್ಲರನ್ನು ಬಿಟ್ಟರು. ೧೩ನೇ ತಾ. ನ ಸಾಯಂಕಾಲದಲ್ಲಿ ಸರೆಯ ಅಂಗಡಿಯಿಂದ ಸುಮಾರು ೩೦೦ ಫೂಟು ದೂರದಲ್ಲಿರುವ ಅಳ್ಳಿಯ ಕಟ್ಟಿಯ ಮೇಲೆ ದಿನದ ರೂಢಿಯಂತೆ ಎಷ್ಟೋ ಜನರು ಕುಳಿತಿದ್ದರು. ಅವರಲ್ಲಿ ಕೆಲವರು ಪ್ರೇಕ್ಷಕರೂ ದೇವರ ದರ್ಶನಕ್ಕೆ ಬಂದವರೂ ತಮ್ಮ ದನಕರುಗಳ ಮಾರ್ಗ ನಿರೀಕ್ಷಣೆಗಾಗಿ ಬಂದವರೂ ಇದ್ದರು. ಪೋಲಿಸರು ಬಂದು ಯಾರೂ ಇಲ್ಲಿ ಕೂಡ್ರಬೇಡಿರಿ ಎಂದು ಜುಲುಮೆಯ ಅಪ್ಪಣೆಯನ್ನೀಯಲು ಅದನ್ನು ಕೇಳದೆ ಅಲ್ಲಿಯೇ ಕುಳಿತರು. ೧೪ ಜನರನ್ನೇ ಮಾತ್ರ ಸೆರೆ ಹಿಡಿದು ಚಾವಡಿಗೆ ರವಾನಿಸಿದರು. ಗಾಂಧೀ ಟೊಪ್ಪಿಗೆಯವರನ್ನು ನೋಡಿ ನೋಡಿ ಹಿಡಿದರು. ಮುದಿಕರನ್ನು ಹುಡುಗರನ್ನು ಹಿಡಿಯಲಿಲ್ಲ. ಅಳ್ಳೀ ಕಟ್ಟಿಯ ಮೇಲೆ ಕುಳಿತವರನ್ನು ಕೈದು ಮಾಡುವರೆಂಬ ವರ್ತಮಾನವು ವಾಯುವೇಗದಿಂದ ಊರೊಳಗೆಲ್ಲ ಹರಡಲು ಎಲ್ಲ ಕಡೆಯಿಂದಲೂ ಹಿಂಡು ಹಿಂಡಾಗಿ ಜನರು ಅಲ್ಲಿ ಬಂದರು. ಸುಮಾರು ೧೦೦ ಜನ ಹೆಂಗಸರೂ ೪-೫ ನೂರು ಗಂಡಸರೂ ಕೂಡಿದ್ದರು. ಅಲ್ಲಿಯೇ ಸಭೆ ಸೇರಿ ಶ್ರೀ. ನರಸಿಂಹಾಚಾರ್ಯ ಮುಂತಾದವರು ಸ್ವಲ್ಪ ಭಾಷಣ ಮಾಡಿ ಮದ್ಯಪಾನದ ದುಷ್ಪರಿಣಾಮವನ್ನು ತಿಳಿಸುವವರಾದರು. ಪೋಲೀಸರ ಅನ್ಯಾಯದ ಹುಕುಮಿನ ಅಮಲಬಜಾವಣೆಯು ಎಷ್ಟರ ಮಟ್ಟಿಗೆ ನಡೆಯುವದೆಂಬದನ್ನು ನೋಡುವದಕ್ಕೆ ಗ್ಯಾಸ ಹಚ್ಚಿಕೊಂಡು ಸಮೂಹವು ಅಲ್ಲಿಯೇ ರಾತ್ರಿ ೮ ರ ವರೆಗೆ ತಳವೂರಿ ಕುಳಿತುಬಿಟ್ಟಿತು. ಇತ್ತ ಚಾವಡಿಯಲ್ಲಿ ಬಂಧಿಸಿದ ಎಲ್ಲರನ್ನು ೮ಕ್ಕೆ ಬಿಡಲು ಕೂಡಲೆ ಶ್ರೀ. ಬಿಂದಾಚಾರ್ಯ ಕಟ್ಟಿಯವರು ಆ ಅನ್ಯಾಯ ಹುಕುಮಿನ ನಿಷೇಧಾರ್ಥ ಕಿಂಚಿತ್ತ ಮಾತನಾಡಿದರು. ಬಳಿಕ ಮೆರವಣಿಗೆ ಹೊರಟು ಪುನಃ ಅಶ್ವತ್ಥವೃಕ್ಷದ ದರ್ಶನ ತೆಗೆದುಕೊಂಡು ಸಮೂಹವೆಲ್ಲಾ ಹೊರಡುವದಾಯಿತು.

ಬ. ಲಿ. ಆತ್ರೇಯ
ಕಾರ್ಯದರ್ಶಿ
ಕಾ. ಕ. ಕಿತ್ತೂರು.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅಮೃತ ಪ್ರತಾಪ! ವೈದ್ಯರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

[illegible] ನೀವು ಔಷಧ ತರಿಸುವಾಗ ಯಾವ ವರ್ತಮಾನಪತ್ರಿಕೆ ಜಾಹೀರಾತ [illegible] ಈ ಪತ್ರಿಕೆಯನ್ನು ನಮೂದಿಸುವದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು, ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತೆಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಅಗಸ್ಟ ಅಖೈರದೊಳಗಾಗಿ ಹತ್ತು ಜನರನು ತೆಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯು ಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ.

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗ ವಾನಿ ತೊಲಿಗಳೂ ಮತ್ತು ಹೊನ್ನಿ ಹೆಸ್ಸ ವ ತಿಸಂ ನಾಟುಗಳು

ಸಾಗವಾನಿ ಯಾ ವ ಸಾಗವಾನಿ (೬) ಫೂ ಟಿನ ಜವಳ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂ ವ ರೀಪು ವ ಶಿಲಿಂಗು ತೈಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡು ವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1448

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶನಿವಾರ ತಾರೀಖು ೧೬ ನೇ ಅಗಸ್ಟ ೧೯೩೦ (ಸಂಚಿಕೆ ೧೮೧

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾವಧೂತರ ಅಸಲರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ. ತೋಕ ತಕ್ಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್
ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವಸ್ತಿ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ವದ್ಯ ೮

ಮುಂಬಯಿಯ ಅರ್ಧ ಗಿರಣಿಗಳಿಗೆ ಬಂದ ದುಃಸ್ಥಿತಿಯು.

—(೦)—

ಲಕ್ಷ ಕೂಲಿಕಾರರು ನಿರುದ್ಯೋಗಿಯಾಗುವರು.

—(೦)—

ವಿಲಾಯತಿಯ ಬಟ್ಟೆಗಳಿಗೆ ಬಹಿಷ್ಕಾರ ಹಾಕಿದ್ದರಿಂದ ಲ್ಯಾಂಕೇಶಾಯರದ ವ್ಯಾಪಾರವು ದಿವಾಳಿಗೆ ಬಂದಿದೆ. ಬಂದರದಲ್ಲಿ ಲಕ್ಷಕ್ಕಿಂತ ಹೆಚ್ಚು ಪೆಟ್ಟಿಗೆಗಳು ಹುಳ ಹತ್ತುತ್ತ ಬಿದ್ದಿವೆ. ಮಾರ್ಕೆಟದಲ್ಲಿ ನಾಲ್ಕು ಕೋಟಿಯ ಸನಗು ಗಿರಾಕಿ ಇಲ್ಲದೆ ಕೊಳತದೆ. ವಿಲಾಯತಿಯ ಅರವೆ ಮಾರುವಂಥ ಒಂದು ಸಾವಿರ ಅಂಗಡಿಗಳುಂಟು ಇವುಗಳ ಮುಂದೆ ನಾಲ್ಕು ನೂರು ಪುರುಷರು ಮತ್ತು ಮೂರು ನೂರು ಸ್ತ್ರೀಯರು ಪಿಕೆಟಿಂಗ ಮಾಡುವರು ಹೀಗಾಗಿ ವಿಲಾಯತಿಯವರ ಬೊಬ್ಬೆ ನಡೆದಿದೆ.

ಆದರೆ ವಿಲಾಯತಿಯವರದೊಂದು ವರ್ಗವುಂಟು. ಮುಂಬಯಿಯಲ್ಲಿರುವ ಎಲ್ಲ ಗಿರಣಿಗಳು ಸ್ವದೇಶಿಯಾಗಿಲ್ಲ. ಸರಿಯರ್ಧ ಗಿರಣಿಗಳು ವಿಲಾಯತಿಯ ಬಂಡವಲ ಮತ್ತು ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿರುವವು. ಇವುಗಳಲ್ಲಿ ಹುಟ್ಟುವ ನೂಲು ಮತ್ತು ಸನಗನ್ನು ಕೊಳ್ಳಕೂಡದೆಂಬುದು ಕಾಂಗ್ರೆಸದ ಆಜ್ಞೆಯು. ಈ ಆಜ್ಞೆಯು ಮುಂಬಯಿ ಮಾತ್ರಕ್ಕೆ ಅಲ್ಲ. ಇಡೀ ಹಿಂದುಸ್ಥಾನದ ತುಂಬ ಅಮಲಿನಲ್ಲಿ ಬಂದಿದೆ ಈ ಮೂಲಕ ಈಗ ಹತ್ತು ಗಿರಣಿಗಳು ಬಂದಾಗಿ, ಇಪ್ಪತ್ತು ಸಾವಿರ ಕೂಲಿಕಾರರು ಕೆಲಸವಿಲ್ಲದವರಾಗಿದ್ದಾರೆ. ಈ ತಿಂಗಳ ಕೊನೆಯಲ್ಲಿ ಇನ್ನೂ ಕೆಲ ಗಿರಣಿಗಳು ಬಂದಾಗುವವು. ತಿಂಗಳೊಪ್ಪತ್ತಿನಲ್ಲಿ ಲಕ್ಷಕ್ಕಿಂತ ಹೆಚ್ಚು ಜನರು ಉದ್ಯೋಗ ವ್ಯವಸಾಯವಿಲ್ಲದಂತಾಗುವರು.

ಮುಂಬಯಿ ತುಂಬ ನಿರುದ್ಯೋಗಿಗಳ ಸಂಖ್ಯೆಯೇ ಹೆಚ್ಚಾಗುವದೊಂದು ಸರಕಾರಕ್ಕೆ ದೊಡ್ಡ ಚಿಂತೆಗೆ ಕಾರಣವಾಗಿದೆ. ಇವರು ತಂತಮ್ಮ ಊರಿಗೆ ಹೋಗಲು ಸರಕಾರದವರು ಆದಷ್ಟು ಸೋಯಿ ಮಾಡಿಕೊಡುವರು. ಒಟ್ಟಿನಿಂದ ಮುಂಬಯಿ ವ್ಯಾಪಾರ ಉದ್ದಿಮೆಯು ನಿಕೃಷ್ಟಸ್ಥಿತಿಗೆ ಬಂದಿದ್ದು, ಉದ್ದಿಮೆದಾರರು ಬಂದ ಹಾನಿಯನ್ನು ಭೋಗಿಸಲಿಕ್ಕೆ ಸಂತೋಷದಿಂದ ಸಿದ್ಧರಾಗಿದ್ದಾರೆ. ಇವರ ಸ್ವಾರ್ಥತ್ಯಾಗವು ಅಪೂರ್ವವಾದದ್ದು. ರಾಷ್ಟ್ರೀಯ ಬೇಡಿಕೆಗಳು ಪೂರ್ಣವಾಗುವ ತನಕ ಹರತಾಳ, ಬಹಿಷ್ಕಾರ ಮುಂತಾದ ತೀವ್ರ ಶಸ್ತ್ರಗಳನ್ನು ಹಿಡಿಯತಕ್ಕವರೇ ? ಹಿಡಿದ ಶಸ್ತ್ರಗಳನ್ನು ಬಿಡತಕ್ಕವರಲ್ಲೆಂದು ಪಂಥಗಟ್ಟಿದ್ದಾರೆ. ಬೇರೆ ಪಟ್ಟಣಗಳಲ್ಲಿಯೂ ವಿಲಾಯತಿಯ ಬಟ್ಟೆ ಇರುವಂಥ ಅನೇಕಾನೇಕ ಅಂಗಡಿಗಳುಂಟು. ಈ ಅಂಗಡಿಕಾರರು ಮುಂಬಯಿ ಬಂಧುಗಳ ಅನುಕರಣ ಮಾಡುವರೇ ?

ಡಾಕ್ಟರ ಅನಸಾರಿಯವರ ನಿಜವಾದ ದೇಶಾಭಿಮಾನ

—(೦)—

ಡಾಕ್ಟರ ಅನಸಾರಿಯವರು ಕಾಯದೆಭಂಗದಲ್ಲಿ ಮನಸ್ಸು ಹಾಕಿಲ್ಲ. ಆದರೆ ಅವರು ಕಾಂಗ್ರೆಸದ ಭಕ್ತರಾಗಿದ್ದಾರೆ. ಮೌಲಾನಾ ಅಬ್ದುಲ ಕಲಾಮ ಆಜಾದರು ಕಾಂಗ್ರೆಸದ ಅಧ್ಯಕ್ಷರಾದ ಕೂಡಲೆ ಇವರನ್ನು ವರ್ಕಿಂಗ ಕಮೀಟಿಯ ಮೆಂಬರ ಮಾಡಿಕೊಂಡರು. ಇವರು ಮೆಂಬರರಾಗುವಾಗ ಒಂದು ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿದ್ದಾರೆ. ಇವರನ್ನುವದೇನಂದರೆ-

ಸರಕಾರವು ಕಾಂಗ್ರೆಸದ ವರ್ಕಿಂಗ ಕಮೀಟಿಯನ್ನು ಬೇಕಾಯದೆಶೀರ ಮಾಡಿ, ಆಕ್ಟಿಂಗ ಪ್ರೆಸಿಡೆಂಟ ಮತ್ತು ಸೆಕ್ರೆಟರಿಯನ್ನು ದಸ್ತಗಿರ ಮಾಡಿತು. ಇದಕ್ಕೂ ಹೆಚ್ಚಿನ ಸಂಗತಿಯೇನಂದರೆ- ಮುಂಬಯಿಯಲ್ಲಿ ಅತಿಶಯ ಕ್ಷುದ್ರ ಕಾರಣದಿಂದ ವರ್ಕಿಂಗ ಕಮೀಟಿಯ ಮೆಂಬರರನ್ನು ಹಿಡಿದು ಹಾಕಿತು. ಇವೆಲ್ಲ ಕೃತಿಗಳಿಂದ ಸರಕಾರದ ಮನಸ್ಸಿನಲ್ಲೇನಿರುತ್ತದೆಂಬದು ಸ್ಪಷ್ಟವಾಗುತ್ತದೆ. ನಾನು ರಾಷ್ಟ್ರೀಯ ಸಭೆಯ ಏಕನಿಷ್ಠ ಭಕ್ತನಾಗಿದ್ದೇನೆ. ಹಿಂದುಸ್ಥಾನದಲ್ಲಿ ಪರಮ ಶ್ರೇಷ್ಠವಾದ ಕಾಂಗ್ರೆಸವನ್ನು ಕೊಲ್ಲುತ್ತಿರುವಾಗ ನಾನು ಸರಿದು, ದೂರ ನಿಂತು ನೋಡಲಾರೆನು. ಕಾಂಗ್ರೆಸದ ಅಭಿಮಾನಿಗಳೆಲ್ಲರು ತಂತಮ್ಮೊಳಗಿನ ಮತಭೇದಗಳನ್ನು ಬದಿಗಿಟ್ಟು, ಅಳಿಯಬೇಕೋ ಉಳಿಯಬೇಕೋ ? ಎಂಬ ಅವಸ್ಥೆಯುಂಟಾಗಿರುವ ಕಾಂಗ್ರೆಸವನ್ನು ಉಳಿಸಿಕೊಳ್ಳಲಿಕ್ಕೆ ಪ್ರಯತ್ನಿಸಬೇಕು.

ಡಾಕ್ಟರ ಅನಸಾರಿಯವರು ಹೇಳುವಂತೆ ಹಿಂದೂ ಮುಸಲಮಾನರೆಲ್ಲರೂ ಕಾಂಗ್ರೆಸವನ್ನು ಬದುಕಿಸಿಕೊಳ್ಳುವದು ಅತ್ಯಂತ ಶ್ರೇಷ್ಠವಾದ ಕರ್ತವ್ಯಕರ್ಮವಾಗಿರುತ್ತದೆ.

ಸರಕಾರದ ದಬ್ಬಾಳಿಕೆಯು ಪುಷ್ಟ ಬೆಳೆಯಿತು.

—(೦)—

ಕಾನಪೂರ ಜಿಲ್ಹೆಯಲ್ಲಿ ರೈತರು ಹಪ್ತೆ ಕೊಡಬಾರದೆಂಬ ದೊಡ್ಡ ಚಳವಳಿ ನಡೆದಿದೆ. ನಾಸಿಕ ಜಿಲ್ಹೆಗೆ ಸೇರಿದ ಬಾಗಲಾಣ ತಾಲೂಕಿನಲ್ಲಿ ವನಗಾವಲದ ಕಾಯದೆಭಂಗದ ಪಸೆಯಿಂದ ಗೌಡ ಕುಲಕರ್ಣಿಯರು ರಾಜೀನಾಮೆ ಕೊಡುತ್ತಿದ್ದಾರೆ ಇವರ ಸಂಖ್ಯೆಯು ನೂರಕ್ಕೆ ಏರಿದೆ ಆದ್ದರಿಂದ ಸರಕಾರದವರು ಇವೆರಡೂ ಸ್ಥಳಗಳಲ್ಲಿ ದಬ್ಬಾಳಿಕೆಯು ಬಹಳ ಬೆಳೆಸಿದ್ದಾರೆ. ಹಪ್ತೆ ಕೊಡಬಾರದೆಂದು ಸಾರುವವರಿಗೆ ಶಿಕ್ಷೆ, ರಾಜೀನಾಮೆ ಕೊಡಬೇಕೆನ್ನುವಂಥವರಿಗೆ ಶಿಕ್ಷೆ ಎಂದು ಜಾಹೀರನಾಮೆ ಹಚ್ಚಿದ್ದಾರೆ. ಇಳೇ ಮುಳುಗಿದವರಿಗೆ ಚಳಿಯ ಅಂಜಿಕೆಯೇ ?

ಒಂದು ತಿಂಗಳ ವಿಲಾಯತಿಯ ಬಟ್ಟೆಯ ವ್ಯಾಪಾರ ಬಂದು !!!

—(೦)—

ಪುಣೆಯ ದಂಡಿನ ಪೇಟೆಯಲ್ಲಿ ಬಹುತೇಕವಾಗಿ ಬಟ್ಟೆಗಳನ್ನು ಕೊಳ್ಳತಕ್ಕವರು ಯುರೋಪಿಯನ್ನರೂ, ಅವರ ನವಕರರಾಗಿರುವಂಥವರೂ ಇರುತ್ತಾರೆ. ಇವರಿಗೆ ಪರದೇಶದ ಅರವೆ ದೊರೆಯದಂತೆ ಮಾಡಬೇಕೆಂದು ಅಲ್ಲಿಯ ಹಿಂದೂ ಮುಸಲಮಾನ ಅಂಗಡಿಕಾರರು ಒಂದು ತಿಂಗಳತನಕ ವಿಲಾಯತಿಯ ಬಟ್ಟೆ ಮಾರುವ ಎಲ್ಲ ಅಂಗಡಿಗಳಿಗೆ ಬೀಗ ಹಾಕಬೇಕೆಂದು ಗೊತ್ತುಮಾಡಿ, ಆ ಪ್ರಕಾರ ಅಮಲಿನಲ್ಲಿ ತಂದಿದ್ದಾರೆ.

ಮನುಷ್ಯಗಣತಿಯಲ್ಲಿ ನಿರುದ್ಯೋಗಿಗಳ ಗಣತಿ.

—(೦)—

ಬರುವ ವರ್ಷ ಆಗುವ ಮನುಷ್ಯಗಣತಿಯಲ್ಲಿ ಸರಕಾರದವರು ಇಂಗ್ಲಿಷ ಕಲಿತು ಕೆಲಸವಿಲ್ಲದೆ ಕೂತಂಥವರೆಷ್ಟು ಜನರೆಂಬದನ್ನು ಕಂಡುಹಿಡಿಯಲು- ಒಂದು ಸ್ವತಂತ್ರ ಕೋಷ್ಟಕ ಹಾಕುವರು. ೨೦ ರಿಂದ ೪೦ ವರ್ಷಗಳಾದವರಲ್ಲೆಷ್ಟು ಜನರು ಸುಶಿಕ್ಷಿತರೆಂದೆನಿಸಿಕೊಂಡು ಹೊಟ್ಟೆಯ ಚಿಂತೆಯಿಂದ ಬಳಲುತ್ತಾರೆಂಬದನ್ನು ಈ ಕೋಷ್ಟಕದಲ್ಲಿ ಬರೆಯುವರು. ಮುಖ್ಯವಾಗಿ ಬ್ರಾಹ್ಮಣರು, ಅಸ್ಪೃಶ್ಯರು, ಉಳಿದ ಜನಾಂಗದವರ ಬಗ್ಗೆ ಬರೆದುಕೊಳ್ಳುವರು. ಇದರಿಂದ ಎಷ್ಟು ಜನರಿಗೆ ಅನ್ನವಸನಗಳ ಚಿಂತೆಯಾಗಿರುತ್ತದೆಂದು ಕಂಡು ಬರುವದು ನಿಜ. ಹೀಗೆ ಬರೆದುಕೊಳ್ಳುವದರಿಂದ ಜೀವನಕ್ಕೆ ಸಹಾಯ ಮಾಡಿದಂತಾಗುವದಿಲ್ಲವಲ್ಲ !!

ಬಾಗಿಲ ಹಾಕಿಕೊಂಡು ಒಡಂಬಡಿಕೆಯ ಪ್ರಸ್ತಾಪ.

ಪಂಡಿತರಾದ ಪಿತಾ ಪುತ್ರರು ಖಡಕಿಯ ಸ್ಟೇಶನದಲ್ಲಿಳಿದು ಯರವಡೆಗೆ ಹೋದನಂತರ ಇವರ ಹಿಂದೆ ಮುಂಬಯಿಯಿಂದ ಒಂದ ಬಂಡಿಯಲ್ಲಿ ಕೂತಿದ್ದ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರಿಗೆ ಒಂದು ಗುಪ್ತ ಪತ್ರಕೊಟ್ಟರು. ಸ್ವತಃ ಮಹಾತ್ಮರು ಬರಿದದ್ದಿತ್ತು. ಅದರಲ್ಲೇನು ಬರೆದಿತ್ತೆಂಬುದು ಇನ್ನೂ ಪ್ರಕಟವಾಗಿಲ್ಲ.

ಬುಧವಾರ ಮತ್ತು ಗುರುವಾರ ಎರಡು ದಿವಸ ಇವರೀರ್ವರು ತುರಂಗಕ್ಕೆ ಹೋಗಿ, ಬಾಗಿಲ ಹಾಕಿಕೊಂಡು ವಿಚಾರ ವಿನಿಮಯ ಮಾಡಿದರು. ಮಹಾತ್ಮರು ಸರದಾರ ಪಟೇಲರನ್ನು ಮೊದಲಿನಿಂದ ಕಡೇತನಕ ಕರಿಸಿಕೊಂಡರು. ದೇವಿ ಸರೋಜಿನಿಯವರನ್ನು ಕೆಲ ಮಾತುಗಳ ಮಟ್ಟಿಗೆ ಕರಿಸಿಕೊಂಡಿದ್ದರು. ಇವರನ್ನು ಸ್ತ್ರೀಯರ ತುರಂಗದಿಂದ ಕರೆತರಲು ಸ್ವತಃ ಜೇಲ ಸುಪರಿಂಟೆಂಡಂಟ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಹೋಗಿದ್ದರು. ಗಂಡಸರ ತುರಂಗದ ಬಾಗಿಲದಲ್ಲಿ ನೆರೆದ ವರ್ತಮಾನಪತ್ರಗಳ ಸುದ್ದಿಗಾರರು ಇವರನ್ನು ಕಂಡು ವಂದನೆ ಮಾಡಿದರು. ದೇವಿಯವರು ಆನಂದವೃತ್ತಿಯರದ್ದಂತೆ ತೋರಿತು. ಎರಡು ದಿವಸವಾಯಿತು. ಯಾವ ನಿಷ್ಕರ್ಷೆಯಾಯಿತೆಂದು ಹೇಳಲು ಶಿಷ್ಟಾಯಿಯವರು ಸಮರ್ಥರಾಗಿಲ್ಲ. ಇವರು ಗುರುವಾರ ದಿವಸ ತುರಂಗಕ್ಕೆ ಹೋಗುವಾಗ ಮತ್ತು ತಿರುಗಿ ಬಂದ ಬಳಿಕ, ಹೋಮ ಮೆಂಬರರಾದ ಮಿ. ಹಾಟಸನ್ನ ಸಾಹೇಬರನ್ನು ಕಾಣಲು ಅವರ ಬಂಗ್ಲೆಗೆ ಹೋಗಿದ್ದರೆಂದೂ, ಈ ಎಡತಾಕಪಟ್ಟಿಯು ಏಕೆಂದೂ ಜನರಿಗೆ ಗುಂಭವಿದ್ದದೆ.

ಸಂತೆಯ ಸುದ್ದಿ

ಒಂದು ಸಂತೆಯ ಸುದ್ದಿ ಹಬ್ಬಿದೆ. ತಂದೆ ಮಕ್ಕಳು ಮನೆಗೆ ಬರುವ ಮುಂಚಿತವಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಬಾರದೆಂಬ ಮತದವರಾಗಿದ್ದಾರೆಂದು ಹೇಳುವದೇ ಈ ಸುದ್ದಿಯು ಆದಷ್ಟು ಹೆಚ್ಚಿಗೆ ರಾಜಕೀಯ ಸ್ವಾತಂತ್ರ್ಯ ಕೊಡಬೇಕೆಂದು ಲಾರ್ಡ ಅಯರ್ವಿನ ಮತ್ತು ಬ್ರಿಟಿಶ ಮಂತ್ರಿಗಳ ಮತವಾಗಿದ್ದು, ಸದ್ಯ ಕೆಲವು ಸಂರಕ್ಷಿತೆಗಳನ್ನಿಟ್ಟು ಕೊಂಡು ವಸಾಹಾತಿನ ಸ್ವರಾಜ್ಯ ಕೊಡಬೇಕೆಂದು ಹೇಳುವದೇ ಇವರ ಮತವಾಗಿದೆ. ಈ ಸೂಕ್ಷ್ಮ ಮತಭೇದದ ದೆಸೆಯಿಂದ ಒಡಂಬಡಿಕೆಯು ಮುರಿಯಬಾರದೆಂದು ಮಂತ್ರಿಗಳ ಮುಖಪತ್ರವಾದ ಡೇಲಿ ಹೇರಾಲ್ಡವು ಅಂದಿರುತ್ತದೆ.

ಲಕ್ಷ ರೂಪಾಯಿಯ ಕಳವು

—(೦)—

ಕಳವಿನ ಹಸ್ತಲಾಘವ.

—(೦)—

ಕಲಕತ್ತೆಯಲ್ಲಿ ಟರ್ಫಕ್ಲಬ್ಬಿನ ಕುದುರೆಯ ಪಂದ್ಯದಲ್ಲಿ ಮಾರಿದ ಟಿಕೀಟುಗಳಿಂದ ಬಂದ ಹಣವನ್ನು ಒಂದು ಟ್ರಂಕಿನಲ್ಲಿ ಹಾಕಿ, ಟ್ರಂಕನ್ನು ಕ್ಲಬ್ಬಿಗೆ ತಕ್ಕೊಂಡು ಬಂದರು. ದಾರಿಯಲ್ಲಿಯೋ ಮೂಲದಲ್ಲಿಯೋ ಅಂಥ ಬೇರೊಂದು ಟ್ರಂಕನ್ನು ಇಟ್ಟು ಮೋಟಾರಿನಲ್ಲಿ ಹಾಕಿ ಕಳಿಸಿದರು. ಮರುದಿವಸ ರಕಮನ್ನು ಬ್ಯಾಂಕಿಗೆ ವಯ್ಯಬೇಕೆನ್ನುವಾಗ ಟ್ರಂಕಿನಲ್ಲಿ ರೂಪಾಯಿ ನೋಟುಗಳ ಬದಲು ಸೀಸಿನ ತುಂಡುಗಳಿದ್ದವು. ಹಸ್ತಚಾಪಲ್ಯದಿಂದ ಟ್ರಂಕು ನೆಗವಿ ಹಾಕಿದವರ ಶೋಧ ನಡೆದಿದ್ದು, ಸಂಶಯದಿಂದ ಒಬ್ಬ ಸಾಹೇಬನನ್ನೇ ಹಿಡಿದಿದ್ದಾರೆ.

ಮ್ಯಾಟ್ರಿಕ್ಯುಲೇಶನ ಪರೀಕ್ಷೆ.

—:(*):—

ಈ ವರ್ಷ ಆದಂಥ ಮ್ಯಾಟ್ರಿಕ್ಯುಲೇಶನ ಪರೀಕ್ಷೆಗೆ ೧೩೦೧೧ ಜನ ವಿದ್ಯಾರ್ಥಿಗಳು ಕೂತಿದ್ದರು. ಇವರಲ್ಲಿ ೪೫೯೭ ಜನರು ಪಾಸಾದರು. ಜಾತಿಯ ಪ್ರಕಾರ ಪಾಸಾದವರು:-

ಹಿಂದೂ ೩೬೮೭, ಪಾರ್ಸಿ ೧೪೫, ಕ್ರಿಶ್ಚನ್ನರು ೨೦೮, ಮುಸಲಮಾನರು ೩೩೩, ಯಹುದಿ ೨೩.

ಸ್ತ್ರೀಯರಲ್ಲಿ ೨೦೭ ಜನರು ಪಾಸಾಗಿದ್ದಾರೆ ಇವರಲ್ಲಿ ಹಿಂದೂ ೯೯, ಕ್ರಿಶ್ಚನ್ನ ೫೧, ಪಾರ್ಸಿ ೪೪, ಮುಸಲಮಾನ ೫, ಮತ್ತು ಯಹುದಿ ೮

ಶಿರ್ಸಿ ತಾಲೂಕಿನಲ್ಲಿ ಗೌಡರ ರಾಜೀನಾಮೆ.

-○()***()○-

ಶಿರ್ಸಿ ತಾಲೂಕಿನಲ್ಲಿ ವನಗಾವಲ ಮತ್ತು ಸರಕಾರದ ದಬ್ಬಾಳಿಕೆಯ ನಿಷೇಧವೆಂದು ಈ ಪರ್ಯಂತರ ೪೨ ಜನ ಗೌಡರು ರಾಜೀನಾಮೆ ಕೊಟ್ಟಿದ್ದಾರೆ .

ಶಸ್ತ್ರಯ ಮೆರವಣಿಗೆ ತೆಗೆದದ್ದಕ್ಕೆ ದಂಡ.

— ೦ ೦ —

ಅಹಮದಾಬಾದಿನಲ್ಲಿ ಶಸ್ತ್ರಗಳ ಮೆರವಣಿಗೆ ತೆಗೆದರು ಮುಂದೆ ಬ್ಯಾಂಡ ಹಚ್ಚಿದ್ದರು. ತಮ್ಮ ಅಪ್ಪಣೆ ಪಡಕೊಳ್ಳದೆ ಮೆರವಣಿಗೆ ತೆಗೆದರೆಂದು ಇವರ ಮೇಲೆ ಖಟ್ಲೆ ಮಾಡಿದರು ಮ್ಯಾಜಿಸ್ಟ್ರೇಟರು ಹತ್ತತ್ತು ರೂಪಾಯಿ ದಂಡ ಮಾಡಿದರು

ಪಂಡಿತ ದ್ವಯರನ್ನು ಸ್ಪೇಶಲ ಟ್ರೇನಿನಿಂದ ಪುಣೆಗೆ ತರುವ ವೆಚ್ಚವು ೫ ಸಾವಿರ ರೂಪಾಯಿಯಾಯಿತು. ಹೋಗುವಾಗಲೂ ಇಷ್ಟೇ ವೆಚ್ಚ ಬರುವದು.

ಸೋಲಾಪೂರದಲ್ಲಿ ಗಲ್ಲಿನ ಶಿಕ್ಷೆಯಾದ ನಾಲ್ವರೂ ಆರೋಪಿಗಳನ್ನು ಯರವಡೆಗೆ ತಂದಿದ್ದಾರೆ. ಇವರು ಪ್ರಿವ್ಹೀ ಕೌನ್ಸಿಲಕ್ಕೆ ಅಪೀಲು ಮಾಡಿದ್ದಾರೆ.

ದಿಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ಕಾಡತೂಸ ಹಾಕಿದಂಥ ಒಂದು ಪತ್ರವನ್ನು ಟಪಾಲಿನಿಂದ ಕಳಿಸಿ ಅವರಲ್ಲಿ ನಿಮ್ಮ ಜೀವಕ್ಕೆ [illegible] ಭಯ ಹಾಕಿದ್ದಾರೆ.

ಎಚ್ಚರಿಕೆ.

ಗಿರಣಿಯಲ್ಲಿ ಹಂಜಿಯನ್ನು ತೆಗೆದು ಅದರ ತುಕಡಿಗಳನ್ನು ಮಾಡಿ ಅನೇಕರು ಈ ಊರಲ್ಲಿ ಮಾರುತ್ತಿರುವರೆಂದು ತಿಳಿದುಬಂದಿದೆ. ಹೀಗೆ ಮಾಡುವದರಿಂದ ಅಜ್ಞ ಜನರನ್ನು ಎರಡು ರೀತಿಯಿಂದ ಮೋಸಗೊಳಿಸಿದಂತಾಗುತ್ತದೆ (೧) ಗಿರಣಿಯ ನೂಲಿಗೆ ಉತ್ತೇಜನ ಕೊಡುವದು ಖಾದಿಯ ತತ್ವಕ್ಕೆ ವಿರುದ್ಧವು (೨) ಒಂದೊಂದು ತುಕಡಿಗೆ ಒಂದು ಬಿಲ್ಲೆಯಂತೆ ಮಾರಿದರೆ ಒಂದು ಸೇರಿಗೆ ಒಂದು ಒಂದುವರೆ ರೂಪಾಯಿ ಬಿದ್ದಂತಾಯಿತು. ಅದೇ ಖಾದಿಯ ಅಂಗಡಿಯಲ್ಲಿ ಒಂದು ಸೇರು ಹಂಜಿಗೆ ನಾಲ್ಕು ಆಣೆ ಬೀಳುತ್ತದೆ. ಇದರ ವಿಚಾರವನ್ನು ಜನರು ಚೆನ್ನಾಗಿ ಮಾಡಬೇಕು.

ಧಾರವಾಡ–

ಶಿಕ್ಷೆ– ಶ್ರೀ ಕುಲಕರ್ಣಿಯವರಿಗೆ ಮೂರು ತಿಂಗಳು ಸಕ್ತಮ ಶಿಕ್ಷೆ ಮತ್ತು ಇಪ್ಪತ್ತು ರೂಪಾಯಿ ದಂಡವಾಯಿತು

ಶ್ರೀ ಭಾಣೇಕರರು ಸತ್ಯಾಗ್ರಹದ ಪತ್ರಿಕೆ ಹಂಚುತ್ತಿದ್ದರು ಪೋಲಿಸರು ಅವನ್ನು ಜಪ್ತ ಮಾಡಿದರು

ನಾಳಿನ ರಜೆ–

ವಾರ್ಷಿಕ ಪದ್ಧತಿಯ ಪ್ರಕಾರ ಶ್ರೀ. ಕೃಷ್ಣಜನ್ಮೋತ್ಸವದ ಹಬ್ಬದ ದೆಸೆಯಿಂದ ನಾಳಿನ ದಿವಸ ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು.

ಮಾಡಿದ್ದರಷ್ಟೇ; ಅಪೀಲಿನಲ್ಲಿ ಬಿಡುಗಡೆ ಹೊಂದಿದರು.

ಪ್ರತಿ ವರುಷದಂತೆ ಇಲ್ಲಿಯ ವಿದ್ಯಾರ್ಥಿನಿಲಯದಲ್ಲಿ ಕೃಷ್ಣಜನ್ಮೋತ್ಸವವು ಜರುಗಿತು. ವಕೀಲ ಗೋವರ್ಧನರಾಯರ, ಬೆಳಗಾವಿ ರಾಮರಾಯರ ವ್ಯಾಖ್ಯಾನಗಳು "ಶ್ರೀಕೃಷ್ಣ ಮತ್ತು ಗೀತೆ" ಈ ವಿಷಯದ ಮೇಲಾದವು.

ಇನಾಮದಾರರಿಗೆ ಮಹತ್ವದ ಸೂಚನೆ.

——(೦)——

ಪರಗಣಾ ವತನದಾರ ಘರಾಣೇದಲ್ಲಿ ಪರಾಯಿ ದತ್ತಕವಾಗಬಾರದೆಂಬ ಇಚ್ಛೆಯುಳ್ಳ ಪರಗಣಾ ವತನದಾರ ಬಾಂಧವರಿಗೆ:-

ಕೆಳಗೆ ಸಹಿ ಮಾಡಿದವರ ಕಡೆಯಿಂದಾ ಜಾಹೀರ ಮಾಡಿಕೊಳ್ಳುವದೇನಂದರೆ:-

ಪರಗಣಾ ವತನಗಳು ಗಾರ್ಡನ ಸೆಟ್ಲಮೆಂಟಿನ ಶರ್ತುಗಳಿಗನುಸರಿಸಿ ನಡಿಯುತ್ತವೆ. ಮತ್ತು ಆದರ ಮೂರನೇ ಶರ್ತಿನಲ್ಲಿ ಹೊರಗಿನ ದತ್ತಕ ಮಾಡಿಕೊಳ್ಳಬೇಕಾದರೆ ಜಮಾಪತ್ತು ಹಿಸೇದಾರರ ಸಮ್ಮತಿಯಿಂದಾ ಅರ್ಜಿಮಾಡಿ ಒಂದು ಆಣೆ ನಜರಾಣೆ ಕೊಡಲಿಕ್ಕೆ ಕಬೂಲಮಾಡಿ ಸರಕಾರೀ ಮಂಜೂರಿ ಪಡಕೊಂಡು ಮಾಡಿಕೊಳ್ಳಬೇಕೆಂತಾ ಇರುತ್ತದಷ್ಟೇ; ಆದರೆ ಇತ್ತೀಚೆಗೆ ಕೆಲವು ಹೊರಗಿನ ದತ್ತಕಗಳು ಮೇಲಿನ ಶರ್ತಿಗೆ ವಿರುದ್ಧವಾಗಿ ಆಗಲಿಕ್ಕೆ ಹತ್ತಿರುತ್ತವೆ. ಇಂಥ ದತ್ತಕಗಳು ವ್ಯಾಲಿಡ್ ಇರುತ್ತವೆಂತಾ ಮುಂಬಯಿ ಹಾಯಕೋರ್ಟಿನಲ್ಲಿ L. R. 27 B. P. 75 (ದತ್ತೋ ವಿ. ಬಾಳಾಜಿ) ಇದರಲ್ಲಿ ಠರಾವು ಸುದ್ಧಾ ಆಗಿರುತ್ತದೆ. ಇದರ ಮೇಲೆ ಪ್ರಿವ್ಹಿ ಕೌನ್ಸಿಲಕ್ಕೆ ಅಪೀಲ ಆಗದೆ ಹಾಗೇ ಉಳಿದಿರುತ್ತದೆ. ಹೀಗಿದ್ದರೂ ಈ ನಿರ್ಣಯವು ಯೋಗ್ಯವಲ್ಲ. ಇದನ್ನು ಚ್ಯಾಲೇಂಜ ಮಾಡಿ ರದ್ದು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂತಾ ಬಾಂಬೆ ಗವ್ಹರ್ನಮೆಂಟಿನವರು ತಮ್ಮ G-R-R-D 9234/1928 ಇದರಲ್ಲಿ ಠರಾವು ಮಾಡಿರುತ್ತಾರೆ. ಮತ್ತು ಅದರಂತೆ ಹಾಯಕೋರ್ಟಿನ ಅಪೀಲ ನಂಬರ 508/1927 ಇದರಲ್ಲಿ ಪಕ್ಷಕಾರರಾಗಲಿಕ್ಕೆ ಅರ್ಜಿ ಸಹ ಕೊಟ್ಟರು ಆದರೆ ಹಾಯಕೋರ್ಟಿನವರು ಸರಕಾರದವರನ್ನು ಪಕ್ಷಕಾರ ಮಾಡಿಕೊಳ್ಳದೆ ಕೇವಲ ೧೭ನೇ ಬಾಂಬೇ ನಿಕಾಲಿ ಆಗಿ ಬಹಳ ದಿವಸವಾದ್ದರಿಂದಲೂ ಮತ್ತು ಮುಂದೆ ಇವತ್ತಿನವರೆಗೆ ಪ್ರಿವ್ಹಿ ಕೌನ್ಸಿಲಕ್ಕೆ ಒಂದಾದರೂ ಅಪೀಲು ಹೋಗಿದ್ದರಿಂದಲೂ ಅದರ ಯೋಗ್ಯಾಯೋಗ್ಯತೆಯ ಬಗ್ಗೆ ವಿಚಾರ ಮಾಡುವದಿಲ್ಲವೆಂತಾ ನಿರ್ಣಯ ಮಾಡಿ ಅಪೀಲು ಕಿತ್ತು ಹಾಕಿದರು. ಕಾರಣ ಈ ಪ್ರಶ್ನವನ್ನು ನಮ್ಮ ಪ್ರಿವ್ಹಿ ಕೌನ್ಸಿಲವರಿಗೆ ವೈದು ನಿಕಾಲಿ ಮಾಡಿಕೊಳ್ಳುವದು ಎಲ್ಲ ಪರಗಣಾ ವತನದಾರ ಜನರಿಗೆ ಹಿತಕರವಿರುತ್ತದೆ. ಇಲ್ಲದಿದ್ದರೆ ನಿಷ್ಕಾರಣ ತಂಟೆ ಬೆಳೆದು ಮನೆತನಗಳು ಹಾಳಾಗಲಿಕ್ಕೆ ಕಾರಣವಾಗುತ್ತವೆ. ಕಾರಣಾ ಮೇಲಿನ ಅಪೀಲನ್ನು ಪ್ರಿವ್ಹಿ ಕೌನ್ಸಿಲಕ್ಕೆ ವೈಯ್ಯಬೇಕೆಂತಾ ನಮ್ಮ ಅಪೇಕ್ಷೆ ಇರುತ್ತದೆ. ಆದರೆ ಅದಕ್ಕೆ ಖರ್ಚು ೧೨-೧೫ ಸಾವಿರದ ವರೆಗೆ ಬೇಕಾಗುತ್ತದೆ. ಕಾರಣಾ ಒಬ್ಬರ ಯೋಗ್ಯತೆಯು ಹೋಗಿ ನಡಿಯುತ್ತದೆ. ಕಾರಣಾ ಪರಗಣಾ ವತನದಲ್ಲಿ ಪರಾಯಿ ದತ್ತಕವಾಗಬಾರದೆಂದು ಇಚ್ಛೆಯುಳ್ಳ ಯಾವತ್ತು ಪರಗಣಾ ವತನ[illegible] ಜನರು ಮುದ್ದತ ಮಾಡಿ ಕೆಲವು [illegible] ಕೂಡಿಸಿಕೊಟ್ಟರೆ ನಾವೂ ಕೆಲವು ಹಾಕಿ ಈ ಪ್ರಶ್ನವನ್ನು ಒಮ್ಮೆ ಪ್ರಿವ್ಹಿ ಕೌನ್ಸಿಲವರಿಗೆ ವೈಯ್ದು ನಿಕಾಲಿ ಮಾಡಿಕೊಳ್ಳಬೇಕೆಂತಾ ನಮ್ಮ ಅಪೇಕ್ಷೆ ಇದೆ. ಕಾರಣಾ ತಮ್ಮೆಲ್ಲರಿಗೆ ವಿನಂತಿ ಮಾಡಿಕೊಂಡಿರುತ್ತೇನೆ. ಹಿಂದೆ ೧೭ನೇ ಬಾಂಬೇ ನಿಕಾಲ ಆದ ಕಾಲಕ್ಕೆ ಎಲ್ಲ ವತನದಾರ ಜನರು ಕೂಡಿ ಅದನ್ನು ಪ್ರಿವ್ಹಿ ಕೌನ್ಸಿಲವರಿಗೆ ವೈಯುವ ಶ್ರಮಪಟ್ಟಿದ್ದರೆ, ಈಗ ಬಹಳ ದಿವಸಗಳವರಿಗೆ ಸುಮ್ಮನೆ ಕೂತಿರುತ್ತೀರಿ ಈಗ ನಾವು ವಿಚಾರ ಮಾಡಲಾರೆವೆಂದು ಹಾಯಕೋರ್ಟಿನವರಿಂದಾ ಅನಿಸಿಕೊಳ್ಳುವ ಪ್ರಸಂಗವು ಬರುತ್ತಿದ್ದಿಲ್ಲ. ಈಗಾದರೂ ಪ್ರಯತ್ನ ಮಾಡಿದರೆ ಮುಂದಿನವರ ಕಡಿಂದಾದರೂ ನಾವು ಅನಿಸಿಕೊಳ್ಳಲಿಕ್ಕಿಲ್ಲ. ಕಾರಣಾ ಯಾವತ್ತು ಪರಗಣಾ ವತನದಾರರು ಕೂಡಿ ಈ ಅಪೀಲನ್ನು ಪ್ರಿವ್ಹಿ ಕೌನ್ಸಿಲವರಿಗೆ ವೈಯ್ಯುವದಕ್ಕೆ ಸಹಾಯ ಮಾಡುವರೆಂದು ಪೂರಾ ನಂಬಿ ವಿನಂತಿ ಮಾಡಿಕೊಂಡಿರುತ್ತೇನೆ. ಸಹಾಯ ಮಾಡಲಿಚ್ಛಿಸುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬೇಕು.

ಓರ್ವ ಪರಗಣೆ ವತನದಾರ
C/o G. G. Guttal, pleader
Dharwar

ನೋಟೀಸಿನ ದರಗಳು

ಸಿಂಗಲ ಕಾಲಮಿನ ಪಕ್ತಿ ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ. ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

[illegible] ಉಯಲು ಜನರಿಗೆ ಅನುಕೂಲತೆಗೆ [illegible], ಒಂದಕ್ಕೆ ನಾಲ್ಕು ರೂ [illegible] ಬರುವರುದ [illegible] ವರ್ಗವನ್ನು ನಾವು [illegible] ಈಗಾಗಲೇ ಅನೇಕರು ಶಿಕ್ಷಣ [illegible] ಪ್ರತಿ ತಿಂಗಳಲ್ಲಿಯೂ [illegible] ಬೇಕಾದ್ದರಿಂದ [illegible] ಮುಂದಾಗಿನ [illegible] ಆಗಸ್ಟ ಅಖೈರಿನೊಳಗಾಗಿ [illegible] ಆದ್ದರಿಂದ ಕೂಡಲೆ ಅರ್ಜಿ [illegible] ಸ್ಥಳ ಕಾಯಿಕೊಳ್ಳಬೇಕು. [illegible] ಸಮಕ್ಷಮ ಅಥವಾ ಪತ್ರ [illegible].

ಪ್ರೊ. ವ್ಹಿ. ಎಸ. ಇಟಗಿ.
[illegible], ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ಕಿಸಂ ನಾಟುಗಳು

ಸಾಗವಾನಿ ಯಾ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊಯಿದ ಹಲಗಿಗಳು ವ ಜಂತಿ ವ ರೀಪು ವ ತಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಧಿಶೆಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಸೋಮವಾರ ತಾರೀಖು ೧೮ ನೇ ಅಗಸ್ಟ ೧೯೩೦ (ಸಂಚಿಕೆ ೧೮೩

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾವಧೂತರ ಆಸನದ, ಶ್ರೀ. ಆರೂಢ ಸ್ವಾಮಿಗಳ ಕೃಪೆಯುಳ್ಳ ಮತ್ತು ಮನೆತನದರಾದ ಶ್ರೀ ಸಜ್ಜನರ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮನ್ನಿಸಿದ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕಡಿಮೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ, ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಯಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ, ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ. ಹೋಲ ತಕ್ಕೊಳ್ಳುವವರಿಗೆ ನೂರಕ್ಕೆ ಭರ್ಪೂರ ಕಮೀಶನ ದೊರೆಯುವದು.

ಜಿ. ಸಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್ಸ
ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ರ ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ "	೭-೦-೦
೩ "	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಶ್ರಾವಣ ವದ್ಯ ೧೦

ಒಡಂಬಡಿಕೆಯ ಎರಡನೆಯ ದಿವಸ.

—(೦)—

ಕಿಡಕಿಯಿಂದ ಪ್ರಮುಖ ರಾಜಬಂದಿಗಳ ದರ್ಶನ.

—(೦)—

ಬುಧವಾರ ಪ್ರಾತಃಕಾಲದ ೧೧ ರಿಂದ ಅಪರಾಣ್ಹದ ತನಕ ಯರವಡೆಯ ತುರಂಗದಲ್ಲಿ ನಡೆದ ವಿಚಾರ ವಿನಿಮಯವು ಮುಗಿಯಲಿಲ್ಲ. ಆದುದರಿಂದ ಗುರುವಾರ ಮಧ್ಯಾನ್ಹನಂತರ ಮೂರು ಗಂಟೆಗೆ ಪುನಃ ಚರ್ಚೆ ನಡೆಯಬೇಕೆಂದು ಗೊತ್ತಾಗಿತ್ತು. ನಡುವೆ ಇಷ್ಟು ಅವಕಾಶ ಕೊಡಲಿಕ್ಕೆ ಮಹಾತ್ಮರೇ ಮೊದಲಾಗಿ ಅಲ್ಲಿ ರಾಜಬಂದಿಯಾಗಿರುವ ಪ್ರಮುಖರು ತಂತಮ್ಮೊಳಗೆ ಹಲವು ಪ್ರಶ್ನೆಗಳನ್ನು ಕುರಿತು ಖಂಡಿತವಾದ ನಿರ್ಣಯ ಮಾಡಿಕೊಳ್ಳಲು ಅವಕಾಶ ದೊರೆಬೇಕೆಂದಿತ್ತು. ಒಳಗೇನು ನಡೆಯಿತೆಂಬದನ್ನು ಯಾರೂ ಹೇಳರು. ದೇವಿ ಸರೋಜನಿಯವರು ತಮ್ಮ ತುರಂಗದಿಂದ ಇಲ್ಲಿಗೆ ಬರುವಾಗ ಬಾಗಿಲದಲ್ಲಿ ಕಾಯ್ದುಕೊಂಡ ಜನರು ವಿಷಯದ ಮಹತ್ವವನ್ನು ತಮಗೆ ತಿಳಿದಂತೆ ಚರ್ಚಿಸುವರು. ತರ್ಕವಿತರ್ಕ ಮಾಡುವರು. ಮುನ್ನಾ ದಿವಸ ಸರ ತೇಜಬಹಾದ್ದೂರ ಸಪ್ರು, ಬ್ಯಾರಿಸ್ಟರ ಜಯಕರ, ಜೇಲ ಸುಪರಿಂಟೆಂಡೆಂಟರು ಸ್ತ್ರೀಯರ ತುರಂಗಕ್ಕೆ ಹೋಗಿ, ದೇವಿ ಸರೋಜನಿಯವರನ್ನು ಕರತಂದರು. ಆದರೆ ಇಂದು ಜೇಲರರೊಬ್ಬರೇ ಇವರನ್ನು ಮೋಟಾರಿನಲ್ಲಿ ಕೂಡಿಸಿಕೊಂಡು ಬಂದರು. ದೇವಿಯವರು ಬುಧವಾರ ನೀಲೀ ಬಣ್ಣದ ಸೀರೆಯುಟ್ಟಿದ್ದರು. ಇಂದು ಅದು ಕಿರಮಂಜಿ ಬಣ್ಣದ್ದಾಗಿತ್ತು. ನೆರೆದ ಜನರು ಇವರಿಗೆ ವಂದನೆ ಮಾಡುವಾಗ, ಅದಕ್ಕೆ ಪ್ರತಿಯಾಗಿ ಕೈಬೀಸಿ, ತಾವೂ ಹಾಸ್ಯಮುಖ ಮಾಡುವರು. ಇವರು ಅಂದು ಬಹಳ ಹೊತ್ತು ಇಲ್ಲಿರಲಿಲ್ಲ. ಬಹಳವಾಗಿ ಚರ್ಚೆಯೂ ನಡೆದಂತೆ ತೋರಲಿಲ್ಲ. ಒಂದೂವರೇ ಗಂಟೆಯಲ್ಲಿಯೇ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಹೊರಗೆ ಬಂದರು. ಇವರು ಹೊರಗೆ ಬರುವಾಗ ಮೇಲುಪ್ಪರಿಗೆಯ ಕಿಟಕಿಯಿಂದ, ಶ್ರೀ ಜಯರಾಮದಾಸ, ಪಂಡಿತ ಜವ್ಹೇರಲಾಲ, ಸರದಾರ ಪಟೇಲರು ಬಂದು ನೆರೆದ ಜನರಿಗೆ ದರ್ಶನಲಾಭ ಕೊಟ್ಟರು. ಇವರ ಸಂದಿಯಲ್ಲಿ ಡಾಕ್ಟರ ಹರ್ಡೀಕರರೂ ಕಾಣಿಸಿದರು.

ಸರ ಸಪ್ರು ಸಾಹೇಬರು ಹೊರಗೆ ಬಂದಕೂಡಲೆ ವರ್ತಮಾನಪತ್ರಗಳ ಸುದ್ದಿಗಾರರು ಜೇನನೊಣಗಳಂತೆ ಇವರನ್ನು ಮುಕುರಿದರು.

“ಈಗ್ಗೇ ಕೊನೆಯ ಪರಿಣಾಮ ಹೇಳಲಾರೆವು. ಏಕಂದರೆ ಈ [illegible] ಪರಿಣಾಮ ಹೇಳುವಂತೆ ಆಗಿರುವದೇ ಇಲ್ಲ. ನಾಳೆ ಮುಂಜಾನೆ ನಾವು ಪುನಃ ಕೂಡುತ್ತೇವೆ”

ಎಂದು ಸರ ಸಾಹೇಬರು ಇವರಿಗೆ ಹೇಳಿದರು. ಇಂದಿನ ಸಂಭಾಷಣೆಯು ಬೇಗನೆ ಮುಗಿಯಲಿಕ್ಕೆ ಒಂದು ಕಾರಣವುಂಟಾಯಿತು. ಮುನ್ನಾ ದಿವಸ ಬ್ಯಾರಿಸ್ಟರ ಜಯಕರರು ಲಾರ್ಡ ಆಯರ್ವಿನಸಾಹೇಬರಿಗೆ ತಾರು ಮಾಡಿದರು. ಅವರ ಉತ್ತರದ ದೆಸೆಯಿಂದ, ಚರ್ಚೆಯನ್ನು ಮಧ್ಯಾನ್ಹಕ್ಕೆ ಹಾಕಿದರು. ಆಗ ಕೂಡ ಸಾಹೇಬರಿಂದ ಉತ್ತರ ಬಂದ್ದರಿಂದ, ಕಮೀಟಿಯನ್ನು ಮುಂದೆ ಹಾಕಿದರೆಂದು ಲೋಕವಾರ್ತೆ. ನೀವು ಲಾರ್ಡ ಆಯರ್ವಿನಸಾಹೇಬರಿಗೆ ತಾರು ಮಾಡಿದ್ದೀರಾ ಎಂದು ಬ್ಯಾರಿಸ್ಟರರನ್ನು ಕೇಳಲು ಅವರು ಇಲ್ಲೆಂದು ಉತ್ತರ ಕೊಟ್ಟರು. ರಾಜಕಾರಣದಲ್ಲಿ ಜನರು ಯಾವಾಗಲು ಇದ್ದ ಸಂಗತಿ, ನಡೆದ ಸಂಗತಿ ಹೇಳಲು ಕಿವಿಯ ಮೇಲೆ ಕಯ್ಯಿಟ್ಟುಕೊಳ್ಳುವದು ವಾಡಿಕೆಯಾಗಿದೆ.

ಭಾಗಲುಕೋಟೆಯ ಸುಪ್ರಸಿದ್ಧ ಕಾಂಗ್ರೆಸ ಮುಂದಾಳುಗಳೂ “ಕನ್ನಡಿಗ” ದ ಸಂಪಾದಕರೂ ಆದ ಶ್ರೀ ಮಂಗಳವೇಢೆ ಶ್ರೀನಿವಾಸರಾಯರು ಹಾಗೂ ಅಖಿಲ ಭಾರತೀಯ ಚರಕಾ ಸಂಘದ ಶ್ರೀ. ಕಾರಖಾನೀಸರೂ ಬಿಟ್ಟು ಬಂದರು. ವಿಜಾಪುರದಲ್ಲಿ ಇವರ ಮೆರವಣಿಗೆಯಾಗಿ, ದಾರಿಗುಂಟ ಆರತಿಗಳಾದವು. ಸಾಯಂಕಾಲದ ಸಭೆಯಲ್ಲಿ ಅಭಿನಂದನೆಯಾಯಿತು.

ಮೈಸೂರಿನ ದಿವಾನರು ರಾವುಂಡ ಟೇಬಲಕ್ಕೆ ಹೊರಡುವ ಮೊದಲು ಸಂಸ್ಥಾನದ ಪ್ರಜಾಪ್ರತಿನಿಧಿಗಳ ಕೂಡ ಆಪ್ತಾಲೋಚನೆ ಮಾಡುವರು.

ತುರಂಗದಿಂದ ಬಂದವರ ಅಭಿನಂದನ ಮಾಡಬೇಡಿರಿ; ತುರಂಗಕ್ಕೆ ಹೋಗುವಂಥವರ ಅಭಿನಂದನ ಮಾಡಿರೆಂದು, ಈಗ ತಾನೇ ಬಂಧಮುಕ್ತರಾಗಿ ಬಂದ ವಿ. ಜೆ. ಪಟೇಲರು ಮುಂಬಯಿಯಲ್ಲಿ ಭಾಷಣ ಮಾಡಿದ್ದಾರೆ.

ಒಡಂಬಡಿಕೆಯ ಒಂದು ಪ್ರವೇಶ ಮುಗಿಯಿತು.

ಮಹಾತ್ಮರು ಮತ್ತು ತಂದೆ ಮಕ್ಕ ಲಾರ್ಡ ಆಯರ್ವಿನಸಾಹೇಬರಿಗೆ ಪತ್ರಬರೆಕೊಟ್ಟರು.

—(೦)—

ಶುಕ್ರವಾರ ಸಾಯಂಕಾಲದ ನಾಲ್ಕುಗಂಟೆಯ ಸಮಯದಲ್ಲಿ ಸರ ಸಪ್ರು, ಮತ್ತು ಬ್ಯಾರಿಸ್ಟರ ಜಯಕರರು ಕೊನೆಯಸಾರೆ ತುರಂಗದಿಂದ ಹೊರಬಿದ್ದರು. ಕೂಡಲೆ ಕೆಳಗೆ ಕೊಟ್ಟಂತೆ ನಡೆದ ಸಂಗತಿಗಳನ್ನು ಜಾಹೀರಮಾಡಿದರು.

ನಾವು ಪುಣೆಯಲ್ಲಿ ಯರವಡೆಗೆ ಮೂರಸಾರೆ ಹೋಗಿ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ಮತ್ತು ಜವ್ಹೇರಲಾಲ ಮುಂತಾದ ಮುಂದಾಳುಗಳ ಕೂಡ ರಾಜಿಯ ಸಂಬಂಧವಾಗಿ ಚರ್ಚೆ ಮಾಡಿದೆವು. ಮಹಾತ್ಮರು, ನೆಹರು ಪ್ರಭೃತಿಗಳು ಮತ್ತು ಕಾಂಗ್ರೆಸದ ಬೇರೆ ಮುಂದಾಳುಗಳು ಹ್ವಾಯಿಸರಾಯರ ಹೆಸರಿನಿಂದ ಬರೆದ ಪತ್ರವನ್ನು ನಮ್ಮ ಕಯ್ಯಲ್ಲಿ ಕೊಟ್ಟಿದ್ದಾರೆ ನಾವು ಅದನ್ನು ಹ್ವಾಯಿಸರಾಯರಿಗೆ ಕೊಡತಕ್ಕವರಿದ್ದೇವೆ. ಮತ್ತು ಅವರ ಕೂಡ ಮಾತಾಡತಕ್ಕವರಾಗಿದ್ದೇವೆ. ಮಹಾತ್ಮರು ಮತ್ತು ನೆಹರೂಅವರು ಕೊಟ್ಟ ಪತ್ರದಲ್ಲಿ ರಾಜಿಯ ಶರ್ತುಗಳಿರುತ್ತವೆ

ತಮ್ಮನ್ನು ಕಾಣಲಿಕ್ಕೆ ಬರಬೇಕೆಂದು ಹ್ವಾಯಿಸರಾಯರಿಂದ ತಾರು ಬಂದನಂತರ ಇವರು ದಿಲ್ಲಿಗೆ ಪ್ರಯಾಣ ಬೆಳೆಸುವರು.

ಅಬ್ಬೀಗೇರಿ ಶಾಲೆಯ ದುರ್ದಶೆ.

ರಾ. ಬ. ಕಂಬಳಿ ಪಾಟೀಲರ ಆಗಮನ ಮತ್ತು ನಿರಾಶೆ.

ಅಬ್ಬೀಗೇರಿಯ ಗಂಡು ಹುಡುಗರ ಶಾಲೆಯ ಹೆಡ್ಡಮಾಸ್ತರರಾದ ಶ್ರೀ ಶಂಕರಪೂರರನ್ನು ಅನ್ಯಾಯವಾಗಿ ವರ್ಗಮಾಡಿದ್ದರಿಂದ, ಶಾಲೆಯ ವಿದ್ಯಾರ್ಥಿಗಳು ಸಂಪು ಮಾಡಿ ನಾಲ್ಕು ತಿಂಗಳ ಮೇಲಾಯಿತು. ಆದರೂ ಮೇಲಧಿಕಾರಿಗಳು ತೀವ್ರವೇ ಶಾಲೆ ಸುರುವಾಗುವಂತೆ ಈ ವರೆಗೂ ಏರ್ಪಾಡು ಮಾಡಲಿಲ್ಲ. ಸ್ಕೂಲಬೋರ್ಡಿನ ಕೂಡ ರಾಜೀ ಮಾಡಿಸುತ್ತೇವೆಂದು ರಾ. ಬ. ಕಂಬಳಿ ಮತ್ತು ರಾ. ಬ. ಡಿ. ಎಸ್. ಪಾಟೀಲರು ಅಲ್ಲಿಗೆ ಹೋದರು. ಶ್ರೀ ಶಂಕರಪೂರರನ್ನು ವರ್ಗಮಾಡಿದ್ದು ಅನ್ಯಾಯವಾಯಿತೆಂದು ಮನ್ನಿಸಿ, ಸದ್ಯ ಅಸಿಸ್ಟಂಟ ಮಾಸ್ತರರನ್ನು ಕೊಡುತ್ತೇವೆ ಮೂರು ತಿಂಗಳನಂತರ ಶ್ರೀ

ಶ್ರೀ ಕಳಕಾಪೂರ ಇವರ್ನ ವರ್ಗಮಾಡುತ್ತೇವೆಂದ ರಾಜೀ ಮಾಡಿಕೊಂಡು ಹೋಗಿ ಒಂದು ತಿಂಗಳಾಯಿತು ಆದರೇನು? ಅಸಿಸ್ಟಂಟ ಮಾಸ್ತರರು ಬಂದಿಲ್ಲ; ಹುಡುಗರು ಶಾಲೆಗೆ ಹೋಗುವದಿಲ್ಲ. ನಡುವಿನವರು ಪಿಕ್ಕೆಟಿಂಗ ಮತ್ತು ಉಳಿದವರ ಕಣ್ಣಲ್ಲಿ ಮಣ್ಣು ಹಾಕುವ ಉಪದ್ವ್ಯಾಪ ನಡೆಸಿದ್ದಾರೆ. ಮಾಳಕನದಿಂದ ಕೆಲ ಹುಡುಗರು ಶಾಲೆಗೆ ಹೋದರು. ಈಗ ಆವ ಹುಡುಗರನ್ನೂ ಶಾಲೆ ಬಿಡಿಸುವ ವಿಚಾರ ನಡೆದಿದೆ. ಸ್ಕೂಲಬೋರ್ಡಿನವರು, ರಾ. ಬ. ದ್ವಯರೂ ಪ್ರಕರಣವನ್ನು ಲಕ್ಷ್ಯಕ್ಕೆ ತಂದು, ಗೊಂದಲ ಹೂಡಲಾರರೆಂದು ಆಶಿಸುತ್ತೇವೆ.

ಪೇಶಾವರದಲ್ಲಿ ಪುನಃ ಲಷ್ಕರೀ ಕಾಯದೆಯ ಜಾಹೀರನಾಮೆ.

—(೦)—

ಆಫ್ರಿಡಿಗಳ ಪುಂಡಾಟಿಕೆಯು ಹೆಚ್ಚಾದ್ದರಿಂದ, ಲಾರ್ಡ ಆಯರ್ವಿನಸಾಹೇಬರು ಅರ್ಡಿನನ್ಸ ತೆಗೆದು, ಪೇಶಾವರ ಜಿಲ್ಹೆಯ ತುಂಬ ಲಷ್ಕರೀ ಕಾಯದೆಯನ್ನು ಜಾಹೀರ ಮಾಡಿ, ಮೆ ಪಿಯರ್ಸ ಸಾಹೇಬರಿಗೆ ಸರ್ವಾಧಿಕಾರ ಕೊಟ್ಟಿದ್ದಾರೆ. ರಾವಳಪಿಂಡಿ, ನೌಶರಾ, ಕೋಹಟ ಮತ್ತು ರಿಸಾಲಪೂರದ ನಿಟ್ಟಿಗೆ ಇಂಗ್ರೇಜಿ ಸೈನ್ಯ ಹೋಗುತ್ತಿರುವದು. ಬ್ರಿಟಿಶ ನೌಕರಿನವನ್ನು ಬುಡಮೇಲು ಮಾಡಬೇಕೆನ್ನುವ ಆಫ್ರಿಡಿಗಳಿಗೆ ಯಾರಾದರೂ ಸಹಾಯ ಮಾಡಿದರೆ-ಆಶ್ರಯಕೊಟ್ಟರೆ- ಅಥವಾ ಅನ್ನಸಾಮಗ್ರಿ ಪೂರೈಸಿದರೆ- ಹತ್ತು ವರ್ಷಗಳವರೆಗೆ ಶಿಕ್ಷೆ ಕೊಡಲ್ಪಡುವದೆಂದೂ ಇಂಗ್ರೇಜ ಹದ್ದಿನವರಿಗೆ ಭಯ ಹಾಕಿದ್ದಾರೆ.

ಮಹಾತ್ಮರನ್ನೂ ಅಬ್ದುಲ ಗಫಾರರನ್ನೂ ಬಿಡುವತನಕ ಯುದ್ಧ.

—(೦)—

ಆಫ್ರಿಡಿ ಜನರು ಒಂದು ಪತ್ರವನ್ನು ಸರಹದ್ದಿನಲ್ಲಿರುವ ಇಂಗ್ರೇಜ ರಾಜ್ಯಭಾರರಿಗೆ ಬರೆದು

> „ಸ್ವಂತ ಹಿತಕ್ಕಾಗಿ ನಾವು ಯುದ್ಧಹೂಡಿಲ್ಲ. ಕಾಂಗ್ರೆಸ ಮತ್ತು ಖಿಲಾಪತಕ್ಕೆ ಸಹಾಯ ಮಾಡುವದಕ್ಕಾಗಿ ನಾವು ಹೊರಬಿದ್ದಿದ್ದೇವೆ. ಮಹಾತ್ಮರನ್ನೂ, ಮೌ. ಅಬ್ದುಲಗಫಾರರನ್ನೂ ಬಂಧಮುಕ್ತ ಮಾಡುವವರೆಗೆ ಯುದ್ಧಮಾಡುವೆವು”

ಎಂಬದಾಗಿ ಆ ಪತ್ರದಲ್ಲಿ ಬರೆದಿದ್ದಾರೆ.

ಬಂಗಾಲ ರೇಲ್ವೆಯಲ್ಲಿ ಟ್ವೇರಮೂನಸಿಂಬಲ್ಲಿಯ ದಂಡಿನ ಛಾವಣಿಗೆ ವ್ಯಾಗನದಲ್ಲಿ ಹೇರಿ ಹೋಗುತ್ತಿದ್ದ ಕಾಡತೂಸಿನ ಪೆಟ್ಟಿಗೆಗಳಲ್ಲಿ ನಾಲ್ಕು ಪೆಟ್ಟಿಗೆಗಳೇ ಮಟಮಾಯವಾಗಿರುತ್ತವೆ.

ಶಿರ್ಸಿ ತಾಲೂಕಿನಲ್ಲಿ ಗೌಡಿಕೆಗೆ ರಾಜೀನಾಮೆ ಕೊಟ್ಟವರ ಹೆಸರುಗಳು.

—(೦)—

೧ ಸುಬ್ಬಾಭಟ್ಟ ಕಲಗುಂಡಿಕೊಪ್ಪ ೨ ಸುಬ್ಬಯ್ಯ ವೆಂಕಪ್ಪ ಒಪ್ಪನಹಳ್ಳಿ ೩ ವೆಂಕಭಟ್ಟ ಹಿಂಡಭಟ್ಟ ಶಾಂತಿ ಬಕ್ಕಳ ೪ ವಾಮನ ವೆಂಕಟೇಶ ಶೆಟ್ಟಿ ಸಣ್ಣಕೇರಿ ೫ ದೇವಪ್ಪ ಮಂಜಪ್ಪ ಹೆಗಡೆ ಹಲದೇವಿಸ ಗಾಡೇ ೬ ಲಿಂಗಪ್ಪ ವೆಂಕಪ್ಪ ಹೆಗಡೆ ಉಂಬಳೀಕೊಪ್ಪ, ಉಂಬಳೀಕೊಪ್ಪ, ಬಿಸಳ್ಳಿ ಸೋಮನಳ್ಳಿ ೭ ಲಕ್ಷ್ಮೀನಾರಾಯಣ ಪರಶುರಾಮಯ್ಯಾ ಹೆಗಡೆ ಮರಗುಂಜ, ಕಾಡಿಗಿಕೊಪ್ಪ ೮ ರಾಮಕೃಷ್ಣ ಶಿವರಾಮಭಟ್ಟ ಮೆಣಸಿ, ಬಾಳೇಕಾಯಿ, ಮಾನಳ್ಳಿ ೯ ರಾಮಕೃಷ್ಣ ಸುಬ್ಬಾಭಟ್ಟ ಗುಂಡಳ್ಳಿ, ಅರಗಿನಮನೆ ೧೦ ಗಣಪ್ಪ ವೆಂಕಪ್ಪ ಹೆಗಡೆ ಗೂಗಾರಖೂರ, ಕಾನಮುಸ್ಕಿ, ಹಳ್ಳಿಗದ್ದೆ ೧೧ ಗಣಪಭಟ್ಟ ಭೈರಿಭಟ್ಟ ಕಳವೆ ೧೨ ರಾಮಚಂದ್ರ ಶಿವರಾಮ ಹೆಗಡೆ ಮತ್ತಿಸಾರ, ಸೋಂಡಲಹಳ್ಳಿ ೧೩ ಸುಬ್ರಾಯ ತಿಮ್ಮಪ್ಪ ಹೆಗಡೆ ಕಾನಳ್ಳಿ ೧೪ ರಾಮಕೃಷ್ಣ ತಿಮ್ಮಯ್ಯಾ ಹೆಗಡೆ ಮಣದೂರ, ಹುಡೇಮನೆ ಸಾಲಕಣಿ ೧೫ ನಾರಾಯಣ ತಿಮ್ಮಯ್ಯ ಹೆಗಡೆ ಸೈಗಾ, ಜಡ್ಡಿಗದ್ದೆ, ಕೊಡಗಿಹಳ್ಳಿ ೧೬ ಸುಬ್ರಾಯ ಹೆಗಡೆ ಹೆಗ್ಗಾರ ೧೭ ತಿಮ್ಮಣ್ಣಾ ವೆಂಕಪ್ಪ ಹೆಗಡೆ ಕಕ್ಕಳ್ಳಿ, ನೆಂಸಗ್ರಾಮ, ಧಾಣನಗಿರಿ ೧೮ ತಿಮ್ಮಯ್ಯ ಅನಂತ ಹೆಗಡೆ ದೊಡ್ಡನಹಳ್ಳಿ, ಬೇಗಡ್ಡೆ, ೧೯ ಸುಬ್ರಾಯ ಹೆಗಡೆ ಹೂಕಸ, ಜಾನಮನೆ, ದಂಡದಮನೆ, ಹನಮಂತಿ ೨೦ ಮಹಬಲೇಶ್ವರ ಸುಬ್ರಾಯ ಹೆಗಡೆ ಇಮಗಲಿಕೊಪ್ಪ ಬಾಳಿಕೊಪ್ಪ ೨೧ ಮಹಾಬಲೇಶ್ವರ ಹೆಗಡೆ ನೆಗ್ಗು ೨೨ ಎಚ್ ವೆಂಕಟರಮಣ ನಾರಾಯಣ ಹೆಗಡೆ ಊರತೋಟ ೨೩ ತಿಮ್ಮಯ್ಯ ಶಂಕರಪ್ಪ ಹೆಗಡೆ ಕುಳವೆ, ಬರೂರ, ಹಡಿಗೇರಿ, ಕಾನೇರಿ, ತೋಳನಹಳ್ಳಿ, ಗಡಳ್ಳಿ ೨೪ ಶಾಂತಪ್ಪ ಶಿವರಾಮಪ್ಪ ಹಲಗದ್ದೆ ೨೫ ಸುಬ್ರಾಯ ತಿಮ್ಮಣಭಟ್ಟ ಮುಸ್ಕಿಗ್ರಾಮ ಸಿರಗಣಿ ೨೬ ವಿಶ್ವೇಶ್ವರ ವೆಂಕಟರಮಣ ಹೆಗಡೆ ಹುಳಗೋಳ ೨೭ ರಾಮಕೃಷ್ಣ ಶಂಬಯ್ಯಾ ಹೆಗಡೆ ಟಿಪ್ಪಳ್ಳಿ ೨೮ ನಾಗಭಟ್ಟ, ದೇವಭಟ್ಟ ಅರಸಾಪೂರ ಗೋಳಿಕೊಪ್ಪ ೨೯ ಸಣ್ಣಯ್ಯ ನಾಯ್ಕ ವೆಂಕಯ್ಯ ನಾಯ್ಕ ಬೇಮೆ, ಮುರೇಂಹಳ್ಳಿ ೩೦ ಸತ್ಯನಾರಾಯಣ ಗಣಪ್ಪಭಟ್ಟ ಅಸಾಲಾ, ಬೊಮ್ಮನಹಳ್ಳಿ ೩೧ ದತ್ತಾತ್ರೇಯ ರಾಮಚಂದ್ರಭಟ್ಟ ಪೋಗದ್ದೆ, ಚಾಂದಕ ೩೨ ಸೋಮಪ್ಪ ಹೆ|| ಜಾಗನಹಳ್ಳಿ ಬಾಳೇಗಾರ, ಬಿಸಲಕೊಪ್ಪ ೩೩ ತಿಪ್ಪ, ಕಾಳಣ್ಣ ಸಾಡನಹಳ್ಳಿ, ಗೌಡಳ್ಳಿ ಗ್ರಾಮ ೩೪ ರಾಮಚಂದ್ರ ಗಣಪಭಟ್ಟ ಸದಾಶಿವಳ್ಳಿ, ದಾಸನಗದ್ದೆ ೩೫ ವೆಂಕಪ್ಪ ಹೆಗಡೆ ದೇವಕುಂಬ್ರಿ ಹಣಗಾರ ೩೬ ಈಶ್ವರ ಹೆಗಡೆ ಮಣದೂರ, ಹಕ್ರಮನೆ ೩೭ ವಿಶ್ವೇಶ್ವರ ವೆಂಕಪ್ಪ ಹೆಗಡೆ ಉಂಚಳಿ ೩೮ ವೆಂಕಟರಮಣ ಗಣಪ್ಪಯ್ಯ ಹೆಗಡೆ ಬೆಣ್ಣಮನಹಳ್ಳಿ ೩೯ ವಿಶ್ವೇಶ್ವರ ಹೆಗಡೆ ಹೊಸ ಕ್ಯಾನಗೋಡು ೪೦ ಗಣಪಯ್ಯ ಸುಬ್ಬಯ್ಯ ಹೆಗಡೆ ಕಕ್ಕೋಡ.

ಇನ್ನೆರಡು ರಾಜೀನಾಮೆಗಳು ಟಪ್ಪಾಲದಾರಿ ಹೋಗಿವೆ.

ಕಲಕತ್ತೆಯ ಕೌನ್ಸಿಲದಲ್ಲಿ ಕೋಲಾಹಲ.

—(೦)—

ಹಿಂದೂ ಮೆಂಬರರು ಕೌನ್ಸಿಲಕ್ಕೆ ಶರಣು ಹೊಡೆದರು.

—(೦)—

ಕಲಕತ್ತೆಯ ಕೌನ್ಸಿಲದಲ್ಲಿ ವಿದ್ಯಾಖಾತೆಯ ಮಂತ್ರಿಯಾದ ಮೌ. ನಿಜಾಮುದ್ದೀನಸಾಹೇಬರು ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಅಮಲಿನಲ್ಲಿ ತರುವದಕ್ಕಾಗಿ ರೈತ ಮತ್ತು ಜಮೀನದಾರರ ಮೇಲೆ ಶಿಕ್ಷಣದ ಲೋಕಲ ಫಂಡನ್ನು ಕೂಡಿಸಬೇಕೆಂದು ಒಂದು ಬಿಲ್ಲು ತಂದಿದ್ದಾರೆ. ಈ ಫಂಡಿನಿಂದ ಸರಕಾರಕ್ಕೆ ಒಂದು ಕೋಟಿಯ ಆದಾಯವಾಗುವದು. ತೆರಿಗೆಯಲ್ಲಿ ಇದು ಬಲು ಜಾಂದ. ಆವರೆ ಕೌನ್ಸಿಲದಲ್ಲಿದ್ದ ಇಬ್ಬರೂ ಮುಸಲಮಾನ ಮಂತ್ರಿಗಳು ದೇಶಹಿತ ನೋಡದೆ, ಸ್ವಜಾತಿಯ ಹಿತವನ್ನೇ ನೋಡುತ್ತಿದ್ದರಿಂದ, ಹಿಂದೂ ಮಂತ್ರಿಯಾದ ಸರ ಕ. ಮಾರಾಯರವರು ಮಂತ್ರಿಪದಕ್ಕೆ ರಾಜೀನಾಮೆ ಕೊಟ್ಟರು. ರಾಜೀನಾಮೆಯು ದೊಡ್ಡ ಚರ್ಚೆಯ ವಿಷಯವಾಯಿತು. ಇದರ ಮರು ದಿವಸ ಕೂಡಿದ ಕೌನ್ಸಿಲದಲ್ಲಿ ಹಿಂದೂ ಮೆಂಬರರು ಮಂತ್ರಿ ನಿಜಾಮುದ್ದೀನರ ಶಿಕ್ಷಣದ ಬಿಲ್ಲಿಗೊಂದು ಉಪಸೂಚನೆ ತಂದರು. ಆದರೆ ಮೌ. ನಿಜಾಮುದ್ದೀನಸಾಹೇಬರು ಇದನ್ನು ಅಂಗೀಕರಿಸದ್ದರಿಂದ, ಹಿಂದೂ ಆದಂಥ ೫೨ ಜನ ಮೆಂಬರರು ಕೌನ್ಸಿಲದಲ್ಲಿ ಕೂತು ಪ್ರಯೋಜನವಿಲ್ಲೆಂದು ಹೇಳಿ, ಅದಕ್ಕೆ ಶರಣು ಹೊಡೆದು ಹೊರಬಿದ್ದು ಬಂದರು. ಅಧ್ಯಕ್ಷರಾದ ರಾಜಾ ಸರ ಮನ್ಮಥನಾಥ ರಾಯ ಚವಧರಿಯವರು ಉಭಯತರಿಗೂ ಒಡಂಬಡಿಕೆ ಮಾಡಿಸತೊಡಗಿದ್ದಾರೆ.

ಐದೇ ವರ್ಷ ತಡೆಯಿರಿ. ಹಿಂದುಸ್ಥಾನದಲ್ಲಿರುವ ಯುರೋಪಿಯನ್ನರ ಎಲ್ಲ ವ್ಯಾಪಾರದ ನಾಶವಾಗುವದೆಂದು ಕಲಕತ್ತೆಯ ಒಬ್ಬ ಇಂಗ್ಲಿಷ ವರ್ತಕರು ತಮ್ಮ ಜನರಿಗೆ ಎಚ್ಚರಿಕೆಯ ಮಾತು ಹೇಳಿದ್ದಾರೆ.

ಧಾರವಾಡ—

ಶ್ರೀ. ದೇವಜಿ ಬಾಬು ಮುತಾಲಿಕ ದೇಸಾಯಿಯವರು ಇಲ್ಲಿಯ ಡಿಸ್ಟ್ರಿಕ್ಟ ಕೋರ್ಟಿಗೆ ಅಪೀಲು

R. N. B 1448

ಸಾಪ್ತಾಹಿಕ ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೩೧। ಧಾರವಾಡ ಮಂಗಳವಾರ ತಾರೀಖು ೧೯ ನೇ ಅಗಸ್ಟ ೧೯೩೦ (ಸಂಚಿಕೆ ೩

ಒಡಂಬಡಿಕೆಯ ಎರಡನೆಯ ಪ್ರವೇಶ ಮುಗಿಯಿತು.

ಸ್ಪೇಶಲ ಟ್ರೇನಿನಿಂದ ಯರವಡೆಗೆ ಪಿತಾಪುತ್ರರ ಆಗಮನ.

ಬಾಗಿಲ ಮುಚ್ಚಿ ಸಂಧೀ ವಿಚಾರ.

ಮಹಾತ್ಮಾ ಗಾಂಧಿಯವರ ಕೂಡ ಒಡಂಬಡಿಕೆಯ ವಿಷಯವಾಗಿ ಸಂಭಾಷಣೆ ಮಾಡಲು ಹಿಂದುಸ್ಥಾನ ಸರಕಾರದವರು ಸಮ್ಮತಿ ಕೊಟ್ಟರೂ ಆ ವರೆ ಅವರೆಂದು ಯರವಡೆಗೆ ಬರುವರೆಂಬದನ್ನು ಗುಪ್ತವಾಗಿಟ್ಟರು. ಸರಕಾರದವರು ಮೊದಲು ರೇಲ್ವೆ ಕಂಪನಿಯವರಿಗೆ ತಿಳಿಸಿ, ಸ್ಪೇಶಲ ಟ್ರೇನಿನ ವ್ಯವಸ್ಥೆ ಮಾಡಿದರು. ಬಳಿಕ ಆದಿತ್ಯವಾರ ಪ್ರಾತಃಕಾಲದಲ್ಲಿ ರೇಲ್ವೆ ಮತ್ತು ಡಿಸ್ಟ್ರಿಕ್ಟ ಪೋಲೀಸರಿಗೆ ಅಂದು ರಾತ್ರಿ [illegible]ದಿಂದ ಪುಣೆಗೆ ಸ್ಪೇಶಲ ಟ್ರೇನು ಹೋಗುವದೆಂದೂ ಈ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಬೇಕೆಂದೂ ಸೂಚಿಸಿದರು. ಆ ಪ್ರಕಾರ ಅವರು ಎಲ್ಲ ವ್ಯವಸ್ಥೆ ಮಾಡಿಕೊಂಡರು. ಮತ್ತು ಅಂದೇ ಸಾಯಂಕಾಲದಲ್ಲಿ ಪಂಡಿತರ ಕುಟುಂಬದವರಿಗೆ ಈ ವರ್ತಮಾನ ತಿಳಿಸಿದರು ಶ್ರೀ. ಸೌ॥ ಮೋತಿಲಾಲ ನೆಹರು ಇವರು ಸೊಸೆ, ಮಕ್ಕಳು ಅಳಿಯಂದಿರು ಮತ್ತು ಬೇರೆ ಹತ್ತಿರದವರನ್ನು ಕೂಡಿಕೊಂಡು ಮೋಟಾರಿನಿಂದ [illegible]ಕ್ಕೆ ಬಂದರು. ಬಾಗಿಲದಲ್ಲಿ ಪಂಡಿತದ್ವಯರ ಕೂಡ ಪುಣೆಗೆ ಬರತಕ್ಕ ಪೋಲಿಸ ಅಮಲದಾರರು ಸಿದ್ಧರಾಗಿ ನಿಂತಿದ್ದರು ಇವರ ಕೂಡ ಮಾತಾಡುತ್ತಾ ನಿಂತಿರುವಾಗ ಪಂಡಿತದ್ವಯರು ಜೇಲಿನ ಟಾವರದಲ್ಲಿ ಕೂತೇ [illegible] ದಿಂದ ಹೊರಗೆ ಬಂದರು. ಎಲ್ಲರೂ ಸ್ಟೇಶನಕ್ಕೆ ಬಂದರು. ಓಡಿ ಹೋದಲಿಕ್ಕೆ ಹಿಡಿಸ್ವದೇ ವಿವಿ [illegible] ಚಂದ್ರಪ್ರಕಾಶ ಸ್ಪಷ್ಟವಾಗಿದ್ದಿಲ್ಲ. ಪಂಡಿತ ಮೋತಿಲಾಲರು ಬಾಕಿ ಅರಿವೆ ಕೊಟ್ಟದ್ದರಿಂದ, ಬೇರೆಯವರಿಗೆ ಅವರ ಗುರ್ತು ಚನ್ನಾಗಿ ಹತ್ತಲಿಲ್ಲ. ಪಂಡಿತ ಜವ್ಹೇರಲಾಲರು ಸುಭ್ರ ಖಾದೀ ಧಾರಣ ಮಾಡಿದ್ದರಿಂದ ಕೂಡಲೆ ಅವರ ಗುರ್ತು ಹತ್ತಿತು. ಆ ಹೊತ್ತು ಇವರು ಮನೆಯವರ ಕೂಡ ಮಾತಾಡಿದರು. ಗಂಟೆಯಾದ ಕೂಡಲೆ ಇವರಿಗಾಗಿ ಕಾದಿಟ್ಟ ಫಸ್ಟ್‌ಕ್ಲಾಸ ಡಬ್ಬಿಯಲ್ಲಿ ಕೂತರು. ಇವರ ಸಂಗಡ ಒಬ್ಬ ಮುಸಲಮಾನ ಮತ್ತು ಒಬ್ಬ ಯುರೋಪಿಯನ್ನ ಡೆಪುಟಿ ಸುಪರಿಂಟೆಂಟರು ಕೂತರು. ಒಂಡಿಯಲ್ಲಿ ಇನ್ನೊಂದು ಫಸ್ಟ್‌ಕ್ಲಾಸ, ಒಂದು ಥರ್ಡಕ್ಲಾಸ ಮತ್ತು ಒಂದು ಬ್ರೇಕ ಇಷ್ಟೇ ಇದ್ದವು ಥರ್ಡದಲ್ಲಿ ಒರ ಪೋಲಿಸರು ಕೂತರು. ಒಂಡಿ ಯಾರಡವಾಗ [illegible] ಜಯಜಯಕಾರ ಮಾಡಿದರು [illegible] ಪ್ರೇಮಂತೆಯೂ ಮಗನು ಸಂಪೂರ್ಣ ಆನಂದ ವೃತ್ತಿಯುಳ್ಳವರಂತೆಯೂ ಕಂಡು ಬಂದರು.

ಇವರ ಸಂಗಡ ಡಾಕ್ಟರ ಸಯ್ಯದ ಮಹಮದರನ್ನೂ ಕರೆದೊಯ್ದಿದ್ದಾರೆ

ಒಂಡಿಯು ಮಂಗಳವಾರ ರಾತ್ರಿ ಒಂಬತ್ತಕ್ಕೆ ಖಡಕಿ ಸ್ಟೇಶನಕ್ಕೆ ಬಂತು. ಇಲ್ಲಿ ಇವರನ್ನು ಇಳಿಸಿಕೊಂಡು ನೀಟಗಿ ಯರವಡೆಗೆ ಕರಕೊಂಡು ಹೋದರು ಅಂದೇ ನಾಯಂಕಾಲದಲ್ಲಿ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಪುಣೆಗೆ ಬಂದರು ಬುಧವಾರ ಮಧ್ಯಾಹ್ನದಲ್ಲಿ [illegible] ಚರ್ಚೆಯು ಮುಗಿದ [illegible] ಮಹಾತ್ಮರು ಪರಸ್ಪರ ವಿಚಾರ ವಿನಿಮಯ ಮಾಡಲಿಕ್ಕೆ ಅವಕಾಶ [illegible] ಮಾಡಿದ್ದರು. [illegible] ವ್ಯವಹಾರ [illegible] ದವರದ್ದರು. ಪಂಡಿತರಿಗೆ ಸ್ಥಳ [illegible] ಯಾಗಿದ್ದು ಇವರನ್ನು [illegible] ಕರಕೊಂಡು ಹೋದರು. ಮತ್ತು ಸರದಾರ ಪಟೇಲ ಜಯರಾಮದಾಸರನ್ನು ಯರವಡೆಗೆ ಕರಕೊಂಡು ಬಂದರು. ಅಲ್ಲೇನು ನಡೆಯಿತೆಂಬದನ್ನು ಕೇಳಲು ಜಗತ್ತೇ ಆತುರವಾಗಿರುತ್ತದೆ.

ಬಾಗಿಲ ಹಾಕಿಕೊಂಡು ಒಡಂಬಡಿಕೆಯ ಪ್ರಸ್ತಾಪ.

ಪಂಡಿತರಾದ ಪಿತಾ ಪುತ್ರರು ಖಡಕಿಯ ಸ್ಟೇಶನದಲ್ಲಿಳಿದು ಯರವಡೆಗೆ ಹೋದನಂತರ ಇವರ ಹಿಂದೆ ಮುಂಬಯಿಯಿಂದ ಒಂದು ಒಂಡಿಯಲ್ಲಿ ಕೂತಿದ್ದ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರಿಗೆ ಒಂದು ಗುಪ್ತ ಪತ್ರ ಕೊಟ್ಟರು. ಸ್ವತಃ ಮಹಾತ್ಮರು ಬರೆದದ್ದಿಷ್ಟು ಅದರಲ್ಲೇನು ಬರೆದಿತ್ತೆಂಬದು ಇನ್ನೂ ಪ್ರಕಟವಾಗಿಲ್ಲ.

ಬುಧವಾರ ಮತ್ತು ಗುರುವಾರ ಎರಡು ದಿವಸ ಇವರಿಬ್ಬರು ತುರಂಗಕ್ಕೆ ಹೋಗಿ, ಬಾಗಿಲ ಹಾಕಿಕೊಂಡು ವಿಚಾರ ವಿನಿಮಯ ಮಾಡಿದರು. ಮಹಾತ್ಮರು ಸರದಾರ ಪಟೇಲರನ್ನು ಮೊದಲಿನಿಂದ ಕಡೆತನಕ ಕರಿಸಿಕೊಂಡರು. ದೇವಿ ಸರೋಜನಿಯವರನ್ನು ಕೆಲ ಮಾತುಗಳ ಮಟ್ಟಿಗೆ ಕರಿಸಿಕೊಂಡಿದ್ದರು. ಇವರನ್ನು ಸ್ತ್ರೀಯರ ತುರಂಗದಿಂದ ಕರೆತರಲು ಸ್ವತಃ ಜೇಲ ಸುಪರಿಂಟೆಂಡೆಂಟ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಹೋಗಿದ್ದರು. ಗಂಡಸರ ತುರಂಗದ ಬಾಗಿಲದಲ್ಲಿ ನೆರೆದ ವರ್ತಮಾನಪತ್ರಗಳ ಸುದ್ದಿಗಾರರು ಇವರನ್ನು ಕಂಡು ವಂದನೆ ಮಾಡಿದರು. ದೇವಿಯವರು ಆನಂದವೃತ್ತಿಯುಳ್ಳವರಂತೆ ತೋರಿತು. ಎರಡು ದಿವಸವಾಯಿತು. ಯಾವ ನಿಷ್ಕರ್ಷೆಯಾಯಿತೆಂದು ಹೇಳಲು ಶಿಷ್ಟಾಯಿಯವರು ಸಮರ್ಥರಾಗಿಲ್ಲ. ಇವರು ಗುರುವಾರ ದಿವಸ ತುರಂಗಕ್ಕೆ ಹೋಗುವಾಗ ಮತ್ತು ತಿರುಗಿ ಬಂದ ಬಳಿಕ, ಹೋಮ ಮೆಂಬರರಾದ ಮಿ. ಹಾಟಸನ್ನ ಸಾಹೇಬರನ್ನು ಕಾಣಲು ಅವರ ಬಂಗ್ಲೆಗೆ ಹೋಗಿದ್ದರೆಂದೂ, ಈ ವಿಚಾರಕಪಟ್ಟಿ [illegible] ಕೆಂದೂ ಜನರಿಗೆ ಗುಂಭವಿದ್ದದೆ.

ಸಂಶಯದ ಸುದ್ದಿ

ಒಂದು ಸಂಶಯದ ಸುದ್ದಿ ಹಬ್ಬಿದೆ. ಕಂದಿ ಮಕ್ಕಳು ಮನಸಿಗೆ ಬರುವ ಮುಂಚಿತವಾಗಿ ಒಡಂಬಡಿಕೆಯನ್ನು ಮಾಡಿ [illegible] ಮಾಡವಾಗಿದ್ದಾರೆಂದು ಕೇಳಿಬಂದಿದೆ ಈ ಸುದ್ದಿಯು ಅದಷ್ಟು [illegible]ಗೆ ರಾಜಕೀಯ ಸ್ವಾತಂತ್ರ್ಯ ಕೊಡಬೇಕೆಂದು ಲಾರ್ಡ ಆಯರ್ವಿನ ಮತ್ತು ಬ್ರಿಟಿಶ ಮಂತ್ರಿ [illegible] ಮತವಾಗಿದ್ದು, ಸದ್ಯ [illegible] ಕೊಂಡು ವಸಾಹತಿಕ ಸ್ವರಾಜ್ಯ ಕೊಡಬೇಕೆಂದಿ [illegible] ಹೀಗೆ ಡೊಮಿನಿಯನ ಒಡಂಬಡಿಕೆಯ ಮುಂದಿನ [illegible] ಮಂತ್ರಿಗಳ ಮಹಾಪ್ರಯತ್ನದ ಫಲಶ್ರುತಿ [illegible] ಅರಿವಾಗುತ್ತದೆ

ಶ್ರೀ [illegible] ಶಿಕ್ಷೆಗಳಗ-

೧ ಶ್ರೀ ಅನಂತರಾವ ಜ [illegible]

೨ [illegible] ಕುಲಕರ್ಣಿ

೩ [illegible]

ಈ ಮೂವರಿಗೆ ನಾಲ್ಕು ತಿಂಗಳ [illegible] ಶಿಕ್ಷೆಗಳಾದವು-

ಶ್ರೀ ಗೋವಿಂದ ಒಂದ ವರ್ಷ [illegible]

[illegible] ಯಲ್ಲಿ [illegible] ಮನ ದಾಖಲಿನ ಠಾಣೆಗೆ [illegible] ಗುತ್ತಿದ್ದ [illegible] ಪಟ್ಟಿಗೆಗಳಲ್ಲಿ [illegible] ಟ್ಟಿಗೆಗಳೇ ಮಾಯವಾಗಿರುತ್ತವೆ

ಒಡಂಬಡಿಕೆಯ ಎರಡನೆಯ ದಿವಸ.

ಕಿಡಕಿಯಿಂದ ಪ್ರಮುಖ ರಾಜಬಂದಿಗಳ ದರ್ಶನ.

ಬುಧವಾರ ಪ್ರಾತಃಕಾಲದ ೧೧ ರಿಂದ ಅಪರಾಹ್ಣದ ತನಕ ಯರವಡೆಯ ತುರಂಗದಲ್ಲಿ ನಡೆದ ವಿಚಾರ ವಿನಿಮಯವು ಮುಗಿಯಲಿಲ್ಲ. ಆದುದರಿಂದ ಗುರುವಾರ ಮಧ್ಯಾಹ್ನನಂತರ ಮೂರು ಗಂಟೆಗೆ ಪುನಃ ಚರ್ಚೆ ನಡೆಯಬೇಕೆಂದು ಗೊತ್ತಾಗಿತ್ತು ನಡುವೆ ಇಷ್ಟು ಅವಕಾಶ ಕೊಡಲಿಕ್ಕೆ ಮಹಾತ್ಮರೇ ಮೊದಲಿಗರು ಅಲ್ಲಿ ರಾಜಬಂದಿಯಾಗಿರುವ ಪ್ರಮುಖರು ತಂತಮ್ಮೊಳಗೆ ಹಲವು ಪ್ರಶ್ನೆಗಳನ್ನು ಕುರಿತು ಖಂಡಿತವಾದ ನಿರ್ಣಯ ಮಾಡಿಕೊಳ್ಳಲು ಅವಕಾಶ ದೊರೆಯಬೇಕೆಂದಿತ್ತು. ಒಳಗೇನು ನಡೆಯಿತೆಂಬದನ್ನು ಯಾರೂ ಹೇಳರು. ದೇವಿ ಸರೋಜನಿಯವರು ತಮ್ಮ ತುರಂಗದಿಂದ ಇಲ್ಲಿಗೆ ಬರುವಾಗ ಬಾಗಿಲದಲ್ಲಿ ಕಾಯ್ದುಕೊಂಡ ಜನರು ವಿಷಯದ ಮಹತ್ವವನ್ನು ತಮಗೆ ತಿಳಿದಂತೆ ಚರ್ಚಿಸುವರು. ತರ್ಕವಿತರ್ಕ ಮಾಡುವರು ಮುನ್ನಾ ದಿವಸ ಸರ ತೇಜಬಹಾದೂರ ಸಪ್ರು, ಬ್ಯಾರಿಸ್ಟರ ಜಯಕರ, ಜೇಲ ಸುಪರಿಂಟೆಂಡೆಂಟರು ಸ್ತ್ರೀಯರ ತುರಂಗಕ್ಕೆ ಹೋಗಿ, ದೇವಿ ಸರೋಜನಿಯವರನ್ನು ಕರತಂದರು. ಆದರೆ ಇಂದು ಜೇಲರರೊಬ್ಬರೇ ಇವರನ್ನು ಮೋಟಾರಿನಲ್ಲಿ ಕೂಡಿಸಿಕೊಂಡು ಬಂದರು. ದೇವಿಯವರು ಬುಧವಾರ ನೀಲೀ ಬಣ್ಣದ ಸೀರೆಯುಟ್ಟದ್ದರು. ಇಂದು ಅದು ಕೆಂಪುಮಿಂಚಿ ಬಣ್ಣದ್ದಾಗಿತ್ತು. ನೆರೆದ ಜನರು ಇವರಿಗೆ ವಂದನೆ ಮಾಡುವಾಗ, ಅದಕ್ಕೆ ಪ್ರತಿಯಾಗಿ ಕೈಬೀಸಿ, ತಾವೂ ಹಾಸ್ಯಮುಖ ಮಾಡುವರು. ಇವರು ಅಂದು ಬಹಳ ಹೊತ್ತು ಇಲ್ಲಿರಲಿಲ್ಲ. ಒಹಳವಾಗಿ ಚರ್ಚೆಯು ನಡೆದಂತೆ ತೋರಲಿಲ್ಲ. ಒಂದೂವರೇ ಗಂಟೆಯಲ್ಲಿಯೇ ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಹೊರಗ ಬಂದರು ಇವರು ಹೊರಗೆ ಬರುವಾಗ ಮೇಲುಪ್ಪರಿಗೆಯ ಕಿಟಕಿಯಿಂದ, ಶ್ರೀ ಜಯರಾಮದಾಸ, ಪಂಡಿತ ಜವ್ಹೇರಲಾಲ, ಸರದಾರ ಪಟೇಲರು ಒಂದು ನೆರೆದ ಜನರಿಗೆ ದರ್ಶನಲಾಭ ಕೊಟ್ಟರು. ಇವರ ಸಂದಿಯಲ್ಲಿ ಡಾಕ್ಟರ ಮಹಮೂದರೂ ಕಾಣಿಸಿದರು

ಸರ ಸಪ್ರು ಸಾಹೇಬರು ಹೊರಗೆ ಬಂದಕೂಡಲೆ ವರ್ತಮಾನಪತ್ರಗಳ ಸುದ್ದಿಗಾರರು ಜೇನನೊಣಗಳಂತೆ ಇವರನ್ನು ಮುಕರಿದರು.

"ಇಗ್ಗೇ ಕೊನೆಯ ಪರಿಣಾಮ ಹೇಳಲಾರೆವು ಏನಂದರೆ ಈ ಪರ್ಯಂತರ ಪರಿಣಾಮ ಹೇಳುವಂತೆ ಆಗಿರುವದೇ ಇಲ್ಲ ನಾಳೆ ಮುಂಜಾನೆ ನಾವು ಪುನಃ ಕೂಡುತ್ತೇವೆ"

ಎಂದು ಸರ ಸಾಹೇಬರು ಇವರಿಗೆ ಹೇಳಿದರು ಇಂದಿನ [illegible] ಘೋಷಣೆಯು ಕೊನೆ ಮುಗಿಯಲಿಕ್ಕೆ ಒಂದು ಕಾರಣವುಂಟಾಯಿತು. ಮುನ್ನಾ ದಿವಸ ಬ್ಯಾರಿಸ್ಟರ ಜಯಕರರು ಲಾರ್ಡ ಆಯರ್ವಿನಸಾಹೇಬರಿಗೆ ತಾರು ಮಾಡಿದರು ಅವರ ಉತ್ತರದ ದೆಸೆಯಿಂದ, ಚರ್ಚೆಯನ್ನು ಮಧ್ಯಾಹ್ನಕ್ಕೆ ಹಾಕಿದರು ಆಗ [illegible] ಸಾಹೇಬರಿಂದ ಉತ್ತರ ಬಂದದ್ದರಿಂದ, ಕಮೀಟಿಯನ್ನು ಮುಂದೆ ಹಾಕಿದರೆಂದ [illegible] ತಿ. ನೀವು ಲಾರ್ಡ ಆಯರ್ವಿನಸಾಹೇಬರಿಗೆ ತಾರು ಮಾಡಿದ್ದೇನು ಎಂದು ಬ್ಯಾರಿಸ್ಟರರನ್ನು ಕೇಳಲು ಅವರು ಇಲ್ಲೊಂದು ಉತ್ತರ ಕೊಟ್ಟರು ರಾಜಕಾರಣದಲ್ಲಿ ಜನರು ಯಾವ ಗೆಲ್ಲು ಇದ್ದ ಸ್ಥಿತಿ ನಡೆದ ಸಂಗತಿ [illegible] ಕಿವಿಯ ಮೇಲೆ ಕಯ್ಯಿಟ್ಟುಕೊಳ್ಳುವದು ಮಹತ್ವವಾಗಿದೆ

[illegible] ಒಂದವರ [illegible] ಮಾತಬೇಡಿ, ತುರಂಗಕ್ಕೆ ಹೋಗುವ [illegible] ನ [illegible] ಈಗ [illegible] ಬಂಧಮುಕ್ತರಾಗಿ ಒಂದ [illegible] ಮಹಲ್ಲಿ [illegible] ಯಲ್ಲಿ ಭಾಷಣ ಮಾಡಿದ್ದಾರೆ

ಮಹಾತ್ಮರು ಮತ್ತು ತಂದೆ ಮಕ್ಕಳು ಲಾರ್ಡ ಆಯರ್ವಿನಸಾಹೇಬರಿಗೆ ಪತ್ರಬರಕೊಟ್ಟರು.

ಶುಕ್ರವಾರ ಸಾಯಂಕಾಲದ ನಾಲ್ಕು ಯ ಸಮಯದಲ್ಲಿ ಸರ ಸಪ್ರು ಮತ್ತು ಬ್ಯಾ ರ ಜಯಕರರು ಕೊನೆಯಸಾರೆ ತುರಂಗದಿಂದ ರಬಿದ್ದರು. ಕೂಡಲೆ ಕೆಳಗೆ ಕೊಟ್ಟಂತೆ ಸ ಸಂಗತಿಗಳನ್ನು ಜಾಹೀರಮಾಡಿದರು.

ನಾವು ಪುಣೆಯಲ್ಲಿ ಯರವಡೆಗೆ ಮೂರ ರೆ ಹೋಗಿ ಮಹಾತ್ಮಾ ಗಾಂಧಿ, ಪಂಡಿತ ಮೋ ಲಾಲ ಮತ್ತು ಜವ್ಹೇರಿಲಾಲ ಮುಂತಾದ ಮು ಳುಗಳ ಕೂಡ ರಾಜಿಯ ಸಂಬಂಧವಾಗಿ ಚ ಮಾಡಿದೆವು. ಮಹಾತ್ಮರು, ನೆಹರು ಪ್ರಭೃತಿ ಮತ್ತು ಕಾಂಗ್ರೆಸದ ಬೇರೆ ಮುಂದಾಳುಗಳು ಅ ಯಿಸರಾಯರ ಹೆಸರಿನಿಂದ ಬರೆದ ಪತ್ರವನ್ನು ಮ್ಮ ಕಯ್ಯಲ್ಲಿ ಕೊಟ್ಟಿದ್ದಾರೆ. ನಾವು ಅದ ಹ್ವಾಯಿಸರಾಯರಿಗೆ ಕೂಡತಕ್ಕವರಿದ್ದೇವೆ. ತ್ತು ಅವರ ಕೂಡ ಮಾತಾಡತಕ್ಕವರಾಗಿದ್ದೇ ಮಹಾತ್ಮರು ಮತ್ತು ನೆಹರುನವರು ಕೊಟ್ಟ ದಲ್ಲಿ ರಾಜಿಯ ಶರ್ತುಗಳಿರುತ್ತವೆ

ತಮ್ಮನ್ನು ಕಾಣಲಿಕ್ಕೆ ಬರಬೇಕೆಂದು ಯಿಸರಾಯರಿಂದ ತಾರು ಬಂದನಂತರ ಇವರು ಲ್ಲಿಗೆ ಪ್ರಯಾಣ ಬೆಳೆಸುವರು.

ಪೇಶಾವರದಲ್ಲಿ ಪುನಃ ಲಷ್ಕರೀ ಕಾಯದೆಯು ಜಾಹೀರನಾಮೆ.

ಅಫ್ರಿದಿಗಳ ಪುಂಡಾಟಿಕೆಯು ಹೆಚ್ಚಾದ್ದದೆ, ಲಾರ್ಡ ಆಯರ್ವಿನಸಾಹೇಬರು ಆರ್ಡಿನನ್ಸ ಗೆದು, ಪೇಶಾವರ ಜಿಲ್ಹೆಯ ತುಂಬ ಲಷ್ಕರೀ ಯದೆಯನ್ನು ಜಾಹೀರ ಮಾಡಿ, ಮಿ. ಪಿಯರ್ಸ ಹೇಬರಿಗೆ ಸರ್ವಾಧಿಕಾರ ಕೊಟ್ಟಿದ್ದಾರೆ ರಾ ಪಿಡಿ, ನೌಶೇರಾ, ಕೋಹಟ ಮತ್ತು ರಿಸಾಲಪ್ಪ ದ ನಿಟ್ಟಿಗೆ ಇಂಗ್ರೇಜಿ ಸೈನ್ಯ ಹೋಗುತ್ತಿರುವ ಬ್ರಿಟಿಶ ಮೊರೆ ಸವನ್ನು ಬುಡಮೇಲು ಮಾಡಬೆ ನ್ನುವ ಅಫ್ರಿದಿಗಳಿಗೆ ಯಾರಾದರೂ ಸಹಾಯ ಮಾ ದರೆ-ಆಶ್ರಯಕೊಟ್ಟರೆ- ಅಥವಾ ಅನ್ನಸಾಮುಗ್ರಿ ಪೈಸಿದರೆ- ಹತ್ತು ವರ್ಷಗಳ ಕಠಿಣ ಶಿಕ್ಷೆ ಕೊ ಡುವರೆಂದೂ ಇಂಗ್ರೇಜಿ ಹದ್ದಿನವರಿಗೆ ಭಯ ಕಿದ್ದಾರೆ.

ಮಹಾತ್ಮರನ್ನೂ ಅಬ್ದುಲ ಗಫರರನ್ನೂ ಬಿಡುವತನಕ ಯುದ್ಧ

ಅಫ್ರಿದಿ ಜನರು ಒಂದು ಪತ್ರವನ್ನು ಸ ದ್ದಿನಲ್ಲಿರುವ ಇಂಗ್ರೇಜಿ ರಾಜ್ಯಾಧಿಕಾರಿಗೆ ಬರೆದ

> "ಸ್ವಂತ ಹಿತಕ್ಕಾಗಿ ನಾವು ಯುದ್ಧಹೂಡಿ ಕಾಂಗ್ರೆಸ ಮತ್ತು ಖಿಲಾಫತಕ್ಕೆ ಸಹಾಯ ಡುವದಕ್ಕಾಗಿ ನಾವು ಹೊಂಬಿದ್ದಿದ್ದೇವೆ. ಹಾತ್ಮರನ್ನು, ಮೌ. ಅಬ್ದುಲಗಫಾರರನ ಬಂಧಮುಕ್ತ ಮಾಡುವವರೆಗೆ ಯುದ್ಧಮಾ ವೆವು"

ಎಂಬದಾಗಿ ಈ ಪತ್ರದಲ್ಲಿ ಬರೆದಿದ್ದಾರೆ

ಬಾಗಲಕೋಟೆಯ ಸುಪ್ರಸಿದ್ಧ ಕಾಂಗ್ರೆಸ ಮುಂದಾಳುಗಳೂ "ಕನ್ನಡಿಗ" ದ ಸಂಪಾದಕ ಆದ ಶ್ರೀ ಮಂಗಳವೆಢೆ ಶ್ರೀನಿವಾಸರಾಯರು ಗೂ [illegible] ಭಾರತೀಯ ಜನತಾ ಸಂಘದ ಶಿ ಕಾಲ ಸೀಸದೂ ಬಿಟ್ಟು ಬಂದರು ವಿಜಾಪುರ ಇವರ ಮೆರವಣಿಗೆ ಸಾಗಿ, ದಾರಿಗುಂಟ ಆರತಿಗ ದವು. ಸಾಯಂಕಾಲದ ಸಭೆಯಲ್ಲಿ ಅಭಿನಂದನೆ ಯಿತು.

ವ್ಯಾಪಾರಿಗಳ ಮಿವ[illegible] ರಾವುಸಾಹೇಬ ಟ್ ಕ್ಕೆ ಹೊಂದುವ ಮೊದಲು ಸಂಸ್ಥಾನದ ಪ್ರಜಾ ನಿಧಿಗಳ ಕೂಡ ಆಲೋಚನೆ ಮಾಡುವರು.

ಗಾಂಧೀ ಟೊಪ್ಪಿಗೆ ಮತ್ತು ರಾಷ್ಟ್ರೀಯ ನಿಶಾನೆಯ ಜಯ.

ಗುಂಟೂರಿನ ಸ್ಟುವರ್ಟ ಮ್ಯಾಜಿಸ್ಟ್ರೇಟರು ಕವ್ಮೈದೇ ಹುಕುಮು ನಡಿಸಬೇಕೆಂದರು. ಸ್ಟೇಟಸೇಕ್ರಟರಿ ಮಿ. ಬೆನ್ನ [illegible] ಸಾಹೇಬರು ಅಲ್ಲಿಂ[illegible] ಇವರು ಹಾದೆಂದೆನಿಸಲು [illegible]. ಗಾಂಧೀ ಟೊಪ್ಪಿಗೆ ಹಾಕುವವರು ಕಾಯದೆಭಂಗದ ಗುನ್ಹೆಂದರು; ಸಾವಿರಾರು ಜನರನ್ನು ತುರಂಗಕ್ಕೆ ಕಳಿಸಿದರು. ಇದರ ಸುಳಿವು ಅನೇಕ ಸ್ಥಳಗಳಲ್ಲಿ ಹತ್ತಿತು. ಈ ಹುಕುಮು ತೀರ ಅನ್ಯಾಯದ್ದಾಗುತ್ತದೆಂದು ಗುಂಟೂರಿನ ವಕೀಲರು ಮದ್ರಾಸಕ ಹಾಯಕೋರ್ಟಿಗೆ ಅಪೀಲು ಮಾಡಿದರು. ಅದರ ವಿಚಾರಣೆಯು ನ್ಯಾಯಮೂರ್ತಿ ಪಂಡಾಲಿಯವರ ಮುಂದೆ ನಡೆದು, ಅವರು ಗಾಂಧೀ ಟೊಪ್ಪಿಗೆಯ ಜಯವೆನ್ನುವಂಥ ತೀರ್ಪು ಹೇಳಿದ್ದಾರೆ. ತೀರ್ಪಿನಲ್ಲಿಯ ಮುಖ್ಯ ಸಂಗತಿಗಳು ಕೆಳಗೆ ಕೊಟ್ಟಿರುತ್ತಿವೆ.

ಗಾಂಧೀ ಟೊಪ್ಪಿಗೆಯು ಜನರ ನಿತ್ಯದ ಪಡುವಳಿಕೆಯಲ್ಲಿದೆ, ಕಳೆದ ಹತ್ತು ವರ್ಷಗಳಿಂದ ಗಾಂಧಿಯ ಅನುಯಾಯಿಗಳೇ ಅದನ್ನು ಉಪಯೋಗಿಸುತ್ತಾರೆ. ಆದ್ದರಿಂದ ಈ ಟೊಪ್ಪಿಗೆ ಹಾಕುವಂಥವರು ಗಾಂಧಿಯವರು ಮಾಡುವದಕ್ಕೆಲ್ಲ ಬಲಕೊಟ್ಟು ಅವರಿಗೆ ಸಹಾಯ ಮಾಡುತ್ತಾರೆ. ಪ್ರಕೃತದಲ್ಲಿ ಗಾಂಧೀಯವರು ಕಾಯದೆಭಂಗದ ಚಳವಳಿಯನ್ನು ಪ್ರಾರಂಭಿಸಿದ್ದು, ಇದಕ್ಕೆ ಗಾಂಧಿಟೊಪ್ಪಿಗೆ ಹಾಕುವಂಥವರೆಲ್ಲರೂ ಈ ಚಳವಳಿಗೆ ಸಹಾನುಭೂತಿಯುಳ್ಳವರಾಗಿದ್ದಾರೆಂದು ಮ್ಯಾಜಿಸ್ಟ್ರೇಟರು ಅನ್ನುವದನ್ನು ನಾನು ಸಮ್ಮತಿಸುವದಿಲ್ಲ, ಏಕೆಂದರೆ ಗಾಂಧೀಟೊಪ್ಪಿಗೆ ಹಾಕುವಂಥವರೆಲ್ಲರೂ ಕಾಯದೆಭಂಗ ಮಾಡುವದಿಲ್ಲ. ಅದರ ಮುಂದಾಳೂ ಆಗಿರುವದಿಲ್ಲ. ಈ ಚಳವಳಿಯು ಪ್ರಾರಂಭವಾಗುವ ಮೊದಲು ಗಾಂಧಿಯವರ ಮೇಲಿಂದ ಸಹಾನುಭೂತಿಯುಳ್ಳವರೆಲ್ಲರೂ ಈ ಟೊಪ್ಪಿಗೆ ಹಾಕುತ್ತಿದ್ದರು. ಗಾಂಧಿಯವರು ಬರೇ ಕಾಯದೆಭಂಗದ ಚಳವಳಿಯಲ್ಲಿ ಮನಸ್ಸು ಹಾಕುವದಿಲ್ಲ. ಮದ್ಯಪಾನ ಅಸ್ಪೃಶ್ಯತಾ ನಿವಾರಣ ಮುಂತಾದ ವಿಷಯಗಳಲ್ಲಿಯೂ ಮನಸ್ಸು ಹಾಕುತ್ತಾರೆ. ಆದ್ದರಿಂದ ಗಾಂಧಿಟೊಪ್ಪಿಗೆ ಹಾಕುವಂಥವರು ಚಳವಳಿಗೆ ಸಹಾನುಭೂತಿ ತೋರಿಸುತ್ತಾರೆಂದು ಅರ್ಥಮಾಡುವದು "ಗಾಂಧೀಟೊಪ್ಪಿಗೆ ಹಾಕುವಂಥವರ ಮೇಲೆ ಅನ್ಯಾಯ ಮಾಡಿ" ದಂತಾಗುತ್ತದೆ. ಮುಂದಾಗುವ ಸಂಗತಿಯ ಭವಿಷ್ಯಮಾಡಿ ಮ್ಯಾಜಿಸ್ಟ್ರೇಟರು ಹುಕುಮು ತೆಗೆದಿದ್ದಾರೆ. ಪ್ರತ್ಯಕ್ಷ ನಡೆದ ಸಂಗತಿಯ ಆಧಾರ ತಕ್ಕೊಂಡೇ ಇಲ್ಲಿ ಇಂಥ ಮನಸ್ಥಿತಿಯಲ್ಲಿ ಜನರಿಗೆ ಸಿಟ್ಟು ಬಂದು, ಇಂಥ [illegible]ಗಳಿಂದಲೇ ಶಾಂತತೆಯು ಭಂಗವಾಗುವ ಸಂಭವವುಂಟು. ಈ ಅನ್ಯಾಯವನ್ನು ದೂರಮಾಡುವದು ಹಾಯಕೋರ್ಟಿನ ಕರ್ತವ್ಯವಾದ್ದರಿಂದ, ಮ್ಯಾಜಿಸ್ಟ್ರೇಟರ ಅನ್ಯಾಯದ ಹುಕುಮನ್ನು ರದ್ದುಮಾಡುತ್ತೇನೆ.

ಗುಂಟೂರಿನ ಮ್ಯಾಜಿಸ್ಟ್ರೇಟರಂತೆ ರಾಜಮಹೇಂದ್ರಿಯ ಇನ್ನೊಬ್ಬ ಮ್ಯಾಜಿಸ್ಟ್ರೇಟರು ಮನೆಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಬಾರದೆಂದು ಒಬ್ಬ ವಕೀಲರ ಮೇಲೆ ನೋಟೀಸು ತೆಗೆದಿದ್ದರು. ಇದರ ವಿಚಾರಣೆಯೂ ಇವರ ಮುಂದೆಯೇ ನಡೆಯಿತು. ಈ ಹುಕುಮನ್ನೂ ರದ್ದು ಮಾಡಿದರು. ತೀರ್ಪಿನಲ್ಲಿ ಬರೆದದ್ದೇನಂದರೆ—

ರಾಷ್ಟ್ರೀಯ ನಿಶಾನೆಯನ್ನು ಹಚ್ಚುವದರಿಂದ ಸಾರ್ವಜನಿಕ ಶಾಂತತೆಯು ಭಂಗವಾಗುವದಿಲ್ಲ. ಈ ನಿಶಾನೆ ಹಚ್ಚುವದರ ವಿರುದ್ಧ ಅಲ್ಲಿಯ ನಾಗರಿಕರೂ ಇರುವದಿಲ್ಲ. ಆದ್ದರಿಂದ ಈ ಹುಕುಮನ್ನು ರದ್ದು ಮಾಡುತ್ತೇನೆ.

ಹುಬ್ಬಳ್ಳಿಯಲ್ಲಿ ಮ್ಯುನಿಸಿಪಾಲಿಟಿಯಲ್ಲಿ ಗಿತಕ್ಕೆ ನಿಶಾನೆ ಹಚ್ಚಿದರು. ಸವದತ್ತಿಯಲ್ಲಿ ನಿಶಾನೆ ಹಚ್ಚಬಾರದೆಂದು ಬೆಳಗಾವಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ರಾಜಮಹೇಂದ್ರಿಯ ಮ್ಯಾಜಿಸ್ಟ್ರೇಟರ ಕಿತ್ತನ್ನೇ ಹಿಡಿದಿದ್ದಾರೆ. ನ್ಯಾಯಮೂರ್ತಿ ಪಂಡಾಲೆಯವರ ತೀರ್ಪಿನಿಂದ ಮ್ಯುನಿಸಿಪಾಲಿಟಿಗಳ ಮೇಲೆ ನಿಶಾನೆ ಹಚ್ಚಲು ಯಾವ ಅಡ್ಡಿಯೂ ಇಲ್ಲದಾಯಿತು.

ಅಫ್ರಿದಿಗಳು ಪೇಶಾವರದ ತುರಂಗದ ಮೇಲೆ ಹಲ್ಲೆಮಾಡುವವರಿದ್ದಾರೆಂಬ ಹಾರ ಸುದ್ದಿ ಕೇಳಿ, [illegible] ಮುಂಭಾಗದಲ್ಲಿ ಇಂಗ್ಲಿಷ ಸರಕಾರದವರು [illegible] ಹೂಡಿದ್ದಾರೆ.

ಕಾಂಗ್ರೆಸದಿಂದ ಜಾತಿಗಳ ಉಚ್ಚ ನೀಚ ಭಾವ ಹೋಗುವದು

ಅಸ್ಪೃಶ್ಯರಾದ ಬಾರಿಸ್ಟರ ಅಂಬೇಡಕರರ ಸ್ಪಷ್ಟ ಮತ.

ನಾಗಪೂರಿನಲ್ಲಿ ಕೂಡಿದ ಅಖಿಲಭಾರತೀಯ ಅಸ್ಪೃಶ್ಯರ ಪರಿಷತ್ತಿನಲ್ಲಿ ಡಾಕ್ಟರ ಮತ್ತು ಬ್ಯಾರಿಸ್ಟರರಾದ ಅಂಬೇಡಕರರು ಮುಂದೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

'ಬ್ರಿಟಿಶ ಸರಕಾರದವರು ಈ ಕ್ಷಣವೇ ವಸಾಹತಿನ ಸ್ವರಾಜ್ಯ ಕೊಟ್ಟಿದ್ದರೆ- ಕಾಂಗ್ರೆಸದ ಸಮಾಧಾನವಾಗುತ್ತಿತ್ತು. ಕೊಡದ್ದರಿಂದ, ಕಾಂಗ್ರೆಸವು ಸ್ವಾತಂತ್ರ್ಯದ ಕಹಳೆ ಹಿಡಿಯಿತು. ಬ್ರಿಟಿಶ ರಾಜ್ಯದಿಂದ ಆದ ವಿಶಿಷ್ಟ ಲಾಭಗಳಲ್ಲಿ ನಮ್ಮ ಪರಿಸ್ಥಿತಿಯ ಬಗ್ಗೆ ಪೂರ್ಣ ತಿಳುವಳಿಕೆಯಾದದ್ದೊಂದಿರುತ್ತದೆ. ಹಿಂದುಸ್ಥಾನದ ತುಂಬ ಒಂದೇ ಕಾಯದೆ ಮತ್ತು ಒಂದೇ ರಾಜ್ಯಪದ್ಧತಿಯುಂಟಾಗಿರುವದರಿಂದ, ನಮ್ಮಲ್ಲಿ ಏಕ ರಾಷ್ಟ್ರೀಯತ್ವದ ಭಾವನೆಯುಂಟಾಗಿರುತ್ತದೆ. ಆದರೆ ಇದಕ್ಕೆ ನಾವು ಬಹಳ ದೊಡ್ಡ ಬೆಲೆ ಕೊಡಬೇಕಾಗುತ್ತದೆಂಬುದನ್ನು ಲಕ್ಷ್ಯದಲ್ಲಿಡಿರಿ. ನಾವು ಒಂದು ಪ್ರಕಾರದ ಕೀಳ ವಾತಾವರಣದಲ್ಲಿದ್ದೇವೆ. ನಮ್ಮೊಳಗಿನ ಅತ್ಯಂತ ಶ್ರೇಷ್ಠ ಮನುಷ್ಯನಿಗೆ ಸಹ ಮೋರೆಯನ್ನು ಕೆಳಗೆ ಮಾಡಬೇಕಾಗುತ್ತದೆ. ಬ್ರಿಟಿಶ ರಾಜ್ಯ ಪದ್ಧತಿಯು ದೊಡ್ಡ ವೆಚ್ಚದ್ದಾಗಿದ್ದು, ಅದು ನಮ್ಮ ದೇಶಕ್ಕೆ ಹೊರಲಾರದಷ್ಟು ಭಾರವಾಗಿರುತ್ತದೆ. ಕಳೆದ ೩೦ ವರ್ಷಗಳಲ್ಲಿ ಹಿಂದುಸ್ಥಾನದಲ್ಲಿ ಪಟ್ಟದುಷ್ಕಾಳಗಳು ಬಿದ್ದು ಒಂದು-ಒಂದೂವರೆ ಕೋಟಿ ಜನರು ಮೃತ್ಯುಮುಖದಲ್ಲಿ ಬಿದ್ದಿದ್ದಾರೆ. ಇದರ ಕಾರಣವನ್ನು ಹುಡುಕಲಿಕ್ಕೆ ಬಹಳ ದೂರ ಹೋಗಬೇಕಾಗಿಲ್ಲ. ಬ್ರಿಟಿಶ ಸರಕಾರವು ಹಿಂದುಸ್ಥಾನದ ವ್ಯಾಪಾರ ಉದ್ದಿಮೆಯನ್ನು ಬುದ್ಧಿಪೂರ್ವಕವಾಗಿ ಮುಣುಗಿಸಿದ್ದೇ ಕಾರಣ. ಬ್ರಿಟಿಶರ ಈ ಧೋರಣದಿಂದ ಒಕ್ಕಲತನದವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಅರೆಹೊಟ್ಟೆಯಿಂದಿರುತ್ತಾರೆ. ಇವರಲ್ಲಿ ಅಸ್ಪೃಶ್ಯರ ಸಂಖ್ಯೆಯು ಬಹಳದೊಡ್ಡದಾಗಿರುತ್ತದೆ. ಬ್ರಿಟಿಶರು ಕಾಯದೆ ಮತ್ತು ಸುವ್ಯವಸ್ಥೆ ಮಾಡಿದ್ದು ನಿಜ. ಆದರೆ ಅದರಿಂದ ಹೊಟ್ಟೆ ತುಂಬುವದಿಲ್ಲೆಂಬದನ್ನು ಖಚಿತವಾಗಿ ತಿಳಿಯಬೇಕು. ಜಮೀನದಾರ ಮತ್ತು ಸಾವುಕಾರರು ನಡಸಿರುವ ಅತ್ಯಾಚಾರಗಳನ್ನು ದೂರ ಮಾಡಲು ಸರಕಾರವೆಷ್ಟು ಸಹಾಯ ಮಾಡಿರುವದು? ಅದೇ ಪ್ರಕಾರ ಸಾಮಾಜಿಕ ಅನ್ಯಾಯಗಳನ್ನು ದೂರ ಮಾಡಲು ಎಷ್ಟು ಸಹಾಯ ಮಾಡಿರುವದು? ಇವೆಲ್ಲ ದುಷ್ಟ ಅನಿಷ್ಟಗಳ ನಿರ್ಮೂಲವಾಗಲಿಕ್ಕೆ ನಮಗೆ ಸ್ವರಾಜ್ಯ ಬೇಕು, ನಮ್ಮ ಕಯ್ಯಲ್ಲಿಯೇ ಅಧಿಕಾರ ದೊರೆಯಬೇಕು. ಇದು ಸ್ವರಾಜ್ಯದಿಂದಲೇ ಸಾಧ್ಯವಾಗುವದುಂಟು. ಸ್ವರಾಜ್ಯದಲ್ಲಿ ಮೊದಲಿನ ಸ್ಥಿತಿಯೇ ಬರುವದೆಂದು ಅಂಜಿಕೊಂಡು ನಾವು ಮುಂದಿಟ್ಟ ಕಾಲನ್ನು ಹಿಂದೆಗೆಯಲಾಗದು. ಆದ್ದರಿಂದ ನೀವು ಸ್ವರಾಜ್ಯವೇ ನಿಮ್ಮ ಧ್ಯೇಯವೆಂದು ಖಂಡಿತವಾಗಿ ತಿಳಿಯತಕ್ಕದ್ದು.

ಮಧ್ಯರಾತ್ರಿಯಲ್ಲಿ ಪೋಲೀಸರು ಹಿಂದಿರುಗಿದರು

ಗಢವಾಲ ಸೈನಿಕರಿಗೆ ಶಿಕ್ಷೆಯಾಗಿದ್ದರ ಸ್ಮರಣೆಗಾಗಿ ನಾಗಪೂರಿನಲ್ಲಿ ಪ್ರಚಂಡ ಮೆರವಣಿಗೆ ಹೊರಟಿತು. ಪೋಲೀಸರು ಈ ಮೆರವಣಿಗೆ ತೆಗೆಯಬಾರದೆಂದು ಡಿ|| ಮ್ಯಾಜಿಸ್ಟ್ರೇಟರ ಹುಕುಮು ತೆಗೆಯಿಸಿದ್ದರು. ಇವರು ತ್ರಿವೇದಿ ಎಂಬ ಹಿಂದೂ ಗೃಹಸ್ಥರು. ಮೆರವಣಿಗೆಯು ಪ್ರತಿಬಂಧಮಾಡಿದ ಮಟ್ಟಿಗೆ ಬಂತು. ಅಲ್ಲಿ ಪೋಲೀಸರು ಇದನ್ನು ತಡೆದರು, ಎರಡೂ ಪಕ್ಷಗಳು ಸತ್ಯಾಗ್ರಹ ಮಾಡಿ ನಿಂತವು. ಪೋಲೀಸರು ಮುಂಚೂಣಿಯ ಒಂದು ತಂಡವನ್ನು ಹಿಡಿದರು- ಮತ್ತೊಂದು ತಂಡವು ಮುಂದೆ ಬರುವದು. ಹೀಗೆ ನಾಲ್ಕು ನೂರು ಜನರನ್ನು ಹಿಡಿದರು. ಆದರೂ ಇವರ ಸಂಖ್ಯೆ ಕಡಿಮೆಯಾಗಲಿಲ್ಲ. ಮಧ್ಯರಾತ್ರಿಯವರೆಗೆ ಗೊಂದಲ ನಡೆಯಿತು. ಆಗ ಪೋಲೀಸಸಾಹೇಬರು ತಮ್ಮ ಜನರಿಗೆ ಮನೆಗೆ ಹೋಗಹೇಳಿದರು. ಉಳಿದ ಸ್ವಯಂಸೇವಕರೂ ಗಾಂಧಿಮಹಾರಾಜಕೀಜಯವೆಂದು ತಮ್ಮ ಬಿಡಾರಕ್ಕೆ ತೆರಳಿದರು.

ಮುಂಬಯಿಯ ಅರ್ಧ ಗಿರಣಿಗಳಿಗೆ ಬಂದ ದುಃಸ್ಥಿತಿಯು.

ಲಕ್ಷ ಕೂಲಿಕಾರರು ನಿರುದ್ಯೋಗಿಯಾಗುವರು.

ವಿಲಾಯತಿಯ ಬಟ್ಟೆಗಳಿಗೆ ಬಹಿಷ್ಕಾರ ಹಾಕಿದ್ದರಿಂದ ಲ್ಯಾಂಕೇಶಾಯರದ ವ್ಯಾಪಾರವು ದಿವಾಳಿಗೆ ಬಂದಿದೆ. ಬಂದರದಲ್ಲಿ ಲಕ್ಷಕ್ಕಿಂತ ಹೆಚ್ಚು ಪೆಟ್ಟಿಗೆಗಳು ಹಾಳ ಹತ್ತುತ್ತಾ ಬಿದ್ದಿವೆ. ಮಾರ್ಕೆಟದಲ್ಲಿ ನಾಲ್ಕು ಕೋಟಿಯ ಸನಗು ಗಿರಾಕಿ ಇಲ್ಲದೆ ಕೂತಿದೆ. ವಿಲಾಯತಿಯ ಅರಿವೆ ಮಾರುವ ಒಂದು ಸಾವಿರ ಅಂಗಡಿಗಳುಂಟು. ಇವುಗಳ ಮುಂದೆ ನಾಲ್ಕು ನೂರು ಪುರುಷರು ಮತ್ತು ಮೂರು ನೂರು ಸ್ತ್ರೀಯರು ಪಿಕೆಟಿಂಗ ಮಾಡುವರು. ಹೀಗಾಗಿ ವಿಲಾಯತಿಯವರ ಹೊಟ್ಟೆ ನಡೆದಿದೆ.

ಅರೆ ವಿಲಾಯತಿಯವರದೊಂದು ವರ್ಗವುಂಟು. ಮುಂಬಯಿಯಲ್ಲಿರುವ ಎಲ್ಲ ಗಿರಣಿಗಳು ಸ್ವದೇಶಿಯಾಗಿಲ್ಲ. ಸರಿಯರ್ಧ ಗಿರಣಿಗಳು ವಿಲಾಯತಿಯ ಬಂಡವಲ ಮತ್ತು ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿರುವವು. ಇವುಗಳಲ್ಲಿ ಹುಟ್ಟುವ ನೂಲು ಮತ್ತು ಸನಗನ್ನು ಕೊಳ್ಳಕೂಡದೆಂಬ ಕಾಂಗ್ರೆಸದ ಆಜ್ಞೆಯು. ಈ ಆಜ್ಞೆಯು ಮುಂಬಯಿ ಪೇಟೆಗೆ ಅಲ್ಲ, ಇಡೀ ಹಿಂದುಸ್ಥಾನದ ತುಂಬ ಅಮಲಿನಲ್ಲಿ ಬಂದಿದೆ. ಈ ಮೂಲಕ ಆಗ ಹತ್ತು ಗಿರಣಿಗಳು ಬಂದಾಗಿ, ಇಪ್ಪತ್ತು ಸಾವಿರ ಕೂಲಿಕಾರರು ಕೆಲಸವಿಲ್ಲದವರಾಗಿದ್ದಾರೆ. ಈ ತಿಂಗಳ ಕೊನೆಯಲ್ಲಿ ಇನ್ನು ಕೆಲ ಗಿರಣಿಗಳು ಬಂದಾಗುವವು. ತಿಂಗಳೊಪ್ಪತ್ತಿನಲ್ಲಿ ಲಕ್ಷಕ್ಕಿಂತ ಹೆಚ್ಚು ಜನರು ಉದ್ಯೋಗ ವ್ಯವಸಾಯವಿಲ್ಲದಂತಾಗುವರು.

ಮುಂಬಯಿ ತುಂಬ ನಿರುದ್ಯೋಗಿಗಳ ಸಂಖ್ಯೆಯೇ ಹೆಚ್ಚಾಗುವದೆಂದು ಸರಕಾರಕ್ಕೆ ದೊಡ್ಡ ಚಿಂತೆಗೆ ಕಾರಣವಾಗಿದೆ. ಇವರು ತಮ್ಮ ಊರಿಗೆ ಹೋಗಲು ಸರಕಾರದವರು ಅದಷ್ಟು ಸೋಯಿ ಮಾಡಿಕೊಡುವರು. ಬಹಿಷ್ಕಾರದಿಂದ ಮುಂಬಯಿ ವ್ಯಾಪಾರ ಉದ್ದಿಮೆಯು ನಿಕೃಷ್ಟಸ್ಥಿತಿಗೆ ಬಂದಿದ್ದು, ಉದ್ದಿಮೆದಾರರು ಬಂದ ಹಾನಿಯನ್ನು ಸೋಸಲಿಕ್ಕೆ ಸಂತೋಷದಿಂದ ಸಿದ್ಧರಾಗಿದ್ದಾರೆ. ಇವರ ಸ್ವಾರ್ಥತ್ಯಾಗವು ಅಪೂರ್ವವಾದದ್ದು. ರಾಷ್ಟ್ರೀಯ ಬೇಡಿಕೆಗಳು ಪೂರ್ಣವಾಗುವ ತನಕ ಹರತಾಳ, ಬಹಿಷ್ಕಾರ ಮುಂತಾದ ತೀವ್ರ ಶಸ್ತ್ರಗಳನ್ನು ಹಿಡಿಯತಕ್ಕವರೇ! ಹಿಡಿದ ಶಸ್ತ್ರಗಳನ್ನು ಬಿಡತಕ್ಕವರಲ್ಲೆಂದು ಸಾರಿಬಿಟ್ಟಿದ್ದಾರೆ. ಬೇರೆ ಪಟ್ಟಣಗಳಲ್ಲಿಯೂ ವಿಲಾಯತಿಯ ಬಟ್ಟೆ ಮಾರುವಂಥ ಅನೇಕ ಅಂಗಡಿಗಳುಂಟು. ಆ ಅಂಗಡಿಕಾರರು ಮುಂಬಯಿ ಬಂಧುಗಳ ಅನುಕರಣ ಮಾಡುವರೇ?

ಅಫ್ರಿದಿ ಒಸಾಂಗರವರ [illegible]

ಸರಹದ್ದಿನ ರೇಲ್ವೆ ಬಂದಾಯಿತು.

ಬೇಗೆ ಹಬ್ಬುತ್ತಲಿರುವದು.

ಅಫ್ರಿದಿ ಒಸಾಂಗರವರು [illegible] ಮೇಲೆ ಹಲ್ಲೆ ಮಾಡಲಿಕ್ಕೆ ಹೊರಟಿದ್ದರ ಬೇಗೆಯು ಹಬ್ಬುವದೆಂದು ಸಿಮ್ಲಾದ ತಾರು ಹೇಳುತ್ತದೆ. ಇಂದು ಇವರ ಸಂಖ್ಯೆಯು ಹತ್ತು ಸಾವಿರವಾಗಿದ್ದರೂ, ಅದು ಮೂವತ್ತು ಸಾವಿರವಾಗುವದೆಂದೂ ಬೇರೆ ಟೋಳಿಗಳು ಇದರಲ್ಲಿ ಸೇರಿವೆ. ಇಡೀ ಸರಹದ್ದಿನಲ್ಲಿ ಉರಿಯೇಳುವದೆಂದೂ ತರ್ಕ ಮಾಡಲ್ಪಟ್ಟಿದೆ. ಅಫ್ರಿದಿಗಳು ತೋರಿಕೆಯಲ್ಲಿ ಕಾಡು ಕುಲದವರು. ಇವರಲ್ಲಿ ಇಂಗ್ರೇಜಿ ಸೈನ್ಯದಲ್ಲಿ ಕೆಲಸಮಾಡಿ, ಅಧುನಿಕ ಯುದ್ಧತಂತ್ರವನ್ನು ಬಲ್ಲವರು ಅನೇಕರಾಗಿದ್ದಾರೆ. ಅನುಭವಿಕರಾದ ಪೆನಶನದಾರರಿದ್ದಾರೆ. ಆದ್ದರಿಂದ ಇವರ ದಾಳಿಯು ಸಾಮಾನ್ಯವಾಗಲಾರದು. ಇದಕ್ಕೆ ಎದುರಾಗುವಷ್ಟು ಸಿದ್ಧತೆಯನ್ನು ಇಂಗ್ಲಿಷ ಸರಕಾರದವರು ನಡೆಸಿದ್ದಾರೆ. ಸರಹದ್ದಿನಲ್ಲಿ ಎರಡೂ ಸೀಮೆಗಳಿಗುಂಟ ರೇಲ್ವೆ ಇರುವದು. ಈ ರೇಲ್ವೆಯ ಮೇಲೆ ವೈರಿಗಳು ಹಲ್ಲೆ ಮಾಡಿ, ಹಾನಿಕರಬಹುದೆಂದು ಮೇಲ, ಪ್ಯಾಸೆಂಜರ ಮತ್ತು ಗೂಡ್ಸ ಮೊದಲಾದ ಎಲ್ಲ ಬಂಡಿಗಳನ್ನು ನಿಲ್ಲಿಸಿದ್ದಾರೆ.

[illegible] ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ಕಾದ ಖೂನ ಹಾಕಿದಂಥ ಒಂದು ಪತ್ರವನ್ನು ಟಪಾಲಿನಿಂದ ಕಳಿಸಿ ಅದರಲ್ಲಿ ನಿಮ್ಮ ಜೀವ ತಕ್ಕೊಳ್ಳುವೆನೆಂದು ಭಯ ಹಾಕಿದ್ದಾರೆ.

ಪೇಶಾವರದ ಬಾಗಿಲವರೆಗೇ ಅಫ್ರಿದಿಗಳ ಹಾವಳಿಯು

ಪೇಶಾವರದ ಮೇಲೆ ದಂಡೆತ್ತಿಬಂದ ಅಫ್ರಿದಿಗಳ ಹಾರಿಕೆಯು ಸಣ್ಣ ಬಾಯಿಯಿಂದ ದೊಡ್ಡ ತುತ್ತು ನುಂಗುವಂತಿರುವದು ನಿಜ. ಇದನ್ನು ಅವರು ಬಲ್ಲರು. ಆದರೂ ಸರಕಾರಕ್ಕೆ [illegible] ಕೊಟ್ಟು, ಏನಾದರೊಂದು ಲಾಭಮಾಡಿಕೊಳ್ಳ[illegible]. ಸರಹದ್ದಿನಲ್ಲಿ ಶಾಂತತೆ ಕಾಯಲು ಬ್ರಿಟಿಶ ಸರಕಾರದವರು ಇವರಿಗೆ ಕಪ್ಪವೆನಿಸುವ ರೀತಿಯ ನಿರ್ವಾಹಧನ ಮಾಡಿಕೊಟ್ಟಿದ್ದಾರೆ. ಈ ಗೊಂದಲದಲ್ಲಿ ಅದನ್ನು ಇಮ್ಮಡಿ, ಮುಮ್ಮಡಿ ಮಾಡಿಕೊಳ್ಳುವ ಉದ್ದೇಶವಿರಬಹುದು.

ಪೇಶಾವರದ ಪಶ್ಚಿಮದಲ್ಲಿ ಐದಾರು ಮೈಲಿನಲ್ಲಿಯೇ ಅಫ್ರಿದಿಗಳ ದೇಶವುಂಟು, ಆದ್ದರಿಂದ ಇವರು ಪಟ್ಟಣದ ಮೇಲೆ ದಾಳಿ ತರಲು ದೊಡ್ಡ ಪ್ರವಾಸ ಮಾಡಬೇಕಾಗುವದಿಲ್ಲ. ನಾಲ್ಕಾರು ಮೈಲುಗಳಲ್ಲಿ ನಡೆದು, ವಿದ್ಯುತ್ವೇಗವೆನ್ನುವಂತೆ ಪಟ್ಟಣದ ಸುತ್ತಲು ಹಾವಳಿ ಮಾಡಲು ನಿರಾಯಾಸವಾಗಿ ಸಾಧಿಸುತ್ತದೆ.

ಅಫ್ರಿದಿಗಳು ಇಂಗ್ಲಿಷ ಯುಕ್ತಿಗಳನ್ನು ಕಲಿತವರಾದ್ದರಿಂದ ಯುದ್ಧ ನೇಮುಗಳನ್ನು ಪೂರಾ ಬಲ್ಲರು. ಇವರಲ್ಲಿ ತೋಫು ಇಲ್ಲ, ವಿಮಾನಗಳಿಲ್ಲ. ಇವೆರಡರ ಬಲದಿಂದ ವೈರಿಗಳನ್ನು ಸೋಲಿಸಬೇಕೆಂದು ಬ್ರಿಟಿಶ ಸೈನಿಕರ ಅಭಿಲಾಷೆ, ಅದಕ್ಕೆ ಇವರು ತಂತ್ರಗಳನ್ನು ಮಾಡಿರುವರು. ಇದು ಬೆಳೆಗಳ ಹಂಗಾಮು. ಭೂಮಿಗಳು ಬಟಾಬೈಲಾಗಿರುವದಿಲ್ಲ, ಎತ್ತರವಾಗಿ ಬೆಳೆದ ಪೈರುಗಳು ನಿಂತಿರುವವು. ಮೇಲಾಗಿ ತೋಟಗಳು ಬಹಳ. ಬೆಳೆ ಮತ್ತು ತೋಟಗಳ ಮರೆಯಲ್ಲಿ ಇವರು ಮೆಲ್ಲಗೆ ಬರುವರು. ಊರ ಅಗಸೀ ಬಾಗಿಲ ತನಕ ಬರುವವರು ಕಾಣುವದೇ ಕಾಣಿಸದ ಬಳಿಕ ತೋಫುಗಳೇನು ಮಾಡುವವು? ಇದರಂತೆ ವಿಮಾನಗಳು [illegible] ಸೈನಿಕರಂತೆ ಟೊಪ್ಪಿಗೆ ಫೇಟಾಗಳನ್ನಿಟ್ಟು ದೂರ ಕೊಳ್ಳದಲ್ಲಿ ಅಡಗಿಕೊಳ್ಳುವರು. ಸೈನ್ಯವೆಂದೇ ತಿಳಿದು ವಿಮಾನದವರು ಮೇಲಿನಿಂದ ಬಾಂಬು ಚೆಲ್ಲುವರು. ಈ ವರೆಗೆ ಅರು ಸಾವಿರ ಬಾಂಬುಗಳನ್ನು ಚೆಲ್ಲಿದ್ದಾರೆ. ಆಶ್ಚರ್ಯವೆಂದರೆ- ಇವಕ್ಕೆ [illegible] ಬೀಳಲಿಲ್ಲ.

[illegible] ೩೦ ಮೈಲು ಉದ್ದವಾಗಿ ರಣಕ್ಷೇತ್ರವಾಗಿದೆ. ಅಫ್ರಿದಿಗಳು [illegible] ತಂತಿ ಮತ್ತು ಟೆಲಿಫೋನಗಳನ್ನು ಹರಿದು ಹಾಕಿದ್ದರಿಂದ, ಪೇಶಾವರ ಮತ್ತು [illegible] ಈ ವ್ಯವಹಾರವು ನಿಂತು ಹೋಗಿದೆ. ರೇಲ್ವೆ ದಾರಿ ಮತ್ತು ತಂತಿಗಳ ಸಂರಕ್ಷಣೆ ಮಾಡಲು ಲಾಹೋರಿನಿಂದ ಒಂದು [illegible] ಹೋಗಿರುತ್ತದೆ. ಪಟ್ಟಣದ ಅಗಸೀಬಾಗಿಲು ಹಾಕಿದ್ದರಿಂದ ಮತ್ತು ದಿನಾಲು [illegible] ಹತ್ತುತ್ತಿರುವದರಿಂದ, ಪಟ್ಟಣಿಗರು [illegible] ತಮ್ಮ ಜೀವಕ್ಕೆ ಯಾವ [illegible] ಬರಬಹುದೆಂದು ರಾತ್ರಿಯಲ್ಲಿ [illegible] ಮಾಡುವರು.

ಬಂಕಾಪೂರದ ಬಹಾದ್ದೂರಿಯ ದ್ವಿತೀಯಾವೃತ್ತಿಯು.

ಹೋದ ವಾರದಲ್ಲಿ ಬಂಕಾಪೂರದವರೂ, ಸುತ್ತಲಿನ ಬೇರೆ ಗ್ರಾಮಗಳ ಜನರೂ ತೋರಿಸಿದ ಬಹಾದ್ದೂರಿಯ ಕೆಲಸ ಪೂರ್ಣವಾಗಿದ್ದಿಲ್ಲ. ಅಲ್ಲಿದ್ದ ಏಳು ಸಾವಿರ ಗಿಡಗಳಲ್ಲಿ ಮೂರೇ ಸಾವಿರ ಗಿಡಗಳ ಸಂಹಾರವಾಗಿತ್ತು. ಉಳಿದ ಗಿಡಗಳನ್ನು [illegible] ಸೋಮವಾರ ದಿವಸ ನಿರ್ಮೂಲ ಮಾಡಿದರು. ಆ ಗಿಡಗಳನ್ನು ಕಡಿಯುವುದನ್ನು [illegible] ನೋಡಿದ್ದರು. [illegible] ನಾಲ್ಕು ಜನ ಸಶಸ್ತ್ರ ಸಿಪಾಯಿಗಳೊಂದಿಗೆ ಬಂದಿದ್ದರು. ಯಾವ ಗೊಂದಲವಿಲ್ಲದೆ, ವಿಘ್ನವಿಲ್ಲದೆ ಸಂಹಾರ ಕೃತ್ಯವು ಯಶಸ್ವಿಯಾಗಿ ನೆರವೇರಿತು. [illegible] ಜನರು ಸಾಮೂಹಿಕ [illegible] ಒಳ್ಳೇ ಯುಕ್ತಿಗೆ ಬಂದಿದ್ದು, [illegible] ಜನರ ಕ್ಷಮೆ ಬೇಡಿಕೊಳ್ಳುವ ಸಂಧಾನ ಹಚ್ಚಿರುತ್ತಾರೆಂಬ ಅಲ್ಲಿಂದ ಬಂದ ವರ್ತಮಾನವಾಗಿದೆ.

ಹಾವೇರಿಯಲ್ಲಿ ನಡೆದ ರಾಜಕೀಯ ಸಮಾರಂಭ.

ವೀರಶೈವರಲ್ಲಿ ಅಪೂರ್ವ ಉತ್ಸಾಹ.

ತಾರೀಖು ೧೦ ಆಗಸ್ಟ ೧೯೩೦ನೇ ಯ ಆದಿತ್ಯವಾರ ದಿವಸ ಹಾವೇರಿಯಲ್ಲಿ ನೆರೆದ ವೀರಶೈವರ ರಾಜಕೀಯ ಪರಿಷತ್ತು ಆವರ ಜನಾಂಗದ ಚರಿತ್ರೆ ಇತಿಹಾಸದಲ್ಲಿ ಬಂಗಾರದ ಅಕ್ಷರಗಳಿಂದ ಬರೆಯುವಂತಾಯಿತು. ವೀರಶೈವ ಜನಾಂಗದಲ್ಲಿ ಪರಮ ಪೂಜ್ಯರೂ, ಸಾಧುಶ್ರೇಷ್ಠರೂ, ಜನವೃಂದದಲ್ಲಿ ಹಗಲಿರುಳು ಜಾತೀಯ ಧ್ಯಾನಪರರೂ ಆದಂಥ ಶ್ರೀ ಮಂಜಪ್ಪ ಹರ್ಡೇಕರರು ಅಗ್ರಸ್ಥಾನವನ್ನು ವಹಿಸಿದ್ದರು. ಸಭೆಯು ಸಂಪೂರ್ಣ ಪ್ರಾತಿನಿಧಿಕ ಸ್ವರೂಪದ್ದಾಗಿತ್ತು. ಉತ್ತರದಲ್ಲಿ ನೇಸರ್ಗಿ [illegible] ಪೂರ ಹಿಡಿದು ದಕ್ಷಿಣದಲ್ಲಿ ತಿರ್ರ ಸಿದ್ಧಪೂರದ ಜನರ ಪ್ರತಿನಿಧಿಗಳು ಬಂದಿದ್ದರು. ಬೈಲಹೊಂಗಲದ ಶ್ರೀ ವೆಂಟಗಪ್ಪ, ಬೆಳಗಾವಿಯ ಶ್ರೀ [illegible] ಪಾಟೀಲ, ವಿಜಾಪೂರದ ಶ್ರೀ ಮ.ರಿ.ಪಂಚಾಕ್ಷರಿ ಸ್ವಾಮಿಯವರು, ಬಾಗಲಕೋಟೆಯ ಶ್ರೀ. ಬಂಗಿನ ಮಲ್ಲಿಂಗಯ್ಯನವರು, ಹುನಗುಂದದ ಶ್ರೀ [illegible] ಸಂಗನಬಸಪ್ಪನವರು, ಧಾರವಾಡದಿಂದ ಶ್ರೀ. ಶೇಷಗಿರಿ, ದಂಡಕೇರಿ, ಗಿರಿಮಲ್ಲನಗೌಡ ನೆಲವಗಿ, ಹುಬ್ಬಳ್ಳಿಯಿಂದ ಶ್ರೀ ಶಂಕರಣ್ಣನವರು ಮತ್ತು ಶ್ರೀ ಧರಣೀಕ ಇವರೇ ಮೊದಲಾದವರಲ್ಲದೆ, ವ್ಯಾಪಾರ ಸ್ಥಾನದ ಒಂದು ದೊಡ್ಡ ಪಟ್ಟಣವಾದ ದಾವಣಗೆರೆಯಿಂದ ವಕೀಲ, ವರ್ತಕ, ಸಾಹುಕಾರ ವರ್ಗದವರಾಗಿ ೪೦ ಜನ ಪ್ರಮುಖರು ಬಂದಿದ್ದರು. ಇದೇ ಪ್ರಕಾರ ಬ್ಯಾಡಗಿ, ರಾಣೇಬೆನ್ನೂರ ಹಾನಗಲ್ಲ, ಗದಗ ಮುಂತಾದ ಸ್ಥಳಗಳಿಂದಲೂ ಬಹು ಜನರು ನಿಯಮಮಾಡಿಸಿದ್ದರು. ಐನೂರು ಪ್ರತಿನಿಧಿಗಳು ಬಂದಿದ್ದರೆಂದು ಸಹಜವಾಗಿ ಹೇಳಬಹುದು. [illegible] ಬರಲಿಕ್ಕಾಗದವರಾಗಿ ಅನಾನುಕೂಲತೆಯ ಮೂಲಕ ಸಭೆಗೆ ಬರಲಿಕ್ಕಾಗದಂಥವರು ಸಹಾನುಭೂತಿ ಪತ್ರ ಮತ್ತು ತಾರುಗಳನ್ನು ಕಳಿಸಿದ್ದರು. ಧಾರವಾಡದ ಶ್ರೀ ಮೋಕ್ಷಾಪೂರದ [illegible] ವಕೀಲರು ಬರೆದ ಪತ್ರವು ವೀರಶೈವ ತರುಣರಿಗೆ ಉತ್ತೇಜಕವಾಗಿತ್ತು. ಮುಂಬಯಿ, ಪುಣೆ, [illegible] ಮುಂತಾದ ದೂರ ದೂರದವರು ತಂತಿಗಳನ್ನು ಕಳಿಸಿದ್ದರು. ಹಾವೇರಿಯ ಬ್ರಾಹ್ಮಣೇತರ ವಕೀಲರೂ ಮಹಾಜನರೂ ಸಭೆಯ ಬಗ್ಗೆ ಪೂರ್ಣ ಆದರವುಳ್ಳವರಾಗಿ, ಪ್ರೇಕ್ಷಕರಾಗಿ ಬಂದಿದ್ದರು. ಈ ಎಲ್ಲ ಸಹಾನುಭೂತಿಯ ಪತ್ರ, ತಾರು ಮತ್ತು ಪರಮಶಿವನ ಆಗಮನಕ್ಕಿಂತ ಹೆಚ್ಚಿನ ದೃಷ್ಟಿಯಿಂದ ಸಂಗತಿಯನ್ನು ಹೆಚ್ಚು ಪ್ರಶಂಸನೀಯವಾಗಿ ಹೇಳತಕ್ಕದ್ದಿದೆ. ಉಪ್ಪಿನ ಕಾಯದೆಯನ್ನು ಮುರಿದ ಬಗ್ಗೆ ಶಿಕ್ಷೆ ಹೊಂದಿ ಹಿಂಡಲಗಿಯ ಜೈಲಿನಲ್ಲಿ ಅಜ್ಞಾತವಾಸಿಯಾಗಿರುವ ಶ್ರೀ ವೇದ [illegible] ಗುಡ್ಲ ವೀರಬಸಪ್ಪ ಮತ್ತು ಬಸಪ್ಪ [illegible] ಮೊದಲಾದವರು ಕಳಿಸಿದ ಸಂದೇಶವನ್ನು ಓದಿದಾಗ ಪ್ರತಿನಿಧಿಗಳ ಅಂತಃಕರಣವು ಚಲಿಸಿ, ಸಭೆಯ ವಾತಾವರಣದಲ್ಲಿ ಒಂದು ಪ್ರಕಾರದ ಶ್ರೇಷ್ಠ ಸ್ವರೂಪ ಪ್ರತಿಬಿಂಬಿಸಿತು. ದಕ್ಷ [illegible] ದಿವ್ಯ ಜ್ಯೋತಿಯನ್ನಿತ್ತವೆಂಬುದು ಸಂದೇಹವೇ ಇಲ್ಲ.

ರಾಷ್ಟ್ರದ ಏಳ್ಗೆಯಾದ ಹೊರತು ಜನಾಂಗದ ಏಳ್ಗೆಯಾಗಲು ಶಕ್ಯವಿಲ್ಲ. ಆದುದರಿಂದ ಕನ್ನಡಿಗರ ಮತ್ತು ಜನಾಂಗದ ವೀರಶೈವರು ಯಾವ ತರದ ಸಂಕುಚಿತತೆಯನ್ನು ಎತ್ತು ತಳೆಯತಕ್ಕದ್ದಲ್ಲದೆ, ಕಾಂಗ್ರೆಸದಲ್ಲಿ ಸಂಪೂರ್ಣವಾಗಿ ಸೇರಿಕೊಳ್ಳತಕ್ಕದ್ದು ಮತ್ತು ಮಹಾತ್ಮಾಜಿಯವರಿಂದ ಪ್ರಾರಂಭಿಸಲ್ಪಟ್ಟಂಥ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗುಲಾಮಗಿರಿ, ಕರ್ನಾಟಕಕ್ಕೆ ಕೀರ್ತಿ ತಾರೇಬೇಕು ಬದಿಯಲ್ಲಿ.

"ಈ ವರೆಗೆ ವೀರಶೈವರ ಕಾರ್ಯಕ್ರಮಗಳು ಹಾಗಾದದ್ದರಿಂದ ಹೊರ್ಡ್ಡ ಪ್ರಶ್ನೆಗಿರುತ್ತದೆ. ಆದಕಾರಣ ನಾವು ಕಾಂಗ್ರೆಸನಲ್ಲಿ ಸೇರಿಕೊಂಡು ವಿಧಾಯಕ ಕಾರ್ಯಕ್ರಮವನ್ನು ಮಾಡಬೇಕೆಂದು" ತಿಳಿಸುವುದೇ ಮುಖ್ಯ ಸಂಗತಿಯಾಗಿತ್ತು. ಸಭಾಧ್ಯಕ್ಷರಾದ ಶ್ರೀ ಹರ್ಡೇಕರ ಮಂಜಪ್ಪನವರು ಸಮಯೋಚಿತ ಭಾಷಣ ಮಾಡಿದರು. ಅವರ ಮುಖ್ಯಾಂಶಗಳನ್ನು ನಾಳಿನ ಸಂಚಿಕೆಯಲ್ಲಿ ಕೊಡುವೆವು. ವೀರಶೈವ ರಾಜಕೀಯ ಸಂಘವೊಂದನ್ನು ಸ್ಥಾಪಿಸಲು ಇರಬೇಕೆಂದು ಅಧ್ಯಕ್ಷರೇ ಮೊದಲಾಗಿ ಕೆಲವರ ಸೂಚನೆಯಿತ್ತು. ಇಂಬಾಲೆಂದು ಬಹುಜನ ದ್ದಾಗಿತ್ತು. ವಿಷಯನಿಯಾಮಕ ಕಮಿಟಿಯಲ್ಲಿ ಇದನ್ನು ಚರ್ಚೆಗೆ ತಾಕಲು, ಪ್ರತಿಷ್ಠಿತ ಬಹುಮಾನ ಒಂದು ಸ್ವತಂತ್ರ ಪಕ್ಷವಿರಬಾರದೆಂದು ಠರಾವ ಪಾಸಾಯಿತು. ಈ ಸಮಯದಲ್ಲಿ ಶ್ರೀ ಹೊಸಮನಿ ಯ ಪರಮಣ್ಣನವರು ಮಾಡಿದ ಭಾಷಣವು ಬಹಳ ಪರಿಣಾಮಕಾರಕವಾಯಿತು. ಅವರೆಂದರು

"ಕಾಂಗ್ರೆಸವು ಬ್ರಾಹ್ಮಣರದಾಗಿರುವುದೆಂಬ ವ್ಯರ್ಥವಾದ ಅಂಜಿಕೆಯಿಂದ ಪ್ರತ್ಯೇಕ ಸಂಸ್ಥೆ ಬೇಕೆಂಬ ವಿಚಾರವು ತೀರ ತಪ್ಪಾದ [illegible] ಯಾವ ಪಕ್ಷದಲ್ಲಿ ಇಲ್ಲ [illegible] ಬೇಕಾದ [illegible] ತಿಳಿದು [illegible] ಬ್ರಾಹ್ಮಣರು [illegible] [illegible] ಸ್ವಾರ್ಥ ತ್ಯಾಗ [illegible] ಕಮಿಟಿಗೆ [illegible] ಸ್ಥಳವನ್ನು ಆಕ್ರಮಿಸಿ [illegible] ಕಾಂಗ್ರೆಸ [illegible] ಮುಂದಾಗಿ ಬರುವದು ಅಗತ್ಯವಿದೆ [illegible] ಸ್ವತಂತ್ರ ನಿರ್ಮಾಣ ಮಾಡದೆ, ಎಲ್ಲರೂ ಸಂಘಟಿತ ವಿಚಾರ ಬಿಟ್ಟುಕೊಟ್ಟು ಕಾಂಗ್ರೆಸವನ್ನು ಸೇರಬೇಕು"

ಸಭೆಯಲ್ಲಿ ಪಾಸಾದ ಠರಾವುಗಳನ್ನು ಕೆಳಗೆ ಕೊಡಲು ಸಂತೋಷಪಡುತ್ತೇವೆ. ಸಂಪೂರ್ಣ ಉತ್ಸಾಹ, ಕಾಂಗ್ರೆಸ ಕಾರ್ಯದಲ್ಲಿ ನೇಮುದಂಬಿಕೆ ಮಹಾದೇವಿಯ ಅನುಮಾನಿಸಿದ ಸ್ಥಿತಿಯು ಎದ್ದು ಕಾಣುತಿತ್ತು.

ಹಾವೇರಿಯಲ್ಲಿ ಪಾಸಾದ ಠರಾವುಗಳು

೧ ಇದುವರೆಗೆ ರಾಷ್ಟ್ರೀಯ ಸಭೆಯು ಆನಕರ [illegible] ಸ್ವಾರ್ಥತ್ಯಾಗವನ್ನು ಮಾಡಿರುವ ವೀರಶೈವ ಬಂಧುಗಳ ಬದಿಗೆ ಇನ್ನು ಮುಂದೆ ಎಲ್ಲರೂ ರಾಷ್ಟ್ರೀಯ ಸಭೆಯ ಅನುಕರಣವನ್ನೇ ಮಾಡಬೇಕೆಂದು ಸೂಚನೆ.

೧ ಠರಾವು ಸೂಚಕರು ಶ್ರೀ ಮು ಕೇಶವ ವಕೀಲ, ಅನುಮೋದಕರು ಶ್ರೀ ಮ ಸ್ವಾಮಿ ಹುಬ್ಬಳ್ಳಿ, ಶ್ರೀ [illegible] ವಕೀಲ, [illegible] ಕರ್ನಾಟಕ [illegible] ಕಮಿಟಿಗೆ ಆಪ್ತ [illegible] ಪ್ರತಿನಿಧಿಗಳಾಗಿ ವೀರಶೈವರು ಆರಿಸಲ್ಪಡಬೇಕು.

ಸೂಚಕರು ಸಿದ್ಧಪ್ಪ [illegible] ಹೊಸಮನಿ,

ಅನುಮೋದಕರು ಶ್ರೀ. ಸಂಗಣ್ಣ ಹರ್ಡೇಕರ [illegible]

ರ ಬಹಿಷ್ಕಾರದ ನಿರ್ಣಯಗಳಿಗೆ, ಬ್ರಿಟಿಷರ ಮಾಲಿನ ಬಹಿಷ್ಕಾರಕ್ಕೆ ಈ ಸಭೆಯು ಸಂಪೂರ್ಣ ಬೆಂಬಲವನ್ನು ಕೊಡುತ್ತದೆ.

ಸೂಚಕರು ಶ್ರೀ ನೇಸರಗಿ ವಕೀಲ ಬೆಳಗಾವಿ (ಸ್ವಾಗತಾಧ್ಯಕ್ಷರು)

ಅನುಮೋದಕರು ಶ್ರೀ ಶಂಕರಣ್ಣನವರ ಹುಬ್ಬಳ್ಳಿ

೪ ಈ ವರೆಗೆ ಸತ್ಯಾಗ್ರಹ ಸಮರದಲ್ಲಿ ಸೆರೆಮನೆಗೆ ಹೋಗಿ ತಮ್ಮ ಸೇವೆಯನ್ನು ಸಲ್ಲಿಸಿದ ವೀರಶೈವ ಬಂಧುಗಳ ಅಭಿನಂದನೆ

ಸೂಚಕರು ಶ್ರೀ ಹ್ವ ಡಿ ಪಾಟೀಲ ಸವದತ್ತಿ ಬೆಳಗಾವಿ.

ಅನುಮೋದಕರು ಮುರಗೆಪ್ಪ ಬಂಗಿನ ಬಾಗಲಕೋಟೆ

೫ ಈಗ ತಾನೇ ವೀರಶೈವ ಸಮಾಜದ ಮುಂದಾಳುಗಳೆಂದು ಹೇಳಿಕೊಳ್ಳುವ ಕೆಲವು ವೀರಶೈವ ಸಮಾಜದವರು ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಬಾರದೆಂದು ಹೇಳುವದನ್ನು ಈ ಸಭೆಯು ನಿಷೇಧಿಸುತ್ತದೆ ಮತ್ತು ಇದು ಅವರ ವೈಯಕ್ತಿಕ ಅಭಿಪ್ರಾಯವೆನಿಸಬಹುದು.

ಸೂಚಕರು ಶ್ರೀ. ಪರಪ್ಪ ಹೊಸಮನಿ

ಅನುಮೋದಕರು ಶ್ರೀ ಎಲ್. ಎಸ್. ಪಾಟೀಲ ಹುಬ್ಬಳ್ಳಿ ಶ್ರೀ ನೇಸರಗಿ ವಕೀಲರು.

೬ ಮಹಾತ್ಮಾಜಿಯವರನ್ನು ಬಂಧಿಯಲ್ಲಿಟ್ಟದ್ದು ಸರಕಾರದ ಅಕ್ರಮವೆಂದು ಈ ಸಭೆಯು ಸರಕಾರವನ್ನು ನಿಷೇಧಿಸುತ್ತದೆ

ಸೂಚಕರು ವ್ಹಿ ಬಿ ಪುರಾಣಿಕ ಹುಬ್ಬಳ್ಳಿ ಬೆಳಗಾವಿಯ ಸಂಗಡಿಗರು.

ಅನುಮೋದಕರು - ಸಿದ್ಲಿಂಗಪ್ಪ ಪಟ್ಟದ ದಾವಣಗೇರಿ

೭ ರಾಷ್ಟ್ರೀಯ ಚಳವಳಿಯಲ್ಲಿ ಲಾಠಿ ಪೆಟ್ಟು ತಿಂದವರನ್ನು ಮತ್ತು ಹುಬ್ಬಳ್ಳಿ ಗಂಗಾಧರನ್ನು ಸೇವೆಗೈದ [illegible] ಮುಂದಾಳುಗಳ ಅಭಿನಂದನೆ.

ಸೂಚಕರು ಶ್ರೀ ಮುಂಡರಗಿ ವಕೀಲ ದಾವಣಗೆರೆ

ಅನುಮೋದಕರು ಶ್ರೀ ಧುಂಡಸಿಯವರು ತಿ [illegible]

೮ ವಿಜಾಪುರದ ಜೈಲಿನಲ್ಲಿರುವ ಕೈದಿಗಳಿಗೆ ಸರಕಾರದವರು ಕೊಡುವ ಅಸಹ್ಯ ಯಾತನೆಯ ಬಗ್ಗೆ ಸರಕಾರವನ್ನು ಸಭೆಯು ನಿಷೇಧಿಸುತ್ತದೆ

ಸೂಚಕರು ಮಲ್ಲಪ್ಪ ಬಕ್ಕಿ, ಅಂಗಡಿ

ಅನುಮೋದಕರು ಶ್ರೀ ಗಾಂತಪ್ಪ ಕೊಟ್ಟೂರ [illegible]

ಹಿಂಡಲಗಿ ಜೈಲಿನಿಂದ ಶ್ರೀ ಮಹಾದೇವಪ್ಪ ಮೆಣಸಗಿ, ನಾಗಪ್ಪ ನಾಗಾವಿ ಮೊದಲಾದವರ ಸಂದೇಶವನ್ನು ಶ್ರೀ ಹ್ವ ಹ್ವಿ ಪಾಟೀಲ [illegible] ತೋರಿಸಿದರು.

ಶ್ರೀ ಮಲ್ಲಪ್ಪ ಧನಶೆಟ್ಟಿ ಮೊದಲಾದವರಿಗೆ ಆದ ಮರಣದಂಡನೆಯನ್ನು ಜಗದೀಶನೇ ಮುಕ್ತಗೊಳಿಸಲೆಂದು ಈ ಸಭೆಯು ಬೇಡಿಕೊಳ್ಳುತ್ತದೆ ಸೂಚಕರು ಅಧ್ಯಕ್ಷರು.

ಎಲ್ಲ ಠರಾವುಗಳು ಸರ್ವಾನುಮತದಿಂದ ಪಾಸಾಗಿರುತ್ತದೆ

ವೀರಶೈವ ರಾಜಕೀಯ ಪರಿಷತ್ತಿನ ಮಹತ್ವವು.

ಹೋದ ಆದಿತ್ಯವಾರದ ದಿವಸ ಈ ಕೆಳಗೆ ಪ್ರಸಿದ್ಧವಾದಂತೆ ಹಾವೇರಿಯಲ್ಲಿ ವೀರಶೈವ ರಾಜಕೀಯ ಪರಿಷತ್ತು ಶ್ರೀ ಮಂಜಪ್ಪ ಹರ್ಡೇಕರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಸಭೆಗೆ ಹಲವು ಕಡೆಯಿಂದ ಅನೇಕ ಜನರು ಬಂದಿದ್ದರು. [illegible] ರಾಜಕೀಯದಲ್ಲಿ ವೀರಶೈವ [illegible] ವೀರಶೈವ ಜನಾಂಗದ ಸ್ವತಂತ್ರದ [illegible] ಯಿಂದ ಎಚ್ಚರಿಕೆ [illegible] ಕೆಲವು ಜನರು ಜಾತಿ ಹಿತೋದ್ಧಾರಕರು [illegible] ದೇಶಭಕ್ತರು ಹಾವೇರಿ ವೀರಶೈವ ಸಮಾಜದ ಮುಂದಾಳುಗಳು [illegible] ವೀರಶೈವ [illegible] [illegible] [illegible] [illegible] [illegible] [illegible] ಈ ಸಭೆಗೆ [illegible] ಹಾವೇರಿ ವೀರಶೈವ [illegible] ವಿರೋಧಕರಾಗಿದ್ದರೆ [illegible] [illegible] ಕೆಲಕೆಲವು ಬೇಕಾಗಿ [illegible] ಪ್ರತಿಷ್ಠೆ [illegible] [illegible] ಮಾಡಬೇಕಾಗಿ [illegible] ಹಾಗೆ ಮಾಡದೆ, ಸುಮ್ಮನೆ ಮನೆಯಲ್ಲಿ ಕುಳಿತುಕೊಂಡರು. ಅಂಥ ಮುಖಂಡರೆಂದು ತಮ್ಮನ್ನು ಹೇಳಿಕೊಳ್ಳುವವರು ರಾಷ್ಟ್ರೀಯ ಪ್ರವಾಹದಲ್ಲಿ ಬರಲಾರರು. ಹೇಳಿಕೆಯೊಂದೇ ತಾನಾಗುತ್ತದೆ.

ಎರಡು ವರ್ಷಗಳ ಹಿಂದೆ ಹಾವೇರಿಯಲ್ಲಿ ನೆರೆದಿದ್ದ ಧಾರವಾಡ ಜಿಲ್ಲೆಯ ರಾಜಕೀಯ ಪರಿಷತ್ತಿನಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರೇ ಅಧ್ಯಕ್ಷರಾಗಿದ್ದರು. ಆಗ ಹಾವೇರಿಯವಾಗಲಿ, ಬೇರೆ ಸ್ಥಳಗಳ ವೀರಶೈವರಾಗಲಿ, ಇದರಲ್ಲಿ ಸೇರಲಿಲ್ಲ; ಅದೇ ಹಾವೇರಿಯು ಇಂದು ರಾಜಕೀಯ ಚಳವಳಿಯಲ್ಲಿ ಅಗ್ರಸ್ಥಾನ ಹೊಂದಿ, ದೇಶಾಭ್ಯುದಯಕ್ಕೆ ಸರ್ವ ಮಾನ್ಯವಾಗುವಂಥ ಠರಾವುಗಳನ್ನು ಪಾಸಮಾಡಿದ್ದು ಹಿತವಾಗಿ ತೋರುತ್ತದೆ. ಆ ಸಭೆಯಲ್ಲಿ ಕೌನ್ಸಿಲಕ್ಕೆ ಬಹಿಷ್ಕಾರ ಹಾಕಬೇಕು; ವೋಟು ಕೊಡಬಾರದೆಂಬ ಠರಾವು ಪಾಸಾಗಿತ್ತು. ಅಂಥ ಠರಾವು ಈಗಾದರೂ ಪಾಸಾಗಿರುತ್ತದೆ. ಮತ್ತು ಅದರ ಪರೀಕ್ಷೆಯ ಕಾಲದಲ್ಲಿಯೇ ಈ ಠರಾವು ಪಾಸಾಗಿರುತ್ತದೆ. ರಾಷ್ಟ್ರೀಯರಾಗಿ, ಅಸಹಕಾರಿಗಳೂ ಕಾಂಗ್ರೆಸನ್ನು ಕಟ್ಟಿಬಿಟ್ಟ ಪರಿಷ್ಕಾರ ಸಹಿತ ಹೋದ ತ್ರಿಕರ್ನಾಟಕ ವಕೀಲರು ಕೌನ್ಸಿಲಕ್ಕೆ ಬಹಿಷ್ಕಾರ ಹಾಕುವದರ ಬದಲು ಉಮೇದವಾರರಾಗಿದ್ದಾರೆ. ಶ್ರೀ ಗಿರಿಯಪ್ಪನವರು ಉಳಿದ ಮೂವರ ಸಂಗಡ ವೇಠಾಟ [illegible] ಮಾಡದಂಬ ಭಾವನೆಯುಂಟಾಗಬೇಕೆಂತಲೇ ಮುಂದಿಟ್ಟ ಕಾಲನ್ನು ಹಿಂದೆ ತಕ್ಕೊಂಡರು. ಶ್ರೀ. [illegible] ರಾಯವರೂ ಹೀಗೆ ಮಾಡುವದು ರಾಷ್ಟ್ರೀಯ ದೃಷ್ಟಿಯಿಂದ ಮಹತ್ವದ್ದು, ತಮ್ಮ ಮಹತ್ವದ್ದು, ತಮ್ಮ [illegible] ಸಭೆಯ ಜಾವಿಗೆ ಮಾನಕೊಡುವಂಥದ್ದೂ ಆಗುತ್ತದೆ. ತಮ್ಮ ಪಾಲಿಗೂ ಸಂದೇಹರಹಿತವೆಂದು [illegible] ತಿಳಿದು ಬಾರದು. ಈಗಿನ ಕೌನ್ಸಿಲ ಚುನಾವಣೆಯು ವರ್ಷಾರ್ಧ ತಿಂಗಳು ಆಯುಷ್ಯ ಇದ್ದರೂ ಇದ್ದಂತಾಗುವದಿಲ್ಲ. ಕಾಂಗ್ರೆಸದ ಮುಕ್ತ ಸೂಚನೆಯಾಗಿ ಬೆಂಡಿಗಾಲಿಯು ಕಮಿಟಿಯಲ್ಲಿ ಠರಾವ ಪಾಸಾದರೆ ಈ ಪಕ್ಷಯು ಪಾಲಿಗೆ ಬರುವ ಸ್ಥಳಗಳು ಬರುವವು. ಆಗ ಅನೇಕರಿಗೆ ಹೆಚ್ಚಿನವರಾಗಿ ಆಸನವು ದೊರೆಯುವದು. ಅದೇ ಮೇ ಒರವೇ ಈಗಿನಂತೆ ಅನುಭವಿಕರಿಗೆ ಮಂತ್ರಿಸ್ಥಾನಗಳು, ನಿಜವಾದ ಅಧಿಕಾರಪೂರ್ಣವಾದ ಮಂತ್ರಿಪದವಾಗಲಿಕ್ಕಿಲ್ಲ ಬರುತ್ತದೆ. ಅದ್ದರಿಂದ ಸ್ವರಾಜ್ಯದ ದೆಸೆಯಿಂದ ರಾಷ್ಟ್ರದ ಮುಂದೆ ಬಹಿಷ್ಕಾರದ ಠರಾವು ಪಾಸವಾದಾಗ, ಅವರ ಹುಂಗಾರದ ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿ ಅದನ್ನು ಪ್ರತ್ಯಕ್ಷ ಕೃತಿಯಿಂದ ಮಾಡಿ ತೋರಿಸಲು ಶ್ರೀ ಶೇಸರೆಯವರೂ ವೀರಶೈವರೂ ಮುಂದೆ ಬರುವರೆಂದು ನಂಬುತ್ತೇವೆ.

ಊರೂರಿಗೆ ಬಹಾದ್ದೂರ ಮ್ಯಾಜಿಸ್ಟ್ರೇಟರ ಗೆಜಂಬೆಗಳನ್ನು ನಿಲ್ಲಿಸಬೇಕು

ಈಗಿನ ದಬ್ಬಾಳಿಕೆಯಲ್ಲಿ ಸರಕಾರದ ಸ್ಥಿತಿಯನ್ನು ಹೊರಗೆಡಹಲು ಮಾ [illegible] ಬಿನ್ನಹ [illegible] ದಿನ್ನಿಸಿಯಲ್ಲಿ ಮಾತುಗಳು ಸ್ಥಿರವಾಗುತ್ತಿವೆ. ದ್ವಾರ ಆವಾರದಲ್ಲಿ ಗಂಟೆಗಳ ಸಮಯ, ಮುಂಬಯಿಯ ಗ್ಯಾಸ್ಕೆಟ್ಟರ, [illegible] ಮೊದಲಾದವರು ಆಗ [illegible] ಇವರ ಜೊತೆ ದಿವಸಪ್ರತಿದಿವಸ [illegible] ಮಾಡಿದವರು [illegible] ಇವರ ಗಳಿಗೆಗಳನ್ನು ಮಾಡಿಸಿ, ಅವನ್ನು ಅಲ್ಲಲ್ಲಿ ನಿಲ್ಲಿಸಬೇಕೆಂಬ ಸೂಚನೆಯು [illegible] ಒಂದಿದೆ [illegible] ಬಹಾದ್ದೂರರಾದ ಮ್ಯಾಜಿಸ್ಟ್ರೆ [illegible] ಒಂದು [illegible] ಮಾಡಿ [illegible] ಗಳನ್ನು [illegible] ಮತ್ತು ದೊಡ್ಡ ಸಮುದಾಯದ [illegible] ನಿಲ್ಲಿಸಬೇಕು. ಇವುಗಳ [illegible] ಬೆಳಗಾವಿಯಲ್ಲಿ ಪಡದ [illegible] ಗೆಜಂಬೆಗಳನ್ನು ಮಾಡಿ ಸುಕ [illegible] ಪ್ರತಿಯೊಂದು ವ್ಯಕ್ತಿಯ ನಿಲ್ಲಿಸಬೇಕೆಂದು ಸೂಚಿಸುವದು ಅಪ್ರಸ್ತುತವಾಗದು

ಬಾಗಲಕೋಟೆಯ ಮ್ಯಾನೇಜರರ ವಿಚಾರವು.

ಬಾಗಲಕೋಟೆಯಲ್ಲಿ ಸ್ವದೇಶಯಾತ್ರಾ [illegible] ಬ್ಯಾಂಕಿನ [illegible] ಕಳ್ಳನು ಕಿಡಕಿಯಲ್ಲಿ ಕರೆದು ಸಿಗಿದು ಮತ್ತು ಒಂದು ಉಗ್ರ ಮಿಶನಗಳು ಹೊರಗೆ, ಹೊಸ ಪಿಕಿಪ ಟೆಬಲಿಗೆ ಎರಡು ಸಾವಿರ ಹಣವನ್ನು ದೋಚಿದನು. ಕಳ್ಳನು ಕೆಲವು ದಿನಗಳಲ್ಲಿ, ಕಳ್ಳನ ಬಲನ್ನು ನಿಲ್ಲಿಸಿದ್ದಾರೆ. ಇಂಥ ಧೈರ್ಯದವನಾಗಿ ಬಂದ, ಕಳ್ಳನನ್ನು ಹಿಡಿದುಕೊಂಡವನಿಗೆ ಸಿ.. ಡ್ಯೂಟಿಯ ಮ್ಯಾನೇಜರರನ್ನು ಕರೆದಿದ್ದು ಬಹಳ ಕಳ್ಳರನ್ನು ಬಹುಮಾನ ನೀಡಲಾಗಿತ್ತು.

ಸಂಸ್ಥಾನಿಕರ ಪತಿಯಿಂದ ದಿವಾನರೆಂದು ಅ [illegible] ನವರು ಅಂಥೋಣಿ ಬೇಸ ಪರಿಶ್ರಮಗಾರ ಅವರನ್ನು ನೇಮಿಸುವರು.

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಗಳ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾತ್ಮಾ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮಣ್ಣ ಕಂಪನಿ ಲಿಮಿಟೆಡ್.

ವೆಂಬ ವಾಪೇದ ದಲಾಲಿ ಅಂಗಡಿಯನ್ನು ಗದಗ ಶಹರದಲ್ಲಿ ಇದೇ ವರ್ಷ ಕಂಪನಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯ ವ್ಯವಸ್ಥೆಯು ದೊಡ್ಡ ದೊಡ್ಡ ಜಮೀನದಾರ ಮತ್ತು ವ್ಯವಹಾರಜ್ಞರಾದ ಸುಶಿಕ್ಷಿತ ಜನರಿಂದಲೇ ಮಾಡಲ್ಪಡುವದು.

ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಹುಟ್ಟಿಸಿ ಮತ್ತು ನೈತಿಕ ಉನ್ನತಿಯನ್ನು ಬೆಳೆಯಿಸಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಜಾನುವಾರ, ಖಾಲೀಚೀಲ, ಹತ್ತೀಕಾಳು, ಬಿತ್ತಣಿ ಎಣ್ಣಿ ಕಿರಾಣಿ ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ ಸೋವಿದರದಿಂದ ಕೊಂಡುಕೊಳ್ಳಬೇಕಾಗಿ ವಿನಂತಿಯು. ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತೀಕಾಳು, ಹುರುಳಿ ವಗೈರೆ ಮಾಲನ್ನು ಸಂಗ್ರಹ ಮಾಡುವದು ಹೆಚ್ಚು ಲಾಭಕರವಿದೆ. ಕಾರಣ ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು ನಮಗೆ ಮುಂಗಡವಾಗಿ ಕಳುಹಿಸಿಕೊಟ್ಟು ಲೇವಿಯಿಂದ ಖರೀದಿ ಮಾಡಲಿಕ್ಕೆ ತಿಳಿಸಿದಲ್ಲಿ ಯೋಗ್ಯದರದಿಂದ ಖರೀದಿಮಾಡಿ ಇಡುವದರಲ್ಲಿ ಬರುವದು. ಈ ಸುಸಂಧಿಯನ್ನು ವ್ಯರ್ಥ ಕಳೆದುಕೊಳ್ಳಬಾರದಾಗಿ ವಿನಂತಿ. ಮತ್ತು ತಾವೆಲ್ಲರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳಿ, ಗೋಧಿ, ಜೋಳ, ಶೇಂಗಾ ವಗೈರೆ ಹಲವು ತರಹದ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾರಾಶ್ರಯ ಕೊಡಬೇಕೆಂದೂ ಮತ್ತು ತಾವೂ ಲಾಭಹೊಂದಬೇಕೆಂದೂ ಇಚ್ಛಿಸುತ್ತೇವೆ.

ಗದಗ. ತಮ್ಮ
ಅಂಗಡಿ ನಂ ೧೭೩೩ ರಾ. ಸಾ. ಲಿಂಗನಗೌಡಾ ಪಾಟೀಲ, ಚೇರಮನ್ನ
ಕಾಟನ್ ಮಾರ್ಕೇಟ ರೋಡ ಲಕ್ಷ್ಮಪ್ಪಾ ಗೋಣೆಸಾ, ಸಾಹುಕಾರ ಮೈದೂರ ಅಂತರವ
ವೆಂಕರಡ್ಡಿ ಕೃಷ್ಣರಡ್ಡಿ ಇನಾಮತಿ ಅಸುಂಡಿ, ಗದಗ ದ್ಯಾಮನಗೌಡಾ ಪಾಟೀಲ, ಹಾಯಕೋರ್ಟ ವಕೀಲ
ಹನಮರಡ್ಡಿ ತಿಮ್ಮರಡ್ಡಿ ಕಾಲವಾಡ ಮ್ಯಾನೇಜರ, ರಡ್ಡಿ ಬ್ಯಾಂಕ ಧಾರವಾಡ ಧಾರವಾಡ

ಸೂಚನೆ:— ವಿಮೆ ಇಳಿಸುವಲ್ಲಿ ಮಾಲಿನ ಮೇಲೆ ೭೫ ಟಕ್ಕೆಕ್ಕಿಂತ ಹೆಚ್ಚಿಲ್ಲದಷ್ಟು ರಕಮು ಅಗಾವು ಕೊಡುವದರಲ್ಲಿ ಬರುವದು. ಹೀಗೆ ಒಯ್ದ ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ ೧ ರೂಪಾಯಿಗಿಂತ [illegible] ಬಡ್ಡೀ ಕೊಡಬೇಕಾಗುವದು. ಕಂಪನಿಯವರು ಆಸಾಮಿಗಳ ಇಚ್ಛೆಯ ಪ್ರಕಾರ, ಪಟ್ಟಣದಲ್ಲಿ ಖಾಸಗಿ ಲಿಲಾವು ಇಲ್ಲವೆ ಗದಗ ಕಾಟನ್ ಮಾರ್ಕೇಟ ಅಸೋಸಿಯೇಶನ್ನದ ಮುಖಾಂತರವಾಗಿ ಲಿಲಾವಿನಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ.

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ತೀರ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ, ಕುರುಬ, ಸೋಮವಂಶೀಯ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ನಾಮದೇವ ಶಿಂಪಿ, ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಕಬ್ಬೇರ, ಒಡ್ಡರ, ಗೊಲ್ಲರ, ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ, ಶಿಕ್ಕಲಿಗಾರ ಲಮಾಣಿ ಮೊದಲಾದ ನಿಕೃಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಬಂದ ಹಾಗೂ ಬಹು ಸಂಖ್ಯಾತ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ [illegible], ಅಡಚಣಿ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು

ಮೊದಲಾದವು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾವಿ, ಕಾರವಾರ ಹಾಗೂ ಸೊಲ್ಲಾಪೂರ ಮೊದಲಾದ ಬ್ರಿಟಿಶ ಜಿಲ್ಹೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾತ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಿಲ್ಲದ ವಯಸ್ಸಿನ ಸ್ತ್ರೀಪುರುಷರು ಕೆಳಗೆ ಕಾಣಿಸಿದಂತೆ ಆಯಾ ತರಗತಿಯ ದೇಣಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರಾಗಬಹುದು.

ಆಶ್ರಯದಾತರು:— ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ದೇಣಿಗೆಯನ್ನು ಕೊಡುವಂಥವರು.

ದಾತೃಗಳು.— ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಅಜೀವ ಸಭಾಸದರು:— ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಸಾಧಾರಣ ಸಭಾಸದರು— ಇವರು, ಕೂ ೧ ನೇ ತರಗತಿ— ಕನಿಷ್ಟ ೫ ರೂ. ವಾರ್ಷಿಕ ವರ್ಗಣಿ
೨ ನೇ ತರಗತಿ— ಕನಿಷ್ಟ ೨ ರೂ. ವಾರ್ಷಿಕ ವರ್ಗಣಿ ಕೊಡುವವರು.
೩ ನೇ ತರಗತಿ— ಕನಿಷ್ಟ ೧ ರೂ. ವಾರ್ಷಿಕ ವರ್ಗಣಿ ಕೊಡುವವರು
೪ ನೇ ತರಗತಿ— ಕನಿಷ್ಟ ೪ ಆಣೆ, ವಾರ್ಷಿಕ ವರ್ಗಣಿ ಕೊಡುವವರು.

[illegible] ಬಂಧುಭಗಿನಿಯರು ಆದಷ್ಟು ಶೀಘ್ರ ಸಂಘದ ಮೆಂಬರಾಗಬೇಕೆಂದು ಬಹಳ ಆಗ್ರಹದ ವಿನಂತಿಯು.

ದೇವನಗೌಡ ಲಿಂಗನಗೌಡಾ ಪಾಟೀಲ,
ಬಿ. ಎ. ಎಲ್‌ಎಲ್. ಬಿ ಹಾಯಕೋರ್ಟ ವಕೀಲ, ಧಾರವಾಡ
ಸೆಕ್ರೆಟರಿ.

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ಮಾರ್ಗೇಜಿನ ಮೇಲೆ

ನಿರಣಿಯು (ಶೇರ್ಸ್) ಮತ್ತು ದಿ ಬ್ಯಾಂಕ ಆಫ್ [illegible] ಲಿಮಿಟೆಡ್ (ಶೇರ್ಸ್) ಸಿಗುವವು. ಪ್ರತ್ಯುತ್ತರದ ಸಲುವಾಗಿ ಎರಡು ಆಣೆಯ ಪೋಸ್ಟ ಸ್ಟ್ಯಾಂಪು ಕಳಿಸಿ ಕೊಡಿರಿ. ದೊಡ್ಡ ದೊಡ್ಡ ಊರುಗಳಲ್ಲಿ ಕಮಿಶನ್ನದ ಮೇಲೆ ಕೆಲಸ ಮಾಡುವವರು ಬೇಕು.

ಪತ್ತೆ [illegible]

ಟೆಲಿಫೋನ, ಪಿ. ಡಿ. [illegible] ಬ್ರೋಕರ
ಫೋನ ನಂಬರ ಕೇಶರ ಬಾಗ ಗೋಲ್ಡ ಮೊಹಲ್ಲಾದ ಮುಂದೆ
ಪೋಸ್ಟ, ಬೊಕ್ಸ ನಂಬರ [illegible],
ದಾದರ, ಬೊಂಬೈ

(೧) ರಾಣೆಬೆನ್ನೂರ (೨) ಹಿರೇಕೇರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿನ ಬಗ್ಗೆ ಗಣೇಶ ಶಂಕರ ಜೋಶಿ ಇವರನ್ನು ನಾವು ಏಜಂಟರನ್ನಾಗಿ ನೇಮಿಸಿದ್ದೇವೆ. ಈ ನಾಲ್ಕು ತಾಲೂಕಿನ ನಮ್ಮ ವ್ಯವಹಾರವನ್ನು ಇವರ ಹತ್ತ ಮಾಡುವದಕ್ಕೆ ಹರಕತ್ತು ಇಲ್ಲಾ

ತ್ವರೆ ಮಾಡಿರಿ! ತ್ವರೆ ಮಾಡಿರಿ!

THE UNITED KARNATAK INSURANCE COMPANY LTD. DHARWAR

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೭ನೇ ಆಕ್ಟಿನ ಪ್ರಕಾರ ರಜಿಸ್ಟ್ರ

ಏಜಂಟರು ಬೇಕು

ಕನ್ನಡ ನಾಡಿನಲ್ಲಿ ಕನ್ನಡಿಗರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮತ್ತು ಕನ್ನಡಿಗರಿಂದ ನಡೆಸಲ್ಪಟ್ಟ ಈ ಮೊದಲನೇ ಕಂಪನಿಗೆ ಶೇರುಗಳನ್ನು ಮಾರುವದಕ್ಕೂ ವಿಮೆ ಕೆಲಸವನ್ನು ತಂದು ಕೊಡುವದಕ್ಕೂ ಎಲ್ಲಾ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ವಿಮೆಯ ಕೆಲಸವನ್ನು ಗ್ಯಾರಂಟಿ ಮಾಡಿದಲ್ಲಿ ವಿಶೇಷ ಸವಲತ್ತುಗಳು ಕೊಡಲ್ಪಡುವವು. ಕನ್ನಡಿಗರೇ ತೀವ್ರವೇ ನಮ್ಮ ಕೆಲಸವನ್ನು ಕೈಕೊಂಡು ಲಾಭ ಪಡಕೊಳ್ಳಿರಿ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Hulgolkar.
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ — [illegible] ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ

ಚಾಲೂ ಖಾತೆಗಳು — ಪ್ರಕಟವಾಗಿ ತೆರೆಯಲ್ಪಡುವವು

ಸೇವಿಂಗ್ಸ ಬ್ಯಾಂಕು — [illegible] ತೆರೆಯಲ್ಪಡುವವು ಬಡ್ಡೀ ದರ ೩ ರೂ.

ಮುದತಿ ಠೇವುಗಳು — ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡಿಯ ದರ ೩॥ ರೂ.

ದೇಣಿ— ಬಂಗಾರ ಡಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ ೬ ರೂ. ಹತ್ತಿ ಮತ್ತು ಧಾನ್ಯಗಳ ಅಡವಿನ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ಮತ್ತು ನಿಯಮಿತ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಆಯಾ ಖಾತೆಗೆ ಜಮೆ ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತ್ತು ಯೋಗ್ಯ ಕಮಿಶನ್ ತೆಗೆದುಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ಮತ್ತು ವಿಕ್ರಿ ಮಾಡುವದರಲ್ಲಿಯೂ ಬರುವದು. ವ್ಯಾಪಾರೀ ಹುಂಡಿಗಳನ್ನು ಕೊಡುವ ಕೊಳ್ಳುವದರಲ್ಲಿಯೂ ಮತ್ತು ಚೆಕ್ಕು ಹುಂಡಿಗಳನ್ನು ವಸೂಲಿ ಮಾಡುವದರಲ್ಲಿಯೂ ಬರುವದು.

ಬ್ಯಾಂಕಿಗೆ [illegible] ನಿಯಮಗಳಲ್ಲಿ ಒಳಪಡುವ ವ್ಯವಹಾರಗಳು, ಎಲ್ಲ ತರದ ಅಧಿಕಾರವಿರುವದು. ವಿಶೇಷ ಮಾಹಿತಿಯನ್ನು ಪತ್ರವ್ಯವಹಾರದ ಅಥವಾ ಸಮಕ್ಷಮ ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್.
ಏಜಂಟರು,

॥ [illegible] ॥

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡ್ಡಿ
ಮತ್ತು ——— ಧಾರವಾಡ
ಶಾಬುನಕಟ್ಟಿ

ನಮ್ಮಲ್ಲಿ ಇಡೀ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಸಹ) ನವೀನ ಚಿತ್ರಗಳೂ ಬರವಣಿಗೆ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ಅರ್ಧ ಆಣೆ ತಿಕೀಟುಗಳನ್ನು ಕಳಿಸಿ ಒಯ್ಯಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸ. ೧-೨ ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧- ೮-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸ್ಥಾಪನೆ	೧- ೦-೦
೫. ಚರಿತ್ರ ಸಂಗ್ರಹ ಭಾ. ೧.	೧- ೬-೦
೬. ಆಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಶಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೦-೦-೦
೯. ದಾಂಪತ್ಯ ವಿಜ್ಞಾನ ಮಾನಸವಿಜ್ಞಾನ ಪ್ರತಿ ೧ಕ್ಕೆ	೧- ೨-೦
೧೦. ಲ್ಯಾಂಡ ರೆವಿನ್ಯೂ ಕೋಡು	೨-೧೨-೦
೧೧. ಗ್ರಾಮ ನಮುನೆ ಲೆಕ್ಕದ ಪುಸ್ತಕ	೨-೧೩-೦
೧೨. ಸ್ತ್ರೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೨-೦
೧೩. ಇನಸಾಫನೀತಿ ಕಥೆ ಭಾ. ೧, ೨,	೨- ೪-೦
೧೪. ಕೀರ್ತನ ಕಂಠಾಭರಣ	೧- ೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ,
ವ್ಯವಸ್ಥಾಪಕರು

ಕರ್ನಾಟಕದೊಳಗೆ ಘಟಿಸಿದ ಸ್ವಾತಂತ್ರ್ಯ ಸಪ್ತಾಹ.

(ಧಾರವಾಡ ಕಾಂಗ್ರೆಸ ಕಮಿಟಿಯವರ ವರದಿಯು)

ಧಾರವಾಡ ಜಿಲ್ಲೆ:- ಧಾರವಾಡ, ಹುಬ್ಬಳ್ಳಿ, ಗದಗು, ಬೆಟಗೇರಿ, ಕಲಘಟಗಿ, ಹಿರೇಬೆನ್ನಳ್ಳಿ, ನಾನಗೆಲ್ಲ, ಹಾವೇರಿ, ಬಂಕಾಪುರ, ರಾಣೆಬೆನ್ನೂರ, ಗಸ್ತಾಂವಿ, ಬ್ಯಾಡಗಿ, ಅಲೂರು, ಹಂಸಭಾವಿ, ಗುತ್ತಲ, ಅಣ್ಣಿಗೇರಿ, ನವಲಗುಂದ, ಮೊದಲಾದ ಊರುಗಳಲ್ಲಿ ಈ ಸಪ್ತಾಹವು ಬಹು ಸೊಗಸಾಗಿ ನಡೆಯಿತು.

ಬೆಳಗಾಂವಿ ಜಿಲ್ಲೆ:- ಬೆಳಗಾಂವಿ, ಕಿತ್ತೂರ, ನಂದಗಡ, ಬೈಲಹೊಂಗಲ, ಸಂಪಗಾಂವಿ, ಮುರಗೋಡ, ಮುನೋಳಿ, ಸವದತ್ತಿ, ಕರೀಕಟ್ಟಿ, ಅಥಣಿ, ಐನಾಪುರ, ನಿಪ್ಪಾಣಿ, ಸಂಕೇಶ್ವರ, ಜಮಖಂಡಿ, ಮೊದಲಾದ ಊರುಗಳಲ್ಲಿಯೂ ನಡೆಯಿತು.

ವಿಜಾಪುರ ಜಿಲ್ಲೆ:- ವಿಜಾಪುರ, ಹುನಗುಂದ, ಕೆರೂರು, ಬಾಗಲಕೋಟೆ, ಗಲಗಲಿ, ಗುಳೇದಗುಡ್ಡ, ಇಳಕಲ್ಲ, ಮೊದಲಾದವುಗಳಲ್ಲಿ ನಡೆಯಿತು.

ಬಳ್ಳಾರಿ ಜಿಲ್ಲೆ:- ಬಳ್ಳಾರಿ, ಹೊಸಪೇಟೆ, ಹರಪನಹಳ್ಳಿ, ಮೊದಲಾದವುಗಳಲ್ಲಿ ಆಯಿತು.

ಕಾರವಾರ ಜಿಲ್ಲೆ:- ಕಾರವಾರ, ಹೊನ್ನಾವರ, ಸಿದ್ದಾಪೂರ, ಭಟಕಳ, ಶಿರಸಿ, ಕುಮಟಾ, ಅಂಕೋಲಾ, ಯಲ್ಲಾಪುರ, ಮೊದಲಾದವುಗಳಲ್ಲಿಯೂ ನಡೆಯಿತು.

ಮಂಗಳೂರು ಜಿಲ್ಲೆಯಲ್ಲಿಯೂ ಅನೇಕ ಕಡೆಗಳಲ್ಲಿ ಈ ಸ್ವಾತಂತ್ರ್ಯಸಪ್ತಾಹವು ನಡೆದಿದೆ. ಅದರ ಇನ್ನು ಸಾಕಷ್ಟು ವರದಿಯು ನಮ್ಮಲ್ಲಿ ಬಂದಿಲ್ಲ.

ಹೀಗೆ ಕರ್ನಾಟಕದ ಎಲ್ಲ ಭಾಗದಲ್ಲಿಯೂ ನಡೆದ ಈ ಸಪ್ತಾಹದಲ್ಲಿ ಆಯಾ ಜಿಲ್ಲೆಯ ತಾಲೂಕಿನ ಪ್ರಮುಖರು ಅಲ್ಲಲ್ಲಿ ವ್ಯಾಖ್ಯಾನಗಳನ್ನು ಕೊಟ್ಟರು. ಬೆಳಗಾಂವಿಯ ಶ್ರೀ ಗಂಗಾಧರರಾಯರು, ಕಿತ್ತೂರು, ಸಂಪಗಾಂವಿ, ಹೊಂಗಲ, ಸವದತ್ತಿ, ಗುರ್ಲಹೊಸೂರು, ಮುನವಳ್ಳಿ, ಮೊದಲಾದ ಕಡೆಗೆ ಹೋಗಿ ಬಂದಿರುವರು. ಧಾರವಾಡದಿಂದ ಶ್ರೀ ಹುಕ್ಕೇರಿಯವರು ಹುಬ್ಬಳ್ಳಿ, ಮೊರಬ, ಹಾನಗಲ್, ಬಂಕಾಪೂರ, ಹಾವೇರಿ, ಬ್ಯಾಡಗಿ, ರಾಣೆಬೆನ್ನೂರ ಕಡೆಗೆ ಹೋಗಿದ್ದರು. ಶ್ರೀಮತಿ ಸಾ[illegible]ಬಾಯಿಯವರು ಹಾವೇರಿ, ಬ್ಯಾಡಗಿ, ರಾಣೆಬೆನ್ನೂರ, ಗದಗ, ಬಾಗಲಕೋಟೆ ಕಡೆಗೆ ಹೋಗಿದ್ದರು. ಶ್ರೀ. ಕರಮರಕರರು ಹುಬ್ಬಳ್ಳಿ, ರಾಣೆಬೆನ್ನೂರ, ಹಾವೇರಿ, ಗದಗಿನ ಕಡೆಗೆ ಹೋಗಿದ್ದರು. ಶ್ರೀ. ಮುದವೀಡು ಕೃಷ್ಣರಾಯರು ಗುರ್ಲಹೊಸೂರ, ಬಾಗಲಕೋಟೆ, ಬಂಕಾಪುರ, ಶಿಗ್ಗಾಂವಿ, ಹಾನಗಲ್ ಕಡೆಗೆ ಹೋಗಿದ್ದರು. ಶ್ರೀ ಪುರೋಹಿತರೂ ಶ್ರೀ. ಗೋ[illegible] ಕಿತ್ತೂರಗೂ, ಶ್ರೀ. ಆ. ರಂಗಾಚಾರ್ಯರು ದೊಡ್ಡಗುಡಿ ಸವದತ್ತಿ, ಮುನವಳ್ಳಿ, ಯಕ್ಕುಂಡಿ, ಕರೀಕಟ್ಟಿ, ಕಡೆಗೆ ಹೋಗಿದ್ದರು. ಶ್ರೀ. ಹಿರೇಮಠರೂ ರಂಗಾಚಾರ್ಯರೂ ಹುಬ್ಬಳ್ಳಿಕ್ಕೆ ಹೋಗಿದ್ದರು. ಧಾರವಾಡದಲ್ಲಿ ಶ್ರೀ [illegible] ರಾಮರಾಯರೂ, ಮುದವೀಡು ಕೃಷ್ಣರಾಯರೂ, ಹುಕ್ಕೇರಿಯವರೂ, ಕಂಬಳಿಯವರೂ, ಆಳ್ವಕರ ನಾರಾಯಣರಾಯರೂ ವ್ಯಾಖ್ಯಾನ ಕೊಟ್ಟರು. ಹೊರಗಿನಿಂದ ಶ್ರೀಮತಿ ಕುಂದಾಪುರ [illegible]ಬಾಯಿಯವರೂ, ಶ್ರೀ. ಗೋಕಾಕರ [illegible]ರೂ, ಶ್ರೀ. ಪುರಾಣಿಕ, ಕೆಂಪಣ್ಣವರ, [illegible] ಹಾಗು ಹಾವೇರಿಯ ಶ್ರೀ. ಹೊಸಮನಿ ಸಿದ್ದಪ್ಪನವರೂ [illegible] ಹಾಗೆಯೇ ದಾವಣಗೆರೆಯವರೂ ಬಂದಿದ್ದರು. ಶ್ರೀ. ಆಳ್ವಕರ ನಾರಾಯಣರಾಯರು, ಅಣ್ಣಿಗೇರಿ, ನವಲಗುಂದ, ರಾಣೆಬೆನ್ನೂರ ಕಡೆಗೆ ಹೋಗಿದ್ದರು. ಇದೇ ಮೇರೆಗೆ ಆಯಾ ಭಾಗದ ಜನರು ತಮ್ಮ ಭಾಗಗಳಲ್ಲಿ ಉತ್ತಮ ರೀತಿಯಿಂದ ಸ್ವಾತಂತ್ರ್ಯಸಪ್ತಾಹವನ್ನು ಜರುಗಿಸಿದರು.

ಅಖಿಲ ಭಾರತೀಯ ಸೆರೆಯಾಳುಗಳ ದಿನ

ಈ ದಿನ ನಗರ ಸಂಕೀರ್ತನ, ಉಪೋಷಣ ಮೊದಲಾದ ಎಲ್ಲ ಕಾರ್ಯಕ್ರಮಗಳು ಕರ್ನಾಟಕದ ಎಲ್ಲ ಭಾಗದಲ್ಲಿಯೂ ನಡೆದವು. ಧಾರವಾಡದಲ್ಲಿಯ ಸಭೆಯಲ್ಲಿ ಶ್ರೀ. ಆಳ್ವಕರ ನಾರಾಯಣರಾಯರು ಎಸ್. ಎಮ್. ಕುಲಕರ್ಣಿ, ಹಿರೇಮಠ, ರಂಗಾಚಾರ್ಯ, ಕರಮರಕರ ಮೊದಲಾದವರ ಭಾಷಣವಾಯಿತು. ಹಾಗೆ ಬೆ. ಕಿತ್ತೂರ, ನರೇಂದ್ರ, ಸವದತ್ತಿ, ಕರೀಕಟ್ಟಿ, ಮುನವಳ್ಳಿ, ಸಂಕೇಶ್ವರ, ನಿಪ್ಪಾಣಿ, ಗುಳೇದಗುಡ್ಡ, ರಾಣೇಬೆನ್ನೂರ, ಸಂಪಗಾಂವಿ, ಕಲಘಟಗಿ, ಗದಗು, ಬಾಗಲಕೋಟೆ, ವಿಜಾಪುರ, ಬೆಳಗಾಂವಿ, ಬಳ್ಳಾರಿ, ಹೊಸಪೇಟೆ, ಕಾರವಾರ, ಅಂಕೋಲಿ, ಶಿರ್ಸಿ, ಸಿದ್ದಾಪುರ, ಉಡಪಿ, ಮೊದಲಾದ ಜಿಲ್ಲೆಯ ಎಲ್ಲ ದೊಡ್ಡ ದೊಡ್ಡ ಪೇಟೆಗಳಲ್ಲಿಯೂ ನಗರಗಳಲ್ಲಿಯೂ ಈ ದಿನವು ಪಾಲಿಸಲಾಯಿತು.

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ ಕ್ರೆಡಿಟ್ಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಎಂಟು ಲಕ್ಷದ ಮೇಲಿಂಟು ಆಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. [illegible] ಬಡ್ಡಿ ದರದ ಡಿಪಾಜಿಟುಗಳ [illegible] ಮಾಡಿಕೊಳ್ಳುವದು.

ವಿಶೇಷ ಸಂಗತಿಗಳನ್ನು ಆಫೀಸಿನಿಂದ ತಿಳಕೊಳ್ಳ ಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ನಮ್ಮಿಂದ ತಿಳಕೊಳ್ಳ ಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಇಟ್ಟುಕೊಳ್ಳಲು [illegible] ತಿಂಗಳಿಗೆ ಹನ್ನೆರಡು ಆಣೆಯಂತೆ ಇರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಶಿಕ್ಷಣದ ಸವಲತ್ತು

ಮೋಟರ [illegible] ಪ್ರತಿ [illegible] ಬೆಳಗಾಂವಿ [illegible] ರೂಪಾಯಿ [illegible] ಈ ಶಿಕ್ಷಣ [illegible] ಉತ್ತಮ [illegible] ನಾವು [illegible] ಕಲಿಸುವ [illegible] ವಿದ್ಯಾರ್ಥಿಗಳಿಗೆ [illegible] ಆಗಸ್ಟ [illegible] ಬೇಗನೆ [illegible] ಕೃಪೆಯಿಂದ [illegible]

ಪ್ರೊ. ಪ್ರೈ. ಎಸ. ಇಟಗಿ.
ಮುನಸಿಪಾಲಿಟಿಯ ಸಮೀಪ, ಧಾರವಾಡ

ಮೈಸೂರು ಊದುಬತ್ತಿ

ಶ್ರೇಷ್ಠ ಅಂಬರ [illegible] ಯಾವತ್ತೂ [illegible] ಸಮಾರಂಭಗಳಲ್ಲಿ [illegible] ಮತ್ತು ಪ್ರತಿದಿನದ ಪೂಜೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೫ ಕಡ್ಡಿಯ ಸೇರು ೧ಕ್ಕೆ ೨—೦—೦
ಕೃಷ್ಣಪ್ರಸಾದ ಅತ್ತರು ತೊಲೆ ೧ಕ್ಕೆ ೪—೨—೦
೧೫-೧೧-೨೭ ಮೈಸೂರುಸ್ಟೋರ್ಸ,
ಬೆಳಗಾಂವಿಯವರಗಲ್ಲಿ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲಿಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಕೇವಲ ಕಟಿಂಗ ಮೊದಲ ಎರಡು ತಿಂಗಳ ಮತ್ತು ಟೇಲರಿಂಗ ಮೊದಲ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಸಕಲ ಕಟಿಂಗ ಫೀ ೮೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ಪರೀಕ್ಷೆಯ ಪ್ರಕಾರ ತಿಂಗಳಾ ಕನಿಷ್ಠ ಇಪ್ಪತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ನಿಮಗೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ಟಿಕೇಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ನವೀನ ಹಾಗೂ ತೀವ್ರ **ಗುಣಕೊಡುವ ಔಷಧವು** ತಯಾರಿಸಲಾಗಿದೆ. ಇದರ ಉಪಯೋಗದಿಂದ ನಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು [illegible] ಶಕ್ತಿ [illegible] ಸ್ವಭಾವ, ನಿಸ್ತೇಜತನವನ್ನೂ ಹೇಡಿತನವನ್ನೂ ಅಂಜುಬುರುಕತನ, ಅಕಾಲಮುಪ್ಪು, [illegible] ಆಲಸ್ಯ, ಕಣ್ಣು ಕಿವಿಗಳ [illegible] ಉರಿಮೂತ್ರ, ಇಂದ್ರಿಯದ [illegible] ನಿದ್ರಾನಾಶ, ಮಲಾವರೋಧ, ಜಿಸ್ತಿ, ನೋವು ಸೋಣ, ಜಿಗುಪ್ಸೆ [illegible] ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾವೀರ್ಯ ಮೊದಲಾದ ಧಾತುಗಳು ವೃದ್ಧಿಯಾಗಿ ಇಂದ್ರಿಯ [illegible] ನವನವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟಿನ ಶೂಲೆ, ಕೆಂಪು, [illegible] ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧತೊಲೆ ತೆಗೆದುಕೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ತೆಗೆದುಕೊಳ್ಳಬೇಕು. ಹತ್ತುದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಪ್ಯಾಕಿಂಗಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೊ
ನಿಪ್ಪಾಣಿ.

THE ANKLAGI BANK LTD

Head Office
Kunnolatti Dharwar
Branches
Ranebennur & Hubballi
5%
Interest allowed on
ANNA SAVINGS BANK
DEPOSIT.

Dharwar } K. B. ANKALGI
3 1 1927 } Managing Director

---

೧೯೧ ವನ್ನು || ಕಿರಾಣಿ

ಶ್ರೀ ದತ್ತ ಸ್ಪಿನ್ನಿಂಗ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ ಗಿರಣಿ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವರಂಗದಿಂದ ಸೀರೆಗಳು ಹಾಗೂ ವಸ್ತ್ರಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಖರೀದಿ ಮಾಡಿ ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಒಣ್ಣ ಹೋದರೆ ಮಾಲು ತಿರುಗಿ ತಕ್ಕೊಳ್ಳುವೆವು.

ವಿಜಯದ ವರ್ಗಣಿ ದರ

ಸ್ಥಳ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ.

ನಮ್ಮ ಕಟ್ಟಿಗೆ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ದ ಹೊನ್ನಿ ಹೆದ್ದಿ ಶೀಸಂ ನಾಟುಗಳು

ಸಾಗವಾನಿ ಮಳ ವ ಸಾಗವಾನಿ (೬) ಫೂಟಿನ ಜವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಿಗೆಗಳು ವ ಜಾತಿವ ಬೀಪು ವ ತಿಲಿಂಗು ಕೈಯಾರಿ ಸಿಗುತ್ತದೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆದು ಕೊಡುತ್ತೇವೆ

ಮತ್ತು ಚಿಲ್ಲರ ಧರ್ಮಕ ಕೆಲಸ ಮಾಡುವರಿಗೆ ಕಟಿಸಾರಿ ಸಿಗುತ್ತವೆ.

ಮಲ್ಲನಿಪ್ಪಾ ಗುರಪ್ಪಾ ಗೋಡಿರಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಪಕ್ತಿ ಒಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಎರಡಾಣೆ ಇದೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ಲೋಕಲ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗೆಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಇನಾಮುದಾರರಿಗೆ ಮಹತ್ವದ ಸೂಚನೆ.

ಪರಗಣಾ ವತನದಾರ ಘರಾಣೇದಲ್ಲಿ ಪಂಥಾಯಿ ದತ್ತಕವಾಗಬಾರದೆಂಬ ಇಚ್ಛೆಯುಳ್ಳ ಪರಗಣಾ ವತನದಾರ ಬಾಂಧವರಿಗೆ-

ಕೆಳಗೆ ಸಹಿ ಮಾಡಿದವರ ಕಡೆಯಿಂದಾ ಜಾಹೀರ ಮಾಡಿಕೊಳ್ಳುವದೇನೆಂದರೆ:-

ಪರಗಣಾ ವತನಗಳು ಗಾರ್ಡನ ಸೆಟ್ಲಮೆಂಟಿನ ಶರ್ತುಗಳಿಗನುಸರಿಸಿ ನಡಿಯುತ್ತವೆ. ಮತ್ತು ಅದರ ಮೂರನೇ ಶರ್ತಿನಲ್ಲಿ ಹೊರಗಿನ ದತ್ತಕ ಮಾಡಿಕೊಳ್ಳಬೇಕಾದರೆ ದೂವತ್ತು ಹಿಸೇದಾರರ ಸಮ್ಮತಿಯಿಂದಾ ಅರ್ಜಿಮಾಡಿ ಒಂದು ಆಣೆ ನಜರಾಣೆ ಕೊಡಲಿಕ್ಕೆ ಕಬೂಲಮಾಡಿ ಸರಕಾರೀ ಮಂಜೂರಿ ಪಡಕೊಂಡು ಮಾಡಿಕೊಳ್ಳಬೇಕಂತಾ ಇರುತ್ತದಷ್ಟೇ; ಆದರೆ ಇತ್ತೀಚೆಗೆ ಕೆಲವು ಹೊರಗಿನ ದತ್ತಕಗಳು ಮೇಲಿನ ಶರ್ತಿಗೆ ವಿರುದ್ಧವಾಗಿ ಆಗಲಿಕ್ಕೆ ಹತ್ತಿರುತ್ತವೆ. ಇಂಥ ದತ್ತಕಗಳು ವ್ಯಾಲಿಡ್ ಇರುತ್ತವೆಂತಾ ಮುಂಬಯಿ ಹಾಯಕೋರ್ಟಿನಲ್ಲಿ L. R. 27 B. P. 75 (ದತ್ತೂ ವಿ. ಬಾಳಾಜಿ) ಇದರಲ್ಲಿ ಠರಾವು ಸುದ್ಧಾ ಆಗಿರುತ್ತದೆ. ಇದರ ಮೇಲೆ ಪ್ರೀವ್ಹಿ ಕೌನ್ಸಿಲಕ್ಕೆ ಅಪೀಲ ಆಗದೆ ಹಾಗೆ ಉಳಿದಿರುತ್ತದೆ. ಹೀಗಿದ್ದರೂ ಈ ನಿರ್ಣಯವು ಯೋಗ್ಯವಲ್ಲ. ಇದನ್ನು ಚ್ಯಾಲೇಂಜ ಮಾಡಿ ರದ್ದು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂತಾ ಬಾಂಬೆ ಗವ್ಹರ್ನಮೆಂಟಿನವರು ತಮ್ಮ GR-R-D-9234/1928 ಇದರಲ್ಲಿ ಠರಾವು ಮಾಡಿರುತ್ತಾರೆ. ಮತ್ತು ಅದರಂತೆ ಹಾಯಕೋರ್ಟಿನ ಅಪೀಲ ನಂಬರ 508/1927 ಇದರಲ್ಲಿ ಪಕ್ಷಕಾರರಾಗಲಿಕ್ಕೆ ಅರ್ಜಿ ಸಹ ಕೊಟ್ಟರು ಆದರೆ ಹಾಯಕೋರ್ಟಿನವರು ಸರಕಾರದವರನ್ನು ಪಕ್ಷಕಾರ ಮಾಡಿಕೊಳ್ಳದೆ ಕೇವಲ ೧೩ನೇ ಬಾಂಬೇ ನಿಕಾಲೆಯಾಗಿ ಬಹಳ ದಿವಸವಾದ್ದರಿಂದಲೂ ಮತ್ತು ಮುಂದೆ ಇವತ್ತಿನವರೆಗೆ ಪ್ರೀವ್ಹಿ ಕೌನ್ಸಿಲಕ್ಕೆ ಒಂದಾದರೂ ಅಪೀಲು ಹೋಗದ್ದರಿಂದಲೂ ಅದರ ಯೋಗ್ಯಾಯೋಗ್ಯತೆಯ ಬಗ್ಗೆ ವಿಚಾರ ಮಾಡುವದಿಲ್ಲವೆಂತಾ ನಿರ್ಣಯ ಮಾಡಿ ಅಪೀಲು ಕಿತ್ತು ಹಾಕಿದರು. ಕಾರಣ ಈ ಪ್ರಶ್ನವನ್ನು ನಮ್ಮ ಪ್ರೀವ್ಹಿ ಕೌನ್ಸಿಲವರಿಗೆ ಒಯ್ದು ನಿಕಾಲೆ ಮಾಡಿಕೊಳ್ಳುವದು ಎಲ್ಲ ಪರಗಣಾ ವತನದಾರ ಜನರಿಗೆ ಹಿತಕರವಿರುತ್ತದೆ. ಇಲ್ಲದಿದ್ದರೆ ವಿನಾಕಾರಣ ತಂಟೆ ಬೆಳೆದು ಮನೆತನಗಳು ಹಾಳಾಗಲಿಕ್ಕೆ ಕಾರಣವಾಗುತ್ತವೆ. ಕಾರಣಾ ಮೇಲಿನ ಅಪೀಲನ್ನು ಪ್ರಿವ್ಹಿ ಕೌನ್ಸಿಲಕ್ಕೆ ಒಯ್ಯಬೇಕೆಂತಾ ನಮ್ಮ ಅಪೇಕ್ಷೆ ಇರುತ್ತದೆ. ಆದರೆ ಅದಕ್ಕೆ ಖರ್ಚ ೧೦-೧೨ ಸಾವಿರದವರೆಗೆ ಬೇಕಾಗುತ್ತದೆ. ಕಾರಣ ಒಬ್ಬರ ಯೋಗ್ಯತೆಯ ಹೊರಗಿನದಿರುತ್ತದೆ. ಕಾರಣ ಪರಗಣಾ ವತನದಲ್ಲಿ ಪಂಥಾಯಿ ದತ್ತಕವಾಗಬಾರದೆಂದು ಇಚ್ಛೆಯುಳ್ಳ ಯಾವತ್ತು ಪರಗಣಾ ವತನದಾರ ಜನರು ಮುದ್ದತ ಮಾಡಿ ಕೆಲವು ರಕಮು ಕೂಡಿಸಿಕೊಟ್ಟರೆ ನಾವೂ ಕೆಲವು ಹಾಕಿ ಈ ಪ್ರಶ್ನವನ್ನು ಒಮ್ಮೆ ಪ್ರೀವ್ಹಿ ಕೌನ್ಸಿಲವರಿಗೆ ಒಯ್ದು ನಿಕಾಲೆ ಮಾಡಿಕೊಳ್ಳಬೇಕಂತಾ ನಮ್ಮ ಅಪೇಕ್ಷೆ ಇದೆ. ಕಾರಣ ತಮ್ಮೆಲ್ಲರಿಗೆ ವಿನಂತಿ ಮಾಡಿಕೊಳ್ಳುತ್ತೇನೆ ಹಿಂದೆ ೧೩ನೇ ಬಾಂಬೇ ನಿಕಾಲೆ ಆದ ಕಾಲಕ್ಕೆ ಎಲ್ಲ ವತನದಾರ ಜನರು ಕೂಡಿ ಅದನ್ನು ಪ್ರೀವ್ಹಿ ಕೌನ್ಸಿಲವರಿಗೆ ಒಯ್ಯುವ ಶ್ರಮ ವಹಿಸಿದ್ದರೆ, ಈಗ ಬಹಳ ದಿವಸಗಳವರೆಗೆ ಸುಮ್ಮನೆ ಕೂತಿರುತ್ತೀರಿ ಈಗ ನಾವು ವಿಚಾರ ಮಾಡಲಾರೆವೆಂದು ಹಾಯಕೋರ್ಟಿನವರಿಂದ ಅನಿಸಿಕೊಳ್ಳುವ ಪ್ರಸಂಗವು ಬರುತ್ತಿದ್ದಿಲ್ಲ. ಈಗಾದರೂ ಪ್ರಯತ್ನ ಮಾಡಿದರೆ ಮುಂದಿನವರ ಕಡೆಯಿಂದಾದರೂ ನಾವು ಅನಿಸಿಕೊಳ್ಳಲಿಕ್ಕಿಲ್ಲ. ಕಾರಣಾ ಯಾವತ್ತು ಪರಗಣಾ ವತನದಾರರು ಕೂಡಿ ಈ ಅಪೀಲನ್ನು ಪ್ರೀವ್ಹಿ ಕೌನ್ಸಿಲವರಿಗೆ ಒಯ್ಯುವದಕ್ಕೆ ಸಹಾಯ ಮಾಡುವಿರೆಂದು ಪೂರ್ಣ ನಂಬಿ ವಿನಂತಿ ಮಾಡಿಕೊಳ್ಳುತ್ತೇನೆ ಸಹಾಯಮಾಡಬಿಚ್ಛಿಸುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬೇಕು.

ಒಬ್ಬ ಪರಗಣೆ ವತನದಾರ
C/o G. G. Guttal, pleader
Dharwar

ವಿವಿಧ ವಿಷಯಗಳು

ಗೋಧ್ರಾದಿಂದ ಅಹಮದಾಬಾದಿಗೆ ಬರುವ ಲೋಕಲ ಬಂಡಿಯು ಉಮರೇಠ ಸ್ಟೇಶನಕ್ಕೆ ಬಂತು. ಆಗ ಇನ್ನೂ ರಾತ್ರಿಯಿತ್ತು. ಬಂಡಿಯೊಳಗಿನ ಎಲ್ಲ ದೀಪಗಳು ಆರಿಹೋದವು. ಪ್ರಯಾಣಿಕರು ಎಷ್ಟು ಹೇಳಿದರೂ ದೀಪ ಹಚ್ಚಲಿಲ್ಲ. ಆಗ ಇನ್ನೂರು ಜನರು ಬಂಡಿಯಿಂದಿಳಿದು, ಇಂಜಿನದ ಮುಂದೆ ಸತ್ಯಾಗ್ರಹ ಮಾಡಿ ನಿಂತರು. ಕಡೆಗೆ ಸ್ಟೇಶನದ ಅಧಿಕಾರಿಗಳು ದೀಪ ಹಚ್ಚಿದರು. ಪ್ರಯಾಣಿಕರು ಬಂಡಿಯಲ್ಲಿ ಕೂತರು. ಮುಂದೆ ಬಂಡಿ ಸಾಗಿತು

ಕಲಕತ್ತೆಯಲ್ಲಿರುವ ಪೇಶಾವರದ ಮುಸಲಮಾನರು ಕಾಂಗ್ರೆಸ ಪಕ್ಷದವರು; ಬಂಗಾಲಿ ಮುಸಲಮಾನರು ಮೌ. ಶೌಕತಲ್ಲಿಯವರ ಪಕ್ಷದವರು ಅಲ್ಲಿ ಕೂಡಿದ ಒಂದು ಸಭೆಯಲ್ಲಿ ಉಭಯ ಪಕ್ಷಗಳಿಗೂ ಹೊಡದಾಟವಾಗಿ, ಅನೇಕರು ಘಾಯ ಹೊಂದಿದರು. ಪೇಶಾವರದವರು ಅನುಭವಿಸುತ್ತಿರುವ ದುಃಖತಾಪಗಳು ಬಂಗಾಲಿಗಳಿಗೇನು ಗೊತ್ತು?

ತುರ್ಕಸ್ಥಾನ ಮತ್ತು ಇರಾಣದ ಗಡಿಯಲ್ಲಿ ಖುರ್ದ ಕುಲದವರು ಇರಾಣಕ್ಕೆ ಅನುಕೂಲವಾಗಿ ದೊಂಬಿ ಹಾಕುತ್ತಿದ್ದು, ಅವರ ಬಂದೋಬಸ್ತು ಮಾಡಲು ತುರುಕ ಸರಕಾರದವರು ಇರಾಣಕ್ಕೆ ಬರೆದ ಪತ್ರದ ಉತ್ತರವು ತೀರ ಅಸ್ಪಷ್ಟವಾಗಿರುವದರಿಂದ, ಇವೆರಡೂ ದೇಶಗಳ ನಡುವೆ ಯುದ್ಧವಾಗುವ ಅವಲಕ್ಷಣಗಳಾಗಿರುತ್ತವೆ.

ಮಂಗಳೂರ ಜಿಲ್ಹೆಗೆ ಸೇರಿದ ಕುಂದಾಪೂರದಲ್ಲಿ ಶೇಂದಿಯ ಸವಾಲಾಯಿತು. ಮಾಲಕಿ ಗಿಡದವರು ಗಿಡ ಕೊಡುವದಿಲ್ಲೆಂದರು. ಊರವರು ಹರತಾಳ ಮಾಡಿ, ಕುಡಿಯಲಿಕ್ಕೆ ನೀರು ಸಿಗದಂತೆ ಮಾಡಿದರು. ತಮ್ಮ ಮೇಲೆ ಗುಡ್ಡ ಕಡಕೊಂಡು ಬಿದ್ದದ್ದನ್ನು ಕಂಡು, ಕಲಾಲರು ಸವಾಲು ಮಾಡದೆ ಮನೇ ದಾರಿ ಹಿಡಿದರು.

ಮುಂಬಯಿಯಲ್ಲಿ ಶ್ರೀಮಂತ ಜನರು ವಾಸವಾಗಿರುವ ಗಿರಗಾಂವದಲ್ಲಿ ಒಬ್ಬ ವೃದ್ಧ ಮುಸಲಮಾನ ಗೃಹಸ್ಥನ ಮನೆಯಲ್ಲಿ ಆರು ಜನ ದರೋಡೆಗಾರರು ಗೃಹಸ್ಥನ ಮತ್ತು ಆತನ ಹೆಂಡತಿಯ ಬಾಯಿಗೆ ಅರಿವೆ ತುರುಕಿ ಅತಿಸಾಹಸದಿಂದ ನಗದು ಮತ್ತು ನೋಟುಗಳನ್ನು ತಕ್ಕೊಂಡು ಪಲಾಯನ ಹೇಳಿದರು ಹೆಂಡತಿಯು ಉಸುರುಗಟ್ಟಿ ಸತ್ತಳು ಗಂಡನು ಬಹುಕಷ್ಟದಿಂದ ಬದುಕಿಕೊಂಡ. ಚೋರರು ಜನರೂ ಪೋಲೀಸರೂ ಒಂದು ನಡೆಸಿ ಪ್ರಕರಣವನ್ನು ನೋಡಿದರು.

ಕಳೆದೆರಡು ದಿವಸಗಳಿಂದ ಯರವಡೆಯಲ್ಲಿ ರಾಜೀ ಸಂಧಾನ ನಡೆದಿರುತ್ತದಷ್ಟೇ? ತುರುಂಗದಿಂದ ಹೊರಗೆ ಬಂದಾಗ ಇವರ ಮೋರೆಯ ಸಂತೋಷದಿಂದ ಉಕ್ಕುತ್ತಿತ್ತೆಂದೂ [illegible] ಜನರು ತರ್ಕಮಾಡುತ್ತಲಿದ್ದಾರೆ.

ಪಂಡಿತ ಮಾಲವೀಯಯವರ ಕಾಶಿಯ ವಿದ್ಯಾಪೀಠದ ನೂರು ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡಿ, ಮುಂಬಯಿಗೆ ಬಂದಿದ್ದು, ಅವರು ಮುಂಬಯಿಯ ಕಾಲೇಜುಗಳ ಮುಂದೆ ಪಿಕೆಟಿಂಗ ಮಾಡತಕ್ಕವರಿದ್ದಾರೆ.

ಅಫಗಾಣದೇಶದ ಹದ್ದಿನಲ್ಲಿರುವ ಖುರ್ದರನ್ನು ಶಿಕ್ಷಿಸಲು ಅಂಗ್ರೇಜಿ ಸರಕಾರದ ಸೈನ್ಯವು ಬಂದಿದೆ ಇದು ಉಭಯ ದೇಶಗಳಿಗೆ ಯುದ್ಧ ಹತ್ತುವ ಪೂರ್ವ ಚಿನ್ಹವೇ ಸರಿ.

ಮುಂಬಯಿ ಇಲಾಖೆ ದಕ್ಷಿಣ ಭಾಗದಿಂದ ಮುಸಲಮಾನರಿಗಾಗಿ ಕಾದಿಟ್ಟ ಒಂದು ಸ್ಥಳಕ್ಕಾಗಿ ಐವರು ಉಮೇದವಾರರಿದ್ದರು. ಇವರಲ್ಲಿ ನಾಲ್ವರು ರಾಜಿನಾಮೆ ಕೊಟ್ಟದ್ದರಿಂದ ಮುಂಬಯಿಯ ಸರ ರಹಿಮತುಲ್ಲಾ ಸಾಹೇಬರು ಅವಿರೋಧವಾಗಿ ಮೆಂಬರರಾದರು.

ದಕ್ಷಿಣದಲ್ಲಿ [illegible] ಒಬ್ಬ ಕುಂಬಾರ ಮತ್ತು ಒಬ್ಬ [illegible] ಅರ್ಜಿ ಮಾಡಿದ್ದಾರೆ.

ಬರುವ ವರ್ಷ ಆಗುವ ಮನುಷ್ಯಗಣತಿಯಲ್ಲಿ ಸರಕಾರದವರು ಇಂಗ್ಲಿಷ ಕಲಿತು ಕೆಲಸವಿಲ್ಲದೆ ಕೂತಂಥವರೆಷ್ಟು ಜನರೆಂಬದನ್ನು ಕಂಡುಹಿಡಿಯಲು- ಒಂದು ಸ್ವತಂತ್ರ ಕೋಷ್ಟಕ ಹಾಕುವರು. ೩೦ ರಿಂದ ೪೦ ವರ್ಷಗಳಾದವರಲ್ಲೆಷ್ಟು ಜನರು ಸುಶಿಕ್ಷಿತರೆಂದೆನಿಸಿಕೊಂಡು ಹೊಟ್ಟೆಯ ಚಿಂತೆಯಿಂದ ಬಳಲುತ್ತಾರೆಂಬದನ್ನು ಈ ಕೋಷ್ಟಕದಲ್ಲಿ ಬರೆಯುವರು. ಮುಖ್ಯವಾಗಿ ಬ್ರಾಹ್ಮಣರು, ಅಸ್ಪೃಶ್ಯರು, ಉಳಿದ ಜನಾಂಗದವರ ಬಗ್ಗೆ ಬರೆದುಕೊಳ್ಳುವರು. ಇದರಿಂದ ಎಷ್ಟು ಜನರಿಗೆ ಅಶನವಸನಗಳ ಚಿಂತೆಯಾಗಿರುತ್ತದೆಂದು ಕಂಡು ಬರುವದು ನಿಜ. ಹೀಗೆ ಬರಕೊಳ್ಳುವದರಿಂದ ಜೀವನಕ್ಕೆ ಸಹಾಯ ಮಾಡಿದಂತಾಗುವದಿಲ್ಲವಲ್ಲ !!

ಶಾವಪೂರ ಜಿಲ್ಹೆಯಲ್ಲಿ ರೈತರು ಹಪ್ತೆ ಕೊಡಬಾರದೆಂಬ ದೊಡ್ಡ ಚಳವಳಿ ನಡೆದಿದೆ. ನಾಸಿಕ ಜಿಲ್ಹೆಗೆ ಸೇರಿದ ಬಾಗಲಾಣ ತಾಲೂಕಿನಲ್ಲಿ ವನಗಾಂವಲದ ಕಾಯದೇಭಂಗದ ದೆಸೆಯಿಂದ ಗೌತಕುಲಕರ್ಣಿಯರು ರಾಜೀನಾಮೆ ಕೊಡುತ್ತಿದ್ದಾರೆ ಇವರ ಸಂಖ್ಯೆಯು ನೂರಕ್ಕೆ ಬಂದಿದೆ. ಆದ್ದರಿಂದ ಸರಕಾರದವರು ಇವೆರಡೂ ಸ್ಥಳಗಳಲ್ಲಿ ದಬ್ಬಾಳಿಕೆಯ ಜಾಲ ಬೆಳೆಸಿದ್ದಾರೆ. ಹಪ್ತೆ ಕೊಡಬಾರದೆಂದು ಸಾರುವವರಿಗೆ ಶಿಕ್ಷೆ, ರಾಜೀನಾಮೆ ಕೊಡಬೇಕೆನ್ನುವಂಥವರಿಗೆ ಶಿಕ್ಷೆ ಎಂದು ಜಾಹೀರನಾಮೆ ಹಚ್ಚಿದ್ದಾರೆ. ಹೊಳೇ ಮುಣುಗಿದವರಿಗೆ ಚಳಿಯ ಅಂಜಿಕೆಯೇ?

ಪುಣೆಯ ದೇಡಿನ ಪೇಟೆಯಲ್ಲಿ ಬಹುತೇಕವಾಗಿ ಬಟ್ಟೆಗಳನ್ನು ಕೊಳ್ಳುವವರು ಯುರೋಪಿಯನ್ನರೂ, ಅವರ ಸೇವಕರಾಗಿರುವಂಥವರೂ ಇರುತ್ತಾರೆ. ಇವರಿಗೆ ಪರದೇಶದ ಅರಿವೆ ದೊರೆಯದಂತೆ ಮಾಡಬೇಕೆಂದು ಅಲ್ಲಿಯ ಹಿಂದೂ ಮುಸಲಮಾನ ಅಂಗಡಿಕಾರರು ಒಂದು ತಿಂಗಳತನಕ ವಿಲಾಯತಿಯ ಬಟ್ಟೆ ಮಾರುವ ಎಲ್ಲ ಅಂಗಡಿಗಳಿಗೆ ಬೀಗ ಹಾಕಬೇಕೆಂದು ಗೊತ್ತುಮಾಡಿ, ಆ ಪ್ರಕಾರ ಅಮಲಿನಲ್ಲಿ ತಂದಿದ್ದಾರೆ.

ಕಲಕತ್ತೆಯಲ್ಲಿ ಟರ್ಫಕ್ಲಬ್ಬಿನ ಕುದುರೆಯ ಸಂಸ್ಥೆಯಲ್ಲಿ ಮಾರಿದ ಟಿಕೀಟುಗಳಿಂದ ಬಂದ ಹಣವನ್ನು ಒಂದು ಟ್ರಂಕಿನಲ್ಲಿ ಹಾಕಿ, ಟ್ರಂಕನ್ನು ಬ್ಯಾಂಕಿಗೆ ತಕ್ಕೊಂಡು ಬಂದರು. ದಾರಿಯಲ್ಲಿಯೋ ಮುಂದೆ [illegible] ಬೇರೊಂದು ಟ್ರಂಕನ್ನು ಇಟ್ಟು ಮೋಟಾರಿನಲ್ಲಿ ಹಾಕಿ ಕಳಿಸಿದರು. ನೂರುಸಿನ ರಕಮನ್ನು ಬ್ಯಾಂಕಿಗೆ ಒಯ್ಯಬೇಕೆನ್ನುವಾಗ ಟ್ರಂಕಿನಲ್ಲಿ ರೂಪಾಯಿ ನೋಟುಗಳ ಬದಲು ಸೀಸಿನ ತುಂಡುಗಳಿದ್ದವು. ಹಸ್ತಚಾಪಲ್ಯದಿಂದ ಟ್ರಂಕು ಬದಲು ಹಾಕಿದವರ ಶೋಧ ನಡೆದಿದ್ದು, ಸಂಶಯದಿಂದ ಒಬ್ಬ ಸಾಹೇಬನನ್ನೇ ಹಿಡಿದಿದ್ದಾರೆ.

ಈ ವರ್ಷ ಅವಂಧ ಮ್ಯಾಟ್ರಿಕ್ಯುಲೇಶನ ಪರೀಕ್ಷೆಗೆ ೧೩೦೧೧ ಜನ ವಿದ್ಯಾರ್ಥಿಗಳು ಕೂತಿದ್ದರು. ಇವರಲ್ಲಿ ೪೫೫೧ ಜನರು ಪಾಸಾದರು ಜಾತಿಯ ಪ್ರಕಾರ ಪಾಸಾದವರು-

ಹಿಂದೂ ೩೬೮ , ಪಾರ್ಸಿ ೭೪೫, ಕ್ರಿಶ್ಚನ್ನರು ೩೦೨, ಮುಸಲಮಾನರು ೨೩೩, ಯಹುದಿ ೨೩.

ಸ್ತ್ರೀಯರಲ್ಲಿ ೧೮೩ ಜನರು ಪಾಸಾಗಿದ್ದಾರೆ ಇವರಲ್ಲಿ ಹಿಂದೂ ೬೯, ಕ್ರಿಶ್ಚನ್ನರು ೫೧ ಪಾರ್ಸಿ ೪೪, ಮುಸಲಮಾನರು ೫, ಯಹುದಿ ೮

ಅಹಮದಾಬಾದಿನಲ್ಲಿ ಕತ್ತೆಗಳ ಮೆರವಣಿಗೆ ತೆಗೆದರು ಮುಂದೆ ಬ್ಯಾಂಡ ಹಚ್ಚಿದ್ದರು. ತಮ್ಮ ಅಪ್ಪಣೆ ಇಲ್ಲದೆ ಮೆರವಣಿಗೆ ತೆಗೆದರೆಂದು ಇವರ ಮೇಲೆ ಖಟ್ಲೆ ಹೂಡಿದರು ಮ್ಯಾಜಿಸ್ಟ್ರೇಟರು ಹತ್ತತ್ತು ರೂಪಾಯಿ ದಂಡ ಮಾಡಿದರು.

ಶಿರ್ಸಿ ತಾಲೂಕಿನಲ್ಲಿ ವನಗಾಂವಲ ಮತ್ತು ಸರಕಾರದ ಆಜ್ಞೆಗಳನ್ನು ನಿಷೇಧಿಸಿದ್ದರಿಂದ ಈ ಪರ್ಯಂತರ ೪೨ ಜನ ಗೌಡರು ರಾಜೀನಾಮೆ ಕೊಟ್ಟಿದ್ದಾರೆ

[illegible] ವ್ಯಾಸಂಗ [illegible] ಇಂಗ್ಲೀಷ [illegible] ಹೇಳಿದ್ದಾರೆ

ಡಾಕ್ಟರ ಅನಸಾರಿಯವರ ನಿಜವಾದ ದೇಶಾಭಿಮಾನ.

ಡಾಕ್ಟರ ಅನಸಾರಿಯವರು ಕಾಯದೆಭಂಗದಲ್ಲಿ ಮನಸ್ಸು ಹಾಕಿಲ್ಲ. ಆದರೆ ಅವರು ಕಾಂಗ್ರೆಸದ ಭಕ್ತರಾಗಿದ್ದಾರೆ. ಮೌಲಾನಾ ಅಬ್ದುಲಕಲಮ ಆಜದರು ಕಾಂಗ್ರೆಸದ ಅಧ್ಯಕ್ಷರಾದ ಕೂಡಲೆ- ಇವರನ್ನು ವರ್ಕಿಂಗ ಕಮೀಟಿಯ ಮೆಂಬರ ಮಾಡಿಕೊಂಡರು. ಇವರು ಮೆಂಬರರಾಗುವಾಗ ಒಂದು ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಸರಕಾರದ ದಬ್ಬಾಳಿಕೆಯನ್ನು ನಿವೇದಿಸಿದ್ದಾರೆ. ಇವರನ್ನುವದೇನಂದರೆ-

ಸರಕಾರವು ಕಾಂಗ್ರೆಸದ ವರ್ಕಿಂಗ ಕಮೀಟಿಯನ್ನು ಬೇಕಾಯದೆಶೀರ ಮಾಡಿ, ಆಕ್ಟಿಂಗ ಪ್ರೆಸಿಡೆಂಟ ಮತ್ತು ಸೇಕ್ರೆಟರಿಯನ್ನು ದಸ್ತಗಿರ ಮಾಡಿತು. ಇದಕ್ಕೂ ಹೆಚ್ಚಿನ ಸಂಗತಿಯೇನೆಂದರೆ- ಮುಂಬಯಿಯಲ್ಲಿ ಅತಿಶಯ ಕ್ಷುದ್ರ ಕಾರಣದಿಂದ ವರ್ಕಿಂಗ ಕಮೀಟಿಯ ಮೆಂಬರರನ್ನು ಹಿಡಿದು ಹಾಕಿತು. ಇವೆಲ್ಲ ಕೃತಿಗಳಿಂದ ಸರಕಾರದ ಮನಸ್ಸಿನಲ್ಲೇನಿರುತ್ತದೆಂಬದು ಸ್ಪಷ್ಟವಾಗುತ್ತದೆ. ನಾನು ರಾಷ್ಟ್ರೀಯ ಸಭೆಯ ಏಕನಿಷ್ಠ ಭಕ್ತನಾಗಿದ್ದೇನೆ. ಹಿಂದುಸ್ಥಾನದಲ್ಲಿ ಪರಮ ಶ್ರೇಷ್ಠವಾದ ಕಾಂಗ್ರೆಸವನ್ನು ಕಷ್ಟಕಾಲ ಪ್ರಾಪ್ತವಾಗ ನಾನು ಸಿಡಿದು, ದೂರ ನಿಂತು ನೋಡಲಾರೆನು. ಕಾಂಗ್ರೆಸದ ಅಭಿಮಾನಿಗಳೆಲ್ಲರು ತಂತಮ್ಮೊಳಗಿನ ಮತಭೇದಗಳನ್ನು ಒದಗಿಟ್ಟು, ಅಳಿಯಬೇಕೋ ಉಳಿಯಬೇಕೋ ? ಎಂಬ ಅವಸ್ಥೆಯುಂಟಾಗಿರುವ ಕಾಂಗ್ರೆಸವನ್ನು ಉಳಿಸಿಕೊಳ್ಳಲಿಕ್ಕೆ ಪ್ರಯತ್ನಿಸಬೇಕು.

ಡಾಕ್ಟರ ಅನಸಾರಿಯವರು ಹೇಳುವಂತೆ ಹಿಂದೂ ಮುಸಲಮಾನರೆಲ್ಲರೂ ಕಾಂಗ್ರೆಸವನ್ನು ಬದುಕಿಸಿಕೊಳ್ಳುವದು ಅತ್ಯಂತ ಶ್ರೇಷ್ಠವಾದ ಕರ್ತವ್ಯವಾಗಿರುತ್ತದೆ

ವರ್ತಮಾನಸಾರ

ಪಂಡಿತ ನೆಹರುರನ್ನು ಸ್ಪೇಶಲ ಟ್ರೇನಿನಿಂದ ಪುಣೆಗೆ ತರುವ ವೆಚ್ಚವು ೫ ಸಾವಿರ ರೂಪಾಯಿ ಆಯಿತು. ಹೋಗುವಾಗಲೂ ಇಷ್ಟೇ ವೆಚ್ಚ ಬರುವದು

ಶೋಲಾಪೂರದಲ್ಲಿ ಗಲ್ಲಿನ ಶಿಕ್ಷೆಯಾದ ನಾಲ್ವರೂ ಆರೋಪಿಗಳನ್ನು ಯರವಡೆಗೆ ತಂದಿದ್ದಾರೆ. ಇವರು ಪ್ರೀವ್ಹೀ ಕೌನ್ಸಿಲಕ್ಕೆ ಅಪೀಲು ಮಾಡಿದ್ದಾರೆ.

ಶಿರ್ಸಿ, ಸಿದ್ದಾಪೂರ ಮತ್ತು ಯಲ್ಲಾಪೂರ ತಾಲೂಕುಗಳಲ್ಲಿ ವನಗಾಂವಲದ ಸತ್ಯಾಗ್ರಹ ಮತ್ತು ಕಾಯದೆಭಂಗ ನಡೆದಿದೆ.

ಪುಣೆಯಲ್ಲಿ ಫರ್ಗ್ಯುಸನ್ನ ಕಾಲೇಜದ ಮುಂದೆ ಪಿಕೆಟಿಂಗ ಮಾಡಿದ್ದರಿಂದ, ಕಾಲೇಜು ಹಾಳುಬಿತ್ತು.

ಧಾರವಾಡ-

ಸೇಂದೀ ಗಿಡ ಕಡಿದ ಆರೋಪದಿಂದ ಶ್ರೀ ರಡ್ಡೂರವರ ಮೇಲೆ ಹಾಕಿದ ಖಟ್ಲೆಯು ಯೋಗ್ಯ ಪುರಾವೆ ಸಿಗದ್ದರಿಂದ ತೆಗೆದು ಹಾಕಲಾಯಿತು.

ಪ್ರತಿ ವರುಷದಂತೆ ಇಲ್ಲಿಯ ವಿದ್ಯಾರ್ಥಿನೀಯರಲ್ಲಿ ಕೃಷ್ಣಜನ್ಮೋತ್ಸವವು ಜರುಗಿತು ಪ್ರತಿಯೆ ಗೋವರ್ಧನರಾಯರ, ಬೇಗ ಪಿ ರಾಮರಾಯರ ವ್ಯಾಖ್ಯಾನಗಳು "ಶ್ರೀಕೃಷ್ಣ ಮತ್ತು ಗೀತೆ" ಈ ವಿಷಯದ ಮೇಲಾದವು.

ಶ್ರೀ. ದೇವಡೆ ಬಾಬು ಮುತಾಲಿಕ ದೇಸಾಯಿಯವರು ಇಲ್ಲಿಯ ಡಿಸ್ಟ್ರಿಕ್ಟ ಕೋರ್ಟಿಗೆ ಅಪೀಲ ಮಾಡಿದ್ದರು; ಅಪೀಲಿನಲ್ಲಿ ಬಿಡುಗಡೆ ಹೊಂದಿದರು.

ಶ್ರೀ [illegible] ಕುಲಕರ್ಣಿಯವರಿಗೆ ಮೂರು ತಿಂಗಳು [illegible]

ಈ ಪತ್ರವನ್ನು [illegible] ಧಾರವಾಡದಲ್ಲಿ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಉಂಟಾಗಲಾರದೆ ? ಕರ್ನಾಟಕದ ಬಗ್ಗೆ ಪ್ರೀತಿಯು ಬೆಳೆಯಬೇಕಾದರೆ ಸಾಮಾಜಿಕ ಪ್ರಸಂಗಗಳಾಗಲಿ ಐತಿಹಾಸಿಕ ಪ್ರಸಂಗಗಳಾಗಲಿ ಕಾರ್ಯಕಾರಿಯಾಗುವವು. ಪೌರಾಣಿಕ ಕಥಾವಸ್ತುಗಳಿಂದ ಇದೆಲ್ಲ ಸಾಧ್ಯವಾಗಲಾರದು. ಚೀನದ ಹುಎನ್‌ತ್ಸಾಂಗನು ಕೂಡ ಬೀಳು ಕಜ್ಜಿ, ,, ಜನರು ನಿಷ್ಕಪಟಿಗಳೂ ಸಜ್ಜನರೂ ಸತ್ಯವಂತರೂ ವಿದ್ಯಾವಂತರೂ ಆಗಿರುತ್ತಾರೆ. ನಡತೆಯಲ್ಲಿ ಛಲವೂ ಅಭಿಮಾನವೂ ಹೆಚ್ಚು ; ಮಾಡಿದ ಉಪಕಾರವನ್ನೆಂದಿಗೂ ಮರೆಯರು, ಅಪಕಾರ ಮಾಡಿದವರನ್ನು ಮಾತ್ರ ಮುಟ್ಟದೆ ಬಿಡರು ; ಅಪಮಾನವನ್ನು ಪರಿಹರಿಸುವದಕ್ಕಾಗಿ ತಮ್ಮ ಜೀವವನ್ನು ಲೆಕ್ಕಿಸರು. ಸಂಕಟಕಾಲದಲ್ಲಿ ಮರೆಹೊಕ್ಕವರನ್ನು ರಕ್ಷಿಸುವದಕ್ಕಾಗಿ ಧಾವಿಸುವಾಗ ಇವರು ತಮ್ಮನ್ನೂ ಕೂಡ ಮರೆತುಬಿಡುವರು. ಹಗೆಯ ಮೇಲೆ ದಾವು ತೀರಿಸುವದಿದ್ದಾಗ ಇವರು ಮೊದಲು ಆ ಹಗೆಗೆ ಸೂಚನೆಯನ್ನು ಕೊಡಲಿಕ್ಕೆ ಎಂದೂ ಮರೆಯುವದಿಲ್ಲ. ರಣಭೂಮಿಯಿಂದ ಓಡಿಹೋಗುವವರನ್ನು ಇವರು ಬೆನ್ನಟ್ಟುತ್ತಾರೆ. ಆದರೆ ಮರೆಹೊಕ್ಕರೆ ಅವರನ್ನು ಕಡಿಯುವದಿಲ್ಲ. ದಳವಾಯಿಯು ಯುದ್ಧದಲ್ಲಿ ಸೋತು ಬಂದರೆ, ಅರಸರು ಅವನಿಗೆ ದೇಹದಂಡನೆಯನ್ನು ಮಾಡುವದಿಲ್ಲ, ಸೀರೆಯನ್ನು ಉಡಿಸಿ ಮೆರೆಸುತ್ತಾನೆ ; ಅದರಿಂದ ಆ ಸೋತ ದಳವಾಯಿಯು ತಾನಾಗಿಯೇ ಪ್ರಾಣಕೊಡುತ್ತಾನೆ. ಈ ಸಂಸ್ಥಾನದಲ್ಲಿ ಎದೆಗುಂದದ ವೀರಾಳುಗಳು ಸಾವಿರಾರು ಮಂದಿ ಇದ್ದಾರೆ. ,, ಇತ್ಯಾದಿಯಾಗಿ ಉದ್ಗಾರ ತೆಗೆದಿದ್ದಾನೆ. ಕನ್ನಡಿಗರ ಇಂತಹ ಗುಣಗಳನ್ನು ಪ್ರಚುರಪಡಿಸುವದೇ ಐತಿಹಾಸಿಕ ನಾಟಕಗಳ ಗುಟ್ಟಾಗಿದೆ. ಈ ನಾಟಕಗಳು ಕನ್ನಡಿಗರಿಂಥವರೆಂಬ ಅಚ್ಚನ್ನು ಪ್ರೇಕ್ಷಕರ ಎದೆಯಲ್ಲಿ ಒತ್ತುತ್ತವೆ. "ಪ್ರಲ್ಹಾದನ ಸತ್ಯಾಗ್ರಹದ ಪರಿಣಾಮಕ್ಕಿಂತಲೂ ಈ ಕರ್ನಾಟಕ ಐತಿಹಾಸಿಕ ಚಿತ್ರದ ಅಚ್ಚು ಈಗಿನ ಸ್ವಾತಂತ್ರ್ಯ ಯುದ್ಧಕ್ಕೆ ಹೆಚ್ಚು ಉತ್ತೇಜಕವಾಗಿದೆ.' ಜನರ ಬಲವನ್ನು ಬೇಕಾದರೆ ನೋಡಲಿ ; ಭಾಷೆ ಹೇಗೆಯೇ ಇರಲಿ, ವಸ್ತು ಹೇಗೇ ಇರಲಿ, ಕಿತ್ತೂರ ಚನ್ನಮ್ಮನ ನಾಟಕದಿಂದ 'ಭೀಂಗೇರಿ ನಾಟಕ ಸಂಘಕ್ಕೆ' ಈ ಧಾರವಾಡದಲ್ಲಿ ಎಷ್ಟು ದುಡ್ಡು ಸುರಿದು ಅದು ವೈಭವವನ್ನು ಹೊಂದಿತು. ಶ್ರೀ ಗರುಡರ ಅಜ್ಞಾತವಾಸಕ್ಕೆ ಎಷ್ಟು ರೊಕ್ಕ ಆಯಿತು.? ಇದೇ ಧಾರವಾಡದಲ್ಲಿ

ಒಟ್ಟಿನಲ್ಲಿ ಹೇಳುವದೆಂದರೆ ,, ಶ್ರೀ. ಗರುಡರಿಗೆ ಪುರಾಣವೇ ಸರ್ವಶ್ರೇಷ್ಠ ,, ವಾಗಿ ಕಂಡರೂ ಪೌರಾಣಿಕ ನಾಟಕಗಳಂತೆ ಅದಕ್ಕೂ ಹೆಚ್ಚಾಗಿ ಐತಿಹಾಸಿಕ ಸಾಮಾಜಿಕ ನಾಟಕಗಳು ರಂಗಭೂಮಿಯ ಮೇಲೆ ತರಲಿಕ್ಕೆ ಯೋಗ್ಯವಾಗಿರುವವೆಂದು ಘಂಟಾಘೋಷವಾಗಿ ಹೇಳಬಹುದು.

ದೇವರು ವರವು ಕೊಟ್ಟರೂ ಪೂಜಾರಿ ಕೊಡಲಾರನು.

—(೦)—

ಪೇಶಾವರದ ಲಷ್ಕರೀ ಕಾಯದೆ ಮತ್ತು ಜುಲುಮದ ಬಗ್ಗೆ ಶ್ರೀ. ಪಟೇಲರ ಅಧ್ಯಕ್ಷತೆಯಲ್ಲಿ ಕೂಡಿದ ಕಮೀಟಿಯ ರಿಪೋರ್ಟ ಅಲ್ಹಾಬಾದಿನಲ್ಲಿ ಮುದ್ರಣ ಹೊಂದಿ ಅವುಗಳನ್ನು ತುಂಬಿದ ಮೂರು ಪೆಟ್ಟಿಗೆಗಳು ಮುಂಬಯಿಗೆ ಬಂದವು. ಇವನ್ನು ಒಬ್ಬ ಗೃಹಸ್ಥನು ಲಗೇಜ ಮಾಡಿಕೊಂಡು ಸಂಗಡ ತಂದನು. ಪದ್ಧತಿ ಪ್ರಕಾರ ಈತನು ಲಗೇಜ ಆಫೀಸಿಗೆ ಹೋಗಿ, ಪೆಟ್ಟಿಗೆಗಳನ್ನು ಬೇಡಲು ಆತನು ಕೊಡಲೇ ಇಲ್ಲ. ಈ ಬಗ್ಗೆ ಪರಿಷ್ಕಾರ ವಿಚಾರವನ್ನು ಕೇಳಿಕೊಂಡು, ರೇಲ್ವೆಯು ಆಕ್ಟನ್ನು ತೋರಿಸಿದ್ದಾನೆ. ಪೋಲೀಸರ ಸೂಚನೆಯ ಮೇರೆಗೆ ಈ ಕೃಷ್ಣ ಕಾರಸ್ಥಾನವಾಯಿತೆಂದೂ ವರ್ತಮಾನವುಂಟು. ಸರಕಾರದವರು ಆಕ್ಷೇಪಾರ್ಹವೆನ್ನುವ ಮುಂಚಿತವಾಗಿ ಇವನ್ನು ಅರಾಜಕವೆನಿಸುವ ಬಗೆಯಿಂದ ಹಿಡಿದಿಡುವದು ಹೇಗೆ ?

ರೇಲ್ವೆ ಪ್ರವಾಸದಲ್ಲಿ ಹಿಂದೀ ಮತ್ತು ಯುರೋಪಿಯನ್ನವೆಂಬ ಭೇದ ಹೋಯಿತು.

——(೦)——

ರೇಲ್ವೆಯಲ್ಲಿ ಪ್ರವಾಸ ಮಾಡುವಾಗ ಯುರೋಪಿಯನ್ನ ಮತ್ತು ಆಂಗ್ಲೋ ಇಂಡಿಯನ್ನ ಪ್ರಯಾಣಿಕರ ದೆಸೆಯಿಂದ ಮೂರನೆಯ ವರ್ಗದ ಡಬ್ಬಿಗಳನ್ನು ಸ್ವತಂತ್ರವಾಗಿ ಕಾದಿಡುತ್ತಿದ್ದರು. ಈ ಬಗ್ಗೆ ಮದ್ರಾಸ ರೇಲ್ವೆಯಲ್ಲಿ ಸತ್ಯಾಗ್ರಹವಾಗಿ ಅನೇಕರು ದಂಡ ಶಿಕ್ಷೆ ಭೋಗಿಸಿದ್ದಾರೆ. ವಿದೇಶೀ ಮತ್ತು ಪರದೇಶಿ ಎಂಬ ಭೇದ ತಪ್ಪಿಸಬೇಕೆಂದು ಸರಕಾರದವರು ಈಗೀಗ ವ್ಯವಸ್ಥೆ ಮಾಡಿದ್ದಾರೆ. ೧ನೆಯ ಸಪ್ಟಂಬರದಿಂದ ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆಯಲ್ಲಿ ಈ ತಾರತಮ್ಯ ನಿಲ್ಲಿಸಿ, ಥರ್ಡ ಕ್ಲಾಸ ಸಾಹೇಬರು ಏತದ್ದೇಶಿಯರ ಕೂಡ ಪ್ರಯಾಣ ಬೆಳೆಯಿಸಬೇಕೆಂದು ಪ್ರಸಿದ್ಧ ಮಾಡಿದ್ದಾರೆ

ಯುರೋಪಿಯನ್ನ ಗಿರಣಿಗಳ ದುರ್ವ್ಯವಸ್ಥೆ.

——(೦)——

ಮುಂಬಯಿಯಲ್ಲಿ ಯುರೋಪಿಯನ್ನ ಮ್ಯಾನೇಜರರಿದ್ದ ಗಿರಣಿಗಳಿಗೆ ಬಹಿಷ್ಕಾರ ಹಾಕಿದ್ದಷ್ಟೇ; ಈ ಬಹಿಷ್ಕಾರದಿಂದ ೨೧ ಸಾವಿರ ಕೂಲಿಕಾರರಿಗೆ ಕೆಲಸವಿಲ್ಲದಾಗುವದು. ಮ್ಯಾನೇಜರರಾದಂಥ ೨೩ ಜನರ ಸಲುವಾಗಿ ೨೧೦೦೦ ಜನರು ನಿರುದ್ಯೋಗಿಯಾಗುವದೆಂತು ? ಸರಕಾರದವರು ತಾವಾಗಲಿ, ಬೇರೆ ಯುರೋಪಿಯನ್ನ ಫರ್ಮುಗಳಲ್ಲಾಗಲಿ ಇವರ ವ್ಯವಸ್ಥೆ ಮಾಡಿ, ೨೧ ಸಾವಿರ ಜನರ ಹೊಟ್ಟೆಯ ವ್ಯವಸ್ಥೆಯನ್ನೇಕೆ ಮಾಡಬಾರದು? ಕಾಂಗ್ರೆಸದವರ ಹೆಸರಿನಿಂದ ಕಲ್ಲೊಡೆಯುವದಕ್ಕಿಂತ ಈ ವ್ಯವಸ್ಥೆಯು ಉತ್ತಮೋತ್ತಮವಾಗುವದಿಲ್ಲವೇ ?

ಕಸ ತುಂಬಿದ ರೊಟ್ಟಿ.

—(೦)—

ತುರಂಗದ ಅನ್ನದಲ್ಲಿ ಉಸುಕು ಮತ್ತು ಕಾಯಿಪಲ್ಯದಲ್ಲಿ ಹುಳಹುಪ್ಪಡಿ ಇರುತ್ತದೆಂಬ ಕೂಗು ಸಾರ್ವತ್ರಿಕವಾಗಿದೆ. ಇದನ್ನು ಮ್ಯಾಜಿಸ್ಟ್ರೇಟರಿಗೆ ತೋರಿಸಲು ಲಿಯಾಲಪೂರದ ತರುಣ ಸಂಘದ ಅಧ್ಯಕ್ಷರಾದ ಶ್ರೀ. ರಜಪಾಲಶಿಂಗರು ಕೋರ್ಟಿಗೆ ತಂದು ಮ್ಯಾಜಿಸ್ಟ್ರೇಟರ ಮುಂದಿಟ್ಟರು. ಮತ್ತು ಆಗ ಅಲ್ಲಿಗೆ ಬಂದಿದ್ದ ಡಾಕ್ಟರ ರಾಮಚಂದರಿಗೆ ತಿಂದು ನೋಡಿರೆಂದು ಹೇಳಿದರು. ಮ್ಯಾಜಿಸ್ಟ್ರೇಟರು ಒಂದು ಚೂರು ತಿಂದು, ರುಚಿ ನೋಡಿ ಸ್ವತಃ ಜೆಲಿಗೆ ಬಂದು ವಿಚಾರ ಮಾಡುವೆವೆಂದು ನಂಬಿಗೆಯಿತ್ತರು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹರ ವಿದ್ಯ ಕಲಿಯಲು ಜನರಿದುವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಆಗಸ್ಟ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವವು. ಆದ್ದರಿಂದ ಕೂಡಲೆ ಅರ್ಜೀಮಾಡಿ, ಸ್ಥಳ ಕಾಯು ಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಬುಧವಾರ ತಾರೀಖು ೨೭ ನೇ ಅಗಸ್ಟ ೧೯೩೦ (ಸಂಚಿಕೆ ೧೮೪

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾವಧೂತರ ಅರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ [illegible] ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫ ಭಾವಚಿತ್ರಗಳನ್ನು ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದನ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಿಗಳಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಕಾದವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಕಾದವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ಈಗ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲ್ಪಡುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ, ಇನ್ನೂ ಬೇರೆ ಮುಖ್ಯದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ. ಠೋಕ ತಕ್ಕೊಳ್ಳುವವರಿಗೆ ಭರ್ಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ
ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ್ಟ ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ, ಧಾರವಾಡ

ವಿಜಯ.

ಶಾಲಿಶಕ್ಕ ವಿಕ್ರಮ ವರ್ಷ ಆಷಾಢ ಶ್ರಾವಣ ವದ್ಯ ೧೧

ದೊಡ್ಡ ರಾವುಂಡ ಟೇಬಲಿನ ಬದಲು ಸಣ್ಣ ರಾವುಂಡ ಟೇಬಲ.

ಒಡಂಬಡಿಕೆಯು ಉಳಿದ ಮಹತ್ವದ ಸಂಗತಿಗಳು.

—(೦)—

ಮಿ. ಸ್ನೋಕೊಂಬಿಸಾಹೇಬರು ಯರವಡೆಯು ಮಹಾತ್ಮರ ಕೂಡ ಸಂಧಿಯು ಪ್ರಸ್ತಾಪ ಮಾಡಿ ಬಗ್ಗೆ ಇಂಗ್ಲಂಡದಲ್ಲಿ ಚರ್ಚೆಯಾಗಿ, ಶುರಂಗದಲ್ಲಿ ದಿಯು ಕೂಡ ರಾಜಿಯ ಮಾತೇ ಎಂದು ಮಂತ್ರಿ ಳ ಮೇಲೆ ಕಟುತರವಾದ ಟೀಕೆಯಾಯಿತು. ಈ ದದಲ್ಲಾಯಿತು. ಈ ನಂತರ ಇಂಥ ಅಕ್ರಮಗಳಿ ಅನುವು ಕೊಡುವದಿಲ್ಲೆಂದು ಹೇಳಿ ಭಾರತ ಮಂತ್ರಿಗಳು ಪಾರಾದರು. ಮುಂದೆ ಚಮತ್ಕಾರ ನೋಡಿರಿ; ಇದೇ ಶುರಂಗದಲ್ಲಿ ಅವರ ಅನುಮತಿಯಿಂದಲೇ ರಾಜಿಯ ಪೂರ್ವಪೀಠಿಕೆಯು ನಡೆಯಿತು. ಆದರೆ ಈಗ ಅದಕ್ಕೆ ಯಾರೂ ವಿರೋಧ ಬೆಳೆಸಲಿಲ್ಲ. ಹೇಗಾದರೂ ಮಾಡಿ, ರಾಜಿಯಾಗಲೆಂದೇ ಅವರ ಮತ. ಅವರ ವಿಚಾರದಲ್ಲಿ ಈ ಮೇರೆಗೆ ಬದಲಾಗಲಿಕ್ಕೆ, ಕಾಯದೆಭಂಗ ಮತ್ತು ಬಹಿಷ್ಕಾರವು ಭರತಖಂಡದ ತುಂಬ ಧಾರಣ ಮಾಡಿದ ವಿರಾಟಸ್ವರೂಪವೇ ಕಾರಣ!

ಎಂಟು ವರ್ಷಗಳ ಹಿಂದೆ ಮಹಾತ್ಮರು ಇದೇ ಯರವಡೆಯು ಶುರಂಗದಲ್ಲಿದ್ದರು. ಅವರ ಪತ್ನಿ ಮತ್ತು ಪುತ್ರರು ಇವರನ್ನು ಕಾಣಲಿಕ್ಕೆ ಹೋದಾಗ, ಜೇಲಿನ ಅಧಿಕಾರಿಗಳು ಇವರಿಗೆ ಕೂಡ್ರಗೊಡಲಿಲ್ಲ. ಒಂದು ಸ್ಟೂಲು ಕೊಡುವದು ತಮ್ಮ ಅಪಮಾನವೆಂದು ತಿಳಕೊಂಡಿದ್ದರು. ಅದೇ ಅಧಿಕಾರಿಗಳು ಈಗ ಮಾಡಿದ ವ್ಯವಸ್ಥೆ ನೋಡಿರಿ ರಾವುಂಡ ಟೇಬಲ್ಲವೆಂಬದು ಹೇಗಿರುತ್ತದೆಂಬದು ಬಹುವಾಗಿ ಇಲ್ಲಿ ವ್ಯಕ್ತವಾಯಿತು. ಶುರಂಗದ ಉಪ್ಪರಿಗೆಯು ಒಂದು ವಿಶಾಲವಾದ ಕೋಣೆಯಲ್ಲಿ ಆರಾಮದ ಕುರ್ಚಿಗಾದಿಯು ಸೋಫಾಗಳನ್ನು ಹಾಕಿದರು. ನಡುವೆ ದುಂಡಗಿನ ಮೇಜಿಟ್ಟಿದ್ದರು. ಮಧ್ಯದಲ್ಲಿ ಯಾರು ಕೂತರೆಂಬದು ತೋರುವಂತಿರಲೇ ಇಲ್ಲ. ಮಹಾತ್ಮರ ಎಡಬಲದಲ್ಲಿ ನೆಹರು ಪಿತಾಪುತ್ರರು ಕೂತಿದ್ದರು. ಇವರ ಎಡಬಲದಲ್ಲಿ ಸರದಾರ ಪಟೇಲ, ಶ್ರೀ. ಜಯರಾಮ ದೌಲತರಾಮು, ಮಿ. ಸಯ್ಯದ ಮಹಮೂದರು ಕೂತಿದ್ದರು. ಮಹಾತ್ಮರ ಎದುರಿಗೆ ಸರ ಸಪ್ರು ಮತ್ತು ಜಯಕರರು ಕೂತಿದ್ದರು. ಮಹತ್ವದ ವಾದ ನಡೆದಾಗ, ಮವಾಳರು ಕಾಂಗ್ರೆಸದವರಿಂದ ಆಗಾಗ್ಗೆ ಬಿರುನುಡಿಗಳನ್ನಾಡಿಸಿಕೊಳ್ಳುತ್ತಿದ್ದರು. ಮಧ್ಯಸ್ಥಗಾರರು ವಾಗ್ಬಾಣಗಳನ್ನು ಸಹನ ಮಾಡುತ್ತಿದ್ದರು.

ವಾದವಿವಾದದ ಎಲ್ಲ ಸಂಗತಿಗಳನ್ನು ಬರೆದಿಟ್ಟಿರುತ್ತಾರೆ. ಇವನ್ನು ಕೆಲಕಾಲದ ನಂತರ ಪ್ರಸಿದ್ಧ ಮಾಡಲು ಮಹಾತ್ಮರು ಒಪ್ಪಿಗೆ ಕೊಟ್ಟಿರುತ್ತಾರೆ. ಇವುಗಳಿಂದ ಮೂರು ದಿವಸಗಳವರೆಗೇನು ನಡೆಯಿತೆಂದು ತಿಳಕೊಳ್ಳುವದಕ್ಕೆ ಕುತೂಹಲರಾದವರಿಗೆ ಸಮಾಧಾನವಾಗುವದುಂಟು. ಈ ಸಮ್ಮತಿಯ ಕೂಡ ಮಹಾತ್ಮರೂ ಬೇರೆಯವರೂ ರುಜು ಹಾಕಿ ಬರಕೊಟ್ಟ ಪತ್ರವನ್ನು ಲಾರ್ಡ ಆಯರ್ವಿನ ಸಾಹೇಬರಿಗಾಗಿದ್ದರೂ, ಅದನ್ನು ತಿಪ್ರಾಯಿಯವರ ಹೆಸರಿನಿಂದ ಬರೆದು ಕೊಟ್ಟದ್ದಿರುತ್ತದೆ. ಇವರು ಬಹುಶಃ ಟಪಾಲಿನಿಂದ ಈ ಪತ್ರವನ್ನು ಕಳಿಸಿದ್ದು, ಈ ಬಗ್ಗೆ ತಮ್ಮ ಕೂಡ ಮಾತಾಡಿದ ಹೊರತು ತಮ್ಮ ವಿಚಾರ ನಿಶ್ಚಯ ಮಾಡಿಕೊಳ್ಳಬಾರದೆಂದು ಲಾರ್ಡಸಾಹೇಬರಿಗೆ ಅರಿಕೆ ಮಾಡಿಕೊಂಡಿದ್ದಾರೆ. ಈ ಪತ್ರದ ಪ್ರಕಾರ ಲಾರ್ಡಸಾಹೇಬರಿಂದ ಬರೆದು ಬರುವತನಕ ಸರ ಸಪ್ರುಸಾಹೇಬರು ವಕೀಲಿಯ ಕೆಲಸಕ್ಕೆ ನಿಜಾಮ ಹೈದರಾಬಾದಿಗೆ ಹೋಗಿದ್ದಾರೆ. ಇವರು ಸಿಮಲಾಕ್ಕೆ ಹೋಗಲು ಇನ್ನೊಂದು ವಾರವಾದರೂ ಬೇಕು!

ಹಿಂದೀ ಜನರ ಸ್ವಾರ್ಥತ್ಯಾಗ.

ಸ್ವರಾಜ್ಯಕ್ಕಾಗಿ ಸತ್ತು ಪುನರ್ಜನ್ಮ ಹೊಂದುವರು

—೦:೦—

ಹಿಂದುಸ್ಥಾನದಲ್ಲಿರುವ ಒಂದು ಪ್ರಖ್ಯಾತ ಬ್ಯಾಂಕಿನ ಮ್ಯಾನೇಜರನು ಹಿಂದುಸ್ಥಾನದ ನಿಜಸ್ಥಿತಿಯು ವಿಲಾಯತಿಯವರಿಗೆ ತಿಳಿಯಬೇಕೆನ್ನುವಂಥ ಪತ್ರ ಬರೆದು ಕಳಿಸಿದ್ದು, ಅದು ಸ್ಪೆಕ್ಟೇಟರದಲ್ಲಿ ಮುದ್ರಣ ಹೊಂದಿದೆ.

"ಹಿಂದೂ ಜನರು ಸ್ವರಾಜ್ಯಕ್ಕಾಗಿ ಅರ್ಥಹಾನಿ ಪ್ರಾಣಹಾನಿ ಮಾಡಿಕೊಳ್ಳಲು ಸಿದ್ಧರಾಗಿದ್ದಾರೆ. ಪರಕೀಯರ ಪೀಡೆ ತಪ್ಪಿಸಿಕೊಳ್ಳಲು, ಡಚ್ಚ ಜನರು ತಮ್ಮ ದೇಶದ ಕೆರೆ ಮತ್ತು ನದಿಗಳ ಒಡ್ಡು ಒಡೆದು, ದೇಶದ ತುಂಬ ನೀರೇ ನೀರು ಮಾಡಿ, ವೈರಿಗಳು ತಮ್ಮ ದೇಶದಲ್ಲಿ ಬರದಂತೆ ಮಾಡಿದ ಹಾಗೆ, ಹಿಂದೂ ಜನರು ದೇಶವನ್ನು ಹಾನಿಯಾದರೂ ಸ್ವಾರ್ಥತ್ಯಾಗ ಮಾಡಲು ಸಿದ್ಧರಾಗಿದ್ದಾರೆ. ಹಳ್ಳಿಗಳಲ್ಲಿ ಈ ಚಳವಳಿಯಿಲ್ಲೆಂದು ವಿಲಾಯತಿಯವರಿಗೆ ಹೇಳುವರು. ನಾಲ್ಕು ದಿವಸ ಗುಜರಾಥದ ಒಂದು ಹಳ್ಳಿಯಲ್ಲಿ ಇದ್ದು ನೋಡಿರಿ ಅದರ ಪ್ರಚಂಡ ಸ್ವರೂಪ ಕಂಡು ಬರುವದು. ಹಿಂದುಸ್ಥಾನದಲ್ಲಿ ನಿಮ್ಮ ವ್ಯಾಪಾರ-ಉದ್ದಿಮೆ ನಡೆಯಬೇಕಾದರೆ- ಮೊದಲು ಸ್ವರಾಜ್ಯ ಕೊಡಿರಿ. ಪಾರ್ಲಮೆಂಟದಲ್ಲಿ ಕಾಯದೆ ಮಾಡುವದರಿಂದ ವ್ಯಾಪಾರ ನಡೆಯದು. ಇಂಥವರ ಕೂಡ ವ್ಯಾಪಾರ ಮಾಡಬೇಕೆಂದು ಒತ್ತಾಯ ಪಡಿಸಲಾರಿರಿ. ಈ ೨೦ನೆಯ ಶತಮಾನದಲ್ಲಿ ಸ್ವಯಂನಿರ್ಣಯದ ಅಧಿಕಾರ ಕೊಡುವದಿಲ್ಲೆಂದು ನಾವು ಕೇಳಲಾರೆವು."

ಎಂಬದಾಗಿ ಈ ಸಾಹೇಬನು ಅಂದಿದ್ದಾನೆ.

ಬ್ರಾಹ್ಮಣರು ರಾವುಂಡ ಟೇಬಲಕ್ಕೆ ಬರಲಾರರೆಂಬ ಹೆದರಿಕೆ.

—(೦)—

ಹಿಂದುಸ್ಥಾನದಲ್ಲಿ ಬ್ರಾಹ್ಮಣರನ್ನು ಹಿಂದೆ ಹಾಕಬೇಕೆಂದು ಎಷ್ಟು ಪ್ರಯತ್ನ ನಡೆಸಿದ್ದರೂ, ಇಂಗ್ರಜರು ಬ್ರಾಹ್ಮಣ, ಬ್ರಾಹ್ಮಣೇತರವೆಂಬ ಭೇದ ಮಾಡಿದ್ದರೂ ಬ್ರಾಹ್ಮಣರ ಹೆದರಿಕೆಯು ಮುಖ್ಯ ಮಂತ್ರಿಯಾದ ಮ್ಯಾಕಡೋನಾಲ್ಡಸಾಹೇಬರಿಗೇ ಉಂಟಾಗಿರುತ್ತದೆ. ಸಾಯಮನ್ನಸಾಹೇಬರ ರಿಪೋರ್ಟನ್ನು [illegible] ಮುಸ್ಕುಡಿಯಾಗಿಟ್ಟುಕೊಂಡು, ರಾವುಂಡ ಟೇಬಲದಲ್ಲಿ ವಾದವಿವಾದ ಮಾಡುವದಾದರೆ- ಬ್ರಾಹ್ಮಣರು ಪ್ರತಿನಿಧಿಗಳಾಗಿ ಬರಲಾರರೆಂದು ಮಂತ್ರಿಶ್ರೀ ಸ್ಪಷ್ಟವಾಗಿ ಹೇಳಿದ್ದೊಂದು ಭಾಷಣವನ್ನು ಪಾರ್ಲಮೆಂಟ ಸಭೆಯಲ್ಲಿ ಮಾಡಿದ್ದಾರೆ. ಸಾಯಮನ್ನ ರಿಪೋರ್ಟ ಒಂದು ಉದ್ಗ್ರಂಥ ಮಾತ್ರವಾಗುವದಲ್ಲ ರಾಜಕಾರಣದಲ್ಲಿ ಅದು ಮೃತ್ಯು ಹೊಂದಿದ್ದೇ ಆಗಿದೆಯೆಂದು ವಿಲಾಯತಿಯವರ ಮತವಾಗಿರುತ್ತದೆ.

ಸ್ತ್ರೀಯರ ಸಶ್ರಮ ಶಿಕ್ಷೆ.

—(೦)—

ಕಲಕತ್ತೆಯ ಸ್ತ್ರೀ ಸ್ವಯಂಸೇವಿಕೆಯ ಅಧ್ಯಕ್ಷರಾದ ದೇವಿ ಉಮತಿಯವರಿಗೆ ಮ್ಯಾಜಿಸ್ಟ್ರೇಟರು ನಾಲ್ಕು ತಿಂಗಳ ಸಶ್ರಮ ಶಿಕ್ಷೆ ವಿಧಿಸಿದರು. ಕಾಯದೆಭಂಗದ ಸ್ತ್ರೀಯರಿಗೆ ಸಶ್ರಮ ಶಿಕ್ಷೆ ಕೊಟ್ಟದ್ದು ಇದೇ ಮೊದಲು. ಶಿಕ್ಷೆಯು ಕನಿಷ್ಠದಾಗುತ್ತದೆಂದು ಯಾವಾದರೂ ಹೇಳಬಹುದು.

ಗರುಡ ಗರ್ವಭಂಗ.

(೨)

(ಲೇಖಕ- ಕರ್ನಾಟಕಾಭಿಮಾನಿ)

ಶ್ರೀಮಾನ್ ಗರುಡ ಸದಾಶಿವರಾಯರು, ಡುತ್ತಿರುವ ನಾಟ್ಯಸೇವೆಯಿಂದ ಅಭಿನಂದನೀ ರೆಂಬುದು ಅಭಿಮಾನದ ಮಾತೇ ಸರಿ. ಅವರು ನ್ನೊಂದು ರೀತಿಯಿಂದ ಪುರಾಣವನ್ನು ದೇಶಕಾ ಪರಿಸ್ಥಿತಿಗನುಸರಿಸಿ ತಮ್ಮ ಧ್ಯೇಯಕ್ಕೆ ತಕ್ಕಂತೆ ರ್ಪಡಿಸಿಕೊಂಡು ಅಭಿನಂದಿಸುತ್ತಿರುವುದು ಸಾಮಾನ್ಯ ಕೆಲಸವೆ ದೇನೂ ನಮ್ಮ ಅಭಿಪ್ರಾಯವಲ್ಲ. ದರೆ ಪುರಾಣವನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲ ದು ಅದಕ್ಕೆಯೇ ಸರ್ವೋತ್ಕೃಷ್ಟವಾದ ಪದವಿ ಯನ್ನು ಕೊಟ್ಟುಕೊಳ್ಳುವದು ಮಾತ್ರ ಸಮಾಜದ ಶೀಲಪ್ರವೃತ್ತಿಗೆ ತೀರ ವಿರುದ್ಧವಾದುದೆಂದು ಒ ಮು ಕಾಣುತ್ತದೆ. ಶ್ರೀ ಗರುಡರು ಧಾರವಾಡ ದಲ್ಲಾದ ನಾಟ್ಯಸಮ್ಮೇಳನದಲ್ಲಿಯೂ ನಾಟಕಸಾ ನೆಯಲ್ಲಿಯೂ ಸಾಮಾಜಿಕ ನಾಟಕಗಳನ್ನು ಕುರಿತು ತುಚ್ಛಭಾವನೆಯಿಂದ ಮಾತಾಡಿದ್ದರಾದರೂ ಈ ಸಾರಿ ಬಂದಾಗ ಮತ್ತೂ ಮತ್ತೂ ಅದನ್ನೇ ೨-೩ ಸಾರಿ ಹೇಳಿದುದಲ್ಲದೆ ಅದರ ಜೊತೆಗೆ ಐತಿಹಾಸಿಕ ನಾಟಕವನ್ನೂ ಸೇರಿಸುತ್ತಿರುವ ಅತಿಶಯೋಕ್ತಿಯಿಂದ ಧಾರವಾಡದವರಿಗಂತೂ ಬೇಸರ ಬಂದಿರಲಿಕ್ಕೆ ಸಾಕು. ಆದುದರಿಂದಲೇ ಈಗ ನಾನು ಐತಿಹಾಸಿಕ, ಸಾಮಾಜಿಕ, ಪೌರಾಣಿಕ ನಾಟಕಗಳ ಕುರಿತು ನನ್ನ ಜೊತ್ತಿಗೆಯನ್ನು ತುಸು ಬಿಚ್ಚುತ್ತಿದ್ದೇನೆ.

ಸಾಮಾಜಿಕ ನಾಟಕ:- ಈ ವಿಷಯವಾಗಿ ಶ್ರೀ ಗರುಡರು ಪುರಾಣವೊಂದು ಆಗಿನ ಸಮಾಜ ಚಿತ್ರವಲ್ಲದೆ! ಇಂದಿನ ಸಮಾಜಕ್ಕೆ ಯಾವದೊಂದು ತತ್ವವನ್ನು ಬೋಧಿಸುವದಾದರೆ ಪೌರಾಣಿಕ ಮಹಾಪುರುಷರಿಂದ ಬೋಧಿಸುವದು ಯೋಗ್ಯವಲ್ಲವೆ ? ಉದಾ, ಸತ್ಯಾಗ್ರಹ ವನ್ನು ಪ್ರಹ್ಲಾದ ಮಹಾನುಭಾವನಿಂದ ಪ್ರತಿಪಾದಿಸುವದು ಹೇಗೆ? ಈಗಿನ ಸಮಾಜದ ಸುಂಬುಳಬುರುಕ ಮಲ್ಲ, ಜೊಲ್ಲುಬುರಕ ಸೀನ ಮೊದಲಾದ ಸುಳ್ಳು ಪಾತ್ರಗಳನ್ನು ಕಲ್ಪಿಸಿಕೊಂಡು ಕುಶಪಡಿಸುವದು ಹೇಗೆ? ಇಂತಹ ಪುರಾಣಸಂಪತ್ತಿಯಿರಲು ಈ ಹೊಸ ಸುಳ್ಳು ಜೊಳ್ಳು ಕಥಾನಕಕ್ಕೆ ನಾವೇಕೆ ಕಯ್ಯಿಕ್ಕಬೇಕು? ಎಂದು ಪ್ರಶ್ನಾರ್ಥಕ ಉದಾಹರಣೆಗಳಿಂದಲೇ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವರು. ಆದರೆ ಈಗಿನ ಸಮಾಜವು ಪುರಾಣಕಾಲದಿಂದ ಎಷ್ಟೋ ಸಾವಿರ ವರುಷಗಳ ಹಾದಿಯನ್ನು ನಡೆದು ಬಂದಿದೆ. ಆ ಹಳೆಯ ಪುರಾಣವನ್ನೇ ಇನ್ನೂ ಕೇಳುವ ಗರುಡವೃತ್ತಿಯು ಸಮಾಜದಿಂದ ಬಹಳ ಹಿಂದೆಯೇ ಉಳಿದಿದೆ. ಈಗಿನ ಸಮಾಜದಲ್ಲುದ್ಭವಿಸಿದ ಹೊಸಜೀವಿಯು ಪುರಾಣವನ್ನು ಅದೊಂದು ಕಥೆ ತನಗೆ ಗೊತ್ತಿರಲೆಂದೂ ಅದರೊಳಗಿನ ಕಾವ್ಯರಸದನುಭವವನ್ನು ಪಡೆಯಬೇಕೆಂದೂ ತಮ್ಮ ಪೂರ್ವಜರ ಚರಿತ್ರೆಯೆಂದೂ ಓದುವ ಪ್ರವೃತ್ತಿಯುಳ್ಳದ್ದಾಗಿದೆಯೇ ಹೊರತು ಈಗಿನ ಪರಿಸ್ಥಿತಿಗೆ ತಕ್ಕ ಸುಧಾರಣೆಯನ್ನು ಅದು ಹೇಗೆ ಕೊಡುವದೋ ನಾನು ಕಾಣೆ! ಆಗಿನ ಕಾಲದಲ್ಲಿಲ್ಲದ ಭಾವನೆಗಳನ್ನಾಗಲಿ ನಡೆನುಡಿಗಳನ್ನಾಗಲಿ ಅದರಲ್ಲಿ ಸೇರಿಸಿ ಪುರಾಣವನ್ನು ಚಿತ್ರವಿಚಿತ್ರವನ್ನಾಗಿ ಮಾಡುವುದರಲ್ಲಿ ಅರ್ಥವೇನು? ವ್ಯಾಸವಾಲ್ಮೀಕಿಗಳು ಬರೆದ ಪುರಾಣವೇ ನಿಜವಾದ ಸಮಾಜ ಚಿತ್ರವಾದೀತಲ್ಲದೆ ನಾವು ಸುಮ್ಮಸುಮ್ಮನೆ ಅವುಗಳಲ್ಲಿ ಕೆಲವು ಕಾಲ್ಪನಿಕ ವ್ಯಕ್ತಿಗಳನ್ನು ಸೇರಿಸಿ, ಪುರಾಣಪುರುಷರಲ್ಲಿ ಇಲ್ಲದ ಗುಣಗಳನ್ನೂ ಅವಗುಣಗಳನ್ನೂ ಆರೋಪಿಸಿ ನಾಟಕವನ್ನು ಬರೆದರೆ ಅದು ಆಗಿನ ಕಾಲದ ಸಮಾಜಚಿತ್ರವಾಗಲಾರದು. ಮಲ್ಲಶೀನರಿಂದ ಜನತೆಯ ಮೇಲೆ ಪರಿಣಾಮವಾಗಲಾರದೆಂಬುದಂತೂ ತೀರ ಅಪ್ರಮಾಣ್ಯವೇ ಸರಿ. ಏಕೆಂದರೆ ನಮ್ಮ ನೆರೆಹೊರೆಯ ಕೆಲವು ವ್ಯಕ್ತಿಗಳನ್ನು ಕಂಡು ವರ್ತನವನ್ನು ಕಂಡು ನಾವು ಎಷ್ಟೋ ಬೋಧಗಳನ್ನು ನಿಜವಾಗಿ ಕಲಿದುಕೊಳ್ಳುತ್ತಿದ್ದೇವೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಮೂಲೆಯಲ್ಲಿಯೂ ಈ ಕಾಲದಲ್ಲಿ ಸ್ಥಾಪಿತವಾಗಿರುವ ಸಭ್ಯರನ್ನು ರಕ್ಷಿಸುವದಕ್ಕಾಗಲಿ, ಜನರನ್ನು ಸುಧಾರಿಸುವದಕ್ಕಾಗಲಿ ಪುರಾಣಪುರುಷರೇ ಕಾರಣರಾಗಿಲ್ಲ. ಜನರು ಒಬ್ಬರಿಂದೊಬ್ಬರು ನೀತಿಪಾಠವನ್ನು ಕಲಿಯುತ್ತಾರೆ. ಹೀಗಿರಲು ಈ ನಮ್ಮ ನೆರೆಹೊರೆಯನ್ನೂ ಹಳ್ಳಿಯನ್ನೂ ರಂಗಭೂಮಿ ಗಳಿಸಿದರೆ ಏಕೆ ಪರಿಣಾಮವಾಗಲಾರದೋ ನನಗೆ ತಿಳಿಯದು. ಭಗಜಟ್ಟಿ ಗಾಮಾನ ಕುಸ್ತಿಯನ್ನು ರಂಗಭೂಮಿಯಲ್ಲಿ ಅಭಿನಯಿಸುವದರಿಂದಾಗುವ ಅಭಿಮಾನವೂ ಆನಂದವೂ ಉತ್ಸಾಹವೂ ಪುರಾಣಭೀಮನ ಮಲ್ಲಯುದ್ಧದ ದೃಶ್ಯದಿಂದಾಗುವ ಪರಿಣಾಮಕ್ಕಿಂತ ಶತಾಧಿಕವಾಗಿರುವದು. ಅಲ್ಲದೆ ಭಂಗೀ ಸೇದಬಾರದೆಂದು ಬೋಧಿಸುವದಕ್ಕೆ ಶ್ರೀ ಗರುಡರು ಪಾದುಕಾಪಟ್ಟಾಭಿಷೇಕದಲ್ಲಿ ಕಾರಾಗೃಹದ ಕಾವಲುಗಾರನಿಗೆ ಚಿಲಿಮಿಯನ್ನು ಕೊಟ್ಟಂತೆ ಈಗಿನ ಸುಶಿಕ್ಷಿತರೂ ರಾಜಕಾರಣಪಟುಗಳೂ ಸೇದುತ್ತಿರುವ ಸಿಗರೇಟನ್ನು ಸುಮಂತ ಮೊದಲಾದವರ ಬಾಯಲ್ಲಿ ಸಿಕ್ಕಿಸಬಂದೀತೆ? ಹೊಸಕಾಲದ ಪರಿಸ್ಥಿತಿಯಂತೆ ಹೊಸ ಪಾತ್ರಗಳ ರಚನೆಯಾಗಲೇಬೇಕು. ಆ ಪಾತ್ರಗಳನ್ನು ಪೌರಾಣಿಕ ನಾಟಕದಲ್ಲಿ ಸೇರಿಸಿ ಹಂಡಾಬಂಡಾ ಪುರಾಣವನ್ನುಂಟುಮಾಡುವದಕ್ಕಿಂತ ಈಗಿನ ಜನಜೀವನಕ್ಕೆ ತಕ್ಕಂತೆ ರಂಗಭೂಮಿಯಲ್ಲಿ ಮಾರ್ಪಾಟಾಗುವದು ಹೆಚ್ಚು ಶ್ರೇಯಸ್ಕರವಾಗಿದೆ. ಪ್ರೇಕ್ಷಕರಿಗೆ ಪೌರಾಣಿಕ ಪಾತ್ರದೊಡನೆ ತಾದಾತ್ಮ್ಯವನ್ನು ಹೊಂದುವದು ದುಸ್ಸಾಧ್ಯವಾಗಿದೆ. ಆದರೆ ಸದ್ಯಸ್ಥಿತಿಯ ಸಾಮಾಜಿಕವ್ಯಕ್ತಿಯೊಡನೆ ಅವರು ಸಹಜವಾಗಿಯೇ ತಾದಾತ್ಮ್ಯವನ್ನು ಪಡೆಯುವರು. ಏಕೆಂದರೆ ಭೂಮಿಕೆಯ ವೇಷ ಭೂಷಣಗಳಲ್ಲಿಯೂ ಆಚಾರವಿಚಾರಗಳಲ್ಲಿಯೂ ಪ್ರೇಕ್ಷಕರು ವಿಹರಿಸುತ್ತಾರೆ. ಹೀಗೆ ತಾದಾತ್ಮ್ಯವುಳ್ಳ ನಾಟಕದಿಂದ ಜನತೆಯಮೇಲೆ ಸಹಜವಾಗಿಯೇ ಪರಿಣಾಮವಾಗುವದು. ತಾದಾತ್ಮ್ಯವಿಲ್ಲದ ನಾಟಕವು ಕೇವಲ ಶ್ರಾವ್ಯವಾಗಿ ಪರಿಣಮಿಸಬಹುದು. ಇರಲಿ;

ಇನ್ನು ಐತಿಹಾಸಿಕ ನಾಟಕ:- ಈ ವಿಷಯವಾಗಿ ಶ್ರೀ. ಗರುಡರು " ಕರ್ನಾಟಕದ ಪೂರ್ವೇತಿಹಾಸವನ್ನು ತಕ್ಕೊಳ್ಳೋಣವೇ, ರಾಷ್ಟ್ರಕೂಟರನ್ನು ಚಾಳುಕ್ಯರು ಹೊಡೆದರು. ಚಾಳುಕ್ಯರನ್ನು ಹೊಯ್ಸಳರು ಹೊಡೆದರು. ಹೊಯ್ಸಳರನ್ನು ಮತ್ತೊಬ್ಬರು ಹೊಡೆದರು. ಹೀಗೆ ಇತಿಹಾಸವೆಲ್ಲ ಸ್ವಾರ್ಥಿಗಳಾದ ವೀರರ ಬಂಧುದ್ವೇಷದ ಅಂತಃಕಲಹದಿಂದಲೇ ತುಂಬಿದೆ " ಎಂದು ಕರ್ನಾಟಕದ ಪ್ರಾಚೀನವೀರರ ಮೇಲೆ ಒಂದು ದೊಡ್ಡ ಅಪರಾಧವನ್ನೇ ಹೊರಿಸಿ ಬಿಟ್ಟಿದ್ದಾರೆ. ' ಸ್ವ ' ಎಂಬುದು ಎಲ್ಲರಿಗೂ ಪ್ರಿಯವಾದದ್ದೇ. ' ಸ್ವ ' ವನ್ನು ಎಷ್ಟರಮಟ್ಟಿಗೆ ವ್ಯಾಪ್ತಿಗೆ ತರಲಾಗುವದೋ ಅಷ್ಟರಮಟ್ಟಿಗೆ ಪ್ರಯತ್ನಿಸುವದು ಮಾನವನ ಸ್ವಭಾವ. ಇದಕ್ಕನುಗುಣವಾಗಿ ' ಬಲ್ಲಿದವರೇ ಭೂಮಂಡಲದೊಡೆಯರು ' ಎಂಬುದು ಎಲ್ಲಾಕಡೆಯಲ್ಲಿಯೂ ಪ್ರಚಾರಕ್ಕೆ ಬರತೊಡಗಿತು. ಈ ಪರಿಸ್ಥಿತಿಯಲ್ಲಿ ದುರ್ಬಲರಾದ ಅರಸರನ್ನು ತಳ್ಳಿ ಪ್ರಬಲರಾದರು. ತಮ್ಮ ಸಿಂಹಾಸನವನ್ನು ನೆಲೆಗೊಳಿಸಿದರೇ ಹೊರತು ಅಂತರ್ದ್ವೇಷವು ನಿಜವಾಗಿ ಪ್ರಬಲವಾಗಿರಲಿಲ್ಲ. ಆದರೆ ಮೊದಲಿನ ರಾಜರನ್ನೇ ಪ್ರಬಲರು ಸ್ಥಿರಗೊಳಿಸದೆ ತಮ್ಮ ದಂಶವನ್ನೆ ಮುಂದೆ ಮಾಡಿದ್ದರೂ ಅದು ತಪ್ಪಲ್ಲ. ಏಕೆಂದರೆ ನಿಜವಾದ ದುರ್ಬಲನು ರಾಜನಾಗಿ ಉಳಿಯುವನು ಹೇಗೆ? ಅಲ್ಲದೆ ರಾಷ್ಟ್ರಕೂಟರನ್ನು ಸರಿಸಿ ಚಾಳುಕ್ಯರು ಸಿಂಹಾಸನವನ್ನೇರಿದರೆ ಅವರೇನು ದುಷ್ಟರಾಜ್ಯಪದ್ಧತಿಯನ್ನು ಆರಂಭಿಸಲಿಲ್ಲ; ಸ್ವಾರ್ಥದಿಂದ ಪ್ರಜಾಪೀಡೆಯನ್ನು ಮಾಡಲಿಲ್ಲ. ಹೀಗಿರಲು ಆ ಕರ್ನಾಟಕವೀರರು ಅಭಿಮಾನ [illegible]ವೆಂಬುದನ್ನು ಯಾರಾದರೂ ಒಪ್ಪಲಾ[illegible] ಒಂದು ಸಣ್ಣ ಮಾತಿಗಾಗಿ ಹೊಸದೊಂದು ಸ್ವರಾಜ್ಯವನ್ನೇ ಸ್ಥಾಪಿಸಿದ " ಮಯೂರವರ್ಮ " ಬ್ರಾಹ್ಮಣನ ಚರಿತ್ರೆಯೇನು ಜನತೆಯಲ್ಲಿ ಅಭಿಮಾನವನ್ನು ಸ್ಫೂರ್ತಿಯನ್ನೂ ಹುಟ್ಟಿಸಲಾರದೆ? ದಿಗ್ದೇಶಗಳಲ್ಲೆಲ್ಲ ಕರ್ನಾಟಕದ ಕೀರ್ತಿಯನ್ನು ಹಬ್ಬಿಸಿದ, ಉದಾತ್ತ ಗಂಭೀರ ವಿಚಾರವನ್ನೂ ಕೊಡುಗೈದೊರೆಯೂ, ಪ್ರಜಾವತ್ಸಲನೂ ಆದ ಪುಲಿಕೇಶಿಯ ಇತಿಹಾಸವನ್ನು ಅಭಿನಯಿಸುವದರಿಂದ ಪ್ರೇಕ್ಷಕರಲ್ಲಿ ಕರ್ನಾಟಕದ ಬಗ್ಗೆ ಅಭಿಮಾನವೂ ಅನಲವೂ

ನೋಟೀಸಿಗೆ ಉತ್ತರ

—( )—

ಶ್ರೀ ಕೋಂ ಈರಪ್ಪಾ ಕುಂಬಾರ ಸಾ॥ ಕೇನವೋಹರೇ ತಾಲ್ಲೂಕ ನವಲಗುಂದ ಇವಳಿಗೆ-

ಕೆಳಗೆ ಸಹಿ ಮಾಡುವವನ ಕಡೆಯಿಂದಾ ನಿನಗೆ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ನೀನು ತಾರೀಖು ೧೪-೮-೩೦ ನೇ ಇಸ್ವಿ ವಿಜಯ ವರ್ತಮಾನ ಪತ್ರದಲ್ಲಿ ಕೊಟ್ಟ ನೋಟೀಸು ಮುಟ್ಟಿ ಅದರ ಮಜಕೂರ ತಿಳಿಯಿತು ನೀನು ಸದರೀ ನೋಟೀಸಿನಲ್ಲಿ ಬರೆದ ಮಜಕೂರ ಅಷ್ಟೂ ಸುಳ್ಳು ಇದ್ದು ದುಷ್ಟ ಜನರ ಬುದ್ಧಿವಾದದಿಂದ ಮಾಡಿದ್ದು ಇರುತ್ತದೆ ನಾನು ನಿನ್ನ ಮದುವೆಯ ಗಂಡನಿದ್ದು ಹಿರೇ ನನ್ನಲ್ಲಿ ಪುರುಷತ್ವ ಇಲ್ಲೆಂದು ನೀನು ಬರೆದದ್ದು ಅದೇ ಸುಳ್ಳು ಇರುತ್ತದೆ ನಿನ್ನನ್ನು ನಾನು ಕೆಟ್ಟ ರೀತಿಯಿಂದ ಎಂದೂ ನಡೆಸಿಕೊಂಡಿಲ್ಲ ಮತ್ತು ಮೈಮೇಲಿನ ದಾಗೀನೆ ಕಸಕೊಂಡಿಲ್ಲ ವ ನಿನ್ನನ್ನು ನಾನು ಹೊರಗ ಮನೀ ಬಿಟ್ಟು ಹಾಕಿರುವದಿಲ್ಲ ಆದರೆ ನೀನೇ ಕೆಟ್ಟ ಜನರ ಸಂಗತಿಯಲ್ಲಿದ್ದು ನನ್ನ ಕೂಡಾ ಚಲೋರೀತಿಯಿಂದಾ ಬಾಳ್ವೆ ಮಾಡದೇ ಸುಮಾರು ಮೂರು (೩) ತಿಂಗಳ ಹಿಂದೆ ನಾನು ಊರಲ್ಲಿ ಇಲ್ಲದ್ದಾಗ್ಗೇ ಇದ್ದ ಫಾಯದೆ ತಕ್ಕೊಂಡು ನನ್ನ ಮನೆಯಲ್ಲಿಯ ದಾಗೀನೆಗಳನ್ನು ಅಂದ್ರೆ ಎರಡು ಭಂಗಾರದ ಬಳಿ ಮತ್ತು ಒಂದು ಭಂಗಾರದ ಗುಂಡಿನ ಟೀಕೆ ವಗೈರೆ ರೂಪಾಯಿ ೧೦ ಈ ಪ್ರಕಾರ ದಾಗಿನೆಗಳನ್ನು ತಕ್ಕೊಂಡು ಓಡಿ ಹೋಗಿರುತ್ತೀ ಇದರ ಸಂಬಂಧ ನಾನು ನವಲಗುಂದ ಕೋರ್ಟಿನಲ್ಲಿ ಫಿರ್ಯಾದಿ ಮಾಡಲು ಅದರ ಸುದ್ದೀ ತಿಳಿದು ನೀನು ನನ್ನಲ್ಲಿ ಪುರುಷತ್ವ ಇಲ್ಲೆಂದು ವ ನಿನ್ನ ದಾಗೀನೆ ಕಸಕೊಂಡನೆಂದು ಸುಳ್ಳು ನೋಟೀಸು ಕೊಟ್ಟಿರುತ್ತೀ ಆದಿ ನಾನು ನಿನ್ನ ಕೂಡ ಬಾಳ್ವೆ ಮಾಡಲಿಕ್ಕೆ ತಯಾರ ಇರುತ್ತೇನೆ ನಾನು ನಿನಗೆ ಸೋಡಪತ್ರಾ ಕೊಡಲಿಕ್ಕೆ ಬಿಲ್ಕುಲ ಕಬೂಲ ಇಲ್ಲಾ ನನ್ನ ನಿನ್ನ ಗಂಡಹೆಂಡರೆಂಬ ಸಂಬಂಧ ಕಾಯಮ. ಆದ ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ಲಗ್ನದ ಕಾಲದಲ್ಲಿ ನಿನ್ನ ಮೈಮೇಲೆ ನಾನು ಇಟ್ಟ ದಾಗಿನೆಗಳೂ ವ ನೀನು ನನ್ನ ಮನೀ ಬಿಟ್ಟು ಓಡಿ ಹೋಗುವಾಗ್ಗೆ ಒಯ್ದ ಮೇಲೆ ಬರೆದ ದಾಗೀನೆಗಳೂ ತಕ್ಕೊಂಡು ನನ್ನ ಕಡೆಗೆ ಬರಬೇಕು ಹೀಗೆ ಮಾಡಲಿಕ್ಕೆ ನೀನು ತಪ್ಪಿದರೆ ನಿನ್ನ ಕಬಜಾದ ಬಗ್ಗೆ ವ ನಿನ್ನಲ್ಲಿ ಇದ್ದ ನನ್ನ ದಾಗೀನೆಗಳ ಬಗ್ಗೆ ಕಾಯದೆ ಪ್ರಕಾರ ಇಲಾಜ ನಡಿಸುವೆನು ಅಂತಾ ಕೊಟ್ಟ ನೋಟೀಸು

ತಾರೀಖು ೨೦-೮-೧೯೩೦ ಇಸ್ವಿ.

ಸಹಿ- ಈರಪ್ಪಾ ಬಿನ ಮಡಿವಾಳಪ್ಪಾ ಕುಂ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ಶ್ರೇಷ್ಠ ವೈದ್ಯರ ಅನೇಕ ವರ್ಷಗಳ ಅನುಭವ!! **ಬೆಲೆ ಎರಡೇ** ರೂಪಾಯಿ. ಅಂಚೆವೆಚ್ಚ ಸಹಿತ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯ ಬ್ಯಾಂಕ ಧಾರವಾಡ

ಸೂಚನೆ:— ನನ್ನ ಔಷಧ ಬೇಕಾದವರು ಯಾವ ವರ್ತಮಾನಪತ್ರದ **ಜಾಹೀರಾತಿ** ನೋಡಿ ಈ ಬೇಡಿಕೆಯನ್ನು ಮಾಡುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚ್ಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡ್ಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಇದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆಡ್ಡಿ ವ ಶಿಸಂ ನಾಟುಗಳು

ಸಾಗವಾನಿ ಲಾಕ ವ ಸಾಗವಾನಿ (೬) ಫೂಟಿನ ಚಾವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಕಿಲಿಂಗು ತೈಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಗುರುವಾರ ತಾರೀಖು ೨೧ ನೇ ಅಗಸ್ಟ ೧೯೩೦ (ಸಂಚಿಕೆ ೩೮೪

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ನಾಮದಾರ ಶ್ರೀ. ಸಿದ್ಧವೀರೂಕರ ಅಸೆಸರ್, ಶ್ರೀ. ಆರೂಢ ಸ್ವಾಮಿಗಳ ಫೋಟೋಗಳು ಮತ್ತು ವಕೀಲರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಿ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಜನರ ಅಗ್ರಹದ ಸಲುವಾಗಿ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳು ತೆಗೆದಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕಡಿಮೆಯಿರುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ಎಂಟು ಆಣೆ; ಹತ್ತು ಪ್ರತಿ ಕರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಕಾದವರು ಪ್ರತಿಯೊಂದಕ್ಕೆ ಎರಡಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಕಾದವರು ಮುಂಗಡ ಮನಿಆರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಯಸುವವರು [illegible] ಮುಂಗಡ ಮನಿಆರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರ ನೆಹರು, ಡಾಕ್ಟರ ಅನ್ಸಾರಿ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ಈಗ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಬಹುದಾದಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳ ಭಾವಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ. ಠೋಕ ತಕ್ಕೊಳ್ಳುವವರಿಗೆ ಭರಪೂರ ಕಮೀಶನ ದೊರೆಯುವದು.

ಬಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ
ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ್ಸ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಂಡಿಗೆಯು ಎಂಟು ಲಕ್ಷದ ಮೇಲ್ಪಟ್ಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಜಾಸ್ತಿಯಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೮-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ.

ವಿಜಯ.

ಶಕೆ ವಿಕ್ರಮ ವರ್ಷ ೧೯೮೭ ಶ್ರಾವಣ ವದ್ಯ ೧೧

ಒಡಂಬಡಿಕೆಯ ಪೂರ್ವದಲ್ಲಿ ಸ್ಪೇಶಲ ಕಾಂಗ್ರೆಸ ಸಭೆಯು.

—(೦)—

ಮಹಾತ್ಮಾ ಗಾಂಧಿ ಅಥವಾ ಪಂಡಿತರಾದ ಪಿತಾಪುತ್ರರೇ ಕಾಂಗ್ರೆಸದ ಸಾರ್ವಭೌಮ ಅಧಿಕಾರಿಗಳಲ್ಲ. ಇಡೀ ಕಾಂಗ್ರೆಸದ ಅನುಮತಿ ದೊರೆತರೇ ಒಡಂಬಡಿಕೆಯ ಒಂದು ಭಾಗವು ಮುಗಿದಂತಾಗುವದು. ಆನಂತರ ರಾವುಂಡ ಟೇಬಲದ ಚರ್ಚೆಯು ಎರಡನೆಯ ಭಾಗವಾಗುವದು. ತುರಂಗದಲ್ಲಿ ಮಹಾತ್ಮರು ಶಿಷ್ಟರ ಕೂಡ ಮಾತಾಡುತ್ತಿದ್ದಾಗ, ಮುಂಬಯಿಯಲ್ಲಿ ಅಧ್ಯಕ್ಷ ಪಟೀಲರು ಇದೊಂದು ಕೇವಲ ಫಾರ್ಸ ಆಗಿರುತ್ತದೆಂದು ಭಾಷಣ ಮಾಡಿ, ಕಾಂಗ್ರೆಸವು ತನ್ನ ಚಳವಳಿಯನ್ನು ಕಿಂಚಿತ್ತಾದರೂ ಕಡಿಮೆ ಮಾಡಕೂಡದೆಂದು ಸಾರಿ ಹೇಳಿದ್ದಾರೆ. ಇವರನ್ನೆಲ್ಲರನ್ನು ಒಡಂಬಡಿಸಿದ ಹೊರ್ತು, ಕಾಂಗ್ರೆಸ ಪಕ್ಷದ ವತಿಯಿಂದ ರಾಜಿಯ ಶರ್ತುಗಳು ಪೂರ್ಣವಾಗಲಾರವು. ಆದುದರಿಂದ ಸ್ಪೆಶಲ ಕಾಂಗ್ರೆಸ ಕೂಡಿಸಬೇಕೆಂಬ ವಿಚಾರವನ್ನು ಪಂಡಿತ ಜವಾಹಿರಲಾಲರು ಸರ ಸಪ್ರೂಸಾಹೇಬರ ಮುಂದೆ ಹೇಳಿದಂತೆ ಸುದ್ದಿಯಾಗಿದೆ. ಒಂದು ವೇಳೆ ಈ ಸಂಗತಿಯು ನಿಜವಾಗಬಹುದು; ಕಾಂಗ್ರೆಸ ಕೂಡುವ ಮೊದಲು ಸರಕಾರದವರು ರಾಜಬಂದಿಗಳನ್ನು ಬಿಡಬಹುದೆಂದೂ ಹೇಳಬೇಕಾಗುತ್ತದೆ.

ರಾಜಿಯ ಪ್ರಸ್ತಾಪವು ಮೊದಲು ಮಿ. ಸ್ಲೋಕೊಂಬಸಾಹೇಬರ ಕೂಡ ನಡೆಯಿತು. ಇದೇ ಸಾಹೇಬರು ಅಲಾಹಾಬಾದಿನಲ್ಲಿ ಪಂಡಿತ ಮೋತಿಲಾಲರನ್ನು ಕಂಡು ಪ್ರಸ್ತಾಪಿಸಿದರು. ಮಹಾತ್ಮರು ಮತ್ತು ಪಂಡಿತ ಮೋತಿಲಾಲರು ಬರೆದುಕೊಟ್ಟ ಸಂಗತಿಗಳಿಗೆ ತುಸು ಬದಲಾಗಿ ಈಗಿನ ವಿಚಾರ ವಿನಿಮಯವಾಗಿರುತ್ತದೆಂದು ಲೋಕವಾರ್ತೆಯಾಗಿದೆ. „ ಕೆಲವು ಸುರಕ್ಷಿತೆ „ ಗಳನ್ನಿಟ್ಟುಕೊಂಡು, ಹಿಂದುಸ್ಥಾನಕ್ಕೆ ವಸಾಹತಿಕ ಸ್ವರಾಜ್ಯಾಧಿಕಾರ ಕೊಡುತ್ತೇವೆಂದು ಲಾರ್ಡ ಆಯರ್ವಿನಸಾಹೇಬರು ಅನ್ನುತ್ತಿದ್ದಾರೆ. ಅದ್ದಾವ ಸುರಕ್ಷಿತೆಗಳೆಂಬುದು ತಮಗೆ ತಿಳಿಯಬೇಕಾಗಿದೆಂದು ಪಂಡಿತ ಜವಾಹೀರಲಾಲರು, ಶಂಕೆ ತೆಗೆದಿದ್ದು ಅವುಗಳ ಸಮಾಧಾನವಾಗಬೇಕಾಗಿರುತ್ತದೆ. ಈ ಪ್ರಶ್ನದ ಬಗ್ಗೆ ಮುಖ್ಯ ಪ್ರಾಗತ್ಯವು ಸಂಭವವಿರುವದರಿಂದ ಸರ ಸಪ್ರೂ ಸಾಹೇಬರು ಸಹ ಪ್ರಶ್ನೆಯ ತಮ್ಮ ಕೂಡ ವಿಚಾರ ವಿನಿಮಯವು ನಡೆದ ವಿಷಯ ಯಥಾವತ್ತಾಗಿಯೆಂದು ನಿರ್ಣಯ ಮಾಡಿಕೊಳ್ಳಬಾರದೆಂದು ಲಾರ್ಡ ಆಯರ್ವಿನಸಾಹೇಬರಿಗೆ ತಿಳಿಸಿರಬೇಕೆಂದು ಧ್ವನಿತವಾಗುತ್ತದೆ.

ರಾಜಿಯ ಸಂಬಂಧವಾಗಿ ಪ್ರಯತ್ನಿಸಿದ ಈ ಈರ್ವರು ಗೃಹಸ್ಥರ ಅಭಿನಂದನವನ್ನು ಈಗ 'ಲೇಜನರು ಮಾಡಲಾರಂಭಿಸಿದ್ದಾರೆ. ಕಾಂಗ್ರೆಸದ ಕೆಲ ಗೃಹಸ್ಥರು ಇವರಿಗೆ ಭ-ಪು! ಭ ಪು!! ಅಂದಿದ್ದಾರೆಂದು ಮುಂಬಯಿ ಪತ್ರಗಳು ಬರೆಯಲಾರಂಭಿಸಿವೆ. ಒಂದು ರೀತಿಯಿಂದ ಇವರ ಉಪಕ್ರಮವು ಸ್ತುತ್ಯವಾಗಿದ್ದರೂ, ಅದು ಕೊನೆಗಾಣುವತನಕ ಬೆನ್ನುಚಪ್ಪರಿಸುವದು ಸಮಂಜಸವಾಗಲಾರದು.

ಶಿಷ್ಟಾಯಿಯವರು ಲಾರ್ಡ ಆಯರ್ವಿನಸಾಹೇಬರಿಗೆ ಕಳಿಸಿದ ಪತ್ರವು ಈಗಾಗಲೇ ಅವರಿಗೆ ಮುಟ್ಟಿರುತ್ತದೆ. ಲಾರ್ಡ ಸಾಹೇಬರು ತಾವಿನಿಂದ ಮಿ. ಬೆನ್ನಸಾಹೇಬರ ಕೂಡ ಮಾತಾಡಿಕೊಂಡು, ತಮ್ಮದೊಂದು ವಿಚಾರ ಮಾಡಿಕೊಂಡು, ಇವರೀರ್ವರನ್ನು ಕರಿಸುವರು. ನಡುವಿನ ಈ ವಿಧಿವಿಧಾನಗಳಾಗಲಿಕ್ಕೆ ಕೆಲವು ದಿವಸಗಳು ಬೇಕಾಗುವದು ಸಹಜವದೆ,

ನಾಲ್ವತ್ತು ಸಾವಿರ ಕೂಲಿಕಾರರ ಪ್ರಚಂಡವಾದ ರಾಷ್ಟ್ರೀಯ ಮೆರವಣಿಗೆ.

ಮುಂಬಯಿಯಲ್ಲಿ ಗಿರಣಿಗಳ ನಾಲ್ವತ್ತು ಸಾವಿರ ಕೂಲಿಕಾರರು ಕಾಂಗ್ರೆಸಕ್ಕೆ ಸಂಪೂರ್ಣ ಅನುಕೂಲವಾಗಿರುವಂತೆ ರಾಷ್ಟ್ರೀಯ ಸಪ್ತಾಹವನ್ನು ಪ್ರಾರಂಭ ಮಾಡಿದ್ದಾರೆ. ಆದಿತ್ಯವಾರ ಬೆಳಗಾದ ಕೂಡಲೆ, ಗಿರಣಿಯ ಕೂಲಿಕಾರರು ವಾಸವಾಗಿರುವ ಭಾಗದಲ್ಲಿ ಸಪ್ತಾಹದ ನಗರಸಂಕೀರ್ತನ ಪ್ರಾರಂಭವಾಯಿತು. ಕಾಂಗ್ರೆಸದ ಮುಂದಾಳುಗಳು ನಸುಕು ಹರಿಯುವದರೊಳಗಾಗಿ ಅಲ್ಲಿಗೆ ಹೋಗಿ, ಎಲ್ಲ ಕೆಲಸಗಳು ಸಿಸ್ತಿನಿಂದ ನಡೆಯುವಂತೆ ಕಾರ್ಯಕ್ರಮಗಳನ್ನು ನಡೆಸಿದರು. ನಗರ ಸಂಕೀರ್ತನೆಯಾದ ಬಳಿಕ ರಾಷ್ಟ್ರಧ್ವಜ ವಂದನೆಯಾಯಿತು. ಬಳಿಕ ಅವರು ಸಭೆಗೂಡಿಸುವ ದೊಡ್ಡ ಬೈಲಿಗೆ ಕಾವ ಗ್ರಾಂದ ಮೈದಾನವೆಂಬ ನಾಮಕರಣ ಮಾಡಲ್ಪಟ್ಟಿತು. ಆಗ ಮಳೆಯು ಸುರಿಯುತ್ತಿತ್ತು. ಅರ್ಧತಾಸಿನ ತನಕ ಸಭೆಯು ಕೆಲಸ ನಡೆದಿದ್ದರೂ ಒಬ್ಬರೂ ಕೊಡೆ ತೆಗೆಯಲಿಲ್ಲ, ತಪತಪ ತೊಯ್ಯಿಸಿಕೊಂಡರೂ, ಒಬ್ಬರೂ ಸ್ಥಳಬಿಟ್ಟು ಏಳಲಿಲ್ಲ. ಬಳಿಕ ಅನೇಕ ಪಂಗಡಗಳನ್ನು ಮಾಡಿ, ಆ ಭಾಗದಲ್ಲೆಲ್ಲ ಮೆರವಣಿಗೆಗಳನ್ನು ಹೊರಡಿಸಿದರು. ಕೂಟ್ಟುಕಟ್ಟಿ ನಿಂತು, ಕಾಂಗ್ರೆಸ, ಆಯುದೆಗಳ, ಬಹಿಷ್ಕಾರ ಮುಂತಾದವುಗಳ ಮೇಲೆ ವ್ಯಾಖ್ಯಾನ ಕೊಡುವರು. ನಾಲ್ವತ್ತು ಸಾವಿರ ಕೂಲಿಕಾರರು ನಿರುದ್ಯೋಗಿಯಾಗಿದ್ದರೆಷ್ಟೇ; ಇವರು ಹೊಟ್ಟೆಗಿಲ್ಲೆಂಬ ಚಿಂತೆ ಮಾಡದೆ, ದೇಶಕಾರ್ಯವೆಂದು ಚಳವಳಿಯಲ್ಲಿ ಸೇರಿದ್ದಾರೆ. ಕೂಲಿಕಾರರ ಸಂಘಶಕ್ತಿಯು ಅನುಕೂಲತೆ ದೊರೆತರೆ ಈಗಿನ ಕಾಲದಲ್ಲಿ ಕಾಂಗ್ರೆಸದವರು ಏಸೇಸು ಘಟನೆಗಳನ್ನು ಮಾಡಬಹುದು.

ಆಯ ಪಿ. ರೇಲ್ವೆಯು ನಷ್ಟಕ್ಕೆ ಗುರಿಯಾಯಿತು.

—೦*೦—

ಇತ್ತೀಚೆ ಸರಕಾರದ ಉತ್ಪನ್ನವು ಕಡಿಮೆಯಾಗುತ್ತಿದ್ದಂತೆ, ರೇಲ್ವೆಗಳ ಆದಾಯವೂ ಬಹಳ ಬಟ್ಟ್ಯಾದಲ್ಲಿ ಇಳಿಯುತ್ತಿವೆ. ಕಳೆದೆರಡು ತಿಂಗಳಲ್ಲಿ ಹಿಂದುಸ್ಥಾನದ ರೇಲ್ವೆ ಕಂಪನಿಗಳಿಗೆ ಒಂದೂವರೆ ಕೋಟಿಯಷ್ಟು ಕಟ್ಟಿದೆ. ಇವುಗಳಲ್ಲಿ ಜಿ. ಆಯ. ಪಿ. ರೇಲ್ವೆಗೆ ಹೊಡತ ಕಟಿತು. ಏಕೆಂದರೆ ಮುಂಬಯಿಯಿಂದ ದೇಶದೇಶಕ್ಕೆ ಸರಕು ಹೋಗಬೇಕಾಗಿದ್ದು, ಅದರ ಆಯಾತನಿರ್ಗತವು ಬಹುವಾಗಿ ಕಡಿಮೆಯಾಗಿ ವಾರಕ್ಕೆ ನಾಲ್ಕೈದು ಲಕ್ಷದಷ್ಟು ಪ್ರಾಪ್ತಿಯು ಕಡಿಮೆಯಾಗಲಾರಂಭಿಸಿದೆ. ಇದರಿಂದ ಕಂಪನಿಯವರು ಇಪ್ಪತ್ತು ಲೋಕಲ ಗಾಡಿಗಳನ್ನು ನಿಲ್ಲಿಸುವರು. ಮುಂಬಯಿಯಿಂದ ಹೊರಡುವ ಕರ್ನಾಟಕದ ಮೇಲ್ಗಾಡಿಯಲ್ಲಿ ಎರಡು ಭಾಗಮಾಡಿ, ಒಂದರಲ್ಲಿ ಫಸ್ಟ ಮತ್ತು ಸೆಕೆಂಡ ಹಾಗು ಎರಡನೇದರಲ್ಲಿ ಥರ್ಡ ಕ್ಲಾಸದ ಜನರನ್ನು ಬಿಡುತ್ತಿದ್ದರು. ಇವೆರಡೂ ಒಂದು ಮಾಡಿ. ಈ ರೇಲ್ವೆಯಂತೆ ಸದರ್ನ ಮರಾಠಾ ರೇಲ್ವೆಗೂ ಧಕ್ಕೆ ತಟ್ಟಿದೆ. ಇದಾವ ರೀತಿಯಿಂದ ಹಾನಿ ಬಾಯಿಗೂಡಿಸಿಕೊಳ್ಳುವದೆಂಬದನ್ನು ನೋಡಬೇಕಾಗಿದೆ.

ಅಸಿಸ್ಟಂಟ ಕಲೆಕ್ಟರರು ಕುದುರೆಯಿಂದ ಬಿದ್ದು ಮರಣ.

ಮದ್ರಾಸದಲ್ಲಿ ವಿಜಯ ರಾಘವಾಚಾರ್ಯರ ಚಿರಂಜೀವ ರಂಗಣ್ಣನವರು ಆಯ. ಸಿ. ಎಸ. ಪರೀಕ್ಷೆ ಪಾಸಾಗಿ ಅಸಿಸ್ಟಂಟ ಕಲೆಕ್ಟರರಾಗಿದ್ದರು. ಇವರು ಅಶ್ವಾರೂಢರಾಗಿ ಹೋಗುತ್ತಿರುವಾಗ, ಕುದುರೆಯು ಹೆದರಿ ಅಸದಾಗಿ ಗಿಡಕ್ಕೆ ಹಾಯ್ದು ಬಿತ್ತು. ಈ ಅಪಘಾತದಿಂದ ರಾಘವನ್ನರು ಪರಲೋಕವಾಸಿಯಾದರು. ಇವರ ತಂದೆಯವರು ಸಿಮ್ಲಾದಲ್ಲಿರುವರು. ಇವರ ಬರುವ ತನಕ ಹೆಣವನ್ನು ಬರ್ಫಿನಲ್ಲಿ ಹಾಕಿ ಕಾಯಿಟ್ಟಿದ್ದಾರೆ.

ಅಶಿಕ್ಷಿತರ ಕಾಯದೆಭಂಗ:

ಅಥವಾ

ಸುಶಿಕ್ಷಿತರ ಕಾಯದೆಭಂಗ:

—(೧)—

ಕೋರೆಗಾಂವದವರು ಈಚಲ ಗಿಡ ಕಡಿದರು. ಅವರನ್ನು ಹಿಡಿಯುವಾಗ ಊರ ತುಂಬ ಮೆರವಣಿಗೆಯಾಯಿತು. ಹಾವೇರಿಯಲ್ಲಿ ರಾಜಕುಮಾರನಂತೆ ಸನ್ಮಾನ ಹೊಂದಿದರು. ಮದುವೆಯಲ್ಲಿ ಸಹ ಇಂಥ ನಿಬ್ಬಣ ಮತ್ತು ಸಂಭ್ರಮ ಕಂಡಿಲ್ಲ. ಕನಸಿನಲ್ಲಿ ಅರಸೊತ್ತಿಗೆ ಕಂಡಂತೆ !! ಇವರನ್ನು ಹಿಡತರುವಾಗ ಕೂಡ ದುಸ್ತರವಾಯಿತು. ಆದರೇನಾಯಿತು? ಎರಡನೆಯ ಬಾಜೀರಾಯನ್ನ ಪೇಶ್ವೆಯ ಪಟ್ಟಕ್ಕೆ ಕೂಡಿಸಿದಂತಾಯಿತು. ತುರುಂಗವೆಂದರೆ ಯಮನ ನರಕವೆಂದು ಹೆದರಿಕೊಂಡರು. ಸ್ವಾರ್ಥಪರಾಯಣರೂ ಹೆದರಿಸಿದರು. ಸರಕಾರದ ಕ್ಷಮೆ ಕೇಳಿಕೊಂಡು ಇವರು ಮನೆಗೆ ಹೋದರು. ಯಾವದೇ ಸಾರ್ವಜನಿಕ ಚಳವಳಿಯಲ್ಲಿ ತಮ್ಮನು ನಂಬಿದಷ್ಟು ನಂಬಿಗೆ ಕಳಕೊಂಡರು. ಇವರು ತುರಂಗದ ಬಾಗಿಲ ಮೆಟ್ಟುವದರೊಳಗಾಗಿ ಮಾಫೀ ಬೇಡಿಕೊಂಡರು. ಬೈಲಹೊಂಗಲಿನ ಕೆಲವರು ಕ್ಷಮಿಯಾಗಿ ಹಿಂಡೇಗಿಸುತ್ತಿದ್ದಾರೆ. ಇವರಿಗೂ ಕ್ಷಮೆ ಬೇಡಿಕೊಳ್ಳಿರೆಂದು ಇನ್ನೂ ವಿಲಾಯಿತಿಯ ಬೂಟು ಸೂಟು ಹಾಕಿಕೊಳ್ಳುವಂಥವರು ಬಹಾದ್ದೂರಿ ಪಡೆಯಲು ಒತ್ತಾಯ ಪಡಿಸುತ್ತಿದ್ದಾರೆಂದು ವರ್ತಮಾನವಾಗಿದೆ. ಈ ಗೃಹಸ್ಥರು ಹಿತ್ತಲಕ್ಷಣದವರಾಗಿ, ದೇಶಕಾರ್ಯಕ್ಕಾಗಿ ಹೇಗೆ ದೇಹದಂಡನೆ ಮಾಡಬೇಕಾಗುತ್ತದೆಂಬದನ್ನು ಅರಿಯದಂಥ ಜನರನ್ನು ಹೆದರಿಸುವದಕ್ಕಿಂತ ಸುಶಿಕ್ಷಿತರಲ್ಲಿ ಒಬ್ಬನನ್ನಾದರೂ ಒಲಿಸಿಕೊಂಡು, ಆತನಿಗೆ ಮಾಫೀ ಬೇಡಿಕೊಳ್ಳುವದಕ್ಕೆ ಹಚ್ಚಿದರೆ ನಿಜವಾದ ಪೌರುಷವಾಗುವದು. ನೂರು ಜನ ಅಜ್ಞರನ್ನು ಕ್ರಿಶ್ಚನ್ನ ಮಂಗಡದಲ್ಲಿ ಕಳೆಸ್ಯಂಡರೆ ಪಾದ್ರಿ ಸಾಹೇಬರಿಗೆ ಕಿತಾಬು ದೊರೆಯುವದಿಲ್ಲ. ಅದೇ ಒಬ್ಬ ಬ್ರಾಹ್ಮಣನನ್ನು ಕುಲಗೆಡಿಸಿದರೆ ಆತನ ಸಿಫಾರಸು ಆಗಿ ಇನಾಮು ದೊರೆಯುವದೆಂದು ಹೇಳಿಕೆಯುಂಟು. ಅದೇ ಪ್ರಕಾರ ಅಜ್ಞರಿಂದ, ಹಸಿಯು ಕೂಡ ಗೋಖ್ಲೆಯವರೆನ್ನುವಂಥವರಿಂದ ಕ್ಷಮೆ ಬೇಡಿಸಿಕೊಳ್ಳುವದಕ್ಕಿಂತ ಒಬ್ಬ ಸಾಧು ದಿವಾಕರನಂಥ ಸುಶಿಕ್ಷಿತನಿಂದ ಕ್ಷಮೆ ಬೇಡಿಸಬೇಕು. ಅಲ್ಲದಂತಾದರೂ ಅಶಿಕ್ಷಿತರ ಕ್ಷಮೆಯನ್ನು ದೊಡ್ಡ ಗುಡ್ಡ ಮಾಡಿಕೊಳ್ಳಬಾರದು.

ಬರುವ ಸೆಪ್ಟಂಬರ ತಿಂಗಳ ೧ ನೆಯ ತಾರೀಖಿನ ದಿವಸ ಬೆಂಗಳೂರಲ್ಲಿ ಸಂಸ್ಥಾನಗಳ ಪ್ರಜಾಪರಿಷತ್ತು ಕೂಡತಕ್ಕದ್ದಿದ್ದು, ಸಾಂಗಲಿಯ ವಕೀಲರಾದ ಶ್ರೀ. ಅಭ್ಯಂಕರರು ಅಧ್ಯಕ್ಷಸ್ಥಾನ ಸ್ವೀಕರಿಸುವರು.

ಫರಗ್ಯುಸನ್ನ ಕಾಲೇಜದ ಮೇಲೆ ರಾಷ್ಟ್ರೀಯ ನಿಶಾನೆ.

—(೧)—

ಪುಣೆಯ ಫರಗ್ಯುಸನ್ನ ಕಾಲೇಜದ ಮೇಲೆ ವಿದ್ಯಾರ್ಥಿಗಳು ರಾಷ್ಟ್ರೀಯ ನಿಶಾನೆಯನ್ನೇರಿಸಿದರು. ಪ್ರಿನ್ಸಿಪಾಲ ಮಹಾಜನಿಯವರು ಇದನ್ನು ತೆಗೆಯಿಸಬೇಕೆಂದು ಮಾಡಿದ ಪ್ರಯತ್ನ ವ್ಯರ್ಥವಾಯಿತು. ನಿಮ್ಮನ್ನು ಕೇಳದೆ, ನಿಶಾನೆಯನ್ನು ಕೆಳಗಿಳಿಸುವದಿಲ್ಲೆಂದು ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ವಚನ ಕೊಟ್ಟಿದ್ದರು. ಆದರೆ ಮೂರು ದಿವಸಗಳ ಹಿಂದೆ ಒಂದು ರಾತ್ರಿಯಲ್ಲಿ ಯಾರೋ ಇದನ್ನು ಕೆಳಗಿಳಿಸಿದರು. ಮರುದಿವಸ ವಿದ್ಯಾರ್ಥಿಗಳು ಈ ಅಪರಾಧ ಕಂಡು ಸಂತಾಪಗೊಂಡು, ಅದನ್ನು ಪುನಃ ಏರಿಸಿ, ಅದರ ಅಪಮಾನವಾಗದಂತೆ ಬಂದೋಬಸ್ತು ಮಾಡಿದ್ದಾರೆ.

ಬಳ್ಳಾರಿಯಲ್ಲಿ ಶೇಂದಿ ಪಿಕೆಟಿಂಗದ ಸ್ವಯಂಸೇವಕರಿಗೆ ದೊರೆತ ಪ್ರಸಾದ.

— (೧) —

ವ್ಹಾಲಂಟಿಯರರನ್ನು ಮುಳ್ಳುಗೋಳಿಕೆಯಲ್ಲಿ ಹಾಕಿದರು.

— (೦) —

ಬಳ್ಳಾರಿಯಲ್ಲಿ ಪಿಕೆಟಿಂಗದ ದೆಸೆಯಿಂದ ಶೇಂದಿಯನ್ನು ಬಂಡಿಗಳಲ್ಲಿ ಹೇರಿಕೊಂಡು ಹೋಗಿ, ದೀವಿಗರಿಗೆ ಮಾರುವರು. ಊರ ಹೊರಗೆ ಕುರುಬರ ಮನೆಯ ಮುಂದೆ ಈ ಬಂಡಿಗಳು ಬರಲು, ಸ್ವಯಂಸೇವಕರು ಪಿಕೆಟಿಂಗ ನಡೆಸಿದರು. ಆಗ ಕಲಾಲರು ಸ್ವಯಂಸೇವಕರನ್ನು ಹೊಡೆದು, [illegible] ಕೊಟ್ಟು ಒಬ್ಬಿಬ್ಬರನ್ನು ಮುಳ್ಳುಗೋಳಿಕೆಯಲ್ಲಿ ಚಲ್ಲಿದರು.

ತುರಂಗದಲ್ಲಿದ್ದವರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದರು.

* * *

ಶ್ರೀ ಸುಭಾಷಚಂದ್ರ ಬೋಸರು ಕಲಕತ್ತೆಯ ತುರಂಗದಲ್ಲಿದ್ದಾರೆ. ಆದರೆ ಆ ನಗರದಲ್ಲಿ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಪದದ ಚುನಾವಣೆ ನಡೆಯಿತು. ಶ್ರೀ. ಬೋಸರೂ, ಸಾಹೇಬಜಾದಾ ಗುಲಾಮ ಹುಶೇನಶಹಾ ಎಂಬವರೂ ಉಮೇದವಾರರಾದರು. ಶ್ರೀ. ಬೋಸರಿಗೆ ೪೭ ಮತ್ತು ಪ್ರಿನ್ಸ ಗುಲಾಮ ಹುಶೇನರಿಗೆ ೩೩ ಮತಗಳು ಬಿದ್ದು, ಶ್ರೀ. ಬೋಸರು ಅಧ್ಯಕ್ಷರಾದರು. ಇವರಿಗೆ ಇಷ್ಟು ದೊಡ್ಡ ಪದವಿ ದೊರೆತರೂ, ತುರಂಗದಲ್ಲಿಯ ಬಣರೊಟ್ಟಿ ಕಟಿಯುವದು ತಪ್ಪುವದಿಲ್ಲವಲ್ಲ !!

ಕದ್ದು ಕರೆ ಮಾರುತ್ತಿದ್ದ ಪಾದ್ರಿಭಟ್ಟರಿಗೆ ಶಿಕ್ಷೆ.

— (೨) —

ಕ್ರಿಶ್ಚನರಿಗೆ ಧರ್ಮಕಾರ್ಯಕ್ಕಾಗಿ ಮದ್ಯ ಬೇಕಾಗುತ್ತದೆ. ಬ್ರಾಹ್ಮಣರಿಗೆ ಮಧು ಬೇಕಾಗುವಂತೆ !! ಅಮೇರಿಕೆಯಲ್ಲಿ ಕರೆಯ ಮಾರಾಟ ನಿಂತಿದಷ್ಟೇ; ಒಬ್ಬ ಪಾದ್ರಿಸಾಹೇಬರು ಧರ್ಮದ ಹೆಸರಿನಿಂದ ಮದ್ಯ ತರಿಸಿ, ಒಂದಕ್ಕೆ ನಾಲ್ಕು ಬೆಲೆ ತಕ್ಕೊಂಡು, ಇದನ್ನು ಮಾರುತ್ತಾ ಬಂದರು. ಕಳ್ಳ ಕುಂಬಿಯ ಮೇಲೆ ಕೂತು ಕೂಗುವವಷ್ಟೇ; ಕಡೆಗೆ [illegible] ಒಂದು ವರ್ಷದವರೆಗೆ ಕ್ರಿಸ್ತನ ಧ್ಯಾನ ಮಾಡುವಂತೆ ಮ್ಯಾಜಿಸ್ಟ್ರೇಟರು ಇವರನ್ನು ತುರುಂಗಕ್ಕೆ ಕಳಿಸಿದರು.

ಸರಕಾರದ ಅಡವಿಯಲ್ಲಿ ರಾಷ್ಟ್ರೀಯ ನಿಶಾನೆ.

— (೨) —

ಕೊಲಾಬಾ ಜಿಲ್ಹೆಯ ಜನರು ಸತ್ಯಾಗ್ರಹದಿಂದ [illegible] ಕಾಯದೆಭಂಗ ನಡೆಸಿದ್ದಾರೆ. ಇವರು ಮೊದಲನೆಯ ದಿವಸ ಸರಕಾರೀ ಅಡವಿಯಲ್ಲಿ ರಾಷ್ಟ್ರೀಯ ನಿಶಾನೆಯನ್ನೇರಿ, ಅದು ತಮ್ಮದಾಯಿತೆಂದು ಜಾಹೀರ ಮಾಡಿದರು. ಹುಲ್ಲು ಉರುವಲನ್ನು ಬಂಡಿ ತುಂಬ ಹೇರಿಕೊಂಡು, ಹೋಗುವದು ನಿತ್ಯಕಾರ್ಯವಾಗಿರುತ್ತದೆ.

ರಾಷ್ಟ್ರೀಯ ನಿಶಾನೆ ಸುಟ್ಟರು.

ಗುಜರಾಥಕ್ಕೆ ಸೇರಿದ ಖೇಡಾ ಜಿಲ್ಹೆಯಲ್ಲಿರುವ ಮಹಮದಾಬಾದದ ಪೋಲೀಸರು ಒಂದು ಸಾರ್ವಜನಿಕ ಕಟ್ಟಡದ ಮೇಲಿನ ರಾಷ್ಟ್ರೀಯ ನಿಶಾನೆ ತೆಗೆದು, ತುಳಿದು, ಸುಟ್ಟುಹಾಕಿದರು. ಇವರು ಸ್ತ್ರೀಯರಿಗೂ ಅಶ್ಲೀಲ ಬೈಗಳನ್ನು ಬೈಯುತ್ತಾರೆಂದು ದೊಡ್ಡ ದೊಡ್ಡ ಜನರು ೧೫೦ ಸಹಿಗಳ ಒಂದು ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ರಾಜಕೀಯ ಕೈದಿಗಳು.

ಬಂಗಾಲ ೬೮೦೦, ಬಿಹಾರ ೪೧೫೮, ಆಂಧ್ರ ೩೫೨೦, ಸಂಯುಕ್ತಪ್ರಾಂತ ೧೬೨೦, ಮುಂಬಯಿಪಟ್ಟಣ ೨೭೫೪; ಮಹಾರಾಷ್ಟ್ರ ೧೨೦೦; ಗುಜರಾಥ ೯೭೭, ಕರ್ನಾಟಕ ೫೦೦, ಉಳಿದ ದೇಶಗಳು ನೂರಿನ್ನೂರರೊಳಗುಂಟು

ಅಮರಾವತಿಯಲ್ಲಿ ಕೌನ್ಸಿಲ ಮೆಂಬರರಾಗಿದ್ದ ಶೇಟ ಪನ್ನಾಲಾಲ ಬನ್ಸಿಲಾಲರಿಗೆ ಬಂದೂಕಿನ ಪರವಾನಗಿ ಇದ್ದರೂ ಅವರ ಎರಡು ಬಂದೂಕು, ಎರಡು ಕತ್ತಿಗಳನ್ನು ಪೋಲೀಸರು ಜಪ್ತಮಾಡಿಕೊಂಡು ಹೋದರು. ಕಾಂಗ್ರೆಸದ ಆಜ್ಞೆಯ ಪ್ರಕಾರ ರಾಜೀನಾಮೆ ಕೊಟ್ಟದ್ದೇ ಕಾರಣವಾಗಿರಬಹುದು.

ಯುರೋಪಿಯನ್ನರನ್ನ ಪರಕೀಯರೆಂದು ತಿಳಿಯಲಾಗದು.

— (೧) —

ಬೆಂಗಳೂರಿನಲ್ಲಿ ಕಾಫೀ ತೋಟಿಗರಾದ ಯುರೋಪಿಯನ್ನರ ವಾರ್ಷಿಕ ಸಭೆಯು ಈ ವಾರದಲ್ಲಿ ಸೇರಿತು. ಕಾಫಿ ಗಿಡಕ್ಕೆ ಒಂದು ಪ್ರಕಾರದ ಹುಳ ಹತ್ತಿ ಬೆಳೆಯು ಕೆಡುತ್ತಿರುವ ಕಾರಣ ಸರಕಾರದವರು ಈ ಕ್ರಿಮಿಕೀಟಿಯ ಮೂಲೋತ್ಪಾಟನ ಮಾಡುವ ಕುರಿತು ತೀವ್ರವೇ ಉಪಾಯ ಮಾಡಬೇಕೆಂದು ಠರಾವು ಮಾಡಿದರು. ಅನಂತರ ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ಕೊಡಬೇಕು; ಈ ಸ್ವರಾಜ್ಯದಲ್ಲಿ ಯುರೋಪಿಯನ್ನರನ್ನು ಪರಕೀಯರಾಗಿ ತಿಳಿಯಲಾಗದೆಂಬ ಬಗ್ಗೆ ಸ್ವರಾಜ್ಯದ ಕಾಯದೆಯಲ್ಲಿ ಕಲಮು ಹಾಕಬೇಕೆಂದು ಎರಡನೆಯ ಠರಾವು ಮಾಡಿದ್ದಾರೆ. ಯುರೋಪಿಯನ್ನರು ಹೆದರುವ ಕಾರಣವೇ ಇಲ್ಲ. ಹೆದರಲಿಕ್ಕೆ ಅವರಿಗೆ ಮೂರ್ಖತನದಿಂದ ನಡೆದದ್ದೇ ಕಾರಣ. ಹಿಂದುಸ್ಥಾನದಲ್ಲಿ ವಾಸವಾಗಿರುವ ಪಾರ್ಸಿ ಮತ್ತು ಯಹೂದಿಗಳನ್ನು ಪರಕೀಯರೆಂದು ಯಾರೂ ತಿಳಿಯುವದಿಲ್ಲ. ಅದೇ ಪ್ರಕಾರ ಯುರೋಪಿಯನ್ನ ಮತ್ತು ಆಂಗ್ಲೋ ಇಂಡಿಯನ್ನರನ್ನು ಭಾವಿಸುವದಿಲ್ಲ.

ಅಸೆಂಬ್ಲಿಗಾಗಿ ದೇವಡಿಗರ ಚುನಾವಣೆಯು

—— (೨) ——

ಕೌನ್ಸಿಲ ಮತ್ತು ಅಸೆಂಬ್ಲಿಯ ಚುನಾವಣೆಯಲ್ಲಿ ಸ್ವಾಭಿಮಾನವುಳ್ಳ ದೇಶಾಭಿಮಾನಿ ಪ್ರತಿಷ್ಠಿತರು ಹಿಂದುಳಿದು, ಅವರನ್ನು ಅಣಗಿಸುವದಕ್ಕಾಗಿ, ನಿಪಾಣಿ, ಭಂಗಿ ಒಂದಿ ಹೊಡೆಯುವವರಂಥವರನ್ನೇ ನಿಲಿಸುವರು. ಪ್ಲೇಗಿನ ವೇಳೆಯಲ್ಲಿ ಧಾರವಾಡದಲ್ಲಿ ಶ್ರೀ ವೆಂಕಟರಾವ [illegible] ಸ್ವರ್ಗವಾಸಿ ರಾವರಾವ ಒಳ್ಳಾರಿ, ರಾ. ಬ. ಮು[illegible]ಸಂಘದವರು ಮ್ಯುನಿಸಿಪಾಲಿಟಿಗೆ ರಾಜೀನಾಮೆ ಕೊಟ್ಟು, ಒಬ್ಬ ಢೋರನನ್ನು ಮೆಂಬರ ಮಾಡಿದ್ದು ಒಡುಜನರ [illegible]ದಲ್ಲಿರುವದು. ಅದೇ ಪ್ರಕಾರ ಈಗಿನ [illegible]ಗಳ ಅವಗಾಧಿಯಾಗಿದ್ದು, ಒ[illegible]ಕ್ಕೆ ಒಬ್ಬ ಲೀಡಿಗಾರನು ಅಸೆಂಬ್ಲಿಯ ಮೆಂಬ[illegible]ನು!!

ದಿವ್ಯಾಳಕರ ಕಾಯದೆಯ ಪ್ರಕಾರ ಜಾಮೀನು ಕೊಡದೆ, ಮುದ್ರಾಲಯ ನಡಿಸಿದರೆಂದು ಸರಕಾರದವರು ಮಹಾತ್ಮರ ನವಜೀವನ ಮುದ್ರಾಲಯವನ್ನು ಜಪ್ತ ಮಾಡಿದರು. ಇದನ್ನು ಯಾರೂ ಸವಾಲಿನಲ್ಲಿ ಕೊಳ್ಳಬಾರದೆಂದು ಅಹಮದಾಬಾದಿನ ಮುದ್ರಾಲಯದವರು ಠರಾವು ಮಾಡಿದ್ದರಿಂದ, ಮುದ್ರಾಲಯದ ಎಲ್ಲ ಸಾಮಾನುಗಳನ್ನು ಮುಂಬಯಿಗೆ ತಂದು ಸವಾಲಿಗೆ ಹಚ್ಚುವರು.

ಜೇಲುಗಳಲ್ಲಾಗುವ ಅತ್ಯಾಚಾರ ಮತ್ತು ಕೈದಿಗಳ ದೆಸೆಯ ಕುರಿತು ಯಾರಾದರೂ ತಕರಾರು ಮಾಡಿದರೆ ಅವರನ್ನು ಒಂದು ಜೇಲಿನಿಂದ ಮತ್ತೊಂದು ಜೇಲಿಗೆ ಕಳಿಸುತ್ತಾರೆಂದು ಶ್ರೀ ದೇವದಾಸ ಗಾಂಧಿಯವರು ಹೇಳುತ್ತಾರೆ. ಈ ಸ್ಥಳಾಂತರವಾಗುವಾಗ ದಾರಿಯಲ್ಲಿ ಸೈರಿಸಬೇಕಾಗುವ ಅಸಹ್ಯ ಕಷ್ಟವನ್ನಷ್ಟು ಇವರು ಹೇಳಿದ್ದರೆ ಒಳಿತಾಗುತ್ತಿತ್ತು.

ಪಂಡಿತ ಮೋತಿಲಾಲರು, ಪಂಡಿತ ಜವಾಹಿರಲಾಲರೂ ತಿರುಗಿ ಅಲ್ಲಾಹಾಬಾದಿಗೆ ಪಯಣ ಬೆಳೆಸಿದರು. ಇವರ ಈ ಪ್ರವಾಸದ ಒಟ್ಟು ಖರ್ಚು ಹನ್ನೆರಡು ಸಾವಿರ ರೂಪಾಯಿಯಾಗಿದೆ.

ಅಹಮದಾಬಾದದಲ್ಲಿ ಕಾಂಗ್ರೆಸದ ಡಿಕ್ಟೇಟರರಾದ ಶ್ರೀ. ಸೌ|| ಖುರ್ಷೀದದೇವಿಯವರನ್ನು ದಸ್ತಗಿರ ಮಾಡಿದ ಬಗ್ಗೆ ಊರ ತುಂಬ ಹರತಾಳವಾಯಿತು. ಮುಸಲಮಾನರೂ ಇದರಲ್ಲಿ ಭಾಗ ತಕ್ಕೊಂಡಿದ್ದರು.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲ
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಲೆಯ ಭೂಗೋಲ
ಬೆಲೆ ೫ ಆಣೆ

ಉರ್ದುವಿನಲ್ಲಿ ಇವರೆಗೆ ವಿಜಾಪೂರ ಜಿಲ್ಲೆಯ ಭೂಗೋಲ ಪ್ರಸಿದ್ಧವಾಗಿಲ್ಲ ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಅಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ನೋಟೀಸಿನ ದರಗಳು

—— (೦) ——

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ. ಮುಂದೆ ಪ್ರತಿಯೊಂದು ಪಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಕಂಪನೀ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅನುವಾದಿಸಿ ಪತ್ರದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಮ್ಯಾನೇಜರ ವಿಜಯ ಧಾರವಾಡ.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚ್ಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣ ಸ್ಥಳವು

ಮೋಟಾರ ಡ್ರೈವಿಂಗ ಕಲಿಯಲು ಜನರು ಈ ವರೆಗೆ ಪುಣೆ ಮುಂಬಯಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯವಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡ್ಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟನಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ಬಜಾರ

ಸಮಸ್ತ ಜನರಿಗೆ ತಿಳಿಸುವದೇನಂದರೆ—

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಕಿಸಂ ನಾಟುಗಳು

ಸಾಗವಾನಿ ಯಾಳೆ ವ ಸಾಗವಾನಿ (೩) ಫೂಟಿನ ಜವಳ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಪಿಲಿಂಗು ತೈಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದ ಕೊಡಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ [illegible] ವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಶೆಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1448

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶುಕ್ರವಾರ ತಾರೀಖು ೨೨ ನೇ ಅಗಸ್ಟ ೧೯೩೦ (ಸಂಚಿಕೆ ೧೮೫

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ; ಇದರಲ್ಲಿ ವಾದಿ ಶ್ರೀ. ಸಿದ್ಧವನೂರಕರ ಅರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು [illegible] ಶ್ರೀ. ಸಟನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಿ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳ ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ [illegible] ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವ ಪ್ರತಿಯೊಂದಕ್ಕೆ ಎರಡಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಕಾದರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಯಸುವವರು ೧/ ಆಣೆಯನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಸತ್ಪುರುಷರಾದ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಮಾಳವೀಯರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ತಕ್ಕ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇದಲ್ಲದೆ, ಇನ್ನೂ ಬೇರೆ ಮುಖಂಡ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರುಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ. [illegible] ಕೊಳ್ಳುವವರಿಗೆ ಭರಪೂರ ಕಮೀಶನ ದೊರೆಯುವದು.

ಜಿ. ಶ್ರೀ. ನವರತ್ನ.
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ
ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ್ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಯು ಎಂಟು ಲಕ್ಷದ ಮೇಲುಂಟು. ಚಳಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರಹ ಡಿಪಾಜಿಟಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಮತ್ತು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂಟಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ „	೭-೦-೦
೩ „	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಧಾರವಾಡ
ಕಾಂಗ್ರೆಸದ ಜಾಹೀರಾತಿನ ಬೋರ್ಡು ಜಪ್ತ ಮಾಡಿದರು

ನಿನ್ನಿನ ದಿವಸ ಸಾಯಂಕಾಲದಲ್ಲಿ ಇಲ್ಲಿಯ ಕಾಂಗ್ರೆಸ ಕಮೀಟಿಯ ಮುಂದೆ ಹಚ್ಚುವ ಜಾಹೀರಾತಿನ ಬೋರ್ಡನ್ನು ಪೋಲೀಸರು ಪಂಚನಾಮೆ ಮಾಡಿ ಜಪ್ತ ಮಾಡಿದರು. ಆ ಬೋರ್ಡು ಜಪ್ತಾದ ಕೂಡಲೆ ಕಾಂಗ್ರೆಸ ಕಮೀಟಿಯವರು ಮತ್ತೊಂದು ಬೋರ್ಡು ಹಚ್ಚಿದರು. ಆಗ ಜನರು ಜಯಜಯಕಾರ ಮಾಡಿದರು. ಮತ್ತು ಸಭೆಯುಂಟು ಬನ್ನಿರೆಂದು ಸ್ವಯಂಸೇವಕರು ಜಪ್ತಿಯ ವೇಳೆಯಲ್ಲಿಯೇ ಕೂಗುತ್ತಿದ್ದರು. ಬೋರ್ಡಿನಲ್ಲಿ ಆಕ್ಷೇಪಾರ್ಹವೆನಿಸುವಂಥ ವಿಷಯವಿರಲಿಲ್ಲ. ಇಂದು ಸಭೆ; ವಿಷಯ ಕೌನ್ಸಿಲಕ್ಕೆ ಬಹಿಷ್ಕಾರ. ವ್ಯಾಖ್ಯಾತರು ಶ್ರೀ. ಮುಕ್ಕೇರಿ ಮತ್ತು ಕರಮರಕರವೆಂದಿತ್ತು.

(ವಿಜಯ ಮುದ್ರಾಲಯ ಧಾರವಾಡ)

ಧಾರವಾಡ
ಕಾಂಗ್ರೆಸದ ಜಾಹೀರಾತಿನ ಬೋರ್ಡು ಜಪ್ತ ಮಾಡಿದರು

ನಿನ್ನಿನ ದಿವಸ ಸಾಯಂಕಾಲದಲ್ಲಿ ಇಲ್ಲಿಯ ಕಾಂಗ್ರೆಸ ಕಮೀಟಿಯ ಮುಂದೆ ಹಚ್ಚುವ ಜಾಹೀರಾತಿನ ಬೋರ್ಡನ್ನು ಪೋಲೀಸರು ಪಂಚನಾಮೆ ಮಾಡಿ ಜಪ್ತ ಮಾಡಿದರು. ಆ ಬೋರ್ಡು ಜಪ್ತಾದ ಕೂಡಲೆ ಕಾಂಗ್ರೆಸ ಕಮೀಟಿಯವರು ಮತ್ತೊಂದು ಬೋರ್ಡು ಹಚ್ಚಿದರು. ಆಗ ಜನರು ಜಯಜಯಕಾರ ಮಾಡಿದರು. ಮತ್ತು ಸಭೆಯುಂಟು ಬನ್ನಿರೆಂದು ಸ್ವಯಂಸೇವಕರು ಜಪ್ತಿಯ ವೇಳೆಯಲ್ಲಿಯೇ ಕೂಗುತ್ತಿದ್ದರು. ಬೋರ್ಡಿನಲ್ಲಿ ಆಕ್ಷೇಪಾರ್ಹವೆನಿಸುವಂಥ ವಿಷಯವಿರಲಿಲ್ಲ. ಇಂದು ಸಭೆ; ವಿಷಯ ಕೌನ್ಸಿಲಕ್ಕೆ ಬಹಿಷ್ಕಾರ. ವ್ಯಾಖ್ಯಾತರು ಶ್ರೀ. ಮುಕ್ಕೇರಿ ಮತ್ತು ಕರಮರಕರವೆಂದಿತ್ತು.

(ವಿಜಯ ಮುದ್ರಾಲಯ ಧಾರವಾಡ)

ವಿಜಯ.

ಶಾಲಿಶಕ ವಿಕ್ರಮ ವರ್ಷ ಅಧಿಕ ಶ್ರಾವಣ ವದ್ಯ ೧೩

ರಾ. ಬ. ಕಂಬಳಿಯವರ ಕೌನ್ಸಿಲ ಚುನಾವಣೆಯ ಪ್ರವಾಸ.

ಹಲಗೇರಿಯಲ್ಲಾದ ಸಂಭಾವನೆ

ಕಾಂಗ್ರೆಸವು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿದ್ದರೂ, ಕೌನ್ಸಿಲಕ್ಕೆ ಉಮೇದವಾರರಾಗುವಂಥವರಿಗೇನೂ ಕೊರತೆಯಿಲ್ಲ. ನದಿ ಹಳ್ಳ ಬತ್ತಿದರೂ ಒರತಿಯಿಂದ ನೀರು ಬಂದೇ ಬರುವದು. ಆದ್ದರಿಂದ ಒಂದೆರಡು ಸ್ಥಳಗಳ ಹೊರ್ತು ಸರಕಾರಕ್ಕೆ ಮೆಂಬರರ ಕೊರತೆಯಾಗುವದಿಲ್ಲ. ಒರತಿಯ ನೀರು ದೊಡ್ಡ ಸಮಾರಾಧನೆಗೆ ಪೂರೈಸದಂತೆ, ಈಗಾಗುವ ಕೌನ್ಸಿಲದ ಮೆಂಬರರು ದೇಶ ಪ್ರತಿನಿಧಿಗಳಾಗರು. ತಮಗೆ ದೊರೆಯುವ ನೂರಾರು ವೋಟುಗಳಿಂದ ಅಥವಾ ಪ್ರತಿಸ್ಪರ್ಧಿಗಳಿಲ್ಲದು ಕಾಸು ಕವಡಿಯು ವೆಚ್ಚವಿಲ್ಲದೆ ಸಾಧಿಸುವ ಕೆಲಸದಿಂದ ಇವರು ಸ್ವಂತದ ಮಟ್ಟಿಗೆ ಆನಂದಪಡಬೇಕಲ್ಲದೆ, ಲೋಕಪಕ್ಷದಿಂದ ಕೌನ್ಸಿಲ ಮೆಂಬರಂತದ ಬಗ್ಗೆ ಶಾಪ್ರಸಟ ದೊರೆಯುತ್ತೆಂದು ತಿಳಿಯತಕ್ಕದ್ದಲ್ಲ. ಹಿಂದಿನ ಚುನಾವಣೆ ಮತ್ತು ಈಗ ನಡೆಯಬೇಕಾದ ಚುನಾವಣೆಯ ದೆಸೆಯಿಂದೆದ್ದ ಚಳವಳಿಯನ್ನು ಲಕ್ಷಿಸಿದರೆ-ಕಾಂಗ್ರೆಸ್ಸಿಗರೇ ಲೋಕಪ್ರತಿನಿಧಿಗಳೆಂದು ಇವರಿಗೆ ಅನಿಸದಿದ್ದರೆ- ಇಂಥ ಜಡಬುದ್ಧಿಯವರು ಇನ್ನಾರೂ ಇಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಹತ್ತು ವರ್ಷಗಳ ಹಿಂದೆಯಾದ ಚುನಾವಣೆಯಲ್ಲಿ ಕೌನ್ಸಿಲ ಚುನಾವಣೆಗೆ ಕಾಂಗ್ರೆಸದಿಂದ ಬಹಿಷ್ಕಾರ ಹಾಕಲ್ಪಟ್ಟಿತ್ತು: ಆಗ ಬ್ರಾಹ್ಮಣೇತರರು ಸಹಕಾರಿಯಾಗಿ, ಮಂತ್ರಿಪದ ದೊರಕಿಸುವ ಭ್ರಮೆಯಲ್ಲಿದ್ದರು. ಆಗ ಬಂದ ಪರಿಯು ಈಗ ಬಿಟ್ಟು ಹೋಗಿ, ಕೌನ್ಸಿಲಕ್ಕೆ ಬಹಿಷ್ಕಾರ ಹಾಕುವಂಥವರಲ್ಲಿ ಬ್ರಾಹ್ಮಣೇತರ ಸಮಾಜವೇ ಮುಂದೊತ್ತಿದೆ. ನಮ್ಮ ತಿಳಿಯುವಮಟ್ಟಿಗೆ ವಿಚಾರಮಾಡಿದರೂ, ಈ ಸಾರೆ ರಾ. ಬ. ಕಂಬಳಿ ಮೊದಲಾದ ಉಮೇದವಾರರಿಗೆ ಹಿಂದಿನಷ್ಟು ಮತಗಳು ದೊರೆಯುವದಿಲ್ಲ; ಪ್ರತಿಯೊಂದು ಪೋಲಿಂಗ ಆಫೀಸಿನಲ್ಲಿ ಇವರ ಪಕ್ಷದಿಂದ ಕೆಲಸ ಮಾಡಲಿಕ್ಕೆ- ಜನರು ಸಹ ಸಿಗುವರೋ ಎಂಬ ಸಂಶಯವುಂಟಾಗುತ್ತದೆ. ಸಿಗಲಾರರೆಂದು ಹೇಳಿದರೆ- ಅದಿಷ್ಟು ಮಾತ್ರಕ್ಕೆ ಅತಿಶಯೋಕ್ತಿಯಾಗಲಾರದು.

ರಾ. ಬ. ಕಂಬಳಿ, ಶ್ರೀ. ಜೋಗ ಮತ್ತು ಮೂರನೆಯ ಪಕ್ಷದ ಶ್ರೀ. ಕೇಸರಿ ವಕೀಲರು ಈಗಾಗಲೇ ವೋಟಿಗೆ ಎಡತಾಕುತ್ತಲಿದ್ದಾರೆ. ಇವರಲ್ಲಿ ರಾ. ಬ. ಕಂಬಳಿಯವರು ಮತದಾರರ ಮೊದಲನೆಯ ಗುಂಡಿಗೇ ಹತವಾಗದಿದ್ದರೂ, ಹೈರಾಣರಾದರೆಂದು ಅಥವಾ ಆಗಿರುವರೆಂದು ಹೇಳುವಂಥ ಒಂದು ಸಂಗತಿಯು ರಾಣೇಬೆನ್ನೂರ ತಾಲೂಕ ಹಲಗೇರಿಯಲ್ಲಿ ಸಂಭವಿಸಿತು. ೧೮ನೆಯ ತಾರೀಖಿನ ದಿವಸ ರಾ. ಬ. ಕಂಬಳಿಯವರು ರಾಣೇಬೆನ್ನೂರ ಮ್ಯುನಿಸಿಪಾಲಿಟಿಯ ಅಧ್ಯಕ್ಷರನ್ನು ಸಂಗಡ ಕರಕೊಂಡು ವೋಟುಗಳ ಸಂಪಾದನೆಗಾಗಿ ಹಲಗೇರಿಗೆ ಹೋದರು. ಹೋಗುವಾಗ ಹಲಗೇರಿಯು ಅಸಹಕಾರದ ಒಂದು ಗಂಡುಮೆಟ್ಟಿನ ಸ್ಥಳವಾಗಿದೆಂದು ಅವರಿಗೆ ಹೇಗೆ ಹೊಳೆಯಲಿಲ್ಲವೋ ದೇವರೇ ಬಲ್ಲ. ಇವರು ವೋಟು ಬೇಡಿದ್ದೊಂದೇ ತಡ; ಜನರು ನಿಮಗೆ ವೋಟು ಕೊಡುವದಿಲ್ಲ; ನಾವು ಹಾಗೆ ಮಾಡಿದರೆ- ಪರರಲ್ಲಿ ನಮಗೆ ಮರ್ಯಾದೆಯೇ ಬರಲಾರದು. ನಮ್ಮ ಮಾನ ಕಳಕೊಳ್ಳಲಾರೆವು. ನಿಮ್ಮ ಮಾನ ಕಾಯ್ದುಕೊಂಡು ಸುಮ್ಮನೆ ಹೋಗಿರೆಂದು ನಿರ್ಭಿಡೆಯ ಉತ್ತರ ಕೊಟ್ಟರು. ಕೆಲವರು ಇವರಿಗೆ ಕೌನ್ಸಿಲದಲ್ಲಿ ಯಾವ ಮಹತ್ಕಾರ್ಯ ಮಾಡಿದ್ದೀರೆಂಬವರ ಪಟ್ಟಿ ಹೇಳಿರೆಂದು ಸವಾಲು ಹಾಕಿದರು. ಇಲ್ಲಿ ಹೆಚ್ಚಿಗೆ ನಿಂತರೆ- ವಿಧಿ ಕಟ್ಟಿಕೊಂಡು ಬಾವಿ ಇಳಿಯುವಂತಾದೀತೆಂದು ಬಗೆದು, ಇವರೆಲ್ಲರೂ ಹಿಂದಿರುಗಿದರು.

ಈ ಊರಲ್ಲಿ ಇವರಿಗಾದ ಸಂಭಾವನೆಯ ವರ್ತಮಾನ ಕೇಳಿದ ಕೂಡಲೆ, ರಾಣೇಬೆನ್ನೂರಿನ ಕಾಂಗ್ರೆಸ ಕಮೀಟಿಯ ಮುಖಂಡರು ಅಲ್ಲಿಗೆ ಹೋಗಿ, ಕಾಂಗ್ರೆಸ ಕಮೀಟಿಯನ್ನು ಸ್ಥಾಪಿಸಿ, ಚುನಾವಣೆಯಲ್ಲಿ ವೋಟು ಕೊಡಬಾರದೆಂಬ ಠರಾವು ಪಾಸ ಮಾಡಿದರು. ಅಲ್ಲಿಯ ಶೇಂದಿಯ ಅಂಗಡಿಗಳು ಈ ಮೊದಲೇ ಬಂದಾಗಿವೆ. ಚಹಾ ಮತ್ತು ಜಾನಸನ್ನ ಸಕ್ಕರೆಯು ಔಷಧಕ್ಕೆ ಸಹ ಸಿಗದಂತೆ ಈ ಮೊದಲೇ ಬಂದೋಬಸ್ತಾಗಿದೆ. ಚಹಾದ ಆರು ಅಂಗಡಿಗಳಿದ್ದವು. ಅವೆಲ್ಲ ಬಂದಾಗಿವೆ. ಈ ಸಭೆಯ ಮುಖ್ಯ ಪ್ರವರ್ತಕರು ರಾಣೇಬೆನ್ನೂರ ತಾಲೂಕಿನ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ಕುಬಸದವರಿದ್ದು, ಅವರಿಂದಲೇ ಇಡೀ ತಾಲೂಕಿನ ಸೂತ್ರಗಳಾಡುತ್ತಿರುವವು. ಇವರು ವೀರಶೈವರು. ಬ್ರಾಹ್ಮಣ-ಬ್ರಾಹ್ಮಣೇತರರ ಬದಲಾಗಿ, ಲಿಂಗಾಯತ ಮತ್ತು ಲಿಂಗಾಯತೇತರವೆಂಬುದಾಗಿ ಇಬ್ಬಣವಾದ ಕಾಲದಲ್ಲಿ ಲಿಂಗಾಯತರನ್ನೇ ಅವಲಂಬಿಸಿಕೊಂಡಿರುವ ರಾ. ಬ. ಕಂಬಳಿಯವರಿಗೆ ಎಷ್ಟು ವೋಟುಗಳು ದೊರೆಯುವವೆಂಬ ಪರೀಕ್ಷೆಯ ಕಾಲವೇ ಬಂದಿದೆ.

ಧಾರವಾಡದಲ್ಲಿ ಕಾಂ ಬ ಬೋರ್ಡನ್ನು ಕೈದು ಮಾಡಿದರು.

ಇಲ್ಲಿಯ ಕಾಂಗ್ರೆಸ ಕಮೀಟಿಯವರು ಪ್ರತಿದಿನ, ಸಭೆ, ಸುದ್ದಿ, ವ್ಯಾಖ್ಯಾನ ಮೊದಲಾದವುಗಳನ್ನು ಫಳಿಗಳ ಮೇಲೆ ಬರೆದು ಹಚ್ಚುತ್ತ ಇದ್ದಾರೆ. ಮೊನ್ನಿನ ದಿವಸವೂ ಅದೇ ಪ್ರಕಾರ ಬರೆದು ಹಚ್ಚಿದ್ದರು. ಅದು

ಇಂದು ಸಭೆ
ವಿಷಯ ಕೌನ್ಸಿಲ ಬಹಿಷ್ಕಾರ.
ಸ್ಥಳ:- ಜಜ್ಜಕೋರ್ಟ ಬೈಲು,
ವ್ಯಾಖ್ಯಾತರು:- ಶ್ರೀ ಕರಮರಕರ, ಹುಕ್ಕೇರಿಕರ
ವೇಳೆ:- ೬ಗಂಟೆ

ಅಂದಿನ ಪ್ರಾಯಿ ಸಂಜೆಯ ಬಹಾದ್ದೂರರು ತೆಗೆದ ಸೈಕಲ್ಲಾಕ್ಕಿ ಆರ್ಡರನ್ನದಂತೆ ಈ ಸಭೆಯ ಬರಹಗಳು ಅಂಟಿಸಬಾರದಂತೆ! ಅದ್ದರಿಂದ, ಇಲ್ಲಿಯ ಸ ಇನ್ಸಪೆಕ್ಟರರು ನಾಲ್ಕೈದು ಜನ ಬಿ ಡ್ರೆಸ ಪೋಲೀಸರೊಡನೆ ಬಂದು ಬೋರ್ಡ ಕಾಯದೆ ಮುರಿದ್ದಿದು ಅದನ್ನು ಹಸ್ತ ಮಾಡಿ ಹೊರಿಸಿಕೊಂಡು ಹೋದರು. ಕಾಂಗ್ರೆಸ ಕಮೀಟಿಯ ಮುಂದಿದ್ದ ಈ ಬೋರ್ಡು ಪೋಲೀಸ ಸ್ಟೇಶನಕ್ಕೆ ಹೋಗುವ ಪ್ರಯಾಣ ನಡೆಯಿಸಿದಾಗ್ಗೆ, ಇನ್ನೊಂದು ಬೋರ್ಡ ಗಾಂಧೀ ಚೌಕಿನಲ್ಲಿ ಕಟ್ಟಿದ್ದನ್ನು ನೋಡಿ ಈ ಕಾಯದೆಂದಿತು. ಹಾಗೂ ಬೋರ್ಡ ಪೋಲೀಸಸ್ವಾಧೀನದ ಕೂಡಲೆ ಇನ್ನೊಂದು ಬೋರ್ಡ ಅಲ್ಲೇ ಆಹ್ವಾನವನ್ನು ಸ್ವೀಕರಿಸಿತು. ಪೋಲೀಸರು ಇದನ್ನೇನೂ ಮಾಡಲಿಲ್ಲ. ಮೊದಲ ಬೋರ್ಡ ಪೋಲಿಸಸ್ವಾಧೀನವಾದಾಗ್ಗೆ ಬೀದಿಯಲ್ಲಿ ನೂರಾರು ಜನರಿದ್ದರು. ಅವರೆಲ್ಲ ಇದರ ಜಯಜಯಕಾರ ಮಾಡಿದರು.

ಶಿಕ್ಷಾ ಪೋಲೀಸರ ಕೊಡಬಾರದೆಂಬ ಠ

ಮಧ್ಯಪ್ರಾಂತದ ಬಡವರು ಜಂಗಲದ ರ, ಕಟ್ಟಿ ಮುಂತಾದ ಪಳ್ಳ ಮೇಲೆ ಕಾಯದೆ ಭಂಗದ ದೆಸೆಯಿಂದ ಶಿಕ್ಷಾಪೋಲೀಸರನ್ನು ಹೇರಿ, ಅವರ ಸಂಬಳವನ್ನು ದಂಡದಿಂದ ಪ್ರಜರ ಮೇಲೆ ಹೇರಿದ್ದಾರೆ. ಈ ದಂಡ ಕೊಡಬಾರದು; ಕಾಯದೆಭಂಗದ ಕೂಡ ಇದು ಕಾಯದೆಭಂಗವೆಂದು ಜನರ ನಿಶ್ಚಯ ಸಾರಿ,

ಮಿತ್ರಸಮಾಜಕ್ಕೆ ಎಚ್ಚರಿಕೆ.

—೦*೦—

ಹದಿನೈದು ದಿನಗಳಲ್ಲಿ ರಾಷ್ಟ್ರಕಾರ್ಯ ಮಾಡಿ, ಇಲ್ಲದಿದ್ದರೆ ಜೀವಕ್ಕೆ ಎರವಾಗುವಿರಿ

—(೦)—

ಕಾಂಗ್ರೆಸ ಕಮೀಟಿಯ ಮುಂದಿನ ಬೋರ್ಡ ಪೋಲೀಸಸ್ವಾಧೀನವಾದ ನಂತರ, ಜಜ್ಜಕೋರ್ಟ ಮೈದಾನದಲ್ಲಿ ಸಭೆಯಾಯಿತು. ಶ್ರೀ ಹುಕ್ಕೇರಿಯವರು ಬೋರ್ಡು ಜಪ್ತ ಮಾಡಿದ್ದನ್ನು ಹೇಳಿ, ಇನ್ನು ಮುಂದೆ ಸಾವಿರಾರು ಬೋರ್ಡುಗಳು ಈ ಕೆಲಸ ಮಾಡುವವೆಂದು ಹೇಳಿದರು. ಆ ಮೇಲೆ ಶ್ರೀ ಕರಮರಕರರು ಮಿತ್ರಸಮಾಜದ ಬಾಗಿಲಕ್ಕೆ ಹಚ್ಚಿದ್ದೊಂದು ಚೀಟಿಯ "ನಕಲು" ನ್ನು ಓದಿದರು. ಅದರಲ್ಲಿ ಅವಾಚ್ಯ ಶಬ್ದಗಳಿದ್ದು ಮಿತ್ರಸಮಾಜದವರು ಹದಿನೈದು ದಿನಗಳಲ್ಲಿ ರಾಷ್ಟ್ರಕಾರ್ಯಕ್ಕೆ ಪ್ರವೃತ್ತರಾಗದಿದ್ದರೆ, ಅವರಿಗೆ ಜೀವದ ಭಯ ಹಾಕಿದ್ದಾರೆ. ಕೆಳಗೆ "ಒಬ್ಬ ಕ್ರಾಂತಿಕಾರಕ" ಎಂಬ ಅಂಕಿತವಿದೆ. ಈ ಬಗೆಯ ಕೃತ್ಯವನ್ನು ಅವರು ನಿಷೇಧಿಸಿ ಕೌನ್ಸಿಲ ಬಹಿಷ್ಕಾರ ಹಾಕಲು ತಾವು ಮಾಡುವ, ಮಾಡಬೇಕೆನ್ನುವ ವಿಧಾನಗಳನ್ನು ಹೇಳಿದರು. ಆ ಮೇಲೆ ಸಭೆಯು ಮುಕ್ತಾಯವಾಯಿತು.

ಅಹಿಂಸೆಯ ಅಸಹಕಾರಕ್ಕಾಗಿ ಶಸ್ತ್ರ ಬಂದೂಕುಗಳ ಜಪ್ತಿ.

—:(*):—

ಪ್ರಸ್ತುತದ ಕಾಯದೆಭಂಗದಲ್ಲಿ ಸ್ವಯಂಸೇವಕರೂ, ಕಾಂಗ್ರೆಸದ ಅನುಯಾಯಿಗಳೂ ಪೋಲೀಸರು ತಲೆಯೊಡೆದರೂ, ಸುಮ್ಮನಿರುವರು. ಅವರ ಮೇಲೆ ಕಯ್ಯೆತ್ತಬೇಕೆಂದು ಮನಸ್ಸಿನಲ್ಲಿ ಸಹ ಒಲ್ಲದವರು. ಶಾಲೆಯಲ್ಲಿ ಪಂಡಿತರು ಹುಡುಗರು ಹೊಡೆಯುವಂತೆ ಪೋಲೀಸರ ಉಂಡಾಟಿಕೆ ನಡೆದಿದೆ. ಆದರೂ ಇವರ ಧೈರ್ಯದಿಂದ ಸರಕಾರದವರು ಬಹುವಾಗಿ ಹೆದರಿಕೊಂಡಿದ್ದಾರೆ. ಕಾಂಗ್ರೆಸದ ಮುಖಂಡರು ಸಾಮಾನ್ಯರಲ್ಲ; ಹೆಸರಾದ ಪ್ರತಿಷ್ಠಿತರು. ಶಸ್ತ್ರ ಕಾಯುವ ವಿಷಯದಲ್ಲಿ ಈ ಪರ್ಯಂತರ ಸರಕಾರದ ನಂಬಿಗೆಗೆ ಪಾತ್ರರಾದಂಥವರು ಅಂತೇ ಇವರಿಗೆ ಶಸ್ತ್ರ, ಬಂದೂಕುಗಳ ಪರವಾನಿಗಿ ಕೊಟ್ಟಿರುತ್ತದೆ. ಆದರೆ ಈಗ ಮಾತ್ರ ಇವರ ಮೇಲಿನ ನಂಬಿಗೆಯು ಹಾರಿ ಹೋಯಿತು. ಇವರಲ್ಲಿದ್ದ ಶಸ್ತ್ರಗಳನ್ನೆಲ್ಲ ಜಪ್ತ ಮಾಡುವ ಕೆಲಸವು ಒತ್ತರದಿಂದ ನಡೆದಿದೆ. ಬಂಗಾಲದಲ್ಲಿ ೧೯೩೫ ಆಯುಧಗಳನ್ನು ಜಪ್ತ ಮಾಡಿದ್ದಾರೆ, ದೇಶದಲ್ಲಿ ಸಶಸ್ತ್ರ ಬಂಡಾಯ ಏಳುವದೆಂದು ಹೆದರಿಕೊಂಡು ಇವುಗಳ ಜಪ್ತಿಯನ್ನು ಮಾಡಿದ್ದೀರಾ ಎಂದು ಕೌನ್ಸಿಲದಲ್ಲಿ ಪ್ರಶ್ನ ಕೇಳಲು ಹೋಮ ಮೆಂಬರರು ಉತ್ತರವನ್ನೇ ಕೊಡಲಿಲ್ಲ. ಬೋಗೊಂಡು ಒಗೊಂಡು ಬುದ್ಧಿಯುಳ್ಳವರ ಬಾಯಿಯಿಂದ ಉತ್ತರ ಹೊರಡುವದು ಹೇಗೆ!

ಜನರು ಪಿಕೆಟಿಂಗ ಮಾಡಲಿ.

—(೦)—

ಪೋಲೀಸರು ಬೇಡ.

—(೦)—

ಮುಂಬಯಿಯಲ್ಲಿ ದಿನಾಲು ಏಳೆಂಟು ನೂರು ಜನರು ವಿಲಾಯತಿಯ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಾರೆ. ಪೋಲೀಸರು ಒಡಕ ಗಡಿಗೆಯಲ್ಲಿ ನೊಣ ಹೊಕ್ಕಂತೆ ವರ್ತಿಸಿ, ಶಾಂತರೀತಿಯಿಂದ ನಡೆದ ಪಿಕೆಟಿಂಗಕ್ಕೆ ತೊಂದರೆ ಕೊಡುತ್ತಾರೆ. ಇವರ ಪೀಡೆ ತಪ್ಪಿಸಿರೆಂದು ೪೮೦ ಜನ ಅಂಗಡಿಕಾರರು ಪೋಲೀಸ ಕಮೀಶನರಸಾಹೇಬರಿಗೆ ಪತ್ರ ಬರೆದಿದ್ದಾರೆ. ಈ ಪತ್ರದಲ್ಲಿ ಇವರು ಅನ್ನುವದೇನಂದರೆ—

"ನಮ್ಮ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವಾಗ ಪೋಲೀಸರು ಅವರನ್ನು ಹಿಡಿಯುವ ಕಾರಣವಿಲ್ಲ. ಏನಾದರೂ ಮತಭೇದವಾದರೆ— ನಾವು ಅದನ್ನು ಸಮಾಧಾನದಿಂದ ಬಗೆ ಹರಿಸಿಕೊಳ್ಳುವೆವು. ಸ್ವಯಂಸೇವಕರಿಂದ ನಮಗಾಗಲಿ, ಗಿರಾಕಿಗಳಿಗಾಗಲಿ, ಇವ್ವಾರಿಗಾಗಲಿ ತ್ರಾಸವಾಗಿಲ್ಲ. ಆದ್ದರಿಂದ ನಮ್ಮ ಮಾರ್ಕೇಟಿನ ಮುಂದಿದ್ದ ಪೋಲೀಸರನ್ನು ತೆಗೆಯಿರಿ. ನೀವು ಪೋಲೀಸರನ್ನು ತೆಗೆಯದಿದ್ದರೆ— ನಾವು ನಮ್ಮ ಮಾರ್ಕೇಟಿಗೆ ಬೀಗ ಹಾಕುವೆವು. ಉಳಿದ ಪೇಟೆಗಳೂ ಬಂದಾಗುವವು. ಇದರಿಂದ ವ್ಯಾಪಾರಸ್ಥರಿಗೆಲ್ಲ ಭಯಂಕರ ಹಾನಿಯಾಗುವದು."

ಲೋಕರಕ್ಷಕರು ಭಕ್ಷಕರೆಂಬ ಆರೋಪಕ್ಕೀಡಾಗದೆ, ವರ್ತಕರ ಕೋರಿಕೆಯಂತೆ ಪೋಲೀಸರನ್ನು ತೆಗೆಯುವದೇ ಉತ್ತಮವು.

ವನಪರ್ತಿಯ ದೊರೆತನದ ದಾವೆ.

——(೦)——

ಹೈದರಾಬಾದ ಇಲಾಖೆಯಲ್ಲಿ ವನಪರ್ತಿಯು ಗದ್ವಾಲಿಯಂತೆ ಪುರಾತನದ ಸಂಸ್ಥಾನವು. ಇದರ ಒಡೆಯರಾರೆಂಬ ಬಗ್ಗೆ ಕಲಹ ಹುಟ್ಟಿದ್ದು, ಒಬ್ಬ ದಾವೆಗಾರರಾದ ಶ್ರೀ ಅಲ್ಪವಯಿ ರಾಜಾರಾಮೇಶ್ವರರಾಯರ ವತಿಯಿಂದ ಕೆಲಸ ನಡಿಸಲು ಸರ ಸಪ್ರುಸಾಹೇಬರು ಹೈದರಾಬಾದಿಗೆ ಹೋಗಿದ್ದಾರೆ. ಪ್ರತಿಪಕ್ಷಿಯು ರಾಜಾ ರಾಮದೇವರಾಯರೆಂಬವರಿದ್ದು ಇವರ ವತಿಯಿಂದ ಬ್ಯಾರಿಸ್ಟರ ನಾಯಕರು ಕೆಲಸ ನಡಿಸುತ್ತಿದ್ದಾರೆ. ವಿಚಾರಣೆಯು ಅಲ್ಲಿಯ ಹಾಯಕೋರ್ಟಿನಲ್ಲಿ ನಡೆದಿದೆ.

ಶಿರ್ಸಿ ತಾಲೂಕಿನಲ್ಲಿ ಕಾಯದೆಭಂಗದ ಕೋಲಾಹಲ.

ಸಾವಿರಾರು ಸ್ತ್ರೀಪುರುಷರು ವನಗಾವಲದ ಕಾಯದೆ ಮುರಿದರು.

ಅನೇಕರ ದಸ್ತಗಿರಿ ಮತ್ತು ಶಿಕ್ಷೆ.

ಧಾರವಾಡದ ಡಾಕ್ಟರ ಕಬ್ಬೂರರು ಡಿಕ್ಟೇಟರರಾದರು

——(೦)——

ಶಿರ್ಸಿ ತಾಲೂಕಿನಲ್ಲಿ ಅಂಕೋಲೆಯ ಉಪ್ಪಿನ ಕಾಯದೆಭಂಗದಂತೆ, ವನಗಾವಲದ ಕಾಯಿದೆಭಂಗ ನಡೆದಿದೆ. ಸಾವಿರಾರು ಗಂಡಸರು, ಅವರಂತೆ ನೂರಾರು ಹೆಂಗಸರು ಕೊಡ್ಲಿ ಕುಡಗೋಲು ತಕ್ಕೊಂಡು ಜಂಗಲದಲ್ಲಿ ಹೊಕ್ಕು ಸರಕಾರೀ ಗಿಡಗಳನ್ನು ಕಡಿಯುವರು. ಹುಲ್ಲು ಮತ್ತು ಕಟ್ಟಿಗೆಯನ್ನು ಮನೆಗೆ ತರುವರು. ಗಂಧದ ಗಿಡ ದೊರೆತಂತೂ ಆನಂದವೇ ಆನಂದ!

ಈ ಸತ್ಯಾಗ್ರಹಿಗಳನ್ನು ಪೋಲೀಸರು ಹಿಡಿಯುವದು, ಮ್ಯಾಜಿಸ್ಟ್ರೇಟರು ಅವರಿಗೆ ಶಿಕ್ಷೆ ಕೊಡುವದು ನಿತ್ಯಕೃತ್ಯವಾಗಿರುವದು. ಹಿಂದುಸ್ಥಾನಿ ಸೇವಾದಲದ ಓವರ ಸೀಯರರಾದ ಶ್ರೀ. ವೆಂಕಟರಾಮನವರು ಅಲ್ಲಿಯ ಡಿಕ್ಟೇಟರರಾಗಿದ್ದರು. ಪೋಲೀಸರು ಮೊನ್ನಿನ ದಿವಸ ಇವರನ್ನು ಹಿಡಿದ ವರ್ತಮಾನವು ಇಲ್ಲಿಗೆ ಬಂದ ಕೂಡಲೆ, ಇಲ್ಲಿಂದ ಡಾಕ್ಟರ ಕಬ್ಬೂರರವರು ಅಲ್ಲಿಗೆ ಡಿಕ್ಟೇಟರರಾಗಿ ಹೋಗಿದ್ದಾರೆ.

ಶ್ರೀ ಹ್ವ. ಹ್ವ. ಪಾಟೀಲರು ಸ್ವಯಂಸೇವಕರಾದರು.

——(೦)——

ಬೆಳಗಾವಿಯಲ್ಲಿ ಲಿಂಗಾಯತ ಎಜ್ಯುಕೇಶನಲ ಸೊಸಾಯಿಟಿಯಲ್ಲಿ ಆಜೀವ ಸಭಾಸದರಾಗಿದ್ದ, ಮತ್ತು ಹಿಂದಕ್ಕೆ ಅಸೆಂಬ್ಲಿಯ ಚುನಾವಣೆಗಾಗಿ ಉಮೇದವಾರರಾಗಿದ್ದ ಶ್ರೀ. ಹ್ವ. ಹ್ವ. ಪಾಟೀಲರು, ಕಾಂಗ್ರೆಸದ ದೀಕ್ಷೆ ಕೈಕೊಂಡು, ಅದರ ಸಿಪಾಯಿಯೆನಿಸುವಂತೆ ಸ್ವಯಂಸೇವಕ ಪ್ರತಿಜ್ಞಾಪತ್ರಿಕೆಯ ಮೇಲೆ ಸಹಿ ಮಾಡಿದರು. ಇವರ ಅನುಕರಣವನ್ನು ವೀರಶೈವರೂ, ಬೇರೆ ಬ್ರಾಹ್ಮಣೇತರರೂ ಮಾಡುವರೆಂದು ಕಾಂಗ್ರೆಸ ಕಮೀಟಿಯವರು ಅಪೇಕ್ಷಿಸುತ್ತಾರೆ.

ಪಂಡಿತ ಮಾಲವೀಯರವರು ಸೂರತಕ್ಕೆ ಹೋದರು. ಆಗ ಇವರ ಸನ್ಮಾನಕ್ಕಾಗಿ ಲಕ್ಷ ಜನರ ಮೆರವಣಿಗೆ ಹೊರಟಿತ್ತು. ಇವರ ದರ್ಶನ ತಕ್ಕೊಳ್ಳಲು ಬಹಳ ದೂರದೂರಿನ ಜನರು ಬಂದಿದ್ದರು

ವಂದೇ ಮಾತರಂ

—೦*೦—

ಬ್ಯಾಡಗಿಯ ಸುತ್ತು ಮತ್ತು ಹಳ್ಳಿಗಳಲ್ಲಿ ಮಹಾತ್ಮಾಜಿಯವರ ಸಂದೇಶವನ್ನು ಪ್ರಚಾರ ಮಾಡುವದಕ್ಕೋಸ್ಕರ ಸೇವಾ ಪಥಕವು ತಾ|| ೪-೮-೩೦ ಕ್ಕೆ ಸ್ಥಾಪಿಸಲ್ಪಟ್ಟಿದೆ. ಸದರ ಪಥಕದವರು ತಮ್ಮ ಕಾರ್ಯವನ್ನು ಎಡಬಿಡದೇ ಸಾಗಿಸಿರುವರು.

ಮೊದಲನೇವಾರ, ಹಂಸಭಾವಿ, ತುಮರಿಕೊಪ್ಪ, ಸೂಡಂಬಿ, ಸಾತೇನಹಳ್ಳಿ, ಚಿಕ್ಕೇರೂರಲ್ಲಿ ಈಚಲಗಿಡಗಳನ್ನು ತಿಂದಿ ಕಟ್ಟಲಿಕ್ಕೆ ಕಂಟ್ರ್ಯಾಕ್ಟರರಿಗೆ ಮಾರಬೇಡಿರಿ ಅಂತಾ ವಿನಂತಿ ಪತ್ರಿಕೆಗಳನ್ನು ಹಚ್ಚಿದ್ದಲ್ಲದೇ ಹಿರೇ ಆಣಜಿ ರೈತಬಾಂಧವರಿಂದಾ ಮಾರುವದಿಲ್ಲವೆಂಬ ಬಗ್ಗೆ ಪ್ರತಿಜ್ಞಾಪತ್ರ ಸಹ ಬರಸಿಕೊಂಡು ಬಂದಿರುವರು. ಹಿರೇಕೆರೂರ ಹಿರೇ ಅಣಜಿಯಲ್ಲಿ ವ್ಯಾಖ್ಯಾನ ಕೊಟ್ಟರು.

ಈ ವಾರ ಕಡಕೋಳ, ಬಂಗರಗಟ್ಟಿ, ಮಾಸಣಗಿ, ಕಡೂಡಿ, ಕಲ್ಲೇದೇವರ ಮತ್ತು ಕನವಳ್ಳಿ ಮುಂತಾದ ಊರುಗಳಲ್ಲಿ ವ್ಯಾಖ್ಯಾನ ಕೊಟ್ಟು ಪಟಾಕ್ಷಿ ವಗೈರೆ ಮದ್ದಿನ ಸಾಮಾನಕ್ಕೆ ವ್ಯರ್ಥವಾಗಿ ಹಣ ಖರ್ಚ ಮಾಡಬಾರದಂತಾ ವಿನಂತಿಪತ್ರಿಕೆಗಳನ್ನು ಹಂಚಿದರು. ಬಂಗರಗಟ್ಟಿ ಮಾಸಣಗಿ ಕಡೂಡಿ ಕಲ್ಲೇದೇವರ ಮತ್ತು ಕನವಳ್ಳಿ ಈ ಊರುಗಳಲ್ಲಿ ಕಾಯದೇಭಂಗದ ಉಪ್ಪು ಮಾರಿದರು. ಕಡೂಡಿ ಕಲ್ಲೇದೇವರ ಮತ್ತು ಕನವಳ್ಳಿಯಲ್ಲಿ ಹೆಂಗಸರು ಸಹ ಉಪ್ಪು ಕೊಂಡರು. ಹಳ್ಳಿಗಳಲ್ಲಿ ಪಟ್ಟಿ ಫಂಡಿನ ವಸೂಲಿ ೧೭||| — ||| ಆಗಿದೆ.

ತಾ|| ೨೮-೭-೩೦ ಕ್ಕೆ ನಡೆದ ಟಕಲಿಯ ಮೇಳಾಟದಲ್ಲಿ ಶ್ರೀ ಶಿವಬಸಪ್ಪಾ ಕುರುಬಗೊಂಡ, ಪಂಚಯ್ಯಾ ಮಾದಾಪೂರಮಠ ಮತ್ತು ವಿಠ್ಠಲ ಚಾದ್ರಿ ಇವರಿಗೆ ಕಾಂಗ್ರೆಸ ಕಮಿಟಿಯವರು ಬೆಳ್ಳಿ ಮೆಡಲುಗಳನ್ನು ಕೊಟ್ಟಿರುವರು.

ನೋಟೀಸು

—(೦)—

ರಾ|| ಶಿವಪ್ಪಾ ತಂದಿ ಹನಮಪ್ಪಾ ಹಡಪದ ಸಾ|| ಸಿಸವಿಹಳ್ಳಿ ಹಾಲಿವಸ್ತಿ ಮುಳಗುಂದ ತಾಲೂಕು ಗದಗ ಇವನಿಗೆ—

ಕೆಳಗೆ ಸಹಿ ಮಾಡಿದವಳು ತಿಳಿಸುವದೇನಂದರೆ ನೀನು ನನ್ನ ಮದುವೆಯ ಗಂಡನಿದ್ದು ಈಗ ನನ್ನ ಲಗ್ನವಾಗಿ ಅಜಮಾಸ ೧೦-೧೨ ವರ್ಷಗಳಾದವು. ನಾನು ನೆರತು ಕೂಡಲೇ ನೀನು ನನ್ನನ್ನು ಕರಕೊಂಡು ಹೋಗಿ ೫-೬ ತಿಂಗಳು ಇಟ್ಟುಕೊಂಡು ಆಮೇಲೆ ನನ್ನ ಮೈಮೇಲಿನ ಎಲ್ಲಾ ಆಭರಣಗಳನ್ನು ಕಸಕೊಂಡು ಹೊರಗೆ ಹಾಕಿದಿ. ಆಲಾಗಾಯಿತು ಇಲ್ಲಿಯವರೆಗೆ ನಾನು ನನ್ನ ತವರಮನೆಯ ಊರಲ್ಲಿಯೇ ಬೇರೆ ಒಂದು ಖೋಲಿ ಹಿಡಕೊಂಡು ಇರಲಿಕ್ಕೆ ಹತ್ತಿರುತ್ತೇನೆ. ಈಗ ೭-೮ ವರ್ಷಗಳವರೆಗೆ ನನ್ನ ಉಪಜೀವನವನ್ನು ಎರಡನೇದವರಲ್ಲಿ ಸಾಲಾ ತಂದು ನಡಿಸಿಕೊಂಡಿದ್ದೇನೆ. ಆ ಸಾಲವು ಈಗ ೩೦೦ ರೂಪಾಯಿಗಳು ಆಗಿರುತ್ತವೆ. ಹೀಗೆ ಮಾಡುತ್ತಾ ಹೋದರೆ ಮುಂದೆ ನನಗೆ ಸಾಲವು ಹುಟ್ಟುವದಿಲ್ಲ. ಉಪಜೀವನವು ನಡೆಯುವದಿಲ್ಲ. ಕಾರಣ ನೀನು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಒಂದು ಆ ಎಲ್ಲಾ ಸಾಲಾ ತೀರಿಸಿ ನನ್ನನ್ನು ಕರಕೊಂಡು ಹೋಗಿ ಬಾಳ್ವೆ ಮಾಡದಿದ್ದರೆ ನಾನು ಎರಡನೇದವನನ್ನು ಉಡಕೀ ಮಾಡಿಕೊಂಡು ನನ್ನ ಉಪಜೀವನವನ್ನು ಸಾಗಿಸಿಕೊಳ್ಳುತ್ತೇನೆ. ಇದೇ ನೋಡಬೇಕೆಯೆಂದು ತಿಳಿಯಬೇಕು. ತಿಳಿಯುವದು ತಾ|| ೮-೮-೧೯೩೦ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಫಕೀರವ್ವಾ ಕೋಂ ಶಿವಪ್ಪ ಹಡಪದ ಸಾಕೀನ ಸೊರಟೂರು ಇಕಿ ಮಾಡಿದ್ದು ಇರುತ್ತದೆ

ನಕಾಶೆ ಸಹಿತ

ಉರ್ದು— ಧಾರವಾಡ ಜಿಲ್ಹೆಯ ಭೂಗೋಲ

ಬೆಲೆ ೨ ಆಣೆ

ಉರ್ದು ವಿಜಾಪೂರ ಜಿಲ್ಹೆಯ ಭೂಗೋಲ

ಬೆಲೆ ೪ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲವು ಪ್ರಸಿದ್ಧವಾಗಿಲ್ಲ. ಇದರಲ್ಲಿ ಎಂಟೂ ಜಿಲ್ಹೆಯ ಪೂರ್ಣ ಮಾಹಿತಿ ಇರುವದು. ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಯೋಗ್ಯ ಕಮೀಶನ ದೊರೆಯುವದು.

ವಿಳಾಸ: — ಎಮ್. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಮಾಸ್ತರ
ಸ್ಕೂಲ ನಂಬರ ೧, ಗದಗ ಬೆಟಗೇರಿ

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಓಳಿಗೆ ಒಂದೂವರಿ ಆಣೆ. ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ. ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಹಲಿಗೆ ಮರಾಠಿ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ. ದಪ್ಪ ಕಾಲಮಿನ ಓಳಿಗೆ ಇಮ್ಮಡಿ ಚಾರ್ಜ. ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚ್ಚಿ ಜೋಡಿಸುವದನ್ನು ಕಲಿಯುವ [illegible]



[illegible] ಗಳಿಂದಲು ಜ [illegible] ಗೇಶನಿ. ಒಂದ [illegible] ಲಿಕೊಂಡು ಬರು [illegible] ಮಾಡಿಕೊಟ್ಟ [illegible] ನ್ನು ತೆರೆದಿದ್ದೇನೆ. [illegible] ಮೊದಲಿಗೆ ಕಟ್ಟು [illegible] ದರ್ದಿನಲ್ಲಿ ಉ [illegible] ಸುವದು ನಿಮ್ಮ [illegible] ದಾಖಲ ಮಾಡಿ [illegible] ವಿದ್ಯಾರ್ಥಿಗಳನ್ನು [illegible] ಕಲಿಸುವರ [illegible] ಜಾಹೀರಾತು ಕೊ [illegible] ಮಾಡಿ [illegible] ಮಾಹಿತಿ ಸಹ ಕ್ಲಪ್ತ [illegible]

[illegible] ಎಸ್. ಇಟಗಿ.
[illegible] ಧಾರವಾಡ

ಜಾಹೀರ [illegible] ನೋಟೀಸು

[illegible]

[illegible] ತಿಳಿಸುವದೇನಂದರೆ—

ನಮ್ಮ ಅಂಗಡಿಯಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು [illegible] ಹೊನ್ನಿ ಹೆಬ್ಬಿ [illegible] ತಿರ ನಮೂನೆಗಳು

ಸಾಗವಾನಿ ೧೦.೫ ವ ಸಾಗವಾನಿ (೬) ಫೂಟಿನ ಜಪ್ಪ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂವರಿಪು ವ ಶಿಲಿಂಗು ತೈಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಬಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ್,
ಮಾರ್ಕೇಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಆತ್ಮಾಚಾರ್ಯ ಬಾಲಾಚಾರ್ಯ ಹೊಕ್ಕೇರಿ.

ವರ್ಷ ೧೧) ಧಾರವಾಡ ಶನಿವಾರ ತಾರೀಖು ೨೩ ನೇ ಅಗಸ್ಟ ೧೯೩೦ (ಸಂಚಿಕೆ ೧೪೩

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ ಇದ್ದು ಮಾರಾಟಕ್ಕೆ ಸಿದ್ಧ ಮಾಡುತ್ತೇವೆ ಇದರಲ್ಲಿ ಮಾ॥ ಶ್ರೀ. [illegible] ಸಬಜಡ್ಜ, ಶ್ರೀ ಆರೂಢ ಸ್ವಾಮಿಗಳ [illegible] ಸರದಾರ ಶ್ರೀ ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುಖ್ಯರ ಜಬಾನಿಗಳನ್ನೂ ಕೊಟ್ಟಿರುತ್ತದೆ. ಬಹಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಪ್ರತ್ಯೇಕವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆದಿದ್ದು ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕಡಿಮೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕಾಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಕಾದವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಕಾದವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವ ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ ಇವಲ್ಲದೆ, ಇನ್ನೂ ಬೇರೆ ಮುಖಂಡರಾದ ಸ್ವಾ. ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಥೋಕ ತಕ್ಕೊಳ್ಳುವವರಿಗೆ ನೂರಕ್ಕೆ ೨೫ ಕಮೀಶನ ದೊರೆಯುವದು.

ಡಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ
ಸ್ಟೇಶನ ರೋಡ ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

[illegible] ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೬೨ ಶ್ರಾವಣ ವದ್ಯ ೩೦

ಮದ್ರಾಸದ ಚುನಾವಣೆ.

ಬ್ರಾಹ್ಮಣೇತರರಲ್ಲಿಯೇ ಇಬ್ಬಣ.

—(೦)—

ಮದ್ರಾಸ ಇಲಾಖೆಯಲ್ಲಿ ಕಾಂಗ್ರೆಸ್ಸಿಕ್ಕೆ ಸಂಬಂಧವಿದ್ದಂಥ ಬ್ರಾಹ್ಮಣೇತರರನ್ನು ಹೊರತಪಡಿಸಿ ಕೌನ್ಸಿಲಕ್ಕೆ ಹೇಗೆ ಕರ್ತವ್ಯ ಮಾಡಬೇಕೆನ್ನುವಂಥವರಲ್ಲಿ ಇಬ್ಬಣವಾಗಿದೆ. ಜಸ್ಟಿಸ ಮತ್ತು ಮಂತ್ರಿ ಪಕ್ಷ!! ಜಸ್ಟೀಸದವರು ಬ್ರಾಹ್ಮಣೇತರವೆಂಬ ಮೊಹರು ಮುದ್ರೆ ಒತ್ತಿಕೊಂಡವರು. ಮಂತ್ರಿಗಳು ರಾಷ್ಟ್ರೀಯರೆಂಬ ಅಭಿಮಾನ ಪಡೆದವರು. ಇವರು ಮಂತ್ರಿಪದಾರೂಢರಾಗುವ ಮೊದಲು ಅಂದರೆ ನೂರಾರು ವರ್ಷಗಳ ಹಿಂದೆ ರಾಷ್ಟ್ರೀಯರಾಗಿದ್ದರು. ಮಂತ್ರಿಯಾದ ಕೂಡಲೆ, ಆ ರಾಷ್ಟ್ರೀಯತ್ವವೆಲ್ಲ ಹೋಯಿತು. ಆದರೂ ಆ ಹೆಸರು ಮಾತ್ರ ಬಿಡುವದಿಲ್ಲ. ಮಲಸರ್ಜನೆಂದು ಹೆಸರು ಇಟ್ಟುಕೊಳ್ಳುವಂತೆ!!

ಜಸ್ಟೀಸ ಪಕ್ಷದವರಲ್ಲಿ ಮೊದಲಿನ ಹುರುಳು ಉಳಿದಿಲ್ಲ. ನಾಯಿಯ ಛತ್ರಿಗೆಯಂತೆ ಬೆಳೆದ ಇವರ ಮರವು ಧಪ್ಪನೆ ಕಡಕೊಂಡು ಬಿದ್ದಿತು. ಇವರೊಳಗೆ ವ್ಯಕ್ತಿದ್ವೇಷ, ವಿಚಾರದ್ವೇಷ, ಕುಲದ್ವೇಷವು ದಿನವೊಂದಕ್ಕೆ ಹೆಚ್ಚುತ್ತಿರುವದು. ತಾವು ಉದಾರರಾದರೆ ಉದಾರ ಮತದವರಾದಂಥ ಬ್ರಾಹ್ಮಣರನ್ನು ತಮ್ಮ ಸಂಗಡದಲ್ಲಿ ಸೇರಿಸಿಕೊಳ್ಳುವ ಯುಕ್ತಿ ತೆಗೆದು, ಒಂದು ವರ್ಷದ ತನಕ ಕಡುತರವಾದ ಚರ್ಚೆ ಮಾಡಿ, ಹೋದ ತಿಂಗಳಲ್ಲಿ ಬ್ರಾಹ್ಮಣರನ್ನೂ ತಮ್ಮ ಕೂಟದಲ್ಲಿ ಸೇರಿಸಿಕೊಳ್ಳಬೇಕೆಂಬ ಠರಾವು ಮಾಡಿದರು. ಆದರೆ ಆ ಠರಾವಿನಂತೆ ಕೃತಿಮಾತ್ರ ಆಗಲಿಲ್ಲ. ಕೌನ್ಸಿಲ ಚುನಾವಣೆಯಲ್ಲಿ ಪ್ರತಿಯೊಂದು ಜಿಲ್ಹೆಯಲ್ಲಿಯೂ ಉಮೇದವಾರರನ್ನು ನಿಲ್ಲಿಸಿದ್ದಾರೆ. ಇವರಲ್ಲಿ ಒಬ್ಬನೂ ಬ್ರಾಹ್ಮಣನಿಲ್ಲ. ಮತ್ತು ಒಬ್ಬ ಬ್ರಾಹ್ಮಣನಾದರೂ, ನಿಮ್ಮ ಸಂಘದಲ್ಲಿ ಸೇರುತ್ತೇನೆ. ನನ್ನನ್ನು ತೆಕ್ಕೊಳ್ಳಿರೆಂದು ಹೇಳಲಿಲ್ಲ; ಹೇಳಿಕೊಳ್ಳಲಿಲ್ಲ. ಹೀಗಾಗಿ ಇವರ ಉಮೇದವಾರರೆಲ್ಲ ನಾಯಡು, ರಡ್ಡಿ, ಮೊದ್ಲಿಯಾರ, ಪಿಳ್ಳೆ, ಮುದಲಿಯಾಳಿ, ನಾಡರ ಮೊದಲಾದವರೇ ಆಗಿದ್ದಾರೆ.

ಇವರ ತರುವಾಯ ರಾಷ್ಟ್ರೀಯರೆಂಬ ಹೆಸರಿಟ್ಟುಕೊಂಡು, ಜನರ ಕಣ್ಣಲ್ಲಿ ಧೂಳ ಚಲ್ಲಬೇಕೆನ್ನುವಂತಿರುವ ಮಂತ್ರಿಗಳು ತಮ್ಮ ಪಕ್ಷದಿಂದ ಇಲಾಖೆಯ ತುಂಬ ಉಮೇದವಾರರನ್ನು ನೇಮಿಸಿದ್ದಾರೆ. ಮಂತ್ರಿ ಮಂಡಲದಲ್ಲಿ ಇಬ್ಬರು ಬ್ರಾಹ್ಮಣೇತರರಾದ ರಾಷ್ಟ್ರೀಯರೂ ಬ್ರಾಹ್ಮಣರಾದ ಶ್ರೀ ಸೇತುರತ್ನಮ ಅಯ್ಯರರೂ ಮಂತ್ರಿಗಳಾಗಿದ್ದಾರೆ. ಒಬ್ಬ ಬ್ರಾಹ್ಮಣನಿಲ್ಲದೆ ಇವರ ದಿವಾನಗಿರಿ ಸಾಗದಾಗಿರುತ್ತದೆ. ಆದುದರಿಂದ ಈ ಪಕ್ಷದಲ್ಲಿ ಕೆಲವು ಬ್ರಾಹ್ಮಣರು ಚುನಾವಣೆಗೆ ಉಮೇದವಾರರಾಗಿದ್ದಾರೆ. ಆದರೆ ಕಾಂಗ್ರೆಸ ಪಕ್ಷದವರಲ್ಲಿ ನವಾಳ ಕೋಟಿಗೆ ಸೇರಿದವರು.

ಈ ತೊಡಕಿನಲ್ಲಿ, ಒಬ್ಬರ ಮೇಲೊಬ್ಬರ ಒತ್ತಿಯಲ್ಲಿ ಒಂದು ಚಮತ್ಕಾರದ ಸಂಗತಿಯು ಸಂಭವಿಸಿದೆ. ಬ್ರಾಹ್ಮಣೇತರರಿಗೆ ಜಸ್ಟೀಸವೆಂಬುದು ಮುಖಪತ್ರವು. ಇದು ಇಂಗ್ರೇಜಿಯಲ್ಲಿ ಹೊರಡುತ್ತದೆ. ಇದರದೇ ಒಂದು ಮರಿ ದ್ರಾವಿಡಿಯನ್ನವೆಂಬುದು ಅರವಿನಲ್ಲಿ ಪ್ರಕಟವಾಗುವದು. ಆದರೆ ಈಗ ದ್ರಾವಿಡಿಯನ್ನವು ಬ್ರಾಹ್ಮಣೇತರರ ದೃಷ್ಟಿಯಿಂದ ಸಾಯನ ಪೆಟ್ಟಿಯಿಂದ ಕರೇತ್ತರ ಮತ್ತು ರಾಷ್ಟ್ರೀಯರ ವಿಚಾರದಿಂದ ಪ್ರಲ್ಹಾದನೂ ಜನಿಸಿದಂತಾಗಿದೆ. ದ್ರಾವಿಡಿಯನ್ನವು ಜಸ್ಟೀಸದ ಪರ್ದೆ ಹರಿದು ಹಾಕಿ, ಅಥವಾ ಅದರ ಕುಲ ಬಿಟ್ಟು ಸಂಪೂರ್ಣ ಸ್ವತಂತ್ರವಾಗಿ ರಾಷ್ಟ್ರೀಯರನ್ನು ಕೂಡಿಕೊಂಡಿದೆ. ಹೀಗೆ ಕೂಡಿದರೂ ಒಂದು ರೀತಿಯಿಂದ ಕ್ಷಮ್ಯವು. ಆದರೆ ಅದರ ವರ್ತನವು ಒಳ್ಳೇ ಸೋಜಿಗದ್ದಾಗಿದೆ. ಇಂಗ್ರೇಜಿ ಸರಕಾರದ ಲೆಖ್ಖಪತ್ರಗಳಲ್ಲಿ, ಜಾತಿಭೇದದ ವರ್ಣಾಚಾರದಲ್ಲಿ ಬ್ರಾಹ್ಮಣರ ಹೊರ್ತು ಉಳಿದವರನ್ನು ಶೂದ್ರರಲ್ಲಿ ಎಣಿಸಿದ್ದಾರೆ. ಜಸ್ಟೀಸ ಮತ್ತು ದ್ರಾವಿಡನ್ನವು ನಾವು ಶೂದ್ರರಲ್ಲ; ವೈಶ್ಯ, ಕ್ಷತ್ರಿಯ, ದ್ರಾವಿಡಿ, ಆದಿದ್ರಾವಿಡಿ ಎಂದು ಇವರೆಗೆ ವಾದಿಸುತ್ತಾ ಬಂದವು. ಆದರೆ ಈ ದ್ರಾವಿಡಿಯನ್ನವು ತಾವೆಲ್ಲರೂ ಶೂದ್ರರೇ ಎಂದು ಸಾರಲಾರಂಭಿಸಿದೆ. ಬರೇ ಬಾಯಿ ಮಾತು ಹೇಳದೆ, ಪ್ರಮಾಣಗಳನ್ನೂ, ತಮ್ಮವರೇ ಬರೆದಿಟ್ಟ ವಚನಗಳನ್ನೂ ಅನೇಕಾನೇಕವಾಗಿ ತೋರಿಸಲಾರಂಭಿಸಿದೆ. ಎರಡೂ ಪಕ್ಷಗಳ ನಡುವೆ ವೈರಿಗಳಂತೆ ನಡೆದ ಟೀಕೆ ಪ್ರತಿಟೀಕೆಗಳು ಯಾವ ಪರಿಣಾಮ ಹೊಂದುವವೆಂಬದನ್ನು ಮದ್ರಾಸ ಪ್ರಾಂತದವರು ಎದುರುನೋಡುತ್ತಿದ್ದಾರೆ.

ನಾಮದಾರ ಗವ್ಹರ್ನರಸಾಹೇಬರು ನಾಸಿಕಕ್ಕೆ ಹೋಗಿದ್ದಾರೆ. ಅಲ್ಲಿಯ ಕಾಂಗ್ರೆಸದವರು ದಾರಿಗುಂಟ ಕರೇ ನಿಶಾನೆ ಹಿಡಕೊಂಡು ನಿಂತಿದ್ದರು.

ಶಿರಸಿಯ ಸತ್ಯಾಗ್ರಹವು ಕೊನೆಗೆ ಉಗಮ ಹೊಂದಿತು.

—(೦)—

ಹೆಂಗಸರು ಗಂಡಸರ ಹಣೆಗೆ ಕುಂಕುಮ ತಿಲಕ ಹಚ್ಚಿದರು.

—( )—

ಕಯ್ಯಲ್ಲಿ ಬಳೇ ತೊಡಿಸಿದರು

ಶಿರಸಿಯ ಸತ್ಯಾಗ್ರಹವು ಮೊದಲು ಹೇಗೆ ಉಗಮ ಹೊಂದಿತೆಂಬುದನ್ನು, ಶ್ರೀ ಕೃ. ಹ್ಯ. [illegible] ಗಂಡಸರೆಂಬುವರ ಎದೆಗೆ [illegible] ಹೋಗುವಂತೆ ಹೇಳುತ್ತಾರೆ. [illegible] ಇಲ್ಲಿ [illegible] ಒಂದು ಕೂಡುತ್ತಲೆ, [illegible] ದೀಕ್ಷೆ ತಕ್ಕೊಂಡಿದ್ದಾರೆ. ಬೇರೆ [illegible] ಕಾರ್ಯಕ್ಷೇತ್ರ [illegible] ಗಳಂತೆ ಮನೆ ಹಿಡಿದು ಕೂತರು. [illegible] ಇವರು ಪ್ರತ್ಯಕ್ಷ [illegible] ಕುಂಕುಮ [illegible] ಬಳೆ ತಕ್ಕೊಂಡು [illegible] ಸೆಗೆ ಹೋಗಿ, [illegible] ಒತ್ತಿ ಕಟ್ಟಿಕೊಳ್ಳಿರೆಂದು ಹೆಂಗಸರು ಗಂಡಸರಿಗೆ ಸಾಚಿಸಿ ಹಟ್ಟಿ, [illegible] ಗಾಂಭೀರ್ಯ ಹಟ್ಟಿತು. ಕಡೆಯಲ್ಲಿ [illegible] ಭಂಗವು [illegible] ಸ್ವರೂಪ ಧಾರಣ ಮಾಡಿತು. ಎಲ್ಲದರೂ ಗಂಡಸರು ಹೇಡಿ, ಪುಕ್ಕ, ಸೋಮಾರಿ, ಕರ್ತವ್ಯಶೂನ್ಯರೆಂದ ತಿಳಿದವರೆ [illegible] ಈ ಘಟನೆ ಇವರನ್ನು [illegible].

—

ಹೋಟು ಕೊಡಬಾರದೆಂದು ಹಿಂದುಸ್ತಾನದ ಅಸ್ಪೃಶ್ಯ ಚಳವಳಿಯು.

——(೦)——

ಮುಂಬಯಿ ಕರ್ನಾಟಕದಲ್ಲಿ [illegible] ಜಿಲ್ಹೆಗಳಲ್ಲಿ ಉಮೇದವಾರರಿಗೆ ಹೋಟು ಕೊಡಬಾರದೆಂದು ಕಾಂಗ್ರೆಸ ಸಭೆಯವರು ಮುದ್ರಿತ ಚೀಟಿಯನ್ನು ಹಚ್ಚಿರುವರು. ಅದರ ಪ್ರಕಾರಗಳು

೧ ಉಮೇದವಾರರು ನಮ್ಮ ಪ್ರತಿನಿಧಿಗಳಲ್ಲ; ನಮ್ಮ ಹೇಳಿಕೆಯಿಂದ ನಿಂತಿಲ್ಲ.

೨ ಒಂದು ವೇಳೆ ಕೆಲ ಮತಗಳಿಂದ ಇವರು ಆರಿಸಿಂದರೂ, ಪ್ರಜಾಪಕ್ಷದ ಪ್ರತಿನಿಧಿಗಳಾಗ[illegible]

೩ ಇವರು ತಮ್ಮ ಪ್ರತಿನಿಧಿಗಳಲ್ಲೆಂದು ಊರೂರಿಗೆ [illegible] ಮಾಡಿ, ಜಾಹೀರ ನಿಷೇಧ ಮಾಡತಕ್ಕ[illegible]

೪ ಎಲ್ಲರೂ ಹೋಟು ಕೇಳಲಿಕ್ಕೆ ಬಂದರೆ ಹೋಟು ಕೊಡುವದಿಲ್ಲೆಂದು ಸ್ಪಷ್ಟವಾಗಿ

ಹೇಳತಕ್ಕದ್ದು.

೫ ಇವರು ಪ್ರತಿನಿಧಿಗಳಲ್ಲೆಂದು ತೋರಿಸುವದಕ್ಕಾಗಿ ಊರೂರಿಗೆ ಮತದಾರರ ಸಹೀ ತೆಕ್ಕೊಳ್ಳತಕ್ಕದ್ದು.

೬ ಚುನಾವಣೆಯ ದಿವಸ ಪೋಲಿಂಗ ಆಫೀಸುಗಳ ಮುಂದೆ ಪಿಕೆಟಿಂಗ ಮಾಡತಕ್ಕದ್ದು.

ಕಾಶಿಯ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ ಪುಣೆಯಲ್ಲಿ ಶಿಕ್ಷೆ.

—( )—

ಪಂಡಿತ ಮಾಲವೀಯರನ್ನು ಹಿಡಿದ ಕೂಡಲೆ, ಕಾಯದೆಭಂಗ ಮಾಡತೊಡಗಿದ [illegible] ಬಂದಿದ್ದ ಕಾಶೀ ವಿದ್ಯಾಪೀಠದ [illegible] ವಿದ್ಯಾರ್ಥಿಗಳಲ್ಲಿ ೧೧ ಜನರು ಪುಣೆಗೆ ಬಂದು, ದಂಡಿನಲ್ಲಿ ಕಾಯದೆಭಂಗಗಾರರಿಗೆ [illegible] ರವಸೆಗೆಯಿಂದ ಮೋರ್ಚಾದಲ್ಲಿ [illegible] ವರು ಸಿಕ್ಕಿದ್ದರಿಂದೇ ತಡ ಪೋಲೀಸರು ಇವರನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಲು ಅವನು ಇವರಿಗೆ ನಾಲ್ಕು ತಿಂಗಳ ಸಕ್ತ ಶಿಕ್ಷೆ ವಿಧಿಸಿದನು.

ಯುರೋಪಿಯನ್ನ ಪೋಲಿಸರ ಉನ್ಮತ್ತತನ.

—(೨)—

ಕಲಕತ್ತೆಯಲ್ಲಿ ಹಿಂದೂ ಪೋಲಿಸರು ಧರ್ಮಪ್ರಕಾರ ಗೋಕುಲಾಷ್ಟಮಿಯ ದಿವಸ ರಾತ್ರಿಯಲ್ಲಿ ಶ್ರೀ ಕೃಷ್ಣ ಜನ್ಮೋತ್ಸವ ಸಮಾರಂಭ ನಡೆಸುತ್ತಿದ್ದರು, ಆದರೆ ಈ ಉತ್ಸವದಲ್ಲಿಯ ಮಂತ್ರಘೋಷ, ತಾಳ ಮೃದಂಗಗಳ ಶಬ್ದವು ಯುರೋಪಿಯನ್ನ ಅಧಿಕಾರಿಗಳಿಗೆ ಸಹನವಾಗದೆ, ಇವರು ಪೂಜೆ ನಡೆದ ಕೋಣೆಗೆ ಬಂದು, ಶ್ರೀ. ಕೃಷ್ಣಪರಮಾತ್ಮನ ಭಾವಪಟವನ್ನು ಹರಿದುಹಾಕಿದರು. ಸಾಹೇಬರ ಈ ಉನ್ಮತ್ತತನದ ದೆಸೆಯಿಂದ ಪೋಲಿಸರಲ್ಲಿ ಭಯಂಕರವಾದ ಅಸಂತೋಷ ಹಬ್ಬಿದೆ. ಇವರು ಮ್ಯಾಜಿಸ್ಟ್ರೇಟರ ಮುಂದೆ ದೂರಿಕೊಂಡಿದ್ದಾರೆ.

ಮರಾಟ್ಟಿ ದೇಶದ ಕಾಂಗ್ರೆಸ ಕಮೀಟಿಗಳ ಮೇಲೆ ದಾಳಿಯು.

—(೦)—

ಮುಂಬಯಿ ಸರಕಾರದವರು ಮಹಾರಾಷ್ಟ್ರ ಪ್ರಾಂತದಲ್ಲಿರುವ ಪುಣೆ, ಅಹಮದನಗರ, ನಾಶಿಕ, ಸಾತಾರಾ, ಪೂರ್ವ ಮತ್ತು ಪಶ್ಚಿಮಖಾನದೇಶಗಳ ಕಾಂಗ್ರೆಸ ಕಮೀಟಿಗಳನ್ನೂ ಯುದ್ಧಮಂಡಲಗಳನ್ನೂ ಬೇಕಾಯದೆಶೀರವಿರುತ್ತವೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಎಚ್ಚರಿಕೆ-

—(೮)—

ಗೀತೆಯಲ್ಲಿ ಹಣೆಯನ್ನು ತೆಗೆದು ಅದರ ತುಕಡಿಗಳನ್ನು ಮಾಡಿ ಅನೇಕರು ಈ ಊರಲ್ಲಿ ಮಾರುತ್ತಿರುವರೆಂದು ತಿಳಿದು ಬಂದಿದೆ. ಹೀಗೆ ಮಾಡುವದರಿಂದ ಅಜ್ಞ ಜನರನ್ನು ಎರಡು ರೀತಿಯಿಂದ ಮೋಸಗೊಳಿಸಿದಂತಾಗುತ್ತದೆ (೧) ಗೀತೆಯ ಸಾಲಿಗೆ ಉತ್ತೇಜನ ಕೊಡುವದು ಖಾದಿಯ ತತ್ವಕ್ಕೆ ವಿರುದ್ಧವು (೨) ಒಂದೇ ಒಂದು ತುಕಡಿಗೆ ಒಂದು ಚಿಲ್ಲರೆಂತೆ ಮಾರಿದರೆ ಒಂದು ನೀರಿಗೆ ಒಂದು [illegible] ಹಣವು ಬಿದ್ದಂತಾಯಿತು. ಅದೇ ಮಾಪಿನ ಅಂಗಡಿಯಲ್ಲಿ ಒಂದು ಬೀರು ಹಣಿಗೆ ಸಾಕ್ಕು ಆಣೆ ಕೇಳುತ್ತಾರೆ. ಇದರ ನಿಷೇಧವನ್ನು ಜನರು ಚೆನ್ನಾಗಿ ಮಾಡಬೇಕು.

ರಾವಸಾಹೇಬ ವಂಟೂರ ಶೆಟ್ಟಿಗೆ ಪಾತಪಾರಿ ಅಪರಾಧದ ಮೇಲಿಂದ ಸಕ್ತ ಶಿಕ್ಷೆಯಾಗಿದ್ದರೂ, ಅವರಿಗೆ ಬಿ ಕ್ಲಾಸ! ಮತ್ತು ದೇಶಾಭಿಮಾನಕ್ಕಾಗಿ ಸ್ವಾರ್ಥತ್ಯಾಗ ಮಾಡಿದ ಶ್ರೀ ದಿವಾಕರರಿಗೆ ಸಾದಾ ಶಿಕ್ಷೆಯಾಗಿ, ಎ ಕ್ಲಾಸ ದೊರೆತಿದ್ದರೂ, ತುರಂಗದಲ್ಲಿ ಬಿ ಕ್ಲಾಸಕ್ಕೆ ಹಚ್ಚಿದಾರೆ!! ಇದರ ಕಾರಣ ಮತ್ತು ರಹಸ್ಯವನ್ನು ಯಾರಾದರೂ ಹೇಳುವರೇ ಎಂದು ಒಬ್ಬರು ಪ್ರಶ್ನೆ ಮಾಡುತ್ತಾರೆ.

ಕಲಕತ್ತೆಯ ಯುರೋಪಿಯನ್ನರು ಹಿಂದುಸ್ಥಾನಕ್ಕೆ ಯಾವದೊಂದು ರಾಜಕೀಯ ಹಕ್ಕು ಕೊಡಬಾರದು. ಇಷ್ಟೇ ಅಲ್ಲ; ಈಗ ಕೊಟ್ಟ ಹಕ್ಕುಗಳನ್ನು ಸಹ ಕಸಕೊಳ್ಳಬೇಕೆಂದು ತಮ್ಮ ದೇಶಕ್ಕೆ ತಿಳಿಸುವಂಥ ಠರಾವು ಮಾಡಿದ್ದಾರೆ. ಇದು ಮೋಹಿತನದ ಠರಾವೆಂದು ಮುಂಬಯಿಯ ಟೈಮ್ಸ ಪತ್ರವು ಅವರಿಗೆ ಸರ್ಟಿಫಿಕೇಟು ಕೊಟ್ಟಿರುತ್ತದೆ.

ಕಾಯದೆಭಂಗದ ದೆಸೆಯಿಂದ ಖಾನದೇಶ ಜಿಲ್ಹೆಯಲ್ಲಿ ಹುಲ್ಲು, ಗಳ, ಜವಿಗೆ, ಕೋಲೆ ಮುಂತಾದವುಗಳ ಸವಾಲು ಆಗಲಿಲ್ಲ. ಸ್ತ್ರೀಯರು ಪಿಕೆಟಿಂಗ ಮಾಡಿ ಸವಾಲು ಮಾಡಗೊಡಲಿಲ್ಲ.

ಪಂಡಿತ ಮೋತಿಲಾಲರಿಗೆ ಜ್ವರಬರುತ್ತದೆ. ತಮ್ಮ ವೈದ್ಯನಿಂದಲೇ ಮದ್ದು ತಕ್ಕೊಳ್ಳಬೇಕೆಂದು ಅವರು ಅಪೇಕ್ಷಿಸಿದ್ದರಿಂದ, ಅವರನ್ನು ನೈನಿತಾಳಕ್ಕೆ ಕಳಿಸಿದರೆಂದು ಪ್ರಸಿದ್ಧವಾಗಿದೆ.

ಚನ್ನಮ್ಮನ ಕಿತ್ತೂರಿನಲ್ಲಿ ೧೦ ವರ್ಷದ ಬಾಲವೀರನು ಬಂಧಿಸಲ್ಪಟ್ಟನು.

—(೮)—

ತಾ. ೧೪ನೇ ಗುರುವಾರದಿಂದ ತಾ. ೨೦ನೇ ಬುಧವಾರ ತನಕ ಶ್ರೀ ಕೃಷ್ಣಜನ್ಮಾಷ್ಟಮಿ ಸಪ್ತಾಹವು ಜರಗಿಸಲ್ಪಟ್ಟಿತು. ಮುನ್ನಾದಿವಸ ಪೋಲಿಸರು ಪ್ರತಿಬಂಧ ಮಾಡಿದ ಅಕ್ಕೀಕಟ್ಟೆಯ ಮೇಲೆಯೇ ದಿನಾಲು ಕೀರ್ತನ, ವ್ಯಾಖ್ಯಾನ, ಲಾವಣೆ ಮೊದಲಾದವು ನಡೆದವು. ದಿನಾಲು ೪-೫ ಸಾವಿರ ಆಬಾಲವೃದ್ಧ ಸ್ತ್ರೀ ಪುರುಷರು ಬರುತ್ತಿದ್ದರು. ೧೮ನೇ ತಾ|| ರ ಪಿಕೆಟಿಂಗ ಮಂಡಲ ನಿಂತ ಶ್ರೀ ಕಲ್ಲಪ್ಪ ರಂಗಳ, ಬಸಪ್ಪ ಒಡೆಯರ, ರಾಣೋಜಿ ಪಟಕಿ, ಹಾಗೂ ಫಕೀರಪ್ಪ [illegible] ಈ ನಾಲ್ಕು ಜನರನ್ನು ಪೋಲೀಸರು ಬಂಧಿಸಿ ರಾತ್ರಿ ಬಿಟ್ಟರು. ೧೯ನೇ ತಾ. ಮಂಗಳವಾರ ದಿನ ಸಂಗೊಳ್ಳಿಯ ಶ್ರೀ ಬಸವಣ್ಣನ ಜಾತ್ರೆಯಲ್ಲಿ ಪ್ರಚಂಡ ಸಭೆಯಾಗಿ ಧಾರವಾಡದ ದೇ. ಭ. ಮುದವೀಡ ಕೃಷ್ಣರಾಯರು ಸದ್ಯ ಪರಿಸ್ಥಿತಿಯ ವಿಷಯವಾಗಿ ಪರಿಣಾಮವಾಗುವಂತೆ ಸ್ಫೂರ್ತಿದಾಯಕ ಭಾಷಣ ಮಾಡುವವರಾಗಲು ಇಲ್ಲಿಯ ದೇ. ಭ. [illegible] ಶ್ರೀ [illegible] ಪಿಟ್ಟಿಮನಿ ಮತ್ತು ಉಮಚಗಿ ಇವರಿಗೆ [illegible] ಗಲ ಮ್ಯಾ. ರು [illegible] ನನ್ನು ೨೦ನೇ ತಾರೀಖಿನ ಹಾಜರಾಗಲಿಕ್ಕೆ ಸಮನ್ಸ ಕಳಿಸಿದ್ದು ಅವರು ಸಮಕ್ಷ ವಿನಂತಿ ಮಾಡಿಕೊಂಡ ಮೇರೆಗೆ ಖರ್ಚಿಗೆ ಕಳಿಸಿದಲ್ಲಿ ತಪ್ಪದೆ ಹಾಜರಾಗುವೆವೆಂದು ಬರೆದು ಕೊಟ್ಟಿರುವರು. ೨೦ನೇ ತಾ. ನ ದಿವಸ ಸಾಯಂಕಾಲದಲ್ಲಿ ಪಿಕೆಟಿಂಗದ ಸಲುವಾಗಿ ಶ್ರೀ ಪಾಗಾದ [illegible]ಯನ್ನು ಪೋಲಿಸರು ಹಿಡಿದ ಕೂಡಲೇ ಸತ್ಯಾಗ್ರಹ ಮಂಡಲದ ಸರ್ವಾಧಿಕಾರಿಗಳಾದ ಶ್ರೀ [illegible] ನೇಮಿಚಂದ್ರರ ತಮ್ಮನ ಮಗ ಸೋಮನಾಥನೆಂಬ ಹತ್ತು ವರ್ಷದ ಬಾಲಕನು ಸ್ವಪ್ರೇರಣೆಯಿಂದಲೇ ಪಿಕೆಟಿಂಗ ಮಾಡಲು ಮುಂದೆ ಬರಲು ಪೋಲೀಸರು ಆ ವೀರನನ್ನು ಸೆರೆಹಿಡಿದಿದ್ದಾರೆ.

ಬ್ಯಾರಿಸ್ಟರ ಜಯಕರರು ಸಿಮಲೆಕ್ಕೆ ಪ್ರಯಾಣ ಬೆಳೆಸಿದರು, ಹೋದ ಕೂಡಲೆ ಲಾರ್ಡ ಐರ್ವಿನಸಾಹೇಬರ ಕೂಡ ಒಡಂಬಡಿಕೆಯನ್ನು ಕುರಿತು ಪ್ರಸ್ತಾಪ ನಡಿಸುವರು.

ಮೀರತ ಪ್ರಕರಣದಲ್ಲಿ ಸಾಕ್ಷೀ ಹೇಳುವದಕ್ಕಾಗಿ ತಾತ್ಪೂರ್ತಿಕವಾಗಿ ತುರಂಗದ ಹೊರಗೆ ಬಂದಿದ್ದ ಶ್ರೀ ಭೋಪಟಕರರು ಸಾಕ್ಷಿಯು [illegible]ವಾದ್ದರಿಂದ ತಿರುಗಿ ತುರಂಗಕ್ಕೆ ಹೋದರು.

ಬಳ್ಳಾರಿಯ ಶೇಂದಿಯ ಸವಾಲು ನಿಂತಿತು.

—(o)—

ಬಳ್ಳಾರಿಯಲ್ಲಿ ಶೇಂದಿಯ ಸವಾಲು ನಡೆದಾಗ- ಹ್ವಾಲಂಟಿಯರರು ಪಿಕೆಟಿಂಗ ನಡೆಸಿದರು. ಒಳಗಿನ ಜನರಿಗೆ ಬುದ್ಧೀ ಹೇಳಬೇಕೆಂದು ಒಬ್ಬ ಸ್ವಯಂಸೇವಕನು ಸಾಹೇಬನಂತೆ ಉಡಿಗೆತೊಡಿಗೆ ಮಾಡಿಕೊಂಡು, ಒಳಗೆ ಹೋದನು. ಒಳಗೆ ಹೋದವನೇ ಮೇಲಿನ ಛದ್ಮರೂಪದ ಉಡಿಗೆ ತೆಗೆದು, ತನ್ನ ನಿಜಸ್ವರೂಪಧಾರಣ ಮಾಡಿದನು. ಘಟೋತ್ಕಚನ ಮಾಯಾ ವೇಷವನ್ನು ಕಂಡು ಪೋಲಿಸರು ಈತನನ್ನು ಹಿಡಿದರು. ಈತನನ್ನು ಹಿಡಿದ ಕೂಡಲೆ, ಇನ್ನಿಬ್ಬರು ಒಬ್ಬರ ಮೇಲೊಬ್ಬರಂತೆ ಬೇರೆ ಬೇರೆ ರೂಪಧಾರಣ ಮಾಡಿ, ಒಳಗೆ ಹೋದರು. ಈ ರಾಕ್ಷಸರನ್ನು ನೋಡಿ ಪೋಲೀಸರು ತಮ್ಮ ಕೈ ತೆಗೆಸಿದರು. ಪರಿಣಾಮ ಮಾತ್ರ ನೆಟ್ಟಗಾಗಲಿಲ್ಲ. ಇವರನ್ನ ಹಿಡಿಯುವದನ್ನು ಕಂಡು, ಕಲಾಲರು ಸವಾಲು ಮಾಡದೆ, ಹೊರಬಿದ್ದು ಬಂದರು. ಸವಾಲು ಅಲ್ಲೇ ಕೂತಿತು.

ಕಾಬೂಲದಲ್ಲಿ ಬ್ರಾಹ್ಮಣ ಮಂತ್ರಿಯ ಮೃತ್ಯು

—(o)—

ಕಾಬೂಲದಲ್ಲಿ ಶ್ರೀ ನಾರಾಯಣದಾಸರೆಂಬ ಬ್ರಾಹ್ಮಣರು ಅಬ್ದುಲ್‌ರಹಿಮಾನರ ಕಾಲದಿಂದ ಮುಲಕೀ ಖಾತೆಯ ದಿವಾನರಾಗಿದ್ದರು. ಇವರು ಪರಲೋಕವಾಸಿಯಾದರು. ಮರಣ ಸಮಯದಲ್ಲಿ ನೂರುವರ್ಷದವರಾಗಿದ್ದರು. ಅಕಬರಬಾದಶಹನ ಕಾಲದಲ್ಲಿ ಇವರ ವಂಶೀಕರು ಕಾಬೂಲಕ್ಕೆ ಹೋಗಿ, ಅಲ್ಲಿಯೇ ವಾಸವಾಗಿ, ದಿವಾನಗಿಯಂಥ ಅಧಿಕಾರ ನೋಡುತ್ತಾ ಬಂದಿದ್ದಾರೆ.

ಅಂಕೋಲೆಯಲ್ಲಿ ಜಂಗಲು ಕಾನೂನು

“ಸತ್ಯಾಗ್ರಹ”

ಅಂಕೋಲೆಯಲ್ಲಿ ೧೭ ತಾರೀಖಿನ ದಿನ ಮೂರು ಜನರು ಮೆರವಣಿಗೆಯೊಂದಿಗೆ ಊರಿಂದ ಹೊರಟು ಹಳೆಯ ಕೋಟೆಯ ಮೇಲಿದ್ದ ರಿಸರ್ವ ಕಾಡಿನಲ್ಲಿ ಜಂಗಲ್ ಕಾನೂನನ್ನು ಮುರಿದರು. ಅವರನ್ನೂ ಪೋಲೀಸರು ಕೈದು ಮಾಡಿದರು. ೧೯ ನೇ ತಾ|| ದಿನ ೯೦೦ ಕ್ಕಿಂತ ಹೆಚ್ಚು ಜನರು ಅಂಕೋಲೆಯಿಂದ ಹೊರಟು ೩ ಮೈಲು ದೂರದ ಅಡವಿಯಿಂದ ಸೌದೆಯನ್ನು ತಂದು ಜಂಗಲ ಕಾನೂನನ್ನು ಮುರಿದರು. ಯಾರನ್ನೂ ಸೆರೆ ಹಿಡಿಯಲಿಲ್ಲ.

ಪೋಲೀಸರು ಜನರನ್ನು ಲಾಠಿಯಿಂದ ತಿವಿದರು.

ಶಿರ್ಸಿ ತಾಲೂಕಿನಲ್ಲಿ ಕೈದು ಮಾಡಲ್ಪಟ್ಟ ಜನರನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಬೇಕೆಂದು ಜನರ ಅಭಿಲಾಷೆ. ಪೋಲೀಸರು ಆಗಗೊಡಲೊಲ್ಲರು. ಆಗ ಜನರು ಅವರನ್ನು ಮುಂದಕ್ಕೆ ಕರೆದೊಯ್ಯಲಾಗದಂತೆ ಅಲ್ಲಿಯೇ ಮಲಗಿ ಬಿಟ್ಟರಂತೆ. ಪೋಲೀಸ ಜಮೇದಾರರಿಗೆ ಸಿಟ್ಟು ಬಂತು. ಲಾಠಿಯಿಂದ ತಿವಿಯಲು ಆಜ್ಞೆಯಾಯಿತು. ಕೆಲವರಿಗೆ ಗಾಯಗಳಾದವು. ಮತ್ತೆ ಕೆಲವರಿಗೆ ಬಂದೂಕಿನ ಹಿಂಭಾಗದಿಂದ ತಿವಿದರು. ಅಂತೂ ಜನರೇನೂ ತಮ್ಮ ಕೋರಿಕೆಯನ್ನು ಬಿಡಲಿಲ್ಲ.

ಸಿದ್ದಾಪೂರದಲ್ಲಿ ೧೮ನೇ ತಾ|| ದಿನ ಸಾವಿರಾರು ಮಂದಿ ಗಂಡಸರೂ ಹೆಂಗಸರೂ ಸೇರಿ ಸತ್ಯಾಗ್ರಹ ಮಾಡಲು ಹೊರಟಕೂಡಲೆ ೪೫ ಮಂದಿಯನ್ನು ಕೈದು ಮಾಡಿದರು. ಅವರಲ್ಲಿ ೩೦ ಮಂದಿಯನ್ನು ಬಿಡುಗಡೆ ಮಾಡಿ ಉಳಿದವರನ್ನು ಲಾಕಪ್ಪಿನಲ್ಲಿಟ್ಟರು.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು

ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು

ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳೆ ನಂಬರ ೧. ಗದಗ ಬೆಟಗೇರಿ

ನೋಟೀಸಿನ ದರಗಳು

—(o)—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ, ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ - ವಿಜಯ ಧಾರವಾಡ.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚಿ ಜೋಡಿಸುವದನ್ನು ಕಲಿಯುವ ಸೋಯಿಯು.



ಧಾರವಾಡ ಜಿಲ್ಹೆಯಲ್ಲಿ
ಇದೇ ಮೊದಲನೇ ಶಿಕ್ಷಣ ಸ್ಥಳವು

ಮೋಟಾರ ಡ್ರಾಯವಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಂಗಳೂರಿಗೆ ಹೋಗಿ, ಒಂದು ನೂರು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯವಿಂಗ ಮತ್ತು ಬಿಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕಾಲವನ್ನು ಬಿಟ್ಟು ಸ್ವಲ್ಪ ದುಡ್ಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ಶೀಘ್ರ ಬಂದು ಹೆಸರು ದಾಖಲ ಮಾಡಿಕೊಳ್ಳಿರಿ. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದಿಟ್ಟುಕೊಳ್ಳಿರಿ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ಬಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಜಾಹೀರ ನೋಟೀಸು.

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ—

ನಮ್ಮ ಕಟಿಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಸಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಶೆಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧) ಧಾರವಾಡ ರವಿವಾರ ತಾರೀಖು ೨೪ ನೇ ಅಗಸ್ಟ ೧೯೩೦ (ಸಂಚಿಕೆ ೧೮೬

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ ಇದರಲ್ಲಿ ಸಾಹೀ ಶ್ರೀ. ಶಿವಪ್ಪ ವದರೂಕರ ಅಸೆಸರ್, ಶ್ರೀ. ಆರೂಢ ಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ನಟೇಸನ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ, ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ. ಠೋಕ ಕೊಳ್ಳುವವರಿಗೆ ನೂರಕ್ಕೆ [illegible] ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್
ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠೇವು ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಳುಕ್ಯ ವಿಕ್ರಮ ವರ್ಷ ೮೫೪ ಶ್ರಾವಣ ವದ್ಯ ೩೦

ಅಹಮದಾಬಾದಿನಲ್ಲಿ ಲಾಠೀ ರಾಜ್ಯ.

೧೨೫ ಜನರು ಗಾಯವಾದರು.

—(೦)—

ಅಹಮದಾಬಾದವು ಮಹಾತ್ಮರ ವಾಸಸ್ಥಾನ. ಅಹಿಂಸೆಯ ಅನುಷ್ಠಾನದ ಪುಣ್ಯಸ್ಥಳವು. ದರೆ ಆಳರಸರು ಇದನ್ನು ಹಿಂಸೆಯ ಕ್ಷೇತ್ರವಾ ೧೨೫ ಜನರ ಕ್ಷೇತ್ರವಿಧಿ ನಡಿಸಿದರು. ಅದ ಂಟಾದ ಕಾರಣ ಅಷ್ಟು ದೊಡ್ಡದಲ್ಲ. ಕೇವ ವಿದ್ಯಾರ್ಥಿಗಳ ಸತ್ಯಾಗ್ರಹ. ಅಲ್ಲಿಯ ವಿದ್ಯಾರ್ಥಿ ಳು ಸರಕಾರೀ ಹಾಯಸ್ಕೂಲಿನ ಮೇಲೆ ರಾಷ್ಟ್ರೀಯ ಶಾನೆಯನ್ನೇರಿಸಬೇಕೆಂದು ಮೆರವಣಿಗೆಯಿಂದ ಹೊ ಟರು. ಸರಕಾರದ ಕಟ್ಟಡದ ಮೇಲೆ ಹಿಂದುಸ್ಥಾನ ಹಿಂದೀ ಸ್ವರಾಜ್ಯ ಸ್ವಾತಂತ್ರ್ಯದ ನಿಶಾನೆ ಏರಿಸುವದು ಅಪದ್ಧವೇ ಸರಿ. ಏಕೆಂದರೆ ಆಳರಸರು ಅಹ ದಾಬಾದವು ಇಂಗ್ಲಂಡದಲ್ಲಿರುವ ಮ್ಯಾಂಚೆಸ್ಟರ ಂದೇ ಭಾವಿಸಿರಬಹುದು. ಆದ್ದರಿಂದ ಹಿಂದೀ ಜ ರ ರಾಜ್ಯದಲ್ಲಿಯೇ ಹಿಂದೀ ನಿಶಾನೆ ಏರಬಾರದೆಂ ದು ಅವರ ಆಗ್ರಹ. ಹಾಯಸ್ಕೂಲಿನ ಮೇಲೆ ರಾಷ್ಟ್ರೀಯ ನಿಶಾನೆ ಹತ್ತುವ ಸಾಹಸ ನಡೆದಿದೆಂಬ ವರ್ತಮಾನವು ಪಟ್ಟಣದ ತುಂಬ ವಿದ್ಯುದ್ವೇಗದಿಂದ ಹಬ್ಬಿತು. ಸಾವಿರಾರು ಜನ ಸ್ತ್ರೀಪುರುಷರು ವಿದ್ಯಾರ್ಥಿಗಳ ಮೆರವಣಿಗೆಯಲ್ಲಿ ಸೇರಿದರು. ಹಾಯಸ್ಕೂಲಿನ ಮುಂಭಾಗದಲ್ಲಿ ಜನಜಾತ್ರೆಯಾಯಿತು. ಪ್ರಚಂಡ ಜನ ಸ್ತೋಮ ಕೂಡಿದ ವರ್ತಮಾನ ಕೇಳಿ ಪೋಲೀಸರು ತಮ್ಮ ಬಲವನ್ನು ಬೆಳೆಸಿದರು. ಕಮೀಶನರ, ಎಜ್ಯುಕೇಶನಲ ಇನ್ಸಪೇಕ್ಟರ, ಮ್ಯಾಜಿಸ್ಟ್ರೇಟ ಮೊದಲಾದವರೂ ಬಂದರು. ಬೆಂಬಲಕ್ಕೆ ಶಾದಿಬ್ಬ ಸ್ವಾರ ಮತ್ತು ಸಿಪಾಯರ ಕಂಪನಿಗಳು ಬಂದವು. ವಿದ್ಯಾಪೀಠ ಹೋಗಿ, ಯುದ್ಧ ಮಂಡಲವಾಯಿತು. ಪೋಲಿಸರ ನೋಟವು ಅತ್ಯಂತ ಭಯಾನಕವಾಯಿತು. ಮುಂಬಯಿಯು ಮರಳಿಸಿ ಬರುವವೆಂದು ಯಾರೊಬ್ಬರಿಗೆ ಅನಿಸಿತು. ಬರಬರುತ್ತಾ ಬುಟ್ಟಿಗಳು ಹೆಚ್ಚಾಗಿ ತೋರಲಾರಂಭಿಸಿದವು. ಅಂದೇ ಪ್ರಾತಃಕಾಲದಲ್ಲಿ ಪಂಡಿತ ಮಾಲವಿಯಾ ಮತ್ತು ಅಧ್ಯಕ್ಷ ಪಟೇಲರು ಸುರತಗಿಂದ ಅಲ್ಲಿಗೆ ಪ್ರಯಾಣ ಬೆಳೆಸಿದ್ದರು. ಅಪರಾಹ್ಣದ ಮೂರೂವರೀ ಗಂಟೆಗೆ ಇವರ ವ್ಯಾಖ್ಯಾನವೆಂದು ಪ್ರಸಿದ್ಧವಾಗಿತ್ತು. ಆದರೆ ಈ ಸತ್ಯಾಗ್ರಹದ ಮುಂದೆ ವ್ಯಾಖ್ಯಾನದ ಸಭ್ಯೇ ಅಡಗಿತು. ಜನರು ವ್ಯಾಖ್ಯಾನಕ್ಕೆ ಹೋಗದೆ, ಇಲ್ಲಿಗೇ ಬಂದರು. ಬಂದವರು ಅಲ್ಲಿಂದ ಕದಲಲೇ ಇಲ್ಲ. ಸ್ವತಃ ಪಂಡಿತರು ಅಧ್ಯಕ್ಷ ಪಟೇಲರ ಕೂಡ ಸಮರಾಂಗಣದ ಮುಂದೆ ಹಾದು ಹೋದರು. ಸಂಜೆಯಾಗುತ್ತಾ ಬಂತು. ಎರಡೂ ಪಕ್ಷಗಳು ಹಿಡಿದ ಮೆಟ್ಟು ಬಿಡಲಿಲ್ಲ: ಕೊನೆಯಲ್ಲಿ ವಿದ್ಯಾರ್ಥಿಗಳೇ ಹಲ್ಲೆಯೇರಿಸಿದರು. ಕೆಲವರು ತಿಳ್ಳೀ ಆಟದಲ್ಲಿ ಕೊಸರಿಕೊಂಡು ಹೋಗುವಂತೆ ಪೋಲೀಸರನ್ನು ಕೊಸರಿಕೊಂಡು ಅಂದರೆ ಅವರ ಸಂದಿನೊಳಗಿಂದ ಶಾಲೆಯ ಬಳಂಗಳದಲ್ಲಿ ಹೊಕ್ಕು ನಾಡಗುಡಿಯನ್ನೇರಿಸುವದನ್ನು ಪ್ರಾರಂಭಿಸಿದರು. ಆಗ ಮಾತ್ರ ಪೋಲಿಸರು ಕ್ರೂರಸಿಗೇರಿ ಲಾಠೀ ರಾಜ್ಯ ಪ್ರಾರಂಭಿಸಿದರು. ಜನರ ಮೇಲೆ ಕುದುರೆಗಳನ್ನು ಹಾಕಲು ಹಿಂಜರಿಯಲಿಲ್ಲ. ಕೂಡಿದ ಜನರು ಕಕ್ಕಾವಿಕ್ಕಿಯಾದರು. ಅತ್ತಿತ್ತ ಹೋಗಲಾರಂಭಿಸಿದರು. ಆದರೂ ದೊಡ್ಡ ಗದ್ದಲವಾಯಿತು. ಜನರು ಚದರುತ್ತಿದ್ದಾಗ, ಸ್ವಯಂಸೇವಕರು ಎಷ್ಟೂ ಹೆದರಲಿಲ್ಲ. ಸತ್ಯಾಗ್ರಹದ ಸ್ಥಳಬಿಟ್ಟು ಕದಲಲಿಲ್ಲ. ಎದ್ದು ನಿಂತು ಸಹ ನೋಡಲಿಲ್ಲ. ಪೋಲಿಸರು ಮನದಣಿ ಬೊಣ್ಣೆಗಳನ್ನು ಪ್ರಯೋಗಿಸುವದನ್ನು ಸ್ವತಃ ಕಮೀಶನರಸಾಹೇಬರು ನೋಡುತ್ತಿದ್ದರು. ಮುಂಬಯಿಯಲ್ಲಿ ಮಿ. ಹಾಟ್ಸನ್ನಸಾಹೇಬರ ಹುಕುಮಿನಿಂದ ಲಾಠೀ ಪ್ರಹಾರ ನಡೆದಂತೆ ಇಲ್ಲಿ ಕಮೀಶನರರ ಅಪ್ಪಣೆಯಿಂದ ನಡೆಯಿತೆಂದರೂ ಸಲ್ಲುವದು. ಹೊಡಿಸಿಕೊಂಡ ಜನರ ಸಂಖ್ಯೆಯು ೧೨೫ಕ್ಕೆ ಬಂತು. ಕಾಂಗ್ರೆಸದ ಮೋಟರುಗಳಲ್ಲಿ ಇವರನ್ನು ಮಲಗಿಸಿಕೊಂಡು, ಕಾಂಗ್ರೆಸದ ಆಸ್ಪತ್ರೆಗೆ ಕರಕೊಂಡು ಹೋಗುವ ಕೆಲಸ ನಡೆಯಿತು. ಹೊಡಿಸಿಕೊಂಡವರಲ್ಲಿ ಮುಂಬಯಿ ಟಾಯಿಮ್ಸದ ಸುದ್ದೀಸೂರಪ್ಪನೂ ಒಬ್ಬನಾಗಿದ್ದಾನೆ. ಪಾಪ! ಇವನು ಕರೆದೊಗಲಿನವನು; ಯುರೋಪಿಯನ್ನನಾಗಿದ್ದರೆ- ಹೊಡತ ಬೀಳುತ್ತಿದ್ದಿಲ್ಲ, ಹೆಂಗಸರೂ ಲತ್ತೀ ತಿಂದರು. ಕೋಟ್ಯಾಧೀಶರಾದ ಸರ ಅಂಬಾಲಾಲರ ಮೊಮ್ಮಗಳು ಬಬ್ಬಳಾಗಿದ್ದಾಳೆ. ಈ ಗೊಂದಲದಲ್ಲಿ ರಾಷ್ಟ್ರೀಯ ನಿಶಾನೆ ಹತ್ತುವದೊಂದೆಯುಳಿದು, ಹೊಡತ ತಿಂದದ್ದೊಂದು ನಿಜವಾಯಿತು. ಒಸಂಬದಿಕೆಯು ತೀರ ಹಣ್ಣಿಗೆ ಬಂದಿರುವಾಗ ಪೋಲಿಸರು ಈ ಪ್ರಕಾರ ಸ್ವರಾಕ್ರಮ ತೋರಿಸತಕ್ಕದ್ದಲ್ಲವೆಂದು ಯಾರಾದರೂ ಹೇಳುವಂತಿದೆ.

ಧಾರವಾಡದ

ಊರ ತುಂಬ ಆಕ್ಷೇಪದ ಹಸ್ತಪತ್ರಿಕೆಗಳು.

—(೦)—

ಧಾರವಾಡವು ಶಾಂತವಾಗಿತ್ತು. ಈಗಾದರೂ ಶಾಂತವಿದೆ. ಮುಂದೆಯಾದರೂ ಶಾಂತವಾಗಿಯೇ ಉಳಿಯಬೇಕೆಂದು ನಮ್ಮ ಅಪೇಕ್ಷೆ. ಅದಕ್ಕನುಸಾರವಾಗಿ ಅಧಿಕಾರಸ್ಥರು ಮಲಗಿದ ಹುಲಿಯನ್ನು ಎಬ್ಬಿಸಬಾರದೆಂದು ನಮ್ಮ ಮನಸಾಶೆ. ಕೌನ್ಸಿಲ ಬಹಿಷ್ಕಾರದ ದೆಸೆಯಿಂದ ಕೂಡುವ ಸಭೆಯ ಪ್ರಕಟನೆಯನ್ನು ಬರೆದ ಬೋರ್ಡನ್ನು ಪೋಲಿಸರು ಜಪ್ತ ಮಾಡಿಕೊಂಡು ಹೋದ ಬಳಿಕ, ಅಥವಾ ಅವರು ಹೋಗ ಹೋಗುತ್ತಿರುವಾಗಲೇ ಅದೇ ಸ್ಥಳದಲ್ಲಿ ಮತ್ತೊಂದು ಬೋರ್ಡು ಹತ್ತಿತು. ಅದರ ಮರುದಿವಸವಂತೂ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿದ [illegible] ಕಾಗದದ ಜಾಹೀರಾತುಗಳು ಊರ ತುಂಬ ಹತ್ತಿದವು. ಎತ್ತ ನೋಡಿದತ್ತ ಇವೇ ಇರುವೆ. ಮೋಟಾರುಗಳಿಗೆ ಸಹ ಹಚ್ಚುವರು. ಪೋಲಿಸರು ಎಷ್ಟೆಂದು ಹರಿದು ಹಾಕುವರು. ಪಂಚನಾಮೆ ಮಾಡಬೇಕೆಂದರೆ. ಗೋಡೆಗೆ ಹಚ್ಚಿದ ಕಾಗದಗಳನ್ನು ಕಿತ್ತುವದು ಹೇಗೆ? ಇದರಲ್ಲಿ ಮೋಟಾರಿನವರ ಅಪರಾಧವಿಲ್ಲ. ಏಕೆಂದರೆ- ಅವು ಹೇಗೋ ಹತ್ತಿಹೋದವು. ಗೋಡೆಗಳಿಗೆ ಅಪರಾತ್ರಿಯಲ್ಲಿ ಹತ್ತಿದವು. ಮನೆಯವರದೇನು ತಪ್ಪು? ದೊಡ್ಡ ಬೀದಿಗೆ ಮನೆಯಿರುವದೊಂದು ತಪ್ಪಾಗಬಹುದು. ಎಲೆಕ್ಟ್ರಿಕ ಕಂಪನಿಯ ತಾರಿನ ಕಂಬಗಳಿಗೂ ಹತ್ತಿರುವವು !! ಪಾಪ ಕಂಪನಿಯು ಏನು ಮಾಡಿತು? ಇಷ್ಟೇ ಅಲ್ಲದೆ ಸ್ವಯಂಸೇವಕರು ಹೆಗಲಿಗೆ ಬೋರ್ಡು ಹಾಕಿಕೊಂಡು ಹಾದೀ ಹೋಗುವವ ನೋಡಲೆಂದು ಊರ ತುಂಬ ತಿರುಗಾಡುವರು. ಹೀಗಾಗಿ ಬಾವೀ ತೋಡಿ, ಬೇತಾಳನನ್ನು ರಗೆ ತೆಗೆದಂತಾಗಿರುತ್ತದೆ.

ಮಿಸ್ಟರ ಜಯಕರರು ಸಿಮುಲಾಕ್ಕೆ ಮುಟ್ಟಿದರು. ಲಾರ್ಡ ಆಯರ್ವಿನರಿಗೂ ಇವರಿಗೂ ಸಂಭಾಷಣ ನಡೆದಿದೆ. ಸರ ಸಪ್ರುಸಾಹೇಬರೂ ಹೈದರಾಬಾದಿನಿಂದ ಸಿಮುಲಾಕ್ಕೆ ಪ್ರಯಾಣ ಬೆಳೆಸಿದರು. ಈಗ ನಡೆದ ಪ್ರಸ್ತಾಪವನ್ನು ಅತಿಶಯ ಗುಪ್ತವಾಗಿಟ್ಟಿದ್ದಾರೆ.

ದಾವಣಗೇರಿಯಲ್ಲಿ ಶ್ರಾವಣಮಾಸದ ದೇ ಧಾರ್ಮಿಕ ಪುರಾಣಗಳ ಕೂಡ ಮಹಾತ್ಮರ ಪುರಾಣವನ್ನೂ ಹಚ್ಚಿದ್ದಾರೆ. ಜನರು ಕಾಯಿಕರ್ಪೂ ತಕೊಂಡು ಪುರಾಣ ಕೇಳಲಿಕ್ಕೆ ತಂಡತಂಡವಾಗಿ ರುವರು.

ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿದ್ದ ಗಿರಣಿಗಳಿಗೆ ಬಂದ ಗೋಳು.

—(೦)—

ಮುಂಬಯಿಯಲ್ಲಿ ಯುರೋಪಿಯನ್ನರ ಮೇ ಚಾರಣೆಯಲ್ಲಿ ೨೪ ಗಿರಣಿಗಳಿವೆ ಈ ಗಿರಣಿಗ ರಿವೆಯನ್ನು ಕೊಳ್ಳಬಾರದು; ಮಾರಬಾರದೆಂದು ಂಗ್ರೆಸವು ಬಹಿಷ್ಕಾರ ಹಾಕಿದೆ. ವಿಲಾಯತಿಯ ರಿವೆಗುಂಟಾದಂಥ ದುರ್ವಿಪಾಕವೇ ಇವಕ್ಕೂ ಬಂ ದೆ. ಆದರೆ ಇದರಲ್ಲೊಂದು ವ್ಯತ್ಯಾಸವುಂಟು. ಲ್ವಿಚಾರಕರು ಯುರೋಪಿಯನ್ನರಾದರೂ, ಇ ಗಳಲ್ಲಿ ಏತದ್ದೇಶೀಯರ ಬಂಡವಲವುಂಟು. ಕೂಲಿ ರರೆಲ್ಲರೂ ಹಿಂದಿಯರು. ಇವರ ಸಂಖ್ಯೆ ೨೧ ವಿರವುಂಟು. ಗಿರಣಿಗಳು ಬಂದಾದರೆ- ಇಷ್ಟು ನಕ್ಕೆ ಕೂಲಿ ಇಲ್ಲದಂತಾಗುವದು. ಆದುದರಿಂ ದ ಹಾವೇರಿಯ ನ್ಯಾಯಮಾಡಿ ಗಿರಣಿಯುಳಿಯಬೇಕು; ಕೂಲಿಕಾರರಿಗೆ ಜೀವನವಾಗಬೇಕೆಂದು ರಾಜೀಯ ಸಂಧಾನ ನಡೆದಿದೆ, ಈ ಗಿರಣಿಯವರು ವಿಲಾಯತಿಯ ನೂಲು ತಕ್ಕೊಳ್ಳಬಾರದು. ಹಿಂದುಸ್ಥಾನದಲ್ಲಿ ದೊರೆಯುತ್ತಿರುವ ಪದಾರ್ಥಗಳ ಬದಲಾಗಿ ವಿಲಾಯತಿಯ ಪದಾರ್ಥಗಳನ್ನು ಕೊಳ್ಳಬಾರದು. ಹಿಂದೀ ಜನರ ಕಂಪನಿಗಳಲ್ಲಿಯೇ ಇವುಗಳ ವಿಮೆ ಇಳಿಸಬೇಕು. ಡಾಯರೆಕ್ಟರರಲ್ಲಿ ಏತದ್ದೇಶೀಯರ ಹೆಚ್ಚು ಜನರಿರಬೇಕು. ಸ್ವದೇಶಿಗೆ ವಿರುದ್ಧವಾಗಿರುವಂಥ ಯಾವ ಅಪಕೃತ್ಯ ಮಾಡಬಾರದೆಂದು ಕಾಂಗ್ರೆಸದವರು ಶರ್ತು ಹಾಕಿದ್ದಾರೆ.

ಮೂವತ್ತು ಸಾವಿರ ಜನರ ಕರೇ ನಿಶಾನೆಯ ಬಹಿಷ್ಕಾರ

—೦*೦—

ಮುಂಬಯಿಯ ಗವ್ಹರ್ನರಸಾಹೇಬರು ನಾಸಿಕಕ್ಕೆ ಹೋಗಿ ಬಂದರು. ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡ ಮಾನಪತ್ರ ಕೊಡಲಿಲ್ಲ. ಮುಸಲಮಾನರೂ ಅಸ್ಪೃಶ್ಯರೂ ಮಾನಪತ್ರ ಕೊಟ್ಟರು. ಸಾಹೇಬರು ನಗರ ಪ್ರವೇಶ ಮಾಡುವಾಗ, ಮೂವತ್ತು ಸಾವಿರ ಜನರು ಅಗಸಿಯಲ್ಲಿ ಕರೇ ನಿಶಾನೆ ಹಿಡಕೊಂಡು, ಕೂತಿದ್ದರು. ಸಾಹೇಬರ ಮೋಟಾರ ಬರುವ ಹೊತ್ತಾಯಿತು. ಜನರು ಒಂದೇ ಪಕ್ಕದಲ್ಲಿ ಸೇರಬೇಕೆಂದು ಪೋಲೀಸರು ಗದ್ದಲವೆಬ್ಬಿಸಿದಾಗ, ಕೆಲವರಿಗೆ ಲಾಠೀ ಪ್ರಸಾದ ದೊರೆಯಿತು. ಯುದ್ಧ ಮಂಡಲದ ಮುಖಂಡರ ಕೈ ಬುರುಬುರು ಉಬ್ಬಿತು. ಆದರೆ ಪ್ರಕರಣವು ವಿಕೋಪಕ್ಕೆ ಹೋಗದೆ ಅಷ್ಟಕ್ಕೇ ಶಾಂತವಾಯಿತು. ಇಷ್ಟರಲ್ಲಿ ಸಾಹೇಬರ ಮೋಟಾರ ಬಂತು. ಕರೇ ನಿಶಾನೆಗಳು ಹಾರಾಡಿ, ಎತ್ತ ನೋಡಿದತ್ತ ಅಶುಭ ಸೂಚಕವಾಗಿ ತೋರಿದವು. ನೆರೆದ ಜನರು ಸ್ಯಾಯಿಕಸಸಾಹೇಬರೇ ಹಿಂದಿರುಗಿ ಹೋಗಿರಿ; ಸ್ವರಾಜ್ಯ ಸ್ವಾತಂತ್ರ್ಯದ ಜಯವಾಗಲಿ; ರಾಜ್ಯಕ್ರಾಂತಿಯು ಚಿರಾಯುವಾಗಲೆಂಬ ಪ್ರಚಂಡ ಘೋಷವಾಡಿದರು. ಇವನ್ನೆಲ್ಲ ಕೇಳುತ್ತಾ ಸಾಹೇಬರು ಬಿಡಾರಕ್ಕೆ ದಯಮಾಡಿಸಿದರು.

ಮೌಲಾನಾ ಅಬ್ದುಲ ಕಲಮ ಅಜದರ ದಸ್ತಗಿರಿ.

—(೦)—

ಮೌಲಾನಾ ಅಬ್ದುಲ ಕಲಮ ಅಜದರು ಕಾಂಗ್ರೆಸದ ಅಧ್ಯಕ್ಷರಾಗಿ ಹದಿನೈದು ದಿವಸವಾಗಲಿಲ್ಲ. ಸರದಾರ ಪಟೇಲರು ಇವರಿಗೆ ಅಧ್ಯಕ್ಷಪದದ ಅಧಿಕಾರ ಕೊಟ್ಟರು. ಮೌಲಾನಾನವರು ಅಧ್ಯಕ್ಷರಾದ ಕೂಡಲೆ ಮೀರತಕ್ಕೆ ಹೋದರು. ಅಲ್ಲಿ ಇವರು ಮಾಡಿದ ಭಾಷಣವು ರಾಜದ್ರೋಹಪರವಾಗಿ, ಸರಕಾರದವರು ಇವರ ಮೇಲೆ ವಾರಂಟು ತೆಗೆದರು. ಭಾಷಣ ಮಾಡಿದ ಬಳಿಕ ಇವರು ಕಲಕತ್ತೆಗೆ ಬಂದಿದ್ದರು. ಅಲ್ಲಿ ಇವರನ್ನು ಹಿಡಿದು, ಒಂದು ಫರ್ಸ್ಟಕ್ಲಾಸ ಡಬ್ಬಿಯಲ್ಲಿ ಕೂಡಿಸಿ, ವಿಚಾರಣೆಗಾಗಿ ಮೀರತಕ್ಕೆ ಕರಕೊಂಡು ಹೋದರು.

ಈ ಸುದ್ದಿಯು ಮುಂಬಯಿಗೆ ಶುಕ್ರವಾರ ಮುಂಜಾನೆ ಮುಟ್ಟಿತು. ಕೂಡಲೆ ಊರ ತುಂಬ ಹರತಾಳ ಮಾಡಬೇಕೆಂದು ಜಾಹೀರ ಪತ್ರಿಕೆಗಳನ್ನು ಹಂಚಿದ್ದಾರೆ. ಈಗಿನ ಒಡಂಬಡಿಕೆಯಿಂದ ಯಾವ ಫಲವಾಗದೆಂದು ಮೌಲಾನಾನವರ ಮತವಿರುತ್ತದೆ

ಡಾಕ್ಟರ ಅನಸಾರಿಯವರು ಕಾಂಗ್ರೆಸದ ಅಧ್ಯಕ್ಷರಾದರು.

—§(*)§—

ತಮ್ಮನ್ನು ಹಿಡಿದ ಕೂಡಲೆ ಮೌಲಾನಾನವನು ಡಾಕ್ಟರ ಅನಸಾರಿಯವರನ್ನು ಕಾಂಗ್ರೆಸದ ಅಧ್ಯಕ್ಷರಾಗಬೇಕೆಂದು ಗೊತ್ತುಪಡಿಸಿದ್ದಾರೆ. ಇವರು ಐದನೆಯವರು.

೧ ಪಂಡಿತ ಜವಾಹಿರಲಾಲ
೨ ಪಂಡಿತ ಮೋತಿಲಾಲ
೩ ಸರದಾರ ಪಟೇಲ
೪ ಮೌಲಾನಾ ಅಬ್ದುಲ ಕಲಮ ಅಜದ
೫ ಡಾಕ್ಟರ ಅನಸಾರಿ

ಪುಣೆಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ದಸ್ತಗಿರಿ.

ಪುಣೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ತುಪ್ಪಳೆಯವರನ್ನು ಹಿಡಿದು ಟಾಂಗಾದಲ್ಲಿ ಕೂಡಿಸಿಕೊಂಡು ಹೋದರು. ಇವರನ್ನು ಎಲ್ಲಿಗೆ ಕರಕೊಂಡು ಹೋದರೆಂಬದು ತಿಳಿಯುವದಿಲ್ಲ.

ಪಂಡಿತ ಮೋತಿಲಾಲರಿಗೆ ವಿಶೇಷ ಜಡ್ಡು.

—(೦)—

ಪಂಡಿತ ಮೋತಿಲಾಲರು ಜ್ವರದಿಂದಲೇ ನೈನೀತಾಲಕ್ಕೆ ಹೋದರು. ಪ್ರವಾಸವು ಇವರ ಪ್ರಕೃತಿಯ ಮೇಲೆ ಅನಿಷ್ಟ ಪರಿಣಾಮವನ್ನುಂಟುಮಾಡಿದಂತೆ ತೋರುತ್ತದೆ. ಅಲ್ಲಿಗೆ ಹೋದ ಕೂಡಲೆ, ಉರಿಯು ಹೆಚ್ಚಾಗಿ, ಪ್ರಕೃತಿಯು ಚಿಂತಾಜನಕವಾಗಿರುತ್ತದೆ. ಬೇನೆಯ ನಿದಾನ ಮಾಡಲೋಸುಗ ಡಾಕ್ಟರ ಅನಸಾರಿ, ಡಾಕ್ಟರ ರಾಯ ಮತ್ತು ಸರ ನೀಲರತ್ನ ಸರಕಾರ ಇವರನ್ನು ತಂತಿಯಿಂದ ಕರಿಸಿಕೊಂಡಿದ್ದಾರೆ.

ಯಾರ ಹೊಟ್ಟೆ ಕಡಿದರೆ-
ಯಾರು ಅಜವಾನ ಮುಕ್ಕುವರು.

-○()*()○-

ವಿಸಾಪೂರದ ಜೇಲನಲ್ಲಿ ಕೈದಿಗಳು ಅನುಭವಿಸುತ್ತಿರುವ ಯಾತನೆಗಳು ಗರುಡ ಪುರಾಣದಲ್ಲಿ ಹೇಳಿದ ನರಕದ ಯಾತನೆಗಳಿಗಿಂತ ಹೆಚ್ಚಾಗಿರುತ್ತವೆ. ಇವನ್ನು ದೂರ ಮಾಡಿರಿ. ಆ ತುರಂಗವನ್ನೇ ಬಂದು ಮಾಡಿರೆಂದು ಮುಂಬಯಿಯ ವರ್ತಕ ಸಂಘದವರು ಮುಂಬಯಿ ಸರಕಾರಕ್ಕೆ ತಿಳಿಸಿದ್ದಾರೆ. ಹಾಲಿಡೇ ಎಂಬ ಹೆಸರಿನ ಒಬ್ಬ ಸಾಹೇಬರು ಮುಂಬಯಿಯ ಲಾರ್ಡ ಬಿಶಪಸಾಹೇಬರಿಗೊಂದು ಅನಾವೃತ್ತಪತ್ರ ಬರೆದು, ಈ ಯಾತನೆಗಳನ್ನು ನಿಲ್ಲಿಸಬೇಕೆಂದು ಸೂಚಿಸಿದ್ದಾರೆ. ಹಾಲಿಡೇಸಾಹೇಬರು ಅನ್ನುವದೇನಂದರೆ-

ತುರಂಗದಲ್ಲಿ ಕೈದಿಗಳನ್ನು ಸಣೆಯಿಸಿಕೊಳ್ಳುವದು ಅಮಾನುಷ ಮಾತ್ರವಲ್ಲ. ಕಾಯದೆಗೆ ಅಕ್ರಮವಾದದ್ದಿರುತ್ತದೆ. ಇದರ ವಿರುದ್ಧ ಒಬ್ಬ ಕ್ರಿಶ್ಚನ್ನನಾದರೂ ಒಂದು ಶಬ್ದವೆತ್ತಿಲ್ಲ. ಅಥವಾ ಲೆಕ್ಕಣಿಕೆ ಹಿಡಿದಿಲ್ಲ. ನಿಮ್ಮ ಬಿಶಪ್ಪರ ಪರಿಷತ್ತಿನಲ್ಲಿ ಕೂಡಿದ ಠರಾವನ್ನು ಧ್ಯಾನಕ್ಕೆ ತನ್ನಿರಿ. ಒಬ್ಬ ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ನಿರ್ದಯದಿಂದ ನಡಿಸಿಕೊಳ್ಳುವದನ್ನು ಹೇಗೆ ನೋಡುವದು? ಯಾವನೇ ಮನುಷ್ಯನಿರಲಿ; ಪಂಚ ಮಹಾಪಾತಕಿ ಇರಲಿ; ಆತನಿಗೆ ಸ್ವಚ್ಛ ನೀರು, ಸ್ವಚ್ಛ ಊಟ ದೊರೆಯುವದು ನಿಸರ್ಗವಾಗಿರುತ್ತದೆ. ಮತ್ತು ಸುಧಾರಿಸಿದ ಸರಕಾರದಿಂದ ದಯಾಪೂರ್ವಕವಾದ ನಡಿಸಿಕೊಳ್ಳುವಂಥಾದ್ದಾಗಿರುತ್ತದೆ.

ನಾಗಪೂರದ ತುರಂಗದಲ್ಲಿ ಬ್ಯಾರಿಸ್ಟರ ಅಭ್ಯಂಕರರ ಬೆರಳುಗಳ ಗುರ್ತನ್ನು ಬಲವಂತಿಕೆಯಿಂದ ತಕ್ಕೊಂಡದ್ದನ್ನು ನಿಷೇಧಿಸಲು ಪಟ್ಟಣವಾಸಿಗಳು ಹರತಾಳ ಮಾಡಿದರು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚ್ಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ

ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯಿವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಅಡಚಣಿಯನ್ನು ನಾಡಿಕೊಟ್ಟು ಡ್ರಾಯಿವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದಿವಸದಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವ ನಿಮ್ಮ ಇಚ್ಛೆ ಇದ್ದರೆ ತೀವ್ರ ಒಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರೆ.

ಪ್ರೊ. ವ್ಹಿ. ಎಸ. ಇಟಗಿ.
ಮುನಸಿಫಕೋರ್ಟಿನ ಹತ್ತರ, ಧಾರವಾಡ

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು

ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು

ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ. ಎಸ್ಸ. ಅಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅತ್ಯುತ್ತಮ ಸುದೈವ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಬಿಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಸೌ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ:— ನಿಮ್ಮ ಔಷಧ ಬೇಕಾದಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ—

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹದ್ದಿ ವ ತಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಳಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟೆಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—೦
ಕೃಷ್ಣಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦
೧೯-೧೧-೨೯ ಮೈಸೂರ ಸೆಂಟ್ ಸ್ಟೋರ,
ಬೆಳಗಾವಿ ಯುವಕರಲ್ಲಿ

ಸೀರೆ! ಪತ್ತಲ!! ಕಿಂಗಿ!

ಶ್ರೀದತ್ತ ವ್ಹೀವಿಂಗ್ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ
ಸೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಸೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಚವಕಶಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣಹೋದರೆ— ಮಾಲು ತಿರಿಗಿ ತಕ್ಕೊಳ್ಳುವೆವು.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ. ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ದಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

N. B 1943

ವಿಜಯ

ನಿತ್ಯ ಪತ್ರ
ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೨೫ ನೇ ಅಗಸ್ಟ ೧೯೩೦ (ಸಂಚಿಕೆ ೧೨೪

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾವಧೂತರ ಅಸೇರ್ಜಿ, ಶ್ರೀ. ಆರೂಢಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, ಧಾರವಾಡ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ, ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ. ಥೋಕ ತಕ್ಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್
ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಅಪರೆಟಿವ ಕ್ರೆಡಿಟು ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗಿಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ ಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳ ಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ "	೭-೦-೦
೩ "	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-[illegible]-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ [illegible] ತಿಳ ಕೊಳಿರಿ.

ಮ್ಯಾ. ವಿಜಯ, ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೪೫ ಭಾದ್ರಪದ ಶುದ್ಧ ೨

ಸ್ವರಾಜ್ಯದ ವಿರುದ್ಧ ಯುರೋಪಿಯನ್ನರ ಚಳವಳಿಯು.

—(०)—

ಹಾಲು ಇಲ್ಲ; ಬಟ್ಟಲ ಇಲ್ಲ; ಗುಟುಕ; ಎಂಬಂತೆ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯವಿರಲಿ; ವಸಾಹಾತಿನ ಸ್ವರಾಜ್ಯ ದೊರೆಯುವದು ಕೂಡ ಬಹು ವರ್ಷಗಳ ವಿಚಾರವಾಗುತ್ತಿರುವಾಗ ಯುರೋಪಿಯನ್ನರಲ್ಲಿ ಪ್ರತಿಷ್ಠಿತರೆಂಬವರು ಈ ಸ್ವರಾಜ್ಯದ ವಿರುದ್ಧ ಚಳವಳಿಯನ್ನು ಹೂಡುವದು ಸೋಜಿಗವಾದದ್ದೇ ಸರಿ. ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವದರಿಂದ, ಜಾತಿ ಜಾತಿಗಳಲ್ಲಿ ಕಲಹ ಮತ್ತು ರಕ್ತಪಾತವಾಗುವದೆಂದು ಯುರೋಪಿಯನ್ನರೆಂಬವರೆಲ್ಲರೂ ಹೇಳುವರು. ಸ್ವರಾಜ್ಯ ಕೊಡಬೇಕೆನ್ನುವಂಥವರೂ, ಕೊಡಬಾರದೆನ್ನುವಂಥವರೂ ಇದೇ ಸುತಿ ಹಿಡಿದಿರುತ್ತಾರೆ. ಸ್ವರಾಜ್ಯ ಕೊಟ್ಟರೆ- ದಲಾಯಿತಿಯ ವ್ಯಾಪಾರ ಮುಣುಗುವದೆಂಬ ಹೊಟ್ಟೆಯಲ್ಲಿಯ ಕಿಚ್ಚನ್ನು ಮುಚ್ಚಿಕೊಂಡು, ಹಿಂದೂ ಮುಸಲಮಾನ, ಬ್ರಾಹ್ಮಣ- ಬ್ರಾಹ್ಮಣೇತರ ಜಗಳಗಳ ಸೋಗು ಹಾಕಿದ್ದಾರೆ. ಹಿಂದುಸ್ಥಾನವು ಸ್ವರಾಜ್ಯಕ್ಕೆ ಪಾತ್ರವಿಲ್ಲೆಂದು ಕಾನ್ಸರವೇಟಿವ್ ಪಕ್ಷದ ಮಂತ್ರಿಯಾಗಿದ್ದ ಮಿ. ಚರ್ಚಹಿಲ್ಲಸಾಹೇಬರು ಇಂಗ್ಲಂಡದಲ್ಲಿ ಚಳವಳಿ ಪ್ರಾರಂಭಿಸಿದ್ದಾರೆ. ಹಿಂದೀ ಜನಾಂಗದ ಮಹತ್ವಾಕಾಂಕ್ಷೆಗಳ ಮೇಲೆ ಬರೇ ಕೆಟ್ಟಂಥ ರಿಪೋರ್ಟು ಬರೆದ ಸರ ಸ್ವಾಯ್ಡನ್ನರೇ ಹಿಂದೀ ಸುಶಿಕ್ಷಿತರ ಸ್ವರಾಜ್ಯ ವಿಷಯಕವಾದ ಬೇಡಿಕೆಗಳನ್ನು ಕೆಲವಂಶದಿಂದಾದರೂ ಪೂರ್ಣ ಮಾಡಬೇಕೆಂದು ಈಗೀಗ ಹೇಳಲಾರಂಭಿಸಿದ್ದಾರೆ. ಇವರಿಗೆ ಸಹ ಒಪ್ಪಿಗೆಯಾಗದಂಥ ಭಾಷಣವನ್ನು ಮಿ: ಚರ್ಚಹಿಲ್ಲಸಾಹೇಬರು ಮಾಡುವದೂ, ಅವರ ಪಕ್ಷಗಳ ವರ್ತಮಾನಪತ್ರಗಳು ಪ್ರತಿಧ್ವನಿ ಕೊಡುವದೂ ನಿಂದ್ಯವಾದದ್ದೇ ಸರಿ. ಇವರ ವರ್ತನವು ಹಿಂದೀ ಮತ್ತು ಯುರೋಪಿಯನ್ನರೆಂಬದರಲ್ಲಿ ಐಕ್ಯವನ್ನುಂಟುಮಾಡದೆ, ಭೇದವನ್ನು ಮತ್ತಷ್ಟು ಹಿಗ್ಗಿಸುವದೆಂದು ಹೇಳುವ ಅವಶ್ಯಕತೆಯೇ ಇರುವದಿಲ್ಲ.

ಸ್ವರಾಜ್ಯ ಕೊಡದಿದ್ದರೆ- ಏನಾಗುವದು?

ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ಕೊಡದಿದ್ದರೆ- ಏನಾಗುವದೆಂದು ಒಬ್ಬ ಇಂಗ್ರೇಜಿ ಗೃಹಸ್ಥರೇ ಹೇಳುತ್ತಾರೆ. ಇವರು ಬರೇ ತರ್ಕದಿಂದ ಹೇಳುವದಿಲ್ಲ. ಹೇಳುವ ಮೊದಲು ಹಿಂದೂ, ಮುಸಲಮಾನ, ಮವಾಳ, ರಾಷ್ಟ್ರೀಯ, ಸಂಪೂರ್ಣ ಸ್ವಾತಂತ್ರ್ಯ ಮೊದಲಾದ ಪಕ್ಷಗಳ ಮುಖಂಡರನ್ನು ಕಂಡು, ಅವರ ಕೂಡ ಭಾಷಣ ಮಾಡಿ, ಅನಂತರ ತಮ್ಮ ಮತ ಹೇಳಿರುತ್ತಾರೆ. ಇವರು ಅನ್ನುವದೇನಂದರೆ-

ಅಹಿಂಸೆಯು ಅಸಹಕಾರವೆಂಬದು ಬಹಳ ದಿವಸ ಉಳಿಯಲಾರದು. ಜನರು ಮಹಾತ್ಮರ ಮಾತೂ ಕೇಳಲಾರರು. ಲಾಹೋರಿನಲ್ಲಿ ಬಾಂಬಿನ ಕಾರಖಾನೆ ಹೊರಟಿತು. ಚಿತಗಾಂಗಿನಲ್ಲಿ ಬಂಡಾಯ ಸ್ವರೂಪದ ಕ್ರಾಂತಿಯಾಯಿತು. ಇವೆಲ್ಲ ಮುಂದಿನ ಕುರುಹುಗಳು. ಜನರು ಸರಕಾರವನ್ನು ಪರಿಪರಿಯಾಗಿ ಹಿಂಸಿಸುವರು. ರೇಲ್ವೆಯ ಹಳಿಗಳನ್ನು ಕಿತ್ತಿ ಹಾಕುವದು ಹೆಚ್ಚು ಪರಿಣಾಮಕಾರಕವಾಗುವದೆಂದು ಮೊದಲು ಪ್ರಯತ್ನಿಸುವರು. ಇದರ ಕೂಡ ಕ್ಷಣೆಯಲ್ಲಿ ಹಿಂಸೆಯಿಂದಲೇ ರಾಜ್ಯಕ್ರಾಂತಿಗೆ ಪ್ರಾರಂಭವಾಗುವದು.

ಮೇಲಿನ ಅಭಿಪ್ರಾಯವನ್ನು ವೆಬ್ಬ ವ್ಹಿಲ್ಲರರೆಂಬವರು ಜಾಹೀರ ಮಾಡಿದ್ದು, ಕಲಕತ್ತೆಯ ಯುರೋಪಿಯನ್ನರು ಹೇಳುವಂತೆ ಮಾಂಟಗು ಸುಧಾರಣೆಗಳನ್ನು ಸಹ ನಿಲ್ಲಿಸಿ, ಮಾರ್ಲೆ ಮಿಂಟೋನ ಕಾಲಕ ಹಿಂದಕ್ಕೆ ಹೋದರೆ- ಬಾಂಬಿನ ಪುನರುಜ್ಜೀವನವಾಗುವದೆಂದು ಮೆ. ಆರ್ಚರ ಮೂರಸಾಹೇಬರು ಸ್ಪಷ್ಟವಾಗಿ ಅಂದಿರುತ್ತಾರೆ.

ಹರಕಾರೆ ಗುರುರಾಯರು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡರು

—(०)—

ಶ್ರೀ ಹರಕಾರೆ ಗುರುರಾಯರು ಪೋಲೀಸ ಮತ್ತು ಮ್ಯಾಜಿಸ್ಟ್ರೇಟರ ಮೇಲೆ ಪ್ರೆಸಿಡೆನ್ಸಿ ಕೋರ್ಟ ಮತ್ತು ಹಾಯಕೋರ್ಟಿನಲ್ಲಿ ಫಿರ್ಯಾದಿ ಮಾಡಿದ್ದನ್ನೂ ಇವನ್ನು ತೆಗೆದು ಹಾಕಿದ್ದನ್ನೂ ಈ ಮೊದಲು ಬರೆದಿರುತ್ತೇವಷ್ಟೇ; ನನ್ನ ಅರ್ಜಿಗಳು ಸುಳ್ಳಿದ್ದರೆ- ಸುಳ್ಳು ಫಿರ್ಯಾದಿ ಮಾಡಿದನೆಂದೂ ನನ್ನ ಮೇಲೆ ಕೆಲಸ ನಡೆಸಿರೆಂದೂ ಇವರು ಒಂದು ಅರ್ಜಿಯನ್ನು ಬರಕೊಂಡು, ಮಿ. ದಸ್ತೂರಸಾಹೇಬರಿಗೆ ಕೊಟ್ಟರು. ಅವರು ಈ ಅರ್ಜಿಯನ್ನೂ ಕಿತ್ತಿ ಹಾಕಿದರು. ಆಗ ಇವರು ತಮ್ಮ ವಿಜಯವಾಯಿತೆಂದು ದಸ್ತೂರಸಾಹೇಬರಿಗೆ ಹೇಳಿ, ಕೋರ್ಟಿನಿಂದ ಹೊರಬಿದ್ದರು.

ಕೌನ್ಸಿಲ ಚುನಾವಣೆಯಲ್ಲಿ ಒಂದು ಮಾದರಿ ತಕ್ಕೊಳ್ಳುವಂಥ ಪ್ರತಿಜ್ಞೆ

——(०)——

ಕಾಂಗ್ರೆಸದ ಆಜ್ಞೆಯ ಪ್ರಕಾರ ಯಾರೂ ಚುನಾವಣೆಯಲ್ಲಿ ಉಮೇದವಾರರಾಗಿ ನಿಲ್ಲತಕ್ಕದ್ದಲ್ಲ. ಆದರೆ ಮವಾಳ, ಮತ್ತು ಬೇರೆ ಮೂರ್ಖರ ಪಾಲಿಗೆ ಈ ಸ್ಥಳ ಹೋಗಬಾರದೆಂದು ಶ್ರೀ ವಾಸುದೇವರಾವ ಪಾಟೀಲರೆಂಬವರು ಉಮೇದವಾರರಾದರು. ಪ್ರತಿಸ್ಪರ್ಧಿಯಿಲ್ಲದೆ, ಇವರ ಚುನಾವಣೆಯಾಯಿತು. ಚುನಾವಣೆಯಾದರೂ ಕೌನ್ಸಿಲಕ್ಕೆ ಹೋಗಿ ರಾಜನಿಷ್ಠೆಯ ಆಣೆಮಾಡಬಾರದೆಂದು ಮತದಾರರು ಇವರಿಗೆ ಶರ್ತು ಹಾಕಿದ್ದಾರೆ. ಆ ಕರಾರ ಪ್ರಕಾರ ಇವರು ನಡೆಯುವಂತೆ ವಚನ ಕೊಟ್ಟಿದ್ದಾರೆ. ಹೊಸದಾಗಿ ಮೆಂಬರರಾಗುವರು ಕೌನ್ಸಿಲದಲ್ಲಿ ಕಾಲಿಟ್ಟ ಕೂಡಲೆ- „ ನಾನು ರಾಜನಿಷ್ಠನಾಗಿದ್ದೇನೆಂದು ,, ಆಣೆಮಾಡಬೇಕಾಗುತ್ತದೆ ಆಣೆ ಮಾಡದಿದ್ದರೆ- ಕೌನ್ಸಿಲ ಮೆಂಬರರೇ ಆಗುವದಿಲ್ಲ. ಯಾವ ಕೆಲಸದಲ್ಲಿಯೂ ಭಾಗ ತಕ್ಕೊಳ್ಳಲಾರರು. ಹೀಗಾಗಿ ಆ ಸ್ಥಳವು ತಾನಾಗಿ ತೆರವು ಬೀಳುವದು.

ಹೊಡೆತಕ್ಕೊಂದು ವಂದೇ ಮಾತರಮ್.

——(०)——

ಬೆಜವಾಡದಲ್ಲಿರುವ ಹ್ವಾಯ್ಟವೇ ಲೇಡಲಾ ಕಂಪನಿಯ ಅಂಗಡಿಯಲ್ಲಿ ವಿಲಾಯತಿಯ ಅರಿವೆ ಕೊಳ್ಳಲು ಗ್ವಾಲಿಟೋಲಿಯ ನವಾಬಸಾಹೇಬರು ಹೋದರು. ಅವರು ತಿರಿಗಿ ಬಂದಾಗ ಸ್ವಯಂಸೇವಕರು ಅವರ ಕ್ರಿಶ್ಚನ್ನ ಭೃತ್ಯನ ಕಣಕ ಮೆತ್ತಗೆ ಮಾಡಿದರು. ಕಂಪನಿಯ ಮೇನೆಜರರು ಬಂದು, ಒಬ್ಬ ಸ್ವಯಂಸೇವಕನನ್ನು ಹೊಡೆಯಲಾರಂಭಿಸಿದರು. ಒಂದು ಪೆಟ್ಟು ಬಿದ್ದ ಕೂಡಲೆ ಆತನು ವಂದೇ ಮಾತರಮ್ ಎನ್ನುವನು. ಕಡೆಗೆ ಮೇನೇಜರನೇ ನಾಚಿಕೆ ಪಟ್ಟು ಹೊಡೆಯುವದನ್ನು ಬಿಟ್ಟನು.

ಕಾಲೇಜದ ಪ್ರಿನ್ಸಿಪಾಲರಿಗೆ ಪೋಲೀಸ ಲಾಠೀ ಪ್ರಸಾದ

—(०)—

ಪುಣೆಯ ಸತ್ಯಾಗ್ರಹ ಶಿಬಿರದಲ್ಲಿರುವ ಕೆಲ ಸ್ವಯಂಸೇವಕರನ್ನು ಹಿಡಿಯಲು ಪೋಲೀಸರು ಹೋದರು. ಆಗ ಶ್ರೀ. ಪರಶುರಾಮ ಭಾವು ಕಾಲೇಜದ ಒಳಂಗಳಲ್ಲಿದ್ದ ಕೆಲ ವಿದ್ಯಾರ್ಥಿಗಳಿಗೂ, ಪ್ರಿನ್ಸಿಪಾಲರಾದ ಪ್ರೊಫೇಸರ ಸಟನೀಸರಿಗೂ ಪೋಲೀಸರಿಂದ ಪ್ರಸಾದ ದೊರೆಯಿತು. ಇದೊಂದು ಸತ್ಯನಾರಾಯಣನ ಪ್ರಸಾದವೆಂದೇ ತಿಳಿಯಬೇಕು. ಇದು ದೊರೆಯದೆ, ಸ್ವರಾಜ್ಯಫಲ ಹೇಗೆ ದೊರೆಯುವದು?

ಹಗಲೆಲ್ಲ ಕಳವು ಮಾಡಲಾರೆನು.

ಮುಂಬಯಿಯಲ್ಲಿ ಒಬ್ಬನು ಕಳವಿನ ಕೇಸಿನಿಂದ ಹಿಂದೆ ಅನೇಕ ಸಾರೆ ಶಿಕ್ಷೆಯಲ್ಲಿಯೇ ಮುಪ್ಪಾಗಿದ್ದಾನೆ. ಕುರುಂಗದ ಹೊರಗೆ ಬಂದಕೂಡಲೆ ಕಳವಿಗೆ ಪ್ರಾರಂಭಿಸುವನು. ಹೋದ ವಾರದಲ್ಲಿ ಕುರುಂಗದಿಂದ ಬಿಡುಗಡೆಯಾದ ಕೂಡಲೆ- ಕಳವು ಮಾಡಿದನು. ಪೋಲಿಸರು ಈತನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಆಗ ಈತನು ಹಗಲೆಲ್ಲ ಕಳವು ಮಾಡಲಾರೆನು. ಒಮ್ಮೆ ಸಾಯುವತನಕ ಶಿಕ್ಷೆ ಕೊಟ್ಟು ಬಿಡಿರೆಂದು ಮ್ಯಾಜಿಸ್ಟ್ರೇಟರಿಗೆ ಬೇಡಿಕೊಂಡನು. ಆದರೂ ಆರೇ ತಿಂಗಳು ಶಿಕ್ಷೆ ಹೊಂದಿದನು.

ಮಾರವಾಡಿ ಸ್ತ್ರೀಪುರುಷರ ಮೆರವಣಿಗೆ.

——(o)——

ವೈಕುಂಠ ಪರದೇಶಿ ಅರಿವೆ.

—(o)—

ಈ ವಾರದಲ್ಲಿ ಧಾರವಾಡದಲ್ಲಿರುವ ಮಾರವಾಡಿಗಳು ಎರಡು ದಿವಸ ತಮ್ಮ ದೇವರ ಉತ್ಸವ ಮಾಡಿ ಊರೊಳಗೆ ಮೆರವಣಿಗೆ ಹೊರಡಿಸಿದ್ದರು. ಸ್ತ್ರೀಪುರುಷರೂ ಇದ್ದರು. ಇವರ ವೈಕುಂಠ ಇದ್ದ ಅರಿವೆಗಳೆಲ್ಲ ಪರದೇಶಿಯ ಅತ್ಯಂತ ಸೂಕ್ಷ್ಮ ಮತ್ತು ಪಾರದರ್ಶಕವಾದಂಥ ಒಟ್ಟೆಗಳಿದ್ದವು. ಇವರು ಈ ರೀತಿಯಿಂದಾದರೂ ತಂತಮ್ಮ ಅಂಗಡಿಗಳಲ್ಲಿದ್ದ ವಿದೇಶಿ ವಸ್ತ್ರಗಳನ್ನು ಕಡಿಮೆ ಮಾಡಿದ್ದೊಂದು ಸಮಾಧಾನವೇ ಎಂದು ಕಾಂಗ್ರೆಸದವರು ತಿಳಿಯಬೇಕಲ್ಲವೇ?

ಪುಣೆಯ ದಂಡಿನ ಕಾಂಗ್ರೆಸ ಕಮೀಟಿಯಲ್ಲಿ
ಝಡತಿ ಮತ್ತು ದಸ್ತಗಿರಿ

—(o)—

ಪುಣೆಯಲ್ಲಿ ದಂಡಿನ ಹದ್ದಿನಲ್ಲಿಯೂ ಒಂದು ಕಾಂಗ್ರೆಸ ಕಮೀಟಿಯುಂಟು. ಕಾಂಗ್ರೆಸ ಕಮೀಟಿಗಳು ದ್ರೋಹಾಯುಕ್ತವೆಂದು ಸರಕಾರದವರು ಜಾಹೀರನಾಮೆಯನ್ನು ಹಚ್ಚಿದ ಕೂಡಲೆ, ಪೋಲಿಸರು ಇದರ ಕಚೇರಿಗೆ ಹೋಗಿ, ಅನೇಕ ಕಾಗದ ಪತ್ರಗಳನ್ನು ಜಪ್ತ ಮಾಡಿದ್ದಲ್ಲದೆ, ಅವರ ಅಧ್ಯಕ್ಷರಾದ ಶ್ರೀ ನಟವರಲಾಲ ಶಹಾ ಇವರನ್ನು ಹಿಡಕೊಂಡು ಹೋದರು. ಕೂಡಲೆ ಕಾಂಗ್ರೆಸ ಕಮಿಟಿ ಕೂಡಿ, ಶ್ರೀ ರಮಣಲಾಲ ಶಹಾ ಇವರನ್ನು ಅಧ್ಯಕ್ಷರಾಗಿ ನೇಮಿಸಿದ್ದಾರೆ.

ಬರುವ ಚಳಿಗಾಲದಲ್ಲಿ ಮುಂಬಯಿಯ ಗವರ್ನರಸಾಹೇಬರು ರಜೆ ತಕ್ಕೊಂಡು ವಿಲಾಯತಿಗೆ ಹೋಗುವರು. ಅವರ ಸ್ಥಳವು ಬಹುಶಃ ಮಿ. ಹಾಟಸನ್ನ ಸಾಹೇಬರಿಗೆ ದೊರೆಯುವವದೆಂದು ಹೇಳುವರು ಹೀಗಾದರೆ- ಶಾಂತಿ ರಾಜ್ಯದ ಜಯವಾಗುವದು.

ಹೇಗೆ ಸ್ವರಾಜ್ಯ ದೊರೆಯುವದು.

ಒಂದು ಸಾರೆ ಅಮೇರಿಕಾ ದೇಶದ ಅಧ್ಯಕ್ಷರಾಗಿದ್ದ ಮಿ. ರೂಜವೆಲ್ಟಸಾಹೇಬರು ಹಿಂದುಸ್ಥಾನದ ಸ್ವರಾಜ್ಯ ವಿಷಯಕವಾಗಿ ಹೇಳುವದೇನೆಂದರೆ-

ಸ್ವರಾಜ್ಯವು ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರಕ್ಕೆ ಕೊಟ್ಟು ದೊರೆಯುವದಲ್ಲ. ಕ್ರಮಾನುಸಾರವಾಗಿ ಅದರ ಬೆಳವಣಿಗೆಯಾಗತಕ್ಕದ್ದು. ಅನುಭವ ಮತ್ತು ಕಷ್ಟನಷ್ಟಗಳನ್ನು ಸಹಿಸಿದ ಹೊರತು ಸ್ವರಾಜ್ಯದ ವಿಕಾಸವಾಗುವದಿಲ್ಲ. ಹಿಂದೀ ಜನರು ಎಂದು ಸುಶಿಕ್ಷಿತ ಮತ್ತು ಸ್ವರಾಜ್ಯಕ್ಕೆ ಪಾತ್ರರಾಗುವರೋ ಅಂದೇ ಸ್ವರಾಜ್ಯ ದೊರೆಯುವದು.

ರಾಷ್ಟ್ರೀಯ ನಿಶಾನೆಯ ದೆಸೆಯಿಂದ ಗೊಂದಲ.

—(o)—

ಕನ್ನಡಿ ಒಡೆದವು; ಬೆಂಚು ಸುಟ್ಟವು.

-○()*()○-

ಮುರಾದಾಬಾದ ಜಿಲ್ಹೆಗೆ ಸೇರಿದ, ಅಮರೋಹಾದ ಮ್ಯುನಿಸಿಪಾಲಿಟಿಯ ಟಾವುನಹಾಲಿನ ಮೇಲೆ ಕಾಂಗ್ರೆಸ ಕಮೀಟಿಯವರು ರಾಷ್ಟ್ರೀಯ ನಿಶಾನೆ ಹಚ್ಚಿದರು. ಮ್ಯುನಿಸಿಪಾಲಿಟಿಯವರು ಇದನ್ನು ಕಿತ್ತಿಸಬೇಕೆಂದರು. ಆಗ ಊರ ಜನರು ಅಡ್ಡ ಬಂದರು. ಆಗೆದ್ದ ಗೊಂದಲದಲ್ಲಿ ಆ ಮಂದಿರದ ಕನ್ನಡಿಗಳು ಒಡೆದು ಪುಡಿಯಾದವು. ಬೆಂಚುಗಳಿಗೆ ಬೆಂಕಿ ಹತ್ತಿ ಸುಟ್ಟು ಬೂದಿಯಾದವು.

ಧಾರವಾಡ—

೧೫ ದಿವಸವಾಯಿತು. ಮಳೆಯಿಲ್ಲ. ಮಳೆಯ ಅವಶ್ಯಕತೆಯುಂಟು.

ಇಲ್ಲಿಯ ಸರಕಾರೀ ವಕೀಲರಾದ ಶ್ರೀ. ಸಾಹುಕಾರ ವಕೀಲರ ಮನೆಯಲ್ಲಿ ಕಳವಾಗಿ ೧೬೦೦ ರೂಪಾಯಿ ಬೆಲೆಯ ಒಡಿವೆಗಳು ಹೋಗಿವೆ ಕಳ್ಳರು ಹಿತ್ತಲ ಬಾಗಿಲದಿಂದ ಬಂದು, ಇವರ ಹೆಂಡತಿ ಮತ್ತು ಮಗಳ ಮೈಮೇಲಿನ ಒಡಿವೆಗಳನ್ನು ಬಿಚ್ಚಿಕೊಂಡು ಪಲಾಯನ ಹೇಳಿಸಿದ್ದಾರೆ.

ಮೌಲಾನಾ ಅಬ್ದುಲ ಕಲಮ ಆಜದರನ್ನು ಹಿಡಿದ ಬಗ್ಗೆ ನಿನ್ನಿನ ದಿವಸ ಈ ಊರಲ್ಲಿ ಕೆಲ ಮಟ್ಟಿಗೆ ಹರತಾಳವಾಯಿತು. ಆಧಿಕ್ಯವಾದ ಕಂಡುಬಂದ ಸ್ವಂಶೌದ್ಧರಿಂದ ಸಂಪೂರ್ಣ ಹರತಾಳಕ್ಕೆ ಆತಂಕ ಬಂತು.

ಹುಬ್ಬಳ್ಳಿ ತಾಲೂಕ ಕೋಳವಾಡದಲ್ಲಿಯ ಶೇಂದಿಯ ಗಡಂಗ ಬಂದಾಯಿತು.

ಮೊರಬದಲ್ಲಿ ಕೌನ್ಸಿಲ ಬಹಿಷ್ಕಾರ!!

ರಾ. ಬ. ಕಂಬಳಿಯವರಿಗೆ
ಕರೇ ನಿಶಾನೆಗಳ ಬಹುಮಾನ!!!

ಇದೇ ತಿಂಗಳು ೨೧ನೆಯ ತಾರೀಖಿನ ದಿವಸ ರಾ. ಬ. ಕಂಬಳಿಯವರು ಹೋಟು ಕೇಳುವದಕ್ಕಾಗಿ ನವಲಗುಂದ ತಾಲೂಕಿಗೆ ಸೇರಿದ ಮೊರಬ ಗ್ರಾಮಕ್ಕೆ ಹೋದರು. ಇದೊಂದು ಪೋಲಿಂಗ ಸ್ಟೇಶನವು. ಇಲ್ಲಿ ವೀರಶೈವರೇ ಪ್ರಾಮುಖ್ಯವಾಗಿ ವಾಸಿಸುವರು. ಇವರ ತರುವಾಯ ರಡ್ಡೀ ಜನರಾಗಿದ್ದಾರೆ. ರಾ ಬ ರವರು ಅಲ್ಲಿಗೆ ಹೋದ ಕೂಡಲೆ- ಜನರು ಕರೇ ನಿಶಾನೆ ಹಿಡಕೊಂಡು ಇವರ ಸನ್ಮಾನ ಮಾಡಿದರು. ಪ್ರಾರಂಭದಲ್ಲಿ ಹತ್ತೇ ಜನರಿದ್ದರು. ಅದು ಬೆಳೆಯುತ್ತಾ ಮುನ್ನೂರು, ನಾನೂರಾಯಿತು- ಪ್ರತಿಯೊಬ್ಬರು ಶೇಮ ಶಬ್ದಗಳ ಮಳೆ ಸುರಿಸಿದರು- ಊರ ತುಂಬ ಶೇಮ ಶಬ್ದವೇ ಶಬ್ದವಾಯಿತು- ನೀವು ಮೆಂಬರರಾಗಿ ಹತ್ತು ವರ್ಷವಾಯಿತು; ಯಾವ ಯಾವ ಕಸರತ್ತು ಕಿಸಾಮತ್ತು ಮಾಡಿದ್ದಿರೇನೆಂಬದನ್ನು ಹೇಳಿ, ಹೋಟು ಕೇಳಿರಿ; ಇಲ್ಲವಾದರೆ ಗಾಂಧೀತತ್ವ ಸ್ವೀಕಾರ ಮಾಡಿರೆಂದು ಜನರು ಒತ್ತಾಯಪಡಿಸಿದರು- ರಾ ಬ ರವರಿಗೆ ಹೇಳುವದಕ್ಕೂ ಕೇಳುವದಕ್ಕೂ ಸಮಯವಿಲ್ಲದಾಯಿತು- ಇದು ಹತ್ತು ವರ್ಷದ ಹಿಂದಿನ ಮೊರಬವಲ್ಲೆಂದೂ, ಆಗಿನ ವೀರಶೈವರು ಈಗಿನವರಲ್ಲೆಂದೂ ರಾ ಬ ರವರು ಕಂಡುಕೊಂಡರು- ತಮಗೆ ಮಾರಾಟವಿಲ್ಲೆಂದು ಮೋಟಾರ ಹತ್ತಿದರು- ಆದೇ ಆಗ ಬಣ್ಣ ಕೊಟ್ಟು, ಹೊಸದೆಂದು ತೋರುತ್ತಿದ್ದ ಮೋಟಾರು ಅಸಹ್ಯವಾಗಿ ವಿದ್ರೂಪ ಹೊಂದಿತು- ಮುಂದೇನಾಯಿತೆಂಬದನ್ನು ಆ ಊರಿಂದ ಬಂದ ಪತ್ರದಲ್ಲಿ ಬರೆದಿರುವದಿಲ್ಲ ರಾ ಬ ರವರು ಇನ್ನಾದರೂ ಹೋಟಿನ ಉಸಾಬರೀ ಬಿಡಬೇಕು ಏಕಂದರೆ ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರದು

ಬೆಳಗಾಂವಿಯಲ್ಲಿ ಗಡಂಗಗಳ ಮುಂದಿನ ಪಿಕೆಟಿಂಗದ ದೆಸೆಯಿಂದ ದಿನಾಲು ಸ್ವಯಂಸೇವಕರನ್ನು ಹಿಡಿಯುವದು ನಡೆದಿದೆ. ಶಿಕ್ಷೆ ಕೊಡಲಿಕ್ಕಂತೂ ಮ್ಯಾಜಿಸ್ಟ್ರೇಟರು ಸಿದ್ಧರಾಗಿಯೇ ಕೂತಿದ್ದಾರೆ.

ಸೂಚನೆ-

ಇವತ್ತಿನ ಪತ್ರದ ಕೂಡ ಮೆಸರ್ಸ ತ್ರಿಲೋಚನಲಾಲ ಬಂಧು ಧಾರವಾಡ ಇವರ ಶಿವರಲೇಟಿ ಮೋಟರದ ಜಾಹೀರಾತನ್ನು ಉಪ ಪತ್ರಿಕೆಯಾಗಿ ಹಂಚುತ್ತೇವೆ. ಅದನ್ನು ಅವಶ್ಯವಾಗಿ ಅವಲೋಕಿಸಬೇಕು-

R· N. B 1443

ವಿಜಯ

ಸಾಪ್ತಾಹಿಕ ಬೆಲೆ ೧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಮಂಗಳವಾರ ತಾರೀಖು ೨೬ ನೇ ಅಗಸ್ಟ ೧೯೩೦ (ಸಂಚಿಕೆ ೩೨

ದಬ್ಬಾಳಿಕೆ, ಕಾಯದೆಭಂಗ.

ಅಹಮದಾಬಾದಿನಲ್ಲಿ ಲಾಠೀ ರಾಜ್ಯ.

೧೨೫ ಜನರು ಘಾಯವಾದರು.

ಅಹಮದಾಬಾದವು ಮಹಾತ್ಮರ ವಾಸಸ್ಥಾನವು. ಅಹಿಂಸೆಯ ಅಸಹಕಾರದ ಪುಣ್ಯಸ್ಥಳವು ಆದರೆ ಆಳರಸರು ಇದನ್ನು ಹಿಂಸೆಯ ಕ್ಷೇತ್ರಮಾಡಿ ೧೨೫ ಜನರ ಕ್ಷೌರವಿಧಿ ನಡಿಸಿದರು. ಅದಕ್ಕುಂಟಾದ ಕಾರಣ ಅಷ್ಟು ದೊಡ್ಡದಲ್ಲ. ಕೇವಲ ವಿದ್ಯಾರ್ಥಿಗಳ ಸತ್ಯಾಗ್ರಹ. ಅಲ್ಲಿಯ ವಿದ್ಯಾರ್ಥಿಗಳು ಸರಕಾರೀ ಹಾಯಸ್ಕೂಲಿನ ಮೇಲೆ ರಾಷ್ಟ್ರೀಯಪತಾಕೆಯನ್ನೇರಿಸಬೇಕೆಂದು ಮೆರವಣಿಗೆಯಿಂದ ಹೊರಟರು. ಸರಕಾರದ ಕಟ್ಟಡದ ಮೇಲೆ ಹಿಂದುಸ್ಥಾನದ ಹಿಂದೀ ಸ್ವರಾಜ್ಯ ಸ್ವಾತಂತ್ರ್ಯದ ನಿಶಾನೆ ಏರಿಸುವದು ಅಪರಾಧವೇ ಸರಿ. ಏಕೆಂದರೆ ಆಳರಸರು ಅಹಮದಾಬಾದವು ಇಂಗ್ಲಂಡದಲ್ಲಿರುವ ಮ್ಯಾಂಚೆಸ್ಟರವೆಂದೇ ಭಾವಿಸಿರಬಹುದು. ಆದ್ದರಿಂದ ಹಿಂದೀ ಜನರ ರಾಜ್ಯದಲ್ಲಿಯೇ ಹಿಂದೀ ನಿಶಾನೆ ಏರಬಾರದೆಂದು ಅವರ ಆಗ್ರಹ. ಹಾಯಸ್ಕೂಲಿನ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚುವ ಸಾಹಸ ನಡೆಯಿತೆಂಬ ವರ್ತಮಾನವು ಪಟ್ಟಣದ ತುಂಬ ವಿದ್ಯುದ್ವೇಗದಿಂದ ಹಬ್ಬಿತು. ಸಾವಿರಾರು ಜನ ಸ್ತ್ರೀಪುರುಷರು ವಿದ್ಯಾರ್ಥಿಗಳ ಮೆರವಣಿಗೆಯಲ್ಲಿ ಸೇರಿದರು. ಹಾಯಸ್ಕೂಲಿನ ಮುಂಭಾಗದಲ್ಲಿ ಜನಜಾತ್ರೆಯಾಯಿತು. ಪ್ರಶಾಂತ ಜನ ಸಮ್ಮೇಳನ ಕೂಡಿದ ವರ್ತಮಾನ ಕೇಳಿ ಪೋಲೀಸರು ತಮ್ಮ ಬಲವನ್ನು ಬೆಳೆಸಿದರು. ಕಮೀಶನರ, ಎಜ್ಯುಕೇಶನಲ ಇನ್ಸಪೇಕ್ಟರ, ಮ್ಯಾಜಿಸ್ಟ್ರೇಟ ಮೊದಲಾದವರೂ ಬಂದರು. ಬೆಂಬಲಕ್ಕೆ ಕಾದಿಟ್ಟ ಸ್ವಾರ ಮತ್ತು ಸಿಪಾಯರ ಕಂಪನಿಗಳು ಬಂದವು. ವಿದ್ಯಾಪೀಠ ಹೋಗಿ, ಯುದ್ಧಮಂಡಲವಾಯಿತು. ಪೋಲಿಸರ ನೋಟವು ಅತ್ಯಂತ ಭಯಾನಕವಾಯಿತು. ಮುಂಬಯಿಯು ಮರಕಳಿಸಿ ಬರುವವೆಂದು ಯಾರೊಬ್ಬರಿಗೆ ಅನಿಸಿತು. ಬರಬರುತ್ತಾ ದುಶ್ಚಿಹ್ನಗಳು ಹೆಚ್ಚೆಚ್ಚಾಗಿ ತೋರಲಾರಂಭಿಸಿದವು. ಅಂದೇ ಪ್ರಾತಃಕಾಲದಲ್ಲಿ ಪಂಡಿತ ಮಾಲವಿಯಾ ಮತ್ತು ಅಧ್ಯಕ್ಷ ಪಟೇಲರು ಸುರತದಿಂದ ಅಲ್ಲಿಗೆ ಪ್ರಯಾಣ ಬೆಳೆಸಿದ್ದರು. ಅಪರಾಹ್ಣದ ಮೂರೂವರೀ ಗಂಟೆಗೆ ಇವರ ವ್ಯಾಖ್ಯಾನವೆಂದು ಪ್ರಸಿದ್ಧವಾಗಿತ್ತು. ಆದರೆ ಈ ಸತ್ಯಾಗ್ರಹದ ಮುಂದೆ ವ್ಯಾಖ್ಯಾನದ ಸದ್ದೇ ಅಡಗಿತು. ಜನರು ವ್ಯಾಖ್ಯಾನಕ್ಕೆ ಹೋಗದೆ, ಇಲ್ಲಿಗೇ ಬಂದರು. ಬಂದವರು ಅಲ್ಲಿಂದ ಕದಲಲೇ ಇಲ್ಲ. ಸ್ವತಃ ಪಂಡಿತರು ಅಧ್ಯಕ್ಷ ಪಟೇಲರ ಕೂಡ ಸಮರಾಂಗಣದ ಮುಂದೆ ಹಾದು ಹೋದರು. ಸಂಜೆಯಾಗುತ್ತಾ ಬಂತು. ಎರಡೂ ಪಕ್ಷಗಳು ಹಿಡಿದ ಹಟ ಬಿಡಲಿಲ್ಲ. ಕೊನೆಯಲ್ಲಿ ವಿದ್ಯಾರ್ಥಿಗಳೇ ಹಲ್ಲೆಯೇರಿಸಿದರು. ಕೆಲವರು ತಿಳ್ಳೀ ಆಟದಲ್ಲಿ ಕೊಸರಿಕೊಂಡು ಹೋಗುವಂತೆ ಪೊಲೀಸರನ್ನು ಕೊಸರಿಕೊಂಡು ಅಂದರೆ ಅವರ ಸಂದಿನೊಳಗಿಂದ ಶಾಲೆಯ ಒಳಂಗಳದಲ್ಲಿ ಹೊಕ್ಕು ಸಾಲಗುಡಿಯನ್ನೇರಿಸುವದನ್ನು ಪ್ರಾರಂಭಿಸಿದರು. ಆಗ ಮಾತ್ರ ಪೋಲಿಸರು ರೊಚ್ಚಿಗೇರಿ ಲಾಠೀ ರಾಜ್ಯ ಪ್ರಾರಂಭಿಸಿದರು. ಜನರ ಮೇಲೆ ಕುದುರೆಗಳನ್ನು ಹಾಕಲು ಹಿಂಜರಿಯಲಿಲ್ಲ. ಕೂಡಿದ ಜನರು ಕಕ್ಕಾವಿಕ್ಕಿಯಾದರು. ಅತ್ತಿತ್ತ ಪೋಗಲಾರಂಭಿಸಿದರು. ಆದರೂ ದೊಡ್ಡ ಗದ್ದಲವಾಯಿತು. ಜನರು ಚದರುತ್ತಿದ್ದಾಗ, ಸ್ವಯಂಸೇವಕರು ಎಷ್ಟೂ ಹೆದರಲಿಲ್ಲ. ಸತ್ಯಾಗ್ರಹದ [illegible]ಬಿಟ್ಟು ಕದಲಲಿಲ್ಲ. ಎದ್ದು ನಿಂತು ನಸು ನೋಡಲಿಲ್ಲ. ಪೋಲಿಸರು ಮನದಣಿ ದೊಣ್ಣೆಗಳನ್ನು ಪ್ರಯೋಗಿಸುವದನ್ನು ಸ್ವತಃ ಕಮೀಶನ ಸಾಹೇಬರು ನೋಡುತ್ತಿದ್ದರು. ಮುಂಬಯಿಯಲ್ಲಿ ಮಿ ಹಾಟಸನ್ನ ಸಾಹೇಬರ ಹುಕುಮಿನಿಂದ ಲಾಠೀ ಪ್ರಹಾರ ನಡೆದಂತೆ ಇಲ್ಲಿ ಕಮೀಶನರರ ಅಪ್ಪಣೆಯಿಂದ ನಡೆಯಿತೆಂದರೂ ಸಲ್ಲುವದು. ಹೊಡಿಸಿಕೊಂಡ ಜನರ ಸಂಖ್ಯೆಯು ೧೨೫ಕ್ಕೆ ಏರಿತು. ಕಾಂಗ್ರೆಸದ ಮೋಟಾರುಗಳಲ್ಲಿ ಇವರನ್ನು ಮಲಗಿಸಿಕೊಂಡು, ಕಾಂಗ್ರೆಸದ ಆಸ್ಪತ್ರಿಗೆ ಕರಕೊಂಡು ಹೋಗುವ ಕೆಲಸ ನಡೆಯಿತು. ಹೊಡಿಸಿಕೊಂಡವರಲ್ಲಿ ಮುಂಬಯಿ ಟಾಯಿಮ್ಸದ ಸುದ್ದೀಸೂರಪ್ಪನೂ ಒಬ್ಬನಾಗಿದ್ದಾನೆ ಪಾಪ! ಇವನು ಕರಿದೊಗಲಿನವನ; ಯುರೋಪಿಯನ್ನನಾಗಿದ್ದರೆ ಹೊಡತ ಬೀಳತ್ತಿದ್ದಿಲ್ಲ. ಹೆಂಗಸರೂ ಲತ್ತೀ ತಿಂದರು. ಕೋಟ್ಯಾಧೀಶರಾದ ಸರ ಅಂಬಾಲಾಲರ ಮೊಮ್ಮಗಳು ಒಬ್ಬಳಾಗಿದ್ದಾಳೆ. ಈ ಗೊಂದಲದಲ್ಲಿ ರಾಷ್ಟ್ರೀಯ ನಿಶಾನೆ ಹಸ್ತುಮವೊಂಡೆಯಲ್ಲಿಳಿದು, ಹೊಸತ ತಿಂದದ್ದೊಂದು ನಿಜವಾಯಿತು. ಒಸಂಬಡಿಕೆಯ ತೀರ ಹಣ್ಣಿಗೆ ಬಂದಿರುವಾಗ ಪೊಲಿಸರು ಈ ಪ್ರಕಾರ ಪರಾಕ್ರಮ ತೋರಿಸತಕ್ಕದ್ದಲ್ಲವೆಂದು ಯಾರಾದರೂ ಹೇಳುವಂತಿದೆ.

ಮೌಲಾನಾ ಅಬ್ದುಲ ಕಲಮ ಅಜಾದರ ದಸ್ತಗಿರಿ.

ಮೌಲಾನಾ ಅಬ್ದುಲ ಕಲಮ ಅಜಾದರು ಕಾಂಗ್ರೆಸದ ಅಧ್ಯಕ್ಷರಾಗಿ ಹದಿನೈದು ದಿವಸವಾಗಲಿಲ್ಲ. ಸರದಾರ ಪಟೇಲರು ಇವರಿಗೆ ಅಧ್ಯಕ್ಷಪದದ ಅಧಿಕಾರ ಕೊಟ್ಟರು. ಮೌಲಾನಾನವರು ಅಧ್ಯಕ್ಷರಾದ ಕೂಡಲೆ ಮೀರತಕ್ಕೆ ಹೋದರು. ಅಲ್ಲಿ ಇವರು ಮಾಡಿದ ಭಾಷಣವು ರಾಜದ್ರೋಹದ್ದಾಗಿ, ಸರಕಾರದವರು ಇವರ ಮೇಲೆ ವಾರಂಟು ತೆಗೆದರು. ಭಾಷಣ ಮಾಡಿದ ಬಳಿಕ ಇವರು ಕಲಕತ್ತೆಗೆ ಬಂದಿದ್ದರು. ಅಲ್ಲಿ ಇವರನ್ನು ಹಿಡಿದು, ಒಂದು ಫರ್ಸ್ಟಕ್ಲಾಸ ಡಬ್ಬಿಯಲ್ಲಿ ಕೂಡಿಸಿ, ವಿಚಾರಣೆಗಾಗಿ ಮೀರತಕ್ಕೆ ಕರಕೊಂಡು ಹೋದರು

ಈ ಸುದ್ದಿಯು ಮುಂಬಯಿಗೆ ಶುಕ್ರವಾರ ಮುಂಜಾನೆ ಮುಟ್ಟಿತು. ಕೂಡಲೆ ಊರ ತುಂಬ ಹರತಾಳ ಮಾಡಬೇಕೆಂದು ಜಾಹೀರ ಪತ್ರಿಕೆಗಳನ್ನು ಹಂಚಿದ್ದಾರೆ. ಈಗಿನ ಒಸಂಬಡಿಕೆಯಿಂದ ಯಾವ ಫಲವಾಗದೆಂದು ಮೌಲಾನಾನವರ ಮತವಿರುತ್ತದೆ

ಡಾಕ್ಟರ ಅನಸಾರಿಯವರು ಕಾಂಗ್ರೆಸದ ಅಧ್ಯಕ್ಷರಾದರು

ತಮ್ಮನ್ನು ಹಿಡಿದ ಕೂಡಲೆ ಮೌಲಾನಾನವರು ಡಾಕ್ಟರ ಅನಸಾರಿಯವರನ್ನು ಕಾಂಗ್ರೆಸದ ಅಧ್ಯಕ್ಷರಾಗಬೇಕೆಂದು ಗೊತ್ತುಪಡಿಸಿದ್ದಾರೆ. ಇವರು ಐದನೆಯವರು.

೧ ಪಂಡಿತ ಜವಾಹಿರಲಾಲ
೨ ಪಂಡಿತ ಮೋತಿಲಾಲ
೩ ಸರದಾರ ಪಟೇಲ
೪ ಮೌಲಾನಾ ಅಬ್ದುಲ ಕಲಮ ಅಜಾದ
೫ ಡಾಕ್ಟರ ಅನಸಾರಿ

ಕಾಶಿಯ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ ಪುಣೆಯಲ್ಲಿ ಶಿಕ್ಷೆ.

ಪಂಡಿತ ಮಾಲವಿಯಾಯವರನ್ನು ಹಿಡಿದ ಕೂಡಲೆ, ಕಾಯದೆಭಂಗ ಮಾಡಲೋಸುಗ ಮುಂಬಯಿಗೆ ಬಂದಿದ್ದ ಕಾಶೀ ವಿದ್ಯಾಪೀಠದ ನೂರು ಜನ ವಿದ್ಯಾರ್ಥಿಗಳಲ್ಲಿ ೧೧ ಜನರು ಪುಣೆಗೆ ಬಂದು, ದಂಡಿನಲ್ಲಿ ಕಾಯದೆಭಂಗಮಾಡಲಿಕ್ಕೆ ದೊಡ್ಡ ಮೆರವಣಿಗೆಯಿಂದ ಮೋಟಾರದಲ್ಲಿ ಕೂತು ಹೋಗುವಾಗ [illegible] ಕಿರ್ಕಿಗ್ರೌಂಡದ ಹತ್ತಿರ ಪೋಲೀಸರು ಇವರನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಅವರು ಇವರಿಗೆ ನಾಲ್ಕು ತಿಂಗಳ ಸಕ್ರಮ ಶಿಕ್ಷೆ ವಿಧಿಸಿದರು.

ಸ್ವರಾಜ್ಯ ಕೊಡದಿದ್ದರೆ– ಏನಾಗುವದು?

ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ಕೊಡದಿದ್ದರೆ– ಏನಾಗುವದೆಂದು ಒಬ್ಬ ಇಂಗ್ರೇಜಿ ಗೃಹಸ್ಥರೇ ಹೇಳುತ್ತಾರೆ. ಇವರು ಬರೇ ತರ್ಕದಿಂದ ಹೇಳುವದಿಲ್ಲ. ಹೇಳುವ ಮೊದಲು ಹಿಂದೂ, ಮುಸಲಮಾನ, ಮವಾಳ, ರಾಷ್ಟ್ರೀಯ, ಸಂಪೂರ್ಣ ಸ್ವಾತಂತ್ರ್ಯ ಮೊದಲಾದ ಪಕ್ಷಗಳ ಮುಖಂಡರನ್ನು ಕಂಡು, ಅವರ ಕೂಡ ಭಾಷಣ ಮಾಡಿ, ಅನಂತರ ತಮ್ಮ ಮತ ಹೇಳಿರುತ್ತಾರೆ. ಇವರು ಅನ್ನುವದೇನಂದರೆ–

ಅಹಿಂಸೆಯ ಅಸಹಕಾರವೆಂಬದು ಬಹಳ ದಿವಸ ಉಳಿಯಲಾರದು. ಜನರು ಮಹಾತ್ಮರ ಮಾತೂ ಕೇಳಲಾರರು. ಲಾಹೋರಿನಲ್ಲಿ ಬಾಂಬಿನ ಕಾರಖಾನೆ ಹೊರಬಿತು. ಚಿತಗಾಂಗಿನಲ್ಲಿ ಬಂಡಾಯ ಸ್ವರೂಪದ ಕ್ರಾಂತಿಯಾಯಿತು. ಇವೆಲ್ಲ ಮುಂದಿನ ಕುರುಹುಗಳು. ಜನರು ಸರಕಾರವನ್ನು ಪರಿಪರಿಯಾಗಿ ಹಿಂಸಿಸುವರು. ರೇಲ್ವೆಯ ಹಳಿಗಳನ್ನು ಕಿತ್ತಿ ಹಾಕುವದು ಹೆಚ್ಚು ಪರಿಣಾಮಕಾರಕವಾಗುವದೆಂದು ಮೊದಲು ಪ್ರಯತ್ನಿಸುವರು. ಇದರ ಕೂಡ ಕೊನೆಯಲ್ಲಿ ಹಿಂಸೆಯಿಂದಲೇ ರಾಜ್ಯಕ್ರಾಂತಿಗೆ ಪ್ರಾರಂಭವಾಗುವದು.

ಮೇಲಿನ ಅಭಿಪ್ರಾಯವನ್ನು ವೆಬ್ಬ ಮಿಲ್ಲರರೆಂಬವರು ಜಾಹೀರ ಮಾಡಿದ್ದು, ಕಲಕತ್ತೆಯ ಯುರೋಪಿಯನ್ನರು ಹೇಳುವಂತೆ ಮಾಂಟೆಗು ಸುಧಾರಣೆಗಳನ್ನು ಸಹ ನಿಲ್ಲಿಸಿ, ಮಾರ್ಲೆ ಮಿಂಟೋನ ಕನಕ ಹಿಂದಕ್ಕೆ ಹೋದರೆ– ಬಾಂಬಿನ ಪುನರುಜ್ಜೀವನವಾಗುವದೆಂದು ಮಿ. ಅರ್ದರ ಮೂರಸಾಹೇಬರು ಸ್ಪಷ್ಟವಾಗಿ ಅಂದಿರುತ್ತಾರೆ.

ದೇವರು ವರವು ಕೊಟ್ಟರೂ ಪೂಜಾರಿ ಕೊಡಲಾರನು.

ಪೇಶಾವರದ ಒಕ್ಕರೀ ಕಾಯದೆ ಮತ್ತು ಜನಲಯದ ಒಗ್ಗೆ ಶ್ರೀ. ಪಟೇಲರ ಅಧ್ಯಕ್ಷತೆಯಲ್ಲಿ ಕೂತ ಕಮೀಟಿಯು ರಿಪೋರ್ಟನ ಅಲಹಾಬಾದಿನಲ್ಲಿ ಮುದ್ರಣ ಹೊಂದಿ ಅವುಗಳನ್ನು ತುಂಬಿದ ಮೂರು ಪೆಟ್ಟಿಗೆಗಳು ಮುಂಬಯಿಗೆ ಬಂದವು. ಇವನ್ನು ಒಬ್ಬ ಗೃಹಸ್ಥನು ಲಗೇಜ ಮಾಡಿಕೊಂಡು ಸಂಗಡ ತಂದನು. ಪದ್ಧತಿ ಪ್ರಕಾರ ಈತನು ಲಗೇಜ ಆಫೀಸಿಗೆ ಹೋಗಿ, ಪೆಟ್ಟಿಗೆಗಳನ್ನು ಬೇಡಲು– ಆತನು ಕೊಡಲೇ ಇಲ್ಲ. ಈ ಒಗ್ಗೆ ವರಿಷ್ಠರ ವಿಚಾರವನ್ನು ಕೇಳಿಕೊಂಡು, ರೇಲ್ವೆಯ ಆತನು ತೋರಿಸಿದ್ದಾನೆ. ಪೋಲೀಸರ ಸೂಚನೆಯ ಮೇರೆಗೆ ಈ ಕೃತ್ಯ ಕಾರಸ್ಥಾನವಾಯಿತೆಂದೂ ವರ್ತಮಾನವುಂಟು. ಸರಕಾರದವರು ಆಕ್ಷೇಪಾರ್ಹವೆನ್ನುವ ಮುಂಚಿತವಾಗಿ ಇವನ್ನು ಅರಾಜಕವೆನಿಸುವ ಬಗೆಯಿಂದ ಹಿಡಿದಿಡುವದು ಹೇಗೆ?

ಹೇಗೆ ಸ್ವರಾಜ್ಯ ದೊರೆಯುವದು.

ಒಂದು ಸಾರೆ ಅಮೇರಿಕಾ ದೇಶದ ಅಧ್ಯಕ್ಷರಾಗಿದ್ದ ಮಿ ಕೂಲಿಜಸಾಹೇಬರು ಹಿಂದುಸ್ಥಾನದ ಸ್ವರಾಜ್ಯ ವಿಷಯಕವಾಗಿ ಹೇಳುವದೇನಂದರೆ–

ಸ್ವರಾಜ್ಯವು ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರಕ್ಕೆ ಕೊಟ್ಟು ದೊರೆಯುವದಲ್ಲ. ಕ್ರಮಾನುಸಾರವಾಗಿ ಅದರ ಬೆಳವಣಿಗೆಯಾಗತಕ್ಕದ್ದು. ಅನುಭವ ಮತ್ತು ಕಷ್ಟನಷ್ಟಗಳನ್ನು ಸಹಿಸಿದ ಹೊರತು ಸ್ವರಾಜ್ಯದ ವಿಕಾಸವಾಗುವದಿಲ್ಲ. ಹಿಂದೀ ಜನರು ಎಂದು ಸುಶಿಕ್ಷಿತ ಮತ್ತು ಸ್ವರಾಜ್ಯಕ್ಕೆ ಪಾತ್ರರಾಗುವರೋ, ಅಂದೇ ಸ್ವರಾಜ್ಯ ದೊರೆಯುವದು

ನಾಗಪೂರದ ತುರಂಗದಲ್ಲಿ ಬ್ಯಾರಿಸ್ಟರ ಅಭ್ಯಂಕರರ ಬೆರಳುಗಳ ಗುರ್ತನ್ನು ಬಲಾತ್ಕಾರದಿಂದ ತೆಗೆದುಕೊಂಡದ್ದನ್ನು ನಿಷೇಧಿಸಲು ಪಟ್ಟಣವಾಸಿಗಳು ಹರತಾಳ ಮಾಡಿದರು.

ಮೊರಬದಲ್ಲಿ ಕೌನ್ಸಿಲ ಬಹಿಷ್ಕಾರ!!

ರಾ. ಬ. ಕಂಬಳಿಯವರಿಗೆ ಕರೇ ನಿಶಾನೆಗಳ ಬಹುಮಾನ!!!

ಇದೇ ತಿಂಗಳು ೨೧ ನೆಯ ತಾರೀಖಿನ ದಿವಸ ರಾ. ಬ. ಕಂಬಳಿಯವರು ಹೋಟು ಕೇಳುವದಕ್ಕಾಗಿ ನವಲಗುಂದ ತಾಲೂಕಿಗೆ ಸೇರಿದ ಮೊರಬ ಗ್ರಾಮಕ್ಕೆ ಹೋದರು. ಇದೊಂದು ಪೋಲಿಂಗ ಸ್ಟೇಶನವು. ಇಲ್ಲಿ ವೀರಶೈವರೇ ಪ್ರಮುಖ್ಯವಾಗಿ ವಾಸಿಸುವರು. ಇವರ ತರುವಾಯಾ ರಡ್ಡೀ ಜನರಾಗಿದ್ದಾರೆ. ರಾ ಬ ರವರು ಅಲ್ಲಿಗೆ ಹೋದ ಕೂಡಲೆ– ಜನರು ಕರೇ ನಿಶಾನೆ ಹಿಡಕೊಂಡು ಇವರ ಸನ್ಮಾನ ಮಾಡಿದರು. ಪ್ರಾರಂಭದಲ್ಲಿ ಹತ್ತೇ ಜನರಿದ್ದರು. ಅದು ಬೆಳೆಯುತ್ತಾ ಮುನ್ನೂರು ನಾನೂರಾಯಿತು– ಪ್ರತಿಯೊಬ್ಬರು ಶೇಮಶಬ್ದಗಳ ಮಳೆ ಸುರಿಸಿದರು– ಊರ ತುಂಬ ಶೇಮಶಬ್ದವೇ ಶಬ್ದವಾಯಿತು– ನೀವು ಮೆಂಬರರಾಗಿ ಹತ್ತು ವರ್ಷವಾಯಿತು; ಯಾವ ಯಾವ ಕಸರತ್ತು ಕಿಸಾಮತ್ತು ಮಾಡಿದ್ದೀರೆಂಬದನ್ನು ಹೇಳಿ, ಹೋಟ ಕೇಳಿರಿ; ಇಲ್ಲವಾದರೆ ಗಾಂಧೀತತ್ವ ಸ್ವೀಕಾರ ಮಾಡಿರೆಂದು ಜನರು ಒತ್ತಾಯಪಡಿಸಿದರು– ರಾ ಬ ರವರಿಗೆ ಹೇಳುವದಕ್ಕೂ ಕೇಳುವದಕ್ಕೂ ಸಮಯವಿಲ್ಲದಾಯಿತು– ಇದು ಹತ್ತು ವರ್ಷದ ಹಿಂದಿನ ಮೊರಬವಲ್ಲೆಂದೂ, ಆಗಿನ ವೀರಶೈವರು ಈಗಿನವರಲ್ಲೆಂದೂ ರಾ ಬ ರವರು ಕಂಡುಕೊಂಡರು– ತಮ್ಮ ಮಾರಾಟವಿಲ್ಲೆಂದು ಮೋಟಾರ ಹತ್ತಿದರು– ದೇ ಆಗ ಬಣ್ಣ ಕೊಟ್ಟು, ಹೊಸಹೆಂಡು– ತೋರುತ್ತಿದ್ದ ಮೋಟಾರು ಅಸಹ್ಯವಾಗಿ ವಿದ್ರೂಪ ಹೊಂದಿತು–ಮುಂದೇನಾಯಿತೆಂಬದನ್ನು ಆ ಊರಿಂದ ಬಂ ಪತ್ರದಲ್ಲಿ ಬರೆದಿರುವದಿಲ್ಲ. ರಾ ಬ ರವರು ನ್ನಾದರೂ ಹೋಟಿನ ಉಸಾಬರೀ ಬಿಡಬೇಕು ಕಂದರೆ ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಂದು

ಕೌನ್ಸಿಲ ಚುನಾವಣೆಯಲ್ಲಿ ಒಂದು ಮಾದರಿ ತಕ್ಕೊಳ್ಳುವಂಥ ಪ್ರತಿಜ್ಞೆ

ಕಾಂಗ್ರೆಸದ ಆಜ್ಞೆಯ ಪ್ರಕಾರ ಯಾರೂ ಚುನಾವಣೆಯಲ್ಲಿ ಉಮೇದವಾರರಾಗಿ ನಿಲ್ಲುತ್ತಿದ್ದಿಲ್ಲ. ಆದರೆ ಮವಾಳ, ಮತ್ತು ಬೇರೆ [illegible] ಪಾಲಿಗೆ ಈ ಸ್ಥಳ ಹೋಗಬಾರದೆಂದು ಶ್ರೀ ವಾಮನರಾವ ಪಾಟೀಲರೆಂಬವರು ಉಮೇದವಾರರಾದರು. ಪ್ರತಿಕಕ್ಷಿಯಿಲ್ಲದೆ, ಇವರ ಚುನಾವಣೆಯಾಯಿತು. ಚುನಾವಣೆಯಾದರೂ ಕೌನ್ಸಿಲಕ್ಕೆ ಹೋಗಿ ರಾಜನಿಷ್ಠೆಯ ಆಣೆಮಾಡಬಾರದೆಂದು ಮತದಾರರು ಇವರಿಗೆ ಶರ್ತು ಹಾಕಿದ್ದಾರೆ. ಆ ಕರಾರ ಪ್ರಕಾರ ಇವರು ನಡೆಯುವಂತೆ ವಚನ ಕೊಟ್ಟಿದ್ದಾರೆ. ಹೊಸದಾಗಿ ಮೆಂಬರರಾದವರು ಕೌನ್ಸಿಲದಲ್ಲಿ ಕಾಲಿಟ್ಟ ಕೂಡಲೆ– ,, ನಾನು ರಾಜನಿಷ್ಠನಾಗಿದ್ದೇನೆಂದು ,, ಆಣೆಮಾಡಬೇಕಾಗುತ್ತದೆ. ಆಣೆ ಮಾಡದಿದ್ದರೆ– ಕೌನ್ಸಿಲ ಮೆಂಬರರೇ ಆಗುವದಿಲ್ಲ. ಯಾವ ಕೆಲಸದಲ್ಲಿಯೂ ಭಾಗ ತಕ್ಕೊಳ್ಳಲಾರರು. ಹೀಗಾಗಿ ಆ ಸ್ಥಳವು ತಾನಾಗಿ ತೆರವು ಬೀಳುವದು.

ಮರಾಠೀ ದೇಶದ ಕಾಂಗ್ರೆಸ ಕಮಿಟಿಗಳ ಮೇಲೆ ದಾಳಿಯು.

ಮುಂಬಯಿ ಸರಕಾರದವರು ಮಹಾರಾಷ್ಟ್ರ ಪ್ರಾಂತದಲ್ಲಿರುವ ಪುಣೆ, ಅಹಮದನಗರ, ನಾಸಿಕ, ಸಾತಾರಾ, ಪೂರ್ವ ಮತ್ತು ಪಶ್ಚಿಮಖಾನದೇಶ ಕಾಂಗ್ರೆಸ ಕಮೀಟಿಗಳನ್ನೂ ಯುದ್ಧ ಮಂಡಲಗಳನ್ನೂ ಬೇಕಾಯದೆಶೀರವಿರುತ್ತವೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ವಿಜಯ.

ಚಾಳುಕ್ಯ ವಿಕ್ರಮ ೯೫೧ ಕ್ಷಯ ಭಾದ್ರಪದ ಶುದ್ಧ ೩

ರಾ. ಬ. ಕಂಬಳಿಯವರ ಕೌನ್ಸಿಲ ಚುನಾವಣೆಯ ಪ್ರವಾಸ.

ಹಲಗೇರಿಯಲ್ಲಾದ ಸಂಭಾಷಣೆ.

ಕಾಂಗ್ರೆಸವು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿದ್ದರೂ, ಕೌನ್ಸಿಲಕ್ಕೆ ಉಮೇದವಾರರಾಗುವಂಥವರಿಗೇನೂ ಕೊರತೆಯಿಲ್ಲ. ನದಿ ಹಳ್ಳ ಬತ್ತಿದರೂ ಒರತೆಯಿಂದ ನೀರು ಬಂದೇ ಬರುವದು. ಅದ್ದರಿಂದ ಬಂದಿರುವ ಸ್ಥಳಗಳ ಹೊರ್ತು ಸರಕಾರಕ್ಕೆ ಮೆಂಬರರ ಕೊರತೆಯಾಗುವದಿಲ್ಲ. ಒರತೆಯ ನೀರು ದೊಡ್ಡ ಸಮಾರಾಧನೆಗೆ ಪ್ರಾಪ್ತವಾಗದಂತೆ, ಈಗಾಗುವ ಕೌನ್ಸಿಲದ ಮೆಂಬರರು ಲೋಕ ಪ್ರತಿನಿಧಿಗಳಾಗರು. ತಮಗೆ ದೊರೆಯುವ ನೂರಾರು ಹೋಟುಗಳಿಂದ ಅಥವಾ ಪ್ರತಿಸ್ಪರ್ಧಿಗಳಿಲ್ಲೆಂದು ತಾನು ಕವಡಿಯ ವೆಚ್ಚವಿಲ್ಲದೆ ಸಾಧಿಸುವ ಕೆಲಸದಿಂದ ಇವರು ಸ್ವಂತದ ಮಟ್ಟಿಗೆ ಆನಂದಪಡಬೇಕಲ್ಲದೆ, ಲೋಕಪಕ್ಷದಿಂದ ಕೌನ್ಸಿಲ ಮೆಂಬರರಾದ ಬಗ್ಗೆ ತಾವು ಪ್ರಸಿದ್ಧಿ ಪಡೆಯಬೇಕೆಂದು ತಿಳಿಯತಕ್ಕದ್ದಲ್ಲ. ಹಿಂದಿನ ಚುನಾವಣೆ ಮತ್ತು ಈಗ ನಡೆಯಬೇಕಾದ ಚುನಾವಣೆಯ ದೆಸೆಯಿಂದಾದ ಘಟನೆಗಳನ್ನು ಲಕ್ಷಿಸಿದರೆ ತಾವೆಂದಿಗೂ ಲೋಕಪ್ರತಿನಿಧಿಗಳಲ್ಲೆಂಬದು ಅವರಿಗೆ ಅನಿಸದಿದ್ದರೆ ಇವರಂಥ ಜಡ ಬುದ್ಧಿಯವರು ಇನ್ನಾರೂ ಇಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಹತ್ತು ವರ್ಷಗಳ ಹಿಂದೆ ಮೊದಲನೆಯ ಚುನಾವಣೆಯಲ್ಲಿ ಕೌನ್ಸಿಲ ಚುನಾವಣೆಗೆ ಕಾಂಗ್ರೆಸದಿಂದ ಬಹಿಷ್ಕಾರ ಹಾಕಲ್ಪಟ್ಟಿತ್ತು. ಆಗ ಬ್ರಾಹ್ಮಣೇತರರು ಸಹಕಾರಿಯಾಗಿ, ಇಂದ್ರಪದ ದೊರಕಿಸುವ ಭ್ರಮೆಯಲ್ಲಿದ್ದರು. ಆಗ ಬಂದ ಪರಿಯು ಈಗ ಬಿಚ್ಚಿ ಹೋಗಿ, ಕೌನ್ಸಿಲಕ್ಕೆ ಬಹಿಷ್ಕಾರ ಹಾಕುವವರಲ್ಲಿ ಬ್ರಾಹ್ಮಣೇತರ ಸಮಾಜವೇ ಮುಂದೆ ಬಂದಿದೆ. ನಮ್ಮ ಜಿಲ್ಹೆಯ ಮಟ್ಟಿಗೆ ವಿಚಾರಮಾಡಿದರೂ, ಈ ಸಾರೆ ರಾ. ಬ. ಕಂಬಳಿ ಮೊದಲಾದ ಉಮೇದವಾರರಿಗೆ ಹಿಂದಿನಷ್ಟು ಮತಗಳು ದೊರೆಯುವದಂತಿರಲಿ, ಪ್ರತಿಯೊಂದು ಪೋಲಿಂಗ ಆಫೀಸಿನಲ್ಲಿ ಇವರ ಪರವಾಗಿ ಕೆಲಸ ಮಾಡಲು ಜನರು ಸಹ ಸಿಗುವರೋ ಎಂಬ ಸಂಶಯವುಂಟಾಗಿರುತ್ತದೆ. ಸಿಗಲಾರರೆಂದು ಹೇಳಿದರೆ ಅದೆಷ್ಟು ಮಾತ್ರಕ್ಕೂ ಅತಿಶಯೋಕ್ತಿಯಾಗಲಾರದು.

ರಾ. ಬ. ಕಂಬಳಿ, ಶ್ರೀ. ಜೋಗ ಮತ್ತು ಮೂರನೆಯವರಾದ ಶ್ರೀ. ಕೇಸರಿ ವಕೀಲರು ಈಗಾಗಲೇ ಹೋಟಿಗೆ ಎಡತಾಕುತ್ತಲಿದ್ದಾರೆ. ಈ ಮೂವರಲ್ಲಿ ರಾ. ಬ. ಕಂಬಳಿಯವರು ಮತದಾರರ ಮೊದಲನೆಯ ಗುಂಡಿಗೇ ಹತರಾಗದಿದ್ದರೂ, ಹೈರಾಣರಾದರೆಂದು ಅಥವಾ ಆಗಿರಬೇಕೆಂದು ಹೇಳುವಂಥ ಒಂದು ಸಂಗತಿಯು ರಾಣೇಬೆನ್ನೂರ ತಾಲೂಕಿನ ಹಲಗೇರಿಯಲ್ಲಿ ಸಂಭವಿಸಿತು. ೧೮ನೆಯ ತಾರೀಖು ದಿವಸ ರಾ. ಬ. ಕಂಬಳಿಯವರು ರಾಣೇಬೆನ್ನೂರ ಮ್ಯುನಸಿಪಾಲಿಟಿಯ ಅಧ್ಯಕ್ಷರನ್ನು ಸಂಗಡ ಕರೆದುಕೊಂಡು ಹೋಟುಗಳ ಸಂಪಾದನೆಗಾಗಿ ಹಲಗೇರಿಗೆ ಹೋದರು. ಹೋಗುವಾಗ ಹಲಗೇರಿಯು ಅಸಹಕಾರದ ಒಂದು ಗಂಡುಪೆಟ್ಟಿನ ಸ್ಥಳವಾಗಿದೆಂಬುದು ಅವರಿಗೆ ಹೇಗೆ ಹೊಳೆಯಲಿಲ್ಲವೋ ದೇವರೇ ಬಲ್ಲ. ಇವರು ಹೋಟು ಬೇಡಿದ್ದೊಂದೇ ತಡ; ಜನರು ನಿಮಗೆ ಹೋಟು ಕೊಡುವದಿಲ್ಲ, ನಾವು ಹಾಗೆ ಮಾಡಿದರೆ ಜನರಲ್ಲಿ ನಮಗೆ ಮರ್ಯಾದೆಯೇ ಉಳಿಯಲಾರದು. ನಮ್ಮ ಮಾನ ಉಳಕೊಳ್ಳಬೇಕಾದರೆ ನಿಮ್ಮ ಮಾನ ಕಾಪಾಡಿಕೊಂಡು ಸುಮ್ಮನೆ ಹೋಗಿರೆಂದು ನಿರ್ಭೀಡೆಯ ಉತ್ತರ ಕೊಟ್ಟರು. ಈವರೆಗೆ ಇವರಿಗೆ ಕೌನ್ಸಿಲದಲ್ಲಿ ಯಾವ ಮಹತ್ಕಾರ್ಯ ಮಾಡಿದ್ದೀರೆಂಬುದರ ಪಟ್ಟಿ ಹೇಳಿರೆಂದು ಸವಾಲು ಹಾಕಿದರು. ಇಲ್ಲಿ ಹೆಚ್ಚಿಗೆ [illegible]ಧಿ ಕಟ್ಟಿಕೊಂಡು ಬಾವಿ ಬೀಳುವಂತಾದೀತೆಂದು ಬಗೆದು, ಇವರೆಲ್ಲರೂ ಹಿಂದಿರುಗಿದರು.

ಈ ಊರಲ್ಲಿ ಇವರಿಗಾದ ಸಂಭಾವನೆಯ ವರ್ತಮಾನ ಕೇಳಿದ ಕೂಡಲೆ, ರಾಣೇಬೆನ್ನೂರಿನ ಕಾಂಗ್ರೆಸ ಕಮೀಟಿಯ ಮೆಂಬರರು ಅಲ್ಲಿಗೆ ಹೋಗಿ, ಕಾಂಗ್ರೆಸ ಕಮೀಟಿಯನ್ನು ಸ್ಥಾಪಿಸಿ, ಚುನಾವಣೆಯಲ್ಲಿ ಹೋಟು ಕೊಡಬಾರದೆಂಬ ಠರಾವು ಪಾಸ ಮಾಡಿದರು. ಅಲ್ಲಿಯ ಹೆಂಡದ ಅಂಗಡಿಗಳು ಈ ಮೊದಲೇ ಬಂದಾಗಿವೆ. ಚಹಾ ಮತ್ತು [illegible] ಸಕ್ಕರೆಯು ಔಷಧಕ್ಕೆ ಸಹ ಸಿಗದಂತೆ ಈ ಮೊದಲೇ ಬಂದೋಬಸ್ತಾಗಿದೆ. ಚಹಾದ ಆರು ಅಂಗಡಿಗಳಿದ್ದವು. ಅವೆಲ್ಲ ಬಂದಾಗಿವೆ. ಈ ಘಟನೆಯ ಮುಖ್ಯ ಪ್ರವರ್ತಕರು ರಾಣೇಬೆನ್ನೂರ ತಾಲೂಕಿನ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ಕುಬಸದವರಿದ್ದು, ಅವರಿಂದಲೇ ಇಡೀ ತಾಲೂಕಿನ ಸೂತ್ರಗಳಾಡುತ್ತಿರುತ್ತವೆ. ಇವರು ವೀರಶೈವರು. ಬ್ರಾಹ್ಮಣ-ಬ್ರಾಹ್ಮಣೇತರರ ಬದಲಾಗಿ, ಲಿಂಗಾಯತ ಮತ್ತು ಲಿಂಗಾಯತೇತರರೆಂಬಂತಾಗಿ ಇಬ್ಬಣವಾದ ಕಾಲದಲ್ಲಿ ಲಿಂಗಾಯತರನ್ನೇ ಅವಲಂಬಿಸಬೇಕೆಂದಿರುವ ರಾ. ಬ. ಕಂಬಳಿಯವರಿಗೆ ಎಷ್ಟು ಹೋಟುಗಳು ದೊರೆಯುವವೆಂಬ ಪರೀಕ್ಷೆಯ ಕಾಲವೇ ಬಂದಿದೆ.

ಮದ್ರಾಸದ ಚುನಾವಣೆ.

ಬ್ರಾಹ್ಮಣೇತರರಲ್ಲಿಯೇ ಇಬ್ಬಣ.

ಮದ್ರಾಸ ಇಲಾಖೆಯಲ್ಲಿ ಕಾಂಗ್ರೆಸಕ್ಕೆ ಸಂಬಂಧವಿದ್ದಂಥ ಬ್ರಾಹ್ಮಣೇತರರನ್ನು ಹೊರತುಪಡಿಸಿ, ಕೌನ್ಸಿಲಕ್ಕೆ ಹೋಗಿ ಸಹಕಾರ್ಯ ಮಾಡಬೇಕೆನ್ನುವವರಲ್ಲಿ ಇಬ್ಬಣವಾಗಿದೆ. ಜಸ್ಟಿಸ ಮತ್ತು ಮಂತ್ರಿ ಪಕ್ಷ!! ಜಸ್ಟೀಸದವರು ಬ್ರಾಹ್ಮಣೇತರರೆಂಬ ಮೊಹರು ಮುದ್ರೆ ಬಡಕೊಂಡವರು. ಮಂತ್ರಿಗಳು ರಾಷ್ಟ್ರೀಯರೆಂಬ ಅಭಿಮಾನ ಪಡೆದವರು. ಇವರು ಮಂತ್ರಿಪದಾರೂಢರಾಗುವ ಮೊದಲು ಅಂದರೆ ಮೂರು ವರ್ಷಗಳ ಹಿಂದೆ ರಾಷ್ಟ್ರೀಯರಾಗಿದ್ದರು. ಮಂತ್ರಿಯಾದ ಕೂಡಲೆ, ಆ ರಾಷ್ಟ್ರೀಯತ್ವವೆಲ್ಲ ಹೋಯಿತು. ಆದರೂ ಆ ಹೆಸರು ಮಾತ್ರ ಬಿಡುವದಿಲ್ಲ. [illegible]ನೆಂದು ಹೆಸರು ಇಟ್ಟುಕೊಳ್ಳುವಂತೆ!!

ಜಸ್ಟೀಸ ಪಕ್ಷದವರಲ್ಲಿ ಮೊದಲಿನ ಹುರುಳು ಉಳಿದಿಲ್ಲ. ನಾಯಿಯ ಕೊಡೆಯಂತೆ ಬೆಳೆದ ಅವರ ಮಹತ್ವ ಧಸ್ಸನೆ ಕಡಕೊಂಡು ಬಿದ್ದಿತು. ಅವರೊಳಗೆ ವ್ಯಕ್ತಿದ್ವೇಷ, ವಿಚಾರದ್ವೇಷ, ಕುಲದ್ವೇಷವು ದಿನವೊಂದಕ್ಕೆ ಹೆಚ್ಚುತ್ತಿರುವದು. ತಾವು ಉದಾರರಾದರೆ ಉದಾರ ಮತದವರಾದಂಥ ಬ್ರಾಹ್ಮಣರನ್ನು ತಮ್ಮ ಸಂಗಡದಲ್ಲಿ ಸೇರಿಸಿಕೊಳ್ಳುವ ಯುಕ್ತಿ ತೆಗೆದು, ಒಂದು ವರ್ಷದ ತನಕ ಕಡುತರವಾದ ಚರ್ಚೆ ಮಾಡಿ, ಹೋದ ತಿಂಗಳಲ್ಲಿ ಬ್ರಾಹ್ಮಣರನ್ನೂ ತಮ್ಮ ಕೂಟದಲ್ಲಿ ಸೇರಿಸಿಕೊಳ್ಳಬೇಕೆಂಬ ಠರಾವು ಮಾಡಿದರು. ಆದರೆ ಆ ಠರಾವಿನ ಕೃತಿ ಆಗಲಿಲ್ಲ. ಕೌನ್ಸಿಲ ಚುನಾವಣೆಯಲ್ಲಿ ಪ್ರತಿಯೊಂದು ಜಿಲ್ಹೆಯಲ್ಲಿಯೂ ಉಮೇದವಾರರನ್ನು ನಿಲ್ಲಿಸಿದ್ದಾರೆ. ಇವರಲ್ಲಿ ಒಬ್ಬನೂ ಬ್ರಾಹ್ಮಣನಿಲ್ಲ. ಮತ್ತು ಒಬ್ಬ ಬ್ರಾಹ್ಮಣನಾದರೂ, ನಿಮ್ಮ ಸಂಘದಲ್ಲಿ ಸೇರುತ್ತೇನೆ, ನನ್ನನ್ನು ತಕ್ಕೊಳ್ಳಿರೆಂದು ಹೇಳಲಿಲ್ಲ, ಹೇಳಿಕೊಳ್ಳಲಿಲ್ಲ. ಹೀಗಾಗಿ ಇವರ ಉಮೇದವಾರರೆಲ್ಲ ನಾಯಡು, ರೆಡ್ಡಿ, ಮೊದ್ಲಿಯಾರ, ಪಿಳ್ಳೆ, ಮಲಿಯಾಳಿ, ಇತ್ಯಾದಿ ಮೊದಲಾದವರೇ ಆಗಿದ್ದಾರೆ.

ಇವರ ತರುವಾಯ ರಾಷ್ಟ್ರೀಯರೆಂಬ ಹೆಸರಿಟ್ಟುಕೊಂಡು, ಜನರ ಕಣ್ಣಿನಲ್ಲಿ ಧೂಳ ಚಲ್ಲಬೇಕೆನ್ನುವಂತಿರುವ ಮಂತ್ರಿಗಳೂ ತಮ್ಮ ವತಿಯಿಂದ ಅನೇಕ ಉಮೇದವಾರರನ್ನು ನಿಲ್ಲಿಸಿದ್ದಾರೆ. ಮಂತ್ರಿ ಮಂಡಲದಲ್ಲಿ ಇಬ್ಬರು ಬ್ರಾಹ್ಮಣೇತರರಾದ ರಾಷ್ಟ್ರೀಯರೂ ಬ್ರಾಹ್ಮಣರಾದ ಸರ ಶ್ರೀ [illegible] ಅಯ್ಯರರೂ ಮಂತ್ರಿಗಳಾಗಿದ್ದಾರೆ. ಒಬ್ಬ ಬ್ರಾಹ್ಮಣನಿಲ್ಲದೆ ಇವರ ದಿನ ಸಾಗದಾಗಿದೆ. ಆದುದರಿಂದ ಈ ಪಕ್ಷದಲ್ಲಿ ಕೆಲವು ಬ್ರಾಹ್ಮಣರು ಚುನಾವಣೆಯಲ್ಲಿ ಉಮೇದವಾರರಾಗಿದ್ದಾರೆ. ಆದರೆ ಕಾಂಗ್ರೆಸ ಪಕ್ಷದವರಲ್ಲ, [illegible].

ಈ [illegible]ನಲ್ಲಿ, ಒಬ್ಬರ ಮೇಲೊಬ್ಬರ [illegible]ಯಲ್ಲಿ ಒಂದು ಚಮತ್ಕಾರದ ಸಂಗತಿಯು ಸಂಭವಿಸಿದೆ. ಬ್ರಾಹ್ಮಣೇತರರಿಗೆ ಜಸ್ಟೀಸವೆಂಬುವ ಮುಖಪತ್ರವು. ಇದು ಇಂಗ್ರೇಜಿಯಲ್ಲಿ ಹೊರಡುತ್ತದೆ. ಇದರದೇ ಒಂದು ಆವೃತ್ತಿ ದ್ರಾವಿಡಿಯನ್ನವೆಂಬದು ಅರವಿನಲ್ಲಿ ಪ್ರಕಟವಾಗುವದು. ಆದರೆ ಈಗ ದ್ರಾವಿಡಿಯನ್ನವು ಬ್ರಾಹ್ಮಣೇತರರ ದೃಷ್ಟಿಯಿಂದ ಸೂರ್ಯನ ಹೊಟ್ಟೆಯಿಂದ ಶನೀಶ್ವರ ಮತ್ತು ರಾಷ್ಟ್ರೀಯರ ವಿಚಾರದಿಂದ ಪ್ರಲ್ಹಾದನೂ ಜನಿಸಿದಂತಾಗಿದೆ. ದ್ರಾವಿಡಿಯನ್ನವು ಜಸ್ಟೀಸದ ಸರ್ಪು ಹರಿದು ಹಾಕಿ, ಅಥವಾ ಅದರ ಕುಲ ಬಿಟ್ಟು, ಸಂಪೂರ್ಣ ಸ್ವತಂತ್ರವಾಗಿ ರಾಷ್ಟ್ರೀಯರನ್ನು ಕೂಡಿಕೊಂಡಿದೆ. ಹೀಗೆ ಕೂಡಿದರೂ ಒಂದು ರೀತಿಯಿಂದ ಕ್ಷಮ್ಯವು. ಆದರೆ ಅದರ ವರ್ತನವು ಒಳ್ಳೇ ನೋಡತಕ್ಕದ್ದಾಗಿದೆ. ಇಂಗ್ರೇಜಿ ಸಂಸ್ಕಾರದ ಲೆಖ್ಖಪತ್ರಗಳಲ್ಲಿ, ಜಾತಿ ಭೇದದ ವರ್ಣವಿಚಾರದಲ್ಲಿ ಬ್ರಾಹ್ಮಣರ ಹೊರ್ತು ಉಳಿದವರನ್ನು ಶೂದ್ರರಲ್ಲಿ ಎಣಿಸಿದ್ದಾರೆ. ಜಸ್ಟೀಸ ಮತ್ತು ದ್ರಾವಿಡನ್ನವು ನಾವು ಶೂದ್ರರಲ್ಲ, ವೈಶ್ಯ, ಕ್ಷತ್ರಿಯ, ದ್ರಾವಿಡ, ಆದಿದ್ರಾವಿಡ ಎಂದು ಈವರೆಗೆ ವಾದಿಸುತ್ತ ಬಂದವು. ಆದರೆ ಈ ದ್ರಾವಿಡಿಯನ್ನವು ತಾವೆಲ್ಲರೂ ಶೂದ್ರರೇ ಎಂದು ಸಾಧಿಸಲಾರಂಭಿಸಿದೆ. ಬರೇ ಬಾಯಿ ಮಾತು ಹೇಳದೆ, ಪ್ರಮಾಣಗಳನ್ನು, ತಮ್ಮವರೇ ಬರೆದಿಟ್ಟ ವಚನಗಳನ್ನೂ ಅನೇಕಾನೇಕವಾಗಿ ತೋರಿಸಲಾರಂಭಿಸಿದೆ. ಎರಡೂ ಪಕ್ಷಗಳ ನಡುವೆ ವೈರಿಗಳಂತೆ ನಡೆದ ಟೀಕೆ ಪ್ರತಿಟೀಕೆಗಳು ಯಾವ ಪರಿಣಾಮ ಹೊಂದುವವೆಂಬದನ್ನು ಮದ್ರಾಸ ಪ್ರಾಂತದವರು ಎದುರುನೋಡುತ್ತಿದ್ದಾರೆ.

ಶಿರ್ಸಿ ತಾಲೂಕಿನಲ್ಲಿ ಕಾಯದೆಭಂಗದ ಕೋಲಾಹಲ.

ಸಾವಿರಾರು ಸ್ತ್ರೀಪುರುಷರು ವನಗಾವಲದ ಕಾಯದೆ ಮುರಿದರು.

ಅನೇಕರ ದಸ್ತಗಿರಿ ಮತ್ತು ಶಿಕ್ಷೆ

ಧಾರವಾಡದ ಡಾಕ್ಟರ ಕಬ್ಬೂರರು ಡಿಕ್ಟೇಟರರಾದರು

ಶಿರ್ಸಿ ತಾಲೂಕಿನಲ್ಲಿ ಅಂಕೋಲೆಯ ಉಪ್ಪಿನ ಕಾಯದೆಭಂಗದಂತೆ, ವನಗಾವಲದ ಕಾಯದೆಭಂಗ ನಡೆದಿದೆ. ಸಾವಿರಾರು ಗಂಡಸರು, ಅವರಂತೆ ನೂರಾರು ಹೆಂಗಸರು ಕೂಡಿ ಕುಡಗೋಲು ತಕ್ಕೊಂಡು, ಜಂಗಲದಲ್ಲಿ ಹೊಕ್ಕು ಸರಕಾರೀ ಗಿಡಗಳನ್ನು ಕಡಿಯುವರು. ಹುಲ್ಲು ಮತ್ತು ಕಟ್ಟಿಗೆಯನ್ನು ಮನೆಗೆ ಒಯುವರು. ಗಂಧದ ಗಿಡ ದೊರೆತಂತೂ ಆನಂದವೇ ಆನಂದ!

ಈ ಸತ್ಯಾಗ್ರಹಿಗಳನ್ನು ಪೋಲೀಸರು ಹಿಡಿಯುವದು, ಮ್ಯಾಜಿಸ್ಟ್ರೇಟರು ಅವರಿಗೆ ಶಿಕ್ಷೆ ಕೊಡುವದು ನಿತ್ಯಕೃತ್ಯವಾಗಿರುವದು. ಹಿಂದುಸ್ಥಾನಿ ಸೇವಾದಲದ ಸರ ಮುಖಂಡರಾದ ಶ್ರೀ. ವೆಂಕಟರಾಮರವರು ಅಲ್ಲಿಯ ಡಿಕ್ಟೇಟರರಾಗಿದ್ದರು. ಪೋಲೀಸರು ಮೊನ್ನಿನ ದಿವಸ ಇವರನ್ನು ಹಿಡಿದ ವರ್ತಮಾನವು ಇಲ್ಲಿಗೆ ಬಂದಕೂಡಲೆ, ಇಲ್ಲಿಂದ ಡಾಕ್ಟರ ಕಬ್ಬೂರರು ಅಲ್ಲಿಗೆ ಡಿಕ್ಟೇಟರರಾಗಿ ಹೋಗಿದ್ದಾರೆ.

ಶಿರ್ಸಿಯ ಸತ್ಯಾಗ್ರಹವು ಹೇಗೆ ಉಗಮ ಹೊಂದಿತು.

ಹೆಂಗಸರು ಗಂಡಸರ ಹಣೆಗೆ ಕುಂಕುಮ ತಿಲಕ ಹಚ್ಚಿದರು.

ಕೈಯಲ್ಲಿ ಬಳೇ ಇಡ ಹೋದರು.

ಶಿರ್ಸಿಯ ಸತ್ಯಾಗ್ರಹವು ಮೊದಲು ಹೇಗೆ ಉಗಮ ಹೊಂದಿತೆಂಬದನ್ನು ಶ್ರೀ ಹ್ವ. ಹ್ವ. ಪಾಟೀಲರು ಗಂಡಸರೆಂಬವರ ಎದೆಗೆ ಬಾಣ ಹೊಡೆದಂತೆ ಹೇಳುತ್ತಾರೆ. ಶಿರ್ಸಿಯಲ್ಲಿ ಹೆಣ್ಣುಮಕ್ಕಳದೇ ಒಂದು ಕೂಟವುಂಟು. ಅವರು ದೇಶಕಾರ್ಯ ದೀಕ್ಷೆ ತಕ್ಕೊಂಡಿದ್ದಾರೆ. ಬೇರೆ ಸ್ಥಳಗಳಲ್ಲಿ ವನಗಾವಲದ ಕಾಯದೆಭಂಗ ನಡೆದಿದ್ದರೂ, ಶಿರ್ಸಿಯವರು [illegible] ಮನೆ ಹಿಡಿದು ಕೂತರು. ಆಗ ಇವರು ಪ್ರತ್ಯಕ್ಷ ಪ್ರ[illegible]ಯಾದರು. ಕುಂಕುಮ, ಕಂಕಣ, ಬಳೆಗಳನ್ನು ತಕ್ಕೊಂಡು ಮನೆಮನೆಗೆ ಹೋಗಿ, ಆಭಾ ಕಂಕಣ ಹಚ್ಚಿಕೊಳ್ಳಿರಿ, ಬಳೆಗಳನ್ನು ಇಟ್ಟುಕೊಳ್ಳಿರೆಂದು ಹೇಳತೊಡಗಿದರು. ಗಂಡಸರಿಗೆ ನಾಚಿಕೆ ಹುಟ್ಟಿ, ಗಂಡಸತನ ತೋರಿಸುವ ಗಾಂಭೀರ್ಯ ಹುಟ್ಟಿತು. ಕೂಡಲೆ ಕಾಯದೆಭಂಗವು ಏರ್ಪಟ್ಟು ಸ್ತ್ರೀಯರ ಧ್ಯಾನ ಮಾಡಿತು. ಎಲ್ಲಾದರೂ ಗಂಡಸರು, ಹೇಡಿ, ಪುಕ್ಕ, ನೇಮಾರಿ, ಕರ್ತವ್ಯಶೂನ್ಯನೆಂದು ತೋರಿದರೆ ಸ್ತ್ರೀಯರು ಶಿರ್ಸಿಯ ಭಗಿನಿಯರಂತೆ ಇವರನ್ನು ಹೊಡೆದೆಬ್ಬಿಸಬೇಕಾಯಿತು.

ಶ್ರೀ. ಹ್ವ. ಹ್ವ. ಪಾಟೀಲರು ಸ್ವಯಂಸೇವಕರಾದರು.

ಬೆಳಗಾವಿಯಲ್ಲಿ ಲಿಂಗಾಯತ ಎಜ್ಯುಕೇಶನ ಸೊಸಾಯಟಿಯಲ್ಲಿ ಆಜೀವ ಸಭಾಸದರಾಗಿದ್ದ, ಮತ್ತು ಹಿಂದಕ್ಕೆ ಅಸೆಂಬ್ಲಿಯ ಚುನಾವಣೆಗಾಗಿ ಉಮೇದವಾರರಾಗಿದ್ದ ಶ್ರೀ ಹ್ವ. ಹ್ವ. ಪಾಟೀಲರು ಕಾಂಗ್ರೆಸದ ದೀಕ್ಷೆ ತಕ್ಕೊಂಡು, ಅದರ ಸಿಪಾಯಿಯ ನಿಯಮದಂತೆ ಸ್ವಯಂಸೇವಕರ ಪ್ರತಿಜ್ಞಾಪತ್ರಿಕೆಯ ಮೇಲೆ ಸಹೀ ಮಾಡಿದರು. ಇವರ ಅನುಕರಣವನ್ನು ವೀರಶೈವರೂ, ಬೇರೆ ಬ್ರಾಹ್ಮಣೇತರರೂ ಮಾಡುವರೆಂದು ಕಾಂಗ್ರೆಸ ಕಮೀಟಿಯವರು ಅಪೇಕ್ಷಿಸುತ್ತಾರೆ.

ಹೋಟು ಕೊಡಬಾರದೆಂದು ಬಹಿಷ್ಕಾರದ ಉದ್ಯುಕ್ತ ಚಳವಳಿಯು.

ಮುಂಬಯಿ ಕರ್ನಾಟಕದಲ್ಲಿ ಚುನಾವಣೆ ನಡೆಯುವ [illegible] ಜಿಲ್ಹೆಗಳಲ್ಲಿ ಉಮೇದವಾರರಿಗೆ ಹೋಟು ಕೊಡಬಾರದೆಂದು ಕಾಂಗ್ರೆಸ ಸಭೆಯವರು ಉದ್ಯುಕ್ತ ಚಳವಳಿ ನಡೆಸುವರು. ಅದರ ಪ್ರಕಾರಗಳು

೧ ಉಮೇದವಾರರು ನಮ್ಮ ಪ್ರತಿನಿಧಿಗಳಲ್ಲ, ನಮ್ಮ ಹೇಳಿಕೆಯಿಂದ ನಿಂತಿಲ್ಲ.

೨ ಒಂದು ವೇಳೆ ಕೆಲ ಮತಗಳಿಂದ ಇವರು ಆರಿಸಿ ಬಂದರೂ, ಪ್ರಜಾಪಕ್ಷದ ಪ್ರತಿನಿಧಿಗಳಾಗರು.

೩ ಇವರು ತಮ್ಮ ಪ್ರತಿನಿಧಿಗಳಲ್ಲೆಂದು ಊರೂರಿಗೆ ಸಭೆ ಮಾಡಿ, ಜಾಹೀರ ನಿಷೇಧ ಮಾಡತಕ್ಕದ್ದು.

೪ ಎಲ್ಲಾದರೂ ಹೋಟು ಕೇಳಲಿಕ್ಕೆ ಬಂದರೆ ಹೋಟು ಕೊಡುವದಿಲ್ಲೆಂದು ಸ್ಪಷ್ಟವಾಗಿ ಹೇಳತಕ್ಕದ್ದು.

೫ ಇವರು ಪ್ರತಿನಿಧಿಗಳಲ್ಲೆಂದು ತೋರಿಸುವದಕ್ಕಾಗಿ ಊರೂರಿಗೆ ಮತದಾರರ ಸಹೀ ತಕ್ಕೊಳ್ಳತಕ್ಕದ್ದು.

೬ ಚುನಾವಣೆಯ ದಿವಸ ಪೋಲಿಂಗ ಆಫೀಸುಗಳ ಮುಂದೆ ಪಿಕೆಟಿಂಗ ಮಾಡತಕ್ಕದ್ದು.

ಯುರೋಪಿಯನ್ನರನ್ನು ಪರಕೀಯರೆಂದು ತಿಳಿಯಕೂಡದು.

ಬೆಂಗಳೂರಲ್ಲಿ ಕಾಫಿ ತೋಟಿಗರಾದ ಯುರೋಪಿಯನ್ನರ ವಾರ್ಷಿಕ ಸಭೆಯು ಈ ವಾರದಲ್ಲಿ ಸೇರಿತು. ಕಾಫಿ ಗಿಡಕ್ಕೆ ಒಂದು ಪ್ರಕಾರದ ಹುಳ ಹತ್ತಿ ಬೆಳೆಯು ಕೆಡುತ್ತಿರುವ ಕಾರಣ ಸರಕಾರದವರು ಈ ಕ್ರಿಮಿಕೀಟಕದ ಮೂಲೋತ್ಪಾಟನ ಮಾಡುವ ಕುರಿತು ತೀವ್ರವೇ ಉಪಾಯ ಮಾಡಬೇಕೆಂದು ಠರಾವು ಮಾಡಿದರು. ಅನಂತರ ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ಕೊಡಬೇಕು, ಈ ಸ್ವರಾಜ್ಯದಲ್ಲಿ ಯುರೋಪಿಯನ್ನರನ್ನು ಪರಕೀಯರಾಗಿ ತಿಳಿಯಕೂಡದೆಂಬ ಬಗ್ಗೆ ಸ್ವರಾಜ್ಯದ ಕಾಯ್ದೆಯಲ್ಲಿ ಕಲಮು ಹಾಕಬೇಕೆಂಬ ಎರಡನೆಯ ಠರಾವು ಮಾಡಿದ್ದಾರೆ. ಯುರೋಪಿಯನ್ನರು ಹೆದರುವ ಕಾರಣವೇ ಇಲ್ಲ. ಹೆದರಲಿಕ್ಕೆ ಅವರಿಗೆ [illegible]ನಿಂದ ನಡೆವದ್ದೇ ಕಾರಣ. ಹಿಂದುಸ್ಥಾನದಲ್ಲಿ ವಾಸವಾಗಿರುವ ಪಾರ್ಸಿ ಮತ್ತು ಯಹೂದಿಗಳನ್ನು ಪರಕೀಯರೆಂದು ಯಾರೂ ತಿಳಿಯುವದಿಲ್ಲ. ಅದೇ ಪ್ರಕಾರ ಯುರೋಪಿಯನ್ನ ಮತ್ತು ಅಂಗ್ಲೋಇಂಡಿಯನ್ನರನ್ನು ಭಾವಿಸುವದಿಲ್ಲ.

ಯುರೋಪಿಯನ್ನ ಪೋಲೀಸರ ಉನ್ಮತ್ತತನ.

ಕಲಕತ್ತೆಯಲ್ಲಿ ಹಿಂದೂ ಪೋಲೀಸರು ಧರ್ಮಪ್ರಕಾರ ಗೋಕುಲಾಷ್ಟಮಿಯ ದಿವಸ ರಾತ್ರಿಯಲ್ಲಿ ಶ್ರೀ ಕೃಷ್ಣ ಜನ್ಮೋತ್ಸವ ಸಮಾರಂಭ ಮಾಡುತ್ತಿದ್ದರು. ಆದರೆ ಈ ಉತ್ಸವದಲ್ಲಿಯ ಮಂತ್ರಘೋಷ, ತಾಳ ಮೃದಂಗಗಳ ಶಬ್ದವು ಯುರೋಪಿಯನ್ನ ಅಧಿಕಾರಿಗಳಿಗೆ ಸಹನವಾಗದೆ, ಇವರು ಪೂಜೆ ನಡೆದ ಕೋಣೆಗೆ ಬಂದು, ಶ್ರೀ ಕೃಷ್ಣಪರಮಾತ್ಮನ ಭಾವಚಿತ್ರವನ್ನು ಹರಿದುಹಾಕಿದರು. ಸಾಹೇಬರ ಈ ಉನ್ಮತ್ತತನದ ದೆಸೆಯಿಂದ ಪೋಲೀಸರಲ್ಲಿ ಭಯಂಕರವಾದ ಅಸಂತೋಷ ಹುಟ್ಟಿದೆ. ಇವರು ಮ್ಯಾಜಿಸ್ಟ್ರೇಟರ ಮುಂದೆ ದೂರಿಕೊಂಡಿದ್ದಾರೆ.

ದೊಡ್ಡ ರಾವುಂಡ ಟೇಬಲಿನ ಬದಲು ಸಣ್ಣ ರಾವುಂಡ ಟೇಬಲ.

ಒಡಂಬಡಿಕೆಯ ಉಳಿದ ಮಹತ್ವದ ಸಂಗತಿಗಳು.

ಮೆ. ಸ್ಲೋಕೋಂಬಿಸಾಹೇಬರು ಯರವಡೆಯಲ್ಲಿ ಮಹಾತ್ಮರ ಕೂಡ ಸಂಧಿಯ ಪ್ರಸ್ತಾಪ ಮಾಡಿದ್ದುಬಗ್ಗೆ ಇಂಗ್ಲಂಡದಲ್ಲಿ ಹರ್ಷಯಾಗಿ, ಕುರಂಗದಲ್ಲಿ ಕೈದಿಯ ಕೂಡ ರಾಜಿಯ ಮಾತೇ ಎಂದು ಮಂತ್ರಿಗಳ ಮೇಲೆ ಕಟುತರವಾದ ಟೀಕೆಯಾಯಿತು. ಈ ಗಾಬರಿಯಾಯಿತು. ಆ ನಂತರ ಇಂಥ ಆಶ್ರಮಗಳಿಗೆ ಅನುಜ್ಞೆ ಕೊಡುವದಿಲ್ಲೆಂದು ಹೇಳಿ ಭಾರತ ಮಂತ್ರಿಗಳು ಪಾರಾದರು. ಮುಂದೆ ಮಹಾತ್ಮರ ಸೋಬತಿ; ಇದೇ ಕುರಂಗದಲ್ಲಿ ಅವರ ಅನುಮತಿಯಿಂದ ಈ ರಾಜಿಯ ಪೂರ್ವಪೀಠಿಕೆಯು ನಡೆಯಿತು. ಆದರೆ ಈಗ ಅದಕ್ಕೆ ಯಾರೂ ವಿರೋಧ ಬೆಳೆಸಲಿಲ್ಲ. ಹೇಗಾದರೂ ಮಾಡಿ, ರಾಜಿಯಾಗಬೇಕೆಂದೇ ಅವರ ಮತ. ಅವರ ವಿಚಾರದಲ್ಲಿ ಈ ಮೋರೆಗೆ ಬದಲಾಗಲಿಕ್ಕೆ, ಕಾಯದೆಭಂಗ ಮತ್ತು ಬಹಿಷ್ಕಾರವು ಭರತಖಂಡದ ತುಂಬ ಧಾರಣ ಮಾಡಿದ ವಿರಾಟಸ್ವರೂಪವೇ ಕಾರಣ.

ಎಂಟು ವರ್ಷಗಳ ಹಿಂದೆ ಮಹಾತ್ಮರು ಇದೇ ಯರವಡೆಯ ಕುರಂಗದಲ್ಲಿದ್ದರು. ಅವರ ಪತ್ನಿ ಮತ್ತು ಪುತ್ರರು ಇವರನ್ನು ಕಾಣಲಿಕ್ಕೆ ಹೋದಾಗ, ಜೇಲಿನ ಅಧಿಕಾರಿಗಳು ಅವರಿಗೆ ಕೂಡ್ರಗೊಡಲಿಲ್ಲ. ಒಂದು ಸ್ಟೂಲು ಕೊಡುವದು ತಪ್ಪ ಅಪಮಾನವೆಂದು ತಿಳಕೊಂಡಿದ್ದರು. ಅದೇ ಅಧಿಕಾರಿಗಳು ಈಗ ಮಾಡಿದ ವ್ಯವಸ್ಥೆ ನೋಡಿದರೆ ರಾವುಂಡ ಟೇಬಲವೆಂದು ಹೇಗಿರುತ್ತದೆಂಬುದು ಒಮ್ಮೆಗೆ ಇಲ್ಲಿ ವ್ಯಕ್ತವಾಯಿತು. ಕುರಂಗದ ಉಪ್ಪರಿಗೆಯ ಒಂದು ವಿಶಾಲವಾದ ಕೋಣೆಯಲ್ಲಿ ಆರಾಮದ ಉಂಚಗಾದಿಯ ಸೋಫಾಗಳನ್ನು ಹಾಕಿದರು. ನಡುವೆ ದುಂಡಗಿನ ಟೇಬಲಿಟ್ಟಿದ್ದರು. ಮಧ್ಯದಲ್ಲಿ ಯಾರು ಕೂತರೆಂಬುದು ಕೇಳುವಂತೆಯೇ ಇಲ್ಲ, ಮಹಾತ್ಮರ ಎಡಬಲದಲ್ಲಿ ನೆಹರು ಪಿತಾಪುತ್ರರು ಕೂತಿದ್ದರು. ಅವರ ಎಡಬಲದಲ್ಲಿ ಸರದಾರ ಪಟೇಲ, ಶ್ರೀ. ಜಯರಾಮದಾಸ ದೌಲತರಾಮ, ಮಿ. ಸಯ್ಯದ ಮಹಮೂದರು ಕೂತಿದ್ದರು. ಮಹಾತ್ಮರ ಎದುರಿಗೆ ಸರ ಸಪ್ರು ಮತ್ತು ಜಯಕರರು ಕೂತಿದ್ದರು. ಮಹತ್ವದ ವಾದ ನಡೆದಾಗ, ಮಹಾಶಯರು ಕಾಂಗ್ರೆಸದವರಿಂದ ಆಗಾಗ್ಗೆ [illegible] ಕೊಳ್ಳುತ್ತಿದ್ದರು. ಮಧ್ಯಸ್ಥಗಾರರು ವಾಗ್ಬಾಣಗಳನ್ನು ಸಹನ ಮಾಡುತ್ತಿದ್ದರು.

ವಾದವಿವಾದದ ಎಲ್ಲ ಸಂಗತಿಗಳನ್ನು ಬರೆದಿಟ್ಟಿರುತ್ತಾರೆ. ಇವನ್ನು ಕಾಲಕಾಲದ [illegible] ಪ್ರಸಿದ್ಧ ಮಾಡಲು ಮಹಾತ್ಮರು ಒಪ್ಪಿಗೆ ಕೊಟ್ಟಿರುತ್ತಾರೆ. ಇವುಗಳಿಂದ ಮೂರು ದಿವಸಗಳವರೆಗೇನು ನಡೆಯಿತೆಂದು ತಿಳಕೊಳ್ಳುವದಕ್ಕೆ ಅನುಕೂಲವಾದ ಹಾಗೆ ಸಮಾಧಾನವಾಗುವದಂತು. ಈ ಸಮ್ಮತಿಯು ಕೂಡ ಮಹಾತ್ಮರೂ ಬೇರೆಯವರೂ ರುಜು ಹಾಕಿ ಬರೆಕೊಟ್ಟ ಪತ್ರವನ್ನು ಲಾರ್ಡ ಆಯರ್ವಿನ ಸಾಹೇಬರಿಗೆ ಕೊಟ್ಟಿದ್ದರೂ, ಅದನ್ನು ಶಿಷ್ಟಾಯಿಯವರ ಹೆಸರಿನಿಂದ ಬರೆದು ಕೊಟ್ಟಿರುತ್ತಾರೆ. ಇವರು ಒಮ್ಮತ ಟಪಾಲಿನಿಂದ ಈ ಪತ್ರವನ್ನು ಕಳಿಸಿದ್ದು, ಈ ಬಗ್ಗೆ ತಮ್ಮ ಕೂಡ ಮಾತನಾಡಿ ಮುಂದಿನ ನಿಶ್ಚಯ ಮಾಡಿಕೊಳ್ಳಬಹುದೆಂದು ಲಾರ್ಡಸಾಹೇಬರಿಗೆ ಸೂಚನೆ ಮಾಡಿಕೊಂಡಿದ್ದಾರೆ. ಈ ಪತ್ರದ ಪ್ರಕಾರ ಲಾರ್ಡಸಾಹೇಬರಿಂದ ಉತ್ತರ ಬಂದ ಮೇಲೆ ಸರ ಸಪ್ರುಸಾಹೇಬರು ವಕೀಲರು ಕೆಲಸಕ್ಕೆ ಸಿಮಲಾಕ್ಕೆ ಹೋಗಬೇಕಾದೀತೆಂದು ಹೇಳಿದ್ದಾರೆ. ಇವರು ಸಿಮಲಾಕ್ಕೆ ಹೋಗಿ ಬಂದನಂತರ ಇನ್ನೊಂದು ಸಾರೆ ಯರವಡಾ ಜೇಲು.

ರಾಷ್ಟ್ರೀಯ ನಿಶಾನೆ ಸುಟ್ಟರು.

ಗುಜರಾಥದ, ಸೋರಠ ಜಿಲ್ಲೆಯಲ್ಲಿ [illegible] ಪೋಲೀಸರು ಒಂದು ಸಾರ್ವಜನಿಕ ಕಟ್ಟಡದ ಮೇಲಿನ ರಾಷ್ಟ್ರೀಯ ನಿಶಾನೆ ತೆಗೆದು, ಹರಿದು, ಸುಟ್ಟುಹಾಕಿದರು. ಇದು ಸ್ತ್ರೀಯರಿಗೂ [illegible] ಗಳನ್ನು [illegible] ದೊಡ್ಡ ದೊಡ್ಡ ಜನರು ೧೫೦ [illegible] ಒಂದು ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಒಡಂಬಡಿಕೆಯ ಪೂರ್ವದಲ್ಲಿ ಸ್ಪೇಶಲ ಕಾಂಗ್ರೆಸ ಸಭೆಯು.

ಮಹಾತ್ಮಾ ಗಾಂಧಿ ಅಥವಾ ಪಂಡಿತರಾದ ಪಿತಾಪುತ್ರರೇ ಕಾಂಗ್ರೆಸದ ಸಾರೋದ್ಧಾರ ಅಧಿಕಾರಿಗಳಲ್ಲ. ಇಡೀ ಕಾಂಗ್ರೆಸದ ಅನುಮತಿ ದೊರೆತರೇ ಒಡಂಬಡಿಕೆಯು ಒಂದು ಭಾಗವು ಮುಗಿದಂತಾಗುವದು. ಅನಂತರ ರಾವುಂಡ ಟೇಬಲದ ಕ್ಲಾದ ಚರ್ಚೆಯು ಎರಡನೆಯ ಭಾಗವಾಗುವದು. ಕುರಂಗದಲ್ಲಿ ಮಹಾತ್ಮರು ಶಿಷ್ಟರ ಕೂಡ ಮಾತಾಡುತ್ತಿದ್ದಾಗ, ಮುಂಬಯಿಯಲ್ಲಿ ಅಧ್ಯಕ್ಷ ಪಟೇಲರು ಇದೊಂದು ಕೇವಲ ಫಾರ್ಸ ಆಗಿರುತ್ತದೆಂದು ಭಾಷಣ ಮಾಡಿ, ಕಾಂಗ್ರೆಸವು ತನ್ನ ಚಳವಳಿಯನ್ನು ಕಿಂಚಿತ್ತಾದರೂ ಕಡಿಮೆ ಮಾಡಕೂಡದೆಂದು ಸಾರಿ ಹೇಳಿದ್ದಾರೆ. ಇವೆಲ್ಲವನ್ನು ಒಡಂಬಡಿಸಿದ ಹೊರ್ತು, ಕಾಂಗ್ರೆಸ ಪಕ್ಷದ ಪರೆಯಿಂದ ರಾಜಿಯ ಕರಾರುಗಳು ಪೂರ್ಣವಾಗಲಾರವು. ಆದುದರಿಂದ ಸ್ಪೇಶಲ ಕಾಂಗ್ರೆಸ ಕೂಡಿಸಬೇಕೆಂಬ ವಿಚಾರವನ್ನು ಪಂಡಿತ ಜವಾಹಿರಲಾಲರು ಸರ ಸಪ್ರುಸಾಹೇಬರ ಮುಂದೆ ಹೇಳಿದಂತೆ ಸುದ್ದಿಯಾಗಿದೆ. ಒಂದು ವೇಳೆ ಈ ಸಂಗತಿಯು ನಿಜವಾಗಬಹುದು. ಕಾಂಗ್ರೆಸ ಕೂಡುವ ವೇಳೆಯಲ್ಲಿ ಸರಕಾರದವರು ರಾಜಬಂದಿಗಳನ್ನು ಬಿಡಬಹುದೆಂದು ಹೇಳಬೇಕಾಗುತ್ತದೆ.

ರಾಜಿಯ ಪ್ರಸ್ತಾಪವು ಮೊದಲು ಮಿ. ಸ್ಲೋಕೋಂಬಸಾಹೇಬರ ಕಡೆಯಿಂದ ನಡೆಯಿತು. ಇವರು ಸಾಹೇಬರು ಅಹ್ಮದಾಬಾದದಲ್ಲಿ ಪಂಡಿತ ಮೋತಿಲಾಲರನ್ನು ಕಂಡು ಪ್ರಸ್ತಾಪಿಸಿದರು. ಮಹಾತ್ಮರು ಮತ್ತು ಪಂಡಿತ ಮೋತಿಲಾಲರು ಬರೆದುಕೊಟ್ಟ ಸಂಗತಿಗಳಿಗೆ [illegible] ಒದಗಿ ಈಗಿನ ವಿಚಾರ ವಿನಿಮಯವಾಗಿರುತ್ತದೆಂದು ಬೋಧಕವಾರ್ತೆಯಾಗಿದೆ. “ ಕೆಲವು ನಿಬಂಧನೆಗಳನ್ನಿಟ್ಟುಕೊಂಡು, ಹಿಂದುಸ್ಥಾನಕ್ಕೆ ಜವಾಬದಾರೀ ಸ್ವರಾಜ್ಯಾಧಿಕಾರ ಕೊಡುತ್ತೇವೆಂದು ಲಾರ್ಡ ಆಯರ್ವಿನಸಾಹೇಬರು ಅನ್ನುತ್ತಿದ್ದಾರೆ. ಆದಾವ ಸುರಕ್ಷಿತೆಗಳೆಂಬುದು ತಮಗೆ ತಿಳಿಯಬೇಕಾಗಿದೆಂದು ಪಂಡಿತ ಜವಾಹಿರಲಾಲರು ಶಂಕೆ ತೆಗೆದಿದ್ದು, ಅವುಗಳ ಸಮಾಧಾನವಾಗಬೇಕಾಗಿರುತ್ತದೆ. ಈ ಪ್ರಶ್ನದ ಬಗ್ಗೆ ಮತಭೇದವಾಗುವ ಸಂಭವವಿರುವದರಿಂದ ಸರ ಸಪ್ರುಸಾಹೇಬರು ಸಮ್ಮಸ ತಮ್ಮ ಕೂಡ ವಿಚಾರ ವಿನಿಮಯವೂ ಆಗಿ ಏನಾದರೂ ಯೋಗ್ಯವಾದೊಂದು ನಿರ್ಣಯ ಮಾಡಿಕೊಳ್ಳಬಹುದೆಂದು ಲಾರ್ಡ ಆಯರ್ವಿನಸಾಹೇಬರಿಗೆ ತಿಳಿಸಬೇಕೆಂದು ಧ್ವನಿತವಾಗುತ್ತದೆ.

ರಾಜಿಯ ಸಂಬಂಧವಾಗಿ ಪ್ರಯತ್ನಿಸಿದ ಈ ಇರ್ವರು ಗೃಹಸ್ಥರ ಅಭಿನಂದನವನ್ನು ಈಗಾಗಲೇ ಜನರು ಮಾಡಲಾರಂಭಿಸಿದ್ದಾರೆ. ಕಾಂಗ್ರೆಸದ ಕೆಲ ಗೃಹಸ್ಥರು ಇವರಿಗೆ ಭಾಪು! ಭಾಪು!! ಎಂದಿದ್ದಾರೆಂದು ಮರಾಠಿ ಪತ್ರಗಳು ಬರೆಯಲಾರಂಭಿಸಿವೆ. ಒಂದು ರೀತಿಯಿಂದ ಇವರ ಉಪಕ್ರಮವು ಸ್ತುತ್ಯವಾಗಿದ್ದರೂ, ಅದು ಕೊನೆಗಾಣುವವರೆಗೆ ಬೆನ್ನು ಚಪ್ಪರಿಸುವದು ಸಮಂಜಸವಾಗಲಾರದು.

ಶಿಷ್ಟಾಯಿಯವರು ಲಾರ್ಡ ಆಯರ್ವಿನಸಾಹೇಬರಿಗೆ ಕಳಿಸಿದ ಪತ್ರವು ಈಗಾಗಲೇ ಅವರಿಗೆ ಮುಟ್ಟಿರುತ್ತದೆ. ಲಾರ್ಡ ಸಾಹೇಬರು ತಾರಿನಿಂದ ಮೆ. ಜಿನ್ನಾಸಾಹೇಬರ ಕೂಡ ಮಾತಾಡಿಕೊಂಡು, ತಮ್ಮದೊಂದು ವಿಚಾರ ಮಾಡಿಕೊಂಡು, ಇವರೀರ್ವರನ್ನು ಕರೆಸುವರು. ನಡುವಿನ ಈ ವಿಧವಿಧ ಸಂಗತಿಗಳಿಗೆ ಕೆಲವು ದಿವಸಗಳು ಬೇಕಾಗುವದು ಸಹಜವಿದೆ.

ಬ್ರಾಹ್ಮಣರು ರಾವುಂಡ ಟೇಬಲಕ್ಕೆ [illegible]

ಹಿಂದುಸ್ಥಾನದಲ್ಲಿ ಬ್ರಾಹ್ಮಣರನ್ನು ಹಿಂದೆ ಹಾಕಬೇಕೆಂದು ಎಷ್ಟು ಪ್ರಯತ್ನ ನಡೆದರೂ, ಅವರು ಬ್ರಾಹ್ಮಣ, ಬ್ರಾಹ್ಮಣೇತರರೆಂಬ ಭೇದ ಮಾಡಿದ್ದರೂ, ಬ್ರಾಹ್ಮಣರ [illegible] ಮುಖ್ಯ ಮಂತ್ರಿಯಾದ ಮಿ.. ಮ್ಯಾಕಡೋನಾಲ್ಡಸಾಹೇಬರಿಗೇ ಉಂಟಾಗಿರುತ್ತದೆ. ಸಾಯಮನ್ನಸಾಹೇಬರ ರಿಪೋರ್ಟನ್ನು ಚರ್ಚೆಯ ಮುಖ್ಯಾಧಾರವಾಗಿಟ್ಟುಕೊಂಡು, ರಾವುಂಡ ಟೇಬಲಿನಲ್ಲಿ ವಾದವಿವಾದ ಮಾಡುವದಾದರೆ ಬ್ರಾಹ್ಮಣರು ಪ್ರತಿನಿಧಿಗಳಾಗಿ ಬರಲಾರರೆಂದು ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದೊಂದು ಭಾಷಣವನ್ನು ಪಾರ್ಲಮೆಂಟ ಸಭೆಯಲ್ಲಿ ಮಾಡಿದ್ದಾರೆ. ಸಾಯಮನ್ನ ರಿಪೋರ್ಟಿನ [illegible] ಉದ್ದೇಶ ಮಾತ್ರವಾಗುವದಿಲ್ಲದೆ ರಾವುಂಡಟೇಬಲದಲ್ಲಿ ಅದು ಪ್ರತ್ಯಕ್ಷ ಹೊಂದಿದ್ದೇ ಆಗಿರುತ್ತದೆಂದು ವಿಲಾಯತಿಯವರ ಮತವಾಗಿರುತ್ತದೆ.

ಹಿಂದೀ ಜನರ ಸ್ವಾರ್ಥತ್ಯಾಗ.

ಸ್ವರಾಜ್ಯಕ್ಕಾಗಿ ಸತ್ತು ಪುನರ್ಜನ್ಮ ಹೊಂದುವರು

ಹಿಂದುಸ್ಥಾನದಲ್ಲಿರುವ ಒಂದು ಪ್ರಖ್ಯಾತ ಬ್ಯಾಂಕಿನ ಮ್ಯಾನೇಜರನು ಹಿಂದುಸ್ಥಾನದ ನಿಜಸ್ಥಿತಿಯು ವಿಲಾಯತಿಯವರಿಗೆ ತಿಳಿಯಬೇಕೆನ್ನುವಂಥ ಪತ್ರ ಬರೆದು ಕಳಸಿದ್ದು, ಅದು ಸ್ಪೆಕ್ಟೇಟರದಲ್ಲಿ ಮುದ್ರಣ ಹೊಂದಿದೆ.

"ಹಿಂದೂ ಜನರು ಸ್ವರಾಜ್ಯಕ್ಕಾಗಿ ಅರ್ಥಹಾನಿ ಪ್ರಾಣಹಾನಿ ಮಾಡಿಕೊಳ್ಳಲು ಸಿದ್ಧರಾಗಿದ್ದಾರೆ. ಪರಕೀಯರ ಪೀಡೆ ತಪ್ಪಿಸಿಕೊಳ್ಳಲು, [illegible] ಜನರು ತಮ್ಮ ದೇಶದ ಕರೆ ಮತ್ತು ನದಿಗಳ ಒಡ್ಡು ಒಡೆದು, ದೇಶದ ತುಂಬ ನೀರೇ ನೀರು ಮಾಡಿ, ವೈರಿಗಳು ತಮ್ಮ ದೇಶದಲ್ಲಿ ಬರದಂತೆ ಮಾಡಿದ ಹಾಗೆ, ಹಿಂದೂ ಜನರು ಬೇಕಾದಷ್ಟು ಹಾನಿಯಾದರೂ ಸ್ವಾರ್ಥತ್ಯಾಗ ಮಾಡಲು ಸಿದ್ಧರಾಗಿದ್ದಾರೆ. ಹಳ್ಳಿಗಳಲ್ಲಿ ಈ ಚಳವಳಿಯು ಇಲ್ಲೆಂದು ವಿಲಾಯತಿಯವರಿಗೆ ಹೇಳುವರು. ನಾನು ಒಂದು ದಿವಸ ಗುಜರಾಥದ ಒಂದು ಹಳ್ಳಿಯಲ್ಲಿ ಇದ್ದು ನೋಡಿದೆ. ಅದರ ಪ್ರಚಂಡ ಸ್ವರೂಪ ಕಂಡು ಬರುವದು. ಹಿಂದುಸ್ಥಾನದಲ್ಲಿ ನಿಮ್ಮ ವ್ಯಾಪಾರ-ಉದ್ದಿಮೆ ನಡೆಯಬೇಕಾದರೆ- ಮೊದಲು ಸ್ವರಾಜ್ಯ ಕೊಡಿರಿ. ಪಾರ್ಲಮೆಂಟದಲ್ಲಿ ಕಾಯದೆ ಮಾಡುವದರಿಂದ ವ್ಯಾಪಾರ ನಡೆಯದು. ಇಂಥವರ ಕೂಡ ವ್ಯಾಪಾರ ಮಾಡಬೇಕೆಂದು ಒತ್ತಾಯ ಪಡಿಸಲಾರಿರಿ. ಈ ೨೦ನೆಯ ಶತಮಾನದಲ್ಲಿ ಸ್ವಯಂನಿರ್ಣಯದ ಅಧಿಕಾರ ಕೊಡುವದಿಲ್ಲೆಂದು ನಾವು ಹೇಳಲಾರೆವು."

ಎಂಬದಾಗಿ ಈ ಸಾಹೇಬನು ಅಂದಿದ್ದಾನೆ.

ನಾಲ್ವತ್ತು ಸಾವಿರ ಕೂಲಿಕಾರರ ಪ್ರಚಂಡವಾದ ರಾಷ್ಟ್ರೀಯ ಮೆರವಣಿಗೆ.

ಮುಂಬಯಿಯಲ್ಲಿ ಗಿರಣಿಗಳ ನಾಲ್ವತ್ತು ಸಾವಿರ ಕೂಲಿಕಾರರು ಕಾಂಗ್ರೆಸಕ್ಕೆ ಸಂಪೂರ್ಣ ಅನುಕೂಲರಾಗಿರುವಂತೆ ರಾಷ್ಟ್ರೀಯ ಸಪ್ತಾಹವನ್ನು ಪ್ರಾರಂಭ ಮಾಡಿದ್ದಾರೆ. ರವಿವಾರ ಬೆಳಗಾದ ಕೂಡಲೆ, ಗಿರಣಿಯ ಕೂಲಿಕಾರರು ವಾಸವಾಗಿರುವ ಭಾಗದಲ್ಲಿ ಸಪ್ತಾಹದ ನಗರಸಂಕೀರ್ತನೆ ಪ್ರಾರಂಭವಾಯಿತು. ಕಾಂಗ್ರೆಸದ ಮುಂದಾಳುಗಳು ನಸುಕು ಹರಿಯುವದರೊಳಗಾಗಿ ಅಲ್ಲಿಗೆ ಹೋಗಿ, ಎಲ್ಲ ಕೆಲಸಗಳು ಶಿಸ್ತಿನಿಂದ ನಡೆಯುವಂತೆ ಕಾರ್ಯಕ್ರಮಗಳನ್ನು ನಡೆಸಿದರು. ನಗರ ಸಂಕೀರ್ತನೆಯಾದ ಬಳಿಕ ರಾಷ್ಟ್ರಧ್ವಜ ವಂದನೆಯಾಯಿತು. ಬಳಿಕ ಅವರು ಸಭೆಗೂಡಿಸುವ ದೊಡ್ಡ ಬೈಲಿಗೆ ಕಾಮಗಾರ ಮೈದಾನವೆಂಬ ನಾಮಕರಣ ಮಾಡಲ್ಪಟ್ಟಿತು. ಆಗ ಮಳೆಯು ಸುರಿಯುತ್ತಿತ್ತು. ಅರ್ಧತಾಸಿನ ತನಕ ಸಭೆಯ ಕೆಲಸ ನಡೆದಿದ್ದರೂ ಒಬ್ಬರೂ ಕೊಡೆ ತೆಗೆಯಲಿಲ್ಲ, [illegible] ಕೊಯಿಸಿಕೊಂಡರೂ, ಒಬ್ಬರೂ ಸ್ಥಳಬಿಟ್ಟು ಏಳಲಿಲ್ಲ. ಬಳಿಕ ಅನೇಕ ಪಂಗಡಗಳನ್ನು ಮಾಡಿ, ಆ ಭಾಗದಲ್ಲೆಲ್ಲ ಮೆರವಣಿಗೆಗಳನ್ನು ಹೊರಡಿಸಿದರು. ಕೂಲಿಕಾರ ಸಿಂಹ, ಕಾಂಗ್ರೆಸ, ಕಾಯದೆಭಂಗ, ಬಹಿಷ್ಕಾರ ಮುಂತಾದವುಗಳ ಮೇಲೆ ವ್ಯಾಖ್ಯಾನಕೊಡುವರು. ನಾಲ್ವತ್ತು ಸಾವಿರ ಕೂಲಿಕಾರರು ನಿರುದ್ಯೋಗಿಯಾಗಿದ್ದಾರೆ; ಇವರು ಹೊಟ್ಟೆಗಿಲ್ಲದ ಚಿಂತೆ ಮಾಡದೆ, ದೇಶಕಾರ್ಯವೆಂದು ಚಳವಳಿಯಲ್ಲಿ ಸೇರಿದ್ದಾರೆ. ಕೂಲಿಕಾರರ ಸಂಘಶಕ್ತಿಯ ಅನುಕೂಲತೆ ದೊರೆತಿದೆ. ಈಗಿನ ಕಾಲದಲ್ಲಿ ಕಾಂಗ್ರೆಸದವರು ಅಘಟಿತ ಘಟನೆಗಳನ್ನು ಮಾಡಬಹುದು.

ಸರಕಾರದ ಅಡವಿಯಲ್ಲಿ ರಾಷ್ಟ್ರೀಯ ನಿಶಾನೆ.

ಕಾರವಾರ ಜಿಲ್ಲೆಯ ಜನರೂ ಸತ್ಯಾಗ್ರಹದಿಂದ [illegible] ಅಡವಿಭಾಗ ನಡೆಸಿದ್ದಾರೆ. ಇವರು ಮೊದಲನೆಯ ದಿವಸ ಸರಕಾರೀ ಅಡವಿಯಲ್ಲಿ ರಾಷ್ಟ್ರೀಯ ನಿಶಾನೆಯನ್ನು ಊರಿ, ಅದನ್ನು ತಮ್ಮ ದಾಯಿತೆಂದು ಜಾಹೀರ ಮಾಡಿದರು. ಹುಲ್ಲು ಉರುವಲವನ್ನು ಬಂಡಿ ತುಂಬ ತುಂಬಿಕೊಂಡ ಹೋಗುವದು ನಿತ್ಯ ಕರ್ಮವಾಗಿರುತ್ತದೆ.

ಜಿ. ಆಯ. ಪಿ. ರೇಲ್ವೆಯು ನಷ್ಟಕ್ಕೆ ಗುರಿಯಾಯಿತು.

ಇಂಗ್ರೇಜಿ ಸರಕಾರದ ಉತ್ಪನ್ನವು ಕಡಿಮೆಯಾಗುತ್ತಬಂದಂತೆ, ರೇಲ್ವೆಗಳ ಆದಾಯವೂ ಒಳ ಒಟ್ಟಾದಲ್ಲಿ ಬರಹತ್ತಿದೆ. ಕಳೆದೆಂಟು ತಿಂಗಳಲ್ಲಿ ಹಿಂದುಸ್ಥಾನದ ರೇಲ್ವೆ ಕಂಪನಿಗಳಿಗೆ ಒಂದೂವರೇ ಕೋಟಿಯಷ್ಟು ನಷ್ಟವಾಗಿದೆ. ಇವುಗಳಲ್ಲಿ ಜಿ. ಆಯ. ಪಿ. ರೇಲ್ವೆಗೂ ಒಳ್ಳೇ ಹೊಡತ ಕೂತಿದೆ. ಏಕೆಂದರೆ- ಮುಂಬಯಿಯಿಂದಲೇ ದೇಶದೇಶಕ್ಕೆ ಸರಕು ಹೋಗಬೇಕಾಗಿದ್ದು, ಅದರ ಆಮದು ನಿರ್ಗತವು ಒಮ್ಮೆಲೆ ಕಡಿಮೆಯಾಗಿ ವಾರಕ್ಕೆ ನಾಲ್ಕೈದು ಲಕ್ಷದಷ್ಟು ಪ್ರಾಪ್ತಿಯು ಕಡಿಮೆಯಾಗಲಾರಂಭಿಸಿದೆ. ಆದುದರಿಂದ ಕಂಪನಿಯವರು ಹತ್ತಿಪ್ಪತ್ತು ಲೋಕಲ ಟ್ರೇನುಗಳನ್ನು ನಿಲ್ಲಿಸಿದರು. ಮುಂಬಯಿಯಿಂದ ಪುಣೆಗೆ ಬರುವ ಕರ್ನಾಟಕದ ಮೇಲ್ಗಾಡಿಯಲ್ಲಿ ಎರಡು ಭಾಗಮಾಡಿ, ಒಂದರಲ್ಲಿ ಫಸ್ಟ ಮತ್ತು ಸೇಕಂಡ ಹಾಗು ಎರಡನೇದರಲ್ಲಿ ಥರ್ಡ ಕ್ಲಾಸದ ಜನರನ್ನು ಬಿಡುತ್ತಿದ್ದರು. ಇವೆರಡೂ ಒಂದು ಮಾಡಿದರು. ಈ ರೇಲ್ವೆಯಂತೆ ಸರ್ವ ಮಾರ್ಗದ ಮೇಲೆ ಕಾಂಗ್ರೆಸ ದೃಷ್ಟಿ ಬಿದ್ದಿದೆ. ಇದಾವ ರೀತಿಯಿಂದ ಈ ಹಾನಿ ಬಾಯಿಗೂಡಿಸಿಕೊಳ್ಳುವವೆಂಬುದನ್ನು ನೋಡಬೇಕಾಗಿದೆ.

ಅಶಿಕ್ಷಿತರ ಕಾಯದೆಭಂಗ- ಸುಶಿಕ್ಷಿತರ ಕಾಯದೆಭಂಗ.

[illegible] ಈಚಲ ಗಿಡ ಕಡಿದರು. ಅವರನ್ನು ಹಿಡಿಯುವಾಗ ಊರ ತುಂಬ ಮೆರವಣಿಗೆಯಾಯಿತು. ಹಾವೇರಿಯಲ್ಲಿ ರಾಜಕುಮಾರನಂತೆ ಸನ್ಮಾನ ಹೊಂದಿದರು. ಮದಿವೆಯಲ್ಲಿ ಸಹ ಇಂಥ ನಿಬ್ಬಣ ಮತ್ತು ಸಂಭ್ರಮ ಕಂಡಿರಲಿಕ್ಕಿಲ್ಲ. ಕನಸಿನಲ್ಲಿ ಅರಸೊತ್ತಿಗೆ ಕಂಡಂತೆ!! ಇವರನ್ನು ಹಿಡಿದವರು ಕೂಡ ದುಸ್ತರವಾಯಿತು. ಆದರೇನಾಯಿತು? ಎರಡನೆಯ ಬಾಜೀರಾಯನ ಪೇಶ್ವೆಯ ಪಟ್ಟಕ್ಕೆ ಕಳಂಕತಾಯಿತು. ಕುರಂಗವೆಂದರೆ- ಯಮನ ನರಕವೆಂದು ಹೆದರಿಕೊಂಡರು. ಸ್ವಾರ್ಥಪರಾಯಣರೂ ಹೆದರಿಸಿದರು. ಸರಕಾರದ ಕ್ಷಮೆ ಕೇಳಿಕೊಂಡು ಇವರು ಮನೆಗೆ ಹೋದರು. ಯಾವದೇ ಸಾರ್ವಜನಿಕ ಚಳವಳಿಯಲ್ಲಿ ತಮ್ಮನ್ನು ನಂಬದಷ್ಟು ನಂಬಿಗೆ ಕಳಕೊಂಡರು. ಇವರು ಕುರಂಗದ ಬಾಗಿಲು ಮೆಟ್ಟುವದರೊಳಗಾಗಿ ಮಾಫೀ ಬೇಡಿಕೊಂಡರು. ಬೈಲಹೊಂಗಲಿನ ಕೆಲವರು ಕ್ಷಮೆಯಾಗಿ ಹಿಂದೆಸರಿದಿದ್ದಾರೆ. ಇವರಿಗೂ ಕ್ಷಮೆ ಬೇಡಿಕೊಳ್ಳಲೆಂದು ಇನ್ನೂ ವಿಲಾಯತಿಯ ಬೂಟು- ಸೂಟು ಹಾಕಿಕೊಳ್ಳುವಂಥವರು ಬಹಾದ್ದೂರಿ ಪಡೆಯಲು ಒತ್ತಾಯ ಪಡಿಸುತ್ತಿದ್ದಾರೆಂದು ವರ್ತಮಾನವಾಗಿದೆ. ಈ ಗೃಹಸ್ಥರು [illegible] ವರಾಗಿ, ದೇಶಕಾರ್ಯಕ್ಕಾಗಿ ಹೇಗೆ ದೇಹದಂಡನೆ ಮಾಡಬೇಕಾಗುತ್ತದೆಂಬುದನ್ನು ಅರಿಯದಂಥ ಜನರನ್ನು ಹೆದರಿಸುವದಕ್ಕಿಂತ ಸುಶಿಕ್ಷಿತರಲ್ಲಿ ಒಬ್ಬನನ್ನಾದರೂ ಒಲಿಸಿಕೊಂಡು, ಅವನಿಗೆ ಮಾಫೀ ಬೇಡಿಕೊಳ್ಳುವದಕ್ಕೆ ಹಚ್ಚಿದರೆ- ನಿಜವಾದ ಪೌರುಷವಾಗುವದು. ನೂರು ಜನ ಅಜ್ಞರನ್ನು ಕ್ರಿಶ್ಚನ್ನ ಸಂಗದಲ್ಲಿ ತಕ್ಕೊಂಡರೆ ಪಾದ್ರಿ ಸಾಹೇಬರಿಗೆ ಕೀರ್ತಿ ದೊರೆಯುವದಿಲ್ಲ. ಅದೇ ಒಬ್ಬ ಬ್ರಾಹ್ಮಣನನ್ನು ಕುಲಗೆಡಿಸಿದರೆ- ಅವನ [illegible] ಇನಾಮು ದೊರೆಯುವದೆಂದು ಹೇಳಿಕೆಯುಂಟು. ಅದೇ ಪ್ರಕಾರ ಅಜ್ಞರಿಂದ, [illegible] ಕ್ಷಮೆ ಬೇಡಿಸಿಕೊಳ್ಳುವದಕ್ಕಿಂತ ಒಬ್ಬ [illegible] ಸುಶಿಕ್ಷಿತನಿಂದ ಕ್ಷಮೆ ಬೇಡಿಸಬೇಕು. [illegible] ಅಶಿಕ್ಷಿತರ ಕ್ಷಮೆಯನ್ನು ದೊಡ್ಡ ಗುಲ್ಲ ಮಾಡಿಕೊಳ್ಳಬಾರದು.

ಆಸಿಸ್ಟಂಟ ಕಲೆಕ್ಟರರು ಕುದುರೆಯಿಂದ ಬಿದ್ದು ಮರಣ.

ಮಹಾರಾಷ್ಟ್ರದಲ್ಲಿ ಸರ ವಿಠಲ ರಘುನಾಥ [illegible] ಚಿರಂಜೀವ ರಘುನಾಥರಾವ ಆಯ. ಸಿ. ಎಸ. ಪರೀಕ್ಷೆ ಪಾಸಾಗಿ ಆಸಿಸ್ಟಂಟ ಕಲೆಕ್ಟರರಾಗಿದ್ದರು. ಇವರು ಅಶ್ವಾರೂಢರಾಗಿ ಹೋಗುತ್ತಿದ್ದಾಗ, ಕುದುರೆಯು ಹೆದರಿ [illegible] ಹಾಯ್ದು ಬಿತ್ತು. ಈ ಅಪಘಾತದಿಂದ ರಘುನಾಥರು ಸ್ವರ್ಗವಾಸಿಗಳಾದರು. ತಂದೆಯವರು [illegible]. ಇವರು ಬರುವಾಗ ಕಾಲನ್ನು [illegible] ಹಾಕಿ [illegible].

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಗಳ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾತ್ಮಾ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರಡ್ಡಿ ಕಂಪನಿ ಲಿಮಿಟೆಡ್

ಎಂಬ ನಾಮೇದ **ಕಿರಾಣಿ ಅಂಗಡಿಯನ್ನು** ಗದಗ ಶಹರದಲ್ಲಿ ಇದೇ ವರ್ಷ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯ ವ್ಯವಸ್ಥೆಯು ದೊಡ್ಡ ದೊಡ್ಡ ಜವಾಬದಾರ ಮತ್ತು ವ್ಯವಹಾರಜ್ಞರಾದ ಸುಶಿಕ್ಷಿತ ಜನರಿಂದಲೇ ನಡೆಸಲ್ಪಡುವದು.

ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಹುಟ್ಟಿಸಿ ಮತ್ತು ನೈತಿಕ ಉನ್ನತಿಯನ್ನು ಬೆಳೆಯಿಸಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಬಾರದಾನ, ಶಾಲೀಚೀಲ, ಹತ್ತೀಕಾಳು, ಚಿಮಣಿಎಣ್ಣೆ ಕಿರಾಣಿ ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ ಸೇವಿಸಿದರದಿಂದ ಕೊಂಡುಕೊಳ್ಳಬೇಕಾಗಿ ವಿನಂತಿಯದೆ. ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತೀಕಾಳು, ಹುರುಳಿ ವಗೈರೆ ಮಾಲನ್ನು ಸಂಗ್ರಹ ಮಾಡುವದು ಹೆಚ್ಚು ಲಾಭಕರವಿದೆ. ಕಾರಣ ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು ನಮಗೆ ಮುಂಗಡವಾಗಿ ಕಳುಹಿಸಿಕೊಟ್ಟು ಲಿಲಾವಿಯಿಂದ ಖರೀದಿ ಮಾಡಲಿಕ್ಕೆ ತಿಳಿಸಿದಲ್ಲಿ ಯೋಗ್ಯದರದಿಂದ ಖರೀದಿಮಾಡಿ ಇಡುವದರಲ್ಲಿ ಬರುವದು ಈ ಸುಸಂಧಿಯನ್ನು ವ್ಯರ್ಥ ಕಳೆದುಕೊಳ್ಳಬಾರದಾಗಿ ವಿನಂತಿ. ಮತ್ತು ತಾವೆಲ್ಲರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳೆ, ಗೋದಿ, ಜೋಳ, ಶೇಂಗಾ ವಗೈರೆಯೂ ಮತ್ತು ತರಹದ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾರಾಶ್ರಯ ಕೊಡಬೇಕೆಂತಲೂ ಮತ್ತು ತಾವೂ ಲಾಭಹೊಂದಬೇಕೆಂದೂ ಇಚ್ಛಿಸುತ್ತೇನೆ.

ಗದಗ. ತಮ್ಮ,
ಅಂಗಡಿ ನಂ ೧೭೨ ರಾ. ಸಾ. ಲಿಂಗನಗೌಡಾ ಪಾಟೀಲ, ಚೇರಮನ್ನ.
ಕಾಟನ್ ಮಾರ್ಕೆಟ ರೋಡ ಲಕ್ಷ್ಮಪ್ಪಾ ಗೋಣಿಸಾ ಸಾಹುಕಾರ ಮೈದೂರ ಡೈರೆಕ್ಟರ
ವೆಂಕರಡ್ಡಿ ಕೃಷ್ಣರಡ್ಡಿ ಇನಾಮತಿ ಅಸುಂಡಿ, ಗದಗ ದ್ಯಾವನಗೌಡಾ ಪಾಟೀಲ, ಹಾಯಕೋರ್ಟ ವಕೀಲ
ಹನುಮರಡ್ಡಿ ತಿಮ್ಮರಡ್ಡಿ ಕಾಲವಾಡ ಮ್ಯಾನೇಜರ, ರಡ್ಡಿ ಬ್ಯಾಂಕ ಧಾರವಾಡ ಧಾರವಾಡ

ಸೂಚನೆ:— ವಿಮೆ ಇಳಿಸಿದಲ್ಲಿ ಮಾಲಿನ ಮೇಲೆ ೭೫ ರಷ್ಟಕ್ಕಿಂತ ಹೆಚ್ಚಿಲ್ಲದಷ್ಟು ರಕಮು ಅಗಾವು ಕೊಡುವದರಲ್ಲಿ ಬರುವದು. ಹೀಗೆ ಒಯ್ದ ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ ೧ ರೂಪಾಯಿಗಿಂತ ಮೀರದಷ್ಟು ಬಡ್ಡಿ ಕೊಡಬೇಕಾಗುವದು. ಕಂಪನಿಯವರು ಆಸಾಮಿಗಳ ಇಚ್ಛೆಯ ಪ್ರಕಾರ, ವಖಾರದಲ್ಲಿ ಖಾಸಗಿ ರಿ ಲಿಲಾವು ಇಲ್ಲವೆ ಗದಗ ಕಾಟನ್ ಮಾರ್ಕೆಟ ಅಸೋಸಿಯೇಶನ್ನದ ಮುಖಾಂತರವಾಗಿ ಲಿಲಾವಿನಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ.

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ತೀರ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ಗ್ರಾಮದೇವ ಸಿಂಪಿ, ವೈಶ್ಯ, ಪಾಂಚಾಳ, ದೇವಾಂಗ, ಮರಾಠ್ಯಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಕಬ್ಬೇರ, ಒಡ್ಡರ, ಗೊಲ್ಲರ, ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ ಒಕ್ಕಲಿಗಾರ ಲಮಾಣಿ ಮೊದಲಾದ ನಿಕೃಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ ಹಾಗೂ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ [illegible], ಅಡಚಣೆ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು.

ಮೆಂಬರರು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾವಿ, ಕಾರವಾರ ಹಾಗೂ ಸೊಲ್ಲಾಪೂರ ಮೊದಲಾದ ಬ್ರಿಟಿಶ ಜಿಲ್ಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಿಲ್ಲದ ವಯಸ್ಸಿನ ಸ್ತ್ರೀಪುರುಷರು ಕೆಳಗೆ ಕಾಣಿಸಿದಂತೆ. ಆಯಾ ತರಗತಿಯ ದೇಣಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರಾಗಬಹುದು.

ಆಶ್ರಯದಾತರು:— ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ದೇಣಿಗೆಯನ್ನು ಕೊಡುವಂತವರು.

ದಾತೃಗಳು. ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು,

ಆಜೀವ ಸಭಾಸದರು:— ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು,

ಸಾಧಾರಣ ಸಭಾಸದರು— ಮೂವರು, ಕೆಳ ೧ನೇ ತರಗತಿ— ಕನಿಷ್ಟ ೫ ರೂ. ವಾರ್ಷಿಕ ವರ್ಗಣಿ
೨ನೇ ತರಗತಿ— ಕನಿಷ್ಟ ೨ ರೂ. ವಾರ್ಷಿಕ ವರ್ಗಣಿ ಕೊಡುವವರು,
೩ ನೇ ತರಗತಿ— ಕನಿಷ್ಟ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.
೪ ನೇ ತರಗತಿ— ಕನಿಷ್ಟ ೪ ಆಣೆ. ವಾರ್ಷಿಕ ವರ್ಗಣಿ ಕೊಡುವವರು.

ಸಮಸ್ತ ಬಂಧುಭಗಿನಿಯರು ಆದಷ್ಟು ತೀವ್ರ ಸಂಘದ ಮೆಂಬರರಾಗಬೇಕೆಂದು ಒಳ್ಳೇ ಆಗ್ರಹದ ವಿನಂತಿಯು.

ದೇವನಗೌಡ ಲಿಂಗನಗೌಡ ಪಾಟೀಲ,
ಬಿ. ಎ. ಎಲ್‌ಎಲ್. ಬಿ. ಹಾಯಕೋರ್ಟ ವಕೀಲ, ಧಾರವಾಡ
ಸೆಕ್ರೆಟರಿ.

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ವಾರ್ಮೇಜಿನ ಮೇಲೆ

ಗಿರಣಿಯ (ಶೇಅರ್ಸ) ಮತ್ತು ದಿ ಬ್ಯಾಂಕ ಆಫ ಬಾರಸಿ ಲಿಮಿಟೆಡ (ಶೇಅರ್ಸ) ಸಿಗುವವು. ಪ್ರತ್ಯುತ್ತರದ ಸಲುವಾಗಿ ಬಂದು ಆಣೆಯ ಪೋಸ್ಟ ಸ್ಟ್ಯಾಂಪು ಕಳಿಸಿ ಕೊಡಿರಿ. ದೊಡ್ಡ ದೊಡ್ಡ ಶಹರುಗಳಲ್ಲಿ ಪಗಾರ ಕಮೀಶನ್ನ ಮೇಲೆ ಕೆಲಸ ಮಾಡುವವರು ಬೇಕು.

ಪತೆ ಮುನಿಮೋತ
ಟೆಲಿಫೋನ, **ಹ. ಡಿ. ಘಾಟಿಪಾಂಡೇ** (ಬೇಕರ
ಫೋನ ನಂಬರ ಕೇಸರ ಬಾಗ ಗೋಲ್ಡ ಮೊಹೊಲ್ಲದ ಮುಂದೆ
ಪೋಸ್ಟ ಬೋಕ್ಸ ನಂಬರ ೫೫೦೧,
ದಾದರ, ಬೊಂಬಾಯಿ.

(೧) ರಾಣಿಬೆನ್ನೂರ (೨) ಹಿರೇಕೆರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿನ ಬಗ್ಗೆ ಗಣೇಶ ಶಂಕರ ಜೋಶಿ ಇವರನ್ನು ಪ್ರಾಂತ ಏಜಂಟರಾಗಿ ನೇಮಿಸಿದ್ದೇವೆ. ಈ ನಾಲ್ಕು ತಾಲೂಕಿನ ತಮ್ಮ ವ್ಯವಹಾರವನ್ನು ಇವರ ಹತ್ತಿ ಮಾಡುವದಕ್ಕೆ ಹರಕತ್ತು ಇಲ್ಲಾ

ತ್ವರೆ ಮಾಡಿರಿ! ತ್ವರೆ ಮಾಡಿರಿ!

THE UNITED KARNATAK INSURANCE COMPANY
LTD. DHARWAR

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೭ನೇ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಏಜಂಟರು ಬೇಕು

ಕನ್ನಡ ನಾಡಿನಲ್ಲಿ ಕನ್ನಡಿಗರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮತ್ತು **ಕನ್ನಡಿಗರಿಂದ** ನಡೆಸಲ್ಪಟ್ಟ ಈ ಮೊದಲನೇ ಕಂಪನಿಗೆ ಶೇರುಗಳನ್ನು ಮಾರುವದಕ್ಕೂ ವಿಮೆಯ ಕೆಲಸವನ್ನು ತಂದು ಕೊಡುವದಕ್ಕೂ ಎಲ್ಲಾ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ವಿಮೆಯ ಕೆಲಸವನ್ನು **ಗ್ಯಾರಂಟಿ ಮಾಡಿದಲ್ಲಿ** ವಿಶೇಷ ಸವಲತ್ತುಗಳು ಕೊಡಲ್ಪಡುವವು. **ಕನ್ನಡಿಗರೇ** ತೀವ್ರವೇ ನಮ್ಮ ಕೆಲಸವನ್ನು ಕೈಕೊಂಡು ಲಾಭ ಪಡಕೊಳ್ಳಿರಿ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar.
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖೆ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ.

ಚಾಲೂ ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಸೇವಿಂಗ್ಸ ಬ್ಯಾಂಕು:— ಒಳ್ಳೇ ದರದಿಂದ ತೆಗೆಯಲ್ಪಡುವದು. ಬಡ್ಡೀ ದರ ೩ ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೫½ ರೂ

ದೇಣ:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ ೬ ರೂ. ಹತ್ತಿ ಮತ್ತು ಧಾನ್ಯಗಳ ಆಡವಿನ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ಮ ನಿಯಮಿತ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಆಯಾ ಖಾತೆಗೆ ಜಮೆ ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತ್ತು ಯೋಗ್ಯ ಕಮಿಶನ್ ತಕ್ಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ಮತ್ತು ವಿಕ್ರಿ ಮಾಡುವದರಲ್ಲಿಯೂ ಬರುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಚೆಕ್ಕು ಹುಂಡಿಗಳನ್ನು ವಸೂಲಿ ಮಾಡುವದರಲ್ಲಿಯೂ ಬರುವದು.

ಬ್ಯಾಂಕಿನ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲಾ ತರದ ಅಧಿಕಾರವಿರುವದು. ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಜಾಟೆ.
ಏಜಂಟರು.

॥ ಸಿರಿಗನ್ನಡಂ ಗೆಲ್ಗೆ ॥

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡಿ
ಮತ್ತು ———— ಧಾರವಾಡ
ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಲಭ್ಯಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯಿತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸ. ೧,೨. ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಸಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸ್ಥಾಪನೆ	೧- ೦ ೦
೫. ಚರಿತ್ರ ಸಂಗ್ರಹ ಭಾ. ೧.	೧- ೯-೦
೬. ಆಳಸಿಂಗಾಚಾರ್ಯರ ರಾಮಾಯಣ ೯ ಸಂಪುಟಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೯-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
೧೦. ಬ್ಯಾಂಡ ರೆಪ್ಲಿಸ್ನ್ಯೂ ಕೋಡು	೨-೧೧-೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨-೧೪-೦
೧೨. ಸ್ತ್ರೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇಸಾಪನೀತಿ ಕಥೆ ಭಾ. ೧, ೨,	೨- ೪-೦
೧೪. ಕಾರ್ಜನ ಕಂಡಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.
ವ್ಯವಸ್ಥಾಪಕರು

ಧಾರವಾಡದಲ್ಲಿ ಕಾಂಗ್ರೆಸದ ಬೋರ್ಡನ್ನು ಕೈದು ಮಾಡಿದರು.

ಇಲ್ಲಿಯ ಕಾಂಗ್ರೆಸ ಸಭೆಯವರು ಪ್ರತಿ ದಿನ, ಸಭೆ ಸುದ್ದಿ ವ್ಯಾಖ್ಯಾನ ಮೊದಲಾದವುಗಳನ್ನು ಫಳಿಗಳ ಮೇಲೆ ಬರೆದು ಹಚ್ಚುತ್ತ ಇದ್ದಾರೆ. ಮೊನ್ನಿನ ದಿವಸವೂ ಅದೇ ಪ್ರಕಾರ ಬರೆದು ಹಚ್ಚಿದ್ದರು. ಅದು

ಇಂದು ಸಭೆ
ವಿಷಯಃ- ಕೌನ್ಸಿಲ ಬಹಿಷ್ಕಾರ.
ಸ್ಥಳಃ- ಜಜ್ಜಕೋರ್ಟ ಬೈಲು.
ವ್ಯಾಖ್ಯಾನಕಾರಃ- ಶ್ರೀ ಕರಮರಕರ, ಹುಕ್ಕೇರಿಕರ
ವೇಳೆಃ- ೬॥ ಗಂಟೆ

ಎಂದಿತ್ತು. ವ್ಯಾಖ್ಯಾನಕಾರರು ಬಹಾದ್ದೂರರು ತೆಗೆದ ಸೈಕ್ಲೋಸ್ಟೈಲ ಆರ್ಡರನ್ನದಂತೆ ಈ ಬಗೆಯ ಸೂಚನೆಗಳನ್ನು ಅಂಟಿಸಬಾರದಂತೆ! ಆದ್ದರಿಂದ, ಇಲ್ಲಿಯ ಸಬ್ ಇನ್ಸಪೆಕ್ಟರರು ನಾಲ್ಕೈದು ಜನ ಪೋಲೀಸರೊಡನೆ ಒಂದು ಬೋರ್ಡ ಕಾಯಿದೆ ಮುರಿಯಿತೆಂದು ಅದನ್ನು ಜಪ್ತು ಮಾಡಿ ಹೊರಿಸಿಕೊಂಡು ಹೋದರು. ಕಾಂಗ್ರೆಸ ಕಮಿಟಿಯ ಮುಂದಿದ್ದ ಬೋರ್ಡು ಪೋಲೀಸ ಸ್ಟೇಶನಕ್ಕೆ ಹೋಗುವ [illegible] ನಡೆಯುತಿದಾಗ್ಗೆ, ಇನ್ನೊಂದು ಬೋರ್ಡು ಗಾಂಧೀ ಚೌಕಿನಲ್ಲಿ ಹಚ್ಚಿ ನೆ ಮಾಡಿ ಈ ಕಾಯಿದೆ ಮುರಿಯಿತು. ಹೀಗೂ ಬೋರ್ಡು ಪೋಲೀಸಸ್ವಾಧೀನವಾದ ಕೂಡಲೆ ಇನ್ನೊಂದು ಬೋರ್ಡು ಅಲ್ಲೇ ಅದರ ಸ್ಥಾನವನ್ನು ಸ್ವೀಕರಿಸಿತು. ಪೋಲೀಸರು ಇದನ್ನು ಜಪ್ತು ಮಾಡಲಿಲ್ಲ. ಮೂರು ಬೋರ್ಡು ಪೋಲಿಸರ ಸ್ವಾಧೀನವಾದಾಗ್ಗೆ ಬೀದಿಯಲ್ಲಿ ನೂರಾರು ಜನರಿದ್ದರು. ಅವರೆಲ್ಲ ಇದರ ಜಯಜಯಕಾರ ಮಾಡಿದರು.

ಮಿತ್ರಸಮಾಜಕ್ಕೆ ಎಚ್ಚರಿಕೆ.

ಹದಿನೈದು ದಿನಗಳಲ್ಲಿ ರಾಷ್ಟ್ರಕಾರ್ಯ ಮಾಡಿ, ಇಲ್ಲದಿದ್ದರೆ ಜೀವಕ್ಕೆ ಎರವಾಗುವದು

ಕಾಂಗ್ರೆಸ ಕಮೀಟಿಯ ಮುಂದಿನ ಬೋರ್ಡು ಪೋಲೀಸಸ್ವಾಧೀನವಾದ ನಂತರ, ಜಜ್ಜಕೋರ್ಟ ಮೈದಾನದಲ್ಲಿ ಸಭೆಯಾಯಿತು. ಶ್ರೀ ಹುಕ್ಕೇರಿಯವರು ಬೋರ್ಡು ಜಪ್ತು ಮಾಡಿದ್ದನ್ನು ಹೇಳಿ, ಇನ್ನು ಮುಂದೆ ಸಾವಿರಾರು ಬೋರ್ಡುಗಳು ಈ ಕೆಲಸ ಮಾಡುವವೆಂದು ಹೇಳಿದರು. ಆ ಮೇಲೆ ಶ್ರೀ ಕರಮರಕರರು ಮಿತ್ರಸಮಾಜದ ಬಾಗಿಲಕ್ಕೆ ಹಚ್ಚಿದ್ದೊಂದು ಚೀಟಿಯ "ನಕಲ" ನ್ನು ಓದಿದರು. ಅದರಲ್ಲಿ ಅವಾಚ್ಯ ಶಬ್ದಗಳಿದ್ದು ಮಿತ್ರಸಮಾಜದವರು ಹದಿನೈದು ದಿನಗಳಲ್ಲಿ ರಾಷ್ಟ್ರಕಾರ್ಯಕ್ಕೆ ಪ್ರವೃತ್ತರಾಗದಿದ್ದರೆ, ಅವರಿಗೆ ಜೀವದ ಭಯ ಹಾಕಿದ್ದಾರೆ. ಕೆಳಗೆ "ಒಬ್ಬ ಕ್ರಾಂತಿಕಾರಕ" ಎಂಬ ಅಂಕಿತವಿದೆ. ಈ ಬಗೆಯ ಕೃತ್ಯವನ್ನು ಅವರು ನಿಷೇಧಿಸಿ ಕೌನ್ಸಿಲ ಬಹಿಷ್ಕಾರ ಹಾಕಲು ತಾವು ಮಾಡುವ, ಮಾಡಬೇಕೆನ್ನುವ ವಿಧಾನಗಳನ್ನು ಹೇಳಿದರು. ಆ ವೇಳೆ ಸಭೆಯು ಮುಕ್ತಾಯವಾಯಿತು.

ಧಾರವಾಡದ

ಊರ ತುಂಬ ಆಕ್ಷೇಪದ ಪತ್ರಪತ್ರಿಕೆಗಳು.

ಧಾರವಾಡವು ಶಾಂತವಾಗಿತ್ತು. ಈಗಾದರೂ ಶಾಂತವಿದೆ. ಮುಂದೆಯಾದರೂ ಶಾಂತವಾಗಿಯೇ ಉಳಿಯಬೇಕೆಂದು ನಮ್ಮ ಅಪೇಕ್ಷೆ. ಅದು ಸುಸಾಂಗವಾಗಿ ಅಧಿಕಾರಸ್ಥರು ಮಾಡಿದ ಕಾಯಿದೆಗಳನ್ನು ಎಬ್ಬಿಸಬಾರದೆಂದು ನಮ್ಮ [illegible] ಕೌನ್ಸಿಲ ಬಹಿಷ್ಕಾರದ ದೆಸೆಯಿಂದ ಕೂಡುವ ಸಭೆಯ ಪ್ರಕಟನೆಯನ್ನು ಬರೆದ ಬೋರ್ಡನ್ನು ಪೋಲೀಸರು ಜಪ್ತು ಮಾಡಿಕೊಂಡು ಹೋದ ಬಳಿಕ, ಅಥವಾ ಅವರು ಹೋಗ ಹೋಗುತ್ತಿರುವಾಗಲೇ ಅದೇ ಸ್ಥಳದಲ್ಲಿ ಮತ್ತೊಂದು ಬೋರ್ಡು ಹತ್ತಿತು. ಅದರ ಮರುದಿವಸವಂತೂ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿದ ಅರ್ಧ ತಾವಿನ ಕಾಗದದ ಜಾಹೀರಾತುಗಳು ಊರ ತುಂಬ ಹತ್ತಿದವು. ಎತ್ತ ನೋಡಿದತ್ತ ಇವೇ ಆಗಿವೆ. ನೋಟೀಸುಗಳಿಗೆ [illegible]. ಪೋಲೀಸರು ಎಷ್ಟೆಂದು ಹರಿದು ಹಾಕುವರು. ಪಂಚನಾಮೆ ಮಾಡಬೇಕೆಂದರೆ ಗೋಡೆಗೆ ಹಚ್ಚಿದ ಕಾಗದಗಳನ್ನು ಕಿತ್ತುವದು ಹೇಗೆ? ಇದರಲ್ಲಿ [illegible] ಅವು ಸೋಗೇ ಪತ್ತೆಹೋದವು [illegible] ಅದರಾತ್ರಿಯಲ್ಲಿ ಹತ್ತಿದವು [illegible] ಅಷ್ಟೇ! ದೊಡ್ಡ ಬೀದಿಗೆ ಮನೆಯಿಂದ ಮನೆಯ [illegible] ಹುದು." ಎಲೆಕ್ಟ್ರಿಕ ಕಂಪನಿಯ ತಂತಿಯ ಕಂಬಗಳಿಗೂ ಹತ್ತಿರುವವು !! ಪಾಪ ಕಂಪನಿಯು ಏನು ಮಾಡೀತು? ಇಷ್ಟೇ ಅಲ್ಲದೆ ಸ್ವಯಂಸೇವಕರು ಹೆಗಲಿಗೆ ಬೋರ್ಡು ಹಾಕಿಕೊಂಡು ಹಾದೀ ಹೋಗುವವರು ನೋಡಲೆಂದು ಊರ ತುಂಬ ತಿರುಗಾಡುವರು. ಹೀಗಾಗಿ ಜಾನಿ ತೋಡಿ, ಬೇತಾಳನನ್ನು ಹೊರಗೆ ತೆಗೆದಂತಾಗಿರುತ್ತದೆ.

ಬ್ಯಾರಿಸ್ಟರ ಜಯಕರರು ಸಿಮ್ಲಾಕ್ಕೆ ಮುಟ್ಟಿದರು. ಲಾರ್ಡ ಆಯರ್ವಿನರಿಗೂ ಇವರಿಗೂ ಸಂಭಾಷಣೆ ನಡೆದಿದೆ. ಸರ ಸಪ್ರುಸಾಹೇಬರೂ ಪೈದರಾಬಾದಿನಿಂದ ಸಿಮ್ಲಾಕ್ಕೆ ಪ್ರಯಾಣ ಬೆಳಿಸಿದರು. ಈಗ ನಡೆದ ಪ್ರಸ್ತಾಪವನ್ನು [illegible] ಗುಪ್ತವಾಗಿಟ್ಟಿದ್ದಾರೆ.

ದಾವಣಗೇರಿಯಲ್ಲಿ ಶ್ರಾವಣಮಾಸದ ಬೇರೆ ಧಾರ್ಮಿಕ ಪುರಾಣಗಳ ಕೂಡ ಮಹಾತ್ಮರ ಪುರಾಣವನ್ನೂ ಹಚ್ಚಿದ್ದಾರೆ. ಜನರು [illegible] ತಕ್ಕೊಂಡು ಪುರಾಣ ಕೇಳಲಿಕ್ಕೆ ತಂಡತಂಡವಾಗಿ ಬರುವರು.

ಬ್ಯಾರಿಸ್ಟರ ಜಯಕರರು ಸಿಮ್ಲಾಕ್ಕೆ ಪ್ರಯಾಣ ಬೆಳಿಸಿದರು. ಹೋದ ಕೂಡಲೆ ಲಾರ್ಡ ಆಯರ್ವಿನರೊಡನೆ ಕೂಡ ಒಡಂಬಡಿಕೆಯನ್ನು ಕುರಿತು ಪ್ರಸ್ತಾಪ ನಡಿಸುವರು.

ಮೀರತ ಪ್ರಕರಣದಲ್ಲಿ ಸಾಕ್ಷೀ ಹೇಳುವದಕ್ಕಾಗಿ ತಾತ್ಪೂರ್ತಿಕವಾಗಿ ತುರಂಗದ ಹೊರಗೆ ಬಂದಿದ್ದ ಶ್ರೀ ಘಾಟೇಕರರು ಸಾಕ್ಷ್ಯವು ಮುಗಿದದ್ದರಿಂದ ತಿರಿಗಿ ತುರಂಗಕ್ಕೆ ಹೋದರು.

THE ANKALGI BANK LTD

Head Office
Kamanlatta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT.

Dharwar 3-1-1927
K. B. ANKALGI
Managing Director

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ
ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ, ಕರ್ನಾಟಕದಲ್ಲಿ [illegible] ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಳ. [illegible] ಎಲ್ಲ ಪ್ರಕಾರದ ವ್ಯವಹಾರ [illegible]

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮುಧೋಳರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಔದ್ಯೋಗಿಕ ಶಿಕ್ಷಣ
ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ
ಧಾರವಾಡ ಮಾರ್ಕೇಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಫೀ ೫೫ ಐವತ್ತೈದು ರೂಪಾಯಿ ಮತ್ತು ಟೇಲರಿಂಗ ಫೀ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ಪರಿಶ್ರಮದ ಪ್ರಕಾರ ತಿಂಗಳಾ ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ವೇಳದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುದಗೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ.

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ
ಅಮೃತಸಿಂದು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ಶೀಘ್ರ ಗುಣಕೊಡುವ ಔಷಧ ಮಾಡಲಾಗಿದೆ. ಇದರ ಉಪಯೋಗದಿಂದ ತಪ್ಪಿಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು, ಪೌರುಷಹೀನ ದೇಹ, ಅಸ್ಥಿರ ಸ್ವಭಾವ, ನಿಸ್ತೇಜತನವನ್ನೂ ಜೇಡಿತನವನ್ನೂ ಅಂಜುಬುರಕತನ, ಅಕಾಲಿನ ವೃದ್ಧಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕೈಕಾಲುಗಳ ಉರಿಯೋಣ, ಉರಿಮೂತ್ರ, ಇಂದ್ರಿಯದ [illegible] ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, ಬೆನ್ನು ನೋವು [illegible], ಟೊಂಕಶೂಲಿ, ಎಲ್ಲ ತರದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾ ವೀರ್ಯ ಮೊದಲಾದ ಏಳು ವೀರ್ಯಗಳು ವೃದ್ಧಿಯಾಗಿ ಇಂದ್ರಿಯದ ಶಕ್ತಿಯು ನವವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟು [illegible], ಕೆಂಪು, ಹಾಗು ಬಿಳಿಸ್ರಾವ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧ ತೊಲೆ ತೊಗೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ತೊಗೋಬೇಕು. ಹತ್ತುದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೊ
ನಿಪ್ಪಾಣಿ.

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ವ ಬಿಚ್ಚಿ ಜೋಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯಿವರಿಗೆ [illegible] ಜನರು ಈ ವರೆಗೆ ಪುಣೆ ಬೆಂಗಳೂರಿಗೆ ಹೋಗಿ, ಒಂದು ನೂರು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ಪೆಟ್ಟದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯಿವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆರೆದಿದ್ದೇವೆ. [illegible] ದ್ಯೋಗಿಗಳಾಗಿ ನಾಲ್ಕು ದಿನ [illegible] ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ [illegible] ಅರ್ಜಿ ಮಾಡಿ [illegible] ಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ [illegible] ಪತ್ರದ್ವಾರ.

ಪ್ರೊ. ಪ್ರಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಶೀರೆ ಪತ್ತಲ॥ [illegible]

ಶ್ರೀದತ್ತ ವ್ಹೀವಿಂಗ್ ಮಿಲ್ಸ್
ಹುಬ್ಬಳ್ಳಿ.
ಕರ್ನಾಟಕದಲ್ಲಿ ಇದೇ ಮೊದಲನೆಯ
ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಹವಳಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ ಮಾಲು ತಿರುಗಿ ತಕ್ಕೊಳ್ಳುವೆವು.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಪೂಜೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು	ರೂಕ್ಕೆ ೨-೦-೦
ಕೃಷ್ಣಪಾರಿಜಾತ ಅತ್ತರು ತೊಲೆ	ರೂಕ್ಕೆ ೪-೦-೦

೧೯-೧೧-೨೯
ಮೈಸೂರಸ್ಟೋರ,
ಬೆಳಗಾವಿಯವರಗಲ್ಲಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ. ಮುಂದೆ ಪ್ರತಿಯೊಂದು ಪಳಿಗೆ ೬ [illegible] ಇಂಗ್ಲಿಷ ಪ್ರತಿಯೊಂದು ಪಳಿಗೆ [illegible] ಜನನ ಮರಣ, ವ್ಯಾಪಾರ, [illegible] ಲೋಕಲಬೋರ್ಡ [illegible] ಸಾರ್ವಜನಿಕ ಸಂಸ್ಥೆಗಳಿಗೆ ಸರಳಿಗೆ [illegible] ದ ಅವಾರ್ಡಿ ಕನ್ನಡದಲ್ಲಿ ಹಾಕಲಾಗುವದು. [illegible] ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ವಿವಿಧ ವಿಷಯಗಳು

ರೇಲ್ವೆಯಲ್ಲಿ ಪ್ರವಾಸ ಮಾಡುವಾಗ ಯುರೋಪಿಯನ್ನ ಮತ್ತು ಆಂಗ್ಲೋ ಇಂಡಿಯನ್ನ ಪ್ರಯಾಣಿಕರ ದೆಸೆಯಿಂದ ಮೂರನೆಯ ವರ್ಗದ ಡಬ್ಬಿಗಳನ್ನು ಸ್ವತಂತ್ರವಾಗಿ ಕಾದಿಡುತ್ತಿದ್ದರು. ಈ ಬಗ್ಗೆ ಮದ್ರಾಸ ರೇಲ್ವೆಯಲ್ಲಿ ಸತ್ಯಾಗ್ರಹವಾಗಿ ಅನೇಕರು ದಂಡ ಶಿಕ್ಷೆ ಭೋಗಿಸಿದ್ದಾರೆ. ವಿದೇಶೀ ಮತ್ತು ಪರದೇಶಿ ಎಂಬ ಭೇದ ತಪ್ಪಿಸಬೇಕೆಂದು ಸರಕಾರದವರು ಈಗೀಗ ವ್ಯವಸ್ಥೆ ಮಾಡಿದ್ದಾರೆ. ೧ನೆಯ ಸಪ್ಟಂಬರದಿಂದ ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆಯಲ್ಲಿ ಈ ತಾರತಮ್ಯ ನಿಲ್ಲಿಸಿ, ಥರ್ಡ ಕ್ಲಾಸ ಸಾಹೇಬರು ಏತದ್ದೇಶಿಯರ ಕೂಡ ಪ್ರಯಾಣ ಬೆಳೆಯಿಸಬೇಕೆಂದು ಪ್ರಸಿದ್ಧ ಮಾಡಿದ್ದಾರೆ.

ಮುಂಬಯಿಯಲ್ಲಿ ಯುರೋಪಿಯನ್ನ ಮ್ಯಾನೇಜರರಿದ್ದ ಗಿರಣಿಗಳಿಗೆ ಬಹಿಷ್ಕಾರ ಹಾಕಿದ್ದರಷ್ಟೇ; ಈ ಬಹಿಷ್ಕಾರದಿಂದ ೨೧ ಸಾವಿರ ಕೂಲಿಕಾರರಿಗೆ ಕೆಲಸವಿಲ್ಲದಾಗುವದು. ಮ್ಯಾನೇಜರರಾದಂಥ ೨೩ ಜನರ ಸಲುವಾಗಿ ೨೧೦೦೦ ಜನರು ನಿರುದ್ಯೋಗಿಯಾಗುವದೆಂತು? ಸರಕಾರದವರು ತಾವಾಗಲಿ ಬೇರೆ ಯುರೋಪಿಯನ್ನ ಫರ್ಮುಗಳಲ್ಲಾಗಲಿ ಇವರ ವ್ಯವಸ್ಥೆ ಮಾಡಿ, ೨೧ ಸಾವಿರ ಜನರ ಹೊಟ್ಟೆಯ ವ್ಯವಸ್ಥೆಯನ್ನೇಕೆ ಮಾಡಬಾರದು? ಕಾಂಗ್ರೆಸದವರ ಹೆಸರಿನಿಂದ ಕಲ್ಲೊಡೆಯುವದಕ್ಕಿಂತ ಈ ವ್ಯವಸ್ಥೆಯು ಉತ್ತಮೋತ್ತಮವಾಗುವದಿಲ್ಲವೇ ?

ತುರಂಗದ ಅನ್ನದಲ್ಲಿ ಹುಳುಗಳು ಮತ್ತು ರಾಯಿಸಳ್ಳಗಳಲ್ಲಿ ಹುಳಹುಪ್ಪಡಿ ಇರುತ್ತದೆಂಬ ಕೂಗು ಸಾರ್ವತ್ರಿಕವಾಗಿದೆ. ಇದನ್ನು ಮ್ಯಾಜಿಸ್ಟ್ರೇಟರಿಗೆ ತೋರಿಸಲು ಬಿಯಾಲಪುರದ ತರುಣ ಸಂಘದ ಅಧ್ಯಕ್ಷರಾದ ಶ್ರೀ. ರಚನಾಲಿಂಗರು ಕೋರ್ಟಿಗೆ ತಂದು ಮ್ಯಾಜಿಸ್ಟ್ರೇಟರ ಮುಂದಿಟ್ಟರು ಮತ್ತು ಆಗ ಅಲ್ಲಿಗೆ ಬಂದಿದ್ದ ಡಾಕ್ಟರ ರಾಮಚಂದರರಿಗೆ ತಿಂದು ನೋಡಿರೆಂದು ಹೇಳಿದರು. ಮ್ಯಾಜಿಸ್ಟ್ರೇಟರು ಒಂದು ಚೂರು ತಿಂದು, ರುಚಿ ನೋಡಿ ಸ್ವತಃ ಜೇಲಿಗೆ ಬಂದು ವಿಚಾರ ಮಾಡುವೆವೆಂದು ನಂಬಿಗೆಯಿತ್ತರು.

ಬಳ್ಳಾರಿಯಲ್ಲಿ ಶೇಂದಿಯ ಸವಾಲು ನಡೆದಾಗ ವ್ಹಾಲಂಟಿಯರರು ಪಿಕೆಟಿಂಗ ನಡೆಸಿದರು. ಒಳಗಿನ ಜನರಿಗೆ ಬುದ್ಧಿ ಹೇಳಬೇಕೆಂದು ಒಬ್ಬ ಸ್ವಯಂಸೇವಕನು ಸಾಹೇಬನಂತೆ ಉಡತೊಡಿಗೆ ಮಾಡಿಕೊಂಡು, ಒಳಗೆ ಹೋದನು. ಒಳಗೆ ಹೋದವನೇ ಮೇಲಿನ ಬಹುರೂಪದ ಉಡಿಗೆ ತೆಗೆದು, ತನ್ನ ನಿಜಸ್ವರೂಪಧಾರಣ ಮಾಡಿದನು. ಘಟೋತ್ಕಜನ ಮಾಯಾ ಮೋಸವನ್ನು ಕಂಡು ಪೋಲಿಸರು ಈತನನ್ನು ಹಿಡಿದರು. ಈತನನ್ನು ಹಿಡಿದ ಕೂಡಲೆ, ಇನ್ನಿಬ್ಬರು ಒಬ್ಬರ ಮೇಲೊಬ್ಬರಂತೆ ಬೇರೆ ಬೇರೆ ರೂಪಧಾರಣ ಮಾಡಿ, ಒಳಗೆ ಹೋದರು; ಈ ರಾಕ್ಷಸರನ್ನು ನೋಡಿ ಪೋಲೀಸರು ತಮ್ಮ ಕೈ ತೋರಿಸಿದರು. ಪರಿಣಾಮ ಮಾತ್ರ ನೆಟ್ಟಗಾಗಲಿಲ್ಲ. ಇವರನ್ನು ತಡೆಯುವದನ್ನು ಕಂಡು, ಕಲಾಲರು ಸವಾಲು ಮಾಡದೆ, ಹೊರಬಿದ್ದು ಬಂದರು. ಸವಾಲು ಅಲ್ಲೇ ಕೂತಿತು.

ಕಾಬೂಲದಲ್ಲಿ ? ನಾರಾಯಣದಾಸರೆಂಬ ಬ್ರಾಹ್ಮಣರು ಅಬ್ದುಲರಹಿಮಾನರ ಕಾಲದಿಂದ ಮುಲಕೀ ಖಾತೆಯ ದಿವಾನರಾಗಿದ್ದರು. ಇವರು ಪರಲೋಕವಾಸಿಯಾದರು. ಮರಣ ಸಮಯದಲ್ಲಿ ನೂರುವರ್ಷದವರಾಗಿದ್ದರು. ಅಕಬರಬಾದಶಹನ ಕಾಲದಲ್ಲಿ ಇವರ ವಂಶಜರು ಕಾಬೂಲಕ್ಕೆ ಹೋಗಿ, ಅಲ್ಲಿಯೇ ವಾಸವಾಗಿ, ದಿವಾನಗಿರಿಯಂಥ ಅಧಿಕಾರ ನೋಡುತ್ತಾ ಬಂದಿದ್ದಾರೆ.

ಅಂಕೋಲೆಯಲ್ಲಿ ೧೭ ತಾರೀಖಿನ ದಿನ ಮೂರು ಜನರು ಮೆರವಣಿಗೆಯೊಂದಿಗೆ ಊರಿಂದ ಹೊರಟು ಸಲಿಯ ಕೋಟೆಯ ಮೇಲಿದ್ದ ರಿಸರ್ವ ಕಾಡಿನಲ್ಲಿ ಜಂಗಲ್ ಕಾನೂನನ್ನು ಮುರಿದರು. ಅವರನ್ನು ಪೋಲೀಸರು ಕೈದು ಮಾಡಿದರು. ೧೯ನೇ ತಾ॥ ದಿನ ೬೦೦೦ ಕ್ಕಿಂತ ಹೆಚ್ಚು ಜನರು ಅಂಕೋಲೆಯಿಂದ ಹೊರಟು ೩ ಮೈಲು ದೂರದ ಅಗಸಿಯಿಂದ ಸೌದೆಯನ್ನು ತಂದು ಜಂಗಲ ಕಾನೂನನ್ನು ಮುರಿದರು. ಯಾರನ್ನೂ ಸೆರೆ ಹಿಡಿಯಲಿಲ್ಲ.

ಶಿರ್ಸಿ ತಾಲೂಕಿನಲ್ಲಿ ಕೈದು ಮಾಡಲ್ಪಟ್ಟ ಜನರನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಬೇಕೆಂದು ಜನರ ಅಭಿಲಾಷೆ. ಪೋಲಿಸರು ಆಗಗೊಡಲೊಲ್ಲರು. ಆಗ ಜನರು ಅವರನ್ನು ಮುಂದಕ್ಕೆ ಕರೆದೊಯ್ಯಲಾಗದಂತೆ ಅಲ್ಲಿಯೇ ಮಲಗಿ ಬಿಟ್ಟರಂತೆ. ಪೋಲಿಸ ಜಮೇದಾರರಿಗೆ ಸಿಟ್ಟು ಬಂತು. ಬರ್ಚಿಯಿಂದ ತಿವಿಯಲು ಆಜ್ಞೆಯಾಯಿತು. ಕೆಲವರಿಗೆ ಗಾಯಗಳಾದವು. ಮತ್ತೆ ಕೆಲವರಿಗೆ ಬಂದೂಕಿನ ಹಿಂಭಾಗದಿಂದ ತಿವಿದರು. ಅಂತೂ ಜನರೇನೂ ತಮ್ಮ ಕೋರಿಕೆಯನ್ನು ಬಿಡಲಿಲ್ಲ.

ಕ್ರಿಶ್ಚನ್ನರಿಗೆ ಧರ್ಮಕಾರ್ಯಕ್ಕಾಗಿ ಮದ್ಯ ಬೇಕಾಗುತ್ತದೆ. ಬ್ರಾಹ್ಮಣರಿಗೆ ಮಧು ಬೇಕಾಗುವಂತೆ!! ಅದೇ ರೀತಿಯಲ್ಲಿ ಶರೆಯ ಮಾರಾಟ ನಿಂತಿದಷ್ಟೇ; ಒಬ್ಬ ಪಾದ್ರಿಸಾಹೇಬರು ಧರ್ಮದ ಹೆಸರಿನಿಂದ ಮದ್ಯ ಖರಿಸಿ, ಒಂದಕ್ಕೆ ನಾಲ್ಕು ಬೆಲೆ ತಕ್ಕೊಂಡು, ಇದನ್ನು ಮಾರುತ್ತಾ ಬಂದರು. ಕಳವು ಕುಂಬಿಯ ಮೇಲೆ ಕೂತು ಕೂಗುವದಷ್ಟೇ, ಕಡೆಗೆ ಸಾಹೇಬರ ಕಳವು ಹೊರಬಿದ್ದು ಒಂದು ವರ್ಷದತನಕ ಕ್ರಿಸ್ತನ ಧ್ಯಾನ ಮಾಡುವಂತೆ ಮ್ಯಾಜಿಸ್ಟ್ರೇಟರು ಇವರನ್ನು ತುರಂಗಕ್ಕೆ ಕಳಿಸಿದರು.

ಶ್ರೀ ಸುಭಾಷಚಂದ್ರ ಬೋಸರು ಕಲಕತ್ತೆಯ ತುರಂಗದಲ್ಲಿದ್ದಾರೆ. ಆದರೆ ಆ ನಗರದಲ್ಲಿ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಪದದ ಚುನಾವಣೆ ನಡೆಯಿತು. ಶ್ರೀ. ಬೋಸರು, ಸಾಹೇಬಜಾದಾ ಗುಲಾಮ ಹುಸೇನಶಹಾ ಎಂಬವರೂ ಉಮೇದವಾರರಾದರು. ಶ್ರೀ ಬೋಸರಿಗೆ ೪೬ ಮತ್ತು ಪ್ರಿನ್ಸ ಗುಲಾಮ ಹುಸೇನರಿಗೆ ೩೩ ಮತಗಳು ಬಿದ್ದು, ಶ್ರೀ ಬೋಸರು ಅಧ್ಯಕ್ಷರಾದರು. ಇವರಿಗೆ ಇಷ್ಟು ದೊಡ್ಡ ಪದವಿ ದೊರೆತರೂ, ತುರಂಗದಲ್ಲಿಯ ಜೋಳರೊಟ್ಟಿ ಕಟಿಯುವದು ತಪ್ಪುವದಿಲ್ಲವಲ್ಲ !!

ಬಳ್ಳಾರಿಯಲ್ಲಿ ಪಿಕೆಟಿಂಗದ ದೆಸೆಯಿಂದ ಶೇಂದಿಯನ್ನು ಬಂಡಿಯಲ್ಲಿ ಹೇರಿಕೊಂಡು ಹೋಗಿ, ಬೀದಿಬೀದಿಗೆ ಮಾರುವರು. ಊರ ಹೊರಗೆ ಕುಡುಕರ ಮನೆಯ ಮುಂದೆ ಈ ಬಂಡಿಗಳು ಬರಲು, ಸ್ವಯಂಸೇವಕರು ಪಿಕೆಟಿಂಗ ನಡೆಸಿದರು. ಆಗ ಕಲಾಲರು ಸ್ವಯಂಸೇವಕರನ್ನು ಹೊಡೆದು, ತ್ರಾಸ ಕೊಟ್ಟು ಒಬ್ಬಿಬ್ಬರನ್ನು ಮೋರಿಗೊಳಿಕೆಯಲ್ಲಿ ಚಲ್ಲಿದರು.

ಕೌನ್ಸಿಲ ಮತ್ತು ಅಸೆಂಬ್ಲಿಯ ಚುನಾವಣೆಯಲ್ಲಿ ಸ್ವಾಭಿಮಾನವುಳ್ಳ ದೇಶಾಭಿಮಾನಿ ಪ್ರತಿಷ್ಠಿತರು ಹಿಂದುಳಿದು, ಅಳಲರನ್ನು ಅಣಗಿಸುವದಕ್ಕಾಗಿ, ಸಿಪಾಯಿ, ಭಂಗಿ ಒಂದಿ ಹೊಡೆಯುವವ ಇಂಥವರನ್ನೇ ನೇಮಿಸುವರು. ಪೈಗಿನ ವೇಳೆಯಲ್ಲಿ ಧಾರವಾಡದಲ್ಲಿ ಶ್ರೀ ವಿನಾಯಕರಾವ ಜೋಶಿ, ಸ್ವರ್ಗವಾಸಿ ರಾವಸಾಹೇಬ ಬಳ್ಳಾರಿ, ರಾ. ಬ. ಮತ್ತು ಪರಪ್ಪನಂಥವರು ಮ್ಯುನಿಸಿಪಾಲಿಟಿಗೆ ರಾಜೀನಾಮೆ ಕೊಟ್ಟು, ಒಬ್ಬ ಫೋರನನ್ನು ಮೆಂಬರ ಮಾಡಿದ್ದು ಬಹುಜನರ ಸ್ಮರಣದಲ್ಲಿರಬಹುದು. ಅದೇ ಪ್ರಕಾರ ಈಗಿನ ಚುನಾವಣೆಗಳ ಕರ್ಮ ಧರ್ಮವಾಗಿದ್ದು, ಬಳೇಪೂಗಲ್ಲಿ ಒಬ್ಬ ರೇಗಡಿಗಾರನು ಅಸೆಂಬ್ಲಿಯ ಮೆಂಬರನಾದನು !!

ಮಧ್ಯಪ್ರಾಂತದ ಸರಕಾರದವರು ಜಬಲಪೂರ, ಕಟ್ನಿ ಮುಂತಾದ ಪಟ್ಟಣಗಳ ಮೇಲೆ ಕಾಯದೆಭಂಗದ ದೆಸೆಯಿಂದ ಹೆಚ್ಚಾ ಪೋಲಿಸರನ್ನು ಹೇರಿ, ಅವರ ಸಂಬಳವನ್ನು ದಂಡರೂಪದಿಂದ ಪ್ರಜರ ಮೇಲೆ ಹೇರಿದ್ದಾರೆ. ಈ ದಂಡವನ್ನು ಕೊಡಬಾರದು, ಕಾಯದೆಭಂಗದ ಕೂಡ ಇದೊಂದು ಕಾಯದೆಭಂಗವೆಂದು ಜನರು ನಿಶ್ಚಯ ಮಾಡಿದ್ದಾರೆ.

ಪುಣೆಯ ಸತ್ಯಾಗ್ರಹ ಶಿಬಿರದಲ್ಲಿರುವ ಕೆಲ ಸ್ವಯಂಸೇವಕರನ್ನು ಹಿಡಿಯಲು ಪೋಲಿಸರು ಹೋದರು. ಆಗ ಶ್ರೀ. ಪರಶುರಾಮ ಭಾವು ಕಾಲೇಜಿನ ಒಳಂಗಳಲ್ಲಿದ್ದ ಕೆಲ ವಿದ್ಯಾರ್ಥಿಗಳಿಗೂ ಪ್ರಿನ್ಸಿಪಲರಾದ ಪ್ರೊಫೇಸರ ಸಬನೀಸರಿಗೂ ಪೋಲಿಸರಿಂದ ಪ್ರಸಾದ ದೊರೆಯಿತು. ಇದೊಂದು ಸ್ವಕಾರ್ಯಗುಣದ ಪ್ರಸಾದವೆಂದೇ ತಿಳಿಯಬೇಕು. ಇದು ದೊರೆಯದೆ, ಸ್ವರಾಜ್ಯಫಲ ಹೇಗೆ ದೊರೆಯುವದು?

ಪಂಡಿತ ಮೋತಿಲಾಲರಿಗೆ ವಿಶೇಷ ಜಡ್ಡು.

ಪಂಡಿತ ಮೋತಿಲಾಲರು ಜ್ವರದಿಂದಲೇ ನೈನೀತಾಲಕ್ಕೆ ಹೋದರು. ಪ್ರವಾಸವು ಇವರ ಪ್ರಕೃತಿಯ ಮೇಲೆ ಅನಿಷ್ಟ ಪರಿಣಾಮವನ್ನುಂಟುಮಾಡಿದಂತೆ ತೋರುತ್ತದೆ. ಅಲ್ಲಿಗೆ ಹೋದ ಕೂಡಲೆ, ಉರಿಯು ಹೆಚ್ಚಾಗಿ, ಪ್ರಕೃತಿಯು ಚಿಂತಾಜನಕವಾಗಿರುತ್ತದೆ. ಬೇನೆಯ ನಿದಾನ ಮಾಡಲೋಸುಗ ಡಾಕ್ಟರ ಅನ್ಸಾರಿ, ಡಾಕ್ಟರ ರಾಯ ಮತ್ತು ಸರ ನೀಲರತ್ನ ಸರಕಾರ ಇವರನ್ನು ತಂತಿಯಿಂದ ಕರಿಸಿಕೊಂಡಿದ್ದಾರೆ.

ಈ ವಾರದಲ್ಲಿ ಧಾರವಾಡದಲ್ಲಿರುವ ಮಾರವಾಡಿಗಳು ಎರಡು ದಿವಸ ತಮ್ಮ ದೇವರ ಉತ್ಸವ ಮಾಡಿ ಊರೊಳಗೆ ಮೆರವಣಿಗೆ ಹೊರಡಿಸಿದ್ದರು. ಸ್ತ್ರೀಪುರುಷರೂ ಇದ್ದರು. ಇವರ ಮೈತುಂಬ ಇದ್ದ ಅರಿವೆಗಳೆಲ್ಲ ಪರದೇಶಿಯ ಅತ್ಯಂತ ಸೂಕ್ಷ್ಮ ಮತ್ತು ಪಾರದರ್ಶಕವಾದಂಥ ಬಟ್ಟೆಗಳಿದ್ದವು. ಇವರು ಈ ರೀತಿಯಿಂದಾದರೂ ತಮ್ಮ ಅಂಗಡಿಗಳಲ್ಲಿದ್ದ ವಿದೇಶಿ ವಸ್ತ್ರಗಳನ್ನು ಕಡಿಮೆ ಮಾಡಿದ್ದೊಂದು ಸಮಾಧಾನವೇ ಎಂದು ಕಾಂಗ್ರೆಸದವರು ತಿಳಿಯಬೇಕಲ್ಲವೇ ?

ಶ್ರೀ ಹರಕಾರೆ ಗುರುರಾಯರು ಪೋಲಿಸ ಮತ್ತು ಮ್ಯಾಜಿಸ್ಟ್ರೇಟರ ಮೇಲೆ ಪ್ರೆಸಿಡೆನ್ಸಿ ಕೋರ್ಟ ಮತ್ತು ಹಾಯಕೋರ್ಟಿನಲ್ಲಿ ಫಿರ್ಯಾದಿ ಮಾಡಿದ್ದನ್ನೂ ಇವನ್ನು ತೆಗೆದು ಹಾಕಿದ್ದನ್ನೂ ಈ ಮೊದಲು ಬರೆದಿದ್ದೆವಷ್ಟೇ, ನನ್ನ ಅರ್ಜಿಗಳು ಸುಳ್ಳಿದ್ದರೆ ಸುಳ್ಳು ಫಿರ್ಯಾದಿ ಮಾಡಿದನೆಂದೂ ನನ್ನ ಮೇಲೆ ಕೆಲಸ ನಡೆಯಲೆಂದೂ ಇವರು ಒಂದು ಅರ್ಜಿಯನ್ನು ಬರಕೊಂಡು, ಮಿ. ದಸ್ತೂರಸಾಹೇಬರಿಗೆ ಕೊಟ್ಟರು. ಅವರು ಈ ಅರ್ಜಿಯನ್ನೂ ಕಿತ್ತಿಹಾಕಿದರು. ಆಗ ಇವರು ತಮ್ಮ ವಿಜಯವಾಯಿತೆಂದು ದಸ್ತೂರಸಾಹೇಬರಿಗೆ ಹೇಳಿ, ಕೋರ್ಟಿನಿಂದ ಹೊರಬಿದ್ದರು.

ಮುಂಬಯಿಯಲ್ಲಿ ಒಬ್ಬನು ಕಳವಿನ ದೆಸೆಯಿಂದ ಹಿಂದೆ ಅನೇಕ ಸಾರೆ ಶಿಕ್ಷೆಯಲ್ಲಿಯೇ ಮುಪ್ಪಾಗಿದ್ದಾನೆ. ತುರಂಗದ ಹೊರಗೆ ಬಂದ ಕೂಡಲೆ ಕಳವಿಗೆ ಪ್ರಾರಂಭಿಸುವನು. ಹೋದ ವಾರದಲ್ಲಿ ತುರಂಗದಿಂದ ಬಿಡುಗಡೆಯಾದ ಕೂಡಲೆ ಕಳವು ಮಾಡಿದನು. ಪೋಲಿಸರು ಈತನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಆಗ ಈತನು ಹಗಲೆಲ್ಲ ಕಳವು ಮಾಡಲಾರೆನು. ಒಮ್ಮೆ ಸಾಯುವತನಕ ಶಿಕ್ಷೆ ಕೊಟ್ಟು ಬಿಡೆಂದು ಮ್ಯಾಜಿಸ್ಟ್ರೇಟರಿಗೆ ಬೇಡಿಕೊಂಡನು. ಆದರೂ ಆರೇ ತಿಂಗಳು ಶಿಕ್ಷೆ ಹೊಂದಿದನು.

ಪುಣೆಯಲ್ಲಿ ದಂಡಿನ ಹದ್ದಿನಲ್ಲಿಯೂ ಒಂದು ಕಾಂಗ್ರೆಸ ಕಮಿಟಿಯುಂಟು. ಕಾಂಗ್ರೆಸ ಕಮೀಟಿಗಳು ಬೇಕಾಯದೆಯವೆಂದು ಸರಕಾರದವರು ಜಾಹೀರನಾಮೆಯನ್ನು ಹಚ್ಚಿದ ಕೂಡಲೆ, ಪೋಲಿಸರು ಇದರ ಕಚೇರಿಗೆ ಹೋಗಿ, ಅನೇಕ ಕಾಗದ ಪತ್ರಗಳನ್ನು ಜಪ್ತ ಮಾಡಿದ್ದಲ್ಲದೆ, ಅವರ ಅಧ್ಯಕ್ಷರಾದ ಶ್ರೀ ನಟವರಲಾಲ ಶಹಾ ಇವರನ್ನು ಹಿಡಕೊಂಡು ಹೋದರು. ಕೂಡಲೆ ಕಾಂಗ್ರೆಸ ಕಮೀಟಿ ಕೂಡಿ, ಶ್ರೀ ರಮಣಲಾಲ ಶಹಾ ಇವರನ್ನು ಅಧ್ಯಕ್ಷರಾಗಿ ನೇಮಿಸಿದ್ದಾರೆ.

ಮುರಾದಾಬಾದ ಜಿಲ್ಹೆಗೆ ಸೇರಿದ, ಅಮರೋಹಾದ ಮ್ಯುನಿಸಿಪಾಲಿಟಿಯ ಟಾವ್ನಹಾಲಿನ ಮೇಲೆ ಕಾಂಗ್ರೆಸ ಕಮೀಟಿಯವರು ರಾಷ್ಟ್ರೀಯ ನಿಶಾನೆ ಹಚ್ಚಿದರು. ಮ್ಯುನಿಸಿಪಾಲಿಟಿಯವರು ಇದನ್ನು ಕಿತ್ತಿಸಬೇಕೆಂದರು. ಆಗ ಊರ ಜನರು ಅಗ್ಗ ಬಂದರು. ಆಗಿನ ಗೊಂದಲದಲ್ಲಿ ಆ ಮಂದಿರದ ಕನ್ನಡಿಗಳು ಒಡೆದು ಪುಡಿಯಾದವು. ಬಾಗಿಲಿಗೆ ಬೆಂಕಿ ಹಚ್ಚಿ [illegible].

ಬೆಳಗಾವಿಯಲ್ಲಿ ಗಡಂಗಗಳ ಮುಂದಿನ ಪಿಕೆಟಿಂಗದ ದೆಸೆಯಿಂದ ದಿನಾಲು ಸ್ವಯಂಸೇವಕರನ್ನು ಹಿಡಿಯುವದು ನಡೆದಿದೆ. ಶಿಕ್ಷೆ ಹಾಕಲಿಕ್ಕಂತೂ ಮ್ಯಾಜಿಸ್ಟ್ರೇಟರು ಸಿದ್ಧರಾಗಿಯೇ ಕೂತಿದ್ದಾರೆ.

ವಿವಿಧ ವರ್ತಮಾನಗಳು.

ದಬ್ಬಾಳಿಕೆಯ ಕಾಯದೆಯ ಪ್ರಕಾರ ಜಾಮೀನು ಕೊಡದೆ, ಮುದ್ರಾಲಯ ನಡಿಸಿದರೆಂದು ಸರಕಾರದವರು ಮಹಾತ್ಮರ 'ನವಜೀವನ' ಮುದ್ರಾಲಯವನ್ನು ಜಪ್ತ ಮಾಡಿದರು. ಇದನ್ನು ಯಾರಾದರೂ ಸವಾಲಿನಲ್ಲಿ ಕೊಳ್ಳಬಾರದೆಂದು ಅಹಮದಾಬಾದಿನ ಮುದ್ರಾಲಯದವರು ಠರಾವು ಮಾಡಿದ್ದರಿಂದ, ಮುದ್ರಾಲಯದ ಎಲ್ಲ ಸಾಮಾನುಗಳನ್ನು ಮುಂಬಯಿಗೆ ತಂದು ಸವಾಲಿಗೆ ಹಚ್ಚುವರು.

ಅಮರಾವತಿಯಲ್ಲಿ ಕೌನ್ಸಿಲ ಮೆಂಬರರಾಗಿದ್ದ ಶೇಟ ಪನ್ನಾಲಾಲ ಬನ್ಸಿಲಾಲರಿಗೆ ಬಂದೂಕಿನ ಪರವಾನಗಿ ಇದ್ದರೂ ಅವರ ಎರಡು ಬಂದೂಕಗಳು, ಎರಡು ಕತ್ತಿಗಳನ್ನು ಪೋಲಿಸರು ಜಪ್ತ ಮಾಡಿಕೊಂಡು ಹೋದರು. ಕಾಂಗ್ರೆಸದ ಆಜ್ಞೆಯ ಪ್ರಕಾರ ರಾಜೀನಾಮೆ ಕೊಟ್ಟದ್ದೇ ಕಾರಣವಾಗಿರಬಹುದು.

ಬರುವ ಸೆಪ್ಟಂಬರ ತಿಂಗಳ ೧೯ನೆಯ ತಾರೀಖಿನ ದಿವಸ ಬೆಂಗಳೂರಿನಲ್ಲಿ ಸಂಸ್ಥಾನಗಳ ಪ್ರಜಾ ಪರಿಷತ್ತು ಕೂಡತಕ್ಕದ್ದಿದ್ದು, ಸಾಂಗಲಿಯ ವಕೀಲರಾದ ಶ್ರೀ ಅಭ್ಯಂಕರರು ಅಧ್ಯಕ್ಷಸ್ಥಾನ ಸ್ವೀಕರಿಸುವರು.

ತುರಂಗದಲ್ಲಾಗುವ ಅನ್ಯಾಯ ಮತ್ತು ತೊಂದರೆಗಳ ದೆಸೆಯಿಂದ ಯಾರಾದರೂ ತಕರಾರು ಮಾಡಿದರೆ ಅವರನ್ನು ಒಂದು ಜೇಲಿನಿಂದ ಮತ್ತೊಂದು ಜೇಲಿಗೆ ಕಳಿಸುತ್ತಾರೆಂದು ಶ್ರೀ ದೇವದಾಸ ಗಾಂಧಿಯವರು ಹೇಳುತ್ತಾರೆ. ಈ ಸ್ಥಳಾಂತರವಾಗುವಾಗ ದಾರಿಯಲ್ಲಿ ಕೈದಿಗಳಿಗಾಗುವ ಅಸಹ್ಯ ಕಷ್ಟವನ್ನಿಷ್ಟು ಅವರು ಹೇಳಿದ್ದರೆ ಚಲೋ ಆಗುತ್ತಿತ್ತು.

ರಾವಸಾಹೇಬ ಮಂಟೂರ ಶೆಟ್ಟರಿಗೆ ಫೌಜದಾರಿ ಅಪರಾಧದ ದೆಸೆಯಿಂದ ಸಶ್ರಮ ಶಿಕ್ಷೆಯಾಗಿದ್ದರೂ, ಅವರಿಗೆ ಎ ಕ್ಲಾಸ! ಮತ್ತು ದೇಶಕಾರ್ಯಕ್ಕಾಗಿ ಸ್ವಾರ್ಥತ್ಯಾಗ ಮಾಡಿದ ಶ್ರೀ. ದಿವಾಕರರಿಗೆ ಸಾದಾ ಶಿಕ್ಷೆಯಾಗಿ, ಎ ಕ್ಲಾಸ ದೊರೆತಿದ್ದರೂ, ತುರಂಗದಲ್ಲಿ ಬಿ ಕ್ಲಾಸಕ್ಕೆ ಹಿಂಬಡತಿ!!! ಇದರ ಕಾರಣ ಮತ್ತು ರಹಸ್ಯವನ್ನು ಯಾರಾದರೂ ಹೇಳುವರೇ ಎಂದು ಒಬ್ಬರು ಪ್ರಶ್ನೆ ಮಾಡುತ್ತಾರೆ.

ಕಲಕತ್ತೆಯ ಯುರೋಪಿಯನ್ನರು ಹಿಂದುಸ್ಥಾನಕ್ಕೆ ಯಾವದೊಂದು ರಾಜಕೀಯ ಹಕ್ಕು ಕೊಡಬಾರದು. ಇಷ್ಟೇ ಅಲ್ಲ; ಈಗ ಕೊಟ್ಟ ಹಕ್ಕುಗಳನ್ನು ಸಹ ಕಸಕೊಳ್ಳಬೇಕೆಂದು ತಮ್ಮ ದೇಶಿಯರಿಗೆ ತಿಳಿಸುವಂಥ ಠರಾವು ಮಾಡಿದ್ದಾರೆ. ಇದು ಮೂರ್ಖತನದ ಠರಾವೆಂದು ಮುಂಬಯಿಯ ಟಾಯಿಮ್ಸ ಪತ್ರವು ಅವರಿಗೆ ಸರ್ಟಿಫಿಕೇಟು ಕೊಟ್ಟಿರುತ್ತದೆ.

ಪಂಡಿತ ಮೋತಿಲಾಲರೂ, ಪಂಡಿತ ಜವಾಹಿರಲಾಲರೂ ತಿರುಗಿ ಅಲಹಾಬಾದಿಗೆ ಪಯಣ ಬೆಳೆಯಿಸಿದರು. ಇವರ ಈ ಪ್ರವಾಸದ ಒಟ್ಟು ಖರ್ಚು ಹನ್ನೆರಡು ಸಾವಿರ ರೂಪಾಯಿಯಾಗಿದೆ.

ಪಂಡಿತ ಮಾಲವಿಯಾಯವರು ಸೂರತಕ್ಕೆ ಹೋದರು. ಆಗ ಇವರ ಸ್ವಾಗತಕ್ಕಾಗಿ ಲಕ್ಷ ಜನರ ಮೆರವಣಿಗೆ ಹೊರಟಿತ್ತು. ಇವರ ದರ್ಶನ ತಕ್ಕೊಳ್ಳಲು ಬಹಳ ದೂರದೂರಿನ ಜನರು ಬಂದಿದ್ದರು.

ಧಾರವಾಡ —

೧೫ ದಿವಸದಾಯಿತು. ಮಳೆಯಿಲ್ಲ. ಮಳೆಯ ಅವಶ್ಯಕತೆಯುಂಟು.

ಇಲ್ಲಿಯ ಸರಕಾರೀ ವಕೀಲರಾದ ಶ್ರೀ. ಸಾಮುಕಾರ ವಕೀಲರ ಮನೆಯಲ್ಲಿ ಕಳವಾಗಿ ೧೬೦೦ರ ರೂಪಾಯಿ ಬೆಲೆಯ ಒಡವೆಗಳು ಹೋಗಿವೆ. ಕಳ್ಳರು ಹಿತ್ತಲ ಬಾಗಿಲದಿಂದ ಬಂದು, ಇವರ ಹೆಂಡತಿ ಮತ್ತು ಮಗಳ ಮೈಮೇಲಿನ ಒಡವೆಗಳನ್ನು ಬಿಚ್ಚಿಕೊಂಡು ಪಲಾಯನ ಹೇಳಿಸಿದ್ದಾರೆ

ಮೌಲಾನಾ ಅಬ್ದುಲ ಕಲಮ ಆಜಾದರನ್ನು ಹಿಡಿದ ಬಗ್ಗೆ ನಿನ್ನೆ ದಿವಸ ಈ ಊರಲ್ಲಿ ಸಲ ದುಟ್ಟಿಗೆ ಹರತಾಳವಾಯಿತು. ಆದಿತ್ಯವಾರದ ತಂಡುಲದ ಸಂತೆಯಿದ್ದದರಿಂದ ಸಂಪೂರ್ಣ ಹರತಾಳಕ್ಕೆ ಆತಂಕ ಬಂತು

ಹುಬ್ಬಳ್ಳಿ ತಾಲೂಕ ಕೋಳವಾಡದಲ್ಲಿಯ, ಶೇಂದಿಯ ಗಡಂಗ ಬಂದಾಯಿತು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಕನ್ನಡಿಗರಲ್ಲಿ ಬಿನ್ನಹ.

ಕನ್ನಡಿಗರ ಕೂಟದ ಜ್ಯೋತಿಷ್ಯ ಶಾಖೆಯು ತನ್ನ ಮೊದಲನೆಯ ಹುಟ್ಟು ಹಬ್ಬವು ಒದುವದರೊಳಗೆ ಜ್ಯೋತಿಃ ಶಾಸ್ತ್ರಕ್ಕೆ ಒದಗಿದ ಕ್ಲಿಷ್ಟಗಳಲ್ಲಿ ಒಂದಾದ ಸಾಯನ ನಿರಯಣವಾದವನ್ನು ಸಂಪೂರ್ಣವಾಗಿ ಅರಿತುಕೊಂಡು ನಮ್ಮ ಕರ್ನಾಟಕದಲ್ಲಿ ಫಲಜ್ಯೋತಿಷ್ಯಕ್ಕೆ ನಿರಯಣ ಪದ್ಧತಿಯೇ ಸತ್ಯವೆಂದೂ ಶ್ರೇಯವೆಂದೂ ಸಾರಿ ಹೇಳಿತು.

ಈ ಎರಡನೆಯ ವರುಷದಲ್ಲಿ ಇನ್ನೊಂದು ಕಾರ್ಯವನ್ನು ಮಾಡಲೆಣಿಸಿದೆ. ಈಗ ಭಾರತೀಯ ಜ್ಯೋತಿಷಿಗಳಲ್ಲಿ ರೈವತ, ಚೈತ್ರ ಎಂಬ ಎಂಬ ಎರಡು ಪಂಗಡಗಳಾಗಿ ದಿನ ದಿನಕ್ಕೂ ಅವರೀವರಲ್ಲಿ ವೈಮನಸ್ಯವು ಹೆಚ್ಚುತ್ತಿರುವದು. ಇವರೀವರಲ್ಲಿ ಐಕ್ಯವುಂಟಾಗುವಂತೆ ಮಾಡುವದೇ ಈ ಕಾರ್ಯ. ನಡೆಯುವ ಈ ಆಗಸ್ಟ ತಿಂಗಳ ೨೭ನೇ ತಾರೀಖಿನಿಂದ ಕೊನೆಯ ೩೧ ನೇ ತಾರೀಖಿನ ವರೆಗೆ ಹುಟ್ಟಿದ ಶಿಶುಗಳ ಜಾತಕಗಳು ದೊರೆತರೆ ಈ ಕಾರ್ಯವು ಕೈಗೂಡಬಹುದು. ಆದ್ದರಿಂದ ಈ ಅವಧಿಯಲ್ಲಿ ತಮಗಾಗಲಿ ತಮ್ಮ ಗುರುತಿನವರಿಗಾಗಲಿ ಮಕ್ಕಳು ಜನಿಸಿದರೆ ಆ ಸಂಗತಿಯನ್ನು ಶಿಶುವು ಹುಟ್ಟಿದ ವೇಳೆಯೊಡನೆ ನಮಗೆ ದಯವಿಟ್ಟು ತಿಳಿಸಬೇಕೆಂದು ವಿನಯದಿಂದ ಪ್ರಾರ್ಥಿಸುವೆವು.

ಶ್ರೀಮಚ್ಛಕನೃಪವಿಕ್ರಮ   ಕಾರ್ಯದರ್ಶಿ
ವರ್ಷ ೧೮೫೦ ನಯ   ಕನ್ನಡಿಗರ ಕೂಟದ
ಶ್ರಾವಣ ಕೃಷ್ಣ ೧೩   ಜ್ಯೋತಿಷ್ಯ ಶಾಖೆ
ಧಾರವಾಡ.

ನೋಟೀಸು

ರಾ|| ರಾ|| ದೇವಕ್ಕಿ ಕೋಂ ಹನಮಪ್ಪ ದಾಸರ ಕಲ್ಲಿಲು ಸಾ|| ಕೊಪ್ಪ ತಾಲೂಕ ಬಾದಾಮಿ ಇವರಿಗೆ-

ಕೆಳಗೆ ಸಹಿ ಮಾಡಿದವನ ಕಡೆಯಿಂದ ತಿಳಿಸುವದೇನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ೩ ವರ್ಷದ ಕೆಳಗೆ ನಿನ್ನ ಮೈಮೇಲೆ ಇಟ್ಟ ಒಂದು ಜೋಡು ಬಂದಿ ತೊಲಿ ೨೭ ಬೆಳ್ಳಿಯವು ಒಂದು ಗುಂಡಿನ ಟೀಕಿ ೩|| ತೊಲಿ ಬಂಗಾರದವು ಒಂದು ಬೆಳ್ಳಿಯ ನಡಪಟ್ಟಿ ೧೬ ತೊಲಿ ಈ ಜಿನಸು ಸಹ ತವರ ಮನೆಯವರು ನಿನ್ನನ್ನು ಕರಕೊಂಡು ಹೋಗಿದ್ದು ತವರಮನಿಯಲ್ಲಿರುತ್ತಿದ್ದಾಗ್ಗೆ ಪುನ್ಹಸಾರೆ ನಾನು ವ ಸ್ನೇಹಿತರೂ ಕರೆಯಲಿಕ್ಕೆ ಹೋದರೂ ತವರ ಮನೆಯವರ ಫುಲತಾಪೆಯಿಂದ ನನ್ನ ಕೂಡ ಬಾಳ್ವೆ ಮಾಡಲಿಕ್ಕೆ ಇನ್ಕಾರ ಮಾಡಿ ನೀನು ಈ ವರೆಗೂ ಒಂದು ಬಾಳ್ವೆ ಮಾಡಿದವಳಾಗಲಿಲ್ಲ ಈ ಬಗ್ಗೆ ನಾನು ನಿನಗೆ ತಾರೀಖು ೨೬-೬-೧೯೨೮ನೇ ಇಸ್ವಿಗೆ ನೋಟೀಸು ಕೊಟ್ಟದ್ದು ಇನ್ಕಾರ ಮಾಡಿ ನೋಟೀಸು ತಗೊಳ್ಳಲಿಲ್ಲ ಪುನಹಾ ತಿರಾಯತರನ್ನು ಕರಕೊಂಡು ಹೋಗಿ ಕೇಳಿದರೆ ಲಗ್ನದ ಖರ್ಚು ಸದರ ದಾಗೀನೇ ಸೋಡಚೀಟಿ ಕೊಡಬೇಕೆಂತಾ ಗೊತ್ತಾದ ಪ್ರಕಾರ ಈ ವರೆಗೂ ಬಂದು ಈ ಕೆಲಸ ಮಾಡಿಕೊಡಲಿಲ್ಲ ಕಾರಣ ನೋಟೀಸು ಕೊಡುವ ಭಾಗ ಬಿದ್ದು ನೋಟೀಸು ಕೊಟ್ಟಿರುತ್ತದೆ ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಗೊತ್ತಾದ ಪ್ರಕಾರ ಲಗ್ನದ ಖರ್ಚು ಸದರ ದಾಗೀನ ಕೊಟ್ಟು ಪಾವತಿ ತಗೋಬೇಕು ಇದಿಲ್ಲದೆ ಸೋಡಚೀಟಿ ಬರಕೊಟ್ಟು ಹೋಗಬೇಕು. ಇಲ್ಲದಿದ್ದರೆ ಇದೇ ಸೋಡಚೀಟಿ ಅಂತಾ ತಿಳಿದು ೨ನೇ ಕಡಿಗೆ ಲಗ್ನ ಮಾಡಿಕೊಳ್ಳುತ್ತೇನೆ ನನ್ನ ಮೇಲೆ ನಿನ್ನ ಲಗ್ನದ ಸಂಬಂಧಿ ಹಕ್ಕು ವಗೈರೆ ಯಾವ ಪ್ರಕಾರದ್ದು ಉಳಿದಿರುವದಿಲ್ಲಾ ದಾಗೀನೆ ವ ಲಗ್ನದ ಖರ್ಚಿನ ಬಗ್ಗೆ ರೀತಿ ಪ್ರಕಾರ ನಿನ್ನ ಮೇಲೆ ಇಲಾಜು ಮಾಡಲಾಗುವದು ಈ ನನ್ನ ಖರ್ಚ ವಗೈರೆ ನಿನ್ನ ತಲೆಯ ಮೇಲೆ ಅದೆ ತಿಳಿಯೋದು ತಾ|| ೨೨-೮-೧೯೨೮ನೇ ಇಸ್ವಿ

ಸಹಿ ಹನಮಪ್ಪ ತಂದಿ ಗೋವಿಂದಪ್ಪ ದಾಸರ

ನೋಟೀಸಿಗೆ ಉತ್ತರ

ಬಸವಂತಪ್ಪಾ ನಿಂಗಪ್ಪಾ ಮೊರಬದ ಸಾ|| ಸವದತ್ತಿ ಇವರಿಗೆ-

ಕೆಳಗೆ ಸಹಿ ಮಾಡುವಳಿಂದ ಉತ್ತರ ಕೊಡುವದೇನಂದರೆ- ನೀನು ಧಾರವಾಡ ವಿಜಯ ಪತ್ರದಲ್ಲಿ ತಾ|| ೨೬-೬-೨೮ ದಿನಸ ಕೊಟ್ಟ ನೋಟೀಸು ಮುಟ್ಟಿತು ಅದರಲ್ಲಿ ಬರೆದ ಮಜಕೂರು ಅಜೀ ಸುಳ್ಳು ಅದೆ ನೀನು ಏನೂ ದಾಗೀನೆ ನನ್ನ ಮೈಮೇಲೆ ಇಟ್ಟಿಲ್ಲಾ ನೀನು ದುರ್ವ್ಯಸನಕ್ಕೆ ಬಿದ್ದು ರಾಂಡಬಾಜ ಮಾಡತಿ ೪ ತಿಂಗಳ ಹಿಂದೆ ಘಟಿಂಗರ ಮಾತು ಕೇಳಿ ನನಗೆ ಶೇಂದೆ ನನ್ನ ತಾಯಿ ಕೊಟ್ಟ ೫ ತೊಲಿ ಭಂಗಾರದ ಒಳಿ ಜೋಡು ಕಸಗೊಂಡು ಉಟ್ಟ ಸೀರಿಲೆ ಹೊರಗೆ ಹಾಕಿದಿ ನನ್ನ ತಾಯಿ ಹತ್ತರ ಇರತೇನೆ ನನ್ನ ಬಳಿಜೋಡು ಕೊಡಬಾರದೆಂಬ ಉದ್ದೇಶದಿಂದ ಮತಲಬಿ ಸುಳ್ಳು ನೋಟೀಸು ಕೊಟ್ಟಿ ನಾನು ನಿನ್ನ ಹತ್ತರ ಇದ್ದು ಬಾಳ್ವೆ ಮಾಡಲಿಕ್ಕೆ ಕಬೂಲ ಇರತೇನೆ ಈ ನೋಟೀಸಿನ ಉತ್ತರ ಮುಟ್ಟಿದ ೭ ದಿವಸದಲ್ಲಿ ಬಂದು ನನ್ನ ಇಟಗೊಂಡು ಬಾಳ್ವೆ ಮಾಡತೇನೆ ಅಂತ ಜಾಮೀನ ಕೊಟ್ಟು ಬಳಿ ಜೋಡು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಹಿಂಗೆ ಮಾಡದೆ ಇದ್ರೆ ನನ್ನ ದಾಗೀನೆ ಬಗ್ಗೆ ವ ನನ್ನ ಪೋಟಗಿ ಬಗ್ಗೆ ನಿನ್ನ ಮೇಲೆ ದಾವೆ ಮಾಡತೇನೆ ನೀನು ನನ್ನ ಮೇಲೆ ಸುಳ್ಳು ದಾವೆ ಮಾಡಿದರೆ ಅದಕ್ಕೆ ನಾನು ಪಾತ್ರಳಲ್ಲಾ ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ನಿನ್ನ ನೋಟೀಸ ಬಂದಾಗ್ಗೆ ಉತ್ತರ ಕೊಡಬೇಕಂದರೆ ಆಜಾರಿ ಇದ್ದೆ ಕೊಡೋದು ಆಗಲಿಲ್ಲಾ ಈಗ ಕೊಟ್ಟಿರುತೇನೆ ತಿಳಿಯೋದು ತಾ|| ೨೩-೮-೨೮

ಈ ಎಡಗೈ ಹೆಬ್ಬಟ್ಟಿನ ಗುರ್ತು ಪಾರ್ವತೆವ್ವಾ ಕೋಂ ಬಸವಪ್ಪಾ ಮೊರಬದ ಈಕೆ ಕೈದು ಅದೆ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡಿಯಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಾಳ ವ ಸಾಗವಾನಿ (೬) ಫೂಟಿನ ಚವಕ ತುಂಡುಗಳು

ಸಾಗವಾನಿ ಕೊಯಿದ ಹಲಗಿಗಳು ವ ಜಾತಿ ವ ರೀಪು ವ ತಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಹೂಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲು

ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು

ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1463

ವಿಜಯ

ನಿತ್ಯ ಪತ್ರ
ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಬುಧವಾರ ತಾರೀಖು ೨೭ ನೇ ಅಗಸ್ಟ ೧೯೩೦ (ಸಂಚಿಕೆ ೧೪೮

ಮುಂಬಯಿ ಕಾಯದೆ ಕೌನ್ಸಿಲ್ ಚುನಾವಣೆ.

ಧಾರವಾಡ ಜಿಲ್ಲಾ ಬಿನ್ನ ಮುಸಲ್ಮಾನ ಮತದಾರರಿಗೆ ವಿನಂತಿ.

ಮಹನೀಯರೇ,

ನಾನು ಬರುವ ೧೦ನೇ ಸಪ್ಟಂಬರಕ್ಕೆ ಆಗುವ ಮುಂಬಯಿ ಕಾಯದೇ ಕೌನ್ಸಿಲ್ ಇಲೆಕ್ಶನ್ನಕ್ಕೆ ಉಮೇದವಾರನಾಗಿ ನಿಂತಿದ್ದೇನೆ. ತಾವು ನನಗೆ ಎರಡು ಸಾರೆ ಆರಿಸಿ ಕೊಟ್ಟು ಜನಸೇವೆಯನ್ನು ಮಾಡಲಿಕ್ಕೆ ಆಸ್ಪದ ಕೊಟ್ಟಿರುವಿರಿ. ನಾನು ಕೌನ್ಸಿಲದಲ್ಲಿ ಮಾದಕ ಪದಾರ್ಥ ನಿಷೇಧ, ಮತ್ತು ೧೦೦ ರೂಪಾಯಿ ಲಾವಣಿ ಬಾಳುವಂಥ ಜಮೀನುಗಳ ಮೇಲೆ ಪರಮಾವಧಿ ೫೦ ರೂಪಾಯಿ ತೆರಿಗೆ ಹಾಕಬೇಕೆಂತಾ ಮಾಡಿದ ಜಮೀನ ಮಹಾಸೂಲಿನ ಹೊಸ ಕಾಯದೇದ ಪ್ರತಿಬಂಧಕ ಠರಾವುಗಳನ್ನು ತಂದು ಪಾಸ ಮಾಡಿಕೊಂಡದ್ದು ತಮಗೆ ಗೊತ್ತೇ ಇದೆ. ಇದರ ಹೊರ್ತು ಕರ್ನಾಟಕ ಏಕೀಕರಣ, ಕರ್ನಾಟಕ ಇರಿಗೇಶನ್ನ ವಗೈರೆ ಅನೇಕ ಜನ ಹಿತದ ಕೆಲಸಗಳ ಬಗ್ಗೆ ವಿಶೇಷ ಪ್ರಯತ್ನ ಪಟ್ಟಿರುವೆನು. ಕೌನ್ಸಿಲಿನ ಹೊರಗಾದರೂ ಅನೇಕ ಲೋಕ ಹಿತದ ಕೆಲಸಗಳನ್ನು ಮಾಡಿರುವೆನು. ಚುನಾವಣೆಯು ಸಮೀಪಿಸಿದ್ದರಿಂದ ಪ್ರತಿ ಒಬ್ಬರಿಗೆ ವ್ಯಕ್ತಶಃ ಭೆಟ್ಟಿಯಾಗುವದು ಅಥವಾ ಲೇಖಿಯಿಂದಾ ತಿಳಿಸುವದು ಅಶಕ್ಯ ಕಾರಣ ಈ ಜಾಹೀರ ಪತ್ರಿಕೆಯಿಂದ ವಿನಂತಿ ಮಾಡಿಕೊಂಡಿರುವೆನು. ತಾವೆಲ್ಲರು ಪುನಃ ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ಆರಿಸಿಕೊಟ್ಟರೆ ಜನಹಿತದ ಕಾರ್ಯಗಳನ್ನು ಮಾಡಲಿಕ್ಕೆ ಉತ್ಸಾಹದಿಂದ ಪ್ರಯತ್ನ ಮಾಡುವೆನು. ನನ್ನ ಚಿನ್ಹೆ ಮನುಷ್ಯ ವೋಟಿನ ಪೇಪರದಲ್ಲಿ ಮೇಲೆ ತೋರಿಸಿದಂತೆ ಇದೆ. ಅದರ ಮುಂದೆ (× ×) ಈ ಪ್ರಕಾರ ಎರ್ಡು ಗುರ್ತಾ ಮಾಡಬೇಕು.

ಧಾರವಾಡ
೨೬-೮-೩೦

ತಮ್ಮ ಸೇವಕ
ವಿಶ್ವನಾಥ ನಾರಾಯಣ ಜೋಗ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ· ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಆಧಾಣೆ. ಥೋಕ ತಕ್ಕೊಳ್ಳುವವರಿಗೆ ನೂರಕ್ಕೆ ಭರ್ಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ
ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಭಂಡವಲು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರಹ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. [illegible]

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೪೬ ಭಾದ್ರಪದ ಶುದ್ಧ ೪

ಪೋಲೀಸರು ಗಾಂಧೀಸಾಹೇಬರಿಗೆ ಸಲಾಮು ಕೊಟ್ಟರು.

ಬಳ್ಳಾರಿಯಲ್ಲಾದ ಶಿಂದಿ ಸವಾಲಿನ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಅದು ಮೊದಲನೆಯ ದಿವಸದ್ದು. ಮೂರು ದಿವಸ ಇದಕ್ಕೂ ಚಮತ್ಕಾರವಾಯಿತು. ಸವಾಲು ನಡೆವಾಗ ಇಬ್ಬರು ಸ್ವಯಂಸೇವಕರು ಸಹಕಾರ ಸೂಚಕ ಸಭ್ಯಗೃಹಸ್ಥರಂತೆ ಜಟಕಾದಲ್ಲಿ ಕೂತು ಹೋದರು. ಇವರು ಆ ದೇಶದ ಪದ್ಧತಿಯಂತೆ ಬೊಕ್ಕ ನೆತ್ತಿಯವರಾಗಿ, ಮೈಮೇಲೆ ತೆಳುವಾದ ಅಂಗೀ ಹಾಕಿಕೊಂಡು, ಕಯ್ಯಲ್ಲಿ ನಸ್ಯದ ಡಬ್ಬಿ ಹಿಡಕೊಂಡು ಹೋದರು. ಇವರಾರೋ ಸಭ್ಯಗೃಹಸ್ಥರಿರಬೇಕೆಂದು, ಪೋಲೀಸರು ಇವರನ್ನು ಒಳಗೆ ಬಿಟ್ಟರು. ಅಲ್ಲಿ ಇವರು ನಿಜರೂಪ ತೋರಿಸಿದರು. ಪೋಲೀಸರು ಇತರ ಸವಾಚಾರ ತಕ್ಕೊಂಡದ್ದಲ್ಲದೆ, ಇವರನ್ನು ಕರಕೊಂಡು ಬಂದ ತಪ್ಪಿಗಾಗಿ ಜಟಕಾದವನಿಗೂ ಮುಷ್ಟಿ ಮೋದಕ ತಿನಿಸಿದ. ಇವರ ತರುವಾಯ ಶ್ರೀ. ಶೇಷಗಿರಿರಾಯನೆಂಬ ಸ್ವಯಂಸೇವಕನು ಸಾಹೇಬನಂತೆ ಡ್ರೆಸ ಮಾಡಿದನು. ತಲೆಗೆ ಹ್ಯಾಟು ಹಾಕಿ, ಡೌಲಿನಿಂದ ಬಂಡಿಯಿಂದಿಳಿದನು. ದೊಡ್ಡ ಸಾಹೇಬರಿರಬೇಕೆಂದು ಪೋಲೀಸರು ಬಗ್ಗಿ ಸಲಾಮು ಮಾಡುತ್ತಾ, ಇವನನ್ನು ಒಳಗೆ ಬಿಟ್ಟರು. ಅಲ್ಲಿ ಹೋದವನೇ ತನ್ನ ಗೋಸ್ವರೂಪ ಧಾರಣ ಮಾಡಿದನು. ರಾಷ್ಟ್ರೀಯ ನಿಶಾನೆ ಹಿಡಿದನು. ಸವಾಲು ಮಾಡಬೇಡಿರೆಂಬ ಹಸ್ತಪತ್ರಿಕೆಗಳನ್ನು ಹಂಚಿದನು. ಮಹಾತ್ಮಾ ಗಾಂಧೀಕೀ ಜಯವೆಂದು ಕೂಗಿದನು. ಪೋಲೀಸರು ಈತನನ್ನು ಹಿಡಿದು, ಹೊಡೆದರು. ಸವಾಲುಗಾರರಿಗೆ ಈ ಅತ್ಯಾಚಾರ ಸಹನವಾಗಲಿಲ್ಲ. ನಾವು ಸವಾಲೇ ಮಾಡುವದಿಲ್ಲ. ಸವಾಲಿಗಾಗಿ ಕಟ್ಟಿದ ಕಟ್ಟಳೆಯ ಹಣವನ್ನು ತಿರಿಗಿ ಕೊಡಿರೆಂದು ಹೇಳಿ, ಅದನ್ನು ತಕ್ಕೊಂಡು ಸವಾಲು ಮಾಡದೆ ಊರ ದಾರೀ ಹಿಡಿದರು.

ಪತಿಯಾಳಾದ ಮಹಾರಾಜರಿಗೆ
ಕರೇ ನಿಶಾನೆಯ ಬಹುಮಾನ.

ಎತ್ತು ಹಾರದ ಮೊದಲು ಸಹರ ಹಾರಿತೆನ್ನುವಂತೆ ಕಾಂಗ್ರೆಸ ಅಥವಾ ಲಿಬರಲರು ಕಾವೆಂತ ಟ್ರೀಟಲದ ಬಗ್ಗೆ ಸಂಶಯಪಡುತ್ತಿರುವಾಗ ಸಂಸ್ಥಾನಿಕರು ಅವಶ್ಯಕ್ಕಿಂತ ವಿಲಾಯತಿಯ ದಾರಿ ಹಿಡಿದಿದ್ದಾರೆ. ಸಾಂಗಲಿಯ ಯಜಮಾನರು ಈಗಾಗಲೇ ಲಂಡನ ನಗರ ಮುಟ್ಟಿದ್ದಾರೆ. ಪತಿಯಾಳಾದ ಮಹಾರಾಜರು ಹೋದ ಶುಕ್ರವಾರದ ಹಡಗದಿಂದ ಪ್ರಯಾಣ ಬೆಳೆಸಿದರು. ಇವರ ವಿರುದ್ಧ ಪ್ರಜರ ಅನೇಕ ದೂರುಗಳಿದ್ದು, ಇವರ ಕಯ್ಯಲ್ಲಿ ಸ್ತ್ರೀಯರ ಪಾತಿವ್ರತ್ಯವೇ ಉಳಿಯುವಂತಿಲ್ಲೆಂದು ಸಾರ್ವಜನಿಕವಾಗಿ ಆಕ್ಷೇಪಗಳು ಹೊರಿಸಲ್ಪಟ್ಟವು. ಇಂಗ್ರೇಜಿ ಸರಕಾರದವರು ಇವೆಲ್ಲ ಆರೋಪಗಳ ಮೇಲೆ ಸುಣ್ಣ ಸವರಿ, ಮಹಾರಾಜರು ಗಂಗಾಜಲದಂತಿರುತ್ತಾರೆಂದು ಠರಾವು ಪ್ರಸಿದ್ಧ ಮಾಡಿದ್ದಾರೆ. ಇದರಿಂದ ಪ್ರಜರ ಸಮಾಧಾನವಾಗುವದೆಂತು ? ಮಹಾರಾಜರು ಮುಂಬಯಿಯಿಂದ ಹೊರಡುವಾಗ ಬಂದರದಲ್ಲಿ ಕರೇ ನಿಶಾನೆಯ ಬಹುಮಾನ ಮಾಡಬೇಕೆಂದು ಮುಂಬಯಿಯಲ್ಲಿ ವಾಸವಾಗುವ ಸೀಖರು ದೊಡ್ಡ ಸಂಖ್ಯೆಯಿಂದ ಹೋದರು. ಸ್ತ್ರೀಯರ ಮಾನ ಉಳಿಯುವದಿಲ್ಲ. ಅವರ ಪಾತಿವ್ರತ್ಯಕ್ಕೆ ಭಂಗ ಬರುತ್ತದೆ; ಇವೇ ಮುಂತಾದ ನುಡಿಗಳನ್ನು ಬರೆದ ಬೋರ್ಡುಗಳನ್ನು ಕಯ್ಯಲ್ಲಿ ಹಿಡಕೊಂಡು ನಿಂತಿದ್ದರು. ಈ ಬಗೆಯ ಅಪಮಾನಗಳನ್ನು ಕಣ್ಣಾರೆ ನೋಡಬಾರದೆಂದು ಮಹಾರಾಜರು ಬೇರೊಂದು ಬಂದರದಿಂದ ಉಗಿಯ ದೋಣಿಯಲ್ಲಿ ಕೂತು, ಜನರ ಕಣ್ಣಿಗೆ ಕಾಣಿಸದಷ್ಟು ದೂರ ಹೋಗಿ ಹಡಗವೇರಿದರು. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದ್ದಂತೆ ಮಾಡಿದರೇನಾಯಿತು ? ಅಪಮಾನದ ಸುದ್ದಿಯು ದೇಶದ ತುಂಬ ಹಬ್ಬದೆ ಹೋಗಲಿಲ್ಲವಲ್ಲ !!

ಪೋಲಿಸ ಕಮೀಶನರರ ಮೇಲೆ ಬಾಂಬು

ಕಲಕತ್ತೆಯ ಪೋಲಿಸ ಕಮೀಶನರಸಾಹೇಬರಾದ ಸರ ಚಾರ್ಲ್ಸ ಟಿಗಾರ್ಟಸಾಹೇಬರು ಮೋಟಾರಿನಲ್ಲಿ ಕೂತು ಬಂಗಲೆಯಿಂದ ಆಫೀಸಿಗೆ ಬರುತ್ತಿದ್ದಾಗ, ದಾರಿಯಲ್ಲಿ ಇವರ ಮೋಟರಿನ ಮೇಲೆ ಒಂದರ ಮೇಲೊಂದರಂತೆ ಎರಡು ಬಾಂಬುಗಳನ್ನು ಚಲ್ಲಿದರು. ಮೋಟಾರಿಗೆ ಧಕ್ಕೆಯಾಗಿ, ಡ್ರಾಯವ್ಹರನಿಗೆ ತುಸು ಗಾಯವಾಗಿದೆ. ಸಾಹೇಬರು ಉತ್ತೀರ್ಣರಾದರು.

ದಬ್ಬಾಳಿಕೆಗೆ ಕಾಂಗ್ರೆಸವು ದಣಿಯದು ; ಹಣಿಯದು.

ದಬ್ಬಾಳಿಕೆಗೆ ಪ್ರಾರಂಭವಾದ ಒಳಿಕ ಸರಕಾರದವರು ಕಾಂಗ್ರೆಸದ ಐವರು ಅಧ್ಯಕ್ಷರನ್ನು ಹಿಡಿದರು, ನಾಲ್ವರು ತುರುಂಗದಲ್ಲಿದ್ದು ಐದನೆಯವರ ಕಾಲು ತುರುಂಗದ ಬಾಗಿಲದಲ್ಲಿರುವದು. ಇವರ ತರುವಾಯ ಡಾಕ್ಟರ ಅನಸಾರಿಯವರು ತುರುಂಗಕ್ಕೆ ಹೋಗುವ ಸಿದ್ಧತೆ ಮಾಡಬೇಕಾಯಿತು. ನೀವು ಬೇಕಾದಷ್ಟು ಜನರನ್ನು ಹಿಡಿಯಿರಿ; ಕಾಂಗ್ರೆಸವು ತನ್ನ ಚಳವಳಿಯನ್ನು ನಿಲ್ಲಿಸುವದಿಲ್ಲ. ಇಷ್ಟಾರ್ಥ ಪೂರ್ಣವಾಗುವ ತನಕ ದಣಿಯುವದೆಂಬ ಮಾತನ್ನೇ ಮರೆಯಿರಿ; ಬೇಕಾದಷ್ಟು ದಬ್ಬಾಳಿಕೆ ಮಾಡಿ, ಹಣಿದರೂ ನಾವು ಮಣಿಯತಕ್ಕವರಲ್ಲೆಂದು ಮುಂಬಯಿ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ. ಹಂಸಾಬಾಯಿಯವರು ಸರಕಾರಕ್ಕೆ ಜಾಹೀರ ರೀತಿಯಿಂದ ತಿಳಿಸಿದ್ದಾರೆ. ಮಹಾಯುದ್ಧದಲ್ಲಿ ಲಾರ್ಡ ಕಿಚನರರು ಸಮುದ್ರದ ತಳಕಂಡರು. ಎಷ್ಟೋ ಜನ ದಳವಾಯಿಗಳು ಯುದ್ಧದಲ್ಲಿ ಸತ್ತು ಸ್ವರ್ಗಸುಖ ಹೊಂದಿದರು. ಬ್ರಿಟಿಶ ಸರಕಾರದವರು ಎದೆಗುಂದದೆ ಕಡೆತನಕ ಯುದ್ಧ ಮಾಡಿದರು. ಅದೇ ಪ್ರಕಾರ ಕಾಂಗ್ರೆಸದ ಶಾಂತಿಯುದ್ಧವಾಗುವದೆಂದು ಖಂಡಿತವಾಗಿ ತಿಳಿಯತಕ್ಕದ್ದು.

ಪೇಶಾವರದ ರಿಪೋರ್ಟಿನ ಮೇಲೆ ಗದಾಪ್ರಹಾರ.

ಮುಂಬಯಿಯಲ್ಲಿ ಪೇಶಾವರದ ರಿಪೋರ್ಟಿನ ಪ್ರತಿಗಳನ್ನು ಪೋಲೀಸರು ಹಿಡಿದು ಹಾಕಿದನಂತರ ಅಲ್ಲಾಬಾದ ಸರಕಾರದವರು ಈ ಪುಸ್ತಕಗಳು ಆಕ್ಷೇಪಾರ್ಹವೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿ, ಇವು ಇದ್ದಲ್ಲಿ ಜಪ್ತ ಮಾಡಬೇಕೆಂದು ಹುಕುಮ ಮಾಡಿದ್ದಾರೆ. ಮುಂಬಯಿಯಲ್ಲಿ ಹಿಡಿದ ೭೦೦ ಪುಸ್ತಕಗಳನ್ನು ಸುಡುವರೆಂದು ವರ್ತಮಾನವಾಗಿದೆ. ಸರಕಾರದ ಈ ಕೃತ್ಯವು ಕಳ್ಳನು ಕಳವು ಮಾಡಿಕೊಂಡು ಹೋದ ಬಳಿಕ, ಬಾಗಿಲ ಭದ್ರ ಮಾಡುವಂತಾಗುತ್ತದೆ. ಏಕೆಂದರೆ ರಿಪೋರ್ಟಿನ ಸಂಪೂರ್ಣ ಸಂಗತಿಗಳು ವರ್ತಮಾನಪತ್ರಗಳಲ್ಲಿ ಬಂದುಹೋದವು. ಪುಸ್ತಕಗಳಂತೆ ಎಲ್ಲ ವರ್ತಮಾನಪತ್ರಗಳನ್ನು ಜಪ್ತ ಮಾಡಲಾರರು. ಜಾರಕನು ಇಂಗ್ರೇಜಿ ರಾಜ್ಯವೆಂಬ ಪುಸ್ತಕಕ್ಕೆ ಅಚ್ಚುಕೂಟದಿಂದ ಹೊರಡುವ ಮುಂಚಿತವಾಗಿಯೇ ಜಪ್ತಿಯ ಹುಕುಮು ತೆಗೆದರೂ, ಅದು ವಿಶ್ವವನ್ನು ವ್ಯಾಪಿಸುತ್ತದೆಂದು ಅಲ್ಲಲ್ಲಿಯ ಕಾಂಗ್ರೆಸ ಸಭೆಯವರು ಜಾಹೀರ ರೀತಿಯಿಂದ ಹೇಳಿದ್ದರ ಮೇಲಿಂದ ಸ್ವ

ಸ್ತುವಾಗುತ್ತದೆ. ಅದೇ ಪ್ರಕಾರ ಈ ರಿಪೋರ್ಟು ಗುಪ್ತವಾಗಿ ಸಾಧಿಸಿದರೂ ಊರುಗಳಲ್ಲಿರುವರು, ಅದಕ್ಕೆ ಅವಕಾಶವಾದ ಕೂಡಲೆ ಪ್ರಕಟವಾಗುವದು. ಸರಕಾರದವರು ಎಷ್ಟು ಪ್ರಯತ್ನಪಟ್ಟರೂ, ಅವರ ಉದ್ದೇಶ ಈಡೇರುವ ದಿವಸಗಳು ಹೋದಾದವು.

ಧಾರವಾಡದಲ್ಲಿ ದರೋಡೆಯ ಒಳಸಂಚು.

—(೦)—

ಪೋಲೀಸರ ಗೋಳೀ ಬಾರು.

ಮೊನ್ನಿನ ದಿವಸ ರಾತ್ರಿಯಲ್ಲಿ ಈ ಊರಿನ ಒಂದು ಭಾಗವಾದ ಹಾವೇರಿಪೇಟೆಯಲ್ಲಿ ೧೦-೧೫ ಜನರು ಒಂದು ಹಾಳ ಮನೆಯಲ್ಲಿ ಕೂಡಿದರು. ಇವರು ದರೋಡೆ ಮಾಡಬೇಕೆಂದು ದರೋಡೆಗೆ ಬೇಕಾದ ಕಲ್ಲು ಕವಣೆ, ಕೊಡ್ಲಿ, ಗುಂಡುಗೋಲು ಸಹಿತ ಸಿದ್ಧರಾಗಿದ್ದರು. ಈ ಸಂಗತಿಯು ಗುಪ್ತವಾಗಿ ಪೋಲಿಸರಿಗೆ ತಿಳಿಯಿತು. ಹೆಡಕ್ವಾರ್ಟರಕ್ಕೆ ಟೆಲಿಫೋನು ಮಾಡಿ, ಎರಡು ಮೋಟಾರ ಲಾರಿ ತುಂಬ ಸಶಸ್ತ್ರ ಪೋಲಿಸರನ್ನು ತಂದು, ಒಳಸಂಚುಗಾರರು ಕೂಡಿದಲ್ಲಿಗೆ ಹೋದರು. ತುಸು ದೂರದಲ್ಲಿ ಮೋಟಾರ ನಿಲ್ಲಿಸಿ, ಇವರ ಮನೆಯ ಸುತ್ತಲು ಕಾವಲಿಟ್ಟರು. ಇದನ್ನು ಕಂಡು ದರೋಡೆಗಾರರು ಕಿಟಕಿಗಳನ್ನು ಮುರಿದು, ಹಾರಿ ಓಡಹತ್ತಿದರು. ಪೋಲಿಸರು ಹಿಡಿಯಲು ದರೋಡೆಗಾರರು ಕಲ್ಲಿನಿಂದ ಕೆಲ ಸಿಪಾಯರನ್ನು ಘಾಯಪಡಿಸಿದರು. ಆಗ ಪೋಲೀಸರು ಗುಂಡು ಹಾಕಲು ನಾಲ್ಕೈದು ಜನರು ಕಾಲಿಗೆ ಚರಿ ಒಡೆದು ಬಿದ್ದರು. ಇನ್ನೂ ಕೆಲವರಿಗೆ ಚರೀ ಒಡೆದಿದ್ದು, ಅವರು ಆ ಕಗ್ಗತ್ತಲಿನಲ್ಲಿ ಓಡಿಹೋಗಿರಬೇಕೆಂಬ ಸಂಶಯವಿದೆ. ಅಲ್ಲೇ ಬಿದ್ದವರನ್ನು ಹಿಡಿದಿದ್ದಾರೆ. ಮತ್ತು ಆ ಹಾಳು ಮನೆಯಲ್ಲಿದ್ದ ದರೋಡೆಯ ಎಲ್ಲ ಆಯುಧಗಳನ್ನು ಜಪ್ತ ಮಾಡಿದ್ದಾರೆ.

ಹಿಂದೂ ಪಾರ್ಸಿ ಮದುವೆ.

—(೦)—

ಮುಂಬಯಿಯಲ್ಲಿ ಗಣೇಶಶ್ಯಾಮ ಮುಕ್ತಿರಾಮ ಶರ್ಮಾ ಎಂಬವರು ಪಾರ್ಸಿ ವಿಧವೆಯಾದ ಫರ್ದುನ ಲಂಟಿನವೆಂಬವಳ ಕೂಡ ಪುನರ್ವಿವಾಹ ಮಾಡಿಕೊಂಡರು. ಮದುವೆಯು ರಜಿಸ್ಟರವಾಯಿತು. ವರನಿಗೆ ೩೫ ಮತ್ತು ವಧುವಿಗೆ ೨೭ ವರ್ಷವಾಗಿರುತ್ತದೆ.

ಮೊದಲು ಕರಾರು, ಬಳಿಕ ಸಂಧಿ ವಿಚಾರ.

—(೦)—

ಸಿಮ್ಲಾದಲ್ಲಿ ಲಾರ್ಡ ಆಯರ್ವಿನಸಾಹೇಬರು, ಬ್ಯಾರಿಸ್ಟರ ಸಪ್ರು ಜಯಕರರೂ ಯಾವ ರೀತಿಯಿಂದ ಒಡಂಬಡಿಕೆಯ ಪ್ರಸ್ತಾಪ ನಡೆಸಿದ್ದಾರೆಂಬದು ಸದ್ಯದಲ್ಲಂತೂ ಗುಪ್ತವಾಗಿರುವದು. ಲಾರ್ಡ ಆಯರ್ವಿನಸಾಹೇಬರ ಅಥವಾ ಇಂಗ್ಲಂಡದ ಮಂತ್ರಿಗಳ ಮನಸ್ಸಿನಲ್ಲೇನಿರುತ್ತದೆಂಬದನ್ನು ಲಂಡನದ ಮಾರ್ನಿಂಗ ಪೋಸ್ಟ ಪತ್ರಿಕೆಯು ತನ್ನ ಕಲ್ಪನೆಯಿಂದ ಹೇಳುತ್ತದೆ. ಕಾಂಗ್ರೆಸದವರು ಮೊದಲು ಕಾಯದೆಭಂಗವನ್ನು ನಿಲ್ಲಿಸಬೇಕು. ಅಂದರೇ ರಾಜಿಯ ಸಂಧಾನವೆಂದು ಲಾರ್ಡ ಆಯರ್ವಿನರ ಮತವಾಗಿರುತ್ತದೆ. ಇದು ರಾಜಿಯ ಲಕ್ಷಣವೇ ಅಲ್ಲ. ಮತ್ತು ರಾಜಿ ಮಾಡಿಸತಕ್ಕವರ ಧರ್ಮವೂ ಆಗುವದಿಲ್ಲ. ಇಬ್ಬರ ನಡುವೆ ಒಡಂಬಡಿಕೆ ಮಾಡಿಸತಕ್ಕ ಮಧ್ಯಸ್ಥಗಾರರು ಇಬ್ಬರಿಗೂ ಗೌರವ ಬರತಕ್ಕಂಥ ನೀತಿಯನ್ನೇ ಅನುಸರಿಸಬೇಕಾಗುತ್ತದೆಂಬದನ್ನು ಹೇಳಬೇಕಾಗುವ ಆವಶ್ಯಕತೆಯೇ ಇಲ್ಲ.

ಪುಣೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರಿಗೆ ಶಿಕ್ಷೆ.

—(೦)—

ಪುಣೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ. [illegible] ಇವರಿಗೆ ಮೂರು ತಿಂಗಳು ಸಶ್ರಮ ಶಿಕ್ಷೆ ಮತ್ತು ೫೦೦ ರೂಪಾಯಿ ದಂಡವಾಯಿತು. ಮ್ಯಾಜಿಸ್ಟ್ರೇಟರು ಇವರಿಗೆ ಏ ಕ್ಲಾಸ ಕೊಟ್ಟಿದ್ದಾರೆ.

ಕೂಲಿಕಾರರ ಸತ್ಯಾಗ್ರಹ.

—(೦)—

ಅಹಮದಾಬಾದಿನಲ್ಲಿ ಜಪ್ತ ಮಾಡಿದ ಪ್ರಭಾಕರ ಮುದ್ರಾಲಯದ ಸಾಮಾನುಗಳನ್ನು ರೇಲ್ವೆಯ ಕೂಲಿಕಾರರು ವ್ಯಾಗನಗಳಲ್ಲಿ ಹೇರುವದಿಲ್ಲೆಂದರು. ಸರಕಾರೀ ಕೂಲಿಕಾರರು ಅವನ್ನು ಹೇರಿಸಿದರು. ಸ್ವತಂತ್ರ ಮತ್ತು ಪರತಂತ್ರದಲ್ಲಿ ಇಷ್ಟು ಭೇದವುಂಟು.

ವಿವಿಧ ವರ್ತಮಾನಗಳು.

—(೦)—

ಕಳೆದ ಜುಲೈ ತಿಂಗಳಲ್ಲಿ ಮುಂಬಯಿಯ ಬಂದರದ ವ್ಯಾಪಾರವು ಮೂರೂವರೇ ಕೋಟಿಯಷ್ಟು ಕಡಿಮೆಯಾಗಿದೆ. ಇದರಲ್ಲಿ ಎರಡು ಕೋಟಿ ಮಾರ ಅರಿವೆ ಕಡಿಮೆ ಬಂದಿದೆ. ಅದರ ಬೆಲೆ ೭೦ ಲಕ್ಷವಾಗುತ್ತದೆ. ಆರು ಕೋಟಿಯ ಅರಿವೆಯು ಬಂದರದಲ್ಲಿ ಬಿದ್ದುಕೊಂಡಿದೆ.

ಪಂಡಿತ ಮೋತಿಲಾಲರಿಗೆ ಉಬ್ಬಸ ಸತತವಾಗಿ ಬರುತ್ತಿದ್ದು, ಬಾಯಿಯಿಂದ ರಕ್ತ ಬೀಳುತ್ತದೆ. ಸರ ನೀಲರತನ ಸರಕಾರ ಮೊದಲಾದ ಎಲ್ಲ ಡಾಕ್ಟರರೂ ಬಂದು, ಚಿಕಿತ್ಸೆ ನಡೆಸಿದ್ದಾರೆ. ತುಸು ಗುಣವಾಗಿದೆ.

ಹಿಂದುಸ್ಥಾನದಲ್ಲಿ ಹಿಂದಿ ಜನರಿಗೆ ವ್ಯಾಪಾರ ವಿಷಯವಾಗಿ ಎಷ್ಟು ಸ್ವಾತಂತ್ರ್ಯ ಮತ್ತು ಹಕ್ಕು ಉಂಟಾಗುವದೋ ಅಷ್ಟೇ ಹಕ್ಕು ಮತ್ತು ಸ್ವತಂತ್ರತೆಯು ಸ್ವರಾಜ್ಯ ಕಾಲದಲ್ಲಿ ತಮಗೂ ಇರಬೇಕೆಂದು ಕಲಕತ್ತೆಯ ಯುರೋಪಿಯನ್ನ ವ್ಯಾಪಾರಸ್ಥರು ಅನ್ನಲಾರಂಭಿಸಿದ್ದಾರೆ.

ಕಾಯದೆಭಂಗದ ದೆಸೆಯಿಂದ ಮುಂಬಯಿ ಸರಕಾರದವರು ಹೊಸದಾಗಿ ಪುಣೆಯಲ್ಲಿ ಭರತಿ ಮಾಡಿಕೊಂಡ ಪೋಲೀಸರ ಒಂದು ತಂಡಕ್ಕೆ (೧೨೫ ಜನರು) ಕಿಚನರ ಪೋಲೀಸವೆಂದು ಹೆಸರಿಟ್ಟು, ಅವನ್ನು ಅಹಮದಾಬಾದಿಗೆ ಕಳಿಸಿದರು.

ಹಾವೇರಿ ಮ್ಯುನಿಸಿಪಾಲಿಟಿಯವರು ಹಾಯಸ್ಕೂಲಿಗಾಗಿ ಕಟ್ಟಿಸಿದ ಹೊಸ ಕಟ್ಟಡದ ಬಾಗಿಲು ತೆರೆಯುವ ಸಮಾರಂಭವನ್ನು ಬೆಳಗಾವಿಯ ಗಿಲಗಂಚಿ ಅರಟಾಳ ಹಾಯಸ್ಕೂಲಿನ ಪ್ರಿನ್ಸಿಪಾಲರಾದ ಶ್ರೀ ಸಾಬನೆಯವರು ನಿನ್ನಿನ ದಿವಸ ಮಾಡಿದರು.

ನಾಳಿನ ರಜೆ— ಇಂದು ವಿನಾಯಕ ಚತುರ್ಥಿಯ ದೆಸೆಯಿಂದ ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ದಿನದ ವಿಜಯವು ಪ್ರಕಟಿಸಲ್ಪಡಲಾರದು.

WANTED

WANTED:– Agents and Sub-Agents for Commercial Towns to push on a Co-operative Loan scheme on commission basis, on liberal terms. Only reliable people need apply to

C. M. Karaka,
Chief Representative
Dharwar.

For METROPOLITION MUTUAL
BANKING & ASSURANCE CO., LTD.
BOMBAY.

ಕಾಲೇಜದ ಒಬ್ಬ ವಿದ್ಯಾರ್ಥಿಯಾದ ದಿನೇಶ ದ್ರ ಮುಜುಮ್ದಾರರೆಂಬವರನ್ನು [illegible].

ವ್ಯಾರಿಸ್ಟರ [illegible] ದ ಬಲವಂತಿಳೆಯಿಂ [illegible] ಕ್ಕಾಗಿ ವಿವೇ [illegible] ಪ್ರಬಂಧ [illegible] ಒಂದು [illegible].

[illegible] ದಲ್ಲಿ [illegible] ವಿದ್ಯಾರ್ಥಿಗಳೇ [illegible] ಶಾಲೆಯನ್ನು [illegible]. [illegible] ಮತ್ತು [illegible] ವರ್ಗಣಿ [illegible] ಉಚಿತವಾಗಿ ನಡಿಸುವರು.

[illegible]

[illegible] ಯಲ್ಲಿ [illegible] ಸತ್ಯಾಗ್ರಹ ಕ್ಕಾಗಿ ಹಿಡಿಯಲ್ಪಟ್ಟು ಶಿಕ್ಷೆಯಾದವರ ಸಂಖ್ಯೆ [illegible].

ಕೌನ್ಸಿಲ್ ಬಹಿಷ್ಕಾರ

(ದಾಟಿ. ರಾಗೀ ತಂದಿರ್ರೀ | ಭಿಕ್ಷಗೆ [illegible])

ಕೌನ್ಸಿಲಿಗ್ಹೋಗುವಿರಾ | ನೀವು |
ಕೌನ್ಸಿಲಿಗ್ಹೋಗುವಿರಾ ||ಪ||
ಕೌನ್ಸಿಲ್ಲದು, ಕನಸಾಗಿರುವದು |
ಕೌನ್ಸಿಲ್ಲೆಂಬುಗು ನಾಟಕ ಗೃಹವು ||ಅ. ಪ||
ಗಾಂಧಿಮಹಾತ್ಮರು, ಜೇಲಿನೊಳಿರಲು |
ಅಂದ [illegible] ಯನ್ನೇರಲು ನೀವು |
ಕುಂದುಂಟಾಗದೆ ? ಜಗವದು [illegible] |
ಬೆಂಬು ಬಳಲಿ ಸಾವಿರಾಳಿಯೊಳಗೆ ||೧||
ನಡೆಯದು, ನಿಮ್ಮಾಟವು ಅದರಲ್ಲಿ |
ಗಡಿಬಿಡಿ ಮಾಡಲು ಬಿಡುವರಲ್ಲಿ |
ಬಡಬಡಿಸಲು ಬಹು, ಕೇಳುವದಿಲ್ಲ |
ಹಿಡಿ ಹಿಡಿ [illegible] ನೀವೂ ||೨||
[illegible] ಸಹಿಸುತ ನೀವು |
[illegible] ಮನದಿ |
[illegible] ಸರಕಾರ ಬೇಡಲು [illegible]
[illegible] ತೀರದಿ ||೩||
[illegible] ಬಿಟ್ಟರು |
ಪ್ರೀತಿಪ ವಿಶ್ವಭಾ [illegible] ಬಿಟ್ಟರು |
ಖ್ಯಾತ ಮಾಳವಿಯ ಮದನರು ಬಿಟ್ಟರು |
[illegible] ||೪||
[illegible] ನಿಲ್ಲಿಸರೇ |
ಮತವನ್ನು [illegible] |
[illegible] |
[illegible] ||೫||
[illegible] |
[illegible] ಮಾಡಿದರೇನು ? |
[illegible] |
[illegible] ಮಾಡಿಬಿಡುವರು [illegible] ||೬||
[illegible] ತೀಳದು [illegible] |
[illegible] |
ಗೋಳು [illegible] |
[illegible] ||೭||

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ವ ಬಿಚಿ ಜೋಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡ್ಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವ ಮನಸ್ಸು ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ [illegible] ಸಮಕ್ಷಮ [illegible].

[illegible]
ಮುನಸಫಕೋರ್ಟನಹತ್ತರ, ಧಾರವಾಡ

ಸರಕಾರಿ ಸರ್ಟಿಫಿಕೇಟ

ಉರ್ದು ಧಾರವಾಡ ಜಿಲ್ಲೆಯ ಭೂಗೋಲು [illegible]
[illegible] ಬೆಲೆ [illegible]
[illegible] ಬೆಳಗಾವಿ ಜಿಲ್ಲೆಯ ಭೂಗೋಲು [illegible]
[illegible]

[illegible] ನಲ್ಲಿ [illegible] ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ [illegible] ಎರಡೂ ಜಿಲ್ಲೆಗಳ [illegible] ಹೆಚ್ಚು ಪ್ರತಿಗಳನ್ನು [illegible] ಕಮೀಶನ ದೊರೆಯುವದು.

[illegible] ಎಮ್. ಎಚ್. [illegible]
ಉರ್ದು ಸ್ಕೂಲ ಹೆಡ್ಡಮಾಸ್ತರ
[illegible] ನಂಬರ ೧, ಗದಗ [illegible]

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ.

ನಮ್ಮ ಕಟ್ಟಿಗೆ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲೆಗಳೂ ಮತ್ತು ಹೊನ್ನಿ ಗಿಡ್ಡಿ ವ ಶಿಸಂ ನಾಟುಗಳು

ಸಾಗವಾನಿ ಯಳ್ಳ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಕಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರ್ನೀಚರ ಕೆಲಸ ಮಾಡಿಸುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ್ಟ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಪೂಜೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

[illegible] ಕೊಲೆಯ ಸೇರು ೧ಕ್ಕೆ [illegible]
[illegible] ಅಷ್ಟರು ತೊಲೆ ೧ಕ್ಕೆ ೪—೦—[illegible]
[illegible] ಮೈಸೂರಸ್ಟೋರ್ಸ
[illegible]

ಈ ಪತ್ರವನ್ನು [illegible] ಧಾರವಾಡದಲ್ಲಿ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

N. B [illegible]

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಲಾಚಾರ್ಯ [illegible]

ವರ್ಷ ೧೧ | ಧಾರವಾಡ ಶುಕ್ರವಾರ ತಾರೀಖು ೨೯ ನೇ ಅಗಸ್ಟ ೧೯೩೦ (ಸಂಚಿಕೆ ೧೯೯)

ಮುಂಬಯಿ ಕಾಯದೆ ಕೌನ್ಸಿಲ್ ಚುನಾವಣಿ.

ಧಾರವಾಡ ಜಿಲ್ಲಾ ಬಿನ್ನ ಮುಸಲ್ಮಾನ ಮತದಾರರಿಗೆ ವಿನಂತಿ.

ಮಹಾಶಯರೇ,

ನಾನು ಬರುವ ೧೯ನೇ ಸಪ್ಟಂಬರಕ್ಕೆ ಆಗುವ ಮುಂಬಯಿ ಕಾಯದೇ ಕೌನ್ಸಿಲ್ ಇಲೆಕ್ಶನ್ನಕ್ಕೆ ಉಮೇದವಾರನಾಗಿ ನಿಂತಿದ್ದೇನೆ. ತಾವು ನನಗೆ ಎರಡು ಸಾರೆ ಆರಿಸಿ ಕೊಟ್ಟು ಜನಸೇವೆಯನ್ನು ಮಾಡಲಿಕ್ಕೆ ಆಸ್ಪದ ಕೊಟ್ಟಿರುವಿರಿ. ನಾನು ಕೌನ್ಸಿಲದಲ್ಲಿ ಮಾದಕ ಪದಾರ್ಥ ನಿಷೇಧ, ವರ್ಷ ೧೦೦ ರೂಪಾಯಿ ಆವಣೆ ಭಾರದ ಜಮೀನುಗಳ ಮೇಲಿ ಪರವಾವಧಿ ೧೦ ರೂಪಾಯಿ ಶೆರಿಗೆ ಹಾಕಬೇಕೆಂತಾ ಮಾಡಿದ ಜಮೀನ ಮಹಸೂಲಿನ ಹೊಸ ಕಾಯದೇದ ಪ್ರತಿಬಂಧಕ ಠರಾವುಗಳನ್ನು ತಂದು ಪಾಸ ಮಾಡಿಕೊಂಡದ್ದು ತಮಗೆ ಗೊತ್ತೇ ಇದೆ. ಇದರ ಹೊರ್ತು ಕರ್ನಾಟಕ ಏಕೀಕರಣ, ಕರ್ನಾಟಕ ಕಾಂಗ್ರೇಶನ್ನ ಗೈರೆ ಅನೇಕ ಜನ ಹಿತದ ಕೆಲಸಗಳ ಬಗ್ಗೆ ವಿಶೇಷ ಪ್ರಯತ್ನ ಪಟ್ಟಿರುವೆನು. ಕೌನ್ಸಿಲಿನ ಹೊರಗಾದರೂ ಅನೇಕ ಲೋಕ ಹಿತದ ಕೆಲಸಗಳನ್ನು ಮಾಡಿರುವೆನು. ಚುನಾವಣಿಯು ಸಮೀಪಿಸಿದ್ದರಿಂದ ಪ್ರತಿ ಒಬ್ಬರಿಗೆ ವ್ಯಕ್ತಿಶಃ ಭೆಟ್ಟಿಯಾಗುವದು ಅಥವಾ ಲೇಖಿಯಿಂದಾ ತಿಳಿಸುವದು ಅಶಕ್ಯ ಕಾರಣ ಈ ಜಾಹೀರ ಪತ್ರಿಕೆಯಿಂದ ವಿನಂತಿ ಮಾಡಿಕೊಂಡಿರುವೆನು. ತಾವೆಲ್ಲರು ಪುನಃ ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ಆರಿಸಿಕೊಟ್ಟರೆ ಜನಹಿತದ ಕಾರ್ಯಗಳನ್ನು ಮಾಡಲಿಕ್ಕೆ



ಉತ್ಸಾಹದಿಂದ ಪ್ರಯತ್ನ ಮಾಡುವೆನು. ನನ್ನ ಚಿನ್ಹ ಮನುಷ್ಯ ಹೋಟಿನ ಪೇಪರದಲ್ಲಿ ಬದಿಗೆ ತೋರಿಸಿದಂತೆ ಇದೆ. ಅದರ ಮುಂದೆ (X X) ಈ ಪ್ರಕಾರ ಎರಡು ಗುರುತಾ ಮಾಡಬೇಕು.

ಧಾರವಾಡ

ತಮ್ಮ ಸೇವಕ

೨೯-೮-೩೦

ವಿಶ್ವನಾಥ ನಾರಾಯಣ ಜೋಗ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತೀಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು [illegible] ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ [illegible] [illegible] [illegible]. [illegible] ನಾವು ಬಹು [illegible]. [illegible] [illegible] ವಿಶೇಷ [illegible] ಮಾಡಿರುವ [illegible] [illegible] [illegible] ಮಾಡಲಿಕ್ಕೆ [illegible]. [illegible] [illegible] [illegible] ಕಮಿಶನ್ನ ದೊರೆಯುವದು.

ಜಿ. ವ್ಹಿ. ನೆವರಕ್ಕ,

ಶಿ. [illegible] [illegible] ಮಾರ್ಕೆಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಕಾಯದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು, ಕಾಯಮು ಮತ್ತು ಬೇಕ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಜಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳು ಮತ್ತೆ ಇಟ್ಟುಕೊಳುವ ಬಡಿಯು [illegible] ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯಪತ್ರಿಕೆ

೧೨ ತಿಂಗಳಿಗೆ	ರೂ. [illegible]
೬ ”	[illegible]
೩ ”	[illegible]
ಎವಾರ. ಪತ್ರಿಕೆ ೧೨ ತಿಂಗಳಿಗೆ	೩-೧[illegible]

ವಿಶೇಷ ಮಾಹಿತಿಗಳಿಗಾಗಿ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮಾ. ವಿಜಯ ಧಾರವಾಡ

ವಿಜಯ.

[illegible]

ನ್ಯಾಯದ ಭೀತಿ ಹೋಯ್ತು.

ಮುಂಬಯಿ ಸರಕಾರದವರು ಮುಂಬಯಿ ಪ್ರಾಂತದಲ್ಲಿರುವ ಕಾಂಗ್ರೆಸ ಕಮಿಟಿ, ಯುದ್ಧ ಮಂಡಲ, ಸತ್ಯಾಗ್ರಹ ಸಂಸ್ಥೆ ಮುಂತಾದವುಗಳನ್ನು ಬೇಕಾಯದೆಶೀರ ಮಾಡಿದ್ದೊಂದೇ ತಡ. ಪೂನೆಯ ಪೋಲೀಸರು ಒಂದು ಪಾಲಿಯನ್ನೇ ಧಡುತಿ ತಕ್ಕೊಂಡರು. ಅಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ. ಕುಳಕರ್ಣಿಯವರು ಸಧನರೂ, ಸುಪ್ರಸಿದ್ಧ ವಕೀಲರೂ ಆಗಿದ್ದಾರೆ. ಇವರನ್ನು ಹಿಡಿದು, ಕಲೆಕ್ಟರರ ಮುಂದೆ ನಿಲ್ಲಿಸಿದರು. ನಿಲ್ಲಿಸಿದ ವೇಳೆಯು ಕಚೇರಿಯ ಹೊತ್ತು ಮೀರಿ ಹೋಗಿತ್ತು. ಸಾಯಂಕಾಲದ ಆರು ಹೊಡೆದಿತ್ತು. ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದ್ದು ಮಾತ್ರ ನಿಜವಾಯಿತು. ಆದರೆ ಚಾರ್ಜಶೀಟು ಸಿದ್ಧವಾಗಿರಲಿಲ್ಲ. ಆದ್ದರಿಂದ ಜಾಮೀನು ಕೊಡಿರೆಂದು ಸಾಹೇಬರು ಕೇಳಿದ್ದಕ್ಕೆ ಶ್ರೀ. ಕುಳಕರ್ಣಿಯವರು ಒಡಂಬಡಲಿಲ್ಲ. ಆಗ ಇವರನ್ನು ಸ್ಪೇಶಲ ಮೋಟಾರಿನಿಂದ ಯೆರವಡೆಗೆ ಕಳಿಸಿದರು.

ಈ ಕಥೆಯು ಶನಿವಾರವಾಯಿತು. ಸೋಮವಾರ ವಿಚಾರಣೆಗೆ ಪ್ರಾರಂಭವಾಯಿತು. ಸರಕಾರೀ ವಕೀಲರೇ ಚಾರ್ಜದ ಬಗ್ಗೆ ಆಕ್ಷೇಪ ತಕ್ಕೊಂಡಂಥ ಭಾಷಣ ಮಾಡಿದರು. ಸರಕಾರದವರು ಕಾಂಗ್ರೆಸ ಕಮಿಟಿ, ಕಾಯದೆಭಂಗ ಕಮಿಟಿಗಳು ಬೇಕಾಯದೆಶೀರವಿರುತ್ತವೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ ನಂತರ ಒಂದೇ ತಾಸಿನಲ್ಲಿ ಇವರನ್ನು ಹಿಡಿದಿದ್ದಾರೆ. ಕಮಿಟಿಯು ಬೇಕಾಯದೆಶೀರವೆಂದು ಗೊತ್ತಿದ್ದ ಬಳಿಕ, ಇವರು ಸರಕಾರದ ಜಾಹೀರನಾಮೆಯಂತೆ ನಡೆಯುತ್ತಿರೋ ಇಲ್ಲವೋ ಎಂದು ನೋಡುವದಕ್ಕೆ ಸಹ ಅವಸರ ಕೊಡಲಿಲ್ಲ. ಇದು ಕೋರ್ಟಿನ ನಜರಿಗೆ ತಂದು ಕೊಟ್ಟರೂ, ಕೋರ್ಟು ಇದನ್ನು ಲಕ್ಷ್ಯಕ್ಕೇ ತರಲಿಲ್ಲ. ಆರೋಪಿಯು ಹೆಸರಾಂತ ವಕೀಲರಾದರೂ, ಕಾಂಗ್ರೆಸದ ಆಜ್ಞೆಯ ಪ್ರಕಾರ ವಿಚಾರಣೆಯಲ್ಲಿ ಭಾಗ ತಕ್ಕೊಳ್ಳಲಿಲ್ಲ. ಇಲ್ಲವಾದರೆ ಈ ಬೇಕಾಯದೆಶೀರ ದಸ್ತಗಿರಿಯು ರದ್ದಿಯಾಗಿ ಹೋಗುತ್ತಿತ್ತು. ಮ್ಯಾಜಿಸ್ಟ್ರೇಟರು ಇವರ ಮೇಲೆ [illegible] ಮಾಡುತ್ತೇನೆಂಬ [illegible] ವೃತ್ತಿಯನ್ನು ಅವಲಂಬಿಸಿದರು. ಇವರು ತಿಂಗಳ ಕಾಲ ಯಾವ ಸಭೆಯಲ್ಲಿಯೂ ಹೋಗುವದಿಲ್ಲವೆಂದು ವಚನ ಕೊಟ್ಟರೆ ಈಗ ಬಿಡುತ್ತೇವೆಂದು ಮ್ಯಾಜಿಸ್ಟ್ರೇಟರು ಮಾತು ಹೇಳಿದರು. ಶ್ರೀ. ಕುಳಕರ್ಣಿಯವರು ಒಪ್ಪಲಿಲ್ಲ. ಮೊದಲಿನಿಂದ ಕಾಂಗ್ರೆಸ ಭಕ್ತರು, ಸೆರೆಮನೆಗೆ ಹೋಗಲು ಸಿದ್ಧರಾದರು. ಮ್ಯಾಜಿಸ್ಟ್ರೇಟರು ಇವರಿಗೆ ಮೂರು ತಿಂಗಳ ಸಕ್ತ ಶಿಕ್ಷೆ ಮತ್ತು ಐನೂರು ರೂಪಾಯಿ ದಂಡ ವಿಧಿಸಿ, ಎ ಕ್ಲಾಸ ಕೊಟ್ಟರು. ಸರದಾರ ಪಟೇಲರಿಗೆ ನಿನ್ನೆ ಕಾಲ ಮೇಲೆ ಶಿಕ್ಷೆ ಕೊಟ್ಟಂತೆ ಈ ಶಿಕ್ಷೆಯು ಅಪರಾಧದ ಮಾದರಿಯಾಗಿರುತ್ತದೆ. ಇವೆಲ್ಲ ಮೊಗಲಾಯಿಯಲ್ಲಿ ಹೇಳುವಂಥ ಶಿಕ್ಷೆಗಳೇ ಸೈ. ಎಂದು ಏಕೆ ಅನ್ನಬಾರದು!

ಹಿರೇಕೆರೂರ ತಾಲೂಕಿನಲ್ಲಿ ಕೌನ್ಸಿಲ ಬಹಿಷ್ಕಾರ

—(೯)—

ಶ್ರೀ. ಮುದವೀಡು ಕೃಷ್ಣರಾಯರು ಹೋದ ವಾರದಲ್ಲಿ ಹಿರೇಕೆರೂರ ತಾಲೂಕಿನಲ್ಲಿ ಕಾಂಗ್ರೆಸ ಪ್ರಚಾರ ಕಾರ್ಯ ಮಾಡಲಿಕ್ಕೆ ಹೋಗಿದ್ದರು. ಬ್ಯಾಡಗಿ, ಹಾಂಸಭಾವಿ, ಚಿಕ್ಕೇರೂರ, ಹಿರೇಕೇರೂರ, ಮಾಸೂರು, ರಟ್ಟೀಹಳ್ಳಿ, ಕೋಡ ಮುಂತಾದ ತಾಲೂಕಿನ ಮುಖ್ಯ ಸ್ಥಳಗಳಿಗೆ ಹೋಗಿ, ಲೋಕಜಾಗೃತಿಯನ್ನುಂಟು ಮಾಡಿದರು. ಚಿಕ್ಕೇರೂರಲ್ಲಿ ಒಂದು ಸಂಗತಿಯು ಸಂಭವಿಸಿತು. ಅಲ್ಲಿಯ ನಾಯಕರು ಮಿ॥ ಕಾಮಲಾಪೂರ ಮಧ್ವರಾಯರನ್ನು ಕರಕೊಂಡು ಹೋಗಿ, ಅಷ್ಟನ ಸಭೆ ಸ್ಥಾಪಿಸಬೇಕೆಂದಿದ್ದರು. ಜನರು ಹಾಗೇ ಬರಲಾರರೆಂದು ಗ್ರಾಮಜೋಷೀಯು ಹಚ್ಚಿ, ಚಹಾ ಮಾಡಿ, ಕರೆಸಿದ್ದರು. ಜನರು ಇದರ ಇಂಗಿತ ತಿಳಿದು ಹೋಗಲೇ ಇಲ್ಲ. ಹೋದ ತುಸು ಜನರು ಮಂಗಮಳ್ಳರು ಬೀಳಬಾರದೆಂದು ಎದ್ದು ಬಂದರು. ಅಲ್ಲದೇ ಶ್ರೀ. ಮುದವೀಡಕರರ ವ್ಯಾಖ್ಯಾನವೆಂದು ಸುದ್ದಿಯಾದ್ದ ಕೂಡಲೆ ಊರವರೇ ಮಾತ್ರವಲ್ಲ; ಸುತ್ತಲಿನ ಹಳ್ಳಿಯವರೂ ಬಂದಿದ್ದರು. ಶ್ರೀ. ರಾಯರ ವ್ಯಾಖ್ಯಾನ ಕೇಳಿ, ಅಮನಸಭೆಯವರ ತಲೆಯೊಳಗಿನ ಮಾತು ಸಹಿತ ಇಳಿದು ಹೋಯಿತು. ಕೌನ್ಸಿಲಕ್ಕೆ ಬಹಿಷ್ಕಾರ ಹಾಕಬೇಕೆಂದೂ ಯಾರೂ ವೋಟು ಕೊಡಬಾರದೆಂದೂ ಸರ್ವಾನುಮತದಿಂದ ಠರಾವು ಪಾಸಾಯಿತು. ಚಿಕ್ಕೇರೂರಿನಂತೆ ಬೇರೆ ಊರುಗಳಲ್ಲಿಯೂ ಸಭೆಯಾಯಿತು. ಕನಿಷ್ಠ ೧೫ ಸಾವಿರ ಜನರಾದರೂ ಇವರ ವ್ಯಾಖ್ಯಾನ ಕೇಳಿದ್ದಾರಾಯಿತು. ಕೌನ್ಸಿಲಕ್ಕೆ ಬಹಿಷ್ಕಾರ ಹಾಕಬೇಕು; ವೋಟು ಕೊಡಬಾರದೆಂದು ಎಲ್ಲ ಸ್ಥಳಗಳಲ್ಲಿಯೂ ಸರ್ವಾನುಮತದಿಂದ ಗೊತ್ತಾಯಿತು. ಬ್ಯಾಡಗಿಯಲ್ಲಂತೂ ವೋಟರರಿಂದ ವೋಟು ಕೊಡುವದಿಲ್ಲೆಂದು ಸಹಿಗಳನ್ನು ತಕ್ಕೊಳ್ಳುವ ಕೆಲಸ ನಡೆದಿದೆ.

ಪೋರ್ಟರ ಮತ್ತು ಬಂಡಿಕಾರರಿಗೆ ಅಸೆಂಬ್ಲಿಯ ಕುಸ್ತಿಯು.

—(')—

ರಾವಸಾಹೇಬನು ರಾಜೀನಾಮೆ ಕೊಟ್ಟನು

——(೦)——

ದಿಲ್ಲಿಯ ವತಿಯಿಂದಲೇ ಅಸೆಂಬ್ಲಿಗಾಗಿ ಒಬ್ಬ ಉಮೇದವಾರನನ್ನು ಆರಿಸುವ ಹಕ್ಕುಂಟು. ಇದಕ್ಕಾಗಿ ಮೂವರು ಉಮೇದವಾರರಾದರು.

೧ ರಾವಸಾಹೇಬ ಲಾಲಾ ನಾನಕಚಂದ.

೨ ಪೋರ್ಟರ (ಹಮಾಲ)

೩ ಕಾರ್ಟಮನ್ನ (ಚಕ್ಕಡಿ ಹೊಡೆಯುವ)

೨೫ ನೆಯ ತಾರೀಖಿನ ದಿವಸ ಚುನಾವಣೆಗೆ ಪ್ರಾರಂಭವಾಯಿತು. ಮೂರು ನಾಲ್ಕು ದಿವಸ ನಡೆಯುವದು. ಬೇರೆ ಸ್ಥಳಗಳಲ್ಲಿ ಮುಸಲಮಾನರು, ಮುಸಲಮಾನೇತರರೂ ತಂತಮ್ಮ ಪ್ರತಿನಿಧಿಗಳನ್ನು ಆರಿಸುವರು. ದಿಲ್ಲಿಯಲ್ಲಿ ಎಲ್ಲರೂ ಸೇರಿ, ಒಬ್ಬನನ್ನು ಆರಿಸತಕ್ಕವರು. ಮುಸಲ್ಮಾನರು ರಾವಸಾಹೇಬರಿಗೆ ಬೆಂಬಲವಿತ್ತರು. ಹಿಂದೂ ಜನಗಳಿಗೆ ಅಥವಾ ಸಹಾನುಭೂತಿ ಕೂಡ ಇರಲಿಲ್ಲ. ಕಾಂಗ್ರೆಸದವರೇ ಪೋರ್ಟರ ಮತ್ತು ಬಂಡಿಯವನನ್ನು ನಿಲಿಸಿದ್ದರಿಂದ, ಚುನಾವಣೆಯ ಕಾಲದಲ್ಲಿ ದಂಗೆಯಾದೀತೆಂದು ಸರಕಾರದವರು ಪ್ರತಿಯೊಂದು ಪೋಲಿಂಗ ಸ್ಟೇಶನದ ಮುಂದೆ ಐವತ್ತು ಜನ ಸಶಸ್ತ್ರ ಪೋಲಿಸರ ಬಂದೋಬಸ್ತಿಗಾಗಿಟ್ಟಿದ್ದರು. ಮುಸಲಮಾನರಲ್ಲಿಯೂ ರಾಷ್ಟ್ರೀಯ ಪಕ್ಷದವರು ವೋಟು ಕೊಡಲಿಲ್ಲ. ಹಮಾಲರ ಕೂಡ ಸ್ಪರ್ಧೆಯೂ ಬೇಡ; ಅವಮಾನವೂ ಬೇಡೆಂದು ರಾವಸಾಹೇಬರು ರಾಜೀನಾಮೆ ಕೊಟ್ಟರು. ವಾಸ್ತವಿಕವಾಗಿ ಉಳಿದಿಬ್ಬರಲ್ಲೊಬ್ಬನು ರಾಜೀನಾಮೆ ಕೊಡತಕ್ಕದ್ದು. ಆದರೆ ಅವರಿಗೂ ಮೆಂಬರರಾಗುವ ಆಶೆಯುಂಟಾದ್ದರಿಂ ಅವರೊಳಗೂ ಸ್ಪರ್ಧೆ ನಡೆದಿದೆ. ಯಾವನಿಗೆ ಹೆಚ್ಚು ವೋಟುಗಳು ಬೀಳುವವೆಂಬದು ಇನ್ನಂತರ ತಿಳಿಯುವದು.

ಶ್ರೀ. ದಾತಿನಾಯಿಕರಿಗೆ ಒಂದು ವರ್ಷ ಶಿಕ್ಷೆಯಾಗಿತ್ತಷ್ಟೇ. ಇವರಿಗೆ ವಿಶೇಷ ಜಡ್ಡಾದ್ದರಿಂದ ಸರಕಾರದವರು ಇವರನ್ನು ಬಿಟ್ಟುಬಿಟ್ಟರು. ಈಗ ಇವರು ಡಾಕ್ಟರ ಕೊಳಕೂರರವರಿಂದ ಔಷಧ ತಕ್ಕೊಳ್ಳುತ್ತಿದ್ದಾರೆ.

ಮುಂಬಯಿ ಸರಕಾರಕ್ಕೆ ಒಂದು ಕೋಟಿಯ ಹಾನಿಯು.

ಕಾಯದೆಭಂಗದಿಂದ ಹಿಂದುಸ್ಥಾನದ ಸರಕಾರದ ಉತ್ಪನ್ನದ ಹುಟ್ಟುವಳಿಯು ಕಡಿಮೆಯಾಗುತ್ತಾ ನಡೆದಿದೆ. ರೇಲ್ವೆ ಕೂಡ ಅಪವಾದವಾಗಿಲ್ಲ. ರೇಲ್ವೆಯ ಹಾನಿಯು ಹೇಗಾಗುತ್ತಾ ಬಂದಿದೆಂಬದನ್ನು ಈ ಮೊದಲು ಬರೆದಿದ್ದೇವೆ; ಸದರ್ನ ಮರಾಠಾ ರೇಲ್ವೆಗೆ ಜುಲೈ ತಿಂಗಳಲ್ಲಿ ಪ್ರಯಾಣಿಕರ ಅಭಾವದಿಂದಲೇ ಐದು ಲಕ್ಷದ ಹಾನಿ ತಟ್ಟಿದೆ. ರೇಲ್ವೆಯ ವಿಚಾರವಿಂತು, ಸರಕಾರದ ಉತ್ಪನ್ನಕ್ಕೆ ಕಳೆದ ಆರು ತಿಂಗಳಲ್ಲಿ ೫೦ ಲಕ್ಷದ ಹಾನಿಬಂದಿದೆ. ಇನ್ನು ಆರು ತಿಂಗಳನಂತರ ಮಾರ್ಚದ ಕೊನೆಗೆ ಮುಗಿಯುವ ವರ್ಷಕ್ಕಂತೂ ಒಂದು ಕೋಟಿಯ ಹಾನಿಬರುವದೆಂದು ಅಂದಾಜು ಮಾಡಲ್ಪಟ್ಟಿದೆ. ಸರಕಾರವು ಈ ಹಾನಿಯನ್ನು ಸಹಿಸುವದು ಶಕ್ಯವೇ ಇಲ್ಲ. ಹೊಸದಾಗಿ ಕರಕಂದಾಯ ಕೂಡಿಸಬೇಕಾದರೆ- ಏಕಾದಶಿಯ ಮನೆಗೆ ಶಿವರಾತ್ರಿ ಹೋದಂತಾಗುವದು. ಇದನ್ನರಿತು ಸರಕಾರದಿಂದ ಗ್ರಾಂಟು ದೊರೆಯುವ ಅನೇಕ ಸಂಸ್ಥೆಗಳಿಗೆ ಖಾರ ಹತ್ತುವದೆಂದು ಹೇಳುವರು. ಸಾರ್ವಜನಿಕ ಹಿತಸಂಬಂಧವುಳ್ಳ ಸಂಸ್ಥೆಗಳಿಗೆ ಚಕ್ರ ತರುವದಕ್ಕಿಂತ ಹೆಚ್ಚಿಗೆ ತುಂಬ ಸಂಬಳ ತಿನ್ನುವ ಸಿವ್ಹಿಲ ಸರ್ವಂಟರ ಸಂಬಳವನ್ನೇಕೆ ಕಡಿಮೆ ಮಾಡಬಾರದು? ಹಿಂದುಸ್ಥಾನದಲ್ಲಿ ಈಗಿನ ಅಶಾಂತತೆಯು ಸೃಷ್ಟವಾಗಲಿಕ್ಕೆ ಇವರೇ ಮೂಲಕಾರಣರಾಗಿರುವದರಿಂದ ಇವರ ಸಂಬಳವನ್ನು ಕಡಿಮೆ ಮಾಡಿದರೇ ಇವರು ಕಣ್ಣು ತೆರೆಯುವರು.

ಹಾಯಸ್ಕೂಲಿನಲ್ಲಿ ರಾಷ್ಟ್ರೀಯ ನಿಶಾನೆ ಹಚ್ಚುವ ಹಕ್ಕಂಟು.

—(೦)—

ಅಕೋಲೆಯ ಹಾಯಸ್ಕೂಲಿನ ವಿದ್ಯಾರ್ಥಿಗಳು ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂದು ಪಂಥ ತೊಟ್ಟಿದ್ದಾರೆ. ಬಾಯುಸ್ಕೌಟರವರಿಗೆ ರಾಷ್ಟ್ರೀಯ ನಿಶಾನೆ ಹಚ್ಚಿ, ವಂದನೆ ಮಾಡಲು ಅಧಿಕಾರವುಂಟು. ಏಕೆಂದರೆ- ನಾವು ಅವರಂತೆ ರಾಷ್ಟ್ರೀಯ ಬಾಯುಸ್ಕೌಟ ಆಗುತ್ತೇವೆ. ನಮಗೂ ಅಪ್ಪಣೆ ಕೊಡಿರೆಂದು ವಿದ್ಯಾರ್ಥಿಗಳು ಅನ್ನುತ್ತಿದ್ದು, ಅದು ಸಮಂಜಸವಾಗಿತ್ತದೆ. ಈ ಬಗ್ಗೆ ಮೇಲಧಿಕಾರಿಗಳಿಗೆ ಬರೆದು ಕೇಳಬೇಕು. ಅವರೆಗೆ ಇವರು ಶಾಲೆಯ ಒಳಂಗಳದ ಬಾಗಿಲಕ್ಕೆ ಪತ್ರದ ನಿಶಾನೆ ಹಚ್ಚಿ ರಾಷ್ಟ್ರಗೀತ ಹಾಡಬೇಕೆಂದು ಹೆಡ್ಡ ಮಾಸ್ತರ ಮತ್ತು ವಿದ್ಯಾರ್ಥಿಗಳ ನಡುವೆ ತಾತ್ಕಾಲಿಕ ಒಪ್ಪಂದವಾಗಿರುತ್ತದೆ.

ಮೆಂಬರರು ಉಮೇದವಾರರಾಗಬಹುದೇ?

—(೦)—

ರತ್ನಾಗಿರಿ ಜಿಲ್ಲೆಯಲ್ಲಿ ಸ್ಕೂಲಬೋರ್ಡ ಅಡ್ಮಿನಿಸ್ಟ್ರೇಟರನನ್ನು ನೇಮಿಸುವ ವಿಷಯ ಹೊರಟಿತು. ೨೪ ಅರ್ಜಿಗಳು ಬಂದಿದ್ದವು. ಇವರಲ್ಲಿ ಮಿ. ಕುಲಕರ್ಣಿ ಎಂಬವರದೂ ಒಂದು ಅರ್ಜಿ ಇತ್ತು. ಇವರು ಸ್ಕೂಲಬೋರ್ಡಿನಲ್ಲಿ ಶಿಕ್ಷಣದ ಅಸಿಸ್ಟಂಟರೆಂದು ಮೆಂಬರರಾಗಿದ್ದಾರೆ. ಮತ್ತು ಉಮೇದವಾರರ ಚುನಾವಣೆಯ ವಿಚಾರ ನಡೆದಾಗ ಮೆಂಬರರಾಗಿ ಖುರ್ಚಿಯ ಮೇಲೆ ಕೂತಿದ್ದರು. ಬಹುಮತದಿಂದ ಇವರು ಆರಿಸಲ್ಪಟ್ಟರು. ರಾಜೀನಾಮೆ ಕೊಡದೆ ಇವರ ಅಡ್ಮಿನಿಸ್ಟ್ರೇಟರ ಅರ್ಜಿಯನ್ನು ಹಿಡಿಯಲಿಕ್ಕೆ ಬರುವದೇ ಎಂಬ ಪ್ರಶ್ನೆ ಹೊರಟಿದೆ.

ಬ್ರಾಹ್ಮಣೇತರರೂ ಬಹಿಷ್ಕಾರದ ಪಕ್ಷದಲ್ಲಿ ಸೇರಬೇಕು.

—(೦)—

ದಿವಾನ ಜಾಧವರಾಯರ ಗುರೂಪದೇಶದಿಂದ ಸಹಕಾರಿಯಾಗಿ ವಿಲಾಯತಿಗೆ ಹೋಗಿ, ಅಸಹಕಾರಿಯಾಗಿ ಮುಂಬಯಿಗೆ ಬಂದು, ಅನಂತರ ಕಾಯದೆಭಂಗದ ದೀಕ್ಷೆ ತಕ್ಕೊಂಡು ಶ್ರೀಯುತ ಶ್ರೀ. ಜಾವಳಕರರು ಮಹಾರಾಷ್ಟ್ರ ಪ್ರಾಂತದ ಕಾಯದೆಭಂಗದ ಚಳವಳಿಯನ್ನೆಬ್ಬಿಸಲು ಸಂಚಾರಕ್ಕೆ ಹೊರಟಿರುತ್ತಾರೆ. ಈ ಸಂಚಾರ ಕಾಲದಲ್ಲಿ ಎಲ್ಲ ಬ್ರಾಹ್ಮಣೇತರರೂ ಅವರ ಮುಖಂಡರೂ ಕಾಂಗ್ರೆಸದ ನಿಶಾನೆಯ ಕೆಳಗೆ ನಿಲ್ಲಬೇಕೆಂದು ಇವರು ಸಾರಿ ಸಾರಿ ಹೇಳುತ್ತಾರೆ.

ಶಿಷ್ಟಾಯಿಯ ಸಂಭಾಷಣೆ ಮುಗಿಯಿತು.

* * *

ಲಾರ್ಡ ಇರ್ವಿನಸಾಹೇಬರಿಗೂ, ಬ್ಯಾರಿಸ್ಟರ ಜಯಕರ, ಸರ ಸಪ್ರುಸಾಹೇಬರಿಗೂ ನಡೆದ ಶಿಷ್ಟಾಯಿಯ ಸಂಭಾಷಣೆ ಮುಗಿಯಿತು. ಇನ್ನೂ ಯಾವ ನಿರ್ಣಯವಾಗಲಿಲ್ಲ. ಲಾರ್ಡಸಾಹೇಬರು ಬ್ಯಾರಿಸ್ಟರ ಜಯಕರರಿಗೆ ಪತ್ರ ಬರೆದು ತಮ್ಮ ಮನೋಗತ ತಿಳಿಸುವರು. ಬಹುಶಃ ಇದು ವ್ಯರ್ಥ ಶಿಷ್ಟಾಯಿಯಾಗುವದೆಂದು ತರ್ಕ ಮಾಡುವಂತಾಗಿದೆ.

ಗುಣವಾಯ್ತು.

ಪಂಡಿತ ಮೋತಿಲಾಲರ ಜಡ್ಡು ಸುಸ್ತು ಗುಣಮುಖಕ್ಕೆ ಬಿದ್ದಿದೆ. ಇವರನ್ನು ಬಂಧಮುಕ್ತ ಮಾಡುವಂತೆ ಸರಕಾರದಲ್ಲಿ ವಿಚಾರ ನಡೆದಂತೆ ದಿಲ್ಲಿ ವರ್ತಮಾನವುಂಟು.

ದಿಲ್ಲಿಯಲ್ಲಿ ದೊಡ್ಡವರ ದಸ್ತಗಿರಿ.

ಪಂಡಿತ ಮಾಲವೀಯ, ಡಾಕ್ಟರ ಅನಸಾರಿ ಅಧ್ಯಕ್ಷ ಪಟೇಲರ ದಸ್ತಗಿರಿ.

ಡಾಕ್ಟರ ಅನಸಾರಿಯವರು ಕಾಂಗ್ರೆಸದ ಅಧ್ಯಕ್ಷರಾದ ಕೂಡಲೆ, ಕಾಂಗ್ರೆಸದ ವರ್ಕಿಂಗ ಕಮೀಟಿಯು ೩೦ನೆಯ ತಾರೀಖಿನ ದಿವಸ ದಿಲ್ಲಿಯಲ್ಲಿ ಸೇರಬೇಕೆಂದು ಗೊತ್ತಾಯಿತು. ದಿಲ್ಲಿಯಲ್ಲಿ ಕಮೀಟಿ ಕೂಡುವದೆಂಬ ವರ್ತಮಾನವಾದ ಕೂಡಲೆ, ಅಲ್ಲಿಯ ಪೋಲೀಸ ಕಮೀಶನರರು ಇದು ಬೇಕಾಯದೆಶೀರವೆಂದು ಜಾಹೀರವಾಗಿ ತಿಳಿಸಿದರು. ಆದರೂ ಇವರು ಕಾಯದೆಭಂಗ ಮಾಡಲು ಸಜ್ಜಾದರು. ಹುಕೂಮು ಮುರಿದು ಕಮೀಟಿ ಕೂಡಿಸಿದರು. ಕೂಡಲೆ- ಮೇಲಿನ ಮೂವರನ್ನು ಪೋಲೀಸರು ದಸ್ತಗಿರಿ ಮಾಡಿದಂತೆ ತಾರಿನ ವರ್ತಮಾನ ಬಂದಿರುತ್ತದೆ.

ಪೋಲಿಸ ಸ್ಟೇಶನದ ಮೇಲೆ ಬಾಂಬು.

—(೦)—

ಕಲಕತ್ತೆಯಲ್ಲಿ ಪೋಲಿಸ ಕಮೀಶನರರ ಮೇಲೆ ಬಾಂಬು ಒಗೆದನಂತರ ಜೋಡಾಬಾಗದ ಪೋಲಿಸ ಸ್ಟೇಶನದ ಮೇಲೆ ಬಾಂಬು ಒಗೆದರು. ಒಳಗಿನವರಿಗೇನೂ ಅಪಾಯವಾಗಲಿಲ್ಲ. ಬಾಂಬು ಒಗೆದವನ ಕೈಕಾಲು ಕುಸು ಸುಟ್ಟಿರುತ್ತವೆ. ಹೊರಗಿದ್ದ ಭಿಕ್ಷುಕರಿಗೆ ಕುಸು ಘಾಯವಾಗಿರುವದು.

ವಿವಿಧ ವರ್ತಮಾನಗಳು.

—(*)—

ಬಾರಿಸಾಲ ಸುರಂಗದಲ್ಲಿಯ ೩೨ ರಾಜಕೀಯ ಕೈದಿಗಳು ಸುರಂಗದ ಅರಿವೆ ತೊಡಲಿಕ್ಕೆ ಒಪ್ಪದ್ದರಿಂದ, ಇವರಿಗೆ ಬೇಡಿ ಹಾಕಿ, ಸ್ವತಂತ್ರ ಕೋಣೆಗಳಲ್ಲಿಟ್ಟಿದ್ದಾರೆ.

ಲಾಹೋರಿನಲ್ಲಿ ಬ್ಯಾರಿಸ್ಟರ ಧುನಿಚಂದರಿಗೆ ಎರಡು ತಿಂಗಳ ಶಿಕ್ಷೆಯಾಯಿತು; ಇವರು ಯುದ್ಧಮಂಡಲದ ಡಿರೆಕ್ಟರರು.

ಲಾಹೋರಿನ ಪರದೇಶಿ ಬಟ್ಟೆಗಳ ವ್ಯಾಪಾರಸ್ಥರು ತಮ್ಮಲ್ಲಿಂದ ಅರಿವೆಗಳ ಗಂಟುಕಟ್ಟಿ, ಅವಕ್ಕೆ ಕಾಂಗ್ರೆಸದ ಮೋಹರು ಮಾಡಿಸಲಾರಂಭಿಸಿದ್ದಾರೆ. ಒಬ್ಬರೂ ಇದಕ್ಕೆ ಪ್ರತಿಕೂಲರಾಗಿರುವದಿಲ್ಲ.

ಕಲಕತ್ತೆಯಲ್ಲಿ ಪೋಲಿಸ ಕಮೀಶನರಸಾಹೇಬರ ಮೇಲೆ ಬಾಂಬು ಒಗೆದವರು

ಶಿಗ್ಗಾವಿಯಲ್ಲಿ ಶ್ರೀ. ಚಂಗಳಕವ್ವನ ಆನೆಯ ತಲೆಯ ಮೇಲೆ
ಮತ್ತು
ಕನ್ನಡ ಶಾಲೆಯ ಮೇಲೆ ರಾಷ್ಟ್ರಧ್ವಜವು.

ಮೊನ್ನೆ ಸೋಮವಾರ ತಾ|| ೨೫-೮-೩೦ ದಿವಸ ಶಾಲೆಯ ಹುಡುಗರೆಲ್ಲರೂ ಕೂಡಿ ಮುಂಜಾನೆ ೭ ಘಂಟೆಗೆ ರಾಷ್ಟ್ರಧ್ವಜ ಮತ್ತು ಮಹಾತ್ಮರ ಭಾವಚಿತ್ರದ ಮೆರವಣಿಗೆಯನ್ನು ತೆಗೆದು ೮ ಘಂಟೆಗೆ ಶಾಲೆಗೆ ಹೋದರು. ಕೂಡಲೇ ವ್ಯವಸ್ಥೆಯನ್ನು ಮಾಡಿದ ಪ್ರಕಾರ ಶಾಲೆಯ ಪಟಾಂಗಣದಲ್ಲಿ ಮುಂದಿನ ಕಾರ್ಯಕ್ರಮವನ್ನು ಪ್ರಾರಂಭಿಸಬೇಕೆನ್ನುವಷ್ಟರಲ್ಲಿ ಮುಖ್ಯಾಧ್ಯಾಪಕರು ವಿದ್ಯಾರ್ಥಿಗಳನ್ನುದ್ದೇಶಿಸಿ ನೀವು ಈ ಹೊತ್ತು ರಾಷ್ಟ್ರಧ್ವಜ ನಿಲ್ಲಿಸಬೇಡಿರಿ ನಾವು ಆ ವಿಷಯವಾಗಿ ಮೇಲೆ ತಿಳಿಸಿದ್ದೇವೆ; ಉತ್ತರ ಬಂದ ನಂತರ ಈ ಕಾರ್ಯ ಮಾಡಿರೆಂದದ್ದಕ್ಕೆ ಆದರೆ ವಿದ್ಯಾರ್ಥಿಗಳು ಪ್ರಾತಃಕಾಲದಲ್ಲಿ ಪೂಜಿಸಿದ ರಾಷ್ಟ್ರಧ್ವಜ ಮತ್ತು ಮಹಾತ್ಮರ ಭಾವಚಿತ್ರವನ್ನು ತಿರುಗಿ ಒಯ್ಯುವದಿಲ್ಲೆಂದು ಸ್ಪಷ್ಟವಾಗಿ ಹೇಳಿದರು, ಮತ್ತು ಅವರು ಎಷ್ಟೇ ಹೆದರಿಸಿದರೂ ನಾವು ಒಂದು ಎಡರುಗಳಿಗೆ ಹಿಂಜರಿಯದೇ ಎದೆಗೊಟ್ಟು ನಿಲ್ಲುತ್ತೇವೆಂದು ವಚನ ಕೊಟ್ಟು ಮುಖ್ಯಾಧ್ಯಾಪಕರಿಗೆ ಅವರ ಹೇಳಿಕೆಯ ಪ್ರಕಾರ ಸಹಿಗಳನ್ನು ಕೊಟ್ಟರು. ನಿಮ್ಮಲ್ಲಿ ಯಾರು ಪ್ರಮುಖರೆಂದು ಕೇಳಿದರೆ ಎಲ್ಲರೂ ಈ ವಿಷಯದಲ್ಲಿ ಪ್ರಮುಖರೆಂದುತ್ತರ ಕೊಟ್ಟರು. ಕಡೆಗೆ ರಾಷ್ಟ್ರೀಯ ಪದ್ಧತಿಗನುಸಾರವಾಗಿ ಶಾಂತ ಮತ್ತು ಶಿಸ್ತಿನಿಂದ ರಾಷ್ಟ್ರಧ್ವಜವನ್ನು ನಿಲ್ಲಿಸಿ ಎಲ್ಲ ವರ್ಗಗಳಲ್ಲಿ ಮಹಾತ್ಮರ ಭಾವಚಿತ್ರವಿಟ್ಟು ಜಯಘೋಷ ಮುಗಿದ ನಂತರ ಪಟಾಂಗಣದಲ್ಲಿ ಶ್ರೀ ಮಾಧವರಾವ ಪರಸೇಟಿಯವರು ವಿದ್ಯಾರ್ಥಿಗಳನ್ನುದ್ದೇಶಿಸಿ ನೀವು ರಾಷ್ಟ್ರಧ್ವಜದ ಕಾರ್ಯವನ್ನು ಈಗ ನೀವು ಶಾಂತತೆಯಿಂದ ಮುಗಿಸಿದಿರಿ. ಆದರೆ ಇನ್ನು ಮುಂದೆ ರಾಷ್ಟ್ರಮಾತೆಯ ಮಾನ ಕಾಯುವ ಭಾರವು ನಿಮ್ಮ ಮೇಲಿದ್ದು ಎಷ್ಟೇ ಸಂಕಟಗಳು ಬಂದರೂ ಅವುಗಳಿಗೆ ಎದೆಗೊಟ್ಟು ನಿಂತು ಕೀರ್ತಿಯನ್ನು ಸಂಪಾದಿಸಬೇಕೆಂದು ಉಪದೇಶ ಮಾಡಿದರು. ಭಾಷಣವಾದ ಕೂಡಲೇ ಜಯಘೋಷದೊಡನೆ ಕಾರ್ಯಕ್ರಮ ಮುಗಿಯಿತು. ಈ ಜಿಲ್ಲೆಯಲ್ಲಿ ಈ ಕಾರ್ಯ ಮಾಡಿದ ಮೊದಲನೇ ಶಾಲೆಯೆಂದು ತಿಳಿಸಲು ತುಂಬಾ ಅಭಿಮಾನವೆನಿಸುತ್ತದೆ. ಉಳಿದ ಶಾಲೆಯವರು ಇದರ ಅನುಕರಣೆ ಮಾಡಬೇಕಾಗಿ ಬೇಡಿಕೆ.

ಶಿವನಗೌಡಾ ದೊಡ್ಡಮನಿ
ಶಿಗ್ಗಾವಿ.

ಅಂದೇ ಸಾಯಂಕಾಲ ಈ ಊರಲ್ಲಿ ಚಂಗಳಕವ್ವನಿಗೆಂದು ಕಟ್ಟಿದ ಆನೆಯ ಮೇಲೆ "ರಾಷ್ಟ್ರಧ್ವಜವು" ಆನಂದದಿಂದ ಹಾರಾಡುತ್ತಲಿದ್ದಿತು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟು ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವಕ್ಕಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಬಿ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ವ ಬಿಚಿ ಜೋಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯ್ವಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಮುಂಬಯಿ ಮದ್ರಾಸಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವದು ಈ ಪಟ್ಟದ ಅಡಚಣೆಯನ್ನು ತಪ್ಪಿಸಿಕೊಟ್ಟು ಡ್ರಾಯ್ವಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡ್ಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ನಕಾಶೆ ಸಹಿತ
ಉರ್ದು ಧಾರವಾಡ ಜಿಲ್ಲೆಯ ಭೂಗೋಲು
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳುತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಲಾ ನಂಬರ ೧. ಗದಗ ಬೆಟಗೇರಿ

ಜಾಹೀರ ನೋಟೀಸು-
ಇಮಾರತಿ ಕಟ್ಟಿಗೆಗಳ ವಖಾರ

[illegible] ಜನರಿಗೆ ತಿಳಿಸುವದೇನಂದರೆ–

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ಕಟ್ಟಿಗೆಗಳು ಮತ್ತಿ ವ ಹೊನ್ನಿ ಹೆದ್ದಿ ವ [illegible] ನಾಟುಗಳು

ಸಾಗವಾನಿ [illegible] ವ ಸಾಗವಾನಿ (೭) ಫೂಟಿನ [illegible]

ಸಾಗವಾನಿ [illegible] ಹಲಗಿಗಳು ವ ಜಂತಿ [illegible] ತಯಾರಿ ಸಿಗುತ್ತವೆ

[illegible] ಬೇಕಾದವರು ತಮ್ಮ [illegible] ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು [illegible] ಕೆಲಸ ಮಾಡುವವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಣಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಮೈಸೂರು ಊದುಬತ್ತಿ

ಹಚ್ಚ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೩—೦—೦
ಕೃಷ್ಣಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦
೧೯–೧೧–೨೯ ಮೈಸೂರಸ್ಟೋರ್ಸ,
ಬೆಳಗಾಮಿಯವರಗಲ್ಲಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ ಬೆಲೆ ಅರ್ಧ ಆಣೆ

ವಿಜಯ

ಸಂಪಾದಕರು:- ಆನಂದಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೩೦ ನೇ ಅಗಸ್ಟ ೧೯೩೦ (ಸಂಚಿಕೆ ೮೯

ಮುಂಬಯಿ ಕಾಯದೆ ಕೌನ್ಸಿಲ್ ಚುನಾವಣೆ.

ಧಾರವಾಡ ಜಿಲ್ಲಾ ಬಿನ್ನ ಮುಸಲ್ಮಾನ ಮತದಾರರಿಗೆ ವಿನಂತಿ.

ಮಹನೀಯರೇ,

[illegible] ಬರುವ ೧೦ನೇ ಸಪ್ಟಂಬರದಲ್ಲಿ ಆಗುವ ಮುಂಬಯಿ ಕಾಯದೆ ಕೌನ್ಸಿಲ್ [illegible] ಉಮೇದವಾರನೆಂದು ನಿಂತಿದ್ದೇನೆ. ತಾವು ನನಗೆ ಎರಡು ಸಾರೆ ಆರಿಸಿ [illegible] ಕೊಟ್ಟಿರುವಿರಿ. ನಾನು ಕೌನ್ಸಿಲದಲ್ಲಿ [illegible] ವಿರೋಧ, [illegible] ೧೦೦ ರೂಪಾಯಿ ಬಾಬತಿನ [illegible] ವಂಥ [illegible] ರೂಪಾಯಿ [illegible] ದಿದ ಜಮೀ[illegible] ಹೊಸ ಕಾಯದೇದ ಪ್ರತಿಬಂಧಕ ನಿಯಮಗಳನ್ನು [illegible] ದು [illegible] ನಿಮಗೆ ಗೊತ್ತೇ ಇದೆ. ಇದರ ಜೊತೆಗೆ [illegible] ನೆಕ್ಸ್ಟ [illegible] ಅನೇಕ ಜನ ಹಿತದ ಕೆಲಸಗಳ ಬಗ್ಗೆ ವಿಶೇಷ ಪ್ರ[illegible] ಪಟ್ಟಿರುವೆನು. ಕೌನ್ಸಿಲಿನ ಹೊರಗಾದರೂ ಅನೇಕ ಲೋಕ ಹಿತದ ಕೆಲಸಗಳನ್ನು ಮಾಡಿರುವೆನು. ಚುನಾವಣೆಯು ಸಮೀಪಿಸಿದ್ದರಿಂದ ಪ್ರತಿಒಬ್ಬರಿಗೆ ವ್ಯಕ್ತಿಶಃ ಭೆಟ್ಟಿಯಾಗಿ ಅಥವಾ ಪತ್ರಿಯಿಂದಾ ತಿಳಿಸುವದು ಅಶಕ್ಯ ಕಾರಣ ಈ ಜಾಹೀರ ಪತ್ರಿಕೆಯಿಂದ ವಿನಂತಿ ಮಾಡಿಕೊಂಡಿರುವೆನು. ತಾವೆಲ್ಲರು ಪುನಃ ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ಆರಿಸಿಕೊಟ್ಟರೆ ಜನಹಿತದ ಕಾರ್ಯಗಳನ್ನು ಮಾಡಲಿಕ್ಕೆ



ಉತ್ಸಾಹದಿಂದ ಪ್ರಯತ್ನ ಮಾಡುವೆನು. ನನ್ನ ಚಿನ್ಹ ಮನುಷ್ಯ. ಹೋಟಿನ ಪೇಪರದಲ್ಲಿ ಬಗಲಿಗೆ ತೋರಿಸಿದಂತೆ ಇದೆ. ಅದರ ಮುಂದೆ (× ×) ಈ ಪ್ರಕಾರ ಎರಡು ಗುರ್ತು ಮಾಡಬೇಕು.

ಧಾರವಾಡ
೨೬-೮-೩೦

ತಮ್ಮ ಸೇವಕ
ವಿಶ್ವನಾಥ ನಾರಾಯಣ ಜೋಗ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲು ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಬಹುದಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಆಧಾಣೆ. ಥೋಕ ಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಪ್ರೊ. ಲಕ್ಷ್ಮೀವೆಂಕಟೇಶ ಸ್ಟೋರ್ಸ್, ಮಾರ್ಕೆಟ ರೋಡ, ಧಾರವಾಡ.

WANTED

WANTED:- Agents and Sub-Agents for [illegible] Towns to push on a Co-operative Loan scheme on commission basis, on liberal terms. Only reliable people need apply to

C. M. Karaka.
Chief Representative
Dharwar.

For METROPOLITAN MUTUAL
BANKING & ASSURANCE CO., LTD.
BOMBAY.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೋಸಾಯಟೀಜು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಿಯು ಎಂಟು ಲಕ್ಷದ ಮೇಲುಂಟು. ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠಾವಿ ಮತ್ತು ಬೇರೆ ಠೇವಣೆಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜ[illegible].
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಭಾದ್ರಪದ ಶುದ್ಧ ೬

ದುಡ್ಡೇ ದೊಡ್ಡಪ್ಪ.

ದುಡ್ಡೇ ದೊಡ್ಡಪ್ಪನೆಂದು ಬಾಯಿತೆರೆಯುವ ಪ್ರಸಂಗವು ಬಡವರಿಗೆ ನಿಶ್ಚಯ ಸಾವಾಗಿರುತ್ತದೆ. ಖರ್ವ ನಿಖರ್ವ ಸಂಖ್ಯೆಯಿಂದ ನೀರಿನಂತೆ ದ್ರವ್ಯ ವ್ಯಯ ಮಾಡಿ, ಜರ್ಮನಿಯಂಥ ಬಲಾಢ್ಯ ದೇಶವನ್ನು ಸೋಲಿಸಿದಂಥ ಇಂಗ್ಲಿಷ ಸರಕಾರಕ್ಕೆ ದುಡ್ಡಿನ ದೆಸೆಯಿಂದ ಬಾಯಿ ತೆರೆಯುವ ಸಮಯವು ಬಂದ ವರ್ತಮಾನ ಕೇಳಿ ವಾಚಕರಿಗೆ ಆಶ್ಚರ್ಯವೆನಿಸದಿರಲಾರದು. ಇಂಗ್ಲಂಡದಲ್ಲಿ ವ್ಯಾಪಾರದ ಮಂದಿ ಮತ್ತು ಹಿಂದುಸ್ಥಾನದ ಕಾಯದೆಭಂಗದ ದೆಸೆಯಿಂದ ವ್ಯಾಪಾರ ಉದ್ದಿಮೆ ಕಡಿಮೆಯಾಗಿ, ಇಪ್ಪತ್ತು ಲಕ್ಷ ಜನರು ನಿರುದ್ಯೋಗಿಯಾಗಿದ್ದಾರೆ. ಹಿಂದುಸ್ಥಾನದ ಬಹಿಷ್ಕಾರ ಪ್ರಬಲವಾದಂತೆ ಅಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚುವದು.

ಹಿಂದುಸ್ಥಾನದಲ್ಲಿ ಆರು ಕೋಟಿ ಜನರು ಒಂದೂಟ, ಒಂದುಪವಾಸವಾಗಿ ಕಾಲಕಳೆಯುತ್ತಾರೆಂದು ಅರ್ಥಶಾಸ್ತ್ರಜ್ಞರು ಹೇಳುತ್ತಲಿದ್ದಾರೆ. ಅದಕ್ಕೆ ಕಾಯದೆಭಂಗವು ಮತ್ತಿಷ್ಟು ಭರೀ ಹಾಕಿದೆ. ಎಷ್ಟು ಜನ ಕೂಲಿಕಾರರು ನಿರುದ್ಯೋಗಿಯಾಗಿದ್ದಾರೆಂದು ಹೇಳಲಿಕ್ಕೆ ಬರುವದಿಲ್ಲ. ಏಕೆಂದರೆ- ವಿಲಾಯತಿಯವರಂತೆ ಹಿಂದುಸ್ಥಾನ ಸರಕಾರದವರು ಲೆಕ್ಕವಿಟ್ಟು, ವಾಚನಾರ್ಥಕ್ಕೆ ಈ ಅಂಕಿಯನ್ನು ಪ್ರಸಿದ್ಧ ಮಾಡುವದಿಲ್ಲ. ಮುಂಬಯಿಯ ಗಿರಣಿಗಳ ಕೆಲಸಗಾರರ ಸಂಖ್ಯೆಮಾತ್ರ ತಿಳಿದಿದೆ: ಈಗ ೫೦ ಸಾವಿರ ಜನರು ಮನೆ ಹಿಡಿದು ಕೂತಿದ್ದು, ಸಪ್ಟಂಬರ ತಿಂಗಳ ಮೊದಲನೆಯ ವಾರದಲ್ಲಿ ಈ ಸಂಖ್ಯೆಯು ಎಂಭತ್ತು ಸಾವಿರವಾಗುವದು. ಮುಂದೆ ಲಕ್ಷಕ್ಕೆ ಹೋಗಬಹುದು. ವಿಲಾಯತಿಯ ನೂಲು, ವಿಲಾಯತಿಯ ಬಂಡವಲಕ್ಕಾಗಿ ದುಡಿಯುವ ಗಿರಣಿಗಳಿದ್ದು, ಇವುಗಳ ಬಟ್ಟೆಗಳಿಗೆ ಬಹಿಷ್ಕಾರ ಹಾಕಿದ್ದರಿಂದ ಲಕ್ಷ ಜನರು ಅನ್ನಾನುಗತಿಕರಾಗಬೇಕಾಗಿದೆ. ಅಕಂಸರ ಮಹಾ ಪ್ರಸಾದವೇ ಸರಿ.

ವ್ಯಾಪಾರದ ಮಂದಿಯ ದೆಸೆಯಿಂದ ಮತ್ತು ಹುಂಡಿ, ವಸಗಾವಲದ ಉಪ್ಪು ಮುಂತಾದವುಗಳ ಹುಟ್ಟುವಳಿಯು ಕಡಿಮೆಯಾದ್ದರಿಂದ ಹಿಂದುಸ್ಥಾನ ಸರಕಾರಕ್ಕೂ, ಇಲಾಖೆ ಸರಕಾರಗಳಿಗೂ ದುಡ್ಡಿನ ಕಟಿಪಿಟಿಯಾಗಿ, ಅಂದಾಜ ಪತ್ರಿಕೆಯನ್ನು ಹೇಗೆ ಭಾಯಿಗೂಡಿಸಬೇಕೆಂಬ ದೊಡ್ಡ ಚಿಂತೆಯುತ್ಪನ್ನವಾಗಿದೆ. ಕಳೆದ ನೂರಿನ್ನೂರು ವರ್ಷಗಳಲ್ಲಿ ಇಂಗ್ಲಿಷ ಜನರು ನಾನಾರೀತಿಗಳಿಂದ ಪದ್ಮಪರಾರ್ಧವೆನಿಸುವಷ್ಟು ಸಂಪತ್ತನ್ನು ಈ ದೇಶದಿಂದ ಸ್ವದೇಶಕ್ಕೆ ಒಯ್ದಿದ್ದಾರೆ. ಅದರಲ್ಲಿ ಸದ್ಯ ಒಂದು ಖರ್ವ ರೂಪಾಯಿಗಳನ್ನು ಮರಳಿ ಹಿಂದುಸ್ಥಾನಕ್ಕೆ ಪ್ರತ್ಯುಪಕಾರವಾಗಿ ಕೊಟ್ಟರೂ, ಈಗಿನ ಅಡಚಣೆ ಹೋಗುವದು. ನೆಂಟರು ನಿಜ; ಗಂಟಿಗೆ ಕೈಹಾಕಬೇಡಿರೆಂಬ ಕಿವಿಮಾತನ್ನು ಇವರೆಂದಿಗೂ ಮರೆಯತಕ್ಕವರಲ್ಲ.

ಬಹಿಷ್ಕಾರದ ಮೂಲಕ ಮುಂಬಯಿ ಗಿರಣಿಗಳ ಶೇರುಗಳು ದಿವಾಳಿಗೆ ಬರುವತನಕ ಇಳಿದಿರುತ್ತವೆ. ಈ ನಂತರ ಶೇರಬಾಜಾರವನ್ನು ತೆರವಿಟ್ಟು, ಶೇರುಗಳ ಮಾರಾಟ ಮಾಡಿದರೆ- ಅವು ಬಳ್ಳೊಳ್ಳಿಯ ಬೆಲೆಗೆ ಕೂಡ ಮಾರಲಾರವೆಂದು ಖಂಡಿತವಾದುದರಿಂದ, ವರ್ತಕರು ಶೇರಬಾಜಾರದ ತಲೆ ಬಾಗಿಲಕ್ಕೆ ಕೀಲಿ ಹಾಕಿಬಿಟ್ಟರು. ಮುಂಬಯಿಯಂತೆ ಕಲಕತ್ತೆಯಲ್ಲಿ ಸಣಬಿನ ಬೆಲೆಯು ಭಯಂಕರವಾಗಿಳಿದಿದ್ದು, ಸಾವಿರಾರು ಜನರು ದಿವಾಳಿ ಹೊಂದುವ ಹೊತ್ತು ಬಂದಿದೆ. ಇದೆಲ್ಲ ಅನರ್ಥಕ್ಕೆ ಇಂಗ್ಲಿಷ ಸರಕಾರದವರು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡದ್ದೇ ಕಾರಣವಾಗಿರುತ್ತದೆ. ಲಾರ್ಡ ಆಯರ್ವಿನಸಾಹೇಬರು ಬ್ಯಾರಿಸ್ಟರ ಜಯಕರರಿಗೆ ಸಮಾಧಾನವೆನಿಸುವಂಥ ಉತ್ತರ ಕೊಡದಿದ್ದರೆ- ದೇಶದ ಸ್ಥಿತಿಯು ಅತ್ಯಂತ ಭಯಪ್ರದವಾಗಿ ಲಕ್ಷಾವಧಿ ಕುಟುಂಬಗಳಿಗೆ ಹೊಟ್ಟೆಯ ದೊಡ್ಡ ಚಿಂತೆಯುತ್ಪನ್ನವಾಗುವದುಂಟು. ದೇಶದಲ್ಲಿ ಧಾನ್ಯ ಬೆಳೆದರೂ, ವ್ಯಾಪಾರ, ಉದ್ಯೋಗ, ಕಾರಖಾನೆಗಳಲ್ಲಿ ಶೇರರೂಪದಿಂದ ದ್ರವ್ಯ ಹಾಕಿದವರಿಗೆ ಪ್ರತ್ಯಕ್ಷ ಡವಗೀ ಬರವೇ ಬಂದಂತಾಗುವದು.

ಒಬ್ಬನ ಬದಲಿ ಮತ್ತೊಬ್ಬನಿಗೆ ಶಿಕ್ಷೆ

—೦*೦—

ರಾಮಭಟ್ಟನಾದರೇನು? ಕೃಷ್ಣಭಟ್ಟನಾದರೇನು!

—(೦)—

ಮುಂಬಯಿ ಹತ್ತಿರಿರುವ ಉರಣದಲ್ಲಿ ಗೋಪಿನಾಥನೆಂಬವನು ಬೇಕಾಗಿತ್ತು. ಪೋಲಿಸರು ಆತನ ಬದಲಿ ಅನಂತ ಶಿವಾಜಿ ದೇಸಾಯಿ ಎಂಬವನನ್ನು ಹಿಡಿದು, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಅನಂತನು ಅಸಹಕಾರಿಯಾದ್ದರಿಂದ, ವಿಚಾರಣೆಯಲ್ಲಿ ಭಾಗ ತೆಕ್ಕೊಳ್ಳಲಿಲ್ಲ. ಮ್ಯಾಜಿಸ್ಟ್ರೇಟರು ಹಿಂದುಮುಂದಿನ ವಿಚಾರವಿಲ್ಲದೆ, ಇವನಿಗೆ ಶಿಕ್ಷೆ ಕೊಟ್ಟರು.

ಎಷ್ಟು ಕಷ್ಟಪಟ್ಟರೇನು? ಹೊಟ್ಟೆ ತುಂಬಲಿಲ್ಲ.

—(೦)—

ಎಷ್ಟು ಕಷ್ಟಪಟ್ಟರೂ ಹೊಟ್ಟೆ ತುಂಬಲಿಲ್ಲೆಂಬ ದಾಸರ ಪದವುಂಟು. ಈ ಹಾಡು ಇಂಗ್ರೇಜಿ ಸರಕಾರಕ್ಕೆ ಹಿಂದುಸ್ಥಾನದ ಕುಂಟ ಕೆಂದಿಯ ಸವಾಲಿನಲ್ಲಿ ಅನುಭವಕ್ಕೆ ಬಂದಿದೆ. ಇವುಗಳ ಕೃತ್ಯಗಳಲ್ಲಿ ಯಶ ಬರಬೇಕೆಂದು ನಾನಾಪ್ರಕಾರದ ಯುಕ್ತಿಗಳನ್ನು ಮಾಡಿದರು ಅವೆಲ್ಲ ಹಾಳು ಹಂಚಾದವು. ಅಕೋಲೆಯಲ್ಲಿ ನಡೆದ ಹಂಚಿಕೆಯೂ ಇದೇ ಪಲ್ಲವಿ ಹೇಳಿತು. ಪ್ರತಿಯೊಂದು ತಾಲೂಕಿನ ಮಾಮಲೇದಾರರು ಸವಾಲಗಾರರನ್ನು ಮೋಟಾರಿನಲ್ಲಿ ಕೂಡ್ರಿಸಿಕೊಂಡು, ಬೆಳಗಾಗುವದರೊಳಗೆ ಅಕೋಲೆಗೆ ಬಂದು, ಅವರನ್ನು ಕಲೆಕ್ಟರರ ಕಚೇರಿಯಲ್ಲಿ ಸೇರಿಸಿದರು. ಕಾಂಗ್ರೆಸದವರೇನು ಹುಚ್ಚರಲ್ಲ; ಅವರಿಗೆ ವಾಯುಮಾರ್ಗದಿಂದ ಸುದ್ದಿ ತಿಳಿಯುತ್ತಿರುವದು. ಬೆಳಗಾಗುವದರೊಳಗೆ ಮುನ್ನೂರು ಸ್ತ್ರೀಪುರುಷರು ಪಿಕೆಟಿಂಗ ಮಾಡಲು ಕಚೇರಿಯ ಸುತ್ತಲು ಸಿದ್ಧರಾಗಿದ್ದರು. ಇವರನ್ನು ಕಂಡು ಅಧಿಕಾರಿಗಳೂ ಸವಾಲಗಾರರೂ ಬೆರಗಾದರು. ಸವಾಲ ಮಾಡುವವರಿಗೂ ಆಶ್ಚರ್ಯವಾಯಿತು. ಅಂತೂ ಇಂತೂ ಸವಾಲಾಯಿತು. ಹೋದ ವರ್ಷಕ್ಕಿಂತ ಅರ್ಧಕ್ಕೆ [illegible] ನಿಂತಿತು. ಲಕ್ಷಕ್ಕೆ ಲಕ್ಷ ಹಾನಿಯು !!

ತರುಣರೇ! ಪ್ರಕೃತದ ಶಾಂತಿಯುದ್ಧದಲ್ಲಿ ಧುಮುಕಿರಿ,

—(೦)—

ಕಲಕತ್ತೆಯ ಸುಪ್ರಸಿದ್ಧ ಖಾದೀ ಭಕ್ತರೂ, ಸ್ವದೇಶಿಯೂ ಆದ ಸರದೇಯವರು ಮುಂಬಯಿಗೆ ಸ್ವದೇಶಿ ಭಾಂಡಾರವನ್ನು ತೆರೆಯುವದಕ್ಕೆ ಬಂದಿದ್ದಾರೆ. ಇವರು ಕೇವಲ ವಿದ್ಯಾರ್ಥಿಗಳನ್ನೇ ಉದ್ದೇಶಿಸಿ ಒಂದು ವ್ಯಾಖ್ಯಾನ ಕೊಟ್ಟರು. ಅವರು ಅಂದದ್ದೇನಂದರೆ-

ಎಲೈ ವಿದ್ಯಾರ್ಥಿಗಳೇ- ನೀವು ಪ್ರಕೃತದ ಶಾಂತಿಮಯ ಯುದ್ಧದಲ್ಲಿ ಧುಮುಕಲು ಹಿಂದುಮುಂದೆ ನೋಡಬೇಡಿರಿ. ಇದು ಮೀನಮೇಷವಾಡುವ ಕಾಲವಲ್ಲ. ತರ್ಕವಿತರ್ಕ ಮಾಡುತ್ತಾ ಕೂಡ್ರುವ ಸಮಯವಲ್ಲ. ಚೀನ ಮತ್ತು ತುರ್ಕಸ್ಥಾನದ ತರುಣರು ಸ್ವದೇಶಸ್ವಾತಂತ್ರ್ಯಕ್ಕಾಗಿ ಮಾಡಿದ ಸ್ವಾರ್ಥತ್ಯಾಗವನ್ನು ಧ್ಯಾನಕ್ಕೆ ತನ್ನಿರಿ. ಚೀನದಲ್ಲಿ ಕ್ರಾಂತಿಯನ್ನು ಮಾಡಿದವರೆಲ್ಲರೂ ಮೂವತ್ತು ವರ್ಷದೊಳಗಿನವರಾಗಿದ್ದರು. ತುರುಕ ತರುಣರು ಕೆಮಾಲ ಪಾಶ್ಶಾನಿಗೆ ಸಹಾಯ ಮಾಡಿದರಿಂದಲೇ, ಆ ರಾಜ್ಯದಲ್ಲಿ ಹೊಸ ಶಕದ ಪ್ರಾರಂಭವಾಯಿತು. ನೀವು

ಸಾಮಾಜಿಕ ಬಂಧನಗಳನ್ನು ಕಿತ್ತು ಹಾಕಿರಿ. ಜಾತಿ ಉಪಜಾತಿ ಎಂಬ ಭಾವ ಮರೆಯಿರಿ. ಒಟ್ಟಾಗಿ ದೇಶಕಾರ್ಯ ಮಾಡಲು ಮುಂದಾಗಿರಿ. ೧೪ ವರ್ಷದವರು ವಾನರ ಸೇನೆಯಲ್ಲಿ ಸೇರಿರಿ. ಪ್ರಬುದ್ಧರಾದವರು ಕಾಂಗ್ರೆಸ ಅಥವಾ ಹಿಂದುಸ್ಥಾನೀ ಸೇವಾದಲದ ಸ್ವಯಂಸೇವಕರಾಗಿರಿ. ನಿಮಗೆ ಯೋಗ್ಯ ಶಿಕ್ಷಣ ದೊರೆತರೆ- ವಿಲಾಯತಿಯ ಸೈನಿಕರನ್ನು ಸರಿಗಟ್ಟುವಿರೆಂಬದನ್ನು ಪೂರಾ ತಿಳಿಯಿರಿ. ಆದರೆ ಇದು ಅಹಿಂಸೆಯ ಶಾಂತಿಮಯ ಯುದ್ಧವಾಗಿದೆಂಬದನ್ನು ಯಾವಾಗಲು ಮರೆಯಬೇಡಿರಿ.

ಶಿರ್ಶಿ ಸಿದ್ದಾಪೂರದ ಕಾಯದೆಭಂಗ

——(೦)——

ಅಂಕೋಲಾದಲ್ಲಿ ಕಳೆದ ವಾರ ಸಾಮುದಾಯಿಕ ಜಂಗಲಕಾಯದೇಭಂಗದಲ್ಲಿ ಯಾರನ್ನು ಕೈದು ಮಾಡಲಿಲ್ಲವಾಗಿ ಪ್ರಕಟಿಸಿತ್ತಷ್ಟೇ ಆದರೆ ತಾ॥ ೧೯ ನೇ ದಿನ ಒಮ್ಮಿಂದೊಮ್ಮೆ ೯ ಜನರನ್ನು ಕೈದು ಮಾಡಿದರು. ಅವರ ಪೈಕಿ ವೀರಣ್ಣ ತಿಮ್ಮಯ್ಯಾ ನಾಯ್ಕ ಶ್ರೀ ವಿ. ಕೆ. ನಾಯ್ಕ ಎಂಬ ನಾಡವರ ಪುಢಾರಿಗಳೂ ಶ್ರೀ ಕಮಲಾಕರ ಸಾವೇರ್ಕರ, ಎವೂಜಿ ಸ್ವಾಳೆಕರ ಎಂಬವರೂ ಕೆ. ಆರ್. ಪೆನ್ತಾಂ ಈ ಮೂವರು ೧೦-೧೨ ವರ್ಷದ ಬಾಲಸತ್ಯಾಗ್ರಹಿಗಳು) ಇವರೂ ಅಲ್ಲದೆ ಶ್ರೀ ವ್ಹಿ. ಪಿ. ಗಣಪುಳೆ, ವ್ಹಿ. ಎಮ್. ಭಟ್ಟ, ಶ್ರೀ ಆರ್. ಎಸ್. ಸೇಟ ಶ್ರೀ ದಾಸ ನಾಯ್ಕ ಇವರೂ ಇದ್ದರು.

ಸಿದ್ದಾಪೂರ ತಾಲೂಕ ಹಾರ್ಸಿಕಟ್ಟೆಯಲ್ಲಿ ಜಂಗಲಕಾಯದೇಭಂಗವಾಗಿ ೫ ಮಂದಿ ಕೈದಾಗಿರುವರು ದೊಡ್ಮನೆ ಫಿರ್ಕಾದಲ್ಲಿ ೧-೧॥ ಎಕರೆ ಕಾದಿಟ್ಟ ಜಂಗಲ ಕಡಿದು ಸತ್ಯಾಗ್ರಹ ಮಾಡಿದರು. ಪಟೇಲ ಶಾನಭೋಗರು ಹೆದರಿಸಿದರು. ಯಾರನ್ನೂ ಹಿಡಿಯಲಿಲ್ಲ. ಕೊಪ್ಪ ಓಟಗಾರದಲ್ಲಿಯು ಕಾಯದೇಭಂಗವಾಯಿತು.

ಶಿರ್ಶಿ ತಾಲೂಕ ಹುಲೇಕಲ್ಲಲ್ಲಿ ತಾ. ೨೧ಕ್ಕೆ ಸುಮಾರು ನೂರು ಜನರು ಜಂಗಲಕಾಯದೇಭಂಗ ಮಾಡಿದರು. ಫೋರೆಸ್ಟ ಅಧಿಕಾರಿಗಳು ಹಾಜರಿದ್ದರು. ಯಾರನ್ನೂ ಕೈದು ಮಾಡದ್ದರಿಂದ ಜನರ ಉತ್ಸಾಹವು ಕೆಲಮಟ್ಟಿಗೆ ಕುಂದಿತು. ತಾ. ೨೨ ಕ್ಕೆ ಮೆಣಸಿಗ್ರಾಮಸರವಿನ ಗದ್ದೆಯಲ್ಲಿ ಸತ್ಯಾಗ್ರಹ ಶಿಬಿರಸ್ಥಾಪನೆ, ಜಂಗಲಕಾಯದೆಭಂಗ ನಡೆಯಿತು.

ಅಂಕೋಲಾ ವಿದ್ಯಾರ್ಥಿಗಳು ಶಾಲೆಗೆ ಬಹಿಷ್ಕಾರ ಹಾಕಿದರು.

ಅಂಕೋಲೆಯ ಎಡ್ವರ್ಡ ಹಾಯಸ್ಕೂಲಿನ ೨೦ ವಿದ್ಯಾರ್ಥಿಗಳು ಮಾತೃಭೂಮಿಯ ಕರೆಗೆ ಮಾನಕೊಟ್ಟು ಶಾಲೆಯಿಂದ ಹೊರಬಿದ್ದು ರಾಷ್ಟ್ರಸಂಗ್ರಾಮದಲ್ಲಿ ಭಾಗ ತಕ್ಕೊಳ್ಳಲುದ್ಯುಕ್ತರಾಗಿದ್ದಾರೆ. ೫-೬-೭ ನೇ ಇಯತ್ತೆಗಳು ಪೂರಾ ಬರಿದಾಗುವ ಲಕ್ಷಣವಿದೆ.

ಪ್ರಚಂಡ ಪ್ರಮುಖರಿಗೆ

ಆರಾರು ತಿಂಗಳ ಶಿಕ್ಷೆ.

ದಿಲ್ಲಿಯಲ್ಲಿ ಕಾಂಗ್ರೆಸದ ವರ್ಕಿಂಗ ಕಮೀಟಿಯು ಬೇಕಾಯದೇಶೀರವೆಂದು ಇಲ್ಲಿಯ ಕಮೀಶನರರು ಜಾಹೀರ ಮಾಡಿದರೂ, ಪಂಡಿತ ಮಾಲವಿಯಾ ಪ್ರಭೃತಿಯವರು ಡಾಕ್ಟರ ಅನಸಾರಿಯವರ ಬಂಗ್ಲೆಯಲ್ಲಿ ಕಮೀಟಿ ಕೂಡಿಸಿದರು. ಆಗ ಹಾಜರಿದ್ದವರು.

೧ ಡಾಕ್ಟರ ಅನಸಾರಿ,
೨ ಪಂಡಿತ ಮಾಲವಿಯಾ,
೩ ಅಸೆಂಬ್ಲಿಯ ಅಧ್ಯಕ್ಷರಾಗಿದ್ದ ಶ್ರೀ. ಪಟೇಲ,
೪ ಮಥುರಾದಾಸ ತ್ರಿಕಮಜಿ
೫ ಡಾಕ್ಟರ ಸಿ. ಬಿ. ರಾಯ
೬ ದೀಪ ನಾರಾಯಣಸಿಂಗ
೭ ಲಾಲಾ ಧುನಿಚಂದ (ಅಂಬಾಲಾ)
೮ ಚವಧರಿ ಅಫಜುಲ ಹಕ್ಕ
೯ ಸರದಾರ ಮಂಗಲಸಿಂಗ
೧೦ ಕಾಜೇರಾವ ವರ್ಕಿಂಗ ಕಮೀಟಿಯ ಸ್ಥಿರ ಕಾರ್ಯದರ್ಶಿ
೧೧ ಶ್ರೀಮತಿ ಸೌ॥ ಉಮಾ ಜವಾಹಿರಲಾಲ
೧೨ ಶ್ರೀ. ಸೌ॥ ಹಂಸಾ ಮೇಹತಾ

ಕಮೀಟಿ ನಡೆಯುವ ವರ್ತಮಾನ ಕೇಳಿದ ಕೂಡಲೆ- ಸೀನಿಯರ ಪೋಲಿಸಸಾಹೇಬರು ತಮ್ಮ ಕೂಡ ನಾಲ್ಕು ಮೋಟಾರ ಲಾರಿಗಳ ತುಂಬ ಶಸ್ತ್ರಧಾರಿ ಪೋಲಿಸರನ್ನು ಕೂಡಿಸಿಕೊಂಡು ಡಾಕ್ಟರರ ಬಂಗಲೆಯ ಸುತ್ತಲು ಮುತ್ತಿಗೆ ಹಾಕಿ, ವಾರಂಟು ತಕ್ಕೊಂಡು ಒಳಗೆ ಹೋಗಿ ವಾರಂಟು ತೋರಿಸಿದರು. ಇವರಲ್ಲಿ ಲಾಲಾ ಧುನಿಚಂದ ಮತ್ತು ಮೌ. ಅಫಜುಲ ಹಕ್ಕರ ಹೆಸರಿನ ವಾರಂಟು ಇದ್ದಿಲ್ಲ. ಕೂಡಲೆ ಮೋಟಾರದಲ್ಲಿ ದೂತನನ್ನು ಕಳಿಸಿ ವಾರಂಟು ತರಿಸಿ ಇವರನ್ನೂ ಹಿಡಿದರು. ಸ್ತ್ರೀಯರನ್ನು ಮಾತ್ರ ಹಿಡಿಯಲಿಲ್ಲ. ಹತ್ತು ಜನರಿಗೆ ಹತ್ತತ್ತು ಸಾವಿರದ ಜಾಮೀನು ಕೊಡಿರೆಂದು ಸಾಹೇಬರು ಹೇಳಲು- ಇವರು ಇಲ್ಲೆಂದರು. ಆಗ ಚಹಾದ ಹೊತ್ತಾಗಿತ್ತು. ಪೋಲೀಸಸಾಹೇಬರನ್ನೂ ಚಹಾಕ್ಕೆ ಕರೆದರು. ಆಗ ತುಸು ವಿನೋದವಾಯಿತು. ಚಹಾ ಆದ ಬಳಿಕ ಇವರನ್ನು ಮೋಟಾರಿನಲ್ಲಿ ಕೂಡಿಸಿಕೊಂಡು ಭಾರೀ ಬಂದೋಬಸ್ತಿನಲ್ಲಿ ತುರಂಗಕ್ಕೆ ಒಯ್ದರು. ಬಂಗಲೆಯ ಬಾಗಿಲದಲ್ಲಿ ನೆರೆದ ಸಾವಿರಾರು ಜನರು ಎಲ್ಲ ಪ್ರಮುಖರನ್ನು ಹೂವಿನ ಮಾಲೆಗಳಿಂದ ಸನ್ಮಾನಿಸಿದರು. ಮರುದಿವಸವೆಂದರೆ ಗುರುವಾರ ಸಾಯಂಕಾಲದಲ್ಲಿ ಮ್ಯಾಜಿಸ್ಟ್ರೇಟರು ಸ್ತ್ರೀಯರನ್ನು ಬಿಟ್ಟು, ಉಳಿದ ಹತ್ತು ಜನರಿಗೂ ಆರಾರು ತಿಂಗಳ ಸಾದಾ ಶಿಕ್ಷೆ ಹೇಳಿ, ಅ ಕ್ಲಾಸ ಕೊಟ್ಟರು.

ಪಂಡಿತ ಮಾಲವಿಯಾಯವರ ಸಂದೇಶ.

——(೦)——

ನಮಗೆ ಯಾವ ಶಿಕ್ಷೆಯಾಗಲಿ, ಕಷ್ಟ ತಾಪ ಸಹಿಸುವದಾಗಲಿ, ನನ್ನ ಎಲ್ಲ ದೇಶಬಾಂಧವರಾದ ಬಂಧುಭಗಿನಿಯರು ಈ ಶಾಂತಯುದ್ಧವನ್ನು ದೃಢಮನಸ್ಸಿನಿಂದ ನಡಿಸಬೇಕು. ಹಿಂದಮಾತೆಯ ಸ್ವಾತಂತ್ರ್ಯವನ್ನು ಅಪೇಕ್ಷಿಸಿ, ನೀವೆಲ್ಲರೂ ಮುಂದೆ ಬರುವ ಸಂಕಟಗಳನ್ನು ಅನುಭವಿಸಲಿಕ್ಕೆ ಸಿದ್ಧರಾಗಬೇಕು. ಮುದಕರು ತರುಣರು, ದೊಡ್ಡ ಹುಡುಗರು, ಚಿಕ್ಕ ಹುಡುಗರು ಸ್ತ್ರೀಯರು ಪುರುಷರು ಎಲ್ಲರೂ ಈ ಯುದ್ಧವನ್ನು ಕೊನೆಗಾಣಿಸಬೇಕು. ನಾವೇ ನಮ್ಮ ದೇಶದ ಒಡೆಯರಾಗಬೇಕಾದದ್ದು. ಇದು ನಮ್ಮ ಜನ್ಮಸಿದ್ಧ ಹಕ್ಕು. ನೀವು ನಡೆಸುವ ಪ್ರಯತ್ನವನ್ನು ದೇವರು ಕೃಪಾದೃಷ್ಟಿಯಿಂದ ನೋಡುತ್ತಿದ್ದಾನೆ.

ಪೆನಶನವೂ ಲಾರ್ಡ ಪದವಿಯೂ ದೊರೆಯಿತು.

——(೦)——

ಅಧ್ಯಕ್ಷ ಪಟೇಲರ ಸಂದೇಶ- ನನಗೆ ಅಧ್ಯಕ್ಷಪದದ ಕೆಲಸ ತೀರಿದ ಬಳಿಕ ಪೆನಶನ ದೊರೆಯಿತು. ಲಾರ್ಡ ಪದವಿ ಸಿಕ್ಕಿತು. ಧನ್ಯನಾದೆನು.

ಇಂಗ್ಲಂಡದಲ್ಲಿ ಪಾರ್ಲಮೆಂಟದ ಅಧ್ಯಕ್ಷರು ಕೆಲಸದಿಂದ ನಿವೃತ್ತರಾದರೆ- ಅವರಿಗೆ ಪೆನಶನ ಕೊಡುವರು. ಮತ್ತು ಲಾರ್ಡ ಮಾಡುವರು.

ಇವರನ್ನು ಹಿಡಿದ ಬಗ್ಗೆ ದಿಲ್ಲಿ ಮುಂಬಯಿ ಕಲಕತ್ತೆ, ಪುಣೆ ಮುಂತಾದ ಎಲ್ಲ ಚಿಕ್ಕ ದೊಡ್ಡ ಪಟ್ಟಣಗಳಲ್ಲಿ ಸರಕಾರದ ಕೃತ್ಯದ ನಿಷೇಧವೆಂದು ಎರಡೆರಡು ದಿವಸ ಹರತಾಳ ಮಾಡಲ್ಪಟ್ಟಿತು.

ಪ್ರಾಥಮಿಕ ಶಿಕ್ಷಣಕ್ಕಾಗಿ ಒಂದು ಕೋಟಿಯ ಕಂದಾಯವನ್ನು ಹೆಚ್ಚಿಸಬೇಕೆಂಬದಾಗಿ ಬಂಗಾಲದ ಕೌನ್ಸಿಲದಲ್ಲಿ ಬಂದ ಠರಾವಿನ ಮೂರನೆಯ ವಾಚನವನ್ನು ನಿಷೇಧಿಸಲು ಚುನಾಯಿಸಲ್ಪಟ್ಟ ಬಹುತೇಕ ಹಿಂದೂ ಮೆಂಬರರು ಎದ್ದು ಹೋದರು. ಬಳಿಕ ಇದು ಉಳಿದವರ ಸರ್ವಾನುಮತದಿಂದ ಪಾಸಾಯಿತು.

ಅಮ್ಮಿನಭಾವಿಯಲ್ಲಿ ಕೌನ್ಸಿಲಬಹಿಷ್ಕಾರ.

—(೦)—

ಮೊನ್ನೆ ತಾ|| ೨೮-೮-೩೦ ಗುರುವಾರ ದಿವಸ ರಾತ್ರಿ ೮ ಘಂಟೆಗೆ ಅಮ್ಮಿನಭಾವಿಯಲ್ಲಿ ಅಲ್ಲಿಯ ಪ್ರಮುಖ ವೈದ್ಯರಾದ ಶ್ರೀಯುತ ಶಾಂತಮಲ್ಲಪ್ಪಾ ಅಕ್ಕೋಜಿ ಇವರ ಅಧ್ಯಕ್ಷತೆಯಲ್ಲಿ ಕೌನ್ಸಿಲಬಹಿಷ್ಕಾರದ ವಿಷಯವಾಗಿ ಶ್ರೀ ಕ.ಲ.ಗರ್ಡೆ ವಕೀಲ, ರಂಗಾಚಾರ್ಯ ಅಗಳಗಟ್ಟಿ ದೇವಪ್ಪಬಾಬು ಲ. ಮು. ದೇಸಾಯಿ ಮತ್ತು ಪಾಯಪ್ಪ ದೇಸಾಯಿ ಇವರ ಪರಿಣಾಮಕಾರಕ ವ್ಯಾಖ್ಯಾನಗಳಾದವು. ಅಮ್ಮಿನಭಾವಿಯ ವೈಶ್ಯರು ಕೌನ್ಸಿಲಿನ ಬಹಿಷ್ಕಾರವನ್ನು ಒತ್ತೀ ಉತ್ತಮ ರೀತಿಯಲ್ಲಿ ಮಾಡುವರೆಂದು ವಚನ ಕೊಟ್ಟಿರುತ್ತಾರೆ.

ಬಹಾದ್ದೂರ ಪೋಲಿಸರು.

—೩(*)೩—

ಪಂಜಾಬದಲ್ಲಿರುವ ಲಾಲಮುಸಾವೆಂಬ ಗ್ರಾಮದಲ್ಲಿ ಕೆಲ ಪ್ರತಿಷ್ಠಿತರು ಪೋಲಿಸಸ್ಟೇಷನದ ಮುಂದೆ ಗಾಂಧೀ ಟೊಪ್ಪಿಗೆ ಹಾಕಿಕೊಂಡು ಹೋಗುತ್ತಿದ್ದರ ಪೋಲಿಸ ಅಮಲದಾರರು ಇವರ ಟೊಪ್ಪಿಗೆಗಳನ್ನು ಕಿತ್ತಿಕೊಂಡು, ಒದಿಗ್ಗೆಂಟ ಉಡಾಡಿದರು. ಉತ್ತರ ಕೊಟ್ಟರೆ ಹುರಿಗ ಕಾಣಿಸುವೆವೆಂದು ದಿಗರ ಮಾತಾಡಿದರು.

ವಿವಿಧ ವರ್ತಮಾನಗಳು.

—೦*೦—

ಗದಗಿನಲ್ಲಿ ಮ್ಯುನಿಸಿಪಾಲಿಟಿಯ ಒಳಂಗಳದಲ್ಲಿಯೇ ಸಾರ್ವಜನಿಕ ಗಣಪತಿಯು ಕೂತಿದ್ದಾನೆ ಮಂಟಪವು ಶಾಸ್ತ್ರೀಯ ಸಜಾವಣೆಗಳಿಂದ ತುಂಬಿ ಹೋಗಿದೆ. ಹೀಗೆ ಮ್ಯುನಿಸಿಪಾಲಿಟಿಯಲ್ಲಿ ನಾಡಗುಡಿಯ ಪ್ರವೇಶವಾಯಿತು.

ಗುಳೇದಗುಡ್ಡದಲ್ಲಿ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ. ಜೋಶಿ ಗುಂಡೇರಾಯರನ್ನು ೧೧೭ ಕಲಮು ಪ್ರಕಾರ ಹಿಡಿದರು. ಹಿಡಕೊಂಡು ಹೋಗುವಾಗ ಎರಡು ಸಾವಿರ ಜನರ ಮೆರವಣಿಗೆ ಹೊರಟಿತ್ತು. ಶ್ರೀ ಕೌಜಲಗಿ ಹನಮಂತರಾವ ಮತ್ತು ಶ್ರೀ ಹುಕ್ಕೇರಿ ರಾಮರಾಯರ ಭಾಷಣಗಳಾದವು. ಬಳಿಕ ಇವರನ್ನು ಬಾದಾಮಿಗೆ ಕರಕೊಂಡು ಹೋದರು.

ಕಿತ್ತೂರಿನಲ್ಲಿ ಸಾರ್ವಜನಿಕ ಗಣಪತ್ಯುತ್ಸವ ನಡೆದದೆ. ಬೆಳಗಾವಿಯ ಶ್ರೀ ಪಾಟೀಲ ವಕೀಲರ ಭಾಷಣವಾಯಿತು.

ಮುಧೋಳ ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸುವ ದರಬಾರವಾಯಿತು. ಒಟ್ಟು ೫೩ ಜನ ಮೆಂಬರರಾಗುವರು. ೩೩ ಪ್ರಜರಿಂದ ೧೦ ಇನಾಮದಾರ ವ ಸರದಾರರಿಂದ; ೧೦ ಸರಕಾರದಿಂದ ತುಂಬಲ್ಪಡುವವು. ಬ್ರಾಹ್ಮಣರಿಗೆ ಐದು ಮತ್ತು ಅಸ್ಪೃಶ್ಯರಿಗೆ ಮೂರು ಸ್ಥಳಗಳನ್ನು ಕಾಯ್ದಿಟ್ಟಿದ್ದಾರೆ.

ಸೋಲ್ಲಾಪೂರ ಶಿಕ್ಷಾ ಪೋಲಿಸರನ್ನು ನೇಮಿಸಿದರು. ಒಬ್ಬ ಇನ್ಸಪೇಕ್ಟರ, ಒಬ್ಬ ಸಬ್ ಇನ್ಸಪೇಕ್ಟರ ೧೫ ಹೆಡ್ ಕಾನ್ಸಟೇಬಲ ೧೪೪ ಸಿಪಾಯಿಯರು ಊರ ಕಾವಲಗಾರರಾಗುವರು.

ಪುಣೆಯ ಶ್ರೀ. ಕೇಳಕರರು ಅಸೆಂಬ್ಲಿಗೆ ರಾಜೀನಾಮೆ ಕೊಟ್ಟರು. ಈಗ ಉಮೇದವಾರರಾಗಿರುವದಿಲ್ಲ. ಆದರೆ ಉಮೇದವಾರರಾಗುವಂಥವರಿಗೆ ಶಿಫಾರಸ್ಸಿನ ಪತ್ರ ಕೊಡುತ್ತಿದ್ದಾರೆ. ರಾ. ಬ. ಕಾಳೆ, ಶ್ರೀ. ಜಗನ್ನಾಥ ಮಹಾರಾಜ, ಶ್ರೀ. ಗುಂಜಾಳ ಇವರೆಲ್ಲರೂ ಇವರ ಕೃಪೆಗೊಳಗಾಗಿದ್ದಾರೆ.

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ–

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಮದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಚಪಳ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೭—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦
೧೯-೧೧-೨೯ ಮೈಸೂರಸ್ಟೋರ,
ಬೆಳಗಾವಿಯವರಗಲ್ಲಿ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ, ಒಂದಕ್ಕೆ ನೂರಕ್ಕೆ [illegible] ವೆಚ್ಚ ಮಾಡಿಕೊಂಡು ಬರುವರು ಈ [illegible] ಸೌಕರ್ಯವನ್ನು ಮಾಡಿಕೊಟ್ಟು ಡ್ರಾಯವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡ್ಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವ ನಿಮ್ಮ ಇಚ್ಛೆ ಇದ್ದರೆ ಬೇಗ ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಿಗೆ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತೆಗೆದುಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು
ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು
ಬೆಲೆ ೨॥ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸಃ— ಎಮ್. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ರವಿವಾರ ತಾರೀಖು ೩೧ ನೇ ಅಗಸ್ಟ ೧೯೩೦ (ಸಂಚಿಕೆ ೧೯೩

ಮುಂಬಯಿ ಕಾಯದೆ ಕೌನ್ಸಿಲ್ ಚುನಾವಣಿ.

ಧಾರವಾಡ ಜಿಲ್ಲಾ ಬಿನ್ನ ಮುಸಲ್ಮಾನ ಮತದಾರರಿಗೆ ವಿನಂತಿ.

ಮಹನೀಯರೇ,

ನಾ[illegible] ಬರುವ ೧ನೇ ಸಪ್ಟಂಬರಕ್ಕೆ ಆಗುವ ಮುಂಬಯಿ ಕಾಯದೇ ಕೌನ್ಸಿಲ್ ಚುನಾವಣೆಯಲ್ಲಿ ಉಮೇದವಾರನಾಗಿ ನಿಂತಿದ್ದೇನೆ. ನೀವು ನನಗೆ ಎರಡು ಸಾರೆ ಆರಿಸಿ ಕೊಟ್ಟು ದೇಶಸೇವೆಯನ್ನು ಮಾಡಲಿಕ್ಕೆ ಅವಕಾಶ ಕೊಟ್ಟೀರಿ. ನಾನು ಕೌನ್ಸಿಲದಲ್ಲಿ [illegible] ನಿರೋಧ, ಮತ್ತು ೧೦೦ ರೂಪಾಯಿ ಆವಣೆ ಬಾಳುವಂಥ ಜಮೀನಗಳ ಮೇಲೆ ಸರಾಸರಿ ೫೦ ರೂಪಾಯಿ ವರಿಗೆ ಹಾಕಬೇಕೆಂಬ ಮಾಡಿದ ಜಮೀನ ಮಹಸೂಲಿನ ಹೊಸ ಕಾಯದೇದ ಪ್ರತಿಬಂಧಕ ಠರಾವುಗಳನ್ನು ತಂದು ಪಾಸ ಮಾಡಿಸಿಕೊಂಡದ್ದು ನಿಮಗೆ ಗೊತ್ತೇ ಇದೆ. ಇದರ ಜೊತೆಗೆ ಕರ್ನಾಟಕ ಏಕೀಕರಣ, ಕರ್ನಾಟಕ ಇರಿಗೇಶನ್ನ [illegible] ಅನೇಕ ಜನ ಹಿತದ ಕೆಲಸಗಳ ಬಗ್ಗೆ ವಿಶೇಷ ಪ್ರಯತ್ನ ಪಟ್ಟಿರುವೆನು. ಕೌನ್ಸಿಲಿನ ಹೊರಗಾದರೂ ಅನೇಕ ಲೋಕ ಹಿತದ ಕೆಲಸಗಳನ್ನು ಮಾಡಿರುವೆನು. ಚುನಾವಣೆಯು ಸಮೀಪಿಸಿದ್ದರಿಂದ ಪ್ರತಿಒಬ್ಬರಿಗೆ ವ್ಯಕ್ತಿಶಃ ಭೆಟ್ಟಿಯಾಗುವದು ಅಥವಾ ಲೇಖಿಯಿಂದ ತಿಳಿಸುವದು ಅಶಕ್ಯ ಕಾರಣ ಈ ಜಾಹೀರ ಪತ್ರಿಕೆಯಿಂದ ವಿನಂತಿ ಮಾಡಿಕೊಂಡಿರುವೆನು. ತಾವೆಲ್ಲರು ಪುನಃ ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ಆರಿಸಿಕೊಟ್ಟರೆ ಜನಹಿತದ ಕಾರ್ಯಗಳನ್ನು ಮಾಡಲಿಕ್ಕೆ ಉತ್ಸಾಹದಿಂದ ಪ್ರಯತ್ನ ಮಾಡುವೆನು. ನನ್ನ ಚಿಹ್ನ ಮನುಷ್ಯ ವೋಟಿನ ಪೇಪರದಲ್ಲಿ ಬದಿಗೆ ತೋರಿಸಿದಂತೆ ಇದೆ. ಅದರ ಮುಂದೆ (× ×) ಈ ಪ್ರಕಾರ ಎರ್ಡು ಗುರ್ತು ಮಾಡಬೇಕು.



ಧಾರವಾಡ
ತಮ್ಮ ಸೇವಕ

೨೬-೮-೩೦
ವಿಶ್ವನಾಥ ನಾರಾಯಣ ಜೋಗ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲು ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಒಪ್ಪುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದದೆ. ಪ್ರತಿಯೊಂದರ ಬೆಲೆ ಅರ್ಧಾಣೆ. ಠೋಕ ತಕ್ಕೊಳ್ಳುವವರಿಗೆ ನೂರಕ್ಕೆ ಭರ್ಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್ಸ, ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು, ಚಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧ ತಿಂಗಳಿಗೆ	ರೂ. ೧೨-೮-೦
[illegible] ,,	೭-೦-೦
[illegible] ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ಕೌನ್ಸಿಲ ಚುನಾವಣೆಯು ಬಹಿಷ್ಕಾರ.

ಉಮೇದವಾರರಿಗೆ ಬಂದ ಪೀಕಲಾಟ.

ಕಾಂಗ್ರೆಸದಿಂದ ಕೌನ್ಸಿಲಕ್ಕೆ ಬಹಿಷ್ಕಾರ ಬಿದ್ದದ್ದರಿಂದ, ಕೌನ್ಸಿಲ ಚುನಾವಣೆಗೆ ಪ್ರೇತಕಳೆ ಬಂದಿರುತ್ತದೆ. ಉಮೇದವಾರರಲ್ಲಿ ಉತ್ಸಾಹಾತಿಶಕ್ತಿಯಿರುವದೇ ಇಲ್ಲ. ಉಮೇದವಾರರಿಗೆ ಛಲಿಕೆ ಜಟ್ಟಿ ಎನ್ನುವಂಥವರು ಊರೂರಿಗೆ ಇರುತ್ತಾರೆ. ಅಂಥವರಂತೂ ಎಲ್ಲಿಯೂ ಕಾಣಿಸುವದಿಲ್ಲ. ಬ್ರಾಹ್ಮಣರಾಗಲಿ; ಬ್ರಾಹ್ಮಣೇತರರಾಗಲಿ; ಯಾವದೇ ಕುಲ, ಯಾವದೇ ಮತದ ಉಮೇದವಾರನ ಇಂದಿನ ಪರಿಸ್ಥಿತಿ ನೋಡಿರಿ. ಆತನಿಗೆ ವೋಟು ಕೊಡಬೇಕು; ಆತನು ಆರಿಸಿ ಬರಬೇಕೆಂದು ಕೂಗಳುವಂಥ ಒಬ್ಬ ಭಟ್ಟಂಗಿಯೂ ಮುಂದೆ ಬಂದಿರುವದಿಲ್ಲ. ಪ್ರತಿಯೊಂದು ಊರಲ್ಲಿ ಕಾಂಗ್ರೆಸದ ಬೀಜಮಂತ್ರದ ಪಠಣವಾಗಿದೆ. ಪ್ರತಿಯೊಂದು ಊರವರು ಪೋಲಿಂಗ ಸ್ಟೇಶನಕ್ಕೆ ಬಹಿಷ್ಕಾರ ಹಾಕಬೇಕೆಂಬ ಮತವನ್ನೇ ಸಾರುತ್ತಾರೆ. ವೋಟು ಕೊಡಬೇಕು; ನಾನು ಹಿಂದಕ್ಕೆ ಗುದ್ದ ಹೊತ್ತಿದ್ದೇನೆ. ಇಂದು ನೀವೆಲ್ಲರೂ ನನ್ನ ಮೇಲೆ ಗುದ್ದ ಹೊರಿಸಿದರೆ ಅದನ್ನು ಹೊರುವಷ್ಟು ಧಷ್ಟಪುಷ್ಟನಾಗಿದ್ದೇನೆಂದು ಉಮೇದವಾರರಲ್ಲಿ ಒಬ್ಬರೂ ಆಗಸಿಯ ಮುಂದೆ ಹೇಳದಾಗಿದ್ದಾರೆ. ವೋಟು ಕೇಳುವದಕ್ಕೆ ಕಳ್ಳ ದಾರಿಯನ್ನೇ ಹುಡುಕುವರು. ಯಾಕೆಂದರೆ ಪ್ರತಿಯೊಬ್ಬರು ನೀವೇನು ಕಿಸಾ ಮತ್ತು ಮಾಡಿದ್ದೀರೆಂದೇ ಪ್ರಶ್ನ ಮಾಡುವರು. ಬರೇ ಪ್ರಶ್ನ ಮಾಡಿದರೂ ಇವರು ಬಹು ಪುಣ್ಯವಂತರೆಂದು ತಿಳಿಯಬೇಕು. ಕರ್ರೇ ನಿಶಾನೆಯು ಬಹುಮಾನವೂ, ಅದಕ್ಕಿಂತ ಹೆಚ್ಚಿನ ಅಪಮಾನವೂ ಆಗದಿದ್ದರೆ, ಪುಣ್ಯಾತ್ಮರೆಂದು ಭಾವಿಸಬೇಕು. ಉಮೇದವಾರರ ದುರ್ದೈವ! ಅವರಿಗೆ ಹೀಗೆ ತಮ್ಮ ಸತ್ವ ಪರೀಕ್ಷೆ ಮಾಡಿಕೊಳ್ಳುವಂಥ ಮನೋಧೈರ್ಯವೇ ಇರುವದಿಲ್ಲ. ಒಂದು ವೇಳೆ ಮನಲಜ್ಜೆ ಇಲ್ಲದಿದ್ದರೂ ಜನಲಜ್ಜೆಯುಂಟು. ಮನದಾತ್ಮನು ಮೆಚ್ಚುವಂಥ ಕೆಲಸವೇ ಅಲ್ಲ. ಆದ್ದರಿಂದ ಇವರು ಎಲ್ಲಾದರೂ ವೋಟು ಕೇಳಲಿಕ್ಕೆ ಹೋದರೆ ದೀನಾಭೀತರಂತೆ ಹೋಗಬೇಕಾಗಿದೆ.

ಉಮೇದವಾರರ ಹಾಡೇ ಈ ಮೇರೆಗೆ ಆದ ಬಳಿಕ, ಇವರಿಗೆ ವೋಟು ಕೊಡಿರೆಂದು ಬಾಯ್ದೆರೆದು ಹೇಳುವಂಥ ಭಟ್ಟಂಗಿಗಳನ್ನಾರು ಕೇಳುವರು. ಇವರಿಗೆ ಒಂದೇ ಮಾತಿಗೆ "ಛೀ, ಮೂರ್ಖಾ" ಎಂದು ಕಾಲಜೋಡಿ ಬರುವದು. ಆದರಲ್ಲಿ ಉಮೇದವಾರರಂತೆ ಊರ ಮೇಲೆ ಊಟ, ನೀರ ಮೇಲೆ ಹಳ್ಳಾಟವಲ್ಲ; ಇದನ್ನಾರೆ ಮಾತು. ವೋಟರರು ಇವರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದರೆ ನೆರೆಮನೆಯಿಂದ ಒಲೆ ಹೊತ್ತಿಸಲಿಕ್ಕೆ ಬೆಂಕಿ ಸಹ ಸಿಗದಂತಾಗುತ್ತದೆ. ವೋಟು ಕೊಡಬಾರದೆಂಬ ಕೂಗು ಕೈಲಾಸದ ತನಕ ಹೋಗಿರುವಾಗ, ಹಳ್ಳಿಯೊಳಗಿನ ಈ ದೇವರುಗಳ ಪಾಡೇನಾಗುವದೆಂಬದನ್ನು ಒರೆಯುವದಕ್ಕಿಂತ ಊಹಿಸುವದೇ ಲೇಸು. ವಿಜಯಕ್ಕೂ ಕಾಂಗ್ರೆಸ ಕಮೀಟಿಗೂ ದಿನಾಲು ಬರುವ ಪತ್ರಗಳನ್ನು ನೋಡಿದರೆ ಮೂರು ಮನೆಯ ಗ್ರಾಮದಲ್ಲಿ ಸಹ ವೋಟು ಕೊಡಬೇಕು; ನನ್ನ ಉಮೇದವಾರನು ಆರಿಸಲ್ಪಡಬೇಕೆಂಬ ಪ್ರೀತಿಯೂ, ಅದಕ್ಕೆ ತಕ್ಕ ಚಟುವಟಿಕೆಯೂ ಇದ್ದಂತೆ ಕಂಡುಬರುವದಿಲ್ಲ. ಎಲ್ಲ ಕಡೆಗೂ ಆಷಾಢಮಾಸದ ಅಮಾವಾಸ್ಯದ ಕಗ್ಗತ್ತಲೆಯು ಮುಸುಕಿರುತ್ತದೆ.

ಚುನಾವಣೆಗೆ ಎಂಟೇ ದಿವಸ ಉಳಿಯಿತು. ಈ ಸಮಯದಲ್ಲಿ ಉಮೇದವಾರನ ಮನೆಯು ಮದುವೆಯ ಮನೆಯಂತೆ ತೋರಬೇಕಿತ್ತು. ಜನರು ಬರುಹೋಗುವದಕ್ಕೆ ತೆರಪೇ ಇರುತ್ತಿರಲಿಲ್ಲ. ನಾಲ್ಕಾರು ಜನ ಕಾರಕೂನರು, ಹತ್ತಿಪ್ಪತ್ತು ಸ್ವಯಂಸೇವಕರು, ಸ್ವಸಂತೋಷದಿಂದ ಸಹಾಯ ಮಾಡತಕ್ಕಂಥವರಿಂದ ಉಮೇದವಾರನ ಮನೆಯು ಆಹ್ಲಾದಕರವಾಗಿ ಝಗಝಗ ಶೋಭಿಸುವದು. ಈಗ ಅಲ್ಲಿ ನಾಲ್ಕು ನೊಣಗಳು ಕೂಡ ಇಲ್ಲದಷ್ಟು ಶೂನ್ಯವಾಗಿ ತೋರುತ್ತಿರುವದು. ಯಾಕೆಂದರೆ ಇವರಿಗೆ ತಲದಿಂದ ಸಂಬಿಗೆಯ ಪತ್ರಗಳೇ ಇರುವದಿಲ್ಲ. ಶೂನ್ಯವು ನಿರಾಕಾರದ ಪರಬ್ರಹ್ಮವೆಂದು ವೇದಾಂತದಲ್ಲಿ ಹೇಳುವದು. ಆ ಪರಬ್ರಹ್ಮನು ಸಾಕಾರವಾಗುವ ಅಪೇಕ್ಷೆಯನ್ನೇ ಮಾಡಿಲ್ಲ. ಚಾತುರ್ಮಾಸ್ಯದಲ್ಲಿ ದೇವರು ಮಲಗಿದ್ದಾನೆಂಬದಕ್ಕೆ ಇದೊಂದು ಪ್ರತ್ಯಕ್ಷ ಪ್ರಮಾಣವು. ಉಮೇದವಾರರ ಮನೆ ಅಥವಾ ತಾತ್ಪೂರ್ತಿಕ ಕಚೇರಿಯಲ್ಲಿ ಅಂಧಃಕಾರ! ಹಳ್ಳಿಗಳಲ್ಲಿ ಗಾಢಾಂಧಃಕಾರವಾದ ಬಳಿಕ, ಚುನಾವಣೆಗೆ ಹೇಗೆ ಜೀವಕಳೆ ಬರುವದು. ಅವ್ಯಕ್ತಸಂಜೀವನಿ ಕೂಡ ಜೀವಕಳೆ ತರಲಾರದು.

ಚುನಾವಣೆಗಾಗಿ ಮತಗಳನ್ನು ಕೊಡಲು ಹಳ್ಳಿಯ ಗೌಡ ಕುಲಕರ್ಣಿಯರು ರೈತರನ್ನು ಕೂಡಿಹಾಕಿಕೊಂಡು, ಬಂಡೀ ಕಟ್ಟಿಕೊಂಡು ಬುತ್ತಿ ಹೊತ್ತುಕೊಂಡು ಬರುವರು. ಮೋಟಾರ, ಟಾಂಗಾ, ಝಟಕಾಗಳಂತೂ ತೆರಪಿಲ್ಲದೆ ತಿರುಗಾಡುವವು. ಗ್ರಾಮಸ್ಥರಿಗೆ ನಿಮ್ಮೂರ ಮತದಾರರನ್ನು ಕರಕೊಂಡು ಬನ್ನಿರೆಂದು ಅಧಿಕಾರಿಗಳು ಪತ್ರ ಬರೆಯುವರು. ಹುಕುಮು ಕೊಡುವರು. ಸರಕಾರದ ಹುಕುಮೆಂದು ಸೇವಕರಾದಂಥವರು ಪೋಲಿಂಗ ಸ್ಟೇಶನಕ್ಕೆ ಹೋಗಬಹುದು. ರೈತರೂ, ಬೇರೆ ಸುಖವಸ್ತುಗಳೂ ಹೋಗಬೇಕೆಂದು ಬಂಧನವಿಲ್ಲ. ವೋಟಿನ ಯಾದಿಯಲ್ಲಿ ಹೆಸರಿರುತ್ತದೆಂದು ವೋಟುಕೊಡಲಿಕ್ಕೆ ಹೋಗಬೇಕೆಂದು ಒತ್ತಾಯವಿರುವದಿಲ್ಲ. ಒಂದು ಪತ್ರ ಬರುವ ಮಾತ್ರದಿಂದ ಅಲ್ಲಿಗೆ ಹೋಗಬೇಕೆಂಬ ಬಲವಂತಿಕೆಯುಂಟು. ಪ್ರಮಾಣವುಂಟು? ಕಾಂಗ್ರೆಸದ ಆಜ್ಞೆಯುಂಟು. ಸ್ವರಾಜ್ಯ ದೊರೆತ ವಿನಹ, ನಾವು ವೋಟು ಕೊಡುವದಿಲ್ಲೆಂದು ಹೇಳುವದಕ್ಕೆ ಪ್ರತಿಯೊಬ್ಬನಿಗೂ ಹಕ್ಕುಂಟು. ಉಪ್ಪಿನ ಕಾಯದೆ ಮುರಿಯುವಾಗ, ಜೇಲಿಗೆ ಹೋಗುವಾಗ, ಕಾಯದೆಭಂಗ ಮಾಡಲಿಕ್ಕೆ ಮುಂದುಗೊಂಡವರು, [illegible] ಸಮ್ಯಕವಾಗಿ ವ್ಯಕ್ತಿಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ ಮತ್ತು ಮತ ಸ್ವಾತಂತ್ರ್ಯವನ್ನೆಂದಿಗೂ ಕಳಕೊಳ್ಳಲಾರರು. ಇವರು ಹೀಗೆ ಮನೆಯ ನಿಶ್ಚಿಂತವನ್ನು ತೊರೆಸಿ [illegible] ಟಾಂಗಾ, ಝಟಕಾ, ಟಾಂಗಾಗೆ [illegible] ಯು ತಪ್ಪಿ, ಡ್ರಾಯಿವ್ಹರ ಮತ್ತು ಕುದುರೆಗಳ ಆಸರ ತಪ್ಪುವದು. ಹೀಗೆ ಮತದಾರರು ಬಹು ದಿನ ನೆನಸಿಡುವಂಥ ವಾಯದೆಯ ಚುನಾವಣೆ ಮಾಡಿತೋರಿಸುವರೆಂದು ಕಾಂಗ್ರೆಸ ಕಮೀಟಿಯವರು ನೆರೆನಂಬಿದ್ದಾರೆ.

ಬರೇ ಅರ್ಜಿ ಮತ್ತು ಭಾಷಣ ಬೇಕಾಗಿಲ್ಲ.

ಪ್ರತ್ಯಕ್ಷ ಕೃತಿಯು ಬೇಕು.

—(೦)—

[illegible]ರಲ್ಲಿ ಇಂದು ಶ್ರೀ ಧನಶೆಟ್ಟಿಯಂಥ ಪರೋಪಕಾರಿ ಮತ್ತು ದೇಶಾಭಿಮಾನಿ ಗೃಹಸ್ಥನು ಶಿಕ್ಷಿತನಾಗಿರುವನು. ಈತನಿಗಾದ ಗಲ್ಲನ್ನು ರಹಿತ ಪಡಿಸಬೇಕೆಂದು ರಾ. ಬ. ಕಂಬಳಿ ಮೊದಲಾದವರು ಸರಕಾರಕ್ಕೆ ಅರ್ಜಿಯನ್ನು ಮಾಡಿದ್ದಾರೆ. ರಾ. ಬ. ಪಾಟೀಲರು ಮಹಾತ್ಮರನ್ನು ಬಂಧಮುಕ್ತ ಮಾಡಬೇಕೆಂದು ಅಸೆಂಬ್ಲಿಯಲ್ಲಿ ಭಾಷಣ ಮಾಡಿದ್ದಾರೆ. ಬರೇ ಅರ್ಜಿ ಮತ್ತು ಭಾಷಣದ ಕಾಲ ಹಿಂದಾಯಿತು. ಪ್ರತ್ಯಕ್ಷ ಕೃತಿ ಬೇಕು; ಅಂಥ ಯಾವ ಕೃತಿಯಿಂದ ರಾ. ಬ. ಕಂಬಳಿ, ಶ್ರೀ. ಶಂಕರಗೌಡಾ ಪಾಟೀಲ ಮೊದಲಾದವರು ಕೌನ್ಸಿಲಕ್ಕೆ ಸ್ಪರ್ಧಿಸಿದ ವೀರಶೈವರು ಶ್ರೀ. ಧನಶೆಟ್ಟಿಯವರನ್ನು ಬಿಡಿಸಿಕೊಳ್ಳುವರೆಂಬದನ್ನು ಹೇಳಿ, ಮತ ಕೇಳಲಿಕ್ಕೆ ಊರೂರಿಗೆ

ಹೋಗಬೇಕೆಂದು ಹುಬ್ಬ [illegible] ವಿಜಯದ ಮುಖದಿಂದ ಇವರಿಗೆ ಪ್ರಶ್ನೆ ಮಾಡಿರುತ್ತಾರೆ.

ಕೌನ್ಸಿಲದಲ್ಲಿ ಸರಕಾರ ಪಕ್ಷದ್ದೇ ಬಹುಮತವುಂಟು. ದೇಶಹಿತೈಷಿಯೆಂದು ಬೃಹಸ್ಪತಿಯಂತೆ ಕೌನ್ಸಿಲದಲ್ಲಿ ಮಾತಾಡಿದೆನೆಂದು ಡೌಲು ಹೇಳಿಕೊಳ್ಳಬಾರದು. ವರ್ತಮಾನಪತ್ರಗಳಲ್ಲಿ ಭಾಷಣ ಮುದ್ರಿಸಿತೆಂದು ಅಗಾಂಟುಕರಂತೆ ಹೇಳಿಕೊಳ್ಳಬಾರದು. ಸರಕಾರದವರು ನಿಮ್ಮ ಠರಾವು, ನಿಮ್ಮ ಅರ್ಜಿ ಮತ್ತು ನಿಮ್ಮ ಭಾಷಣವನ್ನು [illegible] ಮಾಡಿದ್ದೆಷ್ಟು ಸಾರೆ? ಎಂಬುದನ್ನು ಧ್ಯಾನದಲ್ಲಿ ತಂದು, ಹಾಡಿದ್ದೇ ಹಾಡುವದರಲ್ಲಿ ಯಾವ ಪುರುಷಾರ್ಥ ಸೇರುತ್ತದೆಂಬುದನ್ನು ಸ್ಪಷ್ಟವಾಗಿ ಹೇಳಿರೆಂದು ಇನ್ನೊಬ್ಬ ಲೇಖಕನು ಪ್ರಶ್ನೆ ಹಾಕಿರುತ್ತಾನೆ.

ಸತ್ಯಾಗ್ರಹ ಮತ್ತು ಕಾಯದೆಭಂಗದ ದೆಸೆಯಿಂದ ಸರಕಾರದವರು ಜಪ್ತಿ ಕೊಡದಂಥವರ ಮೇಲೆ ಬೇರೊಂದು ಶಸ್ತ್ರವನ್ನು ಹುಡುಕಿ ತೆಗೆದಿದ್ದಾರೆ. ಸರಕಾರೀ ಕಾಮಗಾರರು ಜಪ್ತಿಗೆ ಬಂದಾಗ ಗೃಹಸ್ಥರು ಬಾಗಿಲ ಹಾಕಿಕೊಂಡು ಕೂತರೆ- ಅವನ ಗೋಡೆ ಒಡೆದು, ಅಥವಾ ಕಿಟಕಿ ಮುರಿದು, ತೀರ್ಪಿಯಾಗುವಷ್ಟು ಪದಾರ್ಥಗಳನ್ನು ಜಪ್ತ ಮಾಡಬೇಕೆಂದು ಸರಕಾರದವರು ಅಕ್ಟೋಬರ ತಿಂಗಳಲ್ಲಿ ಕೂಡುವ ಹೊಸ ಕೌನ್ಸಿಲದಲ್ಲಿ ಲ್ಯಾಂಡ ರಿವ್ಹಿನ್ಯೂ ಕೋಡಿನಲ್ಲಿ ದುರಸ್ತ ಮಾಡುವ ಬಿಲ್ಲು ತರುವರು. ಹೊಸದಾಗಿ ಹೋದ ಮೆಂಬರರು ಈ ಪದ್ಧತಿಯನ್ನು ವಿರೋಧಿಸಿದ ಭಾಷಣವನ್ನು ಮಾಡಬಹುದು. ಬಹುಮತದಿಂದ ಸರಕಾರವು ಇದನ್ನು ಪಾಸಮಾಡಿಕೊಂಡರೆ- ಯಾವ ರೀತಿಯಿಂದ [illegible] ವಿರೆಂಬುದನ್ನು ಮೊದಲು ಬರೆದು ಕೊಟ್ಟು, ವೋಟು ಕೇಳಬೇಕೆಂದು ಹುಬ್ಬಳ್ಳಿಯ ಗೃಹಸ್ಥನು ರಾ. ಬ. ಕಂಬಳಿಯವರಿಗೆ ಸವಾಲು ಹಾಕಿದ್ದಾನೆ.

ಆರೇಮಲ್ಲಾಪುರದ ಒಬ್ಬ ಒಕ್ಕಲಿಗನು [illegible] ದಲ್ಲಿ ಮೆಂಬರರಾದವರೆಲ್ಲರಿಗೆ ಬಿಚ್ಚು ಮಾತಿನಲ್ಲಿ ಕೇಳಿದ್ದಾನೆ. ಅತನನ್ನುವದೇನಂದರೆ-

ಹಳ್ಳಿಯ ಜನರಿಗೆ ಗಿಡಗಳಿಂದ ಉದುರಿ ಬೀಳುವ ತೊಪ್ಪಲ ಸಹ ತಕ್ಕೊಳ್ಳುವ ಅಧಿಕಾರವಿಲ್ಲ. ಹೀಗೆ ಜಂಗಲಖಾತೆಯದೆಯ ತಾಪವುಂಟು. ಹಳ್ಳಿಯ ಜನರು ಇಂಥ ಅನ್ಯಾಯಗಳನ್ನು ಸಹಿಸಿಕೊಂಡು, ಕೊರಗುತ್ತಿರಲು ನೀವು ಕೌನ್ಸಿಲಕ್ಕೆ ಹೋಗಿ ಏನು ಕಸರತ್ತು ಮಾಡುವಿರೋ ನಾನರಿಯೆ. ನಿಮ್ಮನ್ನು ದೇವರ ಸಮಾನರೆಂದು, ನೀವು ಹೇಳಿದಲ್ಲಿಗೆ ಬಂದು, ನಮ್ಮ ವೋಟುಗಳನ್ನು ಕೊಟ್ಟು, ನಿಮ್ಮನ್ನು ಆರಿಸಿಕೊಟ್ಟದ್ದಕ್ಕೆ ನಮಗೆ ಇಂಥ ಅನ್ಯಾಯದ ಪ್ರತಿಫಲವೇ? ನಿಮಗೆ ಕೌನ್ಸಿಲದಲ್ಲಿ ಬರೇ ಖುರ್ಚಿಯ ಅಧಿಕಾರವಲ್ಲದೆ, ರೈತರ ಹಿತಮಾಡತಕ್ಕ ಅಧಿಕಾರವಿಲ್ಲೆಂದ ಮೇಲೆ ನಿಮ್ಮನ್ನಾದರೂ ನಂಬಿಸಿ ಫಲವೇನು? ರೈತರು ಜಾಣರಾದರೆ- ತಮ್ಮ ದಾರಿಯನ್ನು ತಾವು ಕಂಡುಕೊಳ್ಳುವರು.

ವರ್ಕಿಂಗ ಕಮೀಟಿಯ ಬಹುತೇಕ ಮೆಂಬರರಿಗೆ ಶಿಕ್ಷೆಯಾದ್ದರಿಂದ ತೆರವಾದ ಸ್ಥಳಗಳಲ್ಲಿ ತನಗೊಂದು ಸ್ಥಳ ದೊರೆಯಬೇಕೆಂದು ವಿಜಾಪೂರದ ಶ್ರೀ ಕೌಜಲಗಿ ಶ್ರೀನಿವಾಸರಾಯರು ಕಾಂಗ್ರೆಸಕ್ಕೆ ತಾರಿನಿಂದ ತಿಳಿಸಿದ್ದಾರೆ. ಆ ಪ್ರಕಾರ ಇವರನ್ನು ನೇಮಿಸಿದ್ದಾರೆ.

ಇವತ್ತಿನ ದಿವಸ ಹುಬ್ಬಳ್ಳಿಯಲ್ಲಿ ದಾಜೀಬಾನ ಪೇಟೆಯಲ್ಲಿರುವ ಶ್ರೀ ತುಳಜಾಭವಾನಿಯ ಗುಡಿಯ ಗೋಪುರದ ಮೇಲೆ ರಾಷ್ಟ್ರೀಯ ಧ್ವಜವೇರಿಸುವ ಸಮಾರಂಭವಾಗುವದು.

ತುರಂಗದಲ್ಲಿ ವಿಚಾರಣೆ.

ಎಲಿಗೆ ಸುಣ್ಣ ಹಚ್ಚುವಷ್ಟರಲ್ಲಿ ಶಿಕ್ಷೆ.

ಪಂಡಿತ ಮಾಲವಿಯಾ, ಮೊದಲಾದ ಹತ್ತು ಜನರ ವಿಚಾರಣೆಯು ದಿಲ್ಲಿಯಲ್ಲಿ ತುರಂಗದಲ್ಲಿಯೇ ನಡೆಯಿತು. ವಿಚಾರಣೆಯನ್ನು ನೋಡಬೇಕೆಂದು ಪ್ರಚಂಡ ಜನಸ್ತೋಮ ಕೂಡಿತು. ಆದರೆ ಪೋಲೀಸರು ಪಾಸು ಇದ್ದವರನ್ನಷ್ಟೇ ಒಳಗೆ ಬಿಟ್ಟರು. ಅದರೂ ಪ್ರಮುಖ ವಕೀಲ ಮತ್ತು ನಾಗರಿಕರಿಂದ ಕೋರ್ಟು ತುಂಬಿಹೋಗಿತ್ತು. ಪಂಡಿತರ ಚಿರಂಜೀವ ಗೋವಿಂದಕಾಂತ ಮಾಲವಿಯಾ ಇವರ ಹೆಸರು ಮೊದಲು ಆರೋಪಿಗಳ ವರ್ಗದಲ್ಲಿತ್ತು. ಇವರು ಕಮೀಟಿಯಲ್ಲಿ ಯಾವ ಭಾಗ ತಕ್ಕೊಳ್ಳಲಿಲ್ಲೆಂದು ಸರಕಾರೀ ವಕೀಲರು ಇವರ ಮೇಲಿನ ಫಿರ್ಯಾದಿಯನ್ನು ಹಿಂದಕ್ಕೆ ತಕ್ಕೊಂಡರು.

ಆರೋಪಿಗಳು ವಿಚಾರಣೆಯಲ್ಲಿ ಭಾಗತಕ್ಕೊಳ್ಳುವದಿಲ್ಲೆಂದು ಹೇಳಿದರು. ನಿಮ್ಮ ಬಂಗ್ಲೆಯಲ್ಲಿ ಜಪ್ತ ಮಾಡಿದ ಕಾಗದ ಪತ್ರಗಳನ್ನಾದರೂ ನೋಡಿ, ಗುರ್ತು ಹಿಡಿಯಿರೆಂದು ಮ್ಯಾಜಿಸ್ಟ್ರೇಟರು ಮಾಡಿದ ಪ್ರಶ್ನೆಕ್ಕೆ ಡಾಕ್ಟರರು ವಿಚಾರಣೆಯಲ್ಲಿ ಯಾವದೇ ರೀತಿಯಿಂದ ಭಾಗತಕ್ಕೊಳ್ಳುವದಿಲ್ಲೆಂದು ಉತ್ತರ ಕೊಟ್ಟರು. ಪೋಲೀಸ ಸುಪರಿಂಟೆಂಡೆಂಟ ಮಿ. ಸೀನಿಯರ ಮತ್ತು ಸಂದರಕಿಶೋರ ಇವರಿಬ್ಬರ ಸಾಕ್ಷಿಯಾಗಿ ವಿಚಾರಣೆ ಮುಗಿಯಿತು. ಬಳಿಕ ಏನಾದರೂ ಹೇಳುವದುಂಟೇ ಎಂದು ಮ್ಯಾಜಿಸ್ಟ್ರೇಟರು ಇವರಿಗೆ ಪುನಃ ಪ್ರಶ್ನೆ ಮಾಡಿದರು. ವಿಚಾರಣೆ ನಡೆದಾಗ ಆರೋಪಿಗಳು ಪುಸ್ತಕಗಳನ್ನು ಓದುತ್ತಾ ಕೂತಿದ್ದರು. ಮ್ಯಾಜಿಸ್ಟ್ರೇಟರು ಶಿಕ್ಷೆ ಹೇಳುವ ಸಮಯದಲ್ಲಿ ಡೇರೆಯಲ್ಲಿ ಆನಂದದಿಂದ ಚಹಾ ಕುಡಿಯುತ್ತ ಕೂತಿದ್ದರು.

ಮೌಲಾನಾ ಅಬ್ದುಲ ಕಲಾಮ ಅಜಾದರಿಗೆ ಶಿಕ್ಷೆ.

ಮೀರತದ ತುರಂಗದಲ್ಲಿ ಕಾಂಗ್ರೆಸದ [illegible] ಗಳಿಗೆ ಅಧ್ಯಕ್ಷರಾಗಿದ್ದ ಮೌ. ಅಬ್ದುಲ ಕಲಾಮ ಆಜಾದರಿಗೆ ಆರು ತಿಂಗಳ ಶಿಕ್ಷೆಯಾಗಿ ಎ ಕ್ಲಾಸ ದೊರೆಯಿತು.

ಕಾಂಗ್ರೆಸದ ಹೊಸ ಕಮೀಟಿಯು.

ಅಧ್ಯಕ್ಷ- ಚೌಧರಿ ಖಲೀಕ ಉಜಮಾನ ಅಡ್ವೋಕೇಟ ಲಖನೌ.

ವರ್ಕಿಂಗ ಕಮೀಟಿ- ಆರು ಹಿಂದೂ, ಆರು ಮುಸಲ್ಮಾನರನ್ನು ನೇಮಿಸಿದ್ದಾರೆ

೧ ಮಿ. ಹರನಾಥ ಮಿಶ್ರ ಬ್ಯಾರಿಸ್ಟರ ಲಖನೌ
೨ ಮಿ. ಬ್ರೆಲ್ವಿ ಎಡಿಟರ ಮುಂಬಯಿ ಕ್ರಾನಿಕಲ
೩ ಶ್ರೀ ವೆಲಜಿ ನಪ್ಪೂ ಮುಂಬಯಿ (ಖಜೀನದಾರ)
೪ ಶ್ರೀ. ಕೆ. ವ್ಹಿ. ಆರ. ಸ್ವಾಮಿ ರಾಜಮಹೇಂದ್ರಿ
೫ ಶ್ರೀ. ಶ್ರೀನಿವಾಸರಾವ ಕೌಜಲಗಿ, ವಿಜಾಪೂರ
೬ ಮಿ. ಎ. ಎಮ. ಖ್ವಾಜಾ. ಅಲ್ಲಾಬಾದ
೭ ಮೌಲಾನಾ ಇಸ್ಮಾಯಿಲ ಗಜನವಿ ಅಮೃತಸರ
೮ ಸಚ್ಚಿತಾನಂದ ಬೋಸ ಕಲಕತ್ತೆ
೯ ಪ್ರೊಫೆಸರ ಅಬ್ದುಲ ಬಾರಿ ಪಾಟಣಾ
೧೦ ಮಿ. ಆಸಫಅಲ್ಲಿ ದಿಲ್ಲಿ
೧೧ ಮೌಲಾನಾ ಅಬ್ದುಲ ಬಾಕಿ ದಿನಾಜಪೂರ

ಇವರ ಹೊರತು ಶ್ರೀ [illegible] ಮತ್ತು ಶ್ರೀ [illegible] ಇವರು ಮೊದಲಿನಂತೆ ಮೆಂಬರರಾಗಿರುವರು.

ನಾಮದಾರ ಬೆಳವಿಯವರಿಗೂ ಕಲಿತನ ಬಂತು.

ಸರಕಾರದವರು ಬೆಳಗಾವಿಯ ಕಾಂಗ್ರೆಸ ಕಮೀಟಿಯನ್ನು ಬೇಕಾಯದೆಶೀರ ಮಾಡಿದರೆ- ತಾವು ಅದರ ಮುಖಂಡತ್ವವನ್ನು ಸ್ವೀಕರಿಸುವಂತೆ ನಾಮದಾರ ಬೆಳವಿಯವರು ಜಾಹೀರ ಮಾಡಿದ್ದಾರೆ.

ಪುನರಾಗಮನ-

ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರು ಸಾಹೇಬರು ಲಾರ್ಡ ಆಯರ್ವಿನಸಾಹೇಬರ [illegible] ಶರ್ತುಗಳ ಪತ್ರ ತಕ್ಕೊಂಡು ಪುನರ್ವಿಚಾರಣೆಗಾಗಿ ಇಂದು ನೈನಿತಾಲದಲ್ಲಿ ಪಂಡಿತ ಪಿತಾಪುತ್ರರ ಕಂಡು, ಅವರ ಕೂಡ ಮಾತಾಡಿ ಎರಡು ದಿವಸಗಳಲ್ಲಿ ಮಹಾತ್ಮರ ಕೂಡ ಮಾತಾಡಲು ಯರವಡೆಗೆ ಬರುವರು.

ವಿಜಯ ನಿತ್ಯ ಪತ್ರಿಕೆ 1930 ಸೆಪ್ಟೆಂಬರ್

ಸೋಮವಾರ	1.9.1930
ಬುಧವಾರ	3.9.1930
ಗುರುವಾರ	4.9.1930
ಶುಕ್ರವಾರ	5.9.1930
ಶನಿವಾರ	6.9.1930
ಸೋಮವಾರ	8.9.1930
ಬುಧವಾರ	10.9.1930
ಗುರುವಾರ	11.9.1930
ಶುಕ್ರವಾರ	12.9.1930
ಶನಿವಾರ	13.9.1930
ಸೋಮವಾರ	15.9.1930
ಬುಧವಾರ	17.9.1930
ಗುರುವಾರ	18.9.193
ಶುಕ್ರವಾರ	19.9.1930
ಶನಿವಾರ	20.9.1930
ರವಿವಾರ	21.9.1930
ಸೋಮವಾರ	22.9.1930
ಮಂಗಳವಾರ	23.9.193
ಗುರುವಾರ	25.9.193
~~ಶುಕ್ರವಾರ~~ ಶುಕ್ರವಾರ	26.9.193
ಶನಿವಾರ	27.9.193
ರವಿವಾರ	28.9.193
ಸೋಮವಾರ	29.9.193
ಮಂಗಳವಾರ	30.9.193

ಬಂಕಾಪೂರದವರ ಸತ್ಯಾಗ್ರಹದ ಜಯ.

——(೦)——

ನೀರಲಗಿಯ ಪುಂಡಾಟಿಕೆಯ ಪ್ರಕರಣದಲ್ಲಿ ಕಸಿದುಕೊಂಡ ಸಾಮಾನುಗಳನ್ನು ತಿರುಗಿ ಕೊಡದಿದ್ದರೆ ಸತ್ಯಾಗ್ರಹದಿಂದ ತೆಗೆದುಕೊಳ್ಳುವೆವೆಂದು ಈ ಊರವರು ನೀರಲಗಿ ಗ್ರಾಮದ ಸಭೆಯಲ್ಲಿ ಹೇಳಲು ಅಲ್ಲಿಯ ಗೌಡರು ಅವುಗಳನ್ನು ಕೊಡಿಸುವವೆಂದು ಹೇಳಿದ್ದರು. ಆ ಪ್ರಕಾರ ಇಲ್ಲಿಂದ ಬಂಕಾಪೂರದವರು ಅವನ್ನು ತರಲಿಕ್ಕೆ ಹೋದರು. ಆದರೆ ಗೌಡರು ಸಾಮಾನುಗಳು ಮುಟ್ಟಿದ್ದಕ್ಕೆ ಪಾವತಿ ಕೊಡಿರೆಂದು ಕೇಳಿದ್ದಕ್ಕೆ ಅವರು ಪಾವತಿ ಕೊಡದೆ ತಿರುಗಿ ಬಂದರು. ಮಾರುದಿವಸ ಶ್ರೀ ವೈದ್ಯರು ಹೋಗಿ ಗೌಡನ ಹೇಳಿಕೆ ಪ್ರಕಾರ ಪಾವತಿ ಕೊಡಲಿಕ್ಕೆ ಸಿದ್ಧರಾಗಿದ್ದರೂ ಸಾಕ್ಷಿದಾರರನ್ನು ಕೇಳಿದರು. ಆ ವೈದ್ಯರು ಫೌಜದಾರರಿಗೆ ತಿಳಿಸಲಾಗಿ, ಅವರು ಒಂದು ಸಾಮಾನ ಕೊಡಿಸಿದರು. ಸಾಮಾನುಗಳು ಗೌಡರ ಮನೆಯಲ್ಲಿದ್ದವು. ಅವನ್ನು ತೆಗೆದುಕೊಂಡು ಬಂದರು.

ಮೋಟೇಬೆನ್ನೂರಿನ
ಬಾಲಕರ ಒಲವೂ ಒಲವೂ.

——(೦)——

ಗಣೇಶ ಚವತಿಯ ದಿವಸ ೮ ವರ್ಷದ ಕೆಳಗಿನ ಬಾಲರ ಸೈನ್ಯವು ಮುಂಜಾನೆ ೬ ಘಂಟೆಯಿಂದ ಸಂಜೆಯ ೭ ಘಂಟೆಯವರೆಗೆ ಅವ್ಯಾಹತವಾಗಿ ನಗರ ಸಂಕೀರ್ತನ ಮಾಡುತ್ತ ಪದ್ಯ, ಪಟಾಕ್ಷಿ, ಬಾಣ, ಬೀಸು ಯಾವದೇ ಒಗೆಯ ಮದ್ದಿನ ಪಿಕಟಿಂಗವಾಗಿ ಸಂಪೂರ್ಣ ಯಶಪಡೆದರು. ಹಬ್ಬದಲ್ಲಿ ಸಜ್ಜಾಗಿ ಉಂಡುಟ್ಟು ವಿನೋದ ಪಡಿಯಬೇಕೆಂಬ ಪರಿವೆ ಇಲ್ಲದೆ ಬಾಲಕರು ಕೈಕೊಂಡ ಸತ್ಕಾರ್ಯವನ್ನು ನೋಡಿ ಹಿರಿಯರು ಹಿರಿಹಿರಿ ಹಿಗ್ಗಿ ಗಾಂಧೀ ಮಹಾರಾಜರು ಕೈಕೊಂಡ ಕಾರ್ಯಕ್ಕೆ ತೀವ್ರವೇ ಯಶದೊರೆಯಬೇಕೆಂದು ಆತುರವುಳ್ಳವರಾಗಿ ಸ್ವರಾಜ್ಯ ಸಂಪಾದನೆಗೆ ಅಡ್ಡಬಂದಿರುವ ವಿಘ್ನಗಳು ತೀವ್ರ ಬಯಲಾಗಲೆಂದು ವಿಘ್ನೇಶನನ್ನು ಅನನ್ಯಭಾವದಿಂದ ಪ್ರಾರ್ಥಿಸಿದರು. ಇದೇ ಅಲ್ಲವೇ ,, ಗುಣಾಃ ಪೂಜಾಸ್ಥಾನಂ ಗುಣಿಷು ನಚ ಲಿಂಗಂ ನಚ ವಯಃ ,,

ತಮ್ಮ ತರುಣ ಸಂಘ
ಮೋಟೇಬೆನ್ನೂರ

ಕಿತ್ತೂರು ಸಾರ್ವಜನಿಕ ಗಣೇಶೋತ್ಸವ.

——(೦)——

ರಾಷ್ಟ್ರೀಯ ಧ್ವಜ, ಭಜನೀಮೇಳ, ವಾದ್ಯ ವೈಭವಗಳೊಂದಿಗೆ ಪ್ರಚಂಡ ಮೆರವಣಿಗೆ ಹೊರಟು ಶ್ರೀ ವಿಘ್ನೇಶನನ್ನು ಪಲ್ಲಕ್ಕಿಯೊಳಗಿಂದ ಕರೆದುಕೊಂಡು ಬಂದು ಸೋಮವಾರಪೇಟಿಯ ಲಾಯಬ್ರರಿಯಲ್ಲಿ ಪ್ರತಿಷ್ಠಾಪನೆಯಾಯಿತು. ಆಬಾಲವೃದ್ಧ ಸ್ತ್ರೀಪುರುಷರು ಭಾಗ ತೆಗೆದುಕೊಂಡಿದ್ದರು. ಎದುರಿಗಿನ ವಿಶಾಲವಾದ ಹಂದರದಲ್ಲಿ ಬೆಳಗಾವಿಯ ಶ್ರೀಯುತ ಕೇ. ಎಸ್. ಪಾಟೀಲ ವಕೀಲರು ಸದ್ಯಸ್ಥಿತಿಯನ್ನು ಚನ್ನಾಗಿ ವರ್ಣಿಸಿ ಮಹಾತ್ಮರನ್ನು ಎಲ್ಲರೂ ಹಿಂಬಾಲಿಸಬೇಕಾಗಿ ಕಳಕಳಿಯಿಂದ ಹೇಳುವವರಾದರು. ಬರುವ ಮಂಗಳವಾರವರೆಗೆ ದಿನಾಲು ಭಜನ, ಕಥಾ, ಕೀರ್ತನ, ವ್ಯಾಖ್ಯಾನಾದಿಗಳು ನಡೆಯುವವು.

ಕಿತ್ತೂರು   ತಮ್ಮ ಸುದ್ದಿಗಾರ
೨೭-೮-೩೦   ಬ ಅ: ಅತ್ರೇಯ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯುಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಿಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರೂ ತಯಾರಿ ಸಿಗುತ್ತಾರೆ.

ಮಲ್ಲಪ್ಪಾ ಗುರಪ್ಪಾ ಗೋಡಿಶಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು. ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ. ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ಕೊಳೆಯ ಸೇರು ೧ಕ್ಕೆ ೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦
೧೯ ೧೧-೨೯   ಮೈಸೂರ ಸ್ಟೋರ್ಸ,
ಬೆಳಗಾವಿಯವರಗಲ್ಲಿ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚ್ಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯಿವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯಿವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನ ಹತ್ತರ, ಧಾರವಾಡ

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಲೆಯ ಭೂಗೋಲು
ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಲೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಲೆಯ ಭೂಗೋಲು ಪ್ರಸಿದ್ಧವಾಗಿಲ್ಲ ಇವುಗಳಲ್ಲಿ ಎರಡೂ ಜಿಲ್ಲೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಲಾ ನಂಬರ ೧. ಗದಗ ಬೆಟಗೇರಿ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ

R. N. B 1643

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಜೋಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೧ನೇ ಸಪ್ಟಂಬರ ೧೯೩೦ (ಸಂಚಿಕೆ ೨೯೪

ಮುಂಬಯಿ ಕಾಯದೆ ಕೌನ್ಸಿಲ್ ಚುನಾವಣೆ.

ಧಾರವಾಡ ಜಿಲ್ಹಾ ಬಿನ್ನ ಮುಸಲ್ಮಾನ ಮತದಾರರಿಗೆ ವಿನಂತಿ.

ಮಹನೀಯರೇ,

ನಾನು ಬರುವ ೧೦ನೇ ಸಪ್ಟಂಬರಕ್ಕೆ ಆಗುವ ಮುಂಬಯಿ ಕಾಯದೇ ಕೌನ್ಸಿಲ್ ಇಲೆಕ್ಶನ್ನಕ್ಕೆ ಉಮೇದವಾರನಾಗಿ ನಿಂತಿದ್ದೇನೆ. ತಾವು ನನಗೆ ಎರಡು ಸಾರೆ ಆರಿಸಿ ಕೊಟ್ಟು ಜನಸೇವೆಯನ್ನು ಮಾಡಲಿಕ್ಕೆ ಅಸ್ಪದ ಕೊಟ್ಟಿರುವಿ. ನಾನು ಕೌನ್ಸಿಲದಲ್ಲಿ ಮಾದಕ ಪದಾರ್ಥ ನಿಷೇಧ, ಮತ್ತು ೧೦೦ ರೂಪಾಯಿ ಲಾವಣಿ ಬಾಳುವಂಥ ಜಮೀನುಗಳ ಮೇಲೆ ಪರಮಾವಧಿ ೫೦ ರೂಪಾಯಿ ತೆರಿಗೆ ಹಾಕಬೇಕೆಂತಾ ಮಾಡಿದ ಜಮೀನ ಮಹಸೂಲಿನ ಹೊಸ ಕಾಯದೇದ ಪ್ರತಿಬಂಧಕ ಠರಾವುಗಳನ್ನು ತಂದು ಪಾಸ ಮಾಡಿಕೊಂಡದ್ದು ತಮಗೆ ಗೊತ್ತೇ ಇದೆ. ಇದರ ಹೊರ್ತು ಕರ್ನಾಟಕ ಏಕೀಕರಣ, ಕರ್ನಾಟಕ ಇರಿಗೇಶನ್ನ ವಗೈರೆ ಅನೇಕ ಜನ ಹಿತದ ಕೆಲಸಗಳ ಬಗ್ಗೆ ವಿಶೇಷ ಪ್ರಯತ್ನ ಪಟ್ಟಿರುವೆನು. ಕೌನ್ಸಿಲಿನ ಹೊರಗಾದರೂ ಅನೇಕ ಲೋಕ ಹಿತದ ಕೆಲಸಗಳನ್ನು ಮಾಡಿರುವೆನು. ಚುನಾವಣೆಯು ಸಮೀಪಿಸಿದ್ದರಿಂದ ಪ್ರತಿ ಒಬ್ಬರಿಗೆ ವ್ಯಕ್ತಿಶಃ ಭೆಟ್ಟಿಯಾಗುವದು ಅಥವಾ ಲೇಖಿಯಿಂದಾ ತಿಳಿಸುವದು ಅಶಕ್ಯ ಕಾರಣ ಈ ಜಾಹೀರ ಪತ್ರಿಕೆಯಿಂದ ವಿನಂತಿ ಮಾಡಿಕೊಂಡಿರುವೆನು. ತಾವೆಲ್ಲರು ಪುನಃ ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ಆರಿಸಿಕೊಟ್ಟರೆ ಜನಹಿತದ ಕಾರ್ಯಗಳನ್ನು ಮಾಡಲಿಕ್ಕೆ ಉತ್ಸಾಹದಿಂದ ಪ್ರಯತ್ನ ಮಾಡುವೆನು. ನನ್ನ ಚಿನ್ಹ ಮನುಷ್ಯ ಹೋಟಿನ ಪೇಪರದಲ್ಲಿ ಬದಿಗೆ ತೋರಿಸಿದಂತೆ ಇದೆ. ಅದರ ಮುಂದೆ (× ×) ಈ ಪ್ರಕಾರ ಎರ್ಡು ಗುರ್ತು ಮಾಡಬೇಕು.



ಧಾರವಾಡ

೨೭-೮-೩೦

ತಮ್ಮ ಸೇವಕ

ವಿಶ್ವನಾಥ ನಾರಾಯಣ ಜೋಗ

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಒಪ್ಪುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ತೋಕ ತಕ್ಕೊಳ್ಳುವವರಿಗೆ ನೂರಕ್ಕೆ ಥರ್ಪೂಂ ಕಮೀಶನ ದೊರೆಯುವದು.

ಜಿ. ವ್ಹಿ. ನವಲಕ್ಷೆ,
ಶ್ರೀ ಲಕ್ಷ್ಮೀವೆಂಕಟೇಶ ಸ್ಟೋರ್ಸ್ ಮಾರ್ಕೆಟ ರೋಡ, ಧಾರವಾಡ.

WANTED

WANTED:- Agents and Sub-Agents for Commercial Towns to push on a Co-operative Loan scheme on commission basis, on liberal terms. Only reliable people need apply to

C. M. Karaka,
Chief Representative
Dharwar.
FOR METROPOLITION MUTUAL
BANKING & ASSURANCE CO., LTD.
BOMBAY.

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೆಟಿವ ಕ್ರೆಡಿಟ ಸೊಸಾಯಟೆಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವವು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೪-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ೮೫೫ ಭಾದ್ರಪದಶುದ್ಧ ೯

ಮುಧೋಳ ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆ.

ಮುಧೋಳದ ಯಜಮಾನರು ತಮ್ಮ ಸಂಸ್ಥಾನವು ಪುಟ್ಟದಾದ್ದರೂ, ಅದಕ್ಕಾಗಿ ಪ್ರಜಾಪ್ರತಿನಿಧಿ ಸ್ವರೂಪದ ಒಂದು ಕೌನ್ಸಿಲವನ್ನು ಸ್ಥಾಪಿಸಿ, ಸದ್ಯ ಅದಕ್ಕೆ ಮ್ಯುನಿಸಿಪಾಲಿಟಿ, ಸ್ಯಾನಿಟೇಶನ, ಶಿಕ್ಷಣ ಮತ್ತು ಧರ್ಮಾದಾಯ ಖಾತೆಗಳ ಅಧಿಕಾರ ಕೊಟ್ಟಿರುತ್ತಾರೆ. ಬರಬರುತ್ತಾ ಬೇರೆ ಖಾತೆಗಳ ಅಧಿಕಾರ ಕೊಡುತ್ತಾ ಹೋಗುವರು. ಇದೇನು ಹೊಸ ವಿಷಯವಲ್ಲ; ಹೊಗಳುವಂತಹದಲ್ಲ. ವಿಶೇಷವೆಂದರೆ- ಚುನಾವಣೆಯಲ್ಲಿ ಮಾಡಿದ ಯೋಜನೆಯು. ಸಭೆಯಲ್ಲಿ ೫೪ ಜನ ಮೆಂಬರರಾಗಿರುವರು ಸಂಸ್ಥಾನದ ಯೋಗ್ಯತೆಯನ್ನು ನೋಡಿದರೆ- ಈ ಸಂಖ್ಯೆಯು ದೊಡ್ಡದಾಗುತ್ತದೆ. ಇದು ಒಂದು ತಾಲೂಕಿನಷ್ಟಂಟು. ಡಿಸ್ಟ್ರಿಕ್ಟ ಲೋಕಲಬೋರ್ಡಿನಲ್ಲಿ ಇಷ್ಟು ಜನ ಮೆಂಬರರಿರುವದಿಲ್ಲ. ಸಂಪೂರ್ಣ ಪ್ರಾತಿನಿಧಿಕ ಸ್ವರೂಪ ಕೊಡಬೇಕೆಂದು ಸಂಖ್ಯೆ ಹೆಚ್ಚಿಸಿದ್ದಾರೆ. ಮತಕೊಡತಕ್ಕವರು ೨೧ ವರ್ಷ ಮೀರಿದ ಪ್ರಬುದ್ಧರಾದರಾಯಿತು. ಕರಕಂದಾಯ ಕೊಡಲಿ, ಕೊಡದಿರಲಿ; ಹೋಟರರಾಗುತ್ತಾರೆ. ಸ್ತ್ರೀಯರಿಗೂ ಮತಾಧಿಕಾರವುಂಟು; ಆದರೆ ಅವರಿಗೆ ಸ್ಥಾನಪ್ರಾಪ್ತಿ ಇರತಕ್ಕದ್ದು... ೫೪ ರಲ್ಲಿ ೪೪ ಜನರನ್ನೇ ಆರಿಸತಕ್ಕದ್ದು. ಹತ್ತು ಜನರನ್ನು ಕೌನ್ಸಿಲ ಆಫ ಸ್ಟೇಟದಂತೆ ದೊಡ್ಡ ಉತ್ಪನ್ನದಾರರೂ, ವತನದಾರ ಇನಾಮದಾರರೂ ಆರಿಸತಕ್ಕದ್ದು. ದರಬಾರದವರು ಹತ್ತು ಜನರ ನಾಮಿನೇಶನ ಮಾಡುವರು. ಉಳಿದ ೪೪ ಜನರಲ್ಲಿ- ೫ ಬ್ರಾಹ್ಮಣ, ೧೭ ರಡ್ಡಿ, ೧೦ ಲಿಂಗಾಯತ ೪ ಅಸ್ಪೃಶ್ಯ, ೩ ಮುಸಲಮಾನ, ೨ ನೇಯಕಾರ, ೧ ಬೇಡರ ೨ ಗುಜ್ಜರು ಈ ಪ್ರಕಾರ ಹೋಟರರು ಆರಿಸಬೇಕಾಗುತ್ತದೆ. ಸಭೆಯಲ್ಲಿ ಲೋಕನಿಯುಕ್ತ ಅಧ್ಯಕ್ಷನಿರುವನು. ಸರಕಾರೀ ಮೆಂಬರನೋರ್ವನು ಅಲ್ಲಿರುವನು. ಮೆಂಬರರು ವಿಷಯಾಂತರ ಮಾಡಿದರೆ- ಅವರಿಗೆ ಯೋಗ್ಯ ಹಾದಿಯನ್ನು ತೋರಿಸುವದಷ್ಟೇ ಇವನ ಕೆಲಸ. ಇದು ಬಾಲ್ಯಾವಸ್ಥೆಯಲ್ಲಿದ್ದು ಮುಂದೆ ಹೇಗೆ ನಡೆಯುವದೆಂಬದನ್ನು ನೋಡಿಕೊಂಡು ಹೆಚ್ಚೆಚ್ಚು ಸುಧಾರಣೆ ಮಾಡುತ್ತಾ ಹೋಗುವರು.

ಅಧಿಕಾರಿಗಳ ವಿಕ್ಷಿಪ್ತ ವರ್ತನೆ.

—(೦)—

ಡೊಳ್ಳು, ಹಲಿಗೆ ಬಾರಿಸಿ ಸಭೆ ಮುರಿದರು.

—(೦)—

ಮಿರಜೆಯಲ್ಲಿ ಕಾಯದೆಭಂಗದ ದೆಸೆಯಿಂದ ತುರುಂಗವಾಸಿಯಾಗಿದ್ದ ಶ್ರೀ ಶಿಖರೆಯವರು ಮಿರಜೆ ತಾಲೂಕಿನಲ್ಲಿ ಸ್ವದೇಶಿಯ ಪ್ರಸಾರ ಮಾಡಲೋಸುಗ ಊರೂರಿಗೆ ವ್ಯಾಖ್ಯಾನ ಕೊಡಲುದ್ಯುಕ್ತರಾದರು. ಮಿರಜೆಯಿಂದ ಆರು ಮೈಲುಗಳ ಮೇಲಿರುವ ಒಂದು ಗ್ರಾಮಕ್ಕೆ ಇವರು ಹೋಗಲು- ಮಾಮಲೇದಾರರಾದ ಮಿ. ದಪ್ತರದಾರರು ಇವರ ಬೆನ್ನ ಹಿಂದೆ ಹೋಗಿ ಇವರಿಗೆ ಸಭೆ ಕೂಡಿಸಬೇಡಿರೆಂದು ಹೇಳಿದರು. ಶ್ರೀ ಶಿಖರೆಯವರು ಮಾಮಲೇದಾರರ ಅಪ್ಪಣೆಯನ್ನು ಅಮಾನ್ಯ ಮಾಡಲು- ರಾವಸಾಹೇಬರು ಕುರುಬರನ್ನೂ ಹೊಲೆಯರನ್ನೂ ಡೊಳ್ಳು ಹಲಿಗೆ ಸಹಿತ ಕರೆ ತರಿಸಿ, ಅವರಿಂದ ಸಭೆಯ ತುಂಬ ಗೊಂದಲವನ್ನೆಬ್ಬಿಸಿದರು. ಹೀಗೆ ಸಭೆ ಮುರಿಯಿತು. ಶ್ರೀ ಶಿಖರೆಯವರು ತಿರಿಗಿ ಮಿರಜೆಗೆ ಬಂದು, ಅಂದೇ ಸಾಯಂಕಾಲದಲ್ಲಿ ಜಾಹೀರ ಸಭೆ ಕೂಡಿಸಲು ಅಲ್ಲಿಯೂ ಇದೇ ಕಾಯಿದೆ, ಇದೇ ಕಾಯಕ ನಡೆಯಿತು. ಮಾಮಲೇದಾರರ ವಿಕ್ಷಿಪ್ತ ವರ್ತನೆ ಕಂಡು ಜನರು ಅವರ ಅಪಹಾಸ್ಯ ಮಾಡಿದರು ಕಡೆಗೆ ಒಂದು ಖಾಸಗಿ ಒಳಂಗಳದಲ್ಲಿ ಸಭೆ ಮಾಡಿ, ಶ್ರೀ ಶಿಖರೆಯವರು ಮಾಮಲೇದಾರರ ಮೇಲೆ ಸ್ಯಾದಿವಾಕು ಮಾಡಿದರು.

ಪೋಲೀಸ ಅಮಲದಾರರಿಗೆ ಹಿಂಬಡತಿ ಮುಂಬಡತಿ.

—(೦)—

ಇಜಿಪ್ತದಲ್ಲಿ ಎರಡು ತಿಂಗಳ ಹಿಂದೆ ದಂಗೆಯಾದಾಗ ಒಬ್ಬ ಪೋಲೀಸ ಸಾಹೇಬನು ಜನರ ಮೇಲೆ ಗುಂಡು ಹಾಕಿಸಿದನು. ಇನ್ನೊಬ್ಬನು ಶಾಂತತೆಯಿಂದಲೇ ಗದ್ದಲ ಅಡಗಿಸಿದನು. ಈಗಿನ ಮವಾಳ ಮಂತ್ರಿಗಳು ಗುಂಡು ಹಾಕಿದವನಿಗೆ ಬಡತಿಕೊಟ್ಟು, ಜನಲಯ ಮಾಡದಂಥವನಿಗೆ ಪೆನಶನ್ನ ಕೊಟ್ಟು ಮನೆಗೆ ಕಳಿಸಿದರು. ಮುಂಬಯಿಯಲ್ಲಿ ಕಲೆಯೊಡಿಸಿದ ಸರ ಹೀಲಿಯವರಿಗೆ ಮುಂಬಡತಿ ಮತ್ತು ನಾಗಪೂರದ ಪೊ|| ಸಾಹೇಬರಿಗೆ ಹಿಂಬಡತಿ ಮಾಡಬೇಕಾಯಿತು.

ಕಾಂಗ್ರೆಸಕ್ಕೆ ಮುಸಲಮಾನರ ಹೆಚ್ಚು ಸಹಾನುಭೂತಿಯು.

—(೦)—

ಮೌಲಾನಾ ಅಬ್ದುಲ ಕಲಮ ಆಜಾದರು ಕಾಂಗ್ರೆಸದ ಅಧ್ಯಕ್ಷರಾದ ಕೂಡಲೆ- ತುರುಂಗಕ್ಕೆ ಹೋಗುವ ಅಧ್ಯಕ್ಷಪದದ ಪರಂಪರೆಯು ಮುಸಲಮಾನರಿಗೆ ಹತ್ತಿತು. ಆಜಾದಸಾಹೇಬರ ತರುವಾಯ ಡಾಕ್ಟರ ಅನಸಾರಿ, ಅವರ ತರುವಾಯ ಈಗಿನ ಅಧ್ಯಕ್ಷರಾದ ಚೌಧರಿ ಅಬ್ದುಲ ರಹಿಮಾನರಾದರು. ಇವರೂ ಮುಂದೆ ಒಬ್ಬ ಮುಸಲಮಾನರನ್ನೇ ನೇಮಿಸುವಂತಾಗಿದೆ. ಏಕೆಂದರೆ- ಜಮಾಯತ-ಲ್ ಉಲೇಮಾದವರು ಈ ಭಾರ ಹೊರಲಿಕ್ಕೆ ತಾವು ಸಿದ್ಧರಾಗಿರುವ ಹಾಗೆ ಡಾಕ್ಟರ ಅನಸಾರಿಯವರಿಗೆ ತಿಳಿಸಿದರು. ನಿಮ್ಮ ಪತ್ರ ತಡವಾಗಿ ಬಂತು ವ್ಯವಸ್ಥೆಯಾಗಿ ಹೋಗಿತ್ತು. ಮುಂದೆ ನಿಮಗೇ ಮಾಲೇಹಾಕುವೆನೆಂದು ನಂಬಿಗೆ ಹೇಳಿದ್ದಾರೆ. ಇದರಿಂದ ಮುಸಲಮಾನರು ಕಾಂಗ್ರೆಸಕ್ಕೆ ಪ್ರತಿಕೂಲರಿದ್ದಾರೆಂಬ ಅಧಿಕಪ್ರೇಕ್ಷಕರ [illegible] ಸುಳ್ಳಾಯಿತು. ಇದಕ್ಕೆ ಇನ್ನೊಂದು ಪ್ರತ್ಯಕ್ಷ ದೃಷ್ಟಾಂತವಾಗಿದೆ. ಕಾಂಗ್ರೆಸದ ಒಂಭತ್ತು ಜನರಿಗೆ ಶಿಕ್ಷೆಯಾಗುವ ದಿವಸ [illegible] ಯಲ್ಲಿ ಶುಕ್ರವಾರದ ನಮಾಜ ಮುಗಿದ ಕೂಡಲೆ- ಮುಸಲಮಾನರ ಒಂದು ಸಾವಿರ ವ್ಹಾಲಂಟಿಯರು ಜುಮ್ಮಾ ಮಸೀದಿಯಲ್ಲಿಯೇ ಕಾಂಗ್ರೆಸದ ಜಯಜಯಕಾರ ಮಾಡಿದರು. ಕವಾಯಿತು ಮಾಡಿದರು. ನಾಲ್ಕು ತಿಂಗಳು ಹಿಂದೂ ಜನರು ಕಷ್ಟ ಸೋಸಿದರು. ಈ ನಂತರ ಮುಸಲಮಾನರು ಕಾಂಗ್ರೆಸದ ಚಾಲಕರಾಗಿ ಕಷ್ಟದ ಕೂಡ ಫಲವನ್ನೇಕೆ ಪಡೆಯಬಾರದು?

ಕೋಟ್ಯಾಧೀಶರು ಕಾಂಗ್ರೆಸದ ಕರಾರಕ್ಕೆ ಒಪ್ಪಿದರು.

—( )—

ಮುಂಬಯಿಯಲ್ಲಿ ಯುರೋಪಿಯನ್ನ ಸಾಮಾನುಗಳಿಂದ ನೂಲು ಮತ್ತು ಅರಿವೆ ನೆಯುವ ಸಸೂನ ಕಂಪನಿಯ ಗಿರಣಿಗಳಿಗೆ ಬಹಿಷ್ಕಾರ ಬಿದ್ದಿತ್ತು. ಕಂಪನಿಯು ಕೋಟ್ಯಾಧೀಶರದು. ಮೂಲ ಪ್ರವರ್ತಕರು ನವಕೋಟಿ ನಾರಾಯಣರು. ಏನಾದರೇನು? ಇವರ ಗಿರಣಿಗಳಲ್ಲಿ ಹೊರಡುತ್ತಿದ್ದ ಸರಕಿಗೆ ಪೇಟೆಯಲ್ಲಿ ಗಿರಾಕಿಗಳೇ ಇಲ್ಲದಂತಾಗಿ ಇಪ್ಪತ್ತು ಸಾವಿರ ಕೂಲಿಕಾರರು ನಿರುದ್ಯೋಗಿಗಳಾಗುವ ಹೊತ್ತು ಬಂತು. ಮತ್ತು ಗಿರಣಿಯಲ್ಲಿ ಮಾರಾಟವಿಲ್ಲದೆ ಪರ್ವತಪ್ರಾಯವಾಗಿ ಬಿದ್ದ ಸರಕು ಹುಳಹತ್ತಿ ಕೆತ್ತುಳಿಸುವ ದುರ್ಧರ ಪ್ರಸಂಗ ಬಂದಾಗ ಇವರು ತಮ್ಮ ಸಿರಿವಂತಿಕೆಯನ್ನು ಬದಿಗಿಟ್ಟು ಕಾಂಗ್ರೆಸದ ಕೂಡ ರಾಜೀಮಾಡಿಕೊಂಡು, ಗಿರಣಿಗಳನ್ನು ಸ್ವದೇಶೀ ಮಾಡಿದರು.

ಯುರೋಪಿಯನ್ನ ಜಪಳಿಯವರಿಗೆ ಕಾಂಗ್ರೆಸದವರು ಪೇಚು ಹಾಕಿದರು

ಮುಂಬಯಿಯಲ್ಲಿ ವಿಲಾಯತಿಯ ಹತ್ತು ಕೋಟಿಯ ಜಪಳಿಯು ಸಮುದ್ರದ ಗಾಳಿ ತಿನ್ನುತ್ತಾ ಬಿದ್ದಿದೆ. ಇದನ್ನು ಹೇಗಾದರೂ ಮಾರಿಸಿಕೊಡಿರಿ; ಇದರ ಮೇಲಿನ ಬಹಿಷ್ಕಾರವನ್ನು ತೆಗೆದು ಹಾಕಿರೆಂದು ಯುರೋಪಿಯನ್ನ ದಲಾಲರು ಕಾಂಗ್ರೆಸದವರಿಗೆ ಹೇಳಿಕೊಂಡರು. ನಾವೊಂದು ಕೋಟಿಯ ದೇಶಿ ಅರಿವೆ ಕೊಡುತ್ತೇವೆ. ಅದನ್ನು ನೀವು ಹಿಂದುಸ್ಥಾನದ ಹೊರಗೆ ಮಾರಿರಿ. ಅಂದರೆ ನಿಮ್ಮದೊಂದು ಕೋಟಿಯ ಸರಕನ್ನು ಇಲ್ಲಿ ಅಟ್ಟಿಸುತ್ತೇವೆಂದು ಕಾಂಗ್ರೆಸದವರು ಇವರಿಗೆ ಕರಾರು ಹಾಕಿದ್ದಾರೆ. ಇದಕ್ಕೆ ಲ್ಯಾಂಕಾಶಾಯರನವರು ಒಪ್ಪುವ ಲಕ್ಷಣವಿಲ್ಲ.

ಧಾರವಾಡದ ಗಡಂಗದ ಮುಂದೆ ಪಿಕೆಟಿಂಗ.

ಧಾರವಾಡದ ಸ್ವಯಂಸೇವಕರು ಪೋಲೀಸ ಸ್ಟೇಶನದ ಮಗ್ಗಲಿಗಿರುವ ಸಾರಾಯಿಯ ಗಡಂಗದ ಮುಂದೆ ನಡೆಸಿದ ಪಿಕೆಟಿಂಗವು ಯಶಸ್ವಿಯಾಗಿದೆ. ಸ್ವಯಂಸೇವಕರು ಕುಡುಕರಿಗೆ ಕುಡಿಯಬೇಡಿರೆಂದು ಉಪದೇಶ ಮಾಡುವದಿಲ್ಲ. ಕುಡಿಯುವದರಿಂದಾಗುವ ದುಷ್ಪರಿಣಾಮವನ್ನು ಹೇಳುವ ಹಾಡನ್ನು ಹಾಡುತ್ತಾ, ಗಡಂಗದ ಮುಂದೆ ಹಾದಾಡುವರು. ಇದರಿಂದ ಕುಡುಕರು ನಾಚಿಕೆಗೆಟ್ಟು, ಕುಡಿಯಲಿಕ್ಕೆ ಹೋಗುವದೇ ಇಲ್ಲ. ದಿನಾಲು ಸಾಯಂಕಾಲದಲ್ಲಿ ನೂರಾರು ಜನರು ಕುಡಿದು, ಜೋಲಿ ಬೀಳುತ್ತಾ ಮುಗಿಲು ಬಿತ್ತೆಂದು ಚೀರಾಕಿ ಹೊಡೆಯುತ್ತಾ, ಬೀದಿಗಳಲ್ಲಿ ಟಾಂಗಾ, ಮೋಟಾರ, ಸಭ್ಯ ಗೃಹಸ್ಥರು, ಸ್ತ್ರೀಯರು ಹಾಯದಂತೆ ಮಾಡುತ್ತಿದ್ದರು. ಪಿಕೆಟಿಂಗದಿಂದ ದಾರಿಯು ನಿರ್ಭಯವಾಗಿ, ಬೇಕಾದವರು ನಿರಾತಂಕವಾಗಿ ಹಾದಾಡಬಹುದು. ಗಡಂಗದಲ್ಲಿ ಲಕಲಕ ಹೊಳೆಯುವ ದೀಪಗಳು ದಿವಾಳಿಗೇನು ದೀಪ ಹಚ್ಚಿಕೊಂಡು ಕೂಡ್ರುವಂಥ ಮಾದರಿಯನ್ನು ತೋರಿಸುತ್ತಿರುವವು.

ಕಳ್ಳರ ತಾಂಡೆ ಹಿಡಿದರು.

ಕಳವು ಕುಡುಗು ಮಾಡತಕ್ಕವರ ತಪಾಸು ಹಚ್ಚುವದಕ್ಕಾಗಿ ಇಲ್ಲಿ ಸಬ್ ಇನ್ಸಪೇಕ್ಟರ ಮಿ|| ಕೋಳೇಕರರನ್ನು ನೇಮಿಸಿದ್ದರು. ಅವರು ಒಂದು ಗುಂಪನ್ನು ವಸ್ತ್ರ ಒಡವೆಗಳ ಸಹಿತವಾಗಿ ಹಿಡಿದು ತಂದಿದ್ದಾರೆ. ಇಲ್ಲಿ ಒಬ್ಬ ಮಾರವಾಡಿಯಲ್ಲಿ ಕೆಲ ಪದಾರ್ಥಗಳನ್ನು ಅಡವು ಇಟ್ಟಂತೆ ತಪಾಸಣೆಯಲ್ಲಿ ತೋರಿದೆ.

ಮುಂಬಯಿಯ ಕಾಂಗ್ರೆಸ ಕಮೀಟಿಯ ಅಧ್ಯಕ್ಷರ ದಸ್ತಗಿರಿ.

ಮುಂಬಯಿ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ. ಹಂಸಾ ಮೇಥಾ ಇವರನ್ನು ದಿಲ್ಲಿಯಲ್ಲಿ ಹಿಡಿಯಲಿಲ್ಲ. ಅಲ್ಲಿ ತಮ್ಮನ್ನು ಹಿಡಿಯದ್ದಕ್ಕಾಗಿ ಬಹಳವಾಗಿ ವಿಷಾದಗೊಂಡಿದ್ದರು. ಮುಂಬಯಿಗೆ ಬಂದ ಕೂಡಲೆ ಹಿಡಿದರು. ಹೀಗೆ ಅವರ ಕೋರಿಕೆ ಪೂರ್ಣವಾಯಿತು.

ಶ್ರೀ|| ಸೌ|| ರಮಾಬಾಯಿ ಕಾಮದಾರ ಇವರನ್ನು ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾಗಿ ನೇಮಿಸಿದರು.

ಒಡಂಬಡಿಕೆಯನ್ನು ಕುರಿತು ವಿಚಾರವಿನಿಮಯ ಮಾಡಲು, ಮದ್ರಾಸದಿಂದ ಶ್ರೀ. ರಂಗಸ್ವಾಮಿ ಅಯ್ಯಂಗಾರರು ನೈನಿತಾಳಕ್ಕೆ ಹೋಗಿದ್ದಾರೆ.

ಪಂಡಿತ ಮಾಲವಿಯಾಯವರನ್ನು ನೈನಿತಾಲಕ್ಕೆ ಮತ್ತು ಅಧ್ಯಕ್ಷ ಪಟೇಲ ಮೊದಲಾದವರನ್ನು ಮುಂಬಯಿ ಇಲಾಖೆಯವರನ್ನು ಯರವಡೆಗೆ ಕರೆವರು.

ಇನ್ಸಪೇಕ್ಟರ ಜನರಲ ಆಫ ಪೋಲಿಸ ಮತ್ತು ಪೋಲೀಸಸಾಹೇಬರ ಮೇಲೆ ಗುಂಡು.

ಢಾಕಾದಲ್ಲಿ ಬಂಗಾಲದ ಇನ್ಸಪೇಕ್ಟರ ಜನರಲ ಆಫ ಪೋಲಿಸ ಮಿ. ಲೋಮನ್ನ ಮತ್ತು ಪೋಲಿಸ ಸು|| ಮಿ. ಹಾಡಸನ್ನರು ಮಿಟಫೋರ್ಡ ಆಸ್ಪತ್ರೆಯಲ್ಲಿ ಮಾತಾಡುತ್ತಾ ನಿಂತಿರುವಾಗ ಹಿಂದಿನಿಂದ ಒಬ್ಬ ಬಂಗಾಲಿ ತರುಣನು ಬಂದವನೇ ಇವರ ಮೇಲೆ ರಿವಾಲ್ವರದಿಂದ ಗುಂಡಿನ ಮಳೆ ಸುರಿಸಿದನು. ಲೋಮನ್ನರಿಗೆ ಮೂರು ಮತ್ತು ಹಾಡಸನ್ನರಿಗೆ ಎರಡು ಗುಂಡುಗಳು ಒಡೆದಿದ್ದು, ಇಬ್ಬರಿಗೂ ಭಯಂಕರ ಘಾಯವಾಗಿ ಭಯಂಕರ ವೇದನೆಯಾಗಿರುತ್ತದೆ. ಇವರಿಗೆ ಗುಂಡು ಹಾಕಿದ ವರ್ತಮಾನ ಕೇಳಿದ ಕೂಡಲೆ ಕಲಕತ್ತೆಯಿಂದ ವಿಮಾನದಿಂದ ಡಾಕ್ಟರ ಮತ್ತು ನರ್ಸರನ್ನು ಕಳಿಸಿದ್ದರು. ಹಾಡಸನ್ನರ ಮಯ್ಯಲ್ಲಿ ಹೊಕ್ಕಿದ್ದ ಒಂದು ಗುಂಡನ್ನು ತೆಗೆದಿದ್ದಾರೆ. ಲೋಮನ್ನಸಾಹೇಬರ ಮೇಲೆ ಇನ್ನೂ ಶಸ್ತ್ರ ಚಿಕಿತ್ಸೆ ಮಾಡಿಲ್ಲ.

ಸಿಂಧದಲ್ಲಿ ಮುಸಲಮಾನರ ಧರ್ಮಗುರುವಾಗಿರುವ ಪೀರ ಪಗರಾವು ಇವರಿಗೆ ಹತ್ತು ವರ್ಷದ ಶಿಕ್ಷೆಯೂ ಎರಡು ಸಾವಿರ ರೂಪಾಯಿ ದಂಡವೂ ಆಯಿತು. ಇವರಿಗೆ ಬಿ. ಕ್ಲಾಸ ಕೊಟ್ಟಿದ್ದಾರೆ

ಸಾತೆ ಪರಾಂಜಪೆ ಸ್ಕೀಮದ ಸದ್ದು ಅಡಗಿಲ್ಲ.

ಮುಂಬಯಿ ಇಲಾಖೆಯ ವಿದ್ಯಾಖಾತೆಯ ಮಂತ್ರಿಯಾದ ಮಿ. ರಫಿಯುದ್ದೀನಸಾಹೇಬರು ನಿನ್ನೆ ಅಲ್ಲಾಪೂರಕ್ಕೆ ಬಂದು ಹೋದರು. ಶಿಕ್ಷಕರಿಗೆ ಸಾತೆ- ಪರಾಂಜಪೆ ಸ್ಕೀಮಿನಂತೆ ಸಂಬಳ ಕೊಡಬೇಕೆಂದು ಹೇಳಲು ಮ್ಯುನಿಸಿಪಾಲಿಟಿಯ ಅಧ್ಯಕ್ಷ ಮಿ. ಜಸಲಾಲ, ರಾ. ಬ. ಮುಳೆ. ಮಿ. ವಕೀಲ ಮೊದಲಾದವರು ಇವರನ್ನು ಕಾಣಲಿಕ್ಕೆ ಹೋಗಿದ್ದರು. ಅಲ್ಲೇನು ನಡೆಯಿತೆಂಬದು ಬೈಲಿಗೆ ಬಂದಿಲ್ಲ. ಅನಂತರ ಮ್ಯುನಿಸಿಪಾಲಿಟಿಯವರು ಕೊಟ್ಟ ಮಾನಪತ್ರದಲ್ಲಿ ಸರಕಾರದವರು ಈ ಸ್ಕೀಮನ್ನು ಅಗ್ರಾಹ್ಯ ಮಾಡಿದ್ದಕ್ಕಾಗಿ ವಿಷಾದ ವ್ಯಕ್ತಪಡಿಸಿದರು.

ಶ್ರೀ ಭಿಸೆಯವರ ಕೌನ್ಸಿಲ ಬಹಿಷ್ಕಾರದ ಚಳವಳಿಯು

ನಾಲ್ಕು ವರ್ಷಗಳ ಹಿಂದೆ ಕೌನ್ಸಿಲದ ಉಮೇದವಾರರಿಗೆ ಮತಕೊಡಿರೆಂದು ದೊಡ್ಡ ದೊಡ್ಡ ಊರುಗಳಿಗೆ ಹೋಗಿ ವ್ಯಾಖ್ಯಾನ ಕೊಡುತ್ತಿದ್ದ ಶ್ರೀ ಭಿಸೆಯವರು ಸದ್ಯದಲ್ಲಿ ಓಟು ಕೊಡಬೇಡಿರೆಂದು ಜಿಲ್ಲೆಯ ತುಂಬ ವ್ಯಾಖ್ಯಾನ ಕೊಡಲು ಹೊರಟಿರುತ್ತಾರೆ. ಇವರು ಹೋದಲ್ಲೆಲ್ಲ ಕೌನ್ಸಿಲ ಬಹಿಷ್ಕಾರದ ಠರಾವೇ ಪಾಸಾಗುತ್ತಿರುವವು. ಯಾವತ್ತು ಕುಲದವರು ಓಟು ಕೊಡತಕ್ಕದ್ದಲ್ಲೆಂದು ಸರ್ವಾನುಮತದಿಂದ ಠರಾವು ಪಾಸು ಮಾಡುತ್ತಿದ್ದಾರೆ.

ಎದ್ದ ಕೂಡಲೆ ಸಾವಿರ ರೂಪಾಯಿ ಬೇಕು.

ಮುಂಬಯಿ ಸರಕಾರಕ್ಕೆ ರಾಜಕೀಯ ಕೈದಿಗಳ ದೆಸೆಯಿಂದ ಈವರೆಗೆ ಇಪ್ಪತ್ತು ಲಕ್ಷ ರೂಪಾಯಿ ವೆಚ್ಚ ಬಂದಿದ್ದು, ದಿನಾಲು ಎದ್ದ ಕೂಡಲೆ ಇವರಿಗಾಗಿ ಒಂದು ಸಾವಿರ ರೂಪಾಯಿ ಬೇಕಾಗುತ್ತವೆ. ಕೈದಿಯಿಂದ ೭೦ ಲಕ್ಷದ ಹಾನಿಯಾಗಿದೆ. ವೆಚ್ಚವನ್ನು ಬಾಯಿಗೂಡಿಸಲು ೪೦೦ ರೂಪಾಯಿಗಿಂತ ಹೆಚ್ಚಿಗೆ ಸಂಬಳವಿದ್ದವರ ಸಂಬಳದಲ್ಲಿ ನೂರಕ್ಕೆ ಹದಿನೈದರಂತೆ ಕಡಿಮೆ ಮಾಡುವರೆಂದು ವರ್ತಮಾನವಾಗಿದೆ. ಆದರೆ ಸಿವ್ಹಿಲ ಸರ್ವಂಟರ ಸಂಬಳಕ್ಕೆ ಮಾತ್ರ ಕೈ ಹಚ್ಚುವದಿಲ್ಲ.

ಕಾಂಗ್ರೆಸದ ಹೊಸ ಅಧ್ಯಕ್ಷರಾದ ಮಿ. ಚವಧರಿ ಖಲೀಕುಝ್ಝಮಾನ ಲಖನೌ ಮ್ಯುನಿಸಿಪಾಲಿಟಿಯ ಅಧ್ಯಕ್ಷರಿದ್ದು, ನೆಹರು ರಿಪೋರ್ಟಿಗೆ ಬೆಂಬಲ ಕೊಟ್ಟವರಾಗಿದ್ದಾರೆ. ಅಸಹಕಾರದ ಚಳವಳಿಯಲ್ಲಿ ತುರಂಗ ಕಂಡುಬಂದವರೂ ಇದ್ದಾರೆ. ಇವರನ್ನು ಅಸೆಂಬ್ಲಿಯ ಸೇಕ್ರೆಟರಿಯಾಗಿ ನೇಮಿಸುವ ವಿಚಾರವೂ ಹೊರಟಿತ್ತು.

ಹಿಂದುಸ್ಥಾನವು ಹಿಂದೀ ಜನರದಲ್ಲ!

—(೦)—

ಮುಂಬಯಿಯಲ್ಲಿ ಪೋಲೀಸರು ಕಾಂಗ್ರೆಸದ ಸ್ವಯಂಸೇವಕರಿಗೆ [illegible] ಬೇಕಾದಷ್ಟು ಕಿರಿಯೊಡೆದರೂ [illegible] ಧ್ವಜವು ಬಿಡಕೂಡದೆಂದು ಕಾಂಗ್ರೆಸಿನವರ ನಿಶ್ಚಯು. ಆ ಪ್ರಕಾರ ಅವರು ಮೊನ್ನೆ ರವಿವಾರದ ದಿವಸ ಬೆಳಗಿನಿಂದ [illegible] ಸ್ಟೇಶನದ ಸಮೀಪದಲ್ಲಿರುವ ವಿಶಾಲವಾದ ಬೈಲಿನಲ್ಲಿ ರಾಷ್ಟ್ರಧ್ವಜ ವಂದನೆ ಮಾಡುವ ಸಂಕಲ್ಪ ಮಾಡಿದರು. ಅದನ್ನು ನೋಡಲಿಕ್ಕೆ ಒಂದು ಲಕ್ಷ ಸ್ತ್ರೀಪುರುಷರು ನೆರೆದರು. ಆದರೆ ಮ್ಯಾಜಿಸ್ಟ್ರೇಟರ ಹುಕುಮದಂತೆ ಪೋಲೀಸರು ಬೈಲಿನ ಪೂರ್ವ ದಿಕ್ಕಿನಲ್ಲಿ ಇದ್ದು ರಾಷ್ಟ್ರಧ್ವಜ ವಂದನೆ ಮಾಡಬೇಕೆಂದು ಮುಂಚೆ ಹಾಕಿದಂತೆ ಒಂದು ಗೆರೆ ಹಾಕಿದರು. ಅದು ಇವರಿಗೆ ಸರಹದ್ದಾಗಿ ಉಳಿಯುವಂತಿತ್ತು. ಆ ಪ್ರಕಾರ ಕಾಂಗ್ರೆಸದವರು ಪ್ರತಿಬಂಧ ಮಾಡಿದ ಸ್ಥಳದ ಸಮೀಪ ತಮ್ಮ ಧ್ವಜ ಸ್ಥಾಪಿಸಿದರು. ಇಡೀ ಹಿಂದುಸ್ಥಾನವೇ ತಮ್ಮದಾಗಿರುವಾಗ ಈ ಬೈಲು ನಮ್ಮದಲ್ಲವೇ? ಇದನ್ನು ಪೂರಾ ಸ್ವಾಧೀನ ಮಾಡಿಕೊಳ್ಳಬೇಕೆಂದಾಗಿ [illegible] ಮಾಡುವವರ [illegible] ಏನು ಭಾವನೆ ಮಾಡುವದು. ಬೈಲು ಪ್ರವೇಶ ಮಾಡ ಕೂಡದೆ, ಮುಂದೆ ಸ್ವಾಧೀನವಾಗುವದು ಸ್ವಾಭಾವಿಕವಾದದ್ದು. ಬಹಳವಾದರೆ ಒಂದೊಂದು ಸಾರೆ [illegible] ಬೇಕಾದೀತು.

ವಿಜಾಪುರದಲ್ಲಿ ಪ್ರಸಿದ್ಧ ವಕೀಲರಿಗೆ ಶಿಕ್ಷೆ.

-೦()೦-

ವಿಜಾಪುರದಲ್ಲಿ ಪ್ರಸಿದ್ಧ ವಕೀಲರೂ ಕಾಯದೆಭಂಗದಲ್ಲಿ ಸೇರಿದವರೂ ಆದ ಶ್ರೀ ಸುಬ್ರಹ್ಮಣ್ಯ ಇವರಿಗೆ ಕರಾವಳಿಯು ಪ್ರಾರಂಭವಾಗಿ ಮೂರು ತಿಂಗಳಾದನಂತರ ಒಂದು ವರ್ಷದ ಸಾದಾ ಶಿಕ್ಷೆಯಾಯಿತು. ಇವರಿಗೆ ಎ ಕ್ಲಾಸ ಕೊಟ್ಟಿರುತ್ತಾರೆ.

ನೈನಿತಾಳದಿಂದ ಯರವಡೆಗೆ ಪ್ರಯಾಣ.

—(೦)—

ಕೃಷ್ಣಶಿಷ್ಟಾಯಿಯವರಾದ ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರುಸಾಹೇಬರು ಪಂಡಿತ ದ್ವಯರಿಂದ ಪತ್ರ ತಕ್ಕೊಂಡು ಯರವಡೆಗೆ ಹೊರಟಿರುತ್ತಾರೆ.

ಹೆಬ್ಬಳ್ಳಿಯ ಜಹಾಗೀರದಾರರೂ [illegible] ರಾದ ಶ್ರೀ. ವಿಠ್ಠಲರಾವ ಚಿದಂಬರರಾವ ಇವರು ಸೇಕಂಡಕ್ಲಾಸ ಸರದಾರರಾಗಿ ಪುಣೆಯಲ್ಲಿ ಕೂಡಿದ ದರಬಾರದಲ್ಲಿ ಬಹುಮಾನದ ಉಡುಗರೆ ಹೊಂದಿದರು.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವ್ರದೇ ಬಣ್ಣದ ಸೆರಗು ಬೀಳುವ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ಪರಮೇಶ್ವರನ ಕೃಪಾ ಪ್ರಸಾದ! ಸ್ವತಃ [illegible] ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚ ಬೇರೆ. ಈ ದವಾಯಿಗಳನ್ನು ಮನಿಆರ್ಡರಿನಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ
C/o [illegible] ಧಾರವಾಡ

ಟೀಪ:— ಶೀಘ್ರ ಔಷಧ ಬೇಕಾದವರು [illegible] ರಿಂದ ಈ ಬೇಡಿಕೆಯನ್ನು ಸೂಚಿಸುವದನ್ನು ಬರೆಯಬೇಕು.

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ವ ಬಿಚ್ಚಿ ಜೋಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯಿವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೇಂಗಳೂರಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯಿವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ಶೀಘ್ರ ಒಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಅದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರೆ.

ಪ್ರೊ. ಪ್ರಿ. ಎಸ್. ಇಟಗಿ.
ಮುನಸಿ ಕೋರ್ಟ ನ ಹತ್ತಿರ, ಧಾರವಾಡ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ—

ನಮ್ಮ ಕಟಗಿ ಅಡ್ಡದಲ್ಲಿ ಇಮಾರತಿ ಸಾಗವಾನಿ ತೊಲೆಗಳೂ ಮತ್ತು ವ ಹೊನ್ನಿ ಹೆದ್ದಿ ವ ಶಿಸಂ ಫಾಟುಗಳು

ಸಾಗವಾನಿ ಯಾಳಿ ವ ಸಾಗವಾನಿ (೬) ಫೂಟಿನ ಪಟ್ಟಿ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಕಿಲಿಂಗು ತೈಯಾರಿ ಸಿಗುತ್ತವೆ

ಇದರ ಜೊತೆಗಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆದು ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು [illegible] ಬಾಳಾಚಾರ್ಯ ಹೊಸಕೇರಿ, ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧: ಧಾರವಾಡ ಬುಧವಾರ ತಾರೀಖು ೩ನೇ ಸಪ್ಟಂಬರ ೧೯೩೦ (ಸಂಚಿಕೆ ೧೯

ಧಾರವಾಡ ಜಿಲ್ಲೆಯ ಮುಂಬಯಿ ಕೌನ್ಸಿಲ್

(ನಾನ್ ಮಹಮ್ಮದನ್) ಮತದಾರರಿಗೆ.

ಶ್ರೀ. ವಿಶ್ವನಾಥ ನಾರಾಯಣ ಜೋಗ ಇವರ

ವಿನಂತಿಯು.

ಮುಂಬಯಿ ಕಾಯದೆ ಕೌನ್ಸಿಲ ಚುನಾವಣೆಯು ೧೭—೯—೧೯೩೦ ಬುಧವಾರ ದಿವಸ ಜರಗುವದು ಈ ಚುನಾವಣೆಯಲ್ಲಿ ನಾನೊಬ್ಬ ಉಮೇದವಾರನಾಗಿದ್ದ ಸಂಗತಿ ಈ ಮೊದಲೇ ತಮಗೆ ಗೊತ್ತದೆ. ನನಗೆ ಮತಕೊಡಬೇಕೆನ್ನುವ ಮತದಾರರು ತಮ್ಮ ಚೀಟಿಗಳನ್ನು ಕೆಳಗೆ ನಮೂನೆಯಲ್ಲಿ ತೋರಿಸಿದಂತೆ ನನಗೆ ಮತ ಕೊಟ್ಟು ನನ್ನ ಹೆಸರಿನ ಮುಂದೆ ಎರಡು ಕತ್ತರಿ (××) ಗುರುತುಗಳನ್ನು ಮಾಡಬೇಕೆಂದು ವಿನಂತಿ ಇರುತ್ತದೆ.

ವಿಶ್ವನಾಥ ನಾರಾಯಣ ಜೋಗ		X X

ತಮ್ಮ

ವಿಶ್ವನಾಥ ನಾರಾಯಣ ಜೋಗ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು·

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲು ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ· ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಹೋಲ ಕೊಳ್ಳುವವರಿಗೆ ನೂರಕ್ಕೆ [illegible] ಕಮೀಶನ ದೊರೆಯುವದು.

ಜಿ. ವ್ಹಿ· ಸವದತ್ತಿ,

ಪ್ರೊ. ಲಕ್ಷ್ಮೀವೆಂಕಟೇಶ ಸ್ಟೋರ್ಸ್ಸ ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಎಂಟು ಲಕ್ಷದ ಮೇಲ್ಪಟ್ಟು. ಚೆಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಚಾಲೂ ಖಾತೆ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವಿಷ್ಣುರಾವ ಬಿ. [illegible]
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ರಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೫-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿ
ಕೊಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಭಾದ್ರಪದ ಶುದ್ಧ ೧೧

ಧಾರವಾಡದ ಮರಾಠಿರ ಮಹತ್ವ ಸಭೆ.

ಚುನಾವಣೆಗೆ ಬಹಿಷ್ಕಾರ.

ಧಾರವಾಡದ ಮರಾಠಿಯರು ರಾ. ಬ. ಕೆಂಬಾವಿಯವರ ಪಕ್ಷ ನಿಷ್ಠರಾಗಿದ್ದಂಥ ಶ್ರೀ. ಬಸವಂತರಾವ ಭೀಮರಾವ ಜಾಧವರವರ ಅಧ್ಯಕ್ಷತೆಯಲ್ಲಿ ಮರಾಠ ಹಿತಚಿಂತಕ ಸಭೆಯ ವತಿಯಿಂದ ದೊಡ್ಡ ಸಭೆಗೂಡಿ, ಮುಂದೆ ಕೊಟ್ಟಂತೆ ಮಹತ್ವದ ಠರಾವುಗಳನ್ನು ಪಾಸಮಾಡಿದ್ದಾರೆ.

೧) ಮದ್ಯಪಾನ ನಿಷೇಧ ; ಮದ್ಯ ಕುಡಿಯುವದನು, ಅಫೀಮು ಕುಡುಕರಿಗೆ ಕುಡಿಯದಂತೆ ಬೋಧಮಾಡತಕ್ಕದ್ದು.

ಚಹಾ ಕಾಫಿ ವರ್ಜ್ಯ ಮಾಡತಕ್ಕದ್ದು.

ಸ್ವದೇಶೀ ಪ್ರಸಾರ ಮಾಡತಕ್ಕದ್ದು. ನೂಲುವದೂ ನೇಯುವದೂ ಕೈಕೊಳ್ಳತಕ್ಕದ್ದು.

ಪರದೇಶೀ ಅರಿವೆಗೆ ಸಂಪೂರ್ಣ ಬಹಿಷ್ಕಾರ ಹಾಕತಕ್ಕದ್ದು.

ಮರಾಠರೊಳಗಿನ ಒಳ ಪಂಗಡ ಮತ್ತು ಬಣಗಳನ್ನು ಮುರಿಯತಕ್ಕದ್ದು.

ಲಗ್ನ ಮುಂತಾದ ಕಾರ್ಯಗಳಲ್ಲಿ ಕೈ ಬಿಗಿ ಹಿಡಿದು ಅವಶ್ಯವಾದಷ್ಟೇ ವೆಚ್ಚ ಮಾಡತಕ್ಕದ್ದು.

ಉದ್ಯೋಗ ವ್ಯವಸಾಯಗಳಿಗೆ ಉತ್ತೇಜನ ಕೊಡತಕ್ಕದ್ದು.

ಕಾಯದೆ ಕೌನ್ಸಿಲದ ಚುನಾವಣೆಗೆ ಬಹಿಷ್ಕಾರ ಹಾಕತಕ್ಕದ್ದು. ಯಾರಾದರೂ ಮೆಂಬರರಾದರೆ ಅವರು ತಮ್ಮ ಪ್ರತಿನಿಧಿಗಳಲ್ಲೆಂದು ಈ ಠರಾವಿನಿಂದ ಮುಂದಾಗಿಯೇ ಜಾಹೀರ ಮಾಡತಕ್ಕದ್ದು.

ರಡ್ಡೀ, ಹಾಲುಮತ, ದೇವಾಂಗರಿಗೆ ಸೂಚನೆ.

(೬) ರಡ್ಡೀ, ದೇವಾಂಗ, ಹಾಲುಮತ, ಭಾವಸಾರ ಕ್ಷತ್ರಿಯ ಮೊದಲಾದವರು ಹಿಂದುಳಿದ ಸಮಾಜವೆಂಬದೊಂದು ಸ್ವತಂತ್ರವಾದ ಸಂಘವನ್ನೇ ನಿರ್ಮಾಣ ಮಾಡಿಕೊಂಡಿದ್ದಾರಷ್ಟೇ ; ಇವರು ಹೋಟಿಗೆ ಹೋಗಕೂಡದೆಂದು ತಂತಮ್ಮೊಳಗೆ ಮಾತಾಡಿಕೊಂಡಿದ್ದಾರೆ. ಆ ಪ್ರಕಾರ ಜಾಹೀರ ಸಭೆ, ಅಥವಾ ಮ್ಯಾನೇಜಿಂಗ ಕಮೀಟಿಯು ಠರಾವು ಮಾಡಿ, ತಮ್ಮ ಜನರು ಹೋಟಿಗೆ ಹೋಗಬಾರದೆಂದು ಬೇಗನೆ ಠರಾವು ಮಾಡಬೇಕೆಂದು ಸೂಚಿಸುತ್ತೇವೆ.

ಕರ್ನಾಟಕದಲ್ಲಿ ನಡೆದ ಸತ್ಯಾಗ್ರಹದ ಸುದ್ದಿಗಳು.

ಬಾಗಲಕೋಟೆಯಲ್ಲಿ ಗುರುವಾರ ತಾ|| ೨೮-೮-೩೦ನೇ ದಿವಸ ಶ್ರೀ ಹನುಮಂತಾಚಾರ್ಯ ಪುರೋಹಿತ ಎಮ್. ಎ. ಅವರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆ ಸೇರಿ, ಶ್ರೀ. ಬಳವಂತರಾವ ಜಮೀನದಾರ ಮತ್ತು ಜಯರಾವ ನರಗುಂದ ಇವರ ಸ್ಫೂರ್ತಿದಾಯಕ ಭಾಷಣಗಳಾದವು. ಸಭೆಯಲ್ಲಿ ಕಾಂಗ್ರೆಸ ವರ್ಕಿಂಗ ಕಮೀಟಿಯ ಸಭಾಸದರನ್ನು ಹಿಡಿದ ಬಗ್ಗೆ ಸರಕಾರದ ಕೃತಿಯ ನಿಷೇಧ ಮಾಡಲ್ಪಟ್ಟಿತು ಮತ್ತು ಸೆರೆ ಹಿಡಿಯಲ್ಪಟ್ಟ ಮುಂದಾಳುಗಳ ಅಭಿನಂದನೆ ಮಾಡಲ್ಪಟ್ಟಿತು. ಶುಕ್ರವಾರ ದಿವಸ ಊರಲ್ಲಿ ಹರತಾಳ ಮಾಡಲ್ಪಟ್ಟಿತು.

ಶ್ರೀ. ವ್ಹಿ. ವ್ಹಿ. ಪಾಟೀಲ ಮತ್ತು ಶ್ರೀ ಮಂಗಳವೇಢ ಶ್ರೀನಿವಾಸರಾಯರು ವಿಜಾಪೂರ ಜಿಲ್ಹೆಯಲ್ಲಿ ೧ ವಾರದವರೆಗೆ ಸಂಚಾರ ಮಾಡುವವರು. ಈಗಾಗಲೇ ಗಣೇಶಗುಡ್ಡ, ಬೀಳಗಿ, ಗಲಗಲಿ, ಹುನಗುಂದ ಊರುಗಳಿಗೆ ಹೋಗಿ ಬಂದರು.

೨೮-೮-೩೦ಕ್ಕೆ ವರ್ಕಿಂಗ ಕಮೀಟಿಯ ಸಭಾಸದರನ್ನು ಹಿಡಿದ ಬಗ್ಗೆ ವಿಜಾಪೂರದಲ್ಲಿ ಜಾಹೀರ ಸಭೆ ಸೇರಿತ್ತು. ಈ ವರೆಗೆ ಸುಮ್ಮನೆ ಕುಳಿತಿದ್ದ ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸರಾಯರು ಮುಂದೆ ಬಂದು ಸ್ಫೂರ್ತಿದಾಯಕ ಭಾಷಣ ಮಾಡಿದರು. ಮತ್ತು ಜಿ. ಕ. ವರ್ಕಿಂಗ ಕಮೀಟಿಯ ಸಭಾಸದರಾದರು. ಶ್ರೀನಿವಾಸರಾಯರು ಮುಂದೆ ಬಂದದ್ದರಿಂದ ವಿಜಾಪೂರ ಜಿಲ್ಹೆಗೆ ಹೊಸ ಕಳೆ ಬಂದಿರುತ್ತದೆ. ಶ್ರೀ ಹಣಮಂತರಾವ ಕೌಜಲಗಿಯವರೂ ವಿಜಾಪೂರದಲ್ಲಿಯೇ ಇರುತ್ತಾರೆ.

೨೭-೮-೩೦ನೇ ದಿನ ಗದಗ ಬೆಟಗೇರಿಯಲ್ಲಿ ಶ್ರೀ ಗಜಾನನ ಉತ್ಸವವು ಪ್ರಾರಂಭವಾಯಿತು. ಆ ದಿವಸ ಡಾ. ಉಮಚಗಿಯವರ ಅಧ್ಯಕ್ಷತೆಯಲ್ಲಿ ಶ್ರೀಯುತ ಮುಜುಮದಾರರು ಸದ್ಯದ ಪರಿಸ್ಥಿತಿಯ ವಿಷಯವಾಗಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ೨೮-೮-೩೦ ಶ್ರೀಮತಿ ಸೌ|| ವೃಂದಾತಾಯಿ ಮುಲ್ಕಿ ಇವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಸೀತಾಬಾಯಿಯವರ ಮರಾಠಿ ಭಾಷಣವಾಯಿತು. ಸಭೆಯಲ್ಲಿ ಕಲ್ಲುಗಳು ಬಿದ್ದವು.

ವಿಜಾಪೂರದಲ್ಲಿ ತಾ|| ೨೯-೮-೩೦ನೇ ದಿವಸ ಕೆಳಗೆ ಬರೆದ ಸದ್ಗೃಹಸ್ಥರಿಗೆ ವಿಜಾಪೂರ ಜಿಲ್ಹೆಯ ಉ ಭಾಗದ ಡಿ. ಡಿ ಸಿ. ಸಾಹೇಬರು ೪೨೬ ಮತ್ತು ೧೪೪ ಕಲಮುಗಳ ಪ್ರಕಾರ ೯|| ತಿಂಗಳು ಮತ್ತು ೬|| ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

೧ ಎಸ್ ಎನ್. ರಾವಸ್ವಾಮಿ (ಕ್ಯಾಪ್ಟನ್) ೯|| ತಿಂಗಳು ೨ ಎ. ಎಲ್ ಕುಲಕರ್ಣಿ ೯|| ತಿಂಗಳು ೩ ಬ ಜೀರಾವ ಗೌಳಿ ೯|| ತಿಂಗಳ ೪ ಬಾಬು ದೇಶಪಾಂಡೆ ೬|| ತಿಂಗಳ ೫ ರಾಮು ನಾಯಿಕ ೬ ಎಸ್ ಆರ್. ದೇಶಪಾಂಡೆ ೭ ಅಣ್ಣಪ್ಪ ಪ್ಯಸನ. ೮ ನರಗುಂದ ೯ ಕ ಜಿ. ಖಾಡ್ಪೂರೆ ೧೦ ಸತ್ಯಾ ಕೆಂಪರಾವ ಪಾಠಕ ೧೧ ಎಸ್. ಎ. ಜಹಾಗೀರದಾರ ೧೨ ಸಿ ಎನ್. ಅಕಾಡಿ ೧೩ ಬಾಲಪ್ಪ ರಜಪೂತ ಈ ಎಲ್ಲರಿಗೆ ೬|| ತಿಂಗಳು. ಈಗ ಶ್ರೀ ಕಾವರಸೀಕರರು ಕ್ಯಾಂಪಿನ ಕಮಾಂಡರ ಚಾರ್ಜ ತೆಗೆದುಕೊಂಡಿರುವರು. ೧೦ ಜನ ಹೊಸ ಸ್ವಯಂಸೇವಕರು ಹೆಸರು ಕೊಟ್ಟಿರುವರು.

ಬಳ್ಳಾರಿಯಲ್ಲಿಯ ಸೇಂದಿ ಅಂಗಡಿಗಳ ಲಿಲಾವು ನಡೆಯಿತು. ತಾ|| ೨೯-೮-೩೦ನೇ ದಿನ ರಾತ್ರಿ ಇ. ಪಿ ಕೋ ೧೪೪ ರ ಪ್ರಕಾರ ಪಿಕೆಟಿಂಗ ಬಂದು ಮಾಡುವ ಆಜ್ಞೆಯು ಕಾಂಗ್ರೆಸ ಕೆಲಸಗಾರರ ಮೇಲೆ ಬಜಾಯಿಸಲ್ಪಟ್ಟಿತು. ಈ ಹುಕುಮನ್ನು ಮುರಿದದಕ್ಕಾಗಿ ಈ ಕೆಳಗೆ ಕಂಡ ೧೦ ಜನರನ್ನು ಕೈದು ಮಾಡಿರುತ್ತಾರೆ.

೧ ವ್ಹಿ. ಎಮ್. ಗಿರಿ ಬಿ. ಎ. ೨ ಶ್ರೀ ಎಚ್. ಸಿದ್ದಪ್ಪ ೩ ಶ್ರೀ ದಯಾನಂದರಾಜ ೪ ಶ್ರೀ. ಮುಜಲಿ ೫ ಶ್ರೀ. ಅನಂತಶೆಟ್ಟಿ ೬ ಶ್ರೀ. ನಾರಾಯಣರಾವ ೭ ಶ್ರೀ. ಎಸ್. ಭೀಮಸೇನಾಚಾರ್ಯ ೮ ಶ್ರೀ. ಕೆ. ಸೀತಾರಾಮ ೯ ಶ್ರೀ. ಕೆ. ವಿಷ್ಣು ೧೦ ಶ್ರೀ. ಲಿಂಗಪ್ಪಾ. ಹರಪನಹಳ್ಳಿಯಲ್ಲಿ ಸೇಂದಿ ಗಿಡಗಳನ್ನು ಕಡಿದ ಬಗ್ಗೆ ೪೨೬ ಇ. ಪಿ ಕೋ ಪ್ರಕಾರ ಶಿಕ್ಷೆಯಾದವರ ಹೆಸರುಗಳು ಕೆಳಗೆ ಬರೆದ ಪ್ರಕಾರ ಇರುತ್ತವೆ. ೧ ಶ್ರೀಧರ ತ ಎ. ಪೂಜಾರ ೩ ಬೊಮ್ಮಪ್ಪಾ ೪ ಚಂದಪ್ಪ ೫ ಕೆ. ಚೌಡಪ್ಪಾ ಈ ಐವರಿಗೆ ೩ ತಿಂಗಳ ಶಿಕ್ಷೆ ಮತ್ತು ೬ ರುದ್ರಪ್ಪಾ ಮತ್ತು ೭ ಬಸವಗೌಡಾ ಇವರಿಗೆ ೧|| ತಿಂಗಳು ಶಿಕ್ಷೆಯಾಗಿರುತ್ತದೆ.

ಈ ವರೆಗೆ ೪೦ ಜನರು ಶಿಕ್ಷೆ ಹೊಂದಿರುವರು. ಎಲ್ಲ ಕಾರ್ಯಗಳು ಉತ್ಸಾಹದಿಂದ ಸಾಗಿರುತ್ತವೆ. ಕೌನ್ಸಿಲ ಬಹಿಷ್ಕಾರ ಕಾರ್ಯವೂ ಕೂಡ ಜೋರಾಗಿದೆ.

ಇಳಕಲ್ಲ ವ್ಯಾಪಾರಿ ಸಂಘದವರು ೨೪-೮-೩೦ಕ್ಕೆ ತಮ್ಮ ಸಂಘದ ಸಭೆಯನ್ನು ಶ್ರೀ. ವೆಂಕಪ್ಪಾ ವಾಸಪ್ಪ ಸಕ್ರಿ ಇವರ ಅಧ್ಯಕ್ಷತೆಯಲ್ಲಿ ಕೂಡಿಸಿ ಇನ್ನು ಮುಂದೆ ಪರದೇಶಿ ಗಿರಣಿಗಳ ನೂಲುವ ರೇಶ್ಮೆ ತರಿಸತಕ್ಕದ್ದಲ್ಲೆಂತಲೂ ಯಾವ ವ್ಯಾಪಾರಸ್ಥರು ಆ

ಸಂಸ್ಥೆಯ ಸಭಾಸದರಾಗುವದಿಲ್ಲವೋ ಅವರನ್ನು ಬಹಿಷ್ಕರಿಸತಕ್ಕದ್ದೆಂತಲೂ ಗೊತ್ತು ಪಡಿಸಿರುವರು.

ನವಲಗುಂದದಲ್ಲಿ ತಾ|| ೨೯-೮-೩೦ನೇ ದಿವಸ ಆ. ಇ. ವ. ಕಮಿಟಿಯ ೧೦ ಸಭಾಸದರನ್ನು ಹಿಡಿದ ಬಗ್ಗೆ ಜಾಹೀರ ಸಭೆ ಸೇರಿ "ಈ ಸರಕಾರವು ಹಿಂದುಸ್ಥಾನದ ಮುಖಂಡರನ್ನು ಹಿಡಿದು ಅತ್ಯಂತ ಅನ್ಯಾಯದ ಘೋರ ತಪ್ಪನ್ನು ಮಾಡುತ್ತಿದೆ" ಎಂಬ ಠರಾವು ಸರ್ವಾನುಮತದಿಂದ ಪಾಸು ಮಾಡಲ್ಪಟ್ಟಿತು. ಕೌನ್ಸಿಲ ಬಹಿಷ್ಕಾರ ಕಾರ್ಯವು ನಡೆದಿರುತ್ತದೆ

[illegible] ಎಲ್ಲ ಜನರು ಬಹಿಷ್ಕಾರಕ್ಕೆ ಅನುಕೂಲರಾದರು.

ಕಾಯದೆಭಂಗಕ್ಕಾಗಿ [illegible] ಶಿಕ್ಷೆ.

—(*)—

[illegible]. ತಾ. ೩೧-೮-೩೦ ರ [illegible] ಸಾರ್ವಜನಿಕ ಗಣಪತಿಯ ಮುಂದುಗಡೆ [illegible] ನಲ್ಲಿ ವಿದೇಶಿ ವಸ್ತ್ರ ದಹನ ಕಾರ್ಯವು ಯಥಾಸಾಂಗವಾಯಿತು. ಆಗ [illegible] ದೇ. ಭ. ನರಸಿಂಗರಾವ [illegible] ಚಳವಳಿಯನ್ನೂ [illegible] ಮಹಾತ್ಮ್ಯವನ್ನೂ ಚನ್ನಾಗಿ ತಿಳಿಸಿಹೇಳಿದರು. [illegible] ವಸ್ತ್ರಗಳ ಮೇಲೆ ಬಹಿಷ್ಕಾರ [illegible] ಜನರು ಭರದಿಂದ ಸ್ವೀಕರಿಸಿದರು. [illegible] ಸಭೆಗೂಡಿ [illegible] ಕ ಭಾಷಣ ಮಾಡಿ ಸತ್ಯಾಗ್ರಹವನ್ನು [illegible] ದರು. ತಾ. ೧-೯-೩೦ ಮುಂಜಾನೆ ಮಿ. [illegible] ನ್ಯಾಯಾ! ದ|| ಇಲ್ಲಿಯೇ [illegible], [illegible], [illegible] ಇವರ ಮೇಲಿನ [illegible] ವಿಚಾರಣೆಯನ್ನು ನಡೆಸಿ ೧೦ ರೂ. ದಂಡ ಕೊಡದಿದ್ರೆ ೧ ವಾರ ಸಾದಾಶಿಕ್ಷೆಯನ್ನು ವಿಧಿಸಿದರು. ನಾಲ್ವರು [illegible] ಭಾಗ ತೆಗೆದುಕೊಳ್ಳಲಿಲ್ಲ. ದಂಡವನ್ನೂ ಕೊಡಲಿಲ್ಲ: ಪೋಲೀಸರು ಕೂಡಲೇ ಅವರನ್ನು ಮೋಟಾರಿನಿಂದ ಬೈಲಹೊಂಗಲಕ್ಕೆ ಕರಕೊಂಡು ಹೋದರು. ಆಗ ಅವರಿಗೆ ಸ್ತ್ರೀಯರು ಕುಂಕುಮ ಹಚ್ಚಿ ಆರತಿ ಮಾಡಿದರು. ನೂರಾರು ಜನರು ನೆರೆದಿದ್ದರು. ಸ್ವಯಂಸೇವಕರೂ ಬಾಲಬಾಲಿಕೆಯರೂ ರಾಷ್ಟ್ರೀಯ ಘೋಷಣೆಗಳೊಂದಿಗೆ ಪದಗಳನ್ನು ಹಾಡುತ್ತ ನಿಲ್ಲುವವರಾಗಿದ್ದರು. ಪ್ರಚಂಡ ಜಯಘೋಷದಲ್ಲಿ ಅವರಿಗೆ ನಿರೋಪ ಕೊಡುವದಾಯಿತು. [illegible] ಕಮಿಶ್ನರಿಗೆ ಅವಮಾನ ಮಾಡಿದ ಬಗ್ಗೆ ಸದ್ರಿ ನಾಲ್ವರ ಮೇಲೆ ಬೇರೆ ವಿಚಾರಣೆಯು ತೀವ್ರವೇ ಬೈಲಹೊಂಗಲದಲ್ಲಿ ನಡೆಯತಕ್ಕದ್ದದೆ.

ತಾ|| ಶೀಗಿಹಳ್ಳಿ- ಒಳಗಡೆಗೆ ತಿಂದೀಗಿಡ ಕಡಿಯುವಾಗ್ಗೆ [illegible] ಬಾರಿಸಿದ್ದಕ್ಕೆ ಫೌಜದಾರ ಸಾ. ರು ಕೊಟ್ಟ ಲೇಖೀ ಅಪ್ಪಣೆಯನ್ನು ಅವಮಾನಿಸಿದ ಬಗ್ಗೆ ಇಲ್ಲಿಯ ಶಿವಪ್ಪ, ಯಲ್ಲಪ್ಪ, ಗುರುಬಸಪ್ಪ ಈ ಮೂವರು ಜನ [illegible] ಮೇಲೆ ಖಟ್ಲೆ ನಡೆದು ಬೈಲಹೊಂಗಲ ೨ ವರ್ಗ ಮ್ಯಾ. ರ. ಸಾ. ೨೯-೮-೩೦ ದಿವಸ ಅವರಿಗೆ ಒಂದು ತಿಂಗಳ ಸಾದಾಶಿಕ್ಷೆ ೧೦ ರೂ. ದಂಡ ಕೊಡದಿದ್ರೆ ಪ್ರತಿ ಒಂದು ವಾರ ಹೆಚ್ಚಿನ ಸಾದಾಶಿಕ್ಷೆಯನ್ನು ವಿಧಿಸಿದರು. ಮೂವರೂ ಜನರು ಭಾಗ ತೆಗೆದುಕೊಳ್ಳಲಿಲ್ಲ. ದಂಡಕೊಟ್ಟಿಲ್ಲ. ಊರ ಗೃಹಸ್ಥರು [illegible] ಕೂಡಿಸಿ ಅವರ ಮನೆಗೆ ಕೊಟ್ಟಿದ್ದು, ಅವರು ತಿರುಗಿ ಬರುವವರೆಗೆ ಅವರ ಹೊಲದಲ್ಲಿಯ [illegible] ಮೊದಲಾದ ಕೆಲಸಗಳನ್ನು ಮಾಡಿಕೊಡುವದನ್ನು ಗೊತ್ತು ಮಾಡಿರುವರು.

ಕುಂಬಾರನು ಅಸೆಂಬ್ಲಿಯ ಮೆಂಬರನಾದನು

—:(*):—

ದಿಲ್ಲಿಯಲ್ಲಿನ ಅಸೆಂಬ್ಲಿಯ ಚುನಾವಣೆಯ ಪರಿಣಾಮ ಹೊರಬಿತ್ತು. ೫೦೦೦ ಮತದಾರರಲ್ಲಿ [illegible] ಜನರು ಮತಕೊಟ್ಟರು. ಕುಂಬಾರನಿಗೆ [illegible], ರಾವಸಾಹೇಬ [illegible] ನವರಿಗೆ ೫೦೦ ಮತ್ತು ಬಂದಿವೆ. [illegible] ನ ಉಮೇದವಾರ [illegible] ರಿಗೆ ಒಂಭತ್ತೇ ಓಟುಗಳು ಬಿದ್ದು, ಆತನು ತನ್ನ [illegible] ಹಣ ಕೂಡ ಕಳಕೊಂಡನು. [illegible] ಕುಂಬಾರನೊಂದು ಪರಿಹಾಸ್ಯ ಮಾಡುತ್ತಿದ್ದರು. [illegible] ಪತ್ರಿಕೆಗಳು [illegible] ಮತದಾರರ ಯೋಗ್ಯತೆಯನ್ನು [illegible] ಬೇಕು.

ಬಾಂಬಿನಿಂದ ಪೋಲಿಸ ಕಮಿಶನರನ ಮರಣ.

—o*o—

ಢಾಕಾದಲ್ಲಿ ಬಾಂಬಿನಿಂದ ಗಾಯ ಹೊಂದಿದ್ದ ಇನ್ಸಪೆಕ್ಟರ ಜನರಲ ಆಫ ಪೋಲಿಸರಾಗಿದ್ದ ಮಿ. ಲೋಮನಸಾಹೇಬರು [illegible]. ಪೋ|| ಸು|| ರಾದ ಮಿ. ಹಾಡಸನ್ನಸಾಹೇಬರಿಗೆ ಗುಣವಾಗುತ್ತಿರುವದು. ಇಂಗ್ಲಂಡದಲ್ಲಿ ಈ ಬಾಂಬಿನ ಹಾವಳಿಯಿಂದ ವರ್ತಮಾನ ಕೇಳಿ, ಹಿಂದುಸ್ಥಾನದಲ್ಲಿ ೧೮೫೭ ನೆಯ ಬಂಡಾಯವೇ ಏಳುವದೆಂದು ಅಲ್ಲಿಯ ವರ್ತಮಾನಪತ್ರಗಳು ಭಯಸೂಚಕ ಭೇರಿಯನ್ನು ಹೊಡೆಯುತ್ತವೆ.

ಆಲೂರಲ್ಲಿ ರಾ. ಬ. ಕಂಬಳಿಯವರಿಗಾದ ಅದೃಷ್ಟಪೂರ್ವ ಬಹುಮಾನ-

ರಾವಬಹಾದ್ದೂರರೇ ಹಿಂದಿರುಗಿರಿ! ಹಿಂದಿರುಗಿರಿ!!

—(*)—

ತಾರೀಖು ೩೧-೮-೩೦ನೇ ಆದಿತ್ಯವಾರ ಸಾಯಂಕಾಲ ೭|| ಘಂಟೆಗೆ ರಾ| ಬಹಾದ್ದೂರರವರು ಜನರನ್ನು [illegible] ತಾವು ಕಾನ್ಸಿಲಿಗೆ ಉಮೇದವಾರರಾಗಿ ನಿಂತ ಸಂಗತಿಯನ್ನು ತಿಳಿಸಿ ಜನರಿಂದ ಓಟು ದೊರಕಿಸಬೇಕೆಂಬ ಅಭಿಲಾಷೆಯಿಂದ ಬಂದ ಕಾಲದಲ್ಲಿ ತಮ್ಮ ಜೊತೆಗಾರರಾದ ಮಿ. [illegible] ಗುರಪ್ಪನವರನ್ನು ಕರಕೊಂಡು ಸ್ವತಃ ಮುಖದಿಂದ ದರುಶನಕೊಡಿಸಿದರು. ದುರ್ದೈವದಿಂದ ಅವರ ಅಭಿಲಾಷೆಯು ಪೂರ್ಣವಾಗುವದು ಒತ್ತಟ್ಟಿಗಿರಲಿ: ಬಂದ ಕೂಡಲೆ ಅವರಿಗೆ [illegible] ಸಮುದಾಯದಿಂದಲೂ ಶೇಮ ಶೇಮ (ನಾಚಿಕೆಗೇಡಿ) ಎಂಬ ಶಬ್ದಗಳ ಜಯಜಯಕಾರದಿಂದಲೂ ಮತ್ತು Kambli go back, go back ಸ್ವಾಗತವಿದಿಂದಲೂ ತೀವ್ರವೇ [illegible] ಸುಮಾರು ೨೦೦-೩೦೦ ಜನರಿಂದ ಆದ ಅಪೂರ್ವ ಸ್ವಾಗತವನ್ನು ಕಂಡು ಅವರು ಒಂದು ಗಳಿಗೆ ಕೂಡ ನಿಲ್ಲದೆ ಬಂದಂತೆ ಪರಾರಿಯಾಗಿ ಗಾಡಿಯನ್ನು ಹೊಡಿಸಿದರು. ಈ ಗಾದರೂ ಆಲೂರಿನ [illegible] ಜ್ಯೋತಿಷಿಯು ರಾ| ಬ| ರವರಿಗೆ ಬುದ್ಧಿವಾದವನ್ನು ಕೊಟ್ಟರೇ ? ಆ ಊರಲ್ಲಿ ಈ ಮೊದಲು ಆದ ಸಭೆ:-

ತಾರೀಖು ೨೮-೮-೧೯೩೦ ನೇ ಗುರುವಾರ ಗಾಂಧಿ ಚೌಕದಲ್ಲಿ ಇಲ್ಲಿಯ ಸುಪ್ರಸಿದ್ಧ ಶ್ರೀಯುತ [illegible] ಇವರ ಅಧ್ಯಕ್ಷತೆ ಕೆಳಗೆ ಸಭೆ ಸೇರಿ ಶ್ರೀಯುತ ಶಿವಪ್ಪ [illegible] ಮತ್ತು ಶ್ರೀ ಸುಬ್ಬಪ್ಪ ಅಕ್ಕಿ ಮೊದಲಾದವರು ಕಾನ್ಸಿಲ ಬಹಿಷ್ಕಾರದ ಬಗ್ಗೆ ಸಮಯೋಚಿತವಾದ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಉಪಸಂಹಾರದ ಭಾಷಣದಲ್ಲಿ ಕಾಯದೇ ಕೌನ್ಸಿಲ ಮತ್ತು ಲೆ. ಅಸೆಂಬ್ಲಿಗಳಲ್ಲಿ ಏನೂ ಅರ್ಥ ವಿಲ್ಲವೆಂದು ಅಲ್ಲಿ ಹೋಗುವ ಪ್ರತಿನಿಧಿಗಳು ನಿಜವಾಗಿ ನಮ್ಮ ಪ್ರತಿನಿಧಿಗಳಲ್ಲೆಂದೂ ಸ್ಪಷ್ಟವಾಗಿ ಮನಸ್ಸಿನ ಮೇಲೆ ಪರಿಣಾಮವಾಗ ವಂತೆ ವಿವರಿಸಿ ಹೇಳಿದರು. ನಂತರ ಕೌನ್ಸಿಲ್ಲಿಗೆ ಸಂಪೂರ್ಣ ಬಹಿಷ್ಕಾರ ಹಾಕಬೇಕೆಂದು ಸರ್ವಾನುಮತದಿಂದ ಪಾಸಾಯಿತು. ಅಂತು [illegible] ಕೌನ್ಸಿಲ್ ಬಹಿಷ್ಕಾರದ ಬಗ್ಗೆ [illegible] ಕೆಲಸವು ಬಹಳೇ ಜೋರಿನಿಂದ ಸಾಗಿದೆ.

ಓರ್ವ ಪ್ರತ್ಯಕ್ಷದರ್ಶಿ.

ರು ತಿಂಗಳ ಸಾದಾ ಶಿಕ್ಷೆಯಾಯಿತು. ಉಪಾಧ್ಯಕ್ಷ ಎ. ಲಿಲಿಯವರಿಗೆ ಐದು ತಿಂಗಳಾಯಿತು.

ದಯಮಾಡಿ ತಮ್ಮನ್ನು ತುರುಂಗದಿಂದ ಬಂಧಮುಕ್ತ ಮಾಡಬಾರದೆಂದು ಪಂಡಿತ ಮೋತಿಲಾಲರು ಲಾರ್ಡ ಆಯರ್ವಿನಸಾಹೇಬರಿಗೆ ಪತ್ರ ಬರೆದಂತೆ ಪ್ರಸಿದ್ಧವಾಗಿರುತ್ತದೆ. ಸುಮ್ಮನೆ ಉಪಕಾರದ ಹಂಗೇಕೆ ?

ನೋಟೀಸು

ರಾ॥ ರಾ॥ ನಿಂಗಪ್ಪಾ ಮರಿಬಸಪ್ಪಾ, ಬಾಳಪ್ಪಾ ಮರಿಬಸಪ್ಪಾ ಮತ್ತು ಮಲ್ಲಪ್ಪಾ ಬಾಳಪ್ಪಾ ಬೂದಿಹಾಳ ಸಾ॥ ಅಮೀನಭಾವಿ ಇವರಿಗೆ-

ಕೆಳಗೆ ಸಹಿ ಮಾಡಿದವರು ನಿಮಗೆ ಈ ನೋಟೀಸಿನದ್ವಾರಾ ತಿಳಿಸುವದೇನಂದರೆ—

ಅಮೀನಭಾವಿ ಗ್ರಾಮದಲ್ಲಿ ರಿ॥ ಸ॥ ನಂ॥ ೨೩೯/೨ ನೇ ಜಮೀನು ನಮ್ಮ ಮಾಲ್ಕೀ ವಹಿವಾಟಿಯಲ್ಲಿರುತ್ತದೆ . ಇದರ ಲಗತ ಪಶ್ಚಿಮಕ್ಕೆ ಇದೇ ನಂಬರ ಪೈಕಿ ಕೆಲವು ಭಾಗ ನಿಮ್ಮ ಮಾಲ್ಕಿ ವ ವಹಿವಾಟಿಯಲ್ಲಿರುತ್ತದೆ ಪಶ್ಚಿಮ ದಿಕ್ಕಿನಿಂದಾ ನಮ್ಮ ನಿಮ್ಮ ಜಮೀನುಗಳ ದಕ್ಷಿಣ ಬಾಜೂಕ್ಕೆ ಒಂದು ಸಣ್ಣ ಹಳ್ಳಾ ಮೊದಲು ನಿಮ್ಮ ಹೊಲದೊಳಗಿಂದಾ ಒಂದು ಮಾರ್ಗದಿಂದಾ ಹಾಯ್ದು, ಆ ಮೇಲೆ ನಮ್ಮ ಹೊಲದೊಳಗಿಂದಾ ಹಾಯ್ದು ಮುಂದೆ ಹೋಗುತ್ತದೆ ಈ ಪ್ರಕಾರ ಬಹಳ ದಿವಸಗಳ ಲಾಗಾಯತ ಹಳ್ಳ ಹರಿಯುತ್ತದೆ ಆದರೆ ಈಗ ಎಂಟು ದಿವಸಗಳ ಹಿಂದೆ ಈ ಮೊದಲು ನಿಮ್ಮ ಹೊಲದೊಳಗಿಂದ ಬರುವ ಹಾದಿಯಿಂದ ಹಳ್ಳ ಹಾಯುತ್ತಿತ್ತು ಆ ಹಾದಿಯನ್ನು ಬಂದು ಮಾಡಿ, ನಿಮ್ಮ ಹೊಲದ ದಕ್ಷಿಣ ಮೇರೆಗುಂಟ ಅಂದರೆ ನಿಮ್ಮ ವ ಶೀನಪ್ಪಾ ಜವಳಿ ಇವರ ಜಮೀನಗಳ ನಡುವೆ ಹೊಸದಾಗಿ ಖಂದಕ ತೆಗೆದು ಹಳ್ಳದ ದಾರಿಯನ್ನು ಬದಲು ಮಾಡಿ ಮೇಲ್ಗಡೆ ನಮ್ಮ ಹೊಲದೊಳಗೆ ಹೊಸದಾಗಿ ಬೇರೆ ಮಾರ್ಗದಿಂದ ಹಳ್ಳ ಹರಿಯುವಂತೆ ಮಾಡಿರುತ್ತೀರಿ ಇದರಿಂದ ನಮ್ಮ ಹೊಲದೊಳಗಿನ ಶ್ರೇಷ್ಠ ಭಾಗ ಕೆಟ್ಟು ನಮಗೆ ಬಹಳೇ ಲುಕ್ಸಾನ ಆಗುತ್ತದೆ ಆದಕಾರಣ ನೀವು ಮಳೆ ಆಗುವದರೊಳಗೆ ಆದಷ್ಟು ತೀವ್ರ ನೀವು ತೆಗೆದ ಹೊಸ ಖಂದಕ ಮುಚ್ಚಿ ಮೊದಲು ಹೋಗುವಂತೆ ಹಳ್ಳಕ್ಕೆ ದಾರಿ ಕೊಡಬೇಕು ಇಲ್ಲದಿದ್ದರೆ ನಿಮ್ಮ ಮೇಲೆ ಫವಜದಾರಿಯಲ್ಲಿ ಮತ್ತು ದಿವಾಣಿಯಲ್ಲಿ ಕೆಲಸ ನಡಿಸಲಾದೀತು ಈ ನೋಟೀಸಿನ ಖರ್ಚು ನಿಮ್ಮ ಮೇಲೆ ಅದೆ ತಿಳಿಯೋದು

ತಾ॥ ೧-೯-೩೦ ಇಸ್ವಿ

ಸಹಿ- ನಾರಾಯಣ ರಾಘವೇಂದ್ರ ದೇಶಪಾಂಡೆ

ಹಿರೇಕೇರೂರ ತಾಲೂಕಿನ ಭಾಗ್ಯ !

ಕನ್ನಡನಾಡಿನ ಹುಲಿ ಶ್ರೀ. ಮುದವೀಡು ಕೃಷ್ಣರಾಯರ

ವ್ಯಾಖ್ಯಾನಗಳ ಸೂರಿ!!!

ಈ ತಿಂಗಳಲ್ಲಿ ಶ್ರೀ. ಮುದವೀಡು ಕೃಷ್ಣರಾಯರು, ಕನ್ನಡ ನಾಡಿನ **ಹುಲಿಯು** ಹಿರೇಕೇರೂರ ತಾಲೂಕಿನಲ್ಲಿ ಸಂಚರಿಸುವದು ಗೊತ್ತಾಗಿದೆ. ಸುತ್ತು ಮುತ್ತಲಿನ ಹಳ್ಳಿಯ ಜನರು, ಮಯ್ಯಲ್ಲಿ ಹುರುಪನ್ನು ಹರಿದಾಡಿಸುವ ಅವರ ಸಿಡಿಲಿನಂತಹ ಗರ್ಜನೆಯನ್ನು ಕೇಳಲಿಕ್ಕೆ ಬರಬೇಕಾಗಿ ಪ್ರಾರ್ಥನೆ. ನೀವೆಲ್ಲರೂ ಹುರಿಗೊಂಡು ಹಳ್ಳಿಗಳನ್ನೆಲ್ಲ ಬಲಪಡಿಸಿ ದೇಶಕಾರ್ಯವನ್ನು ಸಫಲಗೊಳಿಸುವಿರೆಂದು ನಂಬಿದ್ದೇವೆ.

ಕಾರ್ಯಕ್ರಮ

ಸಪ್ಟಂಬರ ತಾ	೭	ಆದಿತ್ಯವಾರ	ರಾಣೇಬೆನ್ನೂರು	ರಾತ್ರಿ ೮ ಗಂಟೆ
	೮	ಸೋಮವಾರ	ಹಲಗೇರಿ	,,
	೯	ಮಂಗಳವಾರ	ಚಟ್ಟಿಹಳ್ಳಿ	,,
	೧೦	ಬುಧವಾರ	ನಾಗವಂದ	,,
	೧೧	ಬೃಹಸ್ಪತಿವಾರ	ಮಾಸೂರು	,,
	೧೨	ಶುಕ್ರವಾರ	ಹಿರೇಕೇರೂರು	,,
	೧೩	ಶನಿವಾರ	ಚಿಕ್ಕೇರೂರು	,,

ಧಾರವಾಡ   ಕಾರ್ಯದರ್ಶಿ

ತಾ॥ ೨-೯-೩೦   **ಕರ್ನಾಟಕ ಸತ್ಯಾಗ್ರಹ ಮಂಡಲ**

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು ವ ಬಿಚ್ಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯ್ವಿಂಗ ವಿದ್ಯ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯ್ವಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರೆ.

ಪ್ರೊ. ವ್ಹಿ. ಎಸ್. ಇಟಗಿ.

ಮುನಸಫಕೋರ್ಟಿನ ಹತ್ತರ, ಧಾರವಾಡ

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1448

ವಿಜಯ

ನಿತ್ಯಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧: ಧಾರವಾಡ ಗುರುವಾರ ತಾರೀಖು ೪ನೇ ಸಪ್ಟಂಬರ ೧೯೩೦ (ಸಂಚಿಕೆ ೧೯೬

ಧಾರವಾಡ ಜಿಲ್ಲೆಯ ಮುಂಬಯಿ ಕೌನ್ಸಿಲ್

(ನಾನ್‌ಮಹಮ್ಮಡನ್) ಮತದಾರರಿಗೆ.

ಶ್ರೀ. ವಿಶ್ವನಾಥ ನಾರಾಯಣ ಜೋಗ ಇವರ

ವಿನಂತಿಯು.

ಮುಂಬಯಿ ಕಾಯದೆ ಕೌನ್ಸಿಲ್ ಚುನಾವಣೆಯು ೧೦—೯—೧೯೩೦ ಬುಧವಾರ ದಿವಸ ಜರಗುವದು ಈ ಚುನಾವಣೆಯಲ್ಲಿ ನಾನೊಬ್ಬ ಉಮೇದವಾರನಾಗಿದ್ದ ಸಂಗತಿಯು ಈ ಮೊದಲೇ ತಮಗೆ ಗೊತ್ತದೆ. ನನಗೆ ಮತಕೊಡಲಿಚ್ಛಿಸುವ ಮತದಾರರು ತಮ್ಮ ವೋಟುಗಳನ್ನು ಕೆಳಗೆ ನಮೂನೆಯಲ್ಲಿ ತೋರಿಸಿದಂತೆ ನನಗೆ ಮತ ಕೊಟ್ಟು ನನ್ನ ಹೆಸರಿನ ಮುಂದೆ ಎರಡು ಕತ್ತರಿ (××) ಗುರ್ತುಗಳನ್ನು ಮಾಡಬೇಕೆಂದು ವಿನಂತಿ ಇರುತ್ತದೆ.

ವಿಶ್ವನಾಥ ನಾರಾಯಣ ಜೋಗ		**X X**

ತಮ್ಮ

ವಿಶ್ವನಾಥ ನಾರಾಯಣ ಜೋಗ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲು ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಥೋಕ ತಕ್ಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ.

ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್ ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ ಕ್ರೆಡಿಟ ಸೋಸಾಯಟಿಯ ಆ
ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರಹ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನು ಒತ್ತ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೭-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೪೫ ಭಾದ್ರಪದ ಶುದ್ಧ ೧೧

ರಾ. ಬ. ಶಂಬಳಿಯವರು ಸ್ವಮತಪರಮತದವರ ವಿಶ್ವಾಸ ಕಳಕೊಂಡರು.

ರಾ. ಬ. ಶಂಬಳಿಯವರು ಬ್ರಾಹ್ಮಣೇತರರಲ್ಲಿ ಹತ್ತು ವರ್ಷಗಳ ಹಿಂದಿನಷ್ಟು ಪ್ರಿಯರು ಈಗಾಗಿರುವದಿಲ್ಲ; ಅದರ ಶತಾಂಶ ಕೂಡ ಇರುವದಿಲ್ಲ. ಮುಂದಿನ ದೊಡ್ಡ ಪೂಜೆಯ ಬದಲಾಗಿ ಟಿಪ್ಪಿನಂಥ ಪೂಜೆಯನ್ನು ಹೆಸರಿನ ಹಿಂದೆ ಹಾಕಿದರೂ ಅಡ್ಡಿಯಿಲ್ಲ. ಅದಕ್ಕೆ ಪ್ರತ್ಯಕ್ಷ ಪ್ರಮಾಣವೆಂದರೆ- ಕಳೆದ ನಾಲ್ಕು ವರ್ಷಗಳಿಂದ ವರ್ತಮಾನಪತ್ರಗಳಲ್ಲಿ ಬರುತ್ತಿದ್ದ ಲೇಖಗಳೇ ಸಾಕು. ಇವುಗಳಿಗೆ ವ್ಯಕ್ತಿದ್ವೇಷದ ಹೆಸರಿಡುವದರ ಬದಲು- ಅದರಲ್ಲಿಯ ತಪ್ಪುಗಳನ್ನು ಒಪ್ಪ ಮಾಡಿಕೊಳ್ಳುತ್ತಾ ಹೋಗಿದ್ದರೆ- ಇಂದು ಈಪರಿಯಾಗಿ ಲೋಕನಿಂದೆಗೆ ಗುರಿಯಾಗುವ ಹೊತ್ತೇ ಬರುತ್ತಿದ್ದಿಲ್ಲ. ಆದರೆ ಇವರು ಸರಕಾರ ದರಬಾರದ ದೊಡ್ಡಸ್ತನಕ್ಕೆ ಬಿದ್ದು ಪರರಿಗೆ ಉಪಕಾರಿ, ಊರಿಗೆ ಹೆಮ್ಮಾರಿಯಾಗಿರುವರು. ಅದರ ಅತ್ಯಂತ ವಿಷಾದಕರವಾದ ಪರ್ಯವಸಾನವು ಪ್ರಕೃತದ ಚುನಾವಣೆಯು ಆಯಿತು,

ರಾ. ಬ. ರವರ ಸ್ವಾರ್ಥದ ಮೂಲಕ, ಇವರಿಗೆ ಎಡಗೈಬಲಗೈಯಂತಿದ್ದ ರಡ್ಡಿ, ಪಾಲ್ಲಮತ, ಭಾವಸಾರಕ್ಷತ್ರಿಯ, ದೇವಾಂಗ, ಜೈನ, ವೈಶ್ಯ, ಮರಾಠಾ ಮೊದಲಾದವರೆಲ್ಲರೂ ಇವರ ವಿರುದ್ಧ ತಿರುಗಿ ನಿಂತು, ಸ್ವಾವಲಂಬದಿಂದಲೇ ತಮ್ಮ ಹಿತ ಮಾಡಿಕೊಳ್ಳಲು- ಹಿಂದುಳಿದ ಸಮಾಜೋನ್ನತಿ ಸಂಘವನ್ನು ಸ್ಥಾಪಿಸಿಕೊಂಡರು. ಈ ಸಂಘಸ್ಥಾಪನೆಯಾಗುವಾಗಲೇ, ಅವರನ್ನು ಸಂತೈಸತಕ್ಕದ್ದಿತ್ತು. ಧಾರವಾಡ ಜಿಲ್ಹೆಯಲ್ಲಿ ಹಿಂದುಳಿದ ಸಮಾಜೋನ್ನತಿಯವರ ಹತ್ತು ಸಾವಿರ ವೋಟುಗಳಿದ್ದು, ಅವಕ್ಕೆಲ್ಲ ಇವರು ಎರವಾದದ್ದು ಇವರಲ್ಲಿ ಎಲ್ಲಾ ಜನರನ್ನು ಕೂಡಿಕೊಂಡು ಹೋಗುವ ಮುತ್ಸದ್ದಿತನವಿಲ್ಲೆಂದು ಸ್ಪಷ್ಟವಾಗುತ್ತದೆ.

ಹಿಂದುಳಿದವರ ಕೂಡ ಸ್ವಂತ ಕುಲದವರ ಪ್ರೀತಿ ವಿಶ್ವಾಸವನ್ನೂ ಕಳಕೊಂಡರೆಂದೂ ಧಾರಾಳವಾಗಿ ಹೇಳುವಂತಾಯಿತು. ವೀರಶೈವರು ಕಾಂಗ್ರೆಸದಲ್ಲಿ ಸೇರಬೇಕೆಂಬದಾಗಿ ಬೆಳಗಾವಿ ಮತ್ತು ಹಾವೇರಿಯಲ್ಲಿ ಎರಡು ಸಭೆಗಳಾದವು. ಇಂಥಾ ಸಭೆಗಳಿಗೂ ರಾ. ಬ. ರವರು ಹೋಗಲೇ ಇಲ್ಲ. ಏಕೆಂದರೆ- ಅವರ ಕೂಡ ನಂಬಿಗೆಯಿಂದ ನಡೆಯುವಂಥ ಮನಸ್ಸೇ ಇರಲಿಲ್ಲ. ಜನರ ನಂಬಿಗೆ ಕಳಕೊಂಡವರು ಜನತೆಯ ಪ್ರತಿನಿಧಿಯಾಗಿ ಕೌನ್ಸಿಲಕ್ಕೆ ಹೋಗಲು ಹೇಗೆ ಮೋರೆಯಿಟ್ಟರು. ತಮಗೆ ಮೋರೆಯುಂಟೆಂಬದನ್ನು ಆತ್ಮಸಾಕ್ಷಿಯಾಗಿ ಹೇಳುವರೇ?

ರಾ. ಬ. ರವರು ಚುನಾವಣೆಯ ದೆಸೆಯಿಂದ ಊರೂರು ತಿರುಗುತ್ತಿದ್ದಾರೆ. ಹುಲಗೇರಿಯವರು ಇವರಿಗೆ ಮೊದಲನೇ ಸಲಾಮು ಹೊಡೆದರು. ಆಗ್ಗೇ ಇವರು ಎಚ್ಚರಾಗಬೇಕಾಗಿತ್ತು. ಜೂಜು ಆಡುವವರು ಒಮ್ಮೆ ಸೋತರೆ- ಮತ್ತೊಮ್ಮೆ ಗೆಲಿಯುವೆವೆಂದು ಹಣವನ್ನೂ, ಅನಂತರ ಗುಣವನ್ನೂ ಕಳಕೊಳ್ಳುವರು. ಅದೇ ಪ್ರಕಾರ ರಾ. ಬ. ರವರ ಪರಿಸ್ಥಿತಿ ಆಯಿತು. ಹುಲಗೇರಿಯ ನಂತರ ಮೊರಬದಲ್ಲಿ, ಅನಂತರ ಹಾನಗಲ್ಲ ಮತ್ತು ಆಲೂರಲ್ಲಿ ಆಯಿತು. ಇವೆಲ್ಲ ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾಗಿವೆ. ಇವುಗಳಲ್ಲದೆ ಇನ್ನೂ ಎಷ್ಟೋ ಊರುಗಳಲ್ಲಿ ಅಪಮಾನವಾಗಿರಬಹುದು. ಇವನ್ನೆಲ್ಲ ಹೇಳುವ ಅವಶ್ಯವಿಲ್ಲ. ಒಂದಲ್ಲ; ಎರಡಲ್ಲ; ನಾಲ್ಕು ಊರುಗಳಲ್ಲಿ ಸಂಭಾವನೆಯಾಯಿತು. ಆದರೂ ಅವರು ಕೌನ್ಸಿಲದ ಆಶೆ ಬಿಡಲೊಲ್ಲರಲ್ಲ!

ರಾ. ಬ. ರವರು ಹೂವು ಮಾರಿದಲ್ಲಿ ಹುಲ್ಲನ್ನು ಮಾರಿಕೊಂಡರೆಂದು ಹೇಳುವದಕ್ಕೂ ಒಂದು ಪ್ರತ್ಯಕ್ಷ ಸಂಗತಿಯು ಇದೇ ಗೊಂದಲದಲ್ಲಿ ಸಂಭವಿಸಿತು. ಮಹಾತ್ಮರು ಎಪ್ರಿಲ ತಿಂಗಳ ಆರನೆಯ ತಾರೀಖಿನ ದಿವಸ ಉಪ್ಪಿನ ಕಾಯದೆಭಂಗ ಮಾಡಲು ಸಾಬರಮತಿಯ ಆಶ್ರಮದಿಂದ ಹೊರಟರು. ಹೀಗೆ ಹೊರಡುವದು ಮುಂದಾಗಿ ಡಂಗುರ ಹೊಡೆದಿತ್ತು. ಅಂದು ಸ್ವರಾಜ್ಯ ಯಾತ್ರೆಯ ಮುಹೂರ್ತವಾಗಿತ್ತು. ಇದೆಲ್ಲ ರಾ. ಬ. ರವರಿಗೆ ಗೊತ್ತಿತ್ತು, ಆದರೂ ಅವರು ಹಾನಗಲ್ಲ ತಾಲೂಕು ಆಲೂರಲ್ಲಿ ಮೆರೆಯಿಸಿಕೊಂಡರು. ಈ ಮೆರವಣಿಗೆಯ ಬಗ್ಗೆ ವರ್ತಮಾನಪತ್ರಗಳಲ್ಲಿ ಆಗ್ಗೆ ಟೀಕೆ ಬಂದಿರುತ್ತದೆ. ನಾಲ್ಕೇ ತಿಂಗಳಲ್ಲಾದ ಕ್ರಾಂತಿಯನ್ನು ನೋಡಿರಿ. ಅದೇ ಊರಿನವರು ಕರೇ ನಿಶಾನೆಯ ಬಹುಮಾನ ಮಾಡಿ ನಿಂತ ಕಾಲಮೇಲೆ ರಾ. ಬ. ರನ್ನು ಊರು ಬಿಡಿಸಿದರು. ಆಗಿನ ಮೆರವಣಿಗೆಯ ಸುದ್ದೀ ಪತ್ರವನ್ನು ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಅಲ್ಲಿ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಮೆಂಬರರಿದ್ದಾರೆ. ಅವರು ಶ್ರೀ. ಲಿಂಗಪ್ಪ ಕಾಬಿಶಾಳ; ಇವರು ರಾ. ಬ. ಶಂಬಳಿಯವರ ಪರಮ ಮಿತ್ರರು, ತೀರ ಆವಶ್ಯಕರು. ಇಂಥವರ ಅಧ್ಯಕ್ಷತೆಯಲ್ಲಿಯೇ ಸಾರ್ವಜನಿಕ ಸಭೆಯಾಗಿ ಕೌನ್ಸಿಲಕ್ಕೆ ಬಹಿಷ್ಕಾರ ಹಾಕಬೇಕೆಂದೂ, ವೋಟು ಕೊಡಬಾರದೆಂದೂ ಠರಾವು ಪಾಸಾಯಿತು. ಈ ಸಂಗತಿಯು ರಾ. ಬ. ರವರಿಗೆ ಮುಂದಾಗಿ ಗೊತ್ತಿದ್ದರೂ, ಅಲ್ಲಿಗೆ ಹೋಗಿ, ಅವಲಕ್ಷಣ ಮಾಡಿಕೊಂಡದ್ದು ಬಹಳಾಗಿ ಗರ್ಹಣೀಯವಾಯಿತು.

ರಾ. ಬ. ರವರು ಸ್ವಜನ ಪರಜನರ ವಿಶ್ವಾಸವನ್ನು ಹೇಗೆ ಕಳಕೊಂಡಿದ್ದಾರೆಂಬದು ಈ ಅಲ್ಪ ವಿವೇಚನೆಯಿಂದ ಕಂಡು ಬರುವದು. ಆದಾಗ್ಯೂ ಇವರು ಮೂಗು ಹೋದರೂ, ಹೊಳ್ಳೆ ಮುಲ್ಲಿ ಹಸೀಗಿರುತ್ತದೆಂಬ ಉಮೇದವಾರಿಯ ಆಗ್ರಹ ತೊಟ್ಟಿದ್ದಾರೆ. ಈ ಆಗ್ರಹಕ್ಕಾಗಿ ಅತ್ಯಂತವಾಗಿ ವಿಷಾದಪಡುವಂತೆ ಚುನಾವಣೆಯ ದಿವಸ ಜಿಲ್ಹೆಯ ತುಂಬ ಕಂಡುಬರುವದು. ವೋಟು ಕೊಡುವವರೂ ಉಮೇದವಾರರ ಏಜಂಟರೂ ಇವರ ದೆಸೆಯಿಂದ ಅಪಮಾನ ಹೊಂದಬೇಕಾಗುವರು. ಏಕೆಂದರೆ- ವೋಟರರು ಊರು ಬಿಡುವಾಗ ಧಿಕ್ಕಾರ ಹೊಂದುವರು. ಕರೇ ನಿಶಾನೆಯ ಆಪತ್ತಿಗೆ ಒಡ್ಡಿಸಿಕೊಳ್ಳುವರು. ಈ ಭಕ್ತಜನರುಗಳು ಪ್ರತಿಯೊಂದು ಪೋಲಿಂಗ ಸ್ಟೇಶನ ಹತ್ತರ ಪಾರಿವಾಳಗಳಂತೆ ಹಾರಾಡುವವು. ತಮಗೆ ಅಪಮಾನ, ತಮಗೆ ವೋಟು ಸೂಚಿಸಿ, ಗುರ್ತು ಹೇಳುವ ಏಜಂಟರಿಗೆ ಅಪಮಾನ, ವೋಟರರಿಗೆ ಅಪಮಾನ, ಎತ್ತ ನೋಡಿದತ್ತ ಅಪಮಾನವೇ ಅಪಮಾನ!! ಹೀಗೆ ಅಪಮಾನಗಳ ಪರಂಪರೆಪಡಿಸಿಕೊಳ್ಳುವದಕ್ಕಿಂತ, ಮಹಾತ್ಮಾ ಗಾಂಧಿಕಿ ಜಯವೆಂದು, ಶ್ರೀ. ಕೌಜಲಗಿ ಶ್ರೀನಿವಾಸರಾಯರಂತೆ ಸ್ವರಾಜ್ಯ ಚಳವಳಿಯಲ್ಲಿ ಧುಮುಕಿ, ಕಳೆದ ಹೋದ ಮಾನವನ್ನು ಸಂಪಾದಿಸಬೇಕೆಂದು ಪ್ರೀತಿಪೂರ್ವಕವಾಗಿ ಸೂಚಿಸುತ್ತೇವೆ.

ಮಿರಜೆಯಲ್ಲಿ ಕಾಂಗ್ರೆಸ ಕಮಿಟಿಯನ್ನು ಗೈರ ಕಾಯದೆಶೀರ ಮಾಡಿ, ಅದರ ವಿರುದ್ಧ ನಡೆದವರಿಗೆ ಎರಡು ವರ್ಷ ಕೈದು ಮತ್ತು ಸಾವಿರ ರೂಪಾಯಿ ದಂಡ ಮಾಡಲ್ಪಡುವದೆಂದು ದರಬಾರದಿಂದ ಜಾಹೀರನಾಮೆ ತೆಗೆಯಲ್ಪಟ್ಟಿದೆ.

ದಿಲ್ಲಿಯಲ್ಲಿ ಯುದ್ಧ ಮಂಡಳ ಮತ್ತು ಜಮ್ಮಾಯತ ಉಲೇಮಾದ ಮೆಂಬರರಾದ ಮೌಲಾನಾ ಸಯ್ಯದಶಹಾ ಬುಖಾರಿಯವರನ್ನು ದಸ್ತಗೀರ ಮಾಡಿದ್ದಾರೆ.

ಬಂಗಾಲದ ಬಾಂಬಿನ ಅತ್ಯಾಚಾರದ ಪ್ರಕರಣದಲ್ಲಿ ಶ್ರೀ. ಕಿಶೋರಿರಾಣಿ ಎಂಬವಳನ್ನು ಹಿಡಿದಿದ್ದಾರೆ. ಆಕೆಯು [illegible] ಒಬ್ಬ ಮ್ಯಾಜಿಸ್ಟ್ರೇಟರ ತಂಗಿಯು.

ಅಕ್ಕೀ ಆಲೂರಲ್ಲಿ
ರಾ. ಬ. ಕಂಬಳಿಯವರಿಗೆ
ಬಹುಮಾನ.

ಹಾನಗಲ್ಲ ತಾಲೂಕ ಆಲೂರ ಗ್ರಾಮದಲ್ಲಿ ರಾಷ್ಟ್ರೀಯ ವಾರದ ಮೊದಲನೇ ದಿನವಾದ ೬ನೇ ಎಪ್ರಿಲ ದಿವಸ ಸಂಭವಿಸಿದ ವಿಚಿತ್ರ ನೋಟವು.

ಬುಹನೀಯಬೇ– ೬ನೇ ಎಪ್ರಿಲಿನ ದಿವಸ ಆಲೂರಲ್ಲಿ, ಮುಂಬಯಿ ಲೆಜಿಸ್ಲೇಟಿವ್ಹ ಕೌನ್ಸಿಲಿನ ಡೆಪ್ಯುಟಿ ಪ್ರೆಸಿಡೆಂಟರಾದಂಥ, ಧಾರವಾಡ ಜಿಲ್ಹಾ ಲೋಕಲಬೋರ್ಡಿನ ಪ್ರೆಸಿಡೆಂಟರಾದಂಥ, ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದಂಥ ರಾವಬಹಾದ್ದೂರ ಕಂಬಳಿಸಾಹೇಬರ ಮೆರವಣಿಗೆಯ ಮಹೋತ್ಸವವು ನೆರವೇರಿತು.

ರಾವಬಹಾದ್ದೂರರವರ ಅನುಯಾಯಿಗಳು ೬ನೇ ತಾರೀಖಿನ ದಿನವೇ ಮೆರವಣಿಗೆಯಾಗಲಿಕ್ಕೇ ಬೇಕೆಂದೇ ರಾವಬಹಾದ್ದೂರರವರಿಗೆ ಆಮಂತ್ರಣ ಕೊಟ್ಟದ್ದರಿಂದ ಸನ್ಮಾನಾರ್ಥವಾಗಿ ಜಾಲಿನವಾಲಾಬಾಗದ ಕೊಲೆಯಾದ ದಿವಸ ಮತ್ತು ರಾಷ್ಟ್ರಮುಖಂಡರು ಹಿಂದು ಮಾಂದವರಿಗೆ ಪಾಲಿಸತಕ್ಕ ರಾಷ್ಟ್ರಕಾರ್ಯಕ್ಕಾಗಿ ನೇಮಿಸಿದ ವಾರದ ಮೊದಲನೇ ದಿನವಾದರೂ, ಮಹಾತ್ಮಾಜಿಯವರು ಉಪ್ಪಿನ ಕಾಯದೆ ಮುರಿಯಲಿಕ್ಕೆಂದು ನೇಮಿಸಿದ ದಿವಸವಾದರೂ, ಮತ್ತು ಅವತ್ತೇ ಎಷ್ಟೆಷ್ಟೋ ರಾಷ್ಟ್ರಭಕ್ತರ ಬಂಧನವಾಗುವದೋ? ಎಲ್ಲೆಲ್ಲಿ ಏನೇನು ಅನರ್ಥವಾಗುವದೋ ಎಂದು ಇಡೀ ಹಿಂದುಸ್ಥಾನದೊಳಗಿನ ಜನರು ಪ್ರತಿಯೊಬ್ಬರೂ ಇಷ್ಟೇ ಒಟ್ಟೇ ಚಿಂತಾತುರರಾಗಿದ್ದ ದಿನವಾದಾಗ್ಯೂ ಸಹ ನಮ್ಮ ರಾವಬಹಾದ್ದೂರರವರು ಮೋಟಾರ ಲಾರಿನಲ್ಲಿ ಕುಳಿತು, ಕೊರಳಲ್ಲಿ ಮಾಲೆಗಳನ್ನು ಧರಿಸಿ ಒಳ್ಳೇ ವಿಜೃಂಭಣೆಯಿಂದ ಮೆರೆದರು. ಅವತ್ತಿನ ದಿನವು ಲೋಕದೃಷ್ಟಿಯಿಂದ ಎಷ್ಟು ಅನಿಷ್ಟಕಾರಕವಾದರೂ ಅವತ್ತೇ ಮೆರವಣಿಗೆಯನ್ನು ಮಾಡಿಸಿಕೊಂಡು ತಮ್ಮ ಭಕ್ತಜನರ ಮನಸ್ಸಿನ ಉತ್ಸಾಹವನ್ನು ಕಡಿಮೆ ಮಾಡದಿದ್ದದ್ದು ರಾವಬಹಾದ್ದೂರರವರಿಗೆ ಭಕ್ತಜನರ ಮೇಲಿರತಕ್ಕ ಪ್ರೀತಿಯನ್ನು ವ್ಯಕ್ತಪಡಿಸುವದರ ಕೂಡ ಅವರ ಸ್ವದೇಶ ಪ್ರೇಮವನ್ನೂ ವ್ಯಕ್ತಪಡಿಸುತ್ತದೆ.

ಹಿರ್ವ ಪ್ರೇಕ್ಷಕ.

ಮುಸಲಮಾನ ಹಾಯಕೋರ್ಟ ಜಡ್ಜಿಯ ಮೊಮ್ಮಗನ ರಾಷ್ಟ್ರೀಯ ದೇಶಸಂಚಾರ.

—(೧)—

ಸ್ವರ್ಗವಾಸಿ ನ್ಯಾಯಮೂರ್ತಿ ಬದ್ರುದ್ದೀನ ತಯಬಜಿಯವರ ಮೊಮ್ಮಕ್ಕಳಾದ ಮಿ. ಅಜೀಮ ಎಚ್. ತಯಬಜಿಯವರು ಕರ್ನಾಟಕದಲ್ಲಿ ವಿಶೇಷವಾಗಿ ಮುಸಲಮಾನರಲ್ಲಿ ರಾಷ್ಟ್ರೀಯ ಜಾಗೃತಿಯನ್ನುಂಟುಮಾಡಲೋಸುಗ ಇತ್ತಕಡೆಗೆ ಬಂದಿರುತ್ತಾರೆ. ಇವರು ಪರಂಪರೆಯಾಗಿ ಜಡ್ಜಿಯ ಮನೆತನದವರು. ಇಲ್ಲಿಯ ಶಿಕ್ಷಣ ಮುಗಿಸಿಕೊಂಡು, ಉಚ್ಚ ಶಿಕ್ಷಣ ಹೊಂದಲು ಲಂಡನಕ್ಕೆ ಹೋಗಿದ್ದರು. ರಾಷ್ಟ್ರಸೇವೆಯೇ ಇಂದಿನ ಕರ್ತವ್ಯವೆಂದು ಭಾವಿಸಿ, ಅಭ್ಯಾಸಬಿಟ್ಟು ಅಲ್ಲಿಂದ ಹೊರಟು ಮುಂಬಯಿಗೆ ಬಂದು ಒಂದು ತಿಂಗಳು ಸಹ ಆಗಲಿಲ್ಲ. ಅಲ್ಲಿಗೆ ಬಂದವರೇ ಲೋಕಜಾಗೃತಿಗಾಗಿ ಪ್ರವಾಸವನ್ನು ಕೈಕೊಂಡಿದ್ದಾರೆ. ತಾನು ಹಾಯಕೋರ್ಟಿನ ಜಡ್ಜಿಯ ಮೊಮ್ಮಗನು ಜಡ್ಜಿಯ ಮಗನೆಂದು ಅಭಿಮಾನ ಪಡುವದಿಲ್ಲ. ಮೂಲ ಜಡ್ಜಿಯವರು ಕಾಂಗ್ರೆಸದ ಅಧ್ಯಕ್ಷರಾಗಿದ್ದರು. ಅವರ ಮೊಮ್ಮಗನೆಂದು ಇವರು ಅಭಿಮಾನ ಪಡುತ್ತಾರಲ್ಲದೆ, ಜಡ್ಜಿಯ ಮಗನೆಂದು ಹೇಳಿಕೊಳ್ಳುವದಿಲ್ಲ. ಪರದಾಸ್ಯಸೇವೆಯವರ ಮಗನೆಂದು– ನಾನು ಮಾಮಲೇದಾರ ಡಿಪುಟಿ ಕಲೆಕ್ಟರನ ಮಗನೆಂದು ಆತ್ಮಸ್ತುತಿ ಮಾಡಿಕೊಳ್ಳುವಂಥವರು ಬುದ್ಧಿಗಲಿಯು ಬರೇ ?

ಮುಸಲಮಾನರು ಕಾಂಗ್ರೆಸದಲ್ಲಿ ಸೇರಿರುವದಿಲ್ಲೆಂದು ಸುಳ್ಳೇ ಹೇಳುವರು. ಅಲ್ಲೀ ಬಂಧುಗಳ ಕಾಲ ಹಿಂದಾಯಿತು. ಅವರಿಗೆ ೬೦ ವರ್ಷದ ಅರಿಹುಚ್ಚು ಹಿಡಿದಿದೆ. ಪೇಶಾವರದಿಂದ ಮುಂಬಯಿತನಕ ನೋಡಿರಿ. ಪೆಶಾವರ, ಲಾಹೋರ, ಲಖನೌ ಮುಂಬಯಿಯ ಮುಸಲಮಾನರು ಕಾಂಗ್ರೆಸದಲ್ಲಿ ಸೇರಿದ್ದಾರೆ. ಇಬ್ಬರು ಅಧ್ಯಕ್ಷರಾಗಿ ಸುರಂಗದಲ್ಲಿದ್ದಾರೆ. ಮೂರನೆಯವರು ಈಗ ಅಧ್ಯಕ್ಷರಾಗಿದ್ದಾರೆ. ಮುಂಬಯಿಯ ಮುಸಲಮಾನ ವರ್ತಕರು ಬಹಿಷ್ಕಾರದಲ್ಲಿ ಮುಂದಾಗಿದ್ದಾರೆ. ವಿಲಾಯತಿಯ ಎಲ್ಲಾ ತರದ ಪದಾರ್ಥಗಳ ವ್ಯಾಪಾರ ಮಾಡುವಂಥವರು ಬಹಿಷ್ಕಾರ ಹಾಕಿದ್ದಾರೆ. ಇಂಗ್ರೇಜಿ ಸರಕಾರದಿಂದ ಏನೂ ದೊರೆಯದು. ತುರ್ಕಸ್ಥಾನ, ಅರಬಸ್ಥಾನ, ಇಜಿಪ್ತ ಇವು ಪ್ರತ್ಯಕ್ಷ ಪ್ರಮಾಣವಾಗಿದೆ. ಆದುದರಿಂದ ಕರ್ನಾಟಕದ ಮುಸಲಮಾನರು ಕಾಯದೆಭಂಗದ ಚಳವಳಿಯಲ್ಲಿ ಸೇರಬೇಕೆಂದು ಹೇಳುವದೇ ಇವರ ಪ್ರವಾಸದ ಮುಖ್ಯಾಶಯವಾಗಿರುತ್ತದೆ.

ಪುಣೆಯಲ್ಲಿ ಚುನಾವಣೆಯು ಅಬ್ಬಿದಾಯಿರೀ ಹೇಳಿಸಿತು.

—(೯)—

ಮೊನ್ನಿನ ದಿವಸ ಮಹಾರಾಷ್ಟ್ರ ಪ್ರಾಂತದಲ್ಲಿ ಅಸೆಂಬ್ಲಿಯ ಚುನಾವಣೆಯಾಯಿತು. ಮಿ. ಜಾಧವ ಮಿ. ಗುಂಜಾಳ ಮತ್ತು ದಿವಾನ ಜಾಧವರಾಯರು ಉಮೇದವಾರರಾಗಿದ್ದರು ಇವರನಾಗೆ ಅಪಯಶ ಬಂತೆಂದು ಈಗಾಗಲೆ ಲೋಕವಾರ್ತೆಯಾಗಿದೆ.

ಪುಣೆಯಲ್ಲಾದ ಚುನಾವಣೆಯ ವೇಳೆಯಲ್ಲಿ ಸ್ತ್ರೀಯರು ಪಿಕೆಟಿಂಗ ಮಾಡಿದರು. ಸಾವಿರ ಜನ ವೋಟರರಲ್ಲಿ ೬೦ ಜನರು ಮಾತ್ರ ವೋಟು ಕೊಟ್ಟರು. ಬಹುಶೇಕವಾಗಿ ಮಿ. ಗುಂಜಾಳರಿಗೇ ದೊರೆತವು. ದಿವಾನ ಜಾಧವರಾಯರಿಗೆ ಪೂರಾ ಎಂದರೂ ಸಲ್ಲುವದು. ಪೋಲಿಂಗ ಸ್ಟೇಶನದ ಬಾಗಿಲದಲ್ಲಿ ಕರೇ ನಿಶಾನೆಗಳು ಹಾರಾಡಿದವು. ಶೇಮ ಶಬ್ದಗಳಿಗಂತೂ ಎಣಿಕೆಯೇ ಇರಲಿಲ್ಲ. ಪುಣೆಯ ಉದಾಹರಣೆ ನೋಡಿಕೊಂಡು, ಧಾರವಾಡ ಜಿಲ್ಹೆಯ ಮತದಾರರೂ ಉಮೇದವಾರರೂ ಎಚ್ಚರಾಗುವರೆಂದು ತಿಳಿಯುತ್ತೇವೆ.

ಒಡಂಬಡಿಕೆಯು ಡೊಳ್ಳು ಹೊಡೆಯುವದೆ.?

ಸರ ಸಪ್ರು ಮತ್ತು ಜಯಕರರು ಮಹಾತ್ಮರನ್ನು ಕಾಣಲು ಯರವಡೆಗೆ ಬಂದಿದ್ದಾರೆ. ಆದರೆ ಅವರಿಗೆ ನೈನಿತಾಳದಲ್ಲಿ ಪಂಡಿತ ಪಿತಾಪುತ್ರರಿಂದ ಆಶೆಪಡುವಂಥ ಉತ್ತರವೇ ದೊರೆಯಲಿಲ್ಲ. ಅಂಥ ಅಗಾಧ ಚಮತ್ಕಾರವಾದರೆ– ಒಡಂಬಡಿಕೆಯಾಗುವದೆಂದು ಮುಂಬಯಿ ಟಾಯಿಮ್ಸ ಪತ್ರವು ಒಳಗಿನ ಗುಟ್ಟೆಂದು ಹೇಳುತ್ತದೆ.

ಕೌನ್ಸಿಲ ಚುನಾವಣೆಗೆ ಕುಂಬಾರ, ನಾವಲಿಗ, ಪಕಾಲಿ ಮತ್ತು ಕಸಗೂಡಿಸುವವರ ಉಮೇದವಾರಿಯು.

ಪಂಜಾಬದ ಕೌನ್ಸಿಲಕ್ಕಾಗಿ ಲಾಹೋರ ಪಟ್ಟಣದ ವತಿಯಿಂದ ಸುಶಿಕ್ಷಿತರಾರೂ ಉಮೇದವಾರರಾಗಿ ನಿಲ್ಲಲಿಲ್ಲ. ಕಾಂಗ್ರೆಸ ಕಮೀಟಿಯವರು.

೧ ಕುಂಬಾರ, ೨ ನಾವಲಿಗ, ೩ ಪಕಾಲಿ ಮತ್ತು ೪ ಢೇಡಿಯ ಕಸಗೂಡಿಸುವವ

ಈ ಪ್ರಕಾರ ನಾಲ್ವರನ್ನು ಉಮೇದವಾರರಾಗಿ ನಿಲ್ಲಿಸಿದ್ದಾರೆ.

ಮೂರು ತಿಂಗಳ ಶಿಕ್ಷೆ.

ಮುಂಬಯಿ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ. ಸಾ|| ಜಂಸಾವೆಲ್ಥ ಇವರಿಗೆ ಮೂ

ಗಾಂಧಿ ಟೊಪ್ಪಿಗೆಯ ಸಂಭ್ರಮದಲ್ಲಿ ಮಂಗನ ಮೆರವಣಿಗೆ.

—(೦)—

ಮೊನ್ನಿನ ದಿವಸ ಈ ಊರಲ್ಲಿ ಒಂದು ಮಂಗವು ವಿದ್ಯುತ್ತಿನ ತಂತಿಗೆ ತಾಕಿ, ಕೂಡಲೆ ಸತ್ತಿತು. ಮಂಗನನ್ನು ಮೆರೆಯಿಸಿ, ದಹನ ಮಾಡುವದು ಪುರಾತನ ಕಾಲದಿಂದ ವಾಡಿಕೆಯಾದದ್ದು. ಆ ಪ್ರಕಾರ ಮೊನ್ನೆ ರಾತ್ರಿಯಲ್ಲಿ ಇದರ ಮೆರವಣಿಗೆ ಹೊರಟಿತು. ಚಕ್ಕಡಿಯ ಮೇಲೆ ಚಲಿಗೆ ಹಾಕಿ, ತಳಿರು ಬಾಳೇಕಂಬಗಳ ಮಂಟಪ ಕಟ್ಟಿ ಗಾಂಧೀ ಟೊಪ್ಪಿಗೆ ಹಾಕಿ, ಪಟ್ಟೆ ಕುಂಕುಮ ಹಚ್ಚಿ ಮಂಗನನ್ನು ಕೂಡ್ರಿಸಿದ್ದರು. ಹತ್ತು ಬಿಜಲಿ ಬತ್ತಿಗಳು ಪ್ರಕಾಶಗೊಂಡಿದ್ದವು. ಬಜಂತ್ರಿ ಬ್ಯಾಂಡು ಭೋರ್ಗರೆದವು. ಆಗಾಗ್ಗೆ ಹಗಲಪಂಜು ಮಂಗನ ಮೋರೆಗೆ ಹೆಚ್ಚು ಬೆಳಕು ಮಾಡುತ್ತಿತ್ತು. ಬಾಣ ಬಿರುಸುಗಳು ತೆರಪಿಲ್ಲದೆ ಆಕಾಶವನ್ನಡರುತ್ತಿದ್ದವು. ಕಳ್ಳಿಗಳು ಒಂದರ ಮೇಲೊಂದರಂತೆ ಹಕ್ಕುತ್ತಿದ್ದವು. ವಿನಾಯಕ ಚವತಿಯ ದಿವಸ ಒಹಿವ್ಯಾಕರದ ಕೋಳಿವಾಟೇಲ್ಲಿ ಬಿದ್ದಿದ್ದ ಪಟಾಕ್ಷಿಗಳು ಎಂಟು ತಾಸಿನ ತನಕ ಒಂದೇಸವನೇ ಹಾರ, ಬೀದಿಗಳಲ್ಲಿ ಹಾಗೆ ಹಾರಿದವು. ಮಂಗನ ಸಂಭ್ರಮ ನೋಡಲು ಜನಜಾತ್ರೆ ಕೂಡಿತ್ತು.

ಹಿರೇಕೆರೂರ ತಾಲೂಕ ಚಿಕ್ಕೇರೂರಲ್ಲಿ ತಾ. ೩೧-೮-೧೯೩೦ನೇ ದಿವಸ ಕಾಂಗ್ರೆಸ ಕಮೀಟಿಯ ಸ್ಥಾಪನೆಯಾಗಿ ಅದರ ಕಾರ್ಯಕಾರೀ ಮಂಡಳವು ಕೆಳಗೆ ಬರೆದ ಪ್ರಕಾರ ನಿಯಮಿಸಲ್ಪಟ್ಟಿತು.

ಅಧ್ಯಕ್ಷರು- ಭಿಷ್ಟೋ ಕೃಷ್ಣ ನಾಡಿಗೇರ
ಉಪಾಧ್ಯಕ್ಷರು- ವಿರುಪಾಕ್ಷಪ್ಪಾ ಚನಬಸಪ್ಪಾ ದುಂದೂರ
ಕಾರ್ಯದರ್ಶಿಗಳು- ಬಜ್ಜಪ್ಪ ಭೀಮರಾಯಪ್ಪಾ ತಿಂಗೇರ
ಉಪಕಾರ್ಯದರ್ಶಿಗಳು- ಜಯಾಚಾರ್ಯ ರಾಮಾಚಾರ್ಯ ತಿಂಗನಮಳ್ಳಿ

ಕಾರ್ಯಕಾರೀ ಮಂಡಳದ ಸದಸ್ಯರುಗಳು-

೧ ವಿರುಪಾಕ್ಷಪ್ಪಾ ಚನ್ನಬಸಪ್ಪಾ ದುಂದೂರ ೨ ವೀರಪ್ಪಾ ಸಾದೆಪ್ಪ ಯಂಣೆ ೩ ಚನವೀರಪ್ಪ ಬಜ್ಜಪ್ಪಾ ಯಂಣೆ ೪ ಒಡಾಚಾರ್ಯ ಭೀಮಾಚಾರ್ಯ ಕಂಪಲಿ ೫ ಭೀಮಾಚಾರ್ಯ ಕೃಷ್ಣಾಚಾರ್ಯ ಪುರೋಹಿತ ೬ ರಾಘವಕೃಷ್ಣಪ್ಪ ವೆಂಕಪ್ಪ ಶೆಟ್ಟಿ (ಸಿಡೇನದಾರ) ೭ ರುದ್ರಪ್ಪ ಮುದ್ದೀರಪ್ಪ ದುಂದೂರು

ಶೋಕಜನಕ ಮೃತ್ಯು.

—(೦)—

ಸ್ವಕುಲ ಸಾಳೀ ಸಮಾಜದ ವತಿಯಿಂದ ಶ್ರೀ ಭೀಮಪ್ಪಾ ದೀವಟೆ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಬಾಗಲಕೋಟೆಯ ಸ್ವಕುಲ ಸಾಳೀ ಸಮಾಜದ ಮುಂದಾಳು ಶ್ರೀ. ವಾ. ನೆಂಕಪ್ಪಾ ಕಲಬುರ್ಗಿ ಉರ್ಫ ಥಗಿ ಇವರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಲ್ಪಟ್ಟಿತು.

ಶ್ರೀ. ವಾ. ನರಸಪ್ಪನವರು ಮುರಲೀಧರ ದೇವಮಂದಿರವನ್ನು ಸ್ವಂತ ಖರ್ಚಿನಿಂದ ಕಟ್ಟಿಸಿ ಅದಕ್ಕೆ ಕಾಯಂ ಉತ್ಪನ್ನ ಮಾಡಿಸಿ ಕೊಟ್ಟಿರುತ್ತಾರೆ. ಮೃತರು ನಿಷ್ಪಕ್ಷಪಾತಿಗಳಿದ್ದರು. ನಿಧನದಿಂದ ಸಾಳೀ ಸಮಾಜದವರಿಗೆ ಒಂದು ದೊಡ್ಡ ಹಾನಿಯಾಯಿತು.

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು ವ ಬಿಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯ್ವಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯ್ವಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡ್ಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವ ನಿಮ್ಮ ಇಚ್ಛೆ ಇದ್ದರೆ ತೀವ್ರ ಒಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೨ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ಡಿ. ಎಸ. ಇಟಗಿ.
ಜುಡಿಶಲಕೋರ್ಟಿನ ಹತ್ತಿರ, ಧಾರವಾಡ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲೆಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಾಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಸಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದ ಕೊರಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ್ಸ
ಮಾರ್ಕೆಟ ಧಾರವಾಡ.

ನಕಾಶೆ ಸಹಿತ

—(೦)—

ಉರ್ದು ಧಾರವಾಡ ಜಿಲ್ಹೆಯ ಭೂಗೋಲು
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡ ಮಾಸ್ತರ
ಶಾಳಾ ನಂಬರ ೧, ಗದಗ ಬೆಟಗೇರಿ

ಚಂದಾದಾರರಿಗೆ ಸೂಚನೆ

—೦*೦—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೆಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಪ್ಪಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ | ಧಾರವಾಡ ಶುಕ್ರವಾರ ತಾರೀಖು ೫ನೇ ಸೆಪ್ಟಂಬರ ೧೯೩೦ (ಸಂಚಿಕೆ ೧೯೭

ಧಾರವಾಡ ಜಿಲ್ಲೆಯ ಮುಂಬಯಿ ಕೌನ್ಸಿಲ್

(ನಾನ್‌ಮಹಮ್ಮದನ್) ಮತದಾರರಿಗೆ.

ಶ್ರೀ. ವಿಶ್ವನಾಥ ನಾರಾಯಣ ಜೋಗ ಇವರ

ವಿನಂತಿಯು.

ಮುಂಬಯಿ ಕಾಯಿದೆ ಕೌನ್ಸಿಲ್ ಚುನಾವಣೆಯು ೧೦—೯—೧೯೩೦ ಬುಧವಾರ ದಿವಸ ಜರಗುವದು ಈ ಚುನಾವಣೆಯಲ್ಲಿ ನಾನೊಬ್ಬ ಉಮೇದವಾರನಾಗಿದ್ದ ಸಂಗತಿಯು ಈ ಮೊದಲೇ ತಮಗೆ ಗೊತ್ತದೆ. ನನಗೆ ಮತಕೊಡಲಿಚ್ಛಿಸುವ ಮತದಾರರು ತಮ್ಮ ವೋಟುಗಳನ್ನು ಕೆಳಗ ನಮೂನೆಯಲ್ಲಿ ತೋರಿಸಿದಂತೆ ನನಗೆ ಮತ ಕೊಟ್ಟು ನನ್ನ ಹೆಸರಿನ ಮುಂದೆ ಎರಡು ಕತ್ತರಿ (××) ಗುರ್ತುಗಳನ್ನು ಮಾಡಬೇಕೆಂದು ವಿನಂತಿ ಇರುತ್ತದೆ.

ವಿಶ್ವನಾಥ ನಾರಾಯಣ ಜೋಗ		**X X**

ತಮ್ಮ

ವಿಶ್ವನಾಥ ನಾರಾಯಣ ಜೋಗ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲು ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಹೋಲ ಕೊಳ್ಳುವವರಿಗೆ ನೂರಕ್ಕೆ [illegible] ಕಮೀಶನ ದೊರೆಯುವದು.

ಬಿ. ಪ್ರಿ. ನವರತ್ನ.
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್, ಮಾರ್ಕೆಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.
ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯು ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಚಂದಿಗೆಯು ಎಂಟು ಲಕ್ಷದ ಮೇಲಿಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರಹ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು [illegible] ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ವಿ. ಕೆ. ಶೆಟ್ಟಿ:
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ[illegible] ಭಾದ್ರಪದಶುದ್ಧ ೧೪

ಚುನಾವಣೆಯಲ್ಲಿ ಏಕೆ ಹೋಟು ಕೊಡಬಾರದು?

ಬುಧವಾರ ೧೦ನೆಯ ತಾರೀಖಿನ ದಿವಸ ಈ ಜಿಲ್ಲೆಯಲ್ಲಿ ಕೌನ್ಸಿಲ ಚುನಾವಣೆ ನಡೆಯುವದು. ಅಂದು ಸರಕಾರದವರು ರಜೆ ಕೊಡುವರು. ಕಚೇರಿ-ಶಾಲೆಗಳೆಲ್ಲ ಬಂದಾಗುವವು. ಏಕೆಂದರೆ- ಸರಕಾರೀ ಕಾಮದಾರರು ಪೋಲಿಂಗ ಆಫೀಸರರೂ, ಸುಪರವಾಯಜರರೂ, ಕಾರಕೂನರೂ ಆಗಬೇಕೆಂದು ಈ ರಜೆಯುಂಟು. ರಜೆಗೂ ಮತದಾರರಿಗೂ ಅರ್ಥಾರ್ಥ ಸಂಬಂಧವಿರುವದಿಲ್ಲ. ಮತ ಕೊಡತಕ್ಕವರಿಗೆ ಅನುಕೂಲವಾಗಬೇಕೆಂದು ಮುಂಜಾನೆ ಮತ್ತು ಸಂಜೆಯಲ್ಲಿ ಹೋಟು ಬರೆಕೊಳ್ಳುವ ವ್ಯವಸ್ಥೆ ಮಾಡಿದ್ದಾರೆ.

ಸರಕಾರದ ವ್ಯವಸ್ಥೆಗೂ, ಹೋಟರರಿಗೂ ಅರ್ಥಾರ್ಥ ಸಂಬಂಧವಿರುವದಿಲ್ಲ. ಹೋಟರರನ್ನು ಕೇಳಿ ಹೋಟಿನ ದಿನವನ್ನು ಗೊತ್ತು ಮಾಡಿಲ್ಲ. ಎಲ್ಲವೂ ಸರಕಾರವನ್ನು ಅವಲಂಬಿಸಿರುತ್ತದೆ. ಅದ್ದರಿಂದ ಅಂದು ಮತದಾರರು ತಮ್ಮ ಮನೆತನದ ಕೆಲಸ ಬೊಗಸೆಗಳನ್ನು ಬಿಟ್ಟು, ಇದ್ದಲ್ಲಿ ಅಥವಾ ಊರಿಂದೂರಿಗೆ ಹೋಟು ಕೊಡಲಿಕ್ಕೇ ಹೋಗಬೇಕೆಂದು ಕೈ ಕಟ್ಟಿಕೊಂಡಿರುವದಿಲ್ಲ. ಪ್ರತ್ಯಕ್ಷದಲ್ಲಿ ನಡೆದ ಚುನಾವಣೆಯ ಅನುಭವದಿಂದ; ಹಿಂದಿನ ಚುನಾವಣೆಗಳಲ್ಲಿ ಎಲ್ಲ ಮತದಾರರು ಹೋಟಿಗೆ ಹೋಗಿರುವದಿಲ್ಲ. ಕೌನ್ಸಿಲ ಚುನಾವಣೆಯಂತೆ ಲೋಕಲ್‌ಬೋರ್ಡಿನ ಹಣೆಬರಹ. ಆಗಾದರೂ ಎಲ್ಲ ಜನರು ಹೋಟಿಗೆ ಹೋಗುವರು? ಹೋಟು ಕೊಡುವದು, ಬಿಡುವದು ಮತದಾರರ ಮರ್ಜಿಯ ಕೆಲಸವು. ಅವರ ಮೇಲೆ ಯಾರೂ ಜುಲ್ಮು ಮಾಡಸಲಾರರು. ಯಾವದೇ ರೀತಿಯಿಂದ ಬಲವಂತಿಕೆ ಮಾಡಬಾರದು; ಲಂಚ ಕೊಡಬಾರದು; ಚಹಾ ಕಾಫಿ, ಊಟ-ಉಪಚಾರ, ಬಂಡಿ, ಟಾಂಗಾ ಮೋಟಾರ ಮುಂತಾದವುಗಳ ಸೌಕರ್ಯವನ್ನೂ ಒದಗಿಸಬಾರದೆಂದು ಸರಕಾರದವರೇ ಕಾಯದೆ ಮಾಡಿದ್ದಾರೆ. ಹೀಗೆ ಎಲ್ಲಾದರೂ ಕಂಡು ಬಂದರೆ- ಇದಕ್ಕೆ ಸಂಬಂಧಿಸಿದ ಉಮೇದವಾರನ ಚುನಾವಣೆಯೇ ರದ್ದಾಗುತ್ತದೆ.

ತನ್ನ ಮನೆತನದ ಕೆಲಸದಲ್ಲಿ ಪ್ರತಿಯೊಬ್ಬನಿಗೆ [illegible] ಸ್ವಾತಂತ್ರ್ಯ ಇದ್ದಂತೆ ಸ್ವಾತಂತ್ರ್ಯವಿದೆ. ಹೋಟು ಕೊಡುವ ವಿಷಯದಲ್ಲಿ ನೂರು ಸೇಕಡಾ ಸ್ವಾತಂತ್ರ್ಯವುಂಟು. ಧಾರಾಳವಾಗಿ ದಾಕ್ಷಿಣ್ಯಕ್ಕೆ ಒಳಗಾಗಿ ಬಸವನ ಹಿಂದೆ ಬಾಲವಾಗಿ ಅವರ ಸಂಗಡ ಹೋಗಿ, ಅವರು ಹೇಳಿದಲ್ಲಿ ಶಿಕ್ಕಾ ಗುರ್ತು ಹಾಕುವದೆಂದರೆ ತಮ್ಮ ಬುದ್ಧಿಗೇ ಶಿಕ್ಕಾ ಹಾಕಿಕೊಳ್ಳುವದಾಗುತ್ತದೆ. ಅಂಥ ಶಿಕ್ಕಾ, ಕಾಲು ಶಿಕ್ಕಾ ಬಡಿಯುವ ಶಿಕ್ಕಾಯನ್ನು ಹಾಕಿಕೊಳ್ಳುವಂಥ ದಿವಸವು ಈಗಿನಂತೆ ಈ ದೇಶದಲ್ಲಿ ಚುನಾವಣೆಯ ಪ್ರಾರಂಭದಿಂದ ಅಸ್ತಿತ್ವವಾಗುವಂತೆ [illegible] ಬಂದಿಲ್ಲ. ಧಾರವಾಡ ಜಿಲ್ಲೆಯಲ್ಲಿ ೩೬೦೦೦ ಹೋಟರು ಇದ್ದಾರೆ. ಇವರಲ್ಲಿ ಉಮೇದವಾರರು ತಮ್ಮ ಮುಟ್ಟಿಗೆ ಹೋಟು ಹಾಕಿಕೊಂಡರೂ ಆರಿಸಿಕೊಂಡಂತಾಗುವರು. ಒಬ್ಬನಿಗೆ ಹತ್ತು, ಇನ್ನೊಬ್ಬನಿಗೆ ಎಂಟು, ಮೂರನೆಯವನಿಗೆ ಏಳು ಹೋಟುಗಳು ಬಿದ್ದರೂ, ಮೊದಲಿನಿಬ್ಬರ ಚುನಾವಣೆಯಾಗುವದು. ಕೌನ್ಸಿಲಕ್ಕೆ ಹೋಗಿ ಕುಣಿಕೆಯ ಗಾದಿಯ ಮೇಲೆ ಕೂತು ಆನಂದಪಡುವರು. ಆದರೆ ಮತದಾರರು ಮೆಂಬರರ ಆನಂದವನ್ನು ಲಕ್ಷ್ಯಕ್ಕೆ ಸಹ ತರತಕ್ಕದ್ದಿಲ್ಲ. ಏಕೆಂದರೆ ಅದು ನಿಃಸಂಶಯವಾಗಿ ದೈವ[illegible] ಪರ ಮನೆಯ ನೋಟವಾಗುವದಲ್ಲದೆ, ಬಡವರ ಮನೆಯ ಊಟವಾಗಲಾರದು. ಬಡವರಿಗೆ ಹೊಟ್ಟೆ ತುಂಬ ಊಟ ದೊರೆಯಬೇಕೆಂದೇ ಕಾಂಗ್ರೆಸನ ಈಗಿನ ಚಳವಳಿ ಇದ್ದು, ಅದರ ಆಜ್ಞಾನುಸಾರ ನಡೆದರೇ- ಆ ಊಟ ದೊರೆಯುವದು. ಕೆಲ ಸಂಪನ್ನರು ನಮಗೇತರ ಕೊರತೆ! ಉಂಡುಟ್ಟು ಸುಖಿಯಾಗಿದ್ದೇವೆಂದು ಹೇಳಬಹುದು. ಈ ಸುಖವು ಇಂದಿಲ್ಲ ನಾಳೆ, ನೆರೆಯವನ್ನು ತಮ್ಮ ಸ್ಥಿತಿಯಲ್ಲಿಂದರೆ- ತನ್ನ ತಮ್ಮನೇ ಸಾಯುವವನೆಂಬಂತಾಗುವದೆಂಬುದನ್ನು ಮರೆಯಲಾಗದು. ಏಕೆಂದರೆ- ಮೊದಲಿನ ಸಂಪತ್ತು, ಮೊದಲಿನ ಹಾಲು ಹೈನ, ಮೊದಲಿನ ಶರೀರ ಸಾಮರ್ಥ್ಯ, ಸಂತಾನ ಸಮೃದ್ಧಿ ಈಗಿರುವದಿಲ್ಲೆಂದು ಪ್ರತಿಯೊಂದು ಊರಲ್ಲಿ [illegible] ಚರ್ಚೆಯ ವಿಷಯವಾಗಿರುತ್ತದೆ.

ಕಾಂಗ್ರೆಸದವರು ಹುಚ್ಚರೆಂದು ಕೌನ್ಸಿಲಗಳಿಗೆ ಬಹಿಷ್ಕಾರ ಹಾಕಿಲ್ಲ; ಸಾವಿರ ಸಂಖ್ಯೆಯಿಂದ ತಲೆಯೊಡಿಸಿಕೊಂಡು ತುರಂಗಗಳಿಗೆ ಹೋಗುತ್ತಿರುವದಿಲ್ಲ. ಈಗ [illegible]ಸರಾದರೇನಾಯಿತು. ಮುಂದೆ ಬಾಯಿ. ಹೊರಗಾಗಬೇಕೆಂದೇ ಕಾಯದೆಭಂಗದ ದೀಕ್ಷೆ ತಕ್ಕೊಂಡಿದ್ದಾರೆ. ಕಾಂಗ್ರೆಸವು ಹಿಂದುಸ್ಥಾನದ ಮುಖವೆಂದು ಸ್ವತಃ ಇಂಗ್ಲಂಡದ ಮಂತ್ರಿಗಳು ಒಪ್ಪಿದ್ದಾರೆ. ಲಾರ್ಡ ಓಲೀವರಸಾಹೇಬರ ಕಾಲದಿಂ ಕಾಂಗ್ರೆಸಪಕ್ಷದವರು [illegible] ಕೊಡತಕ್ಕ [illegible]. ಯಾವ ಕೂಡಲೆ ನಾವು ಸ್ವರಾಜ್ಯ ವಿಷಯಕ್ಕೆ ಪ್ರೀತಿಯಿಂದ ಮಾತಾಡಬೇಕು; ಅವರನ್ನು [illegible] ಸಮಯು ಬಂದಾಗಲು [illegible] ಸಾಹೇಬರು [illegible] ಘೋಷಣ ಮಾಡಿದ್ದಾರೆ. ಮಂತ್ರಿ ಶ್ರೀ[illegible] ಪಂಡಿತ ಮೋತೀಲಾಲ ಜವಾಹಿರಲಾಲರಿಗೂ ಗೌರವಿಸುವರು. ಲಾರ್ಡ [illegible]ಸಾಹೇಬರ [illegible] ಸಮಯದಲ್ಲಿ [illegible] ಏನೂ ಅರಿಯದವರೂ ಕೂಡ ದೇಶಹಿತ ವಿಚಾರ ಮಾಡುತ್ತಾರೆ. ಹಾಲು ಸಕ್ಕರೆ ಸವಿದಷ್ಟು ನಿಜ. ಅವರ ಹಾಲೋರದಿಂದ ದೇಶದ ಬಡತನವು ಹಿಂಗಲಿಕ್ಕೆ ಹೀಗಾಗುವದಾಗಿದ್ದರೆ- ಇಂದು ಇವರು ತುರಂಗದ ಎಳ್ಳಾಗುತ್ತಿದ್ದರು? ಸ್ವಯಂಸೇವಕರಾಗಿ; [illegible] ಸಾವಿರ ಜನರು ಅಜ್ಞಾತವಾಸ ಹೊಂದಿ, ಹೆಂಡರು ಮಕ್ಕಳ ಮೋರೆಗೆ [illegible] ಜನುಮ ಪೌರುಷವೆಂದು ಅವರು ತಿಳಿದು ಅವರು ದೇಶಹಿತಕ್ಕಾಗಿಯೇ [illegible] ಬಳಿ ಹೊತ್ತು, ಮೊಳಕಯ್ಯನ್ನು [illegible] ವಸ್ತ್ರ ಕೊಳ್ಳಲಿಕ್ಕೆ ಸಿದ್ಧರಾಗಿದ್ದಾರೆ. ಅವರ ಕಷ್ಟನ್ನು ಕುಸುಮವಾದರೂ ಧ್ಯಾನಕ್ಕೆ ತಂದರೆ- ಅವರ ಕಷ್ಟದ ಅಲ್ಪ ಪರಿಹಾರವೆಂದು ಹೋಟರರು ಹೋಟು ಕೊಡತಕ್ಕದ್ದು. ಮತದಾರರು ಕೌನ್ಸಿಲಕ್ಕೆ [illegible] ತಿಂಗಳಲ್ಲಿ ಇವರು ಕೆದರೆ ಸಾಕು. ಪರಮೇಶ್ವರನಂತೆ ಆನಂದಪಟ್ಟು ತಾಂಡವ ನೃತ್ಯಮಾಡುವರು.

ಮತದಾರರು ಯಾರು ಉಮೇದವಾರರಿಗೆ [illegible] ಯಾರು, [illegible] ತಿಳಿಕೊಳ್ಳಬೇಕಾಗಿತ್ತು [illegible] ಏಕೆಂದರೆ ಅವರೊಬ್ಬರೇನೂ ಉಪಯೋಗವಿಲ್ಲೆಂ[illegible] ಸ್ಪಷ್ಟವಾಗಿ ಹೋಗಿದೆ. ಸರಕಾರದವರು ಮೆಂಬರರಾದವರಿಗೆ ಪುಣೆ ಮುಂಬಯಿಗೆ ಕೌನ್ಸಿಲಕ್ಕಾಗಿ ಹೋಗಿ ಬರುವ ದಾರೀ ವೆಚ್ಚವೆಂದು ರೇಲ್ವೆಯ ಫಸ್ಟ ಕ್ಲಾಸ ಪಾಸಿಲು ಕೊಡುವರು. ಇವರು ಸೆಕೆಂಡ [illegible] ಹೋದರೂ ಆ ಚಾರ್ಜ ಕೊಡುವರು. ಕೌನ್ಸಿಲ ನಡೆಯುವ ತನಕ ದಿನಾಲು ಹನ್ನೆರಡು ರೂಪಾಯಿ [illegible] ಕೊಡುವರು. ಅವರಲ್ಲಿ ಬಿಡು ಕಾಸು ಸಹ ಮತದಾರರಿಗೆ ದೊರೆಯುವದಿಲ್ಲ. ಕೈ ಖರ್ಚಿನಿಂದ ಟ್ಯಾಕ್ಸ ಬುತ್ತಿ ಕಟ್ಟಿಕೊಂಡು, ಆ ದಿನ ಹೋಟಿಗೆ ಹೋಗಿ, ಪೋಲಿಂಗ ಸ್ಟೇಶನಕ್ಕೆ ಹೋಗಿ ದಣಿದು ಬಂದದ್ದೇ ಗಳಿಕೆ. ದುಡಿಗೆಯಾಗಿ ರೊಟ್ಟಿ ಸಿಗೊಟ್ಟಂತೆ!! ಉಮೇದವಾರರಿಂದ ನೀಗದಂಥ ಲಸಕ್ಕನೆ ಮಾಗುವದೆಂದರೆ- ಊಟ ಉಪಚಾರ ಮಾಡಿ ಊಟದ ಕಟ್ಟರೆನ್ನಲಾಗುವದುಂಟು.

ದಣಿಯಿಸಿದರೆ ಪೋಲೀಸು ಕೊಡುವ ಬ್ರಹ್ಮಕಲಶವನ್ನು ಬೆನ್ನಿಗೆ ಹಚ್ಚಿಕೊಳ್ಳಬೇಕಾದ್ದಲ್ಲ.

ಪೋಲೀಸು ಕೊಡಬಾರದೆಂಬುದಕ್ಕೆ
ಸೋಲಾಪೂರವೇ ಒಂದು ಸಾಕ್ಷಿ.

—(೦)—

ಸೋಲಾಪೂರದಲ್ಲಿ ಲಷ್ಕರೀ ಕಾಯದೆಯಿಂದ ಅನೇಕ ಜನರು ಜನ್ಮ ತುರಂಗವಾಸಿಯಾಗುವಂತೆ ಕಬಿಕಾಲ್ಲವಾಯಿತು. ಹತ್ತು ಹತ್ತು ವರ್ಷ ಶಿಕ್ಷೆ; ಹತ್ತು ಹತ್ತು ಸಾವಿರ ರೂಪಾಯಿ ದಂಡ!! ಪೀನಲಕೋಡಿನಲ್ಲಿ ಎರಡು ಸಾವಿರಕ್ಕಿಂತ ಹೆಚ್ಚಿಗೆ ದಂಡ ಹೇಳಿಲ್ಲ. ಲಷ್ಕರೀ ಕಾಯದೆಯ ಬಾಯಿಗೆ ಹತ್ತು ಸಾವಿರವೆಂದರೆ ಮಂಡಕ್ಕಿ ಹುರಕಡ್ಲಿ ಮುಕ್ಕಿದಂತೆ! ಇದಿರಲಿ; ದಂಗೆಯ ಎಲ್ಲ ಆರೋಪವನ್ನು ಊರವರ ಮೇಲೆಯೇ ಹೊರಿಸಿದ್ದಾರೆ. ಲಷ್ಕರೀ ಕಾಯದೆ ಕಾಲದ ದಂಡದ ಹೊರ್ತು, ಈಗೊಂದು ವರ್ಷದ ಕಲಸಕ್ಕೆ ಪೋಲಿಸರ ದಂಡ ಕೂಡ್ರಿಸಿದ್ದಾರೆ. ದಂಗೆಗೆ ಊರವರೇ ಕಾರಣರೋ? ಅದಕ್ಕೆ ಬೇರೆ ಆಗಂತುಕ ನಿಮಿತ್ತಗಳುಂಟೋ? ಎಂಬುದರ ಸ್ವತಂತ್ರ ವಿಚಾರವನ್ನಾಡಲು ಒಂದು ಕಮೀಟಿ ನೇಮಿಸಬೇಕೆಂದು ರಾ. ಬ. ಕಾಳೆಯವರು ಕೌನ್ಸಿಲದಲ್ಲಿ ಠರಾವು ತಂದರು. ಈ ಠರಾವಿಗೆ ಪ್ರಜರಿಂದ ಆರಿಸಲ್ಪಟ್ಟಂಥ ಅನೇಕ ಮೆಂಬರರೇ ಅನುಕೂಲ ಮತ ಕೊಡದ್ದರಿಂದ ಅದು ನಾಪಾಸಾಗಿ, ಸರ್ಕಾರಪಕ್ಷದ ಗೂಗೆಯು ಊರವರ ತಲೆಯ ಮೇಲೆ ಕೂತಿತು. ಇಷ್ಟು ಸಹಜವಾದ ಠರಾವನ್ನು ಪಾಸು ಮಾಡಿಕೊಳ್ಳಲಿಕ್ಕೆ ಎದೆಗಾರಿಕೆಯಿಲ್ಲದ ಮೆಂಬರರು ಸ್ವರಾಜ್ಯ ತರುವದೆಂದರೆ ನೆಲದಿಗೆ ಹಾರದ ಬೆಕ್ಕು ಸ್ವರ್ಗಕ್ಕೆ ಹಾರಿದಂತಾಗುವಲ್ಲವೇ? ಕೌನ್ಸಿಲದಲ್ಲಿ ಠರಾವು ಪಾಸಾಗದ್ದಕ್ಕೆ ಮೆಂಬರರಿಗೆಷ್ಟು ವಿಷಾದವಾಗಲಿಲ್ಲ. ಅವರ ಅಂದಿನ ಮೃಷ್ಟಾನ್ನದ ಊಟ ಕಡಿಮೆಯಾಗಲಿಲ್ಲ. ರೇಲ್ವೆಯಲ್ಲಿ ಪ್ರವಾಸ ಮಾಡುವಾಗ ಒಂದು ಸ್ಟೇಶನ ದಾಟಿದ ಒಳಗ ಮತ್ತೊಂದು ಸ್ಟೇಶನ ಬರುವಂತೆ, ಇವರ ಮರುದಿವಸದ ಜೀವನವಾಯಿತು. ಕಾಂಗ್ರೆಸವು ಇಂಥವರನ್ನು ಟಿಪ್ಪಣಕ್ಕೆ ತಂದಿದೆ. ಅವರು ಪುನಃ ದೊಡ್ಡಸ್ಥನಕ್ಕೆ ಹೋಗದಂತೆ ಮಾಡುವದು ಮತದಾರರ ಕಯ್ಯಲ್ಲಿಯೇ ಉಂಟು.

ಮುಂಬಯಿಯಲ್ಲಿ ಯುದ್ಧಮಂಡಳದ ಅಧ್ಯಕ್ಷರಾದ ಶ್ರೀ ಲೇಲೆಯವರಿಗೆ ಶಿಕ್ಷೆಯಾಯಿತಷ್ಟೇ; ಇವರ ಸ್ಥಳದಲ್ಲಿ ಸರದಾರ ಸುಲೇಮಾನ ಕಾಸೀಮ ಮಿಠ್ಠಾ ಇವರ ಚಿರಂಜೀವನು ನೇಮಿಸಲ್ಪಟ್ಟನು. ಇವರು ದೊಡ್ಡ ಶ್ರೀಮಂತರೂ ಹಡಗದ ವ್ಯಾಪಾರಿಯೂ ಆಗಿದ್ದಾರೆ.

ಈ ಹೊಸತರದ ಸರಕಾರೀ ಕಾಮದಾರರ ಸಂಬಳ ಕಡಿಮೆಯಾಗುವದು

—(೦)—

ಮುಂಬಯಿ ಇಲಾಖೆಗೆ ಪ್ರಸ್ತುತವಲ್ಲಿ ಬಂದ ಹಾನಿಯನ್ನು ತುಂಬಿ ತರಲು ಯಾವ ಉಪಾಯ ಮಾಡಬೇಕೆಂದು ವಿಚಾರಿಸಲು ಗವರ್ನರಸಾಹೇಬರ ಮಂತ್ರಿ ಮಂಡಳದ ಸ್ಪೇಶಲ ಕಮೀಟಿ ಕೂಡಿತ್ತು. ಇಂಜನಿಯರ ಮುಂತಾದ ಇನ್ನೂ ಪ್ರಾರಂಭವಾಗದ ಕಾಮಗಾರಿಗಳನ್ನು ನಿಲ್ಲಿಸಬೇಕೆಂದು ಗೊತ್ತಾಯಿತು. ಇನ್ನು ಹಲವು ವಿಚಾರಗಳೂ ನಡೆದವು. ಈಗಿದ್ದ ಸರಕಾರೀ ಕಾಮದಾರರ ಸಂಬಳ ಮತ್ತು ಸ್ಕೇಲ ಬಡತಿಯು ಹೀಗೇ ಇರತಕ್ಕದ್ದು. ಈ ಸಂಬಂಧ ಹೊಸದಾಗಿ ಸೇರತಕ್ಕವರ ದೆಸೆಯಿಂದ ಸಂಬಳ ಮತ್ತು ಬೇರೊಂದು ಸ್ಕೇಲ ಮಾಡುವರೆಂದು ಹೇಳುವರು. ಈ ವಿಷಯವಾಗಿ ಸರಕಾರದವರು ಬೇಗನೆ ಒಂದು ಜಾಹೀರ ಪತ್ರಿಕೆಯನ್ನು ಪ್ರಸಿದ್ಧ ಮಾಡುವರು.

ರೇಲ್ವೆಯ ದೊಡ್ಡ ಕಾಮಗಾರಿಗಳೂ ನಿಂತವು

—:(*):—

ಈಗಿನ ವ್ಯಾಪಾರ ಮಂದಿ ಮತ್ತು ಹುಟ್ಟುವಳಿಯ ಅಭಾವದ ಮೂಲಕ ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆಯವರು ಅಲ್ಲಲ್ಲಿ ಹಾಕಬೇಕೆಂದಿರುವ ಬ್ರಾಂಚ ರೇಲ್ವೆಗಳನ್ನು ಮುಂದಿನ ವರ್ಷ ಹಾಕಲಿರರು. ಇದರಿಂದ ನಮ್ಮ ಪ್ರಾಂತದಲ್ಲಿ ಬೆಳಗಾವಿಯಿಂದ ಸವದತ್ತಿ ಮಾರ್ಗವಾಗಿ ಹುಬ್ಬಳ್ಳಿಗೆ ಹಾಕಬೇಕಾಗಿರುವ ದಾರಿಯು ಮುಂದೆ ಬಿತ್ತು. ಇದಕ್ಕೆ ಮೇಲಿಂದ ಮೇಲೆ ಅಪಶಕುನಗಳೇ ಆಗುತ್ತವೆ. ಯಲ್ಲಮನಿಗೂ, ಯಮನೂರಪ್ಪನಿಗೂ ಮುಡಿಪಾದರೂ ತೆಗೆದಿಡಬೇಕು.

ಕಳ್ಳರು ಮತ್ತು ಕೂಲಿಗಾಗಿ ಆದ ಮೆರವಣಿಗೆಯಲ್ಲಿ ಗೋಳಿಬಾರು,

—(೦)—

ಮುಂಬಯಿಯ ಗಿರಣಿಗಳ ಕೂಲಿಕಾರರು ತಮ್ಮ ಸಪ್ತಾಹದಲ್ಲಿ ಒಂದು ದಿನದ ರೋಜಿಯ ಮೆರವಣಿಗೆಗೆ ತೆಗೆದಿದ್ದರು. ಪುಣೆಯಲ್ಲಿ ೨೫೦೦ ರೊಟ್ಟಿಗಳ ಮೆರವಣಿಗೆ ತೆಗೆದು ಅವನ್ನು ಕಡೆಗೆ ಬಡವರಿಗೆ ಹಂಚಿದರು. ವಿಲಾಯತಿಯಲ್ಲಿ ಹಂಗೇರಿ ದೇಶದ ರಾಜಧಾನಿಯಾದ ಬುಡಾಪೆಸ್ಟದಲ್ಲಿ ಕೂಲಿ, ಮತ್ತು ಕೂಲಿಗಳಭಾವವಾದಂಥವರು ಹತ್ತು ಸಾವಿರ ಜನರದೊಂದು ಮೆರವಣಿಗೆ ತೆಗೆದರು. ಆಗ ದಂಗೆಯಾಗಿ ಪೇಟೆಯಲ್ಲಿ ಅನೇಕ ಅಂಗಡಿಗಳ ಕಿಟಕಿ, ಸಾಮಾನುಗಳು ನಷ್ಟ ಹೊಂದಿದವು. ಪೋಲೀಸರು ಗುಂಡು ಹಾಕಿದರು. ಒಬ್ಬನು ಸತ್ತನು; ಅನೇಕರು ಗಾಯವಾದವರು. ಹಿಂದುಸ್ಥಾನದಲ್ಲಿ ಗುಂಡು ಹಾಕಿದ ಕೂಡಲೆ ಹತ್ತೆಂಟು ಜನರಾದರೂ ಸಾಯುತ್ತಾರೆ. ವಿಲಾಯತಿಯ ಗುಂಡಿನಲ್ಲಿ ಹುಸಿಮದ್ದು ಹಾಕುವರೋ? ಅಥವಾ ಆ ಸರಕಾರದಲ್ಲಿ ಹೆಚ್ಚು ಪ್ರಜಾವಾತ್ಸಲ್ಯವಿರುವದೋ?

ಸಪ್ರು ಜಯಕರ ಸಂಧಾನ.

ಗವರ್ನರರಿಗೂ ಇವರಿಗೂ ಗುಪ್ತ ಭಾಷಣ.

ಸರ ಸಪ್ರು ಮತ್ತು ಬ್ಯಾರಿಸ್ಟರ ಜಯಕರರು ಮಂಗಳವಾರ ಸಾಯಂಕಾಲದಲ್ಲಿ ಪುಣೆಗೆ ಬಂದರು. ಸ್ಟೇಶನದಲ್ಲಿದ್ದ ಕೂಡಲೆ. ಸಿ.ಐ.ಡಿ.ಯಿಂದ ಒಂದೆರಡು ತಾರು ಇವರ ಕಯ್ಯಲ್ಲಿ ಕೊಡಲ್ಪಟ್ಟಿತು. ಅಗ್ಗೇ ಇವರನ್ನು ಗವರ್ನರಸಾಹೇಬರ ಬಂಗ್ಲೆಕ್ಕೆ ಕರಕೊಂಡು ಹೋಗಲು ಸಾಹೇಬರ ಪ್ರಾಯವ್ಹೆಟ ಸೆಕ್ರೆಟರಿಯವರು ಸ್ಟೇಶನಕ್ಕೆ ಬಂದಿದ್ದರು. ಅವರ ಕೂಡ ಸಂಭಾವಿ ಗಣೇಶಖಿಂಡಿಗೆ ಹೋದರು, ಅಲ್ಲಿ ಆಗ ದೊಡ್ಡ ಮೇಜವಾನಿ ನಡೆದಿತ್ತು. ಆದರೂ ಸಾಹೇಬರು ಇವರನ್ನು ಏಕಾಂತಸ್ಥಾನಕ್ಕೆ ಕರಕೊಂಡು ಹೋಗಿ, ಅವರ ಕೂಡ ಹದಿನೈದು ನಿಮಿಷಗಳ ಕಾಲ ಮಾತಾಡಿದರು. ನಂತರ ಇವರೀರ್ವರು ಮೇಜವಾನಿ ಗೆಳೆಯರ, ಊರೊಳಗೆ ಬಂದರು. ಮತ್ತು ಮರ್ನೆ ಬುಧವಾರ ಮಧ್ಯಾಹ್ನದಲ್ಲಿ ಮಹಾತ್ಮರನ್ನು ಕಾಣಲಿಕ್ಕೆ ಹೋದರು. ಅಲ್ಲಿ ನಾಲ್ಕು ತಾಸುಗಳವರೆಗೆ ಭಾಷಣವಾಯಿತು. ತುರಂಗದಲ್ಲಿದ್ದ ಮುಖಂಡರೆಲ್ಲ ಈ ಮುಂಚಿನಂತೆ ವಿಚಾರವಿನಿಮಯದಲ್ಲಿ ಸೇರಿದ್ದರು.

ಒಡಂಬಡಿಕೆಯಾಗುವ ಬಗೆಯು ಪ್ಲೇಂನು ಟಾಯಿಮ್ಸದಲ್ಲಿ ಬಂದ ಸುದ್ದಿಯು ಅನಧಿಕೃತ ಮತ್ತು ನಿರಾಧಾರವಾದದ್ದಿರುತ್ತದೆಂದು ಇವರು ಹೇಳುತ್ತಾರೆ.

ರಾವುಂಡಟೇಬಲಕ್ಕೆ ಆಮಂತ್ರಣ.

ಮುಂಬಯಿ ಪಟ್ಟಣದ ಮುಂದೆ ಹೇಳಿದ ಜನರಿಗೆ ರಾವುಂಡ ಟೇಬಲಕ್ಕೆ ಆಮಂತ್ರಣ ಬಂದಿರುತ್ತದೆ ೧ ಬ್ಯಾರಿಸ್ಟರ ಜಿನ್ನಾ ೨ ಸರ ಇಬ್ರಾಹಿಮ ರಹಿಮತುಲ್ಲಾ ೩ ಸರ ಪುರುಷೋತ್ತಮದಾಸ ಠಾಕೂರದಾಸ ೪ ಸರ ಕಾವಸಜಿ ಜಹಾಂಗೀರ (ಕಿರಿಯವರು) ೫ ಸರ ಫಿರೋಜಶೇಠನಾ ೬ ಬ್ಯಾರಿಸ್ಟರ ಜಯಕರ.

ನಮ್ಮ ಹಳೇ ಮಿತ್ರರಾದ ಮಿ. ಗಾಂಧಿಯವರು ರಾವುಂಡಟೇಬಲಕ್ಕೆ ಬರುವಂತೆ ಅಪೇಕ್ಷಿಸುತ್ತೇವೆಂದು ಲಂಡನದಲ್ಲಿ ಮಿ. ರಕಬ್ರ್ಯಾತಸಾಹೇಬರು ಉದ್ಗಾರ ತೆಗೆದಿದ್ದಾರೆ.

ಧಾರವಾಡ ಜಿಲ್ಹೆಯೊಳಗಿನ ಮುಂಬಯಿ ಕಾಯದೆ ಕೌನ್ಸಿಲ ಮತದಾರ ಜನರಿಗೆ-

ಪ್ರಿಯ ಬಂಧು ಭಗಿನಿಯರೇ-

ತಮ್ಮೆಲ್ಲರನ್ನು ಭೆಟ್ಟಿಯಾಗಬೇಕೆಂಬ ಇಚ್ಛೆ ಇತ್ತು. ಆದರೆ ದುಡ್ಡಿನ ಕೊರತೆಯಿಂದಲೂ, ವೇಳೆ ಇಲ್ಲದ್ದರಿಂದಲೂ ತಮ್ಮೆಲ್ಲರನ್ನು ಭೆಟ್ಟಿಯಾಗಲಿಕ್ಕೆ ಶಕ್ಯವಿಲ್ಲ.

ನಾನು ವಿದ್ಯಾರ್ಥಿ ಇದ್ದಾಗಿನಿಂದ ಜನರ ಹಕ್ಕುಗಳಿಗಾಗಿ ಸರಕಾರದವರ ಸಂಗಡ ಒಡೆದಾಡುತ್ತ ಬಂದಿರುತ್ತೇನೆ. ಜನರ ವಿದ್ಯೆಯ ಸಲುವಾಗಿ ಶಾಲೆಗಳನ್ನು ಸ್ಥಾಪಿಸುವದಕ್ಕಾಗಿ ದುಡಿದಿರುತ್ತೇನೆ. ಜಾತಿ ಜಾತಿಗಳಲ್ಲಿ ಇರುವ ಮತ್ಸರವನ್ನು ಕಡಿಮೆ ಮಾಡುವದಕ್ಕಾಗಿ ಪ್ರಯತ್ನಿಸಿದ್ದೇನೆ. ಯಾವತ್ತೂ ಜನರಿಗೆ ಸಮಾನ ಹಕ್ಕುಗಳಿರಬೇಕೆಂದು ನನ್ನ ಮತ. ಹಿಂದುಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ದೊರಕಿಸುವದು ನಮ್ಮ ಧ್ಯೇಯ.

ರಾ. ಬ. ಕಂಬಳಿಯವರಾಗಲೀ ಮಿ|| ಜೋಗರಾಗಲೀ ರಾಜೀನಾಮೆಯನ್ನು ಕೊಟ್ಟರೆ ನಾನೂ ರಾಜೀನಾಮೆ ಕೊಡಲಿಕ್ಕೆ ಸಿದ್ಧನಿದ್ದೇನೆಂದು ಕಾಂಗ್ರೆಸ ಕಮೀಟಿಯವರ ಕೈಯಲ್ಲಿ ರಾಜೀನಾಮೆಯ ಅರ್ಜಿಯನ್ನು ಕೊಟ್ಟಿದ್ದೆ. ಮಿ|| ಜೋಗರು ಬಿಡಲಿಕ್ಕೆ ಒಡಂಬಡುವದಿಲ್ಲೆಂದೂ, ರಾ. ಬ. ಕಂಬಳೀಯವರನ್ನು ಕೇಳುವದು ನಿರರ್ಥಕವೆಂದೂ ನಾನು ಕೊಟ್ಟ ರಾಜೀನಾಮೆಯನ್ನು ಕಾಂಗ್ರೆಸ ಕಮೀಟಿಯವರು ನನಗೆ ತಿರುಗಿ ಕೊಟ್ಟಿರುತ್ತಾರೆ.

ತಾವು ನನ್ನನ್ನು ಆರಿಸಿದ ಪಕ್ಷಕ್ಕೆ ಈ ನಮ್ಮ ಹಳೇ ಮುದ್ದರಿಗಳಿಗಿಂತ ಏನಾದರೂ ಹೆಚ್ಚಿನ ಕೆಲಸವನ್ನು ಮಾಡಬೇಕೆಂಬ ಉಮೇದಿಯುಂಟು. ಹೋಟಿಂಗ ಪೇಪರಿನ ಮೇಲೆ ನನ್ನದು ಎರಡನೇ ಖಾನಿಯು.

ನನ್ನ ಗುರ್ತು ಎತ್ತು.

ಮಹದೇವಪ್ಪ ಶಿದ್ದಪ್ಪ ಕೇಸರಿ		X X

ತಾವೆಲ್ಲರೂ ಎತ್ತಿನ ಹಿಂದೆ ಇರುವ ಬರಿಯ ಖಾನೆಯಲ್ಲಿ × × ಹೀಗೆ ಎರಡು ಗುರ್ತುಗಳನ್ನು ಮಾಡಿ ತಮ್ಮ ಹೋಟುಗಳನ್ನು ನನಗೆ ಕೊಟ್ಟು ತಮ್ಮ ಸೇವೆಯನ್ನು ಮಾಡುವ ಸುಸಂಧಿಯನ್ನು ತಂದು ಕೊಡುವಿರೆಂದು ನಂಬಿದ್ದೇನೆ.

ತಾ|| ೪-೯-೧೯೩೦ **ಮಹಾದೇವಪ್ಪ ಶಿದ್ದಪ್ಪ ಕೇಸರಿ.**
ಧಾರವಾಡ ಬಿ. ಎ. ಎಲ್‌ಎಲ್. ಬಿ. ವಕೀಲ ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ತಿಸಂ ನಾಟುಗಳು

ಸಾಗವಾನಿ ಯುಳಿವ ಸಾಗವಾನಿ (೬) ಫೂಟಿನ ಜವಕ್ಕ ತುಂಡುಗಳು

ಸಾಗವಾನಿ ಕೊರೆದ ಫಲಗಿಗಳು ವ ಬಂತಿ ವ ರೀಪು ವ ತಿಲಿಂಗು ತೈಯಾರ ಸಿಗುತ್ತವೆ

ಇದರ ಜೊತೆಗಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇನೆ

ಮತ್ತು ಬೆಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ನಕಾಶೆ ಸಹಿತ

—(೧)—

ಉರ್ದು ಧಾರವಾಡ ಜಿಲ್ಹೆಯ ಭೂಗೋಲು
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ಚಂದಾದಾರರಿಗೆ ಸೂಚನೆ

—೦*೦—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೆಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ

ನಿತ್ಯಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶನಿವಾರ ತಾರೀಖು ೬ನೇ ಸಪ್ಟಂಬರ ೧೯೩೦ (ಸಂಚಿಕೆ ೧೯

ಧಾರವಾಡ ಜಿಲ್ಹೆಯ ಮುಂಬಯಿ ಕೌನ್ಸಿಲ್

(ನಾನ್‌ಮಹಮ್ಮದನ್) ಮತದಾರರಿಗೆ.

ಶ್ರೀ. ವಿಶ್ವನಾಥ ನಾರಾಯಣ ಜೋಗ ಇವರ

ವಿನಂತಿಯು.

ಮುಂಬಯಿ ಕಾಯದೆ ಕೌನ್ಸಿಲ್ ಚುನಾವಣೆಯು ೧೧—೯—೧೯೩೦ ಬುಧವಾರ ದಿವಸ ಜರಗುವದು ಈ ಚುನಾವಣೆಯಲ್ಲಿ ನಾನೊಬ್ಬ ಉಮೇದವಾರನಾಗಿದ್ದ ಸಂಗತಿಯು ಈ ಮೊದಲೇ ತಮಗೆ ಗೊತ್ತದೆ. ನನಗೆ ಮತಕೊಡಲಿಚ್ಛಿಸುವ ಮತದಾರರು ತಮ್ಮ ವೋಟುಗಳನ್ನು ಕೆಳಗೆ ನಮೂನೆಯಲ್ಲಿ ತೋರಿಸಿದಂತೆ ನನಗೆ ಮತ ಕೊಟ್ಟು ನನ್ನ ಹೆಸರಿನ ಮುಂದೆ ಎರಡು ಕತ್ತರಿ (××) ಗುರ್ತುಗಳನ್ನು ಮಾಡಬೇಕೆಂದು ವಿನಂತಿ ಇರುತ್ತದೆ.

ವಿಶ್ವನಾಥ ನಾರಾಯಣ ಜೋಗ		X X

ತಮ್ಮ

ವಿಶ್ವನಾಥ ನಾರಾಯಣ ಜೋಗ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲು ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮಹಿಮರಾದ ಸಾಧು ದಿವಾಕರ ಶ್ರೀ· ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಠೋಕ ಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,

ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ್, ಮಾರ್ಕೇಟ ರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂಡಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರಹ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವತ್ತಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಪನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

[illegible] ವಿಕ್ರಮ ವರ್ಷ೧೯೮೭ ಭಾದ್ರಪದಶುದ್ಧ೧೪

ಯಾರಾರ ಹೋಟು ಕೊಡುವದಿಲ್ಲ.

ಹೋಟು ಕೊಡುವದಕ್ಕೆ ಐದೇ ದಿವಸ ಉಳಿದಿತು. ಹೋಟಿಗೆ ಆದಷ್ಟು ಜನರನ್ನು ತರಬೇಕೆಂದು ಜಿಲ್ಹಾಧಿಕಾರಿಗಳು ಗ್ರಾಮಸ್ಥರಿಗೆ ಒಟ್ಟಪ್ಪಣೆಯ ಸರಕ್ಯೂಲರ ಕಳಿಸಿದ್ದಾರೆ. ಚುನಾವಣೆಯಲ್ಲಿ ಸರಕಾರೀ ಕಾಮುದಾರರಾದಂಥ ಪಾಟೀಲ ಪಟವಾರಿಗಳು ಯಾವದೇ ತರಹದ ಭಾಗ ತಕ್ಕೊಳ್ಳಬಾರದೆಂದು ಸರಕಾರದ ಕಾಯದೆ ಮತ್ತು ಕಡಕ್ಕಾದ ಹುಕುಮು. ಆದರೆ ಇಂದಿನ ಪ್ರಸಂಗ ನೋಡಿರಿ. ಶಕ್ಯವಾದಷ್ಟು ಜನರನ್ನು ಪೋಲಿಂಗ ಸ್ಟೇಶನಕ್ಕೆ ಕರತರಬೇಕೆಂದು ಗೌಡ ಕುಲಕರ್ಣಿಯರಿಗೆ ಹುಕುಮಿನ ವಜಾ ತಾಕೀದಿಯು. ಸರಕಾರವು ಕಾಯದೆ ಕಾನೂನು ಮರೆತು, ಹೋಟರರನ್ನು ಕರಕೊಂಡು ಬನ್ನಿರೆಂದು ಹುಕುಮು ಮಾಡುವದಕ್ಕೆ ತನ್ನ ಕಳೆದು ಹೋಗಬೇಕಾಗಿದ್ದ ಮಾನ ಉಳಿಸಿಕೊಳ್ಳಬೇಕೆಂದೇ ಉಂಟು. ಧಾರವಾಡ ಜಿಲ್ಹೆಯಲ್ಲಿ ೩೬೦೦೦ ಮತದಾರರುಂಟು. ಅವರಲ್ಲಿ ಇಡೀ ಜಿಲ್ಹೆಯ ತುಂಬ ಸಾವಿರೆರಡು ಸಾವಿರ ಜನರು ಹೋಟು ಕೊಟ್ಟರೆ- ಕಾಂಗ್ರೆಸದ ದಿಗ್ವಿಜಯವಾಗಿ, ಸರಕಾರದ ಕೃಪೆ ಸಹಕಾರ ಮಾಡಬೇಕೆಂಬ ಉಮೇದವಾರರ ಪಾಳಿಗೆ ಅಪಯಶದ ಮಾಲೆ ಬರುತ್ತದೆ. ಪ್ರಜರು ಬಹು ಸಂಖ್ಯೆಯಿಂದ ಹೋಟು ಕೊಟ್ಟರು. ಸಹಕಾರ ಮಾಡಿದರು; ಗಾಂಧೀ ತತ್ವವು ಬಹುವಾಗಿ ಕಡಿಮೆಯಾಗಿದೆಂದು ತೋರಿಸುವದಕ್ಕೇ ಮೇಲಿನ ಸರ್ಕ್ಯೂಲರವಿರುತ್ತದೆ. ಆದ್ದರಿಂದ ರಾಜಶಕ್ತಿಯು ಹೆಚ್ಚೀ, ಪ್ರಜಾಬಲವು ಹೆಚ್ಚೀ ಎಂಬದನ್ನು ಪ್ರತ್ಯಕ್ಷ ಪ್ರಮಾಣದಿಂದ ತೋರಿಸುವದು ಮತದಾರರ ಕರ್ತವ್ಯವಿರುತ್ತದೆ.

ದೊಡ್ಡೂರಿನವರು ನಡೆದಂತೆ ತಾವೂ ಮಾಡಬೇಕಾಯಿತೆಂದು ಸಣ್ಣ ಊರವರು ಅನ್ನುವದುಂಟು. ಸದ್ಯ ಹೀಗೆನ್ನುವಂತೆಯೂ ಇರುವದಿಲ್ಲ. ಏಕಂದರೆ ಸ್ವದೇಶಿ ಸ್ವರಾಜ್ಯವೆಂಬದು ಹಳ್ಳಿಗಳಲ್ಲಿ ಬೇರೂರಿದಷ್ಟು ದೊಡ್ಡೂರುಗಳಲ್ಲಿ ನೆಲೆಗೊಂಡಿರುವದಿಲ್ಲ. ಏಕಂದರೆ ಪಟ್ಟಣಗಳಲ್ಲಿ ನಾನಾ ಪ್ರಕಾರದ ಜನರಿರುತ್ತಾರೆ. ಸರಕಾರೀ ಕಾಮುದಾರರಿರುತ್ತಾರೆ. ಆಳರಸರ ಕೃಪಾಪ್ರಸಾದದಿಂದಲೇ ಜೀವಿಸುವಂಥ ಶಿಂದಿ ಸೆರೆಯ ವ್ಯಾಪಾರಸ್ಥರೂ, ಕಲಾಲರೂ ಇರುತ್ತಾರೆ, ಇವರು ಹೋಟಿಗೆ ಹೋಗುವರು. ಇವರು ಹೋಗದಂತೆ ಕಾಂಗ್ರೆಸದವರು ಪಿಕೆಟಿಂಗ ಮಾಡುವರು. ಕರೇ ನಿಶಾನೆಗಳ ದರ್ಶನ ಮಾಡಿಸುವರು. ಪುಣೆಯಲ್ಲಿ ಸಾವಿರ ಜನರಲ್ಲಿ ಆರವತ್ತು ಜನರು ಹೋಟು ಮಾಡಬೇಕಾದರೆ ಕುರಿ ಕೋಣ ಬಿತ್ತು. ಅದೇ ಮೇರೆಗೆ ಧಾರವಾಡ ಜಿಲ್ಹೆಯ ದೊಡ್ಡೂರುಗಳಲ್ಲಿಯೂ ಆಗುವದು. ಹಾಗೆ ಮಾಡಬೇಕೆಂದು ಮಂಗಳವಾರದ ದಿವಸ ಊರ ತುಂಬ ಹೋಟರರಿಗೆ ಭಯಸೂಚಕವಾಗಿ ಧಾರವಾಡದಲ್ಲಿ ಮೆರವಣಿಗೆ ಹೊರಡುವದು. ಬೇರೆ ಊರವರೂ ಅಂಥ ಮೆರವಣಿಗೆ ತೆಗೆಯುವರೆಂದು ತಿಳಿಯುತ್ತೇವೆ.

ಧಾರವಾಡದಲ್ಲಿ ೧೫೦ ಜನ ವಕೀಲರಿದ್ದಾರೆ. ಇವರ ಸಂಘವೂ ಉಂಟು. ಈ ಸಂಘದ ವಿದ್ಯಮಾನ ಜನರಲ ಕಮೀಟಿ ಕೂಡಿ, ವಕೀಲರಾದವರು ಕೌನ್ಸಿಲಕ್ಕೆ ಉಮೇದವಾರರಾಗಿ ನಿಲ್ಲಬಾರದೆಂದು ಠರಾವು ಮಾಡಿದ್ದಲ್ಲದೆ, ಹೋಟು ಕೊಡಬಾರದೆಂಬೂ ಗೊತ್ತುವಳಿ ಮಾಡಿದ್ದಾರೆ. ವಕೀಲರೆಂಬವರೆಲ್ಲರೂ ಇಂಗ್ರೇಜಿ ಹಲಿಯ ಹಾಲು ಕುಡಿದವರಿದ್ದು, ದೂರದೃಷ್ಟಿಯಿಂದ ರಾಜಕಾರಣ ಬಲ್ಲಂಥವರಾಗಿದ್ದಾರೆ. ಇವರೇ ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿದ ಬಳಿಕ ಇತರರು ಹಾಕುವದು ಸಹಜವಾಗುತ್ತದೆ. ಕಾಯದೆಯ ಅಭಿಪ್ರಾಯವನ್ನು ಕೇಳದಂಥ ಮಾನವಪ್ರಾಣಿಯೇ ಇರಲಾರನು. ಗೃಹಸ್ಥ್ಯ ವಿಚಾರದಲ್ಲಿ ವಕೀಲರ ಅಭಿಪ್ರಾಯ ಕೇಳುವಂಥವರು ಇಡೀ ರಾಷ್ಟ್ರದ ಹಿತಾಹಿತ ಸಂಬಂಧಿಸಿದ ಪ್ರಸಂಗದಲ್ಲಿ ವಕೀಲರ ಠರಾವಿನಂತೆ ತಮ್ಮ ಮನಸ್ಸಿನ ಠರಾವು ಮಾಡಿಕೊಳ್ಳುವದೂ ಒಂದು ಕರ್ತವ್ಯವೇ ಆಗುತ್ತದೆ. ವಕೀಲರೆಂದರೆ ಒಂದೇ ಕುಲದವರಲ್ಲ. ಬ್ರಾಹ್ಮಣ, ಲಿಂಗಾಯಿತ, ಮುಸಲಮಾನ, ರಡ್ಡೀ, ಮೊದಲಾದವರಿರುತ್ತಾರೆ. ಇವರೆಲ್ಲರ ವಿಚಾರದಿಂದ ಪಾಸಾದಂಥ ಠರಾವಿನಂತೆ ಎಲ್ಲಾ ಕುಲದವರೂ ನಡೆಯಬೇಕೆಂದು ತಾನಾಗಿ ವಿದಿತವಾಗುತ್ತದೆ. ವಕೀಲರ ತರುವಾಯ ಇಲ್ಲಿಯ ಮರ್ಚಂಟರು ಹೋಟು ಕೊಡಬಾರದೆಂದು ಠರಾವು ಮಾಡಿದ್ದಾರೆ. ಬಾಯಕಾಟ ಹರತಾಳವೆಂದು ಎಲ್ಲ ವ್ಯಾಪಾರ ವ್ಯವಹಾರವನ್ನು ಬಂದು ಮಾಡಿದ ಚಿಕ್ಕ ಹಕ್ಕಡಿಯವರಿಂದ, ದೊಡ್ಡ ದೊಡ್ಡ ದಲಾಲರ ತನಕ ಯಾರೂ ಹೋಟು ಮಾಡುವದಿಲ್ಲ. ಹರತಾಳದಲ್ಲಿ ಚಟ್ಟಿ ಚಹಾ ಸಹ ಕೊಡದವರು ಹೋಟು ಕೊಡುವರೇ? ಇವರಲ್ಲಿಯೂ ಎಲ್ಲ ಕುಲಗಳ ಜನರ ಸಮಾವೇಶವಾಗುತ್ತದೆ. ಪೋಲಿಂಗಸ್ಟೇಶನವಾಗಿರುವಂಥ ದೊಡ್ಡ ಗ್ರಾಮಗಳಲ್ಲಿ ದೇಶಹಿತ ಬಲ್ಲವರೆಲ್ಲರೂ ಉಮೇದವಾರರಿಗೆ ಮಾಡಿದ ಬಹುಮಾನವು ಅಸಪ್ಪಕಿಟ್ಟು ಹೋಯಿತು. ಇವರಾರೂ ಒಂದೇ ಕುಲ; ಒಂದೇ ಮತದವರಿರುವದಿಲ್ಲ. ಈ ಪ್ರಕಾರ ಸಾರ್ವತ್ರಿಕವಾಗಿ ಜಾತಿ ಮತ್ತು ಪಂಥದ ವಿಚಾರವಿಲ್ಲದೆ ಕೌನ್ಸಿಲ ಬಾಯಕಾಟಿನ ಕೂಗು ಜಿಲ್ಹೆಯ ತುಂಬ ಎದ್ದಿರುತ್ತದೆ. ಅದು ಗ್ರಾಮದ ಕೂಗಲ್ಲ; ದೇಶದ ಗರ್ಜನೆಯಾಗಿದೆಂದು ಪ್ರತ್ಯಕ್ಷ ಕೃತಿ ಮಾಡಿ ತೋರಿಸುವದು ಮತದಾರರನ್ನು ಅವಲಂಬಿಸಿರುತ್ತದೆ. ಗಾಂಧಿ ಪಕ್ಷಕ್ಕೆ ಜಯವೆಂದು ಭೇರಿ ಹೊಡೆಯುವರೆಂದು ಕಾಂಗ್ರೆಸದ ಸಂಪೂರ್ಣ ನಂಬಿಗೆಯುಂಟು.

೫ನೆಯ ಗಾಂಧಿ ದಿನ.

ಪ್ರಚಂಡ ನಗರ ಸಂಕೀರ್ತನೆ.

—(೦)—

ನಿನ್ನಿನ ದಿವಸ ಈ ಊರಲ್ಲಿ ಮಹಾತ್ಮರನ್ನು ಬಂಧಿಸಿ, ಐದನೇ ತಿಂಗಳಾದ್ದರ ಸ್ಮರಣೆಯೆಂದು ಗಾಂಧಿ ದಿನ ನೆರವೇರಿಸಲ್ಪಟ್ಟಿತು. ನಗರ ಸಂಕೀರ್ತನೆ ಮತ್ತು ವಿಲಾಯತಿಯ ಅರಿವೆಗಳು, ಕೌನ್ಸಿಲಕ್ಕೂ ಬಹಿಷ್ಕಾರ ಇವೇ ಮುಖ್ಯ ಸಂಗತಿಗಳಾಗಿದ್ದವು. ಪಂಚ ಪಂಚ ಉಷಃಕಾಲದಲ್ಲಿ ಕಾಂಗ್ರೆಸದ ಪಾಳಯದಿಂದ ನಗರ ಸಂಕೀರ್ತನೆಯ ಮೆರವಣಿಗೆ ಹೊರಟಿತು. ಯಾವ ಬೀದಿ ಮತ್ತು ಎಷ್ಟು ಹೊತ್ತೆಂಬದನ್ನು ಮುಂದಾಗಿ ಜಾಹೀರಾತು ಮತ್ತು ಜಾಂಗಟಿ ಹೊಡೆದು ಪ್ರಸಿದ್ಧ ಮಾಡಿದ್ದರು. ಇನ್ನೂ ಮೂರು ತಾಸು ರಾತ್ರಿಯಿತ್ತು. ಸ್ವಯಂಸೇವಕರು ತುತ್ತೂರಿ ಊದಿ, ಜಾಂಗಟೆಯಂತೆ ಎಲೆಕ್ಟ್ರಿಕ ಕಂಬಗಳಿಗೆ ಗುಣಿಯಿಂದ ಹೊಡೆದು ಊರನ್ನೇ ಎಬ್ಬಿಸಿದರು. ಪೋಲೀಸರ ಗಸ್ತಿಯ ಶ್ರಮವನ್ನು ಉಳಿಸಿದರೆಂದೂ ಹೇಳಬಹುದು.

ಸರಿಯಾಗಿ ೫||. ಗಂಟೆಗೆ ಶಿಬಿರದಿಂದ ಮೆರವಣಿಗೆ ಹೊರಟಿತು. ಅದು ವಿಜಯ ಮುದ್ರಾಲಯದ ಗಾಂಧಿ ಚೌಕಿಗೆ ಬರುವಷ್ಟರಲ್ಲಿ ಸಾವಿರ ಜನವಾಗಿತ್ತು. ಕನಿಷ್ಟ ಎರಡು ಸಾವಿರ ಜನರಾದರೂ ಸೇರಬೇಕೆಂದು ಮುಂದಾಗಿ ಕಾರ್ಯಕ್ರಮವಿತ್ತು. ಆ ಸಂಖ್ಯೆಯು ಬವಳಿಸೇಟಿ ದಾಟುವದರೊಳಗಾಗಿ ಮೀರಿ ಹೋಯಿತು. ಕಾಮನಕಟ್ಟಿಗೆ ಮೂರು ಸಾವಿರಕ್ಕೆ ಮುಟ್ಟಿ ಮುಂದೆ ಹೋದ ಹೋದಂತೆ, ಜನರ ಸಂಖ್ಯೆಯು ಬೆಳೆಯಿತು, ಮೆರವಣಿಗೆಯು ತಿರುಗಿ ಗಾಂಧಿ ಚೌಕಿಗೆ ಬಂದು, ರಾಷ್ಟ್ರಧ್ವಜವಂದನೆಯಾಗುವಾಗ ಗಾಂಧಿ ಚೌಕಿನಂಥ ವಿಶಾಲವಾದ ಪಟಾಂಗಣದಲ್ಲಿ ಜನರಿಗೆ ನಿಲ್ಲಲು ಸ್ಥಳ ಸಾಲದೆ ಹೋಯಿತು.

ಮೆರವಣಿಗೆಯಲ್ಲಿ ಎಲ್ಲಕ್ಕೂ ಮುಂದೆ ಐದಾರು ವರ್ಷದೊಳಗಿನ ಬಾಲಿಕೆಯರೇ ಇದ್ದರು;

ವರ ಹಿಂದೆ ಇನ್ನೂರಕ್ಕಿಂತ ಹೆಚ್ಚು ಪ್ರಬುದ್ಧ ೕಯರಿದ್ದರು. ಮುಪ್ಪಿನ ಮುದಿಕೆಯರಾಗಿ, ಕೈ ಡಿಸಿಕೊಂಡು ಹೋಗುವಂಥವರನ್ನು ನೋಡಿ, ಕೌತುಕವೆನಿಸಿತು. ಇವರ ಹಿಂದೆ ಚಿಕ್ಕ ದೊಡ್ಡ ಹುಡುಗರು ವರ ಹಿಂದೆ ಹಿರಿಯರು ಕವಾಯಿತನ ಸಿಸ್ತಿನಂತೆ ತ್ಸರದೊಂದು ಸಾಲಿನಂತೆ ನಡೆಯುತ್ತಿದ್ದರು. ದಾ ಗಂಟೆ ಜಯಘೋಷವಾಗುತ್ತಿತ್ತು. ಕಾವ.ನಕ ಯಲ್ಲಿ ಬಾಯಕಾಟ ಕೌನ್ಸಿಲವೆಂಬದು ಭೂಮಿ ನ್ನೇ ನಡುಗಿಸಿತು. ಈ ಪ್ರಚಂಡ ಮೆರವಣಿಗೆ ಯು ಧಾರವಾಡದಲ್ಲಿ ಅಪೂರ್ವವಾಯಿತು. ಳಳ ಯಲ್ಲಿ ಕಟ್ಟಿಷ್ಟರಾಗಿದ್ದಂಥವರು ಕೂಡ ಇದ ಕ್ಷಿ ಗೀರಿ, ಪೂರ್ಣವಾದ ಸಮಾನಾನುಭೂತಿಯನ್ನು ೋರಿಸಿದರು.

ಮುಂಜಾವಿನಂತೆ ಸಾಯಂಕಾಲದಲ್ಲಿಯೂ ಮಹಾತ್ಮರ ಭಾವಪಟದ ಮೆರವಣಿಗೆಯೂ ಸಭೆಯೂ ನಡೆದವು.

ಶ್ರೀಯುತ ದೇವಜೀಬಾಬು ಇವರ ಕೌನ್ಸಿಲ ಬಹಿಷ್ಕಾರ ಕಾರ್ಯವು.

—— (೦) ——

ಶ್ರೀಯುತ ದೇವಜೀಬಾಬು ಮುತಾಲಿಕದೇಸಾಯಿ ಇವರು ಈಗ ಎರಡು ವಾರದಿಂದ ಕೌನ್ಸಿಲ ಬಹಿಷ್ಕಾರ ಕಾರ್ಯಕ್ರಮವನ್ನು ಕೈಕೊಂಡು ಧಾರವಾಡ ತಾಲೂಕಿನಲ್ಲಿ ಅಡ್ಡಾಡುತ್ತಿರುವರು. ಹೋದ ವಾರದಲ್ಲಿ ಅವರು ಮುಗದ, ಆಳ್ನಾವರ, ಅಮ್ಮಿನಭಾವಿ ಗ್ರಾಮಗಳಿಗೆ ಹೋಗಿ ಬಂದಿದ್ದು ಈ ವಾರ ಅಂದರೆ ತಾ|| ೧-೨-೩ ೪ ಸಪ್ಟಂಬರ ತಿಂಗಳಲ್ಲಿ ಗರಗ, ತಡಕೋಡ, ಬೆಟಗೇರಿ ಗ್ರಾಮಗಳಿಗೂ ಯನಾಗ್ರಾಮಗಳಲ್ಲಿಯು ಮುಖ್ಯ ಮುಖ್ಯ ಹಳ್ಳಿಗಳಾದ ಹೊಸಟ್ಟಿ, ಮಾದನಭಾವಿ, ಕೊಟಬಾಗಿ, ಪೋಳೂರು, ಕಲ್ಲೂರು, ಜಾರೋಬೆಳವಡಿ ಮುಂತಾದವುಗಳಿಗೂ ಹೋಗಿ ಬಂದರು. ಎಲ್ಲ ಕಡೆಯಲ್ಲಿಯೂ ರೈತರು ಒಳ್ಳೇ ಉತ್ಸಾಹದಿಂದ ಕೌನ್ಸಿಲ ಬಹಿಷ್ಕಾರ ಕಾರ್ಯವನ್ನು ಅಮಲಿನಲ್ಲಿ ತರಲು ಒಪ್ಪಿದ್ದಾರೆ.

ಮೇಘರಾಜನ ದಾರಿಯನ್ನೇ ಕಾಯುತ್ತಲಿದ್ದ ರೈತಬಾಂಧವರ ಮೇಲೆ ಕರುಣ ಹುಟ್ಟಿ ಮೇಘರಾಜನು ಪೂರ್ಣ ಕೃಪೆಮಾಡಿದರೆ ಕೌನ್ಸಿಲಿನ ಪೋಲಿಂಗ ಸ್ಟೇಶನ್ನುಗಳು ಅನಾಯಾಸವಾಗಿ ಖಾಲೀ ಉಳಿಯುವವು. ಒಟ್ಟಿನಮೇಲೆ ಧಾರವಾಡ ತಾಲೂಕಿನೊಳಗಿನ ಕೌನ್ಸಿಲ ಬಹಿಷ್ಕಾರ ಕಾರ್ಯವು ಸಮಾಧಾನಕರವಿರುತ್ತದೆನ್ನಲಿಕ್ಕೆ ಏನೂ ತೊಂದರೆ

ಒಡಂಬಡಿಕೆ ಸನಿಯವಾಯಿತು.

—— (೦) ——

ಒಡಂಬಡಿಕೆ ಸನಿಹವಾಯಿತೆಂದು ನಿನ್ನಿನ ಸುದ್ದಿಯು. ಒಡಂಬಡಿಕೆಯಾಗಬೇಕೆಂದು ಪುಣೆಯ ಸ್ಟೇಶನದಲ್ಲಿ ಬ್ಯಾರಿಸ್ಟರ ಜಯಕರರಿಗೆ ಬಂದ ತಾರು ವಿಲಾಯತಿಯ ಮಂತ್ರಿಗಳಿಂದಲೇ ಬಂದಿದೆಂದು ಉಸುರೊಡೆದಿದೆ. ಮಹಾತ್ಮರು ತಮ್ಮ ಕಡೆಯ ಹೇಳಿಕೆಯನ್ನು ನಿನ್ನೆ ಹೇಳತಕ್ಕವರಿದ್ದರು. ಈ ಬಳಗಾಗಿ ಹೇಳಬಹುದು.

ಹಿಂಸೆ ಇರಲಿ; ಅಹಿಂಸೆ ಇರಲಿ. ಮಿರತ ಸೊಲ್ಲಾಪೂರ ಮೊದಲು ಮಾಡಿಕೊಂಡು ಎಲ್ಲ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂದು ಪಂಡಿತ ಮೋತಿಲಾಲರು ಶರತ್ತು ಹಾಕಿದ್ದಾರೆಂದು ಹೇಳುತ್ತಾರೆ.

ಸಾವಿರ ಕುದುರೆಯ ಸರದಾರ ಹೆಂಡರು ಮಕ್ಕಳ ಪಿಂಜಾರ.

ಸುರತದಲ್ಲಿ ಅಸೆಂಬ್ಲಿಯ ವೋಟಿಂಗ ನಡೆಯಿತು. ಸ್ತ್ರೀಯರೇ ಮುಖ್ಯವಾಗಿ ಪಿಕೆಟಿಂಗ ನಡೆಸಿದ್ದರು. ಒಂದು ಪ್ರಸಿದ್ಧ ಮನೆತನದ ಗೃಹಸ್ಥರು ವೋಟು ಕೊಡಲಿಕ್ಕೆ ಬಂದರು. ಅವರ ಹೆಂಡತಿ ಮತ್ತು ಮಗಳು ಪಿಕೆಟಿಂಗ ಮಾಡುತ್ತಿದ್ದರು. ಇವರು ಕೂಡಲೆ ಆ ಗೃಹಸ್ಥನನ್ನು ತರುಬಿ, ಅಸ್ತಗಟ್ಟಿ ಹಿಂದಿರುಗಿ ಮನೆಗೆ ಕಳಿಸಿದರು. ಹೊರಗೆ ಗಂಡನು ಎಷ್ಟು ಪರಾಕ್ರಮಿಯಾದರೂ, ಮನೆಯಲ್ಲಿ ಹೆಂಡರು ಮಕ್ಕಳು ಹಾಗು ಬೇರೆ ಸಂಬಂಧಿಸ್ತ ಸ್ತ್ರೀಯರ ಮುಂದೆ ಅವರ ಆಟ ನಿಂತು ಹೋಗುತ್ತದೆ. ಬಾಜೀರಾಯನು ಜಗತ್ಪ್ರಸಿದ್ಧ ಶೂರನಾದರೂ, ಮಸ್ತಾನಿಯ ಮುಂದೆ ಅವನ ಆಟವೇನೂ ನಡೆಯುತ್ತಿದ್ದಿಲ್ಲೆಂಬುದು ಇತಿಹಾಸ ಪ್ರಸಿದ್ಧವಾಗಿರುತ್ತದೆ. ಈ ಜಿಲ್ಹೆಯಲ್ಲಿ ಬುಧವಾರ ಆಗುವ ಚುನಾವಣೆಯಲ್ಲಿ ಸ್ತ್ರೀಯರು ಸುರತದ ಸ್ತ್ರೀಯರಂತೆ ಸಹಜವಾಗಿ ಮಾಡಬಹುದು. ಈಚಲ ಗಿಡ ಕಡಿಯುವಾಗ ತೋರಿಸಿದ ಹುರುಪನ್ನು ಈಗಲೂ ತೋರಿಸುವಂತಿದೆ. ಗುಜ್ಜರಂತೆ ಕರ್ನಾಟಕದ ಸ್ತ್ರೀಯರೂ ಕರ್ತವ್ಯಜಾಗೃತರಾಗಿದ್ದಾರೆಂಬುದಕ್ಕೆ ಇದು ಒಳ್ಳೇ ಸಂಧಿ ಕಾಲವಾಗಿದೆ.

ವೋಟು ಕೊಡಬಾರದೆಂದು ಹುಬ್ಬಳ್ಳಿಯ ವಕೀಲರ ಠರಾವು.

ಧಾರವಾಡದಂತೆ ಹುಬ್ಬಳ್ಳಿಯ ವಕೀಲರು ಶ್ರೀ. ಸಿದ್ರಾಮಪ್ಪಾ ಘಾವಟೆ ಇವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಪ್ರಚಂಡ ಬಹುಮತದಿಂದ ಕೌನ್ಸಿಲ ಚುನಾವಣೆಯ ದಿವಸ ವೋಟು ಕೊಡಬಾರದೆಂದೂ, ಚುನಾವಣೆಗೆ ಬಹಿಷ್ಕಾರ ಹಾಕಬೇಕೆಂದೂ ಠರಾವು ಮಾಡಿದರು. ಈ ಠರಾವು ಸಕಾಲದಲ್ಲಾಯಿತೆಂದೇ ತಿಳಿಯತಕ್ಕದ್ದು.

ಗೋಕಾವಿಯಲ್ಲಿ ನಡೆದ ಅನಾಹುತವು.

—— (೦) ——

ಇಲ್ಲಿಂದ ಶ್ರೀ. ಸೌ|| ಪಣಜಿ ಕೃಷ್ಣಾಬಾಯಿಯವರು ವ್ಯಾಖ್ಯಾನ ಕೊಡುವದಕ್ಕಾಗಿ ಗೋಕಾವಿಗೆ ಹೋದರು. ಅಲ್ಲಿ ವ್ಯಾಖ್ಯಾನ ಕೊಟ್ಟು ಮರಳಿ ಗೋಕಾಕರೋಡ ಸ್ಟೇಶನಕ್ಕೆ ಬಂದರು. ಇವರನ್ನು ಕಳಿಸಿಕೊಡಲು- ಅಲ್ಲಿಯ ಪ್ರಸಿದ್ಧ ಮಹಾಜನ ಮುಕೇಸಡವರಾದ ಗುಂಡರಾವ ಮತ್ತು ಗೋವಿಂದರಾಯರು ಸ್ಟೇಶನಕ್ಕೆ ಬಂದರು. ಅಲ್ಲಿ ಸ್ಟೇಶನದಲ್ಲಿ ಡಿ. ಡಿ. ಕಲೆಕ್ಟರರಾದ ರಾ. ಬ. ಪಣಜಿಕರರು ಇದ್ದರು. ಇವರಿಬ್ಬರೂ ಮಾತಾಡುತ್ತಾ ನಿಂತಾಗ, ೨೫-೩೦ ಪುಂಡರು ಬಂದು, ಮಹಾಜನದ್ವಯರ ಮೇಲೆ ದೊಣ್ಣೆಯ ಪ್ರಹಾರ ಮಾಡಿ ಶ್ರೀ ಸೌ|| ಕೃಷ್ಣಾಬಾಯಿ ಇವರಿಗೆ ಬೈದು, ಬೆಂಬಕ್ಕೆ ಕಟ್ಟುವ ಹೆದರಿಕೆ ಹಾಕಿ, ಅವರು ತಂದ ಮೋಟಾರದಲ್ಲಿ ಕೂಡಿಸಿ ಪಲಾಯನ ಹೇಳಿಸಿದರೆಂಬ ತಾರಿನ ವರ್ತಮಾನ ಪ್ರಸಿದ್ಧವಾಗಿದೆ. ಆ ಡಿ|| ಕಲೆಕ್ಟರಸಾಹೇಬರೇನು ಮಾಡುತ್ತಿದ್ದರು ?

ನಾಳಿನ ರಜೆ —

ಇಂದು ಅನಂತ ಚತುರ್ದಸಿಯ ದೆಸೆಯಿಂದ ಮುದ್ರಾಲಯಕ್ಕೆ ರಜೆ ಇರುವದರಿಂದ, ನಾಳಿನ ಸಂಖ್ಯದ ವಿಜಯವು ಪ್ರಕಟಿಸಲ್ಪಡಲಾರದು.

ನಗರ ಸಂಕೀರ್ತನೆಯ
ಪದಗಳು.
ಸರಳವಾದ ಭಾಷೆಯಲ್ಲಿ ಸುಗಮವಾದ ಶಬ್ದಗಳಲ್ಲಿ
ವೀರರಸಪ್ರವಾಹವನ್ನು ಹೊರಹೊಮ್ಮಿಸಿ
ಹೃದಯದಲ್ಲಿಯ ಹುರುಪನ್ನು ಬೆಳೆಯಿಸುವ
ಪದಗಳು ಏಳು
ಮನದಲ್ಲಿ ಕರ್ನಾಟಕಾಭಿಮಾನದ ಅಚ್ಚೊತ್ತುವ
ಪದಗಳು ಎರಡು
ಇಂಗ್ಲೀಷುವಿದ್ಯೆಯ ವಿಡಂಬನೆಯ
ಗುಡ್‌ನ್ಯಾಟು ಒಂದು
'ಇತ್ಯಾದಿ ಹಲವು ಪದಗಳನ್ನೊಳಗೊಂಡ ಪುಸ್ತಕವು
ಕನ್ನಡಿಗರ ಕೂಟದಿಂದ ಹೊರಟಿದೆ.
ಬೆಲೆ ಮಾತ್ರ
ಒಂದೇ ಆಣೆ
ತ್ವರೆಮಾಡಿರಿ!
ಸುಗ್ಗಿಯಾದ ಬಳಿಕ ಸಿಕ್ಕಾವು, ಸಿಗಲಿಕ್ಕಿಲ್ಲ!!
ಗಾಂಧೀ ಬಂಧನದಿನ (೫-೯-೧೯೩೦)
ಸಿಗುವ ಸ್ಥಳ:-
ಕನ್ನಡಿಗರ ಕೂಟ ಧಾರವಾಡ
ವಿಜಯ ಮುದ್ರಾಲಯ
ಧಾರವಾಡ
ಮಂಗಳೂರ ಗೋವಿಂದ
ಶಾಂತೇಶ ವಾಚನಾಲಯ
ಧಾರವಾಡ

ಧಾರವಾಡ ಜಿಲ್ಲೆಯೊಳಗಿನ ಮುಂಬಯಿ ಕಾಯದೆ ಕೌನ್ಸಿಲ ಮತದಾರ ಜನರಿಗೆ–

ಪ್ರಿಯ ಬಂಧು ಭಗಿನಿಯರೇ-

ತಮ್ಮೆಲ್ಲರನ್ನೂ ಭೆಟ್ಟಿಯಾಗಬೇಕೆಂಬ ಇಚ್ಛೆ ಇತ್ತು. ಆದರೆ ದುಡ್ಡಿನ ಕೊರತೆಯಿಂದಲೂ, ವೇಳೆ ಇಲ್ಲದ್ದರಿಂದಲೂ ತಮ್ಮೆಲ್ಲರನ್ನು ಭೆಟ್ಟಿಯಾಗಲಿಕ್ಕೆ ಶಕ್ಯವಿಲ್ಲ.

ನಾನು ವಿದ್ಯಾರ್ಥಿ ಇದ್ದಾಗಿನಿಂದ ಜನರ ಹಕ್ಕುಗಳಿಗಾಗಿ ಸರಕಾರದವರ ಸಂಗಡ ಬಡದಾಡುತ್ತ ಬಂದಿರುತ್ತೇನೆ. ಜನರ ವಿದ್ಯೆಯ ಸಲುವಾಗಿ ಶಾಲೆಗಳನ್ನು ಸ್ಥಾಪಿಸುವದಕ್ಕಾಗಿ ದುಡಿದಿರುತ್ತೇನೆ. ಜಾತಿ ಜಾತಿಗಳಲ್ಲಿ ಇರುವ ಮತ್ಸರವನ್ನು ಕಡಿಮೆ ಮಾಡುವದಕ್ಕಾಗಿ ಪ್ರಯತ್ನಿಸಿದ್ದೇನೆ. ಯಾವತ್ತೂ ಜನರಿಗೆ ಸಮಾನ ಹಕ್ಕುಗಳಿರಬೇಕೆಂದು ನನ್ನ ಮತ. ಹಿಂದುಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ದೊರಕಿಸುವದು ನಮ್ಮ ಧ್ಯೇಯ.

ರಾ. ಬ. ಕಂಬಳಿಯವರಾಗಲೀ ಮಿ|| ಜೋಗರಾಗಲೀ ರಾಜೀನಾಮೆಯನ್ನು ಕೊಟ್ಟರೆ ನಾನೂ ರಾಜೀನಾಮೆ ಕೊಡಲಿಕ್ಕೆ ಸಿದ್ಧನಿದ್ದೇನೆಂದು ಕಾಂಗ್ರೆಸ ಕಮೀಟಿಯವರ ಕೈಯಲ್ಲಿ ರಾಜೀನಾಮೆಯ ಅರ್ಜಿಯನ್ನು ಕೊಟ್ಟಿದ್ದೆ. ಮಿ|| ಜೋಗರು ಬಿಡಲಿಕ್ಕೆ ಒಡಂಬಡುವದಿಲ್ಲೆಂದೂ, ರಾ. ಬ. ಕಂಬಳಿಯವರನ್ನು ಕೇಳುವದು ನಿರರ್ಥಕವೆಂದೂ ನಾನು ಕೊಟ್ಟ ರಾಜೀನಾಮೆಯನ್ನು ಕಾಂಗ್ರೆಸ ಕಮೀಟಿಯವರು ನನಗೆ ತಿರುಗಿ ಕೊಟ್ಟಿರುತ್ತಾರೆ.

ತಾವು ನನ್ನನ್ನು ಆರಿಸಿದ ಪಕ್ಷಕ್ಕೆ ಈ ನಮ್ಮ ಹಳೇ ಹುದ್ದೆಗಳಿಗಿಂತ ಏನಾದರೂ ಹೆಚ್ಚಿನ ಕೆಲಸವನ್ನು ಮಾಡಬೇಕೆಂಬ ಉಮೇದಿಯುಂಟು. ಪೋಲಿಂಗ ಪೇಪರಿನ ಮೇಲೆ ನನ್ನದು ಎರಡನೇ ಖಾನೆಯು.

ನನ್ನ ಗುರ್ತು ಎತ್ತು.

ಮಹಾದೇವಪ್ಪ ಶಿದ್ದಪ್ಪಾ ಕೇಸರಿ		X X

ತಾವೆಲ್ಲರೂ ಎತ್ತಿನ ಹಿಂದೆ ಇರುವ ಬರಿಯ ಖಾನೆಯಲ್ಲಿ ×× ಹೀಗೆ ಎರಡು ಗುರ್ತುಗಳನ್ನು ಮಾಡಿ ತಮ್ಮ ಹೋಟುಗಳನ್ನು ನನಗೆ ಕೊಟ್ಟು ತಮ್ಮ ಸೇವೆಯನ್ನು ಮಾಡುವ ಸುಸಂಧಿಯನ್ನು ಕೊಡುವಿರೆಂದು ನಂಬಿದ್ದೇನೆ.

ತಾ|| ೪-೯-೧೯೩೦ **ಮಹಾದೇವಪ್ಪ ಶಿದ್ದಪ್ಪ ಕೇಸರಿ.**
ಧಾರವಾಡ ಬಿ. ಎ. ಎಲ್‌ಎಲ್. ಬಿ. ವಕೀಲ ಧಾರವಾಡ

ನೋಟೀಸು

ಉಳವಪ್ಪಾ ಕರಬಸಪ್ಪನವರ ಸಾಕೀನ ಅಳ್ಳಿಕಟ್ಟಿ ತಾಲೂಕ ಹುಬ್ಬಳ್ಳಿ ಈತನಿಗೆ

ಕೆಳಗೆ ಹೆಬ್ಬೆಟ್ಟಿನ ಗುರ್ತು ಮಾಡುವ ತಿಪ್ಪಣ್ಣಾ ತಂದೆ ಶಿವಲಿಂಗಪ್ಪಾ ಲಕ್ಷ್ಮೇಶ್ವರ ಸಾಕೀನ ಅಳ್ಳೀಕಟ್ಟಿ ಈತನು ನಿನಗೆ ಈ ನೋಟೀಸಿನಿಂದಾ ತಿಳಿಸುವದೇನಂದರೆ:

ನೀನು ನನ್ನ ಖಾಸ ಮಾವನಾಗಬೇಕು ನಿನ್ನ ಮಗಳು ಈರಿಯನ್ನು ನನಗೆ ಮದಿವೆ ಮಾಡಿಕೊಟ್ಟಿ ಆಕೆ ಸುಮಾರು ಒಂದು ವರ್ಷದ ವೇಳೆಯಾಯಿತು ಆಕೆ ನನ್ನ ಕೂಡ ಸುರಳಿತ ರೀತಿಯಿಂದ ಬಹಳ ತುಸು ದಿವಸ ಪ್ರಪಂಚ ಮಾಡಿದಳು ನನ್ನ ಮತ್ತು ನಿನ್ನ ಮನೆ ಒಂದೇ ಓಣಿಯಲ್ಲಿ ಒಂದೆರಡು ಮನೆಗಳ ಅಂತರದಲ್ಲಿರುತ್ತವೆ ಆಕೆಯು ನಿಮ್ಮ ಹಾಗೂ ನಿಮ್ಮ ಹೆಂಡತಿ ಅಂದರೆ ತನ್ನ ತಾಯಿಯು ಮಾತು ಕೇಳಿ ಹಗಲೆಲ್ಲ ತವರ ಮನೆಗೆ ಹೋಗುವಳು ಕಡೆಗೆ ನಿಮ್ಮ ಭುಲತಾಪಿನಿಂದ ನನ್ನ ಮನೆಗೆ ಬರುವದನ್ನೇ ಬಿಟ್ಟಳು ಈ ಮಾತಿಗೆ ಸುಮಾರು ವರ್ಷವಾಯಿತು ಬೇಕಾದಷ್ಟು ರದಬದಲಾಯಿತು ನಿಮ್ಮ ಭುಲತಾಪಿನಿಂದ ನನ್ನ ಮನೆಗೆ ಸಾಫ ಬರುವದಿಲ್ಲೆಂದು ಹೇಳಿದಳು ಕಡೆಗೆ ಲಾಚಾರಿಯಾಗಿ ಈ ನೋಟೀಸು ಕೊಡಬೇಕಾಯಿತು ಈ ನೋಟೀಸು ಮುಟ್ಟಿದ ಮೂರು ದಿವಸಗಳಲ್ಲಿ ನನ್ನ ಹೆಂಡತಿಯನ್ನು ನನ್ನ ಯಾವತ್ತು ದಾಗೀನ ಸಹಿತ ನನ್ನ ಮನೆಗೆ ಕಳಿಸಬೇಕು ದಾಗೀನೆಗಳ ವಿವರ–

೧ ಬಂಗಾರದ ಬಳೆಜೋಡು ತೊಲಿ ೬
೨ ಬೆಳ್ಳಿ ಪಟ್ಟಿ ಕಿ|| ರೂ|| ೧೬
೩ ಗುಂಡಿನ ಟೀಕೆ ಕಿಮ್ಮತ್ತು ರೂ|| ೩೦
೪ ಬೆಳ್ಳಿ ಚವಕಾ ಕಿ|| ರೂ|| ೧೦
೫ ಮದಿವೆಯ ಸೀರಿ ಕಿ|| ರೂ|| ೪೦

ಈ ದಾಗೀನ ಸಹಿತ ಕಳಿಸದಿದ್ದರೆ– ನೀವು ನಿಮ್ಮ ಮಗಳನ್ನು ಬಾಳಿವೆಗೆ ಹಚ್ಚುವದಿಲ್ಲೆಂದು ತಿಳಿದು ನಾನು ಎರಡನೆಯವಳನ್ನು ಮದಿವೆ ಅಥವಾ ಉಡಿಕೆ ಮಾಡಿಕೊಳ್ಳುವೆನು ಇಂದಿನಿಂದ ನಿನ್ನ ಮಗಳ ಹಕ್ಕು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡೆಯಲಾರದು ಪೋಟಗಿ ದೊರೆಯಲಾರದು ನನ್ನ ದಾಗೀನೆಗಳ ಬಾಬತು ದಿವಾಣಿಯಲ್ಲಿ ಇಲಾಜ ಮಾಡಿ ವಸೂಲ ಮಾಡುವೆನು ಈ ನೋಟೀಸಿನ ಮಜಕೂರ ನಿಮ್ಮ ತಲೆಯಮೇಲಿದೆ ತಿಳಿಯುವದು ತಾ|| ೫ ಸಪ್ಟಂಬರ ೧೯೩೦ನೇ ಇಸವಿ

ಈ ಎಡಗೈ ಹೆಬ್ಬೆರಳಿನ ಗುರ್ತು ತಿಪ್ಪಣ್ಣಾ ತಂದೆ ಶಿವಲಿಂಗಪ್ಪಾ ಲಕ್ಷ್ಮೇಶ್ವರ ಈತನ ಕೈದು ಇದೆ

ಈ ಪತ್ರವನ್ನು ಕೃಷ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಜಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೮ನೇ ಸಪ್ಟಂಬರ ೧೯೩೦ (ಸಂಚಿಕೆ ೧೯೯

ಧಾರವಾಡ ಜಿಲ್ಲೆಯ ಮುಂಬಯಿ ಕೌನ್ಸಿಲ್

(ನಾನ್ ಮಹಮ್ಮದನ್) ಮತದಾರರಿಗೆ.

ಶ್ರೀ. ವಿಶ್ವನಾಥ ನಾರಾಯಣ ಜೋಗ ಇವರ
ವಿನಂತಿಯು.

ಮುಂಬಯಿ ಕಾಯದೆ ಕೌನ್ಸಿಲ್ ಚುನಾವಣೆಯು ೧೦—೯—೧೯೩೦ ಬುಧವಾರ ದಿವಸ ಜರಗುವದು ಈ ಚುನಾವಣೆಯಲ್ಲಿ ನಾನೊಬ್ಬ ಉಮೇದವಾರನಾಗಿದ್ದು [illegible] ಈ [illegible] ಗೊತ್ತಾಗಿದೆ. ನನಗೆ ಮತಕೊಡಲಿಚ್ಛಿಸುವ ಮತದಾರರು ತಮ್ಮ ಓಟುಗಳನ್ನು ಕೆಳಗೆ ನಮೂನೆಯಲ್ಲಿ ತೋರಿಸಿದಂತೆ ನನಗೆ ಮತ ಕೊಟ್ಟು, ನನ್ನ ಹೆಸರಿನ ಮುಂದೆ ಎರಡು ಕ್ರಾಸು (××) ಗುರುತುಗಳನ್ನು ಹಾಕಬೇಕೆಂದು ವಿನಂತಿ ಇರುತ್ತದೆ.

ವಿಶ್ವನಾಥ ನಾರಾಯಣ ಜೋಗ		X X

ತಮ್ಮ

ವಿಶ್ವನಾಥ ನಾರಾಯಣ ಜೋಗ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲು ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಚೌಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ. ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಆರ್ಧಾಣೆ. ಹೋಲ ಸೇಲ ಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀ ಟೀ ಸ್ಟೋರ್ಸ್, ಮಾರ್ಕೆಟ ರೋಡ, ಧಾರವಾಡ.

Indian Posts and Telegraphs Department.

NOTICE.

Sealed tenders are invited for a contract for the conveyance of mails by Motor vehicles between Byadgi and Hirekerur via Chickerur (about 29½ miles) daily for up and down journeys throughout the year on a fixed monthly subsidy for a period of three years commencing from the 1st October 1930. Tenders quoting "any remuneration deemed necessary" will not be accepted.

2 A form of tender, a form of agreement with a schedule showing the full details of the service and a note showing the conditions of tender may be obtained on application from the Superintendent of Post Offices Dharwar Division on payment of Rupees Two.

3 All tenders must be addressed to the undersigned by name clearly marked "Tender for Byadgi Hirekerur line Mail Contract" on the outside of cover, and must reach him on or before the 10th Sept. 1930.

Dharwar
1-9-1930.

J. E. Davison,
Supdt. of Post Offices, Dharwar Division

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ಭಾದ್ರಪದ ವದ್ಯ ೧

ರಾಜ್ಯಮಾನ್ಯ ರಾಜ ಶ್ರೀ. ಶ್ರೀ. ಜೋಗಿರಾಯರ ಬಹುಮಾನ.

ರಾ. ಬ. ಕಂಬಳಿಯವರಂತೆ ರಾ. ರಾ. ಜೋಗಿರಾಯರು ಕೌನ್ಸಿಲಕ್ಕೆ ಹೊಂದಿಕೊಂಡಿದ್ದಾರೆ, ಇವರು ಇಷ್ಟು ದಿವಸ ಕಾಂಗ್ರೆಸದ ವತಿಯಿಂದಿದ್ದರು. ಸದ್ಯ ಅವರ ಹೆಸರನ್ನೇ ಎತ್ತುವದಿಲ್ಲ. ಕಾಂಗ್ರೆಸದಿಂದ ಓಟು ದೊರೆಯುವದಿಲ್ಲೆಂದು ಖಾತ್ರಿ ತಿಳಕೊಂಡಿದ್ದಾರೆ. ಯಾರೂ ಓಟು ಕೊಡಬಾರದೆಂಬ ಚಳವಳಿಯಲ್ಲಿ ಇವರನ್ನಾರೂ ಮಾತಾಡಿಸುವದಿಲ್ಲ. ಇವರಲ್ಲಿ ಕುಸು ಮರಾಟೆ ಮುತ್ಸದ್ದಿತನವಿರುವದರಿಂದ ರಾ. ಬ. ಕಂಬಳಿಯವರಷ್ಟು ಫಜೀತಿ ಹೊಂದಲಿಲ್ಲ. ಊರ ಹೊರಗೇ ನಿಂತು, ಅಥವಾ ಯಾವದೊಂದು ಗುಪ್ತ ಸ್ಥಳಕ್ಕೆ ತಮಗೆ ಬೇಕಾದವರನ್ನಷ್ಟೇ ಕರಿಸಿಕೊಂಡು, ಓಟಿನ ಪ್ರಸ್ತಾಪ ಮಾಡುತ್ತಿದ್ದರು ಆದ್ದರಿಂದ, ರಾ. ಬ. ಕಂಬಳಿಯವರಿಗಾದಷ್ಟು ಬಹುಮಾನ ಮಾಡಿಸಿಕೊಳ್ಳುವದು ತಪ್ಪಿತು. ಆದರೂ ಹಿರೇಕೆರೂರ ಬ್ಯಾಡಗಿ ಮುಂತಾದ ಗ್ರಾಮಗಳಲ್ಲಿ ಮೋಟಾರ ಕಣ್ಮರೆಯಾಗುವತನಕ ಹೋಗ ಗೋಬ್ಯಾಕ, ಶೇಮ ಶೇಮ ಶಬ್ದಗಳಿಗೇನೂ ಕೊರತೆಯಾಗಲಿಲ್ಲ. ಮಧ್ಯಾಹ್ನದ ಊಟವೂ ದೊರೆಯದಾಯಿತು. ಇವರ ವಿಷಯವಾಗಿ ಇವುಗಳಿಗಿಂತ ಒಂದು ಹೆಚ್ಚಿನ ಸಂಗತಿಯು ಗದಗಿನಲ್ಲಿ ಸಂಭವಿಸಿದೆ. ಅಲ್ಲಿಯ ಭಗಿನಿ ಸಮಾಜದವರು ಇವರಿಗೆ ಅರಿಷಣ, ಕುಂಕುಮ, ಮತ್ತು ಬಳೆಗಳನ್ನು ಕಳಿಸಿ,

> ,, ರಾಯರೇ, ನೀವು ಹೆಣ್ಣಾಗಿರುವಿರೆಂದು ಕೇಳುತ್ತೇವೆ. ಆದುದರಿಂದ ನಾವು ಈಗ ಕಳುಹಿಸಿದ ಸಾಮಾನುಗಳ ಉಪಯೋಗ ಮಾಡಿಕೊಂಡು ನಮ್ಮ ಸಮಾಜದ ಸದಸ್ಯರಾಗುವಿರೆಂದು ಬೇಡಿಕೊಳ್ಳುತ್ತೇವೆ. ,,

ಎಂದು ತಿಳಿಸಿದ್ದಾರೆ. ಭಗಿನಿ ಸಮಾಜದಲ್ಲಿ ಮುತ್ತೈದೆಯರ ಬಹುಮತವಿರುವಂತೆ ತೋರುತ್ತದೆ. ಆದ್ದರಿಂದ ಮೇಲಿನ ಪದಾರ್ಥ ಕಳಿಸಿದ್ದಾರೆ ಈ ಅರ್ಥವು ತಮಗೆ ಪೂರಾ ಸಮ್ಮತವಿಲ್ಲೆಂದು ವಿಧವೆಯರು ಕೇಳಿ, ತಮ್ಮದೊಂದು ಸ್ವತಂತ್ರ ಠರಾವು ಮಾಡಿ, ಅಂಗಾರ ಮತ್ತು ಭಸ್ಮ ಕಳಿಸಿ, ನಾವು ಪ್ರತ್ಯಕ್ಷರಾಗಿ ಸ್ವರಾಜ್ಯ ಸಂಪಾದಿಸುತ್ತೇವೆ; ನೀವು ನಮ್ಮ ಕೆಲಸ ಮಾಡಿರೆಂದು ಸೂಚಿಸಬೇಕಾಗಿತ್ತು. ತಮ್ಮ ಮನಸ್ಸಿನ ವಿರುದ್ಧ ಠರಾವಾದ ಕೂಡಲೆ, ಜನರು ತಮ್ಮದೊಂದು ಸ್ವತಂತ್ರ ಠರಾವು ಮಾಡಿಕೊಳ್ಳುವರು. ಆ ಪ್ರಕಾರ, ಇವರೂ ಹಾಗೆ ಮಾಡಲಿಕ್ಕೆ ಬರುತ್ತದೆ.

ಕರ್ನಾಟಕದಲ್ಲಿ ಕಾಂಗ್ರೆಸದ ಪ್ರಚಾರ ಕಾರ್ಯ.

(ಕಾಂಗ್ರೆಸ ಕಮೀಟಿಯಿಂದ)

ಶ್ರೀ ವ್ಹಿ. ವ್ಹಿ. ಪಾಟೀಲರೂ, ಶ್ರೀ ಮಂಗಳವೇಢೆ ಶ್ರೀನಿವಾಸರಾಯರೂ ವಿಜಾಪೂರ ಜಿಲ್ಹೆಯಲ್ಲಿ ಪ್ರಚಾರ ಕಾರ್ಯವನ್ನು ನಡೆಸಿರುವರು. ಜಾಗೃತಿಯು ಚನ್ನಾಗಿದೆ. ಇವರೀಗ ಬಾಗಲಕೋಟೆ, ಬೀಳಗಿ, ಗುಳೇದಗುಡ್ಡ, ಗಲಗಲಿ, ಹುನಗುಂದ ಮೊದಲಾದ ಊರುಗಳನ್ನು ಸಂದರ್ಶಿಸಿದರು. ಚಡಚಣದಲ್ಲಿ ಇಂಡೀ ತಾಲೂಕ ಕಾಂಗ್ರೆಸ ಕಮೀಟಿಯು ಸ್ಥಾಪಿತವಾಯಿತು; ಮತ್ತು ಖಾದೀ ಪ್ರಸಾರ ಮಂಡಳವೊಂದು ಸ್ಥಾಪಿತವಾಯಿತು. ತಾಳೀಕೋಟಿ, ಮುದ್ದೇಬಿಹಾಳಗಳ ಕಡೆಗೆ ಶ್ರೀಯುತರು ಹೋದರು.

ಶಿರ್ಸಿಯಲ್ಲಿ ಗಸಿಯು ಸೋಮವಾರದಿನ ಕೋಡಕಣಿ, ವಿಜಾರ್ಣ, ಬಗೀರ, ಹೆಗಡೆ ಮುಂತಾದ ಗ್ರಾಮಗಳಲ್ಲಿ ೫೦೦-೬೦೦ ಜನರು ಸೇರಿ ಜಂಗಲ ಕಾಯದೆ ಮುರಿದರು. ೮ನೆಯ ತಾರೀಖ ದಿನ ಇಲ್ಲಿಯ ಅಸ್ಪೃಶ್ಯರ ಸಭೆ ಸೇರಿ ಮೋಚೀ ಜನರು, ಸಮಗಾರ ಜನರು ತಾವು ಇನ್ನೆಂದೂ ಸೆರೆ ಸಿಂದೀ ಕುಡಿಯುವದಿಲ್ಲವೆಂದೂ, ಕುಡಿದರೆ ಸಾಮಾಜಿಕ ಬಹಿಷ್ಕಾರ ಹಾಕಬಹುದೆಂದೂ ಗೊತ್ತು ಮಾಡಿದ್ದಾರೆ.

ಸಿದ್ದಾಪುರದಲ್ಲಿ ಜಂಗಲಕಾಯದೆ ಮುರಿದದ್ದಕ್ಕಾಗಿ ನಾಲ್ವತ್ತು ಜನರನ್ನು ಹಿಡಿದು ೩೮ ಜನರನ್ನು ಬಿಟ್ಟು ಇಬ್ಬರನ್ನು ಶಿರ್ಸಿಗೆ ಒಯ್ದಿರುತ್ತಾರೆ.

ಬನವಾಸಿಯಲ್ಲಿ ಕೆಲಸ ಮಾಡುತ್ತಿದ್ದ ಸತ್ಯಾಗ್ರಹಿಗಳಾದ ಶ್ರೀ ಎರೆಶೀಮೆಯವರನ್ನೂ ೧೧೭ನೇ ಕಲಮಿನ ಪ್ರಕಾರ ಹಿಡಿದಿರುವರು.

ಕುಮಠಾ ತಾಲೂಕಿನ ಹೊಳೆಗದ್ದೆಯಲ್ಲಿ ೬೦೦-೭೦೦ ಜನರು ಜಂಗಲಕಾಯದೆ ಮುರಿದರು ಇಬ್ಬರನ್ನು ಹಿಡಿದರು.

ಹಾನಗಲ್ಲಿನಲ್ಲಿ ರಾವಬಹಾದ್ದೂರ ಕಂಬಳಿಯವರು 'ಓಟ ಹಾಕಿರಿ', ಎಂದು ಹೋಗಿದ್ದರು ಅಲ್ಲಿ 'ಸಗಣಿ', ಸನ್ಮಾನವು ಸಿಕ್ಕಿತು.

ಬೆಳಗಾವಿ ಜಿಲ್ಹೆಯ, ಚಿಕ್ಕೋಡಿ ಗೋಕಾಕ ಮೊದಲಾದ ಭಾಗಗಳಲ್ಲಿ ಕೌನ್ಸಿಲರು ನಮ್ಮ ಪ್ರತಿನಿಧಿಗಳಲ್ಲವೆಂದು ಸಹೀ ತೆಗೆದುಕೊಳ್ಳುವ ಕಾರ್ಯ ಜೋರಿನಿಂದ ನಡೆದಿದೆ.

ನವಲಗುಂದ ತಾಲೂಕಿನಲ್ಲಿ ಪ್ರಚಾರಕಾರ್ಯಕ್ಕಾಗಿ ಹೊರಟ ಸ್ವಯಂಸೇವಕರು ಅಳಗವಾಡಿಗೆ ಹೋದಕಾಲಕ್ಕೆ, ಸಭೆಯಾಯಿತು. ಆಗ ಪೋಲೀಸ ಪಾಟೀಲ ಫಕೀರಗೌಡರು ಫೌಜದಾರ ಜಾಧವರ ಕಡೆಗೆ ಇವರನ್ನು ಒಯ್ದರು. ಜಾಧವರು ಇವರನ್ನು ಎರಡು ತಾಸಿನ ವರೆಗೆ ಕೂಡಿಸಿಕೊಂಡು, ಹೆಸರು ಹೇಳಿರೆಂದು ತ್ರಾಸುಕೊಟ್ಟು ಕೊನೆಗೆ ನಿರುಪಾಯನಾಗಿ ಬಿಟ್ಟುಬಿಟ್ಟನು. ನವಲಗುಂದ ತಾಲೂಕಿನಲ್ಲಿ ಪ್ರಚಾರ ಕಾರ್ಯವು ಜೋರಿನಿಂದ ನಡೆದಿದೆ.

ಶ್ರೀ. ಹೊಸಮನಿ ತಿಪ್ಪಣ್ಣನವರು, ಶ್ರೀ ಕರಮರಕರರು ರೋಣ ತಾಲೂಕಿನಲ್ಲಿ ಪ್ರಚಾರ ಕಾರ್ಯಕ್ಕೆ ಹೋಗಿದ್ದಾರೆ. ರೋಣ ಸವನಗಲ್ಲ ನರಗುಂದ ನವಲಗುಂದ, ಅಣ್ಣಿಗೇರಿ ಮೊದಲಾದ ಊರುಗಳಲ್ಲಿ ಸಭೆಗಳಾದವು. ಜಾಗೃತಿಯು ವಿಶೇಷವಾಗಿದೆ.

ಸಾತಾರಾ ಜಿಲ್ಹೆಯಲ್ಲಿ ರೈತರ ಬಂಡಾಯದ ಭಯ.

ರೈತರನ್ನು ಶಿಕ್ಷಿಸುವದಕ್ಕೆ ಪೋಲೀಸರ ಪ್ರಯಾಣ

ಸಾತಾರಾ ಜಿಲ್ಹೆಗೆ ಸೇರಿದ ಇಸ್ಲಾಮಪೂರದ ಗುಡ್ಡಗಾಡಿನಲ್ಲಿ ರೈತರು ಕತ್ತಿ ಬಂದೂಕುಗಳನ್ನು ಕೂಡಿಹಾಕಿ; ಬ್ರಿಟಿಶ ಸರಕಾರದ ಕೂಡ ಪ್ರತ್ಯಕ್ಷ ಯುದ್ಧ ಮಾಡುವ ಸಿದ್ಧತೆ ನಡೆಸಿದ್ದಾರೆಂದೂ, ಇವರಿಗೆ ಕೊಲ್ಹಾಪೂರ ಸಂಸ್ಥಾನದ ಮರಾಟರೂ ಸಹಾಯವಾಗಿ ಅಲ್ಲಿ ಕೂಡಿಕೊಂಡಿದ್ದಾರೆಂದೂ ಸಾತಾರಾದ ಕಲೆಕ್ಟರರೂ, ಪೋಲೀಸ ಸುಪರಿಂಟೆಂಡೆಂಟರೂ ಸರಕಾರಕ್ಕೆ ರಿಪೋರ್ಟ ಮಾಡಿದ್ದರಿಂದ, ಪುಣೆಯಲ್ಲಿ ಕಾಯಮ ಸೈನ್ಯದ ದಳದಿಂದ ಸ್ಪೆಶಲಾಗಿ ಭರತಿ ಮಾಡಿದ್ದ ಬಿಳಿಯರ ಸೇನೆಯ ಪೋಲೀಸ ಪಡೆಯಲ್ಲಿಯ ನೂರು ಜನರನ್ನು ಬಂದೂಕುಗಳನ್ನು ಕೊಟ್ಟು ಲಾರಿಗಳ ಮೇಲಿಂದ ಇಸ್ಲಾಮಪೂರಕ್ಕೆ ಕಳಿಸಿದ್ದಾರೆ.

ಚುನಾವಣೆಯಲ್ಲಿ ದಿವಾನ ಬಹಾದ್ದೂರರ ಕೂಡ ಭಂಗಿಯ ಕುಸ್ತಿಯು.

ಅಕ್ಟೋಬರದ ಮಧ್ಯದಿಂದಾಗುವ ಕೌನ್ಸಿಲ ಚುನಾವಣೆಗೆ ದಿವಾನ ಬಹಾದ್ದೂರ ಚಿಂತಾಮಣಿ ಮೊದಲಾಗಿ ನಾಲ್ವರು ಉಳಿದ ಕಾಲದಲ್ಲಿ ಪ್ರಸಂಶರೆಂಬವರು ಉಮೇದವಾರರಾಗಿದ್ದಾರೆ. ಇವರಿಗೆ ಪ್ರತಿಸ್ಪರ್ಧಿಯಾಗಿ, ಇವರನ್ನು ಚಾಣಿಸಲು ಮುಲ್ಲೋ ಎಂಬ ಹೆಸರಿನ ಭಂಗಿಯನ್ನು ನಿಲ್ಲಿಸಿದ್ದಾರೆ. ಕರ್ನಾಟಕದ ಕಾಂಗ್ರೆಸ ಕಮೀಟಿಯವರಿಗೆ ಈ ವಿಚಾರ ಸೂಚಿಸಿದ್ದರೆ ಚುನಾವಣೆಗೆ ಬಹಿಷ್ಕಾರ ಹಾಕುವ ಅಗತ್ಯವೇ ಉಂಟಾಗುತ್ತಿದ್ದಿಲ್ಲ.

ಶಿಕ್ಷಕ ಸುಫಕವಾನುಚರರ ದೆಸೆಯಿಂದ ಜಾಹೀರನಾಮೆ.

—(೦)—

ಮುಂಬಯಿ ಸರಕಾರದವರು ಶಿಕ್ಷಕರ ಒಗ್ಗೆ ಒಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದು, ಸದ್ಯದ ಚುನಾವಣೆಯು ಮುಟ್ಟಿಗಿದ್ದ ಭಾಗವನ್ನಷ್ಟೇ ಇದರಡಿ ಕೊಡುತ್ತೇವೆ.

ಕಾಯದೆಮಂಡಳದ ಚುನಾವಣೆಯಲ್ಲಿ ಯಾವದೇ ಪ್ರಕಾರದ ಭಾಗ ತಕ್ಕೊಳ್ಳಕೂಡದು. ಉಮೇದವಾರರ ಪರವಾಗಿಂದ ಖಟಪಟಿಯನ್ನು ಮಾಡಕೂಡದು. ತಮ್ಮ ವಜನು ಉಪಯೋಗಿಸಿ ಅವರ ಹಿತಾಹಿತವನ್ನು ಹೇಳಬಾರದು. ಮತ ಕೊಡುವ ಅಧಿಕಾರವಿದ್ದರೆ ಸುಮ್ಮನೆ ಹೋಗಿ ಮತ ಕೊಡಬೇಕು. ಯಾರಿಗೆ ಮತ ಕೊಟ್ಟೆನೆಂಬದನ್ನು ಗುಪ್ತವಾಗಿಡಬೇಕು.

ಈ ಪ್ರಕಾರ ಸರಕಾರದ ಜಾಹೀರನಾಮೆ ಇದ್ದರೂ, ಮತ ಕೊಡಬೇಕೆಂದು ಪೋಲಿಂಗ ಸ್ಟೇಶನಕ್ಕೆ ಹೋಗಬೇಕಾಗುತ್ತದೆ. ಆಗ ಆ ಮತ ಕೆಡಿಸಲಿಕ್ಕೆ ಸಹ ಬರುತ್ತಾರೆ. ಎಲ್ಲ ಚೀಟಿಗಳ ರಾಶಿ ಹಾಕಿ ಎಣಿಸುವದರಿಂದ, ಇಂಥವರು ಹೀಗೇ ಮತ ಕೊಟ್ಟರೆಂದು ಯಾರಿಗೂ ತಿಳಿಯುವದಿಲ್ಲ. ಚಿತ್ರಗುಪ್ತರಿಗೆ ಸಹ ಅಸಾಧ್ಯವಾದ ಮಾತು. ಪರಿಸ್ಥಿತಿಯ ಮೂಲಕ ಪೋಲಿಂಗ ಸ್ಟೇಶನಕ್ಕೆ ಹೋಗುವಸಂಭವರು ಸದ್ಬುದ್ಧಿಯ ಉಪಯೋಗ ಮಾಡುವರೆಂದು ತಿಳಿಯುತ್ತೇವೆ.

ಪೋಲಿಸ ಮತ್ತು ಪುಂಡುಗಾರರ ಸಮಕುಸ್ತಿಯಾಯಿತು.

—(೦)—

ಬಂಗಾಲದಲ್ಲಿರುವ ಖುಲ್ನಾ ಪಟ್ಟಣದಲ್ಲಿ ಕಾಂಗ್ರೆಸದ ಚಳವಳಿಯು ಸಮಯ ಸಾಧಿಸಿ ಪುಂಡ ಜನರು ದಂಗೆ ಮಾಡಿದರೆಂದು ಪೋಲಿಸರು ಇವರ ಮೇಲೆ ಗುಂಡು ಹಾಕಿ ಒಬ್ಬನನ್ನು ಯಮನೂರಿಗೆ ಅಟ್ಟಿದರು. ಇದರ ಮುಯ್ಯವೆಂದು ದಂಗೆಗಾರರು ಗಡಂಗ ಸುಟ್ಟು ಲೂಟಿ ಮಾಡಿದರು. ಇಬ್ಬರ ಬಲವೂ ಸರಿಯಾಯಿತು. ಸುಧನ್ವನ ಮೂರು ಬಾಣಗಳನ್ನು ಅರ್ಜುನನು ಕತ್ತರಿಸಿದಂತೆಯೂ, ಅರ್ಜುನನು ಮೂರೇ ಬಾಣಗಳಲ್ಲಿ ಸುಧನ್ವನನ್ನು ಕೊಂದಂತೆಯೂ ಹೇಳುವಂತಾಯಿತು.

ಕ್ವೆಟ್ಟಾದ ಸರಹದ್ದಿನಲ್ಲಿ ಬ್ರಿಟಿಶ ಸರಕಾರದ ಪೋಲಿಸ ಖಾತೆಯಲ್ಲಿ ಸೇರಿದ್ದ ೧೬ ಜನ ಅಫ್ರಿದಿಗಳು ಬಂದೂಕು ಮತ್ತು ಕಾಡತೂಸು ತಕ್ಕೊಂಡು ಸರಹದ್ದು ದಾಟಿ ಗಪ್ಪ ಹೇಳಿಸಿದರು. ಕಾಬೂಲ ಸರಕಾರದವರು ಇವರನ್ನು ಹಿಡಿದು, ಕಂದಹಾರದಲ್ಲಿ ಇಟ್ಟಿದ್ದಾರೆಂದು ವರ್ತಮಾನ ಬಂದಿರುತ್ತದೆ.

ಒಡಂಬಡಿಕೆ ಮುರಿಯಿತು.

—(೦)—

ಈ ಮೊದಲೇ ಭವಿಷ್ಯ ಮಾಡಿದಂತೆ ಒಡಂಬಡಿಕೆ ಮುರಿಯಿತು. ಅದಕ್ಕುಂಟಾದ ಕಾರಣಗಳು.

ಕಾಂಗ್ರೆಸದ ಮತ-

೧ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವರಾಜ್ಯ ದೊರೆಯಬೇಕು. ಇಂಗ್ಲಿಷರ ಸಂಬಂಧ ತಪ್ಪಬೇಕೆಂದು ಕಾಂಗ್ರೆಸ ಹೇಳಿದ ಕೂಡ ಇಂಗ್ಲಿಷರ ಸಂಬಂಧ ಹೋಗತಕ್ಕದ್ದು.

ಲಾರ್ಡ ಆಯರ್ವಿನ-

ಹಿಂದುಸ್ಥಾನಕ್ಕೆ ಆದಷ್ಟು ಹೆಚ್ಚಿಗೆ ರಾಜ್ಯಕಾರಭಾರದಲ್ಲಿ ಹಕ್ಕು ದೊರೆಯುವದು.

೨ ಕಾಂಗ್ರೆಸ-

ಹಿಂದುಸ್ಥಾನದ ಎಲ್ಲ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡತಕ್ಕದ್ದು. ಲಾಹೋರ ಮತ್ತು ಬಂಗಾಲದ ಆರೋಪಿಗಳ ಹೊರತು ಎಲ್ಲರ ಬಿಡುಗಡೆಯಾಗಬೇಕು.

ಲಾರ್ಡ ಆಯರ್ವಿನ-

ಅದನ್ನು ಉದಾರತನದಿಂದ, ಪ್ರತಿಯೊಬ್ಬ ವ್ಯಕ್ತಿಯ ವಿಚಾರವನ್ನು ವ್ಯಕ್ತಿಸ್ವವಾಗಿ ಮಾಡಲಿಕ್ಕೆ ಇಲಾಖಾ ಸರಕಾರಗಳಿಗೆ ಸಿಫಾರಸು ಮಾಡುವೆವು.

೩ ಕಾಂಗ್ರೆಸ- ಉಪ್ಪಿನ ಕರವನ್ನು ತೆಗೆದು ಹಾಕಬೇಕು.

ಲಾರ್ಡ ಆಯರ್ವಿನ-

ಇದು ಕಾಯದೆಯ ಪ್ರಶ್ನ ಪ್ರಮುಖರ ಕೂಡ ಮಾತಾಡುವೆವು. ಸಾಯಮನ ಕಮೀಟಿಯ ಶಿಫಾರಸಿನ ಪ್ರಕಾರ ಇವು ಇಲಾಖೆಗಳ ಸರಕಾರದ ವಿಷಯವಾಗುವದು; ಉತ್ಪನ್ನದ ದೊಡ್ಡ ಬಾಬು ಬಂದು ಮಾಡಲಿಕ್ಕಾಗುವದಿಲ್ಲ. ಇದಕ್ಕೆ ಪ್ರತಿಯಾಗಿ ಉತ್ಪನ್ನದ ಬಾಬು ತೋರಿಸಬೇಕಾಗುತ್ತದೆ.

೪ ಕಾಂಗ್ರೆಸ- ಗಡಂಗ, ವಿಲಾಯತಿಯ ಅರಿವೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವ ಅಧಿಕಾರವಿರಬೇಕು.

ಲಾರ್ಡ ಆಯರ್ವಿನ-

ಜನರಿಗೆ ತ್ರಾಸವಾಗುತ್ತದೆಂದು ಕಂಡುಬಂದಲ್ಲಿ, ಅದನ್ನು ಬಂದು ಮಾಡಿಸುವ ಅಧಿಕಾರವನ್ನು ಸರಕಾರದವರು ತಮ್ಮ ಸ್ವಾಧೀನದಲ್ಲಿಟ್ಟುಕೊಳ್ಳುವರು.

೫ ಕಾಂಗ್ರೆಸ- ಈ ಚಳವಳಿಯಲ್ಲಿ ರಾಜೀನಾಮೆ ಕೊಟ್ಟವರಿಗೆ ತಿರುಗಿ ಕೆಲಸ ಕೊಡಬೇಕು.

ಲಾರ್ಡ ಆಯರ್ವಿನ-

ಕೆಲಸ ತೆರವಾದಂತೆ, ವ್ಯಕ್ತಿಗಳ ಅಪರಾಧದ ವಿಚಾರ ಮಾಡಿ, ಯೋಗ್ಯರೆನಿಸಿದವರಿಗೆ ಕೊಡುತ್ತಾ ಹೋಗುವೆವು.

ಇದೇ ಪ್ರಕಾರ ಇನ್ನು ಕೆಲ ಶರ್ತುಗಳಿವೆ. ಲಾರ್ಡ ಆಯರ್ವಿನಸಾಹೇಬರು ಇವಕ್ಕೆ ಸಮಾಧಾನವೆನಿಸುವಂಥ ಆಶ್ವಾಸನ ಕೊಡದ್ದರಿಂದ, ಸರಕಾರದವರು ಬೇಕಾದಂಥ ದಬ್ಬಾಳಿಕೆ ನಡಿಸಲಿ; ಈಗಿನ ಚಳವಳಿಯನ್ನು ನಿಲ್ಲಿಸಲಾಗದೆಂದು ಹೇಳಿ ಮಹಾತ್ಮರೂ, ಬೇರೆ ಮುಖಂಡರೂ ಒಡಂಬಡಿಕೆಯ ಶರ್ತುಗಳನ್ನು ನಿರಾಕರಿಸಿದ್ದಾರೆ.

ಮುಂಬಯಿಯ ಎರಡು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ವಿಜಯ.

—(೦)—

ಮುಂಬಯಿಯಲ್ಲಿ ವಿಲ್ಸನ ಮತ್ತು ಝೇವಿಯರವೆಂಬೆರಡು ಕಾಲೇಜುಗಳು ಮಿಶನರಿ ಜನರದಾಗಿವೆ. ಝೇವಿಯರದಲ್ಲಿ ವಿದ್ಯಾರ್ಥಿಗಳು ಗಣಪತಿ ಕೂಡಿಸಿದರು. ಇದು ಕ್ರಿಶ್ಚನ್ನ ಕಾಲೇಜು. [illegible] ಪರೋಪಕಾರವೆಂದು ಕ್ರಿಶ್ಚನ್ನೇತರರನ್ನು ಕಾಲೇಜದಲ್ಲಿ ತಕ್ಕೊಳ್ಳುತ್ತೇವೆ. ವಿಗ್ರಹಪೂಜೆ ನಡೆಯಕೂಡದೆಂದು ಪ್ರಿನ್ಸಿಪಾಲರು ಬಹಳ ಗೋಳು ಬಡೆದರು. ವಿದ್ಯಾರ್ಥಿಗಳು ಜಗ್ಗದೆ ನಿಲ್ಲಲು, ಕಡೆಗಾಗಿ ನಿಮ್ಮ ದೇವರ ಪೂಜೆ ಮತ್ತು ನಿತ್ಯ ಸೇವೆ ಮಾಡಿಕೊಳ್ಳಿರೆಂದು ಅಪ್ಪಣೆ ಕೊಟ್ಟರು.

ವಿಲ್ಸನದ ವಿದ್ಯಾರ್ಥಿಗಳು ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂದರು. ಒಳಗಳಲ್ಲಿ ಹಚ್ಚಿರಿ. ಹೊರಗಡೆ ಬೇರೆ ಮಾತ್ರ ಬೇಡೆಂದರು. ಪ್ರಿನ್ಸಿಪಾಲ, ಪ್ರೊಫೇಸರರು ಕೂಡಿದಾಗ, ಸಾವಿರಾರು ವಿದ್ಯಾರ್ಥಿಗಳು ನೆರೆದು, ಅದರಲ್ಲಿ ಒಬ್ಬನು ಗೋಡೆ ಹತ್ತಿ ತಪ್ಪದ ವೇಳೆ ಹೋಗಿ, ಯೂನಿಯನ್ನ ಜಾಕ ಜಾಗದಲ್ಲೇ ನಾಡಗುಡಿಯನ್ನು ನಿಲ್ಲಿಸಿದನು. ಈ ಪೆಟ್ಟಿನಿಂದ ಪ್ರಿನ್ಸಿಪಾಲರು ಕಾಲೇಜವನ್ನೇ ಬಂದು ಮಾಡಿದ್ದಾರೆ. ಇವೆರಡು [illegible] ತರುಣ ವಿದ್ಯಾರ್ಥಿಗಳು ರಾಷ್ಟ್ರಕಾರ್ಯ ಮಾಡುವಂತೆ ಪ್ರತ್ಯಕ್ಷವಾಗಿ ಉತ್ತೇಜನ ಕೊಟ್ಟಂತಾಯಿತು.

ಪುನಃ ಪಕ್ಡಗಿರಿ.

ಶ್ರೀ ಕೌಜಲಗಿ ಹನಮಂತರಾಯರೂ, ಶ್ರೀ ಮಂಗಳವೇಢೆ ಶ್ರೀನಿವಾಸರಾಯರೂ ತುರಂಗದಿಂದ ಹೊರಬಿದ್ದು ೧೫ ದಿವಸವಾಯಿತು. ತುರುಂಗದಿಂದ ಬಂದ ಕೂಡಲೆ, ಇವರು ವಿಜಾಪೂರ ಜಿಲ್ಲೆಯಲ್ಲಿ ಕಾಂಗ್ರೆಸ ಕಾರ್ಯ ಪ್ರಾರಂಭಿಸಿದರು. ಇವರನ್ನು ಹಿಡಿಯುವದಕ್ಕೆ ಸರಕಾರಕ್ಕೆ ಎಷ್ಟೂ ದಿವಸಗಳಾಗಲಿಲ್ಲ. ಶ್ರೀನಿವಾಸರಾಯರನ್ನು ಬಾಗಲಕೋಟಿ ಮತ್ತು ಶ್ರೀ ಹನಮಂತರಾಯರನ್ನು ಬಾಗಲಕೋಟಿಯ ವಾರಂಟಿನಿಂದ ಬೆಳಗಾವಿಯಲ್ಲಿ ಹಿಡಿದಿರುತ್ತಾರೆ.

ಧಾರವಾಡ ಜಿಲ್ಲೆಯೊಳಗಿನ ಮುಂಬಯಿ ಕಾಯದೆ ಕೌನ್ಸಿಲ ಮತದಾರ ಜನರಿಗೆ–

ಪ್ರಿಯ ಬಂಧು ಭಗಿನಿಯರೇ–

ತಮ್ಮೆಲ್ಲರನ್ನೂ ಭೆಟ್ಟಿಯಾಗಬೇಕೆಂಬ ಇಚ್ಛೆ ಇತ್ತು. ಆದರೆ ದುಡ್ಡಿನ ಕೊರತೆಯಿಂದಲೂ, ವೇಳೆ ಇಲ್ಲದ್ದರಿಂದಲೂ ತಮ್ಮೆಲ್ಲರನ್ನು ಭೆಟ್ಟಿಯಾಗಲಿಕ್ಕೆ ಶಕ್ಯವಿಲ್ಲ.

ನಾನು ವಿದ್ಯಾರ್ಥಿ ಇದ್ದಾಗಿನಿಂದ ಜನರ ಹಕ್ಕುಗಳಿಗಾಗಿ ಸರಕಾರದವರ ಸಂಗಡ ಬಡದಾಡುತ್ತ ಬಂದಿದ್ದೇನೆ. ಜನರ ವಿದ್ಯೆಯ ಸಲುವಾಗಿ ಶಾಲೆಗಳನ್ನು ಸ್ಥಾಪಿಸುವದಕ್ಕಾಗಿ ದುಡಿದಿರುತ್ತೇನೆ. ಜಾತಿ ಜಾತಿಗಳಲ್ಲಿ ಇರುವ ಮತ್ಸರವನ್ನು ಕಡಿಮೆ ಮಾಡುವದಕ್ಕಾಗಿ ಪ್ರಯತ್ನಿಸಿದ್ದೇನೆ. ಯಾವತ್ತೂ ಜನರಿಗೆ ಸಮಾನ ಹಕ್ಕುಗಳಿರಬೇಕೆಂದು ನನ್ನ ಮತ. ಹಿಂದುಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ದೊರಕಿಸುವದು ನಮ್ಮ ಧ್ಯೇಯ.

ರಾ. ಬ. ಕಂಬಳಿಯವರಾಗಲೀ ಮಿ|| ಜೋಗರಾಗಲೀ ರಾಜೀನಾಮೆಯನ್ನು ಕೊಟ್ಟರೆ ನಾನೂ ರಾಜೀನಾಮೆ ಕೊಡಲಿಕ್ಕೆ ಸಿದ್ಧನಿದ್ದೇನೆಂದು ಕಾಂಗ್ರೆಸ ಕಮೀಟಿಯವರ ಕೈಯಲ್ಲಿ ರಾಜೀನಾಮೆಯ ಅರ್ಜಿಯನ್ನು ಕೊಟ್ಟಿದ್ದೆ. ಮಿ|| ಜೋಗರು ಬಿಡಲಿಕ್ಕೆ ಒಡಂಬಡುವದಿಲ್ಲೆಂದೂ, ರಾ. ಬ. ಕಂಬಳಿಯವರನ್ನು ಕೇಳುವದು ನಿರರ್ಥಕವೆಂದೂ ನಾನು ಕೊಟ್ಟ ರಾಜೀನಾಮೆಯನ್ನು ಕಾಂಗ್ರೆಸ ಕಮೀಟಿಯವರು ನನಗೆ ತಿರುಗಿ ಕೊಟ್ಟಿರುತ್ತಾರೆ.

ತಾವು ನನ್ನನ್ನು ಆರಿಸಿದ ಪಕ್ಷಕ್ಕೆ ಈ ನಮ್ಮ ಹಳೇ ಹುದ್ದರಿಗಳಿಗಿಂತ ಏನಾದರೂ ಹೆಚ್ಚಿನ ಕೆಲಸವನ್ನು ಮಾಡಬೇಕೆಂಬ ಉಮೇದಿಯುಂಟು. ಪೋಟಿಂಗ ಪೇಪರಿನ ಮೇಲೆ ನನ್ನದು ಎರಡನೇ ಖಾನೆಯು.

ನನ್ನ ಗುರ್ತು ಎತ್ತು.

ಮಹಾದೇವಪ್ಪ ಶಿದ್ದಪ್ಪ ಕೇಸರಿ		X X

ತಾವೆಲ್ಲರೂ ಎತ್ತಿನ ಹಿಂದೆ ಇರುವ ಬರಿಯ ಖಾನೆಯಲ್ಲಿ × × ಹೀಗೆ ಎರಡು ಗುರ್ತುಗಳನ್ನು ಮಾಡಿ ತಮ್ಮ ವೋಟುಗಳನ್ನು ನನಗೆ ಕೊಟ್ಟು ತಮ್ಮ ಸೇವೆಯನ್ನು ಮಾಡುವ ಸುಸಂಧಿಯನ್ನು ತಂದು ಕೊಡುವಿರೆಂದು ನಂಬಿದ್ದೇನೆ.

ತಾ|| ೪-೯-೧೯೩೦ **ಮಹಾದೇವಪ್ಪ ಶಿದ್ದಪ್ಪ ಕೇಸರಿ.**

ಧಾರವಾಡ ಬಿ. ಎ. ಎಲ್ಎಲ್. ಬಿ. ವಕೀಲ ಧಾರವಾಡ

ನೋಟೀಸು

ಸಾವಿ(ತವರ ಮನೆಯ ಹೆಸರು ಪರಿವ್ವ) ಕೋಮ ಕಲ್ಲಪ್ಪಾ ಒಡವಟ್ಟಿ ಸಾಕಿನ ಬೆಳಗಲಿ ಹಾಲಿವಸ್ತಿ ಹತ್ತಿಮತ್ತೂರ ಈಕೆಗೆ–

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡಿದ ಕಲ್ಲಪ್ಪಾ ತಂದಿ ಚನ್ನಬಸಪ್ಪಾ ಒಡವಟ್ಟಿ ಸಾ|| ಬೆಳಗಲಿ ತಾಲೂಕ ಶಿಗ್ಗಾವಿ ಈತನು ಈ ನೋಟೀಸಿನಿಂದಾ ತಿಳಿಸುವದೇನಂದರೆ–

ನೀನು ನನ್ನ ಮದವ್ಯ ಹೆಂಡತಿಯಾಗಬೇಕು ನೀನು ದೊಡ್ಡವಳಾದ ಬಳಿಕ ಎರಡು ವರ್ಷ ನನ್ನ ಕೂಡ ಬಾಳೆ ಮಾಡಿದಿ ಅನಂತರ ನಿನ್ನ ಸೋದರತ್ತಿ ಸಾವಂತ್ರೆವ್ವ ಮತ್ತು ಶಿದ್ರಾಮಗೌಡಾ ಈರನಗೌಡಾ ಪೊಲೀಸಪಾಟೀಲ ಇವರ ಭುಲಥಾವಣಿಯಿಂದ ನನ್ನ ಕಡೆ ಬಿಟ್ಟಗಿ ಪ್ರಪಂಚ ಮಾಡದೆ ದುಸುಮುಸು [illegible] ಹೋದಿ ಈ ಮಧ್ಯಕಾಲ ನನಗೆ [illegible] ಹೋಳೀಹಬ್ಬದ ಮುಂದೆ ನಿನ್ನ ಸೋದರತ್ತಿ ಸಾವಕ್ಕ ಮತ್ತು ನಿನ್ನ ಸೋದರಮಾವ ಶಿದ್ರಾಮಪ್ಪ ಇವರು ಬಂದು– ನಾಲ್ಕು ದಿವಸ ಇಟ್ಟುಕೊಂಡು ಬುದ್ಧಿಹೇಳಿ ಕಳಿಸತೇವೆ ನಮ್ಮ ಸಂಗಡ ಕಳಿಸೆಂದರು ನಾನು ಕಳಿಸಿದನು ಆದರೆ ಆ ಮೇಲೆ ನನ್ನ ಮನೆಗೆ ತಮ್ಮ ಆಪಶಿಗೆ ಉಪದೇಶ ಮಾಡಿಕೊಂಡರು ಈ ಮೂವರೂ ನನಗೆ ತಿಳಿಯದಂತೆ ಕರೆಯಲಿಕ್ಕೆಂದು ಬಂದೆನು ಆಗ ನಿನ್ನ [illegible] ತನ ತಿಳಿದು ಬಂತು ಥಡಬಡಿಸಿದಲಿದಲಿಯಾಯಿತು ಆದರೂ ಕಳಿಸುವದಿಲ್ಲೆಂದರು ಕಾರಣ ಈ ನೋಟೀಸು ಕೊಡಬೇಕಾಯಿತು ಇದು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಮಾಲವಸ್ತು ದಾಗೀನೆ ಅಂದರೆ–

೧ ಬಂಗಾರದ ಒಳೇ ಜೋಡು ತೊಲಿ ಐದು ಕಿ|| ರೂ|| ೭೧೦
೨ ಬಂಗಾರದ ಸರಿಗಿ ತೊಲೆ ಎಂಟು ,, ರೂ|| ೧೬೫
೩ ಬೆಳ್ಳಿ ಪಟ್ಟಿ ಕಿ|| ರೂ|| ೧೦
೪ ಬೆಳ್ಳಿ ಚಾಕಾ ಕಿ ರೂ| ೮

ಇಷ್ಟು ತಗೊಂಡು ಬಂದು ಸುಖಿತ ಬಾಳೆವೆ ಮಾಡಿಕೊಂಡಿರಬೇಕು ಇದಕ್ಕೆ ತಪ್ಪಿದರೆ– ನಿನ್ನ ಹಾಗು ದಾಗೀನೆಗಳ ದೆಸೆಯಿಂದಾ ನಿನ್ನ ಮೇಲೆ ಮತ್ತು ನಿನಗೆ ಪುಸಲತ ಕೊಟ್ಟ ಸಾವಕ್ಕಾ ಶಿವ್ರಾಮಗೌಡಾ ಇವರ ಮೇಲೆ ಕಾಯದೆ ಪ್ರಕಾರ ದಿವಾಣಿ ಮತ್ತು ಫೌಜದಾರಿಯಲ್ಲಿ ಇಲಾಜ ಮಾಡುವೆನು ಮತ್ತು ನೀನು ಈ ನೋಟೀಸಿನ ವಿರುದ್ಧ ಯಾರನ್ನಾದರೂ ಉಡಿಕೆ ಮಾಡಿಕೊಂಡರೆ– ನಿನ್ನ ಮೇಲೆ ಉಡ್ಕಿ ಆಗುವವನ ಮೇಲೆ ಮತ್ತು ಅದಕ್ಕೆ ಸಹಾಯ ಮಾಡುವವರ ಮೇಲೆ ಏಕದಂ ಫೌಜದಾರೀ ಮಾಡುವೆನು ನೀನಾಗಿ ಹೋದ್ದರಿಂದ ನಿನಗೆ ಪೋಟಗಿ ದೊರೆಯಲಾರದು. ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲೆ ಇದೆ ತಿಳಿಯುವದು ತಾ|| ೮ ಸಪ್ಟಂಬರ ೧೯೩೦

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಕಲ್ಲಪ್ಪಾ ಚನ್ನಬಸಪ್ಪಾ ಒಡವಟ್ಟಿ ಈತನ ಕೈಯು ಇರುತ್ತದೆ

ಈ ಪತ್ರವನ್ನು ಅಣ್ಣಾಚಾರ್ಯರ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R. N. B [illegible]

ಸಾಪ್ತಾಹಿಕ — ಬೆಲೆ ೧ ಆಣೆ

ಸಂಪಾದಕರು:- [illegible]

ವರ್ಷ ೧೩ | ಧಾರವಾಡ ಬುಧವಾರ ತಾರೀಖು ೧೦ನೇ ಸಪ್ಟಂಬರ ೧೯೩೦ (ಸಂಚಿಕೆ ೩೦

ಓಟು ಹಾಕಬೇಡಿರಿ!

(ಧಾಟಿ:- ಇಂಗ್ಲೀಷ ವಿದ್ಯೆಯು ನಮಗೊಂದು ಗಿಲಟು)

ಓಟಿನ ಹಾವಳಿಯ ನವ ಪ್ರಕಾರ |
ಕೌನ್ಸಿಲ್ಲು [illegible] ಒಳಿ [illegible] || ಪಲ್ಲ ||
ಕೇಳುವೆ ಕೇಳಿರಿ ಗುಟ್ಟನು ನಿಮಗೆ |
ಒದಬೇಡಿ ಪೋಲಿಂಗ ಸ್ಟೇಶನ್ನ ಒಳಗೆ ||
ದೂರಿಂದ ಕಂಡೋದು ಹೋಗಿರಿ ಮನಿಗೆ |
ಮತ ಕೊಡಬೇಡಿ ಕೌನ್ಸಿಲಿಗೆ ನಿಂತವ್ರಿಗೆ || ೧ ||
ಉಮೇದ್ವಾರ ಮಾತಿಗೆ ಆಗಬ್ಯಾಡ ಮರುಳು |
ಆರಿಸಿ ಬರೋತನಕ ಉಮೇದ ಭಾಳು ||
ಆರಿಸಿ ಬಂದಮ್ಯಾಗ ಬುದ್ಧಿಯು ಹಾಳು |
ಪಟೇಲು ಕಳೆಸರು ನಿಮ್ಮಯ ಗೋಳು || ೨ ||
ನಿಮ್ಮ ಕಣ್ಣಿಗೆ ಉಗ್ಗಿ ಮಾಟದ ಮಣ್ಣು |
ಕಟ್ಟಾಯ ಆಸೆ ತೋರುವರಣ್ಣಾ |
ಕೌನ್ಸಿಲಿನಲಿ ಕಲ್ಲು ಸಾಧ್ಯದು ತಿನ್ನ |
ತಿಳಿದಿಲ್ಲ ಮೋಟನು ಕೊಡದವ ಜಾಣ || ೩ ||
ಮನಿಸ್ಯಾನ ಗೊಂಬಿಗೆ ಕೋಟ ಹಾಕುವರೆ |
ಇವರೆಂತ ಸುಧಾರಣ್ಯ ಸಾರಿದೇಳ್ತಾರೆ ||
“ಕೌನ್ಸಿಲ್ಲಗೊಳಗೋದು ಗೊಂಬಿ ಆಗ್ತಾರೆ |
ಕೆಲಸ್ಲಿನ ಮಾಡೀತೆ ಗೊಂಬಿ ಏನಾರ!” || ೪ ||
ಎಷ್ಟು ಹೋಗುವದಂತೆ ಕೌನ್ಸಿಲಿಗೆಷ್ಟು |
ಎಷ್ಟಿಗೇನ್ನೊತ್ತು ಈ ಕೌನ್ಸಿಲ್ಗಳಿಗೆಷ್ಟು ||
ಅವರ ಮಾತಿಗೆ ಕೊಡಬೇಡಿ ಕಿಮ್ಮತ್ತು |
ಕೌನ್ಸಿಲ್ಲಿ ಗೋದ್ರ್ಯಾಗಕಾರ ಕಾಲೆಷ್ಟು || ೫ ||
ಮಿದ್ವಾನಿಯಾದರೆ ಏನು ಮಾಡ್ತೈತಿ |
ಕೌನ್ಸಿಲ್ಲ ಕಯ್ಯಾಗ ಅಂಕುಶ ಐ ||
ಸರಕಾರ ಮಾರಿಗೆ ಚಾರಿ ಬೀಸ್ತೈತಿ |
ಹಾಗನು ಹೊಯ್ಯುತ್ತ ತಿರಿಗಿ ಬರತೈತಿ || ೬ ||
ಕೌನ್ಸಿಲ್ಲು ಇವರಿಗೆ ಹಾಕಿದ ಟೋಪಿಗೆ |
ಮನಿಯಾಗ ಮುಚ್ಚಿಟ್ಟು ನಿಂತ್ರು ಕೌನ್ಸಿಲಿಗೆ ||
ತೊಳೆತೊಳೆದ್ಹಾಂಗ ರೂಡಿಯು ಕೌನ್ಸಿಲ್ಲೊಳಗೆ |
ನಿಮಗೆ ಹಾಕ್ತಾರವ್ರು ಬಣ್ಣದ ಟೋಪಿಗೆ || ೭ ||

ಪುಟ ೮

ಕೌನ್ಸಿಲ್ ಬಹಿಷ್ಕಾರ

ಕೌನ್ಸಿಲಿಗೊಳಗಾಗದಿರಾ । ರಾಯರೆ ನೀವು ।
ಕೌನ್ಸಿಲಿಗೊಳಗಾಗದಿರಾ ।ಪಲ್ಲ॥

ಕೌನ್ಸಿಲುಗಳು ನಮ್ಮ । ಹಿಂಸಿಸಿ ಬಹುಪರಿ ।
ಧ್ವಂಸಮಾಡುವವೆಂಬ । ಅಂಕನರಿತು ನೀವು ।ಅನು॥

ಲೋಕಮಾನ್ಯರು ಮೊದಲು । ಕೌನ್ಸಿಲಿನೊಳು ।
ಏಕೋಭಾವದಿ ಸ್ಪೀಗಳು ॥
ಸಾಕು ಸಾಕೆನಿಸಿ ಹೊರ । ನೂಕಿಯುವರನ ಮ ।
ಲೌಕಿಕಗಳಿಸಿದ ನೌಕರ್ಮೋಜಿನ ಕೆಟ್ಟು ॥೧॥

ಜನಸಂದರನ ತತ್ವವು । ಲೋಕದೊಳಿಲ್ಲ ।
ಪಸರಿಸಲೆನೆ ಗಾಂಧಿಯು ॥
ಉಸುರಿದ ಮಾತನ್ನು ಹುಸಿಗೆಯ್ದು ಮುಗಿಬಿದ್ದ ।
ಅಸಮಧೀರರು ಕಾಲು । ಕಸಮಾಡಿ ಹೊರಬಿದ್ದ ॥೨॥

ಚಿತ್ತರಂಜನದಾಸರು । ಲಾಲಾ ಲಜ ।
ಪತ್ತರಾಯರು ಮುಖ್ಯರು ॥
ಸ್ವಾತ್ಯಮಾಲವಿಯರು । ಮತ್ತೆ ವಿಠ್ಠಲಭಾಯಿ ।
ಪ್ರತ್ಯಕ್ಷನೋಡಿ ಕೈ । ಎತ್ತಿಬೇಡೆನ್ನುವ ॥೩॥

ಬೆಲ್ಲದ ಪುಟದ ಕೊಟ್ಟ । ಸುಂಬಳಖಾರ ।
ಮುಳ್ಳ ಹಾಸಿಗೆಂದು ನಿಟ್ಟ ॥
ಜೊಳ್ಳು ಮೇಲ್ಮುಚ್ಚಳ । ಪುಳ್ಳ ಆಳವಾದ ಕೊಳ್ಳ ।
ದಂತಿರಲು । ಪೊಳ್ಳ ಶಾಸನದಿ ಸುಳ್ಳೆ ॥೪॥

ಶುದ್ಧ ವಂಶದಿ ಜನಿಸಿ । ನೀವು ಒಳ್ಳೇ ।
ಬುದ್ಧಿಯುಳ್ಳವರೆನಿಸಿ ॥
ಮುದ್ದುಮೋಹನನನುಸು । ರಿದ್ದ ತತ್ವಗಳನ್ನು ಒದ್ದು
ದೇಶವ ಕೊಲ್ಲೆ ।

ಬದ್ಧ ಕಂಕಣರಾಗಿ ॥೫॥

ವಿಜಯ.

ಶುಕ್ಲ ವಿಕ್ರಮ ವರ್ಷ ೧೯೮೭ ಭಾದ್ರಪದ ವದ್ಯ ೪

ಇಂದಿನ ಕೌನ್ಸಿಲ ಚುನಾವಣೆಯ ಬಹಿಷ್ಕಾರ.

ಇಂದು ವೋಟು ಕೊಡುವ ದಿವಸವು. ಧಾರವಾಡ ಜಿಲ್ಲೆಯ ಪರೀಕ್ಷೆಯಾಗುವ ದಿವಸವು. ಪೈರು ಬರುವದು; ಕೆಡುವದು ಇಂದೇ. ಎಲ್ಲ ಮತದವರು ವೋಟು ಕೊಡಬಾರದೆಂದು ಠರಾವು ಮಾಡಿದ್ದಾರೆ. ಮುಸಲಮಾನರು ಸಹ ಅದೇ ಹಾದಿ ಹಿಡಿದಿದ್ದಾರೆಂಬದು ಹೆಚ್ಚಿನ ಸಂಗತಿಯು. ಮೈ. ನ್ಯಬಜಿಯವರು ಈ ಪ್ರಾಂತದಲ್ಲಿ ಬಹು ದೊಡ್ಡ ಪುರಸ್ಕಾರ ಮಾಡಿದ್ದರು. ಹಿತ್ತಲದ ಗಿಡ ಔಷಧ ಬರುವದಿಲ್ಲ. ಅರಿಯದವರು ಅದೇ ಮದ್ದು ಕೊಟ್ಟರೆ ಅದನ್ನು ಅಮೃತವಾಗಿ ಭಾವಿಸುತ್ತಾರೆಂಬುದಕ್ಕೆ ಇದೊಂದು ಸಾಕ್ಷಿಯು. ಪಿಂಡವಿದ್ದಷ್ಟು ಪ್ರಕೃತಿಗಳುಂಟು. ಆನೆ ಹೋದರೂ ಬಾಲದ ದೆಸೆಯಿಂದ ಹೊಡೆದಾಡಬೇಕೆಂದು ಉತ್ಸುಕರಾಗುವಂಥವರು ಜಗತ್ತಿನಲ್ಲಿರುವವರೇ ಇರುತ್ತಾರೆ. ಅಂಥವರಿಗಾಗಿ ಬಹಿಷ್ಕಾರ ಹಾಕಬೇಕೆಂದು ಕಾಂಗ್ರೆಸಿನ ಅಪ್ಪಣೆಯು. ಕಾಂಗ್ರೆಸವೆಂದರೆ ಸಾಮಾನ್ಯವಲ್ಲ. ಅದೇ ಭಾರತೀಯರ ಮತ ಹೇಳುವ ಸಂಸ್ಥೆಯೆಂದು ಲಾರ್ಡ ಮೋರ್ಲೆಯವರು ಒಡಂಬಟ್ಟು, ೧೯೧೯ರಲ್ಲಿ ಎಲ್ಲ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಿದರು ಹತ್ತು ವರ್ಷಗಳ ನಂತರ ಅದೇ ಸಮಯದ ಪುನರಾವೃತ್ತಿಯಾಯಿತು. ಹತ್ತು ವರ್ಷಗಳ ಹಿಂದೆ ಸರಕಾರದವರು ಕೊಟ್ಟದ್ದನ್ನು ಮವಾಳರು ಅಂಗೀಕರಿಸಿದರು. ಆದರೆ ಕಾಂಗ್ರೆಸದವರು ಧಿಕ್ಕರಿಸಿ ತುರಂಗವಾಸಿಯಾದರು. ಈ ಸಾರೆ ಅಳರಸರು ತಕ್ಕ ಸ್ವಾತಂತ್ರ್ಯ ಕೊಡುವ ಮುಂಚಿತವಾಗಿಯೇ ತುರಂಗ ಕಾಣುತ್ತಿದ್ದಾರೆ. ಜೀವದಿಂದಿದ್ದ ಆಗಿನ ಮುಖಂಡರೆಲ್ಲರೂ ತುರಂಗದಲ್ಲಿದ್ದಾರೆ. ಆಗ ಮವಾಳರಾಗಿದ್ದವರಲ್ಲಿ ಎಷ್ಟೋ ಮುಖಂಡರು ರಾಷ್ಟ್ರೀಯರಾಗಿ ತುರಂಗದಲ್ಲಿರುವರು. ಇವರ ಸಂಖ್ಯೆಯು ದಿನಾಲು ಬೆಳೆಯುತ್ತಲಿದೆ. ಕಾಂಗ್ರೆಸದಿಂದ ಅಲಿಪ್ತರಾಗಿರುವಂಥ ಮದ್ರಾಸದ ಸತ್ಯಮೂರ್ತಿಯವರು ಹಿಂದುಸ್ಥಾನವು ಜೀವಂತವಿರುವತನಕ ಅದು ಕಾಂಗ್ರೆಸವನ್ನು ಮರೆಯದು; ಕಾಂಗ್ರೆಸ ಮಾಡಿದ ಉಪಕಾರ ತೀರದು ; ಎಂದು ಸಾರಿ ಸಾರಿ ಹೇಳಿದ್ದಾರೆ. ಇಂಗ್ರೇಜಿ ಸರಕಾರದ ಸೂತ್ರಧಾರ ಪ್ರತಿನಿಧಿಗಳಾದ ಲಾರ್ಡ ಅಯರ್ವಿನಸಾಹೇಬರು ಸ್ವರಾಜ್ಯದ ಜೊತೆಗೆ ಕೈಹಾಕಬೇಡಿರಿ. ಬಹಳ ದೂರ ಬೆಳೆದು ಹೋದ ಟೊಂಗೆಗಳನ್ನು ಮಾತ್ರ ಕತ್ತರಿಕೊಳ್ಳಿರೆಂದು ಹೇಳಿದ ಭಾಷಣವು ಎಲ್ಲರೇ ಬಿತ್ತಂಬಡಿಕೆ ನುರಿದು ಹೋಯಿತು. ಸ್ವರಾಜ್ಯದೊರೆಯುವ ಆಶೆ ಬಹು ದಿವಸದ ಕನಸಾಯಿತು. ಪಂಡಿತರೇ ಮೊದಲಾದ ಧರ್ಮಾತ್ಮ, ಪುಣ್ಯಾತ್ಮರಿಗೆ ತುರಂಗವಾಸದ ಕಾಲಮರ್ಯಾದೆಯುಂಟು. ಮಹಾತ್ಮರಿಗೆ ಸಾಯುವ ತನಕ, ಚಿರಂಜೀವಿಯಾಗಿದ್ದರೆ ಸೂರ್ಯ ಚಂದ್ರರಿರುವತನಕ ಬಂದಿವಾಸವು ಅಜ್ಞಾತವಾಸ ತಪ್ಪದು. ಆದರೂ ಅವರು ದೇಶಕಾರ್ಯವೆಂದು ತುರಂಗದಲ್ಲಿ ಆಯುಷ್ಯ ಕಳೆಯಲು ಸಿದ್ಧರಾಗಿದ್ದಾರೆ. ಇದರಂಥ ಯೋಗ ಸಾಧನೆಯು ಇನ್ನೊಂದಾದರೂ ಉಂಟೇ? ಮಹಾತ್ಮರ ತಪಸ್ಸೆತ್ತ, ವೋಟುಕೊಡಿರೆಂದು ಹೇಳಿಕೊಳ್ಳಲು ಹೋದಾಗ ಕೊಳ್ಳು ಕಾಣದೆ ಬಂದ ದೇಶಭಕ್ತಿಯುಗಳೆಂಬುದರ ಅಜಾಗಲ ವರ್ತನವೆತ್ತ. ನಮಗಾದ ಅಪಮಾನದ ಬಗ್ಗೆ ನಿಮಗೆ ಕಣ್ಣೀರು ಹಾಕಬೇಕಾದೀತೆಂದು ರಾ. ಬ. ಕಂಬಳಿಯವರ ಹೇಳಿಕೆಯು. ಮುಂದೇಕೆ ಕಣ್ಣೀರು ಹಾಕುವದು? ಭಾರತಾಂಬೆಯು ನೂರು ವರ್ಷಗಳಿಂದ ಹಾಕುತ್ತಾ ಬಂದ ಕಣ್ಣೀರಿನಿಂದಲೇ ಗುರುತಿದ್ದಪ್ಪನ ಹೊಂಡ ತುಂಬಿ ಹೋಗಿದೆ. ಸಾವಿರ ಸಂಖ್ಯೆಯಿಂದ ಗಡಗಡೆ ಹಚ್ಚಿದರೂ, ಇದು ನೀರಲ್ಲ; ಕಣ್ಣೀರೆಂದು ಜನರು ಅದನ್ನು ಉಪಯೋಗಿಸುವದೇ ಇಲ್ಲ. ಕೌನ್ಸಿಲಕ್ಕೆ ಹೋಗಪಟ್ಟವರು ಬೇಕಾದಷ್ಟು ವಾಗಾಡಂಬರ ಹೇಳಿಕೊಳ್ಳಲಿ; ಅದಕ್ಕೇನೂ ಸ್ವಾರಸ್ಯವಿಲ್ಲ. ಲಾರ್ಡ ಅಯರ್ವಿನಸಾಹೇಬರು ಉಪ್ಪಿನ ಕಾಯದೆಯನ್ನು ರದ್ದು ಮಾಡಲಿಕ್ಕೆ ಸಿದ್ಧರಿಲ್ಲ. ಕರೆ ತಿಂದಿಯು ಪಿಕೆಟಿಂಗ ಮಾಡಲಿಕ್ಕೆ ಶುಕ್ರನೀತಿ ಹೇಳಿದ್ದಾರೆ. ನಿಮಗಾವದನ್ನೂ ಸ್ವತಂತ್ರ ವೃತ್ತಿಯಿಂದ ಮಾಡಗೊಡುವದಿಲ್ಲ. ಯಾವದನ್ನು ಮಾಡಿದ ಮಹೋದಯದಂಥ ಪರ್ವಣಿ ಸಾಧಿಸಿದರೆ ಸರ್ಟಿಫಿಕೇಟು ಕೊಟ್ಟು, ಅದನ್ನು ತಮ್ಮಂತೆ ಮಾಡಿಕೊಳ್ಳುವರು. ಈ ರೀತಿಯಾಗಿ ನಡೆಯುವ ರಾಜ್ಯಕಾರಭಾರದಲ್ಲಿ ಭಾಗ ತಕ್ಕೊಳ್ಳುವ ಪ್ರತಿನಿಧಿಗಳನ್ನು ಕಳಿಸುವದೆಂದರೆ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡಂತಾಗುತ್ತದೆ. ಕಾರಣ ಮತದಾರರು ಎಚ್ಚರಾಗಿ ವ್ಯಕ್ತಿ ಹಿತವನ್ನು ಹಿಂದಿಟ್ಟು ದೇಶ ಹಿತ ನೋಡುವದೇ ಧರ್ಮವು. ಈ ಕಾಸ್ತು ಧರ್ಮತ್ಯಾಗ ಮಾಡಿದರೆ ಸ್ವಧರ್ಮವೂ ಹೋಗುವದು; ಕಲಿಕಾಲವೆನ್ನುತ್ತಿರುವದು ಇದೇ!!!

ಪಂಡಿತ ಮೋತಿಲಾಲರ ಬಿಡುಗಡೆ.

ತುರಂಗದಲ್ಲಿ ಪಂಡಿತ ಮೋತಿಲಾಲರಿಗೆ ವಿಶೇಷ ಜಡ್ಡುಗಳು ಉಲ್ಬಣಿಸಲು ಸರಕಾರದವರು ಇವರ ಪ್ರಕೃತಿಯ ನಿದಾನ ಮಾಡಲು ಡಾಕ್ಟರರ ಒಂದು ಬೋರ್ಡ ನೇಮಿಸಿದರು. ಅವರು ಪಂಡಿತರನ್ನು ಬಂಧಮುಕ್ತ ಮಾಡಬೇಕೆಂದು ಶಿಫಾರಸು ಮಾಡಿದರು. ತಮಗೆ ಸರಕಾರದ ಉಪಕಾರ ಬೇಡೆಂದು ಪಂಡಿತರು ಅಗ್ಗೇ ತೀಸಿದರು. ಆದರೂ ಅವರನ್ನು ಸೋಮವಾರ ಪ್ರಾತಃಕಾಲದಲ್ಲಿ ಬಂಧಮುಕ್ತ ಮಾಡಿದರು. ಬಿಡುವಕಾಲಕ್ಕೆ ಯಾವ ಕರಾರು ಹಾಕಿರುವದಿಲ್ಲ. ಪಂಡಿತರು ಬೇಗನೆ ಪೂರ್ಣ ಗುಣಹೊಂದಿ, ದೇಶಕಾರ್ಯದಲ್ಲಿ ಭಾಗ ತಕ್ಕೊಳ್ಳಲೆಂದು ದೇವರನ್ನು ಪ್ರಾರ್ಥಿಸುತ್ತೇವೆ.

ಕರ್ನಾಟಕ ಸತ್ಯಾಗ್ರಹ ಮಂಡಳದಿಂದ ಶಿರ್ಶಿಯ ಸುದ್ದಿ

ಮಹನೀಯರೇ !

ನಿನ್ನಿನ ದಿವಸ ಶಿರ್ಶಿಯಲ್ಲಿ ಅಸ್ಪೃಶ್ಯರ ಸಭೆ ನೆರೆದಿತ್ತು. ಮೋಚೀಜನರು ಮತ್ತು ಸಮಗಾರ ಜನರು ಕೂಡಿದ್ದರು. ಎರಡೂ ವರ್ಗದವರು ಕೆಳಗೆ ಬರೆದ ಠರಾವುಗಳನ್ನು ಪಾಸುಮಾಡಿದರು.

೧ ನಮ್ಮ ಸಮಾಜದ ಸುಧಾರಣೆಗೋಸ್ಕರ ನಾವು ಪಂಚಾಯತಿಯನ್ನು ಸ್ಥಾಪಿಸಿಕೊಳ್ಳುತ್ತೇವೆ. ಈ ದಿವಸದಿಂದ ಒಂದು ವಾರದೊಳಗಾಗಿಯೇ ನಮ್ಮ ಪಂಚರನ್ನು ಆರಿಸಿಕೊಂಡು ಪಂಚರ ಹೆಸರುಗಳನ್ನು ಕಾಂಗ್ರೆಸಕಮಿಟಿಗೆ ಕಳಿಸುತ್ತೇವೆ.

೨ ಈ ದಿವಸದಿಂದ ನಮ್ಮ ಸಮಾಜಗಳಲ್ಲಿ ರೂಢವಾಗಿರುವ ಸೆರೆ, ಶಿಂದಿ ಮುಂತಾದ ಮಾದಕ ಪದಾರ್ಥಗಳ ಸೇವನೆಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುತ್ತೇವೆ. ಈ ಠರಾವಿಗೆ ತಪ್ಪಿ ಯಾರಾದರೂ ವರ್ತಿಸಿದರೆ ಅವರನ್ನು ನಮ್ಮ ಸಮಾಜದಿಂದ ಬಹಿಷ್ಕರಿಸುತ್ತೇವೆ.

೩ ಈ ರೀತಿಯಾಗಿ ಬಹಿಷ್ಕರಿಸಲ್ಪಟ್ಟವರು ಪಶ್ಚಾತ್ತಾಪಪಟ್ಟು ಪಂಚರೆದುರಿಗೆ ಇನ್ನೊಮ್ಮೆ ಇಂಥ ಅಪರಾಧ ಮಾಡುವದಿಲ್ಲೆಂದು ವಚನ ಕೊಟ್ಟರೆ ಅವರ ಕಡೆಯಿಂದ ೫ ರೂಪಾಯಿ ತಪ್ಪುದಂಡವನ್ನು ತಕ್ಕೊಂಡು ತಿರುಗಿ ಸಮಾಜದಲ್ಲಿ ತೆಗೆದುಕೊಳ್ಳತಕ್ಕದ್ದು.

೪ ದಂಡದ ಹಣವನ್ನು ಕಾಂಗ್ರೆಸಕಮಿಟಿಯಲ್ಲಿ ಜಮಾ ಮಾಡತಕ್ಕದ್ದು. ಮತ್ತು ಅದರ ವಿನಿಯೋಗವು ಅಸ್ಪೃಶ್ಯತಾ ನಿವಾರಣಾ ಕೆಲಸಕ್ಕಾಗಿಯೇ ಆಗತಕ್ಕದ್ದು.

ಮತ್ತು ಸೋಮವಾರ ೧೫ನೇ ಸಪ್ಟಂಬರ ದಿವಸ ಕೋಡಕಣಿ, ಮೀರಜಾನ, ಬರ್ಗಿ, ಹೆಗಡೆ ಮುಂತಾದ ಗ್ರಾಮಗಳಲ್ಲಿ ೫೦೦-೬೦೦ ಜನರು ಸೇರಿ ಜಂಗಲ ಕಾಯದೆಭಂಗಮಾಡಿದರು. ಒಟ್ಟು ೭ ಜನರನ್ನು ಕೈದುಮಾಡಿದ್ದಾರೆ.

ಸಿದ್ದಾಪುರದಲ್ಲಿ ಜಂಗಲ ಕಾಯದೇಭಂಗ ಮಾಡಿದ್ದಕ್ಕಾಗಿ ೪೦ ಜನರನ್ನು ದಸ್ತಗಿರಿ ಮಾಡಿದರು, ಆ ಮೇಲೆ ಕೆಲ ಜನರನ್ನು ಬಿಟ್ಟುಬಿಟ್ಟರು. ಇಬ್ಬರನ್ನು ಮಾತ್ರ ಇಲ್ಲಿಗೆ ತಂದಿರುತ್ತಾರೆ

ಬನವಾಸಿಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ. ಹರಿಕೇರಿ ಎಂಬ ಸತ್ಯಾಗ್ರಹಿಯನ್ನು ೧೧೭ನೇ ಕಲಮಿಗನುಸಾರವಾಗಿ ಕೈದುಮಾಡಿದ್ದಾರೆ.

ಕುಮಟಾ ತಾಲೂಕಿನ ಹೊಳೇಗದ್ದೆ ಎಂಬಲ್ಲಿ ೫೦೦-೬೦೦ ಜನರು ಜಂಗಲ ಕಾಯದೆಭಂಗ ಮಾಡಿದರು. ಇಬ್ಬರನ್ನು ಮಾತ್ರ ಕೈದುಮಾಡಿದ್ದಾರೆ.

ಇಂದು ಧಾರವಾಡದಲ್ಲಿ ಪಿಕೆಟಿಂಗ.

—(೦)—

ಚುನಾವಣೆಗಾಗಿ ಈ ಊರಲ್ಲಿ ಆರು ವಾರ್ಡುಗಳುಂಟು. ಇವುಗಳ ಮುಂದೆ ಸ್ತ್ರೀ ಪುರುಷ ಸ್ವಯಂಸೇವಕರು ಪಿಕೆಟಿಂಗ ಮಾಡುವರು.

ನಿಶ್ಚಯದಂತೆ ಉಷಃಕಾಲದಲ್ಲಿ ನಗರ ಸಂಕೀರ್ತನೆ ಹೊರಡುವ ಬದಲು ಬೆಳಗಾದ ಮೇಲೆ ವೋಟು ವೋಟು ಕೊಡಬೇಡಿರೆಂಬ ನುಡಿಗಳನ್ನೇ ಊರ ತುಂಬ ಗದ್ದರಿಸುವರು.

ವೋಟು ಕೊಡಬೇಡಿರಿ. ಬಹಿಷ್ಕಾರ ಹಾಕಿರೆಂಬದ್ದಾಗಿ ಬರೆದ ಶೀಟುಗಳನ್ನು ಹಚ್ಚಿದ ಗಾಂಧೀ ಟೊಪ್ಪಿಗೆಯ ಸ್ವಯಂಸೇವಕರು ಊರತುಂಬ ತಿರುಗಾಡುವರು.

ಉಮೇದವಾರರಿಗೂ, ಮತದಾರರಿಗೂ ಮೋಟಾರನ್ನು ಕೊಡಬಾರದೆಂದು ಮೋಟಾರಿನವರು ಗೊತ್ತು ಮಾಡಿದ್ದಾರೆ.

ಹಿರೇಕೇರೂರ ತಾಲೂಕಿನಲ್ಲಿ ಪೋಲಿಂಗ ಪ್ರಾರಂಭವಾಗುವದೆಂದು ನಿನ್ನೆ ಸಾಯಂಕಾಲದಲ್ಲಿ ಬಂದ ವರ್ತಮಾನವಾಗಿದೆ. ವೈರಬದವರೂ ನಮ್ಮೂರಲ್ಲಿ ಹಣಕಿ ಹಾಕಬೇಡಿರೆಂದು ಉಮೇದವಾರರ ಏಜಂಟರಿಗೆ ಹೇಳಿದ್ದಾರೆ. ಅನೇಕ ಸ್ಥಳಗಳಲ್ಲಿ ಈ ಸೋನೆಗೆ ವೋಟಿನ ಹುಳ್ಳಿಯಾಗುವದೆಂದು ಕಾಂಗ್ರೆಸ ಕಮಿಟಿಗೆ ತಿಳಿದುಬಂದಿದೆ.

ಧಾರವಾಡದಲ್ಲಿ ಪಿಕೆಟಿಂಗ

ಶಿಕಾರಪುರದಿಂದ ೩೦ ಸ್ವಯಂಸೇವಕರ ಆಗಮನ

ಇಂದು ಈ ಊರಲ್ಲಾಗುವ ಚುನಾವಣೆಯ ವೇಳೆಯಲ್ಲಿ ಪಿಕೆಟಿಂಗ ಮಾಡಲು ಚನ್ನವ್ವನ ಶಿಕಾರಪುರದಿಂದ ಅಲ್ಲಿಯ ದಳಪತಿ ಶ್ರೀ. ನೇಮಿಚಂದ್ರ ಇವರ ಮುಖಂಡತ್ವದಲ್ಲಿ ಮೂವತ್ತು ಜನ ಸ್ವಯಂಸೇವಕರು ಇಲ್ಲಿಗೆ ಬಂದಿದ್ದಾರೆ. ಇವರ ಬರುವಿಕೆಯಿಂದ ಇಲ್ಲಿಯ ಪಿಕೆಟಿಂಗಕ್ಕೆ ಇಂದು ಬಹಳೇ ಕಳೆಬರುವದು.

ಯಾರಿಗೂ ಮತ ಕೊಡಬೇಡಿರಿ.

—(೦)—

ಶ್ರೀ. ಕೇಸರಿಯವರು ಕಾಂಗ್ರೆಸದವರ ಕಡೆಗೆ ಕೊಟ್ಟ ರಾಜೀನಾಮೆಪತ್ರಗಳನ್ನು ಶ್ರೀ. ಜೋಗರಾಯರು, ರಾಜೀನಾಮೆ ಕೊಡಲು ಒಪ್ಪದ್ದರಿಂದ, ತಿರುಗಿ ತಕ್ಕೊಂಡಿರುವರು. ಅವರೇನೇ ಮಾಡಿಕೊಳ್ಳಲಿ. ಜನರು ಮಾತ್ರ ಯಾವದೇ ಕಾರಣದಿಂದ ಮೋಸ ಹೋಗದೆ ಎಂ. ಜೋಗ, ಕೇಸರಿ, ಕಂಟಿ ಹಾಗೂ ಮುಸಲ್ಮಾನ ಉಮೇದವಾರರಿಗೂ ಮತ ಕೊಡಬಾರದಾಗಿ ಬಿನ್ನಹ.

೯-೯-೩೦ **ಸತ್ಯಾಗ್ರಹ ಮಂಡಳ.**

ಧಾರವಾಡ,

ಹೆಂಗಸರೂ ಗುಂಡು ಹಾರಿಸಲಿಕ್ಕೆ ಕಲಿತರು.

—(೦)—

ಡಾಕ್ಟರ ಮುಂಜೆಯವರು ವರ್ತಮಾನ ಕಾಲದ ಜಟ್ಟಿಯಾಗಿದ್ದಾರೆ. ಸ್ತ್ರೀ ಪುರುಷರು ಜಟ್ಟಿಯಂಥ ಸಾಮರ್ಥ್ಯವುಳ್ಳವರಾಗಬೇಕೆಂದು ಇವರ ಮತ. ಶಾಲೆ ಕಾಲೇಜುಗಳಲ್ಲಿ ಮಾತ್ರವಲ್ಲ; ಊರೂರಿಗೆ ಗರಡೀ ಮನೆಗಳಾಗಬೇಕೆಂದು ಕೌನ್ಸಿಲ ಮತ್ತು ಅಸೆಂಬ್ಲಿಯಲ್ಲಿ ಹೋರಾಡಿದಂಥವರು. ಈಗಂತೂ ಬಂದೂಕಿನ ಗುರಿ ಹೊಡೆಯುವ ಶಿಕ್ಷಣ ಕೊಡಬೇಕೆನ್ನುತ್ತಾರೆ. ಅದರ ಪ್ರಾರಂಭವನ್ನೂ ಮಾಡಿದರು. ಇವರು ಅಕೋಲೆಯಲ್ಲಿ ಇದರ ಪ್ರಾರಂಭೋತ್ಸವ ಮಾಡಿದರು; ತಾವು ಮೊದಲು ಹಾರಿಸಿದರು. ನಂತರ ಗಂಡಸರಿಂದ, ಅವರ ಕುಮಾರ್ತೆ ಹೆಂಗಸರಿಂದ ಹಾರಿಸಿದರು, ಶಸ್ತ್ರದ ಕಟ್ಟಳೆಯ ಹಾಗೆ ಗುಂಡು ಹಾರಿಸುವದು ಅಪರಾಧವು. ಆದರೂ ಡಾಕ್ಟರ ಸಾಹೇಬರು ಕಾಯದೆಭಂಗ ಮಾಡಿದರು ಈ ಮೊದಲು ಕಾಯದೆಭಂಗ ಮಾಡಿ, ಒಂದೇ ದಿವಸದ ಶಿಕ್ಷೆ ಹೊಂದಿದ್ದು ವಾಚಕರ ಸ್ಮರಣದಲ್ಲಿರಬಹುದು,

ಬೆಳಗಾವಿಯಲ್ಲಿ ಸತ್ಯಾಗ್ರಹದ ಜಯ.

—:(*):—

ಅನಂತ ಚತುರ್ದಶಿಯ ದಿವಸ ಸಾರ್ವಜನಿಕ ಗಣಪತಿಯ ವಿಸರ್ಜನೆಯ ದೊಡ್ಡ ಮೆರವಣಿಗೆ ಹೊರಟಿತು. ೧೫ ಸಾವಿರ ಸ್ತ್ರೀ ಪುರುಷರು ನೆರೆದಿದ್ದರು ವಾಜು ತಕ್ಕೊಂಡು ಮೆರವಣಿಗೆಯನ್ನು ಮುಂದೆ ಸಾಗಿಸಿರೆಂದು ಪೋಲೀಸರು ಬಂದರು. ಆರ್ಮೀ ಮತ್ತು ಬಂದೂಕ ಸಹಿತ ಸಜ್ಜಾಗಿ ಮೆರವಣಿಗೆಯನ್ನು ವಿರೋಧಿಸಬೇಕೆಂದರು. ವಾಜು ತಕ್ಕೊಳ್ಳುವದಿಲ್ಲೆಂದು, ಜನರು ಅಲ್ಲೇ ಸತ್ಯಾಗ್ರಹ ಮಾಡಿ, ಕೂತುಕೊಂಡರು. ಕಲೆಕ್ಟರರು ಬಂದರು. ಜನರು ಶಾಂತವಾಗಿರುವದನ್ನು ಕಂಡು ಪೋಲಿಸರಿಗೆ ಹೋಗಲಿಕ್ಕೆ ಹೇಳಿ, ಮೆರವಣಿಗೆ ಸಾಗಗೊಟ್ಟರು. ಹೀಗೆ ಗಾಂಧಿ ಮಹಾರಾಜರ ಜಯದಲ್ಲಿ ಸತ್ಯಾಗ್ರಹದ ವಿಜಯವಾಯಿತು.

ಮುಂಬಯಿಯಲ್ಲಿ ಗೋಲೀಬಾರು.

—(೦)—

ಇಬ್ಬರು ಸತ್ತರು; ಅನೇಕರು ಘಾಯವಾದರು.

—(೦)—

ಮುಂಬಯಿಯಲ್ಲಿ ಗಣೇಶ ವಿಸರ್ಜನೆಯ ದಿವಸ ಹಿಂದೂ ಮುಸಲಮಾನ ದಂಗೆಯಾಗಿ ಪೋಲೀಸರು ಗುಂಡು ಹಾಕಿದರು. ಇಬ್ಬರು ಸತ್ತರು; ಅನೇಕರು ಘಾಯವಾಗಿದ್ದಾರೆ.

ಮೋಟೇಬೆನ್ನೂರಲ್ಲಿ ಶ್ರೀಮತಿ ಪಂಜೇಕರರು

—(೦)—

ಮೋಟೇಬೆನ್ನೂರ ಗ್ರಾಮಕ್ಕೆ ಶ್ರೀಮತಿ ಕೃಷ್ಣಾಬಾಯಿಯವರು ಹೋಗಿದ್ದರು. ಅಲ್ಲಿ ಅವರ ವ್ಯಾಖ್ಯಾನವಾಯಿತು. ಅಲ್ಲಿ ಅವರು ಮಹಾತ್ಮರ ಪಥಕದಲ್ಲಿದ್ದ ಶ್ರೀ ಮೈಲಾರರ ಮಾತೋಶ್ರೀಯವರನ್ನು ಕಂಡು ಕುಶಲವಾರ್ತೆ ಕೇಳಿದರು ಎಂದು ಮೋಟೇಬೆನ್ನೂರ ತರುಣ ಸಂಘದವರು ತಿಳಿಸುತ್ತಾರೆ.

ಮೋಟೇಬೆನ್ನೂರಲ್ಲಿ ಜಂಗಲ ಕಾಯದೆಭಂಗ ಮಾಡುವ ಪೂರ್ವಸಿದ್ಧತೆ ನಡೆದಿದೆ.

ನಿರಾಧಾರ.

ಶ್ರೀಮತಿ ಕೃಷ್ಣಾಬಾಯಿ ಪಂಜೇಕರರು ಗೋಕಾವಿಗೆ ಹೋದಾಗ್ಗೆ, ಅವರ ಮೋಟಾರನ್ನು ಪುಂಡರು ತೆಗೆದುಕೊಂಡು ಹೋದರೆಂಬದು ನಿರಾಧಾರವಾದದ್ದೆಂದು ಪ್ರಸಿದ್ಧವಾಗಿದೆ.

ಬೇಕಾಯದೆಶೀರವಾಗುತ್ತದೆ ಜನರು ಸಾಲಕೊಟ್ಟು ಮುಣುಗಬಾರದೆಂದು ಅವರಿಗೆ ಮುಂಜಾಗ್ರತೆಯಾಗಿ ಈ ನೋಟೀಸಿನಿಂದ ಜಾಹೀರ ಮಾಡುತ್ತೇನೆ ಯಾರಾದರೂ ಸಾಲಕೊಟ್ಟು, ಮುಂದೆ ಕಾಯದೆ ಪ್ರಕಾರವೆಂದು ಕೋರ್ಟಿನಲ್ಲಿ ಇಲಾಜ ಮಾಡಿದರೆ- ಅದರ ದೋಷಾ ನನ್ನ ಹಾಗು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡೆಯಲಾರದು- ಇದು ನನ್ನ ಸ್ವಸಂಪಾದನೆಯ ಆಸ್ತಿ ಇದ್ದು ಆತನಿಗೆ ಹಿಸೆ ಇರುವದಿಲ್ಲ ನನ್ನ ಆಸ್ತಿ ವ್ಯವಸ್ಥಾ ನನ್ನ ಮನಸಿಗೆ ಬಂದಂತೆ ಮಾಡಲು ನಾನು ಸಂಪೂರ್ಣ ಮಾಲೀಕನಿರುತ್ತೇನೆ ಅಂತಾ ಜಾಹೀರ ಮಾಡಿದ ನೋಟೀಸು

ತಾ|| ೯ ಸಪ್ಟಂಬರ ೧೯೩೦ ನೆ ಇಸವಿ

ಸಹಿ- ಚನವೀರಯ್ಯಾ ಬಸವಣ್ಣಯ್ಯಾ ಕೋರಿ

ಜಾಹೀರ ನೋಟೀಸು

ಅಬ್ದುಲ್‌ರಹಿಮಾನ ವಲ್ಲದ ಹಾಜೀ ಮುಸಾಕ ಸಶೇಟ ಸಾಕೀನ ಬೆಳಗಾಂವ ಇವರ ಕಡೆಯಿಂದ ಎಲ್ಲ ಜನರಿಗೆ ತಿಳಿಸುವದರಲ್ಲಿ ಬರುತ್ತದಲ್ಲಾ- ವಿಜಾಪೂರ ಜಿಲ್ಹೆ ಮತ್ತು ಧಾರವಾಡ ಜಿಲ್ಹೆಗಳ ಪೈಕಿ ಬಾಗಲಕೋಟೆ, ಗುಳೇದಗುಡ್ಡ, ಇಳಕಲ್ಲ, ಕಮತಗಿ, ಶಿರೂರ ಮತ್ತು ಗದಗ ಇವುಗಳಲ್ಲಿರುವ ಶರೀ ಮತ್ತು ಶೇಂದಿ ಅಂಗಡಿಗಳ ಸನ್ ೧೯೨೯-೩೦ ಸಾಲಿನ ಬಾಬತ ಕಂಟ್ರಾಕ್ಟ ನಾವು ತಗೆದುಕೊಂಡಿದ್ದೆವು ಸದರ ಅಂಗಡಿಗಳ ಸನ್ ೧೯೨೯-೩೦ ಸಾಲಿನಲ್ಲಿ ನಮ್ಮ ತರ್ಫೆ ಕೆಲಸ ನಡಿಸಲಿಕ್ಕೆ ನಾವು ವಿ|| ಬಿ. ಎ. ಪಾರಖ B. A. Parakh ಧಾರವಾಡ ಸಾ|| ಇವರಿಗೆ ವಟ್ಟ ಮುಖತ್ಯಾರ ನೇಮಿಸಿದ್ದೆವು ಸನ್ ೧೯೨೯-೩೦ ಸಾಲಿನ ಅಖೈರ ಸದರೀ ವಟ್ಟ ಮುಖತ್ಯಾರ ಪತ್ರದ ಮುದ್ದತು ತೀರಿರುತ್ತದೆ ಅನಂತರಾ ಸದರೀಯವರಿಗೆ ನಾವು ನಮ್ಮ ತರ್ಫೆಯಿಂದ ಕೆಲಸ ಮಾಡಲಿಕ್ಕೆ ಮುಖತ್ಯಾರ ಪತ್ರ ಅಗರ ಯಾವದೇ ಪ್ರಕಾರದ ಅಧಿಕಾರ ಕೊಟ್ಟಿರುವದಿಲ್ಲ ಮತ್ತು ಆವರಿಗೆ ನಮ್ಮ ತರ್ಫೆ ಕೆಲಸ ಮಾಡಲಿಕ್ಕೆ ಏನೂ ಅಧಿಕಾರ ಇರುವದಿಲ್ಲ ಕಾರಣ ಸದರೀಯವರ ಕೂಡ ಯಾರಾದರೂ ಏನಾದರೂ ವ್ಯವಹಾರ ಮಾಡಿದಲ್ಲಿ ಅದರಿಂದ ನಾವು ಬಾಂಧಾಯಿಸಲ್ಪಡುವದಿಲ್ಲ ಅಂತಾ ಬರಕೊಟ್ಟ ಜಾಹೀರ ನೋಟೀಸು

ತಾ|| ೧೦-೮-೧೯೩೦ ನೇ ಇಸವಿ

ಸಹಿ- ಇಂಗ್ಲೀಷ ಅಬ್ದುಲ್‌ರಹಿಮಾನ ವ|| ಹಾಜೀ ಮುಸಾನ ಶೇಟ

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ಪಾರ ಪತದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂಜೀವನ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹೋಗುವ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇವೆಲ್ಲ ಕೇವಲ ವನಸ್ಪತಿಗಳ ಅಮೃತ ಪ್ರಸಾದ! ವ್ಯಸ್ಥರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯ ಬ್ಯಾಂಕ ಧಾರವಾಡ

[illegible] ಈ ಔಷಧ ಬೇಕಾದವರು ಯಾವ ವರ್ತಮಾನಪತ್ರದ ಜಾಹೀರಾತ ನೋಡಿ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೨ ವಿದ್ಯಾರ್ಥಿಗಳನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ಪ್ಹಿ. ಎಸ. ಇಟಗಿ.
ಮುನಸಫಕೋರ್ಟಿನ ಹತ್ತರ, ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದ ವ ಶಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಶಿ ಕೊಡುತ್ತೇವೆ

ಮತ್ತು ಚಲ್ಲರ ಫರನೀಚರ ಕೆಲಸ ಬೇಕಾದವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಸಾಪ್ತಾಹಿಕ ವಿಜಯ ಬೆಲೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಗುರುವಾರ ತಾರೀಖು ೧೧ ನೇ ಸಪ್ಟಂಬರ ೧೯೩೦ (ಸಂಚಿಕೆ ೨೦

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂದು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧ ಕೊಡಲಾಗಿದೆ. ಇದರ ಉಪಯೋಗದಿಂದ ಸಪ್ಪಗಿನ ಚರ್ಯೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು ಪೌರುಷತ್ವಹೀನ ದೇಹ, ಅನಿಶ್ಚಿತಸ್ವಭಾವ, ನಿಸ್ತೇಜತನವನ್ನೂ, ಹೇಡಿತನವನ್ನೂ ಅಂಜುಬುರಕತನ, ಅಕಾಲಮುಪ್ಪಿನಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕೈಕಾಲುಗಳುರಿಯೋಣ, ಉರಿಮೂತ್ರ, ಇಂದ್ರಿಯದ ಉರಿ ಪಿತ್ತವಿಕಾರ, ಅಗ್ನಿಮಾಂದ್ಯ ನಿದ್ರಾನಾಶ, ಮಲಾವರೋಧ, ಬೆನ್ನು ನೋಯಿಸೋಣ, ಟೊಂಕಸೂಲಿ, ಎಲ್ಲ ತರದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾ ವೀರ್ಯ ಮೊದಲಾದ ಏಳು ವೀರ್ಯಗಳು ವೃದ್ಧಿಯಾಗಿ ಇಂದ್ರಿಯ ಸ್ಥೈರ್ಯ ಅಶಕ್ತತೆಯು ನಷ್ಟವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟು ಶೂಲೆ, ಕೆಂಪು, ಹಾಗು ಬಿಳಿಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧತೊಲಿ ತೊಗೊಂಡ ಮೇಲೆ ಆಕಳ ಅಥವಾ ಎಮ್ಮಿಯ ಹಾಲನ್ನು ೧೦ ರಿಂದ ೨೦ ತೊಲಿಯವರೆಗೆ ತೊಗೋಬೇಕು. ಹತ್ತುದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೊ
ನಿಪ್ಪಾಣಿ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದ್ನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ದರ್ಜಿಸ್ಸಿನ ಪ್ರಕಾರ ತಿಂಗಳಾ ಕನಿಷ್ಟ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಷ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ್ ಸೊಸಾಯಟಿಯ ಅಳ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾ ಟ್ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವಕ್ಕಿ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ:
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿ ಕೊಳಿರಿ.

ಮ್ಯಾ ವಿಜಯ ಧಾರವಾಡ

ಬಹಾದ್ದೂರ ಧಾರವಾಡ

ಪಿಕೆಟಿಂಗಕ್ಕೆ ಸಂಪೂರ್ಣ ಯಶ

ಧಾರವಾಡದಲ್ಲಿ ನಿನ್ನಿನ ದಿವಸವಾದ ಕೌನ್ಸಿಲ ಬ ಷ್ಕಾರದ ಚುನಾವಣೆಯು ಕಾಂಗ್ರೆಸ ಧ್ಯೇಯಕ್ಕೆ ಪೂರ್ಣವಾಗಿ ಯಶ ತಂದುಕೊಟ್ಟಿತು. ಇಷ್ಟು ಶ ಬಂದೀತೆಂದು ನಾವಾರೂ ತಿಳಿದಿದ್ದಿಲ್ಲ. ಕ ನೆ ಏರಿ ಶ್ರೇಯ ಬಂದಿತು. ಧಾರವಾಡದಲ್ಲಿ ಸ ಕಾರೀ ಕಾಮದಾರರೇ ಹೆಚ್ಚು. ಅವರೆಲ್ಲರೂ ೋಟು ಮಾಡುವರೆಂದು ಉಮೇದವಾರರು ತಿಳಿದಿ ರು. ಆ ತಿಳುವಳಿಕೆಯಿಂದಾದಷ್ಟು ಧಂಶಭಗ್ನವು ನ್ನಾತರಿಂದಲೂ ಆಗಲಿಲ್ಲೆಂದು ಧಾರಾಳವಾಗಿ ಹೇಳಬಹುದು. ವೋಟು ಕೊಡತಕ್ಕ ರು ಹಿಂದೂ ಮುಸಲ್ಮಾನರಿಬ್ಬರೂ ಇದ್ದರು. ಎ ಡೂ ಜನಾಂಗದವರು ಉಮೇದವಾರರ ಸಂಪೂರ್ಣ ಆಶಾಭಂಗಮಾಡಿದರು; ಈ ಊರಲ್ಲಿ ಆರು ವಾರ್ಡಗಳು. ಕಾಟನ ಮಾರ್ಕೇಟಿನ ವಾರ್ಡಿನಲ್ಲಿ ನೂರಕ್ಕೆ ೯೦ರಷ್ಟು ಜನರು ಬ್ರಾಹ್ಮಣೇತರರಿದ್ದು . ೬೦ರಷ್ಟು ವೀರಶೈವರಿದ್ದಾರೆ. ಇವರ ವೋ ಗಳು ತಮಗೆ ಬೀಳುವವೆಂದು ರಾ. ಬ. ಕಂಬಳಿ ಕ್ಷದವರು ಬಹುವಾಗಿ ಅಪೇಕ್ಷಿಸಿದ್ದರು. ಅದು ಗ್ನ ಮನೋರಥವಾಯಿತು. ಆಕಾಶದಲ್ಲಿ ಕೋ ಕಟ್ಟಿದಂತಾಯಿತು. ಅಲ್ಲಿ ಬಂದಷ್ಟು ಯಶವು ನ್ನೆಲ್ಲಿಯೂ ಬಂದಿಲ್ಲ. ಅಲ್ಲಿ ಪೋಲೀಸ, ಪೋ ಲಿಂಗ ಆಫೀಸರ ಮತ್ತು ಪಿಕೆಟಿಂಗದ ಸ್ವಯಂಸೇ ವಕರ ಹೊರ್ತು ೧೦೦ ಯಾರ್ಡ ಅತ್ತ ಜನಕ ಹಾಯಲಿ ಲ್ಲ. ನಿರ್ಜನದ ಸಹರಾ ಅರಣ್ಯದ ಉಪಮೆ ಕೊಟ್ಟರೂ ಸಾಕು! ಹಾವೇರಿಯಲ್ಲಿ ವೀರಶೈವರು ಪ ಷತ್ತು ಕೂಡಿಸಿ, ಯಾರೂ ವೋಟು ಕೊಡಬಾರದೆಂದು ಮಾಡಿದ ಕ್ರಮಕ್ಕೆ ಪೂರಾ ಪ್ರತಿಫಲ ಬಂದಿರುವದು ಬರೆಯುವದಕ್ಕೆ ನಮಗೆ ಪರಮಾವಧಿ ಆನಂದವಾಗುತ್ತದೆ. ಹಳೇ ಮ್ಯುನಿಸಿಪಾಲಿಟಿಯ ಪೋಲಿಂಗದಲ್ಲಿ ರಾ. ಬ. ಕಂಬಳಿಯವರ ದೆಸೆಯಿಂದ ರಾವಬಹಾದ್ದೂರ ಡಿ. ಎಲ್. ಪಾಟೀಲರು ವೋಟು ಕೊಟ್ಟು, ಸ್ವಚ್ಛವಾದ ಬಿಳೇ ಬಟ್ಟೆಗೆ ಎಷ್ಟೋ ಸೂಜಿಯ ತುದಿಯಷ್ಟು ಕಪ್ಪು ಹಚ್ಚಿದಂತೆ ಮಾಡಿದರು. ಹಿಂದಿನ ಚುನಾವಣೆಯಲ್ಲಿ ಅವರ ದಾಕ್ಷಿಣ್ಯತ್ತಾಂಬದನ್ನು ಹೇಳಬೇಕು. ವೋಟಾರಕ್ಕೆ ನೆಲದ ಮೇಲೆ ನಿಲ್ಲಲು ಅವಕಾಶವಿರುತ್ತಿದ್ದಿಲ್ಲ; ವೋಟಾರರ ನುಕ್ಕಲು ಜನರು ಗುಂಪುಗುಂಪಾಗಿ ಪೌರುಷ ಹೇಳಿಕೊಳ್ಳುವದಕ್ಕೆ ಕೊರತೆ ಇರುತ್ತಿದ್ದಿಲ್ಲ. ರಾ. ಬ. ರವರಿಗೆ ಹರ್ಷವಾಯುವಾಗುತ್ತಿತ್ತು. ಈಗ ವೋಟಾರವಿಲ್ಲವೇ ಇಲ್ಲವಲ್ಲ!! ಪ್ರಧಾನ ಪೋಲಿಂಗ ಆಫೀಸಿಗೇ ಹೋಗಲಿ. ಕಾಲ್ಮಡಿಗೆಯಿಂದ ಒಬ್ಬಿಬ್ಬರನ್ನು ಸಂಗಡ ಕರಕೊಂಡು ಹೋಗಿ, ಪುಸ್ತಕಗಳ ಅಂಗಡಿಗಳಲ್ಲಿ ಪುಸ್ತಕಗಳನ್ನು ಕೊಳ್ಳುವದರಲ್ಲಿ ಹೊತ್ತುಗಳೆದರು. ಜವಳೀಪೇಟೆಯ ಪೋಲಿಂಗದಲ್ಲಿ ಒಬ್ಬನು ಮೊದಲನೇ ವೋಟು ಹಾಕಲಿಕ್ಕೆ ಹೋಗಲು ಸ್ವಯಂಸೇವಿಕೆಯರು ತಮ್ಮ ಬಗಲೊಳಗಿನ ಮೂರು ತಿಂಗಳ ಕೂಸನ್ನು ಆತನ ಮುಂದೆ ಮಾಡಿ, ನೀನು ಈ ಕೂಸಿನ ರಕ್ತ ಕುಡಿದಂತಾಗುವದೆಂದು ಅತ್ತು ಹೇಳಿಕೊಂಡರು. ಆದರೂ ಆತನಿಗೆ ದಯಬರಲೇ ಇಲ್ಲ. ವೋಟು ಹಾಕಿದನು. ಇವನ ತರುವಾಯ ಇಬ್ಬರು ವೋಟು ಹಾಕಿದರು. ಇವರಲ್ಲಿ ಒಬ್ಬರು ಕರ್ನಾಟಕ ಟಾಯಿಮ್ಸದ ರಾ. ರಾ. ಶಿವಲಿಂಗ ಶಾಸ್ತ್ರಿಯವರು. ಕಾಮನಕಟ್ಟಿಯಲ್ಲಿ ದೇಶಪಾಂಡೆಯರ ಬೀದಿಯ ನಾಲ್ವರು ವೋಟು ಹಾಕಿದರು. ಇದು ಕೇವಲ ದುರಾಗ್ರಹ. ವ್ಯಕ್ತಿಯ ಬೆಸೆಯಿಂದ!! ಲೈನಬಜಾರನ್ನೂ ಜೋಲಿಪ್ಪುರೆ ಹಾಕಿತು. ದರಬಾರಹಾಲಿನಲ್ಲಿ ಕೆಲ ಪಾರ್ಸಿ, ಕ್ರಿಶ್ಚನ್ನ ಮತ್ತು ದೊಡ್ಡ ಕಾಮದಾರರು ವೋಟು ಹಾಕಿದರು. ಆ ಸಂಖ್ಯೆಯು ೪೦ಕ್ಕಿಂತ ಹೆಚ್ಚಾಗಲಾರದು. ದಡ್ಡ ವಿದ್ಯಾರ್ಥಿಗಳು ಪರೀಕ್ಷೆಯ ಫಲದಾವು ತಿಳಿಯುವ ತನಕ ತಮಗೆ ಪಾಸಾಗುವದಕ್ಕೆ ಸಾಕಷ್ಟು ಗುಣ ಬೀಳುತ್ತವೆಂದು ಗುಣಗಳನ್ನು ಅಡ್ಡಾದಿಡ್ಡಿ ಬೇರೀಜು ಗುಣಾಕಾರ ಮಾಡಿ, ಪಾಸಿಗೆ ತಂದು ಬಿಡುವರು; ಅದೇ ಪ್ರಕಾರ ಧಾರವಾಡದಲ್ಲಿನ ವೋಟುಗಳನ್ನು ಕವಡೆ ಮುಚ್ಚಿ, ಬಿಚ್ಚಿ ತೆರೆದು ಎಷ್ಟು ಸಾರಿ ತಿರುವಿ ಎಣಿಸಿದರೂ ಅದೂ ಪೋಲಿಂಗ ಸ್ಟೇಶನ ಸೇರಿ ನೂರು ಅಂಕಿ ಮೀರದರೆ- ಆನೇಗುಂದಿಯ ಲೆಕ್ಕವಾಗುವದು. ಧಾರವಾಡದಲ್ಲಾದ ಈ ಚುನಾವಣೆಯು ಧಾರವಾಡಕ್ಕೆ ಮಾನತಂದಿತು. ಕಾಂಗ್ರೆಸದವರು ಸತತವಾಗಿ ಒಂದು ತಿಂಗಳಿಂದ ನಡೆಸಿದ ಚಳವಳಿಗೆ ಕೀರ್ತಿ ಬಂತು. ಅಶ್ವಮೇಧ ಯಜ್ಞದಂಥ ಫಲಬಂತು. ಮಹಾತ್ಮರು ಬಹಾದ್ದೂರ ಕರ್ನಾಟಕವೆಂದಿದ್ದಾರೆ. ಆ ಬಹಾದ್ದೂರಿಯಲ್ಲಿ ಮುತ್ತ ಧಾರವಾಡವು

,, ಬಹಾದ್ದೂರ ಧಾರವಾಡ ,, ವಾಯಿತು.

ಧಾರವಾಡದಲ್ಲಿ

ಬಹಿಷ್ಕಾರದ ಪಿಕೆಟಿಂಗ

ಮಂಗಳವಾರ ಮಧ್ಯಾಹ್ನದಿಂದ ಚುನಾವಣೆಯ ಬಹಿಷ್ಕಾರದ ಗದ್ದಲವು ಊರತುಂಬ ಎದ್ದಿತು. ಶಿಕ್ಕಾರಿನಿಂದ ಬಂದ ಸ್ವಯಂಸೇವಕರು ಬಹಿಷ್ಕಾರ ಮತ್ತು ಪಿಕೆಟಿಂಗಕ್ಕೆ ಶುರುವಾಗೊಳಿಸಿದರು. ವೋಟು ಕೊಡಬೇಡಿರೆಂದು ಎರಡೂ ಮಗ್ಗಲಿಗೆ ಬರೆದ ರಟ್ಟಿನ ಟೊಪ್ಪಿಗೆಯವರ ಮೆರವಣಿಗೆಯು ಊರತುಂಬ ಹೊಂಟಿತು. ಸ್ವತಃ ಕರಮರಕರರು ಆ ಟೊಪ್ಪಿಗೆ ಹಾಕಿ, ಮುಂದಾಳುತ್ವವನ್ನು ವಹಿಸಿದ್ದರು. ಪೋಲಿಸ ಅಮಲದಾರರು ಪೋಲಿಂಗ ಆಫೀಸುಗಳಿಗೆ ಹೋಗಿ ತಮ್ಮ ಬಂದೋಬಸ್ತಿನ ಪ್ರಕಾರವನ್ನು ಗೊತ್ತುಮಾಡುವಂಥವರಾದರು.

ಬುಧವಾರ ಬೆಳಗಾಯಿತು. ನಗರ ಸಂಕೀರ್ತನೆಯು ಊರನ್ನೇ ಗದಗದಿಸಿತು. ಕೂಡಲೆ ವ್ಹಾಲಂಟಿಯರರು ಕವಾಯತಿನ ಸಿಸ್ತಿನಿಂದ ಹೊರಟರು. ಪ್ರತಿಯೊಂದು ಪೋಲಿಂಗ ಸ್ಟೇಶನದ ಮುಂದೆ ಪಿಕೆಟಿಂಗ ಮಾಡಲು ನಿಂತರು. ಹೆಣ್ಣುಮಕ್ಕಳಿಗೆ ಬಾಕುಗಳನ್ನು ಕೊಟ್ಟಿದ್ದರು. ಅವರು ಬಾಗಿಲದಲ್ಲಿಯೇ ಇದ್ದರು. ಸ್ವಯಂಸೇವಕರು ವೋಟು ಕೊಡಬೇಡಿರಿ ಕೌನ್ಸಿಲಕ್ಕೆ ಬಹಿಷ್ಕಾರವೆಂಬ ಪದಗಳನ್ನು ಎರಡೂ ಮಗ್ಗಲಿಗೆ ಕೂಗುತ್ತ, ಜನರಲ್ಲಿ ಬಹಿಷ್ಕಾರವನ್ನು ಮನವಟ್ಟು ಮಾಡಿಕೊಡುತ್ತಿದ್ದರು. ೫೦ ಸ್ತ್ರೀ ಮತ್ತು ೧೦೦ ಪುರುಷರು ಮೆರವಣಿಗೆಯಿಂದ, ರಾಷ್ಟ್ರಗೀತ, ಮತ್ತು ಬಹಿಷ್ಕಾರದ ಪದಗಳನ್ನು ಹೇಳುತ್ತಾ ಊರತುಂಬ ಮೆರವಣಿಗೆ ಹೊರಡಿಸಿದ್ದರು. ಕುಂಬಾರನ ಬುದ್ಧಿ ನಷ್ಟ ಬಿಡಲಿಲ್ಲ. ಕುಂಬಾರನಾದನು ವ್ಯವಸಾಯದಿಂದ ಕುಂಬಾರನಾದನು. ಬುದ್ಧಿಯಿಂದ ರಾಷ್ಟ್ರಪ್ರೇಮಿಯಾಗಿ, ವೋಟಿಗೆ ಹೋಗಲಿಲ್ಲ. ಮೋಟಾರ ಟಾಂಗಾ ಮೊದಲಾದವುಗಳ ಸುಳಿವೇ ಇರಲಿಲ್ಲ. ವೋಟು ಕೊಡಿಸುತ್ತೇವೆಂದು ಜಗಿಜಗಿದು ಹೇಳುತ್ತಾ ಬಂದವರೆಲ್ಲರೂ ಗಳೀ ಹೋದರು. ಬಂದೋಬಸ್ತಿನ ದೆಸೆಯಿಂದ ಪೋಲಿಸರಿಗೆ ಕೆಲಸವೇ ಬೀಳಲಿಲ್ಲ. ಸ್ವಯಂಸೇವಕರೂ, ಸ್ವಯಂಸೇವಿಕೆಯರೂ ತೋರಿಸಿದ ವಿನಯ ಮತ್ತು ತಾಳ್ಮೆಯು ಬಹಳವಾಗಿ ಪ್ರಶಂಸನೀಯವಾಯಿತು.

ಉಮೇದವಾರರು ಬಳಬಳನೆನ್ನುವಂತೆ ವೋಟಿಂಗ

ಹುಬ್ಬಳ್ಳಿಯಲ್ಲಿ ಕರೀ ನಿಶಾನೆ ತೋರಿಸಿದ ಈ ಪಿಕೆಟಿಂಗವು ಪಟ್ಟಣವನ್ನು ತಲ್ಲಣಗೊಳಿಸಿತು. ಉಮೇದವಾರರು ಬಳಬಳನೆನ್ನುವಂತೆ ವೋಟಿಂಗವಾಯಿತು. ಊರತುಂಬ ಹರತಾಳವಾಯಿತು.

೧೪೪ (ಭಾಷಣಬಂದೀ)
ಭುಮನು ಮುರಿದು ಭಾಷಣವನ್ನು ಮಾಡಿದರು.

—(೦)—

ಇಲ್ಲಿಯ ಸುಪ್ರಸಿದ್ಧ ದೇಶಭಕ್ತರಾದ ಶ್ರೀ ...ರ ಹುಯಿಲಗೋಳರವರಿಗೆ ತಾ|| ೮-೯-೧೯೩೦ ... ದಿವಸ ಧಾರವಾಡಜಿಲ್ಲೆಯಲ್ಲಿ ಭಾಷಣ ಮಾಡಬಾರದೆಂದು ತಿಳಿಸಿದರು. ಅದನ್ನು ಅವರು ...ಂದಿನ ದಿವಸ ಸಾಯಂಕಾಲದ ಜಾಹೀರ ಸಭೆಯ... ಮುರಿದು ಭಾಷಣಮಾಡಿದರು. ಆರಂಭದಲ್ಲಿ ...ಶ್ರೀ ನಾಡಗೀರರು ಪೋಲಿಂಗಿನ ಕಾವಲಿನ ಸ್ವಯಂಸೇ...ವಕರ ಕಿಸ್ತುಗಳ ವಿಷಯವಾಗಿ ಮಾತಾಡಿದರು. ...ಆರ್. ಕುಲಕರ್ಣಿಯವರು ೧೪೪ನೇ ಕಲಮು ...ದರಿಗೆ ಹಚ್ಚಿಕೊಳ್ಳುತ್ತಿದೆ. ಅದರ ಪ್ರತೀಕಾರ ...ವೆಂದರೆ ಹೋಟು ಒಂದೂ ಬೀಳದಂತೆ ವ್ಯವಸ್ಥೆ ಮಾಡುವದು. ಗದಗ ಬೆಟಗೇರಿಯಲ್ಲಿ ೪೫೦೦೦ ಜನಸಂಖ್ಯೆಯಲ್ಲಿ ೨೦೦೦ ಹೋಟುಗಳಿವೆ. ಅವುಗಳಲ್ಲಿ ಗವರ್ನಮೆಂಟಿನ ಪಕ್ಷಪಾತವದೆ. ವಿಲಾಯತಿ...ಯಲ್ಲಿ ೧೮ ವರ್ಷ ಮೇಲ್ಪಟ್ಟ ಪ್ರತಿಯೊಬ್ಬನಿಗೆ ...ತಕೊಡುವ ಅಧಿಕಾರ ಉಂಟೆಂದು ತಿಳಿಸಿದ ಬ...ಳಿಕ ದೇಶಭಕ್ತ ... ಕುಂದರಗಿಯವರು ಸರ...ಕಾರದ ಕುಟಿಲನೀತಿಯ ಬಗ್ಗೆ ತಿಳಿಸಿದನಂತರ ನಾ...ರಾಯಣರಾವ ಡಂಬಳ ಇವರು ಮತ್ತೆ ಯಾರಾದರೂ ಮಾತಾಡುವವರಿದ್ದರೆ ಮಾತಾಡಬೇಕೆಂದು ತಿಳಿಸಿದರು; ಆ ಮೇಲೆ

ಕರ್ನಾಟಕದಲ್ಲಿ ೧೪೪ನೇ ಕಲಮನ್ನು ಮುರಿದ
ಮೊದಲನೇ ವೀರ
ಡಾ. ಹುಯಿಲಗೋಳ

ರವರು ೧೪೪ನೇ ಕಲಮು ನನಗೆ ಲಾಗೂ ಆಗಿದೆ. ನಾನು ಕೆಲವು ಕಾಲದವರೆಗೆ ತಮ್ಮೆಲ್ಲರ ರಜೆ ತಕೊಳ್ಳತಕ್ಕವನಿದ್ದೇನೆ. ನನ್ನಿಂದ ಜನತೆಯಲ್ಲಿ ಶಾಂತತಾಭಂಗವಾಗುವದೆಂದೂ, ಖೂನು ಮುಂತಾದ ಭಯಂಕರ ಪ್ರಕಾರಗಳು ನಮ್ಮ ಜಿಲ್ಲೆಯಲ್ಲಿ ಜರಗುವವೆಂದೂ, ಜಾತಿಜಾತಿಗಳಲ್ಲಿ ದ್ವೇಷಹುಟ್ಟುವದೆಂದೂ ನಮ್ಮ ದಯಾಳು ಸರಕಾರದವರು ಆಲೋಚಿಸಿ ನನಗೆ ೧೪೪ನೇ ಕಲಮು ಲಾಗೂ ಮಾಡಿದ್ದಾರೆ. ೧೦-೧೨ ವರ್ಷಗಳಿಂದ ಸೇವೆಯನ್ನು ತೆಗೆದುಕೊಂಡ ಕಾಂಗ್ರೆಸ್ಸೂ, ಜನತೆಯೂ, ನನ್ನಿಂದ ಖೂನು, ಸುಲಿಗೆಗಳಾಗುತ್ತಿವೆ ಎಂಬದನ್ನು ತಿಳಿದೇ ಇರುವದು. ಈ ಸಂಕಟಾಂಕ್ಕೆ ಈಗ ನನ್ನ ನೆನಪಾಯಿತೋ? ಇದು ಕೌನ್ಸಿಲ ಬಹಿಷ್ಕಾರದಲ್ಲಿ ನನ್ನ ಇರುವಿಕೆಯಿಂದ ತಮ್ಮ ಕಾರ್ಯಕ್ಕೆ ಅಡಚಣಿಯಾಗುವದೆಂದೂ ಈ ರೀತಿ ನನ್ನ ಬಾಯಿ ಕಟ್ಟಲು ಯತ್ನಮಾಡಿದ್ದಾರೆ. ದೇವರಿಂದ ದಯಪಾಲಿಸಲ್ಪಟ್ಟ ದೇಶದವರ ಮೇಲೆ ಆ ಜಗದೀಶನ ಅಧಿಕಾರವೇ ನಡೆಯತಕ್ಕದ್ದು. ಅನ್ಯರ ಅಧಿಕಾರ ಅನ್ಯಾಯಿ ಸರಕಾರದ ಅಧಮಪರ ಮದಾಂಧತನದ ಅಧಿಕಾರವನ್ನು ನಾವು ನಡೆಯಗೊಡುವದಿಲ್ಲ. ಈ ೧೪೪ನೇ ಕಲಮನ್ನು ಮುರಿದು ಮುರಿದು ನಾನೀಗ ಮಾತಾಡಹತ್ತಿದ್ದೇನೆ. ಸರಕಾರವು ಏನು ಮಾಡತಕ್ಕದ್ದು ಮಾಡಲಿ ಮಾಡುವ ಅನ್ಯಾಯದ ಶಿಕ್ಷೆಗೆ ನಾನು ಸಿದ್ಧನಿದ್ದೇನೆ. ನಾನು ಹೋದರೆ ಮಹಾತ್ಮರ ಮುಖ್ಯ ಮಾರ್ಗಗಳನ್ನು ಮುಂದಿಟ್ಟುಕೊಂಡು ವರ್ತಿಸಿರಿ (೧) ವಿಲಾಯತಿಯ ಅರಿವೆ ಬಹಿಷ್ಕಾರ, (೨) ಶೆರೆ ಸಿಂದಿ ಬಹಿಷ್ಕಾರ (೩) ಕೌನ್ಸಿಲ ಬಹಿಷ್ಕಾರ ಶಾಂತರೀತಿಯಿಂದ ಪೋಲಿಸರಿಗಾಗಲಿ, ಪ್ರತಿಸ್ಪರ್ಧಿಗಳಿಗಾಗಲಿ ಒಂದು ಉಗುರಿನ ಗಾಯವು ಸಹ ಆಗದಂತೆ ಜಾಗರೂಕತೆಯಿಂದ ಹುರುಪು ಕುಂದದಂತೆ ವರ್ತಿಸಿರಿ. ಎಂದು ಹೇಳಿ ಭಾಷಣವನ್ನು ಮುಗಿಸಿದರು. ಇನ್ನೂ ಅವರನ್ನು ಹಿಡಿದ ಸುದ್ದಿಯಿಲ್ಲ.

ನಾ. ಶಾ. ವೈದ್ಯ

ನರೇಂದ್ರದಲ್ಲಿ ಪೋಲಿಂಗು

೦

ಊರತುಂಬ ಹರತಾಳ.

—೦*೦—

ಧಾರವಾಡದಿಂದ ಮೂರು ಮೈಲುಗಳ ಮೇಲೆ ನರೇಂದ್ರವೆಂಬ ಪೋಲಿಂಗ ಸ್ಟೇಶನದ ಗ್ರಾಮವುಂಟು. ಇಲ್ಲಿ ನಿನ್ನೆ ಸಾಯಂಕಾಲದ ಪ್ರಾರಂಭತನಕ ಒಬ್ಬನೂ ಹೋಟು ಹಾಕಲಿಲ್ಲೆಂದು ಸುದ್ದಿ ಬಂದಿದೆ. ಊರತುಂಬ ಹರತಾಳವಾಗಿ, ಅಂಗಡಿಬಂದಾದವು. ಪೋಲಿಂಗಕ್ಕೆ ಹೋದವರು ನ್ಯಾಯದ ಬೇರೊಂದು ಗ್ರಾಮಕ್ಕೆ ಹೋಗಿ, ಅನ್ನ ಫೀರು ಕಂಡರು.

ಪೋಲಿಸನು ಪೋಲಿಸನನ್ನು ಗುಂಡು ಹಾಕಿ ಕೊಂದನು.

ಬಾರಡೋಲಿಯಲ್ಲಿ ಹರಿಲಾಲನೆಂಬ ಸಿಪಾಯಿಯು ೫೩ ರೂಪಾಯಿಗಳನ್ನು ಇನ್ನೊಬ್ಬನು ಕದ್ದನು ಕಳುವು ಗೊತ್ತಾಗಿ, ಆತನು ಈ ಹಣವನ್ನು ಮೂರು ದಿವಸ ಕೊಡಬೇಕೆಂದು ಗೊತ್ತಾಯಿತು; ಕರಾರ ಪ್ರಕಾರ ಮೂರು ದಿವಸ ಕೊಡದಾಗಲು- ಹರಿಲಾಲನು ಈ ಕಳ್ಳ ಸಿಪಾಯಿಯನ್ನು ಗುಂಡು ಹಾಕಿ, ಕೊಂದನು.

ಸ್ವಲ್ಪ ಹೊಗೆ ಬಳಿಕ ನಗೆ.

——(೦)——

ದರಬಾರ ಹಾಲಿನಮುಂದೆ ಹೋಟು ಕೊಡುವದಕ್ಕೆ ಒಂದು ಮೋಟಾರು ನೀಟಾಗಿ ಹಾಲಿನ ಬಾಗಿಲಕ್ಕೆ ಹೋಯಿತು. ಶ್ರೀ. ಕರಮರಕರರು ಈ ಬಗೆಯನ್ನು ಕಪ್ಪಿಸಿ, ಇಲ್ಲವಾದರೆ- ನಾವು ದೇಶದ ಕರ್ತವ್ಯ ಮಾಡುವೆವೆಂದು ಸತ್ಯಾಗ್ರಹದ ಸಿದ್ಧತೆಯನ್ನು ತೋರಿಸಲು- ಸಾಹೇಬರು ಮೋಟಾರು ದಾರಿಯಲ್ಲಿ ನಿಲ್ಲಬೇಕೆಂದು ಹುಕುಮು ಮಾಡಿದರು. ಇಲ್ಲವಾದರೆ ವಿರೂಪು ಹ್ವಾಲಂಟಿಯರರನ್ನು ಹಿಡಿಯುವತನಕ ಅಲ್ಲಿ ಸತ್ಯಾಗ್ರಹ ನಡೆಯುವ ಪ್ರಸಂಗ ಬರುತ್ತಿತ್ತು.

ಹೋಟು ಕೊಡದೆ ಹಿಂದಿರುಗಿದರು

ಇನಾಮದಾರರ ಮತಿಯಿಂದ ಕೌನ್ಸಿಲ ಮೆಂಬರರಾದ ಶ್ರೀ. ದೇಸಾಯಿ ಹಣಮಂತರಾಯರು ಹೋಟು ಕೊಡುವದಕ್ಕೆಂದು ಹೆಂಡತಿ ಮತ್ತು ಸೊಸೆಯೊಂದಿಗೆ ಬಂದರು. ಆದರೆ ಪೋಲಿಂಗ ಆಫೀಸಿನ ಮುಂದಿನ ರಣಭೇರಿಯನ್ನು ಕಂಡು ಕಚೇರಿ ಕಟ್ಟೆಯ ಸಮೀಪಕ್ಕೆ ಸಹ ಹೋಗದೆ, ಹಾಗೇ ಹಿಂದಿರುಗಿದರು.

ಜಾಹೀರ ನೋಟೀಸು

—(೦)—

ಕೆಳಗೆ ಸಹೀ ಮಾಡುವ ಚನ್ನವೀರಯ್ಯಾ ತಂದೆ ಬಸವಣ್ಣಯ್ಯಾ ಕೋರಿ ಸಾಕೀನ ಬೊಮ್ಮಗಟ್ಟಿ ತಾಲೂಕ ಕಲಘಟಗಿ ಈತನು ಈ ಜಾಹೀರ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ

ನನ್ನ ಖಾಸ ಮಗನಾದ ರಾಚಯ್ಯಾ ಈತನು ಅಜಮಾಸು ೨೨ ವರ್ಷದವನಾಗಿ, ಮನಮಾನಿ ನಡೆಯುತ್ತಾನೆ ಮನೆಯಲ್ಲಿಯ ಜಂಗಮಜಸ್ತಿಯನ್ನು ಹಾಳು ಮಾಡಿದ್ದಾನೆ ಆತನಿಗೆ ಎಷ್ಟು ಹೇಳಿದರೂ ಬುದ್ಧಿ ಬರಲಿಲ್ಲ. ಕಾರಣ ಈ ನೋಟೀಸು ಕೊಡಬೇಕಾಯಿತು ಆತನಿಗೆ ಯಾರೂ ಯಾವದೇ ರೀತಿಯಿಂದ ಸಾಲ ಕೊಡಬಾರದು ಕಾಗದ ಪತ್ರ ಬರಿಸಿಕೊಳ್ಳಬಾರದು ಆತನು ಸಾಲ ಮಾಡಲಿಕ್ಕೆ ಯಾವದೇ ಕಾರಣವಿರುವದಿಲ್ಲ ಏಕೆಂದರೆ ಮನೆತನದ ಯಾವತ್ತು ಬೋಜಾ ನನ್ನ ಮೇಲಿದ್ದು, ಅದನ್ನು ನಾನು ಸ್ವತಃ ನಿರ್ವಹಿಸುತ್ತೇನೆ ಆದ್ದರಿಂದ ಆತನಿಗೆ ಯಾರಾದರು ಸಾಲ ಕೊಟ್ಟರೆ, ಅದು ಕಾಯದೇಶೀರವಾಗಲಾರದು ಈತನು ಮಾಡುವ ಸಾಲವು ದುರ್ವ್ಯಸನಕ್ಕೆ ಮತ್ತು ಮನಸ್ಸಿಗೆ ಬಂದಂತೆ ಹಾಳ ಮಾಡುವದಕ್ಕೆ ಇರುವದರಿಂದ ಇದು ಕಾಯದೆಯಿಂದಲೇ

ಕಾಂಗ್ರೆಸದ ರಾಷ್ಟ್ರೀಯ ನಿಶಾನೆಯಲ್ಲಿ ಶೀಖರ ಜನರಿಂದ ಹಳದೀ ಪಟ್ಟಿ ಹಚ್ಚಬೇಕು. ಮತ್ತು ಶೀಖರು ಕಾಯದೆಭಂಗದಲ್ಲಿ ಸೇರಬೇಕೆಂದು ಕಾಂಗ್ರೆಸ ಮತ್ತು ಶೀಖರ ನಡುವೆ ಒಡಂಬಡಿಕೆಯಾಯಿತು.

ಪಂಡಿತ ಮೋತಿಲಾಲರು ಈಗ ಸ್ವತಂತ್ರರಾಗಿದ್ದಾರೆ. ಅವರ [illegible] ಪ್ರಯತ್ನವ ನಡಿಸಬೇಕೆಂದು ಕೆಲವರು ಸೂಚಿಸಿದ್ದಾರೆ.

ಜರ್ಮನರ ವಿಮಾನಗಳ ಹಿಂದೆ ಸಮುದ್ರದಲ್ಲಿ ಬಿದ್ದಿದ್ದ ಒಂದು ಬಂಗಾರದ ಗುಂಡು ತೇಲುತ್ತ ತೇಲುತ್ತ ಇಂಗ್ಲಂಡದಲ್ಲಿ [illegible] ದಂಡೆಗೆ ಹತ್ತಿತು. ಅದನ್ನು ಉಸುಕಿನಿಂದ ಮೇಲಕ್ಕೆ ತೆಗೆದು ಹಾಕಿ ನೋಡಿದರು. ಅದರ ಬೆಲೆ [illegible] ಪೌಂಡು ಇತ್ತು.

ಜಾಹೀರ ನೋಟೀಸು

— (೨) —

ಅಬ್ದುಲ್‌ರಹಿಮಾನ ವಲ್ದ ಹಾಜೀ ಹುಸೇನ ಸಪೇಟ ಬಜಾರ ಬೆಳಗಾಂವ ಇವರ ಕಡೆಯಿಂದ ಎಲ್ಲ ಜನರಿಗೆ ತಿಳಿಸುವದರಲ್ಲಿ ಬರುತ್ತದೇನಂದರೆ- ವಿಜಾಪೂರ ಜಿಲ್ಹೆ ಮತ್ತು ಧಾರವಾಡ ಜಿಲ್ಹೆಗಳ ಪೈಕಿ ಬಾಗಲಕೋಟೆ, ಗುಳೇದಗುಡ್ಡ, ಇಳಕಲ್ಲ, ಕಮತಗಿ, ಶಿರೂರ ಮತ್ತು ಗದಗ ಇವುಗಳಲ್ಲಿದ್ದ ಶರೇ ಮತ್ತು ಕೆಳಗಿನ ಅಂಗಡಿಗಳ ಸನ್ ೧೯೨೯-೩೦ ಸಾಲಿನ ಬಾಬತ ಲಾಯಸೆನ್ಸ ನಾವು ತೆಗೆದುಕೊಂಡಿದ್ದೆವು. ಸದರ ಅಂಗಡಿಗಳ ಸನ್ ೧೯೨೯-೩೦ ಸಾಲಿನಲ್ಲಿ ನಮ್ಮ ತರ್ಫೆ ಕೆಲಸ ನಡಿಸಲಿಕ್ಕೆ ನಾವು ಮಿ|| ಬಿ. ಎ. ಪಾರಖ B. A. Parakh ಧಾರವಾಡ ಸಾ|| ಇವರಿಗೆ ಮುಖ್ತ್ಯಾರ ನೇಮಿಸಿದ್ದೆವು. ಸನ್ ೧೯೨೯-೩೦ ಸಾಲಿನ ಅಖೇರ ಸದರೀ ಪಾರಖ ಮುಖ್ತ್ಯಾರ ಪತ್ರದ ಮುದ್ದತು ತೀರಿದ್ದರಿಂದ ಅನಂತರದಲ್ಲಿ ಸದರೀಯವರಿಗೆ ನಾವು ನಮ್ಮ ತರ್ಫೆಯಿಂದ ಕೆಲಸ ಮಾಡಲಿಕ್ಕೆ ಮುಖ್ತ್ಯಾರ ಪತ್ರ ಅಗರ ಯಾವದೇ ಪ್ರಕಾರದ ಅಧಿಕಾರ ಕೊಟ್ಟಿರುವದಿಲ್ಲ ಮತ್ತು ಅವರಿಗೆ ನಮ್ಮ ತರ್ಫೆ ಕೆಲಸ ಮಾಡಲಿಕ್ಕೆ ಏನೂ ಅಧಿಕಾರ ಇರುವದಿಲ್ಲ. ಕಾರಣ ಸದರೀಯವರ ಕೂಡ ಯಾರಾದರೂ ಏನಾದರೂ ವ್ಯವಹಾರ ಮಾಡಿದಲ್ಲಿ ಅದರಿಂದ ನಾವು ಬಾಂಧಿಯಿಸಲ್ಪಡುವದಿಲ್ಲ ಅಂತಾ ಬರಕೊಟ್ಟ ಜಾಹೀರ ನೋಟೀಸು

ತಾ|| ೧೦-೮-೧೯೩೦ ನೇ ದಿವಸ

ಸಹಿ- ಇಂಗ್ಲೀಷ ಅಬ್ದುಲ್‌ರಹಿಮಾನ ವ|| ಹಾಜೀ ಹುಸೇನ ಸಪೇಟ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಸೆರಗು ಹೋಗುವ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧ. [illegible]

ವಿಳಾಸ:—[illegible]

C/o [illegible]

[illegible]

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚ್ಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ

ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಬೆಳಗಾಂವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡಿನಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವದು ನಿಮ್ಮ ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲು ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನ್ನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಡಟ್ಟಿದೆವು. [illegible] ಅರ್ಜಿ ಮಾಡುವದು [illegible] ಅಥವಾ ಪತ್ರವ್ಯವಹಾರ.

ಪ್ರೊ. [illegible]

ಮೋಟಾರ [illegible] ಧಾರವಾಡ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಿಗಿ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲೆಗಳೂ ಮತ್ತಿ ವ ಹೊನ್ನಿ ಜಿದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (ಪ್ಲ) ಪ್ಲೂಟಿನ ಜವಳ್ಳ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆದು ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಸಾಪ್ತಾಹಿಕ

ವಿಜಯ

ಬೆಲೆ ೧ ಆಣೆ

ಸಂಪಾದಕರು— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ | ಧಾರವಾಡ ಶುಕ್ರವಾರ ತಾರೀಖು ೧೨ನೇ ಸೆಪ್ಟಂಬರ ೧೯೩೦ (ಸಂಚಿಕೆ ೩೦

ಥಿನಿಂಗ ಕೂಪಗಳ ಲಿಲಾವ Sale Notice

ಈ ಕೆಳಗೆ ಸಹಿ ಮಾಡುವವರು ಧಾರವಾಡ ರೇಂಜಿನ ಈ ಕೆಳಗೆ ಕಾಣಿಸಿದ ಥಿನಿಂಗ ಕೂಪಗಳ ಲಿಲಾವ ಧಾರವಾಡ [illegible] ಹತ್ತಿರ ಇದ್ದ ಸೆಂಟ್ರಲ ಫಾರೆಸ್ಟ ಆಫೀಸಿನಲ್ಲಿ ತಾರೀಖು ೨೦ನೇ ಸೆಪ್ಟಂಬರ ೧೯೩೦ ಶನಿವಾರ ಮಧ್ಯಾಹ್ನ ೩ ಘಂಟೆಗೆ ಮಾಡುವರು ....

ರೇಂಜು	ಕೂ. ನಂಬರ	ಬ್ಲಾಕ ನಂಬರ	ಮಾರ್ಕ ಮಾಡಿದ ಗಿಡಗಳ ಸಂಖ್ಯಾ
ಧಾರವಾಡ	6	I	1800
,,	6	II	2141
,,	14	III	1777
,,	6	IV	2991
,,	6	V	2029
,,	6	VI	1954
,,	6	VII	1266

ಬಯಕೆ ಇದ್ದವರು ಕೂಪಗಳನ್ನು ನೋಡಿಕೊಂಡು ನಿಯಮಿಸಿದ ವೇಳೆಗೆ ಬಂದು ಸವಾಲ ಮಾಡಬೇಕು. ಸವಾಲ ಮಾಡಲಿಚ್ಛಿಸುವವರು ಆಯಾ ತಾಲೂಕುಗಳಲ್ಲಿಯ ಮಾಮಲೇದಾರಸಾಹೇಬರ ಕಡೆಯಿಂದ ಲಾಯಕಿ ಸರ್ಟಿಫಿಕೇಟ ತಂದು ಸವಾಲ ವೇಳ್ಯಾ ಹಾಜರ ಪಡಿಸಬೇಕು. ಲಾಯಕಿ ಸರ್ಟಿಫಿಕೇಟ ಇಲ್ಲದವರ ಸವಾಲು ತೆಗೆದುಕೊಳ್ಳಲಿಕ್ಕಿಲ್ಲ.

ಸವಾಲ ಪೂರಾ ಆದ ಕೂಡಲೇ ಸವಾಲಿನ ೧/೧೦ ರಕಂ ಸವಾಲದಾರನು ವಸೂಲ ಕೊಡತಕ್ಕದ್ದು. ಈ ರಕಂ ೧೦೦ಕ್ಕಿಂತ ಕಡಿಮೆ ಇರಬಾರದು. ಈ ೫೦೦ಕ್ಕಿಂತಾ ಹೆಚ್ಚಿನ ಆದಲ್ಲಿ ೫೦೦ [illegible] ಕೊಟ್ಟು ಉಳಿದ ರಕಮಿನ ಬಗ್ಗೆ ಮಾಮಲೇದಾರಸಾಹೇಬರು ಪಸಂದ ಮಾಡುವ ಜಾಮೀನು ಕೊಡಬಹುದು.

ಸವಾಲಿನ ೧/೪ ರಕಂ ಸವಾಲ ಮಂಜೂರಾದ ೭ ದಿವಸಗಳೊಳಗಾಗಿ ಕೊಟ್ಟು ಕರಾರಕ್ಕೆ ಸಹಿ ಮಾಡಿದ [illegible] ಕೆಲಸ ಸುರುವು ಮಾಡಬೇಕು. ಈ ಉಳಿದ ರಕಂ ಸಮನಾದ ೩ ಹಪ್ತೆಗಳಿಂದಾ ಫೇಬ್ರುವರಿ ೧೯೩೧ನೇ ಅಖೈರ ಒಳಗಾಗಿ ಕೊಡಬೇಕು. ಕರಾರ ಶರ್ತುಗಳು ಲಿಲಾವದ ವೇಳ್ಯಾ ಓದಿ ಹೇಳಲ್ಪಡುವವು.

ಇನ್ನೂ ಹೆಚ್ಚಿನ ಮಾಹಿತಿ ಅವಶ್ಯವಿದ್ದಲ್ಲಿ ಈ ಕೆಳಗೆ ಸಹಿ ಮಾಡಿದವರ ಆಫೀಸಿನಲ್ಲಿ ಅಥವಾ ಧಾರವಾಡ ರೇಂಜಿ ಆಫೀಸಿನಲ್ಲಿ ರವಿವಾರ ವ ಹಬ್ಬದ ದಿವಸ ಹೊರ್ತು ಪಡಿಸಿ ಇತರ ದಿವಸಗಳಲ್ಲಿ ಬೆಳಗಿನ ೧೧ ಘಂಟೆಯಿಂದಾ ಸಂಜೇ ೪ ಘಂಟೆಯುವರೆಗೆ ಶಿಗುವದು.

Dharwar
7-9-1930

Sd/- R. J. Smith
Divisional Forest Officer,
Dharwar Bijapur

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.
ಕೋ-ಆಪರೇಟಿವ ಕ್ರೆಡಿಟ ಸೋಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಒಂದು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಂ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವ್ಯ. ವಿಜಯ, ಧಾರವಾಡ

ವಿಜಯ.

ಳುಕ್ಕ ವಿಕ್ರಮ ವರ್ಷ೧೯೮೭ ಭಾದ್ರಪದ ವದ್ಯ ೬

ದರಬಾರ ಹಾಲಿನಲ್ಲಿ ದರಬಾರಿಗಳಿಗೆ ಸೋಲು.

ಧಾರವಾಡದಲ್ಲಿದ್ದ ಆರು ಪೋಲಿಂಗ ಸ್ಟೇಶನ ಕ ಶಾಂತಿಯುದ್ಧದ ರಣಕ್ಷೇತ್ರಗಳಲ್ಲಿ ದರಬಾರ ಹಾಲು ಪಾಣಿಪತ-ಸೋನಪತದಂಥ ಜಯಾಪಜಯ ಹೇಳುವ ರಣಮಂಡಲವಾಗಿತ್ತು. ಇಲ್ಲಿ ಆರು ನೂರು ಮತದಾರರಿದ್ದು, ಇವರು ಬಹುತೇಕವಾಗಿ ಹಿಂದೆ ಪದವಿ, ಮುಂದೆ ಶಿಕ್ಷಣದ ಡಿಗ್ರಿ ಹಚ್ಚಿಕೊಂಡವರೇ ಇರುತ್ತಾರೆ. ಇವರಲ್ಲಿ ಪುನಃ ವಿಶೇಷವೆಂದರೆ- ಸರಕಾರೀ ಕಾಮದಾರರೇ ಬಹಳ. ವಾಸ್ತವಿಕವಾಗಿ ಇವರು ಒಬ್ಬರ ಹಿಂದೊಬ್ಬರು, ಹಿಂದುಗೂಡಿ. ಸಾರಿಗುಂಟೆ ಜನರನ್ನು ಕೂಡಿಹಾಕಿಕೊಂಡು, ನಗುನಗುತ್ತಾ ತಂತಮ್ಮೊಳಗೆ ಉಪಯೋಗಿಯು ಸಂಭಾಷಣೆ ಮಾಡುತ್ತಾ ಪೋಲಿಂಗಿಗೆ ಬರಬೇಕು. ಆದರೆ ಈ ಪ್ರಕಾರದ ನೋಟವು ರವಷ್ಟಾದರೂ ಮುಂಜಾವಿನಿಂದ ಸಾಯಂಕಾಲದ ತನಕ ಕಂಡು ಬರಲೇ ಇಲ್ಲ. ಇಲ್ಲಿ ಸ್ವತಃ ಶ್ರೀ. ಕರಮರಕರರು, ಶ್ರೀ. ಸೌ|| ಕೃಷ್ಣಾಬಾಯಿ ಪಣಜಿ ಮತ್ತು ಸುರಿತ ಸ್ವಯಂಸೇವಕ, ಸೇವಿಕೆಯರು ಪಿಕೆಟಿಂಗಕ್ಕೆ ನಿಂತಿದ್ದರು. ಬಂದೋಬಸ್ತಿಗಾಗಿ ಕಲೆಕ್ಟರರು ಬಂದು ಹೋದರು. ಪೋಲೀಸಸಾಹೇಬರು ಎರಡು ಮೂರು ಸಾರೆ ಬಂದರು ಉಳಿದ ಪೋಲೀಸ ಬಂದೋಬಸ್ತು ಅವಶ್ಯಕ್ಕಿಂತ ಹೆಚ್ಚಾಗಿತ್ತು. ನೋಟಕರ ಸಂಖ್ಯೆಯು ಸಾವಿರದ ಮೇಲಿತ್ತು. ಸ್ತ್ರೀಯರೇ ಇನ್ನೂರಕ್ಕಿಂತ ಹೆಚ್ಚಿದ್ದರು.

ಫಾರ್ಸಿ, ಕ್ರಿಶ್ಚನ್ನ ಮೊದಲಾದವರು ಹೋಟು ಹಾಕುತ್ತಾರೆಂದು ಯಾರಿಗಾದರೂ ಗೊತ್ತಿತ್ತು. ಸರಕಾರೀ ಕಾಮದಾರರು ಬಹುವಾಗಿ ಹೋಟು ಹಾಕೆ, ಈ ಸಂಖ್ಯೆಯು ಬಹಳೇ ಗಡುತರವಾಗುವದೆಂದು ಊಹೆಯಾಗಿತ್ತು. ಕಾಂಗ್ರೆಸದ ಮಹಿಮೆ ! ಪಿಕೆಟಿಂಗದ ಪ್ರತಾಪ !! ಬೇರೆ ಕಡೆಯಲ್ಲಿ ಪಿಕೆಟಿಂಗದ ಮುಂದೆ ಹಾದು ಹೋಗಿ, ಹೋಟು ಕೊಡುವದು ಅಶಕ್ಯವೆಂಬುದಾಗಿ ತಿಳಿದಿದ್ದರ ಪರಿಣಾಮ !!! ಈ ಮೂರೂ ಕೇವಲವಾಗಿ ಕೂಡಿಬಂದ ತ್ರಿದೋಷಗಳು ಹೋಟರಲ್ಲಿ ಹೋಟು ಹಾಕುವ ಸ್ಫೂರ್ತಿಯನ್ನೇ ಹುಟ್ಟಿಸಲಿಲ್ಲ. ಹೋಟು ಹಾಕಿದವರೆಲ್ಲರೂ ಮತದಾರರಿಗೆ ತೀರ ಅವಶ್ಯರು; ಕೈಕೆಳಗಿನ ನೌಕರರು; ಏನೋ ಕಾಪೊಂದು ಕೊಡ ನೀರು ಹಾಕಿದರೇನಾಯಿತು? ಹಾಲಿನಲ್ಲಿ ಅಡಗಿ ಹೋಗುವದೆಂಬ ಮೂರ್ಖ ತಿಳುವಳಿಕೆಯುಳ್ಳವರಾಗಿದ್ದರು. ಫಾರ್ಸಿ, ಕ್ರಿಶ್ಚನ್ನ, ಮುಸಲಮಾನರನ್ನು ಹೊರ್ತುಪಡಿಸಿದರೆ- ಹಿಂದೂಜನರ ಸಂಖ್ಯೆಯು ಹತ್ತಕ್ಕಿಂತ ಹೆಚ್ಚಾಗುವದಿಲ್ಲ. ಕರ್ನಾಟಕ ಕಾಲೇಜದಲ್ಲಿ ಪ್ರಿನ್ಸಿಪಾಲ, ಪ್ರೊಫೆಸರ ಮತ್ತು ಉಳಿದವರನ್ನು ಸೇರಿ ಮೂವತ್ತು ಜನ ಹೋಟರರಿದ್ದಾರೆ. ಇವರಲ್ಲಿ ಹೋಟು ಹಾಕಿದವರು ಏಳೇ ಜನರು. ಇವರಿಗಾದ ಸಂಭಾವನೆ ಕೇಳಿರಿ! ಅವರ ವಿದ್ಯಾರ್ಥಿಗಳೇ ಶೇಮ ಪಟ್ಟಿಗಳ ಮಳೆಗರಿಸಿದರು. ಪ್ರಿನ್ಸಿಪಾಲರಾದ ಮೆಹ್ಯಾಂಪಡನಸಾಹೇಬರು ಪೋಲಿಂಗಸ್ಟೇಶನ ತನಕ ಬಂದು ಹೋದರು. ಆದರೆ ಹೋಟು ಹಾಕಲಿಲ್ಲ. ದಿವಾನಬಹದ್ದೂರ ಮುಣಸಿನಕಾಯಿ, ಹಂದಿಗನೂರಿನ ಸರದಾರ ದೇಸಾಯರು, ರಾವಸಾಹೇಬ ಕಟ್ಟಿ ಅಣ್ಣಾಚಾರ್ಯ ಮೊದಲಾದ ಸರಕಾರದಿಂದ ಬಿರುದು ಪಡೆದವರಾದರೂ ಹೋಟಿಗೆ ಬರಲಿಲ್ಲ. ಮುಲಕೀ ಪೋಲೀಸ, ನ್ಯಾಯ, ಇಂಜನಿಯರ, ವಿದ್ಯಾ ಫಾರೆಸ್ಟ ಪೋಲೀಸ ಮೊದಲಾದ ಹಲವು ಖಾತೆಗಳ ಚಿಕ್ಕದೊಡ್ಡ ಕೆಲಸಗಾರರು ಅತ್ತ ಕಡೆಗೆ ಹಣಿಕಿ ಹಾಕಲಿಲ್ಲ. ಸರಕಾರೀ, ಕರ್ನಾಟಕ, ಲಿಂಗಾಯಿತ, ಮಿಶನ, ವಿಕ್ಟೋರಿಯಾ ಎಂಬ ಐದು ಹಾಯಸ್ಕೂಲಿನ ಇನ್ನೂರಿಗಿಂತ ಹೆಚ್ಚು ಶಿಕ್ಷಕರಲ್ಲಿ ಒಬ್ಬರೂ ಹೋಟು ಹಾಕಲಿಲ್ಲ. ಸರಕಾರೀ ಕೆಲಸಗಾರರು ರಾಜಕೀಯ ಚಳವಳಿಯಲ್ಲಿ ಸೇರಬಾರದೆಂದು ಕಟ್ಟಪ್ಪಣೆಯುಂಟು. ಆದರೂ ಹೋಟಿನ ಸ್ವಯಂನಿರ್ಣಯದ ಮತಕ್ಕೆ ಅಡ್ಡಿಯಿರುವದಿಲ್ಲ. ಆ ಮತಸ್ವಾತಂತ್ರ್ಯವನ್ನು ಇವರು ಸಂಪೂರ್ಣವಾಗಿ ಉಪಯೋಗಿಸಿ, ಸ್ವರಾಜ್ಯದ ಬಗ್ಗೆ ತಮ್ಮ ಮನೋವೇನಿರುತ್ತದೆಂಬುದನ್ನು ಪರ್ಯಾಯದಿಂದ ತೋರಿಸಿರೆಂದು, ಸ್ಪಷ್ಟ ಶಬ್ದಗಳಲ್ಲಿ ಹೇಳಬೇಕಾಗುತ್ತದೆ. ಚಳವಳಿಯಲ್ಲಿ ಸೇರಿದರೆ- ಸನದು ರದ್ದು ಮಾಡುವೆವೆಂದು ವಕೀಲರಿಗೆ ಹೆದರಿಕೆ ಹಾಕಿ, ಈ ಹೆದರಿಕೆಯಿಂದ ಅವರ ವಿಚಾರಸ್ವಾತಂತ್ರ್ಯ ವರ್ತನಸ್ವಾತಂತ್ರ್ಯಕ್ಕೆ ಬಿರಿ ತಂದಿದ್ದಾರೆ. ಈ ಸಮಯದಲ್ಲಿ ವಕೀಲರು ಹೋಟು ಕೊಡದೆ, ತಮ್ಮ ಕಾಂಗ್ರೆಸ ಮತವನ್ನು ಜಾಹೀರಮಾಡಿದರು. ಹೀಗೆ ಯಾವ ರೀತಿಯಿಂದ ನೋಡಿದರೂ, ಸರಕಾರದ ಉದ್ದೇಶವು ಸಫಲವಾಗಲಿಲ್ಲ. ಸರಕಾರೀ ಕಾಮದಾರರು ಅರೆಸರಕಾರಿ ಕಾಮದಾರರಂಥ ಪರಿಸ್ಥಿತಿಯುಳ್ಳ ವಕೀಲರು, ಕಿತಾಬು ಪಡೆದವರು ಇವರ ಕೂಡ ಸುಖವಸ್ತುಗಳೂ, ಹೆಬ್ಬಟ್ಟಿನ ಗುರ್ತಿನವರೂ ಹೋಟು ಹಾಕಲಿಲ್ಲ. ಇಂಥದೊಂದು ರೀತಿಯಿಂದ ನಮಗೆ ಜಯ ಬಂತೆಂದು ಸ್ಥಾನಿಕ ಅಧಿಕಾರಿಗಳು ಮನಸ್ಸಿಗೆ ಸಮಾಧಾನ ಹಚ್ಚಿಕೊಂಡರು. ಧಾರವಾಡದ ಪೋಲಿಂಗವು ಸರಕಾರಕ್ಕೆ ಅನುಕೂಲವಾಯಿತೆಂದು ರಿಪೋರ್ಟು ಮಾಡಲಿಕ್ಕೆ ಬರೆಲಿಕ್ಕೆ ಸಾಧಕ ಸಾಮುಗ್ರಿಯು ಜೋಡಣೆಯು ಆಗಲಿಲ್ಲ. ಇಲ್ಲಿಯೇ ಜಾಂಬೂರಿಯನ್ನು ಮಾಡಬೇಕೆಂದೂ ಗವ್ಹರ್ನರಸಾಹೇಬರನ್ನು ಕರೆಸಬೇಕೆಂದೂ ವಿಚಾರ ನಡೆದಾಗ, ಒಬ್ಬರಮೇಲೊಬ್ಬರು ಮೇಲ್ಬಿದ್ದು ಮುಂದೆ ಬಂದು ನಾವೇ ಪ್ರಮುಖರೆಂದು ಹೇಳಿಕೊಳ್ಳುವಂಥವರ ಪರೀಕ್ಷೆಯು ಈ ಕಾಲದಲ್ಲಿ ಸರ್ವೋತ್ಕೃಷ್ಟವಾಯಿತು. ಕಾಂಗ್ರೆಸದ ಚಳವಳಿಯಿಂದ ಜಾಂಬೂರಿಯು ಲಗಾಟ ಹೊಡೆದಂತೆ ಪೋಲಿಂಗದಲ್ಲಿಯೂ ಸಹಕಾರ ಪಕ್ಷಕ್ಕೆ ಧಾರವಾಡವು ಅನುಕೂಲವೆಂದು ಜಂಭ ಬಡಿಯುವವರಿಗೂ ಲಗಾಟ ಬಂತು. ಉಮೇದವಾರರು ತಮ್ಮ ಪರಮ ಮಿತ್ರರೆಂಬವರೆಂದು ಯಾವ ವರ್ಗದವರ ಮೇಲೆ ಹೆಚ್ಚು ನಂಬಿದ್ದರೋ ಅವರೇ ನಡುನೀರಲ್ಲಿ ಕೈಬಿಟ್ಟರು. ಒಟ್ಟಿನಿಂದ ದರಬಾರಹಾಲಿನ ಪೋಲಿಂಗವು ಕಾಂಗ್ರೆಸದ ಶಾಂತಿಮಯ ಯುದ್ಧದಲ್ಲಿ ದರಬಾರಿಗಳಿಗೆ ಸೋಲು ತಂತೆಂದು ಸಾರಿ ಹೇಳುವಂತಾಯಿತು.

ಕರ್ನಾಟಕ ಕಾಲೇಜದ ಹೋಟು ಕೊಟ್ಟ ಪ್ರೊಫೇಸರರಿಗೆ ಬಹಿಷ್ಕಾರ.

ಇಲ್ಲಿಯ ಕರ್ನಾಟಕ ಕಾಲೇಜದಲ್ಲಿಯ ಕೆಲ ಪ್ರೊಫೇಸರರು ಹೋಟು ಕೊಟ್ಟಿದ್ದಾರೆ; ಇವರಲ್ಲಿ ಪ್ರೊಫೇಸರ ಭಟ್ಟ ಮತ್ತು ಘೋಷೇಶ್ವರರೂ ಆಗಿದ್ದಾರೆ. ನಿನ್ನಿನ ದಿವಸ ಪಿ. ಈ ಮತ್ತು ಇಂಟರದ ವಿದ್ಯಾರ್ಥಿಗಳು ಇವರಿಗೆ ಬಹಿಷ್ಕಾರ ಹಾಕಿದರು. ಪ್ರೊ|| ಘೋಷೇಶ್ವರರು ಇಂಟರ ವರ್ಗದಲ್ಲಿ ಹೋದ ಕೂಡಲೆ ವಿದ್ಯಾರ್ಥಿಗಳು ಎದ್ದೇ ಹೋದರು. ಪ್ರೊ|| ಭಟ್ಟರು ಪಿ. ಈ ವರ್ಗದ ಹತ್ತರ ಬಂದಕೂಡಲೆ, ಗುಂಪುಗಟ್ಟಿಕೊಂಡು ಹೊರಗೆ ನಿಂತಿದ್ದ ವಿದ್ಯಾರ್ಥಿಗಳು ಅವರ ಎದುರಿಗೇ ಹೊರಟು ಹೋದರು.

ಗದಗು ಗಂಡುಗಲಿಯಾಯಿತು.

ಗದಗಿನಲ್ಲಿ ೨೨೫೭ ಮತಗಳಿರುತ್ತವೆ. ಇವುಗಳಲ್ಲಿ ಹಿಂದೂ ಜನರ ಏಳು ಹೋಟು ಬಿದ್ದವು. ಮುಸಲಮಾನರ ಒಂದೂ ಹೋಟು ಬೀಳಲಿಲ್ಲ.

ಮಿಶ್ರೀಕೋಟಿ.

ಸಂಪೂರ್ಣ ಹರತಾಳ.

ತಾ|| ೧೦-೯-೩೦ನೇ ದಿವಸ ಎಲ್ಲ ಅಂಗಡಿ ಬಂದುಮಾಡಿದ್ದೆವು. ಪ್ರತ್ಯು ಮನೆಮನೆಗೆ ಹೋಗಿ ಹೋಟು ಕೊಡಬೇಡಿರೆಂದು ಬೇಡಿಕೊಂಡೆವು. ಯಾರೂ ಮತಕೊಡಲಿಲ್ಲ. ನಗರಸಂಕೀರ್ತನೆ ಕೈಕೊಟ್ಟೆವು.

ಹಾವೇರಿಯಲ್ಲಿ ಪೋಲಿಂಗ ಪೂಜಿ

ದಾರಿಗುಂಟ ಸಗಣಿಯ ಬುಟ್ಟಿ, ಬಳೆಗಳ ಸರ.

ಬಳೆ ಇಟ್ಟುಕೊಂಡು ವೋಟು ಕೊಡಬೇಕು.

(೧) ಹಾವೇರಿಯಲ್ಲಿ ಸುಮಾರು ೫೦೦ ಮತಗಳಿದ್ದು ಅವುಗಳಲ್ಲಿ ಹಿಂದೂ ಮತಗಳಲ್ಲಿ ಒಂದು ಸಹ ಬೀಳಲಿಲ್ಲ !!!

(೨) ಮುಸಲ್ಮಾನೀ ಮತಗಳಲ್ಲಿ ಐದು ಮಾತ್ರ ಬಿದ್ದವೆ !!

(೩) ಗುತ್ತಲದ ಗುಂಪಿನ ಪೋಲಿಂಗ ಸ್ಟೇಶನ್ನದಲ್ಲಿ ಹಿಂದೂ ಮತಗಳು ಒಂದೂ ಸಹ ಬಿದ್ದಿಲ್ಲ. ಮುಸಲ್ಮಾನೀ ಮತಗಳಲ್ಲಿ ಒಂದೇ ಬಿತ್ತು.

(೪) ಹಾವೇರಿಯಲ್ಲಿ ಕೌನ್ಸಿಲ್ ಬಹಿಷ್ಕಾರದ ಕಾರ್ಯವು ಬಹಳೇ ಹೊಗಳತಕ್ಕದ್ದಾಯಿತು. ಪೋಲಿಂಗ ಸ್ಟೇಶನ್ನದ ೫೦ ಸ್ವಯಂಸೇವಕರು ಕೌನ್ಸಿಲ ಬಹಿಷ್ಕಾರದ ಪದವನ್ನು ಹಾಡುತ್ತ ನಿಂತಿದ್ದರು. ಮತ್ತು ಕರೇ ನಿಶಾನಿಗಳನ್ನು ಹಿಡಿದುಕೊಂಡು ನಿಂತಿದ್ದರು!! ಇಷ್ಟೇ ಅಲ್ಲ; ಅಲ್ಲಲ್ಲಿ ಸಗಣಿಯಿಂದ ತುಂಬಿದ ಬುಟ್ಟಿಗಳನ್ನೂ ಇಟ್ಟಿದ್ದರು!!! ಹಾಗೂ ಪೋಲಿಂಗ ಸ್ಟೇಶನ್ನಕ್ಕೆ ಹೋಗುವ ದಾರಿಗೆ ಬಳೆಗಳ ಸರಗಳನ್ನು ತೂಗು ಬಿಟ್ಟಿದ್ದರು!!! ಇವೆಲ್ಲಕ್ಕಿಂತ ಹೆಚ್ಚಾಗಿ ಒಂದೇ ಸ್ಥಳದಲ್ಲಿ ಒಬ್ಬ ಬಳೆಗಾರ ಹೆಣ್ಣುಮಗಳು (ಅಂದರೆ ಬಳೆಗಾರ ಮುದುಕಿಯು) ತನ್ನ ಮುಂದೆ ಬಳೆಗಳ ಗಂಟನ್ನು ಇಟ್ಟುಕೊಂಡು ಹೀಗೆ ಕೂಗಿ ಹೇಳುತ್ತಿದ್ದಳು. ಮತಕೊಡಲಿಕ್ಕೆ ಹೋಗುವ ಗಂಡಸರು ನನ್ನಲ್ಲಿ ಮೊದಲು ಬಳೆಗಳನ್ನು ಇಟ್ಟುಕೊಂಡು ನಂತರ ಮತಕೊಡಲಿಕ್ಕೆ ಹೋಗಿರಿ! "

ಹಾವೇರಿಯಲ್ಲಿ ಪೋಲಿಂಗ ಸ್ಟೇಶನ್ನದ ಮುಂದೆ ೧೨ ಜನ ಪೋಲೀಸರು ನಿಂತಿದ್ದರು.

ಛಬ್ಬಿಯಲ್ಲಿ ಹ. ತಾಳ,

—)(೦)(—

ಹುಬ್ಬಳ್ಳಿ ತಾಲೂಕ ಛಬ್ಬಿಯಲ್ಲಿ ಹರತಾಳವಾಯಿತು. ಸಾಹುಕಾರ ಶ್ರೀ. ದೇವೇಂದ್ರಪ್ಪಾ ಶಿವಡೊಳ್ಳಿಯವರ ಸಹಾಯದಿಂದ ಶ್ರೀ ರಾಮದೀಕ್ಷಿತರು ಸ್ವಯಂಸೇವಕರೊಂದಿಗೆ ಪಿಕೆಟಿಂಗ ಮಾಡಿದರು. ಛಬ್ಬಿ ಮತ್ತು ವರೂರಿನ ಒಂದೂ ವೋಟು ಬೀಳಲಿಲ್ಲ. ಬೇರೆ ಕೆಲ ಗ್ರಾಮಗಳ ಜನರು ಬಂದು ಕೆಲ ವೋಟು ಹಾಕಿಹೋದರು.

ನವಲೂರಲ್ಲಿ ಪೋಲೀಸರ ಉದ್ದಾಮತನ.

ನಿನ್ನೆ ತಾ|| ೧೦-೯-೩೦ ನೇ ದಿವಸ ನಡೆದ ಕೌನ್ಸಿಲ ಚುನಾವಣೆಯ ಕಾಲಕ್ಕೆ ಧಾರವಾಡ ಜಿಲ್ಲೆಯೊಳಗಿನ ಎಲ್ಲ ಪೋಲಿಂಗ ಸ್ಟೇಶನ್ನುಗಳ ಮುಂದೆ ಸ್ವಯಂಸೇವಕರು ಮತದಾರರಿಗೆ ಮತಕೊಡಬೇಡಿರೆಂದು ಹೇಳುವದರ ಸಲುವಾಗಿ ನಿಂತಿದ್ದರೆಂಬ ಸಂಗತಿಯು ಎಲ್ಲರಿಗೂ ವಿದಿತವಾದದ್ದೇ ಇರುತ್ತದೆ. ಅವರ ಜೊತೆಗೆ ಪೋಲೀಸರೂ ನಿಂತಿರುತ್ತಿದ್ದದ್ದು ಸರ್ವಸಾಕ್ಷಿಗಿರುತ್ತದೆ. ಈ ಪ್ರಕಾರ ಸ್ವಯಂಸೇವಕರೂ ಪೋಲೀಸರೂ ಕೂಡಿಯೇ ನಿಂತುಕೊಂಡು ಶಾಂತರೀತಿಯಿಂದ ಪಿಕೆಟಿಂಗ ಮಾಡುತ್ತಿರಲು ಎಲ್ಲೆಲ್ಲಿಯೂ ಶಾಂತತೆಯೂ ನೆಲೆಗೊಂಡಿತ್ತು. ಆದರೆ ಧಾರವಾಡದಿಂದ ೩ ಮೈಲುಗಳ ಅಂತರದ ಮೇಲಿರುವ ನವಲೂರ ಗ್ರಾಮದ ಪೋಲಿಂಗ ಸ್ಟೇಶನ್ನಿನ ಎದುರಿಗೆ ಸ್ವಯಂಸೇವಕರು ಪಿಕೆಟಿಂಗ ಮಾಡುತ್ತಿರಲು ಅಲ್ಲಿಯೇ ಪಹರೇ ಮಾಡುತ್ತಿದ್ದ ೬೯೦, ೫೭೦ ನಂಬರಿನ ಪೋಲೀಸರೂ ೪೩೯ ನಂಬರಿನ ಪೋಲೀಸ ಅಮಲದಾರನೂ ಸ್ವಯಂಸೇವಕರಿಗೆ ನೀವು ಇಲ್ಲಿ ನಿಲ್ಲಕೂಡದು ೧೦೦ ಮೊಳ ಅಂತರದ ಮೇಲೆ ನಿಲ್ಲಿರಿ ಎಂದು ಹೇಳಿದರು. ಆದಕ್ಕೆ ಸ್ವಯಂಸೇವಕರು ಕಾಂಗ್ರೆಸಿನ ಆಜ್ಞೆಯ ಪ್ರಕಾರ ಅವರ ಮಾತು ಅಲಕ್ಷ್ಯ ಮಾಡಿ ಅಲ್ಲಿಯೇ ನಿಲ್ಲಲು ಆ ಮೂವರೂ ಪೋಲೀಸರು ಅಲ್ಲಿ ಪಿಕೇಟಿಂಗ ಮಾಡುತ್ತಿದ್ದ ಸ್ವಯಂಸೇವಕರ ಕುತ್ತಿಗೆಗೆ ಕೈ ಹಚ್ಚಿ ದೂಡಿ ಹಾಕಿದರು. ಈ ಪ್ರಕಾರ ಉದ್ದಾಮತನದಿಂದ ವರ್ತನ ಮಾಡಲು ಈ ಪೋಲೀಸರಿಗೆ ಯಾವ ಅಮಲದಾರರು ಬೆಂಬಲವಾಗಿದ್ದರೋ ದೇವರೇ ಬಲ್ಲ! ಯಾವ ಪೋಲಿಂಗ ಸ್ಟೇಶನ್ನುಗಳೆದುರಿಗೆ ಪೋಲೀಸ ಇನ್ಸಪೇಕ್ಟರರೇ ಮೊದಲಾದವರು ಪಹರೇ ಮಾಡುತ್ತಿದ್ದರೋ ಅಲ್ಲಿ ಯಾವದೇ ತರದ ಗೈರ ವರ್ತನವು ಆಗದಿರಲು, ಕನಿಷ್ಟ ದರ್ಜೆಯ ಕಾನಸ್ಟೇಬಲರಿಗೆ ಈ ತರಹದ ಉದ್ದಾಮತನದ ವರ್ತನ ಮಾಡುವ ದುರ್ಬುದ್ಧಿಯು ಯಾಕೆ ಹುಟ್ಟಿತೋ ಯಾರ ಪ್ರೇರಣೆಯಿಂದ ಹುಟ್ಟಿತೋ ನಾನರಿಯೆನೆಂದು ಒಬ್ಬರು ಬರೆಯುತ್ತಾರೆ.

ಪಂಡಿತ ಮೋತಿಲಾಲರು ಬಿಡುಗಡೆಯಾದ ಕೂಡಲೆ, ಕಾಂಗ್ರೆಸದ ಅಧ್ಯಕ್ಷರಾಗತಕ್ಕದ್ದು ಡಾಕ್ಟರರ ಅಭಿಪ್ರಾಯದ ಪ್ರಕಾರ ಹವೆಗಾಗಿ ಮಸೂರಿಗೆ ಹೋಗುವರು. ಇವರು ಪೂರ್ಣ ಗುಣಹೊಂದಿ ಬರುವತನಕ ಮೌ. ಖಾಲಿಕ ಝಮಾನರೇ ಅಧ್ಯಕ್ಷರಾಗುವರು. ಪಂಡಿತರ ಬಾಯಿಯಿಂದ ಇನ್ನೂ ರಕ್ತ ಬೀಳುತ್ತಿದ್ದು, ೧೪ ಪೌಂಡು ತೂಕ ಕಡಿಮೆಯಾಗಿರುತ್ತದೆ.

ಹಿರೇಕೇರೂರ

——(೦)——

ಈ ತಾಲೂಕಿನಲ್ಲಿ ೧೭೮೦ ಮತಗಳುಂಟು. ಇವುಗಳಲ್ಲಿ ೩೯ ಮತಗಳು ಬಿದ್ದವು.

ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ಒಡಂಬಡಿಕೆ ಮುರಿಯಿತು.

——(೦)——

ಮಹಾತ್ಮರು ಇಂಗ್ರೇಜಿ ಸರಕಾರಕ್ಕೆ ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ಹಾಕಿದ ಮೊದಲನೆಯ ಕರಾರವು "ಹಿಂದೀ ಜನರು ಬೇಡಿದ ಕೂಡಲೆ ಇಂಗ್ಲಿಷರು ಹಿಂದುಸ್ಥಾನವನ್ನು ಬಿಟ್ಟು ಹೋಗಬೇಕೆಂದುಂಟು. ಇದು ಅತ್ಯಂತ ಅವ್ಯವಹಾರ್ಯ ಮತ್ತು ಅಪದ್ಧವೆಂದು ಮವಾಳರೂ, ಇಂಗ್ರೇಜಿ ಜನರೂ ಅಂದು ಮಹಾತ್ಮರು ಹಿಮಾಲಯದಂಥ ದೊಡ್ಡ ತಪ್ಪು ಮಾಡಿದರೆಂದು ಟೀಕಿಸಿದ್ದಾರೆ ಮಹಾತ್ಮರಿಗೆ ಅನುಕೂಲವಾಗಿ ದಕ್ಷಿಣ ಆಫ್ರಿಕೆಯಲ್ಲಿ ಇದೇ ವಿಷಯ ನಡೆದದೆ. ಈ ತಿಂಗಳ ಕೊನೆಯಲ್ಲಿ ಲಂಡನದಲ್ಲಿ ಕೂಡುವ ಸಾಮ್ರಾಜ್ಯ ಪರಿಷತ್ತಿಗೆ ಅಧ್ಯಕ್ಷರಾದ ಮಿ. ಹರ್ಟಜಾಗ ಸಾಹೇಬರು ಹೋಗತಕ್ಕವರಿದ್ದಾರೆ. ಇವರು ಆಫ್ರಿಕೆಯು ಬೇಕಾದಾಗ ಸ್ವತಂತ್ರವಾಗಬೇಕೆಂಬ ಒಪ್ಪಿಗೆಯನ್ನು ಪಡೆಕೊಳ್ಳಲಿಕ್ಕೇ ಅಲ್ಲಿಗೆ ಹೋಗುತ್ತೇವೆಂದು ಪ್ರಸಿದ್ಧ ಮಾಡಿದ್ದಾರೆ ಆಫ್ರಿಕೆಯ ತತ್ವವನ್ನು ಹಿಂದುಸ್ಥಾನಕ್ಕೆ ಏಕೆ ಹಚ್ಚಬಾರದು ?

ಲಂಡನದಲ್ಲಿ ಅದ್ಭುತವಾಗಿ ಅಗ್ನಿಕೋಪ

—(೦)—

ಲಂಡನಪಟ್ಟಣದಲ್ಲಿ ಕಾಫೀ ಕೋಕೋ ಮುಂತಾದ ಪದಾರ್ಥಗಳ ಚೀಲಗಳನ್ನಿಟ್ಟಿದ್ದ ಐದು ಅಂತಸ್ತಿನ ದೊಡ್ಡ ವಖಾರಕ್ಕೆ ಬೆಂಕಿ ಹತ್ತಿ ಪೂರಾ ಸುಟ್ಟುಹೋಯಿತು. ಇದರ ಉರಿಯು ಎರಡು ಸಾವಿರ ಫೂಟು ಎತ್ತರವಾಗಿತ್ತು. ೯೦ ಇಂಜಿನುಗಳು ನೀರು ಹೊಡೆದವು ೪೫ ಲಕ್ಷದ ಹಾನಿಯಾಯಿತು. ಉರಿಯನ್ನು ನೋಡಲು ಲಕ್ಷಕ್ಕಿಂತ ಹೆಚ್ಚು ಜನ ಕೂಡಿತ್ತು.

ರೈತರಿಗೆ ಪಟ್ಟಿ ಕೊಡಬೇಡಿರೆಂದು ಉಪದೇಶ ಮಾಡಿದಳೆಂಬ ಆರೋಪದಿಂದ ಸರದಾರ ಪಟೇಲರ ಚಿರಂಜೀವಿ ಮಣಿಬೇನಿಯನ್ನು ದಸ್ತಗಿರಿ ಮಾಡಿದರು. ನಾಲ್ಕು ತಿಂಗಳ ಸಕ್ತ ಶಿಕ್ಷೆಯಾಯಿತು.

ರಾಣೀಬೆನ್ನೂರ ತಾಲೂಕಿನಲ್ಲಿ ೨೪೬೧ ವೋಟುಗಳಿದ್ದು ೧೭ ವೋಟು ಬಿದ್ದಿರುತ್ತವೆ.

ಇಂಗ್ಲಂಡದಲ್ಲಿ ಕಾಂಗ್ರೆಸ್ಸಿಗೆ ಬೆಂಬಲ.

—(೦)—

ಇಂಗ್ಲಂಡದಲ್ಲಿ ಕೆಲ ರಾಜಕೀಯ ಪಂಗಡದವರು ಕಾಂಗ್ರೆಸದ ಬೇಡಿಕೆಗೆ ಬೆಂಬಲವಿತ್ತಿದ್ದಾರೆ ಕಾಮನಸವೆಲ್ಥ ಆಫ ಇಂಡಿಯಾ ಎಂಬ ಸಭೆಯವರು.

ಹಿಂದುಸ್ಥಾನದ ಮುಖಂಡರು ಇಂಗ್ಲಿಷ ಸರಕಾರಕ್ಕೆ ಹಾಕಿದ ಐದು ಕರಾರುಗಳು ನ್ಯಾಯಯುಕ್ತಿಕವಾಗಿದ್ದು, ಹಿಂದುಸ್ಥಾನ ಸರಕಾರದವರು ಅದೇ ಧೋರಣದಿಂದ ಒಡಂಬಡಿಕೆಯ ಪ್ರಯತ್ನ ಮಾಡಬೇಕು. ಮತ್ತು ಮಂತ್ರಿಗಳು ಅದಕ್ಕೆ ಉತ್ತೇಜನ ಕೊಡಬೇಕು.

ಎಂಬದಾಗಿ ಠರಾವು ಪಾಸ ಮಾಡಿದ್ದಾರೆ.

ನೋಟೀಸು

ನಾಗವ್ವಾ ಕಂದಿ ರಾಮನಗೌಡಾ ಹುಡೇದವರ ಸಾ|| ಸಾಳೀ ಹಾಲಬಸ್ತಿ ಅಗಡಿ ತಾ|| ಹುಬ್ಬಳ್ಳಿ ಇವರಿಗೆ-

ಕೆಳಗೆ ಸಹಿ ಮಾಡಿದ ಈ ಜಾಹೀರ ನೋಟೀಸಿನಿಂದಾ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನವಾದ ಮೇಲೆ ನೆರೆತು ದೊಡ್ಡವಳಾಗಿ ನನ್ನ ಮನಿಗೆ ೨-೩ ಸಾರೆ ನಡಿಯಲಿಕ್ಕೆ ಬಂದಿ ೨-೩ ಸಾರೆ ನಡಿಯಲಿಕ್ಕೆ ಬಂದಾಗ್ಯಾದರೂ ಕೂಡಾ ನಿನ್ನ ಚಾಲಚಲಾವಣಿ ವಗ್ಯೆರೆ ನೋಡಿದ್ದರೆ ನನ್ನ ಮನಸ್ಸಿಗೆ ಅಗದೀ ಕೆಟ್ಟ ಅನಿಸಿ ನಾನು ಮತ್ತು ನಮ್ಮಲ್ಲಿಯ ಕೆಲ ೨ ಸಭ್ಯ ಗೃಹಸ್ಥರ ಕಡಿಂದಾ ಮತ್ತು ನಿನ್ನ ತಾಯಿ ಕಡಿಂದಾ ನಿನ್ನ ನಡತೀ ಸುಧಾರಿಸಿಕೊಳ್ಳುವ ಬಗ್ಗೆ ಹೇಳಿಸಿದೆನು ಈ ಹೇಳಿದ ಮಾತಿಗೆ ನೀನು ನನ್ನ ದುರ್ವರ್ತನವನ್ನು ದೂರ ಮಾಡಿಕೊಳ್ಳದೇ ಮತ್ತೊಂದು ಕೆಲಸ ಕೈಕೊಂಡಿ ಆದರೂ ನಾನು ನಿನ್ನ ಮೇಲೆ ಚಿಂತಾವಶನಾಗಿ ನಿನ್ನ ಕೂಡ ನಾನು ಪ್ರಪಂಚ ಮಾಡುವದು ಯೋಗ್ಯವಲ್ಲೆಂತಲೂ ನಿನ್ನಿಂದ ನನಗೆ ಘಾತವಾದೀತೆಂತಲೂ ತಿಳಿದೆ ನೀನು ಮಾಡುವ ದುಷ್ಕೃತ್ಯಗಳನ್ನು ನೋಡಿಕೋತಾ ಇರುತ್ತಿರಲಿಕ್ಕೆ ನನ್ನ ಗೈರಹಾಜರಿಯಲ್ಲಿ ಅಜಮಾಸ ೨ ವರ್ಷಗಳ ಹಿಂದೆ ನನ್ನ ಮನಿಯಲ್ಲಿಯೋ ದಾಗೀನೆಗಳು ಮತ್ತು ರೋಖು ರೂಪಾಯಿಗಳನ್ನು ತಗೊಂಡು ಹೋಗಿರುತ್ತೀದಿ ಈ ಬಗ್ಗೆ ನಾನು ಬಂದನಂತರ ಈ ಬಗ್ಗೆ ಹಕ್ಕೀಕತ್ತು ತಿಳಕೊಂಡು ನಿನ್ನ ಬಗ್ಗೆ ವಿಚಾರಿಸಲಾಗಿ ನೀನು ನಿನ್ನ ತವರಮನಿಗೆ ಕೆಳಗೆ ಕಂಡ ಸಾಮಾನು ವ ರೂಪಾಯಿ ತಗೊಂಡು ನನ್ನ ದ್ವೇಷಿಕರು ನಿನ್ನ ಪರಿವಾರ ಬಂಧುಗಳಿಂದ ಕೆಲವು ಜನರನ್ನು ಕೂಡಿಕೊಂಡು ಹೋದದ್ದು ತಿಳಿದು ನಿನ್ನ ತವರಮನಿಗೆ ನಾನು ಮತ್ತು ಕೆಲವು ಸಭ್ಯ ಗೃಹಸ್ಥರನ್ನು ಕರಕೊಂಡು ಬಂದು ಎಲ್ಲ ಸಂಗತಿ ವಿಚಾರ ಮಾಡಿ ನಿನ್ನ ತವರಮನಿಯವರು ದಾಗೀನೆ ಮತ್ತು ರೂಪಾಯಿ ಕೊಡಲಿಕ್ಕೆ ಒಪ್ಪಿ ಇನ್ನೊಂದು ವೇಳೆ ಬರ್ರಿ ವ್ಯೆರೆ ನಮ್ಮ ಜತ ಕಳಿಸಿದರು ಅನಂತರ ಸದರ ದಾಗೀನೆಗಳ ಮತ್ತು ರೂಪಾಯಿಗಳ ಬಗ್ಗೆ ೩-೪ ಸಾರೆ ಯಾಚಿಸಿದರೂ ಇವತ್ತ ನಾಳೆ ಅಂತಾ ಕಡಿಗೆ ನಿನ್ನ ವ್ಯವಹಾರ ಬಂಧುಗಳು ನನಗೆ ಧಮಕೀ ಕೊಟ್ಟು ಕಳಿಸಿದರು ಮತ್ತು ನೀನು ವೈದ ದಾಗೀನೆಗಳ ತಪಶೀಲು-

ನಂತಿ ಜೋಡು ೧ ತೊಲಿ ೨೪ ರೂ|| ೫೦೦ ಬಂಗಾರ ಬಳಿ ೨ ತೊಲಿ ೫ ರೂ|| ೧೦೫ ಸರಿಗೆ ಒಂದು ತೊಲಿ ೮ ರೂ|| ೧೬೮ ತೋಡೇ ಚೂಟದ ಬೆಳ್ಳಿ ಸರಪಳಿ ತೊಲಿ ೧೮೦ ಕಿಮ್ಮತ್ತು ರೂಪಾಯಿ ೮೦ ರೋಖು ರೂಪಾಯಿ ೨೦೦ ಈ ಪ್ರಕಾರ ಸಾಮಾನು ವ ರೂಪಾಯಿ ವೈದಿರುತ್ತೀದಿ ಆದಕಾರಣ ಈ ನೋಟೀಸಿನಿಂದಾ ಈಗ ನಿನಗೆ ತಿಳಿಸುವದೇನಂದರೆ. ಈ ನೋಟೀಸ ನಿನಗೆ ಮುಟ್ಟಿದ ಒಂದು ವಾರದೊಳಗಾಗಿ ಮೇಲ್ಕಂಡ ರೂಪಾಯಿ ೨೦೦ ಮತ್ತು ದಾಗೀನೆ ಇಲ್ಲವೇ ಅವುಗಳ ಕಿಮ್ಮತ್ತು ಕೊಡಬೇಕು ಇಲ್ಲವಾದರೆ ಇದರ ಬಗ್ಗೆ ದಿವಾಣಿ ಕೋರ್ಟಿನಲ್ಲಿ ಇಲಾಜ ಮಾಡುವದರಲ್ಲಿ ಬರುವದು ಮತ್ತು ನಿನ್ನ ಬಗ್ಗೆ ನೀನು ನನಗೆ ಹೆಂಡತಿಯಾಗಿಯೂ ನಿನಗೆ ನಾನು ಗಂಡನಾಗಿಯೂ ಇರುವ ಶರೀರ ಸಂಬಂಧ ಇವತ್ತಿಗೆ ನಷ್ಟವಾಗಿದೆ ಅಂತಾ ತಿಳಕೊಳ್ಳಬೇಕು ಗಂಡಹೆಂಡರೆಂಬ ಭಾವವು ನಾನು ಇವತ್ತಿಗೆ ನಷ್ಟ ಮಾಡಿಕೊಂಡಿರುತ್ತೇನೆ ಮತ್ತು ನನ್ನ ಮನಿಯಿಂದ ನೀನು ಹೋಗುವ ಕಾಲದ ಮೊದಲೇ ೩-೪ ತಿಂಗಳ ನನ್ನ ನಿನ್ನ ಪ್ರಪಂಚ ಸುರುವು ಇಟ್ಟಿಲ್ಲ ಮತ್ತು ನೀನು ಹೋಗಿ ೨ ವರ್ಷಗಳಾದವು ಹೋಗುವ ಕಾಲಕ್ಕೆ ಗರ್ಭಿಣಿ ವಗ್ಯೆರೆ ಇಟ್ಟಿಲ್ಲಾ ಹೀಗಿದ್ದ ಮುಂದೆ ಯಾವದೇ ತರದಿಂದ ಯಾರಾದರೂ ನನ್ನ ವಾರಸಾ ಹೇಳುವದಕ್ಕೆ ಬರತಾರರು ಬಂದರೂ ಅವರು ನನ್ನ ಮೇಲೆ ಅಗರ ನನ್ನ ಆಸ್ತಿ ಮೇಲೆ ಬದ್ಧ ಇರುವದಿಲ್ಲಾ ಮತ್ತು ನೀನು ನಿನ್ನ ಹೆಸರಿನ ಮುಂದೆ ಕೋಂ ಅಂಬುವ ಜಾಗೆಯಲ್ಲಿ ನನ್ನ ಹೆಸರು ಬರಿಯಕೂಡದು ಬರದರೂ ನನ್ನ ಮೇಲೆ ಬದ್ಧವಿಲ್ಲ ಆದ ಪ್ರಯುಕ್ತ ನಿನ್ನ ಮೇಲೆ ನನಗಿದ್ದ ಹಕ್ಕು ನೋಟೀಸಿನ ಪ್ರಕಾರ ತೆಕ್ಕೊಂಡಿರುತ್ತೇನೆ ತಿಳಿಯುವದು ಮತ್ತು ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಆದೆ ತಾ|| ೩-೯-೩೦

ಸಹಿ- ಬರಮಗೌಡಾ ದತ್ತಕ ಕಂದಿ ಯಂಕನಗೌಡಾ ಕಾಡಪ್ಪಗೌಡ್ರ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂಜೀವ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹೋಗುವ ಕುಸುಮರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡು ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ವಾಸಂತಿಬಾಯಿ. ದೀಕ್ಷಿತ.
C/o ಮಧ್ಯಜ್ಯಾಂಕ ಧಾರವಾಡ

ಸೂಚನೆ:— ಈ ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತ ನೋಡಿ ಈ ಬೇಡಿಕೆಯನ್ನು ಮಾಡುತ್ತಲಿರುವಿರೆಂಬುದನ್ನು ಬರೆಯಬೇಕು.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦
೧೯-೧೧-೨೯ ಮೈಸೂರಸ್ಟೋರ,
ಬೆಳಗಾವಿಯವರ ಗಲ್ಲಿ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೩) ಧಾರವಾಡ ಶನಿವಾರ ತಾ|| ೧೯ನೇ ಸೆಪ್ಟಂಬರ ೧೯೩೧ (ಸಂಖ್ಯೆ ೩೦

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ [illegible] ಗುಣಕೊಡುವ ಔಷಧ ತಯಾರಿಸಲಾಗಿದೆ. [illegible] ಕಾಯುತ್ತದೆ. [illegible] ಧಾರಿಸುತ್ತದೆ. ಈ ಅಮೃತಸಿಂಧುವನ್ನು [illegible] ತೊಗೊಂಡ ಮೇಲೆ [illegible] ಕಿಮ್ಮತ್ತು ೧ ಬಾಟಲಿಗೆ [illegible] ಹಾಗು ಒಂದು ಬಾಟಲಿ [illegible]. ಅಂಚೆ ಹಾಗು ಪ್ಯಾಕಿಂಗ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ
[illegible]

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಕಸ್ಸಿನ ಪ್ರಕಾರ ತಿಂಗಳಾ ಕನಿಷ್ಟ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಜಿ. ಪಾಂಧೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಿಟಿಯು ಕಾ. ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮುದ್ದತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವನಿಂದ ತಿಳಕೊಳ್ಳಬೇಕು.

ವೆಂಕಟರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳ್ಳುವರು. ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ಒಕ್ಕ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ಬೇರೆ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ಪರ್ಣಲಾಖಾ ಭಾದ್ರಪದ ವದ್ಯ ೭

ಶ್ರೀ ಕೇಸರಿಯವರು ಮರೆಯದಂಥ ಕೆಲಸ ಮಾಡಿದರು.

ಕೌನ್ಸಿಲ ಚುನಾವಣೆಗೆ ಮೊದಲು ನಾಲ್ವರು ಉಮೇದವಾರರಾದರು. ರಾ. ಬ. ಕಂಬಳಿ ಮತ್ತು ಎಂ. ಗಿರಿಯಪ್ಪನವರು ಮೆಂಬರರಾದವರೇ ಇದ್ದರು. ಶ್ರೀ ಜೋಗರು ಕೌನ್ಸಿಲದ ವಾರಕರಿ ಪಂಥದವರು. ಶ್ರೀ ಕೇಸರಿಯವರು ಹೊಸಬರು. ಕಾಂಗ್ರೆಸ ಪಕ್ಷದವರು. ರಾ. ಬ. ಕಂಬಳಿ ಮತ್ತು ಎಂ. ಗಿರಿಯಪ್ಪನವರು ಉಮೇದವಾರಿಯ ಅರ್ಜಿಯನ್ನು ಕೊಟ್ಟ ಕೂಡಲೆ, ಕರ್ನಾಟಕ ಟಾಯಿಮ್ಸಕ್ಕೆ ಆನಂದದ ಅತಿರೇಕವಾಯಿತು. ಹನಮಂತನಂತೆ ಸೂರ್ಯಮಂಡಲಕ್ಕೇ ಜಿಗಿಯುವರೆಂದು ಕೂಗಿತು. ಆದರೆ ಬಹಿಷ್ಕಾರ ಮತ್ತು ನಾಲ್ವರ ಹೊಡೆದಾಟದಲ್ಲಿ ತಮಗೆ ಯಶ ಬರಲಾರದೆಂದು ತಿಳಿದು ಎಂ. ಗಿರಿಯಪ್ಪನವರು ಉಮೇದವಾರಿಯನ್ನು ಹಿಂದಕ್ಕೆ ತಕ್ಕೊಂಡರು. ಮೂವರು ಉಳಿದರು. ಶ್ರೀ ಕೇಸರಿಯವರೂ ರಾಜೀನಾಮೆ ಕೊಡಬೇಕೆಂಬ ಪ್ರಯತ್ನ ನಡೆಯಿತು. ಶ್ರೀ ಜೋಗರು ಕೊಟ್ಟರೆ ತಾವೂ ಕೊಡಲಿಕ್ಕೆ ಸಿದ್ಧರಾಗಿರುವಂತೆ, ಇವರು ಕಾಂಗ್ರೆಸ ಕಮಿಟಿಯ ಕಯ್ಯಲ್ಲಿ ರಾಜೀನಾಮೆಯನ್ನು ಸಹ ಬರಕೊಟ್ಟರು. ಶ್ರೀ ಕೇಸರಿಯವರೂ ಬಿಟ್ಟು, ಒಂದು ಸ್ಥಳವು ತೆರವಾಗಿ, ಎಂ. ಗಿರಿಯಪ್ಪನವರು ಹಿಂದಿನಂತೆ ಈ ಸಾರೆಯೂ ಆಯಾಸವಿಲ್ಲದೆ, ಇದನ್ನು ಸೇರಬೇಕಾಗಿತ್ತು. ಸದ್ದಿಲ್ಲದೆ, ಸಪ್ಪಗೆ ಚುನಾವಣೆಯಾಗಬೇಕೆಂದು ದೇವರ ಮನಸಿಗೆ ಬರಲಿಲ್ಲ. ಧಾರವಾಡ ಜಿಲ್ಲೆಯಲ್ಲಿ ಕಾಂಗ್ರೆಸದ ಬಲವೆಷ್ಟಿರುತ್ತದೆಂಬುದನ್ನು ತೋರಿಸಬೇಕೆಂದು ಆತನ ಮನಸಿಗೆ ಬಂತು. ಶ್ರೀ ಜೋಗರು ರಾಜೀನಾಮೆ ಕೊಡಬೇಕೆಂದು [illegible] ನೂರಾರು ಸಹಿಗಳ ಒಂದು ಪತ್ರವು ಅವರಿಗೆ ಅತ್ಯಂತ ವಿನಯದ ಶಬ್ದಗಳಲ್ಲಿ ಕಳಿಸಲ್ಪಟ್ಟಿತು. ಅವರು ತಮ್ಮ ಚುನಾವಣೆಯಾಗುವದೆಂದು ಮನಗಂಡದ್ದರಿಂದ, ರಾಜೀನಾಮೆ ಕೊಡಲಿಲ್ಲ. ಹೀಗೆ ಇವರಿಗೂ ಕಾಂಗ್ರೆಸ್ಸಕ್ಕೂ [illegible]ವಾಯಿತು.

ರಾ. ಬ. ಕಂಬಳಿ, ಎಂ. ಜೋಗ ಮತ್ತು ಶ್ರೀ ಕೇಸರಿ ಈ ಮೂವರು ಉಮೇದವಾರರಾದ್ದರಿಂದ, ಚುನಾವಣೆಯಾಗಲೇ ಬೇಕಾಯಿತು. ಸರಕಾರಕ್ಕೆ [illegible] ರೂಪಾಯಿಗಳ ಚೀಲ ಬಂತು. ಸರಕಾರದ ಹಿತಬಯಸುವವರು ರಾಜೀನಾಮೆ ಕೊಟ್ಟಿದ್ದರೆ ದುಡ್ಡಿನ ಉಳಿತಾಯವಲ್ಲದೆ, ಪೋಲೀಸ ಮತ್ತು ಪೋಲಿಂಗ ಆಫೀಸರರ ಶ್ರಮವುಳಿಯುತ್ತಿತ್ತು. ಇವರು ಸರಕಾರಕ್ಕಿಂತ ಸ್ವಾರ್ಥವನ್ನೇ ನೋಡಿದರು. ಆ ಸ್ವಾರ್ಥದಲ್ಲಿ ತಮಗೆ ಜನಬಲವು ಹೇಗಿರುತ್ತದೆಂಬದು ಜಗತ್ತಿಗೆ ತಿಳಿಯುವಂತೆ ಮಾಡಿಕೊಂಡರು. ಕೈ ತೋರಿಸಿ ಅವಲಕ್ಷಣವೆಂದು ಇವಕ್ಕೇ ಅನ್ನುತ್ತಾರೆ.

ಹುಬ್ಬಳ್ಳಿಯಲ್ಲಿ ಪೋಲಿಂಗ ಆದ ಕೂಡಲೆ ರಾ. ಬ. ಕಂಬಳಿಯವರ ಜಯವೆಂದು ಒಂದು ಹಸ್ತಪತ್ರಿಕೆಯು ಹೊರಟು, ಧಾರವಾಡ ಹುಬ್ಬಳ್ಳಿಯಲ್ಲಿ ಹಂಚಲ್ಪಟ್ಟಿತು. ಇದನ್ನು ಬೇರೆ ಊರುಗಳಿಗೂ ಕಳಿಸಿರಬಹುದು. ರಾ ಬ ರವರು ಪರಸ್ಥಳದಿಂದ ಬಂದ ವರ್ತಮಾನ ಕೇಳಿಕೊಂಡು ಇದನ್ನು ಹಂಚಹತ್ತಿದ್ದಿಲ್ಲ. ಏಕೆಂದರೆ- ಧಾರವಾಡದ ಕೋರ್ಟಿನಲ್ಲಿ ಸ್ವತಃ ಹಂಚಿಸುತ್ತಾರೆ. "ಎರಡು ಸಾವಿರ ಹೋಟುಗಳು ಬಿದ್ದವು. ಕಾಂಗ್ರೆಸದ ಪಿಕೆಟಿಂಗದ ಪರಿಣಾಮವೆಷ್ಟು ಆಗಲಿಲ್ಲ. ಜನರ ಪ್ರೀತಿಯು ಇದ್ದಲ್ಲಿ ಪಿಕೆಟಿಂಗದ ಪರಿಣಾಮವಾಗಲಿಲ್ಲೆಂತ ಇದರ ಮೇಲಿಂದ ಸ್ಪಷ್ಟ ತಿಳಿಯುವದಿಲ್ಲವೋ ?" ಎಂಬದಾಗಿ ಅದರಲ್ಲಿ ಮಜಕು ಇರುತ್ತದೆ. ಆ ಪರಾಕಿನ ಕೂಡ ಗದಗ, ಹಾವೇರಿ, ಧಾರವಾಡ ಮುಂತಾದ ಪಟ್ಟಣಗಳಲ್ಲಿಯೂ ಬೇರೆ ಕಡೆಯಲ್ಲಿ ಹೇಳಿದ ಪೋಲಿಂಗದ ಗ್ರಾಮಗಳಲ್ಲಿಯೂ ಹೇಗೆ ಮಂಗಳಾರತಿಯಾಯಿತೆಂಬದನ್ನಿಷ್ಟು ನೋಡಿಕೊಳ್ಳಬೇಕಾಗಿತ್ತು. ರಾ. ಬ. ರವರು ಕೂತು ಮಲಗಿದ್ದರೆ ನೆಟ್ಟಗಾಗುತ್ತಿತ್ತು; ರಾ. ಬ. ರವರು ಎಷ್ಟು ಪ್ರಶಂಸೆ ಮಾಡಿಕೊಂಡರೂ ಕಾಂಗ್ರೆಸದ ವಿಜಯವೇ ಆಗಿರುತ್ತದೆ. ಕೆಲ ವಿನೋದಿ ವಕೀಲರು ಪಕ್ಷಕಾರರಿಗೆ ನಿನ್ನ ಕೈಯ್ಯಲ್ಲಿ ಡಿಕ್ರಿಯ ಉತಾರ ಕೊಡಿಸಿದರಾಯಿತಲ್ಲೋ ಎಂದು ಆಶೆ ತೋರಿಸುತ್ತಾರೆ. ಖಟ್ಲೆ ವಿರುದ್ಧವಾಗಿ ತೀರ್ಪಿನ ಉತಾರ ತಕ್ಕೊಂಡ ಕಾಗದಕ್ಕೆ ಡಿಕ್ರಿ ಎಂದು ಅವರ ಕಯ್ಯಲ್ಲಿ ಕೊಡುವಂತೆ, ರಾ ಬ ಕಂಬಳಿಯವರು ಚುನಾವಣೆಯ ಡಿಕ್ರಿ ಪಡಕೊಂಡಂತಾಗಿರುತ್ತಾರೆ. ಬೇರೊಂದು ದೃಷ್ಟಿಯಿಂದ ನೋಡಿದರೆ- ರಾ. ಬ. ಕಂಬಳಿಯವರಿಗೆ ಈ ಡಿಕ್ರಿಯನ್ನು ಕೊಡಿಸಿದವರು ಕಾಂಗ್ರೆಸದವರಲ್ಲ; ಎಂ. ಜೋಗರಲ್ಲ; ಸರಕಾರದವರಲ್ಲ; ಶ್ರೀ. ಕೇಸರಿಯವರಾಗುತ್ತಾರೆ. ಅವರು ಉಮೇದವಾರಿಗೆ ರಾಜೀನಾಮೆ ಕೊಟ್ಟಿದ್ದರೆ- ಧಾರವಾಡ ಜಿಲ್ಲೆಯ ಆತ್ಮಾಭಿಮಾನವು ಪ್ರಕಟವಾಗುತ್ತಿದ್ದಿಲ್ಲ. ಆದುದರಿಂದ ಶ್ರೀ ಕೇಸರಿಯವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಕಡಿಮೆಯೇ ಆಗುತ್ತದೆ.

ಹೋಟಿಂಗದ ಸುದ್ದಿಗಳು.

ಗದಗದಲ್ಲಿ ಹೋಟಿಂಗ ಪೂಜಿಯಾಗುತ್ತಿತ್ತು. ಸಾಯಂಕಾಲದಲ್ಲಿ ರಾ. ರಾ. ಕಲಿ ಶಂಕರೆಪ್ಪನವರು ಹೋಟು ಹಾಕಿ ಅದಕ್ಕೆ ತಪ್ಪು ಹಚ್ಚಿದರು. ಇವರು ಹಟದಿಂದ ಹೋಟು ಕೊಟ್ಟ ಕೂಡಲೆ ಸ್ಥಳ ಪರಸ್ಥಳದ ಗ್ರಾಮದವರು ಧಿಕ್ಕಾರ ಶಬ್ದೋಚ್ಚಾರಮಾಡಿ, ಅಗಲೇ [illegible] ವಿಧಾನೆಗಳನ್ನು ಮಾಡಿ, ಊರ ತುಂಬ ಮೆರೆಸಿದರು. ಪ್ರಾತಃಕಾಲದಿಂದ ಸಾಯಂಕಾಲದ ತನಕ ಸ್ವಯಂಸೇವಕರು ರಾಷ್ಟ್ರಗೀತೆ ಹೇಳುತ್ತಾ, ಲೋಕ ಜಾಗೃತಿಯನ್ನುಂಟುಮಾಡಿದರು. ಶಂಕರೆಪ್ಪನವರ ಹೋಟು ದೀಪದ ಮುಂದಿನ ಕುಡಿ ಕತ್ತರಿಸಿ, ದೀಪವನ್ನು ಮತ್ತಿಷ್ಟು ಪ್ರಕಾಶಮಾಡಿದಂತಾಯಿತು.

ಬಂಕಾಪೂರ ತಾಲೂಕಿನಲ್ಲಿ ಬಂಕಾಪೂರ, ದುಂಡಸಿ, ಶಿಗ್ಗಾವಿಯಲ್ಲಿ ೧೪೪ ಕಲಮು ಹಚ್ಚಿ, ಪೋಲಿಂಗಸ್ಟೇಶನದ ಸುತ್ತಲು ೪೦೦ ಫೂಟಿನಲ್ಲಿ ಪಿಕೆಟಿಂಗ ಮಾಡದಂತೆ ಹುಕುಮು ಮಾಡಿದ್ದರು. ಧಾರವಾಡ ಕಾಂಗ್ರೆಸ ಕಮಿಟಿಯಿಂದ ಅಪ್ಪಣೆ ಪಡಕೊಂಡು, ಸತ್ಯಾಗ್ರಹ ಮಾಡಲು ಸ್ವಯಂಸೇವಕರಿಗೆ- ಸಮಯವಿರಲಿಲ್ಲ. [illegible] ಬರುವ ದಾರಿಗಳನ್ನು ಹಿಡಿದು ಪಿಕೆಟಿಂಗ ಮಾಡಿದರು,

ಧಾರವಾಡ ತಾಲೂಕ ನರೇಂದ್ರ ಗ್ರಾಮದಲ್ಲಿ ಸಾಯಂಕಾಲದ ತನಕ ಹೋಟು ಬೀಳಲಿಲ್ಲ. ಊರವರು ಹರತಾಳ ಮಾಡಿ, ಪೋಲಿಂಗದ ಕಾಮದಾರರು ಮತ್ತು ಪೋಲೀಸರಿಗೆ ಅನ್ನ-ನೀರು-ಹಾಲು ಮೊಸರು, ಚಹಾ ಚುಟ್ಟಾ ಸಹ ಸಿಗದಂತೆ ಮಾಡಿದ್ದರು. ಆದರೆ ಸಾಯಂಕಾಲದಲ್ಲಿ ರಾ. ರಾ. ಮಲ್ಲಪ್ಪರೆಂಬವರು ಹೋಟು ಹಾಕಿ, ಹಾಲೊಳಗೆ ಉಪ್ಪು ಬೆರೆಸಿದಂತೆ ಮಾಡಿದರು.

ಕಿತ್ತೂರಿಂದ ಬಂದ ಸ್ವಯಂಸೇವಕರು ಗದಗ, ನವಲೂರು, ನರಗುಂದ, ನವಲಗುಂದ, ತಡಕೋಡ, ಮುಗದ, ಅಳ್ಣಾವರ, ಉಪ್ಪಿನಬೆಟಗೇರಿ ಇಷ್ಟು ಕಡೆಗೆ ಬೇರೆ ಬೇರೆಯಾಗಿ ಹೋಗಿ, ಯಶಸ್ವಿಯಾಗಿ ಪಿಕೆಟಿಂಗ ಮಾಡಿದರು. ಹೋಟುಗಳ ವಿವರ- ಗದಗ ೩, ತಡಕೋಡ ೧, ಮುಗದ ೭, ಅಳ್ಣಾವರ ೫೫, ಬೆಟಗೇರಿ ೭, ಉಳಿದ ಸ್ಥಳಗಳ ಸುದ್ದಿಯು ಬಂದಿಲ್ಲ. ಕಿತ್ತೂರವರು ಯಶಸ್ವಿಯಾಗಿ ಪಿಕೆಟಿಂಗ ಮಾಡಿದ್ದ ಬಗ್ಗೆ ಸ್ತುತಿಗೆ ಪಾತ್ರರಿದ್ದಾರೆ.

ಕೆಲವು ಕಡೆಗೆ ಜನರು ಹೆಚ್ಚಾಗಿ ವೋಟು ಹಾಕಿದ್ದಾರೆ. ಅಲ್ಲಿ ಉದಾಸೀನದ ಜಗಳವೇ ಕಾರಣವು. ಮನೆಯ ಜಗಳದಲ್ಲಿ ಕಾಂಗ್ರೆಸ್ಸಿಕ್ಕೆ ಕಲಂಕ ತಂದರು. ಅವುಗಳ ಹೆಸರು-

ಹೆಬ್ಬಳ್ಳಿ ೬೦, ಅಮ್ಮಿನಭಾವಿ ೫೦, ನವಲೂರ ೫೦ ಬೆಂಕಾಪೂರ ೫೪, ದುಂಡಸಿ ೯೧, ಶಿಗ್ಗಾವಿ ೭೭, ಹುಲಗೂರು ೮೭, ಕೋಣನಕೇರಿ ೯೦ ಇವುಗಳ ವೋಟರರ ಸಂಖ್ಯೆಯು ಮೂರು ಸಾವಿರವಾಗುತ್ತಿದ್ದು ಇಷ್ಟರು ವೋಟುಗಳು ಬಿದ್ದದ್ದು ಕಾಂಗ್ರೆಸ್ಸಿನ ಜಯವನ್ನೇ ಸೂಚಿಸುತ್ತದೆ.

ಹಿರೇಕೇರೂರ ತಾಲೂಕಿನ ಚುನಾವಣೆಯು.

—(೦)—

ಹಿರೇಕೇರೂರ	೨೦೬	೨
ಹಂಸಭಾವಿ	೪೩೯	೩೫
ಕಾಗಿನೆಲ್ಲಿ	೪೮೪	೧
ಚಟ್ಟಿಹಳ್ಳಿ	೪೦೯	೧
ಮಾಸೂರು	೧೪೨	೦
	೧೬೮೦	೩೯

ಬಾಗಲಕೋಟೆಯಲ್ಲಿ ಪಿಕೆಟಿಂಗಕ್ಕಾಗಿ ೩೫೦ ಜನರ ದಸ್ತಗಿರಿ.

—(೦)—

ಇಲ್ಲಿ ಪಿಕೆಟಿಂಗ ಕಾಲಕ್ಕೆ ಸ್ವಯಂಸೇವಕರನ್ನು ಸ್ವಯಂಸೇವಿಕೆಯರನ್ನು ದಸ್ತಗಿರ ಮಾಡಿದರು. ಇವರಲ್ಲಿ ಒಂದೊಂದು ಮನೆತನದ ಗಂಡಸರು ಹೆಂಗಸರು ಹುಡುಗರು ಸಹ ಇರುತ್ತಾರೆ. ಹಿಡಿಯಲ್ಪಟ್ಟವರಲ್ಲಿ ಶ್ರೀ. ಲಿಂಗಣ್ಣಾ, ಎಂ. ಬ್ಯಾಹಟ್ಟಿ, ಶ್ರೀಮತಿ ಕಬನೂರು, ಡಾಕ್ಟರ ವೆಂಕುಬಾಯಿ, ಶ್ರೀ. ನರಸಾಪೂರ, ಧಾತಾರ ಭಗಿನಿ ಇವರು ಪ್ರಮುಖರಾಗಿದ್ದಾರೆ.

ಮಲ್ಲನ ಮತವು-

ವಿಜಾಪೂರದ ನವಕರ್ನಾಟಕದಲ್ಲಿ ಮುಂದೆ ಕೊಟ್ಟಂತೆ ಬರೆದಿದೆ.

ಪೋಲಿಂಗ ಸ್ಟೇಶನುಗಳ ಮುಂದೆ ಪಿಕೆಟಿಂಗ ಮಾಡುವದರಿಂದ, ಚುನಾವಣೆಯು ಹೇಗೋ ಜರುಗಿತು. ಆದರೂ ಒಬ್ಬರಿಲ್ಲೊಬ್ಬರು ಆರಿಸಿ ಬರುವದು ನಿಶ್ಚಯವು. ಆರಿಸಿ ಬಂದವರ ಬಗ್ಗೆ ಮಲ್ಲನಿಗೆ ಆನಂದವಿಲ್ಲ; ಬಾರದವರ ಬಗ್ಗೆ ದುಃಖವೂ ಇಲ್ಲ. ಬಂದವರಿಂದಲೂ, ಬಾರದವರಿಂದಲೂ ಆಗುವ ಕೆಲಸಗಳಲ್ಲಿ ಏನೂ ವ್ಯತ್ಯಾಸವಿಲ್ಲೆಂದು ಮಲ್ಲನ ಮತ.

ರಾ. ಬ. ಕಂಬಳಿಯವರಿಗೆ ಇದೊಂದು ತಾಮ್ರಪಟದಂಥ ಸರ್ಟಿಫಿಕೇಟೇ ಸರಿ.

ರಾ. ಬ. ಕಂಬಳಿಯವರಿಗೆ ಆಮಂತ್ರಣ.

ರಾವುಂಡಟೇಬಲ್ಲಕ್ಕೆ ರಾ ಬ. ಕಂಬಳಿಯವರಿಗೆ ಆಮಂತ್ರಣ ಕೊಟ್ಟಂತೆ ತಾರಿನ ಸುದ್ದಿಯು ಪ್ರಕಟವಾಗಿದೆ. ಇವರ ಕೂಡ ಮುಂಬಯಿ ಇಲಾಖೆಯ ಪಕ್ಷದಿಂದ ಕಳಗಿಸುವವರಿಗೆ ಆಮಂತ್ರಣವುಂಟು.

೧ ಡಾಕ್ಟರ ಆಂಬೇಡಕರ, ಬ್ಯಾರಿಸ್ಟರ ಜಯಕರ, ೩ ಸರ ಕಾವಸಜಿ ಜಹಾಂಗೀರ, ೪ ಬ್ಯಾರಿಸ್ಟರ ಜಿನ್ನಾ, ೫ ಸರ ಸೆತಲವಾಡ,

ಮದ್ರಾಸ-

೧ ಸರ ಸಿ. ಪಿ. ರಾಮಸ್ವಾಮಿ ಅಯ್ಯರ, ೧ ದಿವಾನ ಬಹಾದ್ದೂರ ರಾಮಸ್ವಾಮಿ ಮೊದ್ಲಿಯಾರ, ೩ ರಾ ಬ. ಶ್ರೀನಿವಾಸನ್ನ, ೪ ಶ್ರೀ ಸುಬ್ಬರಾಯನ್ನ ಮಂತ್ರಿಯವರ ಪತ್ನಿ, ೫ ಸರ ಪತ್ರೋ. ಉಳಿದವರ ಹೆಸರುಗಳನ್ನು ನಾಳಿನ ಸಂಚಿಕೆಯಲ್ಲಿ ಪ್ರಸಿದ್ಧ ಮಾಡುವೆವು.

ಶಿಪಾಯಿ ಮತ್ತು ನಾಯಿಕನಿಗೆ ಬರತರ್ಫ.

—೦*೦—

೧೫ ದಿವಸಗಳ ಹಿಂದೆ ಕೊಲ್ಹಾಪೂರದಲ್ಲಿ ಪೂರ್ವ ರಾತ್ರಿಯಲ್ಲಿ ಹೋಗುತ್ತಿದ್ದ ವಿದ್ಯಾರ್ಥಿಗಳ ಮೆರವಣಿಗೆಯು ಹೋಗುವಾಗ, ಒಂದು ಗಲ್ಲಿಯಲ್ಲಿದ್ದ ವಿದ್ಯುತ್ತಿನ ದೀಪಗಳನ್ನಾರಿಸಿ, ಕತ್ತಲೆ ಮಾಡಿ, ವಿದ್ಯಾರ್ಥಿಗಳನ್ನು ಅನ್ಯಾಯ ಅನಧಿಕಾರದಿಂದ ಹೊಡೆದರೆಂಬ ಆರೋಪ ಹೊತ್ತಿದ್ದರಿಂದ, ದರಬಾರಿನವರು ಮೂವರು ಸಿಪಾಯರು ಮತ್ತು ಅವರ ಮೇಲಿನ ನಾಯಿಕನಿಗೆ ಬರತರ್ಫ ಮಾಡಿದರು. ಇಂಗ್ರೇಜಿ ಇಲಾಖೆಯಲ್ಲಿ ಇಂಥದೊಂದೂ ಉದಾಹರಣೆ ಇರುವದಿಲ್ಲ.

ನಿಪ್ಪಾಣಿಯಲ್ಲಿ ವಿದ್ಯಾರ್ಥಿಗಳ ಸತ್ಯಾಗ್ರಹ.

—(೦)—

ನಿಪ್ಪಾಣಿಯಲ್ಲಿ ಇಂಗ್ಲಿಷ ಶಾಲೆಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂದು ವಿದ್ಯಾರ್ಥಿಗಳು ಸಂಕಲ್ಪ ಮಾಡಿದರು. ಹೆಡ್ಮಾಸ್ತರರು ಅದಕ್ಕೆ ವಿರುದ್ಧವಾಗಿ, ನಿಶಾನೆ ಹಚ್ಚಲಾಗದೆಂದರು. ವಿದ್ಯಾರ್ಥಿಗಳು ನಿಶಾನೆ ಹಚ್ಚತಕ್ಕವರೇ ಎಂದು ನಿಶ್ಚಯಮಾಡಿದ್ದಾರೆ. ಇದನ್ನು ಕಂಡು ಹೆಡ್ಮಾಸ್ತರರು ಶಾಲೆಯ ಬಾಗಿಲಕ್ಕೆ ಬೀಗಹಾಕಿದ್ದಾರೆ.

ಪುನಃ ರಾಜಿಯ ಪ್ರಯತ್ನ.

—)(—

ಮಹಾತ್ಮರಿಗೂ ಅಲೆಕ್ಝಾಂಡರರಿಗೂ ಭೆಟ್ಟಿ.

—(೦)—

ವಿಲಾಯತಿಯಲ್ಲಿರುವ ಫ್ರೆಂಡ್ಸವೆಂದರೆ ಮಿತ್ರ ಸಂಘದ ಪಕ್ಷದಿಂದ ಮಿ. ಅಲೆಕ್ಝಾಂಡರರವರು ಹಿಂದುಸ್ಥಾನಕ್ಕೆ ಬಂದಿದ್ದು, ಲಾರ್ಡ ಅರ್ವಿನಸಾಹೇಬರ ಒಪ್ಪಿಗೆಯಿಂದ ಪುನಃ ರಾಜಿ ಮಾಡಿಸಲು ಮಂಗಳವಾರ ದಿವಸ ಪುಣೆಗೆ ಬಂದು ಯರವಡೆಗೆ ಹೋಗಿ, ಮಹಾತ್ಮರ ಕೂಡ ಮೂರು ತಾಸಿನ ತನಕ ಸಂಭಾಷಣೆ ಮಾಡಿದರು.

ಪಾದ್ರಿಗಳ ವಿರುದ್ಧ ವಿದ್ಯಾರ್ಥಿಗಳ ಸಂಪು, ಸತ್ಯಾಗ್ರಹ.

ರಂಗೂನದಲ್ಲಿ ಎಪ ಪಾದ್ರಿಗಳ ಇಂಗ್ಲಿಷ ಶಾಲೆಯಲ್ಲಿ ೯೦೦ ವಿದ್ಯಾರ್ಥಿಗಳಿದ್ದಾರೆ. ಪಾದ್ರಿ ಜನರು ಇವರಿಗೆ ಬಾಯಬಲ ಕ್ಲಾಸಿಗೆ ಬರಲು ಬಲವಂತ ಮಾಡುವರು. ಬ್ರಹ್ಮೀ ಹಬ್ಬಗಳಲ್ಲಿ ರಜೆ ಕೊಡುವದಿಲ್ಲ. ವಸತಿ ಗೃಹದಲ್ಲಿಯ ಊಟವು ಕೆಟ್ಟದ್ದಿರುತ್ತದೆಂದು ದೂರಿ, ವಿದ್ಯಾರ್ಥಿಗಳು ಸಂಪು ಸತ್ಯಾಗ್ರಹ ಮಾಡಿ, ಶಾಲೆಗೆ ಬಹಿಷ್ಕಾರ ಹಾಕಿದ್ದಾರೆ.

ವಿಕ್ರಮರಾಜನಂತೆ ಮೆ. ಮ್ಯಾಕಡೋನಾಲ್ಡ ಸಾಹೇಬರು.

—(೦)—

ವಿಕ್ರಮರಾಜನು ಪಟ್ಟಕ್ಕೆ ಕೂತಾಗ ಒಂದು ಪ್ರಕಾರ, ಪಟ್ಟದಿಂದಿಳಿದ ಬಳಿಕ ಮತ್ತೊಂದು ಪ್ರಕಾರವೆಂದು ಹೇಳಿಕೆಯುಂಟು. ಅದೇ ಪ್ರಕಾರ ಹಿಂದುಸ್ಥಾನದ ವಿಷಯವಾಗಿ ಮುಖ್ಯ ಮಂತ್ರಿಗಳ ವರ್ತನವಿರುತ್ತದೆ ಇವರನ್ನು ಕಾಣಲಿಕ್ಕೆ ಹೋದ ಶ್ರೀ. ಬೋಸುಸಿಯವರು ಅನ್ನುವದೇನಂದರೆ-

ಮೆ. ಮ್ಯಾಕಡೋನಾಲ್ಡರಲ್ಲಿ ಮೊದಲಿನ ಸಂಕೋಚವುಳಿದಿಲ್ಲ. ಅವರು ಈಗ ಪೂರಾ ಟೋರಿ ಪ್ರಧಾನರಾಗಿದ್ದಾರೆ. ಲಾರ್ಡ ಅರ್ವಿನಸಾಹೇಬರ ಸಹಾನುಭೂತಿಯ ಹೇಳಿಕೆಯ ಉಬ್ಬಾಳತನವೂ ವ್ಯರ್ಥವಾದದ್ದು ಹಿಂದೀ ಜನರು ರಾವುಂಡಟೇಬಲಕ್ಕೆ ಹೋಗುವದರಲ್ಲೇನೂ ಅರ್ಥವಿರುವದಿಲ್ಲ. ಕಾಂಗ್ರೆಸವು ಈಗ ನಡೆಸಿದ ಯುದ್ಧವನ್ನು ಮುಂದೆ ನಡೆಸಿದರೆ ಯಶವು ಖಂಡಿತವಾದದ್ದು.

ಶಿರಸಿಯಲ್ಲಿರುವ ಹಿಂದುಸ್ಥಾನಿ ಸೇವಾದಲದ ಸ್ವಯಂಸೇವಕರಿಗೆ ಪುಂಡಗೋಳ ಮಾರ್ಗವಾಗಿ ಸೋ ತಾಲೂಕು ಬಿಟ್ಟು ಹೋಗುವದಕ್ಕೆ ಹುಕುಮು ಆಗಿರುತ್ತದೆ,

ನೋಟೀಸು

ವ ಮಪ್ಪಣೀಮೋಡಿತರಂದ ಸೋಮರಾಯಪ್ಪ ಪಕ್ಕೀರಪ್ಪ ಧಾರವಾಡದ ಸಾ|| ಹೊಸೂರ ತಾ|| ಬಂಕಾಪೂರ ಇವರಿಗೆ-

ಕೆಳಗೆ ಸಹಿ ಮಾಡಿದವಳು ನಿನ್ನ ನೋಟೀಸಿಗೆ ಉತ್ತರ ಕೊಡುವದೇನಂದರೆ-

ನೀನು ಜನ್ಮಭೂಮಿ-ವರ್ತಮಾನಪತ್ರಿಕೆಯಲ್ಲಿ ತಾರೀಖು ೨೯-೮-೪೦ನೇ ದಿನ್ನ ಕೊಟ್ಟ ನೋಟೀಸು ಮುಟ್ಟಿ ಮಜಕೂರ ತಿಳಿಯಿತು ನೀನು ನಿನ್ನ ನೋಟೀಸಿನಲ್ಲಿ ಬರೆದ ಮಜಕೂರು ಯಾವತ್ತು ತಪ್ಪು ತಿಳುವಳಿಕೆಯಿಂದ ಬರೆಸಿದ್ದು ಆದೆ ನೀನು ನೋಟೀಸಿನಲ್ಲಿ ಬರೆದ ಮಜಕೂರು ಅಗದೀ ಸುಳ್ಳು ಇದೆ ನಾನು ನಿನ್ನ ಲಗ್ನವಾಗಿ ಅಜಮಾಸ ೭-೮ ವರ್ಷವಾಯಿತು ನನ್ನ ಲಗ್ನವಾದನಂತರ ನಾನು ನಿನ್ನ ಕೂಡ ಸುಶೀಲತನದಿಂದ ಬಾಳ್ವೆ ಮಾಡುತ್ತಿದ್ದೆ. ಲಿಕ್ಕೆ ನೀನು ನಿನ್ನ ತಂದೆ ತಾಯಿಗಳ ಮತ್ತು ನಿನ್ನ ತಂಗಿಯರ ಬುದ್ಧಿಮಾತಿನಿಂದ ನನ್ನ ಜೀವಕ್ಕೆ ಬಹಳ ತ್ರಾಸು ಮಾಡುತ್ತಾ ಬಂದಿ ನನಗೆ ಅನೇಕ ತ್ರಾಸುಗಳನ್ನು ನೀನು ಕೊಟ್ಟಾಗ್ಯೂ ನಾನು ಸಹಿಯೋಗದಿಂದ ನಿನ್ನ ಕೂಡ ಬಾಳ್ವೇ ಮಾಡುತ್ತಾ ಒಂದು ಅಜಮಾಸು ೪|| ವರ್ಷಗಳ ಕೆಳಗೆ ಗರ್ಭಿಣಿ ಆದೆನು ೬-೭ ತಿಂಗಳ ನಾನು ಗರ್ಭಿಣೀ ಇದ್ದ ಕಾಲಕ್ಕೆ ನನಗೆ ಕಾಲೀ ಬೇನೆಯು ಹತ್ತಿತು ಸದರ ಸ್ಥೂಲ ಬೇನೆಯಿಂದ ನಾನು ಬಹಳ ಬಳಲಿದರೂ ದಾದ ಕೇಳಿದೇ ನೀನು ಸದರ ಬೇನೆಯ ಸಂಬಂಧಿ ಔಷಧ ಉಪಚಾರ ಮಾಡಿ ಏನೂ ಮಾಡಲಿಲ್ಲ. ಮತ್ತು ನನಗೆ ನೀನು ಮತ್ತು ನಿನ್ನ ಮಂದಿ ಸಹಿತ ತಿರಸ್ಕಾರ ಮಾಡಿ ನನ್ನ ಪ್ರಕೃತಿಯ ವಿಷಯವಾಗಿ ಏನೂ ಕಾಳಜಿ ಮಾಡಲಿಲ್ಲ ಇಷ್ಟಾದರೂ ನಾನು ಯಾವತ್ತು ಸಂಗತಿಗಳನ್ನು ನನ್ನ ಮನಸ್ಸಿನಲ್ಲಿಯೇ ನುಂಗಿಕೊಂಡು ನಿನ್ನ ಮನೆಯಲ್ಲಿದ್ದೆ ಆದರೆ ನಾನು ಹೆರಿಯುವ ಕಾಲ ಸಮೀಪಿಸಲು ನನ್ನ ತಂದೆಯು ನನ್ನನ್ನು ಹಡಿಯುವದರ ಸಲುವಾಗಿ ಕರಿಯಲಿಕ್ಕೆ ಬಂದನು ಆ ಕಾಲಕ್ಕೆ ನೀನು ಮತ್ತು ನಿನ್ನ ತಂದೆ ತಾಯಿಗಳು ನನ್ನನ್ನು ಕಳುಹಿಸಲಿಕ್ಕೆ ಇನಕಾರ ಮಾಡಿದಿರಿ ಮುಂದೆ ನನ್ನ ತಂದೆಯು ನಿಮ್ಮಲ್ಲಿಯ ನಾಲ್ಕು ಮಂದಿ ಪಂಚರನ್ನು ಕೂಡಿಸಿ ವಿಚಾರಿಸಿದನು ಆ ಕಾಲಕ್ಕೆ ನಿಮ್ಮಲ್ಲಿಯ ಪಂಚರು ನಿನಗೂ ಮತ್ತು ನಿನ್ನ ತಂದೆ ತಾಯಿಗಳಿಗೂ ಸಿಟ್ಟು ಮಾಡಿ ಕಳಿಸಲಿಕ್ಕೆ ಹೇಳಿದರು ಆದರೆ ನೀವು ಕಳುಹಿಸುವ ಕಾಲಕ್ಕೆ ನನ್ನ ಮೈಮೇಲೆ ಯಾವ ತರದ ದಾಗೀನೆಗಳನ್ನು ಇಟ್ಟು ಕಳುಹಿಸಲಿಲ್ಲ ಲಗ್ನ ಆದ ಕಾಲಕ್ಕೆ ಇಟ್ಟ ದಾಗೀನೆಗಳು ಅಂದರೆ ನೀನು ನೋಟೀಸಿನಲ್ಲಿ ನಮೂದಿಸಿದ ದಾಗೀನೆಗಳನ್ನು ನಾನು ನಿಮ್ಮಲ್ಲಿ ಮೊದಲೇ ಇದ್ದಾಗ್ಗೆ ನೀವು ಬಿಚ್ಚಿ ಇಟ್ಟುಕೊಂಡಿರುವಿರಿ ಈಗ ಪುನಃ ನೀನು ನೋಟೀಸಿನಲ್ಲಿ ನಮೂದಿಸಿದ ಯಾವತ್ತು ದಾಗೀನೆಗಳನ್ನು ನನ್ನ ತವರ ಮನೆಗೆ ನನ್ನನ್ನು ಕಳಿಸುವ ಕಾಲಕ್ಕೆ ಒಯ್ದಿದ್ದೇನೆಂಬಾ ಸುಳ್ಳು ಬನಾವಟ ಮಜಕೂರು ನೀನು ಬರಸಿರುತ್ತೀದಿ ಮತ್ತು ನೀನು ನಿನ್ನ ನೋಟೀಸಿನಲ್ಲಿ ಇಲ್ಲೀವರೆಗೂ ನಿನ್ನಿಂದ ನನಗೆ ಮಕ್ಕಳು ಆಗಿಲ್ಲೆಂತಾ ಅಪಮಾನಕಾರಕವಾದ ಸುಳ್ಳು ಮಜಕೂರನ್ನು ಬರೆದಿರುತ್ತೀದಿ ಇವರ ಸಂಬಂಧಿ ನಿನ್ನ ಮೇಲೆ ಕಾಯದೇಶೀರ ಇಲಾಜ ಮಾಡುತ್ತೇನೆ ಮತ್ತು ನಾನಂತೂ ನಿನ್ನ ಕೂಡ ಬಾಳ್ವೆ ಮಾಡಲಿಕ್ಕೆ ಯಾವಾಗಲೂ ತಯ್ಯಾರ ಇರುತ್ತೇನೆ ಆದರೆ ನಾನು ಹಡದಲಾಗಾಯಿತ ಇಲ್ಲೀ ವರೆಗೂ ನೀನು ನನ್ನನ್ನು ಕರೀಲಿಕ್ಕೆ ಸಹಾ ಬಂದಿಲ್ಲ ಮತ್ತು ನನ್ನ ತಂದೆಯು ಅಗದೀ ಬಡವನಿದ್ದು ಆತನು ನನ್ನ ಬೇನೆಯ ಸಲುವಾಗಿ ಮತ್ತು ನನ್ನ ಕೂಸಿನ ಸಂರಕ್ಷಣೆಯ ಸಲುವಾಗಿ ಎರಡನೇ ಒಬ್ಬರಲ್ಲಿ ಅಜಮಾಸ ೩೦೦ ರೂಪಾಯಿ ಸಾಲ ಮಾಡಿರುತ್ತಾನೆ ನೀನು ಸದರ ಸಾಲವನ್ನು ಸಂದಮಾಡಿ ನನ್ನನ್ನು ಕರಕೊಂಡು ಹೋಗಬೇಕು ಮತ್ತು ನೀನು ನಿನ್ನ ನೋಟೀಸಿನ ಮೇಲಿಂದ ನೋಡಲಿಕ್ಕಾಗಿ ನೀನು ನನ್ನನ್ನು ಬಿಡಬೇಕೆಂಬ ಮುರಾಲೋಚನೆಯನ್ನು ಮಾಡಿದಂತೆ ನನಗೆ ಕಾಣುತ್ತದೆ ಹೀಗೆ ಇರಲಿ ನನ್ನ ಮತ್ತು ನಿನ್ನ ಸಂಬಂಧವು ಅಂದರೆ ಗಂಡಹೆಂಡರ ಸಂಬಂಧವು ನೀನು ಕೊಟ್ಟ ನೋಟಿಸಿನ ಮೇಲಿಂದ ತಪ್ಪುವದಿಲ್ಲ ನಾನು ನಿನ್ನ ಹೆಂಡತಿಯೇ ಯಾವಾಗಲೂ ಇರುತ್ತೇನೆ ನಾನು ನಿನ್ನಲ್ಲಿಗೆ ಒಂದು ಬಾಳ್ವೆ ಮಾಡಲಿಕ್ಕೆ ತಯಾರ ಇರುತ್ತೇನೆ ಆದರೆ ನೀನು ಒಂದು ನನ್ನನ್ನು ಹೊಡೆದು ಬಡೆದು ನಿನ್ನ ಮನೆಯಲ್ಲಿ ಇದೇ ರೀತಿ ಇದ್ದಂತೆ ಮಾಡಿದ ಪಕ್ಷದಲ್ಲಿ ನಾಇಲಾಜಾಗಿ ನನ್ನ ತಂದೆಯ ಮನೆಯಲ್ಲಿ ಇರುವ ಪ್ರಸಂಗವು ನನಗೆ ಬರುವದು ಹಾಗೆ ಮಾಡಿದ ಪಕ್ಷದಲ್ಲಿ ನಾನು ನಾಇಲಾಜಾಗಿ ನನ್ನ ಹೊಟ್ಟೆಯ ಉಪಜೀವನದ ಸಲುವಾಗಿ ಮತ್ತು ಕಡೆಗೆ ಇರುವದರ ಸಲುವಾಗಿ ನಿನ್ನ ಮೇಲೆ ಕಾಯದೇಶೀರ ಇಲಾಜ ನಡಿಸುತ್ತೇನೆ ಮತ್ತು ಲಗ್ನ ಕಾಲದಲ್ಲಿ ಇಟ್ಟ ದಾಗೀನೆಗಳು ನನ್ನ ಸ್ತ್ರೀಧನದವು ಇದ್ದು ಅವುಗಳ ಸಂಬಂಧ ಸಹಾ ನಿನ್ನ ಮೇಲೆ ಇಲಾಜ ಮಾಡುತ್ತೇನೆ ಮತ್ತು ಈಗ ನೀನು ಎರಡನೇ ಲಗ್ನ ಮಾಡಿಕೊಳ್ಳುವ ತಜವೀಜಿಯಲ್ಲಿರುವೆಯೆಂದು ನಾನು ಕೇಳುತ್ತೇನೆ ನೀನು ಎರಡನೇ ಲಗ್ನ ಮಾಡಿಕೊಂಡರೂ ಸಹಾ ನಾನು ನಿನ್ನ ಕೂಡ ಅಗದೀ ಖುಷಿಯಿಂದ ಬಾಳ್ವೆ ಮಾಡಲಿಕ್ಕೆ ತಯ್ಯಾರ ಇರುತ್ತೇನೆ ಒಂದು ವೇಳೆ ನೀನು ನನ್ನನ್ನು ಮುದ್ದಾಮ ನನ್ನ ತಂದೆಯ ಮನೆಯಲ್ಲಿಯೇ ಬಿಟ್ಟು ನನ್ನನ್ನು ನಿನ್ನಲ್ಲಿಗೆ ಕರಕೊಂಡು ಹೋಗದಿದ್ದರೆ ನಿನ್ನ ಮೇಲೆ ನನ್ನ ಉಪಜೀವನದ ಸಲುವಾಗಿ ೩ ವರ್ಷಗಳವರೆಗಿನ ಖರ್ಚಿನ ಬಗ್ಗೆ ಕಾಯದೇಶೀರ ಇಲಾಜ ಮಾಡುತ್ತೇನೆ ಈ ನೋಟೀಸ ಮುಟ್ಟಿದ ಕೂಡಲೆ ನನಗೆ ಮತ್ತು ನನ್ನ ಮಗಳಿಗೆ ಆದ ಹಿಂದಿನ ಖರ್ಚಿನ ವ್ಯವಸ್ಥಾ ಮಾಡಿ ನನ್ನನ್ನು ಕರಕೊಂಡು ಹೋಗಬೇಕು ಇಲ್ಲವಾದರೆ ನಿನ್ನ ನೋಟೀಸಿನಲ್ಲಿ ನಮೂದಿಸಿದ ದಾಗೀನೆಗಳು ಸ್ತ್ರೀಧನದವು ಇದ್ದು ಅವುಗಳ ಬಗ್ಗೆ ಮತ್ತು ಕೊಟ್ಟ ಉಪಜೀವನದ ಬಗ್ಗೆ ಇಲಾಜ ನಡಿಸಲಾಗುವದು ಬರುವದು ತಿಳಿಯುವದು ಈ ನೋಟೀಸಿನ ಖರ್ಚು ನಿನ್ನ ಮೇಲೆ ಇದೆ ತಾ|| ೧೨-೯-೪೦

ಈ [illegible] ಟ್ಟಿನ ಗುರ್ತ ಗಿರಿಮಲ್ಲಾ ಕೋಮು [illegible] ತಕೆ ಕೈದು ಆದೆ

ಜಾಹೀರ ನೋಟೀಸು-

ಬಂಕಾಪೂರ [illegible]

[illegible] ದರೆ-

ನಮ್ಮ [illegible] ಬಾಲಾರಿ ನಾಗ ವಾನಿ ತಿಳಿಸುವ [illegible] ಪದ್ಧತಿ [illegible] ನಾಟಕಗಳು

[illegible] (೭) [illegible]

[illegible] ವ ಜಂತಿ [illegible] ತ್ತವೆ

ಇದರ [illegible] ತಮ್ಮ [illegible] ಡುತ್ತೇವೆ

ಮತ್ತು [illegible] ಕೆಲಸ ಮಾಡು ವರಿಗೆ ತಯಾರಿ [illegible].

ಮಲ್ಲಪ್ಪಾ ಗುರಪ್ಪಾ ಗೋಡಿಹಟ್ಟಿ
ಟೆಂಟ ಮಾಲೀಕ,
ಮಾರ್ಕೆಟ ಧಾರವಾಡ,

ನೋಟೀಸಿನ ದರಗಳು

ಸಿಂಗಲ ಕಾಲಮಿನ ಪಕ್ತಿ ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾಂತರಿಸಿ ಕನ್ನಡದಲ್ಲಿ ಹಾಕುವದಿದ್ದಾಗ್ಗೆ ಆರು ಆಣೆ ದಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಈಗಿನ ಪತ್ರಿಕೆಗೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೧೫ನೇ ಸಪ್ಟಂಬರ ೧೯೩೦ (ಸಂಚಿಕೆ ೨೦೫

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿ ಗಳಿಂದಲೇ ಈ ಸವಿ ಹಾಗು ಶೀಘ್ರ ಗುಣಕೊಡುವ ಔಷಧ ಮಾಡಲಾಗಿದೆ. ಇದರ ಉಪಯೋಗದಿಂದ ಸಣ್ಣಗಿನ ಜ್ವರ, [illegible], [illegible], [illegible] ಬಲಶಕ್ತಿಹೀನ ದೇಹ, ಅಸ್ಥಿಸ್ಥಜ್ವರ, [illegible], [illegible], ಅಂಜುಬುರುಕತನ, [illegible] [illegible], ವೀರ್ಯದ ನೀರು, ಆಲಸ್ಯ, ಕಣ್ಣು [illegible] [illegible], [illegible], [illegible] ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, [illegible], [illegible] [illegible], [illegible], ಎಲ್ಲ [illegible] ರಕ್ತರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾ ವೀರ್ಯ ಮೊದಲಾದ ಏಳು ಧಾತುಗಳು ವೃದ್ಧಿಯಾಗಿ ಇಂದ್ರಿಯ [illegible] [illegible] ಸಹಜವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟಿನ [illegible], [illegible], ಹಾಗು [illegible] ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ದೂರಾಗಿ [illegible] ಧರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅಷ್ಟು [illegible] ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ಕುಡಿಯಬೇಕು. ಹತ್ತುದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ
ಹುಬ್ಬಳ್ಳಿ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಕಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಚಾಲ [illegible] ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನು ವತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ರಾ. ಬ. ಕಂಬಳಿಯವರು ಕ್ಕೆ ಮಲಗಬೇಕಾಗಿತ್ತು.

ಹುಬ್ಬಳ್ಳಿಯಲ್ಲಿ ವೋಟಿಂಗ ಆದ ಕೂಡಲೆ ರಾ. ಬ. ಕಂಬಳಿಯವರ ಕಡೆಯಿಂದ ಒಂದು ಹಸ್ತಪತ್ರಿಕೆ ತೆಗೆದರು. ಅದೇನಂದರೆ-

ರಾ. ಬ. ಕಂಬಳಿಯವರ ಮೇಲಿನ
ವೋಟರ ಜನರ ಅಪ್ರತಿಮ ಪ್ರೀತಿಯು.

ಹುಬ್ಬಳ್ಳಿಯೊಳಗೆ ಕೌನ್ಸಿಲ ಇಲೆಕ್ಶನದಲ್ಲಿ ಒಂದು ಸಾವಿರ ಮತದಾರರು ಅಗದೀ ಉತ್ಸುಕತೆಯಿಂದ ರಾವಬಹಾದ್ದೂರ ಕಂಬಳಿಯವರಿಗೆ ತಮ್ಮ ಮತಕೊಟ್ಟರು. ಅದರಂತೆ ಹುಬ್ಬಳ್ಳಿಯ ತಾಲೂಕಿನಲ್ಲಿ ಸಹ ಅಜಮಾಸು ೧೬೦೦ ಜನರು ಅವರಿಗೆ ವೋಟು ಕೊಟ್ಟರು. ಬಿತ್ತುವ ಹಂಗಾಮುವಿದ್ದರೂ ಸಹ ಪೋಲಿಂಗ ಸ್ಟೇಶನಕ್ಕೆ ಬಂದು ಮತಗಳನ್ನು ಕೊಟ್ಟರು. ಕಾಂಗ್ರೆಸ ಜನರು ಚಕಿತರಾಗಿರುತ್ತಾರೆ. ಕಾಂಗ್ರೆಸ ಪಿಕೆಟಿಂಗದ ಪರಿಣಾಮವೆಷ್ಟೂ ಆಗಲಿಲ್ಲ. ಜನರ ಪ್ರೀತಿಯು ಇದ್ದಲ್ಲಿ ಪಿಕೆಟಿಂಗದ ಪರಿಣಾಮವಾಗುವದಿಲ್ಲವೆಂಬ ಇದರ ಮೇಲಿಂದ ಸ್ಪಷ್ಟ ತಿಳಿಯುವದಿಲ್ಲವೋ?

ಈ ಹಸ್ತಪತ್ರಿಕೆಯು ಹೊರಟ ಬಳಿಕ ರಾ. ಬ ರವರ ಕಂಕುಳದೊಳಗಿನ ಕೂಸಾಗಿರುವ ಕರ್ನಾಟಕ ಟಾಯಿಮ್ಸದಲ್ಲಿ ಮುಂದೆ ಕೊಟ್ಟಂತೆ ಬರೆಯಲ್ಪಟ್ಟದೆ

> ಚುನಾವಣೆಯ ದಿವಸ ಸ್ವಯಂಸೇವಕರು ಭರದಿಂದ ಪಿಕೆಟಿಂಗ ನಡೆಸಿದರೂ ಕೌನ್ಸಿಲ, ಅಸೆಂಬ್ಲಿಗಳಲ್ಲಿ ವಿಶ್ವಾಸವುಳ್ಳ ಮತದಾರರು ಮತಕೊಡುವಂತೆ ಕೊಟ್ಟರು.

ಇದು ಧಾರವಾಡದ ದೆಸೆಯಿಂದಾಯಿತು: ಜಿಲ್ಲೆಯ ವಿಚಾರದಿಂದ

> ಅಂದು ಮಳೆಯಾದುದರಿಂದಲೂ, ಅಂದು ಬುಧವಾರವಾದುದರಿಂದಲೂ ಅನೇಕ ರೈತರು ಹತ್ತಿಕಾಳು ಬಿತ್ತಲಿಕ್ಕೆ ಹೊಲಕ್ಕೆ ಹೋಗಿದ್ದರು. ಆದುದರಿಂದ ಹೇಳಿಕೊಳ್ಳುವಷ್ಟು ಮತಗಳು ದೊರೆತಿಲ್ಲವೆಂಬದು ನಿಜ.

ಮೇಲಿನ ಎರಡೂ ಅವತರಣಗಳಿಂದ ಒಂದು ಸುಳ್ಳು ಮುಚ್ಚುವಾಗ ಹತ್ತು ಸುಳ್ಳುಗಳಾಗುತ್ತವೆಂಬದು ತೋರಬೀಳುತ್ತದೆ. ಹುಬ್ಬಳ್ಳಿಯವರು ರಾ. ಬ. ರವರ ಮೇಲಿನ ಅಪ್ರತಿಮ ಪ್ರೀತಿಯನ್ನೂ, ನಮಗೇಕೆ ರಾ. ಬ. ರವರ ಅಗತ್ಯ? ನಮ್ಮ ಕೆಲಸ ಹೊಲ, ನಾವು ಹೊಲವೆಂದ. ರೈತರು ಸ್ಪಷ್ಟವಾಗಿ ಹೇಳಿ, ರಾ. ಬ. ರವರನ್ನು ಧಿಕ್ಕಾರ ಮಾಡಿದರೆಂಬುದೂ ವ್ಯಕ್ತವಾಗುತ್ತದೆ. ರೈತರ ಮೇಲೆ ವ್ಯರ್ಥ ಆರೋಪಹೊರಿಸುತ್ತಿರುವಾಗ, ಇದೇ ಕರ್ನಾಟಕ ಟಾಯಿಮ್ಸವು ರಾ. ಬ. ರವರಿಗೆ ಹತ್ತು ಸಾವಿರ ಸಂಖ್ಯೆಯಿಂದ ವೋಟು ಕೊಟ್ಟಿದ್ದಾರೆಂದು ಬರೆದಿದೆ. ಅದು ಹೇಗಂದರೆ-

೧ ಹುಬ್ಬಳ್ಳಿ ಶಹರ		೨	ಸಾವಿರ
೨ ಹುಬ್ಬಳ್ಳಿ ತಾಲೂಕ		೨	,,
೩ ನವಲಗುಂದ ತಾಲೂಕ		೨॥	,,
೪ ಕಲಘಟಗಿ	,,	೧	,,
೫ ಶಿಗ್ಗಾವಿ		೧	,,
೬ ಗದಗ	,,	೧	,,
೭ ರೋಣ	,,	೮೦೦	
		ಅಂತೂ ೧೦,೩೦೦	

ಇವೆಲ್ಲ ಡಂಕಣ ಬೇರೀಜು. ಬುಧವಾರ ಚುನಾವಣೆಯಾಗಿ ಗುರುವಾರ ಒಂದು ದಿವಸದಲ್ಲಿ ಇಷ್ಟು ಸುದ್ದಿ ಬಂದೇ ಇಲ್ಲ. ಕಾಂಗ್ರೆಸಕ್ಕೂ ವಿಜಯವಾರ್ತೆ ದಿನಾಲು ಹನ್ನೊಂದೂ ತಾಲೂಕುಗಳಿಂದ ಪತ್ರಗಳು ಬರುತ್ತಿದ್ದು, ಅವು ಸಹ ಚುನಾವಣೆಯಾಗಿ ಆರು ದಿವಸವಾದರೂ ಪೂರಾ ಆಗಿಲ್ಲ. ಕರ್ನಾಟಕ ಟಾಯಿಮ್ಸಕ್ಕೆ ವಿಮಾನಗಳಿಂದ ಸುದ್ದಿಗಳು ಬಂದಿದ್ದರೆ ಮಾತ್ರ ನಾವರಿಯೆವು. ಒಂದು ಹಸ್ತಪತ್ರಿಕೆಯಲ್ಲಿ ರೈತರ ಅಪ್ರತಿಮ ಪ್ರೀತಿಯುಂಟೆಂಬದನ್ನೂ ರೈತರೂ ಹೊಲಕ್ಕೆ ಹೋದ್ದರಿಂದ ವೋಟು ಬೀಳಲಿಲ್ಲೆಂದೂ ಪರಸ್ಪರ ವಿರೋಧಾಭಿಪ್ರಾಯ ಹೇಳುವ ಸಂಗತಿಗಳಿಂದ, ಟಾಯಿಮ್ಸದ ಅಂಕಿಗಳು ಎಷ್ಟು ಜೊಳ್ಳು ಮತ್ತು ಪೊಳ್ಳು ಇರುತ್ತವೆಂಬದನ್ನು ಹೇಳುತ್ತವೆ.

ಎಲ್ಲೆಲ್ಲಿ ಹೇಗೇಗೆ ಚುನಾವಣೆಯಾಯಿತು. ಎಷ್ಟೆಷ್ಟು ವೋಟುಗಳು ಬಿದ್ದವೆಂಬದನ್ನು ವಿಜಯದಲ್ಲಿ ಬರೆಯುತ್ತಾ ಬಂದಿದ್ದೇವೆ. ಈ ಅಂಕಿಗಳಿಗೂ, ಪೆಟಿಗಿಗಳನ್ನು ಒಡೆದ ನಂತರ ಎಣಿಕೆಯಾಗುವ ಅಂಕಗಳಿಗೂ ಸರಿ ಬೀಳುವದೇ ನಿಜ. ಏಕಂದರೆ ಇವು ಕಣ್ಣಾರೆ ಕಂಡಂಥವು. ಎಣಿಕೆಯಾದ ಬಳಿಕ ರಾ. ಬ. ರವರಿಗೆ ಎಷ್ಟು ಮತಗಳು ಬಿದ್ದವೆಂಬದೂ, ಆ ಬಳಿಕ ಅವರ ಲೋಕಪ್ರೀತಿಯ ಬೆಳಕು ಎಷ್ಟಿರುತ್ತದೆಂಬದೂ ಧ್ವನಿತವಾಗುತ್ತದೆ. ಹಿಂದಿನ ಚುನಾವಣೆಯಲ್ಲಿ ರಾ. ಬ ರವರಿಗೆ ೧೭ ಸಾವಿರ ವೋಟು ಬಿದ್ದವು. ಕರ್ನಾಟಕ ಟಾಯಿಮ್ಸದ ಲೆಖ್ಖದಂತೆ ಹಿಡಿದರೆ- ಏಳು ಸಾವಿರ ಕಡಿಮೆಯಾಗಿ, ಅಷ್ಟು ಲೋಕಪ್ರೀತಿ ಕಳಕೊಂಡಂತಾಗುತ್ತದೆ. ಎಷ್ಟು ಪ್ರೀತಿಯಿಲ್ಲದಂತಾಗಿರುತ್ತದೆಂದು ಎಣಿಕೆಯಿಂದ ತಿಳಿಯುವದು. ಅದರ ದುರ್ಲಕ್ಷ್ಯಗಳು ಎಷ್ಟೋ ಕಡೆಯಲ್ಲಾಗಿ, ಪೋಲಿಂಗ ಸ್ಟೇಶನಗಳೇ ಪೂಜೆಯಾಗಿರುತ್ತವೆ.

ಹತ್ತು ವರ್ಷಗಳ ಹಿಂದೆ ರಾ ಬ ರವರು ಇಂದ್ರನ ವಿಮಾನವನ್ನೇ ಭೂಲೋಕಕ್ಕೆ ತರುವರೆಂದು ಜನರು ತಿಳಿದು, ಅವರಿಗೆ ವೋಟು ಹಾಕಿದರು. ಇವರು ಬೊಮ್ಮನಹಳ್ಳಿಗೆ ಹೋದಾಗ, ಊರೇ ಶೃಂಗಾರವಾಯಿತು. ತೋಟಗಳಲ್ಲಿ ಒಂದೂ ಬಾಳೇಗಿಡ ಉಳಿಯಲಿಲ್ಲ. ಎಲ್ಲವೂ ಬೀದಿಗುಂಟ ಇವರ ಸ್ವಾಗತಕ್ಕಾಗಿ ಬಾಗಿಸ್ಕೊಂಡು ನಿಂತಿದ್ದವು. ಅದೇ ಬೊಮ್ಮನಹಳ್ಳಿಯಲ್ಲಿ ಎರಡೇ ಮತಗಳು ಬಿದ್ದು, ಮತದಾರರು ಗೋಮಯ ಮತ್ತು ಕರೇ ನಿಶಾನೆಗಳ ಬಹುಮಾನ ಪಡೆದರು. ಹಿರೇಕೆರೂರಿನ ಸಾಹುಕಾರರು ಹೊಡೆತ ಕೊಟ್ಟದ್ದಕ್ಕೆ ತಪ್ಪು ದಂಡ ಕೊಟ್ಟರು. ಉಣಕಲ್ಲಿನಲ್ಲಿ ಇವರ ಪಟ್ಟಶಿಷ್ಯರಾದ ರಾ. ಸಾ. ಚನ್ನಪ್ಪಗೌಡರು ಸ್ವಯಂಸೇವಕರ ಕ್ಷಮೆ ಬೇಡಿಕೊಂಡರು. ಏಪ್ರಿಲ ೮ನೇ ತಾರೀಖಿನ ದಿವಸ ಗೋಳಿಬಾರಾಗುವಷ್ಟು ಹಾವಿನ ಮಾಲಿ ಹಚ್ಚಿಕೊಂಡ ಹುಬ್ಬಳ್ಳಿಯಲ್ಲಿ ರಾ ಬ. ರವರು ಸ್ವತಃ ಹೊಂದಿದ ಬಹುಮಾನವು ಹೃದಯೋಗಜನ್ಯವಾಗಿರಬಹುದು. ಮೊದಲಲ್ಲಿ ಫಲಭೋಗವುಂಡರೂ, ಇನ್ನೂ ಗಟ್ಟಿ ವೋಟು ಬೀಳುವವೆಂದು ವ್ಯರ್ಥ ಆಶಾಭೂತರಾಗಿದ್ದರು. ಅಲ್ಲಿಯೂ ಪೂಜೆಯಾಯಿತು. ಸ್ವಾಭಿಮಾನವಿದ್ದರೆ ರಾ. ಬ. ರವರು ಹಾವೇರಿ ಮತ್ತು ಗದಿಗ್ಗೆ ಜನ್ಮವಿರುವತನಕ ಮೋರೆ ತೋರಿಸತಕ್ಕದ್ದಲ್ಲ. ಧಾರವಾಡದಲ್ಲಿ ಹಾವೇಂಪೇಟೆ, ನಾರಾಯಣಪೂರ, ಕಮಲಾಪೂರ, ಗುಲಗಂಜಿಕೊಪ್ಪ ಮತ್ತು ಮದಿಹಾಳದ ಬಿಟ್ಟಿಗೇ ಹಾಯತಕ್ಕದ್ದಲ್ಲ. ಹೀಗೆ ಎಷ್ಟೋ ಊರುಗಳ ಮುಖಾವಲೋಕನ ಮಾಡಬೇಕಾಗುವದಿಲ್ಲ. ಅಬ್ಬಬ್ಬ !! ಇದೆಲ್ಲ ಲೋಕಪ್ರೀತಿಯು ! ರೈತರ ಅಪ್ರತಿಮ ಪ್ರೀತಿಯು !! ರೈತರಂತಿರಲಿ; ಶೆಟ್ಟಿ, ಸಾಹುಕಾರ, ಕಸಬಗಾರ, ತಳವಾರ, ಓಲೆಕಾರರು ಸಹ ವೋಟು ಹಾಕದೆ, ಪೋಲಿಂಗ ಪೂಜೆ ಮಾಡಿದ್ದಾರೆ. ಯಾರ ಪ್ರೀತಿಯು ಎಷ್ಟಿರುತ್ತದೆಂಬದನ್ನು ಹೇಳುವದಕ್ಕೆ ವಕೀಲರ ಹಿಡಿದು ಬಾಲಕರ್ಯಾರೂ ಸಿದ್ಧರಿಲ್ಲ. ಏಕಂದರೆ- ವಕೀಲರೇ ಸಭೆ ಮಾಡಿ, ಇವರಿಗೆ ವೋಟು ಹಾಕಬಾರದೆಂದು ಠರಾವು ಮಾಡಿದ್ದಾರೆ. ಆದರೂ ಕರ್ನಾಟಕ ಟಾಯಿಮ್ಸವು ಮೀಸೆಗೆಲ್ಲಿ ಮಣ್ಣು ಹತ್ತಿದೆಂದು ಸಾರುತ್ತಿರುವದು.

ಪಂಡಿತ ಮೋತಿಲಾಲರ ಅಳಿಯಂದರಾದ ಬ್ಯಾರಿಸ್ಟರ ಪಂಡಿತರನ್ನು ರಾಜದ್ರೋಹದ ಆರೋಪದಿಂದ ಹಿಡಿದಿದ್ದಾರೆ.

ಹಿಂದುಸ್ಥಾನದ ವತಿಯಿಂದ ನಾಮದಾರ ಶ್ರೀನಿವಾಸಶಾಸ್ತ್ರಿಯವರು ರಾವುಂಡ ಟೇಬಲದಲ್ಲಿ ಮುಖ್ಯ ಮಾತುಗಾರರಾಗುವರು.

ರಾವಬಹಾದ್ದೂರ ಕಂಬಳಿ
ಮತ್ತು
ರೌಂಡಟೇಬಲದ ಆಮಂತ್ರಣ.

——(೦)——

ರಾವಬಹಾದ್ದೂರ ಕಂಬಳಿಯವರಿಗೆ ರೌಂಡಟೇಬಲಕ್ಕೆ ಆಮಂತ್ರಣ ಬಂದದ್ದು ಯಾರಿಗೂ ಸಂತೋಷವೆನಿಸಿಲ್ಲ. ಏಕೆಂದರೆ ಕಾಂಗ್ರೆಸದ ಧ್ಯೇಯವನ್ನು ತುಚ್ಛೀಕರಿಸಿ, ಹಿಂದುಸ್ಥಾನವನ್ನು ಯಾವದೊಂದು ರೀತಿಯಿಂದ ಇಂಗ್ಲಂಡದ ತೊತ್ತು ಮಾಡುವದಕ್ಕೆ ಈ ಆಮಂತ್ರಣವಿರುತ್ತದೆಂದು ಜನತೆಯ ಮತವಾಗಿದೆ. ರಾ. ಬ. ರವರು ಕರ್ನಾಟಕದ ವತಿಯಿಂದ ಬರಮಾಡಲ್ಪಟ್ಟಿದ್ದಾರೆಂದೂ ಹೇಳುವರು. ಯಾವ ಕನ್ನಡಿಗರು ಇವರನ್ನು ಆರಿಸಿಕೊಟ್ಟರ? ಸರಕಾರವೆಂದರೆ ಕರ್ನಾಟಕವಲ್ಲ. ಜನರ ಅಪ್ರೀತಿಗೆ ಕಾರಣರಾದವರು ಸರಕಾರಕ್ಕೆ ಪ್ರೀತ್ಯಾಸ್ಪದರಾಗಿದ್ದಾರೆಂಬದನ್ನು ತೋರಿಸಲು ಅನೇಕ ಉದಾಹರಣೆಗಳನ್ನು ಕೊಡಬಹುದು. ನಾಲ್ಕು ವರ್ಷಗಳ ಹಿಂದೆಯಾದಂಥ ಚುನಾವಣೆಯಲ್ಲಿ ಸರ ಕೆ. ವ್ಹಿ. ರಡ್ಡಿಯವರು ಅಪಯಶ ಹೊಂದಿ, ಲೋಕ ವಿಶ್ವಾಸ ಕಳಕೊಂಡರು. ಆದರೂ ಅವರನ್ನು ಆಫ್ರಿಕಗೆ ಹಾಯ ಕಮೀಶನರರಾಗಿ ಕಳಿಸಿದರು. ಹೀಗೆ ರಾ. ಬ. ರವರಿಗೆ ರೌಂಡಟೇಬಲಕ್ಕೆ ಬಂದ ಆಮಂತ್ರಣವು ಕನ್ನಡಿಗರಿಗೆಷ್ಟೂ ಅಭಿಮಾನ ಮತ್ತು ಭೂಷಣವಾದುದಾಗಿರುವದಿಲ್ಲ.

ಬೊಮ್ಮನಹಳ್ಳಿಯಲ್ಲಿ
ಮಾಮಲೇದಾರರ ಮೋಟಾರಿನ ಮುಂದೆ
ಸತ್ಯಾಗ್ರಹ.

—(೦)—

ಬೊಮ್ಮನಹಳ್ಳಿಯಲ್ಲಿ ಪಿಕೆಟಿಂಗವು ಅಭೂತಪೂರ್ವವಾಯಿತು. ಧಾರವಾಡ ಜಿಲ್ಹೆಯಲ್ಲಿ ಹೀಗೆ ಎಲ್ಲಿಯೂ ಆಗಲಿಲ್ಲ. ಬೆಳಗಾಲಪೇಟೆಯ ಕಮ್ಮಡೊಳ್ಳಿ ಗುರಪ್ಪನೆಂಬವರು ಹಟದಿಂದ ಹೋಟು ಹಾಕಿ ಬರಲು, ಗೋಮಯದ ಲೇಪನ ಮತ್ತು ಕರೇ ನಿಶಾನೆಗಳ ಛತ್ರಚಾಮರ ಹಿಡಿಸಿಕೊಂಡರು. ಇದನ್ನು ಕಣ್ಣಾರೆಕಂಡರೂ ಕಾಯುತ ಲೋಕಲಬೋರ್ಡಿನ ಮೆಂಬರರೂ ಹನಸಾಬಾದಿನ ಪಾಟೀಲರೂ ಆದಂಥ ರಾ. ರಾ. ಬಸಪ್ಪನವರು ಸಾಮಾಜಿಕರನ್ನು ಧಿಕ್ಕರಿಸುತ್ತ, ಹೋಟು ಹಾಕಿ ಬಂದರು. ಕೂಡಲೆ ಇವರಿಗೂ ಮೇಲೆ ಹೇಳಿದಂಥ ಬಹುಮಾನವಾಯಿತು.

ಈ ಸಂಗತಿಯು ಸಂಭವಿಸಿದ ನಂತರ ಮಾಮಲೇದಾರರು ಬಂದು, ಗಳಗ ಕಲವು ಹಚ್ಚಿ, ಹೋಟು ಹಾಕಬೇಕೆನ್ನುವಂಥವರ ಮೇಲೆ ಖಟ್ಲೆ ಹಾಕುವೆವೆಂದು ಡಂಗುರ ಸಾರಿಸಿದರು. ಇದು ಪಿಕೆಟಿಂಗಕ್ಕೆ ಹೆಚ್ಚು ಪುಟ ಕೊಟ್ಟಂತಾಯಿತು ಊರ ತುಂಬ ಹಂಗಾಮವಾಗಿತ್ತು. ಹತಾಶದಿಂದ ಕರಿ ನಿಶಾನೆಯ ಗಡಣ ಬಂದಾಗಿದೆಯೇ ಹೇಗೆಂದು ನೋಡಲಿಕ್ಕೆ ಹೋಗಿ ಬರುವಷ್ಟರಲ್ಲಿ ಪೋಲೀಸರು ದಾರಿಗುಂಟ ನಿಲ್ಲಿಸಿದ್ದ ಕರೆ ನಿಶಾನೆಗಳನ್ನು ಕಿತ್ತಿಸಿದ್ದರು. ಈ ನಿಶಾನೆಗಳನ್ನು ತಮಗೆ ತಿರುಗಿ ಕೊಡಿಸಬೇಕೆಂದು ಏಳೆಂಟು ನೂರು ಜನರು ರಾಯರ ಮೋಟಾರಿನ ಮುಂದೆ ಪ್ರಾಣಾಚಾರಿ ಬಿದ್ದರು. ಮಾಮಲೇದಾರರಿಗೆ ಅಧಿಕಾರಕ್ಕೇನೂ ಕೊರತೆ ಇರಲಿಲ್ಲ. ಡಂಗುರವನ್ನೂ ಹೊಡಿಸಿದ್ದರು. ಅಧಿಕಾರವನ್ನು ಬದಿಗಿಟ್ಟು, ಜಪ್ತ ಮಾಡಿದ ನಿಶಾನೆಗಳನ್ನು ಕೊಡಿಸಿ ಹೋದರು. ಈ ನಿಶಾನೆಗಳ ಮೆರವಣಿಗೆಯಲ್ಲಿಯೇ ಮೋಟಾರ ಸಾಗಿತು.

ಈ ಗದ್ದಲ ಸಾಧಿಸಿ, ಕರಗುದರಿ, ಬೆಳಗಲಪೇಟ ಮತ್ತು ಚೆನ್ನಹಳ್ಳಿಯ ೧೦-೧೨ ಜನ ಮುಸಲಮಾನರು ಹೋಟು ಹಾಕಿದರು. ಹಿಂದೂ ಜನರ ಹೋಟುಗಳು ಮೇಲಿನವೆರಡೇ !!

ಕುಪ್ಪೇಲೂರಲ್ಲಿ ಮುಸಲಮಾನ ಹೋಟರರು
ದಂಡ ಕೊಟ್ಟರು.

—(೦)—

ರಾಣೇಬಿನ್ನೂರ ತಾಲೂಕ ಕುಪ್ಪೇಲೂರಲ್ಲಿ ಪಿಕೆಟಿಂಗವು ಒಳ್ಳೇ ದಕ್ಷತೆಯಿಂದ ನಡೆಯಿತು. ರಾಣೇಬಿನ್ನೂರ ಮತ್ತು ಹಲಗೇರಿಯಿಂದ ಸ್ವಯಂಸೇವಕರು ಒಂದು ಮನಃಪೂರ್ವಕವಾಗಿ ಕೆಲಸ ಮಾಡಿದರು.

ಈ ಗ್ರೂಪಿನಲ್ಲಿ ೩೫೦ ಹಿಂದೂ ಮತ್ತು ೫೦ ಮುಸಲಮಾನರ ಮತಗಳುಂಟು. ಹಿಂದೂ ಹೋಟರರೊಬ್ಬರೂ ಪೋಲಿಂಗದ ಕಟ್ಟೇ ಏರಲಿಲ್ಲ. ಕುಪ್ಪೇಲೂರಿನ ಇಬ್ಬರು ಮುಸಲಮಾನರು ಜನರ ಕಣ್ಣು ತಪ್ಪಿಸಿ, ಹೋಟು ಕೊಟ್ಟರು. ಕೂಡಲೆ ನೆರೆದ ಜನರು ಅನೇಕ ರೀತಿಯಿಂದ ಅವರ ಅಮರ್ಯಾದೆ ಮಾಡಿದರು. ಬಳಿಕ ಎಲ್ಲರ ವಿಚಾರದಿಂದ ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಬೇಕೆಂದು ಗೊತ್ತಾಯಿತು. ಈ ವರ್ತಮಾನ ಕೇಳಿ, ಅವರು ಗತಿಗಾಣದೆ, ದೈವದ ಮುಂದೆ ಬಂದು, ತಪ್ಪು ಒಪ್ಪಿಕೊಂಡು, ಕ್ಷಮೆ ಬೇಡಿ, ಎರಡು ರೂಪಾಯಿ ತಪ್ಪು ದಂಡ ಕೊಟ್ಟರು.

ರಾಣೇಬಿನ್ನೂರ ಪಟ್ಟಣದಲ್ಲಿ ೫೧೩ ಹೋಟುಗಳಲ್ಲಿ ಇಪ್ಪತ್ತೈದೇ ಹೋಟುಗಳು ಬಿದ್ದವು. ಶ್ರೀ. ಬಣಗಾರ ತಿಗ್ಗಪ್ಪನವರು ಮೋರೇ ಎತ್ತಿದಂತೆ ಪಿಕೆಟಿಂಗವಾಯಿತು.

ಮುಳಗುಂದದಲ್ಲಿ ನಾಲ್ಕೇ ಹೋಟು.

—)(೦)(—

ಗದಗ ತಾಲೂಕ ಮುಳಗುಂದ ಗ್ರೂಪಿಗೆ ೪೩೮ ಹೋಟುಗಳುಂಟು. ಸ್ವಯಂಸೇವಕ ಸೇವಿಕೆಯರು ಉತ್ಸಾಹದಿಂದ ಯಶಸ್ವಿಯಾಗಿ ಕೆಲಸ ಮಾಡಿದರು. ಕಲೆ ಮಾಸಿದಂಥವರ ನಾಲ್ಕು ಹೋಟು ಬಿದ್ದವು. ಪಿಕೆಟಿಂಗವು ಯಶಸ್ವಿಯಾದ ಬಗ್ಗೆ ಸಾಯಂಕಾಲದಲ್ಲಿ ಊರೊಳಗೆ ಎರಡು ಸಾವಿರ ಜನರ ಪ್ರಚಂಡ ಮೆರವಣಿಗೆ ಹೊರಟಿತು. ಸಭೆ ಕೂಡಿ ರಾಷ್ಟ್ರಧ್ವಜವಂದನೆಯಾಯಿತು. ಸಭೆಯಲ್ಲಿ ವೇ|| ಗೋವಿಂದರಾವ ಗೋಸಾವಿ, ಶ್ರೀ. ವಾಸುದೇವರಾವ ಕುಲಕರ್ಣಿ, ಶ್ರೀ. ಚನ್ನಬಸಪ್ಪ ಬುಕ್ಕಾ, ಶ್ರೀ. ಶಂಕರೆಪ್ಪ ಯಳವತ್ತಿ ಇವರ ಉತ್ತೇಜಕ ಭಾಷಣಗಳಾದವು.

ಆಲೂರ ಶಾಲೆಯ ಮೇಲೆ
ರಾಷ್ಟ್ರೀಯ ನಿಶಾನೆ.

— —(೦)— —

ಹಾನಗಲ್ಲ ತಾಲೂಕ ಆಲೂರಲ್ಲಿ ವಿದ್ಯಾರ್ಥಿಗಳು ರಾಷ್ಟ್ರೀಯ ನಿಶಾನೆ ಏರಿಸಿದರು. ಆಗ ಬಹು ದೊಡ್ಡ ಸಮಾರಂಭವಾಯಿತು. ಊರ ಜನರೆಲ್ಲ ನೆರೆದಿದ್ದರು.

ಚುನಾವಣೆಗೆ ಬಹಿಷ್ಕಾರವಾಯಿತು ೬೭೫ ಮತಗಳಲ್ಲಿ ಹದಿನೆಂಟು ಮತಗಳು ಬಿದ್ದವು. ರಾ. ಬ. ಕಂಬಳಿಯವರೇ ಹೇಳಿರಿ? ನೀವಾರ ಪ್ರತಿನಿಧಿಗಳು ಎಂಬವಾಗಿ ಅಲ್ಲಿಂದ ಬಂದ ಪತ್ರದ ಸಾರಾಂಶವಾಗಿದೆ.

ಸಾತಾರಾ ಜಿಲ್ಹೆಗೆ ಸೇರಿದ ಇಸ್ಲಾಮಪೂರ ತಾಲೂಕಿನಲ್ಲಿ ಪೋಲೀಸರು ರಾಷ್ಟ್ರೀಯ ನಿಶಾನೆ ಮುರಿದು, ಸುಟ್ಟರು. ಅದೇ ಪ್ರಕಾರ ಅನೇಕ ಸ್ಥಳಗಳಲ್ಲಿ ಗಾಂಧೀ ಟೊಪ್ಪಿಗೆಗಳನ್ನು ಸುಟ್ಟರು.

ಕುಮಟೆಯಲ್ಲಿ ೧೫೦೦ ಮತಗಳಲ್ಲಿ ೬೯ ಮತಗಳು ಬಿದ್ದವು. ಬಹಿಷ್ಕಾರದ ವಿಜಯವೆಂದು ಅಲ್ಲಿಂದ ಪತ್ರ ಬಂದಿದೆ.

ಧಾರವಾಡ–

ಮಳೆಯಿಲ್ಲ; ಸಿಟಿಸಿಟಿ ಹನಿ ಹತ್ತಿರುವದು.

ನೋಟೀಸಿಗೆ ಉತ್ತರಾ

ರಾ॥ ರಾ॥ ಈರಪ್ಪಾ ಹುಲ್ಲಪ್ಪಾ ಕಳ್ಳೀಮನಿ ಉರ್ಫ ಸುಣಗಾರ ಸಾ॥ ಒಂಕಾಪೂರ ಇವರಿಗೆ- ಕೆಳಗೆ ಸಹಿ ಮಾಡಿದವನು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ನೀನು ವಿಜಯಪತ್ರದಲ್ಲಿ ತಾ॥ ೧೯-೩-೩೦ನೇ ಇಸ್ವಿ ದಿವಸ ಕೊಟ್ಟ [illegible] ಕೊಟ್ಟ ನೋಟೀಸಿನ ಮಜಕೂರು ತಿಳಿಯಿತು [illegible] ನೋಟೀಸಿನಲ್ಲಿ ನೀನು ಬರೆದ ಯಾವತ್ತು ಮಜಕೂರು ಸುಳ್ಳು ವ ಖೋಟ್ಟಿ ಸಾಧಣೂಕಿ [illegible] ಸಿದ್ದು ಅದೆ ಅದಕ್ಕೆ ನಾನು ಒಪ್ಪುವದಿಲ್ಲಾ ಮತ್ತು ನಾನು ಬರಿಸಿಕೊಂಡ ಆಸ್ತಿಯು ಮೂಲ ಮಾಲೀಕರಾದ ಈರಪ್ಪಾ ರುದ್ರಪ್ಪಾ ಕಳ್ಳೀಮನಿ ಎಂಬಾ[illegible]ನಿಂದಾ ಯೋಗ್ಯವಾದ ಖರೀದಿ ಹೆಸರು ಖರೀದಿ [illegible] ೧೩-೧೩ [illegible] ನಿನ್ನ ನೋಟೀಸಿನಲ್ಲಿ [illegible] ಆಸ್ತಿಗೆ ನಾನೇ ಮಾಲೀಕನಾಗಿ ಆಸ್ತಿ ವಹಿವಾಟ ಉಪಭೋಗ ಮಾಡುತ್ತಾ ಬರುತ್ತೇನೆ ಹೀಗಿದ್ದು ನನಗೆ [illegible] ಕೊಟ್ಟ ಆಸ್ತಿಯು ಪೂರ್ವಕ್ಕೆ [illegible] ಮನಿ ವ ಬಂಗಳಾ ಇದ್ದು ಅದಕ್ಕೆ [illegible] ಏನಾದರೂ ನಾಯುಕ್ತಿಯಿಂದಾ ತಮ್ಮ [illegible] ಮಾಡಿಕೊಳ್ಳುವಂತೆ ಮಾಡುವ ದುಷ್ಟ ಬುದ್ಧಿಯಿಂದಾ ಇಂಥಾ ಖೋಟ್ಟಿ ನೋಟೀಸ ವಗೈರೆ ಕೊಟ್ಟಿರುತ್ತೀದಿ ಮತ್ತು ಇದೇ ಆಸ್ತಿಯ ಸಮ್ಮಂಧ [illegible] ಮಾಮಲೇದಾರ ಸಾಹೇಬರ ಕಡಿಗೆ ಒಂದು [illegible] ಫಿರ್ಯಾದಿ ಮಾಡಲ್ಪಟ್ಟಿದ್ದು ಆ ಫಿರ್ಯಾದಿಯು ನಿನಗೆ ಜಯ ಸಿಗುವದಿಲ್ಲೆಂದು ಸಾಲ್ಕ ಮುಂದಿ[illegible]ಗೆ ಹೇಳಿಕೊಂಡು ನಿನ್ನ ಫಿರ್ಯಾದಿಯನ್ನು ನೀನೇ ತೆಗೆದುಕೊಂಡಿರುತ್ತೀದಿ ಇಷ್ಟಾದರೂ ನಿನ್ನ ಕೆಲಸ ಸಾಧಿಸಲಿಲ್ಲೆಂಬ ಮತ್ಸರ ಬುದ್ಧಿಯಿಂದ ಈ ಖೋಟ್ಟಿ ನೋಟೀಸ ಕೊಟ್ಟಿರುತ್ತೀದಿ ನಿನ್ನ ನೋಟೀಸಿನಲ್ಲಿಯ ಮಜಕೂರು ಎಷ್ಟರ ಮಟ್ಟಿಗೆ ಖರೇ ಇರುವದಿಲ್ಲಾ ನಾನು ಬರಿಸಿಕೊಂಡ ಆಸ್ತಿ ಮೇಲೆ ನೀನು ಯಾವ ಬಂದ ಮಾಲೀಕರು ವ ಹಕ್ಕದಾರರೂ ಇರೋದಿಲ್ಲಾ ನಿನ್ನ ಆಸ್ತಿಯು ಬೇರೇ ಇರುತ್ತದೆ ನಾನು ಬರಿಸಿಕೊಂಡ ಆಸ್ತಿ ಈರಪ್ಪಾ ರುದ್ರಪ್ಪಾ ಇವರ ಮಾಲ್ಕೀ ಆಸ್ತಿ ಇದ್ದು ಅವನಿಂದಾ ಖರೀದಿ ಹಿಡಿದಿರುತ್ತೇನೆ ಆ ಆಸ್ತಿಯು ನನ್ನ ತಾಬಾದಲ್ಲಿ ಅದೆ ಇದಕ್ಕೂ ಹೆಚ್ಚಿಗೆ ನಿನ್ನ ಮನಸ್ಸಿನಲ್ಲಿ ತಂಟೆ ಮಾಡುವದಿದ್ದಲ್ಲಿ ಕೋರ್ಟ ಮಾರ್ಪತ ತಂಟೇ ಮಾಡಿ ನಿನ್ನ ಸ್ವಾರ್ಥಸಾಧಿಸಬಹುದು ವಿನಹಾ ಕಾರಣಾ ಈ [illegible] ನೀನು ನನ್ನ ಮೇಲೆ ಸುಳ್ಳ ನೋಟೀಸ ಕೊಟ್ಟು ತ್ರಾಸು ಮಾಡಿದಲ್ಲಿ ನಿನ್ನ ಮೇಲೆ ಅದರ ಬಗ್ಗೆ [illegible] ಮಾಡುವದರಲ್ಲಿ ಒಂದೀತು ತಿಳಿಯುವದು ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಅದೆ

ತಾರೀಖು ೪-೯-೩೦

ಸಹಿ- ನಾಗಪ್ಪಾ ರಾಮಪ್ಪಾ ನವೀಗಲ್ಲ
ಸಾ॥ ಒಂಕಾಪೂರ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಗುಳಿಗೆ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹೋಗುವ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ನಕ್ಷತ್ರಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚ ಬೇರೆ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ಟಿಕೇಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— [illegible]
C/o [illegible]

[illegible]

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಟಿಂಬರ ಅಡ್ಡದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಬೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳೆ ವ ಸಾಗವಾನಿ (೭) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಲೀಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರದಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾಡ ಪತದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಮೈಸೂರು ಊದುಬತ್ತಿ

ಹೆಚ್ಚ ಅಂಬರಬತಿ [illegible] ವ ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸ [illegible] ವಾಸನೆ ಕಡಿಮೆಯಾಗುವದಿಲ್ಲ ಲಗ್ನ ವ ಮ[illegible]ಗಳಲ್ಲಿಯೂ ಮತ್ತು ಪ್ರತಿದಿನಸು ಪೂಜೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ [illegible] ಬೋರಿಯ ಸೇರು ೧ಕ್ಕೆ ೭—೦—೦
[illegible] ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦
೧೯-೧೧-೨೯ ಮೈಸೂರ ಸ್ಟೋರ.
ಬೆಳಗಾವಿಯವರ ಗಲ್ಲಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

[illegible]

ನಿತ್ಯ ಪತ್ರ — ವಿಜಯ — ಬೆಲೆ ಅರ್ಧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೩। ಧಾರವಾಡ ಬುಧವಾರ ತಾರೀಖು ೧೭ನೇ ಸಪ್ಟಂಬರ ೧೯೩೦ (ಸಂಚಿಕೆ ೨೦೬

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ. ಸಿದ್ಧಾಪದೂತರ [illegible], ಶ್ರೀ ಆರೂಢಸ್ವಾಮಿಗಳ ಕೈಫಿಯತು ಮತ್ತು ಮನೋಹರವಾದ ಶ್ರೀ. ಸಬನೀಸ [illegible] ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು [illegible] ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಗ್ರಂಥವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಒಂದೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕಡಿಮೆನಿಸುತ್ತವೆ, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ. ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳು ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದ್ನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಕಸ್ಸಿನ ಪ್ರಕಾರ ತಿಂಗಳಾ ಕನಿಷ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ

ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಠೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹುಂಡಿಗಳು ಎಂಟು ಬಿಲ್ಲಿನ [illegible], ವಗೈರೆ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಸೇವಿಂಗ ಠೇವ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಟರಾವ ಬಿ. [illegible].

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಮ್ಯಾ ವಿಜಯ ಧಾ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ಭಾದ್ರಪದ ವದ್ಯ ೧೦

ಹಂಪೆಗೆ ಹೋಗುವದಕ್ಕಿಂತ ಕೊಂಪೆಯೇ ಲೇಸು !!!

ಇಂಗ್ರೇಜಿ ಸರಕಾರದವರು ಹೇಗಾದರೂ ಮಾಡಿ, ಕಾಂಗ್ರೆಸದವರನ್ನು ರಾವುಂಡಟೇಬಲಕ್ಕೆ [illegible]ರಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದರು ಲಾರ್ಡ ಆಯರ್ವಿನಸಾಹೇಬರು ಇದೇ ವಿಷಯವಾಗಿ ಮಹಾತ್ಮರು ಹಾಗು ಪಂಡಿತ ಮೋತಿಲಾಲರು ಇವರ ಕೂಡ ಪ್ರಸ್ತಾಪ ಮಾಡಲು- ದಕ್ಷಿಣದೇಶದ ಸಂಚಾರವನ್ನು ಅರ್ಧಕ್ಕೆ ನಿಲ್ಲಿಸಿ, ಹೈದರಾಬಾದಿನಿಂದ ದಿಲ್ಲಿಗೆ ಪ್ರಯಾಣ ಮಾಡಿದರು. ಅಂದಿನಿಂದ ಇಂದಿನವರೆಗೆ ಈ ದೇಶದಲ್ಲಿ ಬಹಿಷ್ಕಾರ, ಸತ್ಯಾಗ್ರಹ, ಕಾಯದೆಭಂಗ, ತುರುಂಗವಾಸ ಮುಂತಾದ ಕ್ರಾಂತಿಗಳು ಹೇಗೆ ನಡೆದಿವೆಂಬದಾಗಿ ಜಗತ್ತನ್ನೆ ಅಲ್ಲೋಲಕಲ್ಲೋಲ ಮಾಡಿಬಿಟ್ಟವು ಕಾಂಗ್ರೆಸ ಮತ್ತು ಲಾರ್ಡ ಆಯರ್ವಿನಸಾಹೇಬರ ನಡುವೆ ಬ್ಯಾರಿಸ್ಟರ ಜಯಕರ ಮತ್ತು ಸರ ಸಪ್ರುಸಾಹೇಬರ ಮಧ್ಯಸ್ಥಿಕೆಯಿಂದ ನಡೆದ ಶಿಷ್ಟಾಯಿಯಲ್ಲಿ ಉತ್ಪನ್ನವಾದ ಮತಭೇದವು ಎರಡು ಧ್ರುವಗಳ ನಡುವೆ ಇರುವಷ್ಟು ಅಂತರವನ್ನುಂಟುಮಾಡಿದೆ. ಆದ್ದರಿಂದ, ಬ್ರಿಟಿಶ ಸರಕಾರದವರು ಕಾಂಗ್ರೆಸದವರನ್ನು ಬಿಟ್ಟು, ತಮಗೆ ಅನುಕೂಲವಾಗಿರುವಂಥವರದೊಂದು ಮಂಡಲವನ್ನು ಗೊತ್ತುಮಾಡಿ, ಅದಕ್ಕೆ ಆಮಂತ್ರಣ ಕಳಿಸಿದ್ದಾರೆ. ಎಲ್ಲರೂ ಅತ್ಯಾನಂದದಿಂದ ಆಮಂತ್ರಣವನ್ನು ಸ್ವೀಕಾರಮಾಡಿ, ವಿಲಾಯತಿಗೆ ಹೊರಡಲು, ಗಂಟುಗದಡಿ ಕಟ್ಟುತ್ತಲಿದ್ದಾರೆ.

ಕಾಂಗ್ರೆಸದವರನ್ನು ಬಿಟ್ಟು, ರಾವುಂಡಟೇಬಲಕ್ಕೆ ಹೋಗುವದೆಂದರೆ- ಮದವಣಿಗನನ್ನು ಬಿಟ್ಟು, ಮದಿವೆಗೆ ಹೋಗುವಂತಾಗುತ್ತದೆಂದು ಕೆಲವರ ಮತ. ಇದೆಷ್ಟೋ ಒಳಿತು. ಏಕೆಂದರೆ- ಅಲ್ಲಿಯೋ ಒಬ್ಬನು ಗಟ್ಟಿಗನಾಗಿ, ವರನಾಗಬಹುದು. ಆದರೆ ಇವರು ಹೋಗಿ ಬರುವದೆಲ್ಲ ಹಂಪೆಗೆ ಹೋಗುವದಕ್ಕಿಂತ ಕೊಂಪೆಯಲ್ಲಿರುವದೇ ಲೇಸೆಂದು ಮುಂದೆ ಅನುಭವಕ್ಕೆ ಬರುವದೇ ಖಂಡಿತವೆಂದು ಯಾರೊಬ್ಬರ ಬಾಯಿಯಿಂದ ಉದ್ಗಾರ ಹೊರಡಲಾರಂಭಿಸಿದೆ. ಬ್ರಿಟಿಶ ಸಾಮ್ರಾಜ್ಯದಲ್ಲಿ ಎರಡನೆಯ ದೊಡ್ಡ ಪಟ್ಟಣವಾದ ಮುಂಬಯಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದ ಡಾಕ್ಟರ ದೇಶಮುಖರು ಟೇಬಲವು ಟರ್ನಟೇಬಲ (ಹೊಡಮಳ್ಳಿ) ವಾಗುವದೆಂದು ಅಭಿಪ್ರಾಯಪಟ್ಟಿರುತ್ತಾರೆ. ಟೇಬಲಕ್ಕೆ ಹೋಗುವ ಸರ. ರಾ. ಬ. ರವರಷ್ಟೇ ಪದವಿ ಪಡೆದ ಸರ ಸಾಮುಲದಾಸರೂ, ಡಾಕ್ಟರ ದೇಶಮುಖರಂತೆ ಮತವುಳ್ಳವರಾಗಿದ್ದಾರೆ ಮುಂಬಯಿ ಹಿಂದೂ ವರ್ತಕ ಸಂಘದವರು ಅಂದರೆ ಮಹಾಜನ ಮಂಡಳದವರು ತಮಗೆ ಇದರ ಕರ್ತವ್ಯವೇ ಇಲ್ಲೆಂದು ಜಾಹೀರ ಮಾಡಿದ್ದಾರೆ. ಬಹಿಷ್ಕಾರವು ಇಷ್ಟು ತೀವ್ರತರವಾಗಲಿಕ್ಕೆ ವರ್ತಕರೇ ಕಾರಣರಾಗಿದ್ದು, ಅವರೇ ಬಹಿಷ್ಕಾರ ಹಾಕಿದ ಬಳಿಕ, ಬಹಿಷ್ಕಾರದ ಚಳವಳಿಯು ಅಡಗುವದೂ, ಬ್ರಿಟಿಶ ವ್ಯಾಪಾರ ಮತ್ತು ಬ್ರಿಟಿಶ ಕೂಲಿಕಾರರಿಗೆ ಸಂಕ್ರಾಂತಿ ತಪ್ಪುವದೂ ಹೇಗೆಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ.

ಲಾರ್ಡ ಆಯರ್ವಿನಸಾಹೇಬರು ರಾಜ್ಯಕಾರಭಾರದಲ್ಲಿ ಆದಷ್ಟು ಹೆಚ್ಚಿಗೆ ಅಧಿಕಾರ ದೊರೆಯುವದೆಂದು ಹೇಳುತ್ತಾ ಬಂದಿದ್ದಾರಲ್ಲದೆ, ವಸಾಹತಿಕ ಸ್ವರಾಜ್ಯವೆಂಬ ಅಷ್ಟಾಕ್ಷರವನ್ನು ಅನ್ನಲೇ ಒಲ್ಲರು. ಯಾಕೆಂದರೆ- ಬಾಯಿ ಕೊಟ್ಟರೆ ಹೋಯಿತು; ಮುತ್ತು ಒಡೆದರೆ ಹೋಯಿತೆಂಬಂತಾಗುವದೆಂದು ಗಾಬರಿಯಾಗಿದ್ದಾರೆ. ಕಾನ್ಸರವೇಟಿವ್ಹ ಮತ್ತು ಹಿಂದುಸ್ಥಾನದ ಭಾಗಾಧಿಯಾದ ಗೌರಕಾಯಸ್ಥರು ಸ್ವರಾಜ್ಯ ಕೊಡುತ್ತೇವೆಂದು ಬ್ರಿಟಿಶ ಸರಕಾರವು ವಾಚಾದತ್ತವಾಗಿಲ್ಲೆಂದು ನಿರ್ಭಿಡೆಯಿಂದ ಹೇಳುತ್ತಾ ಬಂದಿದ್ದಾರೆ ರಾವುಂಡಟೇಬಲಿನವರ ಹೆಸರು ಪ್ರಸಿದ್ಧವಾದ ಬಳಿಕ, ಡೇಲಿ ಟೆಲಿಗ್ರಾಫ, ಮಾರ್ನಿಂಗ ಪೋಸ್ಟ ಮೊದಲಾದ ಪತ್ರಗಳು ಮಹಾತ್ಮರು ತಲೆಗೆಟ್ಟು ಹುಚ್ಚರಿದ್ದಾರೆಂದು ಪಾಂಚಜನ್ಯ ನಡೆಸಿವೆ. ಮಿ. ಮ್ಯಾಕಡೋನಾಲ್ಡಸಾಹೇಬರು ಟೇಬಲಿನ ಅಧ್ಯಕ್ಷರಾಗುವದಿಲ್ಲ. ಮಿ. ಬೆನ್ನವೆಜ್ವುಡ್ಡಸಾಹೇಬರು ಇದರಲ್ಲಿ ಭಾಗ ತಕ್ಕೊಳ್ಳುವದಿಲ್ಲ. ಮಿ ಲಾಯಿಡ ಜಾರ್ಜಸಾಹೇಬರು ಅಧ್ಯಕ್ಷರಾಗುವರೆಂದು ವರ್ತಮಾನವಾಗಿದೆ. ಇವರೇ ಆಗಲಿ; ಇವರ ನಂತರ ಪಾರ್ಲಮೆಂಟಸಭೆಯವರೇ ಆಗಲಿ; ತಮ್ಮ ಸ್ವಾರ್ಥ ನೋಡಿಕೊಂಡೇ ಏನಾದರೂ ಕೊಟ್ಟಂತೆ ಮಾಡುವರೆಂದು ಭವಿಷ್ಯ ಕಥನಮಾಡಿದರೆ- ಎಷ್ಟೋ ಶಕ್ಯಾಗಮ. ಈ ಭವಿಷ್ಯದಿಂದ ಹಿಂದೀ ಪ್ರತಿನಿಧಿಗಳ ಅವಸ್ಥೆಯು ಆಗರಕ್ಕೆ ಹೋಗಿ ಗೂಗೆ ಕಂಡಂತಾಗುವದೆಂದೇಕೆ ಅನ್ನಬಾರದು ? ಎಷ್ಟೋ ಸ್ಥಳಗಳಲ್ಲಿ ವಿಲಾಯತಿಗೆ ಹೋಗತಕ್ಕವರನ್ನಾಗಿ ಮಾನಮರ್ಯಾದೆಗಳು ನಡೆಯುವವು ಆಗ ಆ ಮಾನವನ್ನು ಮುಡಿಪಾಗಿ ತೆಗೆದಿಟ್ಟು, ಸ್ವರಾಜ್ಯ ತಕ್ಕೊಂಡು ಬಂದರೆ- ಆಗ ಇವಕ್ಕೆ ದ್ವಿಗುಣ ಮರ್ಯಾದೆ ಮಾಡಬೇಕು. ವ್ಯಕ್ತಿಗಳೇಕೆ? ದೇಶವೇ ಮಾಡುವದು- ಇಲ್ಲಕಂದರೆ ಅದೊಂದು ಹೊಸ ಮನ್ವಂತರವೇ ಆಗುವದು.

ರಾವುಂಡ ಟೇಬಲಿನ ಪ್ರತಿನಿಧಿಗಳು.

ಸಂಸ್ಥಾನಿಕರು

೧ ಅಳ್ವಾರದ ಮಹಾರಾಜರು ೨ ಬಡೋದೆ ಗಾಯಕವಾಡರು ೩ ಭೋಪಾಳದ ನವಾಬರು ೪ ಬಿಕಾನೇರ್ ಮಹಾರಾಜರು ೫ ಧೋಲಪುರದ ಮಹಾರಾಜಾ ರಾಣಾ ೬ ಕಾಶ್ಮೀರದ ರಾಜರು ೭ ನವಾನಗರದ ಜಾಮರು ೮ ಪತಿಯಾಳಾ ಪ್ರಭುಗಳು ೯ ರೇವಾ ಸಂಸ್ಥಾನಿಕರು ೧೦ ಸಾಂಗ್ಲಿಯ ಚೀಫರು ೧೧ ಸರ್ ಪ್ರಭಾಶಂಕರ ಪಟ್ಟಣಿ ೧೨ ಸರ್ ಮನೂಭಾಯಿ ಮಹತಾ ೧೩ ಸರದಾರ್ ಸುಲ್ತಾನ ಅಹಮದ ಖಾನ ೧೪ ಸರ್ ಹೈದರಿ ೧೫ ಸರ್ ಮಿರ್ಜಾ ಇಸ್ಮಾಯಿಲ್ ೧೬ ಕರ್ನಲ್ ಹಕ್ಸರ್

ಬ್ರಿಟಿಶ ಹಿಂದುಸ್ಥಾನದವರು

೧ ಆಗಾಖಾನ ೨ ನವಾಬ ಸರ ಎ ಕ್ವಯೂಂ ೩ ಸರ್ ಸಿ ಪಿ ರಾಮಸ್ವಾಮಿ ಅಯ್ಯರ ೪ ಡಾ. ಅಂಬೇಡಕರ್ ೫ ಚಂದ್ರಧರ ಬರೂಆ ೬ ಜೆ ಎನ್. ಬಸು ೭ ಸರ ಶಹಾ ನವಾಜ್ ಖಾನ್ ೮ ಸರ್ ಹ್ಯೂಬರ್ಟ ಕಾರ್ ೯ ದಿವಾನ ಚಮನಲಾಲ್ ೧೦ ಸಿ ವಾಯ. ಚಿಂತಾಮಣಿ ೧೧ ದರ್ಭಂಗಾ ಮಹಾರಾಜರು ೧೨ ಬ ಡೆಗ್ಲನ್‌ವಿಲ್ ೧೩ ಫಜುಲ್ ಉಲ್ ಹಕ್ ೧೪ ಮೋಹನಸಿನ ೧೫ ಎ ಎಚ್ ಘಜ್ನವಿ ೧೬ ಲೆ|| ಕರ್ನಲ್ ಗಿಡ್ನಿ ೧೭ ಖಾ|| ಹಫೀಜ್ ಹಿದ್ಯತ್ ಹುಸೇನ ೧೮ ಎಂ. ಆರ್. ಜಯಕರ ೧೯ ಸರ್ ಕವಾಸ್‌ಜಿ ಜಹಾಂಗಿರ್ ೨೦ ಎಂ. ಎ ಜಿನ್ನಾ ೨೧ ಟಿ. ಎಫ್. ಗವಿನ್‌ಜೋನ್ಸ ೨೨ ಡಾ|| ಮುಂಜೆ ೨೩ ಎ. ರಾಮಸ್ವಾಮಿ ಮೊದಲಿಯಾರ್ ೨೪ ಛತ್ರಿ ನವಾಬರು ೨೫ ಮೌಲಾನಾ ಮಹಮ್ಮದಾಲಿ ೨೬ ಸರ ಮಹಮ್ಮದ ಶಾಫಿ ೨೭ ರಾಜಾ ನರೇಂದ್ರನಾಥ ೨೮ ನರೇಂದ್ರನಾಥಲಾ ೨೯ ಎ ಟಿ. ಪನ್ನಿರ್ಸೆಲ್ವಂ ೩೦ ಪಾರ್ಲಕಿಮಿಡಿ ರಾಜರು ೩೧ ಸರ್ ಎ. ಪಾಟ್ರೋ ೩೨ ದಿ|| ಬ|| ರಾಮಚಂದ್ರರಾವ್ ೩೩ ಸರದಾರ ಸಂಪೂರ್ಣಸಿಂಗ್ ೩೪ ಸರ ಸಪ್ರೂ ೩೫ ಶ್ರೀನಿವಾಸಶಾಸ್ತ್ರಿ ೩೬ ಸರ ಸೆಟಲ್ವಾಡ ೩೭ ಸರ ಸೇಟ್ನಾ ೩೮ ಶ್ರೀಮತಿ ಷಹ ನವಾಜ್ ೩೯ ರಾಜಾ ಶೇರ ಮಹಮ್ಮದಖಾನ ೪೦ ರಾ|| ಬ|| ಆರ್. ಶ್ರೀನಿವಾಸನ್ನ ೪೧ ಶ್ರೀಮತಿ ಸುಬ್ಬರಾಯನ್ನ ೪೨ ಸರ್ ಸಯ್ಯದ ಸುಲ್ತಾನ ಅಹಮದ ೪೩ ಎಸ್. ಬಿ. ತಾಂಬೆ ೪೪ ಯು. ಆಂಗ್‌ಥಿನ್ ೪೫ ಸರದಾರ

ಜ್ವಾಲಸಿಂಗ ೪೬ ವಿ. ಇ. ವುಡ್ ೪೭ ಜಫ್ರುಲ್ಲಾಖಾನ ೪೮ ಗುಲಾಂ ಮುರ್ತುಜಾಬಟ್ಟಿ ೪೯ ದಾ. ಬ್ರಶಾಂಟಿ.

(ಇನ್ನೊಬ್ಬರ ಹೆಸರು ಗೊತ್ತಿಲ್ಲ)

ವೋಟು ಕೊಟ್ಟದ್ದಕ್ಕಾಗಿ ಕತ್ತಲೆ ಕೋಣೆಯ ಶಿಕ್ಷೆ ವಿಧಿಸಿಕೊಂಡರು.

—(೦)—

ಕಾಂಗ್ರೆಸದವರಿಂದ ಮನೆ ಕಂಡರು.

—:(*):—

ರಾಣೇಬೆನ್ನೂರಲ್ಲಿ ಮ್ಯುನಿಸಿಪಾಲಿಟಿಯ ಮೆಂಬರರಾದ ರಾ. ರಾ. ಬಸಲಿಂಗಪ್ಪ ಚನ್ನವೀರಪ್ಪನವರು ವೋಟು ಕೊಡಲಿಕ್ಕೆ ಹೋದರು. ಶ್ರೀ: ಗುರುಶಾಂತಯ್ಯನವರು ಅಡ್ಡ ಮಲಗಿ, ದಾಟಿ ಹೋಗಬೇಡಿರೆಂದು ಇವರಿಗೆ ಬೇಡಿಕೊಂಡರು. ಆದರೂ ರಾ. ರಾ. ವೀರಪ್ಪನವರು ಅವರನ್ನು ಎಡವುತ್ತ, ವೋಟು ಹಾಕಲಿಕ್ಕೆ ಹೋದರು. ವೋಟು ಹಾಕಿದೆನು ಜನರು ಏನು ಮಾಡುವರೋ ಎಂಬ ಹೆದರಿಕೆಯಿಂದ ಹತ್ತರವಿದ್ದ ದವಾಖಾನೆಯಲ್ಲಿ ಹೋಗಿ, ಅಲ್ಲಿದ್ದ ಒಂದು ಕೋಣೆಯಲ್ಲಿ ಕೂತು ಬಾಗಿಲ ಹಾಕಿಕೊಂಡು ತಮಗೆ ತಾವೇ ಕತ್ತಲೆ ಕೋಣೆಯ ಶಿಕ್ಷೆ ವಿಧಿಸಿಕೊಂಡರು. ಮೂರು ತಾಸಾದರೂ ಹೊರಗೆ ಬರಲಿಲ್ಲ. ಆಗ ಕಾಂಗ್ರೆಸದವರೇ ಇವರಿಗೆ ಧೈರ್ಯ ಕೊಟ್ಟು, ಹೊರಗೆ ಕರೆತಂದು ಸುರಕ್ಷಿತದಿಂದ ಮನೆ ಮುಟ್ಟಿಸಿದರು. ಸಾಯಂಕಾಲದಲ್ಲಿ ನಾಲ್ಕು ಸಾವಿರ ಜನರ ಪ್ರಚಂಡ ಮೆರವಣಿಗೆ ಮತ್ತು ಸಭೆಯಾಗಿ ಬಹಿಷ್ಕಾರಕ್ಕೆ ಸಹಾಯ ಮಾಡಿದವರ ಮತ್ತು ವೋಟು ಹಾಕದವರ ಅಭಿನಂದನ ಮಾಡಲ್ಪಟ್ಟಿತು.

ಕಬ್ಬಿಣದ ಪಂಜರ ಮತ್ತು ಸಶಸ್ತ್ರ ಪೋಲಿಸರ ಕಾವಲಿನಲ್ಲಿ ವಿಚಾರಣೆ.

—(೦)—

ಕಲಕತ್ತೆಯ ಪೋಲಿಸ ಕಮೀಶನರರಾದ ಸರ ಟಾಗಾರ್ಟಸಾಹೇಬರ ಮೇಲೆ ಬಾಂಬು ಒಗೆದ ಆರೋಪಿ ದಿನೇಶಚಂದ್ರನ ವಿಚಾರಣೆಯು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ನಡೆದಿದೆ. ಈತನನ್ನು ಕಬ್ಬಿಣದ ಪಂಜರದಲ್ಲಿ ಕೂಡಿಸಿ, ಸುತ್ತಲು ಬಿಚ್ಚುಗತ್ತಿಯ ಪೋಲಿಸರ ಕಾವಲಿಡುವರು.

ಮೈಸೂರಿನ ದಿವಾನರು ರೌಂಡಟೇಬಲಕ್ಕಾಗಿ ಪ್ರಯಾಣ ಬೆಳೆಸಿದ್ದಾರೆ; ಯುವರಾಜರು ಸದ್ದಿಲ್ಲದೆ ಯುರೋಪದ ಹಾದೀ ಹಿಡಿದರು. ಗಾಯಕವಾಡ ಮಹಾರಾಜರಂತೆ ಇವರಿಗೂ ವಿಲಾಯ್ತಿ ಯಾತ್ರೆಯ ಹುಚ್ಚು ಹಿಡಿದಂತೆ ತೋರುತ್ತದೆ.

ಶ್ರೀ. ಮಂಗಳವೇಢೆಯವರಿಗೆ ಶಿಕ್ಷೆ

ಶ್ರೀ. ಕೌಜಲಗಿಯವರಿಗೆ ಬಿಡುಗಡೆ.

ಮೊನ್ನೆ ತಾರೀಖು ೧೫ ಸೋಮವಾರ ದಿವಸ ಬಾಗಲಕೋಟಿಯಲ್ಲಿ ಶ್ರೀ. ಮಂಗಳವೇಢೆ ಶ್ರೀನಿವಾಸರಾಯರು, ಕೌಜಲಗಿ ಹಣಮಂತರಾಯರು ಮತ್ತು ಶ್ರೀ. ಚನ್ನಪ್ಪನವರ ಮೇಲೆ ಹೊರಿಸಿದ ಆರೋಪದ ವಿಚಾರಣೆಯಾಗಿ, ಶ್ರೀ. ಶ್ರೀನಿವಾಸರಾಯರೊಬ್ಬರಿಗೇ ಆರು ತಿಂಗಳ ಸಾದಾ ಕೈದು, ೫೦ ರೂಪಾಯಿ ದಂಡವಾಯಿತು. ಉಳಿದಿಬ್ಬರು ಬಿಡುಗಡೆ ಹೊಂದಿದರು. ಶ್ರೀ. ಶ್ರೀನಿವಾಸರಾಯರಿಗೆ ಮೊದಲು ಎ ಕ್ಲಾಸ ಕೊಟ್ಟಿದ್ದರು. ಈ ಸಾರೆ ಬಿ ಕ್ಲಾಸಿಗೆ ಹಿಂಬಡತಿ ಕೊಟ್ಟರು.

ಶ್ರೀ. ಕೇಳಕರ ಆಮಂತ್ರಣ ಬೇಡೆಂದರು.

—(೦)—

ಪುಣೆಯ ಶ್ರೀ ನರಸಿಂಹ ಚಿಂತಾಮಣ ಕೇಳಕರರಿಗೆ ನೀವು ರಾವುಂಡಟೇಬಲದ ಆಮಂತ್ರಣವನ್ನು ಸ್ವೀಕರಿಸುತ್ತೀರಾ ಎಂಬದಾಗಿ ಗವರ್ನರಸಾಹೇಬರು ಮುಂದಾಗಿ ಕೇಳಿದರು. ತಮಗೆ ಆಮಂತ್ರಣ ಬೇಕಾಗಿಲ್ಲೆಂದು ಅವರು ಉತ್ತರ ಕೊಟ್ಟರೆಂದು ಪ್ರಸಿದ್ಧವಾಗಿದೆ. ಶ್ರೀ. ಕೇಳಕರರ ಕೇಸರಿ ಮರಾಠಾ ಪತ್ರಗಳಿಂದ ಸರಕಾರದವರು ಕ್ಷುದ್ರಕಾರಣಕ್ಕಾಗಿ ಸಹ ಜಾಮೀನು ತೆಕ್ಕೊಂಡಿದ್ದಾರೆ. ಒಂದು ಕಯ್ಯಲ್ಲಿ ಜೊನ್ನೆ ಮತ್ತೊಂದು ಕಯ್ಯಲ್ಲಿ ಬೆಣ್ಣೆಯಂಥ ಆಮಂತ್ರಣವನ್ನು ಯಾವ ಅಭಿಮಾನಿಯೂ ಅಂಗೀಕರಿಸಲಾರನು.

ಜರ್ಮನಿಯಲ್ಲಿ ಚುನಾವಣೆ.

—(೦)—

ಇಬ್ಬರು ಸತ್ತರು; ಅನೇಕರು ಗಾಯಪಾದರು.

—:*:—

ಜರ್ಮನರರಾಜ್ಯದ ತುಂಬ ಅಲ್ಲಿಯ ಪಾರ್ಲಮೆಂಟ ಸಭೆಯ ಚುನಾವಣೆಯಾಯಿತು. ಬೊಲ್ಶೆವಿಕ ಪಂಥದವರು ಅಲ್ಲಲ್ಲಿ ಗುಂಪುಗುಂಪಾಗಿ ನಿಂತು ಸೋಸಿಯಾಲಿಸ್ಟ ಪಕ್ಷದವರ ಮೇಲೆ ಜ್ವಾಲಾಗ್ರಾಹಿ ದ್ರಾವಕಗಳನ್ನು ಹಾಕಿ, ಅನೇಕರನ್ನು ಗಾಯಪಡಿಸಿದರು. ಇಬ್ಬರು ಸತ್ತರು;

ಇಂಗ್ಲಂಡದಲ್ಲಿ ಹೊಸ ನಮೂನಿಯ ರಾಯಫಲ ಬಂದೂಕಿನ ರಚನೆ ಮಾಡಿದ್ದಾರೆ. ಅವಶ್ಯ ಕಂಡಕೂಡಲೆ ಬಂದೂಕು ಮಶಿನಗನ್ನವಾಗಿ ಮಿನಿಟಿಗೆ ಅರಳು ಹುರಿದಂತೆ ಮೂರು ನೂರು ಗುಂಡುಗಳನ್ನು ಹಾರಿಸುವದು. ಒಂದೇಸಮನೇ ಕುದುರೆ ಬಿಕ್ಕುತ್ತಾ ನಡೆದರಾಯಿತು. ಗುಂಡು ತಾನಾಗಿ ಹಾರುತ್ತಾ ಹೋಗುವದು,

ಹೊಸಮನಿ ಪರಮಣ್ಣನವರು ಕಾಯದೆಭಂಗ ಮಾಡಿದರು.

—)(೦)(—

ಹಾವೇರಿಯಲ್ಲಿ ಶ್ರೀ. ಹೊಸಮನಿ ಪರಮಣ್ಣನವರ ಮೇಲೆ ೧೪೪ ಕಲಮಿನ ನೋಟೀಸು ತೆಗೆದರು. ಶ್ರೀ. ವಿಶ್ವನಾಥರಾವ ಹೇರ್ಲೇಕರರ ಅಧ್ಯಕ್ಷತೆಯಲ್ಲಿ ಕೂಡಿದ ೩೦೦೦ ಜನರ ಸಭೆಯಲ್ಲಿ ಶ್ರೀ. ಪರಮಣ್ಣನವರು ಕಾಯದೆಭಂಗ ಮಾಡಿ ಭಾಷಣ ಮಾಡಿದರು.

ವಿವಿಧ ವರ್ತಮಾನಗಳು.

—(೦)—

ಇಂಗ್ರೇಜ ಸರಕಾರಕ್ಕೆ ಉಪಕಾರ ಮಾಡಿದಂಥವರಿಗೆ ಗ್ರಾಮ, ಅಥವಾ ಭೂಮಿಯನ್ನು ಉಂಬಳಿಯಾಗಿ ಹಾಕಿಕೊಡುವದನ್ನು ನಿಲ್ಲಿಸಿ, ಅವರಿಗೆ ನಗದು ಧನಸಹಾಯ ಮಾಡಬೇಕೆಂದು ಗೊತ್ತುಮಾಡಿದ್ದಾರೆ. ಈ ವರ್ಷಾಶನವು ಇರುನೂರು ರೂಪಾಯಿಗಿಂತ ಹೆಚ್ಚಾಗಲಾರದು. ಇದು ಕೂಡ ವಂಶಪರಂಪರೆಯಲ್ಲ! ಎರಡನೆಯ ತಲೆಗೆ ಅರ್ಧ ಮತ್ತು ಮೂರನೆಯ ತಲೆಗೆ ಅದರರ್ಧವಾಗಿ, ನಾಲ್ಕನೆಯ ತಲೆಗೆ ನಿಂತುಹೋಗುವದು.

ಪಂಡಿತ ಮಾಲವಿಯಾ ಮತ್ತು ಶ್ರೀ. ವಿಠ್ಠಲಭಾಯಿ ಪಟೇಲರನ್ನು ದಿಲ್ಲಿಯಿಂದ ಸ್ಪೇಶಲ ಟ್ರೇನಿನಿಂದ ನೈನಿತಾಳಕ್ಕೆ ತಂದರು. ಅಲ್ಲಿ ಪಂಡಿತರೊಬ್ಬರನ್ನೇ ಇಟ್ಟರು. ಶ್ರೀ. ಪಟೇಲರನ್ನು ಮುಂಬಯಿ ಇಲಾಖೆಗೆ ತಂದು ಯರವಡೆಗೆ ತರುವದಾಗಿ ತೋರುತ್ತದೆ.

ಸರ ರವೀಂದ್ರನಾಥ ಟಾಗೋರರು ತಮ್ಮ ಕೆಲವರು ಸೇಕ್ರೆಟರಿಗಳೊಂದಿಗೆ ಸೋವಿಯಟ ರಶಿಯಾದ ರಾಜಧಾನಿಯಾದ ಮಾಸ್ಕೋಪಟ್ಟಣಕ್ಕೆ ಹೋಗಿದ್ದಾರೆ. ಅಲ್ಲೊಂದು ತಿಂಗಳಿರುವರು.

ಪುಣೆಯ ಸುಪ್ರಸಿದ್ಧ ಮುಸಲ್ಮಾನ ಗೃಹಸ್ಥರಾದ ಸರ ಜಾಫರ ಹರೂನಸಾಹೇಬರು ಪರಲೋಕವಾಸಿಯಾದರು.

ಶ್ರೀ. ಪುರುಷೋತ್ತಮದಾಸ ತ್ರಿಕಮದಾಸರನ್ನು ಬೆಳಗಾವಿಯ ಹಿಂಡಲಗಿಯ ತುರಂಗಕ್ಕೆ ತಂದಿದ್ದಾರೆ.

ಇಂದಿನ ತನಕ ಶಿರ್ಶಿ ತಾಲೂಕಿನಲ್ಲಿ ೬೩ ಜನ ಗೌಡರು ರಾಜೀನಾಮೆ ಕೊಟ್ಟಿರುತ್ತಾರೆ.

ವಿವಿಧ ವಿಷಯಗಳು

ಪಂಡಿತ ಮೋತಿಲಾಲರ ಅಳಿಯಂದಿರಾದ ಶ್ರೀ. ಆರ್. ಎಸ್. ಪಂಡಿತರ ಮೇಲೆ ರಾಜದ್ರೋಹದ ಆರೋಪ ಹೊರಿಸಿ, ಒಂದು ವರ್ಷದ ಕಠಿಣ ಕೈದು ಮತ್ತು ಐನೂರು ರೂಪಾಯಿ ದಂಡ ವಿಧಿಸಿದರು.

ವರ್ಹಾಡ ಮತ್ತು ಗುಜರಾಥದಲ್ಲಿ ಭಯಂಕರ ಮಳೆಯಾಗಿ, ಮುಂಬಯಿಯಂತೆ ಅನರ್ಥವಾಗಿದೆ. ಮಲಕಾಪೂರ ಪಟ್ಟಣವು ಅರ್ಧ ಹಾಳಾಗಿ ಹೋಯಿತು. ಜನಲಯವೂ ಆಗಿರುತ್ತದೆ.

ಗುಜರಾಥದಲ್ಲಿ ಪುನಃ ಉಪ್ಪಿನ ಕಾಯದೆ ಭಂಗ ಪ್ರಾರಂಭಿಸುವರು. ಧರಾಸಣದಲ್ಲಿ ನಾಲ್ಕು ಸಾವಿರ ಜನರು ನೂರಾರು ಮಣ ಉಪ್ಪು ತಂದು, ಸಂತೆ ಮಾಡಿ ಮಾರುವರು.

ಬಂಗಾಲಿಗಳು ಹಿಂದೂ ನಾಟಕಗಳನ್ನಾಡಲು ಅಮೇರಿಕೆಗೆ ಹೋಗುವರು. ಇವರಿಗೆ ಅಮೇರಿಕೆಯ ನಾಟ್ಯಕಲಾ ಪ್ರೇಮಿಗಳ ಆಮಂತ್ರಣವುಂಟು.

ನೋಟೀಸು

ದಾವಲಸಾಬ [illegible] ಮುಕ್ಕಾಮು ಹಾರೋಬೆಳವಡಿ [illegible] ತಾಲೂಕ ಧಾರವಾಡ ಇವರಿಗೆ-

ಈ ನೋಟೀಸಿನಿಂದ ನಿನಗೆ ತಿಳಿಸುವದೇನಂದರೆ ನೀನು ನನ್ನ ಲಗ್ನದ ಗಂಡನಿದ್ದು ನನ್ನಗೂಡ ಸುಶೀಲ ಬಾಳ್ವೆ ಮಾಡುವದಿಲ್ಲ, ಒಮ್ಮೆ ಕರಕೊಂಡು ಹೋಗಿ ಹೊಡೆದು ಬಡಿದು ಹೊರಗೆ ಹಾಕಿದಿ ಮತ್ತು ನಮ್ಮ ಜಾತಿ ರಿವಾಜು ಪ್ರಕಾರಾ ಜೆಳ್ಳಿ ಸರಿಗಿ ಕೋಳಬಂದಿ (ಭಂಗಾರ) ಬಳಿ ವಗೈರೆ ನನ್ನ ಮೈಮೇಲೆ ಹಾಕತಕ್ಕದ್ದು ಕರಾರು ಇದ್ದು ಕರಾರ ಪ್ರಕಾರ ನಡೆಯಲಿಲ್ಲ ಮತ್ತು ಕರಿಯಲಿಕ್ಕೆ ಬರಲಿಲ್ಲ ಹೀಗೆ ಆಗಿ ನಾಲ್ಕು ವರ್ಷಗಳ ಲಾಗಾಯಿತ ನಿಮ್ಮ ಹಾದಿ ನೋಡಿದೆ ಸದರ ನಾಲ್ಕು ವರ್ಷಗಳ ತನಕಾ ನನ್ನ ಹೊಟ್ಟೆ ಮತ್ತು ಅರಿವೆ ಖರ್ಚು ೧೫೦ ರೂಪಾಯಿ ಆಗಿರುತ್ತದೆ. ಸದರಿ ರೂಪಾಯಿ ಎರಡನೇದವರ ಕಡಿಗೆ ಸಾಲಾ ಮಾಡಿರುತ್ತೇನೆ ಈ ರೂಪಾಯಿ ಕೊಟ್ಟು ಮೇಲೆ ಬರೆದ ಬಾಗೀನೆ ಇಟ್ಟು ಕರಕೊಂಡು ಹೋಗಬೇಕು ಜರ ನೀವು ಇದಕ್ಕೆ ತಪ್ಪಿದರೆ ಈ ನೋಟೀಸವೇ ಸೋಡಚೀಟಿ ಅಂತಾ ತಿಳಿಯತಕ್ಕದ್ದು ಇದಕ್ಕೆ ಏಳು ದಿವಸದೊಳಗಾಗಿ ಪರತ ಉತ್ತರ ತಿಳಿಸತಕ್ಕದ್ದು ತಿಳಿಯುವದು ತಾ॥ ೯-೯-೧೯೩೦

ಈ ಯಂಗೈ ಹೆಬ್ಬೆಟ್ಟಿನ ಗುರ್ತು. ರಾಜವ್ವಾ ಕೋಂ ದಾವಲಸಾಬ ಖಾಜೇನವರ ಇಕಿ ಕೈದು

ಇದೋ ನೋಡಿ!   ಕಾರಖಾನೆದಾರರೇ!!   ತ್ವರೆಮಾಡಿ!!!

ಕರ್ನಾಟಕದಲ್ಲಿಯೇ ಮೊದಲನೆಯದು!

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ೧೯೩೦

ಧಾರವಾಡ

ಕರ್ನಾಟಕ ಕಾರಖಾನೆದಾರರಿಗೆ ಅಲಭ್ಯ ಲಾಭ-

ಬರುವ ಮಹಾನವಮಿಯ ನಾಡಹಬ್ಬದಲ್ಲಿ ಇಲ್ಲಿಯ 'ದಿ ಕರ್ನಾಟಕ ಸ್ವದೇಶಿ ಬ್ಯೂರೊ' ದವರು ಸ್ವದೇಶಿ ವಸ್ತುಗಳ ಪ್ರದರ್ಶನವೊಂದನ್ನು ಮಂಡಿಸಲಿರುವರು. ನಾಡಿನಲ್ಲೀಗ ನಡೆದಿರುವ ರಾಜಕೀಯ ಚಳವಳಿಯದೊಂದು ಅಂಗವಾದ ಸ್ವದೇಶಿ ವಸ್ತು ಪ್ರಚಾರ ಕಾರ್ಯಕ್ಕೆ ಸೌಕರ್ಯವನ್ನುಂಟುಮಾಡಲು ಈ ಪ್ರದರ್ಶನವು ಸುಂದರವಾದ ರಾಜಮಾರ್ಗ. ಇಲ್ಲಿ ಸ್ವದೇಶಿ ವಸ್ತುಗಳನ್ನು ತಯಾರಿಸುವ ಕಾರಖಾನೆದಾರರು ವಿಶೇಷವಾಗಿ

ಕರ್ನಾಟಕದ ಕಾರಖಾನೇದಾರರು

ಈ ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನು ಪ್ರದರ್ಶಿಸಬೇಕು. ಮತ್ತು ಶಕ್ಯವಿದ್ದಲ್ಲಿ ಸ್ವತಃ ಬಂದು ನೋಡಬೇಕು. ಪ್ರದರ್ಶನವು,

ಸಪ್ಟಂಬರ ೨೯ರಿಂದ ಅಕ್ಟೋಬರ ೬ರ ವರೆಗೆ ನೆರವೇರಿಸಲ್ಪಡುವದು. ಈ ಬಗ್ಗೆ ಹೆಚ್ಚಿಗೆ ತಿಳಿಯಬಯಸುವವರು ಕಾರ್ಯದರ್ಶಿಗಳು 'ದಿ ಕರ್ನಾಟಕ ಸ್ವದೇಶಿ ಬ್ಯೂರೊ' ಧಾರವಾಡ ಇವರನ್ನು ವಿಚಾರಿಸಬೇಕು.

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹಿಡ್ಡಿ ವ ತಿಸು ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಬಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

[illegible]

[illegible] ಪ್ರತಿದಿವಸ [illegible] ಲಭ್ಯವಾಗಿದೆ.

[illegible]
[illegible]
[illegible]
[illegible] ಗಲ್ಲಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಗುರುವಾರ ತಾರೀಖು ೧೮ನೇ ಸಪ್ಟಂಬರ ೧೯೩೦ (ಸಂಚಿಕೆ ೨೦೭

ನಗರಸಂಕೀರ್ತನೆಯ ಪದಗಳು

(ಎರಡನೆಯ ಭಾಗ)

ನಾನಾರಸಗಳಿಂದಲೂ ವಿವಿಧ ವಿಷಯಗಳಿಂದಲೂ ಹಲವು ರಾಗಗಳಿಂದಲೂ

ಶ್ರುತಿ ಮನೋಹರವೂ ನಯನಮನೋಹರವೂ

ಆದ ಈ ಭಾಗವು ಅಚ್ಚಿನಲ್ಲಿದೆ

ಧಾರವಾಡ ನಾಡಹಬ್ಬದ ಕವಿಸಮ್ಮೇಲನದ ಕಾಲಕ್ಕೆ

ಇದೇ ಸಪ್ಟಂಬರ ೨೮ಕ್ಕೆ ಹೊರಡುವದು

ಇದರಲ್ಲಿ

ಸ್ವಾತಂತ್ರ್ಯಸಂಗ್ರಾಮದ ಉತ್ಸಾಹದ ಪದಗಳೂ ಚಿಕ್ಕಮಕ್ಕಳಿಗಾಗಿ ಇಂಪಾದ

ಹಾಡುಗಳೂ ಗಾಂಧಿಯನ್ನೂ ರಾಟಿ-ಖಾದಿಗಳನ್ನೂ ವರ್ಣಿಸುವ ಪದ್ಯಗಳೂ ಸೇರಿ

೨೦—೨೫ ಹಾಡುಗಳಿವೆ.

ಮೊದಲನೆಯ ಭಾಗಕ್ಕೆ ದೊರೆತ ಜನತೆಯ ಬೆಂಬಲವನ್ನು ನಂಬಿ

ಈ ಭಾಗಕ್ಕಾದರೂ ಬೆಲೆ ತೀರ ಕಡಿಮೆ

ಎರಡೇ ಆಣೆ

ನಮಗೆ-ನಮಗೆಂದು ಗಿರಾಕಿಗಳು ಮುಗಿಬಿದ್ದ ಈ ಸಮಯದಲ್ಲಿಯೇ.

ನೀವೂ ಒಂದನ್ನು ತೆಗೆದುಕೊಳ್ಳಿರಿ!

೧) ಕನ್ನಡಿಗರ ಕೂಟ ಧಾರವಾಡ

೨) ಗೋ. ಉ. ಮಂಗಳೂರ

.ಶಾಂತೇಶ ವಾಚನಾಲಯ ಧಾರವಾಡ.

ದಿ ಧಾರವಾಡ ಅರ್ಬನ್ ಕೋ| ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ| ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಪ್ರಥಮ ಸ್ಥಾನ.

ಬಂಡವಲು ಒಂದು ಲಕ್ಷದ ಮೇಲಿದೆ. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಠೇವು ಮತ್ತು ಸೇವಿಂಗ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಸ್ತ್ಯರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪಕ್ಕಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಜಿ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ಭಾದ್ರಪದ ವದ್ಯ ೧೧

ರಾ. ಬ. ಕಂಬಳಿಯವರು ಮಂತ್ರಿಯಾಗುವರೇ ?

ಮುಂಬಯಿ ಇಲಾಖೆಯ ಕೌನ್ಸಿಲ ಚುನಾವಣೆಯಲ್ಲಿ ಯಾರಾರು ಆರಿಸಿ ಬಂದರೆಂಬದು ಗೊತ್ತಾಗುವ ಮೊದಲು- ಯಾರಾರು ಆರಿಸಿ ಬಂದಂತಾಯಿತೆಂಬದಷ್ಟು ಧೋರಣಕಟ್ಟಿ, ಅವರಲ್ಲಿ ಯಾರು ಮಂತ್ರಿಯಾಗುವರೆಂಬ ಚರ್ಚೆಯನ್ನು ಈಗಿನಿಂದಲೇ ಇಂಗ್ಲಿಷ ಪತ್ರಗಳು ನಡೆಸಿವೆ. ಮಂತ್ರಿಯಾಗತಕ್ಕವರು ಜನರಿಂದಲೇ ಆರಿಸಲ್ಪಟ್ಟವರಾಗಿರಬೇಕು. ಆದರೆ ಆಳರಸರು ಇವರು ಜನರ ವಿಶ್ವಾಸಕ್ಕೆಷ್ಟು ಪಾತ್ರರಾಗಿದ್ದಾರೆ· ಅವರಿಗೆ ಎಲ್ಲೆಲ್ಲಿ ಹೇಗೆ ಪೂಜೆ ನಡೆಯುತೆಂಬದನ್ನು ವಿಚಾರಮಾಡದೆ, ತಮಗೆ ಅವರು ನಂಬಿಗಸ್ಥರಾಗಿದ್ದಾರೆಂಬ ಮಾತ್ರದಿಂದ ಅವರಿಗೆ ಮಂತ್ರಿಪದ ಕೊಡುವರು. ಸರ ವಸಂತರಾಯರು ಯಾವಾಗಲು ಸರಕಾರದ ನಿಶಾನೆ ಹಿಡಿಯುತಕ್ಕವರು. ಅವರಿಗೆ ಮಂತ್ರಿಪದ ಕೊಡಬೇಕಾಗಿದೆ. ಆದ್ದರಿಂದ ಅವರು ನಾಮಿನೇಶನದ ಬದಲಾಗಿ ಇಲೆಕ್ಸನದ ಗೊಂದಲದಲ್ಲಿ ಬಿದ್ದಿದ್ದಾರೆ. ಆಳಿದ ಊರೊಳಗೆ ಉಳಿದವನೇ ಗೌಡರಾಗಿರುವದರಿಂದ, ಇವರು ಆರಿಸಿ ಬರುವರು. ಇವರ ತರುವಾಯ ಈಗೊಬ್ಬ ಮಂತ್ರಿಯಾದ ದಿವಾನ ಬಹಾದ್ದೂರ ಹರಿಲಾಲ ದೇಸಾಯಿಯವರು ಗುಜರಾಥದಲ್ಲಿ ಅಸಹ್ಯವಾಗಿ ನಡೆದ ಅತ್ಯಾಚಾರಗಳಿಗೆ ಬೇಸತ್ತು, ಕೌನ್ಸಿಲವೂ ಬೇಡ; ದಿವಾನಗಿರಿಯೂ ಬೇಡೆಂದು ಚುನಾವಣೆಗೇ ನಿಲ್ಲಲಿಲ್ಲ. ಆದ್ದರಿಂದ ಇವರ ಬದಲಾಗಿ ಸರ ವಸಂತರಾಯರು ದಿವಾನರಾಗುವದಾಯಿತು. ಪ್ರಸ್ತುತದಲ್ಲಿ ವಿದ್ಯಾಖಾತೆಯ ಮಂತ್ರಿಯಾಗಿರುವ ಮೌಲ್ವಿ ರಫಿಯುದ್ದೀನಸಾಹೇಬರು ಒಮ್ಮೆ ನುಂಗಿದ ಮಾಣಿಕವನ್ನು ಉಗುಳಲಿಕ್ಕೆ ಸಿದ್ಧರಿಲ್ಲ. ಹೀಗೆ ಇವರೂ ದಿವಾನರಾಗುವರು. ದಿವಾನ ಜಾಧವರಾಯರು ಮೂರನೆಯವರು. ಇವರು ಅಸೆಂಬ್ಲಿಗೆ ಹೋದದ್ದರಿಂದ ಇವರ ಸ್ಥಳವು ರಾ. ಬ. ಕಂಬಳಿಯವರಿಗೆ ದೊರೆಯುವದೆಂಬೂ ದೊರೆಯಬೇಕೆಂದೂ ಹೇಳಿಕೆಯಾಗಿದೆ. ದಿವಾನ ಜಾಧವರಾಯರಿಗೂ, ಹಿಂದೊಮ್ಮೆ ರಾ. ಬ. ಕಂಬಳಿಯವರಿಗೂ ಇದೇ ಅಧಿಕಾರದ ದೆಸೆಯಿಂದ ಹೋರಾಟ ನಡೆದಿತ್ತು. ಪರಸ್ಪರ ಮನಸ್ತಾಪವೂ ಆಗಿತ್ತು. ಸದ್ಯ ಮಿ. ಜಾಧವರಾಯರು ಅಸೆಂಬ್ಲಿಗೆ ಹೋದದ್ದು, ರಾ. ಬ. ಕಂಬಳಿಯವರಿಗೆ ನಿರಾತಂಕ ದಾರಿಯಾಗಿರುತ್ತದೆ.

ಮುಂಬಯಿಯ ಟಾಯಿಮ್ಸ ಪತ್ರವು ಇಷ್ಟು ಹೇಳಿದ್ದರೆ- ಸಾಕಾಗಿತ್ತು. ರಾ. ಬ. ರವರೊಬ್ಬರೇ ಚಲುವರಲ್ಲ. ಅವರಿಗೆ ಬೆಳಗಾವಿಯ ಶ್ರೀ ಚಿಕ್ಕೋಡಿ ಪಂಡಿತಪ್ಪನವರೂ, ಮುಂಬಯಿಯ ಮಿ. ಆಸವಳೆಯವರೂ ಪ್ರತಿಸ್ಪರ್ಧಿಯಾಗಿದ್ದಾರೆಂದು ಹೇಳುತ್ತದೆ. ರಾ. ಬ. ಕಂಬಳಿಯವರು ಕೌನ್ಸಿಲದ ಡಿಪುಟಿ ಪ್ರೆಸಿಡೆಂಟರಾಗಿರುವದರಿಂದ, ಅವರ ಪಕ್ಷ ಹೆಚ್ಚಿನದಿರುವದು. ಆದರೆ ಅವರಿಗೆ ರಾವುಂಡ ಟೇಬಲಕ್ಕೆ ಆಮಂತ್ರಣ ಬಂದದ್ದರಿಂದ, ಸರಕಾರವು ಒಂದು ಉಪಕಾರ ಮಾಡಿತು. ಉಳಿದಿಬ್ಬರಲ್ಲಿ ಯಾರಿಗಾದರೂ ದಿವಾನಗಿರಿ ಕೊಡಬೇಕೆಂದೂ ಕೆಲವರ ಮತವುಂಟು.

ದಿವಾನರ ಮೂರು ಸ್ಥಳಗಳುಂಟು. ಕಾಯದೆಭಂಗದ ದೆಸೆಯಿಂದ ಸರಕಾರದ ಆದಾಯ ಕಡಿಮೆಯಾದ್ದರಿಂದ, ಎರಡೇ ಸ್ಥಳಗಳನ್ನು ಮಾಡಬೇಕೆಂಬ ವಿಚಾರ ನಡೆದಿದೆ. ದಿವಾನರಿಗೆ ತಿಂಗಳಿಗೆ ನಾಲ್ಕು ಸಾವಿರದ ಸಂಬಳವುಂಟು. ಈ ಸಂಬಳವನ್ನು ಒಂದೇ ಸಾವಿರ ಮಾಡಿ, ಮೊದಲಿನಂತೆ ಮೂವರನ್ನು ಇಡಬೇಕೆಂದೂ ಅನ್ನುತ್ತಾರೆ. ಯಾವದೊಂದು ನವ್ಹಂಬರ ತಿಂಗಳ ಮೊದಲನೆಯ ವಾರದಲ್ಲಿ ಪ್ರಸಿದ್ಧವಾಗುವದು.

ಪೋಲೀಸರ ಗುಂಡಿನಿಂದ ಕಾಂಗ್ರೆಸದ ಉಪಾಧ್ಯಕ್ಷನ ಕಾಲು ಕತ್ತರಿಸಲ್ಪಟ್ಟಿತು.

——(o)——

ಫೌಜದಾರನು ಹೊಡಿಸಿಕೊಂಡು ಸತ್ತನು.

—:(*):—

ವಿರಮಗಾಮದ ಹತ್ತರಿರುವ ಗುಲೋಥಿ ಎಂಬ ಗ್ರಾಮದಲ್ಲಿ ಕೂಡಿದ ಸಭೆಯನ್ನು ಪೋಲೀಸರು ಚದರಿಸಿದರು. ಪುನಃ ಜನರು ಕೂಡಿದರು. ಆಗಾದ ದಂಗೆಯಲ್ಲಿ ಸಬ್ ಇನ್ಸಪೇಕ್ಟರನು ಸತ್ತನು. ಪೋಲೀಸರು ಹಾಕಿದ ಗುಂಡುಗಳಲ್ಲಿ ಒಂದು ಗುಂಡು ಕಾಂಗ್ರೆಸದ ಉಪಾಧ್ಯಕ್ಷನ ಕಾಲಿಗೆ ಬಡಿಯಿತು. ಆಸ್ಪತ್ರೆಯಲ್ಲಿ ಡಾಕ್ಟರರು ಈ ಕಾಲನ್ನೇ ಕೊಯ್ದು ಬೇರೆ ಮಾಡಿದರು.

ಮುಂಬಯಿಯ ಕನ್ನಡಿಗರ ಕಾಂಗ್ರೆಸದ ಅಭಿಮಾನವು.

ಮುಂಬಯಿಯಲ್ಲಿ ವಾಸವಾಗಿರುವ ಕನ್ನಡಿಗರ ಸಂಖ್ಯೆಯು ಕನಿಷ್ಠ ೨೫ ಸಾವಿರವುಂಟು. ಇವರು ಕಾಂಗ್ರೆಸ ಭಕ್ತರಿದ್ದಾರೆ ಮುಂಬಯಿಯಲ್ಲಿ ನಡೆಯುವ ಕಾಂಗ್ರೆಸದ ಪ್ರತಿಯೊಂದು ಚಟುವಟಿಕೆಯಲ್ಲಿ ಭಾಗ ತಕ್ಕೊಳ್ಳುವರು.

ಹೋದ ವಾರದಲ್ಲಿ ಇವರೊಂದು ಸ್ಪೇಶಲ ಸಭೆ ಕರೆದಿದ್ದರು. ಇಂಗ್ರೇಜಿ ಸರಕಾರದ ರಾವುಂಡ ಟೇಬಲಕ್ಕೆ ಬಹಿಷ್ಕಾರ ಹಾಕುವದೂ, ಸ್ವರ್ಗವಾಸಿ ಸರ ಚಂದಾವರಕರರ ಚಿರಂಜೀವರಾದ ಮಿ. ವ್ಹಿ. ಎನ್. ಚಂದಾವರಕರರು ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚುವದರ ವಿರುದ್ಧವಾಗಿ ಮತ ಕೊಟ್ಟ ಬಗ್ಗೆ ಅವರ ಕೃತ್ಯ ನಿಷೇಧಿಸುವದೂ ಸಭೆಯ ಮುಖ್ಯ ಉದ್ದೇಶವಾಗಿತ್ತು. ಆ ಪ್ರಕಾರ ಈ ಎರಡೂ ಠರಾವುಗಳು ಸರ್ವಾನುಮತದಿಂದ ಪಾಸಾದವು.

ಈ ಸಭೆಯಲ್ಲಿ ಶ್ರೀ. ರಾವರವರು ಒಂದು ಮಹತ್ವದ ವಿಚಾರ ಹೇಳಿದರು. ಉಮೇದವಾರರು ಹೋಟು ಬೇಕಾದಾಗ, ಪಾನ ಸುಪಾರಿ ತೊರೆದು, ಬಂದ ಮನೆ, ಬಿಡದ ಮನೆಗೆ ಹೋಗಿ ಹೋಟಿನ ಭಿಕ್ಷೆ ಬೇಡುವರು. ಆದರೆ- ಯಾವದೊಂದು ಮಹತ್ವದ ವಿಷಯದಲ್ಲಿ ತಾವೇ ದೊಡ್ಡ ಜಾಣರೆಂದು ತಮಗೆ ತೋರಿದಂತೆ ನಡೆಯುವರು. ಮಿ. ಚಂದಾವರಕರರು ಕನ್ನಡಿಗರ ಹೋಟುಗಳಿಂದ ಮೆಂಬರರಾಗಿದ್ದಾರೆ ಇವರು ಈ ಉಪಕಾರ ಮರೆತು, ಕನ್ನಡಿಗರು ಕಾಂಗ್ರೆಸದ ಅಭಿಮಾನಿಗಳಿರುತ್ತಾರೆಂಬದನ್ನು ತುಚ್ಛಮಾಡಿ, ರಾಷ್ಟ್ರೀಯ ನಿಶಾನೆಯ ವಿರುದ್ಧ ಮತ ಕೊಟ್ಟಿದ್ದಾರೆ. ಮುಂದಿನ ಚುನಾವಣೆಯಲ್ಲಿ ಇವರಿಗೆ ಹೋಟೇ ಕೊಡತಕ್ಕದ್ದಲ್ಲ.

ಶ್ರೀಯುತ ರಾವರು ಆಡಿದ ಮಾತು, ಮಾಡಿದ ಸೂಚನೆಯನ್ನು ಕರ್ನಾಟಕಸ್ಥರೆಲ್ಲರೂ ಮನದಟ್ಟು ಮಾಡಿಕೊಳ್ಳುವಂತಿದೆ. ಧಾರವಾಡದ ಡಿಸ್ಟ್ರಿಕ್ಟ ಲೋಕಲಬೋರ್ಡಿನ ದುರವಸ್ಥೆ ನೋಡಿರಿ. ಅದರ ಮೇಲೆ ರಾಷ್ಟ್ರೀಯ ನಿಶಾನೆ ಏರಿಸುವಂತೆ, ಯಾವದೂ ಠರಾವು ತರುವಂತಿಲ್ಲ. ಏಕೆಂದರೆ ಅಲ್ಲಿ ಕಾಂಗ್ರೆಸ ವಿರೋಧಿಗಳಾದಂಥ ಜನ ಕಾರ್ಯಕರ್ತರದೇ ಬಹುಮತವುಂಟು. ಧಾರವಾಡ ಜಿಲ್ಲೆಯು ಕಾಂಗ್ರೆಸದ ಅನುಯಾಯಿಯಾಗಿರುತ್ತದೆಂದು ಈಗ ಡಂಗುರಸಾರಿದಂತಾಯಿತು. ಈನಂತರ ಆಗುವ ಚುನಾವಣೆಯಲ್ಲಿ ಕಾಂಗ್ರೆಸದಂತೆ ನಡೆಯುತ್ತೇವೆಂದು ಪ್ರತಿಜ್ಞಾ ಪತ್ರದ ಮೇಲೆ ಸಹೀ ಮಾಡಿದವರಿಗೇ ಹೋಟು ಕೊಡುವದಾದರೆ. ತಾಲೂಕ ಮತ್ತು ಜಿಲ್ಲಾ ಬೋರ್ಡು ಕಾಂಗ್ರೆಸಕ್ಕೆ ಅಧೀನವಾಗಿ,

ಸ್ಥೆಯು ಹಿತವಾಗುವಂಥ ಹಲವು ಉಪಯುಕ್ತ ಕೆಲಸಗಳನ್ನು ಮಾಡಲಿಕ್ಕಾಗುವದು.

———

“ಅಯ್ಯಾ ನಿಮಗೆ ಕಂಬಳಿ ಬೇಕೋ ಕಾಂಗ್ರೆಸ ಬೇಕೋ?

⁂

ಬೆನಕನಕೊಂಡದವರು ಕ್ಷಮೆ ಬೇಡಿಕೊಂಡು, ಕಾಂಗ್ರೆಸ ದೀಕ್ಷೆ ತಕ್ಕೊಂಡರು.

—(೦)—

ರಾಣೇಬೆನ್ನೂರ ತಾಲೂಕಿನಲ್ಲಿ ಉಕ್ಕುಂದವೆಂಬದೊಂದು ಪೋಲಿಂಗ ಸ್ಟೇಶನವು. ಹಲಗೇರಿ ಮೊದಲಾದ ಸುತ್ತು ಮುತ್ತಲಿನ ಗ್ರಾಮಗಳ ಜನರು ಅಲ್ಲಿಯ ಪೋಲಿಂಗದ ಸೋಜಿಗ ನೋಡಲಿಕ್ಕೆ ಹೋದರು: ಉಕ್ಕುಂದ ಹಲಗೇರಿಯವರೊಂದೂ ವೋಟು ಹಾಕಲಿಲ್ಲ: ಬೆನಕನಕೊಂಡದವರು ಮಾತ್ರ ಕಾಂಗ್ರೆಸದ ಆಜ್ಞೆಯನ್ನು ಧಿಕ್ಕರಿಸಿ ಬೇಕೆಂದು ಹಟದಿಂದ ವೋಟು ಹಾಕಿದರು. ವೋಟು ಹಾಕುವಾಗ ಎಜ್ಜಾ, ಅಯ್ಯಾ ನಿಮಗೆ ಕಂಬಳಿ ಬೇಕೇ? ಕಾಂಗ್ರೆಸ ಬೇಕೇ? ಎಂದು ರಾಣೇಬೆನ್ನೂರಿನವರಂತೆ ಇಲ್ಲಿಯೂ ಕೂಗುತ್ತಿದ್ದರು. ಕೆಲವು ದೊಡ್ಡ ಮನುಷ್ಯರು ಇವರ ಕಾಲಿಗೆ ಬಿದ್ದು ಬೇಕಾದಷ್ಟು ಹೇಳಿಕೊಂಡರೂ, ವೋಟು ಹಾಕಿದರು. ಹೊರಗೆ ಬಂದ ಕೂಡಲೆ ಇವರಿಗೆ ಮಯ್ಯು ಕಾಮದಹನದ ದಿವಸ ಆಗುವಂಥ ಬಣ್ಣದ್ದಾಯಿತು. ಇಷ್ಟರಿಂದಲೇ ಇವರು ಪಾರಾಗಲಿಲ್ಲ. ಬೆನಕನಕೊಂಡದವರಿಗೆ ಸಾರ್ವಜನಿಕ ಬಹಿಷ್ಕಾರ ಹಾಕಿ, ಅವರನ್ನು ಸೂತಕಿಗಳೆಂತ ತಿಳಿಯಬೇಕೆಂದು ಎಲ್ಲಾ ಗ್ರಾಮದವರು ನಿರ್ಣಯಿಸಿದರು. ಅದರ ಪ್ರತ್ಯಕ್ಷ ಅನುಭವವು ಮರುದಿವಸವೇ ಬಂತು. ಅಂದು ಹಲಗೇರಿಯ ಸಂತೆ. ಅಲ್ಲಿಯವರು ಎಳೆದೆಲಿ, ಮೆಣಶಿನಕಾಯಿ, ಬೆಣ್ಣೆ ಮುಂತಾದ ಪದಾರ್ಥಗಳನ್ನು ಮಾರಾಟಕ್ಕಾಗಿ ತಂದರು. ಇವರಲ್ಲಿ ಯಾರೂ ಕೊಳ್ಳಬಾರದು; ಇವರಿಗೆ ಬೇಕಾದ ಪದಾರ್ಥಗಳನ್ನು ಯಾರೂ ಕೊಡಬಾರದೆಂದು ಸ್ವಯಂಸೇವಕರು ಊರ ತುಂಬ ಸಾರಿದರು. ಪ್ರಬಲವಾಗಿ ಬಿದ್ದ ಬಹಿಷ್ಕಾರದ ವರ್ತಮಾನವನ್ನು ಆ ಊರ ಮುಖಂಡರು ಕೇಳಿ, ಹಲಗೇರಿಗೆ ಬಂದು, ವೋಟು ಹಾಕಿದ್ದು ತಪ್ಪಾಯಿತೆಂದು ಹೇಳಿಕೊಂಡು ಇನ್ನೊಂದು ರೂಪಾಯಿ ದಂಡ ಕೊಟ್ಟು ಮುಂದೆ ಹೇಳಿದ ಶರ್ತುಗಳಿಗೆ ಒಪ್ಪಿದಂತೆ ಮಹಾತ್ಮರ ಫೋಟೋದ ಕೆಳಗೆ ನಿಂತು ಪ್ರತಿಜ್ಞೆ ಮಾಡಿದರು.

೧ ಸತ್ಯಾಗ್ರಹದ ಚಳವಳಿಯ ವಿರುದ್ಧ ಹೋಗುವದಿಲ್ಲ.

೨ ಖಾದಿಯ ಪ್ರ[illegible] ಮಾಡುವೆವು.

೩ ಸೆರೆ ಸೇಂದಿ ಉಪಯೋಗಿಸುವವರಿಗೆ ಬಹಿಷ್ಕಾರ ಹಾಕುವೆವು.

ಈ ಪ್ರಕಾರ ಇವರು ಭಾಷೆ ಕೊಟ್ಟನಂತರ ಅವರ ಬಹಿಷ್ಕಾರ ಹೋಗಿ ವ್ಯಾಪಾರ ನಡೆಯಿತು.

———

ಹೊಸರಿತ್ತಿಯಲ್ಲಿ ಬಹಿಷ್ಕಾರದ ಕತ್ತೆಗಳ ಮೆರವಣಿಗೆ.

—)(೦)(—

ಚುನಾವಣೆಯ ದಿವಸ ಪೋಲಿಂಗ ಆಫೀಸರ ಮತ್ತು ಪೋಲಿಸರಿಗೆ ಮೂರು ಒಪ್ಪತ್ತು ಹಾಲು, ಮೊಸರು ಕಟ್ಟಿಗೆ ಮುಂತಾದ ಯಾವ ಪದಾರ್ಥಗಳೂ ಸಿಗದೆ, ಅವರಿಗೆ ಉಪವಾಸ ಕೂಡಬೇಕಾಯಿತು. ಸರಕಾರದವರು ಕಛೇರಿ-ಶಾಲೆಗಳಿಗೆ ಸೂಟೀ ಬಿಟ್ಟಂತೆ, ಉದ್ಯೋಗಸ್ಥರೂ ತಮ್ಮ ಉದ್ಯೋಗಗಳನ್ನು ಬಿಟ್ಟು, ವಿಶ್ರಾಂತಿ ತಕ್ಕೊಂಡರು. ಒಂಭತ್ತು ಹೊಡೆಯುವಾಗ ಪೋಲಿಂಗ ಹೇಗೆ ನಡೆದಿದೆಂಬದನ್ನು ನೋಡಲು ಮಾಮಲೇದಾರರು ಬಂದರು. ಕೂಡಿದ ಜನರ ಕೂಡ ಮಾತಾಡಬೇಕೆಂದರು. ಆದರೆ ಒಬ್ಬರೂ ಮಾತಾಡಲಿಲ್ಲ. ಮಾತಾಡಿಸಿದರೂ, ಮಾತಾಡುವವರು ಸಿಗಲಿಲ್ಲ. ಕೊನೆಯಲ್ಲಿ ಕರೇ ನಿಶಾನೆಗಳ ಬಹುಮಾನ ಹೊಂದಿದರು. ನೊಣ ಕೂಡ ಪೋಲಿಂಗದ ಕಡೆಗೆ ಹಾಯಲಿಲ್ಲ. ಪೋಲಿಸರೂ, ಪೋಲಿಂಗ ಆಫೀಸರರೂ ನಿದ್ರಾಸುರನ ಆಖ್ಯಾನವನ್ನು ಮೊದಲಿನಿಂದ ಅಂಕಸಡದೆ ಬೀಳುವತನಕ ಪೂರಾ ನೋಡಿದರು. ಕೊರಡೂರಿನವರು ಸರಕಾರಕ್ಕೆ ಸಹಾಯ ಮಾಡುವ ವಚನ ಕೊಟ್ಟಿದ್ದರೂ, ವೋಟು ಹಾಕಲಿಕ್ಕೆ ಬರಲಿಲ್ಲ. ಕೊನೆಯಲ್ಲಿ ಗ್ರಾಮಸ್ಥರು ವೋಟು ಹಾಕಿ, ನಾವು ಸರಕಾರದ ಭೃತ್ಯರೆಂಬದನ್ನು ತೋರಿಸಿಕೊಂಡರು. ಪೋಲಿಂಗ ಮುಗಿದ ಬಳಿಕ ನೋಡುವಾಗ ೪೩೦ ವೋಟುಗಳಲ್ಲಿ ನಾಲ್ಕೇ ಮತಗಳು ಬಿದ್ದಂತೆ ಕಂಡು ಬಂದಿತು. ಮುಸಲಮಾನರ ಪೆಟ್ಟಿಗೆಯಲ್ಲಿ ಇಲೀ ಓಡಾಡಿದವು. ಸಾಯಂಕಾಲದಲ್ಲಿ ಬಹಿಷ್ಕಾರದ ಗೊಂಬೆಗಳನ್ನು ಮಾಡಿ, ಅವಕ್ಕೆ ಪರದೇಶೀ ಅರಿವೆಗಳನ್ನು ತೊಡಿಸಿ, ಕತ್ತೆಗಳ ಮೇಲೆ ಮೆರೆಯಿಸಿ, ಕೊನೆಯಲ್ಲಿ ಸುಟ್ಟು ಹಾಕಿದರು. ಶಾಂತತೆಯು ಅಭೂತಪೂರ್ವವಾಗಿತ್ತು. ವೋಟುಕೊಟ್ಟವರು ಪಶ್ಚಾತ್ತಾಪ ಪಟ್ಟು ಕಾಂಗ್ರೆಸದ ಅಧ್ಯಕ್ಷರಿಗೆ ಕ್ಷಮಾಪತ್ರ ಬರಕೊಟ್ಟರು.

———

ಮದ್ರಾಸದ ಚುನಾವಣೆಯಲ್ಲಿ ಇಬ್ಬರು ಮಂತ್ರಿಗಳಿಗೆ ಪರಾಜಯ.

—೦*೦—

ಕೌನ್ಸಿಲ ಚುನಾವಣೆಯಲ್ಲಿ ಈಗಿನ ಮೂವರು ಮಂತ್ರಿಗಳಲ್ಲಿ ಶ್ರೀ. ಸುಬ್ಬರಾಯನ್ನರು ಆರಿಸಲ್ಪಟ್ಟರು. ಉಳಿದಿಬ್ಬರಾದ ಮೆಸರ್ಸ ಸೇತುರತ್ನಮ್ ಅಯ್ಯರ ಮತ್ತು ಮುತ್ತಯ್ಯಾ ಮೊದ್ಲಿಯಾರ ಇವರು ಅಪಯಶ ಹೊಂದಿದರು.

ಗುಳೇದಗುಡ್ಡದಲ್ಲಿ ವಿಲಾಯತಿಯ ಸಕ್ಕರೆಗೆ ಬಹಿಷ್ಕಾರ.

—(೦)—

ನಾಯಸಿಂಗಪ್ಪನಂತೆ ಸಕ್ಕರೆಯ [illegible]

——(೦)——

ವಿಲಾಯತಿಯ ಸಕ್ಕರೆಗೆ ಬಹಿಷ್ಕಾರ ಹಾಕಬೇಕೆಂದು ಕಾಂಗ್ರೆಸದ ಆಜ್ಞೆ ಇರುವದಿಲ್ಲ. ಆದರೂ ಅನೇಕ ಜನರು ಧರ್ಮದ ದೆಸೆಯಿಂದ ಅದನ್ನು ಅಸ್ಪೃಶ್ಯ ಮಾಡುತ್ತಿದ್ದಾರೆ. ಹೋದ ಸೋಮವಾರ ದಿವಸ ಅಲ್ಲಿ ಶ್ರೀ ಸ್ವಾ|| [illegible]ಬಾಯಿಯವರ ಉಪನ್ಯಾಸವಾಯಿತು.

ದುಂಡು ಮೇಜಿನ ಸಭೆಗೆ ರಾ. ಬ. ಕಂಬಳಿಯವರಿಗೆ ಹೋಗಬೇಡಿರೆಂದು ವಿನಂತಿ ಮಾಡಿಕೊಳ್ಳಬೇಕೆಂಬ ಠರಾವು ಪಾಸಾಯಿತು. ಸಭೆಯಲ್ಲಿ ಶ್ರೀ. ನೀರಲಕೇರಿ ಶ್ರೀನಿವಾಸರಾಯರ ಭಾಷಣವಾಯಿತು. ಸಭೆ ಮುಗಿದ ಬಳಿಕ, ಶ್ರೀ. ವೀರಭದ್ರಪ್ಪಾ ಕದಾಮಪೂರರವರು ತಮ್ಮ ಅಂಗಡಿಯಲ್ಲಿದ್ದ ಪರದೇಶಿ ಸಕ್ಕರೆಯನ್ನು ನಾಯಸಿಂಗಪ್ಪನಂತೆ ಸೂರೆ ಮಾಡಿ, ಇನ್ನಂತರ ಈ ಸಕ್ಕರೆ ತರಿಸುವದಿಲ್ಲೆಂದು ಪ್ರತಿಜ್ಞೆ ಮಾಡಿದರು.

———

ಯಲಗಚ್ಚಿನ ಗೌಡರ ಕ್ಷಮಾಪತ್ರವು.

⁂

ಕರ್ನಾಟಕ ಪ್ರಾಂತದ ಅಧ್ಯಕ್ಷರ ಸನ್ನಿಧಿಗೆ

ಮಹನೀಯರೇ-

ಕೆಳಗೆ ಸಹಿ ಮಾಡಿದ ನಾನು ಇಂದು ಕಾಂಗ್ರೆಸದ ಅಪ್ಪಣೆಯನ್ನು ಮೀರಿ, ಕೌನ್ಸಿಲ ಉಮೇದವಾರರಾಗಿ ನಿಂತ, ಮಿ. ವಿಶ್ವನಾಥರಾವ ಜೋಗ ಇವರಿಗೆ ಮತ ಕೊಟ್ಟು, ಅಕ್ಷಮ್ಯ ಅಪರಾಧವನ್ನು ಮಾಡಿರುವೆನು. ಈ ದೇಶದ್ರೋಹ ಮಾಡಿದ್ದಕ್ಕೆ ನನ್ನನ್ನು ದಯಾಳುಗಳಾದ ತಾವು ಕ್ಷಮಿಸಬೇಕಾಗಿ ಬೇಡಿಕೊಳ್ಳುತ್ತೇನೆ.

ಹಣಮಂತಗೌಡಾ ಪಾಟೀಲ, ಯಲಗಚ್ಚ
ತಾಲೂಕ ಕರಜಗಿ

———

ಒಡಂಬಡಿಕೆಯ ಎರಡನೆಯ ಪ್ರಯತ್ನ-

ಹಿಂದುಸ್ಥಾನಕ್ಕೆ ಕೂಡಲೆ ವಸಾಹಾತಿಕ ಸ್ವರಾಜ್ಯ ಕೊಡುತ್ತೇವೆಂದು, ಲಾರ್ಡ ಅರ್ವಿನಸಾಹೇಬರು ವಚನ ಕೊಟ್ಟರೆ- ರಾಜಿಯೆಂದು ಮಹಾತ್ಮರು ಮಿ. ಜಯಕರರವರ ಮುಂದೆ ಹೇಳಿದರು. ಇವರು ಮಹಾತ್ಮರ ಪತ್ರ ತಕ್ಕೊಂಡು ಪಂಡಿತ ಜವಾಹಿರಲಾಲ ಮತ್ತು ಮೋತಿಲಾಲರನ್ನು ಕಾಣಲು ಹೊರಟಿದ್ದಾರೆ. ಇದರ[illegible] ಲಾರ್ಡ [illegible]

ಮೋಟಿಬೆನ್ನೂರ

ಕ. ಪ್ರಾಂ. ಕಾಂ. ಕ. ಯು ಹಾಕಿಕೊಟ್ಟ ಕಾರ್ಯಕ್ರಮವನ್ನು ಕೈಕೊಂಡು ಮೋಟಿಬೆನ್ನೂರ ಗೊಂಗಡಿ ಗೆಣೆಯರ ಗುಂಪಿನವರು ಮಾಡಿದ ಪ್ರಯತ್ನವು ಸಫಲವಾಗಿ ಪರಿಣಮಿಸಿದೆ ಕಂಗ್ಲಿ ಸಳೇ ಮತಗಳು ಬಿದ್ದವು ಅವರಾದರೆ ಪ್ರೋಲಿಂಗ ಸ್ಟೇಶನ್ನಿಗೆ (ಉಮೇದವಾರರ ಮುಲಾಜಿನ ಬಂಧದಲ್ಲಿ ಸಿಲ್ಕಿ ತಮ್ಮ ಇಷ್ಟೆಯ ವಿರುದ್ಧವಾದರೂ) ಹೋಗಿ ಹಿಂದಿರುಗಿ ಬಂದಿರಲಿಕ್ಕಿಲ್ಲ! ಏನೇ ಇರಲಿ, ಪಾಪ! ರಾ. ಬ. ಕಂಬಳಿ ಮತ್ತು ಜೋಗಿರಾಯರ ಮೋಟಾರಗಳು ಬರಿಕೇ ಎಷ್ಟೊ ವ್ಯರ್ಥ ದಣಿದವು. ಸರಿಯಾದ ಶಿಸ್ತಿನ! ಎಷ್ಟೇ ಕೈಕಾಲು ಕಟ್ಟಿಕೊಂಡರೂ ಕೇಳದೆ ಆ ಸತ್ಯಾಗ್ರಹಿಗಳು ಹೊರಡಲು ಸ್ವಯಂಸೇವಕರು ಒಂದು ಸಿಸ್ತಿನಿಂದ ಕರೆ ನಿಶಾನೆ ಮೆರೆಸುತ್ತ ಹೋಗಿ ತಮ್ಮ ಹೃದಯದ ತಳಮಳವನ್ನು ವ್ಯಕ್ತಮಾಡಿದರು. ಅವರು ಹಿಂದಿರುಗಿ ಒಂದವೇಳೆ ಪುನಃ ಇದೇ ಪ್ರಕಾರದ ಮಸ್ಸಿಗೆ. ರೇಗಿಗೆದ್ದ ಜನತಾ ಸಮೂಹವು ಅವರಿಗೆ ಅವಮರ್ಯಾದೆ ಮಾಡಲೇಬೇಕೆಂದು ಹಟತೊಟ್ಟರಲು ಸ್ವಯಂಸೇವಕರ ಅಗ್ರಹದ ಮೇರೆಗೆ ಶಾಂತರಾದರು. ಶಾಂತಿ, ನಿಸ್ತಾಗಳ ಮಾದರಿಗಾಗಿ ವಿಲಕ್ಷಣ ಶೋಭೆಯನ್ನುಂಟು ಮಾಡಿದ್ದವು. ಶ್ರೀ. ಬಂಲಿ ಲಕ್ಷ್ಮಪ್ಪನವರು ಈ ಕಾರ್ಯದಲ್ಲಿ ಅವಿಶ್ರಾಂತ ಶ್ರಮಪಟ್ಟರು. ತರುಣರು ಅವರಿಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಮಾಡುತ್ತಿದ್ದರು. ಆ ಪ್ರೋಲಿಂಗ ಸ್ಟೇಶನ್ನಿಗೆ ನಮ್ಮಲ್ಲಿಂದ ಸ್ವಯಂಸೇವಕರನ್ನು ಕಳಿಸಿದ್ದೆವು ಅವರು ಮಾಡಿದ ಸಾಹಸವು ಅನುಕರಣೀಯವೂ ಅಭಿನಂದನೀಯವೂ ಆಗಿದೆ.

ಜನಜಾಗೃತಿಯನ್ನಾದರೂ ಕಂಡು ರಾ. ಬ. ಕಂಟಿಕೊಪ್ಪನ ಕುಂಭಕರ್ಣ ನಿದ್ರೆಯು ಹರಿಯಲಿ. ತಾನೇ ಉಂಡು ಒಗೆದ ಎಂಜಲ ಪತ್ರಾವಳಿಯನ್ನು ಪುನಃ ಮೂಸಿನೋಡಲು ಹೊರಟ ಜೋಗಪ್ಪನು ದರ್ಗಿಯ ವ್ಯಾಮೋಹವನ್ನು ಕಿತ್ತು ಬಿಸುಟಲಿ. ಕಸಗುಡಿಸುವವನು ಅರಸಿಬಂದಿರುವನು! ಇನ್ನಾದರೂ ಕಣ್ದೆರೆಯಲಿ.

ಗೊಂಗಡಿ ಗೆಣೆಯರ ಗುಂಪಿನ ಗುಂಜು

ಕುಬೇರನಂದನ

ಚಂದಾದಾರರಿಗೆ ಸೂಚನೆ

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಇದೋ ನೋಡಿ! ಕಾರಖಾನೆದಾರರೇ!! ತ್ವರೆ ಮಾಡಿ!!!

ಕರ್ನಾಟಕದಲ್ಲಿಯೇ ಮೊದಲನೆಯದು!

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ೧೯೩೦

ಧಾರವಾಡ

ಕರ್ನಾಟಕ ಕಾರಖಾನೆದಾರರಿಗೆ ಅಲಭ್ಯ-ಲಾಭ.

ಬರುವ ಮಹಾನವಮಿಯ ಸಾಪ್ತಾಹದಲ್ಲಿ ಇಲ್ಲಿಯ 'ದಿ ಕರ್ನಾಟಕ ಸ್ವದೇಶಿ ಬ್ಯೂರೋ' ದವರು ಸ್ವದೇಶಿ ವಸ್ತುಗಳ ಪ್ರದರ್ಶನವೊಂದನ್ನು ಮಂಡಿಸಲಿರುವರು. ನಾಡಿನಲ್ಲೀಗ ನಡೆದಿರುವ ರಾಜಕೀಯ ಚಳವಳಿಯದೊಂದು ಅಂಗವಾದ ಸ್ವದೇಶಿ ವಸ್ತು ಪ್ರಚಾರ ಕಾರ್ಯಕ್ಕೆ ಸೌಕರ್ಯವನ್ನುಂಟುಮಾಡಲು ಈ ಪ್ರದರ್ಶನವು ಸುಂದರವಾದ ರಾಜಮಾರ್ಗ. ಇಲ್ಲ ಸ್ವದೇಶಿ ವಸ್ತುಗಳನ್ನು ತಯಾರಿಸುವ ಕಾರಖಾನೆದಾರರು ವಿಶೇಷವಾಗಿ

ಕರ್ನಾಟಕದ ಕಾರಖಾನೆದಾರರು

ಈ ಪ್ರದರ್ಶನದಲ್ಲಿ ತಮ್ಮ [illegible] ಗಳನ್ನು ಪ್ರದರ್ಶಿಸಬೇಕು. ಮತ್ತು ಶಕ್ಯವಿದ್ದಲ್ಲಿ ಸ್ವತಃ ಬಂದು ನೋಡಬೇಕು. ಪ್ರದರ [illegible]

ಸಪ್ಟಂಬರ ೨೫ರಿಂದ ಅಕ್ಟೋಬರ ೨ರ ವರೆಗೆ ನೆರವೇರಿಸಲ್ಪಡುವುದು. ಈ ಬಗ್ಗೆ ಹೆಚ್ಚಿಗೆ ತಿಳಿಯಬಯಸುವವರು ಕಾರ್ಯದರ್ಶಿಗಳು 'ದಿ ಕರ್ನಾಟಕ ಸ್ವದೇಶಿ ಬ್ಯೂರೋ' ಧಾರವಾಡ ಇವರನ್ನು ವಿಚಾರಿಸಬೇಕು.

ನೋಟೀಸು

ರಾ|| ರಾ|| ಬಸನಗೌಡಾ ಸಣ್ಣಕುರನಗೌಡಾ ಶಿದ್ಧನಗೌಡರ ವ ದೊಡ್ಡನಗೌಡಾ ಮಲಗನವರ ಸಾ|| ನೂಲವಿ ತಾಲೂಕ ಹುಬ್ಬಳ್ಳಿ ಇವರಿಗೆ-

ಕೆಳಗೆ ಸಹಿ ಮಾಡುವವರ ಕಡೆಯ ಈ ಲೇಖದ ಮೇಲಿಂದ ನೋಟೀಸ ಕೊಡುವದೇನೆಂದರೆ ಬರುತ್ತದಲ್ಲಾ- ೧೯೨೭ನೇ ಇಸ್ವಿಯಲ್ಲಿ ನನ್ನ ನೂಲವಿ ಗ್ರಾಮದ ಜಮೀನು ಅ ನಂ ೬೭ ಯಕರೆ ೧೭,೩೯ ತರಂ ೬೭ನೇದ್ದನ್ನು ನಿಮಗೆ (೩೩೦೦) ರೂಪಾಯಿಗಳಿಗೆ ಕೋರವತ್ತಿ ಬರಕೊಡುವ ಬಗ್ಗೆ ನಮ್ಮ ನಿಮ್ಮ ವ್ಯವಹಾರ ಆಗಿ ಕೆಲವು ರಕಂ ರೋಖ ಕೊಟ್ಟು ಬಾಕಿ ಹವಾಲಿ ಮೇಲಿಂದ (೩೩೦೦) ರೂಪಾಯಿಗಳಿಗೆ ಭರತಿಮಾಡಿ ವ್ಯವಹಾರ ಪದ್ಧತಿಯಂತೆ ದುಪ್ಪಟ್ಟ ರಕಮಿಗೆ ಅಂದರೆ (೬೬೦೦) ಆರು ಸಾವಿರದಾ ಆರುನೂರು ರೂಪಾಯಿಗಳಿಗೆ ವತ್ತಿ ಬರಸಿಕೊಂಡು ನೋಂದಣಿ ಮಾಡಿಸಿಕೊಂಡಿರಿ. ಈಗ, ನನಗೆ ರೋಖ ಆಗಿರ ಇತರ ರೀತಿಯಿಂದ ಮುಟ್ಟಿದ ರಕಮಿನ ಮೇಲಿಂದ ಲೆಖ್ಖಮಾಡಿ ನಿಮಗೆ ಕೊಡತಕ್ಕದ್ದಾಗುವ ರಕಂ ತೆಗೆದುಕೊಂಡು ನಮ್ಮ ಆಸ್ತಿ ವತ್ತಿ ಬೋಜಾದಿಂದ ಮೋಕಳೀಕಮಾಡಿಕೊಡಬೇಕೆಂತಾ ನಿಮಗೆ ಎಷ್ಟೋಸಾರೆ ಹೇಳಿದರೂ ಇದುವರೆಗೆ ಆದರಂತೆ ಮಾಡಿಲ್ಲರಿ ಇಂದು ನಾಳೆ ಅನಕೋತಾ ಬರತೀರಿ ಕಾರಣ ಈ ನೋಟೀಸು ಮಾಡುವ ಭಾಗಬಿತ್ತು. ಇದು ಮುಟ್ಟಿದ ಹತ್ತು ದಿವಸಗಳಲ್ಲಿ ಲೆಖ್ಖಮಾಡಿ ನಮ್ಮ ರಕಂ ವ್ಯವಹಾರ ಪ್ರಕಾರ ನಿಕಾಲೆ ಮಾಡಬೇಕು ತಪ್ಪಿದರೆ ಕಾಯದೆ ಪ್ರಕಾರ ಇಲಾಜ ಮಾಡಬೇಕಾದೀತು

ನಿಮ್ಮ ಇಬ್ಬರಲ್ಲಿ ಏಲೀಗಡೆಗೆ ಬೇಟಿಯಾವ ಒಂದಿದ್ದು ನೀವು ವ್ಯವಹಾರ ನಿಕಾಲೆದ ಕೆಲಸದಲ್ಲಿ ಬಿನಮೇಕ ಮಾಡುತ್ತಾ ಬರತೀರಿ ಇದರಿಂದ ಫಿನಿರಾ ಕಾರಣ ಬಡ್ಡಿ ಏರಿ ನನಗೆ ಭಾರಿ ಲುಕಸಾನ ಆಗುವ ಸಂಭವ ಬಂದಬಂದದರಿಂದ ಈ ನೋಟೀಸ ಕೊಟ್ಟಿದ್ದೇನೆ ಈ ನೋಟೀಸಿನ ಖರ್ಚು ನಿಮ್ಮ ತಲಿಯ ಮೇಲೆ ಇದೆ ತಿಳಿಯುವದು ತಾ|| ೧೨-೯-೧೯೩೦ ನೇ ಇಸ್ವಿ

ಮುರಸಾವಿರಯ್ಯಾ ಬಸಯ್ಯಾ ಕೊಟಕೊಂಡಹುಣಸಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, 'ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ # ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಶುಕ್ರವಾರ ತಾರೀಖು ೧೯ನೇ ಸಪ್ಟಂಬರ ೧೯೩೦ (ಸಂಚಿಕೆ ೨೦೪

ನಗರಸಂಕೀರ್ತನೆಯ ಪದಗಳು

(೨ನೆಯ ಭಾಗ)

ನಾನಾರಸಗಳಿಂದಲೂ ವಿವಿಧ ವಿಷಯಗಳಿಂದಲೂ ಹಲವು ರಾಗಗಳಿಂದಲೂ

ಶ್ರುತಿ ಮನೋಹರವೂ ನಯನಮನೋಹರವೂ

ಆದ ಈ ಭಾಗವು ಅಚ್ಚಿನಲ್ಲಿದೆ

ಧಾರವಾಡ ನಾಡಹಬ್ಬದ ಕವಿಸಮ್ಮೇಲನ ಕಾಲಕ್ಕೆ

ಇದೇ ಸೆಪ್ಟಂಬರ ೨೮ ಕ್ಕೆ ಹೊರಡುವದು

ಇದರಲ್ಲಿ-

ಸ್ವಾತಂತ್ರ್ಯಸಂಗ್ರಾಮದ ಉತ್ಸಾಹದ ಪದಗಳೂ ಹೆಣ್ಣುಮಕ್ಕಳಿಗಾಗಿ ಇಂಪಾದ

ಹಾಡುಗಳೂ ಗಾಂಧಿಯನ್ನು ರಾಟಿ-ಖಾದಿಗಳನ್ನು ವರ್ಣಿಸುವ ಪದ್ಯಗಳೂ ಸೇರಿ

೨೦—೨೫ ಹಾಡುಗಳಿವೆ

ಮೊದಲನೆಯ ಭಾಗಕ್ಕೆ ದೊರೆತ ಜನತೆಯ ಬೆಂಬಲವನ್ನು ನಂಬಿ

ಈ ಭಾಗಕ್ಕಾದರೂ ಬೆಲೆ ತೀರ ಕಡಿಮೆ

ಎರಡೇ ಆಣೆ

ನಮಗೆ-ನಮಗೆಂದು ಗಿರಾಕಿಗಳು ಮುಗಿಬಿದ್ದ ಈಸಮಯದಲ್ಲಿಯೇ

ನೀವೂ ಒಂದನ್ನು ತೆಗೆದುಕೊಳ್ಳಿರಿ!

೧) ಕನ್ನಡಿಗರ ಕೂಟ ಧಾರವಾಡ

೨) ಗೋ. ಲ. ಮಂಗಳೂರ

ಶಾಂತೇಶ ವಾಚನಾಲಯ ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೨ ರ ಸಾಲಿನ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಎರಡು ಲಕ್ಷದ ಮೇಲುಂಟು. ಬಿಲ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಚಾಲು ಠೇವಣಿಗಳಿಗೆ ಯೋಗ್ಯ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

[illegible] ಬಿ. ಪಾಟೀಲ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಪ್ರತ್ಯಕ್ಷವು ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಶಾಲಿಶಕ್ಯ ವಿಕ್ರಮ ವರ್ಷ ೧೯೮೭ ಭಾದ್ರಪದ ವದ್ಯ ೧೨

ರಾ. ಬ. ಕಂಬಳಿ ಮತ್ತು ರಿಫೆರೆಂಡಮ್

ರಾ. ಬ. ಕಂಬಳಿಯವರು ರಾವುಂಡ ಟೇಬಲಿಗೆ ಹೋಗಬಾರದೆಂದು ಗುಳೇದಗುಡ್ಡದವರು ಸಭೆ ಮಾಡಿ, ಅವರಿಗೆ ಆ ಮೇರೆಗೆ ವಿನಂತಿ ಮಾಡಿಕೊಳ್ಳಬೇಕೆಂಬ ಠರಾವನ್ನು ಮಾಡಿದ್ದಾರೆ. ಇವರಂತೆ ನಾಗಪೂರದವರೂ ಜಾಹೀರ ಸಭೆ ಮಾಡಿ, ಠರಾವು ಮಾಡಿದ್ದಾರೆ. ಸಂಪೂರ್ಣ ಸ್ವಾತಂತ್ರ್ಯವಾದಿಯಾದ ಡಾಕ್ಟರ ಮುಂಜೆಯವರು ಆಮಂತ್ರಣ ಸ್ವೀಕರಿಸಬಾರದು; ವಿಲಾಯತಿಗೆ ಹೋಗಬಾರದೆಂದು ಈ ಸಭೆಯ ಠರಾವಿನ ಆಶಯವಾಗಿರುತ್ತದೆ. ಆದರೆ ಇವರಿಬ್ಬರೂ ಇತ್ತಕಡೆಗೆ ಲಕ್ಷ್ಯಕೊಡಲಾರರು. ಮಹಾತ್ಮರೂ ಪಂಡಿತದ್ವಯರಾದ ಪಿತಾ ಪುತ್ರರೂ ದೊರಕಿಸದೆ ಹೋದಂಥ ಹಕ್ಕು ಬಾಧ್ಯತೆಗಳನ್ನು ತಾವು ಸಂಪಾದಿಸಿಕೊಂಡು ಬರುವಂತೆ ಇವರು ಆಶೆಗೊಂಡಿದ್ದಾರೆ. ಹಣಮಪ್ಪನೇ ಹಗ್ಗ ನುಂಗುವಾಗ್ಗೆ ಪೂಜಾರಿ ಶೇವಿಗೆಯ ಪಾಯಸ ಬೇಡಿದನೆಂಬಂತೆ ಇವರ ವಿಲಾಯತಿಯ ಯಾತ್ರೆಯಾಗದಿರದು. ಮುಂದಿನ ಅಪಲಕ್ಷಣಗಳು ಈ ಪ್ರಕಾರ ಸ್ಪಷ್ಟವಾಗಿ ತೋರುತ್ತಿದ್ದರೂ, ಇವರು ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುತ್ತಿದ್ದಾರೆ.

ರಾವುಂಡ ಟೇಬಲಿಗಾಗಿ ತಮ್ಮ ಮನಕ್ಕೆ ಬಂದವರನ್ನು ಕರೆಯುವ ಕೆಲಸವು ಸರಕಾರದ್ದಲ್ಲ. ಪ್ರಜೆಯ ಕೆಲಸವು, ನಿಮ್ಮ ಪಕ್ಷದಿಂದ ಡೆಲಿಗೇಟರನ್ನು ಕಳಿಸಿರೆಂದು ಹೇಳುವದಷ್ಟೇ ಸರಕಾರದ ಕೆಲಸ. ಹೀಗೆ ಮಾಡದೆ, ತಮ್ಮ ಎಣಿಕೆಯಲ್ಲಿ ಬರುವಂಥವರನ್ನೇ ಕರೆಯುವದರಿಂದ, ಲಾಭವು ಸರಕಾರಕ್ಕೆ ಹಾನಿಯು ಪ್ರಜಾಪಕ್ಷಕ್ಕೆ ಎಂದಾಗುವದೇ ಖಂಡಿತ. ಇಂಗ್ರೇಜಿ ಸರಕಾರದವರು ಹಿಂದುಸ್ಥಾನದ ಜುಟ್ಟವನ್ನು ಹಿಂದುಸ್ಥಾನವು ಬಿಡಿಸಿಕೊಡದಂತೆ ಹಿಡಕೊಂಡೇ, ನೀವು ಬೇಕಾದಂತೆ, ಬೇಕಾದಷ್ಟು ಸಂಪಾದಿರೆಂದು ಹೇಳುವರು. ಈ ರಹಸ್ಯವು ವಿಲಾಯತಿಗೆ ಹೋಗುವಂಥವರಿಗೆ ಗೊತ್ತೇ ಇಲ್ಲ.

ಪ್ರಜಾಪ್ರತಿನಿಧಿಗಳಾಗದೆ ಪ್ರಜರ ಹೇಳಿಕೆ ಏನೆಂಬುವದನ್ನು ಪ್ರಜರಿಂದಲೇ ತಿಳಕೊಳ್ಳದೆ, ಹೋಗುವ ವಕೀಲರಿಗೆ ಯಾವ ಉಪಮೆ ಕೊಡಬೇಕೆಂಬದು ತಿಳಿಯದಾಗಿದೆ. ವಕೀಲರಾಗುವಂಥವರು ತಮ್ಮ ಪಕ್ಷಕಾರರ ಕಾಗದಪತ್ರ ಮತ್ತು ಬೇರೆ ಅವಾಂತರ ಸಂಗತಿಗಳನ್ನು ಕೇಳಿಕೊಂಡು, ವಕೀಲಿಯ ಕೌಶಲ್ಯ ನಡಿಸುವದು ವಾಡಿಕೆಯಾದದ್ದು. ಆದರೆ ಇವರು ಹಿಡಿದ ವಕೀಲಿ ಎಂಥದು? ಸೆಶನ್ಸ ಕೋರ್ಟಿನಲ್ಲಿ ದರಿದ್ರನಿಗೆ ಸರಕಾರ ವತಿಯಿಂದ ಕೊಡುವ ಪಾಪರ (ಬಡ) ವಕೀಲಿಯು. ಸರಕಾರವೇ ಫಿರ್ಯಾದಿ! ಸರಕಾರದ ವತಿಯಿಂದಲೇ ವಕೀಲಿ ಎನಿಸಿಕೊಳ್ಳುವಷ್ಟು ದರಿದ್ರತನವು ಇನ್ನೂ ಹಿಂದುಸ್ಥಾನಕ್ಕೆ ಬಂದಿರುವದಿಲ್ಲ. ನಾವು ಭಾರತೀಯರ ಪ್ರತಿನಿಧಿಗಳಾಗಿದ್ದೇವೆಂದು ಹೇಳಿಸಿಕೊಂಡು ಹೋಗುವದರಲ್ಲಿ ಭೂಷಣವಿದ್ದಷ್ಟು, ಔತಣ ಬಂದಿದೆಂದು ಅಂದುಕೊಂಡು ಅವರ ವೆಚ್ಚದಿಂದ ಹೋಗುವದರಲ್ಲಿ ಭೂಷಣವೇ ಇರುವದಿಲ್ಲ.

ರಾವುಂಡ ಟೇಬಲಕ್ಕೆ ಹೋಗುವಂಥ ಯಾವನೇ ಪ್ರತಿನಿಧಿ ಇರಲಿ; ಆತನು ಪ್ರಜಾಪ್ರತಿನಿಧಿಯಾಗಿರುತ್ತೇನೆಂಬ ಅಭಿಮಾನವನ್ನೇ ಪಡೆಯತಕ್ಕದ್ದು. ಹೀಗೆ ಅಭಿಮಾನ ಪಡುವಾಗ, ಲೋಕಮತವನ್ನು ಬೆಂಬಲ ಮಾಡಿಕೊಂಡಿರಬೇಕು. ಬರೇ ನಿಶಾನೆಯ ಬಹುಮಾನಕ್ಕೀಡಾಗಬಾರದು: ಮ್ಯುನಿಸಿಪಾಲಿಟಿ, ಲೋಕಲ ಬೋರ್ಡ ಮತ್ತು ಕೌನ್ಸಿಲ ಚುನಾವಣೆಯಲ್ಲಿ ತಾವು ಮತದಾರರ ಪ್ರತಿನಿಧಿಯಾಗಿರುತ್ತೇವೆಂದು ಹೇಳಿಕೊಳ್ಳುವಂತೆ, ಅಭಿಮಾನ ಪಡುವಂತೆ, ರಾವುಂಡ ಟೇಬಲಕ್ಕೂ ಪ್ರತಿನಿಧಿ ಎಂಬುದಾಗಿ ಹೇಳುವಂಥ ಹಕ್ಕು ಪಡೆದಿರಬೇಕು. ನಮ್ಮ ಕರ್ನಾಟಕದ ಮಟ್ಟಿಗೆ ವಿಚಾರ ಮಾಡಿದರೆ—ರಾ. ಬ. ಕಂಬಳಿಯವರು ಲೋಕಮತವನ್ನು ಅನುಕೂಲ ಮಾಡಿಕೊಳ್ಳತಕ್ಕದ್ದು. ಕರ್ನಾಟಕದ ಜನತೆಗೆ ಕೇಳಬೇಕು. ವೋಟು ಬೇಡಬೇಕು. ಅವರು ಹೋಗೆಂದರೆ ಹೋಗಬೇಕು. ಬೇಡೆಂದರೆ ಬಿಡಬೇಕು. ಕೌನ್ಸಿಲ ಚುನಾವಣೆ ಮತ್ತು ಕೌನ್ಸಿಲದಲ್ಲಿ ಮಾಡುವ ಕೆಲಸಕ್ಕಿಂತ ಈ ಕೆಲಸವು ಲಕ್ಷಪಾಲು ಮಹತ್ವದ್ದಾಗಿರುತ್ತದೆ. ಆದ್ದರಿಂದ ರಾ. ಬ. ಕಂಬಳಿಯವರು ವಿಲಾಯತಿಪದ್ಧತಿಯಂತೆ ಜನರ ಮತ ಕೇಳಬೇಕು. ಇದಕ್ಕೆ ರಿಫೆರೆಂಡಮವೆನ್ನುತ್ತಾರೆ. ಈ ಪ್ರಕಾರ ಕೇಳದೆ, ಜನರ ಇಚ್ಛೆ ಮತ್ತು ಅನುರಾಗವಿಲ್ಲದೆ ತಾವಾಗಿ ಹೋಗುವದರಲ್ಲಿ ಎಷ್ಟು ಪುರುಷಾರ್ಥವಿರುವದಿಲ್ಲೆಂದು ರಾ. ಬ. ರವರು ಪೂರಾ ತಿಳಿಯಬೇಕು.

ಹೋದ ವಾರದಲ್ಲಿ ಬೆಳಗಾವಿಯಲ್ಲಿ ಸತ್ಯಾಗ್ರಹದ ಸಪ್ತಾಹವಾಯಿತು. ಆ ವಾರದಲ್ಲಿ ಮೂರುಸಾವಿರ ಜನರು ಕಾಂಗ್ರೆಸದ ಮೆಂಬರರಾದರು.

ಒಡಂಬಡಿಕೆ ಮಾಡಬೇಕೆನ್ನುವ ಅಲೆಕ್ಝಾಂಡರನಾರು !

ವಿಲಾಯತಿಯಲ್ಲಿರುವ ಮಿತ್ರ ಸಮಾಜ (ಕ್ವೇಕರ) ಮುಖ್ಯ ಶಾಖೆಯವರೂ, ಬರ್ಮಿಂಗಹ್ಯಾಮ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರೂ ಆದಂಥ ಪ್ರೊಫೇಸರ ಅಲೆಕ್ಝಾಂಡರಸಾಹೇಬರು ಹಿಂದುಸ್ಥಾನಕ್ಕೆ ಬಂದು ಎರಡು ತಿಂಗಳಾಯಿತು. ಇವರು ಸಿಮ್ಲಾಕ್ಕೆ ಹೋದರು. ಅಲ್ಲಿ ಕೊಂಚ ಧನಿಕರ ಅತಿಥಿಗಳಾಗಿದ್ದರು. ಎರಡು ಮೂರು ಸಾರೆ ಲಾರ್ಡ ಇರ್ವಿನಸಾಹೇಬರನ್ನು ಕಂಡು ಮಾತಾಡಿದ್ದಾರೆ. ಅಲ್ಲಿಂದ ಪುಣೆಗೆ ಬಂದರು. ಗವ್ಹರ್ನರರಾದ ಸರ ಸಾಯಿಕ್ಸಸಾಹೇಬರೊಂದಿಗೆ ಭೇಟಿಯ ಮಾಡಿ, ಅವರ ಕೂಡ ಪ್ರಸ್ತುತದ ಸಂಧಿ ವಿಷಯವನ್ನು ಕುರಿತು ವಿಚಾರವಿನಿಮಯ ಮಾಡಿದ್ದಾರೆ. ಇವರು ೯ನೆಯ ತಾರೀಖಿನ ದಿವಸ ಮಹಾತ್ಮರನ್ನು ಕಂಡು ಎರಡು ದಿವಸ ಭಾಷಣ ಮಾಡಿದರು. ಒಂದು ಸ್ಥಳಕ್ಕೆ ಕೂಡಲೆ ವಸಾಹತಿನ ಸ್ವರಾಜ್ಯ ದೊರೆಯುವಂತೆ ಸರಕಾರದವರು ವಚನ ಕೊಡಬೇಕೆಂದು ಮಹಾತ್ಮರ ಮತವಿದ್ದು, ಅಲ್ಲಿಗೇ ಒಡಂಬಡಿಕೆಯ ಬಾಗಿಲ ಬಂದಾಗಿದೆ. ಪುನಃ ಈ ಬಾಗಿಲ ತೆರೆಯಲು ಸಾಹೇಬರು ಪ್ರಯತ್ನ ನಡೆಸುವರು. ಇವರು ಮಹಾತ್ಮರ ಕೂಡ ಮೂರು ದಿವಸ ಮಾತಾಡಿದ ನಂತರ, ಮಹಾತ್ಮರಿಂದ ಪತ್ರ ಪಡಕೊಂಡು, ಪಂಡಿತ ಜವಾಹಿರಲಾಲರನ್ನೂ, ಪಂಡಿತ ಮೋತಿಲಾಲರನ್ನೂ ಕಾಣಲು ಹೊರಟಿದ್ದಾರೆ. ಇವರಂತೆ ಕಾಂಗ್ರೆಸದ ಬೇರೆ ಮುಖಂಡರನ್ನು ಕಾಣುವರು. ಅನಂತರ ಲಾರ್ಡ ಇರ್ವಿನ್ನಸಾಹೇಬರನ್ನು ಕಂಡು, ಅವರ ವಿಚಾರ ತಿಳಕೊಂಡು, ಅಲ್ಲಿಂದ ಪುನಃ ಮಹಾತ್ಮರನ್ನು ಕಾಣಲು ಏರವಡೆಗೆ ಬರುವರೆಂದು ಪ್ರಸಿದ್ಧಮಾಡಲ್ಪಟ್ಟಿದೆ.

ಮಹಂತನ ಮುಚ್ಚುಮರೆಯ ಮದಿವೆ

—(o)—

ಮಹಂತನಮೇಲೆ ಮಡದಿಯ ದಾವೆ

—(o)—

ಬಂಗಾಲದಲ್ಲಿ ರಂಗಪೂರವೆಂಬಲ್ಲಿಯ ಗಿರಿಗೋಸಾವಿ ಎಂಬವರು ಶ್ರೀಮಂತ ಮಹಂತರು. ಸಂಸ್ಥಾನಿಕರಷ್ಟು ಉತ್ಪನ್ನ. ಮದಿವೆಯಾಗತಕ್ಕದ್ದಲ್ಲ. ಬ್ರಹ್ಮಚಾರಿಯಾಗಿರತಕ್ಕದ್ದು. ಗುಪ್ತವಾಗಿ ಒಬ್ಬಳನ್ನು ಮದಿವೆಯಾಗಿ, ಅವಳಿಂದ ಒಂದು ಮಗಳು ಕೂಡಾ ಹುಟ್ಟಿರುತ್ತದೆ. ಆದರೆ ಈಗ ಅವಳಿಗೆ ನೀನು ಹೆಂಡತಿಯಲ್ಲವೆಂದು ಹೇಳಿ, ದೂರೀಕರಿಸಿದ್ದಾರೆ. ಈಗ ಇವಳು ಮಹಂತನಮೇಲೆ ಜೀವನಾಂಶದ ದಾವೆ ಮಾಡಿದ್ದಾಳೆ.

ಕಂಪ್ಲೆಬೇಡ; ಕೊಂಪ್ಲೆಯೇ ಲೇಸೆಂದರು

ಲಾಹೋರಿನ ಸುಪ್ರಸಿದ್ಧ ಗೃಹಸ್ಥರಾದ ದಿವಾನ ಚಮನಲಾಲರಿಗೆ ರೌಂಡಟೇಬಲದ ಬರುವಣಿಗೆ ಬಂದಿದಷ್ಟೆ; ಅಲ್ಲಿಗೆ ಹೋಗಲು ಇವರು ಹಿರಿದು ಹಿಗ್ಗದೆ, ಬುರುಬುರು ಉಬ್ಬದೆ, ಆಮಂತ್ರಣವನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ.

> “ಒಡಂಬಡಿಕೆಯ ಪ್ರಯತ್ನವು ನಿಷ್ಫಲವಾಯಿತು. ಕಾಂಗ್ರೆಸದ ಮುಂದಾಳುಗಳು ಬಂದಿವಾನರು. ಕಾರಣ ನಿಮ್ಮ ಪರಿಷತ್ತಿಗೆ ಬರುವದರಿಂದ ಯಾವ ಲಾಭವೂ ಇಲ್ಲ. ಮತ್ತು ನನ್ನಂಥವನ ಹೇಳಿಕೆಯು ಅರಣ್ಯದಲ್ಲಿ ಅಕ್ರಂದಾಗುವದು”

ಆದುದರಿಂದ ನಿಮ್ಮ ಆಮಂತ್ರಣವನ್ನು ಸ್ವೀಕರಿಸಲಾರೆನೆಂದು ಇವರು ಸರಕಾರಕ್ಕೆ ಪತ್ರಬರೆದು ತಿಳಿಸಿದ್ದಾರೆ.

ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ಗುಡುಗು ಹಾಕಿದರು.

ಮ್ಯಾಂಚೆಸ್ಟರದಲ್ಲಿ ನಾಮದಾರ ಶ್ರೀನಿವಾಸ ಶಾಸ್ತ್ರಿಯವರ ಭಾಷಣವಾಯಿತು. ಅವರು ಅಂದದ್ದೇನಂದರೆ-

ದಕ್ಷಿಣ ಆಫ್ರಿಕೆ ಮತ್ತು ಐರ್ಲಂಡದಲ್ಲಿರುವ ರಾಜ್ಯಘಟನೆಗಿಂತ ಕಡಿಮೆ ಪ್ರತಿಯ ರಾಜ್ಯಘಟನೆಯನ್ನು ಅಂಗೀಕರಿಸಲಿಕ್ಕೆ ಹಿಂದೀ ಜನರು ಯೋಗ್ಯರಾಗಿದ್ದಾರೆಂದು ಅನ್ನುವದನ್ನು ನಾನು ಒಪ್ಪುವದಿಲ್ಲ. ಹಿಂದುಸ್ಥಾನದೊಳಗಿನ ತರುಣರ ಮಹತ್ವಾಕಾಂಕ್ಷೆಯನ್ನು ತೃಪ್ತ ಮಾಡುವಂಥ ರಾಜ್ಯಘಟನೆಯನ್ನು ರಾವುಂಡ ಟೇಬಲಿನಲ್ಲಿ ಸಿದ್ಧ ಮಾಡಿದ್ದಾದರೆ- ಹಿಂದುಸ್ಥಾನದೊಳಗಿನ ರಾಜ್ಯಕಾರಭಾರ ಸೂತ್ರಗಳನ್ನು ವಿಶ್ವಾಸದಿಂದ ಹಿಂದೀ ಜನರ ಕಯ್ಯಲ್ಲಿ ಕೊಡಲು ಯಾವ ಅಡ್ಡಿಯೂ ಇರುವದಿಲ್ಲ.

ಹಾಲು ಹೊರಡುವ ಗಿಡ.

—(೦)—

ದೇವತಾ ಚಮತ್ಕಾರ

—(೦)—

ಚಿತಮಡಾಟಾನಿನಲ್ಲಿ ಒಂದು ಗಿಡದೊಳಗಿಂದ ಕ್ಷೀರದ ಸಣ್ಣ ಎಳೆಯ ಹಾಲು ಹೊರಡಲಾರಂಭಿಸಿದೆ. ಸಾವಿರಾರು ಜನರು ಇದನ್ನು ನೋಡಲಿಕ್ಕೆ ಹೋಗುತ್ತಿದ್ದಾರೆ. ಸರಕಾರದ ತಜ್ಞರು ಶೋಧಕರ ದೃಷ್ಟಿಯಿಂದ ಇದರ ಉತ್ಪತ್ತಿ ಮತ್ತು ಕಾರಣ ಹುಡುಕತೊಡಗಿದ್ದಾರೆ.

ಹತ್ತಿಯಂತೆ ನಾರಿನ ದಿವಾಳಿಯು.

—(೦)—

ಬಂಗಾಲದಲ್ಲಿ ೪೦ ಕೋಟಿಯ ಹಾನಿಯು.

—)(೦)(—

ಸ್ವದೇಶಿ ಮತ್ತು ಕಾಯದೆಭಂಗದ ಚಳವಳಿಯಿಂದ ಮುಂಬಯಿ ನಾಗಪೂರ ಪ್ರಾಂತದಲ್ಲಿ ಹತ್ತಿಯ ವ್ಯಾಪಾರ ಮುಗ್ಗಿದಂತೆ, ಬಂಗಾಲದಲ್ಲಿ ನಾರಿನ ವ್ಯಾಪಾರ ಮುಗ್ಗುವದಂತಿರಲಿ; ಆ ನಾರ ವ್ಯಾಪಾರಸ್ಥರೂ, ಅದನ್ನು ಬೆಳೆಯುವ ರೈತರೂ ದಿವಾಳಿಗೆ ಬಂದಿದ್ದಾರೆ. ಒಂದು ಎಕರೆಯಲ್ಲಿ ನಾರನ್ನು ಬಿತ್ತಿ ಬೆಳೆಯಬೇಕಾದರೆ- ಆರು ರೂಪಾಯಿ ವೆಚ್ಚ ಬರುತ್ತದೆ. ಆದರೆ ಧಾರಣೆಯು ಇಂದು ಎರಡೂವರೆಯಿಂದ ಮೂರುವರೇ ರೂಪಾಯಿಯಾಗಿದೆ. ಅಂದರೆ ಮೂರದಲ್ಲಿ ರೈತನೇ ಸರಾಸರಿ ಎಕರೆಗೆ ಮೂರು ರೂಪಾಯಿ ಹಾನಿಗೆ ಬಂದಿದ್ದಾನೆ. ಈ ಪ್ರಕಾರ ಸಣಬು ಬಿತ್ತುವ ಪ್ರತಿಯೊಂದು ಮನೆಯವರು ಕಷ್ಟದಲ್ಲಿ ಬಂದಿದ್ದು, ಅವರ ಒಟ್ಟು ಹಾನಿಯು ೪೦ ಕೋಟಿ ರೂಪಾಯಿಯಾಗುತ್ತದೆಂದು ಅಂದಾಜು ಮಾಡಲ್ಪಟ್ಟಿದೆ. ಯಾವರೀತಿಯಿಂದಾದರೂ ಈ ಹಾನಿ ತುಂಬಿಬರುವಂತಿಲ್ಲ. ಆದುದರಿಂದ ರೈತರು ಇಳಿದ ಧಾರಣೆಯು ಮೇಲ್ಕೆಗೆ ಬರುವತನಕ ಸಣಬನ್ನು ಬಿತ್ತುವ ಉಸಾಬರಿಗೆ ಹೋಗಬಾರದು. ನವಧಾನ್ಯ ಬಿತ್ತಬೇಕೆಂದು [illegible] ದ್ದಾರೆ. ಬಂಗಾಲಿಗಳಂತೆ ಹತ್ತಿಬಿತ್ತುವ ಈ ನಾಡಿನವರೂ ಎಚ್ಚರಾಗಿ, ಹಿಂಗಾರಿಯಲ್ಲಿ ಹೆಚ್ಚಾಗಿ ಜೋಳ, ಗೋದಿ, ಕಡ್ಲೆಯನ್ನೇ ಬೆಳೆಯಬೇಕೆಂದು ಸೂಚಿಸುತ್ತೇವೆ.

ಮನೆಯ ಬಾಡಿಗೆದಾರರ ಸತ್ಯಾಗ್ರಹದ ಜಯ.

—(೦)—

ಮುಂಬಯಿಯಲ್ಲಿರುವ ಸರಕಾರೀ ಕಟ್ಟಡಗಳ ಸಣ್ಣ ಸಣ್ಣ ಕೋಣೆಗಳಲ್ಲಿ ಸಾವಿರಾರು ಕೂಲಿಕಾರರು ವಾಸವಾಗಿರುತ್ತಾರೆ. ಇವರು ತಂತಮ್ಮ ಬಿಡಾರಗಳ ಮುಂದೆ ನಾಡಗುಡಿಯನ್ನು ಹಚ್ಚಿದ್ದಾರೆ. ಸರಕಾರದ ಕಟ್ಟಡಗಳ ಮುಂದೆ ನಿಶಾನೆ ಹಚ್ಚಬಾರದು. ಹಚ್ಚುವದಾದರೆ- ಮನೆ ತೆರವು ಮಾಡಬೇಕೆಂದು ಸರಕಾರೀ ಅಧಿಕಾರಿಗಳು ಇವರಿಗೆ ನೋಟೀಸು ಕೊಟ್ಟರು. ಇದಾವದಕ್ಕೂ ಸೊಪ್ಪು ಹಾಕಲಿಲ್ಲ. ಬಲವಂತಿಕೆಯಿಂದ ಇವರನ್ನು ಬಿಡಿಸಿದರೆ- ತಿಂಗಳಿಗೆ ೧೭ ಸಾವಿರದ ಬಾಡಿಗೆ ಮುಣುಗುವದು. ಹೊಸ ಬಾಡಿಗೆದಾರರು ಬರಲೊಲ್ಲರೆಂದು ತಿಳಿದು, ಅಧಿಕಾರಿಗಳು ತಾವು ಬಿಟ್ಟ ಬಾಣವನ್ನು ಹಿಂದಕ್ಕೆ ತಕ್ಕೊಂಡರು. ಹೀಗೆ ಕೂಲಿಕಾರರ ಸತ್ಯಾಗ್ರಹದ ವಿಜಯವಾಯಿತು.

ಪ್ರಾಥಮಿಕ ಶಾಲೆಗಳ ಶಿಕ್ಷಕರ ಸತ್ಯಾಗ್ರಹ.

ಸುರತ ಮ್ಯುನಿಸಿಪಾಲಿಟಿಯ ಚೀಫ ಆಫೀಸರರು ಶಿಕ್ಷಕರಿಗೆ ಊರೊಳಗಿನ ಜನರ ಗಣತಿ ಮಾಡಲಿಕ್ಕೆ ಹುಕುಮು ಮಾಡಿದರು. ಇದು ತಮ್ಮ ಕರ್ತವ್ಯದ ಹೊರಗಿನ ಕೆಲಸವೆಂದು ಶಿಕ್ಷಕರು ಈ ಕೆಲಸ ಕೈಕೊಳ್ಳಲಿಲ್ಲ. ಇದು ಹುಕುಮಿನ ಅಪಮಾನವೆಂದು ಸ್ಕೂಲಬೋರ್ಡಿನವರು ಇವರಿಗೆ ತಲೆಗೆ ಐದು ರೂಪಾಯಿ ದಂಡ ಮಾಡಿದ್ದಲ್ಲದೆ, ಹತ್ತು ದಿವಸಗಳಲ್ಲಿ ಚೀಫ ಆಫೀಸರರ ಕ್ಷಮೆ ಬೇಡಿಕೊಳ್ಳಬೇಕೆಂದೂ ಗರ್ಜಿಸಿದರು. ಶಿಕ್ಷಕರು ದಂಡ ಕೊಡಲಿಲ್ಲ. ಕ್ಷಮೆ ಬೇಡಿಕೊಳ್ಳಲಿಲ್ಲ. ಶಿಕ್ಷಕರಿಗೆ ನೇ ತಿಂಗಳಿಂದ ಸಂಬಳ ದೊರೆತಿಲ್ಲ||

ರಿವಾಲ್ವರ ಮತ್ತು ಪೋಲೀಸ ಬಂದೋಬಸ್ತಿನಲ್ಲಿ ಶ್ರೀ ವಿಠ್ಠಲಭಾಯಿಯವರ ಸ್ಥಳಾಂತರ.

—(೦)—

ಪಂಡಿತ ಮದನಮೋಹನ ಮಾಲವೀಯರವರಂತೆ, ಅಧ್ಯಕ್ಷರಾಗಿದ್ದ ಶ್ರೀ. ವಿಠ್ಠಲಭಾಯಿ ಪಟೇಲರನ್ನು ಸ್ಪೆಶಲ ಮೋಟಾರಿನಲ್ಲಿ ದಿಲ್ಲಿಯಿಂದ ಅಂಬಾಲಾಕ್ಕೆ ಕರತಂದರು. ಡಿಪುಟಿ ಪೋಲಿಸಸಾಹೇಬರೇ ಡ್ರೈವ್ಹರನಾಗಿ ಮೋಟಾರ ನಡಿಸುತ್ತಿದ್ದರು. ಶ್ರೀ ಪಟೇಲರ ಹಿಂದೆ ರಿವಾಲ್ವರ ಹಿಡಕೊಂಡಂಥ ಇನ್ನೊಬ್ಬ ಅಮಲದಾರನು ಕೂತಿದ್ದನು. ಮತ್ತು ಇವರ ಮೋಟರಿನ ಹಿಂದೆಯೇ ಶಸ್ತ್ರಧಾರಿಗಳಾದ ಆರು ಜನ ಸಿಪಾಯರು ಕೂತಿದ್ದ ಇನ್ನೊಂದು ಮೋಟಾರು ಬೆಂಗಾವಲಿಗಾಗಿತ್ತು.

ಅಗಡಿಯ ಆನಂದವನದ ಮುದ್ರಾಲಯದ ಮೇಲೆ ಫಿರ್ಯಾದಿ

—೦*೦—

ಅಗಡಿಯಲ್ಲಿ ಸುಪ್ರಸಿದ್ಧವಾಗಿರುವ ಶ್ರೀ.ಶೇಷಾಚಲ ಮುದ್ರಾಲಯವು ಮತ್ತು ಸದ್ಬೋಧ ಚಂದ್ರಿಕೆಯ ವ್ಯವಸ್ಥಾಪಕರಾಗಿರುತ್ತಾರೆಂಬವರಾದ ಶ್ರೀ. ಭೀಮಾಜಿ ಪರಶುರಾಮ ಕಾಳೆಯವರ ಮೇಲೆ, ಆವರದ ಕಮಿಟಿಯ ವ್ಯವಸ್ಥಾಪಕರ ವತಿಯಿಂದ- ಶ್ರೀ. ನಾರಾಯಣ ಶ್ರೀನಿವಾಸ ರಾಜಪುರೋಹಿತ ಇವರು ೪೦೮ ಕಲಮಿನನ್ವಯ ವಿಶ್ವಾಸಘಾತದ ಫಿರ್ಯಾದಿ ಮಾಡಿದ್ದಾರೆ. ಫಿರ್ಯಾದಿಯ ವತಿಯಿಂದ ಶ್ರೀ. ಗುತ್ತಲ ಮತ್ತು ಆರೋಪಿಯ ವತಿಯಿಂದ ಶ್ರೀ ಪಟವರ್ಧನ ವಕೀಲರಿದ್ದು, ನಾಳಿನ ದಿವಸ ಮೆ. ಪ್ರೇಯುಂಕಾಹೇಬರ ಮುಂದೆ ವಿಚಾರಣೆ ನಡೆಯುವದು. ಸದ್ಯ ಶ್ರೀ. ಕಾಳೆಯವರು ಇನ್ನೂರು ರೂಪಾಯಿಯ ಜಾಮೀನದ ಮೇಲಿದ್ದಾರೆ.

ಕಾರ್ಯಗಳಲ್ಲಿ ಉತ್ಸಾಹವು ಹೆಚ್ಚಿದ್ದು ಸಿಸ್ತು ಆಗದಿರುವದಿಲ್ಲ. ಕಾರಣ ಈ ತರಹದ ಉತ್ಸಾಹೀ ಕರ್ಯರನ್ನು ಹೀಗೇ ಬಿಟ್ಟು ಕೊಡದೆ ಅವರನ್ನು ಯೋಗ್ಯ ಸ್ಥಿತಿಗೆ ಹಚ್ಚಿ ಅವರ ಕಡೆಯಿಂದ ಸಿಸ್ತಿನಿಂದ ಕಾರ್ಯ ತಕ್ಕಷ್ಟುವಂಥ ಮುಂದಾಳುವನ್ನು ಬೇರ ವಿಯ ಕಾ. ಕಮೀಟಿಯವರಾಗಲೀ ಪ್ರಾಂತಿಕ ಕಾಂಗ್ರೆಸ ಕಮೀಟಿಯವರಾಗಲೀ ಕೊಡಬೇಕೆಂದು ನ್ನ ನಮ್ರ ವಿನಂತಿಯು.

ಓರ್ವ ಪ್ರತ್ಯಕ್ಷದರ್ಶಿ

ಚಡಿ ಚಡಿ ಚಮ್ ಚಮ್
ವಿದ್ಯೆಬರುವದು ಘಮ್ ಘಮ್

—(೦)—

ಮದ್ರಾಸದಲ್ಲಿ ಹತ್ತೆಂಟು ಸಾವಿರ ವಿದ್ಯಾರ್ಥಿಗಳು ಶಾಲೆಗಳನ್ನು ಹಾಳುಗೆಡವಿ ಗಾಂಧೀ ಟೊಪ್ಪಿಗೆ ಹಾಕಿದ ಮೆರವಣಿಗೆ ತೆಗೆದರು. ಮೆರವಣಿಗೆಯಿಂದ ದಾರಿಗೆ ವಿಘ್ನವಾಗುತ್ತದೆಂದು, ಪೋಲಿಸರು ಅಡ್ಡೀ ಮಾಡಲು- ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡಿದರು. ಆಗ ಪೋಲಿಸರು ಇವರಿಗೆ ಬುದ್ಧಿಬರಲೆಂದು ಬೆತ್ತ ಮತ್ತು ಬಡಿಗೆಯಿಂದ ಬಡಿದು, ಅನೇಕರನ್ನು ಘಾಯಪಡಿಸಿದರು. ವಿದ್ಯಾರ್ಥಿಗಳು ಪೂರ್ಣಸ್ವದೇಶಿ, ಮತ್ತು ಸ್ವರಾಜ್ಯವಾದಿಯಾಗಲಿಕ್ಕೆ ಇದೊಂದು ವಸ್ತುಪಾಠವನ್ನೇ ಕಲಿತಂತಾಯಿತು.

ಧಾರವಾಡ

ಒಂದೇ ತಲೆ, ಎರಡು ಬಾಯಿ, ಮೂರು ಕಣ್ಣು ಎರಡು ನಾಲಿಗೆ, ಮೂಗಿನ ನಾಲ್ಕು ಸೊಳ್ಳೆ ಒಂದು ಲಿಂಗ ಹೀಗೆ ಇದ್ದ ಕೋಣನ ಮರಿಯು ಸೃಷ್ಟಿಯ ಅದ್ಭುತ ಚಮತ್ಕಾರವೇಸರಿ ಜೀವಂತ ಇದ್ದು ಎರಡೂ ನಾಲಿಗೆಯಿಂದ ಮೇವು ಮುಡಚಿ ತಿನ್ನುತ್ತದೆ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಜಾಹೀರ ನೋಟೀಸು

—(೦)—

ಗಡೆಪ್ಪಾ ಬಸಪ್ಪಾ ಗಡೆಪ್ಪನವರ ಸಾಕಿನ ನವಲೂರ ವ ಯಾವತ್ತು ಜನರಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತು ಮಾಡುವ ಗೌರವ್ವಾ ಕೋಂ ಗಡೆಪ್ಪಾ ಗಡೆಪ್ಪನವರ ಸಾಕೀನ ನವಲೂರ ಈಕೆಯು ನಿನಗೆ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದಿವೆಯ ಗಂಡನಿದ್ದು ನಿನ್ನಿಂದ ನಾಲ್ಕು ಮಕ್ಕಳಾದವು ಒಂದು ಗಂಡು ಮತ್ತು ಎರಡು ಹೆಣ್ಣು ಜೀವಂತವಿವೆ ಒಂದು ಹೆಣ್ಣಿನ ಮದಿವೆಯಾಗಿದೆ ನನ್ನ ಪ್ರಪಂಚ ಇಷ್ಟು ವಿಸ್ತಾರವಾಗಿರುವಾಗ ಅಜಮಾಸು ಮೂರು ತಿಂಗಳ ಹಿಂದೆ ನಾನು ತವರ ಮನಿಗೆ ಹಡಿಯಲಿಕ್ಕೆ ನನ್ನ ಅಬಚಿ ಸಾವಕ್ಕ ಬೆಂಗೇರಿ ಈಕೆಯ ಮನೆಗೆ ಬಂದೆ ಈ ದರಮ್ಯಾನ ನೀನು ಕೆಟ್ಟಹಾದಿಗೆ ಬಿದ್ದು, ನನ್ನ ಮತ್ತು ನನ್ನ ಮಕ್ಕಳ ವಿಚಾರ ಕೇಳಲಿಲ್ಲ ನನ್ನ ಮನೆಯ ಕಡಿಗೆ ಹಣಕಿ ಸಹ ಹಾಕಲಿಲ್ಲ ಈಗ ಹಡೆದಿದ್ದ ಕೂಸಿನ ಮಣ್ಣಿಗೆ ಸಹ ಬರಲಿಲ್ಲ ಇದಕ್ಕೆಲ್ಲ ನೀನು ಇತ್ತಲಾಗಿ ಬಿದ್ದ ಅಡ್ಡಹಾದಿಯೇ ಕಾರಣ ನೀನು ನನ್ನ ಹಾಗು ನನ್ನ ಅಲ್ಪವಯ ಮಗ ಮತ್ತು ಮಗಳನ್ನು ಮುಣುಗಿಸುವದಕ್ಕಾಗಿ ಪಿತ್ರಾರ್ಜಿತ ಆಸ್ತಿಯಾದ ನವಲೂರ ಗ್ರಾಮದ ರಿ|| ನ|| ನಂಬರ ೧೩೩/೨ ಅ ನೇದ್ದು ಮಾರಿರತೀದಿ ಮಾಡ್ಕೊಂಡು ಕೊನೆಯ ಹೊಲ ಮಾರಬೇಕೆಂದು ಮಾಡಿರತೀದಿ ಅಂತಾ ವರ್ತಮಾನವದೆ ಈ ನಿನ್ನ ವ್ಯವಹಾರವು ಕಾಯದೆಶೀರವಿರುವದಿಲ್ಲ ಅದು ಕುಟುಂಬದ ಸಂರಕ್ಷಣೆ ಮತ್ತು ಯೋಗ್ಯಕಾರಣಕ್ಕಿರದ್ದರಿಂದ ಅದು ಗೈರಕಾಯದೇಶೀರವಾಗಿ ರದ್ದಬಾತಲವಾಗುವದು ಈ ಬಗ್ಗೆ ಮತ್ತ ಜಾಣತಿತನ ಜಾಣತಿತನವಾದನಂತರ- ಈವರೆಗೂ ಆದ ಜಡ್ಡಿನ ದೆಸೆಯಿಂದ ಆದ ಔಷಧೋಪಚಾರದ ಖರ್ಚು ಮತ್ತು ಕಾಯದೇಶೀರವಾಗಿ ನನಗೆ ಮತ್ತು ಮಕ್ಕಳಿಗೆ ಬರತಕ್ಕ ವಾರಸಾ ಹಕ್ಕಿನ ಬಗ್ಗೆ ನಿನ್ನ ಮೇಲೆ ಫೋಟಗಿ ಮೊದಲು ಮಾಡಿಕೊಂಡು ಎಲ್ಲಾ ರೀತಿಯಿಂದ ಕೋರ್ಟಿನಲ್ಲಿ ಇಲಾಜ ಮಾಡುವೆನು ನೀನು ಈ ನೋಟೀಸಿನ ವಿರುದ್ಧ ಯಾವದೇತರದಿಂದ ಸ್ಥಾವರ ಜಂಗಮ ಆಸ್ತಿಯ ವಿಲೇವಾಟ ಮಾಡಿದರೆ ಅದು ಬೇಕಾಯದೆಶೀರವಾಗಿ ಅದನ್ನು ತಕ್ಕೊಂಡವರು ಲುಕಸಾನ ಹೊಂದುವರು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನಮ್ಮ ಸಂಬಂಧಿ ಕಾಯದೆ ಪ್ರಕಾರ ಎಲ್ಲಾ ರೀತಿಯಿಂದ ವ್ಯವಸ್ಥೆಮಾಡಿ, ಕಾಗಡ ಪತ್ರಗಳನ್ನು ನೊಂದಣಿ ಮಾಡಿಕೊಡದಿದ್ದರೆ ನಿನ್ನ ಮೇಲೆ ಕಾಯದೇಶೀರ ಇಲಾಜ ಮಾಡುವೆನು ಮತ್ತು ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲಿದೆ ತಿಳಿಯುವದು ತಾ|| ೧೯ ಸಪ್ಟಂಬರ ೧೯೩೦ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಗೌರವ್ವ ಕೋಂ ಗಡೆಪ್ಪಾ ಗಡೆಪ್ಪನವರ ಸಾಕೀನ ನವಲೂರ ಈಕಿ ಕೈದು ಇರುತ್ತದೆ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರೆ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ್ಸ,
ಮಾರ್ಕೆಟ ಧಾರವಾಡ.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು
ಬೆಲೆ ಮೂರು ಆಣೆ

ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲಿ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತವೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಅತ್ಕಿಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಳಾ ನಂಬರ ೧. ಗದಗ ಬೆಟಗೇರಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧! ಧಾರವಾಡ ಶನಿವಾರ ತಾರೀಖು ೨೦ನೇ ಸಪ್ಟಂಬರ ೧೯೩೦ (ಸಂಚಿಕೆ ೨೦೯

ಇದೋ ನೋಡಿ! ಕಾರಖಾನೆದಾರರೇ!! ತ್ವರೆ ಮಾಡಿ!!!

ಕರ್ನಾಟಕದಲ್ಲಿಯೇ ಮೊದಲನೆಯದು!

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ೧೯೩೦

ಧಾರವಾಡ

ಕರ್ನಾಟಕ ಕಾರಖಾನೆದಾರರಿಗೆ ಅಲಭ್ಯ ಲಾಭ-

ಬರುವ ಮಹಾನವಮಿಯ ನಾಡಹಬ್ಬದಲ್ಲಿ ಇಲ್ಲಿಯ ‘ದಿ ಕರ್ನಾಟಕ ಸ್ವದೇಶಿ ಬ್ಯೂರೊ’ ದವರು ಸ್ವದೇಶಿ ವಸ್ತುಗಳ ಪ್ರದರ್ಶನವೊಂದನ್ನು ಮಂಡಿಸಲಿರುವರು. ನಾಡಿನಲ್ಲೀಗ ನಡೆದಿರುವ ರಾಜಕೀಯ ಚಳವಳಿಯದೊಂದು ಅಂಗವಾದ ಸ್ವದೇಶಿ ವಸ್ತು ಪ್ರಚಾರ ಕಾರ್ಯಕ್ಕೆ ಸೌಕರ್ಯವನ್ನುಂಟುಮಾಡಲು ಈ ಪ್ರದರ್ಶನವು ಸುಂದರವಾದ ರಾಜಮಾರ್ಗ. ಇಲ್ಲಿ ಸ್ವದೇಶಿ ವಸ್ತುಗಳನ್ನು ತಯಾರಿಸುವ ಕಾರಖಾನೆದಾರರು ವಿಶೇಷವಾಗಿ

ಕರ್ನಾಟಕದ ಕಾರಖಾನೇದಾರರು

ಈ ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನು ಪ್ರದರ್ಶಿಸಬೇಕು. ಮತ್ತು ಶಕ್ಯವಿದ್ದಲ್ಲಿ ಸ್ವತಃ ಬಂದು ಮಾರಬೇಕು. ಪ್ರದರ್ಶನವು,

ಸಪ್ಟಂಬರ ೨೭ರಿಂದ ಅಕ್ಟೋಬರ ೨ರ ವರೆಗೆ ನೆರವೇರಿಸಲ್ಪಡುವುದು. ಈ ಬಗ್ಗೆ ಹೆಚ್ಚಿಗೆ ತಿಳಿಯಬಯಸುವವರು ಕಾರ್ಯದರ್ಶಿಗಳು ‘ದಿ ಕರ್ನಾಟಕ ಸ್ವದೇಶಿ ಬ್ಯೂರೊ’ ಧಾರವಾಡ ಇವರನ್ನು ವಿಚಾರಿಸಬೇಕು.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೇಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲಿಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫೀ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ ಐವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಷ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುಕ್ಕುರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೀ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಶುಕ್ಲ ವಿಕ್ರಮ ವರ್ಷದ ಭಾದ್ರಪದ ವದ್ಯ

ಜರ್ಮನಿಯಲ್ಲಿ ಮುಂಗೈ ಕಸುವಿನವರ ದೊರೆತನ

— (೧) —

ಹೋದವಾರದಲ್ಲಿ ಜರ್ಮನ ರಾಜ್ಯದ ಶುಂ ಆಲ್ಲಿಯ ಪಾರ್ಲಮೆಂಟಾದ ರಾಯಿಟ ಸ್ಟಾಗದ ಸಭೆಯ ಚುನಾವಣೆಯಾಯಿತು. ಹಿಂದಲ್ಲಿ ಎರಡ ೩೦ ಪಂಗಡಗಳುಂಟು. ಅರವತ್ತು ಸಾವಿ ಮತಗಳಿಗೆ ಒಬ್ಬನಂತೆ ಚುನಾವಣೆಯಾಗುವ ಅಂಕುಶವುಂಟು. ಈ ಪಕ್ಷಗಳು ೬೦೮ ಜನರನ್ನು ರಿಸಿದವು. ಸೋಶಿಯಾಲಿಸ್ಟ ಪಕ್ಷದ ೧೩೩ ಜನರನ್ನು ಹಿಡಿದು ಲ್ಯಾಂಡಬಾಂಕರೆಂಬ ಮೂವರ ನಕ ಮೆಂಬರರ ಚುನಾವಣೆಯಾಯಿತು. ಇವರಲ್ಲಿ ಪ್ರಬಲವಾದ ಎರಡು ಪಕ್ಷಗಳಾದವು. ಪ್ರಸ್ತುತದಲ್ಲಿ ಅಧಿಕಾರಾರೂಢರಾದವರು ಅಪೇಕ್ಷೆಗಿಂತ ಹೆಚ್ಚು ಯಶಸ್ವಿಯಾದರು. ಆದರೆ ಇವರಿಗೆ ಬೆಂಬಲವಾಗಿರುವ ಜಮೀನದಾರ ಪಕ್ಷದ ಧ್ವಂಸವಾಗಿ ಅವರ ವತಿಯಿಂದ ಮೂವರೇ ಆರಿಸಲ್ಪಟ್ಟದ್ದರಿಂದ, ರಾಜ್ಯಕರ್ತರಿಗೆ ಬಹುಮತವಾಗಲಿಲ್ಲ. ಅತಿಶಯ ಅಲ್ಪಸಂಖ್ಯಾಕರನ್ನು ಕೂಡಿಕೊಂಡು, ಸಂಯುಕ್ತ ಮಂಡಲವನ್ನುಂಟುಮಾಡಿಕೊಂಡರೆ- ರಾಜ್ಯಕಾರಭಾರ ನಡೆಸಲಿಕ್ಕಾಗುತ್ತದೆ. ಇವರಿಗೆ ಭಯಂಕರ ಪ್ರತಿಸ್ಪರ್ಧಿಯಾಗಿ ಸೋಸಿಯಾಲಿಸ್ಟ, ಫಾಸಿಸ್ಟ ಮತ್ತು ಬೊಲ್ಶೆವಿಕ ಪಂಥದವರು ಆರಿಸಲ್ಪಟ್ಟಿದ್ದಾರೆ. ಈ ಮೂವರು ಒಂದಾಗಿ, ಪ್ರಜಾಪ್ರಭುತ್ವದ ಬದಲಾಗಿ, ಇಟಲಿಯಂತೆ ಒಬ್ಬನ ತಂತ್ರದಂತೆ ದೊರೆತನ ನಡೆಸುವ ವಿಚಾರವಾಗಿದೆ. ಇಟಲಿಯಂತೆ ಇಲ್ಲೋರ್ವ ಮುಸ್ಸೋಲಿನಿಯೇ ಪ್ರಕಟನಾಗುವನು. ಇವರ ಕಯ್ಯಲ್ಲಿ ರಾಜ್ಯಕಾರ್ಯ ದೊರೆಯಬಾರದೆಂದೂ, ಹೊಸ ಪಾರ್ಲಮೆಂಟ ಕೂಡಿ, ತಮಗೆ ಬಹುಮತವಿಲ್ಲೆಂದು ಸಿದ್ಧವಾಗುವವರೆಗೆ ತಾವೇ ಸಕಲ ಸೂತ್ರಗಳನ್ನು ನಡಿಸಬೇಕೆಂದೂ ಗೊತ್ತುಮಾಡಿದ್ದಾರೆ. ಇವರ ವಿರೋಧಿಗಳಾದ ಫಾಸಿಸ್ಟರು ಪ್ರಧಾನರಾದರೆ-

೧ ಫ್ರೆಂಚರ ಪ್ರೀತಿ ಸಂಪಾದಿಸಿಕೊಂಡಿರಬೇಕೆಂಬ ಭಾವವನ್ನು ಬಿಡುವರು.

೨ ದೊಡ್ಡ ಸೈನ್ಯ ಕಟ್ಟುವರು.

೩ ಪೋಲಿಸ ಮತ್ತು ಸೈನ್ಯದಮೇಲೆ ಅಧಿಕಾರ ದೊರೆತ ಕೂಡಲೆ, ಡಿಕ್ಟೇಟರನನ್ನು ನೇಮಿಸುವರು

ಹೀಗಾದರೆ ಈಗಿನ ಪ್ರಜಾಸತ್ತಾತ್ಮಕ ಹೋಗಿ, ಬಲವಂತನದೇ ರಾಜ್ಯಕಾರಭಾರವಾಗುವದು. ಚುನಾವಣೆಯಲ್ಲಿ ಪುನಃ ಕೇಸರಶಾಹಿಯನ್ನು ಸ್ಥಾಪಿಸಬೇಕೆಂಬ ಪಕ್ಷವೂ ಎದ್ದಿತ್ತು. ಆದರೆ ಅದಕ್ಕೆ ಬಲಾಚಾರವೇ ಇರಲಿಲ್ಲ. ಜರ್ಮನಿಯಲ್ಲಿ ಈ ಚುನಾವಣೆಯು ಇಡೀ ವಿಲಾಯತಿಯ ಶಾಂತತೆಯನ್ನು ಭಂಗಪಡಿಸುವದೆಂಬೂ ಜನರು ತರ್ಕಿಸುತ್ತಿದ್ದಾರೆ.

ದೇವಸ್ಥಾನಗಳು ಯಾರವು ?

ಶಿರ್ಶಿಯ ಮಾಮಲೇದಾರರು ತಾಲೂಕಿನ ಗ್ರಾಮಸ್ಥರನ್ನುದ್ದೇಶಿಸಿ- ಮುಂದೆ ಕೊಟ್ಟಂತೆ ಒಂದು ಒಟ್ಟಪ್ಪಣೆ ತೆಗೆದಿದ್ದಾರೆ.

ದೇಶದಲ್ಲಿ ಅರಾಜಕತ್ವವನ್ನುಂಟುಮಾಡುವ ಸತ್ಯಾಗ್ರಹದ ಚಳವಳಿಯು ಈ ತಾಲೂಕಿನಲ್ಲಿ ಹಬ್ಬಿರುತ್ತದೆ. ಆ ಚಳವಳಿಯ ಜನರು ಹಳ್ಳಿಗಳಲ್ಲಿ ತಿರುಗಾಡಿ, ಜನರಿಗೆ ದುರುಪದೇಶ ಮಾಡುತ್ತಿರುವರು. ಸಾರ್ವಜನಿಕ ದೇವಸ್ಥಾನ ಅಥವಾ ಅದರ ಪರಿಸರದಲ್ಲಿ ಆ ಜನರು ಆಶ್ರಯ ತಕ್ಕೊಳ್ಳುವರು. ಅಥವಾ ಅಂಥಾ ದೇವಸ್ಥಾನದ ಮದತ್ತು ತಕ್ಕೊಳ್ಳುವರೆಂದು ತೋರುತ್ತದೆ. ಸರಕಾರದಿಂದ ಗ್ರ್ಯಾಂಟ, ಸಿಗತಕ್ಕಂಥ ಇಂಥ ದೇವಸ್ಥಾನಗಳಲ್ಲಿ ಆಶ್ರಯ ಕೊಡುವದೆಂದರೆ- ರಾಜನಿಷ್ಠೆಯ ವಿರುದ್ಧ ಕೆಲಸ ಮಾಡಿದಂತಾಗುವದು. ಯಾವದಾದರು ಸಾರ್ವಜನಿಕ ದೇವಸ್ಥಾನಗಳಲ್ಲಿ ಇಂಥ ಚಳವಳಿಯ ಜನರು ಆಶ್ರಯ ಕೊಡುವದೆಂದರೆ- ರಾಜನಿಷ್ಠೆಯ ವಿರುದ್ಧ ಕೆಲಸ ಮಾಡಿದಂತಾಗುತ್ತದೆ. ಯಾವದಾದರು ಸಾರ್ವಜನಿಕ ದೇವಸ್ಥಾನದಲ್ಲಿ ಇಂಥ ಚಳವಳಿಯ ಜನರು ಆಶ್ರಯ ತಕ್ಕೊಂಡದ್ದು ಅಥವಾ ತೆಗೆದುಕೊಳ್ಳುವದು ಇನ್ನು ಮುಂದೆ ನಜರಿಗೆ ಬಂದರೆ- ಕೂಡಲೆ ನಮಗೆ ರಿಪೋರ್ಟು ಮಾಡಬೇಕು. ಯಾರಾದರು ಆಶ್ರಯ ತಕೊಂಡರೆ- ನಿಮ್ಮ ಅನುಮತಿಯಿಂದ ಅಂಥಾ ಕೆಲಸ ನಡಿಯುತ್ತದೆಂದು ತಿಳಿದು ನಿಮ್ಮ ಬಗ್ಗೆ ಸಹ ಕೆಲಸ ನಡಿಸುವದರಲ್ಲಿ ಬರುವದು"

ಜಹಾಗೀರದಾರ, ವತನದಾರ, ಇನಾಮದಾರರಂತೆ ದೇವಸ್ಥಾನಗಳಲ್ಲ. ದೇವಸ್ಥಾನಗಳಿಗೆ ಕೊಡುವ ವರ್ಷಾಶನದಲ್ಲಿ ವತನದಾರರಂತೆ ಬ್ರಿಟಿಶ ಸರಕಾರಕ್ಕೆ ರಾಜನಿಷ್ಠೆಯವರಾಗಿರುತ್ತೇವೆಂಬ ಶರ್ತು ಇರುವದಿಲ್ಲ. ಇದು ನಿಷ್ಕಾಮವಾಗಿ ಕೊಡುವ ದಾನವು. ಸರಕಾರದಿಂದ ದೊರೆಯುವ ಗ್ರಾಂಟಿನಿಂದ ಯಾವ ದೇವಸ್ಥಾನದ ನಿತ್ಯ ನೈಮಿತ್ತಿಕ ಸೇವೆಗಳು ಪೂರಾ ನಡೆಯುವಂತಿರುವದಿಲ್ಲ. ಭಕ್ತರು ಕೊಡುವ ದ್ರವ್ಯವೇ ಬಹು ದೊಡ್ಡದಾಗುತ್ತದೆ. ಸರಕಾರದ ಭಾಗವು ಅತ್ಯಲ್ಪವಾಗಿರುತ್ತದೆ. ಮಾಮಲೇದಾರಸಾಹೇಬರು ಬೇಕಾದರೆ- ತಮ್ಮ ಗ್ರಾಂಟಿನ ಮಟ್ಟಿಗೆ ಕೆಲ ವೇಳೆ ಸ್ಥಳವನ್ನು ಆಳಿದರು, ಅಲ್ಲಿ ಸತ್ಯಾಗ್ರಹಿಗಳಿರಬಾರದೆಂದು ಹುಕುಮು ಮಾಡಬಹುದು. ದೇವಸ್ಥಾನಗಳು ಸಾರ್ವಜನಿಕವಾಗಿದ್ದು, ಅವುಗಳ ನೀತಿ ಮಾಡುವದಾರರಿಗಿಂತ ಹೆಚ್ಚು ಪ್ರಜರ ಹಕ್ಕು ಸ್ವಾತಂತ್ರ್ಯವಿರುತ್ತದೆ. ಕಾರಣ ಮಾಮಲೇದಾರರಾದಂಥವರು ಇದನ್ನು ಮೈಮೇಲೆ ಹಾಕಿಕೊಳ್ಳುವಂಥ ಇಲ್ಲದ ಉಸಾಬರಿ ಮಾಡದಿರುವದೇ ಲೇಸು.

ಜ್ಯೋತಿರ್ಮಾರ್ತಂಡರ ಭವಿಷ್ಯ.

ಹೊಸರಿತ್ತಿಯ ಜ್ಯೋ.ಮ.ರಾ.ರಾ. ಶಂಕರ ಶಾಸ್ತ್ರಿಯವರು ಆಗಾಗ್ಗೆ ರಾಜಕೀಯ ವಿಷಯಗಳನ್ನು ಕುರಿತು ಭವಿಷ್ಯಕಥನ ಮಾಡುತ್ತಿರುತ್ತಾರೆ. ಇವರು ಈಗೊಂದು ಭವಿಷ್ಯ ಹೇಳಿದ್ದಾರೆ ಅದೇನಂದರೆ-

"ಮಹಾತ್ಮರು ಅಕ್ಟೋಬರ ತಿಂಗಳ ೨೭ನೇ ತಾರೀಖಿನ ದಿವಸ ಬಿಡುಗಡೆ ಹೊಂದಿ ರಾವುಂಡ ಟೇಬಲಕ್ಕೆ ಹೋಗುವರೆಂದು ಭೃಗುಸಂಹಿತೆಯಿಂದ ಹೊರಡುತ್ತದೆ. ಇದು ಸ್ಪಷ್ಟವಾಗಿದ್ದು, ಆ ವಿಷಯವಾಗಿ ನನಗೆಷ್ಟು ಸಂಶಯವಿರುವದಿಲ್ಲ. ಅಕ್ಟೋಬರದ ದಿವಸ ಬುಧ-ಗುರು ಗ್ರಹಗಳು ಕೂಡಿ ಬರುವದರಿಂದ, ಮ. ಗಾಂಧಿ ಪ್ರಭೃತಿಗಳು ತುರಂಗದಿಂದ ಬಿಡುಗಡೆ ಹೊಂದಲಿಕ್ಕೇಬೇಕು. ಕೆಲ ಕಾಲ ಸರಕಾರದ ದಬ್ಬಾಳಿಕೆಯು ಕಸುವಿನಿಂದ ನಡೆಯುವದು. ಆದರೆ ತುರಂಗವಾಸಿಯಾದ ಪ್ರಮುಖರ ಬಿಡುಗಡೆಯು ಇದೇ ತಿಂಗಳ ಕೊನೆಯ ತಾರೀಖಿನಿಂದ ಪ್ರಾರಂಭವಾಗುವದು. ಇದೇ ತಿಂಗಳ ತಾ|| ೧೬ರಿಂದ ೨೭ ರಲ್ಲಿ ಮಹಾತ್ಮರ ಬಿಡುಗಡೆಯಾಗುವದೆಂದು ಭವಿಷ್ಯ ಹೇಳಿದ್ದೆನು. ಆದರೆ ಬುಧ ಮತ್ತು ಸಪ್ತರ್ಷಿಗಳ ಅಶುಭ ಯೋಗವನ್ನು ಲೆಕ್ಕಕ್ಕೆ ಹಿಡಿಯುವಾಗ ತುಸು ತಪ್ಪಿದ್ದರಿಂದ ಬಿಡುಗಡೆಯ ವೇಳೆಯಲ್ಲಿ ತುಸು ಬದಲಾಗುವದು ಶಕ್ಯವದೆ. ಸಪ್ರು-ಜಯಕರರ ಶಿಷ್ಟಾಯಿಯು ಪೂರಾ ಮುಗ್ಗಿತೆಂದು ತಿಳಿಯಲಾಗದು. ಇನ್ನಾದರೂ, ಅದನ್ನು ಕೊನೆಗಾಣಿಸಲು ಮುಂದೆ ಬರುವರು. ಅಕ್ಟೋಬರದ ಕೊನೆಯಲ್ಲಿ ಮ. ಗಾಂಧಿ ಮೊದಲಾದವರು ಬಿಡುಗಡೆ ಹೊಂದಿ, ರಾವುಂಡ-ಟೇಬಲಕ್ಕೆ ಹೋಗುವರು.

ಜ್ಯೋತಿರ್ಮಾರ್ತಂಡರ ಕಣ್ಣಿವೇಳವಿಕೆಯ ತಿಥಿ, ವಾರ ಮುಗಿದ ಬಳಿಕ, ಇವರು ಮಹಾಯುದ್ಧ ಕಾಲದಲ್ಲಿ ಹೇಳಿದ ಒಂದು ಮನೋರಂಜಕವಾದ ಭವಿಷ್ಯವನ್ನು ಬರೆಯುವೆವು.

ಕೌನ್ಸಿಲ್ ಚುನಾವಣಿ.

ಶ್ರೀ- ಜೋಗ, ಕಂಬಳಿಯವರ ಚುನಾವಣಿ.

ನಿನ್ನಿನ ದಿವಸ ಇಲ್ಲಿ ಮತಗಳ ಎಣಿಕೆಯಾಗಿ

ಶ್ರೀ. ಕಂಬಳಿ.	೭೬೧೩
ಶ್ರೀ. ಜೋಗ.	೧೧೫೧
ಶ್ರೀ ಕೇಸರ	೩೭೪

ಈ ಜಿಲ್ಹೆಯಲ್ಲಿ ವೋಟರರ ಸಂಖ್ಯೆ ೩೬೦೦೦ ಇದ್ದು ಅದರಲ್ಲಿ ವೋಟು ಕೊಟ್ಟವರು ೫೧೯೪. ವೋಟಿಗೆ ಹೋದರೂ ನಿರುಪಯೋಗಿಯಾದ ಮತಗಳ ಸಂಖ್ಯೆ ೧೨೩೬.

ಕೌನ್ಸಿಲದ ಪಟ್ಟಿಗಾರ ಮೆಂಬರನು

——(೦)——

ಆಸಾಮದ ಕೌನ್ಸಿಲಿಗಾಗಿ ಆರಿಸಲ್ಪಟ್ಟ ಮೆಂಬರನಾದ ಶ್ರೀ. ಚಿತೀಸನು ಮೊದಲನೆಯ ಸಾರೆ ಕೌನ್ಸಿಲಕ್ಕೆ ಹೋಗುವಾಗ ಸಾವಿರಾರು ಜನರು ಆತನನ್ನು ಕಳಿಸುವದಕ್ಕೆ ಸ್ಟೇಶನಕ್ಕೆ ಹೋಗಿದ್ದರು. ಈತನು ಆ ಪ್ರಾಂತದಲ್ಲಾದ ಪೋಲೀಸ ಅತ್ಯಾಚಾರಗಳ ಬಗ್ಗೆ ಹಲವು ಪ್ರಶ್ನೆಗಳನ್ನು ಮುಂದಾಗಿ ಸರಕಾರಕ್ಕೆ ಕಳಿಸಿದ್ದಾನೆ. ತೊಗಲು ಹದಮಾಡುವ ಶಿಕ್ಷಣ ಕೊಡಲು ಎರಡು ಸ್ಥಳಗಳಲ್ಲಿ ಶಾಲೆ ತೆಗೆಯುವಂತೆಯೂ ಕೌನ್ಸಿಲದಲ್ಲಿ ಠರಾವು ತರುವನು.

ಬೆಳಗಾಂವಿಯಲ್ಲಿ ಡಾಕ್ಟರ ಸವಣೂರವರ ದವಾಖಾನೆಯ ಹತ್ತರವೇ ಇದ್ದ ಒಂದು ಜೂಜುಗಾರರ ಅಡ್ಡೆಯನ್ನು ಪೋಲೀಸರು ಹಿಡಿದಿದ್ದಾರೆ. ಅಲ್ಲಿ ಇಸ್ಪೇಟಿನ ೭ ಸೆಟ್ಟುಗಳಿದ್ದವು. ಸನಿಯಕ್ಕೆ ಸಾವಿರದ ತನಕ ನಗದು ಮತ್ತು ಒಡವೆ ಸಿಕ್ಕವೆ. ಇವರಲ್ಲಿ ೧೧ ಜನರನ್ನು ಹಿಡಿದಿದ್ದಾರೆ.

ನಂದಗಡದ ಕಮಲಾಕಾಂತ ದಲಾಲರಿಗೆ ಮೆ. ಹಿರೇಮಠಸಾಹೇಬರು ಹನ್ನೊಂದು ತಿಂಗಳ ಸಶ್ರಮ ಶಿಕ್ಷೆ ವಿಧಿಸಿದ್ದಾರೆ.

ನಾಗಪೂರದಲ್ಲಿ ಡಾಕ್ಟರ ಮುಂಜೆಯವರು ೧೬ನೆಯ ತಾರೀಖಿನ ದಿವಸ ರಾತ್ರಿ, ಎಂಟರ ಸಮಯದಲ್ಲಿ ವ್ಯಾಖ್ಯಾನ ಕೊಡುತ್ತಿದ್ದಾಗ, ವಿದ್ಯುತ್ತಿನ ದೀಪ ಐದು ಮಿನಿಟಿನ ತನಕ ಆರಿಹೋಯಿತು. ಬತ್ತಿ ಹಚ್ಚಲೇ ಇಲ್ಲ. ಆದರೂ ಇವರು ವ್ಯಾಖ್ಯಾನ ನಿಲ್ಲಿಸಲಿಲ್ಲ. ಜನರು ಕದಲದೇ, ಗದ್ದಲಮಾಡದೆ, ಕೂತಲ್ಲೇ ಕೂತು, ಕತ್ತಲೆಯಲ್ಲಿಯೇ ಶಾಂತರೀತಿಯಿಂದ ವ್ಯಾಖ್ಯಾನ ಕೇಳಿದರು.

ಮುರಗೋಡದಲ್ಲಿ ಜಂಗಲ ಕಾಯದೆಭಂಗ.

ಅಪೂರ್ವೋತ್ಸಾಹ, ದಿನಾಲು ರಾಷ್ಟ್ರಧ್ವಜ ವಂದನ.

ನಾನು ಕಳೆದ ಶನಿವಾರ ತಾ|| ೧೩-೯-೩೦ ಕ್ಕೆ ಧಾರವಾಡದಿಂದ ಹೊರಟು ಸಾಯಂಕಾಲದ ೪ ಗಂಟೆಗೆ ಮುರಗೋಡಿಗೆ ಬಂದೆನು. ಈ ದಿನ ಅಂದರೆ ಬೆಳಗಾವ ಜಿಲ್ಹೆಯ ರಾಷ್ಟ್ರೀಯ ವಾರದ ೬ನೆಯ ದಿವಸವು. ಇಲ್ಲಿಗೆ ಬಂದಕೂಡಲೆ ಇಲ್ಲಿಯ ನಾಗರಿಕರು ತಾ|| ೭-೯-೩೦ಕ್ಕೆ ಮುರಗೋಡ ಗ್ರಾಮಪಂಚಾಯತಿಯ ಕಚೇರಿಯ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜವನ್ನು ಏರಿಸುವ ಕುರಿತು ನಿಶ್ಚಯಮಾಡಿದ ಸಂಗತಿಯು ತಿಳಿದುಬಂದಿತು. ಆ ಪ್ರಕಾರ ಸಾಯಂಕಾಲದ ೬ ಗಂಟೆಗೆ ಇಲ್ಲಿಯ ಗ್ರಾಮದೇವತೆಯ ಮಂದಿರದಲ್ಲಿ ಜಾಹೀರ ಸಭೆ ಕೂಡಿತು. ಸಭೆಗೆ ಸರಾಸರಿ ೫೦೦-೬೦೦ ಜನರು ಕೂಡಿದ್ದರು. ಅಲ್ಲಿ ರಾಷ್ಟ್ರಧ್ವಜ ಮತ್ತು ಅದರ ಮಹತ್ವ ಎಂಬ ವಿಷಯದ ಮೇಲೆ ಧಾರವಾಡದ ತರುಣ ಮುಂದಾಳಾದ ಮತ್ತು ಹಿ. ಸೇ. ದಲದ ಸಭಾಸದರಾದ ಶ್ರೀ. ದೇವಜೀ ಬಾಬು ಮುತಾಲಿಕ ದೇಸಾಯಿ ಇವರ ಪರಿಣಾಮಕಾರಕ ಭಾಷಣವಾಯಿತು. ಮರುದಿನ ಅಂದರೆ ತಾ|| ೧೪-೯-೩೦ಕ್ಕೆ ಇಲ್ಲಿಯ ಶಿಬಿರದಲ್ಲಿ ಧ್ವಜವಂದನ ಕಾರ್ಯವು ನಡೆಯಿತು. ಆ ಕಾಲಕ್ಕೆ ತರುಣರಲ್ಲಿ ಉತ್ಸಾಹವು ಹೆಚ್ಚಿತ್ತು. ಆದರೆ ಅದಕ್ಕೆ ತಕ್ಕ ಶಿಸ್ತು ಕಂಡುಬರಲಿಲ್ಲ. ಧ್ವಜವಂದನ ಪದ್ಧತಿಯಲ್ಲಿಯೂ ಕೆಲವು ತಪ್ಪುಗಳಿದ್ದವು. ಅವುಗಳನ್ನು ತಿದ್ದಿಕೊಳ್ಳಲು ಶ್ರೀ ದೇವಜೀಬಾಬುರವರು ಹೇಳಿದರು. ಮತ್ತು ತಿದ್ದಿದ ಪದ್ಧತಿಯ ಪ್ರಕಾರ ಶ್ರೀ ದೇವಜೀಬಾಬುರವರ ಅಧ್ಯಕ್ಷತೆಯ ಕೆಳಗೆ ಧ್ವಜವಂದನ ಕಾರ್ಯವು ನೆರವೇರಿತು. ಇಲ್ಲಿ ಪ್ರತಿದಿವಸ ೩-೪ ಸ್ಥಳಗಳಲ್ಲಿ ಧ್ವಜವಂದನ ಕಾರ್ಯವು ನಡೆಯುತ್ತದೆ. ಈ ಮೊದಲೇ ಗೊತ್ತುಪಡಿಸಿದ ಪ್ರಕಾರ ಮಧ್ಯಾನ್ಹದ ೩ ಗಂಟೆಗೆ ಇಲ್ಲಿಯ ಪಂಚಾಯತಿ ಕಚೇರಿಯಲ್ಲಿ ಮೆಂಬರರ ಕಮಿಟಿಯು ಕೂಡಿತು. ಆ ಕಮಿಟಿಯ ಸಭಾಸದರಾದ ಶ್ರೀ. ಜಾಲೀಕಟ್ಟಿ ಇವರು ರಾಷ್ಟ್ರಧ್ವಜವನ್ನು ಗ್ರಾಮಪಂಚಾಯತಿಯ ಕಟ್ಟಡದ ಮೇಲೆ ಏರಿಸುವ ಕುರಿತು ಗೊತ್ತುವಳಿಯನ್ನು ಕಮಿಟಿಯ ಮುಂದಿಟ್ಟರು. ಅದನ್ನು ಶ್ರೀ. ಧೋಂಡೋ ಎಲ್ಲೋ ಕುಲಕರ್ಣಿ ಇವರು ಸಮರ್ಥಿಸಿದರು. ತರುವಾಯ ಠರಾವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ಈ ನಂತರ ಸರಿಯಾಗಿ ೪ ಗಂಟೆಗೆ ಗ್ರಾಮಪಂಚಾಯತಿಯ ಸರಪಂಚರಾದ ಶ್ರೀ. ರಾಮರಾವ ಮುತಾಲಿಕದೇಸಾಯಿ ಇವರು, ಇಲ್ಲಿಯ ತಾ. ಕ. ಅಧ್ಯಕ್ಷರಾದ ಶ್ರೀ ಬಾಳಕೃಷ್ಣರಾವ ಕಾಮತ ಇವರನ್ನೊಡಗೊಂಡು, ಕಚೇರಿಯ ಕಟ್ಟಡದ ಮೇಲೆ, ನಾನಾವಾದ್ಯಗಳ ಸಪ್ಪಳಗಳಲ್ಲಿ ಮೂರುಬಣ್ಣದ ರಾಷ್ಟ್ರಗುಡಿಯನ್ನು ಹಚ್ಚಿದರು. ಈ ಸಮಯಕ್ಕೆ ನೆರೆ ಹಳ್ಳಿಗಳಿಂದ ೫-೬ ನೂರು ಜನರು ಈ ಮಂಗಲ ಕಾರ್ಯವನ್ನು ನೋಡಲು ಬಂದಿದ್ದರು. ಈ ತರುವಾಯ ಇಲ್ಲಿಯ ಗ್ರಾಮದೇವತೆಯ ಗುಡಿಯಲ್ಲಿ ಸಭೆ ನೆರೆಯಿತು. ಶ್ರೀ. [illegible] ಮುಲ್ಲಾ ಇವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಶ್ರೀ. ದೇವಜೀಬಾಬು ಮುತಾಲಿಕ ದೇಸಾಯಿಯವರು ಸದ್ಯದ ಸತ್ಯಾಗ್ರಹ ಯುದ್ಧ ಮತ್ತು ಜನರ ಕರ್ತವ್ಯವೆಂಬ ವಿಷಯದ ಮೇಲೆ ಪರಿಣಾಮಕಾರಕ ಭಾಷಣಮಾಡಿದರು.

ಸೋಮವಾರ ದಿವಸ ಇಲ್ಲಿಯ ವ್ಯಾಪಾರಿ ವರ್ಗದವರು ಶ್ರೀ ದೇವಜೀಬಾಬು ಮುತಾಲಿಕದೇಸಾಯಿ ಇವರ ಅಧ್ಯಕ್ಷತೆಯ ಕೆಳಗೆ ಧ್ವಜವಂದನವನ್ನು ಪ್ರಾರಂಭಿಸಿದರು. [illegible] ಇಲ್ಲಿಯ ಕೆಲವು ಸತ್ಯಾಗ್ರಹಿಗಳನ್ನು ಹಿಡಿಯುವರೆಂಬ ಸುದ್ದಿಯು ಊರಲ್ಲಿ ಹರಡಿತು. ಆದ್ದರಿಂದ ತರುಣರ ಉತ್ಸಾಹಕ್ಕೆ ಮೇರೆಯೇ ಇಲ್ಲದಾಯಿತು. ಊರಿನ ಜಂಗಲ ಕಾಯದೆ ಮುರಿಯುವದೆಂದು ಗೊತ್ತುಮಾಡಲ್ಪಟ್ಟಿತ್ತು. ಆ ಪ್ರಕಾರ ಶ್ರೀ. ಬಸವಣ್ಣೆಪ್ಪಾ ಮಲ್ಲೇಶಪ್ಪಾ ಕಾಡೀಗೌಡ್ರ ಇವರ ನೇತೃತ್ವದ ಕೆಳಗೆ ಶಿವಪ್ಪಾ ನಾಗಪ್ಪಾ ಮಂಗೋಜಿ, ಸಿದ್ದಯ್ಯಾ ಸಂಪಗಾವಿ, ಮಹಾದೇವಪ್ಪಾ ಹೆರೂರಶೆಟ್ಟಿ ಎಂಬ ಸತ್ಯಾಗ್ರಹಿಗಳು ಹೋಗಿ ಕಾದಿಟ್ಟ ಅಡವಿಯೊಳಗಿನ ಮರಗಳನ್ನು ಕಡಿದು ತಂದರು. ಈ ನಾಲ್ವರೂ ವೀರರನ್ನು ಪುರಜನರು ಹೂಮಾಲೆಗಳಿಂದಲೂ ಸುವಾಸಿನಿಯರು ಆರತಿಗಳಿಂದಲೂ ಸ್ವಾಗತಗೊಂಡು ಊರಲ್ಲಿ ಮೆರವಣಿಗೆಯಿಂದ ನಾನಾವಾದ್ಯಗಳೊಡನೆ ಕರೆದುಕೊಂಡು ಬಂದರು. ಪೇಟೆಯಲ್ಲಿ ಸಭೆಸೇರಿ ಕಾಯದೆಭಂಗಮಾಡಿ ತಂದ ಕಟ್ಟಿಗೆಯ ಹೊರೆಗಳ ಲಿಲಾವು ಮಾಡಲ್ಪಟ್ಟಿತು. ಅವುಗಳನ್ನು ಶ್ರೀ ಬಾಳಕೃಷ್ಣಪ್ಪಾ ಟಿಕಾರೆ, ಅಪ್ಪಯ್ಯಾ ಹಡಪದ, ವಿಷ್ಣುಶಾಸ್ತ್ರಿ ಜೋಶೀಕರ ಮತ್ತು ವೀರಭದ್ರಪ್ಪಾ ಪಟ್ಟಣಶೆಟ್ಟಿ ಎಂಬುವರು ಕೊಂಡುಕೊಂಡರು. ಶ್ರೀ ಧೊಂಡೋ ಯಲ್ಲೋ ಕುಲಕರ್ಣಿ ಇವರ ಸಮಯೋಚಿತ ಭಾಷಣವಾಗಿ ಸಭೆಯ ಕಾರ್ಯವು ಮುಗಿಯಿತು. ಇನ್ನು ಎಲ್ಲ

ತ್ರ್ಯ ಉತ್ಕ್ರಮದ ಅನುಕರಣವನ್ನು ಬೇರೆ ನೇತಾರರೂ ಮಾಡುವರೆಂದು ನೆರೆನಂಬಿದ್ದೇವೆ.

ಕಾಂಗ್ರೆಸಕ್ಕೆ ಗಡಂಗದ ಸ್ಥಳದ ದಾನ

ಇಲ್ಲೀ ಕಿತ್ತೂರಿನಲ್ಲಿ ಈ ವರೆಗೆ ಸಿಂದಿಗಡಂಗವಿದ್ದ ಸ್ಥಳವು ಶ್ರೀ. ಮುಕ್ತ್ಯಾರ ಸಾಹೇಬಪ್ಪನವರದು. ಗಡಂಗದ ಬಾಡಿಗೆಯ ಮುದ್ದತು ತೀರಿದ ಕೂಡಲೆ, ಇವರು ಆ ಸ್ಥಳವನ್ನು ಕಾಂಗ್ರೆಸ ಕೆಲಸಕ್ಕೆ ದಾನವಾಗಿ ಕೊಟ್ಟುಬಿಟ್ಟರು. ಶ್ರೀ. ಮುಕ್ತ್ಯಾರರವರು ಮೊದಲಿನಿಂದಲೂ ರಾಷ್ಟ್ರೀಯರಾಗಿದ್ದು, ಅವರು ಅಲ್ಲಿನ ಎಲ್ಲ ಸತ್ಕಾರ್ಯಗಳಿಗೂ ಮುಕ್ತಮುಷ್ಟಿ ಸಹಾಯ ಮಾಡತಕ್ಕವರಿದ್ದಾರೆ. ಇವರು ಕೊಟ್ಟ ದಾನವು ಅತ್ಯಂತ ಪ್ರಶಂಸನೀಯವಾಗಿದ್ದು, ಬೇರೆ ಊರವರೂ ಇವರನ್ನನುಸರಿಸುವಂತಿದೆ. ಶ್ರೀ. ಮುಕ್ತ್ಯಾರವರ ಸ್ಥಳ ಹೋದಕೂಡಲೆ ಗುತ್ತೇದಾರನು ಊರೊಳಗೆ ಸ್ಥಳ ಹುಡುಕಿದನು. ಯಾರೂ ಅನವು ಕೊಡದ್ದರಿಂದ ಮನೆಯಲ್ಲಿಯೇ ಸೇಂದಿಯ ಮಾರಾಟ ನಡೆಸಿದ್ದಾನೆ.

ಮುಂಬಯಿಯಲ್ಲಿ ಲೋಕಮಾನ್ಯರ ತೀರ ಅವಶ್ಯಕರಾಗಿದ್ದ ಬ್ಯಾರಿಸ್ಟರ ಬಾಪ್ಟಿಸ್ಟಾ ಸಾಹೇಬರು ಪರಲೋಕವಾಸಿಗಳಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಎತ್ತು ಜಕ್ಕಡಿ ಹೋಗಿವೆ

ಹುಡುಕಿ ಕೊಟ್ಟವರಿಗೆ ಇಪ್ಪತ್ತು ರೂಪಾಯಿ ಇನಾಮು.

ನಮ್ಮ ಮಾಲಕಿಯ ಒಂದು ಕಮಾನದ ಜಕ್ಕಡಿ, ಸಾಗವಾನಿ ಕಟ್ಟಿಗೆಯದು. ಗಾಲಿಯ ಗುಂಬಿಗೆ ಹಿತ್ತಾಳಿಯ ಕಂಗಣಿ ಕೂಡಿಸಿದ್ದು ಉದ್ದಗಿಯ ಮುಂದೆ ಹಿತ್ತಾಳಿಯ ದೊಡ್ಡ ಮೊಳೆ ಹಾಕಿದ್ದು, ಮತ್ತು ಎರಡು ಎತ್ತುಗಳು ಇವುಗಳ ಚಹರೆ ಪಟ್ಟಿ—

ಎರಡಕ್ಕು ಬಿಳಿಯವು ಸ್ವಲ್ಪ ಮಾಸಕು, ಕೋಡು ಡೊಂಕಾಗಿದ್ದು ತಲೆಗೆ ಕೂಡಲಿಕ್ಕೆ ಬಂದಿವೆ ಎರಡೂದರ ಎಡಗಡೆಯ ಒಂದೊಂದು ಕಿವಿಗೆ ತಾಂಬ್ರದ ಮುರುವು ಹಾಕಿದೆ. ಬಾಲ, ಕಿವಿ ಸಾಬೇತು ಅವೆ. ಮೈಸೂರ ತಿಪ್ಪೆಯ ಜಾತಿಯವು. ಆಜಮಾಸು ಜೋಡಿಯ ಕಿಮ್ಮತ್ತು ರೂಪಾಯಿ ಮುನ್ನೂರು. ಇವು ಶಿಕಾರಿಪೂರ ತಾಲೂಕ ಶಿರಾಳಕೊಪ್ಪದ ಹತ್ತರಿನ ಬೇಗಾಂವಲ್ಲಿ ಮಂಗಳವಾರ ತಾ|| ೧೬ ನೇ ದಿವಸ ರಾತ್ರಿಯಲ್ಲಿ ಮನೆಯಲ್ಲಿಯೇ ಕಟ್ಟಿದ್ದವೇ ಕಳವಾಗಿ ಹೋಗಿವೆ. ಇವನ್ನು ಹುಡುಕಿ ಕೊಟ್ಟವರಿಗೆ ಅಥವಾ ಇಂಥಲ್ಲೇ ಇರುತ್ತವೆಂದು ಖಾತ್ರಿ ಲಾಯಿಕ ಬಾತಮಿ ಕೊಟ್ಟವರಿಗೆ ಮೇಲ್ಕಾಣಿಸಿದಂತೆ ಇಪ್ಪತ್ತು ರೂಪಾಯಿ ಇನಾಮು ಕೊಡುವೆವು. ತಿಳಿಯುವದು.

ತಾ|| ೨೦-೯-೧೯೩೦

ಪತ್ತೆ— ಹಾನಗಲ್ಲ ಮಹಮದಗೌಸ. ಶಿರಾಳಕೊಪ್ಪ, ತಾಲೂಕ ಶಿಕಾರಿಪೂರ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹೊಳಿಯು ಬೀಳುವ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇಗನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದರಲ್ಲಿ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡು ರೂಪಾಯಿ, ಅಂಚೆವೆಚ್ಚ ಬೇರೆ. ಈ ರೂಪಾಯಿಗಳನ್ನು ಮನಿ ಆರ್ಡರಿನಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ ಜಾನಕೀಬಾಯಿ ದೀಕ್ಷಿತ
C/o ಯೂನ್ಯನ ಬ್ಯಾಂಕ ಧಾರವಾಡ

[illegible] ಔಷಧ [illegible] ನೋಡಿದ ಈ ಬೇಡಿಕೆಯನ್ನು [illegible]

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ—

ನಮ್ಮ ಕಟಗಿ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಜಿಡ್ಡಿ ವ ಕಿಸಂ ಸಾಟುಗಳು

ಸಾಗವಾನಿ ಯಾ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆಸಿ ಕೊಡುತ್ತೇನೆ.

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನು ಕೊಳ್ಳತಕ್ಕವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಸ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡ ಮಾಸ್ತರ
ಸ್ಕೂಲ ನಂಬರ ೧. ಗದಗ ಬೆಟಗೇರಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಒಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಒಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಎರಡು ಆಣೆ. ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಒಳಿಗೆ ಇಮ್ಮಡಿ ಚಾರ್ಜ. ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧   ಧಾರವಾಡ ರವಿವಾರ ತಾರೀಖು ೨೧ನೇ ಸಪ್ಟಂಬರ ೧೯೩೦   (ಸಂಖ್ಯೆ ೨೧೦

ಇದೋ ನೋಡಿ!   ಧಾರವಾಡದಲ್ಲಿ!!   ಸ್ವರಾಜ್ಯ!!!

ಕರ್ನಾಟಕದಲ್ಲಿಯೇ ಮೊದಲನೆಯದು!

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ೧೯೩೦

ಧಾರವಾಡ

ಕರ್ನಾಟಕ ಕಾರಖಾನೆದಾರರಿಗೆ ಅಲಭ್ಯ ಲಾಭ

ಬರುವ ಮಹಾನವಮಿಯ ಸಮಯದಲ್ಲಿ ಇಲ್ಲಿಯ "ದಿ ಕರ್ನಾಟಕ ಸ್ವದೇಶಿ ಬ್ಯೂರೋ"ದವರು ಸ್ವದೇಶಿ ವಸ್ತುಗಳ ಪ್ರದರ್ಶನವನ್ನು ನಡಿಸಲಿರುವರು. ನಾಡಿನಲ್ಲೀಗ ನಡೆದಿರುವ ರಾಜಕೀಯ ಚಳವಳಿಯಿಂದು [illegible] ಸ್ವದೇಶಿ ವಸ್ತು ಪ್ರಚಾರ ಕಾರ್ಯಕ್ಕೆ ಸೌಕರ್ಯವನ್ನುಂಟುಮಾಡಲು ಈ ಪ್ರದರ್ಶನವು ಸುಂದರವಾದ ಸಾಧನವಾಗಿದೆ. ಇಲ್ಲಿ ಸ್ವದೇಶಿ ವಸ್ತುಗಳನ್ನು ತಯಾರಿಸುವ ಕಾರಖಾನೆದಾರರು ವಿಶೇಷವಾಗಿ

ಕರ್ನಾಟಕದ ಕಾರಖಾನೆದಾರರು

ಈ ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನು ಪ್ರದರ್ಶಿಸಬೇಕು. ಮತ್ತು ಶಕ್ಯವಿದ್ದಲ್ಲಿ ಸ್ವತಃ ಬಂದು ಹೋಗಬೇಕು. ಪ್ರದರ್ಶನ,

ಸಪ್ಟಂಬರ ೨೯ನೇಯಿಂದ ಅಕ್ಟೋಬರ ೬ರ ವರೆಗೆ ನೆರವೇರಿಸಲ್ಪಡುವದು. ಈ ಬಗ್ಗೆ ಹೆಚ್ಚಿಗೆ ತಿಳಿಯಬಯಸುವವರು ಕಾರ್ಯದರ್ಶಿಗಳು "ದಿ ಕರ್ನಾಟಕ ಸ್ವದೇಶಿ ಬ್ಯೂರೋ" ಧಾರವಾಡ ಇವರನ್ನು ವಿಚಾರಿಸಬೇಕು.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ಹೇಳಿ ಕೊಡುತ್ತ ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲಿಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ೩೦ ಮೂವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕಿಟಿ ಕಳಿಸಬೇಕು.

ಆರ್. ಬಿ. ಎಂ. ಘೋಳಕರ
ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂತಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಠೇವು ಮತ್ತು ಬೇರೆ ವ್ಯವಹಾರಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಟರಾವ ಬಿ. ಜಹಾಗಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦.

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಇಂದಿನ ಚಿತ್ರ ನೋಡಿರಿ!
ಹಿಂದಿನ ಚಿತ್ರ ನೋಡಿರಿ!!

ಕಾಂಗ್ರೆಸದ ಅಪೂರ್ವ ವಿಜಯ

ಶುಕ್ರವಾರ ತಾ|| ೧೯ನೆಯ ದಿವಸ ಇಲ್ಲಿ ಕಲೆಕ್ಟರ ಕಚೇರಿಯಲ್ಲಿ ಕೌನ್ಸಿಲ ಚುನಾವಣೆ ಎಣಿಕೆಯಾಗಿ ಮುಂದೆ ಕೊಟ್ಟಂತೆ ಜಾಹೀರ ಮಾಡಲ್ಪಟ್ಟಿತು.

೧ ರಾ. ಬ. ಕಂಬಳಿ. ೨೩೧೪
೨ ರಾ. ರಾ. ಜೋಗ. ೧೫೫೧
೩ ಶ್ರೀ ರಾ. ಕೇಸರಿ. ೩೭೪

ಧಾರವಾಡ ಜಿಲ್ಲೆಯಲ್ಲಿ ಒಟ್ಟು ೩೬೦೦೦ ಮತದಾರರುಂಟು. ಇವರಲ್ಲಿ ಚಳವಳಿಯ ದೆಸೆಯಿಂದ ಸಾಕಿದ ಬಹಿಷ್ಕಾರದ ಮೂಲಕ ವೋಟು ಕೊಡಲಿಕ್ಕೆ ಬಂದವರ ಸಂಖ್ಯೆಯು ೫೧೯೭ ಆಯಿತು. ವೋಟು ಕೊಟ್ಟವರೆಲ್ಲರೂ ಸುಬುದ್ಧಿಯಿಂದ ಪೋಲಿಂಗ ಸ್ಟೇಶನಕ್ಕೆ ಹೋಗುವದಿಲ್ಲ. ಅವಾಂತರ ಕೆಲವರೆಂದರೆ, ತ್ರಾಸ, ಪ್ರೀತಿಗಳ ದೆಸೆಯಿಂದ ಹೋಗುತ್ತಾರೆ. ಇವರು ಅಲ್ಲಿ ಗುಪ್ತವಾಗಿ ವೋಟನ್ನು ರದ್ದು ಮಾಡಿ ಬರುವರು. ಈ ಪ್ರಕಾರ ಈ ಸಾರೆ ರದ್ದು ಮತ್ತು ನಿರುಪಯೋಗಿಯಾದಂಥ ವೋಟುಗಳು ೧೨೩೭ ಆಗುತ್ತವೆ. ೫೧೯೭ಕ್ಕೆ ೧೨೩೭ರು ರದ್ದಾಗುವದೆಂದರೆ- ನಾಲ್ಕರಲ್ಲಿ ಒಂದು ಕಟ್ಟಿಂತಾಯಿತು. ಜನರನ್ನು ಹಿಡಿಹಿಡಿದು ವೋಟು ಹಾಕಿಸುವೆನೆಂದು ತಮ್ಮ ದುಬ್ಬ ತಾವೇ ಚಪ್ಪರಿಸಿಕೊಂಡವರು ನೋಡಿ ಕೇಳಿ ಮಾಡುವಂತಾಯಿತು. ಇದು ಈ ವರ್ಷದ ಸಂಗತಿಯಾಯಿತು. ಹಿಂದಿನ ಚುನಾವಣೆಯ ಅಂಕಿಗಳನ್ನು ನೋಡುವಾ- ವೋಟು ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇಲ್ಲ. ೩೬೦೦೦ ವೇ ಉಂಟು. ಆಗಿನ ಸಂಖ್ಯೆಯು-

೧ ರಾ. ಬ. ಕಂಬಳಿ. ೧೩೪೪೪.
೨ ಶ್ರೀ. ರಾ. ಜೋಗ ೧೦೧೩೨.
೩ ಶ್ರೀ. ರಾ. ಹೊಸಮನಿ ೯೨೧೬.
೪ ಶ್ರೀ ರಾ. ಪಾಟೀಲ ೬೩೮೩.

೧೯೨೬ನೆಯ ಮೇಲಿನ ಚುನಾವಣೆಯಾದ ಕೂಡಲೆ- ಕಾಂಗ್ರೆಸ ಕಮಿಟಿಯವರೇ ಶ್ರೀ. ಜೋಗ ಮತ್ತು ರಾ. ಬ. ಕಂಬಳಿಯವರಿಗೆ ಹೂವಿನ ಮಾಲೆಹಾಕಿ, ಅವರನ್ನು ಸನ್ಮಾನಿಸಿ, ಕಾಂಗ್ರೆಸದ ಜಯಜಯಕಾರ ಮಾಡಿದರು. ವಾಸ್ತವಿಕವಾಗಿ ಕಾಂಗ್ರೆಸದವರು ಶ್ರೀ ಜೋಗರ ಅಭಿನಂದನವನ್ನಷ್ಟೇ ಮಾಡತಕ್ಕದ್ದಿತ್ತು. ರಾ. ಬ. ಕಂಬಳಿಯವರೂ ದೇಶಸೇವೆ ಮಾಡಲೆಂದು ಅವರನ್ನು ಗೌರವಿಸಿದರು. ಆದರೆ ಈ ನಾಲ್ಕು ವರ್ಷಗಳಲ್ಲಿ ಇವರು ಯಾವ ಕೆಲಸವನ್ನು ಮಾಡಲಿಲ್ಲವೆಂತ ರಾವಸಾಹೇಬ ಹಳಕಟ್ಟಿಯವರೇ ತಮ್ಮ ನವಕರ್ನಾಟಕದಲ್ಲಿ ಬರೆದಿರುತ್ತಾರೆ.

ಅದು-

> “ರಾ. ಬ. ಕಂಬಳಿಯವರು ಇಲ್ಲಿಯವರೆಗೆ ಸಂಕುಚಿತ ದೃಷ್ಟಿಯನ್ನು ಹೊಂದಿ ಕ್ಷುಲ್ಲಕವಾದ ಸ್ಥಾನಿಕ ವಿಷಯಗಳ ಕಡೆಗೆ ಮನಸ್ಸು ಹಾಕಿ, ತಮ್ಮ ಕಡೆಯಿಂದ ಮಹತ್ವದ ಕೆಲಸಗಳನ್ನು ಮಾಡದೆ ಇದ್ದದ್ದು ಬಹು ಅಸಮಾಧಾನಕರವಾದ ಸಂಗತಿಯಾಗಿದೆ”

ಎಂಬುದು ರಾ. ಬ. ಕಂಬಳಿಯವರಂತೆ ರಾವಸಾಹೇಬ ಹಳಕಟ್ಟಿಯವರೂ ಕೌನ್ಸಿಲ ಮೆಂಬರರಾದಂಥವರು. ಇವರು ರಾ. ಬ. ರವರಿಗೆ ಕೊಟ್ಟ ಸರ್ಟಿಫಿಕೇಟಿನಿಂದಲೇ, ರಾ. ಬ. ರವರು ಧಾರವಾಡ ಜಿಲ್ಲೆಯ ಜನತೆಯಲ್ಲಿ ಎಷ್ಟು ಅಪ್ರಿಯರಾಗಿರುತ್ತಾರೆಂಬುದು ಧ್ವನಿತವಾಗುತ್ತದೆ. ಆದುದರಿಂದ ಶುಕ್ರವಾರ ದಿವಸ ಚುನಾವಣೆಯ ಪರಿಣಾಮ ತಿಳಿದ ಕೂಡಲೆ- ಹಿಂದಿನ ಸಾರೆಯಂತೆ ಇವರ ಯಾರೂ ಹೂವಿನ ಮಾಲೆ ಹಾಕಿ, ಗೌರವಿಸಲಿಲ್ಲ. ಕೋರ್ಟಿನಲ್ಲಿ ಖುನಿ ನೋಡಿದವರು ಇಳಿಮೋರೆ ಮಾಡಿಕೊಂಡು ಹೋಗುವಂತೆ, ಹೊರಟುಹೋದರು. ಮೋರೆಯ ಮೇಲೆ ಚಿವುಟಿದರೂ ರಕ್ತದ ಹನಿಯು ಹೊರಡದಷ್ಟು ನಿಸ್ತೇಜವಾಗಿದ್ದರು; ಆದರೆ ನಿಶಾನೆಯು ಬಹುಮಾನವಾಗಲಿಲ್ಲೆಂದು ಒಂದು ರೀತಿಯಿಂದ ಸಂತೋಷ ಪಡುವಂತಾಯಿತು.

ರಾ. ಬ. ಕಂಬಳಿಯವರಾಗಲಿ, ಶ್ರೀ ಜೋಗರಾಗಲಿ, ಚುನಾವಣೆಯ ಗೊಂದಲದಲ್ಲಿ ಬೀಳಕೂದ್ದೇ ಇದ್ದಿಲ್ಲ. ಗಾಳಿಯು ಯಾವ ಕಡೆಗೆ ಬೀಸತೊಡಗಿದೆಯೆಂಬುದನ್ನು ನೋಡಿಯೂ ಅವಕ್ಕೆ ಕಿಂಚಿತ್ ನಾಚಿಕೆಯಾಗದು, ಕಣ್ಣುಗಳನ್ನು ಧೈರ್ಯದಿಂದ ಮುಚ್ಚಿಕೊಂಡು ಸಹರಾ ಅರಣ್ಯದಲ್ಲಿ ಪ್ರಯಾಣಿಕರು ರಾತ್ರಿಯಲ್ಲಿಯೇ ಪ್ರವಾಸ ಮಾಡುವರು. ಅದೇ ರೀತಿಗೆ ಇವರ ಕೌನ್ಸಿಲ ಚುನಾವಣೆಯು [illegible], ರಾತ್ರಿ ಮಧ್ಯದೋ ನಡೆದದ್ದು [illegible] ನಡೆದದ್ದರಿಂದಲೇ ಸಕಲರೂ ಅದನ್ನು [illegible] ನ ತಾಪ [illegible] ದೆಸೆಯಿಂದಯಿತು. ಅಂದರೆ ಕಾಂಗ್ರೆಸದ ಚಳವಳಿಯ ತಾಪ [illegible] ಗಿ ಊರಾರು ತಿರುಗಿದರು. [illegible], ಚುನಾವಣೆಯ ಸಂಕ್ರಾಂತಿ [illegible] ವರಿಗೆ [illegible]. ಆದರೂ [illegible] ದಿಕೊಂಡರು.

ಯಾವಾಗಲು ಶ್ರೀ ಜೋಗರಿಗೆ ದೊರೆಯುತ್ತಿದ್ದ ವೋಟುಗಳು ಕಾಂಗ್ರೆಸ ಪಕ್ಷದವರಿಂದ ಬಾಗಿ ರಾ. ಬ. ಕಂಬಳಿಯವರವು, ಬ್ರಾಹ್ಮಣೇತರರೆಂಬ ಸ್ನೇಹದಿಂದ ಹೆಚ್ಚು ದೊರೆಯುತ್ತಿದ್ದವು. ಈ ಸಾರೆಯ ಚುನಾವಣೆಯಲ್ಲಿ ಬ್ರಾಹ್ಮಣೇತರರೂ ಕಾಂಗ್ರೆಸ್ಸನ್ನು ಸೇರಿದ್ದರಿಂದ, ರಾ. ಬ. ರವರ ಗರ್ವಭಂಗವಾಯಿತು. ಚುನಾವಣೆಯಲ್ಲಿ ಇಷ್ಟು ಹಾನಿ ಸೋಸಿ, [illegible] ಹೋಗತಕ್ಕದ್ದೇ ಅಲ್ಲ. ಆರು ತಾಲೂಕ ಸಹ, ರಾ. ಬ. ರವರಿಗೆ ಹತ್ತು ಸಾವಿರ ಹೆಚ್ಚು ಬಿದ್ದವು. [illegible] ಕರ್ನಾಟಕ [illegible]. ತನ್ನ ಸನ್ನಿಧಿಯೇ ಹಾವೇರಿ [illegible] ರೀತಿ ಇರಬೇಕು? ಆರು ತಾಲೂಕಿಗೆ ಹತ್ತು ಸಾವಿರವಾದರೆ- ಉಳಿದ [illegible] ಮತ್ತು ತಾಲೂಕಿನಂತೆಯೇ ಇರುವ ಎರಡು [illegible] ಇನ್ನೂ ಹತ್ತು ಸಾವಿರ ವೋಟುಗಳು ಬೀಳಬೇಕಿದ್ದವು. ಅಂದರೆ ಇವರಿಗೆ ಇಪ್ಪತ್ತು ಸಾವಿರವಾಗಿ ಹಿಂದಿನ ಚುನಾವಣೆಗಿಂತ ನಾಲ್ಕು ಸಾವಿರ ಮತಗಳು ಹೆಚ್ಚಿಗೆ ಬೀಳಬೇಕಾಗಿತ್ತು. ಹಾಗೆ ಆಗದೆ ಅಧಃಪತನವೆನಿಸುವಂಥ ಹಿಂಬಡಿತವಾಯಿತು. ೩೬೦೦೦ ಮತದಾರರಲ್ಲಿ ಐದು ಸಾವಿರ ಜನರು ಮಾತ್ರ ವೋಟು ಕೊಡಲಿಕ್ಕೆ ಬರುವದೂ, ಅವರಲ್ಲಿ ೧೨೩೭ ಜನರು ವ್ಯರ್ಥ ವೋಟು ಕೊಡುವದೆಂದರೆ ಇವರನ್ನು ಲೋಕ ಮನ್ನಣೆಯು ಇಲ್ಲವೇ ಇಲ್ಲವೆಂದು ಹೇಳಬೇಕಾಗುವದಿಲ್ಲವೇ! ಈ ಪರಿಣಾಮದಿಂದ ಇವರು ಜಿಲ್ಲೆಯ ಪ್ರತಿನಿಧಿ ಎಂದು ಕೌನ್ಸಿಲಕ್ಕೆ, ಕರ್ನಾಟಕದ ಮುಖಂಡರೆಂದು ರಾಉಂಡ ಟೇಬಲಕ್ಕೂ ಹೋಗತಕ್ಕದ್ದೇ ಅಲ್ಲ. ನವಕರ್ನಾಟಕವು ಕೊನೆ ಸ್ಪಷ್ಟವಾಗಿ [illegible] ವು ಸೂಚಿಸುವಂತೆ ಇವರ ವರ್ತನವಾಗಿತ್ತೆ- ಕಾಂಗ್ರೆಸದ ವಿರುದ್ಧವಾಗಿ ಇವರಿಗೆ ಹೆಚ್ಚಿಗೆ ಮತಗಳ

ಬೀಳುತ್ತಿದ್ದವು. ಸ್ವಜನ ಮತ್ತು ಪರಜನ ಹಿತ ಮಾಡದ್ದರಿಂದ ಕಾಂಗ್ರೆಸದ ತಿರುಗಣಿ ಮಣವಿನಲ್ಲಿ ಸಿಕ್ಕು ಒದ್ದಾಡಬೇಕಾಯಿತು. ಇದರೊಳಗಿಂದೆದ್ದು ಪಾರಾಗಬೇಕಾದರೆ- ಅಂಥ ಮಹತ್ವದ ಕಾರ್ಯವನ್ನೇ ಮಾಡಬೇಕಾಗುತ್ತದೆ. ಅಂಥ ಯೋಗ್ಯತೆಯು ಇವರಲ್ಲುಂಟೋ ಎಂಬ ಪ್ರಬಲವಾದ ಸಂಶಯವುಂಟು.

ಶ್ರೀ ಜೋಗರಿಗೆ ೧೧೫೧ ವೋಟು ಬಿದ್ದದ್ದು ಸಹ ಹೆಚ್ಚೆನಿಸದು. ಯಾಕಂದರೆ- ನಾಲ್ಕು ಕಡೆಯಿಂದ ಇವರ ಮೇಲೆ ಕಾಂಗ್ರೆಸದ ಬಾಣಗಳು ಬಿಡಲ್ಪಟ್ಟಿದ್ದವು. ರಾ. ಬ. ಕಂಬಳಿಯವರಿಗೆ ವೋಟು ಕೂಡ ಹೋದವರಲ್ಲಿ ಅನೇಕರು ಇವರಿಗೆ ವೋಟು ಹಾಕಬೇಕೆಂದಿದ್ದದ್ದು ಎಣಿಕೆಯ ವೇಳೆಯಲ್ಲಿ ತೋರಿಬಂತು. ಹಿಂದಿನ ಚುನಾವಣೆಯಲ್ಲಿ ಇವರಿಗಾಗಿ ತೆಗೆದ ಜಾಹೀರ ಪತ್ರಿಕೆಯಲ್ಲಿ

೧ ಶ್ರೀ. ಜೋಗರಿಗೆ ವೋಟು ಕೊಟ್ಟು ಕಾಂಗ್ರೆಸದ ಧ್ಯೇಯವನ್ನು ಪೂರ್ಣಗೊಳಿಸಿರಿ.
೨ ಮಹಾತ್ಮರು ಕರ್ನಾಟಕಕ್ಕೆ ಕೊಟ್ಟ ಬಹಾದ್ದೂರ ಕರ್ನಾಟಕವೆಂಬ ಪದವಿಯನ್ನು ಸಾರ್ಥಗೊಳಿಸಿರಿ.
೩ ಸ್ವರಾಜ್ಯವು ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕು ಎಂದು ಲೋಕಮಾನ್ಯರು ಹೇಳಿದ ನುಡಿಯನ್ನು ನಿಜಮಾಡಿರಿ.
೪ ಇಂಥ ಜನ್ಮಸಿದ್ಧ ಹಕ್ಕು ಪ್ರಾಪ್ತವಾಗಬೇಕಾದರೆ- ಕಾಂಗ್ರೆಸದ ಉಮೇದವಾರರಿಗೇ ವೋಟು ಕೊಡಬೇಕು.
೫ ಅಂಥ ಉಮೇದವಾರರು ಶ್ರೀ. ಜೋಗರೊಬ್ಬರೇ ಆಗಿದ್ದಾರೆ.

ತಾವು ಕಾಂಗ್ರೆಸದವನೇ! ಕಾಂಗ್ರೆಸವೇ ತಮ್ಮ ದಿವ್ಯದೃಷ್ಟಿ ಎಂದು ಇಂದಿಗೂ ಶ್ರೀ ಜೋಗರು ಹೇಳುವರು. ಆದರೆ ಅದಕ್ಕೆ ತೀರ ವಿರುದ್ಧವಾಗಿ ನಡೆದದ್ದರಿಂದ, ಹತ್ತು ಸಾವಿರ ಮತಗಳು ಹೋಗಿ, ಒಂದು ಸಾವಿರ ಮತಗಳು ಬೀಳಬೇಕಾದರೆ- ಕುರಿ ಕೋಣ ಬಿದ್ದು ಹೋಯಿತು. ನಾಲ್ಕು ವರ್ಷಗಳ ಹಿಂದೆ ಶ್ರೀ. ಜೋಗರಿಗೆ ವೋಟು ಕೊಟ್ಟು, ಬಹಾದ್ದೂರ ಕರ್ನಾಟಕವೆನಿಸಿಕೊಂಡದ್ದರ ಬದಲು ಈ ಸಾರೆ ಅವರಿಗೆ ವೋಟು ಕೊಡದೆ ಬಹಾದ್ದೂರ ಕರ್ನಾಟಕವೆಂದೆನಿಸಿಕೊಂಡಿತು. ಇವರು ತಮ್ಮ ಅವಸ್ಥೆಯನ್ನು ಬುದ್ಧಿಲ್ಲದ ಮಂಥ ಮಾಡಿಕೊಂಡದ್ದು ಅತ್ಯಂತ ಶೋಚನೀಯವಾದ್ದೀತು. ಒನಿಕೆ ಬಗಿಯುವಂತೆ ರಾ. ಬ. ಕಂಬಳಿಯವರು ಕಾಂಗ್ರೆಸದ ದೀಕ್ಷೆ ತಕ್ಕೊಳ್ಳಲು ಅವಕಾಶವುಂಟು. ಆದರೆ ಶ್ರೀ. ಜೋಗರಿಗೆ ಮಾತ್ರ ಅಂಥ ಅವಕಾಶ ಉಳಿಯಲೇ ಇಲ್ಲ. ಇಂದು ಅವರು ಕಾಂಗ್ರೆಸದ ಪ[illegible]ಕೊಂಡಂತಾಯಿತು.

[illegible]ವರಾದ ಶ್ರೀ. ಕೇಸರಿಯವರ ಎಷ್ಟು ಸ್ತುತಿ ಮಾಡಿದರೂ ತೀರದು. ಅವರು ಆರಿಸಲ್ಪಡಬೇಕೆಂಬ ಆಶೆ ಮಾಡಿದ್ದಿಲ್ಲ. ಕದ್ದು ಮುಚ್ಚಿ ವೋಟು ಕೇಳಲಿಕ್ಕೂ ಹೋಗಲಿಲ್ಲ. ಕೇವಲ ಶಬ್ದಗಳಿಂದ ಹೊಗಳಿಸಿಕೊಳ್ಳಲೂ ಇಲ್ಲ. ಸಗಣಿಯ ರಾಡಿಯಿಂದ ಮೋಟಾರು ವಿದ್ರೂಪ ಹೊಂದಲಿಲ್ಲ. ಉಮೇದವಾರಿಗೆ ರಾಜೀನಾಮೆ ಕೊಟ್ಟಿದ್ದರೆ ಮೇಲಿನಿಸ್ಟರ ಹವನಾರು ಸಂಸ್ಕಾರಗಳನ್ನು ಪನ್ನೊಂದು ಲಕ್ಷ ಜನರು ನೋಡುವ ಅಪೂರ್ವ ಮತ್ತು ಅದ್ವಿತೀಯ ಸಮಯವೂ ಬರುತ್ತಿದ್ದಿಲ್ಲ. ಇವರಿಗೆ ಬಿದ್ದ ವೋಟುಗಳಿಂದ ಇವರ ಡಿಪಾಜಿಟ್ಟದ ೫೦೦ ರೂಪಾಯಿಗಳು ಮುಣುಗಿದವೆಂಬುದು ನಿಜ. ಆದರೊಂದು ಅಪಮಾನವೆಂದು ತಿಳಿಯುವಂಥ ಕಾಲವೇ ಇದಲ್ಲ. ಕಾಂಗ್ರೆಸ ತತ್ವವು ಈ ಜಿಲ್ಹೆಯಲ್ಲೆಷ್ಟು ಬೇರೂರಿದೆಂಬುದು ಇವರಿಂದಲೇ ಕರ್ನಾಟಕದ ತುಂಬ ಗೊತ್ತಾಗಲು ಕಾರಣವಾಯಿತು: ಕಾಂಗ್ರೆಸ ಕಾರ್ಯಕ್ಕಾಗಿ ಎಷ್ಟೋ ಜನರು ತುರಂಗ ಕಾಣುವರು. ದಂಡ ಕೊಡುವರು. ಬೇರೆ ರೀತಿಯಿಂದ ತಾಪತ್ರಯ ಅನುಭವಿಸುವರು. ಶ್ರೀ ಕೇಸರಿಯವರ ಡಿಪಾಜಿಟ್ಟು ಹೋದದ್ದನ್ನು ಮೇಲಿನ ಮೂರು ಕಾರಣಗಳಲ್ಲಿ ಯಾವದೊಂದರಾಗಿ ಭಾವಿಸಬಹುದು. ಚುನಾವಣೆಯಲ್ಲಿ ಯಾರಾದರೂ ನಿಜವಾಗಿ ಮಾನಾರ್ಹರಾಗಿದ್ದರೆ- ಅವರು ಶ್ರೀ. ಕೇಸರಿಯವರೇ ಆಗಿದ್ದಾರೆ. ಮತ್ತು ಇವರಿಂದಲೇ ಕಾಂಗ್ರೆಸಕ್ಕೆ ಜಯವೆಂದು ಸ್ಪಷ್ಟವಾಯಿತು.

ಮುಂಬಯಿಯ ಚುನಾವಣೆಯು.

—(೧)—

ಉಮೇದವಾರರ ಮಾನವು ಲಕ್ಷದ್ದಾಯಿತು.

——(೦)——

ಮುಂಬಯಿಯಲ್ಲಿ ಕೌನ್ಸಿಲ ಚುನಾವಣೆಗಾಗಿ ನಾಲ್ವರು ಉಮೇದವಾರರಾಗಿದ್ದರು. ನಗರಭವನದಲ್ಲಿ ಪೋಲಿಂಗ ನಡೆಯಿತು. ಪೋಲೀಸ ಕಮಿಶನರೂ ಕೈಕೆಳಗಿನ ದೊಡ್ಡ ದೊಡ್ಡ ಅಮಲದಾರರೂ ಬಂದೋಬಸ್ತಿಗಾಗಿ ನಿಂತಿದ್ದರು. ಸಶಸ್ತ್ರ, ಅಶಸ್ತ್ರ, ಬಿಳೀ ಬಟ್ಟೆಯ ಗುಪ್ತ ಹಾಗು ಸ್ವಾರರೂ ಬಂದೋಬಸ್ತಿಗಾಗಿ ಸಿದ್ಧರಾಗಿದ್ದರು.

ಕಾಂಗ್ರೆಸದ ಪಕ್ಷದಿಂದ ಸ್ವಯಂಸೇವಕರಲ್ಲದೆ, ಐನೂರು ಸ್ವಯಂಸೇವಿಕೆಯರೇ ಪಿಕೆಟಿಂಗ ಮಾಡಲು ಸಿದ್ಧರಾಗಿದ್ದರು. ಪೋಲಿಂಗ ಸುರುವಾದ ಕೂಡಲೆ- ಸಂತಿಗೆ ಇಪ್ಪತ್ತರಂತೆ ಇವರು ಪಾವಟಿಗೆಗಳ ಮೇಲೆ ಇಬ್ಬದಿಯಲ್ಲಿಯೂ ನಿಂತರು. ಪೋಲಿಸರು ಇವರನ್ನು ಹಿಡಿದರು. ಕೂಡಲೆ ೨೦ ಜನ ಸ್ವಯಂಸೇವಿಕೆಯರು ಅಲ್ಲಿ ಬಂದು, ಅವರ ಸ್ಥಳ ಹಿಡಿದು ನಿಂತರು. ಈ ಪ್ರಕಾರ ಹಿಡಿಯುವದೂ, ನಿಲ್ಲುವದೂ ನಡೆಯಿತು. ಮಧ್ಯ ಪೋಲಿಸರ ಲಾಠಿರಾಜ್ಯವೂ ನಡೆಯಿತು. ಈ ಸೋಜಿಗ ನೋಡಲು ಹತ್ತೆಂಟು ಸಾವಿರ ಜನ ಕೂಡಿತು. ವೋಟರರ ಸಂಖ್ಯೆಯು ಬರಬರುತ್ತಾ ಕಡಿಮೆಯಾಯಿತು. ಡಾ. ಕೃಷ್ಣ, ಖಾನ ಮೊದಲಾದವರೇ ವೋಟರರು. ವೋಟಿಗೆಂದು ಬಂದವರು ಮೋಜು ನೋಡುತ್ತ ನಿಂತರು. ಗುಜರಾತಿ ವೋಟರನೊಬ್ಬನೂ ಬರಲಿಲ್ಲ. ಗುಜರಾತಿ ಉಮೇದವಾರರಾದ ಶ್ರೀ. ಭಟ್ಟರು ಮುಂದಾಗುವ ತಮ್ಮ ಹಾನಿಯನ್ನು ಕಂಡುಕೊಂಡು ಉಮೇದವಾರಿಯನ್ನು ರಹಿತ ಮಾಡಿಕೊಂಡರು. ಕಡೆ ಉಳಿದ ಮೂವರು [illegible] ದರಾದರು. [illegible] ಪೋಲಿಂಗ ನಡೆದಿದ್ದರೆ- ಲೋಕಪ್ರೀತಿಯು ಎಷ್ಟು ಮತ್ತು ಎಂಬುದರ ಪರೀಕ್ಷೆಯಾಗುತ್ತಿತ್ತು. ಅದು ಮರಾಟಿಯಲ್ಲಿ ಹೇಳುವಂತೆ ಮುಚ್ಚಿದ ಮುಷ್ಟಿಯು ಒಂದೂಕಾಲು ಲಕ್ಷದ್ದಾಯಿತು. ಮೆಂಬರರಾದವರು

೧ ಸರ ವಸಂತರಾವ ದಾಬೋಳಕರ.
೨ ಡಾಕ್ಟರ ನರಿಮನ್ನ. (ಕಾಂಗ್ರೆಸ ಪಕ್ಷದವ ನ್ನರಲ್ಲ.
೩ ಮಿ. ಡಿಸೋಜಾ. (ಕ್ರಿಶ್ಚನ)

ಬಳ್ಳಾರಿಯ ಮಿ. ಶಿವರಾಯರು ಡಿಪಾಜಿಟ ಕಳಕೊಂಡರು

—(೦)—

ಬಳ್ಳಾರಿ ಜಿಲ್ಹೆಯಲ್ಲಿ ೩೮೫೭೯ ಮತದಾರರುಂಟು. ಇವರಲ್ಲಿ ಇಡೀ ಜಿಲ್ಹೆಯಲ್ಲಿ ೯ ಸಾವಿರ ಜನರು ವೋಟು ಕೊಡಲಿಕ್ಕೆ ಹೋದರು. ಬಳ್ಳಾರಿಯಲ್ಲಿ ಪಿಕೆಟಿಂಗವು ಯಶಸ್ವಿಯಾಯಿತು. ರಾ. ಬ. ಗೋಪಾಲಸ್ವಾಮಿ ಮೊದಲಿಯಾರ ಮತ್ತು ದಿವಾನ ಬಹಾದ್ದೂರ ರಂಗನಾಥ ಮೊದಲಿಯಾರರು ಆರಿಸಲ್ಪಟ್ಟರು. ಹೋದ ಸಾರೆ ಕಾಂಗ್ರೆಸದ ಟಿಕೀಟಿನ ಮೇಲೆ ನಿಂತು, ಯಶ ಹೊಂದಿದ್ದ ಶ್ರೀ ಶಿವರಾಯರು ಈ ಸಾರೆ ಕಾಂಗ್ರೆಸದ ವಿರುದ್ಧ ನಿಂತು ೪೭೦ ಮತಗಳನ್ನು ಮಾತ್ರ ಪಡೆದು, ಡಿಪಾಜಿಟ್ಟಿನ ೫೦೦ ರೂಪಾಯಿ ಕಳಕೊಂಡರು.

ಕಿತ್ತೂರಿನ ನೆಯ್ಕಾರರ ಸ್ತುತ್ಯ ಕೆಲಸ

ಕಿತ್ತೂರಲ್ಲಿ ನೆಯ್ಕಾರರ ದೊಡ್ಡ ವಸತಿಯುಂಟು. ಇವರು ತಮ್ಮವರದೇ ಒಂದು ಸಭೆ ಕರೆದರು. ಪಂಚಾಯತಿಯವರನ್ನು ಕರೆಯಲೇ ಇಲ್ಲ. ನೆಯ್ಕಾರರಾದವರೆಲ್ಲರು ರಾಟಿನ ನೆಯಲು ಮತ್ತು ದೇಶೀ ಮಗ್ಗದಿಂದಾದ ಕೊಣೆಮರಿವೆಯನ್ನೇ ತೊಡಬೇಕು. ಒಂದುವೇಳೆ ರಾಟಿಯ ನೂಲಿನ ಪೂರೈಕೆಯಾಗದಿದ್ದರೆ- ಕಾಂಗ್ರೆಸದವರು ಗೊತ್ತುಮಾಡಿದ ನೂಲನ್ನೇ ಕೊಳ್ಳಬೇಕೆಂದು ಠರಾವು ಮಾಡಿದ್ದಾರೆ. ಇವರ

ಇಷ್ಟೇ ಅಲ್ಲದೆ, ಲಾಯಬ್ರರಿಯಲ್ಲಿ ಮಲಮೂತ್ರ ವಿಸರ್ಜನೆ ಮಾಡಿ, ಒಂದು ಬೆಲೆಯುಳ್ಳ ಜಮಖಾನೆಯನ್ನು ಕದ್ದೊಯ್ದಿದ್ದಾರೆ.

ವಾನರ ಸೇನೆಯ ಮಹಿಮೆ.

ಹೊನ್ನಾವರದಲ್ಲಿ ತಾ|| ೧೫ ಕ್ಕೆ ಹಳೇ ಹೊನ್ನಾವರ, ಕರ್ಕಿ, ಹೆಬ್ಬನಕೇರಿ ಅಳ್ಳಂಕಿ ಮತ್ತು ಕಾಸರಕೊಡ ಈ ಊರುಗಳಲ್ಲಿ ಸಾಮುದಾಯಿಕ ಜಂಗಲ ಕಾಯದೆಭಂಗವಾಯಿತು. ಹೊನ್ನಾವರದ ಕನ್ನಡ ಶಾಲೆಯ ವಾನರರು ತಮ್ಮ ಶಾಲೆಯ ಮುಂದೆ ರಾಷ್ಟ್ರಧ್ವಜವನ್ನು ಏರಿಸಿದರು. ಸಾಯಂಕಾಲ ಮಾಮಲೇದಾರಸಾಹೇಬರು ಅದನ್ನು ಕಿತ್ತೊಗೆಯಲಿಕ್ಕೆ ಬಂದರು; ಆದರೆ ವಾನರರೆಲ್ಲರೂ, ದೊಡ್ಡ ಮಳೆ ಬೀಳುತ್ತಿದ್ದರೂ, ರಾಷ್ಟ್ರಧ್ವಜಕ್ಕೆ ತೆಕ್ಕೆ ಹಾಕಿಕೊಂಡ ಅದಕ್ಕೆ ಕೈ ಹಚ್ಚಗೊಡಲಿಲ್ಲ. ಈ ವಾನರರ ಪರಾಕ್ರಮವನ್ನೂ ಸತ್ಯಾಗ್ರಹದ ಶಕ್ತಿಯನ್ನೂ ಯಾರು ತಾನೇ ಹೊಗಳದಿರರು? ಸತ್ಯಾಗ್ರಹಕ್ಕೆ ಎಂದಾದರೂ ಅಪಜಯ ಉಂಟೇ? ಎಂದೂ ಇಲ್ಲ.

ದಸ್ತಗಿರಿ-

ಶ್ರೀ. ಅಶ್ವತ್ಥನಾರಾಯಣರು ಇವರ ಕೂಡ ನಾಲ್ವರನ್ನು ಯಲ್ಲಾಪೂರ ಮತ್ತು ಶ್ರೀ. ಅನಂತಭಟ್ಟ ಕುಂದಾಪೂರ ಮತ್ತು ಶ್ರೀ. ಜಾವಳಿ ಬಾಳಕೃಷ್ಣಭಟ್ಟರನ್ನು ಹಾನಗಲ್ಲಿನಲ್ಲಿ ಹಿಡಿದಿದ್ದಾರೆ.

ವರ್ತಮಾನಸಾರ

ಮದ್ರಾಸದಲ್ಲಿರುವ ಬಕಿಂಗಹ್ಯಾಮ್, ಕರ್ನಾಟಕ ಮತ್ತು ಬೆಂಗಳೂರ ಗಿರಣಿಗಳಿಗೆ ಕಾಂಗ್ರೆಸದವರು ಸ್ವದೇಶಿ ಎಂದಿರುವದಿಲ್ಲ. ಇವಕ್ಕೆ ಸ್ವದೇಶಿ ಎಂಬದಾಗಿ ಕಾಂಗ್ರೆಸದವರು ಹೇಳುವ ತನಕ ಇವುಗಳಲ್ಲಾಗುವ ಅರವೆಯನ್ನು ಕೊಳ್ಳಬಾರದೆಂದು ಮದ್ರಾಸದ ಜವಳೀ ವ್ಯಾಪಾರಸ್ಥರು ಠರಾವು ಮಾಡಿ, ಆ ಪ್ರಕಾರ ಆ ಗಿರಣಿಗಳ ಮೆನೇಜರರಿಗೆ ತಿಳಿಸಿದ್ದಾರೆ.

ಕಲಕತ್ತೆಯಲ್ಲಿ ಬಾಂಬಿನ ಖಟ್ಲೆಯಲ್ಲಿ ಒಬ್ಬ ಫ್ರೆಂಚ ಮನುಷ್ಯನ ಸಾಕ್ಷಿಯಾಯಿತು. ಹತ್ತರವೇ ಚಂದ್ರನಗರವಿದ್ದರೂ, ಅಲ್ಲಿಂದ ದುಭಾಷಿಯನ್ನು ತರಲಿಲ್ಲ. ಆತನ ಸಾಕ್ಷಿಯನ್ನು ಕೇವಲ ಕೈಸನ್ನೆ ಬಾಯಿಸನ್ನೆಯಿಂದ ತಕ್ಕೊಂಡರು.

ರಾವುಂಡಟೇಬಲಕ್ಕೆ ಸಹಾಯ ಮಾಡಲು ಸರ ಸಾಯಮನ್ನಸಾಹೇಬರು ಹೋಗುವರು. ಅವರಂತೆ ಸರ ಶಂಕರನಾಯರೂ ಹೋಗುವರು. ಇವರು ಈಗ ಲಾರ್ಡ ಅಯರ್ವಿನಸಾಹೇಬರ ಕೂಡ ಮಾತಾಡಲು ಸಿಮಲಾಕ್ಕೆ ಹೋಗಿದ್ದಾರೆ.

ಅನೇಕ ಔಷಧಿಗಳನ್ನು ಸೇವಿಸಿ
ಬೇಸರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಬಿಳಿಯ ಸೆರಗು ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದು ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ಪ್ರತ್ಯಕ್ಷ ಅನುಭವ ಪಡೆಯಿರಿ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಯನ್ನು ಮನಿಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ
C/o ಸುಧ್ಯಬ್ಯಾಂಕ ಧಾರವಾಡ

ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತ [illegible] ಯನ್ನು ನಮೂದಿಸುವದನ್ನು [illegible].

ಮುಂಬಯಿ ಯುದ್ಧಮಂಡಲದ ಅಧ್ಯಕ್ಷರಾದ ಶ್ರೀ. ಸೌ|| ಕಾಮದಾರ ರವಾಬಾಯಿಯವರನ್ನು ೧೮೮ ಮತ್ತು ೧೪೪ ಕಲಮು ಪ್ರಕಾರ ಹಿಡಿದರು.

ಕಲಕತ್ತೆಯಲ್ಲಿ ಪೋಲೀಸ ಕಮಿಶನರ ಸರ ಚಾರ್ಲ್ಸ ಟಾಗಾರ್ಟಸಾಹೇಬರ ಮೇಲೆ ಬಾಂಬು ಚಲ್ಲಿದ ದಿನೇಶಚಂದ್ರ ಮುಜುಮದಾರನಿಗೆ ಆಜನ್ಮ ಕರೇನೀರಿನ ಶಿಕ್ಷೆಯಾಯಿತು.

ಪಂಡಿತ ಮೋತಿಲಾಲರ ಅಳಿಯಂದಿರಿಗಾದ ಐನೂರು ರೂಪಾಯಿ ದಂಡ ವಸೂಲಿಗಾಗಿ, ಪೋಲೀಸರು ಅವರ ಮೋಟಾರನ್ನು ಜಪ್ತ ಮಾಡಿದ್ದಾರೆ.

ಧಾರವಾಡ-

ಮುಂಡರಗಿಯ ಮಹಾಲಕರಿಯಾದ ಶ್ರೀ. ರಾಮಾಚಾರ್ಯ ಗುತ್ತಲ ಇವರಿಗೆ ರತ್ನಾಗಿರಿಯ ಮಾಮಲತಿಗೆ ವರ್ಗವಾಗಿದೆ.

ಘಟಸ್ಥಾಪನೆಯ ರಜೆ-

ನಾಳೆ ನವರಾತ್ರಿ, ಘಟಸ್ಥಾಪನೆಯ ದಿವಸ ಸಾರ್ವಜನಿಕ ರಜೆ ಇರುವದರಿಂದ ವಿಜಯ ಮುದ್ರಾಕ್ಷರಶಾಲೆಗೂ ರಜೆ ಇರುವದು. ಆದುದರಿಂದ ಬುಧವಾರದ ನಿಕ್ಕಿದ ವಿಜಯವು ಪ್ರಕಟಿಸಲ್ಪಡಲಾರದು.

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಶಿಸಂ ನಾಟುಗಳು

ಸಾಗವಾನಿ ಯಾ ವ ಸಾಗವಾನಿ (೭) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ತಿಳಿಂಗು ತೈಯಾರಿ ಸಿಗುತ್ತವೆ

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಶಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಂ. B 1448

ನಿತ್ಯ ಪತ್ರ

ವಿಜಯ

ಟೆಲಿ ಅರ್ಫಲಿಕ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ನೇ ಧಾರವಾಡ ಸೋಮವಾರ ತಾರೀಖು ೨೨ನೇ ಸಪ್ಟಂಬರ ೧೯೩೦ (ಸಂಚಿಕೆ ೨೧೧

ದೋ ನೋಡಿ! ಕಾರಖಾನೆದಾರರೇ!! ತ್ವರೆ ಮಾಡಿ!!!

ಕರ್ನಾಟಕದಲ್ಲಿಯೇ ಮೊದಲನೆಯದು!

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ೧೯೩೦

ಧಾರವಾಡ

ಕರ್ನಾಟಕ ಕಾರಖಾನೆದಾರರಿಗೆ ಅಲಭ್ಯ ಲಾಭ

ಬರುವ ನವರಾತ್ರಿಯ ಸಮಯದಲ್ಲಿ ಇಲ್ಲಿಯ ‹ದಿ ಕರ್ನಾಟಕ ಸ್ವದೇಶಿ ಬ್ಯೂರೊ›ದವರು ಸ್ವದೇಶಿ ವಸ್ತುಗಳ ಪ್ರದರ್ಶನವೊಂದನು ಮಾಂಡಿಸಲಿರುವರು. ನಾಡಿನಲ್ಲೀಗ ನಡೆಯುವ ರಾಜಕೀಯ ಚಳವಳಿಗೊಂದು ಅಂಗವಾದ ಸ್ವದೇಶಿ ವಸ್ತು ಪ್ರಚಾರ ಕಾರ್ಯಕ್ಕೆ ಸೌಕರ್ಯವನ್ನುಂಟುಮಾಡುವ ಈ ಪ್ರದರ್ಶನವು ಸುಂದರವಾದ ರಾಜಮಾರ್ಗ. ಇಲ್ಲಿ ಸ್ವದೇಶಿ ವಸ್ತುಗಳನ್ನು ತಯಾರಿಸುವ ಕಾರಖಾನೆದಾರರು ವಿಶೇಷವಾಗಿ

ಕರ್ನಾಟಕದ ಕಾರಖಾನೆದಾರರು

ಈ ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನು ಪ್ರದರ್ಶಿಸಬೇಕು. ಮತ್ತು ಶಕ್ಯವಿದ್ದಲ್ಲಿ ಸ್ವತಃ ಬಂದು ಮಾರಬೇಕು. ಪ್ರವೇಶ ಸವ,

ಸಪ್ಟಂಬರ ೨೯ರಿಂದ ಅಕ್ಟೋಬರ ೨೮ ವರೆಗೆ ನೆರವೇರಿಸಲ್ಪಡುವದು. ಈ ಬಗ್ಗೆ ಹೆಚ್ಚಿಗೆ ತಿಳಿಯಬಯಸುವವರು ಕಾರ್ಯದರ್ಶಿಗಳು ‹ದಿ ಕರ್ನಾಟಕ ಸ್ವದೇಶಿ ಬ್ಯೂರೊ› ಧಾರವಾಡ ಇವರನ್ನು ವಿಚಾರಿಸಬೇಕು.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೫೫ ಐವತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳು ಕನಿಷ್ಠ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫರ್ಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ
ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರೆಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲಿಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯೀಮ ಮತ್ತು ಬೇರೆ ತರಹ ಡಿಪಾಜಿಟಗಳಿಗೆ ಬಹಳ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಿಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವತ್ತಿ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೮-೦
೩ ,,	೪-೨-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿ ಕೊಳ್ಳಿರಿ.

ಮ್ಯಾ. ವಿಜಯ ಧಾರವಾ

ವಿಜಯ.

ಶುಕ್ಲ ವಿಕ್ರಮ ವರ್ಷ೧೮೫೨ ಭಾದ್ರಪದ ವದ್ಯ೩೦

ಶ್ರೀ. ಭಟ್ಟರ ಅಪೂರ್ವ ಸ್ವಾರ್ಥತ್ಯಾಗ.

ಹಿಡಿಯುವದನ್ನೂ ಹೊಡೆದು ಹಿಂಸಿಸುವದನ್ನೂ ನೋಡಲಾರದೆ ರಾಜೀನಾಮೆ ಕೊಟ್ಟರು.

ಮುಂಬಯಿಯಲ್ಲಿ ಕೌನ್ಸಿಲ ಚುನಾವಣೆಯ ಲ್ಲು ಜನ ಉಮೇದವಾರರಲ್ಲಿ ರಾಜೀನಾಮೆ ಕೊ ಂಥವರಾದ ಶ್ರೀ. ರಾಮಚಂದ್ರಭಟ್ಟರು ತಮ ಕೆ. ರಾಜೀನಾಮೆ ಕೊಡಬೇಕಾಯಿತೆಂಬ ಸಂಗತಿ ನ್ನು ಜಾಹೀರ ಮಾಡಿದ್ದಾರೆ. ಚುನಾವಣೆಯ ಗೆರಭವನದ ಮುಂದೆ ನಡೆದ ಪಿಕೆಟಿಂಗವು ಯಶಸ್ವಿಯಾಯಿತೆಂದು ಕಂಡ ಕೂಡಲೆ ಪೋಲೀಸರು ಸ್ವಯಂಸೇವಿಕೆಯರನ್ನು ಹಿಡಿಯಲಾರಂಭಿಸಿದರು. ಆ ಇವರು ಮಾಡಿದಂಥ ಸಿದ್ಧತೆಯು ದೊಡ್ಡ ಕಾಳಗ ಲ್ಲಿ ಕೂಡ ಇರಲಿಕ್ಕಿಲ್ಲ. ಮುನ್ನೂರು ಸಿಪಾಯಿ ೕ ಇದ್ದರು. ಇವರ ಹೊರ್ತು ಜನರ ಮೇಲೆ ೕಕಾದ ಹಾಗೆ ಕುದುರೆ ಹಾಯಿಸಿ, ಅವರನ್ನು ದಿಕ್ಕುಪಾಲು ಮಾಡುವ ಸ್ವಾರರು ಬೇರೆ. ಸಾರ್ಜಂಟ, ಸುಪರಿಂಟೆಂಡಂಟರು ಬೇರೆ. ಸ್ವತಃ ಕಮೀಶನರರಾದ ಮಿ. ಹೀಲೀಸಾಹೇಬರೂ ಮೂರ್ತಿಮಂತರಾಗಿದ್ದರು. ಅಂದಿನ ಪಿಕೆಟಿಂಗದ ಸರ್ವ ಭಾರವನ್ನು ಹೆಣ್ಣು ಮಕ್ಕಳೇ ವಹಿಸಿ, ಅದರ ಯಶಾಂಶ ಕೂಡ ಸ್ವಯಂಸೇವಕರಿಗೆ ದೊರೆಯದಂತೆ ಮಾಡಿದ್ದರು. ಪೋಲೀಸರು ಹಿಡಿದು ಹಾಕಿದ ಸ್ವಯಂಸೇವಿಕೆಯರ ಸಂಖ್ಯೆಯು [illegible] ಆಯಿತು. ಇದಂತಿರಲಿ; ಜನರನ್ನು ಹೊಡೆಯುವದಂತೂ ಮಿತಿಮೀರಿತು. ಇನ್ನೂರಕ್ಕಿಂತ ಹೆಚ್ಚು ಜನರು ಹೊಡಿಸಿಕೊಂಡರು. ಅನೇಕರ ಗೂಢದ್ವಾರ ಪೆಟ್ಟು ಗುಪ್ತಸ್ಥಾನದಲ್ಲಿ ಹೊಡೆದಿದ್ದಾರೆ. ಈ ಹೊಡತದಿಂದ ಕೆಲವರು ಎಚ್ಚರತಪ್ಪಿದ್ದಾರೆ. ತಲೆಯೊಡಕೊಂಡು [illegible] ಸ್ರಾವಿಸಿಕೊಂಡವರೂ ಲೆಕ್ಕವಿಲ್ಲ. [illegible] ಇವರು ಉಮೇದವಾರಿಗೆ ರಾಜೀನಾಮೆ ಕೊಟ್ಟರು. ಚುನಾವಣೆಯಲ್ಲಿ ಪೋಲಿಸ ಅತ್ಯಾಚಾರಗಳೆಷ್ಟೋ ನಡೆದಿವೆ. ಚುನಾವಣೆಯ ಪೂರ್ವದಲ್ಲಿ ನಡೆದ ಅತ್ಯಾಚಾರಗಳಂತೂ ಅಗಣಿತವಾಗಿವೆ. ಇವುಗಳ ನಿಷೇಧವೆಂದು ಮೆಂಬರರು ರಾಜೀನಾಮೆ ಕೊಡಬೇಕಾಗಿತ್ತು. ಇದರಂತೆ ಸೊಲ್ಲಾಪುರದ ದಬ್ಬಿಗೆಯ ಬಗ್ಗೆ ವಿಚಾರ ಮಾಡಬೇಕೆಂದು ಕೌನ್ಸಿಲದಲ್ಲಿ ತಂದ ಸೂಚನೆಯು ನಾಪಾಸಾದ ಕೂಡಲೆ, ಎಲ್ಲ ಮೆಂಬರರು ಇವರಲ್ಲಿ ವಿಶೇಷವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಮೆಂಬರರು ರಾಜೀನಾಮೆ ಕೊಡಬೇಕಾಗಿತ್ತು. ಹಾಗೆ ಮಾಡದೆ, ಪುನಃ ಕೌನ್ಸಿಲದಲ್ಲಿ ನಂಬಿಕೊಂಡು ನಡೆಯುವವರಿಂದಲೇ, ದಬ್ಬಾಳಿಕೆ ಮತ್ತು ಅದರ ಕೂಡ ಪ್ರಜಾಪೀಡೆಯು ಅನಿಯಂತ್ರಿತವಾಗಿ ನಡೆಯಲು ಅವಕಾಶವಾಗಿರುತ್ತದೆ.

ಮೊದಲು ರಾಜಕೀಯ ಸುಸ್ಥಿತಿ
ಬಳಿಕ ವ್ಯಾಪಾರ

—o*o—

ಮುಂಬಯಿಯಲ್ಲಿ ವಿಲಾಯತಿಯ ಜವಳಿ ಮಾತ್ರವಲ್ಲ. ಯುರೋಪಿಯನ್ನರಿಂದ ನಡೆಸಲ್ಪಡುವ ಗಿರಣಿಗಳ ಬಾಗಿಲಿಗೆ ಬೀಗ ಬಿದ್ದಿದೆ. ಗಿರಣಿಗಳು ಬಂದಾದ್ದರಿಂದ ೫೦,೦೦೦ ಕೂಲಿಕಾರರು ನಿರುದ್ಯೋಗಿಯಾಗಿದ್ದಾರೆ. ಅಗದೀ ಹೊಟ್ಟೆಗಿಲ್ಲದವರಿಗೆ ಕಾಂಗ್ರೆಸ ಕಮಿಟಿಯವರು ಜೋಳ ಕೊಡುತ್ತಿದ್ದಾರೆ. ಆಳರಸರು ಮಾತ್ರ ಅವರ ಹೊಟ್ಟೆ ನೆತ್ತಿ ನೋಡದೆ, ಗಿರಣಿಗಳು ಹೇಗೆ ಪ್ರಾರಂಭವಾದಾವು? ವಿಲಾಯತಿಯ ಜವಳಿಯು ಹಿಂದುಸ್ಥಾನದ ಮೂರು ಮನೆಯ ಹಳ್ಳಿಗಳಲ್ಲಿ ಹೇಗೆ ಹೋದೀತೆಂದು ದ್ರಾವಿಡಿ ಪ್ರಾಣಾಯಾಮದ ತರ್ಕ ಮಾಡುತ್ತಿದ್ದಾರೆ. ಮುಂಬಯಿಯ ಗವ್ಹರ್ನರಸಾಹೇಬರು ಇದೇ ವಿಚಾರ ಕುರಿತು ಮುಖಂಡರ ಕೂಡ ಮಾತನಾಡಲು ಪುಣೆಯಿಂದ ಮುಂಬಯಿಗೆ ಹೋಗಿಬಂದರು. ಇವರನ್ನು ಕಂಡವರೆಲ್ಲರೂ, ತಪ್ಪಿಕ್ಕೀಯರೇ! ಇವರಲ್ಲಿ ಸಹ ಒಬ್ಬರು ಈಗಿನ ರಾಜಕೀಯ ಚಳವಳಿಯನ್ನು ಸಮಾಧಾನದಿಂದ ನಿಲ್ಲಿಸಿರಿ; ಅಂದರೆ ಎಲ್ಲ ವ್ಯವಹಾರ ಸುರಕ್ಷಿತವಾಗಿ ನಡೆಯುವದೆಂದು ಸಾಹೇಬರಿಗೆ ಉತ್ತರ ಹೇಳಿದರು. ಸರಕಾರದವರು ಈ ಚಳವಳಿಯನ್ನು ಮುರಿಯುವದಕ್ಕಾಗಿ ನಡೆಸಿದ ದಬ್ಬಾಳಿಕೆಯು ರೋಗ ಒಂದು, ಚಿಕಿತ್ಸೆ ಮತ್ತೊಂದೆಂಬಂತಾಗಿರುತ್ತದೆ.

ಪಂಡಿತ ಮಾಲವೀಯರವರಿಗೆ ಸ್ವಂತ ಅಡಿಗೆಯವನನ್ನು ಕೊಟ್ಟಿದ್ದು, ಅವರಿಗಾಗಿಯೇ ನಾಲ್ಕು ಕೋಣೆಗಳನ್ನು ತೆರವುಮಾಡಿ ಕೊಟ್ಟಿದ್ದಾರೆ. [illegible] ಮತ್ತು ಭಾರತ ಎಂಬೀದು ಪತ್ರಗಳನ್ನು ಓದಲಿಕ್ಕೆ ಕೊಡುತ್ತಾರೆ.

ಡಾಕ್ಟರ ಮುಂಜೆಯವರೇಕೆ
ರಾವುಂಡ ಟೇಬಲಿಗೆ ಹೋಗುವರು.

—)(o)(—

ಡಾಕ್ಟರ ಮುಂಜೆಯವರು ಭೀಮ ಪರಾಕ್ರಮಿಯಂಥ ಕಾಂಗ್ರೆಸ ಪಕ್ಷದವರು. ಹಿಂದೂ ಜನಾಂಗದ ಸಂಪೂರ್ಣ ಹಿತೈಷಿಗಳು. ಹಿಂದೂ ಜನತೆಯಲ್ಲಿ ಲೋಕಮಾನ್ಯರ ತರುವಾಯ ಇವರಷ್ಟು ಜಾಗೃತಿಯನ್ನು ಇನ್ನಾರು ಹುಟ್ಟಿಸಿಲ್ಲ. ಇವರು ರಾವುಂಡಟೇಬಲಕ್ಕೆ ಬರಬೇಕೆಂದು ಸರಕಾರದವರು ಕಾಯಿದೆಭಂಗದ ದೆಸೆಯಿಂದ ಇವರಿಗೆ ಕೋರ್ಟ ಏಳುವ ಮಟ್ಟಿಗೆ ಶಿಕ್ಷೆ ವಿಧಿಸಿದರು. ಇವರು ಸ್ವತಃ ರಾವುಂಡಟೇಬಲಕ್ಕೆ ಬಹಿಷ್ಕಾರ ಹಾಕತಕ್ಕವರೇ. ಆದರೆ ಅಲ್ಲಿ ಮೌಲಾನಾ ಮಹಮ್ಮದಲ್ಲಿಯವರು ಹಿಂದೂ ಜನರ ವಿರುದ್ಧ ಅನೇಕ ಸಂಗತಿಗಳನ್ನು ನಡಿಸುವ ಸಂಭವವಿರುವದರಿಂದ, ಅವರ ಉಚ್ಚಾಟನೆಗೆ ಒರೆ ಹಾಕುವದಕ್ಕಾಗಿಯೇ ಇವರು ಹೋಗಬೇಕಾಗಿದೆ. ರಾಜಾ ನರೇಂದ್ರರೇ ಮೊದಲಾಗಿ ಅನೇಕ ಹಿಂದೂ ಮುಖಂಡರು ಇವರಿಗೆ ಅಲ್ಲಿಗೆ ಹೋಗಲು ಒತ್ತಾಯಪಡಿಸಿದ್ದಾರೆ. ಪುಣೆಯ ಶ್ರೀ ಕೇಳಕರರು ತಾವು ಆಮಂತ್ರಣವನ್ನು ಅಂಗೀಕರಿಸಿದ್ದರೂ ಇವರಿಗೆ ಹೋಗಬೇಕೆಂದು ಆಗ್ರಹ ಪಡಿಸಿದ್ದಾರೆ. ಡಾಕ್ಟರ ಮುಂಜೆಯವರು ಹೀಗೆ ಹಿಂಬಲಪಟ್ಟುಕೊಂಡು ಹೋದರೂ ಅಲ್ಲಿ ಅರಣ್ಯ ರೋದನವಾಗುವದೆಂದೇ ತಿಳಕೊಂಡಿದ್ದಾರೆ. ಇಂಥವರ ಅವಸ್ಥೆಯೇ ಹೀಗಾದ ಬಳಿಕ ಉಳಿದವರು ಯಾವ ಗಿಡದ ತೊಪ್ಪಲ!!

ಬೆಳಗಾವ ಜಿಲ್ಹೆಯ ಸುದ್ದಿಗಳು

—(o)—

ಖಾನಾಪುರದಲ್ಲಿ ಜಿಲ್ಹಾಧಿಕಾರಿಗಳು ಪೋಲಿಸರ ಅಧಿಕಾರವನ್ನು ತುಸು ಬಿಗಿ ಹಿಡಿದದ್ದರಿಂದ, ಹಿಡಿಯುವ ಮತ್ತು ಶಿಕ್ಷಿಸುವ ಗದ್ದಲವು ಕಿಂಚಿತ್ತು ಕಡಿಮೆಯಾಗಿದೆ.

ಶಿಂದಿಗಿಡ ಕಡಿದ ಬಗ್ಗೆ ನಾಗನೂರಿನ ಸ್ವಯಂಸೇವಕರನ್ನು ಮೊದಲು ಹಿಡಿದರು. ಆ ನಂತರ ಬಿಟ್ಟುಬಿಟ್ಟರು.

ಚಿಕ್ಕೋಡಿಯಲ್ಲಿ ಬಹಿಷ್ಕಾರ ಪತ್ರವು ಜೋರಿನಿಂದ ನಡೆದಿದೆ.

ಹುಕ್ಕೇರಿಯಲ್ಲಿ ತಾಲೂಕ ಕಾಂಗ್ರೆಸ ಕಮಿಟಿಯು ಸ್ಥಾಪಿಸಲ್ಪಟ್ಟಿತು. ಇನ್ನೂರು ಜನ ಮೆಂಬರಾದರು. ದಿನಾಲು ಮೆಂಬರ ಮಾಡುವ ಕೆಲಸ ನಡೆದಿದೆ.

ಚುನಾವಣೆ

ಶ್ರೀ. ಜೋಗ ವಕೀಲರ

ಚುನಾವಣೆಯು ಭ್ರಷ್ಟಗೊಂಡವು.

ಶ್ರೀ. ಜೋಗ ವಕೀಲರಿಗೆ ೧ ೫೯೧ ಮತಗಳು ಬಿದ್ದು, ಅವರು ಎರಡನೆಯ ನಂಬರು ಬಂದು, ಮೆಂಬರರಾದದ್ದು ನಿಜ. ಆದರೆ ಕೌನ್ಸಿಲ ನಿಯಮ ಪ್ರಕಾರ ಮತಗಳ ಸಂಖ್ಯೆಯಲ್ಲಿ ಎಂಟರಲ್ಲಿ ಒಂದು ಭಾಗಬೀಳದ್ದರಿಂದ, ಅವರ ಡಿಪಾಜಿಟ ಹಣವು ಹೋಗತಕ್ಕದ್ದು. ನಿಮ್ಮ ಡಿಪಾಜಿಟ್ಟು ಹೋಗುವದೆಂದು ಮಿ. ಕಲೆಕ್ಟರಸಾಹೇಬರು ಇವರಿಗನ್ನಲು, ನಾನು ಆರಿಸಲ್ಪಟ್ಟಿದ್ದೇನೆ. ಡಿಪಾಜಿಟ ಹೋಗುವ ಕಾರಣವಿಲ್ಲೆಂದು ಶ್ರೀ. ಜೋಗರು ಸಾಹೇಬರಿಗೆ ಉತ್ತರ ಕೊಟ್ಟಿದ್ದಾರೆ. ಸಾಹೇಬರು ಈ ಬಗ್ಗೆ ಸರಕಾರದ ಕಾಯದೆ ಪಂಡಿತರಾದ ಲೀಗಲ ರಿಮೆಂಬ್ರನ್ಸರರ ಅಭಿಪ್ರಾಯ ಕೇಳಿದ್ದಾರೆ.

ಶ್ರೀ. ಸ್ವಾಮಿ ನಾರಾಯಣರು ಡಿಪಾಜಿಟ ಕಳಕೊಂಡರು.

ಶ್ರೀ. ಸ್ವಾಮಿ ನಾರಾಯಣರು ಅಹಮದಾಬಾದ ಜಿಲ್ಲೆಯ ಪರಿಯಿಂದ ಉಮೇದವಾರರಾಗಿದ್ದರು. ಚುನಾವಣೆಯಲ್ಲಿ ಇವರಿಗೆ ೨೫೯೧ ಮತಗಳು ಬಿದ್ದು, ಡಿಪಾಜಿಟ್ಟು ಹೋಯಿತು. ಇವರು ಈ ಮೊದಲು ಕಾಂಗ್ರೆಸದ ಮೆಂಬರರಿದ್ದರು. ಇದರ ವಿರುದ್ಧ ನಿಂತು ಇದೇ ಜಿಲ್ಲೆಯ ಚುನಾವಣೆಯಲ್ಲಿ ನಮ್ಮ ಶ್ರೀ ಕೇಶವನುವರಿಗಿಂತ ಕಡಿಮೆ ಮತ ಪಡೆದು, ಡಿಪಾಜಿಟ್ಟು ಕಳಕೊಂಡರು. ಒಟ್ಟು ಮತದಾರರ ಸಂಖ್ಯೆ ೫೫೫೦ ೦

ಮ್ಯುನಿಸಿಪಾಲಿಟಿಯ ಪಟ್ಟೆವಾಲಾನು ಮೆಂಬರನಾದನು.

ಕರಾಚಿಯಲ್ಲಿ ಮ್ಯುನಿಸಿಪಾಲಿಟಿಯ ಶಾಲೆಗಳ ಪಟ್ಟೆವಾಲಾ ರಾಜನು ಕರಾಚಿಯ ಪರಿಯಿಂದಾದ ಚುನಾವಣೆಯಲ್ಲಿ ೨೫೫೭ ಮತ ಪಡೆದು ಮೆಂಬರನಾದನು. ಈತನ ಪ್ರತಿಸ್ಪರ್ಧಿ ಮಿಸ್ಕಿತಸಾಹೇಬನಿಗೆ ೬೭೬ ಮತಗಳು ಬಿದ್ದವು.

ಮುಚ್ಚಿಗಾರನಿಗೆ ೬೮೮೫ ಮತ,

ಬ್ಯಾರಿಸ್ಟರನಿಗೆ ೪೪೫ ಮತ!!

ಸಿಂಧದಲ್ಲಿ ಥರಪಾರ್ಕರ ಜಿಲ್ಲೆಯ ಪರಿಯಿಂದ ಒಬ್ಬ ಮುಚ್ಚಿಗಾರ ಮ[illegible] ಎಂಬುವನು ಬ್ಯಾರಿಸ್ಟರನ ವಿರುದ್ಧ ಉಮೇದವಾರರಾಗಿದ್ದರು. ಇವರಲ್ಲಿ [illegible] ಬ್ಯಾರಿಸ್ಟರರಿ[illegible] [illegible]ಕೆಗೆ ೬೪೦೦ [illegible] ನು [illegible].

ಮುಸಲಮಾನರ ಚುನಾವಣೆಯು

ದಕ್ಷಿಣಭಾಗದ ಪರಿಯಿಂದಾದ ಚುನಾವಣೆಯಲ್ಲಿ ಈ ಮೂವರು ಆರಿಸಲ್ಪಟ್ಟಿದ್ದಾರೆ.

೧ ಮಿ. ಅಬ್ದುಲಕಾದರ ಬಾಂಗಿ ಧಾರವಾಡ
೨ ಸರದಾರ ಮಹಬೂಬ ಅಲ್ಲಿಖಾನ ಹುಬ್ಬಳ್ಳಿ
೩ ಹಾಜಿ ಇಬ್ರಾಹಿಮ ಜತೆಕರ.

ಕುಲಂಬಾಮೆ ಪಠಾಣಸಾಹೇಬರು ಬಹಿಷ್ಕಾರದ ಕುಂಡದಲ್ಲಿ ಸಿಕ್ಕು ಯಶಹೊಂದದೆ ಹೋದರು.

ರಾವಬಹಾದ್ದೂರರಿಗೆ ಎರಡೇ ಮತ.

ಸುರತ ನಗರದ ಚುನಾವಣೆಯಲ್ಲಿ ೫೦೦೦ ಮತಗಳು. ಮಿ. ಮೋದಿಯವರು ೬೭ ಓಟುಗಳಿಂದ ಮೆಂಬರರಾದರು. ರಾ. ಬ. ರಣಜಿತರಿಗೆ ಎ[illegible] ಮತ ಬಿದ್ದು ಡಿಪಾಜಿಟ್ಟು ಕಳಕೊಂಡರು.

ಅಹಮದಾಬಾದ ಪಟ್ಟಣದ ಚುನಾವಣೆಯಲ್ಲಿ ಕಾಂಗ್ರೆಸದವರೇ ಆಗಿದ್ದ ಮಿ. ಮಾಲವಣಕರರು ಒಂದು ಕಡಿಮೆ ಇಪ್ಪತ್ತು ಮತಗಳು ಬಿದ್ದು ಡಿಪಾಜಿಟ್ಟು ಕಳಕೊಂಡರು.

ಹುಲಿಯ ಬೇಟೆಯ ಸಿದ್ಧತೆ ಮಾಡಿದರೂ,

ಇಲಿ ಕೂಡ ಸಿಗಲಿಲ್ಲ.

—(೦)—

ಗುಜರಾಥಕ್ಕೆ ಸೇರಿದ ನಡಿಯಾದ ಪಟ್ಟಣದಲ್ಲಿ ಶ್ರೀ. ದಾದುಭಾಯಿ ದೇಸಾಯಿಯವರ ಮನೆಗೆ ಪೋಲೀಸರು ಝಡತಿಗೆ ಹೋದರು. ಮನೆಯಲ್ಲಿ ಶ್ರೀ. ದೇಸಾಯಿಯವರು ಇದ್ದಿಲ್ಲ. ಮುಂಬಯಿಗೆ ಬಂದಿದ್ದರು. ಬೇರೆ ಗಂಡಸರೂ ಇರಲಿಲ್ಲ. ಬರೇ ಹೆಣ್ಣುಮಕ್ಕಳೇ ಇದ್ದರು. ಝಡತಿಗೆ ಒಪ್ಪಿಟ್ಟಿಲ್ಲ. ನೂರು ಸಿಪಾಯರು, ನಾಲ್ವರು ಕಾಮದಾರರು, ನಾಲ್ಕು ಲಾರಿಗಳು ಮತ್ತು ಒಂದು ಮೋಟಾರ ಇಷ್ಟು ಸಾಮಗ್ರಿಯು ಸಿದ್ಧತೆಯಾಗಿತ್ತು. ಗಂಡಸರಿಲ್ಲದೆ ಒಳಗೆ ಬರಬೇಡಿರೆಂದು ಹೆಣ್ಣುಮಕ್ಕಳು ಅನ್ನಲು ಪೋಲೀಸರು ಕೇಳಲಿಲ್ಲ. ಹೆಣ್ಣುಮಕ್ಕಳು ಬಾಗಿಲ ಹಾಕಿಕೊಂಡರು. ಪೋಲೀಸರು ಅಷ್ಟಕ್ಕೆ ಬಿಡತಕ್ಕವರೇ? ಕಂಬಾರರನ್ನು ಕರೆಯಿಸಿ, ಬಾಗಿಲ ಮುರಿಸುವ ಉದ್ಯೋಗ ನಡೆಸಿದರು. ಈ ವರ್ತಮಾನ ಕೇಳಿ, ದೇಸಾಯಿಯವರ ಕಕ್ಕನ ಮಕ್ಕಳು ಬಂದರು. ಅವರು ಬಾಗಿಲ ತೆರೆಸಿದರು. ಪೋಲೀಸರು ಮೋಟಾರ ಡ್ರಾಯ್ವರರನ್ನು ಪಂಚರನ್ನಾಗಿ ಮಾಡಿ, ಮನೆಯಲ್ಲಿ ಹೊಕ್ಕು ಪೆಟ್ಟಿಗೆ, ಕಪಾಟು, ಟ್ರಂಕು ಮುಂತಾದವುಗಳ [illegible] ತಪಾಸು ಮಾಡಿದರು. ಬಹ[illegible]. ಆದರೆ ಇವರಿಗೇನೂ ದೊ[illegible], ಗ[illegible] ಕಲ್ಲು ಹೊತ್ತಂತಾಯಿತು.

ಲೋಕಲಬೋರ್ಡಿನ ಅಧ್ಯಕ್ಷರಿಗೆ ಶಿಕ್ಷೆ.

ಸಿದ್ದಾಪೂರ ತಾಲೂಕಿನ ಮುಖಂಡರೂ, ತಾಲೂಕ ಲೋಕಲಬೋರ್ಡಿನ ಅಧ್ಯಕ್ಷರೂ ಆದ ಶ್ರೀ ದೊಡ್ಡಮನೆಯ ನಾಗೇಶಗೌಡರು ಮೇಲೆ ಸರಕಾರದ ಕೃಪೆಯಾಗಿ, ಆರು ತಿಂಗಳ ತನಕ ಅವರ ಅತಿಥಿಯಾಗಿ, ಅವರು ಹೇಳಿದಲ್ಲಿ ಜಗತ್ತಿಗೆ ಅಜ್ಞಾತವಾಗಿರುವ ಮರ್ಯಾದೆ ದೊರೆಯಿತು. ಇವರ ಕೂಡ

೧ ಶ್ರೀ ಶಾದಿಮನೆ ಸೀತಾರಾಮ ಹೆಗಡೆ
೨ ,, ಪರಮಪ್ಪ ಶಾಮಯ್ಯ

ಇವರಿಗೂ ಇವರ ಉತ್ಕಟವಾದ ದೇಶಸೇವೆಗಾಗಿ ಆರಾರು ತಿಂಗಳ ಶಿಕ್ಷೆಯಾಯಿತು. ಎಂಥಾ ಜಂಗಲ ಕಾಯದೆಭಂಗ—

ಹಾವೇರಿಯಲ್ಲಿ ಭಗಿನಿ ಸಮಾಜ ಸ್ಥಾಪನೆ.

ಕಳೆದಾಜಿ ಆದಿತ್ಯವಾರ ದಿವಸ ಹಾವೇರಿಯಲ್ಲಿ ಶ್ರೀ ಹೋಲೇಮಠ ವಿಶ್ವನಾಥಯ್ಯರ ಅಧ್ಯಕ್ಷತೆಯಲ್ಲಿ ಹೆಣ್ಣುಮಕ್ಕಳ ಸಭೆಯಾಗಿ, ಅಲ್ಲೊಂದು ಭಗಿನಿ ಸಮಾಜವು ಸ್ಥಾಪಿಸಲ್ಪಟ್ಟಿತು. ಶ್ರೀ ಉಮಾಬಾಯಿ ಗೋಕರ್ಣ ಇವರು ಅಧ್ಯಕ್ಷ, ಶ್ರೀ ಇಂದಿರಾಬಾಯಿ ಖರೆಯವರು ಕಾರ್ಯದರ್ಶಿಯಾಗಿದ್ದಾರೆ. ಈಗಾಗಲೆ ೧೪ ಜನ ಹೆಣ್ಣುಮಕ್ಕಳು ಮೆಂಬರರಾಗಿದ್ದಾರೆ ಇವರ ಉದ್ದೇಶಗಳು

೧ ಸ್ವದೇಶಿ ೨ ಧ್ವಜವಂದನೆ ೩ ನೂಲುವದು ೪ ಪ್ರಾರ್ಥನೆ

ಹಾವೇರಿಯಲ್ಲಿ ಬೇಗನೆ ಒಂದು ಬಹಿಷ್ಕಾರ ಮಂಡಲವು ಸ್ಥಾಪಿಸಲ್ಪಡುವದು.

ಮನೆಕಟ್ಟುವದರಲ್ಲಿ ಹೊಸ ಶೋಧ!!!

ಇಂಗ್ರೇಜಿ ಇಂಜನಿಯರರು ಮನೆಗಳನ್ನು ಕಟ್ಟುವಿಕೆಯಲ್ಲಿ ಹೊಸ ಹೊಸ ಶೋಧಗಳನ್ನು ಮಾಡುತ್ತಿದ್ದಾರೆ. ಎಷ್ಟೋ ಮನೆ ಮತ್ತು ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಪ್ರತಿಧ್ವನಿಯಾಗುವದು. ದೊಡ್ಡ ದೊಡ್ಡ ಬೀದಿಗಳಗುಂಟ ಇರುವ ಮನೆಗಳಲ್ಲಿ ಹೊರಗಿನ ಬಂಡಿ, ಮೋಟಾರ, ಮುಂತಾದವುಗಳ ಸಪ್ಪಳ ಕೇಳಿ, ಕೇಳಿ, ತೊಂದರೆಯಾಗುವದು. ಈ ಸಪ್ಪಳಗಳು ಒಳಗೆ ಬರದಂತೆ ಕಟ್ಟಡಗಳನ್ನು ಕಟ್ಟುವ ಶೋಧಮಾಡಿರುತ್ತಾರೆ.

ಸಾಂಗಲಿಯಲ್ಲಿ ನಡೆದ ಅಸಹ್ಯ ಪ್ರಕಾರವು.

ಗಣಪತಿಯು ಭಿನ್ನ ವಿಚ್ಛಿನ್ನನಾದನು.

ಸಾಂಗಲಿಯಲ್ಲಿರುವ ವ್ಯಾಪಾರಿಗಳ ಉಚಿತ ವಾಚನಾಲಯದಲ್ಲಿ ಕೆಲ ದುಷ್ಟರು ಕಿಟಕಿಗಳನ್ನು ಮುರಿದು, ಒಳಗೆ ಹೊಗಿ, ಶ್ರೀ. ಗಜಾನನ ಎರಡು ಸುಂದರ ಮೂರ್ತಿಗಳನ್ನು ಛಿನ್ನ ವಿಚ್ಛಿನ್ನ ಮಾಡಿದ್ದಾ

ಸಾಪ್ತಾಹಿಕ ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಮಂಗಳವಾರ ತಾರೀಖು ೨೩ನೇ ಸಪ್ಟೆಂಬರ ೧೯೩೦ (ಸಂಚಿಕೆ ೩೬

ಇಂದಿನ ಚಿತ್ರ ನೋಡಿರಿ! ಹಿಂದಿನ ಚಿತ್ರ ನೋಡಿರಿ!!

ಕಾಂಗ್ರೆಸದ ಅಪೂರ್ವ ವಿಜಯ

ಶುಕ್ರವಾರ ತಾ|| ೧೯ನೆಯ ದಿವಸ ಇಲ್ಲಿಯ ಕಲೆಕ್ಟರ ಕಚೇರಿಯಲ್ಲಿ ಕೌನ್ಸಿಲ ಚುನಾವಣೆಯ ಎಣಿಕೆಯಾಗಿ ಮುಂದೆ ಕೊಟ್ಟಂತೆ ಜಾಹೀರ ಮಾಡಲ್ಪಟ್ಟಿತು.

೧ ರಾ. ಬ. ಕಂಬಳಿ. ೭೬೧೩
೨ ರಾ ರಾ. ಜೋಗ. ೧೧೫೧
೩ ಶ್ರೀ ರಾ. ಕೇಸರಿ. ೩೭೪

ಧಾರವಾಡ ಜಿಲ್ಲೆಯಲ್ಲಿ ಒಟ್ಟು ೩೭೦೦೦ ಮತದಾರರುಂಟು. ಇವರಲ್ಲಿ ಚಳವಳಿಯ ದೆಸೆಯಿಂದ ಹಾಕಿದ ಬಹಿಷ್ಕಾರದ ಮೂಲಕ ಹೋಟು ಕೊಡಲಿಕ್ಕೆ ಬಂದವರ ಸಂಖ್ಯೆಯು ೯೧೯೮ ಆಯಿತು. ಹೋಟು ಕೊಟ್ಟವರೆಲ್ಲರೂ ಸುಬುದ್ಧಿಯಿಂದ ಪೋಲಿಂಗ ಸ್ಟೇಶನಕ್ಕೆ ಹೋಗುವದಿಲ್ಲ. ಬಹು ಜನ ತೊಂದರೆ, ತಾಪ, ಪೀಡೆಗಳ ದೆಸೆಯಿಂದ ಹೋಗುತ್ತಾರೆ. ಇವರು ಅಲ್ಲಿ ಗುಪ್ತವಾಗಿ ಹೋಟನ್ನು ರದ್ದು ಮಾಡೇ ಬರುವರು. ಈ ಪ್ರಕಾರ ಈ ಸಾರೆ ರದ್ದು ಮತ್ತು ನಿರುಪಯೋಗಿಯಾದಂಥ ಹೋಟುಗಳು ೧೨೩೭ ಆಗಿರುತ್ತವೆ. ೯೧೯೮ಕ್ಕೆ ೧೨೩೭ರು ರದ್ದಾಗುವದೆಂದರೆ- ನಾಲ್ಕರಲ್ಲಿ ಒಂದು ಕಟ್ಟಂತಾಯಿತು. ಜನರನ್ನು ಹಿಡಿಹಿಡಿದು ಹೋಟು ಹಾಕಿಸಿದರೆಂದು ತಮ್ಮ ಡುಬ್ಬ ತಾವೇ ತಪ್ಪರಿಸಿಕೊಂಡವರು ಮೋರೆ ಕೆಳಗೆ ಮಾಡುವಂತಾಯಿತು. ಇದು ಈ ವರ್ಷದ ಸಂಗತಿಯಾಯಿತು. ಹಿಂದಿನ ಚುನಾವಣೆಯ ಅಂಕಿಗಳನ್ನು ನೋಡುವಾ- ಹೋಟಿನ ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇಲ್ಲ. ೩೭೦೦೦ ವೇ ಉಂಟು. ಆಗಿನ ಸಂಖ್ಯೆಯು-

೧ ರಾ. ಬ. ಕಂಬಳಿ ೧೬೬೩೩.
೨ ಶ್ರೀ. ರಾ. ಜೋಗ ೧೨೬೩೨.
೩ ಶ್ರೀ. ರಾ. ಹೊಸಮನಿ ೯೭೧೬.
೪ ಶ್ರೀ. ರಾ. ಪಾಟೀಲ ೭೩೮೩.

೧೯೨೬ನೆಯ ಮೇಲಿನ ಚುನಾವಣೆಯಾದ ಕೂಡಲೆ- ಕಾಂಗ್ರೆಸ ಕಮಿಟಿಯವರೇ ಶ್ರೀ. ಜೋಗ ಮತ್ತು ರಾ. ಬ. ಕಂಬಳಿಯವರಿಗೆ ಹೂವಿನ ಮಾಲೆಹಾಕಿ, ಅವರನ್ನು ಸನ್ಮಾನಿಸಿ, ಕಾಂಗ್ರೆಸದ ಜಯಜಯಕಾರ ಮಾಡಿದರು. ವಾಸ್ತವಿಕವಾಗಿ ಕಾಂಗ್ರೆಸದವರು ಶ್ರೀ. ಜೋಗರ ಅಭಿನಂದನವನ್ನಷ್ಟೇ ಮಾಡತಕ್ಕದ್ದಿತ್ತು. ರಾ. ಬ ಕಂಬಳಿಯವರೂ ದೇಶಸೇವೆ ಮಾಡಲೆಂದು ಅವರನ್ನೂ ಗೌರವಿಸಿದರು. ಆದರೆ ಈ ನಾಲ್ಕು ವರ್ಷಗಳಲ್ಲಿ ಇವರು ಯಾವ ಕೆಲಸವನ್ನೂ ಮಾಡಲಿಲ್ಲೆನ್ನುವಂತೆ ರಾವಸಾಹೇಬ ಹಳಕಟ್ಟಿಯವರೇ ತಮ್ಮ ನವಕರ್ನಾಟಕದಲ್ಲಿ ಬರೆದಿರುತ್ತಾರೆ.

ಅದು-

> “ ರಾ. ಬ. ಕಂಬಳಿಯವರು ಇಲ್ಲಿಯವರೆಗೆ ಸಂಕುಚಿತ ದೃಷ್ಟಿಯನ್ನು ಹೊಂದಿ ಕ್ಷುಲ್ಲಕವಾದ ಸ್ಥಾನಿಕ ವಿಷಯಗಳ ಕಡೆಗೆ ಮನಸ್ಸು ಹಾಕಿ, ತಮ್ಮ ಕಡೆಯಿಂದ ಮಹತ್ವದ ಕೆಲಸಗಳನ್ನು ಮಾಡದೆ ಇದ್ದದ್ದು ಬಹು ಅಸಮಾಧಾನಕರವಾದ ಸಂಗತಿಯಾಗಿದೆ ”

ಎಂಬುದು ರಾ. ಬ. ಕಂಬಳಿಯವರಂತೆ ರಾವಸಾಹೇಬ ಹಳಕಟ್ಟಿಯವರೂ ಕೌನ್ಸಿಲ ಮೆಂಬರರಾದಂಥವರು. ಇವರು ರಾ ಬ. ರವರಿಗೆ ಕೊಟ್ಟ ಸರ್ಟಿಫಿಕೇಟಿನಿಂದಲೇ, ರಾ ಬ. ರವರು ಧಾರವಾಡ ಜಿಲ್ಲೆಯ ಜನತೆಯಲ್ಲಿ ಎಷ್ಟು ಅಪ್ರಿಯರಾಗಿರುತ್ತಾರೆಂಬುದು ಧ್ವನಿತವಾಗುತ್ತದೆ. ಆದುದರಿಂದ ಶುಕ್ರವಾರ ದಿವಸ ಚುನಾವಣೆಯ ಪರಿಣಾಮ ತಿಳಿದ ಕೂಡಲೆ- ಹಿಂದಿನ ಸಾರೆಯಂತೆ ಇವರಿಗೆ ಯಾರೂ ಹೂವಿನ ಮಾಲೆ ಹಾಕಿ, ಗಾ[illegible] ಕೋರ್ಟಿನಲ್ಲಿ ಬಿಟ್ಟು ನೋಡುವರು ಇ[illegible] ಡಿಕೊಂಡು ಹೋಗುವಂತೆ, ಹೇಂಟಹೋದರು. ಮೋರೆಯ ಮೇಲೆ ಚಿವುಟಿದರೂ ರಕ್ತದ ಹನಿಯು ಹೊರಡದಷ್ಟು ನಿಸ್ತೇಜವಾಗಿದ್ದರು, ಕರೇ ನಿಶಾನೆಯ ಬಹುಮಾನವಾಗಲಿಲ್ಲೆಂದು ಒಂದು ರೀತಿಯಿಂದ ಸಂತೋಷ ಪಡುವಂತಾಯಿತು.

ರಾ. ಬ. ಕಂಬಳಿಯವರಾಗಲಿ, ಶ್ರೀ ಜೋಗರಾಗಲಿ, ಚುನಾವಣೆಯ ಗೊಂದಲದಲ್ಲಿ ಬೀಳತಕ್ಕದ್ದೇ ಇದ್ದಿಲ್ಲ. ಗಾಳಿಯು ಹೇಗೆ ಬೀಸುತ್ತದೆಂಬುದನ್ನು ನೋಡಿಯೂ ಅದಕ್ಕೇ ಮೋರೆ ಮಾಡಿಕೊಂಡು, ಕಣ್ಣುಗಳನ್ನು ಧೂಳದಿಂದ ಮುಚ್ಚಿಕೊಂಡರು ಸಹರಾ ಅರಣ್ಯದಲ್ಲಿ ಪ್ರಯಾಣಿಕರು ರಾತ್ರಿಯಲ್ಲಿಯೇ ಪ್ರವಾಸ ಮಾಡುವರು. ಅದೇ ಮೇರೆಗೆ ಇವರ [illegible] ರಾತ್ರಿಯಲ್ಲಿಯೇ ನಡೆದವು ಲೋಕಮತದ ವಿರುದ್ಧ ನಡೆದದ್ದರಿಂದಲೇ ಸಹರಾ ಅರಣ್ಯದ ಹಗಲಿನ ಬಿಸಿಲಿನ ತಾಪ ತಡೆಯುದಾಯಿತು. ಅಂದರೆ ಕಾಂಗ್ರೆಸದ ಚಳವಳಿಯ ತಾಪ ತಡೆಯಲಾರದೆ, ಗುಪ್ತವಾಗಿ ಊರೂರು ತಿರುಗಿದರು. ಇದೊಂದೇ ಸಂಗತಿಯಿಂದ, ಚುನಾವಣೆಯ ಸಂಕಲ್ಪವಾದಂದಿನಿಂದ ಇವರಿಗೆ ತಾವು ಲೋಕಪ್ರತಿನಿಧಿಗಳಲ್ಲೆಂದು ಅನಿಸಿತು ಆದರೂ ಹಟಕ್ಕೆ ಬಿದ್ದು, ಮತ್ತಿಷ್ಟು ಫಜೀತಿ ಮಾಡಿಕೊಂಡರು.

ಯಾವಾಗಲು ಶ್ರೀ. ಜೋಗರಿಗೆ ದೊರೆಯತಕ್ಕ ಹೋಟುಗಳು ಕಾಂಗ್ರೆಸ ಪಕ್ಷೀಯರಿಂದ, ಹಾಗೆ ರಾ. ಬ. ಕಂಬಳಿಯವರದಲ್ಲ. ಬ್ರಾಹ್ಮಣೇತರವೆಂಬ ಸೋಗಿನಿಂದ ಹೋಟು ದೊರೆಯುತ್ತಾ ಬಂದವು. ಈ ಸಾರೆಯ ಚುನಾವಣೆಯಲ್ಲಿ ಬ್ರಾಹ್ಮಣೇತರರೂ ಕಾಂಗ್ರೆಸದಲ್ಲಿ ಸೇರಿದ್ದರಿಂದ, ರಾ ಬ. ರವರ ಗರ್ವಭಂಗವಾಯಿತು. ಚುನಾವಣೆಯಲ್ಲಾದ ಇಷ್ಟು ಫಜೀತಿ ನೋಡಿ, ರಾವುಂಡ ಟೇಬಲಕ್ಕೆ ಹೋಗತಕ್ಕದ್ದೇ ಅಲ್ಲ. ಆರು ತಾಲೂಕ ಸೇರಿ, ರಾ. ಬ. ರವರಿಗೆ ಹತ್ತು ಸಾವಿರ ಹೋಟು ಬಿದ್ದವೆಂದು ಕರ್ನಾಟಕ ಬಾಯಿವ್ಯವು ಕೂಗಿತು. ಕನಸಿನಲ್ಲಿಯೇ ಪಾಲೋಗರ ಉಲ್ಲಾಸವಾಗ ಬುದುಗುದುರೇಕೆ ಇರಬೇಕು? ಆರು ತಾಲೂಕಿಗೆ ಹತ್ತು ಸಾವಿರವಾದರೆ- ಉಳಿದೈದು ತಾಲೂಕು ಮತ್ತು ತಾಲೂಕಿನಂತೆಯೇ ಇರುವ ಎರಡು ಪೇಟೆ ಸೇರಿ ಇನ್ನು ಹತ್ತು ಸಾವಿರ ಹೋಟುಗಳು ಬೀಳತಕ್ಕದ್ದು. ಅಂದರೆ ಇವುಗಳ ಬೇರೀಜು ಇಪ್ಪತ್ತು ಸಾವಿರವಾಗಿ ಹಿಂದಿನ ಚುನಾವಣೆಗಿಂತ ನಾಲ್ಕು ಸಾವಿರ ಮತಗಳು ಹೆಚ್ಚಿಗೆ ಬೀಳಬೇಕಾಗಿತ್ತು. ಹಾಗೆ ಆಗದೆ [illegible]ವೆನಿಸುವಂಥ ಹಿಂಬಡತಿಯಾಯಿತು ೩೭೦೦೦ ಮತದಾರರಲ್ಲಿ ಏಳು ಸಾವಿರ ಜನರು ಮಾತ್ರ ಹೋಟು ಕೊಡಲಿಕ್ಕೆ ಬರುವದೂ, ಅವರಲ್ಲಿ ೬೮೦೦ ಜನರ ಮಾತ್ರ ಹೋಟು ಕೊಡುವದೆಂದರೆ- ಇವರಲ್ಲಿ ಲೋಕನಂಬಿಗೆಯು ಇಲ್ಲವೇ ಇಲ್ಲವೆಂದು ಹೇಳುವಂತಾಗುವದಿಲ್ಲವೇ? ಈ ಪರಿಣಾಮದಿಂದ ಇವರು ಜಿಲ್ಲೆಯ ಪ್ರತಿನಿಧಿ ಎಂದು ಕೌನ್ಸಿಲಕ್ಕೂ, ಕರ್ನಾಟಕದ ವತಿಯಿಂದೆಂದು ರಾವುಂಡ ಟೇಬಲಕ್ಕೂ ಹೋಗತಕ್ಕದ್ದೇ ಅಲ್ಲ. ನವಕರ್ನಾಟಕವು ತೆಗೆದ ಸ್ಪಷ್ಟೋದ್ಗಾರವು ಸಲ್ಲುವಂತೆ ಇವರ ವರ್ತನವಾಗಿದ್ದರೆ- ಕಾಂಗ್ರೆಸದ ವಿರುದ್ಧವಾಗಿ ಇನ್ನೂ ಹೆಚ್ಚಿಗೆ ಮತಗಳು ಬೀಳುತ್ತಿದ್ದವು. ಸ್ವಜನ ಮತ್ತು ಪರಜನ ಹಿತ ಮಾಡದ್ದರಿಂದ ಕಾಂಗ್ರೆಸದ ತಿರುಗಣಿ ಮಡುವಿನಲ್ಲಿ ಸಿಕ್ಕು ಒದ್ದಾಡಬೇಕಾಯಿತು. ಇದರೊಳಗಿಂದೆದ್ದು ಪಾರಾಗಬೇಕಾದರೆ- ಅಂಥ ಮಹತ್ವದ ಕಾರ್ಯವನ್ನೇ ಮಾಡಬೇಕಾಗುತ್ತದೆ ಅಂಥ ಯೋಗ್ಯತೆಯು ಇವರಲ್ಲುಂಟೇ ಎಂಬ ಪ್ರಬಲವಾದ ಸಂಶಯವುಂಟು.

ಶ್ರೀ ಜೋಗರಿಗೆ ೧೧೫೧ ಹೋಟು ಬಿದ್ದದ್ದು ಸಹ ಹೆಚ್ಚಿನದು. ಯಾಕಂದರೆ- ನಾಲ್ಕೂ ಕಡೆಯಿಂದ ಇವರ ಮೇಲೆ ಕಾಂಗ್ರೆಸದ ಬಾಣಗಳು ಬಿಡಲ್ಪಟ್ಟಿದ್ದವು. ರಾ. ಬ. ಕಂಬಳಿಯವರಿಗೆ ಹೋಟು ಕೊಡ ಹೋದವರಲ್ಲಿ ಅನೇಕರು ಇವರಿಗೆ ಹೋಟು ಹಾಕದೆ ಇದ್ದದ್ದು ಎಣಿಕೆಯ ವೇಳೆಯಲ್ಲಿ ತೋ[illegible]ಗಿ ತೆಗೆದ ಜಾಹೀರ ಪತ್ರಿಕೆಯಲ್ಲಿ

೧ ಶ್ರೀ. ಜೋಗರಿಗೆ ಹೋಟು ಕೊಟ್ಟು ಕಾಂಗ್ರೆಸದ ಧ್ಯೇಯವನ್ನು ಪೂರ್ಣಗೊಳಿಸಿರಿ.
೨ ಮಹಾತ್ಮರು ಕರ್ನಾಟಕಕ್ಕೆ ಕೊಟ್ಟ ಬಹಾದ್ದೂರ ಕರ್ನಾಟಕವೆಂಬ ಪದವಿಯನ್ನು ಸತ್ಯಗೊಳಿಸಿರಿ
೩ ಸ್ವರಾಜ್ಯವು ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕು ಎಂದು ಲೋಕಮಾನ್ಯರು ಹೇಳಿದ ನುಡಿಯನ್ನು ನಿಜಮಾಡಿರಿ
೪ ಇಂಥ ಜನ್ಮಸಿದ್ಧ ಹಕ್ಕು ಪ್ರಾಪ್ತವಾಗಲೇಬೇಕಾದರೆ- ಕಾಂಗ್ರೆಸದ ಉಮೇದವಾರರಿಗೇ ಹೋಟು ಕೊಡಬೇಕು.
೫ ಅಂಥ ಉಮೇದವಾರರು ಶ್ರೀ. ಜೋಗರೊಬ್ಬರೇ ಆಗಿದ್ದಾರೆ.

ತಾವು ಕಾಂಗ್ರೆಸದವರೇ! ಕಾಂಗ್ರೆಸವೇ ತಮ್ಮ ದಿವ್ಯದೃಷ್ಟಿ ಎಂದು ಇಂದಿಗೂ ಶ್ರೀ ಜೋಗರು ಹೇಳುವರು. ಆದರೆ ಅದಕ್ಕೆ ತೀರ ವಿರುದ್ಧವಾಗಿ ನಡೆದದ್ದರಿಂದ, ಹತ್ತು ಸಾವಿರ ಮತಗಳು ಹೋಗಿ, ಒಂದು ಸಾವಿರ ಮತಗಳು ಬೀಳಬೇಕಾದರೆ- ಕುರಿ ಕೋಣ ಬಿದ್ದು ಹೋಯಿತು ನಾಲ್ಕು ವರ್ಷಗಳ ಹಿಂದೆ ಶ್ರೀ ಜೋಗರಿಗೆ ಹೋಟು ಕೊಟ್ಟು, ಬಹಾದ್ದೂರ ಕರ್ನಾಟಕವೆನಿಸಿಕೊಂಡದ್ದರ ಬದಲು ಈ ಸಾರೆ ಅವರಿಗೆ ಹೋಟು ಕೊಡದೆ ಬಹಾದ್ದೂರ ಕರ್ನಾಟಕವೆಂದೆನಿಸಿಕೊಂಡಿತು. ಇವರು ತಮ್ಮ ಅವಸ್ಥೆಯನ್ನು ಬುಡವಿಲ್ಲದ ವಹಿ ಮಾಡಿಕೊಂಡದ್ದು ಅತ್ಯಂತ ಶೋಚನೀಯವಾದೀತು. ಒನಕೆ ಬಗಿಯುವಂತೆ ರಾ ಬ. ಕಂಬಳಿಯವರು ಕಾಂಗ್ರೆಸದ ದೀಕ್ಷೆ ತಕ್ಕೊಳ್ಳಲು ಅವಕಾಶವುಂಟು. ಆದರೆ ಶ್ರೀ. ಜೋಗರಿಗೆ ಮಾತ್ರ ಅಂಥ ಅವಕಾಶ ಉಳಿಯಲೇ ಇಲ್ಲ. ಇಂದು ಅವರು ಕಾಂಗ್ರೆಸದ ಪಲ್ಯ ಹರಕೊಂಡಂತಾಯಿತು.

ಮೂರನೆಯವರಾದ ಶ್ರೀ ಕೇಸರಿಯವರ ಎಷ್ಟು ಸ್ತುತಿ ಮಾಡಿದರೂ ತೀರದು. ಅವರು ಆರಿಸಲ್ಪಡಬೇಕೆಂಬ ಆಶೆ ಮಾಡಿದ್ದಿಲ್ಲ. ಕವಡೆ ಮುಟ್ಟಿ ಹೋಟು ಕೇಳಲಿಕ್ಕೂ ಹೋಗಲಿಲ್ಲ. ಕೇವಲ ಶಬ್ದಗಳಿಂದ ಹೊಗಳಿಸಿಕೊಳ್ಳಲೂ ಇಲ್ಲ. ಸಗಣಿಯ ರಾಡಿಯಿಂದ ಮೋಟಾರು ವಿಪ್ರಾಸ ಹೊಂದಲಿಲ್ಲ. ಉಮೇದವಾರಿಗೆ ರಾಜೀನಾಮೆ ಕೊಟ್ಟಿದ್ದರೆ. ಮೇಲೆನಿಪ್ಪರ ಹದಿನಾರು ಸಂಸ್ಕಾರಗಳನ್ನು ಹನ್ನೊಂದು ಲಕ್ಷ ಜನರು ನೋಡುವ ಅಪೂರ್ವ ಮತ್ತು ಅದ್ವಿತೀಯ ಸಮಯವೂ ಬರುತ್ತಿದ್ದಿಲ್ಲ. ಇವರಿಗೆ ಬಿದ್ದ ಹೋಟುಗಳಿಂದ ಇವರ ಡಿಪಾಜಿಟ್ಟಿನ ೨೫೦ ರೂಪಾಯಿಗಳು ಮುಣುಗಿದವೆಂಬುದು ನಿಜ. ಅದೊಂದು ಅಪಮಾನವೆಂದು ತಿಳಿಯುವಂಥ ಕಾಲವೇ ಇದಲ್ಲ. ಕಾಂಗ್ರೆಸ ತತ್ವವು ಈ ಜಿಲ್ಲೆಯಲ್ಲೆಷ್ಟು ಬೇರೂರಿದೆಂಬುದು ಇವರಿಂದಲೇ ಕರ್ನಾಟಕದ ತುಂಬ ಗೊತ್ತಾಗಲು ಕಾರಣವಾಯಿತು; ಕಾಂಗ್ರೆಸ ಕಾರ್ಯಕ್ಕಾಗಿ ಎಷ್ಟೋ ಜನರು ತುರಂಗ ಕಾಣುವರು. ದಂಡ ಕೊಡುವರು. ಬೇರೆ ರೀತಿಯಿಂದ ತಾಪತ್ರಯ ಅನುಭವಿಸುವರು. ಶ್ರೀ ಕೇಸರಿಯವರ ಡಿಪಾಜಿಟ್ಟು ಹೋದದ್ದನ್ನು ಮೇಲಿನ ಮೂರು ಕಾರಣಗಳಲ್ಲಿ ಯಾವದೊಂದಾಗಿ ಭಾಜವಾಗಿ ಮಾನಾರ್ಹರಾಗಿದ್ದರೆ- ಅವರು ಶ್ರೀ. ಕೇಸರಿಯವರೇ ಆಗಿದ್ದಾರೆ. ಮತ್ತು ಅವರಿಂದಲೇ ಕಾಂಗ್ರೆಸಕ್ಕೆ ಜಯವೆಂದು ಸ್ಪಷ್ಟವಾಯಿತು.

ಶ್ರೀ. ಜೋಗ ವಕೀಲರ

ಚುನಾವಣೆಯ ಬ್ರಮ್ಹಗೊಂದಲವು.

ಶ್ರೀ. ಜೋಗ ವಕೀಲರಿಗೆ ೧೧೫೧ ಮತಗಳು ಬಿದ್ದು, ಅವರು ಎರಡನೆಯ ನಂಬರ ಬಂದು, ಮೆಂಬರರಾದದ್ದು ನಿಜ. ಆದರೆ ಕೌನ್ಸಿಲ ನಿಯಮ ಪ್ರಕಾರ ಮತಗಳ ಸಂಖ್ಯೆಯಲ್ಲಿ ಎಂಟಕ್ಕೆ ಒಂದು ಭಾಗ ಬೀಳದ್ದರಿಂದ, ಅವರ ಡಿಪಾಜಿಟ ಹಣವು ಹೋಗತಕ್ಕದ್ದು. ನಿಮ್ಮ ಡಿಪಾಜಿಟ್ಟು ಹೋಗುವದೆಂದು ಮಿ. ಕಲೆಕ್ಟರಸಾಹೇಬರು ಇವರಿಗನ್ನಲು- ನಾನು ಆರಿಸಲ್ಪಟ್ಟಿದ್ದೇನೆ. ಡಿಪಾಜಿಟ ಹೋಗುವ ಕಾರಣವಿಲ್ಲೆಂದು ಶ್ರೀ. ಜೋಗರು ಸಾಹೇಬರಿಗೆ ಉತ್ತರ ಕೊಟ್ಟಿದ್ದಾರೆ. ಸಾಹೇಬರು ಈ ಬಗ್ಗೆ ಸರಕಾರದ ಕಾಯದೆ ಪಂಡಿತರಾದ ಲೀಗಲ ರಿಮೆಂಬ್ರನ್ಸರರ ಅಭಿಪ್ರಾಯ ಕೇಳಿದ್ದಾರೆ.

ಶ್ರೀ. ಸ್ವಾಮಿ ನಾರಾಯಣರು ಡಿಪಾಜಿಟ ಕಳಕೊಂಡರು.

ಶ್ರೀ. ಸ್ವಾಮಿ ನಾರಾಯಣರು ಅಹಮದಾಬಾದ ಜಿಲ್ಲೆಯ ವತಿಯಿಂದ ಉಮೇದವಾರರಾಗಿದ್ದರು. ಚುನಾವಣೆಯಲ್ಲಿ ಇವರಿಗೆ ೨೫೧ ಮತಗಳು ಬಿದ್ದು, ಡಿಪಾಜಿಟ್ಟು ಹೋಯಿತು. ಇವರು ಈ ಮೊದಲು ಕಾಂಗ್ರೆಸದ ಮೆಂಬರರಿದ್ದರು. ಆದರ ವಿರುದ್ಧ ನಿಂತು ಇಡೀ ಜಿಲ್ಲೆಯ ಚುನಾವಣೆಯಲ್ಲಿ ನಮ್ಮ ಶ್ರೀ ಕೇಸರಿಯವರಿಗಿಂತ ಕಡಿಮೆ ಮತ ಪಡೆದು, ಡಿಪಾಜಿಟ್ಟು ಕಳಕೊಂಡರು. ಒಟ್ಟು ಮತದಾರರ ಸಂಖ್ಯೆ ೫೫೫೦.೦

ರಾವುಂಡಟೇಬಲಕ್ಕೆ
ವುತ್ತಿಸಿದರು. ಲಾ
ದೇ ವಿಷಯವಾಗಿ
ಮೋತಿಲಾಲರು ಇ
ಬು- ದಕ್ಷಿಣದೇಶದ
ಹೈದರಾಬಾದಿನಿಂ
ರು. ಅಂದಿನಿಂದ
ಹಿಷ್ಕಾರ, ಸತ್ಯಾ
ವಾಸ ಮುಂತಾದ
ದಾಗಿ ಜನತ್ತನ್ನೆ ಅ
ಕಾಂಗ್ರೆಸ ವ
ಬರ ನಡುವೆ ಬ್ಯಾ
ಸಪ್ರುಸಾಹೇಬರ
ತ್ತಿಯಿಯಲ್ಲಿ ಉಪ್ಪ
ಧ್ರುವಗಳ ನಡುವೆ
ಾಡಿವೆ. ಆದ್ದರಿಂ
ಕಾಂಗ್ರೆಸದವನ್ನ
ಗಿರುವಂಥವರದೊಂ
ಡಿ, ಅದಕ್ಕೆ ಅ
ರೂ ಅ ನಂದ
ಕರವಮಾಡಿ, ಎಲಾ
ಕಟ್ಟುತ್ತಲಿದ್ದಾರೆ
, ರಾವುಂಡಟೇಬಲ
ಕೆಗನನ್ನು ಬಿಟ್ಟು,
ದು ಕೆಲವರ್ ಮ
ಂದರೆ- ಅಲ್ಲಿಯೇ
ಬಹುದು. ಆ
, ಹಂಪಿಗೆ ಹೋ
ಲೇಸೆಂದು ಮುಂ
ಡಿತವೆಂದು ಯಾ
ರ ಹೊರಡಲಾರಂ
ಲ್ಲಿ ಎರಡನೆಯ ಮೊ
ಮ್ಯುನಿಸಿಪಾಲಿಟಿ
ದೇಶಮುಖ (ಟಿ
ಸುಳ್ಳು) ವಾಗುವ
ರೆ ಟೇಬಲಕ್ಕೆ
ರಷ್ಟೇ ಪದವಿ ಪ
ಕ್ಷರ ದೇಶಮುಖ
ಟುಂಬಯಿ ಹಿಂದೂ
ಹಾಜನ ಮಂಡಲದ
ಇಲ್ಲೆಂದು ಜಾಹೀರ
ತೀವ್ರತಮವಾಗ
ಪ್ಪ, ಅವರೇ ಬಹಿ
ರದ ಚಳವಳಿಯು
ರ ಮತ್ತು ಬ್ರಿಟಿ
ಷ್ಟವದೂ ಹೇಗೆಂ
ದಗುತ್ತದೆ.

ಬೇಬರು ರಾಜ್ಯಕಾ
ಧಿಕಾರ ದೊರೆಯು
ಲ್ಲದೆ, ವಸಾಹತ
ವನ್ನು ಅನ್ನಲೇ ಒ
ಟ್ಟರೆ ಹೋಯಿತು;
ಬಂತಾಗುವದೆಂದು
ವೇಟಿನ್ ಮತ್ತು
ಗೌರಕಾಯಿಸ ರು

ವನ್ನು ಮುಡಿಪಾಗಿ ತೆಗೆದಿಟ್ಟು, ಸ್ವರಾಜ್ಯ ತಕ್ಕೊಂಡು ಬಂದರೆ- ಆಗ ಇಮ್ಮಡಿ ಮರ್ಯಾದೆ ಮಾಡಬೇಕು. ವ್ಯಕ್ತಿಗಳೇಕೆ? ದೇಶವೇ ಮಾಡುವದು; ಏಕೆಂದರೆ ಅದೊಂದು ಹೊಸ ಮನ್ವಂತರವೇ ಆಗುವದು.

ರಾ. ಬ. ಕಂಬಳಿ ಮತ್ತು ರಿಫೆರೆಂಡಮ್

ರಾ. ಬ. ಕಂಬಳಿಯವರು ರಾವುಂಡ ಟೇಬಲಿಗೆ ಹೋಗಬಾರದೆಂದು ಗುಳೇದಗುಡ್ಡದವರು ಸಭೆ ಮಾಡಿ, ಅವರಿಗೆ ಆ ಮೇರೆಗೆ ವಿನಂತಿ ಮಾಡಿಕೊಳ್ಳಬೇಕೆಂಬ ಠರಾವನ್ನು ಮಾಡಿದ್ದಾರೆ. ಇವರಂತೆ ನಾಗಪೂರಿನವರೂ ಬಾಹೀರ ಸಭೆ ಮಾಡಿ, ಠರಾವು ಮಾಡಿದ್ದಾರೆ. ಸಂಪೂರ್ಣ ಸ್ವಾತಂತ್ರ್ಯವಾದಿಯಾದ ಡಾಕ್ಟರ ಮುಂಜೆಯವರು ಆಮಂತ್ರಣ ಸ್ವೀಕರಿಸಬಾರದು; ವಿಲಾಯತಿಗೆ ಹೋಗಬಾರದೆಂದು ಈ ಸಭೆಯ ಠರಾವಿನ ಆಶಯವಾಗಿರುತ್ತದೆ. ಆದರೆ ಇವರಿಬ್ಬರೂ ಇತ್ತಕಡೆಗೆ ಲಕ್ಷ್ಯಕೊಡಲಾರರು. ಮಹಾತ್ಮರೂ ಪಂಡಿತದ್ವಯರಾದ ಪಿತಾ ಪುತ್ರರೂ ದೊರೆಕಿಸದೆ ಹೋದಂಥ ಹಕ್ಕು ಬಾಧ್ಯತೆಗಳನ್ನು ತಾವು ಸಂಪಾದಿಸಿಕೊಂಡು ಬರುವಂತೆ ಇವರು ಆಶೆಗೊಂಡಿದ್ದಾರೆ. ಹಣಮಪ್ಪನೇ ಹಗ್ಗ ನುಂಗುವಾಗ ಪೂಜಾರಿ ಸೇವಿಗೆಯ ಪಾಯಸ ಬೇಡಿದನೆಂಬಂತೆ ಇವರ ವಿಲಾಯತಿಯ ಯಾತ್ರೆಯಾಗದಿಂದು ಮುಂದಿನ ಅವಲಕ್ಷಣಗಳು ಈ ಪ್ರಕಾರ ಸ್ಪಷ್ಟವಾಗಿ ತೋರುತ್ತಿದ್ದರೂ, ಇವರು ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುತ್ತಿದ್ದಾರೆ.

ರಾವುಂಡ ಟೇಬಲಿಗಾಗಿ ತಮ್ಮ ಮನಕ್ಕೆ ಒಂದವರನ್ನು ಕರೆಯುವ ಕೆಲಸವು ಸರಕಾರದ್ದಲ್ಲ. ಪ್ರಜರ ಕೆಲಸವು. ನಿಮ್ಮ ಪಕ್ಷದಿಂದ ಡೆಲಿಗೇಟರನ್ನು ಕಳಿಸಿರೆಂದು ಹೇಳುವದಷ್ಟೇ ಸರಕಾರದ ಕೆಲಸ. ಹೀಗೆ ಮಾಡದೆ, ತಮ್ಮ ಎಣಿಕೆಯಲ್ಲಿ ಬರುವಂಥವರನ್ನೇ ಕರೆಯುವದರಿಂದ, ಲಾಭವು ಸರಕಾರಕ್ಕೆ ಹಾನಿಯು ಪ್ರಜಾಪಕ್ಷಕ್ಕೆ ಎಂದಾಗುವದೇ ಖಂಡಿತ. ಇಂಗ್ರೇಜಿ ಸರಕಾರದವರು ಹಿಂದುಸ್ಥಾನದ ಜುಟ್ಟುವನ್ನು ಹಿಂದುಸ್ಥಾನವು ಬಿಸಿಕೊಡದಂತೆ ಹಿಡಕೊಂಡೇ, ನೀವು ಬೇಕಾದಂತೆ, ಬೇಕಾದಷ್ಟು ಸರಿದಾಡಿರೆಂದು ಹೇಳುವರು. ಈ ರಹಸ್ಯವು ವಿಲಾಯತಿಗೆ ಹೋಗುವಂಥವರಿಗೆ ಗೊತ್ತೇ ಇಲ್ಲ.

ಪ್ರಜಾಪ್ರತಿನಿಧಿಗಳಾಗದೆ, ಪ್ರಜರ ಹೇಳಿಕೆ ಏನೆಂಬುವದನ್ನು ಪ್ರಜರಿಂದಲೇ ತಿಳಕೊಳ್ಳದೆ, ಹೋಗುವ ವಕೀಲರಿಗೆ ಯಾವ ಉಪಮೆ ಕೊಡಬೇಕೆಂಬದು ತಿಳಿಯದಾಗಿದೆ. ವಕೀಲರಾಗುವಂಥವರು ತಮ್ಮ ಪಕ್ಷಕಾರರ ಕಾಗದಪತ್ರ ಮತ್ತು ಬೇರೆ ಅವಾಂತರ ಸಂಗತಿಗಳನ್ನು ಕೇಳಿಕೊಂಡು, ವಕೀಲಿಯ ಕೌಶಲ್ಯ ನಡಿಸುವದು ವಾಡಿಕೆಯಾದದ್ದು. ಆದರೆ ಇವರು ಹಿಡಿದ ವಕೀಲಿ ಎಂತಹದು? ಸೆಶನ್ಸ ಕೋರ್ಟಿನಲ್ಲಿ ದರಿದ್ರನಿಗೆ ಸರಕಾರ ಪತಿಯಿಂದ ಕೊಡುವ ಪಾಪರ (ಬಡ) ವಕೀಲಿಯೂ, ಸರಕಾರವೇ ಫಿರ್ಯಾದಿ! ಸರಕಾರದ ಪತಿಯಿಂದಲೇ ವಕೀಲಿ ಎನಿಸಿಕೊಳ್ಳುವಷ್ಟು ದರಿದ್ರತನವು ಇನ್ನೂ ಹಿಂದುಸ್ಥಾನಕ್ಕೆ ಬಂದಿರುವದಿಲ್ಲ. ನಾವು ಭಾರತೀಯರ ಪ್ರತಿನಿಧಿಗಳಾಗಿದ್ದೇವೆಂದು ಹೇಳಿಸಿಕೊಂಡು ಹೋಗುವದರಲ್ಲಿ ಭೂಷಣವಿದ್ದಷ್ಟು, ಔತಣ ಬಂದಿದೆಂದು ತಿಂದುಕೊಂಡು ಅವರ ಮೆಚ್ಚಿದಿಂದ ಹೋಗುವದರಲ್ಲಿ

ಳಿಯುವರು ವಿಲಾಯತಿಪದ್ಧತಿಯಂತೆ ಜನರ ಮತ ಕೇಳಬೇಕು. ಇದಕ್ಕೆ ರಿಫೆರೆಂಡಮವೆನ್ನುತ್ತಾರೆ. ಈ ಪ್ರಕಾರ ಕೇಳದೆ, ಜನರ ಇಚ್ಛೆ ಮತ್ತು ಅನುರಾಗವಿಲ್ಲದೆ ತಾವಾಗಿ ಹೋಗುವದರಲ್ಲಿ ಏನೂ ಪುರುಷಾರ್ಥವಿರುವದಿಲ್ಲೆಂದು ರಾ. ಬ. ರವರು ಪೂರಾ ತಿಳಿಯಬೇಕು.

ಹಂಪೆಬೇಡ; ಕೊಂಪೆಯೇ ಲೇಸೆಂದರು

ಲಾಹೋರಿನ ಸುಪ್ರಸಿದ್ಧ ಗೃಹಸ್ಥರಾದ ದಿವಾನ ಚಮನಲಾಲರಿಗೆ ರಾವುಂಡಟೇಬಲದ ಬರುವಣಿಗೆ ಬಂದಿದಷ್ಟೆ; ಅಲ್ಲಿಗೆ ಹೋಗಲು ಇವರು 'ಹಿರಿಹಿರಿ ಹಿಗ್ಗದೆ, ಬುರುಬುರು ಉಬ್ಬದೆ, ಆಮಂತ್ರಣವನ್ನು ಸ್ವಚ್ಛವಾಗಿ ನಿರಾಕರಿಸಿದ್ದಾರೆ

"ಒಡಂಬಡಿಕೆಯ ಪ್ರಯತ್ನವು ನಿಷ್ಫಲವಾಯಿತು ಕಾಂಗ್ರೆಸದ ಮುಂದಾಳುಗಳು ಬರಲಾರರು. ಕಾರಣ ನಿಮ್ಮ ಪರಿಷತ್ತಿಗೆ ಬರುವದರಿಂದ ಯಾವ ಲಾಭವೂ ಇಲ್ಲ. ಮತ್ತು ನನ್ನಂಥವನ ಹೇಳಿಕೆಯು ಅರಣ್ಯದಲ್ಲಿ ಆಕ್ರಂದನವಾಗುವದು"

ಆದುದರಿಂದ ನಿಮ್ಮ ಆಮಂತ್ರಣವನ್ನು ಸ್ವೀಕರಿಸಬಾರೆನೆಂದು ಇವರು ಸರಕಾರಕ್ಕೆ ಪತ್ರಬರೆದು ತಿಳಿಸಿದ್ದಾರೆ

ಒಡಂಬಡಿಕೆ ಮಾಡಿಸಬೇಕೆನ್ನುವ ಅಲೆಗ್ಝಾಂಡರನಾರು?

ವಿಲಾಯತಿಯಲ್ಲಿರುವ ಮಿತ್ರ ಸಂಘದ ಓರ್ವ ಮುಖ್ಯ ಚಾಲಕರೂ, ಓಪಿಂಗಹ್ಯಾಮ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರೂ ಆದಂಥ ಪ್ರೊಫೆಸರ ಅಲೆಕ್ಝಾಂಡರಸಾಹೇಬರು ಹಿಂದುಸ್ಥಾನಕ್ಕೆ ಬಂದು ಎರಡು ತಿಂಗಳಾಯಿತು. ಇವರು ಸಿಮ್ಲಾಕ್ಕೆ ಹೋದರು. ಅಲ್ಲಿ ಕೋಶಾಧ್ಯಕ್ಷರ ಅತಿಥಿಗಳಾಗಿದ್ದರು. ಎರಡು ಮೂರು ಸಾರೆ ಲಾರ್ಡ ಅಯರ್ವಿನಸಾಹೇಬರನ್ನು ಕಂಡು ಮಾತಾಡಿದ್ದಾರೆ. ಅಲ್ಲಿಂದ ಪುಣೆಗೆ ಬಂದರು. ಗವ್ಹರ್ನರರಾದ ಸರ ಸಾಯಿಕಸಾಹೇಬರೊಂದಿಗೆ ಭೋಜನ ಮಾಡಿ, ಅವರ ಕೂಡ ಪ್ರಸ್ತುತದ ಸಂಧಿ ವಿಚಾರವನ್ನು ಕುರಿತು ವಿಚಾರವಿನಿಮಯ ಮಾಡಿದ್ದಾರೆ. ಇವರು ೯ನೆಯ ತಾರೀಖಿನ ದಿವಸ ಮಹಾತ್ಮರನ್ನು ಕಂಡು ಮೂರು ದಿವಸ ಭಾಷಣ ಮಾಡಿದರು. ಹಿಂದುಸ್ಥಾನಕ್ಕೆ ಕೂಡಲೆ ವಸಾಹತಿನ ಸ್ವರಾಜ್ಯ ದೊರೆಯುವಂತೆ ಸರಕಾರದವರು ವಚನ ಕೊಡಬೇಕೆಂದು ಮಹಾತ್ಮರ ಮತವಿದ್ದು, ಅಲ್ಲಿಗೇ ಒಡಂಬಡಿಕೆಯ ಬಾಗಿಲ ಬಂದಾಗಿದೆ ಪುನ. ಈ ಬಾಗಿಲ ತೆರೆಸಲು ಸಾಹೇಬರು ಪ್ರಯತ್ನ ನಡೆಸುವರು. ಇವರು ಮಹಾತ್ಮರ ಕೂಡ ಮೂರು ದಿವಸ ಮಾತಾಡಿದ ನಂತರ, ಮಹಾತ್ಮರಿಂದ ಪತ್ರ ಪಡಕೊಂಡು, ಪಂಡಿತ ಜವಾಹಿರಲಾಲರನ್ನೂ, ಪಂಡಿತ ಮೋತಿಲಾಲರನ್ನೂ ಕಾಣಲು ಹೊರಟಿದ್ದಾರೆ. ಇವರಂತೆ ಕಾಂಗ್ರೆಸದ ಬೇರೆ ಮುಖಂಡರನ್ನೂ ಕಾಣುವರು. ಅನಂತರ ಲಾರ್ಡ ಅಯರ್ವಿನ್ನಸಾಹೇಬರನ್ನು ಕಂಡು, ಅವರ ವಿಚಾರ ತಿಳಕೊಂಡು, ಅಲ್ಲಿಂದ ಪುನಃ ಮಹಾತ್ಮರನ್ನು ಕಾಣಲು ಎರವಡೆಗೆ ಬರುವರೆಂದು ಪ್ರಸಿದ್ಧ ಮಾಡಲ್ಪಟ್ಟದೆ.

ಸತ್ಯಾಗ್ರಹದ ಚಳವಳಿಯು ಈ ತಾಲೂಕಿನಲ್ಲಿ ಹಬ್ಬಿರುತ್ತದೆ. ಆ ಚಳವಳಿಯ ಜನರು ಹಳ್ಳಿಗಳಲ್ಲಿ ತಿರುಗಾಡಿ, ಜನರಿಗೆ ದುರುಪದೇಶ ಮಾಡುತ್ತಿರುವರು. ಸಾರ್ವಜನಿಕ ದೇವಸ್ಥಾನ ಅಥವಾ ಅದರ ಪರಿಸರದಲ್ಲಿ ಆ ಜನರು ಆಶ್ರಯ ತಕ್ಕೊಳ್ಳುವರು. ಅಥವಾ ಅಂಥಾ ದೇವಸ್ಥಾನದ ಮದತ್ತು ತಕ್ಕೊಳ್ಳುವರೆಂದು ತೋರುತ್ತದೆ ಸರಕಾರದಿಂದ ಗ್ರಾಂಟು ಸಿಗತಕ್ಕಂಥ ಇಂಥ ದೇವಸ್ಥಾನಗಳಲ್ಲಿ ಆಶ್ರಯ ಕೊಡುವದೆಂದರೆ- ರಾಜನಿಷ್ಠೆಯ ವಿರುದ್ಧ ಕೆಲಸ ಮಾಡಿದಂತಾಗುವದು. ಯಾವದಾದರು ಸಾರ್ವಜನಿಕ ದೇವಸ್ಥಾನಗಳಲ್ಲಿ ಇಂಥ ಚಳವಳಿಯ ಜನರು ಆಶ್ರಯ ಕೊಡುವದೆಂದರೆ- ರಾಜನಿಷ್ಠೆಯ ವಿರುದ್ಧ ಕೆಲಸ ಮಾಡಿದಂತಾಗುತ್ತದೆ. ಯಾವದಾದರು ಸಾರ್ವಜನಿಕ ದೇವಸ್ಥಾನದಲ್ಲಿ ಇಂಥ ಚಳವಳಿಯ ಜನರು ಆಶ್ರಯ ತಕ್ಕೊಂಡದ್ದು ಅಥವಾ ತೆಗೆದುಕೊಳ್ಳುವದು ಇನ್ನು ಮುಂದೆ ನಜರಿಗೆ ಬಂದರೆ- ಕೂಡಲೆ ನಮಗೆ ರಿಪೋರ್ಟ ಮಾಡಬೇಕು. ಯಾರಾದರು ಆಶ್ರಯ ತಕ್ಕೊಂಡರೆ- ನಿಮ್ಮ ಅನುಮತಿಯಿಂದ ಅಂಥಾ ಕೆಲಸ ನಡಿಯುತ್ತದೆಂದು ತಿಳಿದು ನಿಮ್ಮ ಬಗ್ಗೆ ಸಹ ಕೆಲಸ ನಡಿಸುವದಲ್ಲಿ ಬರುವದು"

ಜಹಗೀರದಾರ, ವತನದಾರ, ಇನಾಮದಾರರಂತೆ ದೇವಸ್ಥಾನಗಳಲ್ಲ. ದೇವಸ್ಥಾನಗಳಿಗೆ ಕೊಡುವ ಸನದಿನಲ್ಲಿ ವಚನವಾದಂತೆ ಬ್ರಿಟಿಶ ಸರಕಾರಕ್ಕೆ ರಾಜನಿಷ್ಠರುವದಾಗಿ ಇರುತ್ತೇನೆಂಬ ಶರ್ತ ಇರುವದಿಲ್ಲ. ಇದು ನಿಶ್ಚಯವಾಗಿ ಕೊಡತಕ್ಕ ದಾನವು ಸರಕಾರದಿಂದ ದೊರೆಯುವ ಗ್ರಾಂಟಿನಿಂದ ಯಾವ ದೇವಸ್ಥಾನದ ನಿತ್ಯ ನೈಮಿತ್ತಿಕ ಸೇವೆಗಳು ಪೂರಾ ನಡೆಯುವಂತಿರುವದಿಲ್ಲ. ಭಕ್ತರು ಕೊಡುವ ದ್ರವ್ಯವೇ ಬಹು ದೊಡ್ಡದಾಗುತ್ತದೆ. ಸರಕಾರದ ಭಾಗವು ಅತ್ಯಲ್ಪವಾಗಿರುತ್ತದೆ. ಮಾಮಲೇದಾರಸಾಹೇಬರು ಬೇಕಾದರೆ- ತಮ್ಮ ಗ್ರಾಂಟಿನ ಮಟ್ಟಿಗೆ ಕೆಲ ಮೊಳ ಸ್ಥಳವನ್ನು ಅಳೆದು, ಅಲ್ಲಿ ಸತ್ಯಾಗ್ರಹಿಗಳಿರಬಾರದೆಂದು ಹುಕುಮು ಮಾಡಬಹುದು. ದೇವಸ್ಥಾನಗಳು ಸಾರ್ವಜನಿಕವಾಗಿದ್ದು, ಅವುಗಳ ಮೇಲೆ ಮಾಮಲೇದಾರರಿಗಿಂತ ಹೆಚ್ಚು ಪ್ರಜರ ಹಕ್ಕು ಸ್ವಾತಂತ್ರ್ಯವಿರುತ್ತದೆ. ಕಾರಣ ಮಾಮಲೇದಾರರಾದಂಥವರು ಮರ ಕಡಿದು ಮೈಮೇಲೆ ಹಾಕಿಕೊಳ್ಳುವಂಥ ಇಲ್ಲದ ಉಸಾಬರಿ ಮಾಡದಿರುವದೇ ಲೇಸು.

ಜ್ಯೋತಿರ್ವಿದ್ವಾಂಸರ ಕಣಿ ಹೇಳಿಕೆ.

ಹೊಸರಿತ್ತಿಯ. ಜೋಯಿಸರಾದ ಶ್ರೀ ಶಂಕರಶಾಸ್ತ್ರಿಯವರು ಆಗಾಗ್ಗೆ ರಾಜಕೀಯ ವಿಷಯಗಳನ್ನು ಕುರಿತು ಭವಿಷ್ಯಕಥನ ಮಾಡುತ್ತಿರುತ್ತಾರೆ. ಇವರು ಈಗೊಂದು ಭವಿಷ್ಯ ಹೇಳಿದ್ದಾರೆ ಅದೇನಂದರೆ-

"ಮಹಾತ್ಮರು ಅಕ್ಟೋಬರ ತಿಂಗಳ ೨೭ನೇ ತಾರೀಖಿನ ದಿವಸ ಬಿಡುಗಡೆ ಹೊಂದಿ ರಾವುಂಡ ಟೇಬಲಕ್ಕೆ ಹೋಗುವರೆಂದು ಭೃಗುಸಂಹಿತೆಯಿಂದ ತೋರುತ್ತದೆ. ಇದು ಸ್ಪಷ್ಟವಾಗಿದ್ದು, ಈ ವಿಷಯವಾಗಿ ನನಗೆಷ್ಟೂ ಸಂಶಯವಿರುವದಿಲ್ಲ. ಅಕ್ಟೋಬರದ ದಿವಸ ಬುಧ-ಗುರು ಗ್ರಹಗಳು ಕೂಡಿ ಬರುವದರಿಂದ, ಮ. ಗಾಂಧಿ ಪ್ರಭೃತಿಗಳು ಕಾರಾಗೃಹದಿಂದ ಬಿಡುಗಡೆ ಹೊಂದಲಿಕ್ಕೇಬೇಕು. ಕೆಲ ಕಾಲ ಸರಕಾರದ ದಬ್ಬಾಳಿಕೆಯು ಕಸವಿನಿಂದ ನಡೆಯುವದು. ಆದರೆ ತುರಂಗವಾಸಿಯಾದ ಪ್ರಮುಖರ ಬಿಡುಗಡೆಯು ಇದೇ ತಿಂಗಳ ಕೊನೆಯ ತಾರೀಖಿನಿಂದ ಪ್ರಾರಂಭವಾಗುವದು. ಇದೇ ತಿಂಗಳ ತಾ|| [illegible]

ಬ್ರಿಟಿಶ ಸರಕಾರವು
ದೆಯಿಂದ ಹೇಳುತ್ತಾ
ನವರ ಹೆಸರು ಪ್ರ
ಗ್ರಾಫ, ಮಾರ್ನಿಂಗ
ಮಹಾತ್ಮರು ತಲೆ
ಂಚಜನ್ಯ ನಡೆಸುವ
ರು ಟೇಬಲಿನ ಅ
ಪೆಜ್ವುಡ್ ಸಾಹೇಬ
ವದಿಲ್ಲ. ಮೆ ಅ
ಧ್ಯಕ್ಷರಾಗುವರೆಂದು
ಅ ಲಿ ; ಇವರ ನಂ

ಭೂಷಣವೇ ಇರುವದಿಲ್ಲ.

ರಾವುಂಡ ಟೇಬಲಕ್ಕೆ ಹೋಗುವಂಥ ಯಾವನೇ ಪ್ರತಿನಿಧಿ ಇರಲಿ; ಆತನು ಪ್ರಜಾಪ್ರತಿನಿಧಿಯಾಗಿರುತ್ತೇನೆಂಬ ಅಭಿಮಾನವನ್ನೇ ಪಡೆಯತಕ್ಕದ್ದು. ಹೀಗೆ ಅಭಿಮಾನ ಪಡುವಾಗ, ಲೋಕಮತವನ್ನು ಬೆಂಬಲ ಮಾಡಿಕೊಂಡಿರಬೇಕು. ಕರೇ ನಿಶಾನೆಯ ಬಹುಮಾನಕ್ಕೀಡಾಗಬಾರದು. ಮ್ಯುನಿಸಿಪಾಲಿಟಿ, ಲೋಕಲ ಬೋರ್ಡ ಮತ್ತು ಕೌನ್ಸಿಲದ ಚುನಾವಣೆಯಲ್ಲಿ ತಾವು ಮತದಾರರ ಪ್ರತಿನಿಧಿಯಾಗಿರುತ್ತೇವೆಂದು ಹೇಳಿಕೊಳ್ಳುವಂತೆ, ಅಭಿಮಾನ ಪಡುವಂತೆ, ರಾವುಂಡ ಟೇಬಲಕ್ಕೂ ಪ್ರತಿನಿಧಿ ಎಂಬದಾಗಿ ಹೇಳುವಂಥ ಹಕ್ಕು ಪಡೆಯಬೇಕು. ನಾವು ಕರ್ನಾಟಕದ ಮಟ್ಟಿಗೆ ವಿಚಾರ

ಪ್ರಾಥಮಿಕ ಶಾಲೆಗಳ ಶಿಕ್ಷಕರ ಸತ್ಯಾಗ್ರಹ.

ಸುರತ ಮ್ಯುನಿಸಿಪಾಲಿಟಿಯ ಚೀಫ ಆಫೀಸರರು ಶಿಕ್ಷಕರಿಗೆ ಊರೊಳಗಿನ ದನಗಳ ಗಣತಿ ಮಾಡಲಿಕ್ಕೆ ಹುಕುಮು ಮಾಡಿದರು. ಇದು ತಮ್ಮ ಕರ್ತವ್ಯದ ಹೊರಗಿನ ಕೆಲಸವೆಂದು ಶಿಕ್ಷಕರು ಈ ಕೆಲಸ ಕೈಕೊಳ್ಳಲಿಲ್ಲ. ಇದು ಹುಕುಮಿನ ಅವಜ್ಞೆಯೆಂದು ಸ್ಕೂಲಬೋರ್ಡಿನವರು ಇವರಿಗೆ ತಲೆಗೆ ಹತ್ತು ರೂಪಾಯಿ ದಂಡ ಮಾಡಿದ್ದಲ್ಲದೆ, ಹತ್ತು ದಿವಸಗಳಲ್ಲಿ ಚೀಫ ಆಫೀಸರರ ಕ್ಷಮೆ ಬೇಡಿಕೊಳ್ಳಬೇಕೆಂದೂ ಗರ್ಜಿಸಿದರು. ಶಿಕ್ಷಕರು ದಂಡ ಕೊಡಲಿಲ್ಲ. ಕ್ಷಮೆ ಬೇಡಿಕೊಳ್ಳಲಿಲ್ಲ. ಶಿಕ್ಷಕರಿಗೆ

ರಿಂದ ೩೭ ರಲ್ಲಿ ಮಹಾತ್ಮರ ಬಿಡುಗಡೆಯಾಗುವದೆಂದು ಭವಿಷ್ಯ ಹೇಳಿದ್ದನು. ಆದರೆ ಬುಧ ಮತ್ತು ಸಪ್ತರ್ಷಿಗಳ ಅಶುಭ ಯೋಗವನ್ನು ಲೆಕ್ಕಕ್ಕೆ ಹಿಡಿಯುವಾಗ ತುಸು ತಪ್ಪಿದ್ದರಿಂದ ಬಿಡುಗಡೆಯ ತೇತಿಯಲ್ಲಿ ತುಸು ಬದಲಾಗುವದು ಶಕ್ಯವದೆ. ಸಕ್ರಾಬಯಾಕರರ ಶಿಕ್ಷೆಯು ಪೂರಾ ಮುಗ್ಗಿತೆಂದು ತಿಳಿಯಲಾಗದು. ಇಷ್ಟಾದರೂ, ಅದನ್ನು ಕೊನೆಗಾಣಿಸಲು ಮುಂದೆ ಬರುವರು. ಅಕ್ಟೋಬರದ ಕೊನೆಯಲ್ಲಿ ಎಂ. ಗಾಂಧಿ ಮೊದಲಾದವರು ಬಿಡುಗಡೆ ಹೊಂದಿ, ರಾವುಂಡ ಟೇಬಲಕ್ಕೆ ಹೋಗುವರು.

ಜೋತಿಮಾರ್ತಾಂಡರ ಕಣಿಹೇಳುವಿಕೆಯು ತಿಥಿ, ವಾರ ಮುಗಿದ ಬಳಿಕ, ಇವರು ಮಹಾಯುದ್ಧ

ವಣೆಯಲ್ಲಿ ಯಾರಾರು ಆರಿಸಿ ಬಂದರೆಂಬದು ಗೊತ್ತಾಗುವ ಮೊದಲು- ಯಾರಾರು ಆರಿಸಿ ಬಂದಂತಾಯಿತೆಂಬದನ್ನು ಧೋರಣಾಕಟ್ಟಿ, ಅವರಲ್ಲಿ ಯಾರು ಮಂತ್ರಿಯಾಗುವರೆಂಬ ಚರ್ಚೆಯನ್ನು ಈಗಿನಿಂದಲೇ ಇಂಗ್ಲಿಷ ಪತ್ರಗಳು ನಡೆಸಿವೆ. ಮಂತ್ರಿಯಾಗತಕ್ಕವರು ಜನರಿಂದಲೇ ಆರಿಸಲ್ಪಟ್ಟವರಾಗಿರಬೇಕು. ಆದರೆ ಆಳರಸರು ಇವರು ಜನರ ವಿಶ್ವಾಸಕ್ಕೆಷ್ಟು ಪಾತ್ರರಾಗಿದ್ದಾರೆ. ಅವರಿಗೆ ಎಲ್ಲಿ ಹೇಗೆ ಪೂಜೆ ನಡೆಯಿತೆಂಬದನ್ನು ವಿಚಾರಮಾಡದೆ, ತಮಗೆ ಅವರು ನಂಬಿಗಸ್ಥರಾಗಿದ್ದಾರೆಂಬ ಮಾತ್ರದಿಂದ ಅವರಿಗೆ ಮಂತ್ರಿಪದ ಕೊಡುವರು. ಸರ ವಸಂತರಾಯರು ಯಾವಾಗಲು ಸರಕಾರದ ನಿಶಾನೆ ಹಿಡಿಯತಕ್ಕವರು. ಅವರಿಗೆ ಮಂತ್ರಿಪದ ಕೊಡಬೇಕಾಗಿದೆ. ಆದ್ದರಿಂದ ಅವರು ನಾಮಿನೇಶನದ ಬದಲಾಗಿ ಇಲೆಕ್ಷನದ ಗೊಂದಲದಲ್ಲಿ ಬಿದ್ದಿದ್ದಾರೆ ಆಳಿದ ಊರೊಳಗೆ ಉಳಿದವರ್ನೇ ಗೌಡರಾಗಿರುವದರಿಂದ, ಇವರು ಆರಿಸಿ ಬರುವರು. ಇತರ ತರುವಾಯ ಈಗೊಬ್ಬ ಮಂತ್ರಿಯಾದ ದಿವಾನ ಬಹಾದ್ದೂರ ಹರಿಲಾಲ ದೇಸಾಯಿಯವರು ಗುಜರಾಥದಲ್ಲಿ ಅಸಹ್ಯವಾಗಿ ನಡೆದ ಅತ್ಯಾಚಾರಗಳಿಗೆ ಬೇಸತ್ತು, ಕೌನ್ಸಿಲೂ ಬೇಡ; ದಿವಾನಗಿರಿಯೂ ಬೇಡೆಂದು ಚುನಾವಣೆಗೇ ನಿಲ್ಲಲಿಲ್ಲ. ಆದ್ದರಿಂದ ಅವರ ಬದಲಿಗೆ ಸರ ವಸಂತರಾಯರು ದಿವಾನರಾಗುವದಾಯಿತು. ಪ್ರಸ್ತುತದಲ್ಲಿ ವಿದ್ಯಾಖಾತೆಯ ಮಂತ್ರಿಯಾಗಿರುವ ಮೌಲ್ವಿ ರಫಿಯುದ್ದೀನಸಾಹೇಬರು ಒನ್ನೆ ನುಂಗಿದ ಮಾಣಿಕವನ್ನು ಉಗುಳಲಿಕ್ಕೆ ಸಿದ್ಧರಿಲ್ಲ. ಹೀಗೆ ಇವರೂ ದಿವಾನರಾಗುವರು. ದಿವಾನ ಜಾಧವರಾಯರು ಮೂರನೆಯವರು ಇವರು ಅಸೆಂಬ್ಲಿಗೆ ಹೋದದ್ದರಿಂದ ಇವರ ಸ್ಥಾನವು ರಾ. ಬ. ಕಂಬಳಿಯವರಿಗೆ ದೊರೆಯುವದೆಂದೂ ದೊರೆಯಬೇಕೆಂದೂ ಹೇಳಿಕೆಯಾಗಿದೆ. ದಿವಾನ ಜಾಧವರಾಯರಿಗೂ, ಹಿಂದಕ್ಕೆ ರಾ. ಬ. ಕಂಬಳಿಯವರಿಗೂ ಇದೇ ಅಧಿಕಾರದ ಆಸೆಯಿಂದ ಮೇಲಾಟ ನಡೆದಿತ್ತು. ಪರಸ್ಪರ ಮನಸ್ತಾಪವೂ ಆಗಿತ್ತು. ಸದ್ಯ ದಿ. ಜಾಧವರಾಯರು ಅಸೆಂಬ್ಲಿಗೆ ಹೋದದ್ದು, ರಾ. ಬ. ಕಂಬಳಿಯವರಿಗೆ ನಿರಾತಂಕ ದಾರಿಯಾಗಿರುತ್ತದೆ

ಮುಂಬಯಿಯ ಟಾಯಿಮ್ಸ ಪತ್ರವು ಇಷ್ಟು ಹೇಳಿದ್ದರೆ ಸಾಕಾಗಿತ್ತು. ರಾ. ಬ. ರವರೊಬ್ಬರೇ ಚಲುವರಲ್ಲ. ಅವರಿಗೆ ಬೆಳಗಾವಿಯ ಶ್ರೀ ಚಿಕ್ಕೋಡಿ ಪಂಡಿತಪ್ಪನವರೂ, ಮುಂಬಯಿಯ ಮಿ. ಆನವಳಿಯವರೂ ಪ್ರತಿಸ್ಪರ್ಧಿಯಾಗಿದ್ದಾರೆಂದು ಹೇಳುತ್ತದೆ. ರಾ. ಬ. ಕಂಬಳಿಯವರು ಕೌನ್ಸಿಲದ ಡಿಪುಟಿ ಪ್ರೆಸಿಡೆಂಟರಾಗಿರುವದರಿಂದ, ಅವರ ಹಕ್ಕು ಹೆಚ್ಚಿನದಿರುವದು. ಆದರೆ ಅವರಿಗೆ ರಾವುಂಡ ಟೇಬಲಕ್ಕೆ ಆಮಂತ್ರಣ ಬಂದದ್ದರಿಂದ, ಸರಕಾರವು ಒಂದು ಉಪಕಾರ ಮಾಡಿತ. ಉಳಿದಿಬ್ಬರಲ್ಲಿ ಯಾರಿಗಾದರೂ ದಿವಾನಗಿರಿ ಕೊಡಬೇಕೆಂದೂ ಕೆಲವರ ಮತವುಂಟು.

ದಿವಾನರ ಮೂರು ಸ್ಥಳಗಳುಂಟು. ಕಾಯಿದೆಭಂಗದ ದೆಸೆಯಿಂದ ಸರಕಾರದ ಆದಾಯ ಕಡಿಮೆಯಾದ್ದರಿಂದ, ಎರಡೇ ಸ್ಥಳಗಳನ್ನು ಮಾಡಬೇಕೆಂಬ ವಿಚಾರ ನಡೆದಿದೆ. ದಿವಾನರಿಗೆ ತಿಂಗಳಿಗೆ ನಾಲ್ಕು ಸಾವಿರದ ಸಂಬಳವುಂಟು. ಈ ಸಂಬಳವನ್ನು ಒಂದೇ ಸಾವಿರ ಮಾಡಿ, ಮೊದಲಿನಂತೆ ಮೂವರನ್ನೇ ಇಡಬೇಕೆಂದೂ ಅನ್ನುತ್ತಾರೆ. ಯಾವದೆಂಬದು ನವ್ಹಂಬರ ತಿಂಗಳ ಮೊದಲನೆಯ ವಾರದಲ್ಲಿ ಪ್ರಸಿದ್ಧವಾಗುವದು.

ಪೋಲಿಸರ ಗುಂಡಿನಿಂದ ಕಾಂಗ್ರೆಸದ ಉಪಾಧ್ಯನ ಕಾಲು ಕತ್ತರಿಸಲ್ಪಟ್ಟಿತು.

ರಾಣೇಬೆನ್ನೂರ ತಾಲೂಕಿನಲ್ಲಿ ಉಕ್ಕುಂದವೆಂಬದೊಂದು ಪೋಲಿಂಗ ಸ್ಟೇಶನವು. ಹಲಗೇರಿ ಮೊದಲಾದ ಸುತ್ತು ಮುತ್ತಲಿನ ಗ್ರಾಮಗಳ ಜನರು ಅಲ್ಲಿಯ ಪೋಲಿಂಗದ ಸೋಜಿಗ ನೋಡಲಿಕ್ಕೆ ಹೋದರು. ಉಕ್ಕುಂದ ಹಲಗೇರಿಯವರೊಂದೂ ಹೋಟು ಹಾಕಲಿಲ್ಲ. ಜೆನಕನಕೊಂಡದವರು ಮಾತ್ರ ಕಾಂಗ್ರೆಸದ ಆಜ್ಞೆಯನ್ನು ಧಿಕ್ಕರಿಸಿ ಬೇಕೆಂದು ಹಟದಿಂದ ಹೋಟು ಹಾಕಿದರು. ಹೋಟು ಹಾಕುವಾಗ ಎಚ್ಚಾ, ಅಯ್ಯಾ ನಿಮಗೆ ಕಂಬಳಿ ಬೇಕೇ? ಕಾಂಗ್ರೆಸ ಬೇಕೇ? ಎಂದು ರಾಣೇಬೆನ್ನೂರಿನವರಂತೆ ಇಲ್ಲಿಯೂ ಕೂಗುತ್ತಿದ್ದರು. ಕೆಲವು ದೊಡ್ಡ ಮನುಷ್ಯರು ಇವರ ಕಾಲಿಗೆ ಬಿದ್ದು ಬೇಕಾದಷ್ಟು ಹೇಳಿಕೊಂಡರೂ, ಹೋಟು ಹಾಕಿದರು. ಹೊರಗೆ ಬಂದ ಕೂಡಲೆ ಇವರಿಗೆ ಮಯ್ಯು ಕಾವು ದಹನದ ದಿವಸ ಆಗುವ ಥ ಒನ್ನಾಗದ್ದಾಯಿತು ಇಷ್ಟರಿಂದಲೇ ಇವರು ಸುಮ್ಮಗಾಗಲಿಲ್ಲ. ಜೆನಕನಕೊಂಡದವರಿಗೆ ಸಾಮಾಜಿಕ ಬಹಿಷ್ಕಾರ ಹಾಕಿ, ಅವರನ್ನು ಸೂತಕಿಗಳಂತೆ ತಿಳಿಯಬೇಕೆಂದು ಎಲ್ಲಾ ಗ್ರಾಮದವರು ನಿರ್ಣಯಿಸಿದರು ಅದರ ಪ್ರತ್ಯಕ್ಷ ಅನುಭವವು ಮರುದಿವಸವೇ ಬಂತು. ಅಂದು ಹಲಗೇರಿಯ ಸಂತೆ ಅಲ್ಲಿಯವರು ವಿಳೆದೆಲೆ, ಮೆಣಸಿನಕಾಯಿ, ಬೆಣ್ಣೆ ಮೊದಲಾದ ಪದಾರ್ಥಗಳನ್ನು ಮಾರಾಟಕ್ಕಾಗಿ ತಂದರು. ಇವರಲ್ಲಿ ಯಾರೂ ಕೊಳ್ಳಲಿಲ್ಲ; ಇವರಿಗೆ ಬೇಕಾದ ಪದಾರ್ಥಗಳನ್ನು [illegible] ಪ್ರತಿಕೂಲರು ಅಲ್ಲ. ಕಂಟಿ ಸಾಲಿರಲಿ. ಪ್ರಬಲವಾಗಿ ಬಿದ್ದ ಬಹಿಷ್ಕಾರದ ವರ್ತಮಾನವನ್ನು ಆ ಊರ ಮುಖಂಡರು ಕೇಳಿ, ಹಲಗೇರಿಗೆ ಬಂದು, ಹೋಟು ಹಾಕಿದ್ದು ತಪ್ಪಾಯಿತೆಂದು ಹೇಳಿಕೊಂಡು ಐದು ರೂಪಾಯಿ ದಂಡ ಕೊಟ್ಟು ಮುಂದೆ ಹೇಳಿದ ಶರ್ತಗಳಿಗೆ ಒಪ್ಪಿದಂತೆ ಮಹಾತ್ಮರ ಫೋಟೋದ ಕೆಳಗೆ ನಿಂತು ಪ್ರತಿಜ್ಞೆ ಮಾಡಿದರು.

ವದಿಲ್ಲ.

೨ ಖಾದಿಯ ಪ್ರಸಾರ ಮಾಡುವೆವು.

೩ ಸರೆ ಸಿಂದಿ ಕುಡಿಯುವವರಿಗೆ ಬಹಿಷ್ಕಾರ ಹಾಕುವೆವು.

ಈ ಪ್ರಕಾರ ಇವರು ಭಾಷೆ ಕೊಟ್ಟನಂತರ ಅವರ ಬಹಿಷ್ಕಾರ ಹೋಗಿ ವ್ಯಾಪಾರ ನಡೆಯಿತು.

ಹೊಸರಿತ್ತಿಯಲ್ಲಿ ಬಹಿಷ್ಕಾರದ ಕತ್ತೆಗಳ ಮೆರವಣಿಗೆ.

ಚುನಾವಣೆಯ ದಿವಸ ಪೋಲಿಂಗ ಆಫೀಸರ ಮತ್ತು ಪೋಲಿಸರಿಗೆ ಮೂರು ಬತ್ತಿತ್ತು ಹಾಲು, ಮೊಸರು ಹಿಟ್ಟಿಗೆ ಮುಂತಾದ ಯಾವ ಪದಾರ್ಥಗಳೂ ಸಿಗದೆ, ಅವರಿಗೆ ಉಪವಾಸ ಹೋಗಬೇಕಾಯಿತು. ಸರಕಾರದವರು ಕಚೇರಿ-ರಾಂಬೆಗೆ ಸೂಟಿ ಬಿಟ್ಟಂತೆ, ಉದ್ಯೋಗಸ್ಥರೂ ತಮ್ಮ ಉದ್ಯೋಗಗಳನ್ನು ಬಿಟ್ಟು, ವಿಶ್ರಾಂತಿ ತಕ್ಕೊಂಡರು. ಒಂಭತ್ತು ಹೊಡೆಯುವಾಗ ಪೋಲಿಂಗ ಹೇಗೆ ನಡೆದಿದ್ದೆಂಬದನ್ನು ನೋಡಲು ಮಾಮಲೇದಾರರು ಬಂದರು. ಕೂಡಿದ ಜನರ ಕೂಡ ಮಾತಾಡಬೇಕೆಂದರು. ಆದರೆ ಒಬ್ಬರೂ ಮಾತಾಡಲಿಲ್ಲ. ಮಾತಾಡಿಸಿದರೂ, ಮಾತಾಡುವವರು ಸಿಗಲಿಲ್ಲ. ಕೊನೆಯಲ್ಲಿ ಕರೇ ನಿರಾಸೆಗಳ ಬಹುಮಾನ ಹೊಂದಿದರು. ನೊಣ ಕೂಡ ಪೋಲಿಂಗದ ಕಡೆಗೆ ಹಾಯಲಿಲ್ಲ. ಪೋಲಿಸರೂ, ಪೋಲಿಂಗ ಆಫೀಸರರೂ ನಿದ್ರಾಸುರನ ಆಹ್ವಾನವನ್ನು ಮೊದಲಿನಿಂದ ಅಂಗವಟಿ ಬೀಳುವತನಕ ಪೂರಾ ನೋಡಿದರು. ಕೊರಕೂರಿನವರು ಸರಕಾರಕ್ಕೆ ಸಹಾಯ ಮಾಡುವ ವಚನ ಕೊಟ್ಟಿದ್ದರೂ, ಹೋಟು ಹಾಕಲಿಕ್ಕೆ ಬರಲಿಲ್ಲ. ಕೊನೆಯಲ್ಲಿ ಗ್ರಾ

ಯಲಗಚ್ಚಿನ ಗೌಡರ ಕ್ಷಮಾಪತ್ರವು.

ಕರ್ನಾಟಕ ಪ್ರಾಂತದ ಅಧ್ಯಕ್ಷರ ಸನ್ನಿಧಿಗೆ

ಮಹನೀಯರೇ-

ಕೆಳಗೆ ಸಹಿ ಮಾಡಿದ ನಾನು ಇಂದು ಕಾಂಗ್ರೆಸದ ಅಪ್ಪಣೆಯನ್ನು ಮೀರಿ, ಕೌನ್ಸಿಲ ಉಮೇದವಾರರಾಗಿ ನಿಂತ, ಮಿ. ವಿಶ್ವನಾಥರಾವ ಜೋಗ ಇವರಿಗೆ ಮತ ಕೊಟ್ಟು, ಅಕ್ಷಮ್ಯ ಅಪರಾಧವನ್ನು ಮಾಡಿರುವೆನು. ಈ ದೇಶದ್ರೋಹ ಮಾಡಿದ್ದಕ್ಕೆ ನನ್ನನ್ನು ದಯಾಳುಗಳಾದ ತಾವು ಕ್ಷಮಿಸಬೇಕಾಗಿ ಬೇಡಿಕೊಳ್ಳುತ್ತೇನೆ.

ಹಣಮಂತಗೌಡಾ ಪಾಟೀಲ, ಯಲಗಚ್ಚ
ತಾಲೂಕ ಕರಜಗಿ ಗ್ರಾಮ ಹೊಸರಿತ್ತಿ

ಹೋಟು ಕೊಟ್ಟದ್ದಕ್ಕಾಗಿ ಕತ್ತಲೆ ಕೋಣೆಯ ಶಿಕ್ಷೆ ಮಾಡಿಕೊಂಡರು.

ಕಾಂಗ್ರೆಸದವರಿಂದ ಮನೆ ಕಂಡರು.

ರಾಣೇಬೆನ್ನೂರಲ್ಲಿ ಮ್ಯುನಿಸಿಪಾಲಿಟಿಯ ಚೇರಮನರಾದ ರಾ. ರಾ. ಬೇವಿನ ಚನ್ನವೀರಪ್ಪನವರು ಹೋಟು ಕೊಡಲಿಕ್ಕೆ ಹೋದರು. ಶ್ರೀ ಗುರುಸಿಂದಯ್ಯನವರು ಅಡ್ಡ ಮಲಗಿ, ದಾಟಿ ಹೋಗಬೇಕೆಂದು ಇವರಿಗೆ ಬೇಡಿಕೊಂಡರು. ಆದರೂ ರಾ. ರಾ. ವೀರಪ್ಪನವರು ಅಯ್ಯನವರನ್ನು ದಾಟಿ ಹೋಟು ಹಾಕಲಿಕ್ಕೆ ಹೋದರು. ಹೋಟು ಹಾಕಿದನು. ಜನರು ಏನು ಮಾಡುವರೋ ಎಂಬ ಹೆದರಿಕೆಯಿಂದ ಹತ್ತರವೇ ಇದ್ದ ದವಾಖಾನೆಯಲ್ಲಿ ಹೋಗಿ, ಅಲ್ಲಿದ್ದ ಒಂದು ಕೋಣೆಯಲ್ಲಿ ಕೂತು ಬಾಗಿಲು ಹಾಕಿಕೊಂಡರು. ತಮಗೆ ತಾವೇ ಕತ್ತಲೆ ಕೋಣೆಯ ಶಿಕ್ಷೆ ವಿಧಿಸಿಕೊಂಡರು. ಮೂರು ತಾಸಾದರೂ ಹೊರಗೆ ಬರಲಿಲ್ಲ. ಆಗ ಕಾಂಗ್ರೆಸದವರೇ ಇವರಿಗೆ ಧೈರ್ಯ ಕೊಟ್ಟು, ಹೊರಗೆ ಕರತಂದು ಸುರಕ್ಷಿತದಿಂದ ಮನೆ ಮುಟ್ಟಿಸಿದರು. ಸಾಯಂಕಾಲದಲ್ಲಿ ನಾಲ್ಕು ಸಾವಿರ ಜನರ ಪ್ರಚಂಡ ಮೆರವಣಿ[illegible] ಹೋಟು ಹಾಕದವರ ಅಭಿನಂದನ ಮಾಡಲ್ಪಟ್ಟಿತು.

ಮುಂಬಯಿಯ ಕನ್ನಡಿಗರ ಕಾಂಗ್ರೆಸದ ಅಭಿಮಾನವು.

ಮುಂಬಯಿಯಲ್ಲಿ ವಾಸವಾಗಿರುವ ಕನ್ನಡಿಗರ ಸಂಖ್ಯೆಯು ಕನಿಷ್ಠ ೨೫ ಸಾವಿರವುಂಟು. ಇವರು ಕಾಂಗ್ರೆಸ ಭಕ್ತರಿದ್ದಾರೆ. ಮುಂಬಯಿಯಲ್ಲಿ ನಡೆಯುವ ಕಾಂಗ್ರೆಸದ ಪ್ರತಿಯೊಂದು ಚಟುವಟಿಕೆಯಲ್ಲಿ ಭಾಗ ತಕ್ಕೊಳ್ಳುವರು.

ಹೋದ ವಾರದಲ್ಲಿ ಇವರೊಂದು ಸ್ಪೇಶಲ ಸಭೆ ಕರೆದಿದ್ದರು. ಇಂಗ್ರೇಜಿ ಸರಕಾರದ ರಾವುಂಡ ಟೇಬಲಕ್ಕೆ ಬಹಿಷ್ಕಾರ ಹಾಕುವದೂ, ಸ್ವರ್ಗವಾಸಿ ಸರ ಚಂದಾವರಕರರ ಚಿರಂಜೀವರಾದ ಮಿ. ಪ್ರಿ. ಎನ್. ಚಂದಾವರಕರರು ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚುವದರ ವಿರುದ್ಧವಾಗಿ ಮತ ಕೊಟ್ಟ ಬಗ್ಗೆ ಅವರ ಕೃತ್ಯ ವಿರೋಧಿಸುವದೂ ಸಭೆಯ ಮುಖ್ಯ ಉದ್ದೇಶವಾಗಿತ್ತು. ಆ ಪ್ರಕಾರ ಈ ಎರಡೂ ಠರಾವುಗಳು ಸರ್ವಾನುಮತದಿಂದ ಪಾಸಾದವು

ಈ ಸಭೆಯಲ್ಲಿ ಶ್ರೀ. ರಾವರವರು ಒಂದು ಮಹತ್ವದ ವಿಚಾರ ಹೇಳಿದರು ಉಮೇದವಾರರು ಹೋಟು ಬೇಕಾದಾಗ, ಮಾನ ಮರ್ಯಾದೆ ತೊರೆದು, ಬಂದ ಮನೆ, ಬಿಡದ ಮನೆಗೆ ಹೋಗಿ ಹೋಟಿನ ಭಿಕ್ಷೆ ಬೇಡುವರು. ಆದರೆ- ಯಾವದೊಂದು ಮಹತ್ವದ ವಿಷಯದಲ್ಲಿ ತಾವೇ ದೊಡ್ಡ ಜಾಣರೆಂದು ತಮಗೆ ತೋರಿದಂತೆ ನಡೆಯುವರು. ಮಿ. ಚಂದಾವರಕರರು ಕನ್ನಡಿಗರ ಹೋಟುಗಳಿಂದ ಮೆಂಬರರಾಗಿದ್ದಾರೆ ಇವರು ಈ ಉಪಕಾರ [illegible] ಮರೆತ, ಕನ್ನಡಿಗರು ಕಾಂಗ್ರೆಸದ ಅಭಿಮಾನಿಗಳೆರು

ಗುರಿಯಾದಂತಾಯಿತು. ಈನಂ
ಸಾವಣಿಯಲ್ಲಿ. ಕಾಂಗ್ರೆಸದಂತೆ ನ
ಪ್ರತಿಜ್ಞಾ ಪತ್ರದ ಮೇಲೆ ಸಹೀ
ಹೋಟು ಕೊಡುವದಾದರೆ- ತಾಲೂ
ಕಾ ಬೋರ್ಡು ಕಾಂಗ್ರೆಸಕ್ಕೆ
ಲ್ಲಿಯ ಹಿತವಾಗುವಂಥ ಹಲವು
ಲಸಗಳನ್ನು ಮಾಡಲಿಕ್ಕಾಗುವದು.

ಗುಳೇದಗುಡ್ಡದಲ್ಲಿ ವಿಲಾಯ
ಸಕ್ಕರೆಗೆ ಬಹಿಷ್ಕಾರ

ವಿಲಾಯತಿಯ ಸಕ್ಕರೆಗೆ ಬ
ಬೇಕೆಂದು ಕಾಂಗ್ರೆಸದ ಆಜ್ಞೆ- ಇದ
ರೂ ಅನೇಕ ಜನರು ಧರ್ಮದ ದೆಸೆ
ಅಸ್ಪೃಶ್ಯ ಮಾಡುತ್ತಿದ್ದಾರೆ. ಹೋ
ದಿವಸ ಅಲ್ಲಿ ಶ್ರೀ ಸಾ॥ ಪಣಿಚಿ ಕ
ವರ ಉಪನ್ಯಾಸವಾಯಿತು. ಆ
ದುಂಡು ಮೇಜಿನ ಸಭೆಗೆ ರ
ಯವರಿಗೆ ಹೋಗಬೇಕೆಂದು ವಿನ
ಳ್ಳಬೇಕೆಂಬ ಠರಾವು ಪಾಸಾಯಿ
ಶ್ರೀ. ನೀರಲಕೇರಿ ಶ್ರೀ ಪಿ
ರ ಭಾಷಣವಾಯಿತು. ಸಭೆ ಮುಗಿ
ವೀರಭದ್ರಪ್ಪಾ ಕದಾಮಪೂರರವರು
ಡಿಯಲ್ಲಿದ್ದ ಪರದೇಶಿ ಸಕ್ಕರೆಯನ್ನು
ನಂತೆ ಸೂರೆ ಮಾಡಿ, ಈನಂತರ
ಸುವದಿಲ್ಲೆಂದು ಪ್ರತಿಜ್ಞೆ ಮಾಡಿದರು

ಶ್ರೀ. ಮಂಗಳವೇಢೆಯವ

ಶ್ರೀ. ಕೌಜಲಗಿಯವರಿಗೆ

ಮೊನ್ನೆ ತಾರೀಖು ೧೫ ಸೊ
ಸ ಬಾಗಲಕೋಟೆಯಲ್ಲಿ ಶ್ರೀ. ಮಂ
ವಾಡರಾಯರು, ಕೌಜಲಗಿ ಹಣಮಂ
ತ್ತು ಶ್ರೀ. ಚನ್ನಪ್ಪನವರ ಮೇಲೆ ಹ
ಪ್ಪದ [illegible] ಶ್ರೀ. ಶ್ರೀ
ಪಾಯಿ ದಂಡವಾಯಿತು. ಉಳಿದ
ಹೊಂದಿದರು. ಶ್ರೀ. ಶ್ರೀನಿವಾಸ
ಮೊದಲು ಎ ಕ್ಲಾಸ ಕೊಟ್ಟಿದ್ದರು.
ಕ್ಲಾಸಿಗೆ ಹಿಂಬಡತಿ ಕೊಟ್ಟರು

ರಾವುಂಡ ಟೇಬಲದ ಪ್ರತಿ
ಸಂಸ್ಥಾನಿಕರು

೧ ಆಳ್ವಾರದ ಮಹಾರಾಜರು ೨
ಯಕವಾಡರು ೩ ಭೋಪಾಳದ ನವ
ನೇರ್ ಮಹಾರಾಜರು ೫ ಧೋಲಪ
ಜಾ ರಾಣಾ ೬ ಕಾಶ್ಮೀರದ ರಾಜರ
ದ ರಸರು ೮ ಪತಿಯಾಳಾ ಪ್ರಭುಗ
ಸ್ಥಾನಿಕರು ೧೦ ಸಾಂಗ್ಲಿಯ ಚೀ
ರ್ ಪ್ರಭಾಶಂಕರ ಪಟ್ಟಣಿ ೧೨ ಸ
ಮೆಹತಾ ೧೩ ಸರದಾರ್ ಸುಲ್ತಾನ
ನ ೧೪ ಸರ್ ಹೈದರಿ ೧೫ ಸರ್
ಯಿಲ್ ೧೬ ಕರ್ನಲ್ ಹಕ್ಸರ್

ಬ್ರಿಟಿಶ ಹಿಂದುಸ್ಥಾನದ

೧ ಆಗಾಖಾನ ೨ ನವಾಬ ಸ
೩ ಸರ್ ಸಿ ಪಿ ರಾಮಸ್ವಾಮಿ
ಅಂಬೇಡಕರ್ ೫ ಚಂದ್ರಧರ ಭೂ
ಬಸು ೭ ಸರ ಶಹಾ ನವಾಜ್ ೮ ನ
ಟ್ಟ ಕಾರ್ ೯ ದಿವಾನ ಬಹದ್ದೂ
ಯ ಚಿಂತಾಮಣಿ ೧೧ ದರ್ಭಾಂಗಾ
ಡೆಕ್ಸ್ನ ವಿಲ್ ೧೩ ಫಜಲ್ ಉಲ್
ಹಸನ್ ಖಾನ ೧೫ ಎ. ಎಚ್. ಘಜವಿ
ಬ್ ೧೬ ಷ್ಟೆ ೧೭ ಮ॥ ಷಫೀಜ್

ಪೋಲೀಸರ ಗುಂಡಿನಿಂದ ಕಾಂಗ್ರೆಸದ ಉಪಾಧ್ಯನ ಕಾಲು ಕತ್ತರಿಸಲ್ಪಟ್ಟಿತು.

ಮೀರಠದ ಹತ್ತಿರವಿರುವ ಗುಲೋಠಿ ಎಂಬ ಗ್ರಾಮದಲ್ಲಿ ಕೂಡಿದ ಸಭೆಯನ್ನು ಪೋಲೀಸರು ಚದರಿಸಿದರು. ಪುನಃ ಜನರು ಕೂಡಿದರು. ಆಗಾದ ದಂಗೆಯಲ್ಲಿ ಸಬ್ ಇನ್ಸ್ಪೇಕ್ಟರನು ಸತ್ತನು. ಪೋಲಿಸರು ಹಾಕಿದ ಗುಂಡುಗಳಲ್ಲಿ ಒಂದು ಗುಂಡು ಕಾಂಗ್ರೆಸದ ಉಪಾಧ್ಯಕ್ಷನ ಕಾಲಿಗೆ ಬಡಿಯಿತು. ಅಪ್ಪ

ನಕ ಪೂರಾ ನೋಡಿದರು. ಕೊರಗೂರಿನವರು ಸರಕಾರಕ್ಕೆ ಸಹಾಯ ಮಾಡುವ ವಚನ ಕೊಟ್ಟಿದ್ದರೂ, ವೋಟು ಹಾಕಲಿಕ್ಕೆ ಬಂದಿಲ್ಲ. ಕೊನೆಯಲ್ಲಿ ಗ್ರಾಮಸ್ಥರು ವೋಟು ಹಾಕಿ, ತಾವು ಸರಕಾರದ ಭಕ್ತರೆಂಬುದನ್ನು ತೋರಿಸಿಕೊಂಡರು. ವೋಟಿಂಗ್ ಮುಗಿದ ಬಳಿಕ ನೋಡುವಾಗ ೪೩೦ ವೋಟುಗಳಲ್ಲಿ ನಾಲ್ಕೇ ಮತಗಳು ಬಿದ್ದಂತೆ ಕಂಡು ಬಂದಿತು. ಮುಸಲಮಾನರ ಪೆಟ್ಟಿಗೆಯಲ್ಲಿ ಇಲೀ ಓಡಾಡಿದವು. ಸಾಯಂಕಾಲದಲ್ಲಿ ಇನ್ಸ್ಪೆಕ್ಟರರ ಸ-

ಯರೆಂದು ತಮಗೆ ತೋರಿದಂತೆ ನಡೆಯುವರು.

ಮಿ|| ಧಾದಾವರಕರರು ಕನ್ನಡಿಗರ ವೋಟುಗಳಿಂದ ಮೆಂಬರರಾಗಿದ್ದಾರೆ ಇವರು ಈ ಉಪಕಾರ ಪೂರಾ ಮರೆತು, ಕನ್ನಡಿಗರು ಕಾಂಗ್ರೆಸದ ಅಭಿಮಾನಿಗಳಿರುತ್ತಾರೆಂಬುದನ್ನು ತುಚ್ಛ ಮಾಡಿ, ರಾಷ್ಟ್ರೀಯ ನಿಶನೆಯ ವಿರುದ್ಧ ಮತ ಕೊಟ್ಟಿದ್ದಾರೆ. ಮುಂದಿನ ಚುನಾವಣೆಯಲ್ಲಿ 'ಇವರಿಗೆ ವೋಟೇ ಕೊಡತಕ್ಕದ್ದಲ್ಲ.

ಶ್ರೀಯುತ ರಾವರು ಆಡಿದ ಮಾತು, ಮಾಡಿದ ಸೂಚನೆಯನ್ನು ಕರ್ನಾಟಕದಲ್ಲೆಲ್ಲರೂ ಮನ

ಡೆಸ್ಲಿನ್ ವಿಲ್ ೧೩ ಫಜುಲ್ ಉಲ್ ಹ
ಹುನಘಿನೆ ೧೫ ಎ. ಎಚ್. ಘುಜವಿ ೧
ಲ್ ಗಿಡ್ನೆ ೧೭ ಬ|| ಹಫೀಜ್ ಹಿದ
೧೮ ಎಂ. ಆರ್. ಜಯಕರ ೧೯ ಸರ
ಜಹಾಂಗಿರ್ ೨೦ ಎಂ. ಎ. ಜಿನ್ನಾ
ಫ್. ಗವಿನಜೋನ್ಸ್ ೨೨ ಡಾ|| ಮು
ರಾಮಸ್ವಾಮಿ ಮೊದಲಿಯಾರ್ ೨೪
ರು ೨೫ ಮೌಲಾನಾ ಮುಹಮ್ಮದ ದಾ
ವುದ ಷಾಫಿ ೨೬ ರಾಜಾ ನರೇ

ದ ಸುಲ್ತಾನ ಅಹಮದ ೪೫ ವ. ಬ
೪ ವಯ. ಅಂಗ್‌ತಿನ್ ೪೫ ಸರದಾರ ಉ
ಗ ೪೭ ಸಿ. ಇ. ವುಡ್ ೪೭ ಜಪ್ರುಲ್ಯಾಖಾ
ಗುಲಾಂ ಮಹಮ್ಮದಖಾನಟ್ಟಿ ೪೯ ರಾ ಬ

(ಅನ್ನೊಬ್ಬರ ಹೆಸರು ಗೊತ್ತಿಲ್ಲ)

ವಿವಿಧ ಸುದ್ದಿಗಳು

[illegible]

ಟರ್ಸಸಾಹೇಬರ ಮೇಲೆ ಬಾಂಬು ಚಲ್ಲಿದ ದಿನೇಶಚಂದ್ರನ ವಿಚಾರಣೆಯು ಮ್ಯಾಜಿ ಕೋರ್ಟಿನಲ್ಲಿ ನಡೆದಿತು. ಈತನನ್ನು ಕಬ್ಬಿ ಜರದಲ್ಲಿ ಕೂಡಿಸಿ, ಸುತ್ತಲು ಬಿಚ್ಚುಗತ್ತಿ ಲಿಸರ ಕಾವಲಿರುವರು.

ರ್ಮನಸಾಮ್ರಾಜ್ಯದ ತುಂಬ ಅಲ್ಲಿಯ ಪಾರ್ಲ ಸಭೆಯ ಚುನಾವಣೆಯಾಯಿತು. ಬೊಲ್ಶೆ ಥವರು ಅಲ್ಲಲ್ಲಿ ಗುಂಪುಗುಂಪಾಗಿ ನಿಂ ತಿಯಾಲಿಸ್ಟ ಪಥದವರ ಮೇಲೆ ಜ್ವಾಲಾ ಸ್ತ್ರಾವಕಗಳನ್ನು ಹಾಕಿ, ಅನೇಕರನ್ನು ಘಾ ವರು. ಇಬ್ಬರು ಸತ್ತರು.

ಮದ್ರಾಸದ ಚುನಾವಣೆಯಲ್ಲಿ ಈಗಿನ ಮೂವ ತ್ರಿಗಳಲ್ಲಿ ಶ್ರೀ ಸುಬ್ರಾಯನ್ನರು ಆರಿಸಲ್ಪ ಉಳಿದಿಬ್ಬರಾದ ಮೆಸರ್ಸ ಸೇತುರತ್ನಮು ಅ ಮತ್ತು ಮುತ್ತಯ್ಯಾ ಮೊದ್ಲಿಯಾರ ಇವರು ಹೊಂದಿದರು.

ಮೈಸೂರಿನ ದಿವಾನರು ರಾವೆಂಕಟೇಬಲ ಪ್ರಯಾಣ ಬೆಳೆಸಿದರೆಷ್ಟೆ; ಯುವರಾಜರೂ ಯುರೋಪದ ಹಾದೀ ಹಿಡಿದರು. ಗಾ ದ ಮಹಾರಾಜ್ಜರಂತೆ ಇವರಿಗೂ ವಿಲಾ

ಇಂಗ್ಲಂಡದಲ್ಲಿ ಹೊಸ ಮಾದರಿಯ ರಾಯ ದೂಕಿನ ರಚನೆಮಾಡಿದ್ದಾರೆ. ಅವಶ್ಯ ಕಂ ಬಂದೂಕು ಪ ಶಿನಗನ್ನವಾಗಿ ಮಿನಿಟಿಗೆ ಹರಿದಂತೆ ಮೂರು ನೂರು ಗುಂಡುಗಳ ರಿಸುವದು. ಒಂದೇಸವನೇ ಕುದುರೆ ಒ ನಡೆದರಾಯಿತು. ಗುಂಡು ತಾನಾಗಿ ಹಾ ಹೋಗುವದು.

ಗಾಲದಲ್ಲಿ ರಂಗಪೂರಸಂಪಲ್ಲಿಯ ಗಿರಿ ಎಂಬವರು ಶ್ರೀಮಂತ ಮಹಂತರು. ರಸ್ಟು ಉತ್ಪನ್ನ. ಮದಿವೆಯಾಗತಕ್ಕದ್ದಿಲ್ಲ ರಿಯಾಗಿರತಕ್ಕದ್ದು. ಗುಪ್ತವಾಗಿ ಒಬ್ಬಳ ವೆಯಾಗಿ, ಅವಳಿಂದ ಒಂದು ಮಗಳು ಟ್ಟಿರುತ್ತದೆ. ಆದರೆ ಈಗ ಅವಳಿಗೆ ನೀ ತಿಯಿಲ್ಲವೆಂದು ಹೇಳಿ, ದೂರೀಕರಿಸಿದ್ದಾ ಅವಳು ಮಹಂತರಮೇಲೆ ಜೀವನಾಂ ವೆ ಹೂಡಿದ್ದಾಳೆ.

ಹಮದಾಬಾದಿನಲ್ಲಿ ಒಂದು ಗಿರಣಿಯೊಳಗಿಂದ ಎಳೆಯ ನೂಲು ತೆಗೆಯಲಾರಂಭಿಸಿದೆ. ಜನರು ಇದನ್ನು ನೋಡಲಿಕ್ಕೆ ಹೋಗು ಸರಕಾರದ ತಜ್ಞರು ಶೋಧಕ ದೃಷ್ಟಿ ದರ ಉತ್ಪತ್ತಿ ಮತ್ತು ಕಾರಣ ಹುಡು ದೆ

Ranebennur & Hirekerur
5%
Interest allowed on
ANNA SAVINGS BANK
DEPOSIT

Dharwar
3-1-1927

K. B. ANKALGI
Managing Director

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ವ ಬಿಚ್ಚಿ ಜೋಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹಿಂಗ ವಿದ್ಯೆಗಲಿಯಲು ಜನರು ಈ ವರೆಗೆ ಪುಣೆ ಬೆಗಾಂವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು ಡ್ರಾಯವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆಗೆ [illegible] ಸ್ವಲ್ಪ ದಿವಸದಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವರು. ನಿಮ್ಮ ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ಪ್ಹಿ. ಎಸ. ಇಟಗಿ.
ಮುನಸಫಕೋರ್ಟಿನ ಹತ್ತರ, ಧಾರವಾಡ

ಶೀರೆ! ಪತ್ತಲ!! ಕಣ!!!

ಶ್ರೀದತ್ತ ವ್ಹೀವಿಂಗ್ ಮಿಲ್
ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ
ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಜವಳಿ ನೋಡಿ, ನಿಮಗೆ ಬೇಕಾದ ಮಾಲು ಕೊಂಡು [illegible]

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೭ನೇ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಏಜಂಟರು ಬೇಕು

ಕನ್ನಡ ನಾಡಿನಲ್ಲಿ ಕನ್ನಡಿಗರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮತ್ತು **ಕನ್ನಡಿಗರಿಂದ** ನಡೆಸಲ್ಪಟ್ಟ ಈ ಮೊದಲನೇ ಕಂಪನಿಗೆ ಶೇರುಗಳನ್ನು ಮಾರುವದಕ್ಕೂ ವಿಮೆಯ ಕೆಲಸವನ್ನು ತಂದು ಕೊಡುವದಕ್ಕೂ ಎಲ್ಲಾ ಸ್ಥಳಗಳಲ್ಲಿ **ಏಜಂಟರು** ಬೇಕಾಗಿರುವರು. ವಿಮೆಯ ಕೆಲಸವನ್ನು **ಗ್ಯಾರಂಟಿ ಮಾಡಿದಲ್ಲಿ** ವಿಶೇಷ ಸವಲತ್ತುಗಳು ಕೊಡಲ್ಪಡುವವು. **ಕನ್ನಡಿಗರೇ** ತೀವ್ರವೇ ನಮ್ಮ ಕೆಲಸವನ್ನು ಕೈಕೊಂಡು ಲಾಭ ಮಾಡಿಕೊಳ್ಳಿರಿ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar,
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ
ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿ ಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ **ಔಷಧ** ತಯಾರಿಸಲಾಗಿದೆ. ಇದರ ಉಪಯೋಗದಿಂದ ಸಪ್ಪಗಿನ ಚರ್ಮ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು ಪೌರುಷತ್ವಹೀನ ದೇಹ, ಅನಿಶ್ಚಿತಸ್ವಭಾವ, ಸ್ತ್ರೀಜನನವನ್ನೂ ಹೇಡಿತನವನ್ನೂ ಅಂಜುಬುರಕತನ, ಅಕಾಲಮು [illegible] ಇಂದ್ರಿಯದ ಉರಿ ಪಿತ್ತವಿಕಾರ, ಅಗ್ನಿಮಾಂಧ್ಯ ನಿದ್ರಾನಾಶ, ಮಲಾವರೋಧ, ಸೊಂಟ ನೋವು ಸೋಣ, ಟೊಂಕಶೂಲಿ, [illegible]ತೇದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾವೀರ್ಯ ಮೊದಲಾದ ಏಳು ವೀರ್ಯಗಳು ವೃದ್ಧಿಯಾಗಿ ಇಂದ್ರಿಯ [illegible] ನವವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟುಶೂಲೆ, ಕೆಂಪು, ಶ್ವೇತಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧ ತೊಲಿ ತೊಗೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲಿಯವರೆಗೆ ತೊಗೋಬೇಕು. ಹತ್ತುದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೊ
ನಿಪ್ಪಾಣಿ

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ಮಾರ್ಗೇಜಿನ ಮೇಲೆ

ಗಿರಣಿಯ (ಶೇರ್ಸು) ಮತ್ತು ದಿ ಬ್ಯಾಂಕ ಆಫ್ ಬಾರಶಿ ಲಿಮಿಟೆಡ್ (ಶೇರ್ಸು) ಸಿಗುವವು. ಪ್ರತ್ಯಕ್ಷದ ಸಲುವಾಗಿ ಬಂದು ಅಥವಾ ಪೋಸ್ಟ ಸ್ಟಾಂಪು ಕಳಿಸಿ ಕೇಳಿರಿ. ದೊಡ್ಡ ದೊಡ್ಡ ಶಹರುಗಳಲ್ಲಿ [illegible] ಕಮಿಶನ್‌ದ ಮೇಲೆ ಕೆಲಸ ಮಾಡುವರು ಬೇಕು.

ಪತೆ ಮನಿಲೆಂಡ

ಟೆಲಿಫೋನ,
ಫೋನ ನಂಬರ

ಪಿ. ಡಿ. ಫ. ಪಾಂಡೇ (ಬೆಂಕರ
ಕೇಸರ ಬಾಗ ಗೋಲ್ಡ ಮೋಹರ ಮುಂದೆ
ಪೋಷ್ಟ ಬೊಕ್ಸ ನಂಬರ ೫೫೧,
ದಾದರ, ಬೊಂಬೈ.

(೧) ರಾಣೆಬೆನ್ನೂರ (೨) ಹಿರೇಕೇರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿಗೆ ಬಗ ಗಣೇಶ ಶಂಕರ ಜೋಶಿ ಇವರನ್ನು ನಾವು ಏಜಂಟರಾಗಿ ನೇಮಿಸಿದ್ದೇವೆ. ಈ ನಾಲು ತಾಲೂಕಿನ ನಮ್ಮ ವ್ಯವಹಾರವನ್ನು ಇವರ ಹತ್ತ ಮಾಡುವದಕ್ಕೆ ಹರಕತ್ತು ಇಲ್ಲಾ

ಜೆ ಸರಕಾರಕ್ಕೆ ಉಪಕಾರ ಮಾಡಿ
ಮು ಅಥವಾ ಭೂಮಿಯನ್ನು ಉ
ಹಾಕಿಕೊಡುವದನ್ನು ನಿಲ್ಲಿಸಿ, ಅವರಿ
ನನಸಹಾಯ ಮಾಡಬೇಕೆಂದು ಗೊ
ರಿ. ಈ ವರ್ತಮಾನವು ಅರುಣೋದ
ತ ಹೆಚ್ಚಾಗಲಾರದು. ಅದು ಕೂ
ಪಡೆಯಲ್ಲ? ಎರಡನೆಯ ಕಲಿಗೆ ಅ
ಮೂರನೆಯ ಕಲಿಯ ಅರ್ಧಭಾ
ಗ ಕಲಿಗೆ ನಿಂತುಹೋಗುವದು.

ಮಾಲವಿಯಾ ಮತ್ತು ಶ್ರೀ. ವಿಠ್ಠಲಭಾ
ದಿಲ್ಲಿಯಿಂದ ಸ್ಪೇಶಲ ಟ್ರೇನಿನಿಂದ
ಂದರು ಅಲ್ಲಿ ಪಂಡಿತರೊಬ್ಬನ್ನೇ ಇ
ಪಟೇಲರನ್ನು ಮುಂಬಯಿ ಇಲಾ
ರವಸೆಗೆ ಕಳಿದಿದ್ದಾರೆ.

ಬಣ್ಣ ಪಕ್ಕಾ, ಬಣ್ಣಹೋದರೆ ಮಾಲು ತಿರುಗಿ ತಕ್ಕೊಳ್ಳುವೆವು.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತ ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ	೨—೦—
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ	೪—೦—

೧೯-೧೧-೨೯
ಮೈಸೂರಸ್ಟೋರ,
ಬೆಳಗಾವಿಯವರ ಗಲ್ಲಿ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೨೫ ಇಪ್ಪತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ, ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ ನಲವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಷ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮಾ ಭೋಳಕರ

ತ್ರಣ ಬೇಕಾಗಿಲ್ಲೆಂದು ಅವರು ಉತ್ತರ ಕೊಟ್ಟರೆಂದು ಪ್ರಸಿದ್ಧವಾಗಿದೆ. ಶ್ರೀ. ಕೇಳಕರರ ಕೇಸರಿ ಮರಾಠಾ ಪತ್ರಗಳಿಂದ ಸರಕಾರದವರು ಸ್ವಪ್ರಕಾಶಣಕ್ಕಾಗಿ ಸಹ ಜಾಮೀನು ತಕ್ಕೊಂಡಿದ್ದಾರೆ. ಒಂದು ಕಯ್ಯಲ್ಲಿ ದೊಣ್ಣೆ ಮತ್ತೊಂದು ಕಯ್ಯಲ್ಲಿ ಬೆಣ್ಣೆಯಂಥ ಆಮಂತ್ರಣವನ್ನು ಯಾವ ಅಭಿಮಾನಿಯೂ ಅಂಗೀಕರಿಸಲಾರನು.

ವ್ಯಾಂಕಟೇಶ್ವರದಲ್ಲಿ ನಾಮದಾರ ಶ್ರೀನಿವಾಸ ಶಾಸ್ತ್ರಿಯವರ ಭಾಷಣವಾಯಿತು. ಅವರು ಅಂದದ್ದೇನಂದರೆ-

ದಕ್ಷಿಣ ಆಫ್ರಿಕೆ ಮತ್ತು ಆಯರ್ಲಂಡದಲ್ಲಿರುವ ರಾಜ್ಯಘಟನೆಗಿಂತ ಕಡಿಮೆ ಪ್ರತಿಯ ರಾಜ್ಯಘಟನೆಯನ್ನು ಅಂಗೀಕರಿಸಲಿಕ್ಕೆ ಹಿಂದೀ ಜನರು ಯೋಗ್ಯರಾಗಿದ್ದಾರೆಂದು ಅನ್ನುವದನ್ನು ನಾನು ಒಪ್ಪುವದಿಲ್ಲ. ಹಿಂದುಸ್ಥಾನದೊಳಗಿನ ತರುಣರ ಮಹತ್ವಾಕಾಂಕ್ಷೆಯನ್ನು ತೃಪ್ತ ಮಾಡುವಂಥ ರಾಜ್ಯಘಟನೆಯನ್ನು ರಾಪ್ಪಂಡ ಟೇಬಲಿನಲ್ಲಿ ಸಿದ್ಧ ಮಾಡಿದ್ದಾದರೆ- ಹಿಂದುಸ್ಥಾನದೊಳಗಿನ ರಾಜ್ಯಕಾರಭಾರ ಸೂತ್ರಗಳನ್ನು ವಿಶ್ವಾಸದಿಂದ ಹಿಂದೀ ಜನರ ಕಯ್ಯಲ್ಲಿ ಕೊಡಲು ಯಾವ ಅಡ್ಡಿಯೂ ಇರುವದಿಲ್ಲ.

ಮುಂಬಯಿಯಲ್ಲಿರುವ ಸರಕಾರೀ ಕಟ್ಟಡಗಳ ಸಣ್ಣ ಸಣ್ಣ ಕೋಣೆಗಳಲ್ಲಿ ಸಾವಿರಾರು ಕೂಲಿಕಾರರು ವಾಸವಾಗಿರುತ್ತಾರೆ. ಇವರು ತಂತಮ್ಮ ಬಿಡಾರಗಳ ಮುಂದೆ ನಿಶಾನಗಳನ್ನು ಹಚ್ಚಿದ್ದಾರೆ ಸರಕಾರದ ಕಟ್ಟಡಗಳ ಮುಂದೆ ನಿಶಾನೆ ಹಚ್ಚಬಾರದು. ಹಚ್ಚುವದಾದರೆ- ಮನೆ ತೆರವು ಮಾಡಬೇಕೆಂದ ಸರಕಾರೀ ಅಧಿಕಾರಿಗಳು ಇವರಿಗೆ ನೋಟೀಸು ಕೊಟ್ಟರು. ಇದಾವದಕ್ಕೂ ಸೊಪ್ಪು ಹಾಕಲಿಲ್ಲ. ಬಲವಂತಿಕೆಯಿಂದ ಇವರನ್ನು ಬಿಡಿಸಿದರೆ- ತಿಂಗಳಿಗೆ ೧೬ ಸಾವಿರದ ಬಾಡಿಗೆ ಮುಣುಗುವದು. ಹೊಸ ಬಾಡಿಗೆದಾರರು ಬರಲಾರರೆಂದು ತಿಳಿದು, ಅಧಿಕಾರಿಗಳು ತಾವು ಬಿಟ್ಟ ಬಾಣವನ್ನು ಹಿಂದಕ್ಕೆ ತಕ್ಕೊಂಡರು. ಹೀಗೆ ಕೂಲಿಕಾರರ ಸತ್ಯಾಗ್ರಹದ ವಿಜಯವಾಯಿತು.

ಪಂಡಿತ ಮದನಮೋಹನ ಮಾಲವಿಯಾರವರಂತೆ, ಅಧ್ಯಕ್ಷರಾಗಿದ್ದ ಶ್ರೀ. ವಿಠ್ಠಲಭಾಯಿ ಪಟೇಲರನ್ನು ಸ್ಪೇಶಲ ಮೋಟಾರಿನಲ್ಲಿ ದಿಲ್ಲಿಯಿಂದ ಅಂಬಾಲಾಕ್ಕೆ ಕರತಂದರು. ಡಿಪುಟಿ ಪೋಲೀಸಸಾಹೇಬರೇ ದ್ರೈವ್ಹರನಾಗಿ ಮೋಟಾರ ನಡಿಸುತ್ತಿದ್ದರು. ಶ್ರೀ: ಪಟೇಲರ ಹಿಂದೆ ರಿವ್ಹಾಲ್ವರ ಹಿಡಕೊಂಡಂಥ ಇನ್ನೊಬ್ಬ ಅಮಲದಾರನು ಕೂತಿದ್ದನು ಮತ್ತು ಇವರ ಮೋಟಾರಿನ ಹಿಂದೆಯೇ ಶಸ್ತ್ರಧಾರಿಗಳಾದ ಆರು ಜನ ಸಿಪಾಯರು ಕೂತಿದ್ದ ಇನ್ನೊಂದು ಮೋಟಾರು ಬೆಂಗಾವಲಿಗಾಗಿತ್ತು.

ಆಸಾಮದ ಕೌನ್ಸಿಲಿಗಾಗಿ ಆರಿಸಲ್ಪಟ್ಟ ಮುಚ್ಚಿಗಾರ ಮೆಂಬರನಾದ ಶ್ರೀ. ಚಿರ್ಕನನು ಕೌನ್ಸಿಲಕ್ಕೆ ಹೋಗುವಾಗ ಸಾವಿರಾರು ಜನರು ಆತನನ್ನು ಕಳಿಸುವದಕ್ಕೆ ಸ್ಟೇಶನಕ್ಕೆ ಹೋಗಿದ್ದರು. ಈತನು ಆ ಪ್ರಾಂತದಲ್ಲಾದ ಪೋಲೀಸ ಅತ್ಯಾಚಾರಗಳ ಬಗ್ಗೆ ಹಲವು ಪ್ರಶ್ನೆಗಳನ್ನು ಮುಂದಾಗಿ ಸರಕಾರಕ್ಕೆ ಕಳಿಸಿದ್ದಾನೆ ತೊಗಲು ಹದಮಾಡುವ ಶಿಕ್ಷಣ ಕೊಡಲು ಎಂಟು ಸ್ಥಳಗಳಲ್ಲಿ ಶಾಲೆ ತೆಗೆಯುವಂತೆಯೂ ಕೌನ್ಸಿಲದಲ್ಲಿ ಠರಾವು ತರುವನು.

ಮದ್ರಾಸದಲ್ಲಿ ಹತ್ತೆಂಟು ಸಾವಿರ ವಿದ್ಯಾರ್ಥಿಗಳು ಶಾಲೆಗಳನ್ನು ಹಾಳುಗೆಡವಿ ಗಾಂಧೀ ಟೊಪ್ಪಿಗೆ ಹಾಕಿದ ಮೆರವಣಿಗೆ ತೆಗೆದರು. ಮೆರವಣಿಗೆಯಿಂದ ದಾರಿಗೆ ವಿಘ್ನವಾಗುತ್ತದೆಂದು, ಪೋಲೀಸರು

ದಿವಾಣ ಬಹಾದ್ದೂರ ರಂಗನಾಥ ಮೊದ್ಲಿಯಾರರು ಆರಿಸಲ್ಪಟ್ಟರು. ಹೋದಸಾರೆ ಕಾಂಗ್ರೆಸದ ಟಿಕೇಟಿನ ಮೇಲೆ ನಿಂತು, ಯಶಹೊಂದಿದ್ದ ಶ್ರೀ ಶಿವರಾಯರು ಈ ಸಾರೆ ಕಾಂಗ್ರೆಸದ ವಿರುದ್ಧ ನಿಂತು ೪೭೦ ಮತಗಳನ್ನು ಮಾತ್ರ ಪಡೆದು, ಡಿಪಾಜಿಟ್ಟಿನ ೨೫೦ ರೂಪಾಯಿ ಕಳಕೊಂಡರು.

ಕಿತ್ತೂರಲ್ಲಿ ನೆಯಿಕಾರರ ದೊಡ್ಡ ವಸತಿಯುಂಟು. ಇವರು ತಮ್ಮವರದೇ ಒಂದು ಸಭೆ ಕರೆದರು. ಪರಜಾತಿಯವರನ್ನು ಕರೆಯಲೇ ಇಲ್ಲ. ನೆಯಿಕಾರರಾದವರೆಲ್ಲರು ರಾಟಿಯ ನೂಲು ಮತ್ತು ದೇಶೀ ಮಗ್ಗದಿಂದಾದ ಕೊಡೆಯರವೆಯನ್ನೇ ಕೊಡಬೇಕು. ಒಂದುವೇಳೆ ರಾಟಿಯ ನೂಲಿನ ಪೂರೈಕೆಯಾಗದಿದ್ದರೆ- ಕಾಂಗ್ರೆಸದವರು ಗೊತ್ತುಮಾಡಿದ ನೂಲನ್ನೇ ಕೊಳ್ಳಬೇಕೆಂದು ಠರಾವು ಮಾಡಿದ್ದಾರೆ. ಇವರ ಸ್ತುತ್ಯ ಉಪಕ್ರಮದ ಅನುಕರಣವನ್ನು ಬೇರೆ ನೇಯುಕಾರರೂ ಮಾಡುವರೆಂದು ನೆರೆನಂಬಿದ್ದೇವೆ.

ಇದೇ ಕಿತ್ತೂರಿನಲ್ಲಿ ಈ ವರೆಗೆ ಶಿಂದಿಗಡಂಗವಿದ್ದ ಸ್ಥಳವು ಶ್ರೀ ಮುತ್ತೂರ ಮಾವಿಳಪ್ಪನವರದು. ಗಡಂಗದ ಬಾಡಿಗೆಯು ಮುದ್ದತು ತೀರದ ಕೂಡಲೆ, ಇವರು ಆ ಸ್ಥಳವನ್ನು ಕಾಂಗ್ರೆಸ ಕೆಲಸಕ್ಕೆ ದಾನವಾಗಿ ಕೊಟ್ಟುಬಿಟ್ಟರು. ಶ್ರೀ. ಮುತ್ತೂರರವರು ಮೊದಲಿನಿಂದಲೂ ರಾಷ್ಟ್ರೀಯರಾಗಿದ್ದು, ಅವರು ಅಲ್ಲಿಯ ಎಲ್ಲ ಸತ್ಕಾರ್ಯಗಳಿಗೂ ಮನಮುಟ್ಟಿ ಸಹಾಯ ಮಾಡತಕ್ಕವರಿದ್ದಾರೆ. ಇವರು ಕೊಟ್ಟ ದಾನವು ಅತ್ಯಂತ ಪ್ರಶಂಸನೀಯವಾಗಿದ್ದು, ಬೇರೆ ಊರವರೂ ಇವರನ್ನನುಸರಿಸುವಂತಿದೆ ಶ್ರೀ. ಮುತ್ತೂರರವರ ಸ್ಥಳ ಹೋದಕೂಡಲೆ ಗುತ್ತೇದಾರನು ಊರೊಳಗೆ ಸ್ಥಳ ಹುಡುಕಿದನು. ಯಾರೂ ಅನವು ಕೊಡದ್ದರಿಂದ ಮನೆಯಲ್ಲಿಯೇ ಶೇಂದಿಯ ಮಾರಾಟ ನಡೆಸಿದ್ದಾನೆ.

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವತ್ತಿ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿಜ್ಜ ಪತ್ರಿಕ್ಕೆ
೧೨ ತಿಂಗಳಿಗೆ ರೂ. ೧೨-೮-

ಶಿಂಪಿ, ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉ
ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ, ಶಿಕ್ಕಲಿಗಾರ ಲ
ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾ
ಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧ
ಮುಳಿದ ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು
ಹಾಗೂ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಂ
ಸೂವತ್ತೂ, ಅಡಚಣಿ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲ

ಮೆಂಬರರು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ, ಕಾರವಾರ ಹಾಗೂ ಸೊಲ್ಲಾಪೂರ ಮೊದಲಾದ ಬ್ರಿಟಿಶ ಜಿಲೆಗಳಲ್ಲಿಯ ಹ
ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯುಲ್ಲದ ವಯ
ಸಿದಂತೆ ಆಯಾ ತರಗತಿಯ ದೇಣಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ

ಆಶ್ರಯದಾತರು:- ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲ
ವರು,
ದಾತೃಗಳು. ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯುಲ್ಲದ
ವರು,
ಆಜೀವ ಸಭಾಸದರು:- ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆ
ಡುವವರು,
ಸಾಧಾರಣ ಸಭಾಸದರು:- ಡುವವರು, ಕೊ ೧ ನೇ ತರಗತಿ:- ಕನಿಷ್ಟ ೫ ರ
೨ ನೇ ತರಗತಿ:- ಕನಿಷ್ಟ ೨ ರೂ ವಾರ್ಷಿಕ
೩ ನೇ ತರಗತಿ:- ಕನಿಷ್ಟ ೧ ರೂ ವಾರ್ಷಿಕ ವ
೪ ನೇ ತರಗತಿ:- ಕನಿಷ್ಟ ೪ ಆಣೆ, ವಾರ್ಷಿಕ
ಸೂವತ್ತೂ, ಬಂಧುಭಗಿನಿಯರು ಅವಶ್ಯಕತೀವ್ರ ಸಂಘದ ಮೆಂಬರರಾಗಬೇಕ

ದೇವನಗೌಡ
ಬಿ. ಎ. ಎಲ್‌ಎಲ್. ಬಿ

॥ ಸಿರಿಗನ್ನಡಂ ಗೆಲ್ಗೆ ॥

ಶ್ರೀ ಶಂಕರ ಕರ್ನಾಟಕ ಪುಸ್ತಕ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗ

ಮಾಳಮಡ್ಡಿ
ಮತ್ತು ——— ಧಾರವಾಡ
ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನ
ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ
ರದ ಬೆಲೆಪಟ್ಟಿ ಬೇಕಾದವರು ೪ ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯ
ಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸ. ೧,೨. ಪ್ರತಿ ೧ಕ್ಕೆ
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ
೩. ಛತ್ರಪತಿ ಶಿವಾಜಿ ಮಹಾರಾಜ
೪. ಕರ್ನಾಟಕ ಸಿಂಹಾಸನ ಸ್ಥಾಪನೆ
೫. ಚರಿತ್ರ ಸಂಗ್ರಹ ಭಾ. ೧.
೬. ಆಳಸಿಂಗಾಚಾರ್ಯರ ರಾಮಾಯಣ ೯ ಸಂಪುಟಗಳು
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩
೯. ದಾಂಪತ್ಯ ವಿಜ್ಞಾನ, ಸಂತಾನವಿಜ್ಞಾನ ಪ್ರತಿ ೧ಕ್ಕೆ
೧೦. ಲ್ಯಾಂಡ ರೆವ್ಹಿನ್ಯೂ ಕೋಡು
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ
೧೨ ಸ್ತ್ರೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ
೧೩. ಇಸೂಪನೀತಿ ಕಥೆ ಭಾ. ೧, ೨,
೧೪. ಕೀರ್ತನ ಕಂಠಾಭರಣ

ಶ್ರೀಪಾದ ರಾಮಚಂದ್ರ

ಮಾರಾಟಕ್ಕೆ ಸಿದ್ಧವಾಗಿ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನ
ನ್ನು ಮಾರಾಟಕ್ಕೆ ಸಿದ್ಧ ಮಾಡುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾ
ಸ್ವಾಮಿಗಳ ಕೈಫಿಯತು ಮತ್ತು ಮುನಸಫರಾದ ಶ್ರೀ. ಸಬನೀಸ ಇವ
ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರ
ಸದ ಸಹಾಯದ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ,
ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹ
ಳು ತೀರ ತುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇ

ಕೌನ್ಸಿಲಕ್ಕೆ ಹೋಗುವಾಗ ಸಾವಿರಾರು ಜನರು ಆತನನ್ನು ಕಳಿಸುವದಕ್ಕೆ ಸ್ಟೇಶನಕ್ಕೆ ಹೋಗಿದ್ದರು. ಈತನು ಆ ಪ್ರಾಂತದಲ್ಲಾದ ಪೋಲಿಸ ಅತ್ಯಾಚಾರಗಳ ಬಗ್ಗೆ ಹಲವು ಪ್ರಶ್ನೆಗಳನ್ನು ಮುಂದಾಗಿ ಸರಕಾರಕ್ಕೆ ಕಳಿಸಿದ್ದಾನೆ. ತೊಗಲು ಹದಮಾಡುವ ಶಿಕ್ಷಣ ಕೊಡಲು ಎರಡು ಸ್ಥಳಗಳಲ್ಲಿ ಶಾಲೆ ತೆಗೆಯುವಂತೆಯೂ ಕೌನ್ಸಿಲದಲ್ಲಿ ಠರಾವು ತರುವನು.

ಮದ್ರಾಸದಲ್ಲಿ ಹತ್ತೆಂಟು ಸಾವಿರ ವಿದ್ಯಾರ್ಥಿಗಳು ಶಾಲೆಗಳನ್ನು ಹಾಳುಗೆಡವಿ ಗಾಂಧೀ ಟೊಪ್ಪಿಗೆ ಹಾಕಿದ ಮೆರವಣಿಗೆ ತೆಗೆದರು. ಮೆರವಣಿಗೆಯಿಂದ ದಾರಿಗೆ ವಿಘ್ನವಾಗುತ್ತದೆಂದು, ಪೋಲಿಸರು ಅಡ್ಡೀ ಮಾಡಲು- ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡಿದರು. ಆಗ ಪೋಲಿಸರು ಇವರಿಗೆ ಬುದ್ಧಿಬರಲೆಂದು ಬೆತ್ತ ಮತ್ತು ಬಡಿಗೆಯಿಂದ ಬಡೆದು, ಅನೇಕರನ್ನು ಘಾಯಪಡಿಸಿದರು. ವಿದ್ಯಾರ್ಥಿಗಳು ಪೂರ್ಣ ಸ್ವದೇಶಿ, ಮತ್ತು ಸ್ವರಾಜ್ಯವಾದಿಯಾಗಲಿಕ್ಕೆ ಇದೊಂದು ವಸ್ತುಪಾಠವನ್ನೇ ಕಲಿತಂತಾಯಿತು.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುದು. ದರವನ್ನು ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ವತ್ತಿ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ		ರೂ. ೧೨-೮-
೬	,,	೬-೦-
೩	,,	೪-೮-
ವಾರ ಪತ್ರಿಕೆ ೧ ವರ್ಷಕ್ಕೆ		೩-೧೨-

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಕೊಳ್ಳಿರಿ.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತ ನ್ನು ಮಾರಾಟಕ್ಕೆ ಸಿದ್ಧ ಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ. ಶಿದ್ಧಾರೂ ಸ್ವಾಮಿಗಳ ಕೃಷಿಯುತ ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತ ಜದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರ ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯು ಮಹತ್ವದ ದು ತೀರ ಕುಸುವೆನಿಸುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಅರ್ಧಾಣೆಯಂತೆ ಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡ ರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾ

ಶ್ರೀ. ಭಟ್ಟರ ಅಪೂರ್ವ ಸ್ವಾರ್ಥತ್ಯಾಗೆ.

ಹಿಡಿಯುವದನ್ನೂ ಹೊಡೆಯು ಹಿಂಸಿಸುವದನ್ನೂ ನೋಡಲಾರದೆ ರಾಜೀನಾಮೆ ಕೊಟ್ಟರು.

ಮುಂಬಯಿಯಲ್ಲಿ ಕೌನ್ಸಿಲ ಚುನಾವಣೆಯ ಕಾಲಕ್ಕೆ ಜನ ಉಮೇದವಾರರಲ್ಲಿ ರಾಜೀನಾಮೆ ಕೊಟ್ಟಂಥವರಾದ ಶ್ರೀ. ರಾಮಚಂದ್ರಭಟ್ಟರು ತಮಗೇಕೆ ರಾಜೀನಾಮೆ ಕೊಡಬೇಕಾಯಿತೆಂಬ ಸಂಗತಿಯನ್ನು ಜಾಹೀರ ಮಾಡಿದ್ದಾರೆ. ಚುನಾವಣೆಯು ನಗರಭವನದ ಮುಂದೆ ನಡೆದ ಪಿಕೆಟಿಂಗವು ಯಶಸ್ವಿಯಾಯಿತೆಂದು ಕಂಡ ಕೂಡಲೆ ಪೋಲೀಸರು ಸ್ವಯಂಸೇವಕರನ್ನು ಹಿಡಿಯಲಾರಂಭಿಸಿದರು. ಆಗ ಇವರು ಮಾಡಿದಂಥ ಸಿದ್ಧತೆಯು ದೊಡ್ಡ ಕಾಳಗದಲ್ಲಿ ಕೂಡ ಇರಲಿಕ್ಕಿಲ್ಲ. ಮುನ್ನೂರು ಸಿಪಾಯಿಗಳೇ ಇದ್ದರು. ಇವರ ಹೊರ್ತು ಜನರ ಮೇಲೆ ಜೋರಾದ ಕುದುರೆ ಹಾಯಿಸಿ, ಅವರನ್ನು ದಿಕ್ಕಾಪಾಲು ಮಾಡುವ ಸ್ವಾರರು ಬೇರೆ. ಸಾರ್ಜಂಟ, ಸುಪರಿಂಟೆಂಡೆಂಟರು ಬೇರೆ. ಸ್ವತಃ ಕಮೀಶನರರಾದ ಮಿ. ಹೇಲೀಸಾಹೇಬರೂ ಮೂರ್ತಿಮಂತರಾಗಿದ್ದರು. ಅಂದಿನ ಪಿಕೆಟಿಂಗದ ಸರ್ವ ಭಾರವನ್ನು ಹೆಣ್ಣುಮಕ್ಕಳೇ ವಹಿಸಿ, ಅದರ ಯಶಸ್ಸಿನ ಕೀರ್ತಿ ಸ್ವಯಂಸೇವಕರಿಗೆ ದೊರೆಯುವಂತೆ ಮಾಡಿದ್ದರು. ಪೋಲೀಸರು ಹಿಡಿದು ಹಾಕಿದ ಸ್ವಯಂಸೇವಕರ ಸಂಖ್ಯೆಯು ೩೮ ಆಯಿತು. ಇದಂತಿರಲಿ; ಜನರನ್ನು ಹೊಡೆಯುವದಂತೂ ಮಿತಿಮೀರಿತು. ನೂರಕ್ಕಿಂತ ಹೆಚ್ಚು ಜನರು ಹೊಡಿಸಿಕೊಂಡರು. ಅನೇಕರ ಗೂಡಬ್ಯಾರ ಮತ್ತು ಗುಪ್ತಸ್ಥಳದಲ್ಲಿ ಹೊಡೆದಿದ್ದಾರೆ. ಈ ಹೊಡತದಿಂದ ಕೆಲವರು ಎಚ್ಚರ ತಪ್ಪಿದ್ದಾರೆ. ತಲೆಯೊಡೆಸಿಕೊಂಡು ರಕ್ತ ಸುರಿಸಿಕೊಂಡವರಿಗೂ ಕಡಿಮೆ ಇಲ್ಲ. ತಮ್ಮ ದೆಸೆಯಿಂದ ಹೆಣ್ಣುಮಕ್ಕಳು, ಸುರಂಗವಾಸಿಯಾಗುವದೂ, ಪುರುಷರು ಹೊಡಿಸಿಕೊಂಡ ನೋವಿನಿಂದ ನರಳುವದೂ ಅತ್ಯಂತ ದುಃಖದಾಯಕವಾಗಿ ಇವರು ಉಮೇದವಾರಿಗೆ ರಾಜೀನಾಮೆ ಕೊಟ್ಟರು. ಚುನಾವಣೆಯಲ್ಲಿ ಪೋಲಿಸ ಅತ್ಯಾಚಾರಗಳೆಷ್ಟೋ ನ್ಯಾಯಾಚಾರಗಳೆಷ್ಟೋ ಅಗಣಿತವಾಗಿವೆ. ಇವುಗಳ ನಿಷೇಧವೆಂದು ಮೆಂಬರರು ರಾಜೀನಾಮೆ ಕೊಡಬೇಕಾಗಿತ್ತು. ಇದರಂತೆ ಸೊಲ್ಲಾಪುರದ ದಂಗೆಯ ಬಗ್ಗೆ ವಿಚಾರ ಮಾಡಬೇಕೆಂದು ಕೌನ್ಸಿಲದಲ್ಲಿ ತಂದ ಸೂಚನೆಯು ನಾಪಾಸಾದ ಕೂಡಲೆ, ಎಲ್ಲ ಮೆಂಬರರು ಇವರಲ್ಲಿ ವಿಶೇಷವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಮೆಂಬರರು ರಾಜೀನಾಮೆ ಕೊಡಬೇಕಾಗಿತ್ತು. ಹಾಗೆ ಮಾಡದೆ, ಪುನಃ ಕೌನ್ಸಿಲದಲ್ಲಿ ನಂಬಿಕೊಂಡು ನಡೆಯುವದರಿಂದಲೇ, ದಬ್ಬಾಳಿಕೆ ಮತ್ತು ಅದರಿಂದ ಪ್ರಜಾಪೀಡೆಯು ಅನಿಯಂತ್ರಿತವಾಗಿ ನಡೆಯಲು ಅವಕಾಶವಾಗಿರುತ್ತದೆ.

ಡಾಕ್ಟರ ಮುಂಜೆಯವರೇಕೆ ರಾವ್ಂಡ ಟೇಬಲಿಗೆ ಹೋಗುವರು

ಡಾಕ್ಟರ ಮುಂಜೆಯವರು ಭೀಮ ಪರಾಕ್ರಮಿಯಂಥ ಕಾಂಗ್ರೆಸ ಪಕ್ಷದವರು. ಹಿಂದೂ ಜನಾಂಗದ ಸಂಪೂರ್ಣ ಹಿತೈಷಿಗಳು. ಹಿಂದೂ ಜನತೆಯಲ್ಲಿ ಲೋಕಮಾನ್ಯರ ತರುವಾಯ ಇವರಷ್ಟು ಜಾಗ್ರತಿಯನ್ನು ಇನ್ನಾರೂ ಹುಟ್ಟಿಸಲಿಲ್ಲ. ಇವರು ರಾವ್ಂಡಟೇಬಲಕ್ಕೆ ಹೋಗಬೇಕೆಂದು ಸರಕಾರದವರು ಕಾಯದೆಭಂಗದ ದೆಸೆಯಿಂದ ಇವರಿಗೆ ಕೋರ್ಟು ಮುಗಿಯುವ ಮಟ್ಟಿಗೆ ಶಿಕ್ಷೆ ವಿಧಿಸಿದರು. ಇವರು ಸ್ವತಃ ರಾವ್ಂಡಟೇಬಲಕ್ಕೆ ಬಹಿಷ್ಕಾರ ಹಾಕತಕ್ಕವರೇ. ಆದರೆ ಅಲ್ಲಿ ಮೌಲಾನಾ ಮಹಮ್ಮದಲ್ಲಿಯವರು ಹಿಂದೂ ಜನರ ವಿರುದ್ಧ ಅನೇಕ ತಂತ್ರಗಳನ್ನು ನಡಿಸುವ ಸಂಭವವಿರುವದರಿಂದ, ಅವರ ಉಚ್ಚಾಟನೆಗೆ ಒಬ್ಬರು ಹಾಕುವದಕ್ಕಾಗಿಯೇ ಇವರು ಹೋಗಬೇಕಾಗಿದೆ. ರಾಜಾ ನರೇಂದ್ರರೇ ಮೊದಲಾಗಿ ಅನೇಕ ಹಿಂದೂ ಮುಖಂಡರು ಇವರಿಗೆ ಅಲ್ಲಿಗೆ ಹೋಗಲು ಒತ್ತಾಯಪಡಿಸಿದ್ದಾರೆ. ಪುಣೆಯ ಶ್ರೀ ಕೇಳಕರರು ತಾವು ಆಮಂತ್ರಣವನ್ನು ಅಂಗೀಕರಿಸದಿದ್ದರೂ ಇವರಿಗೆ ಹೋಗಬೇಕೆಂದು ಆಗ್ರಹ ಪಡಿಸಿದ್ದಾರೆ. ಡಾಕ್ಟರ ಮುಂಜೆಯವರು ಹೀಗೆ ಹಿಂಬಲಪಟ್ಟುಕೊಂಡು ಹೋದರೂ ಅಲ್ಲಿ ಅದರ್ಶ್ಯ ಲೋಪವಾಗುವದೆಂದೇ ತಿಳಕೊಂಡಿದ್ದಾರೆ. ಇಂಥವರ ಅವಸ್ಥೆಯೇ ಹೀಗಾದ ಬಳಿಕ ಉಳಿದವರು ಯಾವ

ಮ್ಯುನಿಸಿಪಾಲಿಟಿಯ ಪಟ್ಟೆವಾಲಾನು ಮೆಂಬರನಾದನು.

ಕರಾಚಿಯಲ್ಲಿ ಮ್ಯುನಿಸಿಪಾಲಿಟಿಯ ಶಾಲೆಗಳ ಪಟ್ಟೆವಾಲಾ ಈತನು ಕರಾಚಿಯ ವತಿಯಿಂದಾದ ಚುನಾವಣೆಯಲ್ಲಿ ೨೫೩೭ ಮತ ಪಡೆದು ಮೆಂಬರನಾದನು. ಈತನ ಪ್ರತಿಸ್ಪರ್ಧಿ ಮಿಸ್ತ್ರಿಸಾಹೇಬನಿಗೆ ೬೨೮ ಮತಗಳು ಬಿದ್ದವು.

ಮಚ್ಚಿಗಾರನಿಗೆ ೩೮೯೫ ಮತ, ಬ್ಯಾರಿಸ್ಟರನಿಗೆ ೪೪೫ ಮತ!!

ಸಿಂಧದಲ್ಲಿ ಥಾರಪಾರ್ಕರ ಜಿಲ್ಲೆಯ ವತಿಯಿಂದ ಒಬ್ಬ ಮಚ್ಚಿಗಾರ ದಾಲು ಎಂಬವನೂ ಬ್ಯಾರಿಸ್ಟರ ಪರಮಾನಂದರೂ ಉಮೇದವಾರರಾಗಿದ್ದರು. ಇವರಲ್ಲಿ ದಾಲೂಭಿಗೆ ಬ್ಯಾರಿಸ್ಟರರಿಗಿಂತ ಹೆಚ್ಚಿಗೆ ೩೪೦೦ ವೋಟುಗಳು ಬಿದ್ದು ಆತನು ಆರಿಸಲ್ಪಟ್ಟನು. ಬ್ಯಾರಿಸ್ಟರರು ಡಿಪಾಜಿಟ ಕಳಕೊಳ್ಳಬಹುದು.

ಮುಸಲಮಾನರ ಚುನಾವಣೆಯು

ದಕ್ಷಿಣಭಾಗದ ವತಿಯಿಂದಾದ ಚುನಾವಣೆಯಲ್ಲಿ ಈ ಮೂವರು ಆರಿಸಲ್ಪಟ್ಟಿದ್ದಾರೆ.

೧ ಮಿ. ಅಬ್ದುಲಕಾದರ ಬಾಂಗಿ ಧಾರವಾಡ
೨ ಸರದಾರ ಮಹಬೂಬ ಅಲ್ಲಿಖಾನ ಹುಬ್ಬಳ್ಳಿ.
೩ ಹಾಜಿ ಇಬ್ರಾಹಿಮ ಜತಕರ.

ಕುಲಾಬಾಮೆ ಪಠಾಣಸಾಹೇಬರು ಬಹಿಷ್ಕಾರದ ಕುಂಡದಲ್ಲಿ ಸಿಕ್ಕು ಯಶಹೊಂದದೆ ಹೋದರು.

ರಾವಬಹಾದ್ದೂರರಿಗೆ ಎರಡೇ ಮತ.

ಸೂರತ ನಗರದ ಚುನಾವಣೆಯಲ್ಲಿ ೫೦೦೦ ಮತಗಳು. ಮಿ. ಮೋದಿಯವರು ೬೨ ವೋಟುಗಳಿಂದ ಮೆಂಬರರಾದರು. ರಾ. ಬ. ರಣಛೋಡರಿಗೆ ಎರಡೇ ಮತ ಬಿದ್ದು ಡಿಪಾಜಿಟ್ಟು ಕಳಕೊಂಡರು.

ಅಹಮದಾಬಾದ ಪಟ್ಟಣದ ಚುನಾವಣೆಯಲ್ಲಿ ಕಾಂಗ್ರೆಸದವರೇ ಆಗಿದ್ದ ಮಿ ಮಾಳವಣಕರರು ಒಂದು ಕಡಿಮೆ ಇಪ್ಪತ್ತು ಮತಗಳು ಬಿದ್ದು ಡಿಪಾಜಿಟ್ಟು ಕಳಕೊಂಡರು.

ಲೋಕಲಬೋರ್ಡಿನ ಅಧ್ಯಕ್ಷರಿಗೆ ಶಿಕ್ಷೆ.

ಸಿದ್ದಾಪೂರ ತಾಲೂಕಿನ ಮುಖಂಡರೂ, ತಾಲೂಕ ಲೋಕಲಬೋರ್ಡಿನ ಅಧ್ಯಕ್ಷರೂ ಆದ ಶ್ರೀ ದೊಡ್ಡಮನೆಯ ನಾಗೇಶಗೌಡರ ಮೇಲೆ ಸರಕಾರದ ಕೃಪೆಯಾಗಿ, ಆರು ತಿಂಗಳ ತನಕ ಅವರ ಅತಿಥಿಯಾಗಿ, ಅವರು ಹೇಳಿದಲ್ಲಿ ಜಗತ್ತಿಗೆ ಅಜ್ಞಾತವಾಗಿರುವ ಮರ್ಯಾದೆ ದೊರೆಯಿತು. ಇವರ ಕೂಡ

೧ ಶ್ರೀ ಕೇರಬಿಂತ ಸೀತಾರಾಮ ಹೆಗಡೆ
೨ ,, ಹರಿಯಪ್ಪ ಶಾಮಯ್ಯ

ಇವರಿಗೂ ಇವರ ಉತ್ಕಟವಾದ ದೇಶಸೇವೆಗಾಗಿ ಆರಾರು ತಿಂಗಳ ಶಿಕ್ಷೆಯಾಯಿತು. ಕಾರಣ ಜಂಗಲ ಕಾಯದೆಭಂಗ.

ವಾನರ ಸೇನೆಯ ಮಹಿಮೆ.

ಹೊನ್ನಾವರದಲ್ಲಿ ತಾ|| ೧೫ ಕ್ಕೆ ಪುನಃ ಹೊನ್ನಾವರ, ಕರ್ಕಿ, ಹೆಬ್ಬನಕೇರಿ ಅಳ್ಳಂಕಿ ಮತ್ತು ಕಾಸರಕೊಡ ಈ ಊರುಗಳಲ್ಲಿ ಸಾಮುದಾಯಿಕ ಜಂಗಲ ಕಾಯದೆಭಂಗವಾಯಿತು. ಹೊನ್ನಾವರದ ಕನ್ನಡ ಶಾಲೆಯ ವಾನರರು ತಮ್ಮ ಶಾಲೆಯ ಮುಂದೆ ರಾಷ್ಟ್ರಧ್ವಜವನ್ನು ಏರಿಸಿದರು. ಸಾಯಂಕಾಲ ಮಾಮಲೇದಾರಸಾಹೇಬರು ಅದನ್ನು ತೆಗೆಯಲಿಕ್ಕೆ ಬಂದರು; ಆದರೆ ವಾನರರೆಲ್ಲರೂ, ದೊಡ್ಡ ಮಳೆ ಬೀಳುತ್ತಿದ್ದರೂ, ರಾಷ್ಟ್ರಧ್ವಜಕ್ಕೆ ತೆಕ್ಕೆ ಹಾಕಿಕೊಂಡ ಅದಕ್ಕೆ ಕೈ ಹಚ್ಚಗೊಡಲಿಲ್ಲ. ಈ ವಾನರರ ವೀರಶ್ರೀಯನ್ನೂ ಸತ್ಯಾಗ್ರಹದ ಶಕ್ತಿಯನ್ನೂ ಯಾರು ತಾನೇ ಹೊಗಳದಿರರು? ಸತ್ಯಾಗ್ರಹಕ್ಕೆ ಎಂದಾದರೂ ಅಪಜಯ ಉಂಟೇ? ಎಂದೂ ಇಲ್ಲ.

ಸಾಂಗಲಿಯಲ್ಲಿ ನಡೆದ ಅಸಭ್ಯ ಪ್ರಕಾರವು. ಗಣಪತಿಯು ಭಿನ್ನ ವಿಚ್ಛಿನ್ನನಾದನು.

ಸಾಂಗಲಿಯಲ್ಲಿರುವ ವ್ಯಾಪಾರಿಗಳ ಉಚಿತ ವಾಚನಾಲಯದಲ್ಲಿ ಕೆಲ ದುಷ್ಟರು ಕಿಟಕಿಗಳನ್ನು ಮುರಿದು, ಒಳಗೆ ಹೋಗಿ, ಶ್ರೀ. ಗಜಾನನ ಎಂಬ ಸುಂದರ ಮೂರ್ತಿಗಳನ್ನು ಭಿನ್ನ-ಚ್ಛಿನ್ನ ಮಾಡಿದ್ದಾರೆ. ಇಷ್ಟೇ ಅಲ್ಲದೆ, ಲಾಯಬ್ರರಿಯಲ್ಲಿ ಮಲಮೂತ್ರ ವಿಸರ್ಜನೆ ಮಾಡಿ, ಒಂದು ಬೆಲೆಯುಳ್ಳ ಜಮಖಾನೆಯನ್ನು ಕದ್ದೊಯ್ದಿದಾರೆ.

ವೋಟು ಕೊಡಲಿಕ್ಕೆ ಹೋಗಿ ಮೊಣಕಾಲು ಮುರಕೊಂಡ ಮತದಾರರು

ಮೊನ್ನೆ ೧೨ನೇ ತಾರೀಖಿನ ದಿವಸ ಯುನಿವ್ಹರ್ಸಿಟಿಯ ವತಿಯಿಂದ ಉಮೇದವಾರರಿಗೆ ವೋಟು ಕೊಡುವದಕ್ಕಾಗಿ ರಾ. ಬ. ಕಂಬಳಿಯವರು ಮೋಟರದಲ್ಲಿ ಹುಬ್ಬಳ್ಳಿಯಲ್ಲಿ ತಾಲೂಕ ಕಚೇರಿಗೆ ಬಂದರು. ಪಿಕೆಟಿಂಗಕ್ಕೆ ನಿಂತ ಜನಸಮೂಹವು ಶೇಮ್, ಶೇಮ್ ಎಂದು ಒದರಹತ್ತಿತು. ಕೆಲ ಜನ ಪಿಕೆಟರ್ಸರು ವೋಟು ಕೊಡಬೇಡಿರೆಂದು ಕೈಕಾಲು ಹಿಡಿದು ಬೇಡಿಕೊಂಡರು. ರಾ. ಬ. ರವರು ಧಿಕ್ಕರಿಸಿ ಒಳಗೆ ಹೋಗಿ ವೋಟು ಕೊಟ್ಟರು ಮುಂದೆ ಅವರು ತಾಸೆರಡು ತಾಸು ಅಲ್ಲೇ ಕೂತರು ಸಂಜೆಗೆ ಆರು ಗಂಟೆಯಾಗಿ ಪೋಲಿಂಗ ಆಫೀಸರರು ಸಹ ಮನೆಗೆ ಹೋದರು. ಕಡೆಗೆ ರಾ. ಬ. ಕಂಬಳಿಯವರು ಮುಂದಿನ ಬಾಗಿಲದಿಂದ ಬರದೆ ಹಿತ್ತಲಬಾಗಿಲದಿಂದ ಹೋಗಬೇಕೆಂದು ಧಾವಿಸಿದರು ಅಲ್ಲಿಯೂ ಪಿಕೆಟರ್ಸ ಜನರು ನಿಂತಿದ್ದರು. ರಾ. ಬ. ರವರು ಮುಳ್ಳು ತಂತಿ ಜಿಗಿದು ಪಾರಾಗಬೇಕೆಂದು ಹವಣಿಸುವಾಗ, ಮುಳ್ಳು ತಂತಿಯು ಅವರ ಧೋತರ ಕೋಟು ಹಿಡಿದು ಅಲ್ಲೇ ಮುಗ್ಗರಿಸಿದರು ಧೋತರ ಹರಕೊಂಡು ಅಲ್ಲೇ ಸಮೀಪದಲ್ಲಿರುವ ಕ್ಲಬ್ಬಿಗೆ ಹೋದರು ಪಿಕೆಟರ್ಸರು ಪಾಂಚಜನ್ಯ ಮಾಡುತ್ತ ಬೆನ್ನು ಹತ್ತಿದರು. ಕರೇ ನಿಶಾನೆಗಳು ಊರತುಂಬ ಹಾರಾಡುತ್ತಿದ್ದವು.

ವಿಜಾಪುರದ ಚುನಾವಣೆ

ವಿಜಾಪುರ ಜಿಲ್ಲೆಯ ಕೌನ್ಸಿಲ ಚುನಾವಣೆಯ ಮತಗಳನ್ನು ಎಣಿಸುವ ಕಾರ್ಯವು ಕೊನೆಗೊಂಡಿದ್ದು ಅದರಲ್ಲಿ ೧ ಶಂಕರೆಪ್ಪಾ ದೇಸಾಯಿ ಇವರಿಗೆ ೬೨೫೫ ಮತಗಳು, ೨ ಶಂಕರಗೌಡ ಪಾಟೀಲ ಇವರಿಗೆ ೧೪೨೩ ಮತಗಳು, ೩ ಸರಸಪ್ಪಾ ಮಾಮುಡಗಿ ಇವರಿಗೆ ೧೬ ಮತಗಳು ಬಿದ್ದಿವೆ ಶ್ರೀ. ಶಂಕರೆಪ್ಪಾ ದೇಸಾಯಿ ಇವರೇ ವಿಜಾಪೂರ ಜಿಲ್ಲೆಯ ಕೌನ್ಸಿಲ ಸಭಾಸದರಾದರು.

ಬೆಳಗಾವ ಜಿಲ್ಲೆಯ ಸುದ್ದಿಗಳು

ಈವಾರದಲ್ಲಿ ಜಿಲ್ಲಾಧಿಕಾರಿಗಳು ಪೋಲಿಸರ ಅಧಿಕಾರವನ್ನು ತುಸು ಬಿಗಿ ಹಿಡಿದದ್ದರಿಂದ, ಹಿಡಿಯುವ ಮತ್ತು ಶಿಕ್ಷಿಸುವ ಗದ್ದಲವು ಕೊಂಚ ಕಡಿಮೆಯಾಗಿದೆ.

ಶಿಂದಿಗಿಡ ಕಡಿದ ಬಗ್ಗೆ ನಾಗನೂರಿನ ಸ್ವಯಂಸೇವಕರನ್ನು ಮೊದಲು ಹಿಡಿದರು. ಆ ನಂತರ ಬಿಟ್ಟುಬಿಟ್ಟರು.

ಚಿಕ್ಕೋಡಿಯಲ್ಲಿ ಬಹಿಷ್ಕಾರ ಸತ್ರವು ಜೋರಿನಿಂದ ನಡೆದಿದೆ.

ಹುಕ್ಕೇರಿಯಲ್ಲಿ ತಾಲೂಕ ಕಾಂಗ್ರೆಸ ಕಮಿಟಿಯು ಸ್ಥಾಪಿಸಲ್ಪಟ್ಟಿತು. ಇನ್ನೂರು ಜನರು ಮೆಂಬರರಾದರು. ದಿನಾಲು ಮೆಂಬರ ಮಾಡುವ ಕೆಲಸ ನಡೆದಿದೆ.

ಹೊಸಮನಿ ಪರಮಣ್ಣನವರು ಕಾಯದಭಂಗ ಮಾಡಿದರು.

ಹಾವೇರಿಯಲ್ಲಿ ಶ್ರೀ ಹೊಸಮನಿ ಪರಮಣ್ಣನವರ ಮೇಲೆ ೧೪೪ ಕಲಮಿನ ನೋಟೀಸು ತೆಗೆದರು ಶ್ರೀ ವಿಶ್ವನಾಥರಾವ ಪೋಲೀಕರರ ಅಧ್ಯಕ್ಷತೆಯಲ್ಲಿ ಕೂಡಿದ ೨೦೦೦ ಜನರ ಸಭೆಯಲ್ಲಿ ಶ್ರೀ. ಪರಮಣ್ಣನವರು ಕಾಯದೆಭಂಗ ಮಾಡಿ ಭಾಷಣ ಮಾಡಿದರು.

ಮನೆಕಟ್ಟುವದರಲ್ಲಿ ಹೊಸ ಶೋಧ!!!

ಇಂಗ್ರೇಜಿ ಇಂಜನಿಯರರು ಮನೆಗಳನ್ನು ಕಟ್ಟುವಿಕೆಯಲ್ಲಿ ಹೊಸ ಹೊಸ ಶೋಧಗಳನ್ನು ಮಾಡುತ್ತಿದ್ದಾರೆ. ಎಷ್ಟೋ ಮನೆ ಮತ್ತು ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಪ್ರತಿಧ್ವನಿಯಾಗುವದು. ದೊಡ್ಡ ದೊಡ್ಡ ಬೀದಿಗಳಗುಂಟ ಇರುವ ಮನೆಗಳಲ್ಲಿ ಹೊರಗಿನ ಬಂಡಿ, ಮೋಟಾರ, ಮುಂತಾದವುಗಳ ಸಪ್ಪಳ ಕೇಳಿ, ಕೇಳಿ, ತೊಂದರೆಯಾಗುವದು. ಈ ಸಪ್ಪಳಗಳು ಒಳಗೆ ಬರದಂತೆ ಕಟ್ಟಡಗಳನ್ನು ಕಟ್ಟುವ ಶೋಧನಮಾಡಿರುತ್ತಾರೆ

ಅಗಡಿಯ ಆನಂದವನದ ಮುದ್ರಾಲಯದ ಮೇಲೆ ಫಿರ್ಯಾದಿ

ಅಗಡಿಯಲ್ಲಿ ಸುಪ್ರಸಿದ್ಧವಾಗಿರುವ ಶ್ರೀ ಶೇಷಾಚಲ ಮುದ್ರಾಲಯ ಮತ್ತು ಸದ್ಬೋಧ ಚಂದ್ರಿಕೆಯ ವ್ಯವಸ್ಥಾಪಕರಾಗಿರುತ್ತಾರೆಂಬವರಾದ ಶ್ರೀ. ಭಿಕಾಜಿ ಪರಶುರಾಮ ಕಾಳೆಯವರ ಮೇಲೆ, ಅಹದ ಕವಿತಾಟಿಯ ವ್ಯವಸ್ಥಾಪಕರ ವತಿಯಿಂದ ಶ್ರೀ. ನಾರಾಯಣ ಶ್ರೀನಿವಾಸ ರಾಜಪುರೋಹಿತ ಇವರು ೪೦೮ ಕಲಮಿನನ್ವಯ ವಿಶ್ವಾಸಘಾತಕದ ಫಿರ್ಯಾದಿ ಮಾಡಿದ್ದಾರೆ. ಫಿರ್ಯಾದಿಯ ವತಿಯಿಂದ ಶ್ರೀ. ಗುತ್ತಲ ಮತ್ತು ಆರೋಪಿಯ ವತಿಯಿಂದ ಶ್ರೀ ಪಟವರ್ಧನರು ವಕೀಲರಿದ್ದು, ನಾಳೆ ದಿವಸ ಮಿ. ಮೇಯರಸಾಹೇಬರ ಮುಂದೆ ವಿಚಾರಣೆ ನಡೆಯುವದು. ಸದ್ಯ ಶ್ರೀ. ಕಾಳೆಯವರು ಇನ್ನೂರು ರೂಪಾಯಿಯ ಜಾಮೀನದ ಮೇಲಿದ್ದಾರೆ.

ಹಾವೇರಿಯಲ್ಲಿ ಭಗಿನಿ ಸಮಾಜ ಸ್ಥಾಪನೆ.

ಕಳೆದಾಜೆ ಆದಿತ್ಯವಾರ ದಿವಸ ಹಾವೇರಿಯಲ್ಲಿ ಶ್ರೀ ಹೇರ್ಲೆಯ ವಿಶ್ವನಾಥರಾಯರ ಅಧ್ಯಕ್ಷತೆಯಲ್ಲಿ ಹೆಣ್ಣುಮಕ್ಕಳ ಸಭೆಯಾಗಿ ಅಲ್ಲೊಂದು ಭಗಿನಿ ಸಮಾಜವು ಸ್ಥಾಪಿಸಲ್ಪಟ್ಟಿತು. ಶ್ರೀ ಉಮಾಬಾಯಿ ಗೋಕರ್ಣ ಇವರು ಅಧ್ಯಕ್ಷೆ, ಶ್ರೀ ಇಂದಿರಾಬಾಯಿ ಖರೆಯವರು ಕಾರ್ಯದರ್ಶಿಯಾಗಿದ್ದಾರೆ ಈಗಾಗಲೆ ೧೪ ಜನ ಹೆಣ್ಣುಮಕ್ಕಳು ಮೆಂಬರರಾಗಿದ್ದಾರೆ ಇದರ ಉದ್ದೇಶಗಳು

೧ ಸ್ವದೇಶಿ ೨ ಧ್ವಜವಂದನೆ ೩ ನೂಲುವದು ೪ ಪ್ರಾರ್ಥನೆ

ಹಾವೇರಿಯಲ್ಲಿ ಬೇಗನೆ ಒಂದು ಬಹಿಷ್ಕಾರ ಮಂಡಲವು ಸ್ಥಾಪಿಸಲ್ಪಡುವದು.

೬ ಕಾಲ ಕರು

ಒಂದೇ ತಲೆ, ಎರಡು ಬಾಯಿ, ಮೂರು ಕಣ್ಣು, ಎರಡು ನಾಲಿಗೆ, ಮೂಗಿನ ನಾಲ್ಕು ಸೊಳ್ಳೆ ಒಂದು ಲಿಂಗ ಹೀಗೆ ಇದ್ದ ಕೋಣನ ಮರಿಯು ಸೃಷ್ಟಿಯ ಅದ್ಭುತ ಚಮತ್ಕಾರವೇ ಸರಿ. ಜೀವಂತ ಇದ್ದು ಎರಡೂ ನಾಲಿಗೆಯಿಂದ ಮೇವು ಮುಕ್ಕಿ ತಿನ್ನುತ್ತದೆ.

ಬೆಳಗಾವಿಯಿಂದ ಹರಿಹರ ದಾವಣಗೇರಿಯ ರೇಲ್ವೆಯ ದಾರಿಗುಂಟ ಮಳೆಯು ಹಾಹಾಕಾರಮಾಡಿದೆ. ಬೈಲಸೀಮೆಗೆ ಮಳೆ ಬಿದ್ದಿರುವದು.

ದಸ್ತಗಿರಿ.

ಶ್ರೀ ಅಶ್ವತ್ಥನಾರಾಯಣರು ಇವರ ಕೂಡ ನಾಲ್ವರನ್ನು ಯಲ್ಲಾಪೂರ ಮತ್ತು ಶ್ರೀ. ಅನಂತಭಟ್ಟ ಕುಂದಾಪೂರ ಮತ್ತು ಶ್ರೀ. ಜಾವಳಿ ಬಾಲಕೃಷ್ಣಭಟ್ಟರನ್ನು ಹಾನಗಲ್ಲಿನಲ್ಲಿ ಹಿಡಿದಿದಾರೆ.

ಮುಂಡರಗಿಯ ಮ.ಹಾಲಕರಿಯಾದ ಶ್ರೀ. ರಾಮಾಚಾರ್ಯ ಗುತ್ತಲ ಇವರಿಗೆ ರತ್ನಾಗಿರಿಯ ಮಾಮಲತಿಗೆ ವರ್ಗವಾಗಿದೆ.

ನೋಟೀಸು

ಮನೆಯಲ್ಲಿ ಎರಡು ಹುಡುಗರಿಗೆ ಇಂಗ್ಲಿಷ ೪ನೇಯತ್ತೆ ಮತ್ತು ಕನ್ನಡ ೪ನೇಯತ್ತೆ ವಿಷಯವನ್ನು ಕಲಿಸಲಿಕ್ಕೆ ಒಬ್ಬ ಮಾಸ್ತರ ಬೇಕಾಗಿರುತ್ತದೆ ಮ್ಯಾಟ್ರಿಕ ಅಥವಾ ಸ್ಕೂಲಫೈನಲ್ ಪಾಸಾದವರಿರಬೇಕು. ಊಟ ಮತ್ತು ಇರಲಿಕ್ಕೆ ಜಾಗೆ ಕೊಟ್ಟು ಲಾಯಖೀ ಪ್ರಕಾರ ೧೦ರಿಂದ ೧೪ರವರೆಗೆ ಪಗಾರ ಕೊಡುತ್ತೇವೆ. ಬೇಕಾದವರು ಜಾತಿ ವಯಸ್ಸು ಪರೀಕ್ಷೆ ವಗೈರೆ ಕೆಳಗಿನ ಪತ್ತೇಕ್ಕೆ ಅರ್ಜಿ ಮಾಡುವದು.

10-9-36 R. S. Deshpande
Tallihalli
Post Savanur

ಈ ಪತ್ರವನ್ನು ಕೃಷ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನೋಟೀಸು.

—(೦)—

ನಾಗಿ ಕೋಂ ಶಿವಪ್ಪ ಸುಣಗಾರ ಸಾ|| ಹೊಸೂರ ಮಜರೆ ಹುಲ್ಕುಂಬಿ ಇವಳಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಶಿವಪ್ಪ ಭರಮಪ್ಪ ಸುಣಗಾರ ಸಾ|| ಹೊಸೂರ ಮಜರೆ ಹುಲ್ಕುಂಬಿ ಇವನು ನಿನಗೆ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ-

ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನ ಆಗಿ ಅಜಮಾಸ ಹತ್ತು ಹದಿನಾಲ್ಕು ವರ್ಷವಾಯಿತು ಲಗ್ನ ಆದನಂತರ ನೀನು ನನ್ನ ಕೂಡ ೩ ವರ್ಷ ಸುಖದಿಂದ ಬಾಳುವೆಮಾಡುತ್ತ ಇದ್ದಿ ಆನಂತರ ನೀನು ನಿನ್ನ ತಾಯಿಯ ಛಲತನದಿಂದ ನನ್ನ ಮನೆ ಬಿಟ್ಟು ನನಗೆ ಹೇಳದೆ ಕೇಳದೆ ಹೋಗುವಕಾಲಕ್ಕೆ ನನ್ನ ದಾಗೀನೆ ನಿನ್ನ ಮೇಲೆ ಇದ್ದವುಗಳು- ಬಳಿಜೋಡು ೧ ತೊಲಿ ೫ ಆ ೬ ೧೦೦ ರೂ. ತೀಗೇಬಂದಿಜೋಡು ತೊಲಿ ೩ ಅ. ೬ ೨೪ ರೂ. ಕರ್ಣಪೂಲು ಜೋಡು ಅ. ೬ ೧೯ರೂ. ಈ ಪ್ರಕಾರ ದಾಗೀನೆ ತೊಗೊಂಡು ಹೋಗಿರುತ್ತೀ ನಂತರ ನಾನು ನಿನ್ನನ್ನು ಕರಿಯಲಿಕ್ಕೆ ಬಂದರೆ ನಿನ್ನ ತಾಯಿ ಕಳಿಸುವದಿಲ್ಲೆಂದು ಹೇಳಿ ಕಳಿಸಿದಳು ಇದರ ಮೇಲಿಂದ ನೀನು ನನ್ನ ಕೂಡ ಬಾಳುವೆಮಾಡುವದಿಲ್ಲೆಂದು ನನಗೆ ಕಂಡುಬಂತು ಕಾರಣ ಈ ನೋಟೀಸು ಕೊಡುವ ಭಾಗಪಡತ್ತು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಮೇಲೆ ಕಾಣಿಸಿದ ದಾಗಿನೆಗಳನ್ನು ತೊಗೊಂಡುಬಂದು ಬಾಳುವೆಗೆ ಹತ್ತಬೇಕು ಇಲ್ಲವಾದರೆ ಮೇಲೆ ಕಾಣಿಸಿದ ನನ್ನ ದಾಗೀನೆ ಹಾಗು ನನ್ನ ಲಗ್ನದ ಹಣ ೧೫೦ ರೂಪಾಯಿ ಕೊಟ್ಟು ನನ್ನ ಕಡೆಯಿಂದ ಸೋಡಚೀಟಿ ತೊಗೋಬೇಕು ಇಲ್ಲವಾದರೆ ನಾನು ನಿನಗೆ ಉಡಿಕಿಮಾಡಿಕೊಳ್ಳಲಿಕ್ಕೆ ಪರವಾನಗಿ ಕೊಡುವದಿಲ್ಲ ಜರ ನೀನು ಮಾಡಿಕೊಂಡು ಹೋದರೆ ನಿನ್ನ ಮೇಲೂ ನಿನ್ನನ್ನು ಮಾಡಿಕೊಂಡು ಹೋಗುವವನ ಮೇಲೂ ನನ್ನ ದಾಗೀನೆ ಮತ್ತು ಲಗ್ನದ ಖರ್ಚಿನ ಸಲುವಾಗಿಯೂ ಯೋಗ್ಯ ಇಲಾಜ ಮಾಡುವೆನು ಅದಲ್ಲದೆ ನೀನು ಹಾಗೇ ಇದ್ದು ವ್ಯಭಿಚಾರದಿಂದ ಗರ್ಭಿಣಿಯಾಗಿ ಹಡೆದರೆ ನನ್ನ ಹೆಸರು ಹಚ್ಚಬಾರದು ನನ್ನದೇನೂ ಸಂಬಂಧ ಇರುವದಿಲ್ಲ ಅಂತಾ ಕೊಟ್ಟ ನೋಟೀಸು ತಾ||೨೨-೯-೩೦ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಶಿವಪ್ಪ ಭರಮಪ್ಪ ಸುಣಗಾರ ಸಾಕೀನ ಹೊಸೂರ ಮಜರೆ ಹುಲ್ಕುಂಬಿ ಈತನದು ಇರುತ್ತದೆ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ [illegible] ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. [illegible]

ವಿಳಾಸ—ಶ್ರೀ. ಗಣಪತಿ [illegible] ದೀಕ್ಷಿತ
C/o [illegible] ಧಾರವಾಡ

[illegible]

ನೋಟೀಸು

ಸಾವಂತ್ರಿ ಕೋಂ ಗುರುಸಿದ್ದಪ್ಪ [illegible] ಸಾ|| ಧಾರವಾಡ.

ಕೆಳಗೆ ಸಹಿ ಮಾಡಿದವನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದುವೆಯ ಹೆಂಡತಿ ಇದ್ದು ನನ್ನಿಂದ ನಿನಗೆ ಒಂದು ಗಂಡು ಮಗ ಸಹ ಹುಟ್ಟಿದ್ದು ಅವನು ಈಗ ಐದು ವರ್ಷದವನಿರುತ್ತಾನೆ ಇತ್ತೀಚೆಗೆ ನೀನು ನನ್ನ ಮನೆಯಲ್ಲಿ ಸರಿಯಾಗಿ ನಡೆಯದೆ, ನನಗೆ ಮತ್ತು ನನ್ನ ಮನೆಯ ಇತರ ಗಂಡು ಮತ್ತು ಹೆಣ್ಣುಮಕ್ಕಳಿಗೆ ಹೇಳದೆ ಒಂಭತ್ತು ತಿಂಗಳ ಹಿಂದೆ ಏಕಾಏಕೀ ತವರ ಮನೆಗೆ ಬಂದಿ ನಾನು ಎರಡು ಮೂರು ಸಾರೆ ಕರಿಯಲಿಕ್ಕೆ ತಿರಾಯಿತರನ್ನು ಕಳಿಸಿದೆ ಬೀಗರು ಸಹ ನಿನಗೆ ಬುದ್ಧಿ ಹೇಳಿದರು ಆದರೂ ನೀನು ಬರದಾದ್ದರಿಂದ, ಇವತ್ತಿನ ದಿವಸ ನಾನು ಸ್ವತಃ ಕರಿಯಲಿಕ್ಕೆ ಬಂದೆನು ಆಗ ನೀನು ಸ್ಪಷ್ಟವಾಗಿ ಬರುವದಿಲ್ಲೆಂದು ಹೇಳಿದಿ ಎಷ್ಟು ಸರಿಯಾಗಿ ಹೇಳಿದರೂ ನಿನ್ನ ಹಟ ಬಿಡಲಿಲ್ಲ ಆಗ ನಾನು ನಿರುಪಾಯನಾಗಿ ನಿನ್ನ ಮನೆಯಿಂದ ಹೊಂಟು ಬಂದೆನು ಮತ್ತು ಈಗ ಈ ನೋಟೀಸು ಕೊಟ್ಟಿರುತ್ತೇನೆ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಬಂದು ಸುರಳಿತವಾಗಿ ಬಾಳುವೆ ಮಾಡಿಕೊಂಡಿರಬೇಕು ಇದಕ್ಕೆ ತಪ್ಪಿದರೆ- ನೀನು ನೀನಾಗಿ ಬರುವದಿಲ್ಲೆಂದು ಹೇಳಿದ್ದರಿಂದ ನಿನಗೆ ನನ್ನಿಂದ ಪೋಟಗಿ ವಗೈರೆ ಸಿಗಲಾರದು ಗಂಡು ಮಗನ ಮೇಲೆ ನನ್ನ ಮಾಲಕಿ ಹಕ್ಕು ಇದ್ದು, ನನಗೆ ಅದನ್ನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಕೊಟ್ಟು ನನ್ನಿಂದ ಪಾವತಿ ಪಡೆಯಬೇಕು ಇದಕ್ಕೆ ತಪ್ಪಿದರೆ ನಾನು ನ್ಯಾಯಕೋರ್ಟಿನ ಮುಖಾಂತರ ಪಡೆಯುವೆನು, ಮಗು [illegible] ನೀನು ತಿಳಿಯುವದು ತಾ|| ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲಿದೆ ತಿಳಿಯುವದು ತಾ|| ೨೩ ಸಪ್ಟಂಬರ ೧೯೩೦ ನೇ ಇಸವಿ

Hubli G D. Kamadolli
23-9-30 Deccan Press

ಜಾಹೀರ ನೋಟೀಸು-

ಜವಾಬದಾರ ಶೆಟ್ಟಿಗಳಿಗೆ ನಾಬರ ಮಾಲವನ್ನು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಡೆಗೆ ಅಡ್ಡದಲ್ಲಿ ಇಮಾರತಿ ಸಾಗವಾನಿ ಹೊಲಗಳೂ ಮತ್ತು ನ ಹೊಸ್ತ ಹೆದ್ದಿ ವ ಹೊಸ ಸಾಟಗಳು

ಸಾಗವಾನಿ ಯಳಿಸ ಸಾಗವಾನಿ (೩) ಫೂಟಿನ ಹವಕ್ಕೆ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತ್ಯಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರಿಸಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ್ಸ್
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಗುರುವಾರ ತಾರೀಖು ೨೫ನೇ ಸೆಪ್ಟಂಬರ ೧೯೩೦ (ಸಂಚಿಕೆ [illegible]

ಇದೋ ನೋಡಿ! ಕಾರಖಾನೆದಾರರೇ!! ತ್ವರೆ ಮಾಡಿ!!!

ಕರ್ನಾಟಕದ [illegible]!

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ೧೯೩೦

ಧಾರವಾಡ

ಕರ್ನಾಟಕದ ಕಾರಖಾನೆದಾರರಿಗೆ [illegible]

ಬರುವ [illegible] ದಿ ಕರ್ನಾಟಕ ಸ್ವದೇಶಿ ಬ್ಯೂರೋ [illegible] ಕಾರಖಾನೆದಾರರು ವಿಶೇಷವಾಗಿ

ಕರ್ನಾಟಕದ ಕಾರಖಾನೆದಾರರೇ

ಈ ಪ್ರದರ್ಶನದಲ್ಲಿ ನಿಮ್ಮ ವಸ್ತುಗಳನ್ನು ಪ್ರದರ್ಶಿಸಬೇಕು. [illegible] ಒಂದು ಮಾಡಬೇಕು. [illegible],

ಸಪ್ಟಂಬರ ೩೦ನೇ ತಾರೀಖಿನ ಒಳಗೆ [illegible]. ಈ ಬಗ್ಗೆ ಹೆಚ್ಚಿನ ತಿಳಿಯಬಯಸುವವರು ಕಾರ್ಯದರ್ಶಿಗಳು, ದಿ ಕರ್ನಾಟಕ ಸ್ವದೇಶಿ ಬ್ಯೂರೋ, ಧಾರವಾಡ ಇವರನ್ನು ವಿಚಾರಿಸಬೇಕು.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲೆಯುವ ಸಂಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ೨ ತಿಂಗಳ ಮತ್ತು ಟೇಲರಿಂಗ ಮುದತ ಮೂರು ೩ ತಿಂಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ೨೫ ಇಪ್ಪತ್ತೈದು ರೂಪಾಯಿ ಫೀ ಮತ್ತು ಟೇಲರಿಂಗ ೧೫ ಹದಿನೈದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ಕನಿಷ್ಠ ಆರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮ ಅಥವಾ ಒಂದು ಆಣೆ ಪೋಸ್ಟ ತಿಕೀಟು ಕಳಿಸಬೇಕು.

ಆರ್. ಬಿ. ಮುಧೋಳಕರ
ಫಸ್ಟ್‌ಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

[illegible]

[illegible] ಕ್ರಮದ [illegible]
[illegible]
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಹಿಂದಿನಂತೆಯು [illegible] ಹೊಂದಿ [illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವ ನಡೆಸ್ತುವದು. [illegible] ಬೇರೆ ಬೇರೆ [illegible] ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುಕುಂದರಾವ ಬಿ. ಇನಾಮ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ಸಾಲ್ಯ ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ

ಮ್ಯಾ ವಿಜಯ ಧಾರವಾಡ

ವಿಜಯ.

ಚಾಲುಕ್ಯ ವಿಕ್ರಮ ವರ್ಷ೮೫೩ ಭಾದ್ರಪದ ಶುದ್ಧ ೨

ಬಾರಡೋಲಿ ರೈತರ ಪ್ರಚಂಡ ಸತ್ಯಾಗ್ರಹ

ಹಪ್ತೆ ಕೊಡುವದಿಲ್ಲೆಂದು ದೇಶತ್ಯಾಗ

ಬಾರಡೋಲಿಯ ರೈತರು ಮಹಾತ್ಮರಿಗೆಷ್ಟು ಉಪಕೃತರಾಗಿದ್ದಾರೆಂಬದನ್ನು ಬರೆಯುವದು ಕೂಡ ಅಸಾಧ್ಯ. ಇತಿಹಾಸದಲ್ಲಿಯೇ ಅಪೂರ್ವವಾದದ್ದು. ಮಹಾತ್ಮರ ಅಪ್ಪಣೆಯ ಮೇರೆಗೆ ಸತ್ಯಾಗ್ರಹ ಮಾಡಿದ್ದರಿಂದಲೇ ಅವರ ರಿವ್ಹಿಜನದ, ತೀರ್ವೆಯು ರದ್ದಾಗಿ ಪ್ರತಿವರ್ಷ ಲಕ್ಷರೂಪಾಯಿಯ ಉಳಿತಾಯವಾಯಿತು. ಯಾವ ತಾಲೂಕಿನ ರೈತರೂ, ಯಾವ ಗೃಹಸ್ಥನಿಂದಲೂ ಇಂಥ ಉಪಕಾರ ಹೊಂದಲಿಲ್ಲ. ಆ ಉಪಕಾರದ ಪ್ರತ್ಯುಪಕಾರವಲ್ಲ; ಕೃತಜ್ಞತೆಯನ್ನು ತೋರಿಸುವ ಸಮಯವೂ ಅವರಿಗೀಗ ಒದಗಿತು. ಕಾಯಿದೆಭಂಗದ ಈಗಿನ ಚಳವಳಿಯಲ್ಲಿ ಅವರು ಪ್ರತಿಯೊಂದು ರೀತಿಯಿಂದ ಸೇರಿದ್ದಾರೆ. ಉಪ್ಪಿನ ಕಾಯ್ದೆಭಂಗಕ್ಕೆ ಸಾವಿರ ಸಂಖ್ಯೆಯಿಂದ ಸ್ವಯಂಸೇವಕರನ್ನು ಕೊಟ್ಟರು. ತಾಡಿನ ಗಿಡಗಳ ಧ್ವಂಸಮಾಡಿದರು. ಗಡಂಗುಗಳ ಮುಂದೆ ಪಿಕೆಟಿಂಗ ಮಾಡಿ, ಹೆಂಡದ ವ್ಯಾಪಾರ ಮುಣುಗಿಸಿದರು. ಹಪ್ತೆ ಕೊಡಬಾರದೆಂದು ಈ ಮೊದಲೇ ಗೊತ್ತುಮಾಡಿದ್ದಾರೆ. ಸದ್ಯ ಆಡಿದಂತೆ ನಡೆಯುತ್ತೇವೆಂಬದನ್ನು ಪ್ರತ್ಯಕ್ಷ ಪ್ರಮಾಣವಾಗಿ ತೋರಿಸಲುಜ್ಜುಗಿಸಿದ್ದಾರೆ.

ರೈತರು ಹಪ್ತೆ ಕೊಡುವದಿಲ್ಲೆಂದು ಮುಷ್ಕರ ಹಿಡಿದ ಕೂಡಲೆ, ಸರಕಾರದವರು ಒಂದು ಸರಕ್ಯೂಲರ ತೆಗೆದರು. ಅದು ತಾವು ಮಾಡಿದ್ದೇ ಪೂರ್ವವೆಂದಿರುತ್ತದೆ. ಹಿಂದಿನ ಕಾಲದ ಸತ್ಯಾಗ್ರಹದಲ್ಲಿ ಸರಕಾರೀ ಅಮಲದಾರರು ಹಪ್ತೆ ವಸೂಲಿಗೆ ಬಂದ ಕೂಡಲೆ, ಸ್ವಯಂಸೇವಕರು ಕಹಳೆ ಹಿಡಿಯುವರು. ನಗಾರಿ ಹೊಡೆಯುವರು. ಕೂಡಲೆ ಜನರು, ಪುನಃ ವಾದ್ಯಧ್ವನಿ ಕೇಳುವತನಕ ಬಾಗಿಲಹಾಕಿಕೊಂಡು ಕೂಡ್ರುವರು. ಹೀಗಾಗಿ ಮುಲಕೀ ಕಾಮದಾರರಿಗೆ ಹಪ್ತೆವಸೂಲಿಗಾಗಿ ಜಂಗಮ ಜಿಂದಿಗೆಗಳನ್ನು ಜಪ್ತಮಾಡಲಿಕ್ಕೆ ಅವಕಾಶವೇ ದೊರೆಯುತ್ತಿದ್ದಿಲ್ಲ. ಈ ವಿಘ್ನವನ್ನು ದೂರಮಾಡಬೇಕೆಂದು ಸರಕಾರದವರು ಒಂದು ಸರಕ್ಯೂಲರ ತೆಗೆದು, ರೈತರ ಮನೆಯ ಬಾಗಿಲ ತಿರಿಗಿಣೆ ತಪ್ಪಿಸಿ, ಗೋಡೆಹಾರಿ, ಕಿಟಕಿ ಮುರಿದು, ಬೇಕಾದರೆ ಬೆಳಕಿಂಡಿಯೊಳಗಿಂದ ಸಹ ಒಳಗೆ ಇಳಿದು, ಜಪ್ತೀ ನಡಿಸಬೇಕೆಂದು ಕಾಮದಾರರಿಗೆ ಅಧಿಕಾರ ಕೊಟ್ಟಿರುತ್ತಾರೆ. ಇದಕ್ಕೆ ಮುಖ್ಯವೆಂದು ರೈತರು ಗ್ರಾಮತ್ಯಾಗ ಮಾಡಬೇಕೆಂಬ ನಿಶ್ಚಯ ಮಾಡಿ, ಆ ಪ್ರಕಾರ ಹೆಂಡರು ಮಕ್ಕಳು, ದನಕರ, ಜಂಗಮ ಜಿಂದಿಗೆ ತೆಗೆದುಕೊಂಡು ಹತ್ತರ ಇದ್ದ ಬಡೋದೆಯ ರಾಜ್ಯದಲ್ಲಿ ಗುಳೇ ಹೋಗಲಾರಂಭಿಸಿದ್ದಾರೆ. ಗುಳೇ ಹೋಗುವದರಿಂದುಂಟಾಗುವ ಅನಂತ ಪಡಿಪಾಟ್ಲಗಳನ್ನು ಭೋಗಿಸಲಿಕ್ಕೆ ಸಿದ್ಧರಾಗಿದ್ದಲ್ಲದೆ, ತಮ್ಮ ಸತ್ಯ ಪ್ರತಿಜ್ಞೆಗೆ ಭಂಗತರಗೊಡಲಿಕ್ಕಾಗುವದಿಲ್ಲೆಂದು ಇವರು ಕೊನೆಯ ಉಪಾಯ ಕೈಕೊಂಡಿದ್ದಾರೆ. ನಮ್ಮ ತರುವಾಯ ನಮ್ಮ ಹೊಲಗಳಿಗೆ ಬೇಕಾದ ದುರವಸ್ಥೆ ಬರಲಿ; ಪರಾಧೀನವಾಗಲಿ; ಸರಕಾರದ ಹಿಂಸೆಯ ದಬ್ಬಾಳಿಕೆಯಲ್ಲಿ ಸತ್ಯಾಗ್ರಹದ ಸತ್ಕೀರ್ತಿಗೆ ಕಲಂಕ ತಗಗೊಡಲಾಗದೆಂದು ತಮ್ಮ ಮನವೊಲಿಸ ಬಂದ ಡೆಪ್ಯುಟಿ ಕಲೆಕ್ಟರರಿಗೆ ಉತ್ತರ ಕೊಟ್ಟಿದ್ದಾರೆ. ಮಹಾತ್ಮರ ಬಿಡುಗಡೆಯಾದ ಹೊರತು ಹಪ್ತೆ ಕೊಡಬಾರದೆಂದು ಇವರ ವೀರವಾಣಿ ಇದ್ದು, ಮಹಾತ್ಮರ ಬಂಧಮುಕ್ತತೆ ಎಂದರೆ- ಸ್ವರಾಜ್ಯ ಸಂಪಾದನೆಯಾಗುತ್ತದೆ.

* * *

ಧಾರವಾಡದ
ರಾವಸಾಹೇಬ ಯಾರ್ದೆರಾಯರ
ಉದ್ಧಟತನವು

—)(o)(—

ಯಾರ್ದೆ ಕಲ್ಯಾಣರಾಯರೆಂಬವರು ಈ ಊರಲ್ಲಿದ್ದರು. ಗಿಡದ ಮೇಲಿನ ಪಕ್ಷಿಯಂತೆ ಈಯೂರಂತಸ !! ಹಾಯಸ್ಕೂಲಿನ ಶಿಕ್ಷಣವೆ ಈ ಊರಲ್ಲಿಯೇ ಆಗಿದೆ. ಪುಣೆಯ ಕಾಲೇಜದಲ್ಲಿ ಓದಿದರು. ಮಹಾರಾಷ್ಟ್ರ ದೇಶದಲ್ಲಿಯೇ ಬೀಗತನವಾದ್ದರಿಂದ, ಅಲ್ಲಿಯೇ ಮುಲಕೀ ಖಾತೆಯಲ್ಲಿ ಸೇರಿದರು. ಸಾತಾರಿಯಲ್ಲಿ ಚೀಟಣೀಸರಾಗಿದ್ದರು. ಪಾಯಿಯಲ್ಲಿ ಮಾಮಲೇದಾರರಾಗಿದ್ದಾಗ ರಾವಸಾಹೇಬ ಪದವಿ ಪಡೆದರು. ಈ ಪದವಿಯೇ ಅಥರ ಸರಕಾರ ಶ್ರೇವೆಯ ಅತಿರೇಕವನ್ನು ತೋರಿಸುತ್ತದೆ. ಈಗ ಇವರು ಅಹಮ್ಮದನಗರ ಜಿಲ್ಹೆಯಲ್ಲಿ ಡಿ. ಡಿ. ಕಲೆಕ್ಟರರಾಗಿದ್ದಾರೆ.

ಸತ್ಯಾಗ್ರಹದ ೩೨ ಜನ ಆರೋಪಿಗಳ ಪತಿಯಿಂದ ನಗರದ ಪ್ರಸಿದ್ಧ ವಕೀಲರಾದ ಶ್ರೀ. ಸಪ್ತರ್ಷಿ ಎಮ್. ಎ ಎಲ್ ಎಲ್ ಬಿ ಯವರು ವಕೀಲಿ ಪತ್ರ ತೆಕೊಂಡು, ಕಚೇರಿಯಲ್ಲಿ ರಾವಸಾಹೇಬರು ಕೂತ ಕೋಣೆಯಲ್ಲಿ ಹೋಗಿ ಕೂತರು. ಕೆಲ ಹೊತ್ತಿನ ನಂತರ ಎದ್ದುನಿಂತು ಆರೋಪಿಗಳಿಂದ ವಕೀಲ ಪತ್ರದ ಮೇಲೆ ಸಹೀ ತೆಕೊಳ್ಳುವದಕ್ಕೆ ತಮಗೆ ಅಪ್ಪಣೆಯಾಗಬೇಕೆಂದು ಇವರಿಗೆ ವಿನಂತಿ ಮಾಡಿಕೊಂಡರು. ಹೀಗೆ ಸಪ್ತರ್ಷಿಯವರು ಅಂದ ಕೂಡಲೆ, ರಾವಸಾಹೇಬರು ಅಂಗಾಲಿನಿಂದ ನಡುನೆತ್ತಿಯ ತನಕ ಉರಿದು "ನನ್ನ ಅಪ್ಪಣೆ ಪಡಕೊಳ್ಳದೆ, ನನ್ನ ಕೋಣೆಯಲ್ಲಿ ಬಂದು ಕೂತು, ನನ್ನ ಅಪಮಾನ ಮಾಡಿದಿರಿ. ಈ ಕ್ಷಣವೇ ನನ್ನ ಕೋಣೆಯನ್ನು ಬಿಟ್ಟು ಹೊರಗೆ ಹೋಗಿರಿ." ಎಂದರು. ನಿಮ್ಮ ಅಪಮಾನ ಮಾಡುವ ಇಚ್ಛೆ ಇಲ್ಲ. ಇದು ಕೋರ್ಟಿನ ಕೋಣೆಯಾದ್ದರಿಂದ ಬಂದು ಕೂತನೆಂದು ವಕೀಲರು ಇವರಿಗೆ ಉತ್ತರ ಕೊಟ್ಟರು. ಕೂಡಲೆ ಮ್ಯಾಜಿಸ್ಟ್ರೇಟರು "ನನಗೆ ನಿಮ್ಮಿಂದ ಉಪದೇಶ ಕಲಿಯಬೇಕಾಗಿಲ್ಲೆಂದವರೇ ಭಯಂಕರವಾಗಿ ಸಂತಾಪಗೊಂಡು ಕೈಮುಷ್ಠಿಯಿಂದ ಮೇಜಿನ ಮೇಲೆ ಬಲವಾಗಿ ಗುದ್ದಿ ನೀವು ತೂರಕ್ಕೆ ಪಚ್ಚ, ಕಾಯಿದೆಯನ್ನು ತೋರಿಸುವದಾದರೆ- ನನ್ನಿಂದ ಕಿಂಚಿತವಾದರೂ ಸೌಜನ್ಯದ ಅಪೇಕ್ಷೆ ಮಾಡಬೇಡಿರೆಂದರು. ಈ ವಾಗ್ವಾದದಲ್ಲಿ ಅನೇಕವಾಗಿ ಬಿರಿಸಿನ ಪ್ರಶ್ನೋತ್ತರ ನಡೆದವು. ರಾವಸಾಹೇಬರ ವರ್ತನದ ವಿರುದ್ಧ ವಕೀಲರು ಅಲ್ಲಿಯ ವಕೀಲ ಸಂಘದ ಕಡೆಗೆ ತಕರಾರು ಮಾಡಿ ರಾವಸಾಹೇಬರಿಗೆ ಕ್ಷಮೆ ಬೇಡಿಕೊಳ್ಳಲಿಕ್ಕೆ ಹಚ್ಚಬೇಕು. ಅದಕ್ಕೆ ತಪ್ಪಿದರೆ- ಹಾಯಕೋರ್ಟಿಗೆ ಅರ್ಜಿಯನ್ನು ಮಾಡಬೇಕು. ಅಲ್ಲಿಯೂ ತಮಗೆ ಅನುಕೂಲವಾಗಿ ನಿರ್ಣಯ ಸಿಗದಿದ್ದರೆ- ಅವರ ಮೇಲೆ ಕಾಯಿದೆ ಪ್ರಕಾರ ಇಲಾಜ ನಡೆಸಬೇಕೆಂದಿದ್ದಾರೆ.

* * *

ಶ್ರೀ. ಸೌ|| ರಮಾಬಾಯಿ ಮತ್ತು
ಕುಮಾರಿ ದಿಲಶೆದ ಸಯ್ಯದಗಳಿಗೆ ಶಿಕ್ಷೆ.

——(o)——

ಮುಂಬಯಿಯಲ್ಲಿ ಯುದ್ಧ ಮಂಡಲದ ಅಧ್ಯಕ್ಷರಾದ ಶ್ರೀ. ಸೌ|| ರಮಾಬಾಯಿಯವರಿಗೆ ಮತ್ತು ಕಾಂಗ್ರೆಸ ಬುಲಿಟನ್ನದ ಸಂಪಾದಿಕೆಯರಾದ ಕುಮಾರಿ ದಿಲಶೆದ ಸಯ್ಯದ ಇವರಿಗೆ ಮೂರು ಮೂರು ತಿಂಗಳ ಸಾದಾ ಶಿಕ್ಷೆಯಾಯಿತು. ಶ್ರೀಮತಿ ರಮಾಬಾಯಿಯವರು ತುರಂಗಕ್ಕೆ ಹೋಗುವಾಗ-

> ಮುಂಬಯಿಯಲ್ಲಿ ಮನೆಗೊಬ್ಬರಂತೆ ಸ್ವಯಂಸೇವಕ, ಸ್ವಯಂಸೇವಿಕೆಯರನ್ನು ಕಾಂಗ್ರೆಸ ಕಾರ್ಯಕ್ಕಾಗಿ ಕೊಡಬೇಕು. ವಿದೇಶದ ಬಹಿಷ್ಕಾರವನ್ನು ಬಲ ಪಡಿಸಬೇಕು. ತರುಣ ಸಂಘದವರು ಸರ್ವಸ್ವ ಕಾಂಗ್ರೆಸಕ್ಕೆ ಅರ್ಪಣ ಮಾಡಿಕೊಳ್ಳಬೇಕೆಂಬ ಸಂದೇಶ ಹೇಳಿದ್ದಾರೆ.

ಚಳವಳಿಯಲ್ಲಿ ಹೆಣ್ಣುಮಕ್ಕಳೇ ಮುಂದಾದರು.

ಹಿಂದುಸ್ಥಾನದ ತುಂಬ ನಡೆದ ಯಾವದೇ ಪ್ರಾಂತದ ಚಳವಳಿ ನೋಡಿರಿ ಹೆಣ್ಣುಮಕ್ಕಳೇ ಮುಂದಾಗಿರುವರು. ಗಂಡನಿಗೆ ಶಿಕ್ಷೆಯಾದ ಕೂಡಲೆ, ಹೆಂಡತಿಯು ಆತನ ಸ್ಥಳ ಆಕ್ರಮಿಸುವಳು. ಅರ್ಧಾಂಗಿ ಎಂಬದು ಸಾರ್ಥಕವು. ಪಂಡಿತ ಮಾಲವಿಯಾಯವರಿಗೆ ಶಿಕ್ಷೆಯಾದ ಕೂಡಲೆ, ಅವರ ಪತ್ನಿಯವರಾದ ಶ್ರೀ. ಸೌ|| ವಿಜಯಲಕ್ಷ್ಮಿಯವರು ಮುಂದೆ ಬಂದು, ಗಡವಾಲ ದಿನದ ದೆಸೆಯಿಂದ ಕೂಡಿದ ಸಭೆಯ ಅಧ್ಯಕ್ಷರಾದರು. ಪಂಡಿತ ಮೋತಿಲಾಲರ ಹೆಂಡತಿ, ಮಗಳು, ಸೊಸೆ ಮೊದಲಾದವರೆಲ್ಲರೂ ಚಳವಳಿಯಲ್ಲಿ ಧುಮುಕಿದ್ದಾರೆಂಬದಂತೂ ಸರ್ವಶ್ರುತವಾಗಿದೆ.

ಕೇದಾರ ಯಾತ್ರಸ್ಥರಿಗೆ ಸೂಚನೆ.

ಕೇದಾರಕ್ಕೆ ಹೋಗುವ ಜನರಿಗೆ ಮುಂಗಡವಾಗಿ ಒಂದು ಸೂಚನೆಯನ್ನು ಒಬ್ಬ ಪ್ರವಾಸಿಕರು ಮುಂದೆ ಕೊಟ್ಟಂತೆ ಮಾಡಿದ್ದಾರೆ.

ಕೇದಾರಕ್ಕೆ ಹೋಗುವಂಥವರು ಮೈಯ್ಯಲ್ಲಿ ಉಣ್ಣೆಯ ಬಟ್ಟೆಗಳನ್ನು ಧರಿಸಬೇಕು. ಏಕೆಂದರೆ- ಇಲ್ಲಿ ಚಳಿಯು ಬಹಳ. ಯಾವಾಗಲು ಕಾಲಚೀಲ ಹಾಕಿರಬೇಕು. ನೊಣಗಳು ಬಹಳ. ಅವು ವಿಷಪ್ರಜವಾಗಿರುತ್ತವೆ. ತಮಗೆ ದಿನಂಪ್ರತಿ ಬೇಕಾಗುವ ಔಷಧಗಳನ್ನು ಸಂಗಡ ಇಡಬೇಕು. ಆಸ್ಪತ್ರಿಯೊಳಗಿನ ಔಷಧಗಳು ನಿರುಪಯೋಗಿ ಇರುತ್ತವೆ. ಕಳ್ಳರ ಹೆದರಿಕೆಯೇ ಇಲ್ಲ. ಯಾವಾಗಲು ಪ್ರಕೃತಿಯನ್ನು ಜಪ್ಪಿಸಬೇಕು. ಅಲಕ್ಷ ಮಾಡಬಾರದು. ಸುಶಿಕ್ಷಿತರು ಸ್ವಚ್ಛವಾಗಿ ಯಾತ್ರೆಗೆ ಬರುವರು. ಸ್ನಾನ, ಬಹಿರ್ದಿಶ ಮುಂತಾದ ಕೃತ್ಯ ಮಾಡುವಾಗ ಸ್ತ್ರೀಯರು ಬತ್ತಲೇ ಆಗುವರು. ಜಗ ಮನಲಜ್ಜೆ ಬಿಡಬೇಕಾಗುತ್ತದೆ. ತಿಂಬುಂಬುವ ಪದಾರ್ಥಗಳು ಬಹಳೇ ಕಡಿಮೆಯು ಪ್ರತಿಯವಿರುವದರಿಂದ, ಉಪವಾಸವಾಗುವದುಂಟು. ಆದರೂ ಈ ಯಾತ್ರೆಗೆ ಪ್ರತಿಯೊಬ್ಬರು ಹೋಗಲೇ ಬೇಕು.

ಮಂಗ ಮಂಗಗಳಿಗೆ ಯುದ್ಧ.

ಉತ್ತರ ಆಫ್ರಿಕೆಯಲ್ಲಿ ಅಲಜೀರ್ಸನೆಂಬದೊಂದು ದೇಶವುಂಟು. ಅಲ್ಲಿ ಮಂಗ ಮಂಗಗಳಿಗೆ ಕಡು ಕಾಳಗವಾಯಿತು. ಎರಡೂ ಪಕ್ಷಗಳ ಮಂಗಗಳಿಗೆ ತುಮುಲ ಕಾಳಗ ನಡೆದು, ಇವು ಒಂದರಮೇಲೊಂದು ದೊಡ್ಡ ದೊಡ್ಡ ಕಲ್ಲುಗಳನ್ನೆಸೆಯಲಾರಂಭಿಸಿದವು. ಈ ಮೇರೆಗೆ ಭಯಂಕರವಾಗಿ ಹೊಡದಾಟ ನಡೆದಾಗ, ಮೋಟಾರು ನಡುವೆ ಹಾದು ಹೋಯಿತು. ಆಗೊಂದು ಮಂಗವು ಬಿಸ್ರನೆ ಬಿಟ್ಟ ಕಲ್ಲು ಮೋಟಾರಿನಲ್ಲಿ ಕೂತವನಿಗೆ ಬಡೆದು ಆತನು ಸತ್ತೇ ಹೋದನೆಂದು, ಅಲ್ಲಿಂದ ಬಂದ ತಾರಿನ ವರ್ತಮಾನವಾಗಿದೆ.

ಯಹೂದಿಗಳನ್ನು ನಿಃಪಾತ ಮಾಡುವ ಭಯ.

ಜರ್ಮನಿಯಲ್ಲಿ ವಾಸವಾಗಿರುವ ಯಹೂದಿಗಳು ಜರ್ಮನ ರಾಜ್ಯದಲ್ಲಿ ತಮಗೆ ವಿಶೇಷವಾಗಿ ರಾಜಕೀಯ ಹಕ್ಕು, ಸ್ವಾತಂತ್ರ್ಯಗಳು ಬೇಕೆಂದು ಮಾಡಿದ ಪ್ರಯತ್ನಕ್ಕೆ ಫಲ ದೊರೆಯದ್ದರಿಂದ, ಜರ್ಮನ ರಾಜ್ಯದಲ್ಲಿರುವ ದೊಡ್ಡ ದೊಡ್ಡ ಶಾಮದಾನರನ್ನು ಕೊಂದು, ದೇಶದ ತುಂಬ ಹಾಹಾಕಾರ ಮಾಡಿ, ಹಕ್ಕು ಪಡೆಯಬೇಕೆಂಬ ಭಾಷಣ ಮಾಡಲಾರಂಭಿಸಿದ್ದಾರೆ. ಇವರು ಈ ತೆರವಾಗಿ ಕ್ರೂರ ಕರ್ಮಕ್ಕೆ ಪ್ರಾರಂಭಿಸಿದರೆ- ಯಹೂದಿ ಜನಾಂಗಕ್ಕೇ ಕಂಟಸ್ಥಾನ ಹಾಕಿ, ಅವರನ್ನು ಹುರಿದುಬಿಡುವೆವೆಂದು ಜರ್ಮನ ಸರಕಾರದವರು ಜಾಹೀರ ಮಾಡಿದ್ದಾರೆ.

ಅರಗಿನ ಮನೆಯಿಂದ ಪಾರಾದ ಪೋಲಿಸರು

ಮಿದನಾಪೂರದಲ್ಲಿ ಪೋಲಿಸಸಾಹೇಬರೇ ಮೊದಲಾಗಿ ಅನೇಕ ಪೋಲಿಸರು ಬಾಂಬಿನ ಶೋಧಕ್ಕಾಗಿ ಒಂದು ಮನೆಯ ಝಡತಿಗೆ ಹೋಗಿ, ಮೇಲುಪ್ಪರಿಗೆಯಲ್ಲಿ ತಪಾಸಣೆ ನಡಿಸಿದಾಗ ಕೆಳಗೆ ಜ್ವಾಲಾಗ್ರಹಿ ಪದಾರ್ಥಗಳಿಗೆ ಬೆಂಕಿ ಹಚ್ಚಿ, ಮನೆಯ ತುಂಬ ಉರಿ ಎಬ್ಬಿಸಿದರು. ಪೋಲಿಸರು ಹೇಗೋ ಮಾಡಿ, ಗಂಡಾಂತರ ನೀಗಿದರು ಮನೆಯು ಪೂರಾ ಸುಟ್ಟುಹೋಯಿತು.

ನಾವಲಿಗನು ಮೆಂಬರನಾದನು

——(೦)——

ಅಮೃತಸರದಲ್ಲಿ ನಡೆದ ಕೌನ್ಸಿಲ ಚುನಾವಣೆಯಲ್ಲಿ ಕಾಂಗ್ರೆಸದವರು ರಾಮಜಿದಾಸನೆಂಬ ನಾವಲಿಗನನ್ನು ಉಮೇದವಾರನನ್ನಾಗಿ ನಿಲ್ಲಿಸಿದರು. ಈತನಿಗೆ ಎದುರುಗಾರರಾಗಿ ಮೆಂಬರರಾಗಿರುವ ಮಿ. ಕಿಶೋರಾಮರೆಂಬವರೇ ನಿಂತಿದ್ದರು. ನಾವಲಿಗನಿಗೆ ೩೧೫೫ ಮತ್ತು ಕಿಶೋರಾಮನಿಗೆ ೪೭೭ ಮತಗಳು ಬಿದ್ದು ನಾವಲಿಗನು ಎದುರುಗಾರನ ಮೇಲೆ ಪ್ಯಾದಿ ಮಾತು ಮಾಡಿದನು.

ಅಧ್ಯಕ್ಷ ಶ್ರೀ. ವಿಠ್ಠಲಭಾಯಿ ಪಟೇಲರು ಅಂಬಾಲಾದ ತುರಂಗದಲ್ಲಿದ್ದು, ಮೂಲ ವ್ಯಾಧಿಯಿಂದ ಅವರ ಪ್ರಕೃತಿಯು ಬಹಳೇ ಹೈರಾಣಾಗಿರುತ್ತದೆ. ಅವರು ದಿನಾಲು ಒಪ್ಪೊತ್ತೇ ಊಟ ಮಾಡುವರು. ಇವರಿಗೆ ಓದಲಿಕ್ಕೆ ವರ್ತಮಾನಪತ್ರ ಕೊಟ್ಟಿಲ್ಲ. ಯಾರಿಗೂ ಭೆಟ್ಟಿಯಾಗಗೊಟ್ಟಿಲ್ಲ.

ವರ್ತಮಾನಸಾರ

ರಾ. ಬ. ಕಂಬಳಿಯವರು ಗವ್ಹರ್ನರಸಾಹೇಬರನ್ನು ಕಾಣಲಿಕ್ಕೂ, ವಿಲಾಯತಿಯ ಪ್ರವಾಸದ ಬಗ್ಗೆ ಬೇಕಾದ ಮಾಹಿತಿ ದೊರೆಕಿಸಲೂ ಪುಣೆಗೆ ಹೋಗಿದ್ದಾರೆ. ಗವ್ಹರ್ನರಸಾಹೇಬರನ್ನು ಕಾಣುವದರಲ್ಲಿ ದಿವಾನಗಿರಿಯ ತತ್ವವುಸಿ ಇರಬೇಕೆಂದು ಕೆಲವರ ತರ್ಕವುಂಟು. ಇವರು ಅಕ್ಟೋಬರ ೧೧ನೆಯ ತಾರೀಖಿನ ಹಡಗದಿಂದ ವಿಲಾಯತಿಗೆ ಹೋಗುವರೆಂದು ತಿಳಿಯುತ್ತದೆ.

ರಾಜಿಯ ಸಂಧಾನದಲ್ಲಿ ತೊಡಗಿದ್ದ ಅಲೆಕ್ಝಾಂಡರಸಾಹೇಬರು ನೈನೀತಾಳಕ್ಕೆ ಹೋಗಿ, ಪಂಡಿತ ಜವ್ಹರಲಾಲರನ್ನು ಕಾಣಬೇಕೆಂದರು. ಆದರೆ ತುರಂಗದ ಅಧಿಕಾರಿಗಳು ಇವರನ್ನು ಕಾಣಗೊಡಲಿಲ್ಲ. ಹೀಗೆ ಇಲ್ಲಿ ಆಶಾಭಂಗವಾಗಿ, ಪಂಡಿತ ಮೋತಿಲಾಲರನ್ನು ಕಾಣಲು ಮಸೂರಿಗೆ ಹೋಗಿದ್ದಾರೆ.

ಮುಂಬಯಿಯ ಬೇರೆ ಬೇರೆ ವರ್ತಕರ ಸಂಘಗಳ ೨೦ ಪ್ರತಿನಿಧಿಗಳ ಸ್ಪೇಶಲ ಕಮೀಟಿ ಕೂಡಿ, ರಾಉಂಡ ಟೇಬಲಕ್ಕೆ ಹೋಗುವಂಥವರು ತಮ್ಮ ಅಥವಾ ಹಿಂದುಸ್ಥಾನದ ಪ್ರತಿನಿಧಿಗಳಲ್ಲೆಂದು ಠರಾವು ಮಾಡಿ, ಅವರ ಹೋಗುವಿಕೆಯನ್ನು ನಿಷೇಧಿಸಿದರು.

ಮದ್ರಾಸದ ಆಂಧ್ರಪತ್ರಿಕೆಯ ಸಂಪಾದಕರಾದ ಶ್ರೀ. ನಾಗೇಶರಾಯರು ಬಂಧಮುಕ್ತರಾದರು. ಇವರಿಗೆ ತುರಂಗದಲ್ಲಿ ಅಕ್ಕಿಯೊಳಗಿನ ಹರಳು ಆರಿಸುವ ಕೆಲಸ ಕೊಟ್ಟಿದ್ದರು.

ಮಿರತದಲ್ಲಿ ರಾಜದ್ರೋಹದ ಭಾಷಣಮಾಡಿದರೆಂದು ಪೋಲಿಸರು ಪಂಡಿತ ಕೃಷ್ಣಕಾಂತ ಮಾಲವಿಯಾಯವರನ್ನು ಹಿಡಿದು, ಮಿರತಕ್ಕೆ ಕರಕೊಂಡು ಹೋದರು. ಇವರನ್ನು ಹಿಡಿದುದಕ್ಕಾಗಿ ಅಲಹಾಬಾದಿನಲ್ಲಿ ಹರತಾಳವಾಯಿತು.

ನವಾಕಾಳ ಪತ್ರವು ೩೫೦೦ ರೂಪಾಯಿಗಳ ಜಾಮೀನು ಕೊಟ್ಟಿತ್ತು. ಸರಕಾರವು ಇದನ್ನು ಜಪ್ತ ಮಾಡಿ, ಹತ್ತು ದಿವಸಗಳಲ್ಲಿ ಹೊಸ ಡಿಕ್ಲೇರೇಶನ ಮಾಡಬೇಕೆಂದು ನೋಟೀಸು ಮಾಡಿದೆ.

ರಾ. ಬ. ಕಾಳೆಯವರು ಯುನಿವ್ಹರ್ಸಿಟಿಯ ಪದವಿಯಿಂದ ಆರಿಸಲ್ಪಟ್ಟರು.

ಧಾರವಾಡ—

ಶ್ರೀ. ವೆಂಕಟರಾವ ಆಲೂರ ಇವರು ಮೈಸೂರಲ್ಲಿ ಬರುವ ತಿಂಗಳ ೫ನೆಯ ತಾರೀಖಿನ ದಿವಸ ಕೂಡುವ ಕರ್ನಾಟಕ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗುವರು

ಧಾರವಾಡಕ್ಕೆ ಬಂದಿರುವ ವಾಣೀವಿಲಾಸ ನಾಟಕ ಮಂಡಳಿಯವರ ಮಾನಾಪಮಾನ

—(೧)—

ಈ ಊರಿಗೆ ಈ ನಾಟಕ ಕಂಪನಿಯವರು ಬಂದು ಒಂದೆರಡು ವಾರಗಳಾದುವು. ಅವರ ಮಾನಾಪಮಾನದ ಮೇಲ್ಮೆಯನ್ನು ಮಂದಿಯ ಬಾಯಿಯಿಂದ ಹಾರಸುದ್ದಿಯಿಂದ ತಿಳಿದು, ನೋಡಲೆಂದು ನನಗೆ ಮನಸಾಯಿತು. ಹೋದೆನು; ನಾಟಕ ಮುಗಿದ ಮೇಲೆ ನನ್ನ ಮನದಲ್ಲಿ ಮೂಡಿದ ವಿಷಯವನ್ನು ಪತ್ರದಲ್ಲಿ ಕೊಡುವುದು ಕರ್ನಾಟಕದ ರಂಗಭೂಮಿಯ ದೃಷ್ಟಿಯಿಂದ ಅವಶ್ಯವೆನಿಸಿದ ಕೆಲವು ಸೂಚ್ಯ ಶಬ್ದಗಳನ್ನು ಬರೆದಿದ್ದೇನೆ. ಅವುಗಳ ಕಡೆಗೆ ಕಂಪನಿಯವರು ಗಮನ ಕೊಡಲೆಂಬುದೇ ನನ್ನ ಹಾರೈಕೆ:-

ಪಡದೆಗಳ ಬೆಳಕು, ಸೀನರಿಗಳ ಹೊಳಪು, ಬಾಜುಗಾರಿಕೆಯ ಬಗೆಯು ಇವು ನಿಜವಾಗಿಯೂ ಅನ್ಯ ಕಂಪನಿಗಳ ಮೇಲಾಟವನ್ನು ಸಡ್ಡುಹೊಡೆದು ಎದುರಿಸುವಂತಿದ್ದುವು. ಧೈರ್ಯಧರನ ಪಾತ್ರವಂತೂ ಗಂಧರ್ವ ನಾಟಕದ ಧೈರ್ಯಧರನಕಿಂತ ಒಂದು ತೂಕ ಹೆಚ್ಚಿನದೇ ಆಗಿದ್ದಿತು. ಭಾಮಿನಿಯ ಸ್ವಾಭಾವಿಕವಾದ ಹಾವಭಾವಗಳು ರಮ್ಯವಾಗಿದ್ದುವು. ಕಂಪನಿ ನಾಟಕವನ್ನು ಕನ್ನಡಿಗರೆಲ್ಲರೂ ಎಲ್ಲ ದೃಷ್ಟಿಯಿಂದಲೂ ಎತ್ತಿ ಹಿಡಿಯಬೇಕೆಂದು ಹೇಳಲು ಬೇಡ.

ಕನ್ನಡ ನಾಟಕವೆಂಬ ಖ್ಯಾತಿಯುಂಟಾಗಬೇಕಾದರೆ ಅದರಲ್ಲಿಯ ಕೆಲವು ಕುಂದುಗಳ ಕಡೆಗೂ ಕಂಪನಿಯವರು ಲಕ್ಷ್ಯಕೊಡಲೇಬೇಕು. ಮಾನಾಪಮಾನದ ಹಾಡುಗಳ ಭಾಷಾಂತರವಂತೂ ಮರಾಠಿಯಲ್ಲಿಯ ಮೂಲ ಶಬ್ದಗಳನ್ನಷ್ಟು ಇಟ್ಟು, ಅವಕ್ಕೆ ಕನ್ನಡ ಪ್ರತ್ಯಯವನ್ನು ಹಚ್ಚಿದಂತಿದೆ. ಇದರಿಂದ ಹಾಡುವಾಗ ಮರಾಠಿಯ ಹಾಡುಗಳನ್ನೇ ಹಾಡಿದಂತೆ ಭಾಸವಾಗುತ್ತದೆ. ಇದು ಕನ್ನಡಿಗರಿಗೆ ಕುಂದು ತರುವಂಥದು. ಆದ್ದರಿಂದ ಕಂಪನಿಯವರು ಆ ಹಾಡುಗಳನ್ನು ಕೂಡಲೇ ತಜ್ಞರಿಂದ ಬೇರೆ ಬರೆಯಿಸಿಕೊಳ್ಳಬೇಕು.

ಮತ್ತೊಂದು:- ಬೇರೆ ಭಾಷೆಗಳಲ್ಲಿಂದ ನಾಟಕಗಳನ್ನು ತಮ್ಮ ತಮ್ಮ ಭಾಷೆಗಳಿಗೆ ಎಲ್ಲರೂ ತೆಗೆದುಕೊಳ್ಳುವುದುಂಟು. ಆದರೆ ಅವುಗಳ ರೂಪವನ್ನು ಪಲ್ಲಟಿಸಿ ಆ ಆ ಸಮಾಜಗಳಿಗೂ ಸಂಸ್ಕೃತಿಗೂ ಒಪ್ಪತಕ್ಕ ಬಗೆಯಲ್ಲಿ, ಅವುಗಳನ್ನು ತೆಗೆದುಕೊಳ್ಳುವುದು ರೂಢಿ. ಉದಾ:- ಶಾಹೂನಗರವಾಸಿ ನಾಟಕದವರು ಇಂಗ್ಲಿಷ ಹ್ಯಾಮಲೆಟ ತ್ರಾಟಿಕಾ ಮುಂತಾದವುಗಳನ್ನು ಮಹಾರಾಷ್ಟ್ರ ರಂಗಭೂಮಿಯ ಮೇಲೆ ತಂದರು. ಆದರೆ ವೇಷ, ಭಾಷೆ, ವಾತಾವರಣಗಳನ್ನು ತಮ್ಮ ಜನಾಂಗಕ್ಕೆ ತಕ್ಕಂತೆ ಅವಕ್ಕೆ ರೂಪಕೊಟ್ಟರು. ಅಲ್ಲದೆ ಇಂಗ್ಲಂಡದ ರಂಗಭೂಮಿಯನ್ನು ಇಳಿಸಲಿಲ್ಲ; ಇದಕ್ಕನುಗುಣವಾಗಿ ಮರಾಠಿಯಿಂದ ನಾಟಕವನ್ನೆತ್ತಿದರೇನಾಯಿತು. ವಾಣೀವಿಲಾಸದಲ್ಲಿ ಸೂತ್ರಧಾರನಿಗೆ ಪಾಗೋಟಿಯೇಕೆ? ಅಂಕಪಡದೆಯಲ್ಲಿ ಮಹಾತ್ಮರ ಎದುರು ನವಾಕಾಳವೇಕೆ? ರುಮಾಲುಗಳನ್ನು ಹಾಕಿ ಕರ್ಮವೀರ, ವಿಜಯ, ನವಕರ್ನಾಟಕ ಅಥವಾ ಯಾವದಾದರೊಂದು ಕನ್ನಡ ಪತ್ರವನ್ನಿಟ್ಟಿದ್ದರೆ ನಾಟಕಕ್ಕೇನು ಕುಂದುಬರುತ್ತಿದ್ದಿತು? ಕನ್ನಡ ರಂಗಭೂಮಿಯನ್ನು ಮುಂದೆ ತರುವುದೇ ಆದರೆ- ಅದು ತನ್ನ ವೇಷ, ಭಾಷೆ, ರೀತಿನಡಾವಳಿ, ಸಂಸ್ಕೃತಿಗಳನ್ನೇ ರೂಪಗೊಂಡು ಜನರ ಕಣ್ಣೆದುರಿಗೇಕೆ ಬರಬಾರದು? ಈ ವಿಷಯವನ್ನೇ ಕೇವಲ ಟೀಕಾದೃಷ್ಟಿಯಿಂದ ಸ್ವೀಕರಿಸದೆ ಕನ್ನಡನಾಡಿನ ದೃಷ್ಟಿಯಿಂದ ಸ್ವೀಕರಿಸಿ ಗಮನಿಸುವರಾಗಿ ಕೋರುವ

ಓರ್ವ ಕನ್ನಡಿಗ ಪ್ರೇಕ್ಷಕ

ನೋಟೀಸು

—(೨)—

ತಿಪ್ಪಣ್ಣ ಬಸಪ್ಪ ಮಣ್ಣಾನವರ ಅಥವಾ ಕುಸೂಗಲ್ಲ ಸಾ॥ ನವಲೂರ ಇವನಿಗೆ-

ಕೆಳಗ ಹೆಬ್ಬಟ್ಟಿನ ಗುರುತಾ ಮಾಡುವವಳು ಈ ನೋಟೀಸಿನ ಮೂಲಕ ತಿಳಿಯಪಡಿಸುವದೇನಂದರೆ ನೀನು ನನ್ನ ಲಗ್ನದ ಗಂಡನಿದ್ದು ಲಗ್ನ ಆದ ನಂತರ ನಿಮ್ಮ ನಮ್ಮ ಪ್ರಪಂಚ ಸುಖಕೀತ ನಡಿಯುತಿರಲಿಕ್ಕೆ ನೀನು ನನ್ನ ಕೂಡ ವಿನಾಕಾರಣ ತಂಟೆ ಮಾಡಿ ಮನೆಬಿಟ್ಟು ಹೊರಗೆ ಹಾಕಿರುತ್ತೀ ನಿನ್ನಿಂದ ನನ್ನ ಹೊಟ್ಟೆಯಲ್ಲಿ ಒಂದು ಗಂಡುಮಗ ಇರುತ್ತದೆ ಅದು ಈಗ ಅಜಮಾಸು ೬-೭ ವರ್ಷದ ಹುಡುಗ ಇರುತ್ತದೆ ಅವನನ್ನು ಕರಕೊಂಡು ನಾನು ನನ್ನ ತವರ ಮನೆಯಲ್ಲಿ ಇರುತ್ತೇನೆ ಈ ಮಾತಿಗೆ ಈಗ ೩ ವರ್ಷವಾಯಿತು ಇದರೊಳಗಾಗಿ ನೀನು ನಿನ್ನ ಮನೆಗೆ ಆಗಾಗ್ಗೆ ಕರಕೊಂಡು ಹೋಗುವದು ಮತ್ತು ತಂಟೆಮಾಡಿ ಹೊರಗೆ ಹಾಕುವದು ಈ ಪ್ರಕಾರ ಮಾಡುತ್ತಾ ಬಂದಿ ಇದರ ಬಗ್ಗೆ ನಿನಗೆ ಎಷ್ಟೋ ಸಂಭಾವಿತ ಜನರ ಕಡೆಯಿಂದ ಹೇಳಿಸಿದರೂ ಕೇಳಲಿಲ್ಲ ಈಗ ಕರಕೊಂಡು ಹೋಗುವದಕ್ಕೆ ಇನಕಾರ ಮಾಡುತ್ತೀ ಇದರ ಮೇಲಿಂದ ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಪ್ರಪಂಚ ಮಾಡುವದು ಇಲ್ಲೆಂಬಂತೆ ತೋರುತ್ತದೆ ಈಗ ಹೊರಗೆ ಇದ್ದು ನನಗೆ ನನ್ನ ಸಲುವಾಗಿಯೂ ಹುಡುಗನ ಸಲುವಾಗಿಯೂ ಹೊಟ್ಟೆ ಬಟ್ಟೆಗಾಗಿ ಎರಡು ನೂರು ೨೦೦ ರೂಪಾಯಿ ಸಾಲವಾಗಿರುತ್ತದೆ ಸಾಲಗಾರರ ತಗಾದಿ ಬಹಳ ಆಗಿರುವ ಕಾರಣ ನಿನಗೆ ಕರಕೊಂಡು ಹೋಗಲಿಕ್ಕಾಗಲೀ ಅಥವಾ ಸೋಡಚೀಟಿಕ್ಕಾದರೂ ಕೊಡಲಿಕ್ಕಾಗಲೀ ಕೇಳಿದರೆ ಯಾವದಕ್ಕೂ ನಿನ್ನ ಸಮ್ಮತಿ ಇಲ್ಲ ನನಗೆ ಸಾಲದ ತಗಾದಿ ಬಹಳಾದ ಕಾರಣ ನಾನು ಈ ನೋಟೀಸು ಕೊಡುವ ಭಾಗಬಿತ್ತು ಈ ನೋಟೀಸು ಮುಟ್ಟಿದ ೮ ದಿವಸದೊಳಗಾಗಿ ಬಂದು ಸಾಲಾ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು ಇಲ್ಲವಾದರೆ ಸೋಡಪತ್ರವನ್ನಾದರೂ ಕೊಡಬೇಕು ಜರ ಕೊಡದಿದ್ದರೆ ಮೇಲಿನ ಅವಧಿಯ ತನಕ ದಾರಿನೋಡಿ ನಿನ್ನಿಂದ ಹುಟ್ಟಿದ ಹುಡುಗನನ್ನು ನಿನ್ನ ತಾಬಾಮಾಡಿ ನಾನು ಇದೇ ಸೋಡಚೀಟಿಯೆಂದು ತಿಳಿದು ಯರಡನೆದವನನ್ನು ಉಡಿಕಿಯಾಗಿ ಹೋಗುವೆನು ನೀನು ನಿನ್ನ ಹುಡುಗನನ್ನು ಕರಕೊಂಡು ಹೋಗಬೇಕು ಆನಂತರ ನಿನ್ನದು ನನ್ನ ಮೇಲೆಯಾಗಲೀ ನನ್ನ ಉಡಿಕಿ ಗಂಡನ ಮೇಲಾಗಲೀ ಯಾವ ತರದ ಹಕ್ಕು ಉಳಿಯಲಿಕ್ಕಿಲ್ಲ ಇದೇ ಸೋಡಪತ್ರವೆಂದು ತಿಳಿಯತಕ್ಕದ್ದು ಅಂತಾ ಕೊಟ್ಟ ನೋಟೀಸು ತಾ॥ ೨೪-೯-೧೦ನೇ ಇಸ್ವಿ

ಈ ಮುದಗ್ಯೆ ಹೆಬ್ಬಟ್ಟಿನ ಗುರುತಾ ನೀಲವ್ವ ಕೋಂ ತಿಪ್ಪಣ್ಣಾ ಮಣ್ಣಾನವರ ಸಾ॥ ನವಲೂರ ಈಕೆಯದು ಇರುತ್ತದೆ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆಯಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹೆದ್ದಿ ವ ಕಿಸಂ ನಾಟುಗಳು

ಸಾಗವಾನಿ ಯಳಿ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಷೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಶೆಟ್ಟಿ
ಟಿಂಬರ ಮರ್ಚಂಟ್ಸ
ಮಾರ್ಕೆಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ.

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶುಕ್ರವಾರ ತಾರೀಖು ೨೬ನೇ ಸಪ್ಟಂಬರ ೧೯೩೦ (ಸಂಚಿಕೆ ೨೮೩

ನಾಡಹಬ್ಬದ ೭ನೇ ದಿನ (೨೯-೯-೩೦ ಸೋಮವಾರ)

ರಾಟಿಯಿಂದ

ನೂಲುವ ಮೇಲಾಟ

ಈಗಿನ ರಾಷ್ಟ್ರೀಯತ್ವದ ಜೀವಾಳವಾದ ಖಾದೀ ಪ್ರಸಾರಕ್ಕೆ ಪೋಷಕವಾಗುವಂತೆ ನೂಲುವವರಿಗೆ ಪ್ರೋತ್ಸಾಹನವುಂಟಾಗಿ ಅಭ್ಯಾಸವೃದ್ಧಿಯಾಗಬೇಕೆಂದು ನಾಡಹಬ್ಬದಲ್ಲಿ ರಾಟಿಯಿಂದ ನೂಲುವ ಮೇಲಾಟವನ್ನೇರ್ಪಡಿಸಿದೆ. ಇದರಲ್ಲಿ ತರಗತಿಗಳಿಲ್ಲ; ಆಬಾಲ-ವೃದ್ಧರೆಲ್ಲರೂ ಸೇರಬಹುದು. ನೂಲನ್ನು ಹುರಿಕಟ್ಟು-ಹಸನು-ಉದ್ದ ಈ ನಾಲ್ಕು ಬಗೆಯಿಂದ ಪರೀಕ್ಷಿಸಲಾಗುವುದು. ಪರೀಕ್ಷಕರ ನಿರ್ಣಯವೇ ಕೊನೆಯದು. ಮೊದಲನೆಯದು ಹೊಚ್ಚ ರಾಟಿ, ಎರಡನೆಯದು ಬೆಳ್ಳಿಯ ಪದಕ, ಮೂರನೆಯದು ಬೆಳ್ಳಿಯ ಬಿಲ್ಲೆ (ಲಾಕೆಟ್)

ಸ್ಥಳ:- ವ್ಹಿಕ್ಟೋರಿಯಾ ಹಾಯಸ್ಕೂಲ
ವೇಳೆ:- ಸಂಜೆ ೫॥ ಯಿಂದ ೬। (೪೫ ನಿಮಿಷ ಮಾತ್ರ)
ಪರೀಕ್ಷಕರು.- ಶ್ರೀ. ಸಾಲೀ ರಾಮಚಂದ್ರರಾಯರು
ಶ್ರೀ. ಗೋಸಾವಿ ಕೃಷ್ಣರಾಯರು.

ಸೂಚನೆ:- ಮೇಲಾಟದಲ್ಲಿ ಭಾಗ ತೆಗೆದುಕೊಳ್ಳಲಿಚ್ಛಿಸುವವರು ಖಾದೀ ಅಂಗಡಿಯಲ್ಲಿ ಎರಡಾಣೆಯನ್ನು ಕೊಟ್ಟು ಹೆಸರು ಹಚ್ಚಿಸಬೇಕು. ಹುರಿಯಾಳುಗಳು ತಮ್ಮ ರಾಟಿಯನ್ನು ತಾವೇ ತರಬೇಕು. ಮೇಲಾಟದವರು ಶಕ್ಯವಿದ್ದಮಟ್ಟಿಗೆ ಉತ್ತಮ ಹಂಜಿಯನ್ನು ಪೂರೈಸುವರು; ಆದರೆ ತಾವೇ ಹಂಜಿಯನ್ನು ತರುವದು ನೆಟ್ಟಗೆ. ಗಿರಣಿ ಹಂಜಿ ತರಬಾರದು. ಅಪರಿಹಾರ್ಯ ಕಾರಣಗಳಿಂದ ಸ್ಥಳ ಬದಲಾದರೆ ಆಗ ತಿಳಿಸಲಾಗುವುದು. ಕದರುಂಡಿಗೆಯಿಂದ ನೂಲುವದರಲ್ಲಿಯೂ ಭಾಗ ತೆಗೆದುಕೊಳ್ಳಬಹುದು. ಅದಕ್ಕಾಗಿ ಪ್ರತ್ಯೇಕವಾಗಿ ಹೆಸರು ಹಚ್ಚಿಸಬೇಕು.

ನೆನಪು. ಹನ್ನೆರಡು ಜನ ಹುರಿಯಾಳುಗಳಿಗಿಂತ ಕಡಿಮೆಯಾದರೆ ಮೇಲಾಟವು ನಡೆಯಲಾರದು.

ಧಾರವಾಡ
೨೦—೯—೩೦ }

ಕಾರ್ಯದರ್ಶಿಗಳು:
ಮಹಾನವಮಿ ಉತ್ಸವಮಂಡಲ.

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜನಿ ನಾಯುಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಆಧಾಣೆ ಕೋಳ ತಕ್ಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.

ಜಿ. ವ್ಹಿ. ನವರತ್ನ.
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ, ಮಾರ್ಕೆಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜೆಂಡಿಗೆಯು ಎಂಟು ಲಕ್ಷದ ಮೇಲುಂಟು. ಹಳೆ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರಗಳು ಮಾಡಲ್ಪಡುವವು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ಕೇಳಿಕೊಳ್ಳಬೇಕು.

ಮಂಜ್ಞರಾವ ಬಿ. ಕರಾಡಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೫ ಭಾದ್ರಪದ ಶುದ್ಧ ೩

ರಾವುಂಡ ಟೇಬಲದ ಬಗ್ಗೆ ಲೋಕಮತವು.

ಬ್ರಿಟಿಶ ಸರಕಾರದವರು ಕಾಂಗ್ರೆಸದವರನ್ನು ಹೊರ್ತುಪಡಿಸಿ, ರಾವುಂಡ ಟೇಬಲವನ್ನು ಕೂಡಿಸುವ ವಿಷಯವಾಗಿ ಮಾಡಿದ ಪ್ರಯತ್ನಕ್ಕೆ ಲೋಕಮತದ ಅನುಕೂಲ ಅಭಿಪ್ರಾಯವಿರುವದಿಲ್ಲ. ಕಾಂಗ್ರೆಸದವರು ಹೇಳಿ ಕೇಳಿ ವಾಯಿದಾದಿಗಳಾಗಿರುವದರಿಂದ ಅವರು ಇದಕ್ಕೆ ಬಹಿಷ್ಕಾರ ಹಾಕಿದ್ದು ಆಶ್ಚರ್ಯವಲ್ಲ. ಇವರ ಬಹಿಷ್ಕಾರವು ಪಕ್ಷಪಾತವೆನಿಸಿದರೂ, ಬೇರೆಯವರು ಇದನ್ನು ಯಾವ ದೃಷ್ಟಿಯಿಂದ ನೋಡಿದ್ದಾರೆಂಬದನ್ನು ತಿಳಿದರೂ ಸಾಕು. ಇದಕ್ಕೆ ತಾವು ಬರುವದಿಲ್ಲೆಂದು ಹೇಳಿದವರು ಎಲ್ಲಕ್ಕೂ ಮೊದಲು ಮುಂಬಯಿಯ ಸರ ಪುರುಷೋತ್ತಮದಾಸರು, ಇವರ ತರುವಾಯ, ದಿವಾನ ಚಮನಲಾಲರು, ಮತ್ತು ಈಗ ಮಹಮುದಾಬಾದಿನ ಅರಸರು ಪ್ರಕೃತಿಯ ನೆವನದಿಂದ ಆಮಂತ್ರಣವನ್ನು ಅಂಗೀಕರಿಸಲಿಲ್ಲ. ಇವರಂತೆ ನಾವು ಬರುವದಿಲ್ಲೆಂದು ಮುಂಚಾಗಿ ಹೇಳಿದವರಲ್ಲಿ ಶ್ರೀ. ಕೇಳಕರ ಮೊದಲಾದ ಅನೇಕ ಸದ್ಗೃಹಸ್ಥರಿದ್ದಾರೆ. ಇವರು ಇಂಥ ಗೌರವದ ಕೆಲಸದಲ್ಲಿ ತಾವು ಬೀಳಬಿಚ್ಛಿಸುವದಿಲ್ಲೆಂದು ಹೇಳುವದಕ್ಕೆ ಬಲವಾದ ಕಾರಣಗಳೇ ಇರಬೇಕಲ್ಲವೇ?

ಆಮಂತ್ರಣವನ್ನು ಒಳ್ಳೇ ಉಮೇದಿಯಿಂದ ಸ್ವೀಕರಿಸಿದವರು ಸಂಸ್ಥಾನಿಕರು. ಅವರ ತರುವಾಯ ಮವಾಳರು. ಸಂಸ್ಥಾನಿಕರು ಊರು ಬಿಟ್ಟು ದೂರ ಹಣವೆಷ್ಟನೆಂಶಿದ್ದಾರೆ. ಹಾಗೆ ಮವಾಳರ ಪರಿಸ್ಥಿತಿಯಿರುವದಿಲ್ಲ. ಇವರು ಹಿಂದಕ್ಕೆ ಕೌನ್ಸಿಲಗಳನ್ನು ಯಶಸ್ವಿ ಮಾಡುತ್ತೇವೆಂದು ಹೇಳಿ, ಮೂರೇ ವರ್ಷಗಳಲ್ಲಿ ಹತಾಶರಾದರು. ಈಗ ವಸಾಹತಿನ ಸ್ವರಾಜ್ಯ ತರುತ್ತೇವೆಂದು ಹೇವ ತೊಟ್ಟಿದ್ದಾರೆ. ಲಾರ್ಡ ಆಯರ್ವಿನಸಾಹೇಬರು ವಸಾಹತಿನ ಸ್ವರಾಜ್ಯವೆನ್ನದೆ, ಮೂರುದ್ದ ಶಬ್ದಗಳನ್ನು ಅಸ್ಪಷ್ಟವಾದ ರೀತಿಯಿಂದ ಹೇಳಿದ್ದರಿಂದಲೇ ಜಗಳ ಬಗೀ ಹರಿಯದೆ ಹೋಯಿತು. ಬಾವಿಯಲ್ಲಿಯೇ ನೀರಿಲ್ಲದಾಗ, ತಂಬಿಗೆಯಲ್ಲಿ ಹೇಗೆ ಬರುವದು? ಆದರೂ ಇವರು ಅತ್ಯಂತವಾಗಿ ಆಶಾಭರಿತರಾಗಿದ್ದಾರೆ, ಮನಸಿನಲ್ಲಿ ಮುಂದಿಗೆ ಮಾಡುವದಕ್ಕಿಂತ ಕಾಂಗ್ರೆಸದವರು ಬಂದರೇ ನಾವು ಬರುವೆವೆಂದು ಆಗ್ರಹ ಹಿಡಿದಿದ್ದರೆ- ದುಂಡು ಮೇಜಿನ ಮಬ್ಬು ಕೆತ್ತಿ ಹೋಗುತ್ತಿತ್ತು. ಇವರು ೪೦ ಜನರಿದ್ದು, ಇವರಾರೂ ಹೋಗದಂಥ ಸತ್ಯಾಗ್ರಹ ಮಾಡಿದ್ದರೆ- ಸ್ವರಾಜ್ಯವು ಮನೆಯಲ್ಲಿ ಕೂತಲ್ಲೇ ಬರುತ್ತಿತ್ತು. ಕುಸ್ತಿಯ ಪೇಚು ಹೇಗೆ ಹಾಕಬೇಕೆಂಬ ಬುದ್ಧಿಯು ಇವರಿಗಿರುವದಿಲ್ಲವಲ್ಲ!

ಮವಾಳಾಗ್ರಣಿಯೂ ತುರಂಗವಾಸಿಯಾಗಲು ಸಿದ್ಧನಾದನು.

ಪುಣೆಯ ನಾಮದಾರ ಗೋಖಲೆಯವರ ಸರ್ವಂಟ ಆಫ ಇಂಡಿಯಾ ಸೊಸಾಯಿಟಿಯ ಒಬ್ಬ ಆಜೀವ ಸಭಾಸದರಾದ ಶ್ರೀ ಠಕ್ಕರರು ಗುಜರಾಥಕ್ಕೆ ಹೋಗಿ, ಅಲ್ಲಿಯ ಪೋಲಿಸ ಅತ್ಯಾಚಾರ, ಮ್ಯಾಜಿಸ್ಟ್ರೇಟರ ಮೊಗಲಾಯಿ ಮಾದರಿಯ ಶಿಕ್ಷೆ ಮತ್ತು ಬೇರೆ ಅಸಹ್ಯವಾದ ಕೃತ್ಯಗಳನ್ನು ಕಣ್ಣಾರೆ ಕಂಡು, ಅವುಗಳ ಒಂದು ವರದಿಯನ್ನು ಪ್ರಸಿದ್ಧ ಮಾಡಿದರು. ಇದರಲ್ಲಿ ಇವರು ಪಿಕೆಟಿಂಗ ಮತ್ತು ಪಿಕೆಟಿಂಗಕ್ಕೆ ಉತ್ತೇಜನ ಕೊಡುತ್ತಾರೆಂಬ ಆರೋಪ ಹೊರಿಸಿ, ಸರಕಾರದವರು ಇವರನ್ನು ದಸ್ತಗಿರಿ ಮಾಡಿದರು. ವರದಿ ಮತ್ತು ದಸ್ತಗಿರಿಯು ಪಂಜಾಬ ಮೇಲಬಂಡಿಯು ಒಂದು ಸ್ಟೇಶನದಿಂದ ಮತ್ತೊಂದು ಸ್ಟೇಶನಕ್ಕೆ ಹೋಗುವಂತಾಯಿತು. ದಸ್ತಗಿರಿಯಾದರೆ- ಜಾಮೀನನು ಕೊಡಲಿಲ್ಲ. ಕೆಲ ಸ್ನೇಹಿತರ ಆಗ್ರಹದ ಮೂಲಕ ಡಿಫೆನ್ಸ ಕೊಡಬೇಕೆಂದಿದ್ದರು. ಆದರೆ ಹಾಗೆ ಮಾಡಬಾರದೆನ್ನುವಂಥ ಕೆಲ ಕೃತ್ಯಗಳು ಅವರ ಕಣ್ಣಿಗೆ ಬಿದ್ದು, ಅವುಗಳಿಂದ ತಮಗೆ ನ್ಯಾಯ ದೊರೆಯದೆಂದೆನಿಸಿತು. ನನಗೆ ನ್ಯಾಯ ದೊರೆಯುವದಿಲ್ಲ. ಕಾರಣ ಡಿಫೆನ್ಸ ಕೊಡುವದಿಲ್ಲೆಂದು ಮ್ಯಾಜಿಸ್ಟ್ರೇಟಗೆ ತಿಳಿಸಿದ್ದಾರೆ. ಇವರು ಹೇಳುವ ಕಾರಣಗಳು-

೧ ಪೋಲಿಸರ ನಡತೆಯ ಬಗ್ಗೆ ನೇಮಿಸಿದ ಕಮಿಟಿಯ ಮೆಂಬರರಿಗೆ ಪ್ರತಿಬಂಧ ಮಾಡಿ, ಅವರನ್ನು ಆತಂಕದಲ್ಲಿಡುವದು.
೨ ತುಂಬಿದ ಕಚೇರಿಯಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಎದುರಿನಲ್ಲಿ ರಾಷ್ಟ್ರೀಯ ನಿಶಾನೆ ಸುಡುವದು.
೩ ಸತ್ಯಾಗ್ರಹಿಗಳನ್ನು ಮನೆಯಲ್ಲಿಳಿಸಿಕೊಂಡ ಕಾರಣದಿಂದ ಜನರನ್ನು ತುರಂಗಕ್ಕೆ ಕಳಿಸುವದು.
೪ ಇಂಥ ಅನೇಕ ಕೃತ್ಯಗಳು-

ಕಾಯದೆಭಂಗಕ್ಕಾಗಿ ಶಿಕ್ಷೆ ತಂದದ್ದಕ್ಕಾಗಿ ಕಳವಿನ ಖಟ್ಲೆ.

— (೧) —

ಅಥಣಿ ತಾಲೂಕ ವಿನಾಪೂರದಲ್ಲಿರುವ ಶಕುಣ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾದ ಶ್ರೀ ದೇಶಪಾಂಡೆ ಮತ್ತು ಚಿಮ್ಮಲಗಿಯವರಲ್ಲಿ ಸರಕಾರದಿಂದ ಆಕ್ಷೇಪಾರ್ಹವಾದ ಗುಲಾಮಗಿರಿಯಲ್ಲಿರುವ ಹಿಂದುಸ್ಥಾನನೆಂಬ ಪುಸ್ತಕವಿರುತ್ತದೆಂಬ ಸಂಶಯದಿಂದ ಕುಡಚಿಯ ಸಬ್ಬ ಇನ್ಸಪೇಕ್ಟರರು ಝಡತಿಯ ವಾರಂಟು ತಕ್ಕೊಂಡು ಅವರ ನಿವಾಸಸ್ಥಾನಕ್ಕೆ ಹೋದರು. ಅಲ್ಲಿ ಏನೂ ಸಿಗಲಿಲ್ಲ. ಬಳಿಕ ಮತ್ತೊಂದು ಆರೋಪ ಹೊರಿಸಿ, ಇವರನ್ನು ಹಿಡಿದಿದ್ದಾರೆ. ಸ್ವಾತಂತ್ರ್ಯ ದಿನೋತ್ಸವದಲ್ಲಿ ಬಹಿಷ್ಕಾರದ ಮೆರವಣಿಗೆ ತೆಗೆಯಲು ಕತ್ತೆಯನ್ನು ಹಿಡತಂದಿದ್ದರು. ಆ ಕತ್ತೆಯನ್ನು ಇವರು ಕಳವು ಮಾಡಿ ತಂದಿದ್ದಾರೆಂದು ಒಬ್ಬ ಕುಂಬಾರನಿಂದ ಫಿರ್ಯಾದಿ ತಕ್ಕೊಂಡಂತೆ ಮಾಡಿದ್ದಾರೆ. ಆದರೆ ಈ ವಿಷಯವೇ ಕುಂಬಾರನಿಗೆ ಗೊತ್ತಿಲ್ಲ. ಪೋಲಿಸರು ನನ್ನ ಹೆಬ್ಬೆಟ್ಟಿನ ಗುರ್ತು ಮಾತ್ರ ತಕ್ಕೊಂಡರು. ಏಕಕ್ಕೆ ತಕ್ಕೊಂಡರೆಂಬದು ನನಗೆ ಹೇಳಲೂ ಇಲ್ಲ; ಗೊತ್ತಾಗಲೂ ಇಲ್ಲ, ಈಗ ಕತ್ತೆಯ ಕಳವಿನ ಫಿರ್ಯಾದಿ ಇರುತ್ತದೆಂದು ತಿಳಿಯಿತೆಂದು ಕುಂಬಾರನು ಅಂದು ಸಾಯಂಕಾಲದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಜಾಹೀರಾಗಿ ಹೇಳಿದ್ದಾನೆ.

ಎಷ್ಟೋ ಉಡಾಳ ಜನರು ಹೋಳೀಹಬ್ಬದಲ್ಲಿ ಕತ್ತೆಗಳನ್ನು ಹಿಡಿದು, ಅವುಗಳನ್ನು ಪರಿ ಪರಿಯಾಗಿ ಹಿಂಸಿಸುವರು. ಪೋಲಿಸರು ಈ ಹಿಂಸೆಯನ್ನು ಕಣ್ಣಾರೆ ನೋಡುವರು. ಆಗ ಇವುಗಳ ತಾಪ ಬಿಡಿಸದೆ- ಸಮಸ್ತ ಪ್ರಾಣಿಗಳಲ್ಲಿಯೂ ತಮ್ಮ ಭೂತದಯೆಯಿರುತ್ತದೆಂದು ತೋರಿಸಿದಂತಾಗುತ್ತದೆ.

ಸಾತಾರಿಯ ಚುನಾವಣೆಯು-

ಸಾತಾರಿ ಜಿಲ್ಲೆಯ ಮರಾಟಾ ಬ್ರಾಹ್ಮಣೇತರರ ವಿಜಯ ದುರ್ಗವು, ಇಂಥ ದುರ್ಗವು ಚುನಾವಣೆಯಲ್ಲಿ ಭೇದಿಸಲ್ಪಟ್ಟಿತು. ಕೊಲ್ಹಾಪೂರ ದರಬಾರದಲ್ಲಿ ಕೋಶಾಧಿಕಾರಿಯಾಗಿದ್ದ ಮಿ. ಆಜರೇಕರ ಮತ್ತು ಫಾರ್ಸಿ ಗೃಹಸ್ಥರಾದ ಖಾನಬಹಾದ್ದೂರ ಕೂಪರರು ಉಮೇದವಾರರಾಗಿದ್ದರು. ಖಾನಬಹಾದ್ದೂರರು ಸಹಜವಾಗಿ ಕೋಶಾಧ್ಯಕ್ಷರನ್ನು ಸೋಲಿಸಿದರು. ಇವರಿಬ್ಬರ ನಡುವಿನ ಮತಗಳ ಅಂತರವು ೫೫೦೦ ಆಗಿದೆ. ಇಷ್ಟು ಅಂತರವು ಎಲ್ಲಿಯೂ ಆಗಿರಲಿಲ್ಲ.

ಮದ್ರಾಸದಲ್ಲಿ ಯಾರು ಮಂತ್ರಿಯಾಗುವರು?

—೦*೦—

ಮದ್ರಾಸದಲ್ಲಾದ ಚುನಾವಣೆಯಲ್ಲಿ ಆಶ್ಚರ್ಯಕರವೆಂದರೆ- ಜಸ್ಟೀಸ ಪಕ್ಷದವರು ಬಹುವಾಗಿ ಆರಿಸಲ್ಪಟ್ಟಿದ್ದಾರೆ; ಇವರು ಹಿಂದಕ್ಕೆ ಬಹುಸಂಖ್ಯಾತರಾಗಿದ್ದಾಗ ದಿವಾನಗಿರಿಯನ್ನು ನೋಡಿದ್ದು ಈಗಿಗೆ ಹಿರೇತನ ಕೊಟ್ಟಂತಾಯಿತು. ಅದ್ದರಿಂದಲೇ ಎರಡನೆಯ ಚುನಾವಣೆಯಲ್ಲಿ ಅಲ್ಪರಾದರು. ಕಾಂಗ್ರೆಸದವರು ಚುನಾವಣೆಯಲ್ಲಿ ಸೇರಿದ್ದರಿಂದ, ಈ ಸಾರೆ ಮತ್ತೆ ಇವರ ಬಹುಮತವಾಗಿದೆ. ಆದರೆ ಇವರಿಗೆ ದಿವಾನಗಿರಿ ಕೊಟ್ಟು, ಪುನಃ ಭಕ್ತ ಮೊಸರು ಕಲಿಸದಂತಾಗಬಾರದೆಂದು ಮರಾಠ, ಬ್ರಾಹ್ಮಣ, ಮುಸಲ್ಮಾನ ಕ್ರಿಶ್ಚನ್ನ ಮೊದಲಾದವರು ಒಂದಾಗಿ ಮಂತ್ರಿಮಂಡಲವನ್ನು ರಚಿಸಬೇಕೆಂದಿದ್ದಾರೆ. ಯಾವ ಬಣಕ್ಕೆ ಒಂದು ದಿವಾನಗಿರಿಯ ಸ್ಥಳವು ದೊರೆಯುವದು; ಆ ಬಣ ಸೇರಬೇಕೆಂದು ಕಡ್ಡೀ ಮೆಂಬರರು ಜಗಟು ಹಿಡಿದಿದ್ದಾರೆ.

ಯುದ್ಧ ಮಂಡಲದ ಹೊಸ ಅಧ್ಯಕ್ಷ.

—(೦)—

ಶ್ರೀ. ಸಾ॥ ಕಾಮದಾರ ರಮಾಬಾಯಿಯವರು ತಮ್ಮ ತರುವಾಯಾ- ಶೇಟ ವೀರಚಂದ ಪಾನಾಚಂದ ಶಹಾ ಇವರನ್ನು ಯುದ್ಧ ಮಂಡಲದ ಅಧ್ಯಕ್ಷರಾಗಿ ನೇಮಿಸಿದ್ದಾರೆ; ಇವರು ಅಕ್ಕಿಯ ವ್ಯಾಪಾರದಲ್ಲಿ ಪ್ರಖ್ಯಾತಿ ಹೊಂದಿದವರಿದ್ದು, ಕೋಟ್ಯಾಧೀಶರಾಗಿದ್ದಾರೆ. ಗಿರಣಿಯ ಕೂಲಿಕಾರರು ಸಂಪು ಮಾಡಿದಾಗ, ಅವರ ಮನೆಗಳ ಮುಂದೆ ಧರ್ಮಾರ್ಥವಾಗಿ ಅಕ್ಕಿಯ ಚೀಲಗಳನ್ನು ಒಟ್ಟಿಸಿ ಬಿಟ್ಟಿದ್ದರು. ಮ್ಯುನಿಸಿಪಾಲಿಟಿಯ ಮೆಂಬರರೂ ಆಗಿದ್ದರು. ಮುಂಬಯಿಯಲ್ಲಿ ಇವರು ಹತ್ತನೆಯ ಅಧ್ಯಕ್ಷರು. ಲಾಹೋರ ದಿಲ್ಲಿ ಮುಂತಾದ ಪಟ್ಟಣಗಳಲ್ಲಿ ಯುದ್ಧ ಮಂಡಲದ ಅಧ್ಯಕ್ಷರ ನಂಬರು ಹತ್ತು ಮತ್ತು ಹತ್ತರ ಸಂಖ್ಯೆ ಮೀರಿ ಹೋಗಿದೆ.

ಡಿಪುಟಿ ಗವ್ಹರ್ನರ ಜನರಲ.

ಲಾರ್ಡ ಆಯರ್ವಿನಸಾಹೇಬರಿಗೆ ಸರಹದ್ದಿನಲ್ಲಿ ನಡೆದ ಪುಂಡಾಟಿಕೆ ಮತ್ತು ರಾವುಂಡ ಟೇಬಲದ ವಿಷಯವೇ ಹೆಚ್ಚಾಗಿರುವದರಿಂದ, ರಾಜಕಾರಣದ ಇತರ ಕೆಲಸಗಳನ್ನು ನೋಡಲು ಸಾಕಷ್ಟು ಸಮಯ ದೊರೆಯುವದಿಲ್ಲ. ಆದುದರಿಂದ, ಇವರಿಗೆ ಡಿಪುಟಿಯನ್ನು ಕೊಟ್ಟು, ಆತನಿಗೆ ಡಿಪುಟಿ ಗವ್ಹರ್ನರ ಜನರಲನೆಂಬ ಪದವಿ ಕೊಡಬೇಕೆಂಬ ವಿಚಾರ ನಡೆದಿದೆ. ಕಲಿಕ್ಟರರಂಥವರಿಗೇ ಪರ್ಸನಲ ಅಸಿಸ್ಟಂಟರಿದ್ದ ಬಳಿಕ, ಗವ್ಹರ್ನರ ಜನರಲ್ಲರಿಗೇಕಿರಬಾರದು

ಮೆರವಣಿಗೆಯಲ್ಲಿ ಡಾಕ್ಟರ ಮುಂಜೆಯವರ ಗೇಂಡಾದ ಗೊಂಬೆಯು ಚಿಂದಿಯಾಯಿತು.

—(೦)—

ನಾಗಪೂರದಲ್ಲಿ ರಾವುಂಡ ಟೇಬಲಕ್ಕೆ ಹೋಗಬೇಕೆಂದಿರುವ ಡಾಕ್ಟರ ಮುಂಜೆಯವರ ಕೃತ್ಯವನ್ನು ನಿಷೇಧಿಸಲು ಪ್ರಚಂಡ ಮೆರವಣಿಗೆ ಹೊರಟಿತು. ಮೆರವಣಿಗೆಯು ಕಾಲು ಮೈಲು ಬಂದಾಗ, ಎದುರಿನಿಂದ, ಡಾಕ್ಟರರ ಅನುಯಾಯಿಗಳು ಭರ್ರನೆ ಮೋಟಾರದಿಂದ ಬಂದವರೇ ಇಳಿದು, ಗೊಂಬೆ ಜಗ್ಗಿ ಅದನ್ನು ಚಿಂದಿ ಮಾಡಿ, ನಡೆದರು. ಇವರು ಹೋದ ಕೂಡಲೆ, ಮತ್ತೊಂದು ಗೊಂಬೆ ಮಾಡಿ, ಅದನ್ನು ಮೆರೆಸುತ್ತಾ ಸಭಾಸ್ಥಾನಕ್ಕೆ ಹೋಗಿ, ಅಲ್ಲಿ ನಿಷೇಧದ ಠರಾವು ಪಾಸ ಮಾಡಿದರು.

ಧಾರಾಸಾನದಲ್ಲಿ ಪುನಃ ಉಪ್ಪಿನ ಕಾಯದೆಭಂಗ.

—)(೦)(—

ಮಹಾತ್ಮರಿಗೆ ಕೊಟ್ಟ ವಚನವನ್ನು ಪೂರ್ಣ ಮಾಡಲೋಸುಗ ದಸರೆಯ ಮೂರೂವರೀ ಮುಹೂರ್ತದಲ್ಲಿ ಅಹಮದಾಬಾದಿನವರು ಧಾರಾಸಾನಕ್ಕೆ ಉಪ್ಪಿನ ಕಾಯದೆಭಂಗ ಮಾಡಲೋಸುಗ ಪ್ರಯಾಣ ಮಾಡುವರು; ಈ ಕಾರ್ಯಕ್ಕಾಗಿ ಹ್ವಾಲಂಟಿಯರರನ್ನು ಕೂಡಿಸುವ ಕೆಲಸವು ಜೋರದಿಂದ ನಡೆದಿದೆ. ಮೊದಲಿನ ಜನರು ರಾಜರ ಮೇಲೆ ಯುದ್ಧ ಮಾಡಲು ಅಂದು ನಗರ ತ್ಯಾಗಮಾಡುತ್ತಿದ್ದರು. ಈಗ ಕಾಲಮಹಿಮೆಯಿಂದ ಸಮುದ್ರದ ನೀರು ಕರಗಿಸಿ, ಉಪ್ಪು ಮಾಡಿ, ತಮ್ಮದೇ ಮೈ ಕೈ ಊನಮಾಡಿಕೊಳ್ಳುವಂಥ ಯುದ್ಧವನ್ನು ಹೂಡಬೇಕಾಗಿರುತ್ತದೆ.

ತುರಂಗದ ಊಟದ ಸಮಾರಾಧನೆ.

—(೦)—

ಮುಂಬಯಿ ಹತ್ತಿರಿರುವ ಖಾರವೆಂಬಲ್ಲಿ ತುರಂಗದಲ್ಲಿ ಕೊಡುವಂಥ ಅನ್ನದ್ದೇ ಒಂದು ಸಮಾರಾಧನೆ ಮಾಡುವ ಏರ್ಪಾಡು ಮಾಡಿದ್ದಾರೆ. ಈ ಪ್ರಸ್ತವು ಆದಿತ್ಯವಾರವಾಗುವದು. ಅಂದು ಪ್ರಾತಃಕಾಲದಲ್ಲಿ ಸರಿಯಾಗಿ ೧೧ ಗಂಟೆಗೆ ಜೋಳದ ಎರಡು ರೊಟ್ಟಿ ಮತ್ತು ಬೇಳೆ ಕೊಡುವರು; ಸಾಯಂಕಾಲದಲ್ಲಿ ರೊಟ್ಟಿ ಮತ್ತು ಪಲ್ಲೆ ಕೊಡುವರು. ಈ ಸಾರ್ವಜನಿಕ ಊಟಕ್ಕೆ ಫೀ ಇಲ್ಲ. ಯಾರಿಗಾದರು ದ್ರವ್ಯಸಹಾಯ ಮಾಡಬೇಕೆಂಬ ಅಪೇಕ್ಷೆಯಾದರೆ- ಅಲ್ಲೇ ಇಟ್ಟ ಪೆಟ್ಟಿಗೆಯಲ್ಲಿ ತಮಗೆ ತೋರಿದ್ದನ್ನು ಹಾಕಬೇಕು. ಪಂಕ್ತಿಯಲ್ಲಿ ಜಾತಿ ನಿರ್ಬಂಧ ಇರುವದಿಲ್ಲ.

ಮಾಮಲೇದಾರರು ಗುಪ್ತವಾಗಿ ಗುಡಜೇಪಿ ಕಟ್ಟಿದರು

ಕೊಲ್ಹಾಪೂರ ಸಂಸ್ಥಾನದಲ್ಲಿರುವ ಶಿರೋಳ ತಾಲೂಕಿನ ಮಾಮಲೇದಾರರಾದ ಮಿ. ಡಿಗ್ರಜಕರರು ಯಾವ ಕಾರಣದಿಂದಲೋ ಗುಪ್ತವಾಗಿ ಗುಡಜೇಪಿ ಕಟ್ಟಿ ಹೆಂಡರು ಮಕ್ಕಳು ಸಹಿತವಾಗಿ ಸಾಂಗಲಿಗೆ ಹೊರಟುಹೋದರು.

ಮುಖಂಡರ ಬಿಡುಗಡೆ-

ಶ್ರೀ. ಸುಭಾಷಚಂದ್ರ ಬೋಸ, ಶ್ರೀ ಸೇನಗುಪ್ತ, ಶ್ರೀ ಕಿರಣ ಶಂಕರರಾಯ ಮತ್ತು ಶ್ರೀ. ಭೋಪಟಕರರು ಬಂಧಮುಕ್ತರಾದರು.

ರಾಣೇಬಿನ್ನೂರ ತಾಲೂಕ ಬಳಿಗಾಲ ಪೇಟೆಯಲ್ಲಿ ವೀರಶೈವರ ಮೂರು ಚಹಾದ ಅಂಗಡಿಗಳಿದ್ದವು. ಶ್ರೀ ಪರಮಣ್ಣಾ ಜೋಸಮನಿಯವರು ಹೋಗಿ, ವ್ಯಾಖ್ಯಾನ ಕೊಟ್ಟದ್ದರ ಉತ್ತಮ ಪರಿಣಾಮವಾಗಿ ಮೂರೂ ಅಂಗಡಿಗಳು ಬಂದಾದವು. ಪ್ರತಿಯೊಂದು ಮನೆಯಲ್ಲಿ ನೂಲು ತೆಗೆಯುವ ರಾಟಿಗಳು ಭರಭರಾಟಿಯಿಂದ ನಡೆದಿವೆ.

ಸಂಗಮನೇರದ ವನಗಾವಲದ ಪ್ರಮುಖ ಸತ್ಯಾಗ್ರಹಿ ಮತ್ತು ಲೋಕಪ್ರಿಯರಾಗಿದ್ದ ಶ್ರೀ. ಶಾಸ್ತ್ರಿಯವರು ಅರಣ್ಯದಲ್ಲಿ ಅದೃಶ್ಯರಾಗಿದ್ದರು. ಎಷ್ಟು ಹುಡುಕಿದರೂ ಪತ್ತೆಹತ್ತಲಿಲ್ಲ. ಈಗ ಅವರು ಹೊರುತ್ತಿದ್ದ ಶಾಲ ಒಂದು ಕೊಸ್ನಾರದ ದಂಡೆಯಲ್ಲಿ ಸಿಕ್ಕಿದೆ. ಆದರೆ ಪ್ರೇತ ದೊರೆಯದೆ ಹೋಗಿದೆ. ಪ್ರೇತವು ಕೊಳೆತು ಹೋಗಿರಬೇಕೆಂದು ತರ್ಕವಿರುವದು.

ಶ್ರೀ. ಪಾಟಲ್ಯೆ ಮಹಾರಾಜರು ನಿಜಾಮ ರಾಜ್ಯದವರು. ಇವರು ದೇಶ ಸಂಚಾರ ಮಾಡುತ್ತಾ ಮಹಾರಾಷ್ಟ್ರ ಪ್ರಾಂತದಲ್ಲಿ ಬಂದಿದ್ದಾರೆ. ಇವರು ಮರಳಿ ನಿಜಾಮರಾಜ್ಯದಲ್ಲಿ ಬರಕೂಡದೆಂದು ನಿಜಾಮಸಾಹೇಬರಿಂದ ಫರ್ಮಾನ ಹೊರಟಿರುತ್ತದೆ.

ನಾಡಹಬ್ಬವು-

ನಿನ್ನೆಯಿಂದ ಈ ಊರಲ್ಲಿ ವಾರ್ಷಿಕ ಪದ್ಧತಿಪ್ರಕಾರ ನಾಡಹಬ್ಬದ ರಾಷ್ಟ್ರೀಯ ಉತ್ಸವ ಪ್ರಾರಂಭವಾಗಿದೆ. ಅವುಗಳ ಕಾರ್ಯಕ್ರಮವನ್ನು ಊರತುಂಬ ಹಂಚಿದ್ದಾರೆ. ನಿತ್ಯ ಆಗುವ ಸಮಾರಂಭಗಳನ್ನು ಆಗಾಗ್ಗೆ ಬರೆಯುತ್ತಾ ಹೋಗುವೆವು.

ನೋಟೀಸು

ಮಹಬೂಬ ಕೋಂ|| ಮಾರೂಫಖಾನ ಮೋಡ್ಡೇರಿ ಮುಕ್ಕಾಮ ಧಾರವಾಡ ಲೈನಬಜಾರ ...ಕಾಕ ಇವರ ಸಾಮ್ಯುಯೆಲ್ ರಷೀದ ದುಕಾನದ ...ವ ಮಹಬೂಬಖಾನ ಮನಿಯಲ್ಲಿ ಈಕೆಗೆ-

ಕೆಳಗೆ ಸಹಿ ಮಾಡಿದವರ ಕಡಿಂದಾ ಉತ್ತರ ...ಡುವದೇನಂದರೆ- ನೀನು ರಾಜಹಂಸ ಪತ್ರದಲ್ಲಿ ...ಟ್ಟ ನೋಟೀಸು ಮುಟ್ಟಿತು ಅದರಲ್ಲಿ ನಿನ್ನ ಸಂ...ಣೆ ಬಗ್ಗೆ ಯೋಗ್ಯ ಜಾಮೀನು ಕೊಟ್ಟು ಕರ...ಂಡು ಹೋಗಬೇಕಂತಾ ನಮೂದ ಅದೆ ಅಷ್ಟೇ ...ತ್ರಿ ಯಾವ ಗಂಡನು ತನ್ನ ಹೆಂಡತಿ ಸಂರಕ್ಷಣೆಗೆ ಜಾಮೀನ ಕೊಟ್ಟು ಬಾಳ್ವೆ ಮಾಡಿದ್ದು ನನ್ನ ಕೇ...ಯಲ್ಲಿ ಇಲ್ಲ. ಲಗ್ನ ಆದ ಕೂಡಲೆ ಗಂಡಹೆಂ...ಯರು ಪರಸ್ಪರ ಸುಖದುಃಖದ ಕಡಿಗೆ ಮಾತ್ರ ... ಕೊಡಬೇಕಂತಾ ನಮ್ಮ ಶಾಸ್ತ್ರ ಹೇಳುತ್ತಲಿ...

ಈಗ ನೀನು ನನ್ನ ಹೈಗೈ ಸಾಬಿತ ಪಡ್ಸದೇ ...ಕದಮ್ ಎರಡನೇಯವನಿಗೆ ಉಡಕಿ ಮಾಡಿಕೋ...ನಿ ಅಂತಾ ಬರದಿದ್ದು ಮಾತ್ರ ಯಾವ ಕಾಯ...ದಿಂದಲೂ ಬರಲಾರದು. ಕದಾಚಿತ ಏನಾದರೂ ...ದು ತಪ್ಪು ತಿಳವಳಕಿಯಿಂದಾ ನಿನ್ನ ಪುನರ್ವಿವ... ಆದ್ರೆ ನೀನು ವ ನಿನ್ನ ಮಾಡಿಕೊಂಡವನು ...ತ್ತು ಇಂಥಾ ಗೈರ ಕಾಯದೇಶೀರ ಕೆಲಸಕ್ಕೆ ಸ...ಯಕರಾದವರು ಸಹಾ ಕ್ರಿಮಿನಲ್ ವಗೈರೆ ಅಪ...ಧಕ್ಕೆ ಗುರಿ ಆಗುವಿರಿ ನೀನು ನನ್ನಲ್ಲಿ ಬರುವ... ಈ ವಳಗಾಗಿ ನಾನು ಇಂಡಿಗನ ಮೇಲೆ ಬರ...ರಜಿಸ್ತರ ಮಾಡಿಸಿದ ನೋಟೀಸಿನ ಮಜಕೂರು...ಗೆ ತಿಳಿದಿರಲಿಕ್ಕೆಬೇಕು ನಿನ್ನ ಸಂರಕ್ಷಣೆ ಬಗ್ಗೆ ಯೋಗ್ಯ ಜಾಮೀನು ಅಂದ್ರೆ ಎಷ್ಟು ರಕಮಿನದು ...ಯ ಯಾರ ಸಮಕ್ಷಮ ಆಗೋದು ಸಹಾ ಮಿಮ್ಮಿಂದಾ ನನಗೆ ತಿಳಿಸಿ ಕೊಟ್ಟಿಲ್ಲ ಮುಂದಿನ ವೆ...ವಸ್ಥಾ ಮಾಡಲಿಕ್ಕೆ ಬಂದೀತು ತಿಳಿಯುವದು

ತಾರೀಖು ೨೪-೯-೧೯೩೦ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಮಾರೂಫಖಾನ ವಲ್ದ ಹುಸನಖಾನ ಮೋಡ್ಡೇರಿ ಸಾಕೀನ ಧಾ... ವೆನ್ನೂರ ಖುದ್ದ ಮಾಡಿದ್ದು ಇರುತ್ತದೆ

ನೋಟೀಸಿನ ದರಗಳು

...ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂ... ಆಣೆ. ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ...ಣೆ ಸರಕಾರ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ಬ್ಯಾಂಕ್ಸ, ಕಂಪನಿಗಳು ಮುಂತಾದ ಸಾರ್ವಜನಿ...ಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು...ಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ...ಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ
ಬೇಜಾರಾಗಿರುವ ಭಗಿನಿಯರಿಗೆ ಅತ್ಯಂತ ಸಂತೋಷ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೆ ಬಣ್ಣದ ಸೆರಗು ಹೋಗುವ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೈದ್ಯರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚ ನಿಮ್ಮ ೨ ರೂಪಾಯಿಗಳನ್ನು ಮನಿ ಆರ್ಡರಿನಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯ ಬ್ಯಾಂಕ ಧಾರವಾಡ

ಸೂಚನೆ ನಮ್ಮ ಔಷಧ ಬೇಡುವಾಗ್ಯೆ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು. ೮

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹಡ್ಡಿ ವ ಕಿಸಂ ನಾಟುಗಳು

ಸಾಗವಾನಿ ಮಳೆ ವ ಸಾಗವಾನಿ (೬) ಫೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಫು ವ ಕಿಲಿಂಗು ತೈಯಾರ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೆಟ ಧಾರವಾಡ.

ನಕಾಶೆ ಸಹಿತ

ಉರ್ದು ಧಾರವಾಡ ಜಿಲ್ಹೆಯ ಭೂಗೋಲು
ಬೆಲೆ ಮೂರು ಆಣೆ
ಉರ್ದು ವಿಜಾಪೂರ ಜಿಲ್ಹೆಯ ಭೂಗೋಲು
ಬೆಲೆ ೫ ಆಣೆ

ಉರ್ದುವಿನಲ್ಲಿ ಈವರೆಗೆ ವಿಜಾಪೂರ ಜಿಲ್ಹೆಯ ಭೂಗೋಲು ಪ್ರಸಿದ್ಧವಾಗಿಲ್ಲ

ಇವುಗಳಲ್ಲಿ ಎರಡೂ ಜಿಲ್ಹೆಗಳ ಪೂರ್ಣ ಮಾಹಿತಿ ಇರುತ್ತದೆ. ಹೆಚ್ಚು ಪ್ರತಿಗಳನ್ನ ಕೊಳ್ಳುವವರಿಗೆ ಭರಪೂರ ಕಮೀಶನ ದೊರೆಯುವದು.

ವಿಳಾಸ:— ಎಮ್. ಎಚ್. ಲಕ್ಕುಂಡಿ
ಉರ್ದು ಸ್ಕೂಲ ಹೆಡ್ಡಮಾಸ್ತರ
ಶಾಲಾ ನಂಬರ ೧, ಗದಗ ಬೆಟಗೇರಿ

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು. ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಸೇರು ೧ಕ್ಕೆ ೨—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦
೧೯-೧೧-೨೯ ಮೈಸೂರಸ್ಟೋರ,
ಬೆಳಗಾವಿ [illegible] ಗಲ್ಲಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಶನಿವಾರ ತಾರೀಖು ೨೭ನೇ ಸಪ್ಟಂಬರ ೧೯೩೦ (ಸಂಚಿಕೆ ೨೩೪

ಪತ್ತೆಯಿಲ್ಲ! ಜಠಾರರ ಹುಡುಗ !!

ನಮ್ಮ ಮಗಾ ಚಿ|| ತಾರಾನಾಥ ವರ್ಷ ಬೇಬಿ ಸಿಸ್ತಿನ ದಿವಸ (ಗುರುವಾರ ತಾ|| ೨೫-೯-೩೦) ಮುಂಜಾನೆ ಅಜಮಾಸ ೬ ಗಂಟೆಗೆ ನಮ್ಮ ಮನೆಯಲ್ಲಿ ಯಾರಿಗೂ ಹೇಳದೆ ಮನೆ ಬಿಟ್ಟು ಹೋದವನು ಇನ್ನೂವರಿಗೂ ಪತ್ತೆ ಇಲ್ಲ. ಅವನ ವಯಸ್ಸು ೧೪ ವರ್ಷ ಇಂಗ್ರೇಜಿ ೫ನೇ ಇಯತ್ತೆಯಲ್ಲಿ ಸರಕಾರೀ ಹಾಯಸ್ಕೂಲಿನಲ್ಲಿಯ ವಿದ್ಯಾರ್ಥಿ. ಎತ್ತರಾ ಅಜಮಾಸು ೪ ಫೂಟು ೯ ಇಂಚು. ವರ್ಣ ಕೆಂಪು, ಉದ್ದ ಮೂಗು, ದೊಡ್ಡ ಕಣ್ಣು ನಡುವಾಟಿನ ಬಾಂಧಾ, ತಲೆಯ ಮೇಲೆ ಕ್ರಾಪು ವ ಖಾದಿ ವೂದಿ ಬಣ್ಣದ ಟೊಪ್ಪಿಗೆ ಊದೀ ಬಣ್ಣದ ಜಕ್ಕಿನ ಕೋಟು ತೊಟಗೊಂಡದ್ದು, ಧೋತರಾ ಉಟಗೊಂಡದ್ದು, ವ ಕಾಲಲ್ಲಿ ಚೆರಪ್ಪ, ಸ್ವಭಾವ ಅತಿ ಸೌಮ್ಯ ಮಾತೃಭಾಷಾ ಮರಾಠಿ, ಕನ್ನಡ ಮಾತಾಡಲಿಕ್ಕೆ ಬರುತ್ತದೆ ಮುಂಜಾನೆ ಮನೆ ಬಿಟ್ಟು ಹೋದನಂತರ ಗಾಂಧೀಚೌಕಿನ ಹತ್ತರ ಒಬ್ಬರಿಗೆ ಮತ್ತು ಕರ್ನಾಟಕ ಸೆಂಟ್ರಲ ಬ್ಯಾಂಕಿನ ಹತ್ತರ ಮತ್ತೊಬ್ಬರಿಗೆ ಅದೇ ವೇಳೆಯ ಸುಮಾರಕ್ಕೆ ಭೆಟ್ಟಿಯಾದನು. ಮಾರ್ಕೇಟ ಕಡಿಗೆ ಹೋಗುತ್ತಿದ್ದನು.

ಮುಂದೆ ೧೧ ಗಂಟೆ ಸುಮಾರಕ್ಕೆ ಮುನಸುಫ ಕೋರ್ಟ ಮತ್ತು ಗೋಪಾಳಗಿರಿ ಬಂಗ್ಲೇದ ಕಾಂಪೌಂಡದ ಮಧ್ಯದ ಸಾವಾರದಲ್ಲಿ ಅವನ ಕ್ಲಾಸಿನಲ್ಲಿ ಒಬ್ಬ ವಿದ್ಯಾರ್ಥಿಗೆ ಹಾಯಸ್ಕೂಲ ದಾರಿಯಿಂದ ಹೋಗುವಾಗ ಭೆಟ್ಟಿಯಾದನು. ಮುಂದೆ ಅವನ ಪತ್ತೆ ಬಿಲಕೂಲ ಇಲ್ಲ. ಮನಿಯಲ್ಲಿ ಅವನಿಗೆ ಸಿಟ್ಟು ವಗೈರೆ ಯಾರೂ ಮಾಡಿಲ್ಲ. ಮತ್ತು ಮನೀ ಬಿಟ್ಟು ಹೇಳದೇ ಹೋಗುವದಕ್ಕೆ ಏನೂ ಕಾರಣವಿಲ್ಲ. ಮುಗ್ಧ ಸ್ವಭಾವದವನಿದ್ದರೂ ಒಳ್ಳೇ ತಿಳುವಳಿಕೆಯ ಹುಡುಗನು. ಪ್ರಕೃತಿ ನಿರೋಗಿ.

ಸದರೀ ನಮ್ಮ ಹುಡುಗನನ್ನು ಯಾರಾದರೂ ಕಂಡಿದ್ದರೆ ದಯಮಾಡಿ ಕೆಳಗಿನ ನಮ್ಮ ಪತ್ತೆಕ್ಕೆ ತಿಳಿಸಬೇಕೆಂತಲು ವಿನಂತಿ ಅದೆ ಮತ್ತು ಅವನನ್ನು ತಪಾಸ ಹಚ್ಚಿ ನಮ್ಮ ಕಡಿಗೆ ಕಳಿಸಿಕೊಡು ಅತ್ಯಂತ ಆಭಾರ ಮನ್ನಿಸುವದಲ್ಲದೆ ಯೋಗ್ಯ ಪಾರಿತೋಷಕವನ್ನು ಕೊಡಲಾಗುವದು.

ಧಾರವಾಡ
ಕರ್ನಾಟಕ ಪ್ರಿಂಟಿಂಗ ವರ್ಕ್ಸ ಯಶವಂತ ಭಾಸ್ಕರ ಉರ್ಫ ಬಳವಂತರಾವ ಜಠಾರ
೨೬-೯-೩೦

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ ಹೋಲಸೇಲ ಕೊಳ್ಳುವವರಿಗೆ ನೂರಕ್ಕೆ ಭರ್ಪೂರ ಕಮೀಶನ ದೊರೆಯುವದು.

ಟಿ. ವ್ಹಿ. ನವರತ್ನ,
ಶ್ರೀ ಲಕ್ಷ್ಮೀವೆಂಕಟೇಶ ಸ್ಟೋರ್ಸ, ಮಾರ್ಕೇಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟಿ ಧಾರವಾಡ.

ಕೋಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಬಾಗೀನೆಗಳನ್ನು ವರ್ಷ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ.	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರು ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಆಶ್ವೀಜ ಶುದ್ಧ ೫

ವಿ. ಮಾಳಗಿ ವಕೀಲರ ರಾಜನಿಷ್ಠೆಯ ಮಾದರಿಯು

ಹುಬ್ಬಳ್ಳಿಯ ವಕೀಲರಾದ ವಿ. ಮಾಳಗಿಯವರು ರಾಜನಿಷ್ಠೆಯದೊಂದು ಮಾದರಿಯನ್ನು ತೋರಿಸಿಕೊಂಡಿದ್ದಾರೆ. ಸರಕಾರ ಮತ್ತು ಅಸಹಕಾರಿಗಳು ಕೂಡ ಯಾವ ವಿಷಯದಲ್ಲಿ ಸುಮ್ಮನಿರುವರೋ? ಅಂತಹದನ್ನು ಇವರು ಕೆದರಿ ತೆಗೆದಿದ್ದು, ಇದರಿಂದ ಯಾವ ಪುರುಷಾರ್ಥ ಸಾಧಿಸುವರೆಂಬದು ನಮಗಂತೂ ತಿಳಿಯದಾಗಿದೆ.

ಕೌನ್ಸಿಲ ಚುನಾವಣೆ ಮತ್ತು ಚುನಾವಣೆಗೆ ಬಹಿಷ್ಕಾರ ಹಾಕಬೇಕೆಂದು ಜಿಲ್ಹೆಯ ತುಂಬ ಕೋಲಾಹಲವೆದ್ದಾಗ, ಧಾರವಾಡ, ಹುಬ್ಬಳ್ಳಿ ಮತ್ತು ಗದಗಿನ ವಕೀಲರು ಸಭೆಮಾಡಿ, ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಪ್ರಚಂಡ ಬಹುಮತದಿಂದ ಮತ್ತು ಗದಗಿನ ವಕೀಲರು ಸರ್ವಾನುಮತದಿಂದ ವಕೀಲರಾದವರು ಕೌನ್ಸಿಲದ ಉಮೇದವಾರರಾಗಬಾರದು; ಮತ್ತು ಯಾರೇ ಉಮೇದವಾರರಾಗಲಿ; ಅವರಿಗೆ ವೋಟು ಕೊಡಕೂಡದೆಂದು ಠರಾವು ಪಾಸುಮಾಡಿದರು. ಆ ವಿವರವನ್ನು ಈ ಮೊದಲು ವಿಜಯದಲ್ಲಿ ಬರೆದಿರುತ್ತೇವೆ.

ಸರಕಾರದ ಕಾಯದೆಕೌನ್ಸಿಲ, ಮುನಸಿಪಾಲಟಿ, ಲೋಕಲಬೋರ್ಡುಗಳಲ್ಲಿ ಯಾವದೊಂದು ಠರಾವು ಬಹುಮತದಿಂದ ಪಾಸಾದರೆ- ಅದಕ್ಕೆ ವಿರುದ್ಧ ಮತ ಕೊಟ್ಟವರು ಕೂಡ, ಆ ಠರಾವಿನಂತೆ ನಡೆಯುತ್ತಾರೆ. ಮನೆಪಟ್ಟಿ, ನೀರಿನ ಪಟ್ಟಿ, ಜಕಾತಿ ಅನ್ಯಾಯದ್ದಾಗಿದ್ದರೂ, ಅದನ್ನು ತೆತ್ತುತ್ತಾರೆ. ಮುನಸಿಪಾಲಟಿಯ ಮೆಂಬರನೇ ಇರಲಿ; ಜಕಾತಿ ಕೊಟ್ಟ ಹೊರತು, ಆತನ ಕೈಕೆಳಗಿನ ಕಾರಕೂನನೇ ಆತನನ್ನು ಮುಂದೆ ಬಿಡುವದಿಲ್ಲ. ಹುಬ್ಬಳ್ಳಿಯದೇ ಒಂದು ಉದಾಹರಣೆ ತಕ್ಕೊಳ್ಳುವಾ- ಹಾವರ್ಡಸಾಹೇಬನ ಇಂಗ್ರೇಜಿ ಮೊದಲನೆಯ ಪುಸ್ತಕವನ್ನು ಆತನು ಕಾಸು ಕೊಟ್ಟು ಧಾರವಾಡದಲ್ಲಿ ಕೊಂಡು ಹುಬ್ಬಳ್ಳಿಗೆ ಹೋದರೆ- ಎಂಟಾಣೆ ಜಕಾತಿ ಕೊಡಬೇಕಾಗುತ್ತದೆ. ಹೀಗೆ ಮೂಗಿಗಿಂತ ಮೂಗುತಿ ಭಾರವಾದಂಥ ಜಕಾತಿಯನ್ನು ಕೊಡುವದು ವಿ. ಮಾಳಗಿ ವಕೀಲರಿಗೆ ಕೂಡ ತಪ್ಪದು.

ಬಾರ ಅಸೋಸಿಯೇಶನದ ಠರಾವು ಈ ತೆರವಾಗಿ ವಿ. ಮಾಳಗಿ ವಕೀಲರ ಕೈ ಬಾಯಿ ಕಟ್ಟುವಂತಿರುವದಿಲ್ಲ. ಸಾರ್ವಜನಿಕ ಸ್ವರೂಪದ ಸಭೆ ಮತ್ತು ಠರಾವು. ಅಲ್ಲಿ ಬೇಕಾದದ್ದು ನಡೆಯಲಿ; ತಾವು ಅದರಲ್ಲಿ ಕೂತಾಗ್ಗೇ ಠರಾವು ಪಾಸಾಗಲಿ; ಅದರಂತೆ ನಡೆಯಬೇಕೆಂಬ ನೈತಿಕ ದೃಷ್ಟಿಯಿಂದ ಸಹ ಬದ್ಧರಾಗುವದಿಲ್ಲವಲ್ಲ!! ಅಂತೇ ಎಷ್ಟೋ ಜನರು ಯಾವದೆಂದು ಠರಾವು ಪ್ರತಿಕೂಲವಾಗಿ ಪಾಸಾದ ಕೂಡಲೆ, ತಮ್ಮದೊಂದು ಸ್ವತಂತ್ರ ಸಭೆಯನ್ನು ಹೂಡಿದರೇ? ಮೂಲ ಸಭೆಯಲ್ಲಾದ ಠರಾವನ್ನು ಅಲಕ್ಷಿಸಿ ಹಳಿದರೇ? ಈ ರೀತಿಯಾಗಿ ಅನೇಕ ಸ್ಥಳಗಳಲ್ಲಿ ದೃಶ್ಯಗಳು ಕಾಣ ಬರುತ್ತಿರುವಾಗ, ವಿ. ಮಾಳಗಿ ವಕೀಲರ ವರ್ತನವೂ ಇದೇ ರೀತಿಯದಾಗಿರುತ್ತದೆ.

ಧಾರವಾಡ, ಹುಬ್ಬಳ್ಳಿ, ಗದಗ ಮತ್ತು ಹಾವೇರಿಯಲ್ಲಿಯ ಕೋರ್ಟುಗಳ ಆವಾರದಲ್ಲಿಯೇ ವಕೀಲರಿಗಾಗಿ ಕೂಡ್ರುವ ಸ್ಥಳಗಳಿರುತ್ತವೆ. ವಕೀಲರ ಬಾರ ಅಸೋಸಿಯೇಶನದ ಕಮೀಟಿಗಳು, ಜನರಲ ಕಮೀಟಿಗಳೂ ಅಲ್ಲೇ ಕೂಡುತ್ತವೆ. ಬಹುಕಾಲದಿಂದ ನಡೆದು ಬಂದ ಪದ್ಧತಿ ಪ್ರಕಾರ, ಪ್ರಸ್ತುತದ ಚಳವಳಿಯಲ್ಲಿ ವಕೀಲರು ಖಾದೀ ಧರಿಸಬೇಕೆಂಬ ಠರಾವುಗಳೂ, ವಕೀಲರು ವಿಶ್ರಾಂತಿಯ ಹೊತ್ತಿನಲ್ಲಿ ರಾಟಿ ಅಥವಾ ಕದರುಂಕಿಗೆಯಿಂದ ನೂಲಬೇಕೆಂಬ ಠರಾವುಗಳೂ ಇದೇ ಸ್ಥಳಗಳಲ್ಲಾಗಿರುತ್ತವೆ. ಧಾರವಾಡದ ವಕೀಲರು ಸಂಪೂರ್ಣವಾಗಿ ಖಾದಿಯ ಉಡುಪಿನಲ್ಲಿ ತೆಗೆದ ಮೆರವಣಿಗೆಯು ಕೋರ್ಟಿನಿಂದಲೇ ಹೊರಟಿರುತ್ತದೆ. ಹೀಗೇಕೆಂದು ಜಡ್ಜ, ಸಬಜಡ್ಜರಾರೂ ಆಕ್ಷೇಪಣೆ ತೆಗೆದಿಲ್ಲ. ಸರಕಾರದ ಪ್ರತ್ಯಕ್ಷ ಪ್ರತಿನಿಧಿಗಳೇ ಸುಮ್ಮನಿರುವಾಗ, ಅದರಲ್ಲೇನೂ ಆಕ್ಷೇಪವಿಲ್ಲೆಂದು ತಿಳಿದೇ ಅವರು ಸುಮ್ಮನಿದ್ದಾಗ, ವಿ. ಮಾಳಗಿ ವಕೀಲರು ತಮ್ಮ ರಾಜನಿಷ್ಠೆಯ ಪ್ರದರ್ಶನ ಮಾಡಿಕೊಳ್ಳಲು- ಇಲ್ಲದ ಸಲ್ಲದ ಉಸಾಬರಿ ಮಾಡಿದ್ದು ಯಾವದೊಂದು ಪರಾಕ್ರಮವಾಯಿತೆಂಬದು ನಾವೆಂದೂ ಅನ್ನಲಾರೆವು.

“ವಕೀಲರ ಸಂಘವು ಕೋರ್ಟಿನ ಕಾಂಪಾಂವುಂಡಿನಲ್ಲುಂಟು. ಇದು ಸರಕಾರದ ಸ್ಥಳ. ಇಲ್ಲಿ ರಾಜಕೀಯ ವಿಚಾರ ನಡೆದರೆ- ತಮ್ಮಂಥ ರಾಜನಿಷ್ಠರಾದ ಲಿಂಗಾಯತರಿಗೆ- ಆ ಕಾಲದಲ್ಲಿ ಬಹಳ ಆದಣಿ ಹೋಗುತ್ತದೆ. ಆದಕಾರಣ ಇಂಥ ಸಭೆಗಳು ಪುನಃ ಅಲ್ಲಿ ಆಗದಂತೆ ಹುಕುಮು ಆಗಬೇಕೆಂದು” ವಿ. ಮಾಳಗಿಯವರು ಮುನಸಫರಾದ ವಿ. ಸೂರ್ಯವಂಶಿಯವರ ಮುಂದೆ ಅರ್ಜಿಯನ್ನಿಟ್ಟರು. ಕೋರ್ಟಿನ ಪ್ರಾಕಾರ ಮಾತ್ರವಲ್ಲ; ಲಾಯಬ್ರರಿಯ ಕೇಂದ್ರವೂ ಅದಕ್ಕೆ ಸಲ್ಲುತ್ತಿರುವದರಿಂದ ಅಸೋಸಿಯೇಶನವೂ ಸರಕಾರದ್ದೇ ಆಯಿತೆಂದು ವಕೀಲರಸಾಹೇಬರು ತಮ್ಮ ರಾಜನಿಷ್ಠೆಗೆ ಆಧಾರದ ಒಂದು ಯುಕ್ತಿಯನ್ನೂ ಜೋಡಿಸಿದ್ದಾರೆ.

ಬಾರ ಅಸೋಸಿಯೇಶನದ ಸ್ಥಾಪನೆಯಾಗುವ ಮೊದಲು ಲಾಯಬ್ರರಿ ಇತ್ತು. ಅದಕ್ಕೆ ವಕೀಲರೆಲ್ಲರೂ ವರ್ಗಣಿ ಕೊಡುವರು. ಈ ವರ್ಗಣಿಯಲ್ಲಿ ಕೆಲ ಭಾಗವನ್ನು ವಕೀಲ ಸಂಘದಲ್ಲಿರುವ ಖುರ್ಚಿ, ಬಾಕು, ಟೇಬಲು ತಕ್ಕೆಗಳಿಗಾಗಿ ಉಪಯೋಗಿಸುವರು. ಸರಕಾರವು ಬೇರೆ ಬೇರೆ ಸಾರ್ವಜನಿಕ ಸಂಸ್ಥೆಗಳಿಗೆ ಕೊಡುವಂಥ ಗ್ರಾಂಟಿನಂತೆ ಇದೂ ಒಂದು ಎಂದು ವಿ. ಮಾಳಗಿಯವರು ಆರ್ಗ್ಯುಮೆಂಟ ಮಾಡುತ್ತಾರೆ. ಎತ್ತಲಿಂದಾದರೂ ವಕೀಲ ಸಂಘವು ಸರಕಾರದ ವಶವರ್ತಿಯಾದದ್ದು. ಇಲ್ಲಿ ರಾಜಕಾರಣದ ಉಹಾಪೋಹವಾಗಬಾರದೆಂದು ಇವರ ಆಗ್ರಹ ಅಥವಾ ದುರಾಗ್ರಹವು.

ವಿ. ಮಾಳಗಿಯವರ ಅರ್ಜಿ ಬಂದ ಒಡನೆ ವಿ. ಸೂರ್ಯವಂಶಿಯವರು, ಸಭಾಧ್ಯಕ್ಷರಾಗಿದ್ದ ಶ್ರೀ. ಪಾವಟೆಯವರನ್ನು ಕರೆಸಿ, ವಿ. ಮಾಳಗಿಯವರ ಅರ್ಜಿಯನ್ನು ತೋರಿಸಿದರು. ವಿ. ಪಾವಟೆಯವರು ರಾವಸಾಹೇಬರಿಗೆ ಯೋಗ್ಯವಾದ ಉತ್ತರವನ್ನೇ ಬರೆದರು. ಬಾರ ಅಸೋಸಿಯೇಶನದಲ್ಲಿ ರಾಜಕೀಯವಾಗಿ ವಿಚಾರ ಮಾಡಲು, ಆ ಬಗ್ಗೆ ಠರಾವು ಮಾಡಲು ತಮಗೆ ಪಕ್ಕಾ ಬಾಧ್ಯತೆಯುಂಟೆಂದೇ ಇವರು ಬರೆದು ಕೊಟ್ಟಿದ್ದಾರೆ. ಈ ಪ್ರಕಾರ ಪೂರ್ವಪಕ್ಷ ಉತ್ತರಪಕ್ಷವಾದ ಬಳಿಕ, ರಾವಸಾಹೇಬರು ರಾಜಕೀಯ ವಿಷಯಗಳನ್ನು ಚರ್ಚಿಸಬಾರದೆಂದು, ವಿ. ಮಾಳಗಿಯವರಿಗೆ ಅನುಕೂಲವಾಗಿ ಅಭಿಪ್ರಾಯ ಬರೆದು, ಅದರ ಕೊನೆಯ ನಿರ್ಣಯಕ್ಕಾಗಿ ಮಿ ಡಿಸ್ಟ್ರಿಕ್ಟ ಜಡ್ಜಸಾಹೇಬರ ಕಡೆಗೆ ಕಳಿಸಿ ಕೊಟ್ಟಿದ್ದಾರೆ.

ಹುಬ್ಬಳ್ಳಿಯೊಂದೇ ಅಲ್ಲ; ಧಾರವಾಡ ಮತ್ತು ಗದಗಿನಲ್ಲಿಯೂ ಸಭೆಗಳಾಗಿರುತ್ತವೆಂದು ಮೇಲೆ ಹೇಳಿದ್ದೇವೆ. ಮಿ. ಜಡ್ಜಸಾಹೇಬರು ಇವುಗಳ ಮತವನ್ನೂ ಕೇಳಬಹುದಾಗಿದೆ. ಇಷ್ಟೇ ಅಲ್ಲದೆ, ಇದು ಸ್ಥಾನಿಕ ವಿಷಯವಲ್ಲ. ಇಲಾಖೆಗೇ ಸಂಬಂಧಿಸಿದ್ದು. ಮಿ. ಜಡ್ಜಸಾಹೇಬರಾದರೂ ಹಾಯಕೋರ್ಟಿಗೆ ಬರೆಯಬಹುದು. ಹಾಯಕೋರ್ಟಿನವರು ಈ ಮುಂದಾಗಿ ಇದಕ್ಕೆ ತತ್ವದಂಥ ಒಂದು ಠರಾವನ್ನು ಮಾಡಿಯಾರು. ಕಾಯದೆಭಂಗದಲ್ಲಿ ಸೇರಿದ ವಕೀಲರ ಸನದನ್ನು ರದ್ದು ಮಾಡುವ ಅಥವಾ ಅವರ ವರ್ತನದ ಬಗ್ಗೆ ಯಾವದೊಂದು ಶಾಸನ ಮಾಡುವ ವಿಷಯವು ನ್ಯಾಯಮೂರ್ತಿಗಳ ಮುಂದೆ ಬಂತು. ಆಗ ಅವರು

ಈಗಿನ ಚಳವಳಿಯು ಶಾಂತವಾಗುವ ವರೆಗೆ ಇದರಲ್ಲಿ ಕೈ ಹಾಕತಕ್ಕದ್ದಲ್ಲೆಂದೂ, ಹಾಯಕೋರ್ಟಿನ ತಟಸ್ಥವಾಗಿರಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ವಕೀಲರ ಸನದಿನಂಥ ದೊಡ್ಡ ವಿಷಯವೇ ಮುಂದೆ ಬಿದ್ದಿರುವಾಗ, ಕೌನ್ಸಿಲಕ್ಕೆ ಬಹಿಷ್ಕಾರ ಹಾಕಬೇಕೆಂಬ ಸರ್ವಸಾಧಾರಣ ವಿಷಯದ ಬಗ್ಗೆ ಅವರು ಯಾವದು ಹೇಳದೆ, 'ತೂಷ್ಣೀಂಭಾವದಲ್ಲಿಯೇ ಉಳಿದಿರುವರೆಂದು ತರ್ಕಮಾಡಬಹುದು.

ಸರಕಾರದ ದರಬಾರದ ವಿಚಾರ ಹೇಗೇ ಆಗಲಿ: ಮಿ. ಮಾಳಗಿ ವಕೀಲರೊಬ್ಬರೇ ಲಿಂಗಾಯಿತರಲ್ಲ; ಅವರೊಬ್ಬರಿಗೇ ರಾಜನಿಷ್ಠೆಯ ಗುತ್ತಿಗೆ ಇರುವದಿಲ್ಲ. ಶ್ರೀ ಹಾವಣೆ ವಕೀಲರೂ ವೀರಶೈವರೇ ? ಅವರಿಗೇನೂ ರಾಜದ್ರೋಹ ಮಾಡಬೇಕಾಗಿಲ್ಲ. ರಾಜದ್ರೋಹ ಬೇರೆ; ಅನ್ಯಾಯದ ಮತ್ತು ಜನರಿಗೆ ಅಸಮ್ಮತವಾದ ಶಾಸನ ಮತ್ತು ವರ್ತನವನ್ನು ನಿಷೇಧಿಸುವದು ಬೇರೆ. ಕಾಯದೆ ಭಂಗದ ಚಳವಳಿಯಲ್ಲಂತೂ ರಾಜದ್ರೋಹವು ಇಣಕಿಹಾಕುವಂತಿಲ್ಲ. ಇಂಗ್ಲೀಷ ಸರಕಾರವನ್ನು ಒದ್ದು ಹಾಕಬೇಕೆಂದು ಚಳವಳಿಯು ಇರುವದೇ ಇಲ್ಲ. ಅನ್ಯಾಯದ ಕಾಯದೆಗಳು ರದ್ದಾಗಬೇಕು ಹಿಂದೀ ಪ್ರಜರಿಗೆ ವಿಶೇಷವಾದ ಸ್ವರಾಜ್ಯ, ಸ್ವಾತಂತ್ರ್ಯ ದೊರೆಯಬೇಕೆಂದು ಚಳವಳಿ ನಡೆಯುತ್ತದೆ. ಮಿ. ಮಾಳಗಿ ವಕೀಲರು ಕಾಂಗ್ರೆಸದ ಧ್ಯೇಯ, ಕಾಯದೆಭಂಗದ ನಿಮಿತ್ತ, ರಾಜೀನಾಮೆಯದ್ದರ ಕಾರಣ, ಇವೆಲ್ಲವನ್ನೂ ವಿಚಾರಪೂರ್ವಕವಾಗಿ ತಿಳಿಯದೆ, ಬರೀ ರಾಜನಿಷ್ಠೆಯ ಡಂಗುರ ಸಾರಿದ್ದು, ಚೇಳಿನ ಮಂತ್ರ ಬರದೆ ಹಾವಿನ ಗುದ್ದಿನಲ್ಲಿ ಕೈ ಹಾಕಿದಂತಿರುತ್ತದೆ.

ಶ್ರೀ ಠಕ್ಕರರಿಗೆ ಸಶ್ರಮ ಶಿಕ್ಷೆ

—— (೦) ——

ನಡಿಯಾದದ ಮ್ಯಾಜಿಸ್ಟ್ರೇಟರು ಶ್ರೀ ಅಮೃತಲಾಲ ಠಕ್ಕರರಿಗೆ ಆರುತಿಂಗಳ ಸಶ್ರಮ ಶಿಕ್ಷೆ ವಿಧಿಸಿ, ಬ ಕ್ಲಾಸ ಕೊಟ್ಟರು. ಎರಡೇ ನಿಮಿಷಗಳಲ್ಲಿ ವಿಚಾರಣೆ ಮುಗಿದು ಶಿಕ್ಷೆ ಹೇಳಲ್ಪಟ್ಟಿತು. ಅತ್ಯಂತ ಮವಾಳವಾದಂಥ ಸರ್ವಂಟ ಅಫ ಇಂಡಿಯಾ ಸೊಸಾಯಿಟಿಯ ಮೆಂಬರರಲ್ಲಿ ಒಬ್ಬರಿಗೆ ಶಿಕ್ಷೆಯಾದದ್ದು ಕೌತುಕವು. ಇವರು ಪಿಕೆಟಿಂಗ ಮಾಡಲಿಲ್ಲ; ಪಿಕೆಟಿಂಗಕ್ಕೆ ಉತ್ತೇಜನ ಕೊಡಲಿಲ್ಲ; ದೂರಿಂದ ನೋಡುತ್ತಾ ಮಾತ್ರ ನಿಂತಿದ್ದರು. ಆದರೆ ಇವರಿಗಾದ ಶಿಕ್ಷೆಯು ತೋಳ ಕುರಿ ಮರಿಯ ನ್ಯಾಯದಂತಾಯಿತು. ಪೋಲೀಸ ಮತ್ತು ಮ್ಯಾಜಿಸ್ಟ್ರೇಟರ ಮೇಲೆ ಟೀಕೆ ಮಾಡಿದ್ದಕ್ಕೆ ಈ ಫಲಭೋಗ ಉಂಡರು. ಇನ್ನಾದರೂ ಆ ಸೊಸಾಯಿಟಿಯವರು ಬುದ್ಧಿಗಲಿತರೆ ಸಾಕು.

ಕೊಲ್ಹಾಪೂರ ದರಬಾರದೊಳಗಿನ ಒಂದು ರಹಸ್ಯವು

— (೧) —

ಶಿರೋಳದ ಮಾಮಲೇದಾರರಾದ ಮಿ. ಡಿಗ್ರಜಕರರು ಕಚೇರಿಯಲ್ಲಿ ಕೂತಾಗ, ಪೋಲೀಸ ಇನ್ಸಪೇಕ್ಟರರಾದ ಮಿ. ತಾಶೆಯವರು ಅಕಸ್ಮಾತವಾಗಿ ಬಂದು, ಮಾಮಲೇದಾರರ ಮುಂದೆ ಒಂದು ಕಾಗದವಿಟ್ಟು ಹಿಂದಿರುಗಿದರು. ಕೂಡಲೆ ಮಾಮಲೇದಾರರು ಕಚೇರಿ ಬಿಟ್ಟು, ಹೊರಬಿದ್ದು, ಮನೆಗೆ ಹೋಗಿ, ಮೇಲಧಿಕಾರಿಗಳಿಗೆ ರಾಜೀನಾಮೆ ಪತ್ರ ಬರೆದು, ಗಂಟುಗದಡಿ ಕಟ್ಟಿಕೊಂಡವರೇ ಹೆಂಡರು ಮಕ್ಕಳ ಸಹಿತ ಕೊಲ್ಹಾಪೂರ ಪ್ರಾಂತ ಬಿಟ್ಟು, ಸಾಂಗಲಿಗೆ ಹೊರಟು ಹೋದರು. ಈ ಪ್ರಕಾರದ ರಜೆ, ಸಸ್ಪೆಂಡ ಮತ್ತು ಬರತರ್ಫಗಳು ಈ ವರ್ಷ ಪ್ರಕರಣದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ನಡೆದವು. ಮಿ. ಡಿಗ್ರಜಕರರಿಗೆ ಅಂಥ ಯಾವ ಆಪತ್ತು ಬಂದು, ಅವರನ್ನು ಸ್ಥಾನಭ್ರಷ್ಟ ಮಾಡಿತೆಂಬುದು ರಹಸ್ಯವಾಗಿದೆ.

ಕರ್ನಾಟಕದಲ್ಲಿ ಮೊದಲನೆಯ ಸಾರೆ ಹೆಣ್ಣುಮಗಳ ದಸ್ತಗಿರಿ

—)(೦)(—

ಅಥಣಿ ತಾಲೂಕಿನಲ್ಲಿ ಅರಟಾಳ, ಬಾಡಿಗಿ ಮುಂತಾದ ಗ್ರಾಮಗಳಲ್ಲಿ ಸೇಂದಿ ವೃಕ್ಷ ನಾಶ ಮಾಡಲು ಶ್ರೀ. ಕಳಮರಿಯವರ ಮುಂದಾಳುತ್ವದಲ್ಲಿ ಸ್ವಯಂಸೇವಕ, ಸೇವಿಕೆಯರ ಪಥಕ ಹೋಯಿತು. ಪೋಲೀಸರು ಐವರು ಸ್ವಯಂಸೇವಕರನ್ನ ಸ್ವಯಂಸೇವಿಕೆ ಶ್ರೀ|| ಸೌ|| ಬಳಗಾರ ಅಂಬಾಬಾಯಿಯವರನ್ನೂ ಹಿಡಿದಿದ್ದಾರೆ.

ಬಂಕಾಪೂರದಂತೆ ಮುರಗೋಡ ಮಹಾಲಿನಲ್ಲಿ ಸೇಂದೀ ಗಿಡಗಳ ಧ್ವಂಸ

ಮುರಗೋಡ, ಬೈಲಹೊಂಗಲ, ಸಂಗೊಳ್ಳಿ ಹಡಬಿ ಮತ್ತು ನೇಸರ ಗ್ರಾಮಗಳ ಏಳು ನೂರು ಜನರು ಸೇಂದಿಯ ಬನದ ಮೇಲೆ ದಾಳಿಯಿಟ್ಟು ಎರಡು ಸಾವಿರ ಗಿಡಗಳ ಧ್ವಂಸ ಮಾಡಿದರು. ಪೋಲೀಸಸಾಹೇಬರು ನೂರು ಜನ ಪೋಲೀಸರೊಡನೆ ಹೋಗಿ ೫೦ ಜನರನ್ನು ಹಿಡಿದಿದ್ದಾರೆ

ಮಿರಜೆಯಲ್ಲಿ ಹಾಯಕೋರ್ಟನ್ನು ಸ್ಥಾಪಿಸುವ ಸಮಾರಂಭವಾಯಿತು. ಇಬ್ಬರು ಜಡ್ಜಿಗಳಾಗುವರು. ಶ್ರೀ. ಜೋಶಿಯವರು ಮುಖ್ಯ ಜಡ್ಜರಾಗಿದ್ದಾರೆ.

ವಿವಿಧ ವರ್ತಮಾನಗಳು

—— (೦) ——

ಅಮೇರಿಕೆಯ ಎಸ್ ಡಿ ಪದವಿಯಂಥ ಡಾಕ್ಟರರ ಪದವಿ ಪಡೆಯುವ ಶಿಕ್ಷಣ ಕೊಡಲು ಮಿಶನರಿಗಳು ೪೦ ಲಕ್ಷ ರೂಪಾಯಿ ವೆಚ್ಚ ಮಾಡಿ, ಒಂದು ಮೆಡಿಕಲ ಕಾಲೇಜ ಕಟ್ಟುವರು. ಮಿರಜೆಯ ಆಸ್ಪತ್ರಿಯನ್ನೇ ಬೆಳೆಯಿಸಬೇಕೆಂದಿದ್ದರು ಆದರೆ ಅದು ಮಧ್ಯಸ್ಥಾನವಿಲ್ಲದ್ದರಿಂದ ಅದನ್ನು ರದ್ದುಪಡಿಸಿದರು. ಇದೇ ಕೆಲಸಕ್ಕಾಗಿ ನೇಮಿಸಲ್ಪಟ್ಟ ಕಮಿಟಿ ಇಲ್ಲಿ ಕೆಲವರು ಬೇರೆ ಸ್ಥಳ ನೋಡುತ್ತಲಿದ್ದಾರೆ.

ಜ್ಞಾನಪ್ರಕಾಶವು ರಾ. ಬ. ಕಾಳೆಯವರಿಗೆ ಕೇಸರಿಯು ರಾ. ಬ. ಚಿತಳೆಯವರಿಗೆ ದಿವಾನಗಿರಿ ಕೊಡಬೇಕೆಂದು ಸೂಚಿಸುತ್ತವೆ.

ಕೊಲ್ಹಾಪೂರದಲ್ಲಿರುವ ಹಂಟರ ಪತ್ರಿಕೆ ೫೦೦೦ ರೂಪಾಯಿಗಳ ಜಾಮೀನು ಬೇಡಿದ್ದರಿಂದ ಆ ಪತ್ರ ಬಂದಾಯಿತು

ಸಾರವಾಡ —

ಕರ್ನಾಟಕ ಸತ್ಯಾಗ್ರಹದ ಚಳವಳಿಗೆ ಧನಸಹಾಯ ಮಾಡಿರುವ ಪುಸ್ತಕವನ್ನು ಸರಕಾರದವರು ಪ್ರೋಸ್ಕ್ರಾಯಿಬ ಮಾಡಿ, ಅದನ್ನು ಜಪ್ತ ಮಾಡಬೇಕೆಂದು ಹುಕುಮು ಹೊರಟಿರುತ್ತದೆ.

ನಿನ್ನಿನ ದಿವಸ ಸಾಯಂಕಾಲದಲ್ಲಿ [illegible] ಇಲ್ಲಿ ಶ್ರೀ. ಬೇಂದ್ರೆಯವರ ಉಪನ್ಯಾಸವಾಯಿತು.

ಧಾರವಾಡ ಜಿಲ್ಹಾದ ಮತದಾರರ ಆಭಾರವಂದನೆ.

— (೧) —

ಇದೇ ಸಪ್ಟಂಬರ ೧೮ನೇ ತಾರೀಖಿಗೆ ಆದ ಮುಂಬಯಿ ಕಾಯದೇ ಕೌನ್ಸಿಲ ಇಲೆಕ್ಷನ್ನದಲ್ಲಿ ನನಗೆ ಮತ ಕೊಟ್ಟು ನನ್ನನ್ನು ಆರಿಸಿ ಕೊಟ್ಟವರಿಗೆಲ್ಲರಿಗೂ ವ ನನಗೆ ಮತ ಕೊಡಲಿಕ್ಕೆ ಇಚ್ಛೆ ಇದ್ದು ಪ್ರಯತ್ನಪಟ್ಟವರಿಗೂ ವ ನನಗೆ ಈ ಕೆಲಸದಲ್ಲಿ ಇತರ ರೀತಿಯಿಂದ ಸಹಾಯ ಮಾಡಿದವರಿಗೆಲ್ಲರಿಗೂ ಪ್ರತಿಒಬ್ಬರಿಗೆ ಪತ್ರ ಬರೆಯುವದು ಅಶಕ್ಯವಿದ್ದ ಕಾರಣ ನಾನು ಈ ಜಾಹೀರ ವಂದನೆಯಿಂದ ಅವರ ಉಪಕಾರವನ್ನು ಸ್ಮರಿಸುತ್ತೇನೆ. ಪ್ರೀತಿ ಇರಲಿ.

ಧಾರವಾಡ
ತಾ|| ೨೫-೯-೩೦

ತಮ್ಮ
ವಿಶ್ವನಾಥ ನಾರಾಯಣ
ಜೋಗ.

ವಿವಿಧ ವಿಷಯಗಳು

——(೦)——

ಒಬ್ಬನು ಮುಲತಾನದ ಪೋಲೀಸ ಸ್ಟೇಶನದ ಮೇಲೆ ಬಾಂಬು ಚಲ್ಲಿದವನೇ ಪಲಾಯನ ಸೂತ್ರ ಹರಿಸಿದನು. ಸಬ್ ಇನ್ಸಪೇಕ್ಟರ ಮತ್ತು ಹೆಡ್ ಕಾನ್ಸಟೇಬಲ ಇವರು ಘಾಯವಾಗಿದ್ದಾರೆ.

ಕಳೆದ ಆಗಸ್ಟ ತಿಂಗಳಲ್ಲಿ ಹಿಂದುಸ್ಥಾನದ ಆಯಾತದ ವ್ಯಾಪಾರದಲ್ಲಿ ೯೧ ಲಕ್ಷ ಮತ್ತು ನಿರ್ಗತದ ವ್ಯಾಪಾರವು ಮೂರು ಕೋಟಿ ಐವತ್ತು ಲಕ್ಷದಷ್ಟು ಕಡಿಮೆಯಾಯಿತು.

ವ್ಯಾಪಾರ ಮಂದಿಯ ಮೂಲಕ ಹಿಂದುಸ್ಥಾನ ಸರಕಾರದ ಸ್ಟ್ಯಾಂಪುಗಳ ವ್ಯಾಪಾರದಲ್ಲಿ ೨೬,೪೩,೯೫೮ ರೂಪಾಯಿಯ ಡೊಗರು ಬಿದ್ದಿದೆ.

ಖಾದಿಯ ವ್ಯಾಪಾರವು ಹೆಚ್ಚಾಗಬೇಕೆಂದು ಲಖನೌದಲ್ಲಿ ಹೊಸದಾಗಿ ೧೨ ಅಂಗಡಿಗಳನ್ನು ತೆರೆದಿದ್ದಾರೆ. ಸ್ವಯಂಸೇವಕರು ಇವುಗಳ ಮುಂದೆ ಪಿಕೆಟಿಂಗ ನಡೆಸಿದ್ದಾರೆ.

ಗುಜರಾಥಕ್ಕೆ ಸೇರಿದ ಮಾತಾರ ತಾಲೂಕಿನ ರೈತರು ಸಭೆಮಾಡಿ, ಹಪ್ತೆ ಕೊಡಬಾರದೆಂದು ಠರಾವು ಮಾಡಿದ್ದಾರೆ.

ಗುಜರಾಥದಲ್ಲಿಯ ಖೇಡ ಜಿಲ್ಹೆಯ ಮಾಮಲೇದಾರರ ಕಮೀಟಿ ಕೂಡಿ ಅಕ್ಟೋಬರ ತಿಂಗಳ ೧೦ನೆಯ ತಾರೀಖಿನೊಳಗಾಗಿ ರೈತರು ಹಪ್ತೆ ಕೊಡಬೇಕೆಂಬ ನೋಟೀಸು ತೆಗೆಯಬೇಕೆಂದು ಗೊತ್ತು ಮಾಡಿಕೊಂಡಿದ್ದಾರೆ.

ಸರಕಾರೀ ತೀರ್ವೆಯ ಬಗ್ಗೆ ಹೆಚ್ಚಾಗಿ ಕೆಲಸ ಮಾಡಬೇಕಾದ್ದರಿಂದ, ಧಾರಾಸಾನದ ಉಪ್ಪಿನ ಕಾಯದೆಭಂಗದ ದಂಡಯಾತ್ರೆಯನ್ನು ಸದ್ಯ ರಹಿತ ಪಡಿಸಿದರು

ಶ್ರೀ. ಸೇನಗುಪ್ತರು ಪಂಡಿತ ಮೋತಿಲಾಲರನ್ನು ಕಾಣಲು ಮಸೂರಿಗೆ ಹೋಗಿ, ಅಲ್ಲಿಂದ ಲಖನೌದಲ್ಲಿ ಕೂಡುವ ಕಾಂಗ್ರೆಸದ ವರ್ಕಿಂಗ ಕಮೀಟಿಗೆ ಹೋಗುವರು. ರಾವುಂಡ ಟೇಬಲವು ತತ್ತರಿಸುವದೆಂದು ಇವರ ಮತವು.

ಠಾಣೆಯ ತುರಂಗದಲ್ಲಿ ಇಲಿ, ಹಾವುಗಳ ಭಯವಿರುತ್ತದೆಂದು ಈಗ ತಾನೆ ಬಿಟ್ಟುಬಂದ, ಪುಣೆಯ ಶ್ರೀ. ಭೋಪಟಕರವರು ಹೇಳುತ್ತಾರೆ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವದೇ ಬಣ್ಣದ ಸೆರಗು ಹೋಗುವ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿವಸಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವತ್ಹರ ತಮ್ಮ ಹೆಣ್ಣುಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಟಿಪ್ಪಣಿ:- ಈ ಔಷಧ [illegible] ಯಾವ [illegible] ೬ ಬೇಡಿಕೆಯನ್ನು [illegible]

ಧಾರವಾಡ-

ರಾ. ಬ. ಕಂಬಳಿಯವರು ತಮ್ಮ ಕೂಡ ವಿಲಾಯತಿಗೆ ಉಣಕಲ್ಲಿನ ಮಿ. ಚನ್ನಪ್ಪಗೌಡರನ್ನು ಕರಕೊಂಡು ಹೋಗುವರೆಂದು ವರ್ತಮಾನವುಂಟು. ಪ್ರತಿಯೊಬ್ಬನು ಒಬ್ಬ ಕಾರಕೂನ, ಒಬ್ಬ ಸ್ವಯಂಪಾಕಿ, ಮತ್ತು ಒಬ್ಬ ಪಟ್ಟೇವಾಲಾನನ್ನು ಕರಕೊಂಡು ಹೋಗುವಂತೆ, ಸರಕಾರದಿಂದ ತಿಳಿಸಲ್ಪಟ್ಟಿದೆ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಜಾಹೀರ ನೋಟೀಸು-

ಇಮಾರತಿ ಕಟ್ಟಿಗೆಗಳ ವಖಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಅಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತಿ ವ ಹೊನ್ನಿ ಹೆದ್ದಿ ವ ಕಿಸಂ ನಾಟುಗಳು

ಸಾಗವಾನಿ ಯಾಲ ವ ಸಾಗವಾನಿ (೬) ಫೂಟಿನ ಜವಳ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಜಂತಿ ವ ರೀಪು ವ ಶಿಲಿಂಗು ತೈಯಾರಿ ಸಿಗುತ್ತವೆ

ಇದರ ಹೊರ್ತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರೆದು ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರಿ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ್ಸ,
ಮಾರ್ಕೇಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ರವಿವಾರ ತಾರೀಖು ೨೮ನೇ ಸಪ್ಟಂಬರ ೧೯೩೦ (ಸಂಚಿಕೆ ೨೩೫

ಪತ್ತೆಯಿಲ್ಲ! ಜಠಾರರ ಹುಡುಗ!!

ನನ್ನ ಮಗಾ ಚಿ|| ಶ್ರೀನಾಥ ಉರ್ಫ ಬೇಬಿ ನಿನ್ನಿನ ದಿವಸ (ಗುರುವಾರ ತಾ|| ೨೫-೯-೩೦) ಮುಂಜಾನೆ ಅಜಮಾಸ ೭ ಗಂಟೆಗೆ ನಮ್ಮ ಮನೆಯಲ್ಲಿ ಯಾರಿಗೂ ಹೇಳದೆ ಮನಿ ಬಿಟ್ಟು ಹೋದವನು ಇನ್ನೂವರಿಗೂ ಪತ್ತೆ ಇಲ್ಲ. ಅವನ ವಯಸ್ಸು ೧೪ ವರ್ಷ ಇಂಗ್ರೇಜಿ ೫ನೇ ಇಯತ್ತೆಯಲ್ಲಿ ಸರಕಾರೀ ಹಾಯಸ್ಕೂಲಿನಲ್ಲಿ ವಿದ್ಯಾರ್ಥಿ. ಎತ್ತರಾ ಅಜಮಾಸು ೪ ಫೂಟು ೯ ಇಂಚು. ವರ್ಣ ಕೆಂಪು, ಉದ್ದ ಮೂಗ, ದೊಡ್ಡ ಕಣ್ಣು, ನಡುವಾತಳ ಬಾಂಧಾ, ತಲೆಯ ಮೇಲೆ ಕ್ರಾಪು ಮಾಡಿ ನೀಲಿ ಬಣ್ಣಾದ ಟೊಪ್ಪಿಗೆ ಬೂದೀ ಬಣ್ಣಾದ ಚಕ್ಕಿನ ಕೋಟು ತೊಟಗೊಂಡದ್ದು, ಧೋತರಾ ಉಟಗೊಂಡದ್ದು. ಕಾಲಲ್ಲಿ ಕೆರವು, ಸ್ವಭಾವ ಅತಿ ಸೌಮ್ಯ ಮಾತೃ ಭಾಷಾ ಮರಾಠಿ, ಕನ್ನಡ ಮಾತಾಡಲಿಕ್ಕೆ ಬರುತ್ತದೆ. ಮುಂಜಾನೆ ಮನಿ ಬಿಟ್ಟು ಹೋದನಂತರ ಗಾಂಧೀಚೌಕಿನ ಹತ್ತರ ಒಬ್ಬರಿಗೆ ಮತ್ತು ಕರ್ನಾಟಕ ಸೆಂಟ್ರಲ ಬ್ಯಾಂಕಿನ ಹತ್ತರ ಮತ್ತೊಬ್ಬರಿಗೆ ಅದೇ ವೇಳೆಯ ಸುಮಾರಕ್ಕೆ ಭೆಟ್ಟಿಯಾದನು. ಮಾರ್ಕೇಟ ಕಡಿಗೆ ಹೋಗುತ್ತಿದ್ದನು.

ಮುಂದೆ ೧೧ ಗಂಟೆ ಸುಮಾರಕ್ಕೆ ಮುನಸೂಫ ಕೋರ್ಟ ಮತ್ತು ಗೋಪಾಳಗಿರಿ ಬಂಗ್ಲೇದ ಕಾಂಪಾವುಂಡದ ಮಧ್ಯದ ಸುಮಾರದಲ್ಲಿ ಅವನ ಕ್ಲಾಸಿನಲ್ಲಿ ಒಬ್ಬ ವಿದ್ಯಾರ್ಥಿಗೆ ಹಾಯಸ್ಕೂಲ ದಾರಿಯಿಂದ ಹೋಗುವಾಗ ಭೆಟ್ಟಿಯಾದನು. ಮುಂದೆ ಅವನ ಪತ್ತೆ ಬಿಲಕೂಲ ಇಲ್ಲಾ. ಮನಿಯಲ್ಲಿ ಅವನಿಗೆ ಸಿಟ್ಟು ಸಿಗ್ಗರೆ ಯಾರೂ ಮಾಡಿಲ್ಲಾ. ಮತ್ತು ಮನೀ ಬಿಟ್ಟು ಹೇಳದೇ ಹೋಗುವದಕ್ಕೆ ಏನೂ ಕಾರಣವಿಲ್ಲಾ. ಮುಗ್ಧ ಸ್ವಭಾವದವನಿದ್ದರೂ ಒಳ್ಳೇ ತಿಳುವಳಿಕೆಯ ಹುಡುಗನು. ಪ್ರಕೃತಿ ನಿರೋಗಿ

ಸದರೀ ನಮ್ಮ ಹುಡುಗನನ್ನು ಯಾರಾದರೂ ಕಂಡಿದ್ದರೆ ದಯಮಾಡಿ ಕೆಳಗಿನ ನಮ್ಮ ಪತ್ತೆಕ್ಕೆ ತಿಳಿಸಬೇಕೆಂತಾ ವಿನಂತಿ ಅದೆ. ಮತ್ತು ಅವನನ್ನು ತಪಾಸ ಹಚ್ಚಿ ನಮ್ಮ ಕಡಿಗೆ ಕಳಿಸಿಕೊಟ್ಟರೆ ಅತ್ಯಂತ ಆಭಾರ ಮನ್ನಿಸುವದಲ್ಲದೆ ಯೋಗ್ಯ ಪಾರಿತೋಷಕವನ್ನು ಕೊಡಲಾಗುವದು.

ಧಾರವಾಡ
ಕರ್ನಾಟಕ ಪ್ರಿಂಟಿಂಗ ವರ್ಕ್ಸ
ಯಶವಂತ ಭಾಸ್ಕರ ಉರ್ಫ ಬಳವಂತರಾವ ಜಠಾರ.
೨೬-೯-೩೦

ರಾಷ್ಟ್ರೀಯ ಮಹಾಪುರುಷರ ತೇಜಸ್ವೀ ಭಾವಪಟಗಳು.

ರಾಷ್ಟ್ರೀಯ ಮಹಾಪುರುಷರಾದಂಥ ಮಹಾತ್ಮಾ ಗಾಂಧಿ, ಪಂಡಿತ ಮೋತಿಲಾಲ ನೆಹರು, ಪಂಡಿತ ಜವಾಹರಲಾಲ ನೆಹರು, ಡಾಕ್ಟರ ಹರ್ಡೀಕರ ಮತ್ತು ದೇವಿ ಸರೋಜಿನಿ ನಾಯಡು ಇವರ ಭಾವಪಟಗಳು ನಮ್ಮಲ್ಲಿ ಮಾರಾಟಕ್ಕೆ ದೊರೆಯುವವು. ಪ್ರತಿಯೊಂದು ಮನೆಯಲ್ಲಿ ಕನ್ನಡಿಯ ಕಟ್ಟಿನಲ್ಲಿ ಹಾಕಿ ಇಡಲು ಬರುವಂಥ ಆಕಾರದಲ್ಲಿ ಇವನ್ನು ಅಚ್ಚು ಹಾಕಿಸಿರುತ್ತೇವೆ. ಇವಲ್ಲದೆ ಇನ್ನೂ ಬೇರೆ ಮುಖಂಡರಾದ ಸಾಧು ದಿವಾಕರ ಶ್ರೀ ವಿಠ್ಠಲಭಾಯಿ ಮತ್ತು ವಲ್ಲಭಭಾಯಿ ಪಟೇಲ ಬಂಧುಗಳು ಇವರ ಪಟಗಳನ್ನು ಮಾಡಿಸುವ ಕೆಲಸ ನಡೆದಿದೆ. ಪ್ರತಿಯೊಂದರ ಬೆಲೆ ಅರ್ಧಾಣೆ **ಕೋಕ ಕೊಳ್ಳುವವರಿಗೆ ನೂರಕ್ಕೆ ಭರಪೂರ ಕಮೀಶನ ದೊರೆಯುವದು.**

ಜಿ. ವ್ಹಿ. ನವರತ್ನ,
ಶ್ರೀ. ಲಕ್ಷ್ಮೀವೆಂಕಟೇಶ ಸ್ಟೋರ್ಸ, ಮಾರ್ಕೇಟ ರೋಡ, ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ **ಆಕ್ಟ**
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರಹದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಳಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ನಾಗೀನೆಗಳನು [illegible] ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ವ್ಹಿ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೫ ಆಶ್ವೀಜ ಶುದ್ಧ ೬

ಕಾಂಗ್ರೆಸದ ಓರ್ವ ಮುಖಂಡರಿಂದ ಮಿ. ಮಾಳಗಿಯವರಿಗೊಂದು ಉಡುಗರೆ.

ಈಗಿನ ಕಾಂಗ್ರೆಸದ ಚಳವಳಿಯು ಬ್ರಿಟಿಶ ಸರಕಾರದ ಅಸ್ತಿತ್ವದ ವಿರುದ್ಧವಿಲ್ಲ: ಆ ಸರಕಾರದಿಂದ ಹೆಚ್ಚಿನ ರಾಜಕೀಯ ಸ್ವಾತಂತ್ರ್ಯ ಪಡೆಯುವದಕ್ಕಾಗಿರುತ್ತದೆಂದು ಈ ಮೊದಲು ಒರೆದಿದ್ದೇವೆ. ೧೯೨೨ರಲ್ಲಿ ಮಹಾತ್ಮರು ನಾನು ರಾಜದ್ರೋಹ ಮಾಡಿದ್ದೇನೆ. ಮತ್ತು ಮಾಡುತ್ತೇನೆಂದು ಕೋರ್ಟಿನಲ್ಲಿ ನಿರ್ಭಿಡೆಯಿಂದ ಸ್ಪಷ್ಟವಾದ ಜವಾಬು ಕೊಟ್ಟಿರುತ್ತಾರೆ. ಅವರು ಈಗ ಅಂಥ ನುಡಿಯನ್ನಾಡುವದಿಲ್ಲ. ಸರಕಾರಕ್ಕೆ ಹನ್ನೊಂದು ಸವಾಲು ಹಾಕಿದ್ದಾರಲ್ಲದೆ, ಯಾವತ್ತೂ ರಾಜ್ಯಕಾರಭಾರವನ್ನು ಹಿಂದುಸ್ಥಾನಕ್ಕೆ ಒಪ್ಪಿಸಿ ಗುಡಚೇಪೆ ಕಟ್ಟಿ, ಸ್ವದೇಶಕ್ಕೆ ಹೋಗಿರೆಂದು ಹೇಳಿರುವದಿಲ್ಲ. ಹಿಂದುಸ್ಥಾನವು ರಾಜದ್ರೋಹವೇ ಮಾಡಬೇಕಾಗಿದ್ದರೆ ಲಾರ್ಡ ಆಯರ್ವಿನಸಾಹೇಬರು ಒಡಂಬಡಿಕೆಗೆ ಅನುಮತಿ ಕೊಡುತ್ತಿದ್ದಿಲ್ಲ. ಕಾಂಗ್ರೆಸದವರು ರಾಉಂಡ ಟೇಬಲಕ್ಕೆ ಬರಲೆಂದು ಅದರ ತಾರೀಖನ್ನು ಪುನಃ ಪುನಃ ಮುಂದೆ ಹಾಕುತ್ತಿದ್ದಿಲ್ಲ. ಇವೆಲ್ಲ ಸಂಗತಿಗಳನ್ನು ನೋಡಲಾಗಿ ಇವರ ರಾಜನಿಷ್ಠೆಗೆ ಹೆದರಿಕೆ ಬೆದರಿಕೆ ಬರುವಂಥ ಕಾರ್ಯಕ್ರಮವು ಕಾಂಗ್ರೆಸದಲ್ಲಿರುವದಿಲ್ಲೆಂದು ಸ್ಪಷ್ಟವಾಗುತ್ತದೆ.

ಕಲಕತ್ತೆಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಸುಭಾಷಚಂದ್ರ ಬೋಸರು ಈಗ ತಾನೆ ತುರಂಗ ಬಿಟ್ಟು ಬಂದಿದ್ದಾರೆ. ತುರಂಗದಲ್ಲಿರುವಾಗಲೇ ಒಂದು ತಿಂಗಳ ಹಿಂದೆ ಇವರು ಆ ಶ್ರೇಷ್ಠ ನಗರದ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇಂಥ ಮಹಾಭಾಗ್ಯವು ಕ್ವಚಿತ ಜನರಿಗೆ ಬರುವದು. ಇವರು ಬಿಡುಗಡೆಯಾದ ದಿವಸವೇ ಸಾಯಂಕಾಲದಲ್ಲಿ ಮ್ಯುನಿಸಿಪಾಲಿಟಿಗೆ ಹೋಗಿ, ಅಧ್ಯಕ್ಷಪದಾರೂಢರಾದರು. ಸ್ನೇಹಿ ಜನರೆಲ್ಲ ಕವಾಯತ ಕೂಡಿ, ಎಲ್ಲ ಮೆಂಬರರು ಜಯಘೋಷಿಸಿದ್ದರು. ಆಗ ಶ್ರೀ ಸುಭಾಷರು ಮಾತಾಡಿದ್ದೇನೆಂದರೆ-

ಇಂಗ್ಲಿಷರ ಕೂಡ ಹೊಡೆದಾಟವೇ ದೇಶಕ್ಕೆ ಅಂಥ ಮಹತ್ವದ ಕಾರಣವಿರುತ್ತದೆಂದು ನಾನು ತಿಳಿಯುವದಿಲ್ಲ. ಜಗತ್ತು, ಇಂಗ್ಲಂಡ ಮತ್ತು ಹಿಂದುಸ್ಥಾನದ ಯೋಗಕ್ಷೇಮ ನೋಡಿಕೊಳ್ಳುವದು ದೊಡ್ಡದಾಗಿದೆ. ನಾವು ಇಂಗ್ಲಿಷರ ಕೂಡ ಸ್ವತಂತ್ರ ಮತ್ತು ಸ್ನೇಹಿತವಾಗಿಂಬೇಕೆಂದು ಅಪೇಕ್ಷಿಸುತ್ತೇವೆ. ಇಂಗ್ಲಿಷರಾದರೂ ಹಿಂದುಸ್ಥಾನದ ಬೇಡಿಕೆ ಕೋರಿಕೆಯನ್ನು ಪ್ರಾಮಾಣಿಕ ಬುದ್ಧಿಯಿಂದಲೇ ನೋಡುವರೆಂದು ತಿಳಿಯುತ್ತೇನೆ. ಹಿಂದುಸ್ಥಾನಕ್ಕೆ ಮತ ಸ್ವಾತಂತ್ರ್ಯ ದೊರೆದು, ಭೂಮಂಡಲದ ತುಂಬ ಸುಖಶಾಂತಿಯು ನೆಲೆಗೊಳ್ಳಲೆಂದು ಆಶಿಸುತ್ತೇನೆ. ಹಿಂದುಸ್ಥಾನವು ಸ್ವಾತಂತ್ರ್ಯ ಹೊಂದಿದ ಹೊರ್ತು, ಜಗತ್ತಿನಲ್ಲಿ ಶಾಂತತೆಯುಂಟಾಗಲಾರದೆಂದೂ ಹೇಳುತ್ತೇನೆ.

ಕಾಂಗ್ರೆಸದ ಓರ್ವ ಮುಖಂಡರಾದಂಥ ಶ್ರೀ ಸುಭಾಷಚಂದ್ರ ಬೋಸರಲ್ಲಿ ಎಳ್ಳಷ್ಟಾದರೂ ರಾಜದ್ರೋಹ ಕಾಣಿಸುವದೇನೆಂಬದನ್ನು ಮಿ. ಮಾಳಗಿಯವರು ಹೇಳಲಿ; ಒಟ್ಟಿನಿಂದ ದೇಶದ ಪರಿಸ್ಥಿತಿಯನ್ನರಿಯದೆ, ವ್ಯರ್ಥವಾಗಿ ರಾಜದ್ರೋಹ ಮತ್ತು ರಾಜನಿಷ್ಠೆಯ ಹೂಳೆಬ್ಬಿಸಬಾರದೆಂದು ಇವರಿಗೆ ಅತ್ಯಗತ್ಯವಾಗಿ ಸೂಚಿಸುತ್ತೇವೆ.

ಶಿದ್ದಾಪೂರ ಮತ್ತು ಹಳಿಯಾಳದಲ್ಲಿ ಪೋಲೀಸರ ಲಾಠೀ ರಾಜ್ಯ

—(೧)—

ಶಿರಸಿ ಸಿದ್ದಾಪೂರ ತಾಲೂಕುಗಳಲ್ಲಿ ಜಂಗಲ ಕಾಯದೆಭಂಗ ನಡೆದಿದ್ದು, ಈ ಬಗ್ಗೆ ಪೋಲೀಸ ವ್ಯವಸ್ಥೆಯಿಂದ ಲಾಠೀರಾಜ್ಯ ಪ್ರಾರಂಭವಾಗಿದೆ. ಹಳಿಯಾಳದಲ್ಲಿ ಇಬ್ಬರು ತರುಣರು ಜಂಗಲ ಸತ್ಯಾಗ್ರಹಕ್ಕೆ ಹೋಗಲು ಪೋಲೀಸರು ಇವರನ್ನು ಹಿಡಿದರು. ಇವರನ್ನು ನೋಡಲಿಕ್ಕೆ ಹೋದಂಥ ಜನರ ಮೇಲೆ ಲಾಠೀ ರಾಜ್ಯ ಪ್ರಾರಂಭಿಸಿದ್ದಲ್ಲದೆ, ಲಾಯಬ್ರರಿಯಲ್ಲಿ ಕೂತ ಜನರ ಕಣಕವನ್ನು ಮೆತ್ತಗೆ ಮಾಡಿದರು. ಬಚ್ಚೆಗಳಿಗೂ ವರ್ತಮಾನಪತ್ರ ಹಚ್ಚುವ ದೋರ್ಗಿಗೂ ಲಾಠಿಯ ಪ್ರಸಾದ ಕೊಟ್ಟರು.

ಶಿದ್ದಾಪೂರದಲ್ಲಿ ತಾಲೂಕ ಲೋಕಲಬೋರ್ಡಿನ ಈರ್ವರು ಮೆಂಬರರಾದ ಶ್ರೀ. ಗಣಪಭಟ್ಟ ತಿಮ್ಮಣಭಟ್ಟ ಮತ್ತು ಶ್ರೀ ಸುಬ್ರಾಯ ಕೃಷ್ಣಯ್ಯಾ ಹೆಗಡೆ ಇವರನ್ನು ಜಂಗಲ ಕಾಯದೆಭಂಗದ ದೆಸೆಯಿಂದಲೇ ಹಿಡಿದು, ಕೈಗೆ ಬೇಡೀ ಹಾಕಿ, ರಟ್ಟೆಗೆ ಹಗ್ಗ ಹಚ್ಚಿದರು. ಇವರನು ಸಾಗ ಕಳಿಸಲಿಕ್ಕೆ ಹೋದಂಥವರ ಮೇಲೆ ಲಾಠೀ ಪ್ರಯೋಗ ಮಾಡಿದರು. ಲಾಠಿಯಿಂದ ಸುಮಾರು ೩೦ ಜನರು ಪೆಟ್ಟು ತಿಂದರು. ಒಬ್ಬನಂತೂ ಎಚ್ಚರದಪ್ಪಿ ಬಿದ್ದನು. ಪೋಲೀಸ ಲಾಠಿಯು ದೀವಟಿಗೆಯ ಮಾವನನ್ನೂ ಬಿಡಲಿಲ್ಲ.

ಮುಂಡರಗಿಯ ಸಬ್ ರಜಿಸ್ಟರರ ಉದ್ಧಟತನವು.

—(-)—

ಮುಂಡರಗಿಯಲ್ಲಿ ಮಹಾಲಕರಿಯಾಗಿದ್ದು ಈಗ ರತ್ನಾಗಿರಿಯ ಮಾಮಲತಿಗೆ ವರ್ಗಾಗಿರುವ ಶ್ರೀ. ರಾಮಾಚಾರ್ಯ ಗುತ್ತಲ ಇವರು ಅಲ್ಲಿ ಕೆಲಸ ಮಾಡಲಿಕ್ಕೆ ಹತ್ತಿ ಎಂಟು ತಿಂಗಳಾಯಿತು. ಇವರು ಹೋದಂಥ ಎಲ್ಲ ಸ್ಥಳಗಳಲ್ಲಿಯೂ ಲೋಕಪ್ರಿಯರಾದಂತೆ ಅಲ್ಲಿಯೂ ಆಗಿರುವರು. ಇವರಿಂದ ತಮ್ಮೂರಿಗೆ ಮತ್ತು ದೇಶಕ್ಕೆ ಆದ ಉಪಕಾರದ ದೆಸೆಯಿಂದ ಇವರಿಗಾಗಿ ಪ್ರಮುಖ ಜನರು ವೀಳೆಯ ಸಮಾರಂಭ ಮಾಡಿದರು. ಇದಕ್ಕೆ ಬರಬೇಕೆಂದು ಆಮಂತ್ರಣ ಕೊಡುವದಕ್ಕಾಗಿ, ಅಲ್ಲಿಯ ಮುಳಗಳ್ಳಿ ಕಮೇಟಿಯ ಕಾರ್ಯದರ್ಶಿಯಾದ ಶ್ರೀ. ಜೆ. ಎನ್. ದೀಕ್ಷಿತರವರು ಸಬ್ ರಜಿಸ್ಟ್ರರರಾದ ಮಿ. ದೇಸಾಯಿಯವರನ್ನು ಕರೆಯಲಿಕ್ಕೆಂದು ಅವರ ಆಫೀಸಿಗೆ ಹೋದರು. ಮಿ. ದೇಸಾಯಿಯವರು ಸೌಜನ್ಯಶೀಲತೆಯಿಂದ ಆಮಂತ್ರಣ ಸ್ವೀಕರಿಸಬಹುದಾಗಿತ್ತು. ಅಥವಾ ಕೆಲಸ ಬಹಳವಿರುವದರಿಂದ ಬರುವದಾಗುವದಿಲ್ಲೆಂದು ಹೇಳಬಹುದಾಗಿತ್ತು. ಹಾಗೆ ಮಾಡದೆ ಶ್ರೀ. ದೀಕ್ಷಿತರನ್ನು ಬೂಟಗಾಲಿನಿಂದ ಒದ್ದು, ದಂಡು ಹಿಡಿದು ಆಫೀಸಿನಿಂದ ಹೊರಗೆ ನೂಕಿದರು. ಶ್ರೀ. ದೀಕ್ಷಿತರು ಈ ಅಪಮಾನವು ತಮ್ಮದಲ್ಲ. ತಾಲೂಕಿನ ಸಮಾರಂಭ ಮಾಡಿಸಿದವರೆಲ್ಲರದೂ ಇರುತ್ತದೆಂದು ಭಾವಿಸಿ, ನಡೆದ ಸಂಗತಿಯನ್ನು ವಿವರವಾಗಿ ಸಮಾರಂಭದಲ್ಲಿ ಹೇಳಿದರು. ಸಮಾರಂಭಕ್ಕೆ ನೆರೆದ ನೂರಾರು ಜನರಿಗೆ ಬೇವು ಬೆಲ್ಲ ಸವಿದಂತಾಯಿತು. ಅತ್ಯಂತವಾಗಿ ವಿಷಾದಪಟ್ಟು, ಸರ್ವಾನುಮತದಿಂದ ಮುಂದೆ ಕೊಟ್ಟಂತೆ ಠರಾವು ಪಾಸಮಾಡಿದ್ದಾರೆ.

ಆವತ್ತಿನ ಮೀಟಿಂಗಕ್ಕೆ ಮಿ. ದೇಸಾಯಿ ಸಬ್ ರಜಿಸ್ಟ್ರಾರ ಮುಂಡರಗಿ ಇವರನ್ನು ಕರೆಯಲಿಕ್ಕೆ ಮಿ. ದೀಕ್ಷಿತ ಸೇಕ್ರೆಟರಿ ಕ್ರಾಮಗಾಂವ ಇವರು ಹೋದಾಗ್ಗೆ, ಬೂಟಗಾಲಿನಿಂದ ಒದ್ದು, ಅವಮಾನಗೊಳಿಸಿದ್ದಕ್ಕೆ ಈ ಕಮಿಟಿಯು ಪೂರ್ಣ ನಿಷೇಧಿಸುತ್ತದೆ. ಈ ಠರಾವಿನ ನಕಲು ವರಿಷ್ಠ ಅಧಿಕಾರಿಗಳ ಕಡೆಗೆ ಕಳಿಸುವ ತಜವೀಜು ಮಾಡಬೇಕೆಂದು ಸೂಚಿಸುತ್ತದೆ

ಸಭೆಯಲ್ಲಿ ಈ ವೇಳೆಗೆ [illegible]

ಶ್ರೀ. ದೇಸಾಯಿಯವರ ಉದ್ಘಟಕನದ ವಿಷಯದ ಬಗ್ಗೆ ಎಂ. ದೀಕ್ಷಿತರವರು ಮುಂದರಗಿಯ ಪೋಲೀಸಪಾಟೀಲರ ಕಡೆಗೆ ಗ್ರಾಮ ಪೋಲೀಸ ಆಕ್ಟ ಕಲಮು ೧೪ನೆಯ ಪ್ರಕಾರ ಫಿರ್ಯಾದಿ ಮಾಡಿರುತ್ತಾರೆ. [illegible] ತುಂಬ ವಿಷಾದಕರವಾದ ಇದೇ ವಿಷಯದ ಚರ್ಚೆ ನಡೆದಿರುತ್ತದೆಂದು ಅಲ್ಲಿಂದ ವಿಜಯಕ್ಕೆ ಬಂದ ಸುದ್ದೀ ಪತ್ರದ ಸಾರಾಂಶವಾಗಿರುತ್ತದೆ.

ಪೋಲೀಸ ಅತ್ಯಾಚಾರ ನಿಜ
ಆದರೆ
ಇಂಥವರೇ ಆರೋಪಿ ಎಂದು
ಗೊತ್ತಾಗದು

—೦%೦—

ಸಿಂಧಪ್ರಾಂತಕ್ಕೆ ಸೇರಿದ ಸಕ್ಕರದಲ್ಲಿ ಹಿಂದೂಮುಸಲಮಾನ ದಂಗೆಯಾಯಿತು. ಆಗ ಪೋಲೀಸರು ನಡೆಸಿದ ಲಾಠೀರಾಜ್ಯದಲ್ಲಿ ಹಿಂದೂ ಜನರೇ ಬಹುವಾಗಿ ಘಾಸಿಯಾದರು. ಪೋಲೀಸ ಅತ್ಯಾಚಾರವು ಬಹಳ ಬೊಬ್ಬಾಟಕ್ಕೆ ಕಾರಣವಾಗಲು ಸರಕಾರದವರು ಈ ಬಗ್ಗೆ ವಿಚಾರ ಮಾಡಲು ಒಂದು ಕಮಿಟಿ ನೇಮಿಸಿದರು. ಆ ಕಮಿಟಿಯಲ್ಲಿ ಮ್ಯಾಜಿಸ್ಟ್ರೇಟ, ಡಿಪುಟಿ ಪೋಲೀಸಸಾಹೇಬ ಮತ್ತು ಖಾನಬಹಾದ್ದೂರ ಪೀರಬಕ್ಷ ಇವರು ಮೆಂಬರರಾಗಿದ್ದರು. ಇವರು ಮಾಡಿದ ವಿಚಾರಣೆಯಿಂದ ಹೊರಟ ತೀರ್ಪು

ಪೋಲೀಸರು ಲಾಠಿಯ ಉಪಯೋಗವನ್ನು ಹೆಚ್ಚಿಗೆ ಮಾಡಿದ್ದು ನಿಜ. ಆಗಿನ ಪರಿಸ್ಥಿತಿಯೇ ಹಾಗಿತ್ತು. ಹಿಂದೂಜನರು ಓಡಿಹೋಗುತ್ತಿದ್ದಾಗ, ಇವರು ಕಳ್ಳರಿರಬೇಕೆಂದು ಬಹುವಾಗಿ ಹೊಡೆಯಬೇಕಾಯಿತು. ಯಾರು ಹೊಡೆದರೆಂಬುದನ್ನು ಗುರ್ತಿಸಲಿಕ್ಕೆ ಬರುವಂತಿಲ್ಲ. ಎಂಬದು ಪೋಲೀಸರು ಪಾರಾದರು. ಹೊಡಿಸಿಕೊಂಡು ಸತ್ತವರು ಸತ್ತೇಹೋದರು

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಹುಕುಮು
ಬೇಕಾಯದೆಶೀರವಾಯಿತು

—(೦)—

ಕಾಣಪೂರದಲ್ಲಿ ಪೋಲೀಸ ಅತ್ಯಾಚಾರವನ್ನು ಕುರಿತು ವಿಚಾರ ಮಾಡಲಿಕ್ಕೆ ಹೋದ ಗೃಹಸ್ಥರನ್ನು ಅಲ್ಲಿಗೆ ಹೋಗಗೊಡದೆ, ಅವರನ್ನು ತುರಂಗಕ್ಕೆ ಕಳಿಸಿದಂತೆ; ಈ ಕೃತ್ಯವು ಬೇಕಾಯದೆಶೀರವಿರುತ್ತದೆಂದು ವಕೀಲ ಸಂಘದವರು ಅಪಮದಾದಿನ ಜಡ್ಜರ ಕಡೆಗೆ ಅರ್ಜೀ ಮಾಡಿದರು. ಇದರ ಪರಿಣಾಮವಾಗಿ, ಶಿಕ್ಷೆಯು ಬೇಕಾಯದೆಶೀರವಿದ್ದು, ಆರೋಪಿಗಳನ್ನು ಬಂಧಮುಕ್ತ ಮಾಡುವಂತೆ ಜಡ್ಜರು ಹಾಯಕೋರ್ಟಿಗೆ ಸಿಫಾರಸು ಮಾಡಿದ್ದಾರೆ.

ಶ್ರೀ. ಹರಕಾರೆಯವರಿಗೆ ಹುಚ್ಚು ಹಿಡಿದಿಲ್ಲ.

—(೦)—

ಶ್ರೀ. ಹರಕಾರೆಯವರು ಗಣಪತ್ಯುತ್ಸವದಲ್ಲಿ ಬಾಂಬಿನ ಮೀಮಾಂಸೆ ಮಾಡುವ ವ್ಯಾಖ್ಯಾನ ಕೊಡುವ ಕಾಲಕ್ಕೆ ಪೋಲೀಸರು ಅವರನ್ನು ಹಿಡಕೊಂಡು ಹೋದರಷ್ಟೇ; ಇವರ ಬುದ್ಧಿಗೆಟ್ಟು, ಹುಚ್ಚು ಹಿಡಿದಿರಬೇಕೆಂದು ಪೋಲಿಸ ಕಮೀಶನರು ಇವರ ತಲೆಯ ತಪಾಸಣೆ ಮಾಡಲು, ಇವರನ್ನು ಹುಚ್ಚರ ಆಸ್ಪತ್ರಿಗೆ ಕಳಿಸಿದರು. ಅಲ್ಲಿ ಡಾಕ್ಟರರು ೧೫ ದಿವಸಗಳ ತನಕ ಇವರ ಪ್ರಕೃತಿ, ಭಾಷಣ, ಅಂಗಭಾವ ನೋಡಿ, ಇವರು ಹುಚ್ಚರಲ್ಲೆಂದು ಸರ್ಟಿಫಿಕೇಟು ಕೊಟ್ಟಿದ್ದಾರೆ.

ಕನ್ನಡತಿಯಾದ ಮುಸಲಮಾನಳಾದ
ನಾರೀಮಣಿಯು.

—(೦)—

ಮುಂಬಯಿಯಲ್ಲಿ ಸತ್ಯಾಗ್ರಹಿಯಾಗಿ, ಕಾಂಗ್ರೆಸ ಪತ್ರಿಕೆಯ ಸಂಪಾದಿಕೆಯಾಗಿದ್ದ ಕುಮಾರಿ ದಿಲಯಿಷ ಸಯ್ಯದಳು ಕನ್ನಡತಿಯು. ತಂದೆ ತಾಯಿಗಳಿಬ್ಬರೂ ಕರ್ನಾಟಕಸ್ಥರು. ಇವಳಿಗೆ ಕನ್ನಡನಾಡಿನ ಅಭಿಮಾನವೂ ಉಂಟು. ಆದರೆ ಇವಳು ತಾನು ಮೊದಲು ಹಿಂದೂ ದೇಶವಾಸಿ, ಅನಂತರ ಪ್ರಾಂತ ಮತ್ತು ಕುಲವೆಂದು ಭಾವಿಸುವಳು. ಜಾತಿಗಳ ಕಲಹದಲ್ಲಿ ಎಂದೂ ಮನಸ್ಸು ಹಾಕುವದಿಲ್ಲ. ಮುಂಬಯಿಯಲ್ಲಿ ಕನ್ನಡಿಗರ ಕೂಟವೊಂದಷ್ಟೇ; ಅದರ ಕಾಂಗ್ರೆಸ ಕಮೀಟಿಯ ಮೆಂಬರರಲ್ಲಿ ಕೂಡು, ಭಾವಪಟವನ್ನು ತೆಗೆಯಿಸಲಿಕ್ಕೆ ಬರಬೇಕೆಂದು ಇವಳನ್ನು ಕರೆಯಲು- ನನಗೆ ಸದ್ಯ ಪ್ರಾಂತಾಭಿಮಾನ ಬೇಕಾಗಿಲ್ಲ; ದೇಶಾಭಿಮಾನ ಬೇಕು. ನಾನು ಮೊದಲು ಹಿಂದವಾಸಿ, ಬಳಿಕ ಮುಸಲಮಾನಳೆಂದು ಇವರಿಗೆ ಉತ್ತರ ಕೊಟ್ಟಳು. ಕಾಂಗ್ರೆಸ ಪತ್ರಿಕೆಯ ಸಂಪಾದಿಕೆಯಾಗುವದರಿಂದ ತುರಂಗವಾಸ ಬರುತ್ತದೆಂದು ಗೊತ್ತಾಗಿದ್ದರೂ, ಆನಂದದಿಂದ ಆ ಕೆಲಸವನ್ನು ಅಂಗೀಕರಿಸಿ, ಕಡೆಗೆ ಮೂರು ತಿಂಗಳ ಸಾದಾ ಶಿಕ್ಷೆಗೆ ಗುರಿಯಾದಳು.

ಪೋಲೀಸರು ಶೇಖಪುರವೆಂಬಲ್ಲಿಯ ಕಾಂಗ್ರೆಸ ಶಿಬಿರಕ್ಕೆ ಹೋಗಿ, ಅಲ್ಲಿ ಸ್ವಯಂಸೇವಕರ [illegible], ನಿಶಾನೆ, ಅಡಿಗೆಯ ಪಾತ್ರೆ, ಕಾಳು, ಹಿಟ್ಟು ಮೊದಲು ಮಾಡಿ, ಎಲ್ಲ ಪದಾರ್ಥಗಳನ್ನು ಜಪ್ತಿ ಮಾಡಿಕೊಂಡು ಹೋದರು.

ಶ್ರೀ. ಹಳ್ಳೀಕೇರಿಯವರಿಗೆ ಶಿಕ್ಷೆ.

ಶ್ರೀ. ಗುದ್ಲೆಪ್ಪಾ ಹಳ್ಳೀಕೇರಿ ಹಾವೇರಿ ಇವರಿಗೆ ನಿನ್ನಿನ ದಿವಸ ಮ. ಮೆಯರ ಸಾಹೇಬರು ಮೂರು ತಿಂಗಳ ಸಶ್ರಮ ಶಿಕ್ಷೆ ವಿಧಿಸಿದರು. ಶ್ರೀ. ಹಳ್ಳೀಕೇರಿಯವರು ವಿಚಾರಣೆಯಲ್ಲಿ ಭಾಗ ತಕ್ಕೊಳ್ಳಲಿಲ್ಲ. ಶಿಕ್ಷೆಯಾದ ಕೂಡಲೆ ನೆರೆದ ಜನರು ಇವರನ್ನು ಪುಷ್ಪಮಾಲೆಗಳಿಂದ ಸನ್ಮಾನಗೊಳಿಸಿ, ವಂದೇ ಮಾತರಮ ಘೋಷದಲ್ಲಿ ಇವರನ್ನು ತುರಂಗದ ತನಕ ಕಳುಹಿ ಹಿಂದಿರುಗಿದರು.

ರಾವುಂಡಟೇಬಲಿನವರು ಅವಸರ
ಮಾಡಬಾರದು

ರಾವುಂಡಟೇಬಲಕ್ಕೆ ಆಮಂತ್ರಣ ಬಂದ ಜನರು ಬಹುತೇಕವಾಗಿ ಅಕ್ಟೋಬರ ತಿಂಗಳ ೧೧ನೆಯ ತಾರೀಖಿನ ದಿವಸ ವಿಲಾಯತಿಯ ಯಾತ್ರೆಗೆ ಹೊರಡುವರು. ಟೇಬಲವು ಮುಂದೆ ಬೀಳುವ ಸಂಭವವಿರುವದರಿಂದ, ಇವರು ಅವಸರದಿಂದ ಹೊರಡುವ ಸಿದ್ಧತೆ ಮಾಡಬಾರದೆಂದು ತಿಳಿಸಲ್ಪಟ್ಟಂತೆ ವರ್ತಮಾನವಾಗಿದೆ. ಬಹುಶಃ ಪುನಃ ಕಾವಿಯ ಸಂಘಟನವಾಗಬೇಕೆಂದು ಸಿಮ್ಲಾದಲ್ಲಿ ದಟ್ಟ ವರ್ತಮಾನವಾಗಿದೆ.

ಪನವೇಲದಲ್ಲಿ ಭಯಂಕರ
ಗೋಳಿಬಾರು

ಕುಲಾಬಾ ಜಿಲ್ಹೆಗೆ ಸೇರಿದ ಪನವೇಲದಿಂದ ೧೨ ಮೈಲುಗಳ ಮೇಲಿರುವ ಚಿರನೇರ ಗ್ರಾಮದಲ್ಲಿ ಜಂಗಲ ಕಾಯದೆಭಂಗದವರಿಗೂ ಪೋಲಿಸರಿಗೂ ಜಗಳ ಬಂದು, ಪೋಲಿಸರು ಜನರ ಮೇಲೆ ಗುಂಡು ಹಾಕಲು ೧೭ ಜನರು ಘಾಯವಾಗಿದ್ದಾರೆ. ಇದರಲ್ಲಿ ಕೆಲವರಿಗೆ ಅಂತ್ಯಾವಸ್ಥೆಯೊದಗಿಸುವಷ್ಟು ಘಾಯವಾಗಿರುವದು. ಈ ವರ್ತಮಾನ ಕೇಳಿ, ಮುಂಬಯಿಯ ಕಾಂಗ್ರೆಸ ಕಮಿಟಿಯವರು ಡಾಕ್ಟರ, ನರ್ಸ, [illegible] ಉಪಕರಣಗಳನ್ನು ಅಲ್ಲಿಂದ ಮೋಟಾರಗಳಿಂದ ಕಳಿಸಿದ್ದಾರೆ.

ಮಾಮಲೇದಾರ ಮಿ. ಜೋಶಿಯವರಿಗೆ ಪೆಟ್ಟು ಬಿದ್ದಿದ್ದು, ಅವರನ್ನು ಚಿಕಿತ್ಸೆಗಾಗಿ ಪನವೇಲದ ಸರಕಾರೀ ಆಸ್ಪತ್ರಿಗೆ ಕಳಿಸಿದ್ದಾರೆ.

ಡಾಕ್ಟರ ಹರ್ಡೀಕರರಿಗೆ ಜ್ವರೋಪದ್ರವ

ಡಾಕ್ಟರ ಹರ್ಡೀಕರರು ನಾಶಿಕ ತುರಂಗದಲ್ಲಿದ್ದು, ಅಲ್ಲಿ ಅವರಿಗೆ ಜ್ವರಬಾಧೆಯಾಗಿದೆ. ಅವರ ಮಿತ್ರಬಾಂಧವರು ಅಲ್ಲಿಗೆ ಇವರನ್ನು ಕಾಣಲಿಕ್ಕೆ ಹೋಗಿ ಬಂದರು. ರೋಗವು ಹೆದರುವಂತ ಹದ್ದಾಗಿರುವದಿಲ್ಲ. ಐದು ಪೌಂಡು ತೂಕ ಇಳಿದಿದೆ.

ಟ್ಟಿ ಮಂಟಪವನ್ನು ಬಹುವಾಗಿ ಶೃಂಗಾರ ಮಾಡಿದರು. ಬ್ಯಾಂಡು, ಬಜಂತ್ರಿ, ಬತ್ತಿ, ಬಹುವಾದ್ಯ ಘೋಷ ಸಮುದಾಯದೊಡನೆ ಮೆರವಣಿಗೆಯು ಹೊರಟಿತು. ದಾರಿಗುಂಟ ಜನರು ತಂಡತಂಡವಾಗಿ ಮೆರವಣಿಗೆ ನೋಡುತ್ತಾ ನಿಂತಿದ್ದರು. ಮುಂಗವು ಪೂರ್ವಜನ್ಮದಲ್ಲಿ ಸುಕೃತ ಮಾಡಿದ್ದೇವೆಂತಲೇ ಮರಣಕಾಲದಲ್ಲಿ ಇಂಥ ಮರ್ಯಾದೆ ಹೊಂದಿತು.

ನೋಟೀಸು

ತಾರೀಖು ೨೮-೯-೧೯೩೦ ಇಸ್ವಿ

ರಾ|| ರಾ|| ಜಂಗಲೀಸಾಬ ವಲ್ಲದ ಬುಡಾಬುದ್ದೀನಸಾಬ ಚಟೀಗಾರ ಸಾಕೀನ ಹಳೇಹುಬ್ಬಳ್ಳಿ (ಹಿರೇಪ್ಯಾಟಿ ಇವರಿಗೆ-

ಕೆಳಗೆ ಸಹಿ ಮಾಡಿದ ಅಡಿವೆಪ್ಪಾ ರುದ್ರಪ್ಪಾ ಬಾಳೀಕಾಯಿ ಸಾಕೀನ ಹಳೇಹುಬ್ಬಳ್ಳಿ ಈ ನೋಟೀಸಿನಿಂದಾ ತಿಳಿಸುವದೇನಂದರೆ-

ನೀನು ವ ಧರ್ಮಪ್ಪಾ ರಾಯಪ್ಪಾ ಶಿಂಗುಸ್ಪಿ ವ ಬಸಪ್ಪಾ ಮಲ್ಲಪ್ಪಾ ಹೊನ್ನಳ್ಳಿ ಇವರು ಕೂಡಿ ಖೋರ ಮನುಷ್ಯರಿದ್ದು ನೀವು ಅವ್ಯವಹಾರ ಕೆಲಸಗಳನ್ನು ಮಾಡುತ್ತಿದ್ದು ನನ್ನ ಮನೆಯಲ್ಲಿ ವೃದ್ಧರ ಗಂಡಸರು ಯಾರೂ ಇರುವದಿಲ್ಲಾದ್ದರಿಂದ ಹ್ಯಾಂಗೂ ನನ್ನ ಮನೆಯಲ್ಲಿ ನಾನು ವ ನನ್ನ ತಾಯಿ ಇಬ್ಬರೇ ಇರುತ್ತಿದ್ದು ನಮ್ಮ ತಾಯಿ ನನ್ನ ಸಂರಕ್ಷಣೆ ಮಾಡತಕ್ಕಳೆ ನನಗೆ ಉಪಜೀವನದ ಅಡಚಣಿ ವಗೈರೆ ಯೇನೂ ಇಲ್ಲ. ನಾನು ಯಾವತರದಿಂದಾನೂ ಸಾಲಾಮಾಡತಕ್ಕ ಅವಶ್ಯಕತೆಯಿಲ್ಲಾ. ಹೀಗಿದ್ದಾಗ್ಯೂ ನೀವು ಮೇಲೆ ಬರೆದ ಜನರ ಮುದ್ದತಿಯಿಂದಾ ನನಗೆ ಫಾಡ್ ವ ಇಸ್ಪೇಟ ವಗೈರೆ ಆಡುವದುಷ್ಚಟಗಳನ್ನು ಹಚ್ಚಿ ಸದರೀ ದುಷ್ಟಚಟದ ವ್ಯವಹಾರಗಳಲ್ಲಿ ಸಾಲಕೊಟ್ಟಂತೆ ತೋರಿಸಿ ನಾನು ಒಬ್ಬನೇ ನಿಮ್ಮ ಕೈಯಾಗ ಸಿಕ್ಕ ವೇಳೆಯಲ್ಲಿ ನನ್ನಿಂದಾ ಎರಡು ಕಾಗದಗಳನ್ನು ಬೇರೆ ಬೇರೆ ವ್ಯಾಳ್ಯಕ್ಕೆ ಬೆದರಿಕೆ ಹಾಕಿ ಬರಿಸಿಕೊಂಡಿರುತ್ತೀರಿ ಅವು ಯಾರ ಹೆಸರಿನ ಎಷ್ಟು ರೂಪಾಯಿಗೆ ಅವೆ ಅಂಬುವದು ಸಹಾ ನನಗೆ ಗೊತ್ತಿಲ್ಲಾ. ಇಂಥ ಅವ್ಯವಹಾರಿಕ ಸಾಲದ ಕಾಗದಗಳ ಮೇಲಿಂದಾ ನೀನು ನನಗೆ ಹಣಾ ಬೇಡಿ ವಿನಾಕಾರಣ ತ್ರಾಸುಕೊಡಹತ್ತಿರತೀರಿ ಕಾರಣಾ ಈ ನೋಟೀಸಿನಿಂದಾ ತಿಳಿಸುವದೇನಂದರೆ- ನನ್ನ ಕಡಿಂದಾ ಬರಿಸಿಕೊಂಡಂತೆ ರಚಿಸಿದ ಪ್ರಾಮೇಸರಿ ನೋಟ ವ ದಸ್ತಾವಿಜುಗಳು ಅವ್ಯವಹಾರಿಕ ಸಂಬಂಧಿ ಇದ್ದು ಅವು ಬೇಕಾಯದೇಶೀರ ಇರುವದರಿಂದ ಅವು ರದ್ದ ಇರತಕ್ಕವೆಂಬದು ತಿಳಿಯಬೇಕು. ಮತ್ತು ಸದರೀ ಕಾಗದಗಳನ್ನು ನನಗೆ ಪರತ ಮುಟ್ಟಿಸಬೇಕು. ಜರ ತಪ್ಪಿದರೆ ಅದರ ಬಗ್ಗೆ ನಿಮ್ಮ ಮೇಲೆ ಕಾಯದೇಶೀರ ಕೆಲಸ ನಡಿಸಲಾಗುವದು ತಿಳಿಯೋದು. ಈ ನೋಟೀಸಿನ ಖರ್ಚ ಸಹಿತಾ ನಿಮ್ಮ ತಲೆಯ ಮೇಲೆ ಅದೆ.

ಅಡಿವೆಪ್ಪಾ ಬಾಳೀಕಾಯಿ.

ಹೊರಡಿರಿ! ಮೈಸೂರಿಗೆ ಹೊರಡಿರಿ!!

ಕರ್ನಾಟಕ ಕುಲಪುರೋಹಿತರಾದ

ಶ್ರೀ. ಆಲೂರ ವೆಂಕಟರಾಯರು

ಸಾಹಿತ್ಯ ಭಾಂಡಾರವನ್ನೊಡೆವರು!!!

ಈ ಸಾರೆ ಮೈಸೂರಲ್ಲಿ ಸಾಳಿನ ಅಕ್ಟೋಬರ ೫ಕ್ಕೆ ನೆರೆವ ಕರ್ನಾಟಕ ಸಾಹಿತ್ಯಪರಿಷತ್ತಿನ ಅಧಿಪತ್ಯವು **ಶ್ರೀ. ಆಲೂರ ವೆಂಕಟರಾಯರ** ಕಯ್ಗೆ ಸೇರಿದುದು ಉತ್ತರ ಕರ್ನಾಟಕಕ್ಕೇ ಅಭಿಮಾನಾಸ್ಪದವಾದುದು. ಇಲ್ಲಿಯವರು ಇಂತಹ ಹೆಚ್ಚಳದ ಸಂಧಿಯನ್ನು ಕಳೆದುಕೊಳ್ಳಲಾಗದು. ಎಲ್ಲರೂ ತಂಡತಂಡವಾಗಿ ಮೈಸೂರಿಗೆ ಹೋಗಿ, ಶ್ರೀ. ವೆಂಕಟರಾಯರು ಸೂರೆ ಮಾಡುವ ಮುತ್ತುಗಳನ್ನು ಬಳಿದುಕೊಂಡು ಬರಬೇಕು. ಬಡಗಣನಾಡಿನ, ಸವಿಯಾದ ತಿಳಿಯಾದ ಇನಿದಾದ ಸಾಹಿತ್ಯಪ್ರವಾಹವನ್ನು ತೆಂಕಣಕ್ಕೆ ಹರಿಯಿಸಿರಿ; ಮೈಸೂರ ಬಂಧುಗಳನ್ನು ತಣಿಸಿರಿ. ಅಭಿಮಾನದ ಸೆಳವಿನಿಂದಲೂ ಹುರುಪಿನ ನಿನಾದದಿಂದಲೂ ರಾಷ್ಟ್ರಿಯಪ್ರೇಮಿಗಳ ಜನಸಂದಣಿ ಸಡಗರದಿಂದ ನಡೆಯಲಿ. ಏಳಿರೇಳಿರಿ; ಮೈಸೂರಿಗೆ ತೆರಳಿರಿ!!

ವಿಶೇಷ— ನಿಯೋಜಿತ ಅಧ್ಯಕ್ಷರಾದ ಶ್ರೀ. ಆಲೂರ ವೆಂಕಟರಾಯರು, ಕರ್ನಾಟಕದ ಹುಲಿ ಮುಂದಿನೇಡು ಕೃಷ್ಣರಾಯರು, ಗೆಳೆಯರ ಗುಂಪಿನವರು, ಕನ್ನಡಿಗರ ಕೂಟದವರು ಪರಿಷತ್ತಿಗಾಗಿ ಬರುವ ಅಕ್ಟೋಬರ ತಿಂಗಳ ೨ನೇ ತಾರೀಖಿನ ರಾತ್ರಿ ೨|| ಗಂಟೆಯ ಬಂಡಿಯಿಂದ ಹೊರಡುವರು. ಪ್ರತಿಯೊಬ್ಬನಿಗೆ ಸುಮಾರು ೨೦ ರೂಪಾಯಿ ವೆಚ್ಚ ಬರಬಹುದು. ಇಷ್ಟು ವೆಚ್ಚದಲ್ಲಿ ಬೆಂಗಳೂರು, ಮೈಸೂರು, ಕನ್ನಂಬಾಡಿ, ಶ್ರೀರಂಗಪಟ್ಟಣ ನಂಜನಗೂಡು ಈ ಮೊದಲಾದ ನಗರಗಳನ್ನು ನೋಡಿ ಬರಲಿಕ್ಕಾಗುವದು. ಆದುದರಿಂದ ಬರಲಿಚ್ಛಿಸುವವರು ಇದೇ ತಿಂಗಳ ೩೦ ನೇ ತಾರೀಖಿನ ರಾತ್ರಿ ೮ ಗಂಟೆಯೊಳಗಾಗಿ ರಾಷ್ಟ್ರೀಯವಾಚನಾಲಯದಲ್ಲಿ ಬಂದು ತಿಳಿಸಿದಲ್ಲಿ ಅವರ ಪ್ರವಾಸದ ಸೌಕರ್ಯವನ್ನು ಮಾಡಲಾಗುವದು.

ಧಾರವಾಡ
ಆಶ್ವಯುಜ ಶುಕ್ಲ ೫
ತಾ. ೨. ೨. ೨೫೫೫ }
ತವಿಸ್ಕೊಲವಿನ
ಕನ್ನಡಿಗರ ಕೂಟದ ಅಡಳತೆಗಾರ

ಮಹಾನವಮಿ ಉತ್ಸವ, ಧಾರವಾಡ.

೧೯೩೦

ಕಾರ್ಯಕ್ರಮ.

ಮಂಗಳವಾರ (೩೦-೯-೩೦) ದಿನ ಸ್ವದೇಶಿ ವಸ್ತ್ರಪ್ರದರ್ಶನವನ್ನು ಕೇವಲ ಸ್ತ್ರೀಯರಿಗಾಗಿ ಕಾದಿಡಲಾಗಿದೆ.

೨೮-೯-೩೦ ಕಾರ್ಯದರ್ಶಿ
ಧಾರವಾಡ

ಜಾಹೀರ ನೋಟೀಸು

ಇಮಾರತಿ ಕಟ್ಟಿಗೆಗಳ ವ್ಯಾಪಾರ

ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಮ್ಮ ಕಟಗಿ ಅಡ್ಡೆದಲ್ಲಿ ಇಮಾರತಿ ಸಾಗವಾನಿ ತೊಲಿಗಳೂ ಮತ್ತು ವ ಹೊನ್ನಿ ಹದ್ದಿ ವ ಕಿಸಂ ನಾಟುಗಳು

ಸಾಗವಾನಿ ಯಾಳಿ ವ ಸಾಗವಾನಿ (೬) ಪೂಟಿನ ಚವಕ್ಕ ತುಂಡುಗಳು

ಸಾಗವಾನಿ ಕೊರೆದ ಹಲಗಿಗಳು ವ ಬಂತಿ ವ ರೀಪು ವ ಕಿಲಿಂಗು ತೈಯಾರ ಸಿಗುತ್ತವೆ.

ಇದರ ಹೊರತಾಗಿ ಬೇಕಾದವರು ತಮ್ಮ ಆರ್ಡರ ಕೊಟ್ಟರೆ ಯೋಗ್ಯ ದರದಿಂದಾ ಕೊರತಿ ಕೊಡುತ್ತೇವೆ

ಮತ್ತು ಚಿಲ್ಲರ ಫರನೀಚರ ಕೆಲಸ ಮಾಡುವರಿಗೆ ತಯಾರ ಸಿಗುತ್ತವೆ.

ಮಲ್ಲಪ್ಪಾ ಗುರಪ್ಪಾ ಗೋಡಿಕಟ್ಟಿ
ಟಿಂಬರ ಮರ್ಚಂಟ,
ಮಾರ್ಕೇಟ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨ ಧಾರವಾಡ ಸೋಮವಾರ ತಾರೀಖು ೨೯ನೇ ಸಪ್ಟಂಬರ ೧೯೩೦ (ಸಂಚಿಕೆ ೨೧

ಪತ್ತೆಯಿಲ್ಲ! ಜತಾರರ ಹುಡುಗ!!

ಮುಂಬಯಿಯಲ್ಲಿ ಸತ್ಯಾಗ್ರಹಿಯಾಗಿ, ಕಾಂಗ್ರೆಸ ಪತ್ರಿಕೆಯ ಸಂಪಾದಿಕೆಯಾಗಿದ್ದ ಕುಮಾರಿ ದಿಲಖುಷ ಸಯ್ಯದಳು ಕನ್ನಡತಿಯು. ತಂದೆ ತಾಯಿಗಳಿಬ್ಬರೂ ಕರ್ನಾಟಕಸ್ಥರು. ಅವಳಿಗೆ ಕನ್ನಡ ನಾಡಿನ ಅಭಿಮಾನವೂ ಉಂಟು. ಆದರೆ ಇವಳು ಕಡಸ, ಮೊದಲು ಹಿಂದೂ ದೇಶವಾಸಿ, ಆನಂತರ ಪ್ರಾಂತ ಮತ್ತು ಕುಲವೆಂದು ಭಾವಿಸುವವಳು. ಜಾತಿಗಳ ಕಲಹದಲ್ಲಿ ಎಂದೂ ಮನಸ್ಸು ಹಾಕುವದಿಲ್ಲ. ಮುಂಬಯಿಯಲ್ಲಿ ಕನ್ನಡಿಗರ ಕೂಟವೊಂದಷ್ಟೇ, ಆದರೆ ಕಾಂಗ್ರೆಸ ಕಮಿಟಿಯ ಮೆಂಬರರಲ್ಲಿ ಕೂಡ, ಭಾವಸಾಟವನ್ನು [illegible] ಬಬೆ [illegible] ನನಗ ಸದ್ಯ ಪ್ರಾಂತ ಬೇಕಾಗಿಲ್ಲ, ದೇಶ ಬಿಮಾನ ಬೇಕು ನಾನು ಮೊದಲು ಹಿಂದವಾಳೆ, ಬಳಿಕ ಮುಸಲ್ಮಾನಳೆಂದು ಅವರಿಗೆ ಉತ್ತರ ಕೊಟ್ಟಳು. ಕಾಂಗ್ರೆಸ ಪತ್ರಿಕೆಯ ಸಂಪಾದಿಕೆಯಾಗುವದರಿಂದ ತುರಂಗವಾಸ ಬರುತ್ತದೆಂದು ಗೊತ್ತಾಗಿದ್ದರೂ, ಸಂಪಾದಿಕೆಯ ಆ ಕೆಲಸವನ್ನು ಅಂಗೀಕರಿಸಿ, ಕಡೆಗೆ ಮೂರು ತಿಂಗಳ ಸಾದಾ ಶಿಕ್ಷೆಗೆ ಗುರಿಯಾದಳು.

***

ರಾವುಂಡಟೇಬಲಿನವರು ಅವಸರ
ಮಾಡಬಾರದು

ರಾವುಂಡಟೇಬಲಕ್ಕೆ ಆಮಂತ್ರಣ ಬಂದ ಜನರು ಬಹುತೇಕವಾಗಿ ಅಕ್ಟೋಬರ ತಿಂಗಳ ೧೧ನೆಯ ತಾರೀಖಿನ ದಿವಸ ವಿಲಾಯತಿಯ ಯಾತ್ರೆಗೆ ಹೊರಡುವರು. ಟೇಬಲವು ಮುಂದೆ ಬೀಳುವ ಸಂಭವವಿರುವದರಿಂದ, ಇವರು ಅವಸರದಿಂದ ಹೊರಡುವ ಸಿದ್ಧತೆ ಮಾಡಬಾರದೆಂದು ತಿಳಿಸಲ್ಪಟ್ಟಂತೆ ವರ್ತಮಾನವಾಗಿದೆ. ಬಹುಶಃ ಪ್ರ[illegible] ರಾಜೆಯ ಸಂಧಾನವಿರಬೇಕೆಂದು ಸಿಮ್ಲಾದಲ್ಲಿ ದಟ್ಟ ವರ್ತಮಾನವಾಗಿದೆ

***

ಕೊಲ್ಹಾಪೂರ ದರಬಾರದೊಳಗಿನ
ಒಂದು ರಹಸ್ಯವು

ತಿರೋಳದ ಮಾಮಲೇದಾರರಾದ ಎಂ. ಡಿಗ್ರಜಕರರು ಕಚೇರಿಯಲ್ಲಿ ಕೂತಾಗ, ಪೋಲಿಸ ಇನ್ಸ್‌ಪೇಕ್ಟರರಾದ ಎಂ. [illegible] ಅಕಸ್ಮಾತವಾಗಿ ಒಂದು, ಮಾಮಲೇದಾರರ ಮುಂದೆ ಒಂದು ಕಾಗದವಿಟ್ಟು ಹಿಂತಿರುಗಿದರು. ಕೂಡಲೆ ಮಾಮಲೇದಾರರು ಕಚೇರಿ ಬಿಟ್ಟು, ಹೊರಬಿದ್ದು, ಮನೆಗೆ ಹೋಗಿ, ಮೇಲಧಿಕಾರಿಗಳಿಗೆ ರಾಜಿನಾಮೆ ಪತ್ರ ಬರೆದು, ಗಂಟುಗದಡಿ ಕಟ್ಟಿಕೊಂಡವರೇ ಹೆಂಡರು ಮಕ್ಕಳು ಸಹಿತ ಕೊಲ್ಹಾಪೂರ ಪ್ರಾಂತ ಬಿಟ್ಟು, ಸಾಂಗ್ಲಿಗೆ ಹೊರಟು ಹೋದರು. ಈ ಪ್ರಕಾರವು ೧೮ನೇ ಸಪ್ಟಂಬರ ಮತ್ತು ಬರಪೋರ್ಟಗಳು ಕೊಡುವ ಪ್ರಕಾರ ಇದರಲ್ಲಿ ಮರಾಠರು ಮತ್ತು ಕರ್ನಾಟಕದಲ್ಲಿ ನಡದದ್ದು ಎಂ. ಡಿಗ್ರಜಕರರಿಗೆ ಅಂಥ ಯಾವ ತಪ್ಪು ಒಂದು, ಅವರನ್ನು ಸ್ಥಾನಭ್ರಷ್ಟ ಮಾಡಿದ್ದೆಂಬುದು ರಹಸ್ಯವಾಗಿದೆ

***

ಕರ್ನಾಟಕದಲ್ಲಿ ಮದಲನೆಯ ಸಾರೆ
ಹೆಣ್ಣುಮಕ್ಕಳ ದಸ್ತಗಿರಿ

ಅಥಣಿ ತಾಲೂಕಿನಲ್ಲಿ [illegible] ಬಾಡಿಗಿ [illegible] ದ ಗ್ರಾಮಗಳಲ್ಲಿ ಶಿಂದಿ ವೃಕ್ಷ ನಾಶ ಮಾಡಲು ಶ್ರೀ ಕಳಮರಿಯವರ ಮುಂದಾಳುತನದಲ್ಲಿ ಸ್ವಯಂಸೇವಕ, ಸೇವಿಕೆಯರ ಪಥಕ ಹೋಯಿತು ಪೋಲೀಸರು ಐವರು ಸ್ವಯಂಸೇವಕರನ್ನ ಸ್ವಯಂಸೇವಿಕೆ ಶ್ರೀಮತಿ ಸೌ|| ಬಂಗಾರ [illegible] ಹಿಡಿದಿದ್ದಾರೆ.

***

ಬಂಕಾಪೂರದಂತೆ ಮುರಗೋಡ
ಮಹಾಲಿನಲ್ಲಿ
ಶಿಂದೀ ಗಿಡಗಳ ಧ್ವಂಸ

ಮುರಗೋಡ, ಬೈಲಹೊಂಗಲ, ಸಂಗೊಳ್ಳಿ ಚಚಡಿ ಮತ್ತು ನೇಸರಗಿ ಗ್ರಾಮಗಳ ಎರಡುನೂರು ಜನರು ಶಿಂದಿಯ ವನದ ಮೇಲೆ ದಾಳಿ ಇಟ್ಟು, ಎರಡು ಸಾವಿರ ಗಿಡಗಳ ಧ್ವಂಸ ಮಾಡಿದರು. ಪೋಲೀಸಸುಪೇಟರು ನೂರು ಜನ ಪೋಲಿಸರೊಂದಿಗೆ ಹೋಗಿ ೫೦ ಜನರನ್ನು ಹಿಡಿದಿದ್ದಾರೆ

***

ಮೂಗ ಮಂಗಗಳ ಯುದ್ಧ

ಉತ್ತರ ಆಫ್ರಿಕೆಯಲ್ಲಿ ಅಲ್ಜೀರ್ಸ ನಂಬದೊಂದು ದೇಶವುಂಟು. ಅಲ್ಲಿ ಮೂಗ ಮಂಗಗಳಿಗೆ ಕಾದಾಟವಾಯಿತು. ಎರಡು ಪಕ್ಷಗಳ ಮಂಗಗಳಿಗೆ ತುಮುಲ ಕಾಳಗ ನಡೆಯಿತು, ಇವು ಒಂದಕ್ಕೊಂದು ದೊಡ್ಡ ದೊಡ್ಡ ಕಲ್ಲುಗಳನ್ನೆಸೆಯಲಾರಂಭಿಸಿದವು. ಈ ವೇಳೆಗೆ ಬಸ್ಸೊಂದು [illegible] ದಾಟುತ್ತಿರಲಾಗ, ಮೋಟಾರು ನಡುವೆ ಹಾದು ಹೋಯಿತು. ಒಗೆದೊಂದು ಮಂಗನ ಕಲ್ಲು ಒಮ್ಮೆ ಕಲ್ಲು ಮೋಟಾರಿನಲ್ಲಿ ಚಾಲಕನಿಗೆ ಬಡಿದು ಆತನು ಸತ್ತೇ ಹೋದನೆಂದು, ಅಲ್ಲಿಂದ ಬಂದ ತಾರಿನ ವರ್ತಮಾನವಾಗಿದೆ.

***

ನಾವಲಿಗರು ಮೊಂಡರಾದರು

ಅಮೃತಸರದಲ್ಲಿ [illegible] ನಾವಲಿಗರು [illegible] ರಾಜಕೀಯ [illegible] ನಿಷೇಧಿಸಿದರ [illegible] [illegible] ನಾವಲಿಗರು [illegible] ವೃತ್ತಿ [illegible] ಮಾಡಿದರು.

***

ನೋಟೀಸು.

ಯಾವತ್ತು ಜನರಿಗೆ ಇದರ ಮೂಲಕ ತಿಳಿಸುವದೇನಂದರೆ-

ಧಾರವಾಡ ಡಿಸ್ಟ್ರಿಕ್ಟ ಲೋಕಲಬೋರ್ಡ ನಾಣ ಮಹೊಮದನ್ನ ಕಾನಸ್ಟಿಟ್ಯೂಯನ್ಸಿ ಹಾಗೂ ತ ಹಾವೇರಿ ತಾಲೂಕಿನ ದರಿಂದಾ ಆರಿಸಿ ಬಂದ ಮೆಂಬರ ಮಿ|| ಎಸ್. ಬಿ ಹಿರೇಮಠ ಇವರು ರಾಜೀನಾಮಾ ಕೊಟ್ಟದ್ದರಿಂದ ಆ ಜಾಗಾ ತುಂಬೋದರ ದಶಿಂದಾ ಹೊಸ ಚುನಾವಣೆಯನ್ನು ಮಿ|| ಕಲೆಕ್ಟರಸಾ|| ಜಿ|| ಜಿಲ್ಹಾ ಧಾರವಾಡ ಇವರು ಮುಂಬಯಿ ಇಲಾಖೆಯ ಲೋಕಲಬೋರ್ಡ ಚುನಾವಣೆ ಸಂಬಂಧಿ ನೇಮಗಳ ಪಯ್ಕಿ ೩ ನೇ ನೇಮದ ಅನ್ವಯಾ ಚುನಾವಣೆಯನ್ನು ತಾರೀ ಖು ೭-೧೦ ೩೦ನೇ ಮಂಗಳವಾರ ದಿವಸಾ ನೇಮಿಸಿರತಾರೆ ಮತ್ತು ಅದೇ ನೇಮದ ಪ್ರಕಾರ ಚುನಾವಣೆ ಸಂಬಂಧಿ ಕಳಗೆ ಬರೆದ ಪ್ರಕಾರ ತಾರೀಖು ವಗೈರೆ ಗೊತ್ತುಪಡಿಸಿರುತ್ತದೆ

ನಾಮಿನೇಶನ್ನ ಪೇಪರಗಳನ್ನು ಸ್ವೀಕರಿಸುವ ಬಗ್ಗೆ

ಈ ಚುನಾವಣ ಸಂಬಂಧ ಬಗ್ಗೆ ಮಿ|| ಪರ್ಸನಲ್ಲ ಅಸಿಸ್ಟಂಟ ಕಲೆಕ್ಟರ ಸಾ|| ಜಾ|| ಜಿಲ್ಹಾ ಧಾರವಾಡ ಇವರನ್ನು ರಿಟರ್ನಿಂಗ ಆಫೀಸರರನ್ನಾಗಿ ನೇಮಿಸಿರುತ್ತದೆ. ಉಮೇದವಾರರಾಗಲಿ ಚ್ಚಿಸುವ ಜನರು ತಮ್ಮ ನಾಮಿನೇಶನ್ನ ಪೇಪರಗಳನ್ನು ಧಾರವಾಡ ಮುಕ್ಕಾಮಿನಲ್ಲಿ ಮಿ|| ಪರ್ಸನಲ್ಲ ಅಸಿಸ್ಟಂಟ ಕಲೆಕ್ಟರಸಾ|| ಜಾ|| ಧಾರವಾಡ ಇವರ ಕಡೆಗೆ ತಾರೀಖು ೧೧ ೧೦ ೩೦ನೇ ಶನಿವಾರ ದಿವಸ ಅಥವಾ ಅದರ ಒಳಗಾಗಿ ರಜೆಯ ದಿವಸ ಹೊರತು ಯಾವದೇ ದಿವಸ ಮಧ್ಯಾನ್ಹ ೧೧-೩೦ ಘಂಟೆಯಿಂದಾ ಸಂಜೆ ೫ ಘಂಟೆ ಒಳಗಾಗಿ ಕೊಡಬೇಕು ಉಮೇದವಾರರೂ ವೋಟರರು ನಾಮಿನೇಶನ್ನ ಫಾರ್ಮುಗಳನ್ನು ರಿಟರ್ನಿಂಗ ಆಫೀಸರಗೆ ಬೇಕಾದರೆ ಅವರು ಕೊಡುವರು.

ನಾಮಿನೇಶನ್ನ ಪೇಪರಗಳ ತಪಾಸಣೆ

ರಿಟರ್ನಿಂಗ ಆಫೀಸರರು ನಾಮಿನೇಶನ್ನ ಪೇಪರಗಳನ್ನ ತಾರೀಖು ೧೩-೧೦-೩೦ನೇ ಸೋಮವಾರ ದಿವಸ ಮಧ್ಯಾನ್ಹ ೧೨ ೩೦ ಗಂಟೆಕ್ಕೆ ತಮ್ಮ ಆಫೀಸನಲ್ಲಿ ತಪಾಸಮಾಡುವರು ಸದರ ತಪಾಸಣೆ ವೇಳೆಗೆ ಸಂಬಂಧಪಟ್ಟ ನಾಮಿನೇಶನ್ನ ಪೇಪರಗಳ ಬಗ್ಗೆ ರಿಟರ್ನಿಂಗ ಆಫೀಸರರು ತಕರಾರು ಇದ್ದರೆ ಅದರ ವಿಚಾರ ಮಾಡುವರು. ಮತ್ತು ಪ್ರತಿಪಕ್ಷ ಉಮೇದವಾರರಿಗೆ ಅವರದು ಏನು ಇದ್ದರೆ ನಿರ್ಣಯಮಾಡಿ ಕೊಡುವರು. ಮತ್ತು ಈ ಪ್ರಕಾರ ಕಾಯಮ ಮಾಡಿದ ಉಮೇದವಾರರ ಹೆಸರುಗಳನ್ನ ಒಂದು ನೋಟೀಸಿನ ಮೂಲಕ ಅನುಸರಿಸಿ ಪ್ರಸಿದ್ಧ ಪಡಿಸುವರು

ಮತದಾನವು

ಚುನಾವಣೆಯ ದಿವಸ ಅಂದರೆ ತಾ|| ೭-೧೦-೩೦ನೇ ದಿವಸ ಮುಂಜಾನೆ ೭ ೩೦ ಘಂಟೆಯಿಂದಾ ಮಧ್ಯಾನ್ಹ ೧೨ ೩೦ ವರೆಗೆ, ಪುನಃ ಮಧ್ಯಾನ್ಹ ೧ ಘಂಟೆಯಿಂದಾ ಸಂಜೆ ೬ ಘಂಟೆವರೆಗೆ ಮತಗಳನ್ನು ತೆಗೆದುಕೊಳ್ಳುವದು [illegible] ಮತ ತೆಗೆದುಕೊಳ್ಳುವದು ಒಂದು ಗುಪ್ತ- ಆಗಿರೆ [illegible] ಮತದಾರರು ಸಂಜೆ ಆರು ಘಂಟೆಯೊಳಗಾಗಿ ಮತದ ಕಾಗದವನ್ನು ಕಟ್ಟಿಗೆ ಅಂಥ ಮತದಾರರಿಗೆ ತಮ್ಮ ಮತದ ಕಾಗದವನ್ನು ಹಾಕಲಿಕ್ಕೆ ಪರವಾನಿಗಿ ಅದೆ [illegible] ಕೆಳಗ ಬರೆದ ಗ್ರಾಮಗಳಲ್ಲಿ ಆ ದಿವಸ ಮತಕೊಡುವ ಕೆಲಸ ನಡೆಯುವದು.

(೧) ಹಾವೇರಿ (೨) ಹತ್ತಿಮತ್ತೂರ (೩) ಗುತ್ತಲ (೪) ಹೊಸರಿತ್ತಿ (೫) ಕರ್ಜಗಿ (೬) ಗುತ್ತಲ

ಮತಗಳ ಎಣಿಕೆ

ತಾರೀಖು ೮-೧೦-೩೦ನೇ ಬುಧವಾರ ದಿವಸ ರಿಟರ್ನಿಂಗ ಆಫೀಸರರು ತಮ್ಮ ಆಫೀಸ ವೇಳೆಯಲ್ಲಿ ಮತಗಳ ಎಣಿಕೆಯನ್ನು ಮಾಡುವರು ಮತ್ತು ಅದೇ ದಿವಸ ಚುನಾವಣೆಯ ಪರಿಣಾಮವನ್ನು ಹೇಳಿಬಿಡುವರು

ಗೌರ್ಹಮೆಂಟ ಜನರಲ್ಲ ಡಿಪಾರ್ಟಮೆಂಟ ಸರಕಾರಿ ನೋಟಿಫಿಕೇಶನ್ನ ನಂಬರ ೪೪೨೫ ತಾರೀಖು ೧೦-೭-೨೪ ನೇ ತಾರೀಖು ೨೬-೪ ರ ನೇಮಗಳು ಚುನಾವಣೆ ಸಂಬಂಧಿ ಹೇಳಿದ ನೇಮ ಗಳು ಮೇಲೆ ಬರೆದ ಎಲ್ಲಾ ಕ್ರಮಗಳಲ್ಲಿ ಅನುಸರಿಸಲ್ಪಡುತ್ತವೆ

ಧಾರವಾಡ
೨೬-೯-೩೦

J. Abbott,
ಕಲೆಕ್ಟರ ಧಾರವಾಡ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜು
ಧಾರವಾಡ ಮಾರ್ಕೆಟ್.

ನಾವು ಎರಡು ವರ್ಷ ಇಂಗ್ಲೀಷ ಪದ್ಧತಿಯಿಂದ ಕಟಿಂಗ ಕಲಿಸುವ ಕತ್ತರಿಸುವ ಮತ್ತು ಟೇಲರಿಂಗ ಅಂದರೆ [illegible] ಸಹಾಸ್ತ್ರ [illegible] ಕಟಿಂಗ ನಡೆದ ಎರಡು ೩ ತಿಂಗಳ ಮತ್ತು [illegible] ಪ್ರಕಾರ [illegible] ಕೊಡುತ್ತೇವೆ ಪಕ್ಕ [illegible] ಟೇಲರಿಂಗ [illegible] ಶಿಕ್ಷಣವನ್ನು ಕ ನಡ [illegible] ಕೊಡುತ್ತೇವೆ ಈ ಶಿಕ್ಷಣದಿಂದ ವಿದ್ಯಾರ್ಥಿ [illegible] ಗಳಿಸಬಲ್ಲರು. ವಿಶೇಷ ಮಾಹಿತಿ ಪತ್ರಿಕ ಬೇಕಾದಲ್ಲ [illegible] ಬರೆದು ತಿಳಿಸಿರಿ.

ಆರ್ ಬಿ. ರಾ ಧೋಂಡಕರ
ಪರ್ಸ್ಟಕ್ಲಾಸ ಡಿಪ್ಲೋಮಿಷ್ಟ, ಪ್ರಿನ್ಸಿಪಾಲ

ನೋಟೀಸಿನ ದರಗಳು

[illegible] ಮೇಲೆ [illegible] ಮತ್ತು [illegible] ಧಾರವಾಡ

ವರ್ಗಣಿ ದರ

ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ "	೭-೦-೦
೩ "	೪-೮-೦
ಎರಡು ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ

ಮ್ಯಾನೇಜರ ಧಾರವಾಡ.

ಈ ಪತ್ರವನ್ನು [illegible] ಧಾರವಾಡದಲ್ಲಿರುವ [illegible] ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಜಂಗಲ ಸತ್ಯಾಗ್ರಹದ ರಣಮಂಡಲ.

ಕಾಂಗ್ರೆಸದ ಹೊಸರ್ಕ ಕಾಂತಿಯಾಗಲು.

ಮಹಾತ್ಮರು ಮೊದಲು ಪ್ರಾರಂಭಿಸಿದ ಉಪ್ಪಿನ ಕಾಯದೆಭಂಗದ ರಣಮಂಡಲವೇ ದೊಡ್ಡದೆಂದು ತಿಳಿಯಲ್ಪಟ್ಟಿತ್ತು. ಆದರೀಗ ಹೆಚ್ಚಿನದಾಗಿ ವನಗಾವಲ ಸತ್ಯಾಗ್ರಹದ ಕಾಯದೆಭಂಗವು ದೊಡ್ಡದಾಗಿದೆ. ಮಹಾ ಯುದ್ಧದಲ್ಲಿಯ ರಣಮಂಡಲವು ಸಾವಿರೆರಡುಸಾವಿರ ಮೈಲುದ್ದಾಗಿತ್ತು. ಆ ಪ್ರಕಾರ ಜಂಗಲ ಸತ್ಯಾಗ್ರಹದ ಮಂಡಲವಾಗಿದೆ. ಇದು ಮುಖ್ಯವಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ನಡೆದಿದೆ. ನಾಗಪೂರ ಪ್ರಾಂತದಲ್ಲಿರುವ ಸಾತಪುಡಾ ಪರ್ವತದಲ್ಲಿ ಉಗಮವಾದ ನರ್ಮದಾ ತಾಪೀ ನದಿಗಳಿಂದ ಪ್ರಾರಂಭವಾಗಿ ಮುಂಬಯಿ ಮಾರ್ಗವಾಗಿ ಸಂಹ್ಯಾದ್ರಿಯ ಪರ್ವತಾವಳಿಯ ಗುಂಟ ಗೇರಸೊಪ್ಪೆಯ ತನಕ ಇದರ ಗೊಂದಲವೆದ್ದಿದೆ.

ಈ ಗೊಂದಲವು ಗುಜರಾಥದ ರೈತರು ಪಟ್ಟಿ ಕೊಡಬಾರದೆಂಬದಕ್ಕಿಂತ ಪ್ರಚಂಡವಾಗಿರುತ್ತದೆ. ಸುಶಿಕ್ಷಿತ, ಅಶಿಕ್ಷಿತರೆಲ್ಲರೂ ಸೇರಿದ್ದಾರೆ. ಒಂದೊಂದು ಗ್ರಾಮದವರಲ್ಲ; ಉದ್ದಕ್ಕೆ ಇಪ್ಪತ್ತು ಮೂವತ್ತು ಗ್ರಾಮದವರು ಕೈಗೆ ಕೈ ಹಿಡಿದು ಒಳ್ಳೇ ಕಟ್ಟಿದಂತೆ ನಾಲ್ಕಾರು ಸಾವಿರ ಜನರು ಸೇರಿ, ಕಾಯದೆಭಂಗವಮಾಡುವರು. ರಾಜ್ಯಕರ್ತರು ಇವರೆಲ್ಲರನ್ನೂ ಹಿಡಿಯಬೇಕೆಂದರೆ- ಶಕ್ಯವೇ ಇಲ್ಲ; ಸೈನ್ಯ ಪೋಲೀಸರನ್ನು ಹೇರಿ, ಶಾಸನ ಮಾಡುವದೂ ಶಕ್ಯ ಮತ್ತು ಸಂಭವನೀಯವಿಲ್ಲ. ಮುಖಂಡರೆಂಬವರನ್ನು ಮಾತ್ರ ಹಿಡಿಯುವರು. ಯುದ್ಧ ಮಂಡಲದಲ್ಲಿ ಒಬ್ಬರ ಕರುವಾಯಿತೂ ಪತ್ತೆಯಾದರೆ, ಅವರ ಸ್ಥಳವನ್ನು ಆಕ್ರಮಿಸುವಂತೆ, ಇವರೂ ಆ ತೆರವಾದ ಸ್ಥಳವನ್ನು ಆಕ್ರಮಿಸುವರು. ನೆಂಗಸರು ಹುಡುಗರು ಸಹ ಇದರಲ್ಲಿ ಸೇರಿದ್ದರಿಂದ, ಇದಿಷ್ಟು ದಬ್ಬಾಳಿಕೆ, ಆರ್ಡಿನನ್ಸ ಮತ್ತು ಪೋಲೀಸರ ಜಾರಿಯ ಪ್ರಯೋಗದಿಂದ ನಿಲ್ಲಲಾರದು. ಇಷ್ಟು ಜನರನ್ನು ದಂಡಿಸಲು ತಮ್ಮಲ್ಲಿ ಪೋಲೀಸ ಬಲವೇ ಇಲ್ಲೆಂದು ಸರಕಾರದವರು ಅಂತರಂಗದಲ್ಲಿ ತಿಳಿದಿರಲಿಕ್ಕೇಬೇಕು.

ಮಳೆಗಾಲದಾಯಿತು, ಪುನಃ ಉಪ್ಪಿನ ಕಾಯದೆಭಂಗ ಪ್ರಾರಂಭವಾಗುವದು. ಜಂಗಲಕ್ಕೆ ಹುಲಿ, ಚಳಿ, ಬೇಸಿಗೆಯ ಕಾಲಗಳಿಟ್ಟು ಇಷ್ಟೇ; ಸಮುದ್ರ ಮತ್ತು ಪರ್ವತಾವಳಿಯಲ್ಲಿ ಹೀಗೆ ಕಾಯದೆಭಂಗ ನಡೆಯುತ್ತಿರುವಾಗ ದೇಶದಲ್ಲಿ ತೊಂದೀ ಗಿಡ ಕಡಿಯುವರು; ಗಡಂಗಗಳ ಮುಂದೆ ಪಿಕೆಟಿಂಗ ಮಾಡುವರು. ಜನರು ವಿಲಾಯತಿಯ ಜವಳಿಯನ್ನು ಕೊಳ್ಳಬಾರದೆಂದು ಬಹಿಷ್ಕಾರದ ಗೊಂದಲವೆಬ್ಬಿಸುವರು. ಸರಕಾರದವರು ರಾವುಂಡ ಟೇಬಲದ ಎಷ್ಟು ದೊಡ್ಡ ದೊಡ್ಡ ಪ್ರಶ್ನವನ್ನು ಹುಟ್ಟಿಸಿದರೂ, ಕಾಂಗ್ರೆಸದವರು ತಮ್ಮ ಕಾರ್ಯಕ್ರಮದಲ್ಲಿ ಎಳ್ಳಷ್ಟು ಸಡಿಲು ಮಾಡುವಂತಿಲ್ಲ; ಅದನ್ನು ಮತ್ತಷ್ಟು ಬಲಪಡಿಸುತ್ತಿದ್ದಾರೆ. ಆದ್ದರಿಂದ, ರಾವುಂಡ ಟೇಬಲವು ಯಾರ ದೆಸೆಯಿಂದ ಎಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ. ಕೌನ್ಸಿಲ ಚುನಾವಣೆಯಲ್ಲಿ ಮೆಂಬರರಾದಂಥವರು ಪ್ರಜಾಪ್ರತಿನಿಧಿಗಳಲ್ಲೆಂದು ಸ್ಪಷ್ಟವಾಗಿರುತ್ತದೆ. ಇವರಲ್ಲಿ ಮವಾಳರಂತೂ ಲೋಕಾದರವನ್ನು ಹತ್ತಿಪ್ಪತ್ತು ವರ್ಷಗಳಿಂದ ಕಳಕೊಂಡವರಾಗಿದ್ದಾರೆ. ಸರಕಾರದವರು ಕಾಂಗ್ರೆಸದ ಕೂಡ ಒಡಂಬಡಿಕೆ ಮಾಡಿಕೊಂಡ ಹೊರತು ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ರಾಜಕೀಯ ಸ್ವಾತಂತ್ರ್ಯವುಂಟಾಗಲಾರದೆಂಬದನ್ನು ಕಳಸಿದ್ಧಾಂತವಾಗಿ ತಿಳಿಯಬೇಕು.

ಮುಂಬಯಿ ಸರಕಾರದ ಒಕ್ಕಲತನದ ಶಾಲೆಗೆ ಸಂಕ್ರಾಂತಿ.

ಮುಂಬಯಿ ಸರಕಾರದವರು ಕಾಯದೆಭಂಗದ ದೆಸೆಯಿಂದ ಕಡಿಮೆಯಾದ ಮತ್ತು ಮುಂದೆ ಕಡಿಮೆಯಾಗುತ್ತಾ ಬರುವ ಹುಟ್ಟುವಳಿಯನ್ನು ನೋಡಿ ಮತ್ತು ನೋಡಿ ವೆಚ್ಚಕ್ಕೆ ಬಾಯಿಗೊಡಲಿಕ್ಕಾಗದೆ ಅನೇಕ ಶಾಲೆಗಳಲ್ಲಿ ಉಳಿತಾಯ ಮಾಡಲಾರಂಭಿಸಿದ್ದಾರೆ. ಅದರ ಮೊದಲನೆಯ ಸಂಕ್ರಾಂತಿಯು ಒಕ್ಕಲತನ ಶಾಲೆಯ ಮೇಲೆ ಬಂದಿರುತ್ತದೆ. ಈ ಖಾತೆಯಲ್ಲಿರುವ ಅನೇಕ ಪ್ರಯೋಗ ಶಾಲೆಗಳನ್ನು ಬಂದು ಮಾಡುವರು. ದೇಶಿಂಗ ಪತ್ರಿನಗಳಿಂದ ಹೊಲ ಬೆಳೆಸುವ ಕೆಲಸಗಳನ್ನು ಕಡಿಮೆಗೊಳಿಸುವವು. ೫೦ ಮಂತ್ರಿಗಳು ಬಂದರೆ ಇಲಾಖೆಗಳಲ್ಲಿ ಕೆಲಸ ಮಾಡುವ ಜನರು ನಿರುದ್ಯೋಗಿಯಾಗುವರು. ಹೀಗಾದರೆ ಜನರಿಗೆಲ್ಲ ಮನೆಗೆ ಅಪ್ಪಣೆಯಾಗುವದು. ಕಾಹೀಮ ವಿದ್ವವರನ್ನು ಅಲ್ಲಲ್ಲಿ ಕಳುಹುವರು.

ಪನವೇಲದ ಹೃದಯದ್ರಾವಕ ಗೋಳೀಬಾರು

ಮಾಮಲೇದಾರ, ಫಾರೆಸ್ಟ ಆಫೀಸರ,
ಗಾರ್ಡ ಪೋಲೀಸ ಸಿಪಾಯಿ ಮೊದಲಾಗಿ
ಎಂಟು ಜನರು ಸತ್ತರು;

ಪನವೇಲದಿಂದ ೧೨ ಮೈಲುಗಳ ಮೇಲಿರುವ ಚಿರನೇರ ಗ್ರಾಮದಲ್ಲಿ ಐದು ಸಾವಿರ ಜನರು ಜಂಗಲ ಸತ್ಯಾಗ್ರಹ ಮಾಡಲು- ಅಕ್ಕಾದೇವಿಯ ಗುಡ್ಡಕ್ಕೆ ಹೋದರು. ೫೦ ಜನ ಸಶಸ್ತ್ರ ಪೋಲೀಸರೂ ಮಾಮಲೇದಾರ ಮಿ. ಬೋಕಿ ಮೊದಲಾದ ಕಾಮದಾರರೂ ಅಲ್ಲಿದ್ದರು. ಪೋಲೀಸರು ಮೊದಲು ಜನರಿಗೆ ಬೇಡಿ ಹಾಕಿದರು. ಬೇಡಿ ಬೇಡ, ಹಾಗೇ ಬರುತ್ತೇವೆನ್ನಲು- ಮಾಮಲೇದಾರ ಮಿ. ಬೋಕಿಯವರು ಬೇಡೀ ತೆಗೆಯಿಸಿದರು. ಇವರನ್ನು ಕರಕೊಂಡು ಪನವೇಲಕ್ಕೆ ಬಂದರು. ಜನರೂ ಬೆನ್ನು ಹತ್ತಿದರು. ಕತ್ತಲೆಯಾಗಿ ಗೊಂದಲವೆದ್ದಿತು. ಪೋಲೀಸರು ಗೋಳೀಬಾರು ಮಾಡಿದರು. ಹತ್ತಿರದ್ದ ಎಲ್ಲ ಕಾಡತೂಸುಗಳು (೧೧೬) ತೀರುವತನಕ ಆರಳು ಹಾರಿದರು. ಮೊದಲನೆಯ ಗುಂಡಿಗೇ ಮಾಮಲೇದಾರರು ಬಿದ್ದರು- ಗುಂಡು ಹೊಟ್ಟೆಯೊಳಗಿಂದ ಹಾದು ಹೋಯಿತು. ಇವರಂತೆ ಫಾರೆಸ್ಟ ಆಫೀಸರ ಮಿ. ಶೇವಡೆ, ಗಾರ್ಡ, ಮತ್ತು ನಾಲ್ವರು ಜನ ಪೋಲೀಸರು ಸತ್ತರು. ಕತ್ತಲೆಯಾದ್ದರಿಂದ ಯಾರಿಗೆ ಹೇಗೆ ಗುಂಡು ಬಡೆಯುತ್ತದೆಂಬದು ತಿಳಿಯದೇ ಹೋಯಿತು. ಶ್ರೀ. ರಾಮದೇವರ ದೇವಾಲಯದ ಬಾಗಿಲದಲ್ಲಿಯೂ ಗುಂಡು ಹಾರಿದವು. ಗದ್ದಲದಲ್ಲಿ ಪೋಲೀಸ ಇನ್ಸಪೆಕ್ಟರರು ಸಿಕ್ಕರು, ಅವರಿಗೆ ಗಾಂಧೀ ಟೊಪ್ಪಿಗೆ ಹಾಕಿ, ಸ್ವದೇಶೀ ಮಾಡಿ ಊರವರು ಅವರನ್ನು ಪಾರು ಮಾಡಿದರು. ಗೋಳೀಬಾರಿನ ವರ್ತಮಾನ ಕೇಳಿ, ಮುಂಬಯಿಯಿಂದ ಕಾಂಗ್ರೆಸ ಕಮಿಟಿಯ ಪರಿಯಿಂದ ಡಾಕ್ಟರ, ನರ್ಸ ಮೊದಲಾದವರು ಹೋಗಿ, ಭಯಂಕರ ಘಾಯವಾದವರನ್ನು ಮುಂಬಯಿಗೆ ತಂದರು. ಇವರಲ್ಲಿ ಒಬ್ಬನು ಸತ್ತನು. ಸರಕಾರದವರು ಪೋಲೀಸರಿಗೆ ಸಹಾಯವಾಗಿ, ಸಶಸ್ತ್ರ ಪೋಲೀಸ ಪಡೆಯನ್ನು ಅಲ್ಲಿಗೆ ಕಳಿಸಿದರು. ಅವಶ್ಯವಿದ್ದರೆ- ದಂಡು ಕಳಿಸುವ ಪೂರ್ವವ್ಯವಸ್ಥೆ ಮಾಡಿದ್ದಾರೆ.

ಮುಸಲಮಾನರಮೇಲೆ ಮುಸಲಮಾನರ ಕಲ್ಲು-ದೊಂಡಿಗಳ ಹೋರಾಟ

ಮುಂಬಯಿಯಲ್ಲಿಯ ಮುಸಲ್ಮಾನರು ಕಾಂಗ್ರೆಸ ಪಕ್ಷದವರೇ ಆಗಿದ್ದಾರೆ. ಮೌಲಾನಾ ಶೌಕತಲಿಯವರ ಪಂಗಡದ ಕೆಲ ಜನರು ಮಾತ್ರ ರಾವುಂಡಟೇಬಲದ ಭಕ್ತರಾಗಿರುವರು. ಕಾಂಗ್ರೆಸ ಪಕ್ಷದವರು ರಾವುಂಡಟೇಬಲಕ್ಕೆ ಬಹಿಷ್ಕಾರ ಹಾಕಬೇಕೆಂದು ಠರಾವು ಮಾಡಲೋಸುಗ ಕೂಡಿಸಿದ ದೊಡ್ಡ ಸಭೆಯಲ್ಲಿ ವಿರುದ್ಧ ಪಕ್ಷದ ನೂರೆಂಟು ಜನರು ಹೊಣ್ಣೆಗಳನ್ನು ತಕ್ಕೊಂಡು, ದಾರಿಯಲ್ಲಿ ಮ್ಯುನಸಿಪಾಲಿಟಿಯವರು ದಾರೀ ದುರಸ್ತಿಗಾಗಿ ಹಾಕಿದ್ದ ಕಲ್ಲನ್ನು ಒಗೆಯುತ್ತಾ ಸಭೆಯ ನೆಲ್ಲಯತನಕ ಬಂದರು. ಆಗ ಗೊಂದಲವೇಳುವದು ಸಹಜವು. ಆದರೂ ಸ್ವಯಂಸೇವಕರು ಧೈರ್ಯಸ್ಥೈರ್ಯದಿಂದ ಅಧ್ಯಕ್ಷರೂ ಬೇರೆ ಪ್ರಮುಖರೂ ಆತ ಕಷ್ಟಿಯ ಸುತ್ತಲೂ, ಬೋರ್ಗಲ್ಲಿನಂತೆ ನಿಂತು, ಪುರಂದರ ಕೋಟೆಯನ್ನು ಮುರುಮಾದದೂ ನಗೆಯದಂತೆ ಮಾಡಿದರು. ಅಧ್ಯಕ್ಷರಾದ ಸರದಾರ ಅಬ್ದುಲ ರಹಿಮಾನ ಮೀರಾನವರು ಇವರನ್ನುದ್ದೇಶಿಸಿ,

> "ಎಷ್ಟೆ ಕೂಟಿರೇ- ನನ್ನನ್ನು ಕೊಲ್ಲಬೇಕೆಂಬ ಅಪೇಕ್ಷೆ ಇದರೆ- ಬನ್ನಿರಿ ನಾನು ಸಿದ್ಧನಿದ್ದೇನೆ"

ಎಂಬದಾಗಿ ಎದೆಮಟ್ಟ ನಿಂತರು. ಇವರಂತೆ ಬೇರೆ ಪ್ರಮುಖರೂ ಸಿದ್ಧರಾದರು. ಸ್ವಯಂಸೇವಕರ ಮುಂದೆ ತಮ್ಮ ಆಟನಡೆಯದೆಂದು ನೋಡಿಕೊಂಡು ಹಿಂದಿರುಗಿದರು. ತಿರುಗಿ ಹೋಗುವಾಗ ಟ್ರಾಮುಗಳಲ್ಲಿ ಗಾಂಧೀ ಟೊಪ್ಪಿಗೆ ಹಾಕಿಕೊಂಡು ಹೋಗುತ್ತಿದ್ದ ಹಿಂದೂ ಜನರಿಗೂ ಸಂಘಿಸಿದಂತೆ ಬಹಳ ಕಾಟಕೊಟ್ಟರು. ಇಷ್ಟು ಹೋದಬಳಿಕ ಸಭೆಯ ಕೆಲಸವು ಶಾಂತತನದಿಂದ ನಡೆದು, ಮುಸಲಮಾನರು ರಾವುಂಡಟೇಬಲ ಮತ್ತು ಅದಕ್ಕೆ ಹೋಗುವ ಪ್ರತಿನಿಧಿಗಳ ಕೃತ್ಯವನ್ನು ನಿಷೇಧಿಸುತ್ತದೆಂಬ ಠರಾವು ಪಾಸುಮಾಡಲ್ಪಟ್ಟಿತು.

ಮುಂಡರಗಿಯ ಸಬ್ಬ ರಜಿಸ್ಟರರ ಉದ್ಧಟತನವು.

ಮುಂಡರಗಿಯಲ್ಲಿ ಮಹಾಲಕರಿಯಾಗಿದ್ದು, ಈಗ ರತ್ನಾಗಿರಿಯ ಜಿಲ್ಲೆಗೆ ವರ್ಗವಾಗಿರುವ ಶ್ರೀ. ರಾಮಚಾರ್ಯ ಗುತ್ತಲ ಇವರು ಅಲ್ಲಿ ಕೆಲಸ ಮಾಡಲಿಕ್ಕೆ ಹತ್ತಿ ಎಂಟು ತಿಂಗಳಾಯಿತು. ಇವರು ಹೋದಂಥ ಎಲ್ಲ ಸ್ಥಳಗಳಲ್ಲಿಯೂ ಲೋಕಪ್ರಿಯರಾದಂತೆ ಅಲ್ಲಿಯೂ ಆಗಿರುವರು. ಇದರಿಂದ ತಮ್ಮೂರಿಗೆ ಮತ್ತು ನೇರಾಕ್ಕೆ ಆದ ಉಪಕಾರದ ದೆಸೆಯಿಂದ ಇವರಿಗಾಗಿ ಪ್ರಮುಖ ಜನರು ಬೀಳ್ಕೊಡುವ ಸಮಾರಂಭ ಮಾಡಿದರು. ಇದಕ್ಕೆ ಬರಬೇಕೆಂದು ಆಮಂತ್ರಣ ಕೊಡುವದಕ್ಕಾಗಿ, ಅಲ್ಲಿಯ ಮುಖಂಡರು, ಕಮಿಟಿಯ ಕಾರ್ಯದರ್ಶಿಯಾದ ಶ್ರೀ. ಜಿ. ಎನ್. ದೀಕ್ಷಿತರವರು ಸಬ್ಬರಜಿಸ್ಟರರಾದ ಮಿ. ದೇಸಾಯಿಯವರನ್ನು ಕರಿಯಲಿಕ್ಕೆಂದು ಅವರ ಆಫೀಸಿಗೆ ಹೋದರು. ಮಿ. ದೇಸಾಯಿಯವರು ಸೌಜನ್ಯಶೀಲರ ರೀತಿಯಿಂದ ಆಮಂತ್ರಣ ಸ್ವೀಕರಿಸಬಹುದಾಗಿತ್ತು. ಅಥವಾ ಕೆಲಸ ಬಹಳವಿರುವದರಿಂದ ಬರುವದಾಗದೆಂದು ಹೇಳಬಹುದಾಗಿತ್ತು. ಹಾಗೆ ಮಾಡದೆ ಶ್ರೀ. ದೀಕ್ಷಿತರನ್ನು ಬೂಟುಗಾಲಿನಿಂದ ಒದ್ದು, ದಂಡ ಹಿಡಿದು ಆಫೀಸಿನಿಂದ ಹೊರಗೆ ಹಾಕಿದರು. ಶ್ರೀ. ದೀಕ್ಷಿತರು ಈ ಅಪಮಾನವು ತಮ್ಮದಲ್ಲ, ಕಾಂಗ್ರೆಸ ಸಮಾರಂಭ ಮಾಡುವವರೆಲ್ಲರದೂ ಆಗುತ್ತದೆಂದು ಭಾವಿಸಿ, ನಡೆದ ಸಂಗತಿಯನ್ನು ವಿವರವಾಗಿ ಸಮಾರಂಭದಲ್ಲಿ ಹೇಳಿದರು. ಸಮಾರಂಭಕ್ಕೆ ನೆರೆದ ನೂರಾರು ಜನರಿಗೆ ಬೇಸರ ಬಂದ್ದರೂ ಸಹ ನಿರುಪಾಯವಾಯಿತು. ಐಕ್ಯಮತವಾಗಿ ಎಲ್ಲರೂ, ಸಮಾಧಾನದಿಂದ ಮುಂದೆ ಕೊಟ್ಟಂತೆ ಠರಾವ ಪಾಸಮಾಡಿದ್ದಾರೆ.

ಇದರಲ್ಲಿನ ಮೀಟಿಂಗಲ್ಲಿ ಮಿ. ದೇಸಾಯಿ, ಸಬ್ ರಜಿಸ್ಟ್ರಾರ ಮುಂಡರಗಿ ಇವರನ್ನು ಕರೆಯಲಿಕ್ಕೆ ಮಿ. ದೀಕ್ಷಿತ ಸೇಕ್ರೆಟರಿ ಕಾಮುಗಾರ ಇವರು ಹೋದಾಗ್ಗೆ, ಬೂಟುಗಾಲಿನಿಂದ ಒದ್ದು, ಅಪಮಾನಗೊಳಿಸಿದ್ದಕ್ಕೆ ಈ ಕಮಿಟಿಯು ಪೂರ್ಣ ನಿಷೇಧಿಸುತ್ತದೆ. ಈ ಠರಾವಿನ ನಕಲು ವರಿಷ್ಠ ಅಧಿಕಾರಿಗಳ ಕಡೆಗೆ ಕಳಿಸುವ ತಜವೀಜು ಮಾಡಬೇಕೆಂದು ಸೂಚಿಸುತ್ತದೆ.

ಸಭೆಯಲ್ಲಿ ಈ ಮೇರೆಗೆ ಠರಾವಾದನಂತರ ಮಿ. ದೇಸಾಯಿಯವರ ಉದ್ಧಟತನದ ವರ್ತನದ ಬಗ್ಗೆ ಮಿ. ದೀಕ್ಷಿತರವರು ಮುಂಡರಗಿಯ ಪೋಲಿಸಠಾಣೇದಾರ ಕಡೆಗೆ ಗ್ರಾಮ ಪೋಲಿಸ ಕೃಷ್ಣ ಕಲಮು ೧೪ನೆಯ ಪ್ರಕಾರ ಫಿರ್ಯಾದಿ ಮಾಡಿರುತ್ತಾರೆ. ಊರ ತುಂಬ ವಿಷಾದಕರವಾದ ಇದೇ ವಿಷಯದ ಚರ್ಚೆ ನಡೆದಿರುತ್ತದೆಂದು ಅಲ್ಲಿಂದ ವಿಜಯಕ್ಕೆ ಬಂದ ಸುದ್ದೀ ಪತ್ರದ ಸಾರಾಂಶವಾಗಿರುತ್ತದೆ.

ಮವಾಳರನ್ನೆಯೂ ಸುರಂಗವಾಸಿಗಳಾಗಲು ಸಿದ್ಧ ಸಾಧನ.

ಪ್ರಸಿದ್ಧ ನಾಮದಾರ ಗೋಖಲೆಯವರ ಸರ್ವಂಟ ಆಫ ಇಂಡಿಯಾ ಸೊಸಾಯಿಟಿಯ ಬಟ್ಟ ಆಜೀವ ಸಭಾಸದರಾದ ಶ್ರೀ ಠಕ್ಕರರು ಗುಜರಾಥಕ್ಕೆ ಹೋಗಿ, ಅಲ್ಲಿಯ ಪೋಲಿಸ ಅತ್ಯಾಚಾರ, ಮ್ಯಾಜಿಸ್ಟ್ರೇಟರ ಹೊಡೆಯ ಮಾಡಿದ ಶಿಕ್ಷೆ ಮತ್ತು ಬೇರೆ ಅಸಹ್ಯವಾದ ಕೃತ್ಯಗಳನ್ನು ಕಣ್ಣಾರೆ ಕಂಡು, ಅವುಗಳ ಒಂದು ವರದಿಯನ್ನು ಪ್ರಸಿದ್ಧಮಾಡಿದರು. ಇದರಲ್ಲಿ ಇವರು ಪಿಕೆಟಿಂಗ ಮತ್ತು ಪಿಕೆಟಿಂಗಕ್ಕೆ ಉತ್ತೇಜನ ಕೊಡುತ್ತಾರೆಂಬ ಆರೋಪ ಹೊರಿಸಿ, ಸರಕಾರದವರು ಇವರನ್ನು ದಸ್ತಗಿರಿ ಮಾಡಿದರು. ವಾರಂಟ ಮತ್ತು ದಸ್ತಗಿರಿಯು ಪಂಜಾಬ ಮೇಲಬಂದಿದ್ದು ಒಂದು ಸ್ಟೇಶನದಿಂದ ಮತ್ತೊಂದು ಸ್ಟೇಶನಕ್ಕೆ ಹೋಗುವಂತಾಯಿತು. ದಸ್ತಗಿರಿಯಾದರೂ ಜಾಮೀನು ಕೊಡಲಿಲ್ಲ. ಕೆಲ ಸ್ನೇಹಿತರ ಆಗ್ರಹದ ಮೂಲಕ ಡಿಫೆನ್ಸ ಕೊಡಬೇಕೆಂದಿದ್ದರು. ಆದರೆ ಹೀಗೆ ಮಾಡಬಾರದೆನ್ನುವಂಥ ಕೆಲ ಕೃತ್ಯಗಳು ಅವರ ಕಣ್ಣಿಗೆ ಬಿದ್ದು, ಅವುಗಳಿಂದ ತಮಗೆ ನ್ಯಾಯ ದೊರೆಯದೆಂದೆನಿಸಿತು. ನನಗೆ ನ್ಯಾಯ ದೊರೆಯುವದಿಲ್ಲ. ಕಾರಣ ಡಿಫೆನ್ಸ ಕೊಡುವದಿಲ್ಲೆಂದು ಮ್ಯಾಜಿಸ್ಟ್ರೇಟಗೆ ತಿಳಿಸಿದ್ದಾರೆ. ಇವರು ಹೇಳುವ ಕಾರಣಗಳು-

೧ ಪೋಲೀಸರ ನಡತೆಯ ಬಗ್ಗೆ ನೇಮಿಸಿದ ಕಮೀಟಿಯ ಮೆಂಬರರಿಗೆ ಪ್ರತಿಬಂಧ ಮಾಡಿ, ಅವರನ್ನು ಆತಂಕದಲ್ಲಿಡುವದು.

೨ ಜುಂಬಿತ ಕಚೇರಿಯಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಎದುರಿನಲ್ಲಿ ರಾಷ್ಟ್ರೀಯ ನಿಶಾನಿ ಸುಡುವದು.

೩ ಸತ್ಯಾಗ್ರಹಿಗಳನ್ನು ಮನೆಯಲ್ಲಿಳಿಸಿಕೊಂಡ್ಡ ಕಾರಣದಿಂದ ಜನರನ್ನು ಸುರಂಗಕ್ಕೆ ಕಳಿಸುವದು.

೪ ಇಂಥ ಅನೇಕ ಕೃತ್ಯಗಳು-

ಶ್ರೀ ಠಕ್ಕರರಿಗೆ ಸಶ್ರಮ ಶಿಕ್ಷೆ.

ನಡಿಯಾದದ ಮ್ಯಾಜಿಸ್ಟ್ರೇಟರು ಶ್ರೀ ಅಮೃತಲಾಲ ಠಕ್ಕರರಿಗೆ ಆರು ತಿಂಗಳ ಸಶ್ರಮ ಶಿಕ್ಷೆ ವಿಧಿಸಿ, ಬಿ ಕ್ಲಾಸ ಕೊಟ್ಟರು. ಎರಡೇ ನಿಮಿಷಗಳಲ್ಲಿ ವಿಚಾರಣೆ ಮುಗಿದು ಶಿಕ್ಷೆ ಹೇಳಲ್ಪಟ್ಟಿತು. ಅತ್ಯಂತದ ಮಾತು ಯಾವಂಥ ಸರ್ವಂಟ ಆಫ ಇಂಡಿಯಾ ಸೊಸಾಯಿಟಿ ಮೆಂಬರರಲ್ಲಿ ಒಬ್ಬರಿಗೆ ಶಿಕ್ಷೆಯಾದದ್ದು, ಹೊಸಳವು. ಇವರು ಪಿಕೆಟಿಂಗ ಮಾಡಲಿಲ್ಲ; ಪಿಕೆಟಿಂಗಕ್ಕೆ ಉತ್ತೇಜನ ಕೊಡಲಿಲ್ಲ; ದೂರಿಂದ ನೋಡುತ್ತಾ ಮಾತ್ರ ನಿಂತಿದ್ದರು. ಆದರೆ ಇವರಿಗಾದ ಶಿಕ್ಷೆಯು ತೀರ ಕಠೋರ ಮೀರಿದ ನ್ಯಾಯದಂತಾಯಿತು. ಪೋಲೀಸ ಮತ್ತು ಮ್ಯಾಜಿಸ್ಟ್ರೇಟರ ಮೇಲೆ ಟೀಕೆ ಮಾಡಿದ್ದಕ್ಕೆ ಈ ಫಂಧೋಲ ಊಡಿದರು. ಇಷ್ಟಾದರೂ ಆ ಸೊಸಾಯಿಟಿಯವರು ಬಿಚ್ಚಿಗಲಿರೆ ಸಾಕು.

ಶ್ರೀ. ಜೋಗ ವಕೀಲರ ಸನಗಾರಿಕೆ ರದ್ದಾಗುವದಿಲ್ಲ.

ಶ್ರೀ. ಜೋಗ ವಕೀಲರಿಗೆ ಕೌನ್ಸಿಲ ಚುನಾವಣೆಯಲ್ಲಿ ಏಟಿನಲ್ಲಿ ಒಂದು ಭಾಗದಷ್ಟು/ ಹೋಟು ಪಡೆದುದ್ದರಿಂದ ಈ ಮುಂಚೆ ಪ್ರಸಿದ್ಧವಾದ ಸಂಗತಿಯ ವಿಚಾರ ಮಾಡಲಾಗಿ, ಇವರ ಡಿಪಾಜಿಟದ ಹಣವು ರದ್ದಾಗುವದಿಲ್ಲ. ಇವರಿಗೆ ಒಂದೆಂಟಾಂಶಕ್ಕಿಂತ ಒಂಭತ್ತು ಹೋಟುಗಳು ಹೆಚ್ಚಿಗೆ ಬಿದ್ದಿರುತ್ತವೆ. ಇದಲ್ಲದೆ ಚುನಾವಣೆಯಾಗದಿದ್ದರೇ- ಡಿಪಾಜಿಟ್ಟು ಮರುಗುವದು. ಈ ಎರಡೂ ಕಾರಣಗಳಿಂದ ಅವರ ಹಣವು ಮುಳುಗುವದಿಲ್ಲೆಂದು ಪ್ರಸಿದ್ಧ ಮಾಡಲು- ಓರ್ವ ಬಡಾಬದಾರ ಗೃಹಸ್ಥರು ನಮಗೆ ತಿಳಿಸುತ್ತಾರೆ.

ದೇವರ ಪ್ರಸಾದದ ಲಿಲಾವು

ಮೂರು ಬಾಳೇಹಣ್ಣುಗಳಿಗೆ ೪ ರೂಪಾಯಿ

ರಾಣೇಬೆನ್ನೂರ ತಾಲೂಕ ಅಂತ್ರವಳ್ಳಿಯಲ್ಲಿ ಶ್ರೀ ವೀರಭದ್ರದೇವರ ಪರವು ಮುಗಿದ ಸಮಾರಂಭವಾಯಿತು. ಆಗ ಉಳಿದ ಪದಾರ್ಥಗಳು ಕಾಂಗ್ರೆಸದ ಪದ್ಧತಿಯಂತೆ ಲಿಲಾವು ಮಾಡಲ್ಪಟ್ಟವು. ಒಂದು ಬೇಲ ಪತ್ರಿಗೆ ೧೨, ೨೫ ಬಾಳೀ ಎಲೆಗೆ ಎರಡು ರೂಪಾಯಿ ಬಂತು. ಇವನ್ನು ಶ್ರೀ ಚನಮಪ್ಪ ಬಸಪ್ಪ ಹರಿಹರ ಇವರು ತಕ್ಕೊಂಡರು. ಶ್ರೀ ಹೇಮಪ್ಪ ಕೃಷ್ಣಪ್ಪ ಸಾಹುಕಾರ ಇವರು ಮೂರು ಬಾಳೇಹಣ್ಣುಗಳಿಗೆ ನಾಲ್ಕು ರೂಪಾಯಿ ಕೊಟ್ಟರು. ಶ್ರೀ ಹನಮಗೌಡ ರಾಮನಗೌಡ ಬೇವನಗೌಡ್ರ ಇವರು ಎರಡೇ ಊದಿನಕಡ್ಡಿಗಳಿಗೆ ಎರಡೂವರೆ ರೂಪಾಯಿ ಕೊಟ್ಟರು.

ಬರೇ ಪದವೀಧರರಿಗೇ ಶಿಕ್ಷೆ-

ಉತ್ತರ ಹಿಂದುಸ್ಥಾನದಲ್ಲಿ ಸುಪ್ರಸಿದ್ಧವಾದ ಕಾಂಗಡಿಯ ಗುರುಕುಲದ ಅಧ್ಯಾಪಕರೆಲ್ಲರೂ ಕಾಯದೆಭಂಗದಲ್ಲಿ ಸೇರಿದ್ದಾರೆ. ಇವರು ಬಿ.ಎ. ಕೇವಲ ಗ್ರ್ಯಾಜ್ಯುಯೇಟರೇ ಇದ್ದು, ಇವರಲ್ಲಿ ೧೨ ಜನರು ಉಪ್ಪಿನ ಕಾಯದೆಭಂಗದಲ್ಲಿ ಶಿಕ್ಷೆ ಹೊಂದಿದ್ದಾರೆ. ಈಗ ಇವರ ಅಸಿಸ್ಟಂಟ ಗವರ್ನರ ಮತ್ತು ಪಂಜಾಬಪ್ರಾಂತದ ಯುದ್ಧ ಮಂಡಲದ ಡಿಕ್ಟೇಟರರಾದ ಪ್ರೊಫೇಸರ ದೇವರಾಜ ಎಂ. ಎ. ಇವರು ಒಂದು ವರ್ಷದ ಕೈದಿನ ಶಿಕ್ಷೆಗೆ ಗುರಿಯಾಗಿದ್ದಾರೆ.

ಬಾರಡೋಲಿ ರೈತರ ಪ್ರಚಂಡ ಸತ್ಯಾಗ್ರಹ

ಪಟ್ಟಿಕೊಡುವದಿಲ್ಲೆಂಬ ಪ್ರತಿಜ್ಞೆ

ಬಾರಡೋಲಿಯ ರೈತರು ಮಹಾತ್ಮರಿಗೆಷ್ಟು ಉಪಕೃತರಾಗಿದ್ದಾರೆಂಬುದನ್ನು ಬರೆಯುವದು ಅಶಕ್ಯಕಾರ್ಯ. ಇತಿಹಾಸದಲ್ಲಿಯೇ ಅಪೂರ್ವವಾದ [illegible]. ಮಹಾತ್ಮರ ಅಪ್ಪಣೆಯ ಮೇರೆಗೆ ಸತ್ಯಾಗ್ರಹ ಮಾಡಿದ್ದರಿಂದಲೇ ಅವರ [illegible] ತೀರ್ಮಾನ ಒದ್ದಾಗಿ ಪ್ರತಿವರ್ಷ ಲಕ್ಷರೂಪಾಯಿ ಉಳಿತಾಯವಾಯಿತು. ಯಾವ ತಾಲೂಕಿನ ರೈತರೂ, ಯಾವ ಗೃಹಸ್ಥರಿಂದಲೂ ಇಂಥ ಉಪಕಾರ ಹೊಂದಲಿಲ್ಲ. ಆ ಉಪಕಾರದ ಪ್ರತ್ಯುಪಕಾರವಲ್ಲ; ಕೃತಜ್ಞತೆಯನ್ನು ತೋರಿಸುವ ಸಮಯವು ಅವರಿಗೀಗ ಒದಗಿತು. ಕಾಯದೆಭಂಗದ ಈಗಿನ ಚಳವಳಿಯಲ್ಲಿ ಅವರು ಪ್ರತಿಯೊಂದು ರೀತಿಯಿಂದ ಸೇರಿದ್ದಾರೆ. ಉಪ್ಪಿನ ಕಾಯದೆಭಂಗಕ್ಕೆ ಸಾವಿರ ಸಂಖ್ಯೆಯಿಂದ ಸ್ವಯಂಸೇವಕರನ್ನು ಕೊಟ್ಟರು. ಶಿಂದಿನ ಗಿಡಗಳ ಧ್ವಂಸಮಾಡಿದರು. ಗಡಂಗಗಳ ಮುಂದೆ ಪಿಕೆಟಿಂಗ ಮಾಡಿ, ಹೆಂಡದ ವ್ಯಾಪಾರ ಮುಗಿಸಿದರು. ಪಟ್ಟಿ ಕೊಡಬಾರದೆಂದು ಈ ಮೊದಲೇ ಗೊತ್ತುಮಾಡಿದ್ದಾರೆ. ಸದ್ಯ ಅದರಂತೆ ನಡೆಯುತ್ತಲೇವೆಂಬುದನ್ನು ಪ್ರತ್ಯಕ್ಷ ಪ್ರಮಾಣವಾಗಿ ತೋರಿಸಲುಜ್ಜುಗಿಸಿದ್ದಾರೆ.

ರೈತರು ಪಟ್ಟಿ ಕೊಡುವದಿಲ್ಲೆಂದು ಮಾಕ್ಕಿದ ಹಿಂದೆ ಕೂಡಲೆ, ಸರಕಾರದವರು ಒಂದು ಸರಕ್ಯುಲರ ತೆಗೆದರು. ಅದು ತಾವು ಮಾಡಿದ್ದೇ ಪೂರ್ವವೆಂದಿರುತ್ತದೆ. ಹಿಂದಿನ ಕಾಲದ ಸತ್ಯಾಗ್ರಹದಲ್ಲಿ ಸರಕಾರ ಅಧಿಕಾರಿಗಳು ಪಟ್ಟಿ ವಸೂಲಿಗೆ ಬಂದ ಕೂಡಲೆ, ಸ್ವಯಂಸೇವಕರು ಕಹಳೆ ಹಿಡಿಯುವರು. ನಗಾರಿ ಹೊಡೆಯುವರು. ಕೂಡಲೆ ಜನರು ಧ್ವನಿ ಮಾತ್ರ ಕೇಳುವಷ್ಟರಲ್ಲಿ ಬಾಗಿಲ ಹಾಕಿಕೊಳ್ಳುವರು. ಹೀಗಾಗಿ ಮಾಮಲೇದಾರರಿಗೆ ಪಟ್ಟಿವಸೂಲಿಗಾಗಿ ಜಂಗಮ ಜಿಂದಗಿಯನ್ನು ಜಪ್ತಮಾಡಲಿಕ್ಕೆ ಅವಕಾಶವೇ ದೊರೆಯುತ್ತಿದ್ದಿಲ್ಲ. ಈ ವಿಘ್ನವನ್ನು ದೂರಮಾಡಬೇಕೆಂದು ಸರಕಾರದವರು ಒಂದು ಸರಕ್ಯುಲರ ತೆಗೆದು, ರೈತರ ಮನೆಯ ಬಾಗಿಲು ತೆರೆಯದಿದ್ದರೆ ಕಿಡಕಿ ಮುರಿದು, ಬೇಕಾದರೆ ಬೀಗ ತೆಗೆದು ಒಳಗೆ ಹೊಕ್ಕು, ಜಪ್ತಿ ಮಾಡಬೇಕೆಂದು ಆವ ದಾರರಿಗೆ ಅಧಿಕಾರ ಕೊಟ್ಟಿರುತ್ತಾರೆ. ಇದಕ್ಕೆ ಪ್ರತಿಯಾಗಿ ರೈತರು ಗ್ರಾಮತ್ಯಾಗ ಮಾಡಬೇಕೆಂಬ ನಿಶ್ಚಯ ಮಾಡಿ, ತಮ್ಮ ಮನೆಗಳನ್ನು ಬಿಟ್ಟು, ದನಕರು, ಜಂಗಮ ಜಿಂದಗಿ ತಕ್ಕೊಂಡು ಪತ್ತರವೇ ಇದ್ದ ಬರೋಡೆಯ ರಾಜ್ಯದಲ್ಲಿ ಗುಳೇ ಹೋಗಲಾರಂಭಿಸಿದ್ದಾರೆ. ಗುಳೇ ಹೋಗುವದರಿಂದುಂಟಾಗುವ ಅನೇಕ ಪಡಿಪಾಟ್ಲಗಳನ್ನು ಭೋಗಿಸಲಿಕ್ಕೆ ಸಿದ್ಧರಾಗಿದ್ದಲ್ಲದೆ, ತಮ್ಮ ಸತ್ಯ ಪ್ರತಿಜ್ಞೆಗೆ ಭಂಗಬರಗೊಡಲಿಕ್ಕಾಗುವದಿಲ್ಲೆಂದು ಇವರು ಕಡೆಯ ಉಪಾಯ ಕೈಕೊಂಡಿದ್ದಾರೆ. ತಮ್ಮ ಕರುವಾಯ ನಮ್ಮ ಹೊಲಗಳಿಗೆ ಬೇಕಾದ ದುಃಸ್ಥಿತಿ ಬರಲಿ; ಪರಾಧೀನವಾಗಲಿ; ಸರಕಾರದ ಹಿಂಸೆಯು ಬಿಬ್ಬಾಳಿಕೆಯಲ್ಲಿ ಸತ್ಯಾಗ್ರಹದ ಸತ್ಯತೆಗೆ ಕಲಂಕ ತರಗೊಡಬಾರದೆಂದು ತಮ್ಮ ಮನಸ್ಸಿನ ಶಾಂತ ದೃಢನಿಶ್ಚಯಕ್ಕೆ ಉತ್ತರ ಕೊಟ್ಟಿದ್ದಾರೆ. ಮಹಾತ್ಮರ ಬಿಡುಗಡೆಯಾದ ಹೊರತು ಪಟ್ಟಿ ಕೊಡಬಾರದೆಂದು ಇವರ ನಿರ್ಧಾರ ಇದ್ದು, ಮಹಾತ್ಮರ ಬಿಡುಗಡೆಯಾಗುತ್ತಿರುವಾಗ ಸ್ವರಾಜ್ಯ ಸಂಪಾದನೆಯಾಗುತ್ತದೆ.

ಧಾರವಾಡದಲ್ಲಿ ಪುನಃ ಉಪ್ಪಿನ ಕಾಯದೆಭಂಗ.

ಮಹಾತ್ಮರಿಗೆ ಕೊಟ್ಟ ವಚನವನ್ನು ಪೂರ್ಣ ಮಾಡಲೋಸುಗ ದಸರೆಯ ಮುಹೂರ್ತದಲ್ಲಿ ಅಹಮದಾಬಾದಿನವರು ಧಾರವಾಡಕ್ಕೆ ಉಪ್ಪಿನ ಕಾಯದೆಭಂಗ ಮಾಡಲೋಸುಗ ಪ್ರಯಾಣ ಮಾಡುತ್ತಾರೆ. ಈ ಕಾರ್ಯಕ್ಕಾಗಿ ಹ್ವಾಲಂಟಿಯರರನ್ನು ಕಳಿಸುವ ಕೆಲಸವು ಉತ್ಸಾಹದಿಂದ ನಡೆದಿದೆ. ಮೊದಲನೆಯ ಜನರು ರಾಜಾ ಮೇಲೆ ಯುದ್ಧ ನಡೆಸಲು ಅಂದು ನಗರ ತ್ಯಾಗಮಾಡುತ್ತಿದ್ದರು. ಈಗ ಆಲಸ್ಯತನದಿಂದ ಸಮುದ್ರದ ನೀರು ತರಿಸಿ, ಉಪ್ಪು ಮಾಡಿ, ತಮ್ಮ ದೇಶವಾಸಿಗಳ ಮೇಲೆ ಯುದ್ಧ ಮಾಡಬೇಕಾಗಿರುತ್ತದೆ.

ರಾವುಂಡ ಟೇಬಲದ ಬಗ್ಗೆ ಲೋಕಮತವು.

ಬ್ರಿಟಿಶ ಸರಕಾರದವರು ಕಾಂಗ್ರೆಸದವರನ್ನು ಹೊರತುಪಡಿಸಿ, ರಾವುಂಡ ಟೇಬಲವನ್ನು ಕೂಡಿಸುವ ವಿಷಯವಾಗಿ ಮಾಡಿದ ಪ್ರಯತ್ನಕ್ಕೆ ಲೋಕಮತದ ಅನುಕೂಲ ಅಭಿಪ್ರಾಯವಿರುವದಿಲ್ಲ. ಕಾಂಗ್ರೆಸದವರು ಹೇಳಿ ಕೇಳಿ ದಾಯಾದಿಗಳಾಗಿರುವದರಿಂದ ಅವರು ಇದಕ್ಕೆ ಬಹಿಷ್ಕಾರ ಹಾಕಿದ್ದು ಆಶ್ಚರ್ಯವಲ್ಲ. ಇವರ ಬಹಿಷ್ಕಾರವು ಪಕ್ಷಪಾತದ್ದೆನಿಸಿದರೂ, ಬೇರೆಯವರು ಇದನ್ನು ಯಾವ ದೃಷ್ಟಿಯಿಂದ ನೋಡಿದ್ದಾರೆಂಬುದನ್ನು ತಿಳಿದರೆ ಸಾಕು. ಇದಕ್ಕೆ ತಾವು ಬರುವದಿಲ್ಲೆಂದು ಹೇಳಿದವರು ಎಲ್ಲರಕ್ಕಿಂತ ಮೊದಲು ಮುಂಬಯಿಯ ಸರ ಪುರುಷೋತ್ತಮದಾಸರು, ಇವರ ತರುವಾಯ, ದಿವಾನ ಚಮನಲಾಲರು, ಮತ್ತು ಈಗ ಮಹಮದಾಬಾದಿನ ರಾಜರು ಪ್ರಕೃತಿಯ ನೆವದಿಂದ ಆಮಂತ್ರಣವನ್ನು ಅಂಗೀಕರಿಸಲಿಲ್ಲ. ಇದರಂತೆ ನಾವು ಬರುವದಿಲ್ಲೆಂದು ಮುಂದಾಗಿ ಹೇಳಿದವರಲ್ಲಿ ಶ್ರೀ. ಕೇಳಕರ ಮೊದಲಾದ ಅನೇಕ ಸದ್ಗೃಹಸ್ಥರಿದ್ದಾರೆ. ಇವರು ಇಂಥ ಗೌರವದ ಕೆಲಸದಲ್ಲಿ ತಾವು ಪಾಲ್ಗೊಳ್ಳುವದಿಲ್ಲೆಂದು ಹೇಳುವದಕ್ಕೆ ಬಲವಾದ ಕಾರಣಗಳೇ ಇರಬೇಕಲ್ಲವೇ?

ಆಮಂತ್ರಣವನ್ನು ಒಳ್ಳೇ ಉಮೇದಿಯಿಂದ ಸ್ವೀಕರಿಸಿದವರು ಸಂಸ್ಥಾನಿಕರು. ಅವರ ತರುವಾಯ ಮವಾಳರು. ಸಂಸ್ಥಾನಿಕರು ಕೂಡ ಬಿಟ್ಟು ದೂರ ಹೋಗ ಪ್ರಸಂಗಿಸಿದ್ದಾರೆ ಹಾಗೆ ಮವಾಳರ ಪರಿಸ್ಥಿತಿಯಿರುವದಿಲ್ಲ. ಇವರು ಹಿಂದಕ್ಕೆ ಕಾನ್ಸಿಲಗಳನ್ನು ಯಶಸ್ವಿ ಮಾಡುತ್ತೇವೆಂದು ಹೇಳಿ, ದೂರದೇ ವರ್ಷಗಳಲ್ಲಿ ಹತಾಶರಾದರು. ಈಗ ನಾವಾಕಾಶಿನ ಸ್ವರಾಜ್ಯ ತರುತ್ತೇವೆಂದು ಹೇಳ ಹೊರಟಿದ್ದಾರೆ. ಈ ತರ ಅನುಭವಿಕರಾದೇಹರು ವಸಾಹತಿನ ಸ್ವರಾಜ್ಯವೆನ್ನದೆ, ಮಾಂಟಿಗ್ಯು ಶಿಫಾರಸಗಳನ್ನು ಅಸ್ಪಷ್ಟವಾದ ರೀತಿಯಿಂದ ಹೇಳಿದ್ದರಿಂದಲೇ ಜಗಳ ಬಗೆ ಹರಿಯದೆ ಹೋಯಿತು. ಬಾವಿಯಲ್ಲಿಯೇ ನೀರಿಲ್ಲದಾಗ, ತಂಬಿಗೆಯಲ್ಲಿ ಹೇಗೆ ಬರುವದು? ಆದರೂ ಇವರು ಅನ್ಯಾಯವಾಗಿ ಆಶಾಭರಿತರಾಗಿದ್ದಾರೆ. ಮನಸಿನಲ್ಲಿ ಮುಂದಿಗೆ ನಡಿಯುವದಕ್ಕಿಂತ ಕಾಂಗ್ರೆಸದವರು ಒಂದರೇ ಹಾವು ಒರುವೆವೆಂದು ಆಗ್ರಹ ಹಿಡಿದಿದ್ದರೆ. ದುಂಡು ಮೇಜಿನ ದುಬ್ಬ ಕತ್ತಿ ಹೋಗುತ್ತಿತ್ತು. ಇವರು ಆರಂಭಿಸಿದ್ದು, ಇವರಾದೂ ಹೋಗದಂಥ ಸತ್ಯಾಗ್ರಹ ಮಾಡಿದ್ದರೆ ಸ್ವರಾಜ್ಯವು ಮನೆಯಲ್ಲಿ ಕೂತಲ್ಲೇ ಬರುತ್ತಿತ್ತು. ಈಗ ಯಾವ ಮೇಲು ಹೇಗೆ ಹಾಕಬೇಕೆಂಬ ಬುದ್ಧಿಯು ಇವರಿಗಿರುವದಿಲ್ಲವಲ್ಲ!

ಮೆರವಣಿಗೆಯಲ್ಲಿ

ಡಾಕ್ಟರ ಮುಂಜೆಯವರ ಗೇಂಡಾದ ಗೊಂಬೆಯು ಚಿಂದಿಯಾಯಿತು.

ನಾಗಪುರದಲ್ಲಿ ರಾವುಂಡ ಟೇಬಲಕ್ಕೆ ಹೋಗಬೇಕೆಂದಿರುವ ಡಾಕ್ಟರ ಮುಂಜೆಯವರ ಕೃತ್ಯವನ್ನು ನಿಷೇಧಿಸಲು ಪ್ರಚಂಡ ಮೆರವಣಿಗೆ ಹೊರಟಿತು. ಮೆರವಣಿಗೆಯು ಕಾಲು ಮೈಲು ಬಂದಾಗ, ಎದುರಿನಿಂದ, ಡಾಕ್ಟರರ ಅನುಯಾಯಿಗಳು ಧಿಕ್ಕರಿಸಿ ಹೊಡೆದರಿಂದ ಒಂದವರೇ ಇಳಿದು, ಗೊಂಬೆ ಜಗ್ಗಿ ಅದನ್ನು ಚೀರಿ ಮಾಡಿ, ನಡೆದರು. ಇವರು ಹೋದ ಕೂಡಲೆ, ಮತ್ತೊಂದು ಗೊಂಬೆ ಮಾಡಿ, ಅದನ್ನು ಮೆರೆಸುತ್ತ ಸಭಾಸ್ಥಾನಕ್ಕೆ ಹೋಗಿ, ಅಲ್ಲಿ ನಿಷೇಧದ ಠರಾವು ಪಾಸ ಮಾಡಿದರು.

ತುರಂಗದ ಊಟದ ಸಮಾರಂಭನೆ.

ಮುಂಬಯಿ. ಹತ್ತಿರಿರುವ ವಿಲೇಪಾರ್ಲೆಯಲ್ಲಿ ತುರಂಗದಲ್ಲಿ ಕೊಡುವಂಥ ಅನ್ನದ್ದೇ ಒಂದು ಸಮಾರಾಧನೆ ಮಾಡುವ ಏರ್ಪಾಟು ಮಾಡಿದ್ದಾರೆ. ಈ ಪ್ರಸ್ತಾವ ಆವಶ್ಯಕವಾಗುವದು. ಅಂದು ಮಧ್ಯಾಹ್ನ ಕಾಲದಲ್ಲಿ ಸರಿಯಾಗಿ ೧೧ ಗಂಟೆಗೆ ಜೋಳದ ಎರಡು ರೊಟ್ಟಿ ಮತ್ತು ಬೇಳೆ ಕೊಡುವರು. ಸಾಯಂಕಾಲದಲ್ಲಿ ರೊಟ್ಟಿ ಮತ್ತು ಪಲ್ಲೆ ಕೊಡುವರು. ಈ ಸಾರ್ವಜನಿಕ ಊಟಕ್ಕೆ ಫೀ ಇಲ್ಲ. ಯಾರಿಗಾದರೂ ದ್ರವ್ಯಸಹಾಯ ಮಾಡಬೇಕೆಂಬ ಅಪೇಕ್ಷೆಯಿದ್ದರೆ. ಅಲ್ಲೇ ಇಟ್ಟ ಪೆಟ್ಟಿಗೆಯಲ್ಲಿ ತಮಗೆ ತಿಳಿದದ್ದನ್ನು ಹಾಕಬೇಕು. ಪಂಕ್ತಿಯಲ್ಲಿ ಜಾತಿ ನಿರ್ಬಂಧವಿರುವದಿಲ್ಲ.

ಧಾರವಾಡದ ರಾವಸಾಹೇಬ ಯಾರ್ದೆರಾಯರ ಖಾದ್ದಿ ಟಿಕನವು

ಯಾರ್ದೆ ಕಲ್ಯಾಣರಾಯರೆಂಬವರು ಈ ಊರಲ್ಲಿದ್ದರು. ಗಿಡದ ಮೇಲಿನ ಪಕ್ಷಿಯಂತೆ ಈಮೂರ ವಾಸ!! ಆಯುಸ್ಯದಿನ ತಿಟ್ಟನವೆ ಈ ಊರಲ್ಲಿಯೇ ಆಗಿವೆ. ಪುಣೆಯ ಕಾಲೇಜದಲ್ಲಿ ಓದಿದರು. ಮಹಾರಾಷ್ಟ್ರ ದೇಶದಲ್ಲಿಯೇ ಬೀಗತನವಾದ್ದರಿಂದ, ಅಲ್ಲಿಯೇ ಮುಲಕೀ ಖಾತೆಯಲ್ಲಿ ಸೇರಿದರು. ಸಾತಾರೆಯಲ್ಲಿ ಚೀಟನೀಸರಾಗಿದ್ದರು. ವಾಯಿಯಲ್ಲಿ ಮಾಮಲೇದಾರರಾಗಿದ್ದಾಗ ರಾವಸಾಹೇಬ ಪದವಿ ಪಡೆದರು. ಈ ಪದವಿಯೇ ಅವರ ಸರಕಾರ ಸೇವೆಯ ಅತಿರೇಕವನ್ನು ತೋರಿಸುತ್ತದೆ. ಈಗ ಇವರು ಅಹಮದನಗರ ಜಿಲ್ಲೆಯಲ್ಲಿ ಡಿ. ಡಿ. ಕಲೆಕ್ಟರರಾಗಿದ್ದಾರೆ.

ಸತ್ಯಾಗ್ರಹದ ೩೨ ಜನ ಆರೋಪಿಗಳ ಪರವಾಗಿ ನಗರದ ಪ್ರಸಿದ್ಧ ವಕೀಲರಾದ ಶ್ರೀ ಸಪ್ತರ್ಷಿ ಎಮ್. ಎ. ಎಲ್. ಎಲ್. ಬಿ. ಯವರು ವಕೀಲಿ ಪತ್ರ ತಕ್ಕೊಂಡು, ಕಚೇರಿಯಲ್ಲಿ ರಾವಸಾಹೇಬರ ಕಟಕಟೆಯಲ್ಲಿ ಹೋಗಿ ಕೂತರು. ಕೆಲ ಹೊತ್ತಿನ ನಂತರ ಎಪ್ಪತ್ತೈದು ಆರೋಪಿಗಳಿಂದ ವಕೀಲ ಪತ್ರದ ಮೇಲೆ ಸಹಿ ತಕ್ಕೊಳ್ಳುವದಕ್ಕೆ ತಮಗೆ ಅಪ್ಪಣೆಯಾಗಬೇಕೆಂದು ಇವರಿಗೆ ವಿನಂತಿ ಮಾಡಿಕೊಂಡರು. ಹೀಗೆ ಸಪ್ತರ್ಷಿಯವರು ಅಂದ ಕೂಡಲೆ, ರಾವಸಾಹೇಬರು ಅಂಗಾರೆ ಕೆಂಡದ ಸಿಡಿ ಸಿಟ್ಟಿನಿಂದ ಕನಲಿ ಕೂಗಿದರು. “ನನ್ನ ಅಪ್ಪಣೆ ಪಡೆಯದೆ, ನನ್ನ ಕೋರ್ಟಿನಲ್ಲಿ ಬಂದು ಕೂತು, ನನ್ನ ಅಪಮಾನ ಮಾಡಿದಿರಿ ಈ ಕ್ಷಣವೇ ನನ್ನ ಕೋರ್ಟಿನಿಂದ ಎದ್ದು ಹೊರಗೆ ಹೋಗಿರಿ” ಎಂದರು. ನಿಮ್ಮ ಅಪಮಾನ ಮಾಡುವ ಉದ್ದೇಶ ಇಲ್ಲ. ಇದು ಕೋರ್ಟಿನ ಕೋಣೆ ಸಾರ್ವಜನಿಕ ಬಂದು ಕೂಡಬಹುದೆಂದು ವಕೀಲರು ಇವರಿಗೆ ಉತ್ತರ ಕೊಟ್ಟರು. ಕೂಡಲೆ ಮ್ಯಾಜಿಸ್ಟ್ರೇಟರು “ನನಗೆ ನಿಮ್ಮಿಂದ ಉಪದೇಶ ತಿಳಿಯಬೇಕಾಗಿಲ್ಲೆಂದವರೇ ಧಿಮಾಕಿನಿಂದ ಗಂಭೀರವಾಗಿ ಸ್ವಮನಸ್ಸಿನಿಂದ ಮೇಜಿನ ಮೇಲೆ ಬಲವಾಗಿ ಗುದ್ದಿ ನೀವು ಕೂತಲ್ಲಿ ಕಟ್ಟು, ಕಾಯದೆಯನ್ನು ತೋರಿಸುವದಾದರೆ ನನ್ನಿಂದ ಯಾವದೂ ಸೌಜನ್ಯದ ಅಪೇಕ್ಷೆ ಮಾಡಬೇಡಿರೆಂದರು. ಈ ವಾಗ್ವಾದದಲ್ಲಿ ಅನೇಕವಾಗಿ ಬಿಡಿಸಿದ ಪ್ರಶ್ನೋತ್ತರ ನಡೆದವು. ರಾವಸಾಹೇಬರ ವರ್ತನದ ವಿರುದ್ಧ ವಕೀಲರು ಅಲ್ಲಿಯ ವಕೀಲ ಸಂಘದ ಕಡೆಗೆ ತಕರಾರು ಮಾಡಿ ರಾವಸಾಹೇಬರಿಗೆ ಕ್ಷಮೆ ಬೇಡಿಕೊಳ್ಳಲಿಕ್ಕೆ ಹಚ್ಚಬೇಕು. ಅದಕ್ಕೆ ತಪ್ಪಿದರೆ ಹಾಯಕೋರ್ಟಿಗೆ ಅರ್ಜಿಯನ್ನು ಮಾಡಬೇಕು. ಅಲ್ಲಿಯೂ ತಮಗೆ ಅನುಕೂಲವಾಗಿ ನಿರ್ಣಯ ಸಿಗದಿದ್ದರೆ ಅವರ ಮೇಲೆ ಕಾಯದೆ ಪ್ರಕಾರ ಇಲಾಜ ನಡೆಸಬೇಕೆಂದಿದ್ದಾರೆ.

ಕಾಯದೆಭಂಗಕ್ಕಾಗಿ ಕತ್ತೆ ತಂದದ್ದಕ್ಕಾಗಿ ಕಳವಿನ ಖಟ್ಲೆ.

ಅಥಣಿ ತಾಲೂಕ ವಿಜಾಪುರದಲ್ಲಿರುವ ತರುಣ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾದ ಶ್ರೀ. ದೇಶಪಾಂಡೆ ಮತ್ತು ಚಿಮ್ಮಲಗಿಯವರಲ್ಲಿ ಸರಕಾರದಿಂದ ಆಕ್ಷೇಪಾರ್ಹವಾದ ಗುಲಾಮಗಿರಿಯಲ್ಲಿ ರುವ ಹಿಂದು ಸ್ಥಾನ ನೆಂಬ ಪುಸ್ತಕ ವಿರುದ್ಧ ಕೂಟದ ಸಂಶಯದಿಂದ ಶೋಧಿಸಿ ನನ್ನ ಇನ್ನವೇ ಕ್ಷತರು ಝುಣತಿಯ ವಾರಂಟು ತಕ್ಕೊಂಡು ಅವರ ನಿವಾಸಸ್ಥಾನಕ್ಕೆ ಹೋದರು. ಅಲ್ಲಿ ಏನೂ ಸಿಗಲಿಲ್ಲ. ಒಳಗೆ ಮತ್ತೊಂದು ಆರೋಪ ಹೊರಿಸಿ, ಇವರನ್ನು ಹಿಡಿದಿದ್ದಾರೆ. ಸ್ವಾತಂತ್ರ್ಯ ದಿನೋತ್ಸವದಲ್ಲಿ ಬಹಿಷ್ಕಾರದ ಮೆರವಣಿಗೆ ತೆಗೆಯಲು ಕತ್ತೆಯನ್ನು ಹಿಡಕಂಡಿದ್ದರು. ಆ ಕತ್ತೆಯನ್ನು ಇವರು ಕಳವು ಮಾಡಿ ತಂದಿದ್ದಾರೆಂದು ಒಬ್ಬ ಕುಂಬಾರನಿಂದ ಫಿರ್ಯಾದಿ ತಕ್ಕೊಂಡಂತೆ ಮಾಡಿದ್ದಾರೆ. ಆದರೆ ಈ ವಿ. ಮಿವೇ ಕುಂಬಾರನಿಗೆ ಗೊತ್ತಿಲ್ಲ. ಪೋಲೀಸರು ನನ್ನ ಸೆಬ್ಬಟ್ಟನ ಗುರ್ತು ಮಾತ್ರ ತಕ್ಕೊಂಡರು. ಏತಕ್ಕೆ ತಕ್ಕೊಂಡರೆಂಬುದು ನನಗೆ ಹೇಳಲೂ ಇಲ್ಲ, ಗೊತ್ತಾಗಲೂ ಇಲ್ಲ, ಈಗ ಕತ್ತೆಯು ಕಳವಿನ ಫಿರ್ಯಾದಿ ಇರುತ್ತದೆಂದು ತಿಳಿಯಿತೆಂದು ಕುಂಬಾರನು ಅಂದು ಸಾಯಂಕಾಲದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಬಹಿರಂಗ ಹೇಳಿದ್ದಾನೆ.

ಎಷ್ಟೋ ಉದಾರ ಜನರು ಹೋಳಿಹಬ್ಬದಲ್ಲಿ ಕತ್ತೆಗಳನ್ನು ಹಿಡಿದು, ಅವುಗಳನ್ನು ಸರಿ ಪರಿಯಾಗಿ ಹಿಂಸಿಸುವರು. ಪೋಲೀಸರು ಈ ಹಿಂಸೆಯನ್ನು ಕಣ್ಣಾರೆ ನೋಡುವರು. ಆಗ ಅವುಗಳ ಕಾಪಿಡಿಸಿದರೆ. ಸಮಸ್ತ ಪ್ರಾಣಿಗಳಲ್ಲಿಯೂ ತಮ್ಮ ಭೂತದಯೆಯಿರುತ್ತದೆಂದು ತೋರಿಸಿದಂತಾಗುತ್ತದೆ.

ಸಾತಾರೆಯ ಚುನಾವಣೆಯು.

ಸಾತಾರ ಜಿಲ್ಹೆಯು ಮರಾಠ ಬ್ರಾಹ್ಮಣೇತರರ ವಿಜಯ ದುರ್ಗವು. ಇಂಥ ದುರ್ಗವು ಚುನಾವಣೆಯಲ್ಲಿ ಭೇದಿಸಲ್ಪಟ್ಟಿತು. ಕೊಲ್ಹಾಪೂರ ದರಬಾರದಲ್ಲಿ ಕೋಶಾಧಿಕಾರಿಯಾಗಿದ್ದ ಮಿ. ಆತರೇಕರ ಮತ್ತು ಫಾರ್ಸಿ ಗೃಹಸ್ಥರಾದ ಬಾಪ ಬಹಾದ್ದೂರ ಕೂಪರರು ಉಮೇದವಾರರಾಗಿದ್ದರು. ಬಾಪಬಹಾದ್ದೂರರು ಸಹಜವಾಗಿ ಕೋಶಾಧ್ಯಕ್ಷರನ್ನು ಸೋಲಿಸಿದರು. ಇವರಿಬ್ಬರ ಮತದ ಮತಗಳ ಅಂತರವು ೫೫೦೦ ಆಗಿದೆ. ಇಷ್ಟು ಅಂತರವು ಎಲ್ಲಿಯೂ ಆಗಿರಲಿಲ್ಲ.

ಧಾರವಾಡಕ್ಕೆ ಬಂದಿರುವ ವಾಣೀವಿಲಾಸ ನಾಟಕ ಮಂಡಳಿಯವರ ಮಹಾಸಾಮಾಜ

ಈ ಊರಿಗೆ ಈ ನಾಟಕ ಕಂಪನಿಯವರು ಬಂದು ಒಂದೆರಡು ವಾರಗಳಾದುವು. ಅವರ ವಾನಾಪಮಾನದ ಮೇಲ್ಮೆಯನ್ನು ಮುಂಬಯಿ ಜಾಹಿರಿಯಿಂದ ಹಾರಸುದ್ದಿಯಿಂದ ತಿಳಿದು, ನೋಡಲೆಂದು ನನಗೆ ಮನಸಾಯಿತು. ಹೋದೆನು, ನಾಟಕ ನುಗಿದ ಮೇಲೆ ನನ್ನ ಮನದಲ್ಲಿ ಮೂಡಿದ ವಿಷಯವನ್ನು ಪತ್ರದಲ್ಲಿ ಕೊಡುವುದು ಕರ್ನಾಟಕದ ರಂಗಭೂಮಿಯ ದೃಷ್ಟಿಯಿಂದ ಅವಶ್ಯವೆನಿಸಿ ಕೆಳಗಿನ ನಾಲ್ಕು ಶಬ್ದಗಳನ್ನು ಬರೆದಿದ್ದೇನೆ. ಅವುಗಳ ಕಡೆಗೆ ಕಂಪನಿಯವರು ಗಮನ ಕೊಡಬಲೆಂಬುದೇ ನನ್ನ ಹಾರೈಕೆ.

ಪಡದೆಗಳ ಬೆಳಕು, ಸೀನರಿಗಳ ಶೋಭೆಯು, ಹಾಡುಗಾರಿಕೆಯು ಮೊದಲು ಇವು ನಿಜವಾಗಿಯೂ ಅನ್ಯ ಕಂಪನಿಗಳ ಮೇಲಾಟವನ್ನು ಪದ್ಮ ಹೊಡೆದು ಎದುರಿಸುವಂತಿದ್ದುವು. ಧೈರ್ಯಧರನ ನಾತ್ರವಂತೂ ಗಂಧರ್ವ ನಾಟಕದ ಧೈರ್ಯಧರನಿಕಿಂತ ಒಂದು ಪೂಟ ಹೆಚ್ಚಿನದೇ ಆಗಿತ್ತು. ಭಾಮಿನಿಯ ಸ್ವಾಭಾವಿಕವಾದ ಹಾವಭಾವಗಳು ರಮ್ಯವಾಗಿದ್ದುವು. ಇಂಥ ನಾಟಕವನ್ನು ಕನ್ನಡಿಗರೆಲ್ಲರೂ ಎಲ್ಲ ದೃಷ್ಟಿಯಿಂದಲೂ ಎತ್ತಿ ಹಿಡಿಯಬೇಕೆಂದು ಹೇಳಲು ಬೇಡ.

ಕನ್ನಡ ನಾಟಕವಂಬ ಖ್ಯಾತಿಯುಂಟಾಗಬೇಕಾದರೆ ಅದರಲ್ಲಿಯ ಕೆಲವು ಕುಂದುಗಳ ಕಡೆಗೂ ಕಂಪನಿಯವರು ಲಕ್ಷ್ಯಕೊಡಲೇಬೇಕು. ಮಹಾನಾಟಕದ ಹಾಡುಗಳ ಭಾಷಾಂತರವಂತೂ ಮರಾಠಿಯಲ್ಲಿಯ ಮೂಲ ಶಬ್ದಗಳನ್ನಷ್ಟು ಇಟ್ಟು, ಅವಕ್ಕೆ ಕನ್ನಡ ಪ್ರತ್ಯಯವನ್ನು ಹಚ್ಚಿದಂತಿದೆ. ಇದರಿಂದ ಹಾಡುವಾಗ ಮರಾಠಿಯ ಹಾಡುಗಳನ್ನೇ ಹಾಡಿದಂತೆ ಭಾಸವಾಗುತ್ತದೆ. ಇದು ಕನ್ನಡಿಗರಿಗೆ ಕುಂದು ತರುವಂತಹದು. ಆದುದರಿಂದ ಕಂಪನಿಯವರು ಆ ಹಾಡುಗಳನ್ನು ಕೂಡಲೇ ಕನ್ನಡದಿಂದ ಬೇರೆ ಬರೆಯಿಸಿಕೊಳ್ಳಬೇಕು.

ಮತ್ತೊಂದು- ಬೇರೆ ಭಾಷೆಗಳಿಂದ ನಾಟಕಗಳನ್ನು ತಮ್ಮ ತಮ್ಮ ಭಾಷೆಗಳಿಗೆ ಎಲ್ಲರೂ ತೆಗೆದುಕೊಳ್ಳುವುದುಂಟು. ಆದರೆ ಅವುಗಳ ರೂಪವನ್ನು ಪಲ್ಲಟಿಸಿ, ಆ ಆ ಸಮಾಜಗಳಿಗೂ ಸಂಸ್ಕೃತಿಗೂ ಒಪ್ಪುವಂತೆ ಬಗೆಯಲ್ಲಿ, ಅವುಗಳನ್ನು ತೆಗೆದುಕೊಳ್ಳುವುದು ರೂಢಿ. ಉದಾ- ಶಾಹೂನಗರವಾಸಿ ನಾಟಕದವರು ಇಂಗ್ಲಿಷ ಶ್ಯಾಕ್ಸಪಿಯರನ ಮುಂತಾದವುಗಳನ್ನು ಮಹಾರಾಷ್ಟ್ರ ರಂಗಭೂಮಿಯ ಮೇಲೆ ತಂದರು. ಆದರೆ ವೇಷ, ಭಾಷೆ, ವಾತಾವರಣಗಳನ್ನು ತಮ್ಮ ಜನಾಂಗಕ್ಕೆ ತಕ್ಕಂತೆ ಅವುಕ್ಕೆ ರೂಪಕೊಟ್ಟರು. ಅಲ್ಲದೆ ಇಂಗ್ಲೆಂಡದ ರಂಗಭೂಮಿಯನ್ನು ಇಳಿಸಲಿಲ್ಲ; ಇದಕ್ಕನುಗುಣವಾಗಿ ಮರಾಠಿಯಿಂದ ನಾಟಕವನ್ನೆತ್ತಿದವರು [illegible]. ವಾಣೀವಿಲಾಸದಲ್ಲಿ ಸೂತ್ರಧಾರನಿಗೆ ಪಾಗೋಟಿಯೇಕೆ? ಅಂಕಪಡದೆಯಲ್ಲಿ ಮಹಾತ್ಮರ ಏಕೆ ಸಮಾಜವೇಕೆ? ಮರಾಠಿಗಳನ್ನು ಹಾಕಿ ಕರ್ನಾಟಕ, ವಿಜಯ, ನವಕರ್ನಾಟಕ ಆಥವಾ ಜಯ

ವಾದರೊಂದು ಕನ್ನಡ ಪತ್ರವನ್ನಿಟ್ಟಿದ್ದರೆ ನಾಟಕಕ್ಕೇನು ಕುಂದುಬರುತ್ತಿದ್ದಿತು? ಕನ್ನಡ ರಂಗಭೂಮಿಯನ್ನು ಮುಂದೆ ತರುವುದೇ ಆದರೆ ಅದು ತನ್ನ ವೇಷ, ಭಾಷೆ, ರೀತಿನಡಾವಳಿ, ಸಂಸ್ಕೃತಿಗಳನ್ನೇ ರೂಪಗೊಂಡು ಬರ ಕನ್ನಡಿಗರಿಗೇಕೆ ಬರಬಾರದು? ಈ ವಿಷಯವನ್ನೇ ಕೇವಲ ಟೀಕಾ ದೃಷ್ಟಿಯಿಂದ ಸ್ವೀಕರಿಸದೆ ಕನ್ನಡನಾಡಿನ ದೃಷ್ಟಿಯಿಂದ ಸ್ವೀಕರಿಸಿ ಗಮನಿಸುವಂತಾಗಿ ಕೋರುವ

ಓರ್ವ ಕನ್ನಡಿಗ ಪ್ರೇಕ್ಷಕ

ವಿವಿಧ ವರ್ತಮಾನಗಳು.

ರಾ. ಬ. ಕಂಬಳಿಯವರು ಗವ್ಹರ್ನರರನ್ನ ಭೇಟಿಯಾಗಲಿಕ್ಕೂ, ವಿಲಾಯತಿಯ ಪ್ರವಾಸದ ಬಗ್ಗೆ ಬೇಕಾದ ಮಾಹಿತಿ ದೊರೆಕಿಸಲೂ ಪುಣೆಗೆ ಹೋಗಿದ್ದಾರೆ. ಗವ್ಹರ್ನರಸಾಹೇಬರನ್ನು ಕಾಣುವದರಲ್ಲಿ ದಿವಾನಗಿರಿಯ ತಕ್ತವನ್ನು ಇದೆಯೇ ಎಂದು ಕೆಲವರ ತರ್ಕವುಂಟು. ಇವರು ಬರುವ ೧೧ನೆಯ ತಾರೀಖಿನ ಹಡಗದಿಂದ ವಿಲಾಯತಿಗೆ ಹೋಗುವರೆಂದು ತಿಳಿಯುತ್ತದೆ.

ಸಂಗಮನೇರದ ವನಗಾವಲದ ಪ್ರಮುಖ ಸತ್ಯಾಗ್ರಹಿ ಮತ್ತು ಲೋಕಪ್ರಿಯರಾಗಿದ್ದ ಶ್ರೀ. ಶಾಸ್ತ್ರಿಯವರು ಅರಣ್ಯದಲ್ಲಿ ಅದೃಶ್ಯರಾಗಿದ್ದರು. ಎಷ್ಟು ಹುಡುಕಿದರೂ ಪತ್ತೆಯಿಲ್ಲ. ಈಗ ಅವರು ಹೊದೆಯುತ್ತಿದ್ದ ಶಾಲು ಒಂದು ಕೊಳ್ಳದ ದಂಡೆಯಲ್ಲಿ ಸಿಕ್ಕಿದೆ. ಆದರೆ ಪ್ರೇತ ದೊರೆಯದೆ ಹೋಗಿದೆ. ಪ್ರೇತವು ಕೊಳೆತು ಹೋಗಿರಬೇಕೆಂದು ತರ್ಕವಿರುವದು.

ರಾಣೇಬೆನ್ನೂರ ತಾಲೂಕ ಒಳಗಿನ ಮೇಡಿಯಲ್ಲಿ ವೀರಶೈವರ ಮೂರು ಚಹಾದ ಅಂಗಡಿಗಳಿದ್ದವು. ಶ್ರೀ. ಪರಮೇಶ್ವರ ಹೊಸಮನಿಯವರು ಹೋಗಿ, ವ್ಯಾಖ್ಯಾನ ಕೊಟ್ಟದ್ದರ ಉತ್ತಮ ಪರಿಣಾಮವಾಗಿ ಮೂರೂ ಅಂಗಡಿಗಳು ಬಂದಾದವು. ಪ್ರತಿಯೊಂದು ಮನೆಯಲ್ಲಿ ನೂಲು ತೆಗೆಯುವ ರಾಟಿಗಳು ಭರಭರಾಟಿಯಿಂದ ನಡೆದಿವೆ.

ಅಧ್ಯಕ್ಷ ಶ್ರೀ. ವಿಠ್ಠಲಭಾಯಿ ಪಟೇಲರು ಅಂಬಾಲಾದ ತುರುಂಗದಲ್ಲಿದ್ದು, ಮೂಲವ್ಯಾಧಿಯಿಂದ ಅವರ ಪ್ರಕೃತಿಯು ಬಹಳೇ ಕ್ಷೀಣವಾಗುತ್ತಿದೆ. ಅವರು ದಿನಾಲು ಒಪ್ಪತ್ತೇ ಊಟ ಮಾಡುವರು. ಇವರಿಗೆ ಓದಲಿಕ್ಕೆ ವರ್ತಮಾನಪತ್ರ ಕೊಟ್ಟಿಲ್ಲ, ಯಾರಿಗೂ ಭೆಟ್ಟಿಯಾಗಗೊಟ್ಟಿಲ್ಲ.

ರಶಿಯ ಸಂಸ್ಥಾನದಲ್ಲಿ ತೊಡಗಿದ್ದ ಅಲಿಖ ಘುಂಪರನಾಥರೇಬರು ನೈನೀತಾಲಕ್ಕೆ ಹೋಗಿ, ಪಂಡಿತ ಜವಾಹರಲಾಲರನ್ನು ಕಾಣಬೇಕೆಂದರು. ಆದರೆ ತುರುಂಗದ ಅಧಿಕಾರಿಗಳು ಇವರನ್ನು ಕಾಣಗೊಡಲಿಲ್ಲ. ಹೀಗೆ ಇಲ್ಲಿ ಆಶಾಭಂಗವಾಗಿ, ಪಂಡಿತ ಮೋತಿಲಾಲರನ್ನು ಕಾಣಲು ಮಸೂರಿಗೆ ಹೋಗಿದ್ದಾರೆ

ಮುಂಬಯಿಯ ಜೇಲಿ ಬೇರೆ ವರ್ಗದ ಸಂಘಗಳ ೪೦ ಪ್ರತಿನಿಧಿಗಳ ಸ್ಪೇಶಲ ಕಮೀಟಿ ಕೂಡಿ, ರಾಷ್ಟ್ರಾಂತ ಟೇಬಲಕ್ಕೆ ಹೋಗುವಂಥವರು ಕವ್ಹ ಅವರು ಹಿಂದುಸ್ಥಾನದ ಪ್ರತಿನಿಧಿಗಳಲ್ಲೆಂದು ಠರಾವು ಮಾಡಿ, ಅವರ ಹೋಗುವಿಕೆಯನ್ನು ನಿಷೇಧಿಸಿದರು.

ಶ್ರೀ. ಪಾಟೀಲಿಯ ಮಹಾರಾಜರು ನಿಜಾಮರಾಜ್ಯದವರು. ಇವರು ದೇಶ ಸಂಚಾರ ಮಾಡುತ್ತ ಮಹಾರಾಷ್ಟ್ರ ಪ್ರಾಂತದಲ್ಲಿ ಬಂದಿದ್ದಾರೆ. ಇವರು ಮರಳಿ ನಿಜಾಮರಾಜ್ಯದಲ್ಲಿ ಬರಕೂಡದೆಂದು ನಿಜಾಮಸಾಹೇಬರಿಂದ ಹುಕುಮ ಹೊರಟಿರುತ್ತದೆ.

ಸಮಾಚಾರ ಪತ್ರವು ೩೦೦೦ ರೂಪಾಯಿಗಳ ಜಾಮೀನು ಕೊಟ್ಟಿತ್ತು. ಸರಕಾರವು ಅದನ್ನು ಜಪ್ತ ಮಾಡಿ, ಹತ್ತು ದಿವಸಗಳಲ್ಲಿ ಹೊಸ ಡಿಪೋಜಿಟ ಕೊಡಬೇಕೆಂದು ನೋಟೀಸು ಮಾಡಿದೆ.

ಮದ್ರಾಸದ ಆಂಧ್ರಪತ್ರಿಕೆಯ ಸಂಪಾದಕರಾದ ಶ್ರೀ. ನಾಗೇಶ್ವರರಾಯರು ಬಂಧಮುಕ್ತರಾದರು. ಇವರಿಗೆ ತುರುಂಗದಲ್ಲಿ ಅಕ್ಕಿಯೊಳಗಿನ ಹರಳು ಆರಿಸುವ ಕೆಲಸ ಕೊಟ್ಟಿದ್ದರು.

ಮೀರತದಲ್ಲಿ ರಾಜದ್ರೋಹದ ಭಾಷಣಮಾಡಿದರೆಂದು ಪೋಲೀಸರು ಪಂಡಿತ ಕೃಷ್ಣಕಾಂತ ಮಾಲವೀಯರವರನ್ನು ಹಿಡಿದು, ಮೀರತಕ್ಕೆ ಕರಕೊಂಡು ಹೋದರು. ಇವರನ್ನು ಹಿಡಿದುದರಕ್ಕಾಗಿ ಅಲ್ಲಾಹಾಬಾದಿನಲ್ಲಿ ಹರತಾಳವಾಯಿತು.

ರಾ. ಬ. ಕಾಳೆಯವರು ಯುನಿವರ್ಸಿಟಿಯ ಪತಿಯಿಂದ ಆರಿಸಲ್ಪಟ್ಟರು.

THE ANKALAGI BANK LTD

Head Office
Kamanlatta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT.

Dharwar 3-1-1927 } K. B. ANKALGI Managing Director

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ವ ಬಿಚ್ಚಿ ಜೋಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ

ಇದೊಂದೇ ಶಿಕ್ಷಣದ ಸ್ಥಳವು

ಮೋಟಾರ ಡ್ರಾಯವ್ಹಿಂಗ ವಿದ್ಯೆ ಕಲಿಯಲು ಜನರು ಈ ವರೆಗೆ ಪುಣೆ ಮುಂಬಯಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯವನ್ನು ಮಾಡಿಕೊಟ್ಟು, ಡ್ರಾಯವ್ಹಿಂಗ ಮತ್ತು ಬಿಚ್ಚಿ ಜೋಡಿಸುವ ಉತ್ತಮ ಶಿಕ್ಷಣ ಕೊಡುವ ವರ್ಗವನ್ನೇ ನಾವು ತೆಗೆದಿದ್ದೇವೆ. ಈಗಾಗಲೇ ಎಷ್ಟೋ ಜನರು ಕಲಿತು ಪಾಸಾಗಿ ಹೊಟ್ಟೆ ತುಂಬಿಕೊಳ್ಳುತ್ತಿರುವರು. ಸುಮ್ಮನೆ ನಿರುದ್ಯೋಗಿಗಳಾಗಿ ಕೂಡುವದನ್ನು ಬಿಟ್ಟು ಸ್ವಲ್ಪ ದುಡಿದಲ್ಲಿ ಉದ್ಯೋಗಿಗಳಾಗಿ ನಾಲ್ಕು ದುಡ್ಡು ಗಳಿಸುವಿರಿ. ಇಚ್ಛೆ ಇದ್ದರೆ ತೀವ್ರ ಬಂದು ಹೆಸರು ದಾಖಲ ಮಾಡಿಕೊಳ್ಳಬೇಕು. ಪ್ರತಿ ತಿಂಗಳಲ್ಲಿ ೧೦ ವಿದ್ಯಾರ್ಥಿಗಳನು ಮಾತ್ರ ನಾವು ತಕ್ಕೊಳ್ಳುತ್ತೇವೆ. ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಜಾಹೀರಾತು ಕೊಟ್ಟಿದ್ದೇವೆ. ಆದ್ದರಿಂದ ಕೂಡಲೇ ಅರ್ಜಿ ಮಾಡಿ ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪ್ರೊ. ಡಿ. ಎಸ. ಜಟಗಿ.

ಮುನಸಿಪಲಕೊರ್ಟಿನ ಹತ್ತಿರ, ಧಾರವಾಡ

ಸೀರೆ! ಪತ್ತಲ!! ಕಣ!!!

ಶ್ರೀದತ್ತ ಸ್ಪೀವಿಂಗ್ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ

ಸೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಸೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಸುಲಭ ಯೋಗ್ಯ ದರದಿಂದ ಸಿಗುತ್ತವೆ. ಅವಶ್ಯ ವಿಚಾರಿಸಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ ಮಾಲು ತಿರುಗಿ ತಕ್ಕೊಳ್ಳುವೆವು.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು. ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ. ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨೪ ತೊಲೆಯ ಪ್ಯಾಕು	ಒಕ್ಕೆ ೨-೦-೦
ಕೃಷ್ಣ ಪಾರಿಜಾತ ಅತ್ತರು ತೊಲೆ	ಒಕ್ಕೆ ೪-೦-೦

೧೯-೧೧-೨೬

ಮೈಸೂರಸ್ಟೋರ,
ಬೆಳಗಾವಿಯವರ ಗಲ್ಲಿ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡ್ಡಿ
ಮತ್ತು —————— ಧಾರವಾಡ
ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಧಾರವಾಡದ ಬೆಲೆಪಟ್ಟಿ ಬೇಕಾದವರು ಒಂದಾಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕದ ಸಾಮ್ರಾಜ್ಯ ಸ. ೧,೨. ಪ್ರತಿ ಒಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ಬೀರಬಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸ್ಥಾಪನೆ	೧ ೦ ೦
೫. ಚರಿತ್ರ ಸಂಗ್ರಹ ಭಾ. ೧.	೧- ೪-೦
೬. ಅಳಸಿಂಗಾಚಾರ್ಯರ ರಾಮಾಯಣ ೯ ಸಂಪುಟಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಶಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೩-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ಒಕ್ಕೆ	೧- ೮-೦
೧೦. ಲ್ಯಾಂಡ ರೆವ್ಹಿನ್ಯೂ ಕೋಡು	೨-೧೧-೦
೧೧. ನ್ಯಾಯ ನಮೂನೆ ಲೆಕ್ಕದ ಪುಸ್ತಕ	೨-೧೩-೦
೧೨. ಸ್ತ್ರೀಪರ್ಯಾಯ, ನೃಪತುಂಗ ನಿಬಂಧಪತ್ರನು ಪ್ರತಿ ಒಕ್ಕೆ	೦-೧೦-೦
೧೩. ಬಸವಪುರಾಣ ಕಥೆ ಭಾ ೧, ೨,	೨- ೪-೦
೧೪. ಕೀರ್ತನ ಕೇಂದುಹರಣ	೧- ೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.
ವ್ಯವಸ್ಥಾಪಕರು

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪನ್ನು ಪುಸ್ತಕ ರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧ ಮಾಡಿ ಇಟ್ಟಿದ್ದೇವೆ. ಇದರಲ್ಲಿ ಮಾ. ಶ್ರೀ. ಸಿದ್ಧನಗೌಡರ ಬಸನಗೌಡ, ಶ್ರೀ. ಆರೂಢಸ್ವಾಮಿಗಳ ಸ್ಮೃತಿಯುಕ್ತ ಮತ್ತು ಮನಃಪೂರ್ವಕ ಶ್ರೀ. ಸಬಜಡ್ಜ ಅವರ ತೀರ್ಪು ಕೊಡಲ್ಪಟ್ಟಿದೆ ಮತ್ತು ವಾದಿ, ಪ್ರತಿವಾದಿ, ಹಾಗು ವಕೀಲರ ಭಾಷಣಗಳನ್ನು ಕೊಟ್ಟಿರುತ್ತದೆ. ಶ್ರೀಸ್ವಾಮಿಗಳ ಭಕ್ತ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ಶೀಘ್ರ ಮುಗಿಯುವವು, ಆದ್ದರಿಂದ ಗ್ರಾಹಕರು ತ್ವರೆ ಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೀಳುವದರಿಂದ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಅರ್ಧ ಆಣೆಯ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮಾನೇಜರ ವಿಜಯ, **ಧಾರವಾಡ**
॥ ಸಿರಿಗನ್ನಡಂ ಗೆಲ್ಗೆ ॥

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಎಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ಅತಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ, ಕುರುಬ, ಸೋಮವಂಶೀಯ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ನಾಮದೇವ ಶಿಂಪಿ, ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಹಡಪದ, ಒಕ್ಕಲ, ಗೊಲ್ಲರ, ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ ಶಿಕ್ಕಲಿಗಾರ ಲಮಾಣಿ ಮೊದಲಾದ ನಿಕೃಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯೂ ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಂಪತ್ತಿಕ, ಸಾಮಾಜಿಕ, ನೈತಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸಾಧಾರಣರಿಗೆ ಮಹಳಾಭ್ಯಾಸದ ಶಿಕ್ಷಣ ಪ್ರಸಾರ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ ಹಾಗೂ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ಬಡತನ, ಅಡಚಣಿ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು ಮೊದಲಾದವು.

ಕರ್ನಾಟಕದಲ್ಲಿಯ ಎಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾವಿ, ಕಾರವಾರ ಹಾಗೂ ನಿಜಾಮ ಸರಕಾರದ ಮೊದಲಾದ ಬ್ರಿಟಿಶ ಜಿಲ್ಹೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಿಲ್ಲದ ವಯಸ್ಸಿನ ಸ್ತ್ರೀಪುರುಷರು ಕೆಳಗೆ ಕಾಣಿಸಿದಂತೆ ಆಯಾ ತರಗತಿಯ ದೇಣಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರಾಗಬಹುದು

ಆಶ್ರಯದಾತರು:- ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ದೇಣಿಗೆಯನ್ನು ಕೊಡುವಂತವರು.

ದಾತೃಗಳು. ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಆಜೀವ ಸಭಾಸದರು:- ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಸಾಧಾರಣ ಸಭಾಸದರು:- ಇವರು, ಕೆಳ ೧ ನೇ ತರಗತಿ:- ಕನಿಷ್ಠ ೫ ರೂ. ವಾರ್ಷಿಕ ವರ್ಗಣಿ

೨ ನೇ ತರಗತಿ:- ಕನಿಷ್ಠ, ೨ ರೂ. ವಾರ್ಷಿಕ ವರ್ಗಣಿ ಕೊಡುವವರು.

೩ ನೇ ತರಗತಿ:- ಕನಿಷ್ಠ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.

೪ ನೇ ತರಗತಿ:- ಕನಿಷ್ಠ ೪ ಆಣೆ. ವಾರ್ಷಿಕ ವರ್ಗಣಿ ಕೊಡುವವರು.

ಹಿಂದುಳಿದ ಬಂಧುಭಗಿನಿಯರು ಅವಶ್ಯವಾಗಿ ಸಂಘದ ಮೆಂಬರರಾಗಬೇಕೆಂದು **ಅಲ್ಲೇ ಆಗ್ರಹದ ವಿನಂತಿಯು**,

ದೇವನಗೌಡ ಲಿಂಗನಗೌಡ ಪಾಟೀಲ,
ಬಿ. ಎ. ಎಲ್ಎಲ್. ಬಿ. **ಹಾಯಕೋರ್ಟ ವಕೀಲ, ಧಾರವಾಡ**

ಜರ್ಮನಿಯಲ್ಲಿದ್ದ ಉರಿಯು.

ಜರ್ಮನಿನ ರಾಜ್ಯದ ಕುಟಿಲ ರಾಜಕೀಯ ಉಲ್ಬಣ ನೆದ್ದಿರುತ್ತದೆ. ಹದಿನೈದು ದಿವಸಗಳ ಹಿಂದೆ ಜರುಗಿದಂಥ ಚುನಾವಣೆಯಲ್ಲಿ ಸರಕಾರ ಪಕ್ಷವು ಅಶಕ್ತವಾಗಿ, ಆಗಂತೂ ಶಕ್ತಿಗುಂದಿ ಹೋಗಿದೆ. ಮಹಾಯುದ್ಧದ ಕಾಲದಲ್ಲಿ ಅದೇಶಿಯರಿಗೆ ಏಕಸೂತ್ರ ನೆಲೆಕಟ್ಟಬೇಕಾಗಿದ್ದಿಲ್ಲ ಒಬ್ಬನ ಅಧಿಪತ್ಯ ಹೋದ್ದರಿಂದಲೇ ಅಂದರೆ ಫ್ರಾನ್ಸದಂತೆ ಜರ್ಮನಿಯೂ ಪ್ರಜಾಸತ್ತಾತ್ಮಕ ರಾಜ್ಯವಾಗಬೇಕೆಂದು ಬಯಸಿ, ಕೇಸರರನ್ನು ಪದಚ್ಯುತ ಮಾಡಿದ್ದರಿಂದಲೇ, ಜರ್ಮನಿಗೆ ಅಧೋಗತಿ ಬಂತು. ಇಂಗ್ಲಂಡ ಮತ್ತು ಫ್ರಾನ್ಸವು ಹೇಳಿದಂತೆ ಒಪ್ಪಂದಿಕೆಯ ಶರ್ತುಗಳನ್ನು ಒಪ್ಪಿ ಕೊಡಬೇಕಾಯಿತು. ಈ ಬಲೆಯನ್ನು ಹೇಳಲಿಕ್ಕೆ ಬರದಷ್ಟು ಅಪಮಾನವಾಗಿದೆ. ಹೇರ ಹಿಟ್ಲರನೆಂಬ ಮನುಷ್ಯನಂತೂ ಸರಕಾರಕ್ಕೆ ಸ್ಪಷ್ಟವಾದ ಉತ್ತರ ಹೇಳಿದ್ದಾನೆ. ಸಂಧಿಯೆಲ್ಲವೂ ಅಂದವಾದವೆಂದು ತಿಳಿಯುತ್ತಾ ಬದ್ದರಿಂದಲೇ ಜರ್ಮನಿಯು ಅಧಃಪತನವಾಯಿತು. ಇವತ್ತಿನ ಚುನಾವಣೆ ಇಲ್ಲದಿದ್ದರೂ, ಮುಂದಾಗುವ ಎರಡು ಮೂರು ಚುನಾವಣೆಗಳಲ್ಲಿಯೇ ಪ್ರಚಂಡ ಬಹುಮತ ಪಡೆದುಕೊಂಡು, ೧೯೧೯ ರಲ್ಲಿ ಜರ್ಮನಿಯು ಸೋತಿತೆಂದು ಹೇಳಿದವರು, ಪರಕೀಯರ ಕೂಡ ಒಪ್ಪಂದಿಕೆ ಮಾಡಿಕೊಂಡವರ ರುಂಡವನ್ನು ಚೆಂಡಾಡುವೆವೆಂದು ಈತನು ನಿರ್ಭಯದಿಂದ ಅನ್ನುತ್ತಾನೆ. ಇದೇ ಪ್ರಕಾರ ಕೂಟದ ಕೋರ್ಟಿನಲ್ಲಿ ಸಾಕ್ಷಿ ನುಡಿದಿದ್ದಾನೆ. ಚುನಾವಣೆಯಲ್ಲಿ ಯಶ ಬಂದ ಕೂಡಲೆ, ಜರ್ಮನಿನ ಮನಸ್ಸಿಗೆ ವಿರುದ್ಧವೆಂಬ ಶರ್ತುಗಳನ್ನು ಒಪ್ಪಿಗೆ [illegible], ಒಪ್ಪಂದಿಕೆಯು ಎಷ್ಟು [illegible] ಎಂದು ಸಾರಿ, ಜರ್ಮನಿಯನ್ನು ಮೊದಲಿನಂತೆ ಘನತೆಗೇರಿಸಬೇಕೆಂದೇ ಇವನ ಹಾರಿಕೆಯಾಗಿದೆ. ಈ ಪಕ್ಷವು ಇಟಲಿಯ ಫ್ಯಾಸಿಸ್ಟ ಸಂಘವನ್ನು ಹೋಲುತ್ತದೆ.

⁂

ಮುಂಬಯಿಯಲ್ಲಿ ಬುದ್ಧ ಮಂಡಲದ ಅಧ್ಯಕ್ಷರಾದ ಶ್ರೀ ಸೌ|| ರಮಾಬಾಯಿಯವರಿಗೆ ಮತ್ತು ಕಾಂಗ್ರೆಸ ಬುಲಿಟಿನ್ನದ ಸಂಪಾದಿಕೆಯರಾದ ಕುಮಾರಿ [illegible] ಇವರಿಗೆ ಮೂರು ಮೂರು ತಿಂಗಳ ಸಾದಾ ಶಿಕ್ಷೆಯಾಯಿತು. ಶ್ರೀಮತಿ ರಮಾಬಾಯಿಯವರು ಸೆರೆಮನೆಗೆ ಹೋಗುವಾಗ-

ಮುಂಬಯಿಯಲ್ಲಿ ಮನೆಗೊಬ್ಬರಂತೆ ಸ್ವಯಂಸೇವಕ, ಸ್ವಯಂಸೇವಿಕೆಯರನ್ನು ಕಾಂಗ್ರೆಸ ಕಾರ್ಯಕ್ಕಾಗಿ ಕೊಡಬೇಕು. ಪರ್ಕೇಟರು ಬಹಿಷ್ಕಾರವನ್ನು ಬಲ ಪಡಿಸಬೇಕು. ತರುಣ ಸಂಘದವರು ಸರ್ವಸ್ವ ಕಾಂಗ್ರೆಸಕ್ಕೆ ಅರ್ಪಣ ಮಾಡಿಕೊಳ್ಳಬೇಕೆಂಬ ಸಂದೇಶ ಹೇಳಿದ್ದಾರೆ.

ಹಿಂದುಸ್ಥಾನದ ತುಂಬ ನಡೆದ ಯಾವತ್ತೂ ಪ್ರಾಂತದ ಚಳವಳಿ ನೋಡಿರಿ ಹೆಣ್ಣುಮಕ್ಕಳೇ ಮುಂದಾಗಿರುವರು. ಗಂಡನಿಗೆ ಶಿಕ್ಷೆಯಾದ ಕೂಡಲೆ, ಹೆಂಡತಿಯು ಅವನ ಸ್ಥಳ ಆಕ್ರಮಿಸುವಳು ಅರ್ಧಾಂಗಿ ಎಂಬುದರ ಸಾರ್ಥಕವು. ಪಂಡಿತ [illegible]ಯವರಿಗೆ ಶಿಕ್ಷೆಯಾದ ಕೂಡಲೆ, ಅವರ ಪತ್ನಿಯವರಾದ ಶ್ರೀ. ಸೌ|| ವಿಜಯಲಕ್ಷ್ಮಿಯವರು ಮುಂದೆ ಬಂದು, ಗಡವಾಲ ದಿನದ ನಿಮಿತ್ತ ನಡೆದ ಸಭೆಗೆ ಅಧ್ಯಕ್ಷರಾದರು. ಪಂಡಿತ ಮೋತಿಲಾಲರ ಹೆಂಡತಿ, ಮಗಳು, ಸೊಸೆ ಮೊದಲಾದವರೆಲ್ಲರೂ ಚಳವಳಿಯಲ್ಲಿ ಧುಮುಕಿದ್ದಾರೆಂಬುದಂತೂ ಸರ್ವಶ್ರುತವಾಗಿದೆ.

ಮೊನ್ನಿನ ದಿವಸ ಧಾರವಾಡ ಪೋಲೀಸ [illegible]ಯಲ್ಲಿ ಒಂದು ದೊಡ್ಡ ಮಂಗವು ಗಿಡದ ಮೇಲಿಂದ ಬಿದ್ದು ಅಶಕ್ತವಾಯಿತು. ಧಾರವಾಡದ ಪೋಲೀಸರವರು ಅದನ್ನು ಇಲ್ಲಿಗೆ ತಂದು ಬದುಕಲೆಂದು ಮಾಡಬೇಕಾದ ಉಪಚಾರಗಳನ್ನೆಲ್ಲ ಮಾಡಿದರೂ ಅದು ಸತ್ತೇ ಹೋಯಿತು. ಪೋಲೀಸರವರೆಲ್ಲರೂ ಪಟ್ಟಿ ಹಾಕಿ, ಅದನ್ನು ಬಹು ಸಂಭ್ರಮದಿಂದ ಮೆರೆಯಿಸಿ, ಅಂತ್ಯಸಂಸ್ಕಾರ ಮಾಡಿಸಿದರು. ಮೋಟಾರಿನ ಮೇಲೆಯೇ ಮಂಟಪ ಕಟ್ಟಿ ಮಂಟಪವನ್ನು ಬಹುವಾಗಿ ಶೃಂಗಾರ ಮಾಡಿ[illegible]. ಬ್ಯಾಂಡು, ಬಜಂತ್ರಿ, ಬತ್ತಿ, [illegible] ಜನಸಮುದಾಯದೊಡನೆ ಮೆರವಣಿಗೆಯು ಹೊರಟಿತು. ದಾರಿಗುಂಟ ಜನರು ತಂಡತಂಡವಾಗಿ ಮೆರವಣಿಗೆ ನೋಡುತ್ತಾ ನಿಂತಿದ್ದರು. ಮಂಗವು ಪೂರ್ವಜನ್ಮದಲ್ಲಿ ಸುಕೃತ ಮಾಡಿದ್ದರಿಂದಲೇ ಅಂತ್ಯಕಾಲದಲ್ಲಿ ಇಂಥ ಮರ್ಯಾದೆ ಹೊಂದಿತು.

[illegible]ಕೊಡಗುಪತ್ರಕ್ಕೆ ಜಾಮೀನು

ಮಡಿಕೇರಿಯ ಕೊಡಗು ವೃತ್ತಪತ್ರಕ್ಕೆ, ಅಲ್ಲಿಯ ಚೀಫ ಕಮಿಶನರರು ೧೦೦೦ ರೂಪಾಯಿ ಜಾಮೀನು ಕೇಳಿದ್ದರಿಂದ ಅದು ಬಂದಾಯಿತು. ಇದು ಕರ್ನಾಟಕದಲ್ಲಿ ನಿಂತಿರುವ [illegible] ಪತ್ರಿಕೆಗಳಲ್ಲಿ [illegible] ವರ್ಗಕ್ಕೆ ಸೇರಿದವೆಂದು ಹೇಳಬಹುದು.

ಧಾರವಾಡ.

ರಾ. ಬ. ಕಂಬಳಿಯವರು ತಮ್ಮ ಕೂಡ [illegible] [illegible]

ಗಣಪತಿ ಮೂರ್ತಿ [illegible] [illegible] ಜನರ ಆಧಾರ ಮನ್ನಿಸಿದ [illegible]

ದೇವರು ಸಚ್ಚಿನ್ನು ಆನಂದದಿಂದ [illegible] [illegible]

ಇಂದು ಬಿಡುಗಡೆಯಾದರು [illegible] ಎಲ್ಲರೂ ಅವಶ್ಯವಾಗಿ [illegible] ನೋಡಬೇಕು

ಕರ್ನಾಟಕ ಸಹ್ಯಾದ್ರಿಯ [illegible] ಧನ [illegible] ಬಹುಮಾನ [illegible] ಉಚ್ಚವಾದ [illegible] ಹೊರಬೀಳುತ್ತದೆ

ನೋಟೀಸು

ಮನೆಯಲ್ಲಿ ಎರಡು ಮನುಷ್ಯರಿಗೆ [illegible] ಅಡಿಗೆ ಮತ್ತು ಕನ್ನಡ [illegible] ವಿಷಯವನ್ನು ಕಲಿಸಲಿಕ್ಕೆ ಒಬ್ಬ ಮಾಸ್ತರ ಬೇಕಾಗಿರುತ್ತದೆ. [illegible] ಅಥವಾ [illegible] ಸಂಪಾದಿಸಬೇಕು. ಊಟ ಮತ್ತು [illegible] ಪ್ರಕಾರ ೧೦ರಿಂದ ೧೫ವರೆಗೆ ಪಗಾರ ಕೊಡುತ್ತೇನೆ. ಬೇಕಾದವರು [illegible] ವಯಸ್ಸು [illegible] ಕೆಳಗಿನ ಪತ್ತೆಕ್ಕೆ ಬರೆಯಬೇಕು.

10-[illegible] R S Deshpande
Tellihalli
Post Savanur

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಈ ಬ್ಯಾಂಕಿನಲ್ಲಿ [illegible]
ಪ್ರಕಾರ [illegible]
ಕರ್ನಾಟಕದಲ್ಲಿ [illegible]
[illegible]

[illegible] [illegible]

[illegible] ಕೆಳಗೆ [illegible] ತಿಳಿದುಕೊಳ್ಳಬೇಕು.

ಮಲ್ಹಾರರಾವ ವಿ. ಜಹಾಗೀರದಾರ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಠೇವಣಿಯಿಂದ ಹಣವನ್ನು ಠೇವು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಿಯಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟುಕೊಂಡು ಸಾಲ ಕೊಡುವ [illegible] ಏರ್ಪಡಿಸಲಾಗಿರುತ್ತದೆ.

ಪಿ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸು.

ಯಾವತ್ತು ಜನರಿಗೆ ಇದರ ಮೂಲಕ ತಿಳಿಸುವದೇನಂದರೆ-

ಹಾನಗಲ್ಲ ತಾಲೂಕ ಬಂಕಾಪುರ ಪರಗಣ್ಯ ಗ್ರಾಮಗಳಿಗೆ [illegible] ಲೋಕಲ್ಲಬೋರ್ಡ ಮೆಂಬರ ಇದ್ದ ಮಿ|| ಮಲ್ಲನಗೌಡ [illegible] ಇವರು [illegible] ತಿಂಗಳಿನಲ್ಲಿ [illegible] ಮೀಟಿಂಗ್ಗಳಿಗೆ ಹಾಜರಾಗದ್ದರಿಂದ ಅವರು ಮೆಂಬರ ಆದದ್ದು ರದ್ದ ಆಗಿರುತ್ತದೆ. [illegible] ಹೊಸ ಚುನಾವಣೆಯನ್ನು ಮಿ|| ಕಲೆಕ್ಟರ [illegible] [illegible] ಲೋಕಲಬೋರ್ಡ ಚುನಾವಣೆ ಸಂಬಂಧಿ ನಿಯಮಗಳ [illegible] ಚುನಾವಣೆಯನ್ನು ತಾರೀಖು [illegible] ಮಂಗಳವಾರ [illegible] ಮತ್ತು [illegible] ನಿಯಮದ ಪ್ರಕಾರ ಚುನಾವಣೆ ಸಂಬಂಧಿ ಕೆಳಗೆ ಬರೆದ ಪ್ರಕಾರ [illegible]

ನಾಮಿನೇಶನ್ನ ಕಾಗದಗಳನ್ನು ಸ್ವೀಕರಿಸುವ ಬಗ್ಗೆ

ಈ ಚುನಾವಣೆ ಕೆಲಸದ ಬಗ್ಗೆ ಮಿ|| ಮಾಮಲೇದಾರ ಸಾ|| ತಾಲೂಕ ಹಾನಗಲ್ಲ ಇವರನ್ನು [illegible] ನೇಮಿಸಲಾಗಿದೆ. ಉಮೇದವಾರರಾಗಬಿಚ್ಛಿಸುವ ಜನರು ತಮ್ಮ ನಾಮಿನೇಶನ್ನ [illegible] ಹಾನಗಲ್ಲ ಮಾಮಲೇದಾರ ಸಾ|| ರವರ ಕಡೆಗೆ ತಾರೀಖು [illegible] ನೇ ಶನಿವಾರ ದಿವಸ ಅಥವಾ ಅದರ ಒಳಗಾಗಿ [illegible] ದಿವಸ ಮಧ್ಯಾಹ್ನ ೧೧ ರಿಂದ ಸಂಜೆ ೫ ಘಂಟೆ ಒಳಗಾಗಿ ಕೊಡಬೇಕು. [illegible] ನಾಮಿನೇಶನ್ನ ಫಾರ್ಮುಗಳನ್ನು ರಿಟರ್ನಿಂಗ [illegible] ಕೇಳಿದರೆ ಅವರು ಕೊಡುವರು.

ನಾಮಿನೇಶನ್ನ ಪೇಪರಗಳ ತಪಾಸಣೆ

ರಿಟರ್ನಿಂಗ ಆಫೀಸರರು ನಾಮಿನೇಶನ್ನ ಪೇಪರಗಳನ್ನು ತಾರೀಖು [illegible] ನೇ [illegible] ದಿವಸ ಮಧ್ಯಾಹ್ನ ೧೨ [illegible] ಗಂಟೆಕ್ಕೆ ತಮ್ಮ ಆಫೀಸಿನಲ್ಲಿ ತಪಾಸಮಾಡುವರು. ತಪಾಸಣೆ ಮುಗಿದ ನಂತರ ಸ್ವೀಕರಿಸಿದ ನಾಮಿನೇಶನ್ನ ಪೇಪರಗಳ ಬಗ್ಗೆ ರಿಟರ್ನಿಂಗ ಆಫೀಸರರು [illegible] ಒಂದು ಪಟ್ಟಿಯನ್ನು ತಯಾರ ಮಾಡುವರು. ಮತ್ತು ಪ್ರತಿಯೊಬ್ಬ ಉಮೇದವಾರರಿಗೆ [illegible] ಗುರುತುಗಳನ್ನು ಗೊತ್ತುಮಾಡಿ ಕೊಡುವರು. ಮತ್ತು ಈ ಪ್ರಕಾರ ತಯಾರ ಮಾಡಿದ [illegible] ನೋಟೀಸು ಬೋರ್ಡಿಗೆ [illegible] ಪ್ರಸಿದ್ಧ ಪಡಿಸುವರು.

ಮತಕೊಡುವದು

ಚುನಾವಣೆಯ ದಿವಸ ಅಂದರೆ [illegible] ನೇ ದಿವಸ ಮುಂಜಾನೆ [illegible] ಘಂಟೆ [illegible] ಘಂಟೆ [illegible] ಮಧ್ಯಾಹ್ನ [illegible] ಘಂಟೆಯಿಂದ ಸಂಜೆ [illegible] ಘಂಟೆವರೆಗೆ ಮತಗಳನ್ನು ತೆಗೆದುಕೊಳ್ಳುವದಲ್ಲಿ ಬರುವದು. ಸಂಜೆ [illegible] ಘಂಟೆಕ್ಕೆ ಮತ ತೆಗೆದುಕೊಳ್ಳುವದು ಬಂದಾಗುವದು. [illegible] ದಿವಸ [illegible] ಯಾರಿಗಾದರೂ ಸಂಜೆ ಆರು ಘಂಟೆಯೊಳಗಾಗಿ [illegible] ತಮ್ಮ ಮತದ ಕಾಗದವನ್ನು ಹಾಕಲಿಕ್ಕೆ [illegible] ಬಂಕಾಪುರ ಪರಗಣ್ಯ ಗ್ರಾಮಗಳ ಚಾವಡಿಯಲ್ಲಿ ಈ ದಿವಸಾ ಮತಕೊಡುವ ಕೆಲಸ ನಡೆಸುವರು.

ಮತಗಳ ಎಣಿಕೆ

ತಾರೀಖು [illegible] ನೇ [illegible] ದಿವಸ ರಿಟರ್ನಿಂಗ ಆಫೀಸರರು ತಮ್ಮ ಆಫೀಸಿನಲ್ಲಿ [illegible] ಮತಗಳ ಎಣಿಕೆಯನ್ನು ಮಾಡುವರು. ಮತ್ತು ಅದೇ ದಿವಸ ಚುನಾವಣೆ ಪರಿಣಾಮವನ್ನು ಘೋಷಿಸುವರು.

ಸೂಚನಾ- ಮುಂಬಯಿ ಗವರ್ನಮೆಂಟ ಸರಕಾರಿ ನೋಟಿಫಿಕೇಶನ್ನ ನಂಬರ [illegible] ತಾರೀಖು [illegible] ನೇ ತಾರೀಖು [illegible] ನಿಯಮಗಳಲ್ಲಿ ಚುನಾವಣೆ ಸಂಬಂಧಿ ಹೇಳಿದ ನಿಯಮಗಳು [illegible] ಕ್ರಮಗಳಲ್ಲಿ ಅನುಸರಿಸಲ್ಪಡುತ್ತವೆ.

ಧಾರವಾಡ
[illegible]

J. Abbott,
ಕಲೆಕ್ಟರ ಧಾರವಾಡ

[illegible] [illegible]

THE UNITED KARNATAK INSURANCE COMPANY
LTD. DHARWAR

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ಏಕ್ಟ ಪ್ರಕಾರ ರಜಿಸ್ಟರಾಗಿದೆ)

ಏಜಂಟರು ಬೇಕು

ಕನ್ನಡ ನಾಡಿನಲ್ಲಿ ಕನ್ನಡಿಗರ ಧನಸಹಾಯದಿಂದ ಸ್ಥಾಪಿಸಲ್ಪಟ್ಟ ಮತ್ತು ಅವರಿಂದ ನಡೆಸಲ್ಪಟ್ಟ ಈ ಮೊದಲನೇ ಕಂಪನಿಗೆ ವಿಮೆಗಳನ್ನು ಮಾಡುವದಕ್ಕೂ ವಿಮೆಯ ಕೆಲಸವನ್ನು [illegible] ಕೊಡುವದಕ್ಕೂ ಎಲ್ಲಾ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ನಿಯಮಿತ ಕೆಲಸವನ್ನು ಗ್ಯಾರಂಟಿ ಮಾಡಿದಲ್ಲಿ ವಿಶೇಷ ಸವಲತ್ತುಗಳು ಕೊಡಲ್ಪಡುವವು. ಕನ್ನಡಿಗರೇ ಈ ಪ್ರಸಂಗ ನಮ್ಮ ಕೆಲಸವನ್ನು ಕೈಕೊಂಡು ಲಾಭ ಪಡಕೊಳ್ಳಿರಿ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar.
ಸೆಕ್ರಿಟರಿ
ಯು. ಕೆ. ಇ. ಕೆ. ಲಿ. ಧಾರವಾಡ

ಪೋಲಿಸ ಅತ್ಯಾಚಾರ ನಿಜ
ಆದರೆ
ಇಂಥವರೇ ಆರೋಪಿ ಎಂದು
ಗೊತ್ತಾಗದು

ಸಿಂಧಪ್ರಾಂತಕ್ಕೆ ಸೇರಿದ ಸಕ್ಕರದಲ್ಲಿ ಹಿಂದೂಮುಸಲಮಾನ ದಂಗೆಯಾಯಿತು. ಆಗ ಪೋಲಿಸರು ನಡೆಸಿದ ಲಾಠೀರಾಜ್ಯದಲ್ಲಿ ಹಿಂದೂ ಜನರೇ ಬಹುವಾಗಿ ಘಾಸಿಯಾದರು. ಪೋಲಿಸ ಅತ್ಯಾಚಾರವು ಬಹಳ ಬೊಬ್ಬಾಟಕ್ಕೆ ಕಾರಣವಾಗಲು ಸರಕಾರದವರು ಈ ಬಗ್ಗೆ ವಿಚಾರ ಮಾಡಲೆಂದು ಕಮಿಟಿ ನೇಮಿಸಿದರು. ಕಮಿಟಿಯಲ್ಲಿ ಮ್ಯಾಜಿಸ್ಟ್ರೇಟ, ಡಿಪುಟಿ ಪೋಲಿಸಸಾಹೇಬ ಮತ್ತು ಖಾನಬಹಾದ್ದೂರ ಪೀರಬಕ್ಷ ಇವರು ಮೆಂಬರರಾಗಿದ್ದರು. ಇವರು ಮಾಡಿದ ವಿಚಾರಣೆಯಿಂದ,

ಹೊರಟ ತೀರ್ಪು

ಪೋಲಿಸರು ಲಾಠಿಯ ಉಪಯೋಗವನ್ನು ಹೆಚ್ಚಾಗಿ ಮಾಡಿದ್ದು ನಿಜ. ಆಗಿನ ಪರಿಸ್ಥಿತಿಯೇ ಹಾಗಿತ್ತು. ಹಿಂದೂಜನರು ಓಡಿಹೋಗುತ್ತಿದ್ದಾಗ, ಇವರು ಚಳ್ಳಿರಿರಬೇಕೆಂದು ಬಹುವಾಗಿ ಹೊಡೆಯಬೇಕಾಯಿತು. ಯಾರು ಹೊಡೆದರೆಂಬದನ್ನು ಗುರ್ತಿಸಲಿಕ್ಕೆ ಬರುವಂತಿಲ್ಲ ಎಂದು ಪೋಲಿಸರು ಸಾರಿದರು. ಹೊಡಿಸಿಕೊಂಡು ಸತ್ತವರು ಸತ್ತೇಹೋದರು

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಹುಕುಮು
ಬೇಕಾಯದೆಶೀರವಾಯಿತು

ರಾಣಪೂರದಲ್ಲಿ ಪೋಲಿಸ ಅತ್ಯಾಚಾರವನ್ನು ಕುರಿತು ವಿಚಾರ ಮಾಡಲಿಕ್ಕೆ ಹೋದ ಗೃಹಸ್ಥರನ್ನು ಅಲ್ಲಿಗೆ ಹೋಗಗೊಡದೆ, ಅವರನ್ನು ತುರಂಗಕ್ಕೆ ಕಳಿಸಿದರಷ್ಟೇ; ಈ ಕೃತ್ಯವು ಬೇಕಾಯದೆಶೀರವಿರುತ್ತದೆಂದು ವಕೀಲ ಸಂಘದವರು ಅಹಮದಾಬಾದಿನ ಜಡ್ಜರ ಕಡೆಗೆ ಅರ್ಜಿ ಮಾಡಿದರು. ಇದರ ವಿಚಾರಣೆಯಾಗಿ, ಶಿಕ್ಷೆಯು ಬೇಕಾಯದೆಶೀರವಿದ್ದು, ಆರೋಪಿಗಳನ್ನು ಬಂಧಮುಕ್ತ ಮಾಡುವಂತೆ ಜಡ್ಜರು ಹಾಯಕೋರ್ಟಿಗೆ ಸಿಫಾರಸು ಮಾಡಿದ್ದಾರೆ.

ಶ್ರೀ. ಹರಕಾರೆಯವರಿಗೆ ಹುಚ್ಚು ಹಿಡಿದಿಲ್ಲ.

ಶ್ರೀ. ಹರಕಾರೆಯವರು ಗಣಪತ್ಯುತ್ಸವದಲ್ಲಿ ಖಾಂಬನ ಮೀಮಾಂಸೆ ಮಾಡುವ ವ್ಯಾಖ್ಯಾನ ಕೊಡುವ ಕಾಲಕ್ಕೆ ಪೋಲಿಸರು ಅವರನ್ನು ಹಿಡಕೊಂಡು ಹೋದರಷ್ಟೇ; ಇವರ ಬುದ್ಧಿಗೆಟ್ಟು, ಹುಚ್ಚು ಹಿಡಿದಿರಬೇಕೆಂದು ಪೋಲಿಸ ಕಮೀಶನರರು ಇವರ ತಲೆಯ ತಪಾಸಣೆ ಮಾಡಲು, ಇವರನ್ನು ಹುಚ್ಚರ ಆಸ್ಪತ್ರಿಗೆ ಕಳಿಸಿದರು. ಅಲ್ಲಿ ಡಾಕ್ಟರರು ೧೫ ದಿವಸಗಳ ತನಕ ಇವರ ಪ್ರಕೃತಿ, ಭಾಷಣ, ಅಂಗಭಾವ ನೋಡಿ, ಇವರು ಹುಚ್ಚರಲ್ಲೆಂದು ಸರ್ಟಿಫಿಕೇಟು ಕೊಟ್ಟಿದ್ದಾರೆ.

ಕನ್ನಡತಿಯಾದ ಮುಸಲಮಾನಳಾದ
ನಾರೀಮಣಿಯು.

ಮುಂಬಯಿಯಲ್ಲಿ ಸತ್ಯಾಗ್ರಹಿಯಾಗಿ, ಕಾಂಗ್ರೆಸ ಪತ್ರಿಕೆಯ ಸಂಪಾದಿಕೆಯಾಗಿದ್ದ ಕುಮಾರಿ ದಿಲಖುಷ ಸಯ್ಯದಳು ಕನ್ನಡತಿಯು. ತಂದೆ ತಾಯಿಗಳಿಬ್ಬರೂ ಕರ್ನಾಟಕಸ್ಥರು. ಇವಳಿಗೆ ಕನ್ನಡನಾಡಿನ ಅಭಿಮಾನವೂ ಉಂಟು. ಆದರೆ ಇವಳು ತಾನು ಮೊದಲು ಹಿಂದೂ ದೇಶವಾಸಿ, ಆನಂತರ ಪ್ರಾಂತ ಮತ್ತು ಕುಲವೆಂದು ಭಾವಿಸುವಳು. ಜಾತಿಗಳ ಕಲಹದಲ್ಲಿ ಎಂದೂ ಮನಸ್ಸು ಹಾಕುವದಿಲ್ಲ. ಮುಂಬಯಿಯಲ್ಲಿ ಕನ್ನಡಿಗರ ಕೂಟವೊಂದಷ್ಟೇ; ಅದರ ಕಾಂಗ್ರೆಸ ಕಮೀಟಿಯ ಮೆಂಬರಳು ಕೂಡ. ಭಾಷಣಪಟವನ್ನು ತೆಗೆಯಿಸಲಿಕ್ಕೆ ಬರಬೇಕೆಂದು ಇವಳನ್ನು ಕರೆಯಲು- ನನಗೆ ಸದ್ಯ ಪ್ರಾಂತಾಭಿಮಾನ ಬೇಕಾಗಿಲ್ಲ; ದೇಶಾಭಿಮಾನ ಬೇಕು. ನಾನು ಮೊದಲು ಹಿಂದವಾಸಿ, ಬಳಿಕ ಮುಸಲಮಾನಳೆಂದು ಇವರಿಗೆ ಉತ್ತರ ಕೊಟ್ಟಳು. ಕಾಂಗ್ರೆಸ ಪತ್ರಿಕೆಯ ಸಂಪಾದಿಕೆಯಾಗುವದರಿಂದ ತುರಂಗವಾಸ ಬರುತ್ತದೆಂದು ಗೊತ್ತಾಗಿದ್ದರೂ, ಆನಂದದಿಂದ ಆ ಕೆಲಸವನ್ನು ಅಂಗೀಕರಿಸಿ, ಕಡೆಗೆ ಮೂರು ತಿಂಗಳ ಸಾದಾ ಶಿಕ್ಷೆಗೆ ಗುರಿಯಾದಳು.

ರಾವುಂಡಟೇಬಲಿನವರು ಅವಸರ ಮಾಡಬಾರದು

ರಾವುಂಡಟೇಬಲಕ್ಕೆ ಆಮಂತ್ರಣ ಬಂದ ಜನರು ಬಹುತೇಕವಾಗಿ ಅಕ್ಟೋಬರ ತಿಂಗಳ ೧೧ನೆಯ ತಾರೀಖಿನ ದಿವಸ ವಿಲಾಯತಿಯ ಯಾತ್ರೆಗೆ ಹೊರಡುವರು. ಟೇಬಲವು ಮುಂದೆ ಬೀಳುವ ಸಂಭವವಿರುವದರಿಂದ, ಇವರು ಅವಸರದಿಂದ ಹೊರಡುವ ಸಿದ್ಧತೆ ಮಾಡಬಾರದೆಂದು ತಿಳಿಸಲ್ಪಟ್ಟಂತೆ ವರ್ತಮಾನವಾಗಿದೆ. ಬಹುಶಃ ಪುನಃ ರಾಜಿಯ ಸಂಧಾನವಿರಬೇಕೆಂದು ಸಿಮಲಾದಲ್ಲಿ ದಟ್ಟ ವರ್ತಮಾನವಾಗಿದೆ.

ಕೊಲ್ಹಾಪೂರ ದರಬಾರದೊಳಗಿನ
ಒಂದು ರಹಸ್ಯವು

ಶಿರೋಳದ ಮಾಮಲೇದಾರರಾದ ಮಿ. ಡಿಗ್ರಜಕರರು ಕಚೇರಿಯಲ್ಲಿ ಕುಳಿತಾಗ, ಪೋಲಿಸ ಇನ್ಸಪೇಕ್ಟರರಾದ ಮಿ॰ ಕಾರೆಯವರು ಆಕಸ್ಮಿಕವಾಗಿ ಬಂದು, ಮಾಮಲೇದಾರರ ಮುಂದೆ ಒಂದು ಕಾಗದವಿಟ್ಟು ಹಿಂದಿರುಗಿದರು. ಕೂಡಲೆ ಮಾಮಲೇದಾರರು ಕಚೇರಿ ಬಿಟ್ಟು, ಪಹರವನ್ನು, ಮನೆಗೆ ಹೋಗಿ, ಮೇಲಧಿಕಾರಿಗಳಿಗೆ ರಜೆಯ ಪತ್ರ ಬರೆದು, ಗಂಟುಗದಡಿ ಕಟ್ಟಿಕೊಂಡವರೇ- ಹೆಂಡರು ಮಕ್ಕಳು ಸಹಿತ ಕೊಲ್ಹಾಪೂರ ಪ್ರಾಂತ ಬಿಟ್ಟು, ಸಾಂಗಲಿಗೆ ಹೊರಟು ಹೋದರು. ಈ ಪ್ರಕಾರದ ರಜೆ, ಸಸ್ಪೆಂಡ ಮತ್ತು ಬರತರ್ಫಗಳು ರಾಘವನ ಪ್ರಕರಣದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ನಡೆದವು. ಮಿ. ಡಿಗ್ರಜಕರರಿಗೆ ಅಂಥ ಯಾವ ಆಪತ್ತು ಬಂದು, ಅವರನ್ನು ಸ್ಥಾನಭ್ರಷ್ಟ ಮಾಡಿತೆಂಬುದು ರಹಸ್ಯವಾಗಿದೆ

ಕರ್ನಾಟಕದಲ್ಲಿ ಮೊದಲನೆಯ ಸಾರೆ
ಹೆಣ್ಣುಮಕ್ಕಳ ದಸ್ತಗಿರಿ.

ಅಥಣಿ ತಾಲೂಕಿನಲ್ಲಿ ಅರಟಾಳ ಬಾಡಿಗಿ ಮುಂತಾದ ಗ್ರಾಮಗಳಲ್ಲಿ ಶಿಂದಿ ವೃಕ್ಷ ನಾಶ ಮಾಡಲು ಶ್ರೀ. ಕಳಮರಿಯವರ ಮುಂದಾಳುತ್ವದಲ್ಲಿ ಸ್ವಯಂಸೇವಕ, ಸೇವಿಕೆಯರ ಪಥಕ ಹೋಯಿತು. ಪೋಲೀಸರು ಐವರು ಸ್ವಯಂಸೇವಕರನ್ನ ಸ್ವಯಂಸೇವಿಕೆ ಶ್ರೀ॥ ಸೌ॥ ಬಳಗಾರ ಅಂಬಾಬಾಯಿಯವರನ್ನೂ ಹಿಡಿದಿದ್ದಾರೆ.

ಬಂಕಾಪೂರದಂತೆ ಮುರಗೋಡ
ಮಹಾಲಿನಲ್ಲಿ
ಶಿಂದೀ ಗಿಡಗಳ ಧ್ವಂಸ

ಮುರಗೋಡ, ಬೈಲಹೊಂಗಲ, ಸಂಗೊಳ್ಳಿ ಚಚಡಿ ಮತ್ತು ನೆರೆಯ ಗ್ರಾಮಗಳ ಏಳು ನೂರು ಜನರು ಶಿಂದಿಯ ಬನದ ಮೇಲೆ ದಾಳಿಯಿಟ್ಟು, ಎರಡು ಸಾವಿರ ಗಿಡಗಳ ಧ್ವಂಸ ಮಾಡಿದರು. ಪೋಲಿಸಸಾಹೇಬರು ನೂರು ಜನ ಪೋಲಿಸರೊಂದಿಗೆ ಹೋಗಿ ೫೦ ಜನರನ್ನು ಹಿಡಿದಿದ್ದಾರೆ

ಮಂಗ ಮಂಗಗಳಿಗೆ ಯುದ್ಧ.

ಉತ್ತರ ಆಫ್ರಿಕೆಯಲ್ಲಿ ಅಲಜೀರ ನೆಂಬದೊಂದು ದೇಶವುಂಟು. ಅಲ್ಲಿ ಮಂಗ ಮಂಗಗಳಿಗೆ ಕಡು ಕಾಳಗವಾಯಿತು. ಎರಡೂ ಪಕ್ಷಗಳ ಮಂಗಗಳಿಗೆ ತುಮುಲ ಕಾಳಗ ನಡೆದು, ಇವು ಒಂದರಮೇಲೊಂದು ದೊಡ್ಡ ದೊಡ್ಡ ಕಲ್ಲುಗಳನ್ನೆಸೆಯಲಾರಂಭಿಸಿದವು. ಈ ವೇಳೆಗೆ ಭಯಂಕರವಾಗಿ ಜೋರ ದಾಳಿ ನಡೆದಾಗ, ಮೋಟಾರು ನಡುವೆ ಬಂದು ಹೋಯಿತು. ಆಗೊಂದು ಮಂಗವು ಎಸೆದು ಬಿಟ್ಟ ಕಲ್ಲು ಮೋಟಾರಿನಲ್ಲಿ ಕುಳಿತವನಿಗೆ ಬಡಿದು ಆತನು ಸತ್ತೇ ಹೋದನೆಂದು, ಅಲ್ಲಿಂದ ಬಂದ ತಾರಿನ ವರ್ತಮಾನವಾಗಿದೆ.

ನಾವಲಿಗನು ಕೌನ್ಸಿಲರನಾದನು

ಅಮೃತಸರದಲ್ಲಿ ನಡೆದ ಇತ್ತೀಚಿನ ಚುನಾವಣೆಯಲ್ಲಿ ಕಾಂಗ್ರೆಸದವರು ರಾಮಜೀದಾಸನೆಂಬ ನಾವಲಿಗನನ್ನು ಉಮೇದವಾರನನ್ನಾಗಿ ನಿಲ್ಲಿಸಿದರು. ಈತನಿಗೆ ಎದುರುಗಾರರಾಗಿ ಎಂ.ಎಲ್.ಸಿ. ಆಗಿರುವ ಮಿ. ಶಿವದೇವಸಿಂಹ ಓಬೆರಾಯ ನಿಂತಿದ್ದರು. [illegible] ಮತ್ತು [illegible] ಮತಗಳು, ಬಿದ್ದು ನಾವಲಿಗನು ಎದುರುಗಾರನ ಮೇಲೆ [illegible] ಮಾಡಿ ಪಡೆದನು.

ನೋಟೀಸು.

ಯಾವತ್ತು ಜನರಿಗೆ ಇದರ ಮೇಲಿಂದ ತಿಳಿಸುವದೇನಂದರೆ-

ಧಾರವಾಡ ಡಿಸ್ಟ್ರಿಕ್ಟ ಲೋಕಲಬೋರ್ಡ ನಾನ ಮಹಮದನ್ನ ಕಾನಸ್ಟಿಟ್ಯೂಯನ್ಸಿ ಖಾಸ ಹಾವೇರಿ ತಾಲೂಕಿನ ದರಿಂದಾ ಆರಿಸಿ ಬಂದ ಮೆಂಬರ ಮಿ॥ ಎಸ್. ಬಿ. ಹಿರೇಮಠ ಇವರು ರಾಜೀನಾಮಾ ಕೊಟ್ಟದ್ದರಿಂದ ಆ ಜಾಗಾ ತುಂಬೋದರ ದಶಿಂದಾ ಹೊಸ ಚುನಾವಣೆಯನ್ನು ಮೆ॥ ಕಲೆಕ್ಟರಸಾ॥ ಬ॥ ಜಿಲ್ಹಾ ಧಾರವಾಡ ಇವರು ಮುಂಬಯಿ ಇಲಾಖೆಯ ಲೋಕಲಬೋರ್ಡ ಚುನಾವಣೆ ಸಂಬಂಧಿ ನೇಮುಗಳ ಪಟ್ಟಿ ೩ ನೇ ನೇಮದ ಅನ್ವಯಾ ಚುನಾವಣೆಯನ್ನು ತಾರೀಖು ೨-೧೨-೩೦ನೇ ಮಂಗಳವಾರ ದಿವಸಾ ನೇಮಿಸಿರತಾರೆ ಮತ್ತು ಅದೇ ನೇಮದ ಪ್ರಕಾರ ಚುನಾವಣೆ ಸಂಬಂಧಿ ಕೆಳಗೆ ಬರೆದ ಪ್ರಕಾರ ತಾರೀಖು ವಗೈರೆ ಗೊತ್ತುಪಡಿಸಿರುತ್ತದೆ.

ನಾಮಿನೇಶನ್ನ ಪೇಪರಗಳನ್ನು ಸ್ವೀಕರಿಸುವ ಬಗ್ಗೆ

ಈ ಚುನಾವಣೆ ಕೆಲಸದ ಬಗ್ಗೆ ಮೆ॥ ಪಟ್ಟನಶೆಟ್ಟಿ ಅಸಿಸ್ಟಂಟ ಕಲೆಕ್ಟರ ಸಾ॥ ಬಾ॥ ಜಿಲ್ಹಾ ಧಾರವಾಡ ಇವರನ್ನು ರಿಟರ್ನಿಂಗ ಆಫೀಸರರನ್ನಾಗಿ ನೇಮಿಸಿರುತ್ತದೆ. ಉಮೇದವಾರರಾಗಲಿಚ್ಛಿಸುವ ಜನರು ತಮ್ಮ ನಾಮಿನೇಶನ್ನ ಪೇಪರಗಳನ್ನು ಧಾರವಾಡ ಮುಕ್ಕಾಮಿನಲ್ಲಿ ಮೆ॥ ಪಟ್ಟನಶೆಟ್ಟಿ ಅ॥ ಕಲೆಕ್ಟರಸಾ॥ ಬ॥ ಧಾರವಾಡ ಇವರ ಕಡೆಗೆ ತಾರೀಖು ೧೧-೧೦-೩೦ನೇ ಶನಿವಾರ ದಿವಸ ಅಥವಾ ಅದರ ಒಳಗಾಗಿ ರಜೆಯ ದಿವಸ ಹೊರತು ಯಾವದೇ ದಿವಸ ಮಧ್ಯಾಹ್ನ ೧೧-೩೦ ಘಂಟೆಯಿಂದಾ ಸಂಜೆ ೫ ಘಂಟೆ ಒಳಗಾಗಿ ಕೊಡಬೇಕು. ಯಾರಾದರೂ ವೋಟರರು ನಾಮಿನೇಶನ್ನ ಫಾರ್ಮುಗಳನ್ನು ರಿಟರ್ನಿಂಗ ಆಫೀಸರರಿಗೆ ಕೇಳಿದರೆ ಅವರು ಕೊಡುವರು.

ನಾಮಿನೇಶನ್ನ ಪೇಪರಗಳ ತಪಾಸಣೆ

ರಿಟರ್ನಿಂಗ ಆಫೀಸರರು ನಾಮಿನೇಶನ್ನ ಪೇಪರಗಳನ್ನು ತಾರೀಖು ೧೩-೧೦-೩೦ನೇ ಸೋಮವಾರ ದಿವಸ ಮಧ್ಯಾಹ್ನ ೧೧-೩೦ ಗಂಟೆಕ್ಕೆ ತಮ್ಮ ಆಫೀಸಿನಲ್ಲಿ ತಪಾಸಮಾಡುವರು. ಸದರ ತಪಾಸಣೆ [illegible] ನಾಮಿನೇಶನ್ನ ಪೇಪರಗಳ ಬಗ್ಗೆ ರಿಟರ್ನಿಂಗ ಆಫೀಸರರು [illegible] ನಿರ್ಧಾರ ಮಾಡುವರು. ಮತ್ತು ಪ್ರತಿಒಬ್ಬ ಉಮೇದವಾರನಿಗೆ ಅವರವರ ಗುರ್ತಗಳನ್ನು ಗೊತ್ತುಮಾಡಿ ಕೊಡುವರು. ಮತ್ತು ಈ ಪ್ರಕಾರ ತಯಾರ ಮಾಡಿದ ಯಾದಿಯನ್ನು [illegible]ನೇ ನಮೂನೆ ಅನುಸರಿಸಿ ಪ್ರಸಿದ್ಧ ಪಡಿಸುವರು.

ಮತಕೊಡುವದು

ಚುನಾವಣೆಯ ದಿವಸ ಅಂದರೆ ತಾ॥ ೨-೧೨-೩೦ನೇ ದಿವಸ ಮುಂಜಾನೆ ೭-೩೦ ಘಂಟೆಯಿಂದಾ ಮಧ್ಯಾಹ್ನ ೧೨-೩೦ ವರೆಗೆ, ಪುನಃ ಮಧ್ಯಾಹ್ನ ೨ ಘಂಟೆಯಿಂದಾ ಸಂಜೆ ೬ ಘಂಟೆವರೆಗೆ ಮತಗಳನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಸಂಜೆ ಆರು ಘಂಟೆಕ್ಕೆ ಮತ ತೆಗೆದುಕೊಳ್ಳುವದು ನಿಂತಾಗುವದು- ಆದರೆ ೧೯ನೇ ರೂಲಿನ ಅನ್ವಯ ಯಾರಿಗಾದರೂ ಸಂಜೆ ಆರು ಘಂಟೆಗಳಾಗಿ ಮತದ ಕಾಗದವನ್ನು ಕೊಟ್ಟಿದ್ದರೆ ಅಂಥ ಮನುಷ್ಯರಿಗೆ ತಮ್ಮ ಮತದ ಕಾಗದವನ್ನು ಹಾಕಲಿಕ್ಕೆ ಪರವಾನಗಿ ಅದೆ. ಕೆಳಗೆ ಬರೆದ ಗ್ರಾಮಗಳ ಚಾವಡಿಯಲ್ಲಿ ಆ ದಿವಸ ಮತಕೊಡುವ ಕೆಲಸ ನಡೆಯುವದು.

(೧) ಹಾವೇರಿ (೨) ಹತ್ತಿಮತ್ತೂರ (೩) ದೇವಿಹೊಸೂರ (೪) ಹೊಸರಿತ್ತಿ (೫) ಕರ್ಜಗಿ (೬) ಗುತ್ತಲ

ಮತಗಳ ಎಣಿಕೆ

ತಾರೀಖು ೮-೧೨-೩೦ನೇ ಸೋಮವಾರ ದಿವಸ ರಿಟರ್ನಿಂಗ ಆಫೀಸರರು ತಮ್ಮ ಆಫೀಸ ವೇಳೆಯಲ್ಲಿ ಮತಗಳ ಎಣಿಕೆಯನ್ನು ಮಾಡುವರು. ಮತ್ತು ಅದೇ ದಿವಸ ಚುನಾವಣೆಯ ಪರಿಣಾಮವನ್ನು ಹೇಳಿಬಿಡುವರು.

ಸೂಚನಾ- ಜನರಲ್ಲ ಡಿಪಾರ್ಟಮೆಂಟ ಸರಕಾರಿ ನೋಟಿಫಿಕೇಶನ್ನ ನಂಬರ ೪೪೫೫ ತಾರೀಖು ೧೦-೨-೨೪ ದ ತಾರೀಖು ೨೫-೪-೨೮ ನೇಮುಗಳಲ್ಲಿ ಚುನಾವಣೆ ಸಂಬಂಧಿ ಕೇಳಿದ ನೇಮುಗಳು ಮೇಲೆ ಬರೆದ ಯಾವತ್ತು ಕ್ರಮಗಳಲ್ಲಿ ಅನುಸರಿಸಲ್ಪಡುತ್ತವೆ.

ಧಾರವಾಡ
೨೪-೯-೩೦

J. Abbott,
ಕಲೆಕ್ಟರ ಧಾರವಾಡ

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೇಲರಿಂಗ ಮತ್ತು ಕಟಿಂಗ ಕಾಲೇಜು
ಧಾರವಾಡ ಮಾರ್ಕೆಟ.

ನಾವು ಪ್ಯಾರಿಸ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೇಲರಿಂಗ ಅಂದರೆ ಅರಿವೆ ಹೊಲಿಯುವ ಶಿಕ್ಷಣ ಕೊಡುತ್ತೇವೆ. ಕಟಿಂಗ ಮೊದಲ ಎರಡು ೨ ತಿಂಗಳ ಮತ್ತು [illegible] ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ [illegible] ರೂಪಾಯಿ ಶಿಕ್ಷಣವನ್ನು [illegible] ಹೇಳಿಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ [illegible] ದರಮಹಾ [illegible] ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆಯ ಪೋಸ್ಟ ಟಿಕೇಟ ಕಳಿಸಬೇಕು.

ಆರ್. ಬಿ. ಪಾ ಘೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ನೊಂದಾಯಿಸಿದ ಜಾಹೀರಾತು

ಸಿಂಗಲ ಕಾಲಮ್ಮು [illegible]

[illegible]

ಮ್ಯಾನೇಜರ [illegible] ಧಾರವಾಡ

[illegible] ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು [illegible]

ಮ್ಯಾನೇಜರು ಧಾರವಾಡ.

ಈ ಪತ್ರವನ್ನು [illegible] ಧಾರವಾಡದಲ್ಲಿರುವ [illegible] ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.